ಪ್ರಾಚೀನ ಗದ್ಯಸಾಹಿತ್ಯಮಾಲೆ : ೯

ಕರ್ನಾಟಕ ಸರ್ಕಾರ

ದೇವಚಂದ್ರ ವಿರಚಿತ

ರಾಜಾವಳಿ ಕಥೆ

ಪ್ರಧಾನ ಸಂಪಾದಕರು : ಡಾ. ಸಿದ್ಧಲಿಂಗಯ್ಯ
ಗೌರವ ಸಂಪಾದಕರು : ಡಾ. ಎಂ. ಎಂ. ಕಲಬುರ್ಗಿ
ಸಂಪಾದಕರು : ಡಾ. ರಾಗೌ

ಕನ್ನಡ ಪುಸ್ತಕ ಪ್ರಾಧಿಕಾರ

ದೇವಚಂದ್ರ ವಿರಚಿತ

ರಾಜಾವಳಿ ಕಥೆ

ಪ್ರಾಚೀನ ಗದ್ಯಸಾಹಿತ್ಯಮಾಲೆ : ೯

ದೇವಚಂದ್ರ ವಿರಚಿತ

ರಾಜಾವಳಿ ಕಥೆ

ಪ್ರಧಾನ ಸಂಪಾದಕರು

ಡಾ. ಸಿದ್ಧಲಿಂಗಯ್ಯ

ಗೌರವ ಸಂಪಾದಕರು

ಡಾ. ಎಂ.ಎಂ. ಕಲಬುರ್ಗಿ

ಸಂಪಾದಕರು

ಡಾ. ರಾಗೌ

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಕನ್ನಡ ಭವನ, ಬೆಂಗಳೂರು-೫೬೦ ೦೦೨.

Rajavali kathe – An Ancient Kannada Prose-classic
by Devachandra
Edited by Dr. Ramegowda (Ragow)
Published by B.H. Mallikarjuna
Administrative Officer, Kannada Pustaka Pradhikara,
Kannada Bhavana. J.C. Road, Bangalore-560 002.

First Impression	:	2012
Pages	:	xxxvii+381=418
Copies	:	1000
Price	:	₹ 260/-

■

ಮೊದಲ ಮುದ್ರಣ	:	೨೦೧೨
ಪುಟಗಳು	:	xxxvii + ೩೮೧ = ೪೧೮
ಪ್ರತಿಗಳು	:	೧೦೦೦
ಬೆಲೆ	:	₹ ೨೬೦/-

ಸಂಪಾದಕರು :
ಡಾ. ರಾಮೇಗೌಡ (ರಾಗೌ)

ಪ್ರಕಾಶಕರು
ಬಿ.ಹೆಚ್. ಮಲ್ಲಿಕಾರ್ಜುನ
ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-೫೬೦ ೦೦೨.

ಮುದ್ರಕರು :
ಸತ್ಯಶ್ರೀ ಪ್ರಿಂಟರ್ಸ್ ಪ್ರೈ. ಲಿ.,
ನಂ. ೧೬/೧, ೨ನೇ ಮುಖ್ಯರಸ್ತೆ, ೩ನೇ ಅಡ್ಡರಸ್ತೆ
ಕಸ್ತೂರಿಬಾ ನಗರ, ಮೈಸೂರು ರಸ್ತೆ, ಬೆಂಗಳೂರು-೫೬೦ ೦೨೬
ದೂರವಾಣಿ : ೦೮೦-೨೬೭೪ ೮೮೧೧; ಮೊ : ೯೩೪೨೮ ೬೪೭೬೧

*

ಸಲಹಾಮಂಡಳಿ

■

*

ಪ್ರಾಚೀನ ಗದ್ಯಸಾಹಿತ್ಯಮಾಲೆಯ ಕೃತಿಗಳು

■

	ಕೃತಿ ಶೀರ್ಷಿಕೆ	ಸಂಪಾದಕರು
೧.	ಆರಾಧನಾ ಕರ್ಣಾಟಟೀಕಾ (ವಡ್ಡಾರಾಧನೆ)	: ಡಾ. ಶಾಂತಿನಾಥ ದಿಬ್ಬದ
೨.	ಚಾವುಂಡರಾಯ ಪುರಾಣಂ	: ಡಾ. ಎಂ.ಎ. ಜಯಚಂದ್ರ
೩.	ಕರ್ಣಾಟಕ ಪಂಚತಂತ್ರಂ	: ಡಾ. ಪಿ.ವಿ. ನಾರಾಯಣ
೪.	ಧರ್ಮಾಮೃತಂ	: ಶ್ರೀ ಶುಭಚಂದ್ರ
೫.	ಕನ್ನಡ ಶರಣರ ಕಥೆಗಳು	: ಡಾ. ಎಂ.ಎಂ. ಕಲಬುರ್ಗಿ
೬	ವಿವೇಕ ಚಿಂತಾಮಣಿ	: ಶ್ರೀ ಜಿ.ಎ. ಶಿವಲಿಂಗಯ್ಯ
೭	ಚಿಕ್ಕದೇವರಾಯ ವಂಶಾವಳಿ	: ಶ್ರೀ ಹೆಚ್.ಎಂ. ನಾಗರಾಜರಾವ್
೮.	ಮುದ್ರಾಮಂಜೂಷವು	: ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ
೯.	ರಾಜಾವಳಿ ಕಥೆ	: ಡಾ. ರಾಮೇಗೌಡ
೧೦.	ರಾಮಾಶ್ವಮೇಧಂ	: ಡಾ. ಗಾಯತ್ರಿ ನಾವಡ

■

*

ಅಧ್ಯಕ್ಷರ ಮಾತು

ಕನ್ನಡ ಪುಸ್ತಕ ಪ್ರಾಧಿಕಾರ ಕನ್ನಡ ಪುಸ್ತಕೋದ್ಯಮದ ಅಭಿವೃದ್ಧಿಗಾಗಿ ಸ್ಥಾಪಿಸಿರುವ ಸಂಸ್ಥೆಯಾಗಿದೆ. ವಿಶೇಷವಾಗಿ ಜನಪ್ರಿಯ ಪ್ರಕಾರಕ್ಕೆ ಸೇರಿದ ಪುಸ್ತಕಗಳನ್ನು ಪ್ರಕಟಿಸಿ, ಜನಸಾಮಾನ್ಯರಿಗೆ ಸುಲಭ ದರದಲ್ಲಿ ತಲುಪಿಸಬೇಕೆನ್ನುವುದು ಪ್ರಾಧಿಕಾರದ ಆಶಯವಾಗಿದೆ. ಸೃಜನಶೀಲ ಸಾಹಿತ್ಯಪ್ರಕಾರಕ್ಕೆ ಸೇರಿದ ಕೃತಿಗಳನ್ನು ಪ್ರಕಟಿಸಿರುವುದು ಹೆಚ್ಚಿಲ್ಲವಾದರೂ, ಪ್ರಕಟಿಸಿರುವಷ್ಟು ಮೌಲಿಕವಾದದ್ದಾಗಿದೆ. ಉಳಿದಂತೆ ವಿಮರ್ಶೆ, ಜೀವನಚರಿತ್ರೆ, ಶಾಸ್ತ್ರವಿಷಯ ಕುರಿತಾದ ಗ್ರಂಥಗಳು, ಸಮಾಜಶಾಸ್ತ್ರಕ್ಕೆ ಸಂಬಂಧಿಸಿದ ಕೃತಿಗಳನ್ನು ಹೊರತರಲಾಗಿದೆ. ಹಳಗನ್ನಡ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಕುಮಾರವ್ಯಾಸ ಭಾರತವನ್ನು ಹೊರತುಪಡಿಸಿದರೆ ಇತರೆ ಯಾವುದೇ ಪ್ರಾಚೀನ ಸಾಹಿತ್ಯಕೃತಿಗಳನ್ನು ಹೊರತರುವಲ್ಲಿ ಪ್ರಾಧಿಕಾರವಾಗಲೀ, ಅಕಾಡೆಮಿಗಳಾಗಲೀ ಈವರೆಗೆ ಪ್ರಯತ್ನ ಮಾಡಿದಂತಿಲ್ಲ. ಕನ್ನಡ ಸಾಹಿತ್ಯದ ಪ್ರಾಚೀನಗ್ರಂಥಗಳನ್ನು ಈವರೆಗೂ ಹೆಚ್ಚು ಪ್ರಕಟಿಸಿರುವುದು ರಾಜ್ಯದ ವಿಶ್ವವಿದ್ಯಾಲಯಗಳೇ ಎನ್ನಬಹುದು.

ಕನ್ನಡಿಗರಿಗೆ ಪ್ರಾಚೀನ ಕನ್ನಡ ಗದ್ಯಕೃತಿಗಳು ಸುಲಭ ದರದಲ್ಲಿ, ಪರಿಶುದ್ಧ ರೂಪದಲ್ಲಿ ದೊರೆಯಬೇಕೆಂಬ ಆಶಯದಿಂದ ಹಳಗನ್ನಡ, ನಡುಗನ್ನಡದ ಹತ್ತು ಕೃತಿಗಳನ್ನು ಪ್ರಕಟಿಸಲು ಉದ್ದೇಶಿಸಲಾಯಿತು. ನಾಡಿನ ಹಿರಿಯ ವಿದ್ವಾಂಸರಾದ ಡಾ. ಎಂ.ಎಂ. ಕಲಬುರ್ಗಿ ಅವರು ಈ ಮಾಲೆಯ ಸಂಪಾದನಕಾರ್ಯದ ನೇತೃತ್ವ ವಹಿಸಲು ಒಪ್ಪಿಕೊಂಡು, ಸಕಾಲದಲ್ಲಿ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ. ಈ ಮಾಲಿಕೆಯ ಸಂಪಾದನ ಸಮಿತಿಯ ಸದಸ್ಯರಾದ ಡಾ. ಸಿ.ಪಿ. ಕೃಷ್ಣಕುಮಾರ್ ಡಾ. ಕೆ. ಮರುಳಸಿದ್ಧಪ್ಪ, ಡಾ. ಕೆ.ಆರ್. ಗಣೇಶ್, ಶ್ರೀ ಸುಧಾಕರ, ಪ್ರೊ. ಸಿ.ವಿ. ಕೆರಿಮನಿ, ಶ್ರೀ ಎ.ಕೆ. ರಾಮೇಶ್ವರ, ಇವರಿಗೆ ಕೃತಜ್ಞತೆಗಳು. ಈ ಮಾಲೆಯಲ್ಲಿ ಹತ್ತು ಕೃತಿಗಳನ್ನು ಸಂಪಾದಿಸಿಕೊಟ್ಟ ಎಲ್ಲ ವಿದ್ವಾಂಸರುಗಳಿಗೆ ಆಭಾರಿಯಾಗಿದ್ದೇನೆ.

ಈ ಮಾಲೆಯನ್ನು ಹೊರತರುವಲ್ಲಿ ಆಸಕ್ತಿ ವಹಿಸಿದ ಆಡಳಿತಾಧಿಕಾರಿಗಳಾದ ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ, ನನ್ನ ಆಪ್ತ ಕಾರ್ಯದರ್ಶಿಯಾದ ಶ್ರೀ ಕೆ. ಮುಕುಂದನ್ ಹಾಗೂ ಪ್ರಾಧಿಕಾರದ ಎಲ್ಲ ಸದಸ್ಯರು ಮತ್ತು ಸಿಬ್ಬಂದಿ ವರ್ಗದವರಿಗೆ ಕೃತಜ್ಞತೆಗಳು. ಕನ್ನಡ ವಾಚಕವೃಂದ ನಮ್ಮ ಈ ಪ್ರಯತ್ನವನ್ನು ತುಂಬುಹೃದಯದಿಂದ ಸ್ವಾಗತಿಸುತ್ತದೆಂದು ಆಶಿಸುತ್ತೇನೆ.

ಡಾ. ಸಿದ್ಧಲಿಂಗಯ್ಯ
ಅಧ್ಯಕ್ಷರು

*

ಗೌರವ ಸಂಪಾದಕರ ಮಾತು

ಡಾ. ಎಂ.ಎಂ. ಕಲಬುರ್ಗಿ

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಪದ್ಯಕ್ಕೆ ಪ್ರಧಾನ ಪಟ್ಟ; ಗದ್ಯಕ್ಕೆ ಗೌಣಸ್ಥಾನ. ವಸ್ತು ಸ್ಥಿತಿ ಹೀಗಿರುವಾಗ, ಹೆಚ್ಚಿನದಾಗಿ ಆಧುನಿಕ ವಿದ್ವಾಂಸರು ಪ್ರಾಚೀನ ಪದ್ಯಸಾಹಿತ್ಯಕ್ಕೆ ಆಕರ್ಷಿತರಾಗಿ, ಅಂದಿನ ಗದ್ಯ ಸಾಹಿತ್ಯದ ಪ್ರಕಟನೆ– ಅಧ್ಯಯನಗಳನ್ನು ಅವಗಣಿಸುತ್ತ ಬಂದರು. ಇದರಿಂದಾಗಿ ಮೂಲೆಗೆ ಸರಿದಿರುವ ಈ ಸಾಹಿತ್ಯಪ್ರಕಾರವನ್ನು ಮುಖ್ಯವಾಹಿನಿಗೆ ತರುವ ಉದ್ದೇಶದಿಂದ ಕನ್ನಡ ಪುಸ್ತಕ ಪ್ರಾಧಿಕಾರ 'ಪಾಚೀನ ಗದ್ಯ ಸಾಹಿತ್ಯ ಮಾಲೆ' ಹೆಸರಿನ ಯೋಜನೆಯನ್ನು ಕೈಗೆತ್ತಿಕೊಂಡು, ಹತ್ತು ಮುಖ್ಯಕೃತಿಗಳನ್ನು ಪ್ರಕಟಿಸುತ್ತಿದೆ.

ಭಾವನೆ, ಚಿಂತನೆಗಳು ಭಾಷೆಯ ಮೂಲಕ ತಮ್ಮ ಸೆರೆ ಬಿಡಿಸಿಕೊಳ್ಳುವ ಸಂದರ್ಭದಲ್ಲಿ ಅವಲಂಬಿಸುವ ಮುಖ್ಯ ಮಾರ್ಗಗಳು ಎರಡು: ಗದ್ಯ ಮತ್ತು ಪದ್ಯ. ಗದ್ಯಕ್ಕೆ ಲಯ ಕೂಡಿದರೆ ಪದ್ಯವಾಗುತ್ತದೆ. ಆಗ ಅದಕ್ಕೆ ಒಂದು ಬಗೆಯ ಹೆಚ್ಚಿನ ಸೌಂದರ್ಯ ಪ್ರಾಪ್ತವಾಗುತ್ತದೆ. ಹೀಗೆ ಒದಗಿ ಬರುವ ಲಯಸೌಂದರ್ಯದ ಸವಲತ್ತು ಬಳಸಿಕೊಂಡು ಪದ್ಯವು ಕವಿತ್ವದ ಕೊರತೆಯನ್ನು ತುಂಬಿಕೊಳ್ಳುತ್ತದೆ ಎಂಬ ವಾದವನ್ನು ಮಂಡಿಸಿ, 'ಗದ್ಯಂ ಕವೀನಾಂ ನಿಕಷಂ ವದಂತಿ' ಅಂದರೆ ಗದ್ಯವೇ ಕವಿಯ ಸಾಹಿತ್ಯದ ನಿಜವಾದ ಒರೆಗಲ್ಲು ಎಂದು ಗದ್ಯಕವಿಗಳು ಸಾರುತ್ತ ಬಂದಿದ್ದಾರೆ. ಇದು, ಈ ಸಾಹಿತ್ಯ ಪ್ರಕಾರದ ಸೃಜನಕ್ರಿಯೆಯು ಒಂದು ಆಹ್ವಾನವೆಂಬುದನ್ನು ಸೂಚಿಸಿದರೆ, ಕನ್ನಡದ ಮುದ್ದಣನ 'ಗದ್ಯಂ ಹೃದ್ಯಂ ಪದ್ಯಂ ವಧ್ಯಂ' ಎಂಬ ಮಾತು ಅದರ ಶ್ರೇಷ್ಠತೆಯನ್ನು ಸಾರುತ್ತದೆ.

ಗದ್ಯವೇ ಇರಲಿ, ಪದ್ಯವೇ ಇರಲಿ, ಕವಿಯ ಕೈಯಲ್ಲಿ ಸಾಹಿತ್ಯವಾಗುವುದರಲ್ಲಿ ಅದರ ಸಾರ್ಥಕತೆ ಇರುತ್ತದೆ. ಇಂಥ ಸಾರ್ಥಕತೆಯನ್ನು ಭಾಷೆಯ ಸಂಕ್ಷೇಪೀಕರಣ ಕಲೆಯಾದ ಪದ್ಯದಲ್ಲಿ ಸಾಧಿಸುವುದು ಸುಲಭ, ವಿಶದೀಕರಣ ಕಲೆಯಾದ ಗದ್ಯದಲ್ಲಿ ಸಾಧಿಸುವುದು ಕಷ್ಟ. ಹೀಗಿದ್ದೂ ಪ್ರಾಚೀನ ಕನ್ನಡದ ಕೆಲವು ಕವಿಗಳು ಇದನ್ನು ಆಹ್ವಾನವಾಗಿ ಸ್ವೀಕರಿಸಿ ಜಯಶಾಲಿಯಾಗಿದ್ದಾರೆ.

ಒಂದು ರಚನೆ ಅಭಿವ್ಯಕ್ತಿ (Expression) ಯೆಂದೂ, ನಿರೂಪಣೆ (Narration)ಯೆಂದೂ ಎರಡು ರೀತಿಯಲ್ಲಿ ಪ್ರಕಟವಾಗುತ್ತದೆ. ನಮ್ಮ ನೆನಪಿನಲ್ಲುಳಿಯುವ ಕವಿಯೊಬ್ಬನ ಗದ್ಯದ ಸಾಲು ಇಲ್ಲವೆ ಪದ್ಯದ ಸಾಲುಗಳೇ ಅಭಿವ್ಯಕ್ತಿ. ಅದು ತನ್ನ ಸೃಜನಶೀಲ ಗುಣದಿಂದಾಗಿ ನಮ್ಮ ಮನಸ್ಸಿನಲ್ಲಿ ಆಳವಾಗಿ ಬೇರೂರುತ್ತದೆ. ಇಂಥ ಸುಂದರ ಅಭಿವ್ಯಕ್ತಿತ್ವವನ್ನೊಳಗೊಂಡ ಮತ್ತು ಐತಿಹಾಸಿಕ ಕಾರಣದಿಂದಾಗಿ ಮಹತ್ವವೆನಿಸುವ ಪ್ರಾಚೀನ ಕನ್ನಡ ಕೃತಿಗಳ ಪ್ರಕಟನ ಯೋಜನೆಯಿದು.

ದಂಡಿಯ ಸಂಸ್ಕೃತ ಕಾವ್ಯಾದರ್ಶವು ಸಾಹಿತ್ಯವನ್ನು ಗದ್ಯ, ಪದ್ಯ, ಮಿಶ್ರ (ನಾಟಕ)ವೆಂದು ಮೂರು ಬಗೆಯಾಗಿ ವರ್ಗೀಕರಿಸಿದೆ. ಇದರ ಆದರ್ಶದಲ್ಲಿ ಆಕಾರ ಪಡೆದ ಕನ್ನಡ ಕವಿರಾಜಮಾರ್ಗವು ಪದ್ಯ, ಗದ್ಯಕಥಾ ಎಂದು ಎರಡು ಬಗೆಯಾಗಿ ವರ್ಗೀಕರಿಸುತ್ತದೆ. ಬಹುಶಃ ಅಂದು ಮಿಶ್ರ(ನಾಟಕ)ವು ಸಂಸ್ಕೃತದಲ್ಲಿ ದೃಶ್ಯ ಪಾತಳಿಯಿಂದ ವಾಚನಪಾತಳಿಗೆ ಇಳಿದಿದ್ದರೆ, ಕನ್ನಡದಲ್ಲಿ ಅದು ಇನ್ನೂ ದೃಶ್ಯಪಾತಳಿಯಲ್ಲಿ ವ್ಯವಹರಿಸುತ್ತಲಿದ್ದುದೇ ಹೀಗೆ ಹೇಳಲು ಕಾರಣವಾಗಿರಬೇಕು. ಅದೇನೇ ಇರಲಿ, "ಅಗಣಿತ ಗುಣ ಗದ್ಯಪದ್ಯಗಳ ಮಿಶ್ರಣರೂಪದ 'ಗದ್ಯಕಥಾ' ಹೆಸರಿನ ಗದ್ಯಪ್ರಕಾರವನ್ನು ಕನ್ನಡದಲ್ಲಿ ಚಿರಂತನಾಚಾರ್ಯರು ರಚಿಸಿರುವರು" ಎಂದು ಕವಿರಾಜಮಾರ್ಗದಲ್ಲಿ ಹೇಳಲಾಗಿದೆ. ಇದು ಚಂಪೂವನ್ನು ಸೂಚಿಸುವುದೆಂದು ಕೆಲವರು ಹೇಳುವವರಾದರೂ ಗದ್ಯಪ್ರಧಾನ ಪದ್ಯಗೌಣವಾಗಿರುವ ಆರಾಧನಾ ಕರ್ಣಾಟ ಟೀಕಾ(ವಡ್ಡಾರಾಧನೆ)ದಂಥ ಕೃತಿಗಳನ್ನು ಸೂಚಿಸುವುದೆಂದು ಬಹುಜನ ವಿದ್ವಾಂಸರು ಒಪ್ಪಿದ್ದಾರೆ.

ಸಂಸ್ಕೃತ ಆಲಂಕಾರಿಕ ಭಾಮಹನು ಗದ್ಯವನ್ನು ಆಖ್ಯಾಯಿಕಾ, ಕಥಾ ಎಂದು ವರ್ಗೀಕರಿಸುತ್ತ, ಆಖ್ಯಾಯಿಕಾ ಸಂಸ್ಕೃತದಲ್ಲಿ, ಕಥಾ ಎಲ್ಲ ಭಾಷೆಗಳಲ್ಲಿರಬಹುದೆಂದು ಹೇಳುತ್ತಾನೆ. ಮುಂದುವರಿದು ದಂಡಿಯು ಈ ಕಥೆಯಲ್ಲಿ ಆರ್ಯಾ ಮುಂತಾದ ವೃತ್ತಗಳು ಪ್ರವೇಶ ಪಡೆಯುವವೆಂದು ತಿಳಿಸುತ್ತಾನೆ. ಕವಿರಾಜಮಾರ್ಗಕಾರ ತಿಳಿಸುವ 'ಗದ್ಯಕಥಾ' ಇಲ್ಲಿಯ 'ಕಥಾ' ಪ್ರಕಾರವೇ ಆಗಿದೆ. ಈ 'ಗದ್ಯಕಥೆ'ಯು ಬಾಣ ಕಾದಂಬರಿಯಂತೆ ಅಖಂಡವೂ ಬೃಹತ್ಕಥೆಯಂತೆ ಬಿಡಿ ಕಥಾಕೋಶವೂ ಆಗಿರಬಹುದಾಗಿದೆ. ಮುಂದುವರಿದು ಕವಿರಾಜಮಾರ್ಗಕಾರನು ಗದ್ಯಕಥೆಯು ಸಕಲಕಲಾಭೂಯಿಷ್ಠವಾಗಿರಬೇಕು, ಉತ್ಕೃಷ್ಟ ಭಾಷಾಶೈಲಿಯಲ್ಲಿ ಎರಕಗೊಂಡಿರಬೇಕು, ಲೌಕಿಕ ಮತ್ತು ಪಾರಮಾರ್ಥಿಕ ವರ್ಣನಾನಿರ್ಣಿಕ್ತವಾಗಿರಬೇಕು, 'ಪ್ರಕಟತರ ವಸ್ತು'ವನ್ನೊಳಗೊಂಡಿರಬೇಕೆಂದು ಹೇಳುತ್ತಾನೆ.

ಒಟ್ಟಿನಲ್ಲಿ, ಪ್ರಾಚೀನ ಕರ್ನಾಟಕದ 'ಗದ್ಯಕಥಾ'ಪ್ರಕಾರದ ಲಕ್ಷಣವನ್ನು ಹೀಗೆ ಹೇಳಬಹುದು. ೧. ಗದ್ಯ ಪ್ರಧಾನ, ಪದ್ಯ ಗೌಣಪ್ರಮಾಣದಲ್ಲಿರುತ್ತದೆ. ೨. ಅಖಂಡ ಕಥೆ, ಇಲ್ಲವೆ ಬಿಡಿ ಕಥಾಗುಚ್ಛ ರೂಪದಲ್ಲಿರುತ್ತದೆ. ೩. ಸಕಲಕಲಾಭೂಯಿಷ್ಠವೂ ಉತ್ಕೃಷ್ಟ ಭಾಷಾಶೈಲಿಯದೂ, ಲೌಕಿಕ ಪಾರಮಾರ್ಥಿಕ ವರ್ಣನಾ ನಿರ್ಣಿಕ್ತವೂ

ಪ್ರಕಟತರ ವಸ್ತುವನ್ನೊಳಗೊಂಡುದೂ ಆಗಿರುತ್ತದೆ. ೪. ಇನ್ನೂ ಒಂದು ಲಕ್ಷಣವೆಂದರೆ ಈ ಗದ್ಯವನ್ನು 'ಕಥಾ' ಎಂದು ಕರೆದಿರುವುದರಿಂದ 'ಕಥಾ ಪುರಾಣಸಂಬದ್ಧಾ' ಎಂಬ ವ್ಯಾಖ್ಯೆಯ ಪ್ರಕಾರ ಇದು, ಲೌಕಿಕ(ಚರಿತ್ರೆ) ವಸ್ತುವನ್ನಲ್ಲ, ಪೌರಾಣಿಕ ವಸ್ತುವನ್ನೊಳಗೊಂಡಿರುತ್ತದೆ.

ಇಂಥ ಲಕ್ಷಣದ ಕೃತಿಗಳನ್ನು ಕನ್ನಡದಲ್ಲಿ ಬರೆದವರು ವಿಮಲೋದಯ, ನಾಗಾರ್ಜುನ, ಜಯಬಂಧು, ದುರ್ವಿನೀತ ಮೊದಲಾದವರೆಂದು ಕವಿರಾಜಮಾರ್ಗ ಹೇಳುವುದಾದರೂ ಇವರ ಒಂದೂ 'ಗದ್ಯಕಥಾ' ಲಭ್ಯವಿಲ್ಲ. ಇವರಲ್ಲಿ ದುರ್ವಿನೀತನು ಬಹುಶಃ ಗಂಗ ಅರಸನಾಗಿದ್ದು, ಶಾಸನಗಳಲ್ಲಿ ಇವನು ರಚಿಸಿರುವನೆಂದು ಹೇಳಲಾಗಿರುವ ಕಿರಾತಾರ್ಜುನೀಯದ ೧೫ನೆಯ ಸರ್ಗಕ್ಕೆ ಟೀಕೆ, ಶಬ್ದಾವತಾರಗಳನ್ನು ಹೊರತುಪಡಿಸಿ, ಬೃಹತ್ಕಥೆ(ವಡ್ಡಕಥೆ)ಯೇ ಗದ್ಯಕಥೆಗೆ ಉದಾಹರಣೆಯಾಗಿರಬೇಕೆನಿಸುತ್ತದೆ. ಇದು ಗುಣಾಢ್ಯನ ಪೈಶಾಚಿಭಾಷಾಕೃತಿಯ ದಾಕ್ಷಿಣಾತ್ಯಪಾಠವೆಂದೂ, ಇದನ್ನು ಆಧರಿಸಿ ತಮಿಳಿನ ಪೆರುಂಗದೈ ಹುಟ್ಟಿದೆಯೆಂದೂ, ಇದು ಒಂದಿಷ್ಟು ಜೈನೀಯವಾಗಿದೆಯೆಂದೂ ವಿದ್ವಾಂಸರು ಭಾವಿಸಿದ್ದಾರೆ. ಈವರೆಗಿವ ವಿವರಣೆ ಕಳೆದುಹೋದ ಕನ್ನಡ ಗದ್ಯಸಾಹಿತ್ಯವನ್ನು ಕುರಿತುದಾಗಿದೆ.

***

ಕವಿರಾಜಮಾರ್ಗೋತ್ತರ ಕಾಲೀನ ಗದ್ಯಸಾಹಿತ್ಯದಲ್ಲಿ ಎದ್ದು ಕಾಣುವ ಕೆಳಗಿನ ಕೃತಿಗಳನ್ನು ಪ್ರಸ್ತುತ ಯೋಜನೆಯ ಅಡಿಯಲ್ಲಿ ಪ್ರಕಟಣೆಗೆ ಆಯ್ದುಕೊಳ್ಳಲಾಗಿದೆ.

೧. ಆರಾಧನಾ ಕರ್ಣಾಟಟೀಕಾ (ವಡ್ಡಾರಾಧನೆ): ಡಾ. ಶಾಂತಿನಾಥ ದಿಬ್ಬದ
೨. ಚಾವುಂಡರಾಯ ಪುರಾಣಂ : ಡಾ. ಎಂ.ಎ. ಜಯಚಂದ್ರ
೩. ಕರ್ಣಾಟಕ ಪಂಚತಂತ್ರಂ : ಡಾ. ಪಿ.ವಿ. ನಾರಾಯಣ
೪. ಧರ್ಮಾಮೃತಂ : ಶ್ರೀ ಶುಭಚಂದ್ರ
೫. ಕನ್ನಡ ಶರಣರ ಕಥೆಗಳು : ಡಾ. ಎಂ.ಎಂ. ಕಲಬುರ್ಗಿ
೬. ವಿವೇಕ ಚಿಂತಾಮಣಿ : ಶ್ರೀ ಜಿ.ಎ. ಶಿವಲಿಂಗಯ್ಯ
೭. ಚಿಕ್ಕದೇವರಾಯ ವಂಶಾವಳಿ : ಶ್ರೀ ಹೆಚ್.ಎಂ. ನಾಗರಾಜರಾವ್
೮. ಮುದ್ರಾಮಂಜೂಷವು : ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ
೯. ರಾಜಾವಳಿ ಕಥೆ : ಡಾ. ರಾಮೇಗೌಡ
೧೦. ರಾಮಾಶ್ವಮೇಧಂ : ಡಾ. ಗಾಯತ್ರಿ ನಾವಡ

ಇವುಗಳಲ್ಲಿ ಮೊದಲಿನ ನಾಲ್ಕು ಹಳಗನ್ನಡಕ್ಕೆ, ಆಮೇಲಿನವು ನಡುಗನ್ನಡ– ನಡುಗನ್ನಡೋತ್ತರಕ್ಕೆ ಸಂಬಂಧಿಸಿವೆ. ಪ್ರಾಚೀನ ಪದ್ಯಸಾಹಿತ್ಯದಲ್ಲಿ ಕಾಣಸಿಗದ ಹಳಗನ್ನಡ – ನಡುಗನ್ನಡ– ನಡುಗನ್ನಡೋತ್ತರ ಪ್ರಾಚೀನ ಭಾಷಾವಿಕಾಸದ ಸ್ಪಷ್ಟ

ಹೆಜ್ಜೆ ಗುರುತುಗಳು ಈ ಗದ್ಯಸಾಹಿತ್ಯದಲ್ಲಿ ಕಾಣುತ್ತಲಿರುವುದು ವಿಶೇಷ. ಹೀಗಾಗಿ ಪ್ರಾಚೀನ ಕನ್ನಡ ಭಾಷಾ ಚರಿತ್ರೆಯನ್ನು ಬರೆಯುವಲ್ಲಿ ಪದ್ಯಕೃತಿಗಳಿಗಿಂತ ಗದ್ಯಕೃತಿಗಳೇ ಹೆಚ್ಚು ನೆರವಾಗುತ್ತವೆ. ಇಲ್ಲಿಯ ಆರಾಧನಾ ಕರ್ಣಾಟಟೀಕಾ, ಕರ್ಣಾಟ ಪಂಚತಂತ್ರ, ಧರ್ಮಾಮೃತಗಳನ್ನು ಕಥಾಕೋಶಗಳೆಂದು; ಕನ್ನಡ ಶರಣರ ಕಥೆಗಳು, ಚಿಕ್ಕದೇವರಾಯವಂಶಾವಳಿ, ರಾಜಾವಳಿ ಕಥೆ, ಮುದ್ರಾಮಂಜೂಷಗಳನ್ನು ಚರಿತ್ರೆಗಳೆಂದು; ತ್ರಿಷಷ್ಟಿ ಲಕ್ಷಣ ಶಲಾಕಾ ಪುರಾಣ, ರಾಮಾಶ್ವಮೇಧಗಳನ್ನು ಪುರಾಣಗಳೆಂದು; ವಿವೇಕ ಚಿಂತಾಮಣಿಯನ್ನು ಜ್ಞಾನಕೋಶವೆಂದು ಕರೆಯಬಹುದಾಗಿದೆ. ಹೀಗೆ ಈ ಮಾಲೆಯ ಕೃತಿಗಳು ವೈವಿಧ್ಯಪೂರ್ಣ ವಿಷಯಗಳನ್ನೊಳಗೊಂಡಿವೆ. ಗದ್ಯಶೈಲಿಯ ದೃಷ್ಟಿಯಿಂದ ಹೇಳುವುದಾದರೆ ಆರಾಧನಾ ಕರ್ಣಾಟಟೀಕಾ, ಕನ್ನಡ ಶರಣರ ಕಥೆಗಳು, ರಾಮಾಶ್ವಮೇಧ ವಿಶಿಷ್ಟ ಗದ್ಯ ಚಹರೆಯನ್ನು ಹೊಂದಿವೆ.

***

"ವಡ್ಡಾರಾಧನೆಯೆಂಬುದು ಕೃತಿಯ ಹೆಸರಲ್ಲ, ಶಿವಕೋಟ್ಯಾಚಾರ್ಯನೆಂಬುದು ಕವಿಯ ಹೆಸರಲ್ಲ" ಎಂದು ಹೇಳುತ್ತ, ಈ ಕೃತಿನಾಮ ಆರಾಧನಾ ಕರ್ಣಾಟಟೀಕಾ, ಕವಿನಾಮ ಭ್ರಾಜಿಷ್ಣು ಎಂದು ೧೯೭೦ರಲ್ಲಿಯೇ ನಾನು ಹೇಳಿದ್ದ ಮಾತು, ಇಂದು ಹೊಸ ಆಧಾರ ಲಭಿಸಿ ನಿಜವಾಗುತ್ತಲಿರುವುದರಿಂದ 'ಆರಾಧನಾ ಕರ್ಣಾಟಟೀಕಾ' ಎಂಬ ಹೊಸ ಶೀರ್ಷಿಕೆಯನ್ನು - ಭ್ರಾಜಿಷ್ಣುವೆಂಬ ಹೊಸ ಕವಿನಾಮವನ್ನು ಇಲ್ಲಿ ಇಟ್ಟುಕೊಳ್ಳಲಾಗಿದೆ. ಈ ಬಗೆಯ ಟೀಕಾರಚನೆ ಕವಿರಾಜಮಾರ್ಗಪೂರ್ವಸಾಹಿತ್ಯದ ಲಕ್ಷಣವಾಗಿರುವುದರಿಂದ, ಇದರ ಕಾಲ ಅಷ್ಟು ಹಿಂದೆ ಇರಬಹುದಾದರೂ, ಕ್ರಿ.ಶ. ೯೪೦ ಎಂದು ವಿದ್ವಾಂಸರು ಭಾವಿಸಿದ್ದಾರೆ. ದೇಶೀಯ ಗದ್ಯಶೈಲಿ, ಮನೋಜ್ಞ ಕಥನಕಲೆ, ವಿಶಿಷ್ಟ ಕಥಾತಂತ್ರ, ಸಾಂಸ್ಕೃತಿಕ ಜೀವನಪ್ರಜ್ಞೆ ಇತ್ಯಾದಿಗಳಿಂದಾಗಿ ಇದು ಕನ್ನಡದ ಸರ್ವಶ್ರೇಷ್ಠ ಕಥಾಕೋಶವೆನಿಸಿದೆ. ಈ ಗದ್ಯದ ಒಡಲಲ್ಲಿ ಆಗಾಗ ಉದ್ಧೃತ ಪ್ರಾಕೃತ, ಸಂಸ್ಕೃತ ಪದ್ಯಗಳು ಕಂಡುಬರುತ್ತವೆ. ಅಲ್ಲಲ್ಲಿ ತೋರುವ ವೈದಿಕ - ಜೈನ ಘರ್ಷಣೆಗಳು ಆ ಕಾಲದ ಧಾರ್ಮಿಕ ಸಂಘರ್ಷವನ್ನು ಸೂಚಿಸುತ್ತವೆ. ಜೈನ ಶ್ರಾವಕವರ್ಗ ಮತ್ತು ಮುನಿವರ್ಗ, ರಾಜವರ್ಗ, ಜೈನೇತರ ಸಾಮಾಜಿಕ ವರ್ಗಗಳಿಂದಾಗಿ ಇಲ್ಲಿ ಸಾಮುದಾಯಿಕ ಬದುಕು ದಟ್ಟವಾಗಿ ಮೂಡಿ, ಇದು ಒಂದು ಮಹತ್ವದ ಸಾಂಸ್ಕೃತಿಕ ಕೃತಿಯ ಆಕಾರ ಪಡೆದಿದೆ.

ತ್ರಿಷಷ್ಟಿ ಲಕ್ಷಣ ಶಲಾಕಾ ಪುರಾಣ (೯೭೮) ಜೈನ ೬೩ ಶಲಾಕಾಪುರುಷರನ್ನು ಕುರಿತ ಕೃತಿ. ಜಿನಸೇನ ಗುಣಭದ್ರರ ಸಂಸ್ಕೃತ ಮಹಾಪುರಾಣವನ್ನಾಧರಿಸಿ ಹುಟ್ಟಿದ ಇದರ ಕರ್ತೃ ಗಂಗಮಂತ್ರಿ ಚಾವುಂಡರಾಯ. ಈ ಕೃತಿಯ ಗದ್ಯ ಮಾರ್ಗೀಯ ಶೈಲಿಯದು. ಮಧ್ಯ ಮಧ್ಯ ಪ್ರಾಕೃತ, ಸಂಸ್ಕೃತ ಉದ್ಧೃತಿಗಳಿವೆ. ವಡ್ಡಾರಾಧನೆ ಬಿಡಿ ಕಥಾಕಕೋಶವಾಗಿದ್ದರೆ ಇದು ಬಿಡಿಯಲ್ಲಿಯೂ ಅಖಂಡತೆಯನ್ನೊಳಗೊಂಡ

ಕೃತಿಯಾಗಿದೆ. ಹೀಗಿದ್ದೂ ಇದರ ಅಖಂಡ ಶಿಲ್ಪಕ್ಕೆ ಅಲ್ಲಲ್ಲಿ ಸಮನ್ವಯದ ಚ್ಯುತಿ ಬಂದಿವೆ.

ದುರ್ಗಸಿಂಹನ ಕರ್ಣಾಟ ಪಂಚತಂತ್ರ ಅನುಪಲಬ್ಧ ವಸುಭಾಗಭಟ್ಟನ ಸಂಸ್ಕೃತ ಕಥಾಪರಂಪರೆಗೆ ಸಂಬಂಧಿಸಿದೆ. ಮೂಲತಃ ಪಂಚತಂತ್ರ ವೈದಿಕ ಕಥಾಕೋಶವಾಗಿದ್ದರೂ, ಇದರಲ್ಲಿ ಜೈನೀಯ ಅಂಶಗಳಿರುವುದು ವಿಶೇಷ. ಮಾರ್ಗೀಯ ಕೃತಿಯಾಗಿದ್ದರೂ ಸೊಗಸಾದ ಕಥಾಶೈಲಿ, ದೇಶೀ ಒಲವುಗಳನ್ನೊಳಗೊಂಡಿದೆ. ೪೫೮ ಕನ್ನಡ ಪದ್ಯಗಳಲ್ಲಿ ೨೦೪ರಷ್ಟು ಕಂದಗಳಿವೆ. ಮಿಕ್ಕವುಗಳಲ್ಲಿ ಅಕ್ಷರವೃತ್ತದ ಜೊತೆ ಷಡ್ಪದಿ, ಅಕ್ಕರ, ಪಿರಿಯಕ್ಕರ, ತ್ರಿಪದಿಗಳೆಂಬ ದೇಶೀ ಬಂಧಗಳಿರುವುದೂ ಒಂದು ವಿಶೇಷ. ಮುಖ್ಯವಾಗಿ ರಾಜನೀತಿ ಗ್ರಂಥವಾಗಿರುವುದರಿಂದ ರಾಜ್ಯಾಡಳಿತಕ್ಕೆ ಹೆಚ್ಚು ಅವಕಾಶ ನೀಡಿದ್ದರೂ, ಸಂಸಾರ –ಸಮಾಜ ಸಂಬಂಧಿ ವೈವಿಧ್ಯಮಯ ಜೀವನ ಚಿತ್ರಗಳೂ ಇಲ್ಲಿ ಎಡೆಪಡೆದಿವೆ.

ಕನ್ನಡ ಗದ್ಯಪರಂಪರೆಯಲ್ಲಿ ವಡ್ಡಾರಾಧನೆಯನ್ನು ಬಿಟ್ಟರೆ ಒಂದಿಷ್ಟು ಭಿನ್ನ ರೀತಿಯ ಜೈನಕಥಾಕೋಶವೆನಿಸಿದೆ, ನಯಸೇನನ (೧೧೧೨) ಧರ್ಮಾಮೃತ. ೧೪ ಆಶ್ವಾಸಗಳಲ್ಲಿ ೧೪ ಕಥೆಗಳನ್ನೊಳಗೊಂಡ ಈ ಕೃತಿ ಮಾರ್ಗೀಯವಾಗಿದ್ದರೂ ದೇಶೀಯ ಒಲವು ಅಧಿಕವಾಗಿದೆ. ಹೀಗಾಗಿ ನಾಣ್ಣುಡಿಯ ಬಳಕೆಯಲ್ಲಿ, ಇದಕ್ಕಿಂತ ವೆಗ್ಗಳವಾಗಿ ಬಳಸಿರುವ ಉಪಮೆಗಳಲ್ಲಿ ಇವನ ವಿಶೇಷತೆ ಅಡಗಿದೆ. ಮಾಲೋಪಮೆಯೆಂದು ಹೇಳುವಷ್ಟರ ಮಟ್ಟಿಗೆ ಅವು ಮಾಲೆಮಾಲೆಯಾಗಿ ಬರುವುದರಿಂದ ವಿದ್ವಾಂಸರು ಇವನನ್ನು ಉಪಮಾಲಂಪಟನೆಂದು ಕರೆದುದು ಸೂಕ್ತವಾಗಿದೆ. ಇದಕ್ಕೆ ಕಳಸವಿಟ್ಟಂತೆ ವಿಡಂಬನೆ ಈ ಕೃತಿಯ ವೈಶಿಷ್ಟ್ಯವಾಗಿದ್ದು, ವೈದಿಕ ಬೌದ್ಧಗಳ ದೋಷವನ್ನು ಎತ್ತಿ ಹೇಳುವಲ್ಲಿ ಇದು ಸಾರ್ಥಕತೆ ಪಡೆದಿದೆ. ಇವೆಲ್ಲ ಮೇಳವಿಸುವಲ್ಲಿ ಅವನ ವೈವಿಧ್ಯಪೂರ್ಣ ಜೀವನಾನುಭವ ಅಚ್ಚರಿ ಹುಟ್ಟಿಸುತ್ತದೆ. ದುರ್ಗಸಿಂಹನಂತೆ ಮಾರ್ಗೀಯ ಕವಿಯಾಗಿದ್ದರೂ ಅವನಿಗಿಂತ ಹೆಚ್ಚು ಜಾನಪದೀಯವಾಗಿ ಕಾಣುತ್ತಾನೆ.

'ಕನ್ನಡ ಶರಣರ ಕಥೆಗಳು' ಹೆಸರೇ ಸೂಚಿಸುವಂತೆ ಕರ್ಣಾಟಕಕ್ಕೆ ಸಂಬಂಧಿಸಿದ, ಗದ್ಯ – ಪದ್ಯ ಮಿಶ್ರಿತ ರೂಪದ ರಗಳೆಗೆ ವಸ್ತುವಾಗಿರುವ, ಶರಣರ ಕೃತಿಗಳನ್ನೊಳಗೊಂಡಿದೆ. ಶರಣರ ವಚನಗಳ ಗದ್ಯವನ್ನು ಶುದ್ಧಸಾಹಿತ್ಯಕ್ಕೆ ಅಳವಡಿಸಿದ ನಡುಗನ್ನಡ ಸಾಹಿತ್ಯದ ಆದಿಕವಿಯಾಗಿದ್ದಾನೆ, ಹರಿಹರ (೧೩ನೆಯ ಶತಮಾನ). ಭಕ್ತಿಕೇಂದ್ರಿತ ಆಶಯ, ಸ್ಥಳೀಯ ಶರಣಚರಿತ್ರೆನಿಷ್ಠ ವಸ್ತು, ರಗಳೆ ಸಾಹಿತ್ಯಪ್ರಕಾರ, ನಡುಗನ್ನಡ ಭಾಷೆ ಇತ್ಯಾದಿ ಹೊಸ ಉಪಕರಣಗಳನ್ನು ಶೋಧಿಸಿ, ಸೃಜನಶೀಲತೆಯಲ್ಲಿ ಎರಕಹೊಯ್ದವನೀತ. ಭಾಷೆಯ ಲಾಲಿತ್ಯ, ಶೈಲಿಯ ಉತ್ಸಾಹ, ಲಯಬದ್ಧವಾಕ್ಯ, ವೈವಿಧ್ಯಪೂರ್ಣ ಕಲ್ಪನೆ ಮೊದಲಾದವುಗಳಿಂದಾಗಿ ಇವನ ಗದ್ಯಕ್ಕೆ ಈ ಮೊದಲು ಕನ್ನಡದಲ್ಲಿಲ್ಲದ ಹೊಸ ಸೊಬಗು ಪ್ರಾಪ್ತವಾಗಿದೆ. ವಡ್ಡಾರಾಧನೆಯನ್ನು ಬಿಟ್ಟರೆ

ಕನ್ನಡ ಗದ್ಯವನ್ನು ಹೊಸ ಬಗೆಯಲ್ಲಿ ಹದಗೊಳಿಸಿದ ಕೀರ್ತಿ ಹರಿಹರನಿಗೆ ಸಲ್ಲುತ್ತದೆ. ಒಂದು ಸ್ಥಲ ಗದ್ಯ, ಒಂದು ಸ್ಥಲ ರಗಳೆಯೆಂಬ ಯೋಜನೆಯಲ್ಲಿ ರಗಳೆಯೇ ಗದ್ಯವಾದ, ಗದ್ಯವೇ ರಗಳೆಯಾದ ಅನುಭವ ಓದುಗನಿಗೆ ಉಂಟಾಗುತ್ತದೆ. ಹೇಳಲೇಬೇಕಾದ ಇನ್ನೊಂದು ಅಂಶವೆಂದರೆ, ಕನ್ನಡ ಸಾಹಿತ್ಯದ ಪ್ರಥಮ ಭಾವಗೀತ ಕವಿಯಾಗಿರುವ ಈತ, ಕನ್ನಡ ಸಾಹಿತ್ಯದ ಪ್ರಥಮ ಸಂತಕವಿ. ಹೀಗಾಗಿ ಇವನ ಬರೆಹ ಮನೋಪಾತಳಿಗೆ ನಿಲ್ಲದೆ, ಆತ್ಮಪಾತಳಿಯಲ್ಲಿ ವಿಹರಿಸುತ್ತದೆ, ವಿರಮಿಸುತ್ತದೆ.

ನಿಜಗುಣಶಿವಯೋಗಿ ಶೈವದಲ್ಲಿಯೇ ಶಾಂತಪರಂಪರೆಗೆ ಸಂಬಂಧಿಸಿರಬಹುದಾಗಿದ್ದು (೧೫ ಶತಮಾನ), ಕವಿತ್ವ – ಅನುಭಾವಗಳ ಸಂಗಮವಾಗಿರುವ ಇವನ 'ವಿವೇಕ ಚಿಂತಾಮಣಿ' ವಿಶ್ವಕೋಶ ಪ್ರಕಾರದ ಗದ್ಯಕೃತಿ. ಈ ಹಿಂದಿನ ಗದ್ಯಕೃತಿಗಳು ಕವಿತ್ವವನ್ನೊಳಗೊಂಡಿದ್ದರೆ, ಇದರಲ್ಲಿ ಶಾಸ್ತ್ರಯೋಗ್ಯ ನಿರೂಪಣಾಗದ್ಯ ನೆಲೆ ಪಡೆದಿದೆ. ಈ ಗುಣದಿಂದಾಗಿ ಈ ಗದ್ಯಕ್ಕೆ ಪ್ರಾಚೀನ ಸಾಹಿತ್ಯದಲ್ಲಿ ಪ್ರತ್ಯೇಕ ಸ್ಥಾನ ಸಲ್ಲುತ್ತದೆ. ವಿಶ್ವಕೋಶವರ್ಗದ ಇದು ಸಹಜವಾಗಿಯೇ ಬದುಕಿನ ವಿವಿಧ ಆಯಾಮಗಳ ಜ್ಞಾನಸಂಪತ್ತನ್ನೊಳಗೊಂಡಿದೆ.

ಮೈಸೂರು ಒಡೆಯರ ಕಾಲದಲ್ಲಿ ಪದ್ಯ ಹಿಂದು ಬಿದ್ದು, ಗದ್ಯ ವಿಪುಲ ಪ್ರಮಾಣದಲ್ಲಿ ಬೆಳೆಯಿತು. ಪಾಂಡಿತ್ಯ ಪ್ರದರ್ಶನದ ಹಂಬಲ, ನಡುಗನ್ನಡ – ಹೊಸಗನ್ನಡ ಮಿಶ್ರಶೈಲಿಗಳಿಂದಾಗಿ ಒಂದು ಬಗೆಯ ಮಧ್ಯಮ ಗುಣಮಟ್ಟದ ಸಾಹಿತ್ಯ ಈ ಕಾಲದಲ್ಲಿ ಹುಟ್ಟಿತು. ಇದಕ್ಕೆ ನಿದರ್ಶನವೆನಿಸುವ ಚಿಕದೇವರಾಯ ವಂಶಾವಳಿ, ರಾಜಾವಳಿ ಕಥೆ, ಮುದ್ರಾಮಂಜೂಷಗಳನ್ನು ಇಲ್ಲಿ ಒಟ್ಟಿಗೆ ಪರಿಶೀಲಿಸಬಹುದು. ಚಿಕದೇವರಾಯ ವಂಶಾವಳಿಯ ಕರ್ತೃ ತಿರುಮಲಾರ್ಯ (೧೬೪೫–೧೭೦೬) ಮೈಸೂರು ಚಿಕದೇವರಾಯನ ಸಚಿವ. ಧಾರ್ಮಿಕ ಮುಖವಾಡದಲ್ಲಿ ತಮಿಳುನಾಡಿನಿಂದ ಕರ್ನಾಟಕವನ್ನು ಪ್ರವೇಶಿಸಿದ ಶ್ರೀವೈಷ್ಣವರು, ಈ ಹೊತ್ತಿಗೆ ರಾಜಕೀಯವಾಗಿಯೂ ಪ್ರಬಲರಾಗಿ, ತಮ್ಮ ಶ್ರೀವೈಷ್ಣವ ಸಾಹಿತ್ಯವನ್ನು ಕನ್ನಡದಲ್ಲಿ ಸೃಷ್ಟಿಸಲು ಆರಂಭಮಾಡಿದ ಕಾಲಘಟ್ಟದ ಕೃತಿಯಿದು. ಅನ್ಯರಾಜ್ಯದಿಂದ ಬಂದ ಇವರಿಗೆ ಒಂದು ಕಡೆ ತಮ್ಮ ಧರ್ಮಪ್ರಚಾರವೂ, ಇನ್ನೊಂದು ಕಡೆ ರಾಜನ ಪ್ರೀತಿಸಂಪಾದನೆಯೂ ಅಗತ್ಯವಾಗಿದ್ದ ಕಾರಣ, ತಮ್ಮ ಧಾರ್ಮಿಕ ಕೃತಿಗಳೊಂದಿಗೆ ರಾಜಸ್ತುತಿ ಕಾವ್ಯಗಳನ್ನೂ ಬರೆದರು. ಈ ಮನೋಧರ್ಮ ಕಾರಣವಾಗಿ ಈ ಗದ್ಯಕೃತಿಯಲ್ಲಿ ರಾಜವಂಶಾವಳಿ, ಶ್ರೀವೈಷ್ಣವಧರ್ಮ ಪ್ರಶಂಸೆಯೊಂದಿಗೆ ಇವನ ವಂಶಾವಳಿಯೂ ಸೇರಿಕೊಂಡಿದೆ. ಸಮಕಾಲೀನತೆಗಿಂತ ಪ್ರಾಚೀನತೆಯ ಒಲವು ಈ ಗದ್ಯದ ಲಕ್ಷಣವಾಗಿದೆ.

ದೇವಚಂದ್ರನ (೧೭೭೦–೧೮೪೧) ರಾಜಾವಳಿ ಕಥೆ ಮೆಕೆಂಝಿಯ ಸೂಚನೆಯಂತೆ ರಚಿಸಿದ ಕೃತಿಯಾಗಿದೆ. ಸಮಕಾಲೀನ ಮುಖ್ಯ ಘಟನೆಗಳನ್ನು, ಅವುಗಳ ಇತಿಹಾಸವನ್ನು ತುಂಬ ವಿವರವಾಗಿ ಬಿಂಬಿಸುವ ಇದು ಚರಿತ್ರೆ, ಪುರಾಣ,

ದಂತಕಥೆಗಳ ಮಿಶ್ರಣವಾಗಿದ್ದು, ಮೌಖಿಕ ಇತಿಹಾಸದ ಸ್ವರೂಪ ಪಡೆದಿದೆ. ಜೈನಪರ ಧೋರಣೆಯ ರಾಜಕೀಯ, ಧಾರ್ಮಿಕ, ಸಾಮಾಜಿಕ ಸಂಗತಿಗಳನ್ನು ಒಳಗೊಂಡ ಇದರ ಗದ್ಯಶೈಲಿ ಆಧುನಿಕತೆಯತ್ತ ಮುಖಮಾಡಿದೆ.

ನಂದವಂಶೀಯರ ಮಂತ್ರಿಯಾದ ರಾಕ್ಷಸನನ್ನು ಮೌರ್ಯವಂಶೀಯರ ಮಂತ್ರಿ ಚಾಣಕ್ಯನು ಒಲಿಸಿಕೊಂಡ ಕಥೆಯನ್ನು 'ಮುದ್ರಾಮಂಜೂಷ' ಹೆಸರಿನಿಂದ ರಚಿಸಿದವ, ಕೆಂಪುನಾರಾಯಣ (೧೮ನೆಯ ಶತಮಾನ). ಉತ್ತರ ಭಾರತದ ಐತಿಹಾಸಿಕ ವಸ್ತುವನ್ನು ಸಮಕಾಲೀನ ಗ್ರಂಥಸ್ಥ ಗದ್ಯದಲ್ಲಿ ಎರಕಹೊಯ್ದಿದ್ದು, ಶೈಲಿಯಲ್ಲಿ ಹಳಗನ್ನಡ-ಹೊಸಗನ್ನಡಗಳ ಮಿಶ್ರಣ ಎದ್ದುಕಾಣುತ್ತದೆ.

ಮೈಸೂರು ಅರಸರ ಕಾಲದ ಗ್ರಂಥಸ್ಥ ಅರೆಬೆಂದ ಗದ್ಯಕ್ಕೆ ಭಿನ್ನವಾಗಿ ನಿಲ್ಲುತ್ತದೆ, ಮುದ್ದಣನ ರಾಮಾಶ್ವಮೇಧ ಗದ್ಯ. "ಗದ್ಯಂ ಹೃದ್ಯಂ" ಎನ್ನುತ್ತ ಅವನು ಆಧುನಿಕ ಸಾಹಿತ್ಯದ, ಅದರಲ್ಲಿಯೂ ಗದ್ಯಸಾಹಿತ್ಯದ ಬಾಗಿಲನ್ನೇ ತೆರೆದನು. ಮೋಡ ಮುಸುಕಿದ ವಾತಾವರಣದಿಂದ ಆರಂಭವಾಗಿರುವ ಈ ಕೃತಿ, ಆ ಕಾಲದ ಕನ್ನಡದ ಮೇಲೆ ಮುಸುಕಿದ್ದ ಕತ್ತಲೆಯನ್ನು ಸಂಕೇತಿಸುತ್ತದೆ. ಇಂಥ ಸಂದರ್ಭದಲ್ಲಿ ಕಲ್ಪಿತ ಪಾತ್ರವಾಗಿ ಬರುವ ಹೆಂಡತಿ ಹೊಸ ಭಾಷೆ, ಹೊಸ ವಸ್ತು, ಹೊಸ ಬಗೆಯ ನಿರೂಪಣೆ ಇತ್ಯಾದಿಗಳ ಬಗ್ಗೆ ಕೇಳಿದ ಪ್ರಶ್ನೆಗಳಿಗೆ ನೀಡಿದ ಉತ್ತರಗಳಿಂದ ಮುಂದುವರಿಯುವ ಇದು, ಆಧುನಿಕ ಗದ್ಯಯುಗಕ್ಕೆ ನಾಂದಿ ಹಾಡಿದೆ. ಆದುದರಿಂದ ಮುದ್ದಣನನ್ನು ನವೋದಯದ ಮುಂಗೋಳಿಯೆಂದು ಕರೆದುದು ನ್ಯಾಯವಾಗಿದೆ.

ಹೀಗೆ ಒಂದು ಸಾವಿರ ವರ್ಷದ ಗದ್ಯ ಸಾಹಿತ್ಯೇತಿಹಾಸದಲ್ಲಿ ಮೈಲಿಗಲ್ಲು ಎನಿಸಿದ ೧೦ ಕೃತಿಗಳು ಒಂದು ಮಾಲೆಯಡಿಯಲ್ಲಿ ಈಗ ಪ್ರಕಟವಾಗುತ್ತಲಿವೆ. ಇವು ಒಂದರ್ಥದಲ್ಲಿ ನಮ್ಮ ಗದ್ಯ ಸಾಗಿಬಂದ ಹಾದಿಯನ್ನು ತಿಳಿಸುವ ಕೈಮರಗಳಾಗಿವೆ.

ಕೃತಜ್ಞತೆಗಳು :

ಸಂಪಾದಕನಾಗಿ ಈ ಯೋಜನೆಯನ್ನು ಪೂರೈಸುವ ಹೊಣೆಯನ್ನು ನನಗೆ ವಹಿಸಿಕೊಟ್ಟ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿದ್ಧಲಿಂಗಯ್ಯ ಅವರಿಗೂ, ಕನ್ನಡದ ಮೇಲಿನ ಪ್ರೀತಿಯಿಂದ ಈ ಗದ್ಯಕೃತಿಗಳನ್ನು ಸಂಪಾದಿಸಿಕೊಟ್ಟ ಎಲ್ಲ ವಿದ್ವಾಂಸ ಮಿತ್ರರಿಗೂ, ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ.ಎಚ್. ಮಲ್ಲಿಕಾರ್ಜುನ ಅವರಿಗೂ, ಸಲಹಾ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳು.

◆

ಪ್ರಸ್ತಾವನೆ

ಡಾ. ರಾಗೌ

ಕವಿ - ಕೃತಿ

ಪ್ರಸ್ತುತ ಗದ್ಯಕೃತಿಯು ಕವಿ ದೇವಚಂದ್ರ. ಈ ಕೃತಿಗೆ "ರಾಜಾವಲಿ ಕಥಾವತಾರಮೆಂಬಭಿಧಾನಮನಿಟ್ಟು ಪೇಳ್ವೆನ್" ಎಂದು ಹೇಳಿಕೊಂಡಿದ್ದಾನೆ. ಇದಕ್ಕೆ 'ರಾಜಾವಲಿ ಕಥಾಸಾರ' ಮತ್ತು 'ರಾಜಾವಲಿಕಥೆ' ಎಂದೂ ಹೆಸರುಗಳಿವೆ. ತನ್ನ ಕೃತಿಯ ಆರಂಭದ ಅಧಿಕಾರದಲ್ಲಿಯೇ "ಸತ್ಪುರುಷರೀ ಕಥೆಯಂ ಶಬ್ದದೋಷಮಂ ತಿದ್ದಿ ಬುಧರ್ಗರಿವಂತು ಪೇಳ್ವುದೆಂದವರಂ ನುತಿಸಿ ಹೊಸಗನ್ನಡ ವಾಕ್ಯಂಗಳಿಂ ವಿರಚಿಸುವೆಂ" ಎಂಬು ಹೇಳಿದ್ದಾನೆ. ಇಲ್ಲಿ 'ಹೊಸನ್ನಡ ವಾಕ್ಯಂಗಳ್' ಎಂಬ ಮಾತು ಮುಖ್ಯ; ಅಂದರೆ ಹೊಸಗನ್ನಡದಲ್ಲಿ ಬರೆಯುತ್ತಿದ್ದೇನೆ ಎಂದು ಅರ್ಥ. ಆದರೆ ಇವನ ಕೃತಿಗೆ ಹೊಸಗನ್ನಡ ಅನುವಾದವೇ ಆವಶ್ಯಕವಿದೆಯೆಂದ ಮೇಲೆ, ಇದು ಹೇಗೆ 'ಹೊಸಗನ್ನಡ' ಆಗುತ್ತದೆ ಎಂಬ ಪ್ರಶ್ನೆ ಸಹಜ. ಆಗ ಇವನ ಕೃತಿಯ ಗದ್ಯಶೈಲಿ ಹೊಸಗನ್ನಡ ಪೂರ್ವ ಅಥವಾ ಹೊಸಗನ್ನಡ ಸಮೀಪಪೂರ್ವದ್ದೆಂದು ಹೇಳಬೇಕಾಗುತ್ತದೆ. ಕೃತಿಯನ್ನು ಅಭ್ಯಾಸಮಾಡಿದರೆ, ಕವಿ ದೇವಚಂದ್ರನಿಗೆ ಹಳಗನ್ನಡ ಮತ್ತು ಮಧ್ಯಕಾಲೀನ ಕನ್ನಡ ಭಾಷಾಸ್ವರೂಪದ ಪರಿಚಯವಿದ್ದು, ಅದನ್ನೆಲ್ಲ ಗದ್ಯಶೈಲಿಯಲ್ಲಿ ದುಡಿಸಿಕೊಂಡಿರುವಂತೆ ತೋರುವುದು. ಆದ್ದರಿಂದ ದೇವಚಂದ್ರನ ಕನ್ನಡವನ್ನು ಕೇವಲ 'ಹೊಸಗನ್ನಡ' ಎಂದು ಹೇಳಲು ಬರುವುದಿಲ್ಲ; ಸಾಕಷ್ಟು ಸಂಕೀರ್ಣವಾಗಿರುವಂತೆ ಕಸಿಮಾಡಿರುವುದು ಕಾಣವುದು.

ಮೊದಲನೆಯ ಮತ್ತು ಕೊನೆಯ ಅಧಿಕಾರವನ್ನು ಹೊರತುಪಡಿಸಿ, ಉಳಿದೆಲ್ಲ (ಅಂದರೆ ಹನ್ನೊಂದು) ಅಧ್ಯಾಯಗಳಲ್ಲಿಯೂ ಸಣ್ಣಪುಟ್ಟ ಬದಲಾವಣೆಗಳೊಡನೆ ಈ ಕೆಳಗಿನ ಪದ್ಯ ಆಯಾ ಅಧಿಕಾರಗಳ ಆರಂಭದಲ್ಲಿ ಕಾಣಿಸಿಕೊಳ್ಳುವುದಿದೆ. ಕೃತಿಯ ಸ್ವಾಗತಕ್ಕೆ ಸಂಬಂಧಿಸಿದಂತೆ ದೇವಚಂದ್ರ ಸಮಾನ ಆಶಯದ ಈ ಪದ್ಯವನ್ನು ಬರೆದಿರುವಂತೆ ತೋರುವುದು. ಆ ಪದ್ಯದ ರಚನಾಸ್ವರೂಪ ಹೀಗಿದೆ :

ಶ್ರೀ ಸುಜನಸ್ತುತರಖಿಳ ಕ
ಳಾಸದನರ್ ಮೋಹತಿಮಿರಮಂ ಕಳೆದು ಕರಂ
ಭಾಸುರ ವಿಚಾರದಕ್ಷರ್
ವೈಷಮ್ಯಮನುಳಿದು ಕೇಳ್ವುದೀ ಸತ್ಕೃತಿಯಂ

ತನ್ನ ಕೃತಿಯನ್ನು 'ವೈಷಮ್ಯಮನುಳಿದು' ಕೇಳಬೇಕೆಂದು ಕವಿ ದೇವಚಂದ್ರ ಕೇಳಿಕೊಂಡಿದ್ದಾನೆ. ಮೇಲಿನ ಪದ್ಯದ ಸಾಲುಗಳ ಮಾರ್ಪಡಿನಲ್ಲಿ ಈ ಉಕ್ತಿಮಾತ್ರ ವ್ಯತ್ಯಾಸವಾಗದಿರುವುದು ಗಮನಿಸುವಂಥದು. ತಾನು ಜೈನ ಧರ್ಮೀಯನಾಗಿರುವುದರಿಂದ, ಅನ್ಯಧರ್ಮೀಯರೂ ಇದನ್ನು ಯಾವುದೇ ವೈಷಮ್ಯವಿಲ್ಲದೆ ಕೇಳಬೇಕೆಂದು ಅವನ ಪ್ರಾರ್ಥನೆಯ ಅರ್ಥವಿರಬಹುದು. ವಾಸ್ತವವಾಗಿ ಈ ಕೃತಿಯನ್ನು ಜೈನಧರ್ಮದ ಆವರಣದಲ್ಲಿ ಬರೆದದ್ದಾದರೂ, ವೈದಿಕ ಅಂಶಗಳೂ ಇತರ ಚಾರಿತ್ರಿಕ ಸಾಂಸ್ಕೃತಿಕ ಅಂಶಗಳೂ ಕೃತಿಯ ಹೂರಣವನ್ನು ರೂಪಿಸಿರುವುದು ಸ್ಪಷ್ಟವೇ ಇದೆ. ಆದಕಾರಣ 'ವೈಷಮ್ಯಮನುಳಿದು' ಮಾತಿನ ಪ್ರಸ್ತಾಪ ಅನಗತ್ಯವಾಗಿತ್ತೆಂದೇ ಹೇಳಬೇಕು; ಅಥವಾ ಸಮಕಾಲೀನ ಇನ್ನಾವುದೊ ಗೂಢವಿಚಾರ ಕವಿಯನ್ನು ಕಾಡಿರಬಹುದು. ಒಂದು ಕೃತಿಯನ್ನು ನಿಷ್ಪಕ್ಷಪಾತದಿಂದ, ಪೂರ್ವಾಗ್ರಹದಿಂದ ದೂರವಾಗಿ ವೀಕ್ಷಿಸುವುದು ಇವೊತ್ತಿಗೂ ಆವಶ್ಯಕ. ಈ ಹಿನ್ನೆಲೆಯಲ್ಲಿ ಕವಿಯ ಕೋರಿಕೆ ಸ್ವಾಗತಾರ್ಹವಾದುದೇ.

ದೇವಚಂದ್ರ ಚಾಮರಾಜನಗರ ಜಿಲ್ಲೆಯ ಮಲೆಯೂರಿನವನೆಂದು ಕೃತಿಯ ಸಮಾಪ್ತಿ ವಾಕ್ಯದಲ್ಲಿ ಬಂದಿರುವ "ಕನಕಾಚಲ ಶ್ರೀ ಜಿನಾರಾಧಕ ಮಲೆಯೂರ ದೇವಚಂದ್ರ ಪಂಡಿತ ವಿರಚಿತ ರಾಜಾವಲಿ ಕಥಾಸಾರದೊಳ್" ಎಂಬ ಮಾತಿನಿಂದ ಸ್ಪಷ್ಟಪಡುವುದು. ಅವನು ೧೭೭೦ ರಿಂದ ೧೮೪೧ರ ವರೆಗೆ ಇದ್ದನೆಂಬುದೂ ಕೃತಿಯ ಆಂತರಿಕ ಆಧಾರಗಳಿಂದ ತಿಳಿದು ಬರುವುದು. ದೇವಚಂದ್ರ ತನ್ನ ವಂಶಾವಳಿಯನ್ನೂ ವೈಯಕ್ತಿಕ ಚರಿತ್ರೆಯನ್ನೂ ಕೃತಿ ರಚನಾದಿ ವಿಷಯಗಳನ್ನೂ ಹನ್ನೊಂದನೆಯ ಅಧಿಕಾರದ ಕೊನೆಯಲ್ಲಿ ಹೇಳಿಕೊಂಡಿದ್ದಾನೆ (ಪು. ೩೦೩-೩೦೫) :

"ಸಮಂತಭದ್ರ ವಾದೀಭಸಿಂಹಸೂರಿ ವಾದಿರಾಜರಾದಿಂ ಬಳಿಕ ಶ್ರೀ ಗುಣಭದ್ರ ಯತಿಶಿಷ್ಯ ಶ್ರೀವತ್ಸಗೋತ್ರದ ಗೋಪಾಚಾರ್ಯ ಪುತ್ರ ಹಸ್ತಿಮಲ್ಲಿಷೇಣಸೂನು ಪಾರ್ಶ್ವಪಂಡಿತ ಚಂದ್ರಪಾರ್ಯವಂಶಜ ಚಂದ್ರನಾಥಂ ಕನಕಗಿರಿಯೊಳ್ ನಿಂತನಾ ವಂಶಪರಂಪರೆಯೊಳೆ ಮಧ್ಯಸ್ತ ಬ್ರಹ್ಮವಿಪ್ರತನೂಭವರ್ ನಾಲ್ವರವರೊಳೆ ಕಿರಿಯ ಶಾನುಭಾಗ ಬೊಮ್ಮರಸನಾತನ ಪುತ್ರಂ ವಿಜಯಪ್ಪಸೂನು ಬೊಮ್ಮರಸೋ ಪಾಧ್ಯಾಯರನ್ವಯಂ ವಿಜಯಾಪತ್ಯಂ ದೇವಯ್ಯನನುಜಂ ಅಂತಪ್ಪನಾತಂಗೆ ನಾಲ್ವರ್ ಕುಮಾರರಾಗೆ ಕಿರಿಯ ದೇವಚಂದ್ರನೈವರ್ ತನಯರೊಳು ಕಿರಿಯ ದೇವಯ್ಯನೆಂಬಂಗೆ ಬಾಚಹಳ್ಳಿ ಭಾರದ್ವಾಜಗೋತ್ರದ ಪುಟ್ಟುಪಾಧ್ಯಾಯಸುತೆ ಕುಸುಮಾಜಮ್ಮನೆಂಬಳು ಎರಡನೆಯ ವಿವಾಹಮಾಗಲಾಕೆಯ ಗರ್ಭದೊಳ್ ನಾಲ್ವರ್ ಕುಮಾರರಾಗೆ ದ್ವಿತಿಯ ಪುತ್ರನೈದನೆ ವರುಷದೊಳೆ ಕಾಲವಾಗಲುಳಿದ ಮೂವರು ದೀರ್ಘಾಯುಷ್ಯರಾಗಿ ಅನೇಕ ಶಾಸ್ತ್ರಾವಲೋಕನದಿಂ ಲೌಕಿಕ ಪಾರಮಾರ್ಥಿಕಮಂ ತತ್ವ ನೀತಿ ವೈದ್ಯ ಜ್ಯೋತಿಷ ಮಂತ್ರವಾದಾದಿ ವಿದ್ಯಂಗಳುಂ ಕಲ್ತು ಶಾಂತಿಸ್ಥೈರಣೆ ನಿಗರ್ವಮಂ ತಾಳಿ ಒಬ್ಬರನ್ನೊಬ್ಬರಗಲದೆ ಅತ್ಯಂತ ಪ್ರೀತಿಯೊಳಗೆ ಸೌಜನ್ಯ ದಿಂದಿರ್ದರವರೊಳು ಜ್ಯೇಷ್ಠನಪ್ಪ ಚಂದಪಾರ್ಯ ಆಬಾಲ ಬ್ರಹ್ಮಚಾರಿ ಏಕಭುಕ್ತ ದಿಂದಾತ್ಮಧ್ಯಾನಶ್ರದ್ಧೆಯಿಂದಿಪ್ಪತ್ತುನಾಲ್ಕು ವರುಷಮಿರ್ದು ಶುಭಪರಿಣಾಮದೊಳೆ

ಕಾಲಂಗಂಡಂ ಮೂರನೆಯ ಪದ್ಮರಾಜನೆಂಬಂ ಸಕಲ ಕಲಾಕುಶಲಂ ಗೃಹಸ್ಥಾಚಾರ್ಯ ನಾಗಿ ಗಂಡು ಹೆಣ್ಣು ಮಕ್ಕಳಂ ಪಡೆದು ಅನೇಕ ಗ್ರಂಥಂಗಳಂ ಮಾಡಿ ಪರೋಪಕಾರಿ ಯಾಗಿರ್ದು ಕಾಲಂಗಂಡಂ ನಾಲ್ಕನೆಯ ದೇವಚಂದ್ರನೆಂಬಂ ವಿಕೃತುವತ್ಸರದಾಷಾಢ ಶುದ್ಧ ಪೌರ್ನಮಿಯೊಳ್ ಪುಟ್ಟಿ ಹದಿನಾಲ್ಕು ವರ್ಷಾರಭ್ಯದಿ ಕರಣಿಕಾಗ್ರಗಣ್ಯನೆನಿಸಿ ಕವಿ ಗಮಕ ವಾಗ್ಮಿತ್ವದಿಂ ಸಜ್ಜನನೆನಿಸಿ" (ಪು. ೩೦೩).

ಈ ಉಲ್ಲೇಖದ ಪ್ರಕಾರ ಕವಿಯ ತಂದೆ ದೇವಯ್ಯನೆಂದೂ, ತಾಯಿ ಕುಸುಮಾಜಮ್ಮಳೆಂದೂ ಗೊತ್ತಾಗುವುದು. ಈ ದಂಪತಿಗಳ ನಾಲ್ಕು ಜನ ಮಕ್ಕಳಲ್ಲಿ ದ್ವಿತೀಯ ಪುತ್ರ ಐದನೆಯ ವರ್ಷದಲ್ಲಿಯೇ ತೀರಿಕೊಂಡಿದ್ದನೆಂದು ಕವಿ ಹೇಳುತ್ತಾನೆ; ಉಳಿದ ಮೂವರು ಪುತ್ರರು ಕ್ರಮವಾಗಿ ಚಂದಪಾರ್ಯ, ಪದ್ಮರಾಜ ಮತ್ತು ದೇವಚಂದ್ರ. ಪದ್ಮರಾಜ ಅನೇಕ ಗ್ರಂಥಗಳ ರಚನಕಾರನೆಂದು ಕವಿಯ ಅಭಿಪ್ರಾಯ. ಕವಿ ದೇವಚಂದ್ರ ನಾಲ್ಕನೆಯ ಪುತ್ರನಾಗಿದ್ದು, ಗಮಕಿಯೂ ವಾಗ್ಮಿಯೂ ಆಗಿದ್ದನೆಂದು ಮೇಲಿನ ವಿವರ ತಿಳಿಸುವುದು. "ಕಥಕನ ವಂಶಾವಳಿ"ಯನ್ನು ನೋಡಿದರೆ ಕವಿ ದೇವಚಂದ್ರ ಪಂಡಿತಮನೆತನಕ್ಕೆ ಸೇರಿದವನೆಂದು ಪ್ರತೀತವಾಗುವುದು.

ಕವಿ ದೇವಚಂದ್ರ ತನ್ನ ಬರೆವಣಿಗೆಗೆ ಕಾರಣರಾದವರನ್ನೂ, ಪ್ರೋತ್ಸಾಹ ನೀಡಿದವರನ್ನೂ ನೆನೆಯುತ್ತಾನೆ. ಸೂರಿಪಂಡಿತ "ರಾಜಾವಳಿಕಥೆಯಂ ಮಾಡಿಸಿದಂ" (ಪು. ೩೦೩) ಎಂದು ಹೇಳಿರುವುದರಿಂದ, ರಾಜಾವಳಿಕಥೆಯ ಬರೆವಣಿಗೆಗೆ ಸೂರಿಪಂಡಿತ ಕಾರಣನಾದಂತಿದೆ; ಈ ಪಂಡಿತ ಮುಮ್ಮಡಿ ಕೃಷ್ಣರಾಜ ಒಡೆಯರ ಆಶ್ರಿತನಿರುವಂತೆ ತಿಳಿಯಲಾಗಿದೆ. ಕವಿ ಮಕಂಜಿಯ ಸಂಪರ್ಕಕ್ಕೆ ಬಂದ ಹೊಸ ಪ್ರಸ್ತಾಪವಿದ್ದು, ಅಂತಿಮವಾಗಿ ಅದು ಫಲಪ್ರದವಾಗದೆಹೋದುದು ವಿಷಾದಕ್ಕೆಡೆಮಾಡಿಕೊಟ್ಟಿದೆ. ಇದರೊಡನೆ ಸಂಸಾರದ ತಾಪತ್ರಯವೂ, ರಚಿತವಾದ ಕೃತಿಗಳ ವಿವರಗಳೂ ಸೇರಿಕೊಂಡಿರುವುದು ವಿಶೇಷ. ಹನ್ನೊಂದನೆಯ ಅಧಿಕಾರದಲ್ಲಿಯೇ (ಪು. ೩೦೩-೩೦೪) ಈ ಎಲ್ಲದಕ್ಕೆ ಸಾಕ್ಷಿಯಾದ ಭಾಗವಿದೆ; ಅದು ಇಂತಿದೆ :

"ಸೀಮೆ ಪೈಮಾಸಿಯಂ ಮಾಡಲ್ ಮಕಂಜಿ ಸರದಾರಂ ಲಕ್ಷ್ಮಣರಾಯಂವೆರಸು ಬಂದಲ್ಲಿ ಕನಕಗಿರಿಗೆ ಬಂದೆನ್ನಂ ಸ್ಥಳಪುರಾಣಮುಂಟೆ ಎಂದು ಕೇಳ್ವುದುಂ ನಾನು ಮಾಡಿದ ಪೂಜ್ಯಪಾದ ಚರಿತ್ರೆಯನ್ನೋದಿ ಪೇಳ್ವುದು ಎನ್ನಂ ಬಿಡದೆ ಕಮರಹಳ್ಳಿ ಬಳಿಯ ಒಡ್ಡಿರ್ದ ಗುಡಾರದ ಬಳಿಗೆ ಕರೆದುಕೊಂಡು ಪೋಗಿ ಪೂರ್ವದ ಕೆಲವು ಪ್ರಪಂಚುಗಳಂ ಮೂರು ರಾತ್ರಿ ಚೆನ್ನಾಗಿ ಲಾಲಿಸಿ ಕಳಿಲೆ ಮಹಿಸೂರು ಪಟ್ಟಣ ಇಲವಾಲ ನಾಗವಾಲದವರಿಗು ಎರಡು ತಿಂಗಳ ಪರ್ಯಂತರಂ ಬಿಡದೆ ದಿನ ಒಂದಕ್ಕೆ ಗ್ರಾಸಕ್ಕೆ ಒಂದು ಹಣಮಂ ಕೊಡುತ್ತ ರಾತ್ರಿಕಾಲದೊಳು ಪೂರ್ವದ ಪ್ರಪಂಚುಗಳಂ ಜಾತಿ ಭೇದಂಗಳು ಮೊದಲಾದ ವಿವರಗಳನೆಲ್ಲಮಂ ಕೇಳುತ್ತ ರಾಜ್ಯಸೀಮೆಗಳ ಚಕ್ರದಿಂದಳೆದು ವಿಂಗಡಿಸುತ್ತ ಗ್ರಾಮಾದಿಗ್ರಾಮಂಗಳಿಗೆ ನಕ್ಷೆಯಂ ಬರೆಯಿಸಿ ಜಾತಿಕೋಮುವಾರು ಕುಳ ಮನೆ ಜನಜೀವನ ಮೊದಲಾದವಂ ಜಮಾಬಂದಿ

ಮುಂತಾದವಂ ಬರೆಯಿಸಿಕೊಂಡು ನನ್ನನ್ನು ಬಿಡದೆ ಬಂಗಾಳಿಗೊಯ್ಯಲೆಂದು ಇಪ್ಪಿನ ನಾನಾ ಪ್ರಕಾರದಿಂ ಹೇಳಿಕೊಂಡಿದ್ದರಿಂದಲೂ ನಮ್ಮ ಧರ್ಮೋಪಾಧ್ಯಾಯರು ಬಂದದ್ದರಿಂದಲೂ ಪೂಜ್ಯಪಾದ ಚರಿತ್ರೆಯನ್ನು ತೆಗೆದುಕೊಂಡು ನಾನು ಪೂರ್ವದ ವೃತ್ತಾಂತಗಳನ್ನು ಪೇಳಿದುದು ಕಾಗದದ ವೈಯೊಳು ಬರೆಯಿಸಿಕೊಂಡು ಈ ಕರ್ನಾಟ ದೇಶದೊಳು ನಡೆದ ಪ್ರಪಂಚುಗಳನ್ನೆಲ್ಲಾ ಕ್ರೋಡೀಕರಿಸಿ ಬರೆದು ನಾವು ಇದ್ದಲ್ಲಿಗೆ ತೆಗೆದುಕೊಂಡು ತಿಂಗಳು ಒಳಗೆ ಬಂದರೆ ಭಾರಿ ಸಂಬಳವನ್ನು ಮಾಡಿಸಿಕೊಡುತ್ತೇವೆ ಎಂದು ಹೇಳಿ ಲಕ್ಷ್ಮಣರಾಯನ ಮಾರಿಫತ್ತು ಇಪ್ಪತ್ತೈದು ಕುಂಪಣಿ ರೂಪಾಯನ್ನು ಕೊಡಿಸಿ ಅಪ್ಪಣೆಕೊಟ್ಟು ಕಳುಹಿಸಿಕೊಟ್ಟನೆಂದು ಮೊದಲಾಗಿ ಈ ಕಥಾ ಸಂಗ್ರಹಮಂ ಮಾಡುತ್ತಿಪ್ಪಿನ ಸರದಾರಂ ಬಹುದೂರಂ ಪೋದುದರಿಂ ಒಪ್ಪಿಸುವುದಕ್ಕಿಲ್ಲವಾಯಿತು. ಈವರಿಗೆ ನನ್ನಲ್ಪಮತಿಯಿಂದ ಸಂಗ್ರಹಿಸಿದ ಶಾಸ್ತ್ರಂಗಳು ಪದಿನಾಲ್ಕು ವರುಷದಿಂ ಪದ ಪದ್ಯಂಗಳಂ ತೊಡಗಿ ಪರೀಭಾವಿ ಸಂವತ್ಸರದೊಳು ಪೂಜ್ಯಪಾದ ಚರಿತ್ರೆಯನ್ನು ಪ್ರಾರಂಭಿಸಿ ಮಾಡಿದ ಕೃತಿಗಳು ಸುಮೇರುಶತಕ, ಯಕ್ಷಗಾನ ರಾಮಕಥಾವತಾರ, ಭಕ್ತಿಸಾರ ಶತಕತ್ರಯ, ಶಾಸ್ತ್ರಸಾರಲಘುವೃತ್ತಿ, ಪ್ರವಚನ ಸಿದ್ಧಾಂತ, ದ್ರವ್ಯಸಂಗ್ರಹ ದ್ವಾದಶಾನುಪ್ರೇಕ್ಷೆ ಕಥೆ ಸಹಿತ ಧ್ಯಾನ ಸಾಮ್ರಾಜ್ಯ ಅಧ್ಯಾತ್ಮವಿಚಾರಾದಿ ಕರ್ನಾಟಕ ಸಂಸ್ಕೃತ ಬಾಲನುಡಿಯಿಂ ವಿರಚಿಸಿದೆನದರಿಂ ಪಾಪವಿಚ್ಛಿತ್ತಿ ಪುಣ್ಯ ಸಂಪಾದನ ದೊರೆಕೊಳ್ಗುಮೆಂದು ವಿರಚಿಸಿದೆಂ."

ಮೇಲಿನ ವಿವರಣೆಯಿಂದ ಎರಡು ವಿಷಯಗಳು ಸ್ಪಷ್ಟವಾಗುತ್ತವೆ. ರಾಜಾವಳಿ ಕಥೆಯನ್ನು ಸಿದ್ಧಪಡಿಸಿ ಮಕಂಜಿಸರದಾರನಿಗೆ ಒಪ್ಪಿಸಲು ಸಾಧ್ಯವಾಗದೆ, ಆ ಮೂಲಕ ದೊರೆಯುತ್ತಿದ್ದ 'ಭಾರಿಸಂಬಳ' ತಪ್ಪಿಹೋದುದು ಒಂದು. ದೇವಚಂದ್ರ ರಚಿಸಿದ ಕೃತಿಗಳ ವಿವರ ದೊರೆಯುತ್ತಿರುವುದು ಎರಡನೆಯದು. ಪೂರ್ವೋಕ್ತಕೃತಿಗಳ ಬಗ್ಗೆ ಆರ್. ನರಸಿಂಹಾಚಾರ್ಯರು ತಮ್ಮ 'ಕರ್ಣಾಟಕ ಕವಿ ಚರಿತೆ'ಯಲ್ಲಿ ಹೇಳುವುದು ಹೀಗೆ : "ಇವುಗಳಲ್ಲಿ ಮೊದಲು ಹೇಳಿರುವ ನಾಲ್ಕು ಗ್ರಂಥಗಳೂ ಉಳಿದವುಗಳಲ್ಲಿ ಒಂದೆರಡು ಕನ್ನಡದಲ್ಲಿರುವಂತೆ ತೋರುತ್ತದೆ" (ಸಂ. ೩, ಪು. ೧೪೭). ದೇವಚಂದ್ರ ಕನ್ನಡ ಮತ್ತು ಸಂಸ್ಕೃತ ಎರಡೂ ಭಾಷೆಗಳಲ್ಲಿ ಕೃತಿ ರಚಿಸಿರುವುದು ಅವನ ಮಾತಿನಿಂದಲೇ ಗೊತ್ತಾಗುವುದು. ಆದರೆ ಉಲ್ಲೇಖಿತ ಕೃತಿಗಳಲ್ಲಿ ಸಂಸ್ಕೃತ ಭಾಷೆಯವು ಯಾವುವು ಎಂಬುದು ತಿಳಿಯುವುದಿಲ್ಲ; ಇದಕ್ಕೆ ಮುಖ್ಯಕಾರಣ ಅವನ ಎಲ್ಲ ಕೃತಿಗಳೂ ಉಪಲಬ್ಧವಿಲ್ಲದಿರುವುದು. ಈಗ ನಮಗೆ ದೊರಕಿರುವ ಕೃತಿಗಳು ನಾಲ್ಕು ಮಾತ್ರ : ಪೂಜ್ಯಪಾದ ಚರಿತೆ, ರಾಮಕಥಾವತಾರ, ಭಕ್ತಿಸಾರ ಶತಕತ್ರಯ ಮತ್ತು ರಾಜಾವಳಿ ಕಥೆ. ಉಲ್ಲೇಖಿತ ವಿವರಣೆಯಲ್ಲಿ 'ಯಕ್ಷಗಾನ' ರಾಮಕಥಾವತಾರಕ್ಕೆ ವಿಶೇಷಣವಿರುವಂತೆ ತೋರಿದರೂ, ಸ್ವತಂತ್ರ ಕೃತಿಯೊಂದನ್ನು ಸೂಚಿಸುತ್ತಿರುವಂತಿದೆ; ಅಲ್ಲದೆ ರಾಮಕಥಾವತಾರ ಚಂಪೂ ಕೃತಿಯಾಗಿರುವುದರಿಂದ ಅದು ಯಕ್ಷಗಾನವಾಗಿರುವುದು ಸಾಧ್ಯವಿಲ್ಲ. ಪೂಜ್ಯಪಾದ ಚರಿತೆಯನ್ನು ದೇವಚಂದ್ರ ರಚಿಸಿದ್ದೆಂದು ಮೇಲಿನ ವಿವರಣೆಯಿಂದ ತಿಳಿದು ಬರುವುದಾದರೂ, ಇದನ್ನು ಇವನೂ ಇವನ ಅಣ್ಣ ಪದ್ಮರಾಜನೂ ಕೂಡಿಯೇ ರಚಿಸಿದ್ದೆಂಬ ಅಭಿಪ್ರಾಯಕ್ಕೆ

ಆರ್. ನರಸಿಂಹಾಚಾರ್ಯರು ಬರುತ್ತಾರೆ. ಈ ಸಂಬಂಧ ಅವರು ಹೇಳುವುದು ಹೀಗೆ : "ಪದ್ಮರಾಜನು ಹೇಳುತ್ತಿರಲು ದೇವಚಂದ್ರನು ಸಹ ಕಾವ್ಯವ ಹೇಳಿದನು ಎಂಬುದರಿಂದ ಇವರಿಬ್ಬರೂ ಸೇರಿ ಗ್ರಂಥವನ್ನು ಬರೆದಂತೆ ತೋರುತ್ತದೆ (ಪೂರ್ವೋಕ್ತ, ಸಂ. ೩, ಪು. ೧೪೫). ಒಂದು ಪಕ್ಷ ಇದು ಸತ್ಯವಾಗಿದ್ದರೆ, ದೇವಚಂದ್ರ ತನ್ನ ಕೃತಿ ವಿವರಣೆಯಲ್ಲಿ ಹೇಳುತ್ತಿದ್ದನೆಂದು ತೋರುವುದು; ಆದಕಾರಣ ನರಸಿಂಹಾಚಾರ್ಯರ ಹೇಳಿಕೆ ಸಂದೇಹವಾಗಿಯೇ ಉಳಿಯುತ್ತದೆ.

ದೇವಚಂದ್ರನ ವೈಯಕ್ತಿಕ ವಿವರಗಳನ್ನು ನೋಡಿದಾಗ, ಅವನ ಆರ್ಥಿಕ ಸ್ಥಿತಿ ಅಷ್ಟೇನೂ ಉತ್ತಮವಾಗಿರಲಿಲ್ಲವೆಂಬುದು ಗಮನಕ್ಕೆ ಬರುವುದು. ರಾಜಾವಳಿಕಥೆಯನ್ನು ಮಕಂಜಿಗೆ ಒಪ್ಪಿಸುವುದರ ಮೂಲಕ ಅವನಿಂದ ಪಡೆಯಬಹುದಾದ ಅನುಕೂಲ ತಪ್ಪಿದಾಗ, ಮುಮ್ಮಡಿ ಕೃಷ್ಣರಾಜ ಒಡೆಯರ ಸನ್ನಿಧಿಗೆ ಸಲ್ಲಿಸಿ ಸಹಾಯ ಪಡೆಯಲು ಪ್ರಯತ್ನಿಸಿದನಾದರೂ ಅದರಿಂದಲೂ ವಿಫಲನಾದುದರ ವಿವರ ಕೃತಿಯಲ್ಲಿದೆ. ಕಡೆಗೆ 'ಮಹಾಮಾತುಶ್ರೀ'ಯವರ ಪ್ರೋತ್ಸಾಹ ದೊರೆತದ್ದನ್ನು ದೇವಚಂದ್ರ ದಾಖಲಿಸಿದ್ದಾನೆ. ಈ ಎಲ್ಲ ವಿವರಗಳು ಹನ್ನೆರಡನೆಯ ಅಧಿಕಾರದ ಕೊನೆ ಕೊನೆಗೆ ಬಂದಿವೆ (ಪು. ೩೪೮-೩೪೯):

> "ಎನ್ನ ಭಾಗ್ಯಲಕ್ಷ್ಮೀ ಕಣ್ದೆರೆದು ಪೇಳ್ದಂತೆ ಈತಂಗೆ ತಿಂಗಳು ಒಂದಕ್ಕೆ ಮೂವತ್ತು ಹಣ ಸಂಬಳ ಮಾಡಿದೇವೆ ಎಂಬ ಹುಕುಮಾದುದಂ ಕೇಳಿ ನನ್ನ ಪ್ರಪಂಚಮನಾಗಳೆ ಅರಿಕೆಮಾಡಿಕೊಳ್ಳುವುದಕ್ಕೆ ಆಕರ್ಮಿಕ ಮೌನವ್ರತಧಾರಿಯಾಗಿರ್ದುದರಿಂ ಪೂಜಾಹವ್ಯಾಸದೊಳಿರ್ದೆನು. ಬೆಳಗಿನ ದಿವಸದೊಳು ಸೂರಿಪಂಡಿತಂಗೆ ಹೇಳಿ ಅರಿಕೆ ಮಾಡಿಸಿ ಗುಂಡಲ ತಾಲೋಕಿಗೆ ನಿರೂಪ ಅಪ್ಪಣೆಯಾಗಿ ಬರೆಯಿಸಿದಾಗ್ಯು ಮಹಾಸ್ವಾಮಿ ದಸಕತ್ತಾಗಿ ನನಗೆ ಬರದೆ ಮುಂದಾಗುವುದೆಂದು ನನ್ನ ಊರಿಗೆ ಪೋದೆನು. ಲಾಭಾಂತರಾಯ ಕರ್ಮೋದಯದಿಂ ಪರುಷ ಮುಟ್ಟಿಯು ವರುಷಗಡನಾದಂತಾಯ್ತು. ಅಂತಾಗಿಯು ನನ್ನ ಬಡತನವನು ಮಹಾಸ್ವಾಮಿಗೆ ಮರಳಿ ಅರಿಕೆ ಮಾಳ್ಪುದಕ್ಕೆ ಕೂಡಲಿಲ್ಲವಾಗಿ ತದಾರಭ್ಯದಿಂದಾ ಈ ರಾಜಾವಲಿ ಕಥೆಯಂ ಸಂಗ್ರಹಿಸಿ ಬರೆದು ಒಪ್ಪಿಸಲು ಪ್ರಯತ್ನದಿಂ ಯಾರಿಂದಲೂ ಸ್ವಾಮಿಗೆ ಕಾಣ್ಕೆಯಾಗಲಿಲ್ಲ. ಸೂರಿಪಂಡಿತರ್ಗೆ ಹೇಳಿ ಕೊಂಡಿದ್ದರಿಂದಾ ಹೇವಿಳಂಬಿ ಸಂವತ್ಸರದ ಫಾಲ್ಗುಣಾರಭ್ಯ ಪಟ್ಟಿ ಒಂದಕ್ಕೆ ಹನ್ನೆರಡು ಹಣ ಜೀವನಾ ಮಾಡಿಕೊಟ್ಟು ಇದಾರೆ. ನನ್ನ ಸಂಸಾರ ಹೊರಜನವಲ್ಲದೆ ಇಪ್ಪತ್ತೈದು ಜನವಿದೆ. ತೀವ್ರದಾಹವುಳ್ಳವನು ಪುಲ್ಲ ನೀರನಿಕ್ಕಿದೊಡೆ ತೃಪ್ತಿಯಾಗದೆಂದು ಈ ಕಥೆಯನ್ನೊಪ್ಪಿಸಿ ಸಂಪೂರ್ಣ ಗ್ರಾಸಕ್ಕಪ್ಪಣೆ ಮಾಡಿಸಲೆಂದು ಮೂರು ವರ್ಷದಿಂ ಕಾದಿರ್ದೊಡೀಗಲು ಮಹಾಮಾತುಶ್ರೀಯವರು ಮೊದಲಿಂ ಕಡೆವರಂ ಹನ್ನೊಂದು ಅಧ್ಯಾಯಮುಳ್ಳ ಈ ರಾಜಾವಳಿ ಕಥೆಯಂ ಚೆನ್ನಾಗಿ ಪರಾಂಬರಿಸಿ ಯದುಕುಲಾಗ್ರಗಣ್ಯರಪ್ಪ ಈ ಮಹಿಸೂರ ರಾಜಪರಮೇಶ್ವರರುಗಳ ವಂಶಪರಂಪರೆಯಂ ಆಮೂಲವಾಗಿ ಎಡೆಬಿಡದೆ ಸಹಜವಾಗಿ ಬರೆದು ಒಪ್ಪಿಸುವುದೆಂಬ ನಿರೂಪಮಾದುದರಿಂ ಈ ಹನ್ನೆರಡನೆ ಅಧಿಕಾರದೊಳು ಈ ಮಹಿಸೂರ ಮಹಾರಾಜಾಧಿರಾಜರುಗಳ ವಂಶಾವಳಿ ಗುಣಾವಳಿ ಬಿರುದಾವಳಿಗಳ ಯಥಾಸ್ಥಿತಿಯಾಗಿ ಬರೆದೊಪ್ಪಿಸಿದೆನು."

ಲೇಖಕನ ಆರ್ಥಿಕ ಸ್ಥಿತಿಯ ಬಗ್ಗೆ ನಮಗೆ ಅನುಕಂಪವಿದ್ದರೂ, ಅವನು ತೆಗೆದುಕೊಂಡ ನಿಲವು ಪ್ರಶ್ನಾತೀತವೆನಿಸುವುದಿಲ್ಲ. ರಾಜಾಶ್ರಯ ಮತ್ತು ಲೇಖಕ ಸಂಬಂಧದ ಈ ಪ್ರಶ್ನೆ ದೇವಚಂದ್ರನ ಕಾಲದ್ದು ಮಾತ್ರವಲ್ಲ; ಕನ್ನಡ ಸಾಹಿತ್ಯ ಆರಂಭವಾದಂದಿನಿಂದಲೇ ಇದ್ದದ್ದು. ಇನ್ನೊಂದು ಪ್ರಸ್ತಾಪ ಕೃತಿಯ ಸ್ವರೂಪವನ್ನು ಕುರಿತದ್ದು. ದೇವಚಂದ್ರ ರಾಜಾವಳಿ ಕಥೆಯನ್ನು ಮೊದಲು ರಚಿಸಿದ್ದು ಹನ್ನೊಂದು ಅಧ್ಯಾಯಗಳಲ್ಲಿ ಮಾತ್ರ; ಮೈಸೂರು ಒಡೆಯರ ಚರಿತ್ರೆಯುಳ್ಳ ಹನ್ನೆರಡನೆಯ ಅಧಿಕಾರವನ್ನು ಆಮೇಲೆ ಬರೆದು ಸೇರಿಸಲಾಯಿತು, ಅದೂ 'ಮಹಾಮಾತೋಶ್ರೀ'ಯವರ ಆದೇಶದ ಮೇಲೆ. ಆದರೆ ಹದಿಮೂರನೆಯ ಅಧಿಕಾರವನ್ನು ಬರೆದ ಕಾರಣ ತಿಳಿಯುತ್ತಿಲ್ಲ; ಅದು ಹೊಸ ವಿಷಯವನ್ನೇನೂ ಕೃತಿಗೆ ಸೇರಿಸುತ್ತಿಲ್ಲ.

ದೇವಚಂದ್ರನ ಅನುಭವ ಮತ್ತು ಜ್ಞಾನದ ವ್ಯಾಪ್ತಿ ದೊಡ್ಡದೆಂಬುದರಲ್ಲಿ ಯಾವ ಸಂಶಯವೂ ಇಲ್ಲ; ಆದರೆ ಅದಕ್ಕೆ ತಕ್ಕ ಶಿಸ್ತು ಇಲ್ಲವೆಂಬುದು ದೊಡ್ಡ ಕೊರತೆ. ಅವನು ತನ್ನ ಜ್ಞಾನದ ಚೌಕಟ್ಟಿನಲ್ಲಿ ಅವನೊಬ್ಬ ಪ್ರಾಮುಖ್ಯನಾದ ವಿದ್ವಾಂಸನೆಂಬುದು ನಿಜ; ಆದರೆ ಅವನ ವಿದ್ವತ್ತಿಗೆ ವಿಸ್ತಾರವಿರುವಂತೆ ಆಳವಿರಲಿಲ್ಲವೆಂಬುದೂ ಅಷ್ಟೇ ನಿಜ.

ಕಥಾವಸ್ತು

ದೇವಚಂದ್ರ ತನ್ನ 'ರಾಜಾವಳಿ ಕಥೆ'ಯಲ್ಲಿ ಸಾಕಷ್ಟು ಜೈನವಾತಾವರಣವನ್ನು ತಂದಿದ್ದಾನೆ. ಅವನು ಜೈನಕವಿ ಎಂಬುದಕ್ಕೆ ಇದಕ್ಕಿಂತ ಬೇರಾವ ಸಾಕ್ಷಿಯೂ ಬೇಕಿಲ್ಲ. ಪ್ರಥಮಾಧಿಕಾರದಲ್ಲಿಯೇ ಜೈನ ಪಾರಿಭಾಷಿಕ 'ಲೋಕ ಸ್ವರೂಪ' ಕುರಿತು ವಿವರಿಸಿದ್ದಾನೆ. ಎಲ್ಲ ಜೈನಕಥೆಗಳು ಆರಂಭವಾಗುವ ಹಾಗೆಯೇ ಈ ಕೃತಿಯನ್ನು ಲೋಕಸ್ವರೂಪ ವಿವರಣದಿಂದ ಆರಂಭಿಸಿದ್ದಾನೆ. ಇದನ್ನು 'ಆದಿ ಬ್ರಹ್ಮಸೃಷ್ಟಿ ನಿರೂಪಣಂ' ಎಂದೂ ಕರೆದಿದ್ದಾನೆ. ಇಂತಹ ಕಥೆಯನ್ನು ಕೇಳ್ದವರಿಗೆ ಭ್ರಾಂತಿಯು ಕೆಟ್ಟು "ಆಯುಂ ಶ್ರೀಯುಂ" ದೊರೆಕೊಳುತ್ತದೆಂದು ಬೇರೆ ಹೇಳಿದ್ದಾನೆ. ಇದೆಲ್ಲಕ್ಕೂ ಕಾರಣ ಸಾಂಪ್ರದಾಯಿಕ ಕಥಾ ಮಾದರಿಯ ಶೈಲಿಯೇ ಹೊರತು ಬೇರಲ್ಲ. ಇತಿಹಾಸದ ಬಗ್ಗೆ ಬಹಳ ಕಾಳಜಿ ಇರುವ ದೇವಚಂದ್ರನಿಗೆ ಇಂತಹ ಕಥಾಶೈಲಿ ಹೇಗೆ ಇಷ್ಟವಾಯಿತೊ ಗೊತ್ತಿಲ್ಲ, ಪ್ರಾಯಶಃ ಅವನು ಜೈನನಾಗಿರುವುದೇ ಈ ಕಥಾ ಸಂಪ್ರದಾಯಕ್ಕೆ ಕಾರಣವಾಗಿರಬೇಕು. ಆದಿನಾಥ ಮತ್ತು ಅವನ ಮಕ್ಕಳು ಭರತ ಬಾಹುಬಲಿಯರ ಪುರಾಣ ಕಥಾವಿನ್ಯಾಸದಿಂದಲೇ ದೇವಚಂದ್ರ ತನ್ನ ಕೃತಿಯನ್ನು ಆರಂಭಿಸುತ್ತಾನೆ. ಅದರಲ್ಲಿ ಸಾಧಿತವಿದ್ಯೆ, ಜಾತಿವಿದ್ಯೆ, ಕುಲವಿದ್ಯೆ ಎಂಬ ತ್ರಿವಿಧವಿದ್ಯೆಗಳನ್ನೂ; ಜೈನಧರ್ಮದ ಕಾಲ ಸ್ವರೂಪವನ್ನೂ; ಅಸಿ, ಮಸಿ, ಕೃಷಿ, ವಾಣಿಜ್ಯ, ಪಾಶುಪಾಲ್ಯ, ಶಿಲ್ಪ ಎಂಬ ಷಟ್ಕರ್ಮಗಳನ್ನೂ; ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ನಾಲ್ಕು ಜಾತಿಗಳನ್ನೂ; ಕುರುವಂಶ, ಹರಿವಂಶ ವಿಚಾರವನ್ನೂ; ಕೇವಲಜ್ಞಾನ, ಸಮವಸರಣ ಎಂಬಿತ್ಯಾದಿ ಜೈನ

ಧಾರ್ಮಿಕ ಪರಿಕಲ್ಪನೆಯನ್ನೂ; ಸಮ್ಯಗ್ದರ್ಶನ, ಜ್ಞಾನ, ಚಾರಿತ್ರ ಎಂಬ ರತ್ನತ್ರಯಗಳನ್ನೂ ಸಂಕ್ಷಿಪ್ತವಾಗಿ ಪ್ರಸ್ತಾಪಿಸಿರುವನು. ಮೊದಲಿನಿಂದ ಕೊನೆಯವರೆಗೆ ಕೃತಿ ಜೈನಾವರಣವನ್ನು ಹೊದ್ದುಕೊಂಡು ಬಂದಿರುವುದು ಸ್ಪಷ್ಟವಿದೆ.

ಜೈನ ವಾತಾವರಣವನ್ನು ದ್ವಿತೀಯಾಧಿಕಾರದಲ್ಲಿಯೂ ಮುಂದುವರಿಸಿದ ದೇವಚಂದ್ರ, ಮಧ್ಯೆಮಧ್ಯೆಯಲ್ಲಿ ವೈದಿಕ ಕಥೆಗಳನ್ನು ಅಳವಡಿಸುವುದು ಸಾಮಾನ್ಯವಾಗಿದೆ. ಈ ಬಗೆಯ ಕಥಾ ಅಳವಡಿಕೆಗೆ ದೇವಚಂದ್ರನೇ ಕಾರಣ ಎನ್ನುವಂತಿಲ್ಲ; ಪೂರ್ವದಲ್ಲಿಯೇ ಇಂತಹ ಪ್ರಸಕ್ತಿಗಳು ಆಗಿಹೋಗಿವೆ. ಸಗರ ಚಕ್ರವರ್ತಿಯ ಕಥೆ ಮತ್ತು ಭಗೀರಥ ಗಂಗೆಯನ್ನು ತಂದ ಕಥೆಯನ್ನು ಇಲ್ಲಿಯೂ ಕವಿ ಹೇಳಿದ್ದಾನೆ. ಹರಿವಂಶ - ಕುರುವಂಶದ ಕಥಾ ಅಳವಡಿಕೆ ಮುಂದುವರಿದೇ ಇದೆ; ಮುಖ್ಯವಾಗಿ ಈ ಅಧಿಕಾರದಲ್ಲಿ 'ಷಣ್ಮತೋತ್ಪತ್ತಿ'ಯನ್ನು ಹೇಳುವುದು ಉದ್ದೇಶ. ಆ ಪ್ರಕಾರ ನಯ್ಯಾಯಿಕ, ಕಾಣಾದ, ಮೀಮಾಂಸಕ, ಶಾಂಖ್ಯ, ಬೌದ್ಧ ಮತ್ತು ಚಾರ್ವಾಕ ಎಂಬ ಆರು ಮತಗಳನ್ನು, ಅಂದರೆ ವಾದಗಳನ್ನು ಅವುಗಳ ಪ್ರಮೇಯಗಳನ್ನು ಇಲ್ಲಿ ತುಸು ವಿವರವಾಗಿ ಪ್ರಸ್ತಾಪಿಸುತ್ತಾನೆ. ಇವುಗಳ ವಿವರಗಳನ್ನು ಕನ್ನಡಕ್ಕೆ ಬದಲಾಗಿ ಸಂಸ್ಕೃತದಲ್ಲಿಯೇ ಕೊಟ್ಟಿರುವುದು ವಿಶೇಷ. ಸಂಸ್ಕೃತ ಮೂಲ ಆಕರಗಳಿಂದ ಇವನ್ನು ತೆಗೆದುಕೊಂಡು ವಿವರಿಸಿರಬಹುದು. ಕನ್ನಡದಲ್ಲಿ ಅನುವಾದಿಸಿಕೊಟ್ಟಿದ್ದರೆ ಮೂಲ ಸತ್ತ್ವವೇನೂ ಹೋಗುತ್ತಿರಲಿಲ್ಲ. ಇದಕ್ಕೆ ದೇವಚಂದ್ರನ ಸಂಸ್ಕೃತ ಭಾಷಾ ಆಸಕ್ತಿಯೂ, ಪಾಂಡಿತ್ಯದ ಬಗೆಗಿನ ಒಲವೂ ಕಾರಣವಿರಬೇಕು. ಈ ಅಧಿಕಾರದಲ್ಲಿ ಬಲಿ-ವಾಮನರ ಕಥೆಯೂ, ಜಮದಗ್ನಿ - ರೇಣುಕೆ - ಪರಶುರಾಮರ ಕಥೆಯೂ ಸೇರಿಕೊಂಡಿರುವುದನ್ನು ಕಾಣುತ್ತೇವೆ; ಇದರೊಡನೆ 'ಕಾಮಧೇನು'ವಿನ ಕಥೆಯೂ ಅದರ ಪೂರ್ವಾಪರವೂ ಉಕ್ತಗೊಂಡಿದೆ. ಜೊತೆಗೆ ಭಾರದ್ವಾಜ, ಕಾಶ್ಯಪಾದಿ ಋಷಿಗಳು ಸಕಲ ಶಾಸ್ತ್ರಗಳನ್ನು ಕಲಿತು ಬ್ರಹ್ಮ-ವಿಷ್ಣು-ಮಹೇಶ್ವರ ಕಥಾ ಪ್ರವಚನವನ್ನು ಸೃಷ್ಟಿಸಿದ ಕಥೆಯನ್ನೂ ಸೇರಿಸಲಾಗಿದೆ. ಇವರಲ್ಲಿ ಶ್ರೇಷ್ಠರಾದವರು ಯಾರು ಎಂಬುದು ವಾದಕ್ಕೆ ಬಿದ್ದು, ಕಡೆಗೆ "ಮೂವರುಂ ಸಮ" ಎಂಬ ತೀರ್ಮಾನಕ್ಕೆ ಬಂದ ವಿಷಯವೂ ಇದೆ. ಇದೆಲ್ಲವೂ ವೈದಿಕ ಪುರಾಣದ ಅಭಿನಿವೇಶ ಎಂಬುದು ಸ್ಪಷ್ಟ; ಜೈನ ಧರ್ಮದಲ್ಲಿ ಈ ಬಗೆಯ ದೇವರ ಸೃಷ್ಟಿ ಇಲ್ಲದಿದ್ದರೂ, ಇಲ್ಲಿ ಅದನ್ನು ಹೊಂದಿಸಿಕೊಂಡಿರುವ ಔಚಿತ್ಯಕಾಣದು. ಕವಿ ಯಾವುದಾದರೂ ಒಂದು ಕಥಾಮಾರ್ಗವನ್ನು ಹಿಡಿಯದೆ, ಎಲ್ಲವನ್ನು ಹೇಳಲು ಹೋಗಿ 'ಕಲಸುಮೇಲೋಗರ' ಮಾಡಿರುವುದರಲ್ಲಿ ಅವನ ದರ್ಶನವೇನೊ ತಿಳಿಯದಾಗಿದೆ. 'ಮುಂದಿನ ಕಥೆಯೆಂತೆಂದೊಡೆ' ಎಂದು ಹೇಳುವುದರ ಮೂಲಕ ಕಥೆಯನ್ನು ಮುಂದುವರಿಸುವುದರ ಸೂಚನೆಯನ್ನು ಕೊಟ್ಟರೂ, ಏಕಕಥಾಮಾರ್ಗವನ್ನು ಕಾಣದೆ ಬಹುಕಥಾಮಾರ್ಗದ ಅನುಕರಣೆಯನ್ನೆ ಕಾಣುತ್ತೇವೆ.

ಕವಿ 'ತೃತೀಯಾಧಿಕಾರವನ್ನು 'ನಾರಾಯಣ ವಿಭೂತಿ' ಪ್ರಕರಣವೆಂದು ಕರೆದಿದ್ದಾನೆ. ಕಥೆಯೊಳಗೆ ಕಥೆಯನ್ನು ಹೇಳುವುದು, ಉಪಕಥೆಗಳನ್ನು ಜೋಡಿಸುವುದು ಸಾಮಾನ್ಯ. ಹರಿವಂಶದ ಮಿಥಿಳೆಯ ಜನಕನ ವಿಷಯವೂ, ಅಯೋಧ್ಯೆಯ ದಶರಥ ಪುತ್ರರಾದ

ರಾಮಲಕ್ಷ್ಮಣ ಭರತ ಶತ್ರುಘ್ನರ ಕಥೆಯೂ ಕಥನಕ್ಕೆ ಒಳಪಟ್ಟಿದೆ. ರಾವಣನ ಪ್ರಸ್ತಾಪ, ಸೀತೆಯ ಅಪಹರಣ, ರಾವಣನವಧೆ, ಸುಗ್ರೀವ ಹನುಮಂತಾದಿಗಳ ವಿವರ, ಲವಕುಶರ ವಿಚಾರಗಳು ಬರುತ್ತವೆ. ಹರಿವಂಶದಲ್ಲಿ ಯದು ಎಂಬ ಅರಸನಿಂದ ಯದುವಂಶವಾಯಿತೆಂದೂ ಕವಿ ಹೇಳುತ್ತಾನೆ. ಶಂತನುವಿನಿಂದ ಆರಂಭವಾಗುವ ಕುರುವಂಶದ ಕಥೆಯೂ ಕಥಿತವಾಗಿದೆ. ಹಾಗೆಯೇ ಕಂಸನ ಅಟ್ಟಹಾಸ, ವಸುದೇವ ದೇವಕಿಯರ ಪ್ರಸ್ತಾಪ, ಕೃಷ್ಣ ಗೋಕುಲದಲ್ಲಿ ಬೆಳೆದದ್ದು, ಕಂಸನನ್ನು ವಧಿಸಿದ್ದು, ಶ್ರೀಕೃಷ್ಣನ ಪವಾಡ ಸದೃಶ ಬಾಲಲೀಲೆಗಳವರ್ಣನೆ, ಮಧುಕೈಟಭ ಜರಾಸಂಧ ಮೊದಲಾದವರನ್ನು ಸಂಹರಿಸಿ ಕೃಷ್ಣ ಪಾಂಡವರನ್ನು ಪರಿಪಾಲಿಸಿದ್ದು ಮೊದಲಾದ ಉಲ್ಲೇಖಗಳು ಈ ಅಧಿಕಾರದಲ್ಲಿ ಬರುತ್ತವೆ. ಕಡೆಗೆ ಬಲರಾಮ ಶ್ರೀಕೃಷ್ಣರು ನೇಮೀಶ್ವರ ತೀರ್ಥಂಕರಲ್ಲಿಗೆ ಬಂದು ತಮ್ಮ ಭವಾವಳಿಯನ್ನು ಕೇಳಿದ್ದಕ್ಕೆ ಕಥೆಯನ್ನು ನಿಯುಕ್ತಿಗೊಳಿಸುತ್ತಾನೆ; ಸುತ್ತಿಕೊಂಡು ಬಂದ ಕಥೆ ಜೈನಾವರಣದಲ್ಲಿ ಕೊನೆಗೊಳ್ಳುತ್ತದೆ. ಇಷ್ಟಲ್ಲದೆ ಈ ಅಧಿಕಾರದಲ್ಲಿ, ಪೂರ್ವಜನ್ಮದ ಪ್ರಸ್ತಾವ, ಸರ್ಪಾರಾಧನೆ ವಿಚಾರ, ಲಿಂಗಪ್ರತಿಷ್ಠೆಯಂತಹ ವಿಷಯ, ಯಜ್ಞಕಾರ್ಯ ಮೊದಲಾದವು ಬಿತ್ತರಕೊಂಡಿವೆ. ಇವೆಲ್ಲವನ್ನು ಕವಿ ಬೇರೆ ಬೇರೆ ಕಡೆಯಿಂದ ತಂದು ಸೇರಿಸಿರುವಂತೆ ಕಾಣುತ್ತದೆ; ಜೈನಧರ್ಮಕ್ಕೂ ಇವಕ್ಕೂ ಏನೇನೂ ಸಂಬಂಧವಿರುವುದಿಲ್ಲ. ಮಧ್ಯಯುಗದ ಉತ್ತರಾರ್ಧದಲ್ಲಿದ್ದ ದೇವಚಂದ್ರನಿಗೆ ಇವೆಲ್ಲ ಒಟ್ಟಿಗೆ ಕಾಣಿಸಿಕೊಂಡಿರುವುದು ಆ ಕಾಲದ ಸಂಕೀರ್ಣತೆಗೆ ಕನ್ನಡಿಹಿಡಿಯುತ್ತವೆ. ಇವೆಲ್ಲವನ್ನು ಮಾಹಿತಿ ಎನ್ನುವಂತೆ ಕೊಡುತ್ತಾನೆಯೇ ಹೊರತು, ಸೃಜನಶೀಲವಾಗಿ ನೇರ್ಪುಗೊಳ್ಳುವುದಿಲ್ಲ; ಒಟ್ಟಾರೆ ಕಲಾಕೃತಿಯಾಗಿ ಅರಳುವುದಿಲ್ಲ. ಕಲ್ಪನೆಯನ್ನು ವಾಸ್ತವವನ್ನು ಬೆರಸುವುದು, ಬೆಸೆಯುವುದು ದೇವಚಂದ್ರನ ಜಾಯಮಾನ. ವಾಸ್ತವಕ್ಕೆ ಉದಾಹರಣೆಯಾಗಿ, ಅಜಮಹಾರಾಜ ಎಂಬುವನು "ದೇಶದೊಳಗಿದ್ದ ಅರಣ್ಯವೆಲ್ಲವನ್ನು ಪುರಗಳಾಗಿ ಮಾಡಿಸಿದ್ದನಂತೆ" ಎಂಬುದನ್ನು ನೋಡಬಹುದು. ಸಮಕಾಲೀನ ಸತ್ಯವನ್ನೇ ಕವಿ ಹೇಳುತ್ತಿದ್ದಾನೆ ಎಂದು ಅನಿಸುವುದಿಲ್ಲವೆ? ಆದಕಾರಣ 'ನಾರಾಯಣವಿಭೂತಿ' ಎಂಬುದು ಒಂದು ನೆಪ; ಕಥೆಗಳ ನೆಯ್ಗೆಯಲ್ಲಿ ಅದೂ ಒಂದು ಎಳೆ; ಪ್ರಮುಖ ಎಳೆ ಎಂದೇನೂ ಕರೆಯುವಂತೆ ಅದು ವಿಸ್ತೃತಗೊಂಡಿಲ್ಲ. ಹೀಗಾಗಿ ಇಡೀ ಕೃತಿ ಒಂದು 'ಕಥಾಕೋಶ'ವಾಗಿ ಮಾರ್ಪಟ್ಟಿದೆ; ಒಂದಕ್ಕೊಂದಕ್ಕೆ ಸಂಬಂಧವಿಲ್ಲದ ವಿಷಯಗಳು ಇದರಲ್ಲಿ ಸಮಾವೇಶಗೊಂಡಿರುವುದು ಇದರ ವಿಶೇಷ.

ನಾಲ್ಕನೆಯ ಅಧಿಕಾರ ಶ್ರೇಣಿಕಮಹಾರಾಜನ ಜೀವನ ವರ್ಣನೆಗೆ ಉದ್ದಿಷ್ಟವಾಗಿದ್ದರೂ, ವರ್ಧಮಾನ ತೀರ್ಥಂಕರನ ಕಥೆಯನ್ನೂ ಪರೀಕ್ಷಿದ್ರಾಜ, ಜನಮೇಜಯ, ಪರಾಶರ, ವ್ಯಾಸ, ಸೂತ, ಶೌನಕಾದಿ ಋಷಿಗಳ ವಿಚಾರಗಳನ್ನೂ ಸೇರಿಸಿಕೊಂಡಿರುವುದು ಮತ್ತೆ ಕಥಾದ್ವಂದಕ್ಕೆ ಎಡೆಮಾಡಿಕೊಟ್ಟಿದೆ. ಹಿಂಸಾಯುಕ್ತವಾದುದು ಧರ್ಮವಲ್ಲವೆಂಬುದನ್ನು ಪ್ರತಿಪಾದಿಸುತ್ತಾ, ಒಳಿತು ಕೆಡಕುಗಳ ಚರ್ಚೆಗೆ ಲೇಖಕ ತೊಡಗುತ್ತಾನೆ. ಜೂದು ಮತ್ತು ಮದ್ಯವ್ಯಸನದ ಬಗ್ಗೆ ಬರೆಯಲು ಹೊರಟ ದೇವಚಂದ್ರ, ಕ್ರಮವಾಗಿ ಪಾಂಡವರ ವನವಾಸ ಪ್ರಕರಣವನ್ನೂ

ಯಾದವರ ದ್ವಾರಾವತಿ ಪರಿಭವವನ್ನೂ ಉದಾಹರಿಸುತ್ತಾನೆ. ಜೀವರು ದುರ್ಮಾರ್ಗದಲ್ಲಿ ಪ್ರವೃತ್ತಿಸಿದರೆ ಎದುರಿಸಬೇಕಾದ ಅಪಾಯಗಳನ್ನು ಕುರಿತೂ ಚರ್ಚಿಸಲಾಗಿದೆ. ಸತ್ಯಾಸತ್ಯಗಳ ಈ ಚರ್ಚೆಯ ಸಂದರ್ಭದಲ್ಲಿ ಕವಿ ಆಯಾಯ ಪರಿಣಾಮಗಳನ್ನು ಪಡೆದ ಹಲವಾರು ಪುರಾಣವ್ಯಕ್ತಿಗಳನ್ನೂ ಸಂದರ್ಭಗಳನ್ನೂ ಉಲ್ಲೇಖಿಸುವುದನ್ನು ಮರೆಯುವುದಿಲ್ಲ. ಆದರೆ ಇವೆಲ್ಲ ವಿಸ್ತಾರಗೊಳ್ಳುವುದಿಲ್ಲ; ರೇಖಾಚಿತ್ರಗಳಲ್ಲಿ ಮುಗಿಯುತ್ತವೆ. ಕಥೆಗಳೂ ಕಥೆಯೊಳಗಿನ ಪಾತ್ರಗಳೂ ಸನ್ನಿವೇಶಗಳೂ ಪೂರ್ಣ ಪ್ರಮಾಣದಲ್ಲಿ ಬೆಳೆಯುವುದಿಲ್ಲ. ಅವನ್ನು ತತ್ತ್ವಬೋಧೆಗೆ ಸಾಮಗ್ರಿಯನ್ನಾಗಿ ಮಾಡಿಕೊಳ್ಳುವುದಷ್ಟೆ ಕವಿಯ ಉದ್ದೇಶವಿರುವಂತೆ ತೋರುತ್ತದೆ.

ಇಂತಹ ಕಥಾನಡಿಗೆಗೆ ಪಂಚಮಾಧಿಕಾರ ಕೂಡ ಹೊರತಲ್ಲ. ಹಿಂದಿನ ಅಧ್ಯಾಯದಲ್ಲಿ ಕಾಣಿಸಿಕೊಂಡ ಶ್ರೇಣಿಕನ ವೃತ್ತಾಂತ ಇಲ್ಲಿಯೂ ಮುಂದುವರಿದಿರುವುದೊಂದು ವಿಶೇಷ. ಹಿಂದಿನ ಅಧ್ಯಾಯಗಳಲ್ಲಿ ಅವನ ಚರಿತ್ರೆ - ಚಾರಿತ್ರ್ಯವನ್ನು ಹೇಳಿದ ಕವಿ, ಇದರಲ್ಲಿ ಅವನ 'ಸಮ್ಯಕ್ತ್ವೋತ್ಪತ್ತಿ'ಯನ್ನು ವರ್ಣಿಸಿದ್ದಾನೆ. ಕಥೆ ಏಕಮುಖವಲ್ಲ ಎಂಬುದಕ್ಕೆ ಈ ಅಧಿಕಾರ ದಲ್ಲಿಯೂ ನಿದರ್ಶನಗಳಿವೆ. ಮುಖ್ಯ ಕಥೆ ಶ್ರೇಣಿಕನದಾದರೂ, ಪೂರಕ ಕಥೆಗಳಾಗಿ ಹಲವಾರಿವೆ. ಸತ್ಯಂಧರ ಜೀವಂಧರ ಕಾಷ್ಠಾಂಗಾರರ ಕಥೆಗಳೂ, ಇಂದ್ರಭೂತಿ ವಾಯುಭೂತಿ ಅಗ್ನಿಭೂತಿಗಳ ಕಥೆಗಳೂ, ಮಣಿಮಾಲ ಮಣಿಶೇಖರರ ಕಥೆಗಳೂ ನಿರೂಪಣೆಗೊಂಡಿವೆ; ಅಧಿಕಾರದ ಹೆಚ್ಚಿನ ಭಾಗವನ್ನು ಈ ಪೂರಕ ಕಥೆಗಳೇ ಆಕ್ರಮಿಸಿಕೊಂಡಿವೆ. ಶ್ರೇಣಿಕನ ಕಥಾ ಪ್ರಸಂಗದೊಡನೆ ವರ್ಧಮಾನ ತೀರ್ಥಂಕರನ ಕಥೆಯೂ ಸೇರಿಕೊಂಡು ಹಿಂದಿನ ಅಧ್ಯಾಯದ ವಿಚಾರವನ್ನು ಮುಂದುವರಿಸಿರುವುದು ಸ್ಪಷ್ಟವಿದೆ. ಇಲ್ಲಿಯೂ ಸದ್ಧರ್ಮ, ಷಣ್ಮತ, ಚಾರಿತ್ರಶೀಲ, ವ್ರತಾದಿಫಲ, ದೀಕ್ಷೆ, ವೈರಾಗ್ಯ, ಪಂಚಕಲ್ಯಾಣ ಪರಿಕಲ್ಪನೆ, ಉಪಸರ್ಗ ವಿಚಾರ, ಸ್ವರ್ಗ - ನರಕ ವಿಷಯ, ಬ್ರಹ್ಮಜ್ಞಾನಿಯ ಅನ್ವೇಷಣೆ ಮೊದಲಾದ ತತ್ತ್ವಸಿದ್ಧಾಂತಾದಿ ವಿಚಾರಗಳು ಪ್ರಸ್ತಾಪಿತವಾಗಿವೆ. ಕೆಲವೊಮ್ಮೆ ತತ್ತ್ವ ಪ್ರತಿಪಾದನೆಗಾಗಿ ಕಥೆಗಳು ಬಂದರೆ. ಇನ್ನು ಕೆಲವು ಸಾರಿ ಕಥೆಗಳಿಂದ ತತ್ತ್ವಗಳು ನಿಷ್ಪನ್ನಗೊಂಡಿವೆ.

ರಾಜಾವಳಿ ಕಥೆಯಲ್ಲಿ ಷಷ್ಠಾಧಿಕಾರವನ್ನು 'ಗಣಗಚ್ಛೋತ್ಪತಿ ನಿರೂಪಣಂ' ಎಂದು ಹೇಳಿದ್ದರೂ, ಅದರ ವಿವರಣೆ ಬರುವುದು ಅಧ್ಯಾಯದ ಕೊನೆಯಲ್ಲಿ ಮಂತ್ರ. ಧಾರ್ಮಿಕ, ಚಾರಿತ್ರಿಕ ಮತ್ತು ಕಾಲ್ಪನಿಕ - ಇವುಗಳ ಮುಪ್ಪುರಿಯಿಂದಾದುದು ರಾಜಾವಳಿ ಕಥಾಕೃತಿ ಎಂದರೂ ಆದೀತು. ಬದುಕಲು ಬೇಕಾದ ತತ್ತ್ವಗಳನ್ನು ರೂಪಿಸಿ, ಅವುಗಳಿಗೆ ನಿದರ್ಶನಗಳಾಗಿ ಕಥೆಗಳನ್ನು ಕೊಡುವುದು ದೇವಚಂದ್ರ ಅನುಸರಿಸಿರುವ ಜನಪ್ರಿಯ ವಿಧಾನ. "ದುಷ್ಟರು ಉಪಕಾರವನರಿಯರು, ಉಪಕಾರ ಮಾಡಿದವರಿಗೆ ಅಪಕಾರ ಮಾಡಬಹುದು". "ಅವಿಚಾರಿಗಳು ಮುಂದುಗಾಣರು", "ದ್ರೋಹಿಗಳನ್ನು ನಂಬಿದವರಿಗೆ ಕೇಡು ತಪ್ಪದು"; "ವಿಚಾರ ಮಾಡದೆ ಕಾರ್ಯಮಾಡುವವರು ಬುದ್ಧಿಹೀನರು" - ಇಂತಹ ತತ್ತ್ವಗಳನ್ನು ಬೋಧಪ್ರದಗೊಳಿಸಲು ಅನೇಕ ಕಥೆಗಳನ್ನು ತರಲಾಗಿದೆ. ಸೋಮಶರ್ಮನ ಪತ್ನಿ ತೂಂಕಾರಿಯಕಥೆ ಇಲ್ಲಿನ ಕಥೆಗಳಲ್ಲಿ ಆಕರ್ಷಕವಾದುದು ಮತ್ತು ಸಂಕೀರ್ಣವಾದುದು ಕೂಡ. ಇಲ್ಲಿನ ಸಕಟಾಳನ ಕಥೆ ಇನ್ನೊಂದು

ಆಯಾಮದ್ದು; ಮಹಾಭಾರತದ ಸುಪ್ರಸಿದ್ಧ ಶಕುನಿಯ ವಂಶವೃತ್ತಾಂತವನ್ನು ಹೇಳುವಂಥದು. ಪಾಟಳೀಪುತ್ರದ ನಂದಮಹಾರಾಜನಿಂದ ಅವಮಾನಿತನಾದ ಸಕಟಾಳ ನಂದವಂಶವನ್ನೆ ನಿರ್ಮೂಲ ಮಾಡಲು ಹೊರಟವನು. ಚಾಣಕ್ಯನ ನೆರವಿನಿಂದ ನಂದವಂಶವನ್ನು ನಿರ್ಮೂಲ ಮಾಡಿ ಚಂದ್ರಗುಪ್ತನಿಗೆ ರಾಜ್ಯ ಬರುವಂತೆ ಮಾಡುವಲ್ಲಿ ಸಕಟಾಳ ಯಶಸ್ವಿಯಾಗುವನು. ಚಂದ್ರಗುಪ್ತನ ಮಗ ಬಿಂದುಸಾಗರ, ಅವನ ಮಗ ಅಶೋಕ, ಅವನ ಮಗನಾದ ಕುನಾಳನ ದುರಂತ, ಅವನ ಮಗ ಚಂದ್ರಗುಪ್ತನ ಕಥಾ ವಿವರಗಳು ಕೃತಿಯಲ್ಲಿವೆ.

ವರ್ಧಮಾನ ತೀರ್ಥಂಕರನಂತರ ತೀರ್ಥಂಕರರಿಲ್ಲ ಎಂಬುದನ್ನು ಕೃತಿಹೇಳುವುದು ಒಂದು ಮುಖ್ಯ ವಿಷಯವಾಗಿದೆ. ಸೌರಾಷ್ಟ್ರದೇಶದ ಪಾರ್ಶ್ವಭಟಾರಕನು ವರ್ಧಮಾನ ಸ್ವಾಮಿಯ ಗಣಧರನಾಗಲು ಬಯಸಿ, ದೊರೆಯದಿದ್ದಾಗ ಮಸ್ಕರೀ ಪುರಾಣವನ್ನು ಅವಲಂಬಿಸಿ 'ಅಲ್ಲಾಕುದ'ನೆಂದು ನವೀನ ಮತ ಸ್ಥಾಪಿಸಲು ಸೂತ್ರಗಳನ್ನು ರಚಿಸಿದ ವಿಚಾರ ಕೃತಿಯಲ್ಲಿದೆ. ಪಾರ್ಶ್ವಭಟ್ಟನ ಶಿಷ್ಯನಾದ ಮಲ್ಲಿಭಟ್ಟನು 'ಮುಲ್ಲಾಶಾಸ್ತ್ರ"ವನ್ನು ರಚಿಸಿದ ವಿಷಯವೂ ಪ್ರಸ್ತಾಪಗೊಂಡಿದೆ. ಆದರೆ ಈ 'ಅಲ್ಲಾಕುದ' ಮತ್ತು 'ಮುಲ್ಲಾಶಾಸ್ತ್ರ'ಗಳ ಐತಿಹಾಸಿಕ ಸಂದರ್ಭಗಳೂ, ಅವುಗಳ ಅಸ್ತಿತ್ವ ವಿಷಯಿಕ ವಿವರಗಳೂ ನಮಗೆ ದೊರೆಯುವುದಿಲ್ಲ. ಚಂದ್ರಸಾಗರವರ್ಣಿ ಎಂಬ ಕನ್ನಡದ ಕವಿ 'ಮುಲ್ಲಾಶಾಸ್ತ್ರ' ಎಂಬ ಕೃತಿಯನ್ನೇನೊ ರಚಿಸಿದ್ದಾನೆ; ಈ ಕೃತಿಗೂ ದೇವಚಂದ್ರ ಹೇಳುವ ಕೃತಿಗೂ ಯಾವುದೇ ಸಂಬಂಧವಿಲ್ಲ. ದೇವಚಂದ್ರ ಇತಿಹಾಸವನ್ನು ಹೇಳುತ್ತಿದ್ದಾನೊ ಕಲ್ಪನೆಯನ್ನು ಮುಂದಿಡುತ್ತಿದ್ದಾನೊ ತಿಳಿಯದಾಗಿದೆ.

ಭದ್ರಬಾಹು ಭಟ್ಟಾರಕರು ಚಂದ್ರಗುಪ್ತನೊಡನೆ ಬರಗಾಲದ ಕಾರಣ ದಕ್ಷಿಣಕ್ಕೆ ಬಂದು ಶ್ರವಣಬೆಳಗೊಳದಲ್ಲಿ ನೆಲೆಸಿದ ವಿವರಗಳಿವೆ. ಚೈತ್ಯಾಲಯ ನಿರ್ಮಾಣ, ಅದರ ಸಮೀಪ ಪುರನಿರ್ಮಾಣ, ಆಪುರಕ್ಕೆ 'ಬೆಳ್ಗುಳ' ಎಂದು ಹೆಸರಾದ ವಿಚಾರಗಳೂ ಈ ವಿವರದಲ್ಲಿ ಸೇರಿವೆ. ವಿಕ್ರಮಾದಿತ್ಯನಿಂದ ಶಕೆಯೊಂದು ಆರಂಭವಾದುದು, ಜೈನಮತದಲ್ಲಿ ಮತಮತಾಂತರಗಳಾದುದು, ಎಂಭತ್ತುನಾಲ್ಕು ಗಚ್ಛಗಳಾದುದು, ಗಣಗಳಲ್ಲಿ ಭೇದಗಳಾದುದು - ಎಂಬಿತ್ಯಾದಿ ವಿಷಯಗಳೂ ವಿವರಗಳೊಡನೆ ದಾಖಲಾಗಿವೆ; ಚರ್ಚೆಗೆ ಆಹ್ವಾನ ನೀಡಿವೆ. ಕವಿ ಹೇಳುತ್ತಿರುವ ವಿಷಯಗಳಲ್ಲಿ ಸತ್ಯಾಂಶಗಳ ಪ್ರಮಾಣವನ್ನು ಪತ್ತೆಹಚ್ಚುವುದು ಕಷ್ಟವಾದರೂ, ಜೈನಧರ್ಮವನ್ನು ಹೆಚ್ಚು ಐತಿಹಾಸಿಕಗೊಳಿಸಲು, ಧಾರ್ಮಿಕ ವಿಚಾರಗಳ ಮೂಲಕವೇ ಇತರ ಎಲ್ಲ ವಿಷಯಗಳನ್ನೂ ಸಾಮಾಜಿಕಗೊಳಿಸಲು ಪ್ರಯತ್ನಿಸಿರುವುದಂತೂ ನಿರ್ವಿವಾದ.

ಏಳನೆಯ ಅಧಿಕಾರವನ್ನು ವಿಕ್ರಮಾದಿತ್ಯ ಮತ್ತು ಶಾಲಿವಾಹನರು ತಮ್ಮ ಶಕೆಯನ್ನು ಬರೆಯಿಸಿದ ವಿಷಯದಿಂದ ಆರಂಭಿಸಲಾಗಿದೆ. ಹಿಂದಿನ ಅಧ್ಯಾಯದಲ್ಲಿ ವಿಕ್ರಮಾಂಕನ ಶಕೆಯ ವಿಚಾರ ಬಂದಿರುವುದರಿಂದ ಮತ್ತೆ ಇಲ್ಲಿ ಅದರ ಉಲ್ಲೇಖ ಅನಗತ್ಯವಾಗಿತ್ತು. ಈ ಮಾಹಿತಿಗಳು ನಮಗೆಲ್ಲಗೊತ್ತಿದ್ದವು; ಇಲ್ಲಿ ಅವುಗಳ ಉಲ್ಲೇಖದಿಂದ ಆದ ಲಾಭವೇನೆಂಬುದು ಅರ್ಥವಾಗುವುದಿಲ್ಲ. ಜೊತೆಗೆ ಭೀಮಕದಂಬನೆಂಬುವನು 'ಒಳಲಂಕೆ' ಮೊದಲಾದ

ರಾಜ್ಯಗಳಲ್ಲಿ ತನ್ನ ಶಕೆಯನ್ನು ಬರೆಯಿಸಿದ ವಿಚಾರವಿದೆ. ಈ 'ಭೀಮಕದಂಬ' ಯಾರು? ತಿಳಿಯದು; 'ಒಳಲಂಕೆ' ಅವನೇ ಮುಂದೆ ಹೇಳಿರುವ 'ಲಂಕಾದ್ವೀಪ' ಇರಬಹುದು. ಮುಂದೆ ಯೇಸುಕ್ರಿಸ್ತನು ಮರಿಯಮ್ಮನ ಗರ್ಭದಲ್ಲಿ ಕೊಟ್ಟಿಗೆಯಲ್ಲಿ ಜನಿಸಿದ ವಿಚಾರವಿದೆ; ಆಮೇಲೆ ಅವನನ್ನು ಶಿಲುಬೆಗೇರಿಸಿದ ಸಂಗತಿಯೂ ದಾಖಲಾಗಿದೆ. ಆಮೇಲೆ ಪರಂಗಿಗಳಲ್ಲಿ 'ಪರಾಶಿ' ಮತ್ತು 'ಇಂಗರೀಜ' ಎಂಬ ಭೇದಗಳಿವೆ ಎಂದು ಹೇಳಿರುವುದರಲ್ಲಿ ಅರ್ಥಸ್ಪಷ್ಟವಿಲ್ಲ. ಇದೇ ಸಂದರ್ಭದಲ್ಲಿ 'ಸಮ್ಮನ್ಭೂಮೀಶ್ವರ' ಎಂಬುವನು ತನ್ನ ಶಕೆಯನ್ನು ದೇಶದಲ್ಲಿ ಪ್ರಕಟಿಸಿದ ಸಂಗತಿಯನ್ನು ಕವಿ ತಿಳಿಸುವನು; ಈತ ಯಾರೆಂಬುದು ಪ್ರಶ್ನೆಯಾಗಿಯೇ ಉಳಿದಿದೆ. ಹೀಗೆ ಪರಸ್ಪರ ಸಂಬಂಧವಿಲ್ಲದ ವಿವರಗಳನ್ನು ಕೊಡುವುದರಿಂದ ಕವಿ ಸಾಧಿಸಿದ್ದೇನು ಎಂಬ ಪ್ರಶ್ನೆ ನಮ್ಮನ್ನು ಕಾಡುತ್ತದೆ. ಇದೇ ಅಧ್ಯಾಯದಲ್ಲಿ ಸಿದ್ಧಾಂತ ವೇದಾಂತ ವಿಚಾರಗಳೂ, ಉತ್ಪತ್ತಿ ಸ್ಥಿತಿಲಯಕ್ಕೆ ಕಾರಣರಾದ ಬ್ರಹ್ಮ ವಿಷ್ಣು ಮಹೇಶ್ವರಾದಿ ದೇವತೆಗಳ ವಿಷಯಗಳೂ ಉಲ್ಲೇಖಗೊಂಡಿವೆ. ಈ ಕಾರಣಕ್ಕಾಗಿಯೇ ಏನೊ ಈ ಅಧಿಕಾರವನ್ನು 'ಸಿದ್ಧಾಂತ ವೇದಾಂತ ಪ್ರಸಂಗ ಸಂಕ್ಷೇಪಂ' ಎಂದು ಕವಿ ಕರೆದಿದ್ದಾನೆ. ಇದರ ಜೊತೆಗೆ ನವಬ್ರಹ್ಮರು, ದಶಾವತಾರ, ಅಷ್ಟವಸುಗಳು, ಏಕಾದಶರುದ್ರರು, ದ್ವಾದಶಾದಿತ್ಯರು, ಅಷ್ಟಭೈರವರು, ನವನಾದಗಳು, ಚತುರ್ದಶಮನುಗಳು, ಸಪ್ತಋಷಿಗಳು, ಸಪ್ತಸಮುದ್ರಗಳು, ಸಪ್ತದ್ವೀಪಗಳು, ನವಖಂಡಗಳು, ಕಾಲನಿರ್ಣಯ, ಯುಗ ಪ್ರಮಾಣ ಎಂಬಿತ್ಯಾದಿ ವಿಷಯಗಳನ್ನು ಪ್ರಸ್ತಾಪಿಸಿದ್ದಾನೆ; ಇವಕ್ಕೆಲ್ಲ ಸಂಸ್ಕೃತ ಶ್ಲೋಕಗಳೇ ನಿದರ್ಶನವಾಗಿವೆ, ಗದ್ಯದಲ್ಲಿಯೂ ಸಂಸ್ಕೃತವೇ ವಿಜೃಂಭಿಸಿದೆ. ಇವುಗಳಲ್ಲಿ ಜೈನ ವಿಷಯಗಳಿರುವಂತೆ, ವೈದಿಕ ವಿಷಯಗಳೂ ಇವೆ. ಇವೆಲ್ಲ ಮಾಹಿತಿ ಅಥವಾ ಉಲ್ಲೇಖಗಳಷ್ಟೆ, ಇವುಗಳಿಂದ ಯಾವುದೇ ಖಚಿತ ಅಭಿಪ್ರಾಯವನ್ನು ರೂಪಿಸುವುದು ಕಷ್ಟ.

ದೇವಚಂದ್ರ 'ರಾಜಾವಳಿಕಥೆ'ಯಲ್ಲಿ ಪುರಾಣ ಮತ್ತು ಇತಿಹಾಸ ವಿಷಯಗಳನ್ನು ಗೊತ್ತಿದ್ದೊ ಗೊತ್ತಿಲ್ಲದೆಯೊ ಬೆರಸಿಕೊಂಡು ಹೇಳಿದಂತೆ ತೋರುವುದು. ಮತಸ್ಥಾಪನೆ, ಕೃತಿರಚನಾ ವಿಷಯಗಳೂ ಇದರೊಡನೆ ಮೇಳವಿಸಿವೆ. ರಾಜಕಾರಣ ಮತ್ತು ಧರ್ಮ ಕಾರಣಗಳೂ ಸ್ಪಷ್ಟಾಸ್ಪಷ್ಟವಾಗಿ ಇಲ್ಲಿ ಬೆಸೆದುಕೊಂಡಿರುವುದು ವಿಶೇಷ. ಇವೆಲ್ಲವನ್ನೂ ಕವಿ ಅನುಕ್ರಮವಾಗಿಯೇ ಹೇಳಿದ್ದಾನೆ ಎಂದು ತಿಳಿಯಬೇಕಾಗಿಲ್ಲ. ಅಗತ್ಯ ಕಂಡಂತೆ, ಕೆಲವೊಮ್ಮೆ ತೋಚಿದಂತೆ ಬರೆದುಕೊಂಡು ಹೋದಂತೆ ಕಾಣುವುದು. ಈ ಬಗೆಯ ಸಮ್ಮಿಶ್ರ ವಿಚಾರಗಳು ಮುಖ್ಯವಾಗಿ 'ಅಷ್ಟಮಾಧಿಕಾರ'ದಿಂದಲೇ ಪ್ರಾರಂಭವಾಗುತ್ತವೆ. ಈವರೆಗಿನ ಅಧ್ಯಾಯಗಳಲ್ಲಿ ಜೈನಧರ್ಮ ಮತ್ತು ಆ ಸಂಬಂಧಿಯಾದ ಕಥೆಗಳು ಹೆಚ್ಚು ಸ್ಥಾನ ಪಡೆದಿದ್ದರೆ, ಈ ಮುಂದಿನ ಅಧ್ಯಾಯಗಳಲ್ಲಿ ಇತಿಹಾಸ ಅಥವಾ ಇತಿಹಾಸಾಭಾಸ ಕಥೆಗಳು ಅಧಿಕ ಪಾತ್ರವಹಿಸಿದಂತೆ ತೋರುವುದು.

ಅಷ್ಟಮಾಧಿಕಾರ ಮತ್ತಷ್ಟು ಕಥೆಗಳ ಸಾರಸಂಗ್ರಹವಾಗಿದೆ. ಕವಿಯೇ ಹೇಳುವಂತೆ "ಜಿನದತ್ತರಾಯ ಪ್ರಮುಖ ಭೋಜರಾಜಾಂತ ಕಥಾ ನಿರೂಪಣಂ" ಆಗಿದೆ. ಸಂಬಂಧವಿಲ್ಲದ ಕಥೆಗಳನ್ನು ಒಂದರೊಡನೊಂದು ಹೆಣೆಯುವುದು ಅವನಿಗೆ ವಾಡಿಕೆ. ಆ ಪ್ರಕಾರ ಇಲ್ಲಿಯೂ

ಹಲವು ಕಥೆಗಳಿವೆ; ಅವು ಜೈನ, ವೀರಶೈವ ಮತ್ತು ವೈದಿಕ ಪರಂಪರೆಗೆ ಸೇರಿದವಾಗಿವೆ. ದೇವಚಂದ್ರನಿಗೆ ಕಥೆ ಹೇಳುವಲ್ಲಿ ಆಸಕ್ತಿಯಿದೆ ಎಂಬುದು ನಿಜ; ಆದರೆ ಯಾವ ಗುರಿಯನ್ನು ಇಟ್ಟುಕೊಂಡು ಹೇಳುತ್ತಿದ್ದಾನೆಂಬುದರಲ್ಲಿ ಖಚಿತವಿರುವುದಿಲ್ಲ. ಧಾರ್ಮಿಕ ಉದ್ದೇಶವನ್ನು ಎಲ್ಲ ಕಥೆಗಳ ಮೇಲೂ ಹೇರಲಾಗದು; ಮಾಹಿತಿಕೋಶವೆಂದರೂ ಆದೀತೇನೊ. ಮಧುರಾಪಟ್ಟಣದ ಸಾಕಾರರಾಯನ ಮಗ ಜಿನದತ್ತರಾಯ ಶಬರವಳ್ಳಿಗೆ ಬಂದು ಪಟ್ಟಣವನ್ನು ಕಟ್ಟಿ 'ಪೊಂಬುಚ್ಚಪುರ'ವೆಂದು ಹೆಸರಿಟ್ಟು ಆಳಿ ತಪಸ್ಸಿನಿಂದ ಸದ್ಗತಿಪಡೆದನಂತೆ. ಇದರ ಐತಿಹಾಸಿಕತೆಯ ಬಗ್ಗೆ ಏನೂ ತಿಳಿಯದಾಗಿದೆ. ನಗರಪುರದ ಚಂಡವಿಕ್ರಮ ಎಂಬ ಅರಸನ ಸಾಮಂತ ನಿಂಬದೇವನ ಉಲ್ಲೇಖಕ್ಕೆ ಚರಿತ್ರೆಯ ಆಧಾರವಿದೆ; ಆದರೆ 'ಚಂಡವಿಕ್ರಮ' ರಾಜನ ಇತಿಹಾಸ ತಿಳಿಯದು. ಶಕ ೩೦೦ರಲ್ಲಿ ಕೊಳ್ಳೇಗಾಲದ ಮಾಧವಭಟ್ಟನಮಗ ಪೂಜ್ಯಪಾದ ಜೈನೇಂದ್ರ ವ್ಯಾಕರಣಸೂತ್ರವನ್ನೂ, ಪಾಣಿನಿ ಸೂತ್ರವೃತ್ತಿಯನ್ನೂ ರಚಿಸಿದಂತೆ ಕವಿ ಹೇಳಿದ್ದಾನೆ. ನಾಗಾರ್ಜುನ, ಯಶೋಧರ, ಶ್ರೀಧರ ಮತ್ತು ಧನಸೇನಯತೀಶ್ವರರ ವಿಷಯಗಳಿವೆ. ಕುಂದಕುಂದಪುರದಲ್ಲಿ ಪದ್ಮನಂದಿ ಮುನೀಂದ್ರರು ಷಟ್ಖಂಡಾದಿ ದ್ವಾದಶ ಸಹಸ್ರ ಗ್ರಂಥ ಮಾಡಿದಂತೆ ತಿಳಿದು ಬರುವುದು. ಹಾಗೆಯೇ ಶಾಮಕುಂಡ ಯತಿಗಳು ಪ್ರಾಕೃತ, ಸಂಸ್ಕೃತಗಳಲ್ಲಿ ಅನೇಕ ಗ್ರಂಥಗಳನ್ನು ರಚಿಸಿದರು; ತುಂಬಲೂರು ನಾಮಾಚಾರ್ಯರು ಸಂಸ್ಕೃತ, ಪ್ರಾಕೃತ ಮತ್ತು ಕನ್ನಡಾದಿ ಭಾಷೆಗಳಲ್ಲಿ ಚೂಡಾಮಣಿ ವ್ಯಾಖ್ಯಾನ ಚತುರಶೀತಿ ಸಹಸ್ರಗ್ರಂಥ ರಚನೆ ಮಾಡಿದರಂತೆ. ಧರ್ಮವನ್ನು ಉಳಿಸಲು ಮತ್ತು ದಾಖಲಿಸಲು ಶಾಸ್ತ್ರಗ್ರಂಥಗಳನ್ನು ರಚಿಸಿರಬೇಕು. ಈ ಗ್ರಂಥ ಕರ್ತರ ಮತ್ತು ಗ್ರಂಥಗಳ ಬಗೆಗೆ ಖಚಿತದಾಖಲೆಗಳನ್ನು ಒದಗಿಸಲು ಕಷ್ಟವಾಗಿದೆ. ದೇವಚಂದ್ರ ಈ ಎಲ್ಲ ವಿಷಯಗಳನ್ನು ಹೇಗೆ ಸಂಗ್ರಹಿಸಿನೆಂಬುದಕ್ಕೆ ಯಾವ ಆಧಾರಗಳೂ ಇಲ್ಲ.

ಕೃತಿಯಲ್ಲಿ ಕಲ್ಯಾಣ ಪಟ್ಟಣದಲ್ಲಿ ಬಿಜ್ಜಳರಾಯ ಆಳುತ್ತಿದ್ದುದು, ಮಾದಿರಾಜ ಮತ್ತು ಮಾದಲೆಯರಿಗೆ ಬಸವರಾಜ ಹುಟ್ಟಿದುದು, ಬಿಜ್ಜಳನಲ್ಲಿ ಬಸವಣ್ಣನವರು ಕೋಶಾಧ್ಯಕ್ಷಮಂತ್ರಿಪದವಿಯಲ್ಲಿದ್ದುದು, ಭಂಡಾರದ ವಿಷಯವಾಗಿ ಬಿಜ್ಜಳ ಮತ್ತು ಬಸವಣ್ಣನವರಲ್ಲಿ ಉಂಟಾದ ವೈಮನಸ್ಯ, ವೀರಶೈವ ಮತಸ್ಥಾಪನೆ, ಬಿಜ್ಜಳನ ಸಾವು, ಮರುಬಿಜ್ಜಳ ಬಸವನಣ್ಣನವರ ಮೇಲೆ ದಂಡೆತ್ತಿ ಹೋದುದು ಮೊದಲಾದ ವಿಚಾರಗಳಿವೆ. ಇತಿಹಾಸ ಆಧಾರಿತ ಈ ಎಲ್ಲ ಸಂಗತಿಗಳನ್ನು ಕೊಡುವಾಗ ದೇವಚಂದ್ರ ಜೈನ ಪರಂಪರೆಯಲ್ಲಿ ಬಂದ ಕಥೆಗಳನ್ನೆ ಅವಲಂಬಿಸಿರಬೇಕೆಂದು ತೋರುತ್ತದೆ. ಇದರಲ್ಲಿ ಇತಿಹಾಸ ಮತ್ತು ಐತಿಹ್ಯಗಳೆರಡೂ ಬೆರೆತುಗೊಂಡಿರುವುದು ಸ್ಪಷ್ಟ; ಐತಿಹ್ಯದಿಂದ ಇತಿಹಾಸವನ್ನು ಬೇರ್ಪಡಿಸಿದಾಗ ಮಾತ್ರ ನಿಜಚಿತ್ರ ಲಭ್ಯ.

ಕಾಂಚೀಪುರದ ಶಿವಕೋಟಿ ಮಹಾರಾಜ ಜಿನದೀಕ್ಷೆಪಡೆದು ಶಿವಕೋಟ್ಯಾಚಾರ್ಯನಾಗಿ ರತ್ನಮಾಲಾದಿ ಅನೇಕ ಶಾಸ್ತ್ರ ಗ್ರಂಥಗಳನ್ನು ರಚಿಸಿದನಂತೆ. ಇವನಿಗೂ ವಡ್ಡಾರಾಧನೆಯ ಕರ್ತೃವಾದ ಶಿವಕೋಟ್ಯಾಚಾರ್ಯನಿಗೂ ಸಂಬಂಧವಿರುವಂತೆ ಕಾಣುವುದಿಲ್ಲ. ಈ ಕೃತಿಯಲ್ಲಿ

ಬೌದ್ಧ, ಜೈನ, ವೈದಿಕ ತರ್ಕ ಮತ್ತು ತತ್ತ್ವವಿಚಾರಗಳ ವಿವರಗಳಿವೆ; ಇಲ್ಲೆಲ್ಲ ಮುಖ್ಯವಾಗುವುದು ಕವಿಯ ಜೈನಪರ ದೃಷ್ಟಿಯೇ; ಅದು ಅವನಿಗೆ ಸಹಜವಾದುದು ಕೂಡ. ಜೊತೆಗೆ ರಾಜಮಲ್ಲನ ಮಹಾಸಾಮಂತನಾದ ಚಾವುಂಡರಾಯನು ಬಾಹುಬಲಿ ಪ್ರತಿಮೆಯನ್ನು ಮಾಡಿಸಿ ಪ್ರತಿಷ್ಠಾಪಿಸಿದ ವಿಷಯವಿದೆ; ಇದು ಸ್ಪಷ್ಟ ಇತಿಹಾಸ ಸಂಗತಿಯೇ ಆಗಿದೆ. ಆದರೆ ಕೂಷ್ಮಾಂಡಿನೀ ದೇವಿ "ಗುಳ್ಳಕಾಯಪೋಳಲ್ಲಿ" ಕ್ಷೀರವನ್ನು ತಂದು ಗೊಮ್ಮಟ ಪ್ರತಿಮೆಯ ಮಸ್ತಕದಲ್ಲಿ ಬಿಡಲು ಆಕ್ಷಣವೆ ಅದು ಬೆಟ್ಟವನ್ನೂ ಆ ಪ್ರದೇಶವನ್ನೂ ಆವರಿಸಲು, ಪರಿಣಾವಾಗಿ ಆಪುರಕ್ಕೆ 'ಬೆಳ್ಗುಳ' ಎಂದು ಹೆಸರಾಯಿತೆನ್ನುವುದು ಕೇವಲ ಕಥೆಯಷ್ಟೆ. ಏಕೆಂದರೆ 'ಬೆಳ್ಗುಳ'ಕ್ಕೆ ವಿಭಿನ್ನ ಕಾರಣಗಳನ್ನು ಕವಿಯೇ ಈ ಕೃತಿಯಲ್ಲಿ ಕೊಟ್ಟಿದ್ದಾನೆ. ಕುಂದಕುಂದ, ಪದ್ಮನಂದಿಗೃದ್ಧಪಿಂಛ, ಮಯೂರಪಿಂಛ, ಉಮಾಸ್ವಾತಿ, ಪೂಜ್ಯಪಾದ, ಶಾಮಕುಂದಾಚಾರ್ಯ, ತುಂಬಲೂರ ನಾಮಾಚಾರ್ಯ ಪ್ರಾಕೃತ, ಸಂಸ್ಕೃತ ಮತ್ತು ಕನ್ನಡದಲ್ಲಿ ಗ್ರಂಥ ರಚನೆ ಮಾಡಿರುವ ವಿಷಯವನ್ನು ಮತ್ತೆ ಮತ್ತೆ ಹೇಳುವುದರಲ್ಲಿ ಅರ್ಥವಿಲ್ಲ; ಅಷ್ಟೇ ಅಲ್ಲ, ಸಂದರ್ಭವೂ ಅಲ್ಲ. ಧವಳ, ಜಯಧವಳ, ಮಹಾಧವಳ, ತ್ರಿಲೋಕಸಾರ, ಗೊಮ್ಮಟಸಾರ, ಲಬ್ಧಿಸಾರ, ಚಾವುಂಡರಾಯ ಪುರಾಣ ರಚನೆಗಳ ವಿವರಗಳಿವೆ. ಹಾಗೆಯೇ ಚಾವುಂಡರಾಯನ ಬಿರುದು ಮತ್ತು ವಿಜಯಗಳ ವರ್ಣನೆಗಳಲ್ಲಿ ಸಾಕಷ್ಟು ಐತಿಹಾಸಿಕ ಅಂಶಗಳಿವೆ. ಜಿನಸೇನಾಚಾರ್ಯ, ಗೋವಿಂದಭಟ್ಟ, ಹಸ್ತಿಮಲ್ಲರರಚನೆಗಳ ಉಲ್ಲೇಖಗಳನ್ನು ಸಮರ್ಥಿಸಬಹುದಾದರೂ, ಭೋಜರಾಜ ಮತ್ತವನ ಆಸ್ಥಾನದ ಪಂಡಿತ - ಕವಿ- ವಾಗ್ಮಿಗಳ ವಿಷಯಗಳ ಉಲ್ಲೇಖಗಳ ಅಗತ್ಯವಾದರೂ ಏನಿತ್ತೆಂಬುದು ಅರ್ಥವಾಗುವುದಿಲ್ಲ. ಯಾವನೊ ಒಬ್ಬ ರಾಜನ ಹೆಸರು ಬಂದಾಗ ಇನ್ನೊಬ್ಬರಾಜನ ಹೆಸರನ್ನು ಹೇಳುವುದು ಮತ್ತು ಆ ಸಂಬಂಧವಾದ ವಿವರಗಳನ್ನು ಕೊಡುವುದು ದೇವಚಂದ್ರನ ಜಾಯಮಾನ. ಹೀಗಾಗಿ ವಿಷಯಗಳಲ್ಲಿ ಅಂತರ್‌ಸಂಬಂಧವಿಲ್ಲದೆ ಕೃತಿಯ ಬಂಧ ಒಡೆದು, ಮಾಹಿತಿಗಳ ಪಟ್ಟಿಯಾದಂತೆ ತೋರುವುದರಲ್ಲಿ ಆಶ್ಚರ್ಯವಿಲ್ಲ.

ಒಂಬತ್ತನೆಯ ಅಧಿಕಾರದಲ್ಲಿ 'ಚೋಳ ಬಲ್ಲಾಳ ಡಣಾಯಕ ರಾಜ್ಯಪಾಲನ' ವಿವರಗಳಿದ್ದರೂ, ಮತಧರ್ಮದ ಅಭಿನಿವೇಶದಿಂದ ತಪ್ಪಿಸಿಕೊಂಡಿಲ್ಲ. ಜಾತಿಮತ ವಿಷಯಿಕವಾದ ವಿವರಗಳಿಗೆ ಹೆಚ್ಚು ಅವಕಾಶಮಾಡಿಕೊಡಲಾಗಿದೆ. ಸಾಮಾಜಿಕ ಅಧ್ಯಯನಕ್ಕೆ ಇವು ಅಗತ್ಯವಸ್ತುವಾಗಬಲ್ಲವು. ಇತಿಹಾಸದ ಜೊತೆಗೆ ಧರ್ಮವೂ ಕೈಜೋಡಿಸಿ ನಿಂತಿರುವುದು ಅಧ್ಯಾಯದ ವಿವರಗಳಿಂದ ವ್ಯಕ್ತವಾಗುವುದು. ಇತಿಹಾಸ ಮತ್ತು ಧರ್ಮ ಪರಸ್ಪರ ಉಪಯೋಗ ಪಡೆದುಕೊಂಡಿರುವಂತಿದೆ. ಪ್ರಭುತ್ವ ಮತ್ತು ಆಚಾರ್ಯ ಪರಂಪರೆಗಳು ಗಂಗೆಯಮುನೆಯರಂತೆ ಅಕ್ಕಪಕ್ಕದಲ್ಲಿ ಪ್ರಧಾನ ವಾಹಿನಿಯಾಗಿ ಹರಿದಿವೆ ; ಉಕ್ಕಿದಾಗ ಪರಸ್ಪರ ತುಳುಕಿವೆ. ಪ್ರಸ್ತುತ ಅಧ್ಯಾಯದಲ್ಲಿ ನಿರೂಪಿತವಾಗಿರುವ ಪ್ರಭುಪರಂಪರೆಯ ರಾಜರು ಮತ್ತು ಆಚಾರ್ಯಪರಂಪರೆಯ ಮುನಿಗಳ ವಿವರಗಳಲ್ಲಿ ತರ್ಕಬದ್ಧತೆಯೇನೂ ಕಾಣುವುದಿಲ್ಲ; ಮಾಹಿತಿಗಳನ್ನು ಚೆಲ್ಲಿಕೊಂಡು ಹೋದಂತೆ ತೋರುವುದು. ಅದುಕಾರಣ ರಾಜರು ಮತ್ತು ಮುನಿಚರಿತ್ರೆಯ ಅನುಕ್ರಮಣಿಕೆಯಲ್ಲಿ ಸುಸಂಬದ್ಧತೆ ಇರದೆ ಏರುಪೇರುಗಳೂ ವ್ಯತ್ಯಾಸಗಳೂ

ಉಂಟಾಗಿವೆ. ಈ ಕ್ರಮ ವಿಪರ್ಯಾಸಗಳನ್ನು ಸರಿಪಡಿಸಬೇಕಾದರೆ ವ್ಯವಸ್ಥಿತ ಅಧ್ಯಯನವೊಂದು ನಡೆಯಬೇಕಾಗಿದೆ. ಆ ಕಾರಣಕ್ಕಾಗಿ ದೇವಚಂದ್ರ ಕವಿ ಹೇಳುವ ವಿಷಯಗಳನ್ನು ಅವುಗಳು ಇದ್ದ ಸ್ವರೂಪದಲ್ಲಿಯೇ ಒಪ್ಪಿಕೊಳ್ಳಲು ಸಾಧ್ಯವಾಗುವುದಿಲ್ಲ.

ಅಧ್ಯಾಯದ ಆರಂಭದಲ್ಲಿಯೇ ಕಂತಿಯೆಂಬ ಕವೀಶ್ವರಿಯ ಉಲ್ಲೇಖವನ್ನೂ, ಅವಳೊಡನೆ ಪ್ರಶ್ನೆಗಿಳಿದ ದೋರಸಮುದ್ರದ ದೋರರಾಯನ ಆಸ್ಥಾನದ 'ಮಹಾಕವಿಗಧಿಪ' ಪಂಪಕವಿಯ ವಿಚಾರವನ್ನು ದೇವಚಂದ್ರ ಗಮನಕ್ಕೆ ತರುತ್ತಾನೆ. ಇಲ್ಲಿನ ಈ ದೋರರಾಯ ಯಾರು? 'ದೋರರಾಯ' ಒಬ್ಬ 'ಬಲ್ಲಾಳರಾಯ'ನೆಂದು ಅವನ ಅಭಿಪ್ರಾಯ. ಈ ಬಲ್ಲಾಳರಾಯನ ಆಸ್ಥಾನದಲ್ಲಿ ಕಂತಿ ಮತ್ತು ಪಂಪ ಇಬ್ಬರೂ ಇದ್ದಂತೆ ಒಟ್ಟಾರೆ ಒಲವು. ಇಲ್ಲಿ ಉಕ್ತವಾಗಿರುವ ಪಂಪ ಅಭಿನವಪಂಪನೆಂದು ಹೆಸರಾಂತ ನಾಗಚಂದ್ರನೆಂಬುದು ಗೊತ್ತಿರುವ ಸಂಗತಿ; ಆದರೆ ಅವನು ರಾಜನ ಆಸ್ಥಾನದಲ್ಲಿದ್ದುದಕ್ಕೆ ಯಾವ ಆಧಾರವೂ ಇಲ್ಲ. ಆದರೂ 'ರಾಮಚಂದ್ರ ಚರಿತ ಪುರಾಣ'ದ ಉಪೋದ್ಘಾತದಲ್ಲಿ ಈ ಮಾತಿದೆ : "ಈ ಕಂತಿಯು ದ್ವಾರಸಮುದ್ರದ ಬಲ್ಲಾಳ ವಿಷ್ಣುವರ್ಧನ ರಾಯನ (೧೧೦೪-೧೧೪೧) ಆಸ್ಥಾನ ಪಂಡಿತೆಯಾಗಿದ್ದ ಪ್ರಸಿದ್ಧ ಒಬ್ಬ ಕಬ್ಬಿಗಿತಿ. ಅಭಿನವಪಂಪನೂ ಅದೇ ಆಸ್ಥಾನದಲ್ಲಿ ಪಂಡಿತನಾಗಿದ್ದಿರಬೇಕು" (ಪು. ix). ಕಂತಿ ಐತಿಹಾಸಿಕ ವ್ಯಕ್ತಿಯಾಗಿ ಇನ್ನೂ ಸ್ಪಷ್ಟಗೊಂಡಿಲ್ಲ. ಆದ್ದರಿಂದ ಇಡೀ ಹೇಳಿಕೆಯನ್ನು ಒಪ್ಪುವುದು ಕಷ್ಟವಾಗುತ್ತದೆ. ದೇವಚಂದ್ರನಿಗೂ ಇದರ ಅರಿವಿಲ್ಲ; ಇಲ್ಲಿನ ಪಂಪ ನಾಗಚಂದ್ರ ಎಂಬ ತಿಳಿವಳಿಕೆಯೂ ಕವಿಗಿದ್ದಂತಿಲ್ಲ. ಈ ಬಗ್ಗೆ ಮುಂದುವರಿದು ಬರೆಯುತ್ತಾ ದೇವಚಂದ್ರ, "ಹಂಪಕವೀಶ್ವನಾದಿಪುರಾಣಮಂ ವಸ್ತುಕದಿಂ ಮಾಡಿ ಕನ್ನಡಕವಿಗಾದಿಯಾಗಿರ್ದನ್" ಎಂದು ಹೇಳುವುದರಿಂದ ಕಂತಿಯೊಡನೆ ಸಂವಾದನಡೆಸಿದವನು ಆದಿಕವಿಪಂಪ ಎಂದೇ ಅರ್ಥವಾಗುವುದು. ಆದರೆ ಇನ್ನೊಂದು ಕಡೆ ದೇವಚಂದ್ರ "ಬಾಳಚಂದ್ರಮುನೀಂದ್ರರವರ ಶಿಷ್ಯಂ ನಾಗಚಂದ್ರನೆಂಬಂ ಜಿನಮುನಿತನಯ ಜಿನಾಕ್ಷರಮಾಲೆ ಮಲ್ಲಿನಾಥಪುರಾಣ ರಾಮಚರಿತ್ರೆ ಮೊದಲಾದ ವಸ್ತುಕಮಂ ರಚಯಿಸಿ ಅಭಿನವ ಪಂಪನೆನಿಸಿದನ್" ಎಂದಿದ್ದಾನೆ. ಹೀಗಾಗಿ ಈ ವಿಷಯದ ಐತಿಹಾಸಿಕತೆ ಅಸ್ಪಷ್ಟತೆಯಲ್ಲಿಯೇ ಉಳಿದುಬಿಡುತ್ತದೆ.

ಮುಂದೆ ಧರ್ಮಮಿಶ್ರಿತ ರಾಜಕೀಯ ವಿಚಾರಗಳು ನಿರೂಪಣೆಗೊಂಡಿದೆ. ಚೋಳರು ನವ ಚೋಳರಾಗಿ, ಅವರಲ್ಲಿನ ಧರ್ಮನೆಂಬ ಚೋಳನು ಜಿನಾಲಯ, ಶಿವಾಲಯ ಮತ್ತು ವಿಷ್ಣು ನಿಕೇತನಗಳನ್ನು ಮಾಡಿಸಿ ಸಮಾನತೆಯನ್ನು ಮೆರೆದ ವಿಷಯವಿದೆ. ದೇವರಾಯನೆಂಬುವನು ವಿದ್ಯಾನಂದ ಮುನಿಗಳ ಸಹಾಯದಿಂದ ವಿದ್ಯಾನಗರವನ್ನು ಸ್ಥಾಪಿಸಿದ ವಿಚಾರವಿದೆ. ಈ 'ವಿದ್ಯಾನಗರ' ವಿಜಯನಗರ ಇರಬಹುದೆ? ಸ್ಪಷ್ಟವಾಗುವುದಿಲ್ಲ. ಮುಂದೆ ಕೊಟ್ಟಿರುವ ರಾಜರುಗಳ ಪಟ್ಟಿಯಿಂದ ಹಾಗೆ ಅನಿಸಬಹುದು. ಭೀಮರಾಯ, ವಿರೂಪಾಕ್ಷರಾಯ, ರಾಮದೇವರಾಯ, ರಘುರಾಮದೇವ, ವೀರಮಲ್ಲಿಕಾರ್ಜುನ, ಲಕ್ಷ್ಮಣ ದೇವರಾಯ, ವೀರಪ್ರತಾಪರಾಯ, ಹಂಪರಾಯ, ಪ್ರತಾಪರುದ್ರ, ಇಮ್ಮಡಿರಾಮದೇವ,

ಕಂಪರಾಯ, ರಾಮಚಂದ್ರ, ಸಾಳುವ ಕಂಪಿಲ, ಕಂಪಿಲರಾಯ - ಈ ಎಲ್ಲ ಹೆಸರುಗಳಲ್ಲಿ ಗೊಂದಲವಿದೆ; ಈ ರಾಜರಲ್ಲಿ ಕೆಲವರು ವಿಜಯನಗರಕ್ಕೆ ಸೇರಿದವರು, ಕೆಲವರು ಕಂಪಿಲಿಗೆ ಸೇರಿದವರು, ಮತ್ತೆ ಕೆಲವರು ಓರಂಗಲ್ಲಿಗೆ ಸೇರಿದವರು. ದೇವಚಂದ್ರ ಯಾವುದನ್ನೂ ಪರಿಶೀಲಿಸಿಕೊಟ್ಟಂತಿಲ್ಲ; ಎಲ್ಲವೂ ಅಸ್ಪಷ್ಟತೆ, ಗೊಂದಲಗಳಲ್ಲಿಯೇ ಉಳಿದುಬಿಟ್ಟಿವೆ. ರಾಜಕೀಯ ಅನಿಶ್ಚಯತೆ, ಅನಿರ್ದಿಷ್ಟತೆ, ಅತಾರ್ಕಿಕತೆ ಇಡೀ ಅಧ್ಯಾಯದಲ್ಲಿ ಮುಂದುವರಿದ ವಿಷಯ. ಹೊಯ್ಸಳ ಹೆಸರಿನ ಪ್ರಸ್ತಾಪ ಮತ್ತು ಅದಕ್ಕಿರುವ ಕಥೆ, ಬಲ್ಲಾಳರಾಯನ ವಂಶಪರಂಪರೆ, ದೋರಸಮುದ್ರ ರಾಜಧಾನಿಯ ವಿಷಯ, ಗಂಗರಾಜರ ಉಲ್ಲೇಖ, ದೆಹಲಿಯ ಪಾದಶಾಯಿ ವಿಚಾರ, ಪಾದಶಾಯಿ ಮತ್ತು ಬಲ್ಲಾಳರ ಭೇಟಿ, ಪಾದಶಾಯಿಯ ಮಗಳು ವರನಂದಿಯನ್ನು ಬಲ್ಲಾಳನಿಗೆ ಮದುವೆ ಮಾಡಿದ ಕಥೆ, ಬಲ್ಲಾಳರಾಯ ವಿಷ್ಣುವರ್ಧನನಾಗಿ ಕಾಣಿಸಕೊಂಡುದು - ಈ ಎಲ್ಲ ನಮೂದುಗಳಲ್ಲಿ ಅರ್ಧಕ್ಕಿಂತ ಹೆಚ್ಚು ಭಾಗ ಸತ್ಯವಲ್ಲದ ಸಂಗತಿಗಳಿಂದ ಕೂಡಿದೆ. ನಮಗೆ ಈ ಬಗ್ಗೆ ಗೊತ್ತಿರುವುದರಿಂದ, ಪ್ರಸ್ತುತ ಗ್ರಂಥ ಹೊಸ ರಾಜಕೀಯ ವಿಚಾರಗಳನ್ನೇನೂ ಪ್ರಸ್ತಾಪಿಸುತ್ತಿಲ್ಲ ಎನಿಸುತ್ತದೆ.

ಕವಿ ದೇವಚಂದ್ರನಿಗೆ ಚಾರಿತ್ರಿಕ ವಿಚಾರಗಳಿಗಿಂತ ಮತಧರ್ಮೀಯ ವಿಚಾರಗಳೇ ಮುಖ್ಯವಾಗುತ್ತವೆ. ಆ ಕಾರಣದಿಂದಾಗಿ ಆ ಬಗೆಗಿನ ಹಲವಾರು ವಿಷಯಗಳನ್ನು ಪ್ರಸ್ತುತ ಅಧಿಕಾರದಲ್ಲಿ ಪ್ರಸ್ತಾಪಿಸುತ್ತಾನೆ. ಮೊದಲಿಗೆ ಚಾತುರ್ವರ್ಣಗಳು ನಾನಾ ಬಗೆಯ ಹೆಸರಿನಿಂದ ನಾನಾ ಬಗೆಯ ಜಾತಿ ಭೇದದಿಂದ ವೈಷಮ್ಯವನ್ನು ಬಿತ್ತುತ್ತಿರುವುದನ್ನು ಹೇಳುತ್ತಾನೆ; ಇದು ವರ್ತಮಾನದ ಸತ್ಯ ಕೂಡ ಆಗಿದೆ. ಸ್ಮಾರ್ತ ಬ್ರಾಹ್ಮಣನಾದ ಶಂಕರಾಚಾರ್ಯ ವೇದವೇದಾಂಗಾದಿ ಶಾಸ್ತ್ರ ಪ್ರವೀಣನಾಗಿ ಶೃಂಗೇರಿಯಲ್ಲಿ ಸರಸ್ವತಿ ದೇವಿಯನ್ನು ಪ್ರತಿಷ್ಠಾಪಿಸಿ ಮಠವನ್ನು ನಿರ್ಮಿಸಿದ ಉಲ್ಲೇಖವಿದೆ. ಗಯೆಯೆಂಬ ಹೆಸರು, ಗಯಪುರಾಣದ ರಚನೆಯನ್ನು ಕುರಿತು ಕವಿ ಮಾತಾಡಿದ್ದಾನೆ. ಮತವಿಷಯಿಕ ವಿಚಾರಗಳಿಗೆ ಆದ್ಯತೆ ನೀಡಿ ತನ್ನ ಕೃತಿಯಲ್ಲಿ ದೇವಚಂದ್ರ ವಿವರ ನೀಡಿದ್ದಾನೆ. ಯಾವುದು ಇವೊತ್ತು ಅಗತ್ಯವಿಲ್ಲವೊ ಅದನ್ನೆಲ್ಲ ಆದ್ಯತೆ ನೀಡಿ ಬರೆದಿದ್ದಾನೆ. ಸಾಮಾಜಿಕ ಅಧ್ಯಯನಕ್ಕೆ ಇದೆಲ್ಲ ಒಳ್ಳೆಯ ವಸ್ತುವಾಗಬಹುದು. ಮಧ್ವಾಚಾರ್ಯರು ಅನೇಕ ಗ್ರಂಥಗಳನ್ನು ರಚಿಸಿ, ಶಿಷ್ಯವರ್ಗಕ್ಕೆ ಉಪದೇಶ ನೀಡಿ, ಮಾಧ್ವಮತ ಸ್ಥಾಪನೆ ಮಾಡಿದ ವಿಚಾರ ಮುಖ್ಯ ಪ್ರಸ್ತಾಪಗಳಲ್ಲಿ ಒಂದು. ಇಲ್ಲಿ ಕೊಟ್ಟಿರುವ ಜೈನಮುನಿಗಳ ವಿವರ ಪ್ರತ್ಯೇಕ ಅಧ್ಯಯನಕ್ಕೆ ವಿಷಯವಾಗುವಂಥದು. ದ್ರಾವಿಡದೇಶದಿಂದ ಅರ್ಥಾತ್ ತಮಿಳುನಾಡಿನಿಂದ ಬಂದ ರಾಮಾನುಜ ಎಂಬುವನು ವಿಷ್ಣುಪಾರಮ್ಯದ ವೀರವೈಷ್ಣವತ್ವವನ್ನು ಪ್ರಕಟಿಸಿ, ತಮ್ಮ ತತ್ತ್ವಕ್ಕೆ ಸೇರಲುಂಟಾದಾಗ, "ತತ್ಪುತ್ರಿಯರಪ್ಪ ಭಂಗಾರೆ ಸಿಂಗಾರೆಯೆಂಬವರ್ ಭರತಶಾಸ್ತ್ರದಿಂ ನಿಪುಣೆಯರಾಗಿ", "ತಂದೆಯಂ ಸಂತೈಸಿ ಜೈನರೆಲ್ಲರಂ ಶ್ರೀವೈಷ್ಣವರಂ ಮಾಳ್ಪ ಕಜ್ಜಮನೆತ್ತಿಕೊಂಡು" ಹೊಯ್ಸಳ ಬಲ್ಲಾಳನಿಂದ ಮಾನ್ಯತೆ ಪಡೆದ ವಿಚಾರ ವಿವರವಾಗಿ ನಿರೂಪಿತವಾಗಿದೆ. ಅನೇಕ ಕನ್ನಡ ಕವಿಗಳ, ಅವರ ಕೃತಿಗಳ ಉಲ್ಲೇಖವಿರುವುದು ಸಾಹಿತ್ಯ ಚರಿತ್ರೆಯ ದೃಷ್ಟಿಯಿಂದ ಮುಖ್ಯವಾಗುವುದು. "ಕಾದಂಬರೀ ಕಾವ್ಯ ಪುಸ್ತಕಮಂ ಸುಟ್ಟು

ಲೀಲಾವತಿಗೆ ಕಪ್ಪ"ವನ್ನಿಟ್ಟ ಆಶ್ಚರ್ಯಕರ ಪ್ರಸಂಗ ಕೂಡ 'ರಾಜಾವಳಿ ಕಥೆ' ಯಲ್ಲಿದೆ. ಆದರೆ ನಾಗವರ್ಮನ ಕರ್ನಾಟಕ ಕಾದಂಬರಿ ನೇಮಿಚಂದ್ರನ 'ಲೀಲಾವತಿ'ಗಿಂತ ಮಹತ್ವದ ಕೃತಿಯೆಂದು ಕಾಲದ ಮೂಲಕ ಗೆದ್ದಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಕವಿ ದೇವಚಂದ್ರನೇನೊ ನವಮಾಧಿಕಾರದ ಉದ್ದೇಶ "ಚೋಳ ಬಲ್ಲಾಳ ಡಣಾಯಕ ರಾಜ್ಯಪಾಲನ ವಿವರಣಂ" ಎಂದು ಸಮಾಪ್ತಿ ವಾಕ್ಯದಲ್ಲಿ ಹೇಳಿದ್ದಾನೆ; ಆದರೆ ಅದರ ಅಂತರಂಗ ಅದಲ್ಲವೆಂಬುದನ್ನು ಮೇಲಿನ ಉಲ್ಲೇಖಿತ ಮಾತುಗಳೇ ಸ್ಪಷ್ಟಪಡಿಸುತ್ತವೆ.

ದಶಮಾಧಿಕಾರ ಮೇಲಿನದಕ್ಕೆ ಹೊರತೇನೂ ಅಲ್ಲ; ಪೂರಕವಾಗಿ ನಿಂತದ್ದು. ರಾಜಕಾರಣ ಮತ್ತು ಧರ್ಮಕಾರಣಗಳೆರಡೂ ದಿಬ್ಬಣ ಹೊರಟಂತಿವೆ ಈ ಅಧ್ಯಾಯದಲ್ಲಿಯೂ. ಅಧ್ಯಾಯದ ಸಮಾಪ್ತಿ ವಾಕ್ಯದಲ್ಲಿ" ಚತುರ್ಮುಖಶಾಸ್ತ್ರಿ ನಿವೇದಿತಾ ಕಥಾಪ್ರರೂಪಣಂ" ಎಂದು ಹೇಳಿರುವುದರಿಂದ ಕವಿಯ ಉದ್ದೇಶ ಸ್ಪಷ್ಟವಾಗುತ್ತದೆ. ರಾಜಕೀಯ ವಿಷಯಗಳು ತುಂಬಿದ್ದರೂ, ಹೀಗೆ ಹೇಳಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಶಾಸ್ತ್ರ, ಧರ್ಮದಂತಹ ವಿಷಯಗಳ ಪ್ರತಿಪಾದನೆಗೆ ರಾಜಕೀಯವೂ ರಾಜಕೀಯಸ್ಥರೂ ಒತ್ತಾಸೆಯಾಗಿ ನಿಲ್ಲಬೇಕೆಂಬುದು ಕವಿಯ ನಿಲವಿರಬೇಕು. ಚರಿತ್ರೆಯೂ ಒಂದು ಕ್ರಮವನ್ನು ಅನುಸರಿಸಿಲ್ಲ. ಅಧಿಕಾರದ ಆರಂಭದಲ್ಲಿಯೇ ಆನೆಗೊಂದಿ - ವಿದ್ಯಾನಗರಿ (ವಿಜಯನಗರ)ಯಲ್ಲಿ ಕೃಷ್ಣದೇವರಾಯನ ಹೆಸರಿದೆ. ಹೀಗೆ ಹೇಳಿದವನೇ ವಿಜಯನಗರದ ಅರಸರ ಜೊತೆಗೆ ಕಂಪಿಲಿಯ ರಾಜರನ್ನೂ ಓರಂಗಲ್ಲಿನ ರಾಜರನ್ನೂ ಪಟ್ಟಿಮಾಡುತ್ತಾನೆ; ಹಿಂದಿನ ಅಧ್ಯಾಯದಲ್ಲಿಯೂ ಹೀಗೆಯೇ ಬರೆಯಲಾಗಿತ್ತು. ಒಟ್ಟಿಗೆ ತಂದದ್ದರ ಔಚಿತ್ಯವನ್ನಾದರೂ ಗುರುತಿಸಿದ್ದರೆ ಸಮರ್ಥನೆ ಸಿಗುತ್ತಿತ್ತು; ಬಹಳ ಕಡೆ ಕವಿ ಮಾಡಿರುವುದು ಉಲ್ಲೇಖಿತ ರಾಜರ ಜೊತೆಗೆ ಅವರ ಕಾರ್ಯಗಳನ್ನು ಹೇಳದಿರುವುದು. ಇದರಿಂದ ದೇವಚಂದ್ರನ ಇತಿಹಾಸದ ಜ್ಞಾನದ ಬಗ್ಗೆಯೇ ಅನುಮಾನ ಮೂಡುವುದು. ಇದ್ದಕ್ಕಿದ್ದಂತೆ ಭರ್ತೃಹರಿಯನ್ನು ತಂದು ಅವನ ಆಡಳಿತದ ಅವಧಿಯಲ್ಲಿ ತಲೆದೋರಿದ ಭೂಮಿ ಒಡೆತನ, ಕಂದಾಯ ಕಟ್ಟದಿರುವ ಪ್ರಕರಣ, ರಾಜ ಮತ್ತು ಪ್ರಜೆಗಳ ನಡುವಣ ಚರ್ಚೆ ಮೊದಲಾದವನ್ನು ನಿರೂಪಿಸುತ್ತಾನೆ. ಈ ಪ್ರಸಂಗವೇನೊ ರೋಚಕವಾಗಿದೆ; ಆದರೆ ಹಿಂದಣ ಮುಂದಣ ವಿಷಯದಲ್ಲಿ ಸಂಬಂಧ ಕಲ್ಪಿಸುವುದು ಕಷ್ಟವಾಗುತ್ತದೆ. ಕವಿಗೆ ಇತಿಹಾಸ ಮತ್ತು ಪುರಾಣಗಳಲ್ಲಿನ ಭೇದ ಮುಖ್ಯವಾಗುವುದಿಲ್ಲ. ಸಂಬಂಧವಿಲ್ಲದ್ದರ ನಡುವೆ ಸಂಬಂಧ ಕಲ್ಪಿಸುವುದು ದೇವಚಂದ್ರನ ಜಾಯಮಾನದಂತೆ ತೋರುವುದು.

ಸಾರಂಗಧರನ ಕಥೆಯನ್ನು ಹೇಳುತ್ತಲೇ ಇದ್ದಕ್ಕಿದ್ದಂತೆಯೇ ಕಂಪಿಲರಾಯ - ಕುಮಾರರಾಮನ ಕಥೆಗೆ ಹಾರುವುದು ಎತ್ತಣೆಂದೆತ್ತ ಸಂಬಂಧ? ಮಧ್ಯೆ ಕರೀಭಂಟನ ಕಥೆ ಬೇರೆ; ಆ ಮೂಲಕ ಮೌಖಿಕ ಸಾಮಗ್ರಿಯನ್ನು ಸೇರಿಸುವ ಉಪಾಯ. ಹೊಯ್ಸಳ ಸಾಮ್ರಾಜ್ಯ ನಾಶವಾದ ಮೇಲೆ ಬಲ್ಲಾಳ ಸಂತತಿಯವರು ಬೇರೆ ಬೇರೆಯ ಕಡೆಗೆ ಚದುರಿಹೋದುದರ ಪ್ರಸ್ತಾಪವಿದೆ. ಈ ಮಧ್ಯೆ ಕಾರುಗಹಳ್ಳಿ ವೀರಸೂರನೆಂಬುವನ ಉಲ್ಲೇಖವಿದ್ದು, ಚಾಮುಂಡಿಯ ಸ್ಥಾಪನೆ ಮತ್ತು 'ಮಹಿಷಾಪುರ' (ಮೈಸೂರು)ದ ನಿರ್ಮಾಣದ ವಿಷಯಗಳಿವೆ. ಕಾರುಗಹಳ್ಳಿ

ಮತ್ತು ಮೈಸೂರು ಸಂಬಂಧದಲ್ಲಿ ಇತಿಹಾಸ ಮತ್ತು ಕಥೆಯನ್ನು ಬೇರ್ಪಡಿಸುವುದು ಕಷ್ಟವಾಗಿದೆ. ಕಥೆ ಎಲ್ಲಿಗೋ ಚರಿತ್ರೆ ಎಲ್ಲಿಗೋ ಹೋಗುವುದು. ಕವಿಗೆ ಇದರ ಲಕ್ಷ್ಯವಿಲ್ಲ; ತಿಳಿದಿದ್ದನ್ನೆಲ್ಲ ಹೇಳಿಬಿಡುವ ಅಪೇಕ್ಷೆ ಅವನದು. ಇದನ್ನು ಹೇಳುತ್ತಾ ಮತ್ತೆ ಇತಿಹಾಸಕ್ಕೆ ಬಂದ ಕವಿ, ದೆಹಲಿ ಸುಲ್ತಾನರ ದಂಡೆಯಾತ್ರೆ ಮತ್ತು ದಾಳಿಗಳ ಪರಿಣಾಮದ ಚಿತ್ರಣವನ್ನು ಕೊಡುವನು. ಮಧ್ಯಯುಗದ ಭಾರತದ ಸ್ಥಿತಿ-ದುಸ್ಥಿತಿಗಳನ್ನು ವಿವರಿಸುವನು. ವೀರಬಲ್ಲಾಳನ ನಂತರ ದೆಹಲಿಯ 'ಪಾದಶಾಯಿ' ದೇವಾಲಯಗಳನ್ನು " ಪಾಳು ಮಾಡಿ ಅಲ್ಲಲ್ಲಿ ಮಸೀತಿಗಳಂ ಮಾಡಿಸಿ"ದ ವಿಚಾರಗಳನ್ನು ದೇವಚಂದ್ರ ಬರೆದಿರುತ್ತಾನೆ. ಹಾಗೆಯೇ 'ಖಾದಿರ' ಎಂಬುವನು ಪಂಪರಾಜನಲ್ಲಿಗೆ ಬಂದು ಮತವಿಷಯಿಕವಾಗಿ ವಾದ ಮಾಡುವುದನ್ನು ನೋಡುತ್ತೇವೆ. ಈ 'ಖಾದಿರ' ಯಾರು? ಪಂಪಾಪತಿ ಯಾರು? ತಿಳಿಯದು. ಈ ಘಟನೆಗೆ ನೇರ ಸಾಕ್ಷಿ ಕಷ್ಟ. ವಾದಗಳಿಂದ ಮತಗಳನ್ನು ಜಯಿಸುವ ಸಹ್ಯವಲ್ಲದ ಒಂದು ಪರಿಪಾಠ ಮಧ್ಯಕಾಲೀನ ಜಗತ್ತಿನಲ್ಲಿ ಇದ್ದಂತೆ ಕಾಣುವುದು. ಈ ವಿವರಗಳನ್ನೆಲ್ಲ ಕವಿ ಸಹ್ಯವಾಗಿಯೇ ಉತ್ಸಾಹದಿಂದಲೇ ಚಿತ್ರಿಸಿದ್ದಾನೆ. ದೇವಚಂದ್ರ ಹೇಳುವ ಕಥೆಗಳೊಳಗೆ ಕೆಲವು ಸತ್ಯಾಂಶಗಳಿರಬಹುದು; ಹಾಗೆಯೇ ಕಾಲ್ಪನಿಕ ಕಥೆಗಳೂ ಇವೆ ಎಂಬುದನ್ನು ಮರೆಯಲಾಗುವುದಿಲ್ಲ.

ಮತಗಳ ಮೇಲಾಟ, ಮತಾಂತರ ಮತ್ತು ಸಂಘರ್ಷಗಳ ಚಿತ್ರಣದಲ್ಲಿನ ಸತ್ಯಾಸತ್ಯಗಳನ್ನು ಮಧ್ಯಕಾಲೀನ 'Socio-religious' ವಿಶ್ಲೇಷಣೆಯಿಂದ ಮಾತ್ರ ತಿಳಿಯಬಹುದಾಗಿದೆ. ಅಲ್ಲಿಯವರೆಗೆ ಈ ಎಲ್ಲ ವಿವರಗಳು ಕೇವಲ ಕಥಾಂಶಗಳಾಗುತ್ತವೆ. "ಎಲ್ಲ ಮತಂಗಳೊಳ್ ಆದಿಮತ ಜೈನಮತವೇ ದೊಡ್ಡದೆಂದು ತಿಳಿದಂಥಾವರು ಹೇಳುತ್ತಿದ್ದಾರೆ" - ಈ ಧಾರ್ಮಿಕ ವಾದ ನಿಜವಾಗಿಯೂ ಸಾಂಸ್ಕೃತಿಕ ವಾಗ್ವಾದವಾಗುವುದಾದರೂ ಹೇಗೆ? ಈ ಸಂದರ್ಭದಲ್ಲಿ "ಆ ಮತದ ಈ ಮತದ ಹಳೆಮತದ ಸಹವಾಸ ಸಾಕಿನ್ನು" (ಕುವೆಂಪು) ಎಂದು ಹೇಳಬೇಕೆನಿಸುತ್ತದೆ. ಜೈನಮತವೆ ಉಳಿದ ಮತಗಳಿಗಿಂತ ಶ್ರೇಷ್ಠವೆಂದು ಸಾರಲು ಕೃತಿ ಹಿಡಿದ ಹಾದಿ ಅತಿಮಾನುಷವಾದುದು. ಭಾರತೀಯ ಸಾಂಸ್ಕೃತಿಕ ಹಾದಿಯನ್ನು ನೋಡಿದರೆ ಜೈನಮತ ಆದಿಯಲ್ಲವೆಂದು ಅರಿವಿಗೆ ಬರುವುದು. ಇಷ್ಟಕ್ಕೂ ಜನಪದ ಧರ್ಮವೆ ಮೂಲ; ಉಳಿದ ಧರ್ಮಗಳು ಆಮೇಲೆ ಬಂದವು. ಸಮಷ್ಟಿಯ ಕಲ್ಪನೆ ವ್ಯಷ್ಟಿಯ ರೂಪದಲ್ಲಿ ಒಡೆದು ಹೋದುದು ಈಗ ಇತಿಹಾಸದ ಭಾಗ. "ವಿಷ್ಣುಗಮೀಶ್ವರಂಗಂ ಭೇದಮಿಲ್ಲ ಅಜ್ಞಾನಿಗಳ್ ಭೇದಮಂ ಮಾಡಿ ಇಹಪರಮಂ ಕೆಡಿಸಿಕೊಂಬರ್" ಎಂಬ ಮಾತನ್ನು ಹರಿಹರ ಮಹಾರಾಯ ಹೇಳಿದನೆಂದು ಕೃತಿ ಉಲ್ಲೇಖಿಸಿದೆ. ಈ 'ಹರಿಹರ ರಾಯ' ವಿಜಯನಗರದ ಅರಸು ಹರಿಹರ-ಅಂದರೆ ಹಕ್ಕ - ಎಂದು ಮುಂದಿನ ವಿವರಗಳಿಂದ ವ್ಯಕ್ತವಾಗುವುದು. ಯಾರೇ ಹೇಳಲಿ ಈ ಸೂತ್ರ ಮಾತ್ರ ಉಪಾದೇಯವಾದುದು. ಆದರೆ ಆಚರಣೆಯ ಸಂದರ್ಭದಲ್ಲಿ ವಿಷ್ಣುಪಾರಮ್ಯ, ಶಿವಪಾರಮ್ಯ ತತ್ತ್ವಗಳೇ ಮುಂದುವರಿದಿರುವುದಕ್ಕೂ ಕೃತಿ ಸಾಕ್ಷಿಯಾಗಿದೆ. ಈ ಎಲ್ಲವನ್ನೂ ಪರಿಭಾವಿಸಿ ನಿರ್ಣಯಕ್ಕೆ ತಡಕಾಡಿದ ಕವಿ ದೇವಚಂದ್ರ ಮಾಹಿತಿ ಕೊಟ್ಟು ತೃಪ್ತಿಪಟ್ಟುಕೊಂಡಂತೆ ಕಾಣುವುದು.

ಮತಗಳನ್ನು ಪರಸ್ಪರ ಕೆಡಿಸುವ ಶಾಸ್ತ್ರವಿದ್ಯೆಯೇ ಮೊದಲಾದವನ್ನು ಮುಂದಿಡುವ ವಿಪರ್ಯಾಸಗಳಿಗೇನೂ ಕೃತಿಯಲ್ಲಿ ಕೊರತೆಯಿಲ್ಲ. ಮತಪ್ರತಿಷ್ಠೆಗೆ ರಾಜರ ಆಶ್ರಯವನ್ನು ಪಡೆದುಕೊಳ್ಳಲಾಗಿದೆ. ರಾಜನು ಯಾವ ಮತದ ಪರವಾಗಿರುವನೊ ಆ ಮತ ಶ್ರೇಷ್ಠವೆಂಬ ಕಲ್ಪನೆಯನ್ನು ಮೂಡಿಸಲಾಗಿದೆ. ಜೈನಮತದ ಶ್ರೇಷ್ಠತೆಗೆ ಕವಿ ಪಟ್ಟು ಹಿಡಿದಂತೆ ತೋರುವುದು. ರಾಜನ ಸಂಮುಖದಲ್ಲಿಯೇ ಮತವಿಷಯಿಕವಾದ ವಾದ ವಿವಾದಗಳೂ ಚರ್ಚೆಗಳೂ ನಡೆದ ಉಲ್ಲೇಖಗಳಿವೆ. ಜಿನಧರ್ಮವನ್ನು ಶ್ರೇಷ್ಠವೆಂದು ಸಾರುವುದು, ಬಸದಿಯನ್ನು ಕಟ್ಟಿಸಿ ಜಿನಪ್ರತಿಷ್ಠೆಯನ್ನು ಮಾಡಿಸುವುದು ಮುಖ್ಯ ವೇದಿಕೆಯಲ್ಲಿರುವ ವಿಷಯಗಳು. ಕನಕಗಿರಿ ಮತ್ತಿತರ ಕಡೆಗಳಲ್ಲಿ ಇಂಥದು ನಡೆದಿರುವುದನ್ನು ಕೃತಿ ಉಲ್ಲೇಖಿಸಿದೆ.

ಪ್ರಸ್ತುತ ಅಧಿಕಾರದಲ್ಲಿ ರಾಜಕೀಯ ವಿಚಾರಗಳನ್ನು ಪ್ರಮುಖವಾಗಿ ಕವಿ ಪ್ರಸ್ತಾಪಿಸಿದ್ದಾನೆ. ಹೊಯ್ಸಳ, ವಿಜಯನಗರದ ಅರಸರು ಮತ್ತು ಮೈಸೂರು ಅರಸರನ್ನು ಕೇಂದ್ರದಲ್ಲಿರಿಸಿಕೊಂಡು ಇಲ್ಲಿನ ವಿವರಗಳಿವೆ; ಜೊತೆಗೆ ಸಾಮಂತರು, ಪಾಳೆಯಗಾರರ ಸಂಗತಿಗಳೂ ಸೇರಿವೆ. ಮೈಸೂರು ಅರಸರನ್ನು ಹೇಳುವಾಗ ಕಾರುಗಹಳ್ಳಿ, ಉಮ್ಮತ್ತೂರು, ತಗಡೂರು, ಸೋಮಸಮುದ್ರ, ಹದಿನಾಡು ಪ್ರಭುಗಳ ವಿಚಾರಗಳು ನಿರೂಪಿತವಾಗಿವೆ. ಉತ್ತರದಿಂದ ಬಂದ ಮಾದೇಶ್ವರನ ಉಲ್ಲೇಖವೂ ಇಲ್ಲಿಯೇ ಬಂದಿರುವುದು ಗಮನಿಸುವಂಥದು. ಕೊಡಗಿನ ವೀರರಾಜ, ಲಿಂಗರಾಜರ ವಿಚಾರಗಳೂ, ಪಿರಿಯಾಪಟ್ಟಣದ ನಂಜುಂಡರಸಿನ ವಿಚಾರವೂ ಕೃತಿಯಲ್ಲಿವೆ. ಶ್ರೀರಂಗಪಟ್ಟಣವನ್ನು ಕೇಂದ್ರವಾಗಿರಿಸಿಕೊಂಡು ಆಳಿದ ರಾಜರ ವಿವರಗಳೂ ಇಲ್ಲಿಯೇ ದೊರೆಯುತ್ತವೆ. ಶ್ರೀರಂಗಪಟ್ಟಣವನ್ನು ಶ್ರೀರಂಗರಾಯ ಮಾಡಿಸಿದನು ಎನ್ನುವುದರಲ್ಲಿ ಅರ್ಥವಿಲ್ಲ. ಕೃತಿಯಲ್ಲಿ ರಾಮರಾಯ, ಸದಾಶಿವರಾಯ, ಶ್ರೀರಂಗರಾಯ ಮತ್ತು ತಿರುಮಲರಾಯ ಎಂಬ ಹೆಸರುಗಳು ಕಾಣಿಸಿಕೊಂಡಿವೆ. ಇವರೆಲ್ಲರೂ ವಿಜಯನಗರದ ಅರಸರು, ಇಲ್ಲವೆ ರಾಜಪ್ರತಿನಿಧಿಗಳು. ತಿರುಮಲರಾಯ ಶ್ರೀರಂಗಪಟ್ಟಣದಲ್ಲಿ ರಾಜ ಪ್ರತಿನಿಧಿಯಾಗಿದ್ದಾಗಲೆ, ರಾಜ ಒಡೆಯರು ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡು ಪ್ರತ್ಯೇಕ ಮೈಸೂರು ಒಡೆಯರ ಆಡಳಿತಕ್ಕೆ ಕಾರಣವಾಗಿದ್ದು. ರಾಜಒಡೆಯರ ಕಾಲಾನಂತರ ಸದಾಶಿವರಾಯನ ಸೇನಾಪತಿ ರಾಮರಾಯನು ರಾಜ್ಯವನ್ನೆಲ್ಲ ತಾನೇ ಆಳುತ್ತ ಶ್ರೀರಂಗಪಟ್ಟಣದಲ್ಲಿದ್ದನು ಎಂಬ ಪ್ರಸ್ತಾಪ ಸರಿಯಲ್ಲ. ಇತಿಹಾಸದ ವಿವರಗಳನ್ನು ಕೊಡುವಾಗ ದೇವಚಂದ್ರ ಕ್ರಮಬದ್ಧತೆಯನ್ನು ಸಾಧಿಸಿಲ್ಲವೆಂಬುದನ್ನು ಹಿಂದೆಯೇ ಹೇಳಲಾಗಿದೆ.

ಹನ್ನೊಂದನೆಯ ಅಧ್ಯಾಯದಲ್ಲಿ "ಮಹಿಸೂರ ರಾಜಕುಲ ಜಾತಿ ವರ್ಣನೆ"ಯನ್ನು ತಂದಿದ್ದೇನೆಂದು ಕವಿ ಹೇಳುವಲ್ಲಿ ಸತ್ಯಾಂಶವಿದೆ. ಮೈಸೂರು ಒಡೆಯರ ಚರಿತ್ರೆಗೆ ಸಂಬಂಧಿಸಿದ ಅನೇಕ ವಿವರಗಳು ಇಲ್ಲಿ ಬಂದಿವೆ; ದಾಖಲಾಗಿರುವ ವಿಷಯಗಳಲ್ಲಿ ಕಥಾಂಶಗಳೂ ಮತಾಂಶಗಳೂ ಸೇರಿಕೊಂಡಿರುವುದನ್ನು ಗಮನಿಸಬೇಕು. ರಾಜಒಡೆಯರ ನಂತರ ಮೈಸೂರನ್ನು

ಆಳಿದ ಚಾಮರಾಜ ಒಡೆಯ, ಇಮ್ಮಡಿ ರಾಜ ಒಡೆಯ, ಚಿಕದೇವರಾಜ ಒಡೆಯ, ಕಂಠೀರವ ನರಸರಾಜ ಒಡೆಯ, ದೇವರಾಜ ಒಡೆಯ ಮತ್ತು ಕೃಷ್ಣರಾಜ ಒಡೆಯರ ವಿವರಗಳು ಪ್ರಸ್ತುತ ಅಧಿಕಾರದಲ್ಲಿ ಪ್ರಸ್ತಾಪಗೊಂಡಿವೆ. ಚಾಮರಾಜ ಒಡೆಯರು ರತ್ನಾಕರನ ಭರತೇಶ ಚರಿತೆಯನ್ನು ತರಿಸಿ ಓದಿಸಿ ಕೇಳಿದ್ದನೆಂಬುದು ಒಂದು ಉಲ್ಲೇಖ; ಇದರ ಇತಿಹಾಸವೇನೊ ತಿಳಿಯದು. ರತ್ನಾಕರವರ್ಣಿ ಭರತೇಶ ಚರಿತೆ, ರತ್ನಾಕರ ಶತಕ, ಅಪರಾಜಿತ ಶತಕ, ತ್ರಿಲೋಕಶತಕ, ಅಧ್ಯಾತ್ಮಗೀತೆಗಳನ್ನು ರಚಿಸಿದ ವಿಚಾರಗಳನ್ನು ಕವಿ ತಿಳಿಸಿದ್ದಾನೆ. ಹಾಗೆಯೇ ವಿಜಯಣ್ಣ, ಮಂಗರಸ, ಬೊಮ್ಮರಸ, ದೊಡ್ಡಯ್ಯರ ಕೃತಿರಚನೆಯ ವಿವರಗಳನ್ನು ಕೊಟ್ಟಿದ್ದಾನೆ. ಷಡಕ್ಷರಿಯ ರಾಜಶೇಖರವಿಳಾಸದ ಪ್ರಸ್ತಾಪವೂ ಇದೆ. ಚಿಕದೇವರಾಜನ ಆಳ್ವಿಕೆಗೆ ಸಂಬಂಧಿಸಿದ ವಿವರಗಳ ಚಾರಿತ್ರಿಕ ಸತ್ಯವನ್ನು ಕುರಿತು ಪ್ರತ್ಯೇಕವಾಗಿ ಚರ್ಚಿಸಬೇಕಾಗಿದೆ. ಇದೇ ಅಧ್ಯಾಯದಲ್ಲಿ ಹೈದರ್ ಮತ್ತು ಟಿಪ್ಪುವಿನ ಆಡಳಿತ, ಕುಂಪಣಿ ಸರ್ಕಾರದ ಪ್ರವೇಶ ಕುರಿತ ವಿವರಗಳು ಬಂದಿವೆ; ಮುಂದಿನ ಅಧ್ಯಾಯದಲ್ಲಿಯೂ ಇವು ಕಾಣಿಸಿಕೊಂಡಿವೆ.

ಹನ್ನೆರಡನೆಯ ಅಧ್ಯಾಯವನ್ನು "ಶ್ರೀಮತ್ ಕೃಷ್ಣರಾಜ ವಂಶಾಭ್ಯುದಯ ವರ್ಣನಂ" ಎಂದು ಕರೆದಿದ್ದರೂ, ಮೈಸೂರು ಒಡೆಯರ ಚರಿತ್ರೆಯನ್ನು ಸಮಗ್ರವಾಗಿ ಹೇಳಲು ಹೊರಟಂತಿದೆ. ಕೆಲವು ವಿಷಯಗಳಲ್ಲಿ ಹಿಂದಿನ ಅಧಿಕಾರದಲ್ಲಿ ಹೇಳಿದ್ದನ್ನೇ ಇಲ್ಲಿಯೂ ಮತ್ತೆ ಹೇಳಲಾಗಿದೆ. ಮೈಸೂರು ಒಡೆಯರಿಗೆ ಸಂಬಂಧಿಸಿದಂತೆ ಈ ಎರಡೂ ಅಧ್ಯಾಯಗಳಲ್ಲಿ ಪ್ರಸ್ತಾಪಿತ ವಿಷಯಗಳು ಗೊಂದಲ, ಅಸಂಗತ, ಪುನರಾವರ್ತನ ದೋಷಗಳಿಂದ ನರಳಿವೆ; ಸಿಕ್ಕಿದ್ದೆಲ್ಲವನ್ನು ಹೇಳಿಬಿಡುವ ಕಾತರ ಮಾತ್ರ ಕಂಡಿದೆ. ಮೈಸೂರು ಒಡೆಯರ ಚರಿತ್ರೆಯ ಪುನಾರಚನೆಗೆ ದೇವಚಂದ್ರನ ರಾಜಾವಳಿ ಕಥೆಯನ್ನು ಆಧಾರವಾಗಿ ತೆಗೆದುಕೊಳ್ಳುವ ಅನಿವಾರ್ಯತೆಯೇನೂ ಇಲ್ಲ. ಈ ಕೃತಿಗೂ ಹಿಂದೆಯೇ ಬಂದಿರುವ ಕಂಠೀರವ ನರಸರಾಜವಿಜಯ, ಅಪ್ರತಿಮವೀರಚರಿತೆ, ಚಿಕದೇವರಾಜ ವಿಜಯ ಮತ್ತು ಚಿಕದೇವರಾಜ ವಂಶಾವಳಿ ಕೃತಿಗಳು ಒಡೆಯರ ಚರಿತ್ರೆಗೆ ಸಂಬಂಧಿಸಿದ ಎಲ್ಲ ವಿವರಗಳನ್ನು ಸ್ಪಷ್ಟವಾಗಿ ನೀಡುತ್ತವೆ; ಇವು ಒಡೆಯರ ಇತಿಹಾಸದ ಅಧಿಕೃತ ದಾಖಲೆಗಳಾಗಿವೆ. ದೇವಚಂದ್ರ ಈ ವಿಚಾರಗಳನ್ನು ಎಲ್ಲಿಯೋ ನೀಡು, ಕೇಳಿದ್ದನ್ನು ಉಲ್ಲೇಖಿಸಿರುವಂತೆ ತೋರುವುದು ಸಹಜ. ಇಷ್ಟಾದರೂ ಹನ್ನೊಂದು ಮತ್ತು ಹನ್ನೆರಡನೆಯ ಅಧಿಕಾರಗಳು ರಾಜಕೀಯ ವಿಷಯಗಳಿಗೆ ಹೆಚ್ಚು ಪ್ರಾಮುಖ್ಯತೆ ಕೊಟ್ಟು ಬರೆದಿರುವುದು ನಿಜ. ಇನ್ನು ಹದಿಮೂರನೆಯ ಅಧಿಕಾರವನ್ನು ಪ್ರತ್ಯೇಕವಾಗಿ ಪ್ರಸ್ತಾಪಿಸುವ ಅಗತ್ಯವಿಲ್ಲ; ಏಕೆಂದರೆ, ಹಿಂದಿನ ಅಧ್ಯಾಯಗಳಲ್ಲಿ ಪ್ರಸ್ತಾಪಿತವಾಗಿರುವ ವಿಷಯಗಳನ್ನೆ ತೆಗೆದು ಇಲ್ಲಿ ನಿರೂಪಿಸಿರುವುದು. ಅಂದರೆ ಈವರೆಗೆ ವಿವರಿಸಲಾಗಿರುವ ಜಾತಿಮತವಿಷಯಿಕವಾದ ವಿಚಾರಗಳನ್ನೆಲ್ಲ ಕ್ರೋಡೀಕರಿಸಿ 'ಜಾತಿ ನಿರ್ಣಯ'ವೆಂದು ಹೆಸರಿಟ್ಟು ಪ್ರತ್ಯೇಕ ಅಧ್ಯಾಯವೊಂದನ್ನಾಗಿ ಬರೆಯಲಾಗಿದೆ; ಅದುಕಾರಣ ಈ ಅಧ್ಯಾಯದ ಚರ್ಚೆ ಅನಗತ್ಯವೆನಿಸುವುದು.

ಕಥಾಮಾದರಿ

ಭಾರತೀಯ ಕಥಾ ಪರಂಪರೆಯಲ್ಲಿ ಎರಡು ಪ್ರಮುಖ ಧಾರೆಗಳು ಕಂಡುಬರುತ್ತವೆ: ಒಂದು- ವೈದಿಕ; ಮತ್ತೊಂದು- ಅವೈದಿಕ. ಮೂಲದಲ್ಲಿ ತಂತಮ್ಮ ಶುದ್ಧ ಪ್ರತಿಷ್ಠೆಗೆ ಅಂಟಿಗೊಂಡಿದ್ದರೂ, ಬೆಳವಣಿಗೆಯ ಬೇರೆ ಬೇರೆ ಹಂತಗಳಲ್ಲಿ ಪರಸ್ಪರ ಪ್ರಭಾವಕ್ಕೆ ಒಳಗಾಗಿರುವುದು ಖಚಿತ. ಕಥಾ ಶರೀರವನ್ನೆ ಪಡೆಯದಿದ್ದರೂ, ಕಥನಗಳ ಆಶಯಗಳು ಪರಂಪರೆಯಿಂದ ಪರಂಪರೆಗೆ ಹೋಗಿರುವುದು ಸ್ಪಷ್ಟ. ಮಾನವಶಾಸ್ತ್ರಜ್ಞರು ಹೇಳುವಂತೆ, ಶುದ್ಧ ಸಂಸ್ಕೃತಿ ಎಂಬುದು ಇಲ್ಲ. ಕೊಳು ಕೊಡುಗೆ ಸಾಮಾನ್ಯ. ಇದಕ್ಕೆ ಜೈನ ಕಥಾಪರಂಪರೆ ಕೂಡ ಹೊರತಾಗಿಲ್ಲ. ಜೈನ ಕಥಾಪರಂಪರೆ ತನಗಿಂತ ಹಿಂದಿನ ವೈದಿಕ ಪರಂಪರೆಯಿಂದ ಕಥೆಗಳನ್ನು ಸ್ವೀಕರಿಸುವುದು ಸಹಜವಾಗಿಯೇ ಕಂಡುಬರುತ್ತದೆ. ಇಲ್ಲಿಯೂ ಒಂದು ತತ್ತ್ವವನ್ನು ಅನುಸರಿಸಿರುವಂತೆ ತೋರುವುದು. ಅದರ ಪ್ರಕಾರ ಮೇಲಿನ ಅಥವಾ ವಿಕಾಸಹೊಂದಿದ ಸಂಸ್ಕೃತಿಯಿಂದ ತಳ ಅಥವಾ ವಿಕಾಸ ಹೊಂದಿರದ ಸಂಸ್ಕೃತಿಗಳು ಕಥೆಗಳನ್ನು ಸ್ವೀಕರಿಸಿರುವ ಸಾಧ್ಯತೆಯೇ ಹೆಚ್ಚು. ಆದರೆ ವ್ಯತಿರಿಕ್ತ ಸಾಧ್ಯತೆಗಳನ್ನೂ ಅಲ್ಲಗಳೆಯುವಂತಿಲ್ಲ. ಏಕೆಂದರೆ ಈ ಎಲ್ಲ ಕಥಾಪರಂಪರೆಯ ಹಿನ್ನೆಲೆಯಲ್ಲಿ ಜನಪದ ಕಥಾಪರಂಪರೆಯೊಂದು ಇರುವುದು. ಕಥಾಪರಂಪರೆಗಳು ಅಡ್ಡಹಾಯುವ ಲಕ್ಷಣವನ್ನೆ ಈ ಎಲ್ಲ ಮಾತುಗಳೂ ಹೇಳುತ್ತಿರುವಂತೆ ತೋರುತ್ತಿವೆ. ಜೈನಕಥಾಪರಂಪರೆ ಸಹಜವಾಗಿಯೇ ಅವೈದಿಕ ಮೂಲದ್ದು; ಆದರೆ ಮುಂದಿನ ದಾರಿಯಲ್ಲಿ ತನ್ನ ಒತ್ತಿಗೆ ಬಂದ ಸಂಸ್ಕೃತಿಯಿಂದ ಕಥೆಗಳನ್ನು ಸ್ವೀಕರಿಸಿರುವುದರಲ್ಲಿ ಆಶ್ಚರ್ಯವಿಲ್ಲ. ಈಗ ದೇವಚಂದ್ರನ 'ರಾಜಾವಳಿಕಥೆ'ಯನ್ನು ನೋಡಿದರೆ ಮತಧರ್ಮದ ವಿಷಯದಲ್ಲಿ ಜೈನಧರ್ಮಕ್ಕೆ ಬದ್ಧನಾಗಿದ್ದರೂ, ಕಥಾ ಸ್ವೀಕರಣ ವಿಷಯದಲ್ಲಿ ಈ ಬದ್ಧತೆ ಇರುವಂತೆ ತೋರುವುದಿಲ್ಲ. ಈ ಕೃತಿಯಲ್ಲಿ ಕಂಡುಬರುವ ಈ ಕಥಾ ಮಿಶ್ರ ಸ್ವರೂಪಕ್ಕೆ ದೇವಚಂದ್ರನೇ ಕಾರಣ ಎನ್ನುವಂತಿಲ್ಲ; ಅವನ ಹಿಂದಿನ ಜೈನ ಲೇಖಕರೂ ಕಾಲವೂ ಕಾರಣವಾಗಿರುವುದರಲ್ಲಿ ಸಂದೇಹವಿಲ್ಲ.

ಹಾಗೆಯೇ ಪ್ರಭುತ್ವಪರ ಮತ್ತು ಪುರೋಹಿತಶಾಹಿಪರ ಕಥಾಪರಂಪರೆಗಳು ಕೆಲಸ ಮಾಡುವುದಿದೆ. ಇವು ಯಾವೊತ್ತೂ ಪರಸ್ಪರ ಪೂರಕವಾದವುಗಳು ಮತ್ತು ಅವಲಂಬಿತವಾದವುಗಳು. ಪ್ರಭುವಿಗೆ ಪುರೋಹಿತಶಾಹಿಯ ಬುದ್ಧಿ, ಪುರೋಹಿತಶಾಹಿಗೆ ಪ್ರಭುವಿನ ಭುಜ-ಅಂದರೆ ರಕ್ಷಣೆ-ಕ್ಷೇಮಕಾತರ ಸ್ಥಿತಿಯಲ್ಲಿ ಕಾರ್ಯಪ್ರವೃತ್ತವಾಗಿರುವುದನ್ನು ನೋಡುತ್ತೇವೆ. ಈ ಎರಡೂ ಪ್ರವೃತ್ತಿಗಳಿಗೆ ವಿರುದ್ಧವಾದ ಅಲೆಯೊಂದು ಕಥಾಪರಂಪರೆಯನ್ನು ರೂಪಿಸಿರಬಹುದಾದರೂ, ಅದು ಗೌಣವಲ್ಲದಿದ್ದರೂ ಪ್ರಧಾನವಾಗಿರುವಂತೆ ತೋರುವುದಿಲ್ಲ. ಜನಪದ ಕಥಾ ಪರಂಪರೆಯನ್ನು ಇಲ್ಲಿ ಮಧ್ಯೆ ಪ್ರವೇಶಿಸುವ ಅಗತ್ಯವಿಲ್ಲ. ದೇವಚಂದ್ರನ 'ರಾಜಾವಳಿ ಕಥೆ'ಯಲ್ಲಿ ಪ್ರಭುತ್ವ ಮತ್ತು ಪುರೋಹಿತಶಾಹಿ ಕಥಾಪರಂಪರೆಗಳ ಅಭಿವ್ಯಕ್ತಿ ಇರುವಂತೆ, ಮೂರನೆಯದೊಂದನ್ನು ಸಮರ್ಥವಾಗಿ ರೂಪಿಸುವ ಶಕ್ತಿ ದೇವಚಂದ್ರನಿಗೆ

ಇದ್ದಂತಿಲ್ಲ. ಈ ಮೂರನೆಯದು ಯಾವಾಗಲೂ ಲೌಕಿಕ - ಅಂದರೆ ಸೆಕ್ಯುಲರ್ - ಆಗಿರುತ್ತದೆ. ಪ್ರಸ್ತುತ ಕೃತಿಯಲ್ಲಿ ರಾಜ ಮತ್ತು ಆಚಾರ್ಯ ಸಂಸ್ಕೃತಿಗಳು ಪರಸ್ಪರ ತೆಕ್ಕೆ ಬೀಳುವಂತೆ ಕಥೆಗಳು ತಮ್ಮ ವಸ್ತುವನ್ನೂ ಪಾತ್ರಗಳನ್ನೂ ನಡೆಸಿವೆ. ದೇವಚಂದ್ರ ಕಥಾಸಾಮಗ್ರಿಯನ್ನು ಯಾವ ಮೂಲದಿಂದಲೇ ತರಲಿ, ಎಲ್ಲವನ್ನೂ ಜೈನಧರ್ಮದ ಒಡಲಿನೊಳಗೆ ಸಮಾವೇಶಗೊಳ್ಳುವಂತೆ ಮಾಡುತ್ತಾನೆ. ಕವಿಯ ಸಾಮಾಜಿಕ ಸಂವೇದನೆ ಧಾರ್ಮಿಕ ಸಂವೇದನೆಯಲ್ಲದೆ ಬೇರಾಗಿಲ್ಲ.

ಕನ್ನಡದಲ್ಲಿ ಗದ್ಯ ಕೃತಿಗಳು ವಿರಳವಾಗಿರುವುದರ ಹಿನ್ನೆಲೆಯಲ್ಲಿ, ದೇವಚಂದ್ರನ 'ರಾಜಾವಳಿ ಕಥೆ'ಗೆ ವಿಶೇಷ ಮನ್ನಣೆ ಪ್ರಾಪ್ತವಾಗಿದೆ. ಆದರೆ 'ವಡ್ಡಾರಾಧನೆ'ಯ ಕಥನ ಕೌಶಲ ಮತ್ತು ಸಂಭಾಷಣಾ ಚಾತುರ್ಯವಾಗಲಿ, ಹರಿಹರನ ಗದ್ಯವೈಭವ ವೈವಿಧ್ಯವಾಗಲಿ ಇದಕ್ಕಿರುವಂತೆ ತೋರುವುದಿಲ್ಲ. ಸಂಸ್ಕೃತದ ಅನಗತ್ಯ ಬಳಕೆ ಮತ್ತು ಮತಧರ್ಮದ ಅತಿಯಾದ ಪ್ರವೇಶ ಕ್ಲೇಶಗಳು ಇದಕ್ಕೆ ಬಹುಮುಖ್ಯ ಕಾರಣಗಳಾಗಿವೆ. ಹಾಗೆಂದ ಮಾತ್ರಕ್ಕೆ ಉಲ್ಲೇಖಿತ ಕಥೆಗಳಲ್ಲಿ ಸೊಗಸು ಮತ್ತು ಮಂಡಿತ ಮಾಹಿತಿಗಳಲ್ಲಿ ವಿಚಾರಸತ್ಯ ಇಲ್ಲವೆಂದು ಅರ್ಥಮಾಡಬೇಕಾಗಿಲ್ಲ. ಸಂಗ್ರಹಿತ ಸಾಮಗ್ರಿಯನ್ನೆಲ್ಲ ಸಂಬಂಧ ಪಡಲಿ ಪಡದಿರಲಿ, ತರ್ಕಬದ್ಧವಾಗಿರಲಿ ಇಲ್ಲದಿರಲಿ ಹೇಳಿಬಿಡಬೇಕೆಂಬ ಕಾತರವಷ್ಟೆ ಕೃತಿಯದು. ಇದರಿಂದ ಕೃತಿ ಅನೇಕಕಡೆ ಸಂವಹನಕ್ಕೆ ಬರುವುದು ಕಷ್ಟವಾಗಿದೆ. ನಮ್ಮ ತಿಳಿವಳಿಕೆಗೆ ಕೃತಿ ಹೆಚ್ಚಿನದೇನನ್ನೂ ಸೇರಿಸುವುದಿಲ್ಲ; ಇತಿಹಾಸಕ್ಕೆ ಸಂಬಂಧಿಸಿದ ವಿಷಯಗಳು ಸಹ ಹಾಗೆಯೇ. ಎಷ್ಟೋ ವೇಳೆ ಆಧುನಿಕ ಓದಿಗೆ ಈ ಕೃತಿ ಅಗತ್ಯವಿದೆಯೆ ಎಂಬ ಪ್ರಶ್ನೆ ಕೂಡ ಕಾಡಬಹುದು. ಒಂದು ಜಡ್ಡುಗಟ್ಟಿದ ವ್ಯವಸ್ಥೆಯನ್ನು ಯಾವುದೇ ವಿರೋಧವಿಲ್ಲದೆ ಇಡುವುದನ್ನಷ್ಟೆ ಕೃತಿಯಲ್ಲಿ ಕಾಣುತ್ತೇವೆ. ದೇವಚಂದ್ರನ ಉದ್ದೇಶವಾದರೂ ಏನು? ಕೃತಿಯ ಮೂಲಕ ಯಾವ ಸ್ವರೂಪದ ಸಂದೇಶವನ್ನು ನೀಡುತ್ತಿದ್ದಾನೆ? ಎಂಬುದು ಸ್ಪಷ್ಟವಾಗುವುದಿಲ್ಲ. ಇಷ್ಟಾದರೂ ಕವಿ ಈ ಕಥೆಯನ್ನು ಕೇಳುವುದರಿಂದ "ಆಯುಂ ಶ್ರೀಯುಂ ಸಂತಾನ ವೃದ್ಧಿ ಸಿದ್ಧಿಯನಂತ ಸುಖಂ ತಪ್ಪದಪ್ಪುದು" (ಪು. ೩೬೮) ಎಂದು ಹೇಳುವುದು ಹಾಸ್ಯಾಸ್ಪದವೆನಿಸುವುದು; ಅಷ್ಟೇ ಅಲ್ಲ 'ಹುಸಿ ಸಂಸ್ಕೃತಿ'ಯೊಂದನ್ನು ಹುಟ್ಟುಹಾಕಿ ಓದುಗರ ಮೇಲೆ ಹೇರುತ್ತಿದ್ದಾನೆಂದೂ ಭಾಸವಾಗುವುದು. ಸಾಮಾಜಿಕ ಜವಾಬ್ದಾರಿ ಮತ್ತು ಶೋಧ ದೃಷ್ಟಿಗಳು ಇಲ್ಲದಿದ್ದಾಗ ಕವಿ ಕೈಗೊಳ್ಳುವುದು ಇಂಥದನ್ನೇ. ಆದ್ದರಿಂದ ಇದು ಜ್ಞಾನದ ಹಿಂಮುಖ ಚಲನೆ ಎಂದು ಹೇಳಬೇಕಾಗುತ್ತದೆ.

'ರಾಜಾವಳಿಕಥೆ' ಒಂದು ಪಾಂಡಿತ್ಯಪೂರ್ಣ ಕೃತಿ; ಇದಕ್ಕೆ ಕಾರಣವಾಗಿರುವುದು ಕನ್ನಡವಲ್ಲ, ಕನ್ನಡ-ಸಂಸ್ಕೃತ ಮಿಶ್ರಣ. ಇಷ್ಟಾದರೂ ಕವಿ ದೇವಚಂದ್ರ ತನ್ನ ಕೃತಿಯನ್ನು ಶುದ್ಧ ಕನ್ನಡ ಅಥವಾ ಅಚ್ಚಗನ್ನಡದಲ್ಲಿ ಬರೆದಿದ್ದೇನೆ ಎನ್ನುವುದು ಪೂರ್ಣ ಸತ್ಯವಲ್ಲ; ಹಳಗನ್ನಡ ವಿಜೃಂಭಿಸಿರುವುದು ನಿಜ, 'ಪೊಸತು' ಎನ್ನುವುದಕ್ಕೆ ಅರ್ಥವಿಲ್ಲ. ಅವನೇ ಹೇಳುವಂತೆ 'ಮಿಶ್ರ' ಶೈಲಿ ರೂಪಿತವಾಗಿರುವುದು ಹಳ್ಳಗನ್ನಡ, ಬೆಳುಗನ್ನಡ, ಒಳುಗನ್ನಡ, ಅಚ್ಚಗನ್ನಡ ಮತ್ತು ತೆಳುಗನ್ನಡ (ಪು. ೩೬೮)ಗಳಿಂದಲ್ಲ; ಒಂದೇ ಮಾತನ್ನು ಬೇರೆ ಬೇರೆ ರೀತಿಯಲ್ಲಿ

ಹೇಳಿದಂತಾಗಿದೆ ಇದು. ನಿಜವಾಗಿಯೂ 'ಮಿಶ್ರಣ' ಸಾಧಿತವಾಗಿರುವುದು ಕನ್ನಡ ಮತ್ತು ಸಂಸ್ಕೃತದಿಂದ; ಆದರೆ ಕವಿ ಸಂಸ್ಕೃತ ಪ್ರಮಾಣವನ್ನು ಕುರಿತು ಪ್ರಸ್ತಾಪಿಸದಿರುವುದು ಆಶ್ಚರ್ಯವೆನಿಸುವುದು.

ದೇವಚಂದ್ರನ 'ರಾಜಾವಳಿ ಕಥೆ' ಒಂದು ಸಂಕೀರ್ಣ ಕೃತಿ; ಇದು ವಿಷಯದ ಸಂಕೀರ್ಣ ಮಾತ್ರವಲ್ಲ, ಭಾಷಾಸಂಕೀರ್ಣ ಕೂಡ. ಎಲ್ಲೆಲ್ಲಿಂದಲೊ ಕಥಾಂಶಗಳನ್ನೂ ವಿಚಾರಾಂಶಗಳನ್ನೂ ತಂದು ಸೇರಿಸಿ ಕವಿ 'ವಸ್ತುಕ್ಲೇಶ'ವನ್ನು ಉಂಟುಮಾಡಿದ್ದಾನೆ; ಕನ್ನಡದೊಡನೆ ಮಿತಿ ಮೀರಿದ ಸಂಸ್ಕೃತ ಬಳಕೆಯಿಂದ 'ಭಾಷಾಕ್ಲೇಶ'ವನ್ನು ಉಂಟುಮಾಡಿದ್ದಾನೆ. ಕಥಾವಿಚಾರಗಳು ಬಹುತೇಕ ಕಚ್ಚಾಸಾಮಗ್ರಿ ರೂಪದಲ್ಲಿದ್ದು, ಓರಣಗೊಳಿಸುವ ಪರಿಣತ ಪ್ರಜ್ಞೆ ಇಲ್ಲದಿರುವುದು ವಸ್ತುಕ್ಲೇಶಕ್ಕೆ ಕಾರಣವಾಗಿದೆ. ಭಾಷಾಕ್ಲೇಶಕ್ಕೆ ಬಂದರೆ, ಅನೇಕ ಕಡೆ ಸಂಸ್ಕೃತ ಗದ್ಯಗಳೂ ಶ್ಲೋಕಗಳೂ ಬೀಡುಬಿಟ್ಟಿವೆ; ಉದಾಹೃತ ಈ ರಚನೆಗಳಲ್ಲಿ ಹಲವು ವಿಭಿನ್ನ ಮೂಲದಿಂದ ಆಯ್ದವುಗಳು, ಕೆಲವು ಕವಿಯಿಂದಲೇ ರಚಿತವಾದವು. ಸಂಸ್ಕೃತ ಪದ್ಯಗಳು ಒತ್ತಟ್ಟಿಗಿರಲಿ, ಗದ್ಯವನ್ನು ಸಂಸ್ಕೃತದಲ್ಲಿ ರಚಿಸಿರುವುದು ಕವಿಯ ಒಂದು ವೈಚಿತ್ರ್ಯ. ಸಂಸ್ಕೃತದ ಈ ಉದಾಹರಣೆ ಮತ್ತು ಬರೆವಣಿಗೆಗಳನ್ನು ನೋಡಿದರೆ, ಸಂಸ್ಕೃತದಲ್ಲಿ ಸ್ವತಂತ್ರವಾಗಿ ಕೃತಿಗಳನ್ನು ರಚಿಸುವಷ್ಟು ಕವಿ ಸಾಮರ್ಥ್ಯ ಹೊಂದಿರುವುದು ಸ್ಪಷ್ಟವಾಗುತ್ತದೆ. ದೇವಚಂದ್ರ ರಾಜಾವಳಿ ಕಥೆಯನ್ನು ಸಂಸ್ಕೃತದಲ್ಲಿಯೇ ರಚಿಸಬಹುದಾಗಿತ್ತು, ಸಂಸ್ಕೃತಮಯ ಕನ್ನಡ ರಚನೆಯನ್ನು ಮಾಡಿದ್ದಾದರೂ ಏಕೆ ಎಂಬ ಪ್ರಶ್ನೆ ಕಾಡುವುದು ಸಹಜ. ಇಡೀ ಕೃತಿಯಲ್ಲಿ ಕಾಲುಭಾಗದಷ್ಟು ಸಂಸ್ಕೃತ ಶ್ಲೋಕಗಳೂ ಭಿನ್ನರಚನೆಗಳೂ ಇರುವುದು ಇದಕ್ಕೆ ಕಾರಣ. ಇಷ್ಟಾದರೂ ಇದೊಂದು 'ಅಚ್ಚಗನ್ನಡಕೃತಿ' ಎನ್ನುವುದು ಕವಿಯ ಉದ್ಘೋಷ; ಇದಕ್ಕೆ ಸಾಕಷ್ಟು ಮಿತಿ ಇದೆ ಎಂಬುದು ಸ್ಪಷ್ಟ.

ಕೃತಜ್ಞತೆಗಳು

'ಪ್ರಾಚೀನ ಗದ್ಯಸಾಹಿತ್ಯ ಮಾಲೆ'ಯಲ್ಲಿ ದೇವಚಂದ್ರನ 'ರಾಜಾವಳಿ ಕಥೆ'ಯನ್ನು ಸಂಪಾದಿಸಿಕೊಡಲು ನನಗೆ ವಹಿಸಿಕೊಡುವುದರ ಮೂಲಕ, ಈ ಯೋಜನೆಯಲ್ಲಿ ನಾನು ಭಾಗವಹಿಸುವಂತೆ ಅವಕಾಶ ಕಲ್ಪಿಸಿಕೊಟ್ಟ, ಗೌರವ ಸಂಪಾದಕರಾದ ಡಾ. ಎಂ. ಎಂ. ಕಲಬುರ್ಗಿಯವರಿಗೂ, ಪ್ರಧಾನಸಂಪಾದಕರಾದ ಡಾ. ಸಿದ್ಧಲಿಂಗಯ್ಯನವರಿಗೂ, ಆಡಳಿತಾಧಿಕಾರಿಗಳಾದ ಶ್ರೀ ಬಿ. ಎಚ್. ಮಲ್ಲಿಕಾರ್ಜುನ ಅವರಿಗೂ ನಾನು ಕೃತಜ್ಞನಾಗಿದ್ದೇನೆ. ಡಿ. ಟಿ. ಪಿ. ಮಾಡಿಕೊಟ್ಟ ಮೈಸೂರಿನ ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್‌ನ ಶ್ರೀ ಡಿ.ಎನ್. ಲೋಕಪ್ಪನವರಿಗೆ ನಾನು ಆಭಾರಿಯಾಗಿದ್ದೇನೆ.

ಪರಿವಿಡಿ

ರಾಜಾವಳಿ ಕಥೆ

ಪ್ರಥಮಾಧಿಕಾರಂ

ಶ್ರೀಮತ್ ಸಮಸ್ತ ಭುವನಶಿ
ರೋಮಣಿ ಸದ್ವಿನಯ ವಿನಮಿತಾಖಿಲಜನಚಿಂ
ತಾಮಣಿಯೆನಿಪ್ಪ ಪರಮ
ಸ್ವಾಮಿಯನಭಿನಂದಿಸಿ ಪಡೆವೆ ಶಾಶ್ವತ ಸುಖಮಂ

ಇಂತು ಇಷ್ಟದೇವತಾನಮಸ್ಕಾರಮಂ ಮಾಡಿ ಭಗವದರ್ಹತ್ ಸರ್ವಜ್ಞಶಾಸನ ಸಮುದಿತ ಪ್ರಥಮಾನುಯೋಗ ಕಥಾಸಾರಾಮೃತ ಪಾರಾವಾರದ ಕಥಾವತಾರದೊಳೊಂದು ಬಿಂದುಮಂ ತೋರ್ಪಂತೆ ಸ್ವಲ್ಪವಾಗಿ ಗುರುತು ಮಾತ್ರಮಂ ತೋರುವೆನಿದಂ ಮಕರಂದಗಂಧಮಂ ಮಾರುತಂ ಪ್ರಸರಿಪಂತೆ ಸತ್ಪುರುಷರೀ ಕಥೆಯಂ ಶಬ್ದದೋಷಮಂ ತಿದ್ದಿ ಬುಧರ್ಗರಿವಂತು ಪೇಳ್ವುದೆಂದವರಂ ನುತಿಸಿ ಹೊಸಗನ್ನಡ ವಾಕ್ಯಂಗಳಿಂ ವಿರಚಿಸುವೆಂ

ಶ್ರೀ ಸುಜನಸ್ತುತರಖಿಳ ಕ
ಳಾಸದನರ್ ಮೋಹತಿಮಿರಮಂ ಕಳೆದು ಕರಂ
ಭಾಸುರವಿಚಾರದಕ್ಷರ್
ವೈಷಮ್ಯಮನುಳಿದು ಕೇಳ್ವುದೀ ಸತ್ಕೃತಿಯಂ

ಆ ಕೃತಿಯಂ ವಿದ್ಯಾವಿಶಾರದರ್ ವಿಚಾರದಕ್ಷರ್ ವಿಚಾರಸಂಪನ್ನರುಮೀ ಭರತದಾರ್ಯಾಖಂಡದ ಪ್ರಪಂಚುಮನಾದಿಯಿಂ ಪೇಳ್ವುದೆನೆ ರಾಜಾವಲೀ ಕಥಾವತಾರ ಮೆಂಬಭಿಧಾನಮನಿಟ್ಟು ಪೇಳ್ವೆನೆಂತೆಂದೊಡೆ ಲೋಕಂ ಸ್ವಾತ್ಮಪ್ರತಿಷ್ಠಿತಮುಮನಾದಿ ನಿಧನಮುಮಕೃತ್ರಿಮಮುಂ ಪೂರ್ವಾಪರ ಸಪ್ತೈಕ ಪಂಚೈಕರಜ್ಜು ವಿಸ್ತಾರಮುಂ ದಕ್ಷಿಣೋತ್ತರ ಗತ ಸಪ್ತ ರಜ್ಜ್ವಾಯಾಮಮುಂ ತ್ರಸನಾಳಿಕಾ ಗರ್ಭೀಕೃತಮುಮನಂತಾನಂತಾಕಾಶ ಮಧ್ಯಸ್ಥಿತ ವಾಯುತ್ರಯ ಪರಿವೇಷ್ಟಿತಮುಮಾಗಿಪ್ಪುದು ಷಡ್ದ್ರವ್ಯಭರಿತಮಪ್ಪೀ ಲೋಕಮಧೋ ಮಧ್ಯೋರ್ಧ್ವಭೇದಂಗಳಿಂ ತ್ರಿವಿಧಂ ಅಧೋಲೋಕದೊಳೇಳು ರಜ್ಜೂರ್ಧ್ವದೊಳೇಳು ನರಕಭೂಮಿಗಳಿಪ್ಪುವು. ಅಲ್ಲಿಯನೇಕ ಪಾಪಿಗಳ್ ಪುಟ್ಟಿ ಸಮುದ್ರೋಪಮಕಾಲಂಬರಂ ತೀವ್ರ ದುಃಖಂಗಳೊಳ್ ನವೆಯುತ್ತಿಪ್ಪರು. ಅಲ್ಲಿಂ ಮೇಲೆ ಮಧ್ಯಮಲೋಕಂ ಜಂಬೂದ್ವೀಪಾದ್ಯಸಂಖ್ಯಾತ ದ್ವೀಪಂಗಳುಂ ಮಹಾಲವಣಾದ್ಯಸಂಖ್ಯಾತ ಸಮುದ್ರಮುಂ ಮೇರುವಂ ಬಳಸಿ ಲಕ್ಷಯೋಜನಂ ಮೊದಲ್ಗೊಂಡು ದ್ವಿಗುಣ ದ್ವಿಗುಣದೊಳ್ ವಲಯಾಕಾರದೊಳ್ ಸುತ್ತಿ ಸ್ವಯಂಭೂರಮಣಸಮುದ್ರಂ ಕಡೆಯಾದೊಂದು ರಜ್ಜುವಿನಗಲಂಬರಮಿಪ್ಪುವು. ಇಲ್ಲಿ ನರ ತಿರ್ಯಂಚ ಭವನ ವ್ಯಂತರ ಜ್ಯೋತಿಷ್ಕರು ಪ್ರತಿಷ್ಠಾನಂ

ಮೇರುಶ್ಶೈಲಂ ಭೂಮಿಯಿಂ ಕೆಳಗೆ ಸಾವಿರ ಯೋಜನದಿ ವಜ್ರಭೂಮಿಯಂ ಮೆಟ್ಟಿ ಮೇಲೆ ತೊಂಬತ್ತೊಂಬತ್ತು ಸಾವಿರ ಯೋಜನದಿ ಸ್ವರ್ಗಮಂ ಮುಟ್ಟಿ ಅನೇಕ ದೇವತೆಗಳ್ಗೆ ಕ್ರೀಡಾಸ್ಥಾನಮಾಗಿಪ್ಪುದು. ಅಲ್ಲಿಂ ಮೇಲೆ ಸ್ವರ್ಗಂಗಳೆರಡು ಸಾಲಾಗಿಪ್ಪುವು. ಅಲ್ಲಿಂಮೇಲೆ ಕಲ್ಪಾತೀತರಹಮಿಂದ್ರಲೋಕಮಿಹುದು. ಮೇಲೆ ಸರ್ವಾರ್ಥಸಿದ್ಧಿ. ಅಲ್ಲಿಂ ಮೇಲೆ ಲೋಕದ ತುದಿಯೊಳ್ ಶಿವಲೋಕಮಿಪ್ಪುದು. ಅಲ್ಲಿ ನೆಲಸಿಪ್ಪ ಸಾಕಾರ ನಿರಾಕಾರರಾಗಿ ಜ್ಞಾನದರ್ಶನಮೆ ರೂಪಾಗಿರ್ಪರು. ಇದು ಲೋಕ ಸ್ವರೂಪಂ.

ಈ ಮಧ್ಯಮಲೋಕದ ನಡುವಣ ಜಂಬೂದ್ವೀಪದೊಳ್ ಮಹಾಮೇರುವಿನ ಪೂರ್ವಪಶ್ಚಿಮದೊಳ್ ವಿದೇಹಕ್ಷೇತ್ರಂಗಳುಂ ದಕ್ಷಿಣೋತ್ತರಂಗಳೊಳ್ ಭೋಗ ಭೂಮಿಗಳುಂ ಅವರ ಕಡೆಯೊಳ್ ಭರತೈರಾವತಂಗಳುಮಿಪ್ಪುವು. ಈ ಭರತಕ್ಷೇತ್ರಂ ಮಹಾಯೋಜನದೊಳೈನೂರಿಪ್ಪತ್ತಾರು ಯೋಜನ, ಪತ್ತೊಂಬತ್ತು ಭಾಗದೊಳಾರು ಭಾಗಗೂಡಿದ ವಿಸ್ತಾರಮಪ್ಪುದದರ ಮಧ್ಯದೊಳ್ ರಜತಮಯ ತ್ರಿಮೇಖಲಾಲಂಕೃತ ವಿಜಯಾರ್ಧಕ್ಷೇತ್ರಮುಳ್ಳ ಪರ್ವತಮಿರ್ಪುದದರ ಉಭಯ ಪಾರ್ಶ್ವದೊಳ್ ನೂರಹತ್ತು ಪಟ್ಟಣಂಗಳಲ್ಲಿ ವಿದ್ಯಾಧರರುದ್ಭವಿಸಿ ಸಾಧಿತವಿದ್ಯೆ ಜಾತಿವಿದ್ಯೆ ಕುಲವಿದ್ಯೆ ಎಂಬೀ ತ್ರಿವಿಧ ವಿದ್ಯೆಯಿಂ ವಿಮಾನಾರೂಢರಾಗಿಯಾಕಾಶದೊಳ್ ಚರಿಸುವರು.

ಹಿಮವತ್ಪರ್ವತದ ಮೇಗಣ ಪದ್ಮಸರೋವರದೊಳ್ ಪುಟ್ಟಿ ಪೊರಮಟ್ಟು ವಿಜಯಾರ್ಧಪರ್ವತದ ದೇವಖಾತಂಗಳಿಂ ಪೊರಗೆ ಬಂದು ಪ್ರತ್ಯೇಕಂ ಪದಿನಾಲ್ಕು ಸಾಸಿರ ಕ್ಷುಲ್ಲಕ ನದಿಗಳಿಂ ಪರಿವೃತಮಾಗಿ ಗಂಗಾಸಿಂಧುವೆಂಬೆರಡು ನದಿಗಳು ಕೈಲಾಸ ಗಿರಿಯಿಂ ದಕ್ಷಿಣಕ್ಕೆ ಕೆಲವೆಡೆ ಬಂದು ಪೂರ್ವಾಪರಕ್ಕೈದಿ ಮಹಾಲವಣಸಮುದ್ರಮಂ ಪೊಕ್ಕಿಪ್ಪುವು.

ವಿದೇಹಂಗಳಿಗೆ ಕಾಲವ್ಯವಸ್ಥೆಯಿಲ್ಲ, ನಿತ್ಯದಿಂದೇಕಪ್ರಕಾರಮಾಗಿಪ್ಪುವು. ಈ ಪಂಚ ಭರತೈರಾವತಂಗಳಿಗೆ ಕಾಲವ್ಯವಸ್ಥೆಯಿಂ ಪೆಚ್ಚುತ್ತುಂ ಕುಂದುತ್ತುಂ ಶುಕ್ಲ ಕೃಷ್ಣಪಕ್ಷದಂತುತ್ಸರ್ಪಿಣಿಯುಮವಸರ್ಪಿಣಿಯುಮೆಂಬೆರಡು ಕಾಲಂ ಪ್ರತ್ಯೇಕಂ ದಶಕೋಟಿ ಕೋಟಿ ಸಾಗರೋಪಮಸ್ಥಿತಿಯುಳ್ಳೀ ಕಾಲದ್ವಯಂಗಳಸಂಖ್ಯಾತಮಾದೊಡಾಗಳೊಂದು ಹುಂಡಮೆಂಬುದು. ಆಗಳನೇಕ ದೋಷಂಗಳು ಪುಟ್ಟುವುವೀ ಸ್ವಭಾವದಿಂ ರಾಟವಾಳದಂತೆ ತಿರುಗುತ್ತಿಪ್ಪ ಈ ಹುಂಡಾವಸರ್ಪಿಣಿಕಾಲಂ ಪತ್ತು ಕೋಟಿ ಕೋಟಿ ಸಾಗರೋಪಮಂಗಳೊಂಭತ್ತು ಕೋಟಿ ಕೋಟಿ ಸಾಗರಂ ಉತ್ತಮ ಮಧ್ಯಮ ಜಘನ್ಯಮೆಂಬ ಭೋಗಭೂಮಿಗೆ ಸಲ್ವುದು. ಉಳಿದೊಂದು ಕೋಟಿ ಕೋಟಿ ಸಾಗರಂ ಕರ್ಮಭೂಮಿಯಾಗಿ ವರ್ತಿಸುವುದೆಂದೊಡೆ

ಕಡೆಯ ಭೋಗಭೂಮಿ ಜರಾಯುಷ್ಯ ಒಂದು ಪಲ್ಯಮದರಷ್ಟಾಂಶದ ಕಡೆಯೊಂದಂಶದೊಳು ಪದಿನಾಲ್ಕು ಮನುಗಳನುಕ್ರಮದಿಂ ಪುಟ್ಟಿ ಅವಧಿಜ್ಞಾನದಿಂ ಕರ್ಮಭೂಮಿಸ್ಥಿತಿಗಳೆಲ್ಲಮಂ ಯಥಾಸ್ವರೂಪಮಂ ಕ್ರಮದಿಂ ತಿಳಿಯಪೇಳ್ದರ್ ಅನ್ನೆಗಮಾದಿಬ್ರಹ್ಮ ವಿದೇಹಕ್ಷೇತ್ರದೊಳ್ ತಪಂಗೆಯ್ದು ಪದಿನಾರು ಶುಭಭಾವನೆಗಳಂ ಭಾವಿಸಿ

ಏಕಾದಶಾಂಗಧರನಾರೂಪಂ ವಿಸರ್ಜಿಸಿ ಸರ್ವಾರ್ಥಸಿದ್ಧಿಯೊಳಹಮಿಂದ್ರನಾಗಿ ಮೂವತ್ತುಮೂರು ಸಮುದ್ರೋಪಮಕಾಲಂ ದಿವ್ಯಸುಖಮನನುಭವಿಸಿ ಬಂದು ತ್ರಿಜ್ಞಾನಸಮನ್ವಿತಂ ಗರ್ಭಾವತರಣಪೂರ್ವಕಮುದಿಸಿ ಜನ್ಮಾಭಿಷೇಕಮಾಗೆ ಸಹಜಾತಿಶಯಂಗಳು ಪತ್ತುಂ ವಿರಾಜಿಸೆ ಸುರರ್ ಸೇವೆಯಂ ಮಾಡುತ್ತಿರಲಾ ಕಾಲದೊಳ್ ಕಲ್ಪವೃಕ್ಷಂಗಳುಮಲ್ಪಫಲದಂಗಳಾಗೆ ಪ್ರಜೆಗಳೆಲ್ಲಂ ಕ್ಷುಧಾತೃಷಾದಿಗಳಿಂ ಸಂತೃಪ್ತರಾಗಿ ನಾಭಿರಾಜಂಗೆ ಪೇಳಲಾದಿಬ್ರಹ್ಮನಲ್ಲಿಗೆ ಬಂದು ನಮ್ರಮಸ್ತಕರಾಗಿ ಬೆಸಗೊಂಬುದುಂ ಆದಿಪರಮೇಷ್ಠಿಯು ಜ್ಞಾನದಿಂ ವಿದೇಹಸ್ಥಿತಿಯನರಿದುಂ ಆ ಪ್ರಜಾನಿಕರುಂಬದೊಳೆಲ್ಲರ ಮನೋವಿಚಾರಂಗಳರಿದುಂ ಉತ್ತಮ ಮಧ್ಯಮ ಜಘನ್ಯಮೆಂದು ಮೂರು ಭಾಗಮಾಗಿರಿಸೆಯವರ್ ತಮ್ಮ ಜೀವನೋಪಾಯಮಾವುದೆಂದು ಬೆಸಗೊಳ್ವುದುಂ ಅಸಿಯುಂ ಮಸಿಯುಂ ಕೃಷಿಯುಂ ವಾಣಿಜ್ಯಮುಂ ಪಾಶುಪಾಲ್ಯಮುಂ ಶಿಲ್ಪಮುಮೆಂದೀ ಷಟ್ಕರ್ಮಂಗಳಂ ಯಥಾಸ್ಥಿತಿಯಿಂದುಪದೇಶಂಗೆಯ್ದುವರವರ ಕಾರ್ಯಗಳನೆಲ್ಲಂ ಸವಿಸ್ತರಂ ಪೇಳಲಾಗಳ್ ದೇವೇಂದ್ರಂ ಬಂದು ಕೌಶಲಾದಿ ಎಪ್ಪತ್ತಾರು ದೇಶಂಗಳಂ ಸಾಕೇತಾದಿ ರಾಜಧಾನಿಗಳಂ ನಿರ್ಮಿಸಿ ನಾಭಿರಾಜಂ ಮೊದಲಾದ ಮಹಾಪುರುಷರಿಂಗೊತ್ತಾಗೆ ನಿಯಮಿಸಿ ಪೋಗಲಾದಿಪಿತಾಮಹಂ ತನ್ನ ನೂರ್ವರ್ ಕುಮಾರರ್ಗಂ ಗಣಿತ ವ್ಯಾಕರಣಂ ಮೊದಲಾಗೆ ಅರುವತ್ತುನಾಲ್ಕು ವಿದ್ಯಂಗಳಂ ಕಲಿಸೆ ಕೃಷೀವಳರು ಪ್ರಜಾಪತಿಯುಪದೇಶದಿಂ ಪೋಗಿ ಪಿಂದೆ ಮನುಗಳುಮರಣ್ಯದೊಳಿರ್ದ ವೃಷಭಾದಿಗಳಂ ತಂದು ವಾಹನಾರೋಹಣಾದಿಗಳಂ ಕಲಿಸಿಪ್ಪವಂ ಕಟ್ಟಿ ಲಾಂಗಲಾದಿಗಳಿಂ ಭೂಮಿಯನುತ್ತು ಮೊದಲು ಕಲ್ಪದ್ರುಮಂಗಳಲ್ಪಂಗಳಾದಂದು ಕಾಡೊಳು ಬೆಳೆದೊರಗಿರ್ದ ಸರ್ವೌಷಧಿ ದೀಪ್ತೌಷಧಿಗಳಪ್ಪ ಪದಿನೆಂಟು ಧಾನ್ಯಂಗಳಂ ಸಂಸ್ಕಾರದಿಂ ಮನೂಪದೇಶದಿಂ ವಚನವಂ ಮಾಡುತ್ತಿರ್ದ ಧಾನ್ಯಂಗಳಂ ಬಿತ್ತೆ ಪೈರುಗಳು ಸಂದಿಗ್ಧವಾಗಿ ಬೆಳೆಯದಿಪ್ಪುದುಂ ಸೃಷ್ಟಿಕರ್ತನಂ ಬೆಸಗೊಂಡದಕ್ಕೆ ಹರಗಣೆಯಂ ಮಾಡುವಲ್ಲಿ ಪೈರುಗಳಂ ತಿನ್ನುತ್ತುಂ ಪೋಗಲು ಬ್ರಹ್ಮೋಪದೇಶದಿಂ ಮೊಗಬುಟ್ಟಿಯನಿಟ್ಟರು.

ಇಂತು ಲೌಕಿಕ ಷಟ್ಕರ್ಮಮಾಷಾಢ ಬಗಪಾಡ್ಯದೊಳಾಗೆ ಕೃತಯುಗಮೆಂಬ ಪೆಸರಾಯಿತು. ಆದಿಪರಮೇಶಂ ಸುರಕೃತ ಪರಿನಿಷ್ಕ್ರಮಣಕಲ್ಯಾಣಪೂರ್ವಕಂ ತಪಮಂ ಕೈಕೊಂಡು ಸಾವಿರವರುಷಂ ಧ್ಯಾನ ಮೌನಾನುಷ್ಠಾನದೊಳು ಕರ್ಮಂಗಳಂ ಕ್ಷಪಿಯಿಸೆ ಕ್ಷುಧಾದ್ಯಷ್ಟಾದಶ ದೋಷರಹಿತನಾಗಿ ಶರೀರ ಲಾಘುವಂಬಡೆದು ಭೂಮಿಯ ಹಂಗನುಳಿದೈದುಸಾಸಿರ ಬಿಲ್ಲಂತರದೊಳಾಕಾಶದೊಳು ನಿಂದು ಅತೀತಾನಾಗತ ವರ್ತಮಾನ ತ್ರಿಕಾಲಗೋಚರ ದ್ರವ್ಯಗುಣಪರ್ಯಾಯ ವಸ್ತು ಪರಿಛೇದಕ ಕೇವಲಜ್ಞಾನ ಸಂಪನ್ನನಾಗಲು ಚತುರ್ನಿಕಾಯಾಮರರ್ವೆರಸು ಪುರಂದರಂ ಬಂದು ಕೇವಲಪೂಜೆಯಂ ಮಾಡಲಾಖಂಡಲನ ಬೆಸದಿಂ ಕುಬೇರಂ ನವರತ್ನಮಯದಿಂದೆ ಪನ್ನೆರಡು ಯೋಜನ ವಿಸ್ತಾರಮಪ್ಪ ಸಮವಸರಣಮಂ ವಿಗುರ್ವಿಸೆ ತ್ರಿಲೋಕಂ ಸಂದಣಿಸಿದ ಸಭಾಮಧ್ಯದೊಳಷ್ಟಮಹಾಪ್ರಾತಿಹಾರ್ಯನುಂ ಚತುಃ ತ್ರಿಂಶದತಿಶಯಯುಕ್ತನುಮಾಗಿ ಕೈಲಾಸ ಶೈಲಶಿಖರಶೇಖರನಾಗಿಯೊಪ್ಪುತ್ತಿರ್ದಂ. ಅವನ

ಮುಖಕಮಲದೊಳೋಂಕಾರ ಪೂರ್ವಕಂ ವಿನಿರ್ಗತಮಾದ ದ್ವಾದಶಾಂಗ ಶ್ರುತಮುಮಂ ಚತುರನುಯೋಗ ಮಹಾವೇದಮುಮಂ ಚತುರ್ದಶಪೂರ್ವ ಮಹಾಶಾಸ್ತ್ರಮುಮಂ ವೃಷಭಸೇನರೆಂಬ ಗಣಾಗ್ರಣಿಗಳು ಅಂತ್ಯಬ್ರಹ್ಮನಪ್ಪ ಭರತೇಶ್ವರಂಗರಿಪೆಯಾತಂ ಸೃಷ್ಟಿಕರ್ತನಾದಂ.

ಮತ್ತಂ ಪ್ರಜಾಸಂಬಂಧದೊಳೆ ವಿಧಾತನಿಂ ನಿರ್ಮಿಸಲ್ಪಟ್ಟ ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರರೆಂಬ ನಾಲ್ಕುಂ ಜಾತಿಯಾಗೆ ಅವರ್ಗುಪಯೋಗಿಗಳಾದ ಪದಿನೆಂಟು ಭೇದದ ಕರಣಂಗಳಂ ಮಾಡಿ ಜೀವಿಸುವ ಪದಿನೆಂಟದರೊಳು ಕುಲಂಗಳು ನೂರೊಂದು ಭೇದಮಾಯಿತಲ್ಲಿ ಬ್ರಾಹ್ಮಣರು ಉಪಾಸನ ವೇದೋಕ್ತ ಯಜನ ಯಾಜನಾಧ್ಯಯನಾಧ್ಯಾಪನ ದಾನ ಪ್ರತಿಗ್ರಹಣ ತ್ರಿಪಂಚಾಶತ್ಕ್ರಿಯಾ ತ್ರಿಕಾಲ ಸಂಧ್ಯೋಪಾಸನ ಜಪ ತರ್ಪಣ ನಿತ್ಯನೈಮಿತ್ತಿಕಾನುಷ್ಠಾನ ಶೀಲೋಪವಾಸ ತೀರ್ಥವಂದನಾದಿಗಳಿಂ ದ್ವಿಜನ್ಮರುಂ ಮಾನ್ಯರುಂ ಚರಿತ್ರಶುದ್ಧರುಂ ಧರಾಮರರುಮೆಂದು ಪೊಗಳಿಸಿಕೊಳ್ಳುತ್ತುಂ ದಯಾರ್ದ್ರವೃತ್ತಿ ನ್ಯಾಯನಿಷ್ಠಾ ಶ್ರುತಿ ಸ್ಮೃತಿ ಪುರಾವೃತ್ತವೃತ್ತಿ ಮಂತ್ರಕ್ರಿಯಾ ದೇವತಾ ಲಿಂಗ ಕಾಮಾನ್ನಮೆಂಬೀ ದಶವಿಧಂಗಳೊಳಂ ಶುದ್ಧರಾಗಿ ಅತಿಬಾಲವಿದ್ಯಾದಿ ದಶಾಧಿಕಾರಂಗಳಂ ಪಡೆದು ಉಳಿದ ವರ್ಣತ್ರಯಕ್ಕಂ ಗುರುಗಳಪ್ಪರು.

ಕ್ಷತ್ರಿಯರು ನ್ಯಾಯವಿಹಿತವಾಗೆ ಪ್ರಜಾಪಾಲನವುಂ ಕುಲಪಾಲನವುಂ ಆತ್ಮಪಾಲನಮುಮೆಂಬೀ ಸಮಂಜಸತ್ವಲಕ್ಷಣ ಕ್ಷಾತ್ರಧರ್ಮಮುಳ್ಳರಾಗಿಯುಂ, ಕಾಮ ಲೋಭ ಕ್ರೋಧ ಮಾನ ಹರ್ಷ ಮದಂಗಳೆಂಬೀ ಅಂತರಂಗಶತ್ರುಜಯಮುಳ್ಳರಾಗಿಯುಂ, ಪ್ರಭು ಮಂತ್ರ ಉತ್ಸಾಹಮೆಂಬ ಶಕ್ತಿತ್ರಯಸಮನ್ವಿತರಾಗಿಯುಂ, ಸ್ವಾಮಿ ಅಮಾತ್ಯ ಸುಹೃತ್ ಕೋಶ ದುರ್ಗ ದೇಶ ಗಜಾಶ್ವ ರಥ ಪದಾತಿಗಳೆಂಬ ಚತುರಂಗಬಲಮೆಂಬೀ ಸಪ್ತಾಂಗರಾಜ್ಯಸಂಪನ್ನರಾಗಿ ಪ್ರಜೆಗಳು ಮಾಡಿರುವ ಭೂಮಿಯೊಳು ಷಡ್ಭಾಗಾವಶೇಷಮಂ ಕೊಂಡು ದುಷ್ಟನಿಗ್ರಹ ಶಿಷ್ಟಪರಿಪಾಲನೆಯಂ ಮಾಡುತ್ತುಂ ತಮ್ಮ ವೈರಿಗಳಾದವರಂ ಸಾಮ ಭೇದ ದಾನ ದಂಡಂಗಳೆಂಬ ಚತುರೋಪಾಯಂಗಳಿಂದೊಳಗುಮಾಡುತ್ತುಂ ಧರ್ಮಮಂ ಬಿಡದೆ ರಾಜ್ಯಮಂ ಪಾಲಿಸುವರು

ವೈಶ್ಯರು ಜಲಯಾತ್ರಾ ಸ್ಥಲಯಾತ್ರಾದಿಗಳಿಂ ಸತ್ಯದೊಳು ವ್ಯವಹರಿಸುತ್ತುಂ ದಾನ ಪೂಜೆ ಶೀಲೋಪವಾಸಂಗಳಿಂ ಪ್ರಪಾ[ತ]ಸತ್ರಾದಿ ನಿರ್ಮಾಪಣಮಂ ಮಾಡಿಸುವರು.

ಭೂವಾಹ ಭಾಟಕಾದಿಗಳಿಂ ವರ್ಣತ್ರಯಂಗಳ್ಗೆ ಶುಶ್ರೂಷಾದಿಗಳಂ ಮಾಳ್ಪರು ಶೂದ್ರರು. ಅಲ್ಲಿ ಸಚ್ಛೂದ್ರರುಮಸಚ್ಛೂದ್ರರೆಂದಿತ್ತೆರಂ.

ಆದಿಬ್ರಹ್ಮಮುಖದಿಂ ಪುಟ್ಟಿದ ಕ್ರಿಯಾಮಂತ್ರೋಪದೇಶದಿಂ ದ್ವಿಜನ್ಮರಾದುದರಿಂ ವದನಜರೆಂಬುದು.

ಕ್ಷತ್ರಿಯರು ಭುಜವೀರ್ಯಪರಾಕ್ರಮದಿಂ ಜೀವನಮುಳ್ಳುದರಿಂ ಬಾಹುಜರೆಂಬುದು. ವೈಶ್ಯರು ಜಂಘಾಬಲದ ಜಲಸ್ಥಲಾದಿ ಯಾತ್ರೆಯಿಂ ಜೀವಿಸುವುದರಿಂದೂರುಜರೆಂಬುದು.

ಶೂದ್ರರು ತ್ರಿವರ್ಣಂಗಳ ಪಾದಸೇವಾದಿಗಳಿಂ ಜೀವಿಗಳಾದುದರಿಂ ಪಾದಜರೆಂಬುದು.

ಇಂತು ಮನುಷ್ಯಜಾತಿಯೊಂದೆಯಾದೊಡಮವರವರ ವೃತ್ತಿಭೇದದಿಂ ಬ್ರಾಹ್ಮಣಾದಿಗಳಾಗೆ ಪದಿನೆಂಟು ಜಾತಿಗಳುಮವರವರ ವೃತ್ತಿಯಿಂದಲೆ ಭೇದಂಗಳಾಗಿಪ್ಪವು.

ಮತ್ತಂ ಕ್ಷತ್ರಿಯರೊಳು ಸೂರ್ಯವಂಶಂ ಚಂದ್ರವಂಶಂ ನಾಥವಂಶಂ ಉಗ್ರವಂಶಂ ಎಂದು ನಾಲ್ಕು ತೆರನಾಗಲಲ್ಲಿ ಇನವಂಶದೊಳಾದಿಪುರುಷನಿಕ್ಷುಕಾಂಡಂಗಳಂ ಪೇಳಿ ಗುಡ ಶರ್ಕರಾದಿಗಳಂ ಮಾಳ್ಪುಪಾಯಮಂ ತೋರಿದುದರಿಂದಿಕ್ಷ್ವಾಕುಕುಲಮೆಂದಾಯ್ತು.

ಚಂದ್ರವಂಶದ ಸೋಮಪ್ರಭಮಹಾರಾಜಂಗಂ ಕುರುರಾಜಾಭಿಧಾನಮಿನಿಟ್ಟು ಕುರುಕುಲಾಗ್ರಗಣ್ಯನಂ ಮಾಡಿದುದರಿಂ ಕುರುವಂಶಮಾಯ್ತು. ಸೂರ್ಯವಂಶದ ಹರಿಕಾಂತಂಗೆ ಹರಿನಾಮಮನಿಟ್ಟುದರಿಂ ಹರಿವಂಶಮಾಯ್ತು. ಅಕಂಪಂಗಂ ಶ್ರೀನಾಥ ನಾಮವನಿಟ್ಟುದರಿಂ ನಾಥವಂಶಮಾಯ್ತು. ಕಾಶ್ಯಪಂಗೆ ಉಗ್ರಾಭಿಧಾನಮನಿಟ್ಟುದರಿಂದುಗ್ರವಂಶಮಾಯ್ತು. ಇಂತು ನಾಲ್ಕರೊಳೈದು ಭೇದಮಾಗಿ ವರ್ತಿಸುತ್ತಿಪ್ಪುದುಂ ಭರತರಾಜಂಗೆ ಚಕ್ರರತ್ನಂ ಪುಟ್ಟೆ ಚತುರ್ದಶರತ್ನ ನವನಿಧಿಗಧೀಶನಾಗಿ ದಿಗ್ವಿಜಯಂಗೆಯ್ದು ಷಟ್ಖಂಡಮಂ ಬಾಳಿಸಿ ಬಪ್ಪಲ್ಲಿ ಆತನನುಜನಪ್ಪ ಬಾಹುಬಲಿರಾಜಂ ಪೌದನಪುರದೊಳಿರ್ದು ಹುಂಡಾವಸರ್ಪಿಣಿಕಾಲದೋಷದಿಂದಿದಿರೊಡ್ಡಿ ನಿಂದು ದೃಷ್ಟಿಯುದ್ಧ ಜಲಯುದ್ಧ ಮಲ್ಲಯುದ್ಧಂಗಳಿಂದಣ್ಣನಂ ಗೆಲ್ದು ನಿರ್ವೇಗಂ ಪುಟ್ಟಿ ದೀಕ್ಷೆಗೊಂಡು ಮಾನಕಷಾಯದಿಂ ಭರತನ ಭೂಮಿಯೊಳ್ ತಪಂಗೆಯ್ವೆನಲ್ಲೆಂದು ತಿರುಗುತ್ತೆ ಪೋಗುತ್ತಿರೆ ಗೊಮಟನೆಂಬ ಪೆಸರಾಗಿ ಪೋಗುತ್ತಿರಲೊರ್ವ ದೇವಂ ಸರ್ಪಾಕೃತಿಯಿಂ ಪುತ್ತದಿಂ ಪೊರಮಟ್ಟೆನ್ನ ವಲ್ಮೀಕದ ಮೇಲೆ ನಿಂದು ತಂಪಗೆಯ್ವುದೀ ಭೂಮಿಯೆನ್ನದು ಭರತನದಲ್ಲವೆಂದು ಪೇಳ್ದೊಡಾ ಪುತ್ತಿನಮೇಲೆ ಕಾಯೋತ್ಸರ್ಗದಿಂ ನಿಂತು ತಪಗೆಯ್ಯುತ್ತಿರ್ದಂ.

ಇತ್ತ ಭರತಚಕ್ರಿಯುಮಯೋಧ್ಯೆಯಂ ಪೊಕ್ಕು ಸಾಮ್ರಾಜ್ಯಾಭಿಷೇಕಮನಾಂತು ಸಮಸ್ತಕ್ಕುಂ ಭರತಗಟ್ಟಲೆಯಂ ಮಾಡಿ ಕೈಲಾಸಮನೆಯ್ದಿ ಬಂದು ಬಾಹುಬಲಿಮುನಿಯಲ್ಲಿರೆ ಬಂದೆರಗಿ ಬೋಧಿಸೆ ಮನಃಕಷಾಯಂ ಪೋಗೆ ಕೇವಲಜ್ಞಾನೋತ್ಪತ್ತಿಯಾಗಿ ಲೋಕಾಲೋಕಪ್ರಕಾಶನಾಗಿ ತ್ರಿಭುವನಸೇವ್ಯಂ ಕೈಲಾಸೋಪರಿಯೊಳೊಪ್ಪುತ್ತಿಪ್ಪ ಸಮವಸರಣಮನೆಯ್ದೆ ಭರತಚಕ್ರೇಶ್ವರಂ ಸಾಕೇತಮಂ ಪೊಕ್ಕು ಸುಖಮಿರ್ದೊಂದು ನಿಶಾವಸಾನದೊಳು ಮುಂದಣ ದುಷ್ಷಮಕಾಲಪ್ರವರ್ತಕಮಪ್ಪ ಪದಿನಾರು ದುಃಸ್ವಪ್ನಂಗಳಂ ಕಂಡು ಕೈಲಾಸಮನೇರಿ ಆದಿಪರಮೇಶ್ವರಂಗೆ ಸಾಷ್ಟಾಂಗವೆರಗಿ ನುತಿಸಿ ಮನುಷ್ಯಕೋಷ್ಠದೊಳ್ ಕುಳ್ಳಿಪ್ಪುದುಂ ದಿವ್ಯಭಾಷಾಸ್ವಭಾವದಿಂ ಷಡ್ದ್ರವ್ಯಮಂ ಪಂಚಾಸ್ತಿಕಾಯಮಂ ಸಪ್ತತತ್ವಮಂ ನವಪದಾರ್ಥಮಂ ತ್ರೈಕಾಲ್ಯಮಂ ತ್ರೈಲೋಕ್ಯಮಂ ಷಡ್ಜೀವನಿಕಾಯಮಂ ಲೇಶ್ಯಮಂ ವ್ರತಮಂ ಸಮಿತಿಯಂ ಗುಪ್ತಿಯಂ ಜ್ಞಾನಮಂ ಚಾರಿತ್ರಾದಿಗಳಿವರ ಭೇದಾಭೇದಸ್ವರೂಪಾದ್ಯಖಿಲ ತತ್ವಾರ್ಥಗಳಂ ಭರತೇಶನಂ ಕುರಿತು ತತ್ವಪ್ರಪಂಚಮಂ ಪೇಳ್ದ ಸರ್ವಭಾಷಾತ್ಮಕಮಪ್ಪ ದಿವ್ಯಧ್ವನಿಯಿಂ ನಿರೂಪಿಸಲದೆಲ್ಲಮಂ ವೃಷಭಸೇನಗಣಧರರ್ ಪ್ರತಿರಚನೆಯಿಂ ಪೇಳೆ ಕೇಳ್ದುಮಯೋಧ್ಯೆಗೆವರೆ

ಅತ್ತಲ್ ಮುನ್ನಮಾದಿದೇವರೊಡನೆ ಭರತನರಸಿ ಅನಂತಸೇನೆಯಂ ಪುತ್ರಮರೀಚಿಯು ಕಾಳಗಗೊಂಡವರರುದಿಂಗಳಿಂಗಲ್ಲದೆ ಕೈಯೆತ್ತೆನೆಂದು ನಿಲ್ವುದುಂ ಒಡನಿರ್ದ ಮರೀಚಿಯು ಕ್ಷುತ್ಪಿಪಾಸಾದಿ ಪರೀಷಹಂಗಳಂ ಸೈರಿಸಲು ನೆರೆಯದೆ ಕೆಲಂಬರ್ ಕೂಡಿ ಜಟಾ ದಂಡ ವಲ್ಕಲಾದಿ ವಸನರಾಗಿ ಅಗ್ನಿಯನಿಟ್ಟು ಕಂದಮೂಲ ಫಲಾಹಾರಂಗಳಿಂ ಜೀವಿಸುತ್ತಿರ್ದು ಅಕ್ಷರಾದಿ ಚತುಃ ಷಷ್ಟಿ ವಿದ್ಯಾವಿಶಾರದಂ ಸ್ವಯಂ ಬುದ್ಧನಾಗಿ ಕಪಿಲಸಿದ್ಧಾಂತಮಂ ಪೇಳ್ದು ಕೋಟಿಗ್ರಂಥಮಂ ರಚಿಸಿ ತನ್ನ ಮೂರು ಕೋಟಿ ಶಿಷ್ಯರ್ಗಮುಪದೇಶಂಗೈದಂ. ಅವರೆಲ್ಲಾ ಕೇಳ್ದು ನಂಬಿದವರಲ್ಲಿ ಏಕಾಂತ ವಿನಯ ವಿಪರೀತ ಸಂದೇಹಾಜ್ಞಾನಮೆಂಬ ಪಂಚಭಾವಂ ಪುಟ್ಟಿ ವ್ಯವಹರಿಸುತ್ತಿರ್ದರು.

ಇತ್ತ ಪುರುಪರಮೇಶ್ವರಂ ತನ್ನ ಸಮಾನಮಪ್ಪ ಕೇವಲಿಗಳಿಪ್ಪತ್ತು ಸಾಸಿರ್ವವೆರಸೊಂದು ಲಕ್ಷದ ಮೇಲರುವತ್ತುಸಾಸಿರದ ನಾನೂರುತೊಂಬತ್ತೆರಡು (೧,೬೦,೪೯೨) ಲೆಕ್ಕದ ಸಪ್ತವಿಧ ಋಷಿನಿಕರಂ ಬಳಸಿರೆ, ಮತ್ತಂ ಮೂರುವರೆ ಲಕ್ಷ(೩,೫೦,೦೦೦) ಆರ್ಯಿಕೆಯರುಂ, ಎಂಟು ಲಕ್ಷ (೮,೦೦,೦೦೦) ಮನುಷ್ಯ ಸ್ತ್ರೀಪುರುಷರುಂ, ಅಸಂಖ್ಯಾತ ದೇವರುಂ ದೇವಿಯರುಂ, ಅಸಂಖ್ಯಾತ ತಿರ್ಯಗ್ಜಾತಿಗಳುಂ ಬೆರಸಿಪ್ಪ ಸಮವಸರಣದೊಳ್ ಸಿಂಹಾಸನಮಂ ಸೋಂಕದೆ ನಾಲ್ಕಂಗುಲಮಂ ಬಿಟ್ಟು ಕೋಟಿ ಚಂದ್ರಾದಿತ್ಯರ ಕಾಂತಿಯಿಂ ಸುಜ್ಞಾನಮೆ ಮೆಯ್ಯಾಗಿ ರಾರಾಜಿಸುತ್ತಿರಲ್ ಆ ಪರಮಾತ್ಮಂ ಮುನ್ನ ನೊಸಲೊಳ್ ಜ್ಞಾನದೃಷ್ಟಿ ಪುಟ್ಟಿ ಕರ್ಮಮಂ ಸುಟ್ಟುದರಿಂ ತ್ರಿಣೇತ್ರನುಂ ಭಾಳಲೋಚನಂ ಪಾವಕನೇತ್ರನೆಂದು ವೀರ್ಯಶ್ರೀಯಸ್ಸ ಮಗ್ರನಾದುದರಿಂ ಭಗವಾನ್

ಐಶ್ವರ್ಯಸ್ಯ ಸಮಗ್ರಸ್ಯ ವೀರ್ಯಸ್ಯಯಶಸಃ ಶ್ರೀಯಃ
ವೈರಾಗ್ಯಸ್ಯಾವಭೋಧಸ್ಯ ಷಣ್ಣಾಂಭಗ ಇತಿ ಸ್ಮೃತಃ ||
......ಪುರುಷೋತ್ತಮಃ ತ್ರಿಲೋಕೋದರವರ್ತಿನಾಂ
ಸರ್ವೇಷಾಂ ಪುರುಷಾಣಾಂ ಮಧ್ಯೇ ಅಸ್ಯೈವ ಶ್ರೇಷ್ಠತ್ವಾತ್||

ಹರಿಃ ಹರತಿ ಸ್ವೀಕರೋತಿ ಕ್ಷಾಯಿಕಸಮ್ಯಕ್ತ್ವಾದಿ ಗುಣಾನಿತಿ; ಹರಃ ಹರತ್ಯ ಪಾಕರೋತಿ ಸ್ವಸ್ಯಪರೇಷಾಮಪ್ಯಘಮಿತಿ; ಸ್ವಯಂಭೂಃ ಸ್ವಯಮೇವ ಪರೋಪದೇಶ ಮಂತರೇಣ ಮೋಕ್ಷಮಾರ್ಗಮನುತಿಷ್ಠದನಂತ ಚತುಷ್ಟಯಾದ್ಯೋ ಭವತೀತಿ; ವಿಯಃ (?) ವಿಶ್ವವ್ಯಾಪೀತ್ಯರ್ಥಃ, ವಿಷ್ಣುಃ ಕೇವಲಜ್ಞಾನೇನ ವಿಶ್ವಂ ವೇವೆಷ್ಟಿ ವ್ಯಾಪ್ನೋತೀತಿ ಜಿಷ್ಣುಃ ಜಯಶೀಲ ಇತಿ; ಮಹೇಶ್ವರಃ ಮಹಾಂಶ್ಚಾಸೌ ಈಶ್ವರಶ್ಚ ದೇವೇಂದ್ರ ನಾಗೇಂದ್ರ ನರೇಂದ್ರ ಸೇವಿತತ್ವಾತ್; ಸ್ಥಾಣುಃ ಪರಮಪದೇ ನಿತ್ಯಂ ತಿಷ್ಠತೀತಿ; ಪುರಾಣಃ ಪೂರ್ವೇಷಾಮಪಿ ಪುರುಷಾಣಾಂ ಪೂರ್ವ ಇತ್ಯರ್ಥಃ; ಅಚ್ಯುತಃ ಜ್ಞಾನಾದಿ ಸ್ವರೂಪಾತ್ಮನಾ ಕಿಂಚಿದಪಿನ ಚ್ಯವತ ಇತಿ; ಸರ್ವಜ್ಞಃ ಸರ್ವಂ ಜಾನಾತೀತಿ; ಸುಗತಃ ಸುಷ್ಠುಗತಃ ಅಜಿತಃ ಪರೈರ್ಜೇತುಮಶಕ್ಯತ್ವಾತ್; ಪಶುಪತಿಃ ಪಶೂನ್ಮಂದಬುದ್ಧೀನಪಿ ಧರ್ಮೋಪದೇಶೇನ ಪಾತೀತಿ; ತೀರ್ಥಂಕರಃ ತೀರ್ಥಪವಚನಂ ದಿವ್ಯಭಾಷಾಂ ಕರೋತೀತಿ; ಶಂಕರಃ ಸುಖಂ ಕರೋತೀತಿ; ಸಿದ್ಧಃ ಸಕಲ ಕರ್ಮನಿಷ್ಪನ್ನಃ ; ಬುದ್ಧಃ ಬುದ್ಧ್ಯತೇ ಸ್ವಸ್ಮಿನ್ ಸ್ವಸ್ವರೂಪಂ ಜಾನಾತೀತಿ; ಉಮಾಪತಿಃ

ಉಮಾಕೀರ್ತಿರ್ಲಕ್ಷ್ಮೀಶ್ಚ ಕೀರ್ತಿವಲ್ಲಭೋ ಲಕ್ಷ್ಮೀವಲ್ಲಭಶ್ಚೇತಿ; ಜಿನಪತಿಃ ಅನೇಕ ಭವಗಹನ ವಿಷಮವ್ಯಸನ ಪ್ರಾಪಕಹೇತೂನ್ ದುರ್ಜಯಕರ್ಮಠ ಕರ್ಮರಾತೀನ್ ಜಯಂತಿ ನಿರ್ಮೂಲಯಂತೀತಿ ಜಿನಾಃ; ಅಪ್ರಮತ್ತಾದಿ ಗುಣಸ್ಥಾನಾದೇಕ ದೇಶವರ್ತಿನೋ ಜಿನಃ, ತೇಷಾಂಪತಿರ್ಜಿನಪತಿಃ

ಇತ್ಯಾದಿ ಸಾಸಿರದೆಂಟನ್ವರ್ಥನಾಮಂಗಳಿಂ ಶಕ್ರಂ ನುತಿಸುತ್ತಿರಲ್ಕೆವತ್ತಾರು ದೇಶಂಗಳೊಳು ವಿನೇಯಜನ ಸಸ್ಯಂಗಳಂ ಧರ್ಮಾಮೃತವರ್ಷದಿಂ ತಣಿಯಿಸುತ್ತುಂ ಎಂಟು ಖರ್ವಮುಂ, ನಾಲ್ಕು ನಿರ್ಬುದಮುಂ, ಒಂಬತ್ತರ್ಬುದಮುಂ, ಒಂಬೈನೂರ ತೊಂಬತ್ತೊಂಬತ್ತು ಕೋಟಿಯುಂ, ತೊಂಬತ್ತೊಂಬತ್ತು ಲಕ್ಷಮುಂ, ತೊಂಬತ್ತೊಂಬತ್ತು ಸಾಸಿರ ವರ್ಷಂ ಪೋಗೆ ಮಾಘ ಬಹುಳ ಚತುರ್ದಶಿ ಬೆಳಗಪ್ಪ ಜಾವದೊಳಭಿಜಾತಮೆಂಬ ಮೂಹೂರ್ತದೊಳ್ ಅನಂತಜ್ಞಾನದರ್ಶನ ವೀರ್ಯ [ಕ್ಷಾಯಿಕ ಸಮ್ಯಕ್ತ್ವ ಸೂಕ್ಷ್ಮತ್ವ] ಮವ್ಯಾಬಾಧಾಗುರುಲಘುತ್ವಾವಗಾಹಮೆಂಬೀ ಅಷ್ಟ ಗುಣಂಗಳೊಡಗೂಡಿ ತ್ರಿಲೋಕಾಗ್ರದೊಳ್ ಕೈವಲ್ಯಲಕ್ಷ್ಮೀಕಾಂತನಾದಂ

ಇತ್ತಲ್ ಭರತಚಕ್ರೇಶ್ವರನೈನೂರು ದಂಡೋತ್ಸೇಧನುಂ ಕಲ್ಯಾಣವರ್ಣನುಂ ಎಂಬತ್ತುನಾಲ್ಕು ಲಕ್ಷ ಪೂರ್ವೆ ಪರಮಾಯುಷ್ಯನುಮಾಗಿ ದಶಾಂಗಭೋಗಮನನುಭವಿಸಿ ಕಡೆಯೊಳ್ ಒಂದು ದಿನಂ ಸನ್ಯಸನವಿಧಿಯಿಂ ಕೇವಳಿಯಾಗಿ ಮೋಕ್ಷಲಕ್ಷ್ಮಿಯಂ ಕೈಕೊಂಡು-ತತ್ಪುತ್ರರರ್ಕಕೀರ್ತಿಯುಮಾದಿರಾಜನಂ ಸುಬಾಹು ಯಶೋಬಾಹು ಮೊದಲಾಗಿ ಅನೇಕ ರಾಜಪುತ್ರರು ಕ್ರಮದಿಂ ರಾಜ್ಯಮನಾಳುತ್ತಿರ್ದರ್

ಅಂತುಮಾ ಕಾಲದೊಳಾ ವೃಷಭೇಶ್ವರಂ ದೀಕ್ಷೆಗೊಂಡರುದಿಂಗಳ್ ಯೋಗಂಗೈದು ಪಾರಣಾರ್ಥಂ ಬಾವಲಿಯನಿಟ್ಟು ಬಪ್ಪುದುಮಾರುಂ ನಿಲಿಸಲರಿಯದಿರೆ ಕುರುವಂಶ ಶ್ರೇಯಾಂಸಮಹಾರಾಜಂ ಪೂರ್ವಭವಸ್ಮರಣೆಯಾಗೆ ಸ್ವಪ್ನಂಗಂಡು ಬೆಳಗಿನೊಳ್ ವೈಶಾಖ ಶುದ್ಧ ತದಿಗೆಯೊಳ್ ಮುನೀಂದ್ರೋತ್ತಮಂ ಬಪ್ಪುದುಂ ನವವಿಧ ಪುಣ್ಯ ಸಪ್ತಗುಣಸಂಪನ್ನನಾಗಿ ಇಕ್ಷುರಸಮಂ ಹಸ್ತದೊಳೆರೆಯೆ ನಿರಂತರಾಯಮಾಗಲ್ ದೇವತೆಗಳ್ ಪಂಚಾಶ್ಚರ್ಯಮಂ ಮಾಡಿ ಅಕ್ಷಯದಾನವೆಂದು ಕೊಂಡಾಡಿದುದರಿಂದ [ಕ್ಷತ್ರಿಯನೆ]ಯೆಂದಂದಿಂದಂ ಪ್ರಶಂಸೆಯಂ ಮಾಡಿದರ್.

ಭರತಚಕ್ರೇಶ್ವರಂ ಶ್ರಾವಣ ಶುದ್ಧ ಪೌರ್ಣಮಿ ಶ್ರವಣಾರ್ಷ ದಿನದೊಳರಮನೆಯ ಮಾರ್ಗದೊಳ್ ಷರೀಕ್ಷಿಸಲೆಂದು ಹರಿತಾಂಕುರಮಂ ಕೆದರಿಸಿ ದ್ವಿಜರೆಲ್ಲರಂ ದಾನಂಗುಡಲ್ ಬರಿಸೆ ಕೆಲಂಬರ್ ಮೆಟ್ಟುತ್ತುಂ ಬಂದರ್, ಕೆಲರಂಕುರಮಂ ಮೆಟ್ಟದೆ ನಿಲೆ ಪೆರತೊಂದೆಡೆಯಿಂ ಬರಿಸಿ ನೀವೇನು ಕಾರಣಮಂಕುರಮಂ ಮೆಟ್ಟಿ ಬಂದಿರಿಲ್ಲೆಂಬುದುಂ ಈಯಂಕುರಂ ನಿಗೋಧ ಪ್ರಾಣಿಗಳೆಂಬುದಂ ಸರ್ವಜ್ಞರಿಂ ಕೇಳ್ದೆವದರಿಂದೀ ಪರ್ವದಿನಂ ಪಾಪಭೀರುಗಳಾಗಿ ಮೆಟ್ಟದೆ ನಿಂದೆವೆನೆ ಚಕ್ರೇಶ್ವರಂ ಮೆಚ್ಚಿ ತತ್ವಾರ್ಥ ವೇದಾಧ್ಯಯನಮಂ ಪೇಳಿಸೆ ಸಂತೋಷಂಬಟ್ಟು ಪದ್ಮನಿಧಿಯಿಂ ದಿವ್ಯಸೂತ್ರಮಂ ತರಿಸಿ ಅವರವರ ವ್ರತ ಶೀಲ ದೃಢಚರ್ಯಮಂ ಪ್ರಕಟಿಸಿ

ಷಡ್ದ್ರವ್ಯ ಪಂಚಾಸ್ತಿಕಾಯ ಸಪ್ತತತ್ತ್ವ ನವಪದಾರ್ಥಂಗಳೆಂಬಿಪ್ಪತ್ತೇಳು ಮಡಿಯಾಗೆ ನವದೇವತಾಸಂಕಲ್ಪದಿಂದೊಂಬೊಂಬತ್ತೆಳೆಯಂ ಹುರಿಗೂಡಿ ಸಮ್ಯಗ್ದರ್ಶನ ಜ್ಞಾನ ಚಾರಿತ್ರಮೆಂಬೀ ರತ್ನತ್ರಯ ಪವಿತ್ರಗಾತ್ರರಿವರ ಭಾವಸೂತ್ರಕ್ಕೆ ದ್ರವ್ಯಸೂತ್ರಮನವರ ಕೊರಳೊಳಿಕ್ಕಿಸಿ ವಸ್ತ್ರಾಭರಣಾದಿಗಳಿಂ ಪೂಜಿಸಿ ಗೃಹ ಗ್ರಾಮ ಕ್ಷೇತ್ರಾದಿಗಳನಿತ್ತು ಮನ್ನಿಸಿ ಧರಾಮರರ್ ನೀವೆಂದು ಕೊಂಡಾಡಿದನಂದಿಂದಾ ದ್ವಿಜರ್ಗೆ ಶ್ರಾವಣ ಶು ೧೫ ಶ್ರವಣನಕ್ಷತ್ರಮುಪಾಕರ್ಮಮೆಂಬ ಪರ್ವತಿಥಿಯಾಯ್ತು.

ಶ್ರೀಮದಾದಿಪರಮೇಶ್ವರಂ ಮಾಘ ಬಹುಳ ಚತುರ್ದಶಿಯೊಳ್ ಶಿವಲೋಕ ಪ್ರಾಪ್ತನಪ್ಪುದುಂ ದೇವೇಂದ್ರಾದಿ ಚತುರ್ನಿಕಾಯಾಮರರೆಯ್ದಿ ದಿವ್ಯಮಪ್ಪ ಜಲ ಗಂಧಾಕ್ಷತ ಪುಷ್ಪ ಚರು ದೀಪ ಧೂಪ ಫಲಾರ್ಘ್ಯಂಗಳಿಂದನೇಕಾರ್ಚನೆಗಳಿಂದಾ ಕೈಲಾಸಮಂ ಪೂಜಿಸಿ ಪರಿನಿರ್ವಾಣ ಕಲ್ಯಾಣೋತ್ಸವಗಳಂ ಮಾಡಿ ಪೋಗಲಂದಿಂದಿತ್ತಲುಮಾ ತಿಥಿಯು ಶಿವರಾತ್ರಿಯೆಂಬ ಪುಣ್ಯದಿನವಾಯ್ತು

ಇಂತೀ ಕಥೆಯಂ ಕೇಳ್ದರ
ಭ್ರಾಂತಿಯು ನೆರೆ ಕೆಟ್ಟು ಬಳಿಕಮಾಯುಂ ಶ್ರೀಯುಂ
ಸಂತಾನವೃದ್ಧಿ ಸಿದ್ಧಿಯು
ಸಂತತ ಸೌಖ್ಯಂಗಳಿಹಪರಂಗಳೊಳಕ್ಕುಂ

ಇದು ಸತ್ಯಪ್ರವಚನ ಪಾರಾವಾರ ಸಮುತ್ಪನ್ನ ಕಾಲಪ್ರವರ್ತನ ಕಿಂಚಿನ್ ಮಾತ್ರದಿಂ ವಿಬುಧೇಂದು ವಿರಚಿತ ರಾಜಾವಳಿ ಕಥಾಸಾರದೊಳಾದಿಬ್ರಹ್ಮಸೃಷ್ಟಿ ನಿರೂಪಣಂ

ಪ್ರಥಮಾಧಿಕಾರಂ

ದ್ವಿತೀಯಾಧಿಕಾರಂ

ಶ್ರೀಸುಜನಸ್ತುತರಖಿಳಕ
ಳಾಸದನರ್ ಮೋಹತಿಮಿರಮಂ ಕಳೆದು ಕರಂ
ಭಾಸುರ ವಿಚಾರದಕ್ಷರ್
ವೈಷಮ್ಯಮನುಳಿದು ಕೇಳ್ವುದೀ ಸತ್ಕೃತಿಯಂ

ಮುಂದಣ ಕಥೆಯೆಂತೆಂದೊಡೆ ಆ ಆದಿಬ್ರಹ್ಮನ ಸಂತಾನಮೈವತ್ತು ಲಕ್ಷಕೋಟಿ ಸಾಗರೋಪಮ ಕಾಲಂ ಸಲ್ವಿನಮಯೋಧ್ಯಾಪುರದೊಳ್ ಜಿತಶತ್ರುಮಹಾರಾಜನೆಂಬರಸಂ ರಾಜ್ಯಮಂ ಪ್ರತಿಪಾಲಿಸುತ್ತಿರಲಾ ಕಾಲದೊಳೆರಡನೆ ತೀರ್ಥಾವತಾರವಾಗಲಲ್ಲಿ ವಿಜಯಸಾಗರನೆಂಬರಸಂಗಂ ಸಗರನೆಂಬೆರಡನೆಯ ಚಕ್ರವರ್ತಿಯಾದನಾತಂಗೆ ಭಗೀರಥಂ ಮೊದಲಾದರುವತ್ತು ಸಾಸಿರ್ವರ್ ತಂದೆಯೊಳ್ ಬೆಸನಂ ಬೇಡಿಕೊಂಡು ಪೋಗಿ ಪಿಂದೆ ಭರತೇಶ್ವರಂ ಕೈಲಾಸಪರ್ವತದೊಳ್ ರತ್ನಮಯವಾಗಿರ್ದೆಪ್ಪತ್ತೆರಡು ಚೈತ್ಯಾಲಯಮಂ ಅರ್ಕಕೀರ್ತಿಯು ಕೈಲಾಸಪರ್ವತವನ್ನು ಅಷ್ಟಾಪದಮಾಗಿಯುಂ ಮಾಡಿರಲದಕ್ಕೆ ಮನುಷ್ಯರ್ ಪೋಗದಂತೆ ಗಂಗಾನದಿಯಂ ತಂದು ಜಲಖಾತಿಕೆಯಂ ಮಾಡಲೆಂದು ಪೋಗಿ ಪ್ರಯತ್ನದಿಂ ಭಗೀರಥಂ ಗಂಗೆಯಂ ತಂದು ಕೈಲಾಸಕ್ಕೆ ಖಾತಿಕೆಯಂ ಮಾಡಿ ಬಂದು ಕಡೆಯೊಳ್ ತಪಮಂ ಕೈಕೊಂಡು ತನ್ನದೀತೀರದೊಳ್ ದೇವತೆಗಳಿಂದಭಿಷಿಕ್ತನಾಗಿ ಪೂಜಿಸಿಕೊಂಡಲ್ಲಿಂ ಬಂದು ಕಾಶೀನದೀತೀರದೊಳಿರೆಯಲ್ಲಿಯು ದೇವರ್ಕಳ್ ಪೂಜಿಸಲಾ ನದಿಗೆ ಗಂಗೆಯೆಂಬ ಪೆಸರಿಟ್ಟುದರಿಂ ಪುಣ್ಯತೀರ್ಥಮಾಯ್ತು ಭಗೀರಥಂ ಗಂಗೆಯಂ ತಂದನೆಂದು ಭಾಗೀರಥಿಯೆಂಬ ಪೆಸರಾಯ್ತು. ಆ ಇಕ್ಷ್ವಾಕುವಂಶದರಸುಗಳ್ ವಿನೀತಾಪುರ ಶ್ರಾವಸ್ತಿ ಕೌಶಾಂಬಿ ವಾರಣಾಸಿ ಚಂದ್ರಪುರ ಮೊದಲಾದ ಪಟ್ಟಣದೊಳಿರ್ದರ್.

ಹರಿವಂಶದರಸುಗಳ್ ಪೌದನಾಪುರ ಕಾಕಂದಿ ಭದ್ರಿಳಾ ಚಂಪಾನಗರಿ ಮೊದಲಾದವರೊಳಿರ್ದರ್. ಕುರುವಂಶದವರ್ ಹಸ್ತಿನಾಪುರಾದಿಗಳೊಳಿರ್ದರ್ ಉಗ್ರವಂಶದವರ್ ಕಾಶೀಪಟ್ಟಣಗಳೊಳಿರ್ದರ್, ನಾಥವಂಶದವರ್ ಕುಂಡಿನಾಪುರ ಮೊದಲಾದವರೊಳಿರ್ದು ರಾಜ್ಯಮಂ ಪ್ರತಿಪಾಲಿಸಿರ್ದರ್, ಅಯೋಧ್ಯಾನಗರದೊಳ್ ಸುಪ್ರತಿಷ್ಠ ಸುಬಾಹು ಯಶೋಬಾಹು ಅಜಿತಂಜಯಂ ಮೊದಲಾಗೆ ಅನೇಕ ರಾಜರುಗಳ್ ಆಳುತ್ತಿರೆಯಾಗಳ್ ಭೀಮನೆಂಬ ರಾಕ್ಷಸಂ ವಿಜಯಾರ್ಧದಿಂ ತೋಯದ ವಾಹನನೆಂಬರಸನಂ ತನ್ನ ಲಂಕಾದ್ವೀಪಕ್ಕೊಯ್ದಿರಿಸಿದಂ. ಆತನ ವಂಶಪರಂಪರೆಯಿಂದವರ ರಾಕ್ಷಸಂ ಮೊದಲಾಗೆ ಪೌಲಸ್ತ್ಯನೆಂಬನಾದಂ ಮತ್ತಂ ಭದ್ರಿಳಾಪುರದ ಮೇಘರಥ ಅತ್ರಿಯಂಗೀರಾದಿ ಋಷಿಗಳೈನೂರ್ವರ್ (೫೦೦) ಕಪಿಲಸಿದ್ಧಾಂತಾನುಭವಿಗಳಾಗಿರ್ದರಾ ಕಾಲದೊಳ್ ಕಾಲಾದಿ

ವಾದಂಗಳ್ ಪ್ರಕಟಮಾದುವವಾವುವೆಂದಡೆ ನೂರೆಂಬತ್ತು (೧೮೦) ಕ್ರಿಯಾವಾದಮುಂ ಎಂಬತ್ತುನಾಲ್ಕು (೮೪) ಆದಿಕ್ರಿಯಾವಾದಮುಂ ಅಜ್ಞಾನವಾದಮರವತ್ತೇಳುಂ (೬೭) ವೈಣಯಿಕವಾದಂ ಮೂವತ್ತೆರಡು (೩೨) ಕೂಡಿ ಮುನ್ನೂರರುವತ್ತುಮೂರು (೩೬೩) ವಾದಂಗಳಲ್ಲಿ ಸ್ವಪರ ನಿತ್ಯಾನಿತ್ಯಂಗಳಿಂ ಕಾಲ ಈಶ್ವರ ಆತ್ಮ ನಿಯತಿ ಸ್ವಭಾವವೆಂದೈದು ಭೇದಮಲ್ಲಿ ಲೋಕದೊಳುಳ್ಳ ಸಕಲ ಪದಾರ್ಥಂಗಳ್ ಚರಾಚರ ಜೀವಂಗಳುತ್ಪತ್ತಿ ಸ್ಥಿತಿ ಲಯ ಲಾಭಾಲಾಭಂ ಮೊದಲಾದೆಲ್ಲಕ್ಕಂ ಕಾಲಮೆ ಪ್ರಧಾನಂ

ಶ್ಲೋಕ || **ಕಾಲಃ ಸೃಜತಿ ಭೂತಾನಿ ಕಾಲಃ ಸಂಹರತಿ ಪ್ರಜಾಃ**
ಸರ್ವೇ ಕಾಲಸ್ಯ ವಶಗಾಃ ನ ಕಾಲಃ ಕಸ್ಯ ಚಿದ್ವಶೇ ||

-ಏವಂ ಪ್ರಕಾರೇಣವಾದಃ

ಅಜ್ಞಜಂತುರನೀಶೋಯಮಾತ್ಮನಂ ಸುಖದುಃಖಯೋಃ
ಈಶ್ವರಪ್ರೇರಿತೋ ಗಚ್ಛೇತ್ಸ್ವರ್ಗ ವಾಽ ಸ್ವರ್ಗಮೇವವಾ ||

-ಇತೀಶ್ವರವಾದಃ

ಏಕೋ ಜೀವಃ ಮಹಾತ್ಮ ಪುರುಷ ಏವ ಸರ್ವಗತಃ
ಸರ್ವಾಂಗನಿಗೂಡಃ ಸಚೇತನಃ ನಿರ್ಗುಣಃ ಪರಮ ||

-ಇತ್ಯಾತ್ಮವಾದಃ

ಏಕಸಮಯೇ ಏಕಪ್ರದೇಶೇ ಏಕ ಏಕೇನ ಏಕಂ ಏಕ ಪುರುಷಸ್ಯ
ನಿಯಮೇನಸ್ಯಾಚ್ಚೇತ್ ತತ್ಕಾಲೇ ಕ್ಷೇತ್ರೇಚ ತೇನ ತತ್ತಸ್ಯ ಭವೇದಿತಿ ||

-ನಿಯತಿವಾದಃ

ಮುಳ್ಳಿಂಗೆ ಮೊನೆಯನಾರುಂ ಪುಟ್ಟಿಸುವರಿಲ್ಲದಂತೆ ಮೃಗ ಪಕ್ಷಿ ಸ್ಥಾವರ ಜಂಗಮಾದಿ ನಾನಾ ಸ್ವರೂಪ ಸಮಸ್ತಂಗಳ್ ಸ್ವಭಾವಂಗಳೆಂದು ನಿಶ್ಚೈಸುವುದು

-ಸ್ವಭಾವವಾದಃ

ಕುದೇವ ಕುದೃಷ್ಟಿ ಕುರಾಜ ಕುಲಿಂಗಿ ಕುತ್ಸಿತಜ್ಞಾನಿ ಅಜ್ಞಾನವೃದ್ಧ ಬಾಲಕ ಮಾತ್ರ ವಿಪರೀತ ದೃಕ್‌ವಾದಃ

ಸ್ವಚ್ಛಂದ ದೃಷ್ಟ್ಯಾ ವಿಕಲ್ಪಾಃ ಪಾಷಂಡಿನಾಂ ವ್ಯಾಕುಲ [ಹೇತವಶ್ಚೇತ್] ಅಜ್ಞ ಜೀವಾನಾಂ ಮನೋಹರಾಭವಂತಿ

ಪೌರುಷಮೇವ ಸರ್ವಂ ಪೌರುಷಂ ವಿನಾ ನಹಿ ಎಂಬುದು ಪೌರುಷವಾದಃ

ದೈವಬಲಂ ವಿನಾ ಪೌರುಷಂ ನಾಸ್ತಿ ದೈವಬಲಮೇ ಮುಖ್ಯವೆಂಬುದು

-ದೇವತಾವಾದಃ

ಏಕಹಸ್ತೇನ ಶಬ್ದೋನ ಹಿ ಏಕಚಕ್ರೇಣ ರಥಂ ನ ಗಮಯತಿ
ತಥಾ ಸಂಯೋಗೇ ಏವ ಸಕಲ ಪದಾರ್ಥೋ ಭವತೀತಿ
ಪಂಗ್ವಂಧಯೋಸ್ಸಂಯೋಗೇ ಸತಿ ನಗರಂ ಪ್ರವಿಷ್ಟಮಿತಿ

-ಸಂಯೋಗವಾದಃ

ಲೋಕವಾರ್ತಾಪ್ರವರ್ತನಂ ನಿಶ್ಚಯಮಿತಿ ಲೋಕಪ್ರವಾದಃ
ಯಾವದ್‌ವಚನ ವಿಕಲ್ಪಾಸ್ತೇ ನಯವಾದಾ ಭವಂತಿ

ಎಂದೀ ವಾದಂಗಳೊಂದೊಂದಂ ಪಿಡಿದು ನಡೆವರ್ ಮತ್ತಂ ಷಣ್ಮತಂಗಳ್ ಪುಟ್ಟಿದವು. ನಯ್ಯಾಯಿಕಂ ಕಾಣಾದಂ ಮೀಮಾಂಸಕಂ ಸಾಂಖ್ಯಂ ಬೌದ್ಧಂ ಚಾರ್ವಾಕಂ ಎಂಬೀ ಅರು ಮತಂಗಳವರೊಳು ಜಟಾವಿಶೇಷ ಯೌಗ ಪಾಶುಪತ ನೈಯಾಯಿಕ ಪಾದವಂತ ಸೃಷ್ಟಿ ಸಂಹಾರಕಾರಕ ಈಶ್ವರಃ ಕೇಚಿನ್ನಿರೀಶ್ವರಶ್ಶಿವೋ ದೇವತಾ ಪ್ರಮಾಣ ಪ್ರಮೇಯ ಸಂಶಯ ಪ್ರಯೋಜನ ದೃಷ್ಟಾಂತ ಸಿದ್ಧಾಂತ ಅವಯವ ತರ್ಕ ನಿರ್ಣಯವಾದ ಜಲ್ಪ ವಿತಂಡಾ ಹೇತ್ವಾಭಾಸ ಛಲ ಜಾತಿ ನಿಗ್ರಹಸ್ಥಾನಾನಿ ಷೋಡಶತತ್ತ್ವಾನಿ ಪ್ರತ್ಯಕ್ಷಮನುಮಾನಮುಪಮಾನಮಾಗಮಶ್ಚೇತಿ ಚತ್ವಾರಿಪ್ರಮಾಣಾನಿ ನಿತ್ಯಾನಿತ್ಯ ನಿರ್ಣಯಾದೇಕಾಂತವಾದಃ ದುಃಖಜನ್ಮಪ್ರವೃತ್ತಿ ಮಿಥ್ಯಾಜ್ಞಾನಾನಾಮುತ್ತರೋತ್ತರ ಪಾಯೇ ತದನಂತರಾ ಭಾವಾತಿ ತತ್ತ್ವಜ್ಞಾನಮ್ ತಸ್ಮಾತ್ ಭವತಿ. ಷಡಿಂದ್ರಿಯಾಣಿ ಷಡ್ಬುದ್ಧಯಃ ಷಡ್ವಿಷಯಾಃ ಸುಖ ದುಃಖ ಶರೀರಂಚೆತ್ಯೇಕವಿಂಶತಿ ಪ್ರಭೇದ ಭಿನ್ನಸ್ಯ ದುಃಖಸ್ಯಾಂತೋ ತಚ್ಛೇದೋ ಮೋಕ್ಷಃ-ಇತಿ ನೈಯಾಯಿಕ ಮತ ಪ್ರಮೇಯಮ್

ಕಾಣಾದಮ್ ಶೈವದರ್ಶನಮ್ ತತ್ರ ಶಿವೋದೇವತಾಃ ದ್ರವ್ಯಗುಣ ಕರ್ಮ ಸಾಮಾನ್ಯ ವಿಶೇಷ ಸಮವಾಯಾಃ ಷಟ್ಪದಾರ್ಥಃ ತತ್ತ್ವಂ ಪ್ರತ್ಯಕ್ಷಾನುಮಾನಾಗಮ ಇತಿ ಪ್ರಮಾಣತ್ರಯಮ್. ವಾದೋ ಮೋಕ್ಷಮಾರ್ಗಶ್ಚ ನೈಯಾಯಿಕಮ್. ಬುದ್ಧಿ ಸುಖ ದುಃಖೇಚ ದ್ವೇಷ ಪ್ರಯತ್ನ ಧರ್ಮಾಧರ್ಮ ಸಂಸ್ಕಾರ ರೂಪಾಣಾಂ ನವಾನಾಂ ವಿಶೇಷ ಗುಣಾನಾಮತ್ಯಂತೊಚ್ಛೇದೋ ಮೋಕ್ಷಃ

ಜೈಮಿಂನೀಯೊ ಮೀಮಾಂಸಕಃ ಭಾಟ್ಟ ದರ್ಶನಮ್ ತತ್ರ ದೇವತಾ ನಾಸ್ತಿ ನಿತ್ಯೇಭ್ಯೋ ದೇವತಾಖ್ಯ ಏವ ನಿಶ್ಚಯಃ ಬೋಧನಾಲಕ್ಷಣಂ ಧರ್ಮತತ್ತ್ವಂ ಪ್ರತ್ಯಕ್ಷ ಮನುಮಾನಮುಪಮಾನಮಾಗಮಾರ್ಥಾಪತ್ತಿ ಭಾವಾಶ್ಚೇತಿ ಷಟ್ಪ್ರಮಾಣಾನಿ ಪುರಾವೇದಪಾರಗಾಃ ಸ್ವರ್ಗಕಾಮೋಗ್ನಿಂ ಯಜೇದಿತಿ ದೇವನಿಹಿತಾನುಷ್ಠಾನಂ ಮೋಕ್ಷಮಾರ್ಗಃ ನಿತ್ಯ ನಿರತಿಶಯ ಸುಖಾಭಿವ್ಯಕ್ತಿರ್ಮೋಕ್ಷಃ

ಸಾಂಖ್ಯದರ್ಶನೇ ಮರೀಚಿದರ್ಶನಂ ತತ್ರ ಕೇಚಿನ್ನಿರೀಶ್ವರಃ, ಕೇಚಿದೀಶ್ವರದೇವತಾಃ ಕಪಿಲ ಏವಃ ಪಂಚವಿಂಶತಿತತ್ತ್ವಾನಿ, ಸತ್ವ ರಜಸ್ತಮಸ್ಸ ಸಾದ್ಯ್ಯವಸ್ಥಾಪ್ರಕೃತಿಃ ಮಹತೋಹಂಕಾರಃ, ಅಹಂಕಾರಾತ್ ಪಂಚತನ್ಮಾತ್ರಾಣಾಮೇಕಾದಶೇಂದ್ರಿಯಾಣಾಂ ತತ್ರ ಶಬ್ದಮಾತ್ರಾದಾಕಾಶಂ,

ರೂಪ ತನ್ಮಾತ್ರಾತ್ತೇಜಃ, ಗಂಧ ತನ್ಮಾತ್ರಾತ್ಪೃಥಿವೀ, ರಸ ತನ್ಮಾತ್ರಾದಾಪಃ, ಸ್ಪರ್ಶ ತನ್ಮಾತ್ರಾದ್ವಾಯುಃ ಬುದ್ಧೀಂದ್ರಿಯಪಂಚಕಂ, ಕರ್ಮೇಂದ್ರಿಯಪಂಚಕಂ ಚ ಏಕಾದಶಂ ಮನಯಿತಿ ಅಮೂರ್ತಶ್ಚೈತನ್ಯರೂಪಃ ಕರ್ತಾಭೋಕ್ತಾಚ ಪುರುಷಪುಂಗವತ್ ಪ್ರಕೃತಿ ಪುರುಷಯೊಗಾತ್ ಪ್ರತ್ಯಕ್ಷ ಅನುಮಾನ ಶಬ್ದಪ್ರಮಾಣಾನಿತ್ಯೇಕಾಂತವಾದಃ ಪಂಚವಿಂಶತಿತತ್ತ್ವಜ್ಞಾನಂ ಮೋಕ್ಷಮಾರ್ಗಃ ಪ್ರಕೃತಿ ಪುರುಷ ವಿವೇಕ ದರ್ಶನಾನ್ನಿವೃತ್ತಾಯಾಂ ಪ್ರಕೃತಿಪುರುಷಾವಸ್ಥಾನಂ ಮೋಕ್ಷಃ

ಸೌಗತಃ ಶೂನ್ಯವಾದೀ, ಬೌದ್ಧಃ ಪದಾಭಿಕ್ಷುಕಃ, ತೇಷಾಂ ದರ್ಶನೇ ಬುದ್ಧೋ ದೇವತಾ, ದುಃಖಸಮುದಯ ಮೋಕ್ಷಮಾರ್ಗರೂಪಾಣಿ ಚತ್ವಾರ್ಯಾರ್ಯತತ್ತ್ವಾನಿ ತತ್ತ್ವಾನಿ ಪ್ರತ್ಯಕ್ಷಮನುಮಾನಂ ಚೇತಿದ್ವೇ ಪ್ರಮಾಣೇಕ್ಷಣೈಕಾಂತವಾದಾಃ ಸರ್ವೇ ಸರ್ವಕ್ಷಣಿಕತ್ವಂ, ಸರ್ವ ನೈರಾತ್ಮ್ಯವಾಸನಾ ಮೋಕ್ಷಮಾರ್ಗಃ ವಾಸನಾಕ್ಲೇಶ ಸಮುಚ್ಛೇದ ಪ್ರದೀಪಶ್ಚೈವ ಜ್ಞಾನಸಂತಾನಸ್ಯೋಚ್ಛೇದೋಮೋಕ್ಷಃ

ರಾಗಾದಿ ಕ್ಲೇಶಸಂತಾನ ವಾಸನೋಚ್ಛೇದಸಂಭವಃ
ಚತುರ್ಣಾಮಪಿ ಬೌದ್ಧಾನಾಂ ಮುಕ್ತಿರೇಷಾ ಪ್ರಕೀರ್ತಿತಾ

ನಾಸ್ತಿಕ ಲೋಕಾಯತಿಕ ಚಾರ್ವಾಕ ಇತಿ ತೇಷಾಂ ದರ್ಶನಂ ನಾಸ್ತಿ, ದೇವೋ ನಾಸ್ತಿ, ಜೀವೋ ನಾಸ್ತಿ, ಪಾಪಂ ನಾಸ್ತಿ, ಪರಲೋಕೋ ನಾಸ್ತಿ, ಮೋಕ್ಷಃ [ನಾಸ್ತಿ], ತತ್ತ್ವಾನಿ ಭೂತಾನಿ, ಪ್ರತ್ಯಕ್ಷಮೇವೈಕಂ ಪ್ರಮಾಣಂ, ಪೃಥಿವ್ಯಾಂ ವಿಷಮ ವಾಯನ್ಮಧ್ಯಾದಗೇಭ್ಯೋಮದ ಶಕ್ತಿವಚ್ಛೈತನ್ಯಶಕ್ತಿಃ ಅದೃಷ್ಟ ಪರಿತ್ಯಾಗೇನ ದೃಷ್ಟ್ವ ಸುಖೋಪ ಭೋಗ ಏವ ಪುರುಷಾರ್ಥಃ ದುರ್ನಯ ಬಲಪ್ರಭಾವಿತ ಸತ್ತಾಕಾಹಿ ಬಲತ್ವೇತಿ ಪ್ರವಾದಃ ತಥಾಹಿ-ನೈಗಮನಯಾನುಸಾರಿಣಾ ನೈಯಾಯಿಕ ವೈಶೇಷಿಕೌ ಸಂಗ್ರಹಯಾನುಸಾರಿಣಃ ಸರ್ವೇ ಮೀಮಾಂಸಕಾಃ, ಶೇಷಾಣಾಮದ್ವೈತವಾದಃ, ಸಾಂಖ್ಯ ದರ್ಶನಸ್ಯ ಚ ವ್ಯವಹಾರ ನಯಾನುಸಾರಿಣ ಪ್ರಾಯಶ್ಚಾರ್ವಾಕಾಃ ಋಜುಸೂತ್ರನಯಾನುಸಾರಿಣೋ ಬೌದ್ಧಾಃ

ಶಬ್ದಾದಿನಯಾ ದೇವಲಂಬಿನೋ ವೈಯಾಕರಣಾದಯಃ ಏತೇನಿತ್ಯಾನಿತ್ಯಾದ್ಯನಂತ ಧರ್ಮಾತ್ಮಕೇ ವಸ್ತುನಿಸ್ವಾಭಿಶ್ರಿಪ್ರೇತೈಕ ಧರ್ಮಸಮರ್ಥನ ಪ್ರಮಾಣಾಃ ಶೇಷಧರ್ಮ ತಿರಸ್ಕಾರೇಣ ಪ್ರವರ್ತಮಾನ ದುರ್ನಯಾ ಇತ್ಯಾರ್ಹತಮತೇ ಸೂಚ್ಯತೇ ರೂಪ ರಸ ಗಂಧ ಸ್ಪರ್ಶ ಶಬ್ದಾಶ್ಚೇತಿ ಪಂಚಸ್ಕಂಧಾಃ ಆತ್ಮ ಸೌಗತಃ ಚಾರ್ವಾಕಃ ಪೃಥಿವ್ಯಾದಿ ಚತ್ವಾರಿ ಭೂತಾನಿ ಯೌಗಮತೇ ನೈಯಾಯಿಕೇ ಷೋಡಶ ವೈಶೇಷಿಕೇ ದ್ರವ್ಯಗುಣ ಸಾಮಾನ್ಯ ವಿಶೇಷ ಸಮವಾಯಾ ಸಮವಾಯಾಶ್ಚೇತಿ ಮೀಮಾಂಸಕಮತೇ ಭಾಟ್ಟೇ ದ್ರವ್ಯ ಗುಣಕರ್ಮ ಸಾಮಾನ್ಯ ಶಕ್ತಿ ಸಂಖ್ಯಾ ಸಾದೃಶ್ಯಾ ಭಾವಶ್ಚೇತ್ಯಷ್ಟೌ ಪದಾರ್ಥಾಃ ಪ್ರಾಭಾಕರೇ ದ್ರವ್ಯಗುಣ ಸಾಮಾನ್ಯ ಸಮವಾಯ ಶಕ್ತಿ ಸಂಖ್ಯಾ ಸಾದೃಶ್ಯಾನಿ ತ್ಯಷ್ಟೌ ವೇದಾಂತಿನಾಂತು ಬ್ರಹ್ಮಲಕ್ಷಣಾನಾಂತು ಏಕಏವ ಪದಾರ್ಥಃ ವ್ಯವಹಾರಿ ಭಾಟ್ಟ ಪ್ರತ್ಯಕ್ಷಾದಿ ನಿಮಿತ್ತಂ ಸ್ಮೃತಿಃ ಪ್ರತ್ಯಭಿಜ್ಞಾನ

ತರ್ಕಾನುಮಾನಾಗಮಭೇದೇನ ಷಟ್ಪ್ರಮಾಣಾನಿ ಸಪ್ತವಿಂಶತಿ ತತ್ತ್ವಾನಿ ಮುಕ್ತೇಃ ಸ್ವರೂಪಂ ನಾನ್ಯಥಾ ಪ್ರತಿಪಾದಯಂತಿ ಪ್ರಮುಗ್ಧ ಲುಬ್ಧ ಲೋಕಾನಾಂ ತಥಾಹಿ ಸಕಲ ನಿಷ್ಕಲಾ ಪ್ರಾಪ್ತ ಮಂತ್ರತಂತ್ರಾಪೇಕ್ಷಾವೀಕ್ಷಣಾತ್ ಶ್ರದ್ಧ ಮಾತ್ರಾನುಸ್ಮರಣಾನ್ಮೋಕ್ಷ ಇತಿ ತಾರ್ಕಿಕ ಸಿದ್ಧಾಂತ ವೈಶೇಷಿಕ ದ್ರವ್ಯಗುಣ ಸಾಮಾನ್ಯ ವಿಶೇಷ ಸಮಯಾವಾ ಭಾವಾನಾಂ ಪದಾರ್ಥಾನಾಂ ಸೌಧರ್ಮ ವೈಧರ್ಮ ಬೋಧಾ ಭಾಟ್ಟತತ್ರಾಭ್ಯಾಂ ಜ್ಞಾನಮಾತ್ರಾನ್ಮೋಕ್ಷಃ ಇತಿ ತಾರ್ಕಿಕ ವೈಶೇಷಿಕಾಃ ತ್ರಿಕಾಲಭಸ್ಮಧೂಲನೇ ವಾಗ್ಯುದ್ಧ ಪ್ರಧಾನ ಪ್ರದಕ್ಷಿಣೇ ಕರಣಾತ್ಮಕ ವಿಡಂಬನಾದಿ ಕ್ರಿಯಾಣಾಂ ರಾಗಾವಿಷ್ಟಾನುಷ್ಠಾನಾದಿವ ಮೋಕ್ಷ ಇತಿ ಪಾಶುಪತಾಃ ಸರ್ವೇಷಂ ಪೇಯಾಪೇಯ ಭಕ್ಷ್ಯಾಭಕ್ಷ್ಯಾದಿಷು ವಿಶಂಕಚಿತ್ತಾದ್ವ್ಯಕ್ತಾ ವೃತ್ತಾನ್ ಮೋಕ್ಷ ಇತಿ ಕೌಶಲ್ಯಾಚಾರ್ಯಃ

ತಥಾ ಚಿತ್ರಮತೋಕ್ತಿ:

ಮದಿರಾಮೋದ ಮೇದುರವದನಾಂತರಸ ಪ್ರಸನ್ನ ಹೃದಯಃ ಸರ್ವಪಾಶಾನ್ವಿತೇ ಶಕ್ತಿಃ ಮುದ್ರಾಸನ ಧರಃ ಸ್ವಯಮ್|| ಉಮಾಮಹೇಶ್ವರಂ ಯಮಾನೋ ನಿತ್ಯಮಂತ್ರೇಣ ಪಾರ್ವತೀಶ್ವರಮಾರಾಧಯೇದಿತಿ ಮೋಕ್ಷಃ ಅಂಗಾರಾಗಾಂಜನಾದಿ ವತ್ಸ್ವಭಾವಾದೇವನ ಕಾಲುಷ್ಯೋತ್ಕರ್ಷ್ಯತಸ್ಯ ನ ಕುತಶ್ಚಿದಿತಿ ಜೈಮಿನೀಯಾಃ ಪರಬ್ರಹ್ಮದರ್ಶನಪರಾರ್ಧಶೇಷ ವೇದಸಂವೇದನಾ ವಿದ್ಯಾವಶಾನ್ಮೋಕ್ಷಃ ಇತಿ ವೇದಾಂತಿನಃ ಬುದ್ಧಿ ಸುಖದುಃಖೇಚ್ಛಾ ದ್ವೇಷ ಪ್ರಯತ್ನ ಧರ್ಮಾಧರ್ಮ ಸಂಸ್ಕಾರಾಣಾಂ ನವಾನಾಮಾತ್ಮಗುಣಾನಾಮತ್ಯಂತೋಚ್ಛಿತ್ತಿರಿತಿ ಕಾಣಾದಾಃ ಸಧರ್ಮಿಭಿಃ ಧರ್ಮಾಶ್ಚಿಂತ್ಯಂತೇ ತಥಾ ಪರಲೋಕಸ್ಯ ಭಾವಾತ್ಪರಲೋಕಾಭಾವೇತಸ್ಯಾ ಸೌಮೋಕ್ಷ ಇತಿ ಸಮಾಪ್ತ ಸಮಸ್ತ ನಾಸ್ತಿಕಾಧಿಪತ್ಯ ಬಾರ್ಹಸ್ಪತ್ಯಾ, ತಥಾ ನಿರಾಶ್ರಯೋತ್ಪತ್ತಿಮುಕ್ತಿರಿತಿ, ತಥಾಗತಾಃ ದೀಪೋ ಯಥಾ ನಿರ್ವೃತಿಮಭ್ಯುಪೈತೀತಿ, ಇದ್ಧಿ ಮನೋಹಂಕಾರ ಕ್ಲೇಶಾಪನೋದಾಖಿಲೇಂದ್ರಿಯ ವಾಕ್‌ದ್ರಷ್ಟ್ರುಸ್ಥಾನೇಮುಕ್ತಿಕಾಲ್ಪಲಾ (?) ಪ್ರಕೃತಿರ್ವಿಕೃತೇರ್ವಿವೇಕ ಖ್ಯಾತಿರಿತಿ ಸಾಂಖ್ಯಾಃ ಯಥಾಘಟ ವಿಘಟಿತೇಘಟಾಕಾಶಮಾಕಾಶಿ ಭವೇತ್ತಥಾ ದೇಹೋಚ್ಛೇದಾತ್ಸರ್ವ ಪ್ರಾಣಿಮೋಲೀಯುತ ಇತಿ ಬ್ರಹ್ಮಾದ್ವೈತವಾದಿನಃ

ಸದಾಶಿವಃ ಸದಾ ಕರ್ಮೋಚ್ಛಿತಃ ಸಾಂಖ್ಯೋಮುತ್ತಗುಣೋಜ್ಝಿತಃ
ಮಸ್ಕರೀಕಿಳಮುಕ್ತಾನಾಂ ಮನ್ಯತೇ ಪುನರಾಗತಿಂ
ಕ್ಷಣಿಕಂ ನಿರ್ಗುಣಂಚೈವ ಬುದ್ಧೋ ಯೋಗಶ್ಚಮನ್ಯತೇ
ಕೃತಕೃತ್ಯಂತಮಿಶಾನೋ ಮಂಡಲೀಚೋರ್ಧ್ವವರ್ತಿನಮ್
ಅಪೂರ್ವಲಾಭಮುದ್ದಿಶ್ಯ ಜನಸ್ಸರ್ವಃ ಪ್ರವರ್ತತೇ
ನಹಿ ಮೂಲವಿನಾಶಾಯ ಪ್ರೇಕ್ಷಾವಾನ್ ಕಶ್ಚಿದೀಹತೇ

ಈ ಪ್ರಕಾರ ನಾನಾವಿಧ ಶ್ರದ್ಧಾಭಾವದಿಂದೊಂದು ಸಮಯಮಂ ಪಿಡಿದು ಕೆಲವು ಕಾಲಂ ಸಲೆ ಭದ್ರಿಳಾಪುರದ ಮೇಘರಥನೆಂಬರಸನಾತನ ಮಂತ್ರಿ ಸತ್ಯಕೀರ್ತಿಯೆಂಬಂ ಪುರೋಹಿತಂ

ಭೂತಿಶರ್ಮನ ಮಗಂ ಮುಂಡಶಾಲಾಯನಂ ಅರಸನ ಚಿತ್ತವೃತ್ತಿಯನರಿದು ದಶ ದಾನಂಗಳ ಪ್ರಶಂಸೆಗೆಯ್ದುವಕ್ಕಂ ಗ್ರಂಥಗಳಂ ರಚಿಸಿದನಂದಿಂದಂ ದಶದಾನಂ ಪ್ರವರ್ತಿಸುತ್ತಿಪ್ಪುದು. ಮತ್ತಂ ಚಂಪಾನಗರಿಯೊಳ್ ಪದ್ಮರಥನೆಂಬರಸಂ ಬಲಿ-ಬೃಹಸ್ಪತಿ-ಶುಕ್ರರೆಂಬ ಬ್ರಾಹ್ಮಣರ್ಗೆ ಮೆಚ್ಚಿ, ಸಪ್ತದಿನಂಬರಂ ರಾಜ್ಯಭಾರಮನೀಯೆ ಮಹಾಮುನಿಗಳ್ಗುಪಸರ್ಗಮಾಗಿರಲ್ ವಿಷ್ಣುಮುನಿ ವಾಮನಾವತಾರದಿಂ ಬಂದು ಮೂರಡಿ ಭೂಮಿಯಂ ಬೇಡಿ ಬಳೆದು ಭೂಮಿಯೆಲ್ಲವೊಂದಡಿಯಾಗಲಾಕಾಶದೊಳೊಂದಡಿಯಿಡೆ ಮತ್ತೊಂದಡಿಗೆಡೆಯಿಲ್ಲದಿರಲಾಗ ತ್ರಿಲೋಕದವರ್ ಪೂಜಿಸಿದರ್. ತದನಂತರಂ ಸಹಸ್ರಬಾಹುವೆಂಬರಸನಯೋಧ್ಯೆಯೊಳಿರ್ದು ರಾಜ್ಯಂಗೆಯ್ವಂದು ಜಮದಗ್ನಿರಾಮಂ ದೇವತೆಗಳ ಕಾರಣದಿಂ ಭಗ್ನತಪನಾಗಿ ಬಂದು ಕನ್ಯಾದಾನಮಂ ಬೇಡಿದೊಡರಸನ ತನೂಜೆಯರಾರುಮೊಲ್ಲದಿರೆ ಕಿರಿಯ ರೇಣುಕೆಯೆಂಬೀ ಬಾಲಿಕೆಯಂ ಕುಡೆ ತನ್ನಾಶ್ರಮಕ್ಕೊಯ್ದು ಬೆಳೆಯಲು ಕಾಮ ಭೋಗದೊಳಿರಲಾಕೆಗೆ ಇಂದು ರಾಮ ಪರಶುರಾಮರ್(?) ಪುಟ್ಟಿರಲೊಂದು ದಿನಂ ರೇಣುಕೆಯಣ್ಣನಪ್ಪಂ ಸಪ್ತರ್ಧಿಸಂಪನ್ನ ಮಹಾಮುನಿಗಳ ಅರಣ್ಯಂ ಚರಿಗೆವರೆ ರೇಣುಕೆ ನಿರಂತರಾಯಮಾಹಾರಮಂ ಕುಡೆ, ಕೊಂಡುಪೋಪರಂ ತಡೆದೆನಗೆ ಬಳುವಳಿಯಂ ಕೊಡಲಿಲ್ಲೀಗಂ ಕೊಡುವುದೆಂದು ಬೇಡುವುದುಂ ಕರುಣಿಸಿ ಸಮ್ಯಗ್ದರ್ಶನಮಂ ಕೈಕೊಳಿಸಿ, ಕಾಮಧೇನುವಿದ್ಯಮಂ ಕೊಟ್ಟು, ತದ್ರಕ್ಷಣಾರ್ಥಂ ಪರಶುವಿದ್ಯಮಂ ರಾಮಂಗಿತ್ತು ಪೋಗಲಾ ವಿದ್ಯೆಯಿಂ ಕಾಮಧೇನುವಂ ಪಡೆದಿರೆ ಸಹಸ್ರಬಾಹು ಕೃತವೀರಂವೆರಸು ವನವಿಹಾರಕ್ಕೆ ಬರಲಾತನಂ ಜಮದಗ್ನಿ ರಾಮಂ ನಿಲಿಸಿ ಚತುರಂಗಸಹಿತಮಾಗೆಲ್ಲರ್ಗಂ ನಾನಾ ವಿಧಾಹಾರಂಗಳಿಂ ತೃಪ್ತಿಯಂ ಮಾಡಿಸಲರಸನೀತಂಗೀ ಸಾಮರ್ಥ್ಯವೆಂತಾದುದೆನೆ ಕಾಮಧೇನುವಿಪ್ಪುದಂ ಪೇಳ್ವುದುಮದಂ ಬೇಡಿದೊಡೀಯದಿರೆ ಬಲಂಬೆರಸು ಬಂದು ಜಮದಗ್ನಿಯಂ ಕೊಂದು ಕಾಮಧೇನುವಂ ಕೊಂಡುಪೋಗಲನಿತರೊಳಿಂದು ರಾಮ-ಪರಶುರಾಮರ್ ಸಮಿದ್ದರ್ಭೆಯಂ ತರಲ್ಪೋಗಿರ್ದುವರೆ ರೇಣುಕೆ ಎದೆಯಂ ಪೊಯ್ದುಕೊಳ್ಳಲದ ಲೆಕ್ಕಿಸುತ್ತಿರ್ದೊಡಿಪ್ಪತ್ತೊಂದು ವೇಳೆಯಾಗಿ ನಿಲ್ವುದುಮಿದೇನೆಂದು ಬೆಸಗೊಳಲರಸಂ ಬಂದು ನಿಮ್ಮ ತಂದೆಯಂ ಪರಿಹರಿಸಿ ಕಾಮಧೇನುವನೊಯ್ದನೆಂಬುದುಂ, ಕೋಪಿಸಿ ಪರುಷಗೊಡಲಿಯಂ ಕೊಂಡೆಯ್ದಿ ಪಟ್ಟಣಮಂ ಪೊಕ್ಕು ಏಕಾಂಗವೀರನಾಗಿ ಚತುರಂಗಬಲಮೆಲ್ಲಮಂ ಕೊಂದು ಇದಿರಾದ ಸಹಸ್ರಬಾಹುಮಂ ಕೊಂದು ರಾಜ್ಯಮನಾಳುತ್ತುಮನೇಕಾಗ್ರಹಾರ ಸತ್ರಾದಿಗಳಂ ಮಾಡಿಸಿ ಇಪ್ಪತ್ತೊಂದು ವೇಳೆ ಕ್ಷತ್ರಿಯರಂ ನಿರ್ಮೂಲನಂ ಮಾಡಿ ರಾಜ್ಯಮನಾಳುತ್ತಿರಲಾ ಸಹಸ್ರಬಾಹುವಿನರಸಿ ಚಿತ್ರಮತಿ ಗರ್ಭಿಣಿಯಾಗಿರ್ದು ತನ್ನ ಪತಿಯ ಕೊಲ್ವಾಗಳಂಜಿ ಪುರಮಂ ಪೊರಮಟ್ಟು ಶಾಂಡಿಲ್ಯಂ ಋಷ್ಯಾಶ್ರಮದೊಳಿರ್ದು ಬಾಲಕನಂ ಪಡೆದು, ಸುಭೌಮನೆಂಬ ಪೆಸರಾಗಲಾತಂ ಬಳೆದು, ನವಯವ್ವನನಾಗಿ ಬಂದು ಪರಶುರಾಮನಂ ಕಡೆಗಾಣಿಸಿ ಚಕ್ರವರ್ತಿಯಾಗಿರ್ದಂ ಜಿಹ್ವಾಲಂಪಟದೊಳ್ ಸಮುದ್ರತೀರದೊಳ್ ವ್ಯಂತರನಿಂದಪಗತಜೀವಿಯಾದಂ. ಮತ್ತಮಾ ಸಾಕೇತನಗರದೊಳಾನಂದಮಹಾರಾಜಂ ಗುರೂಪದೇಶದಿಂ ಸೂರ್ಯಬಿಂಬದೊಳಿರ್ಪ ದೇವನಂ ತ್ರಿಕಾಲದೊಳರ್ಘ್ಯಪಾದ್ಯಾದಿಗಳಿನಷ್ಟವಿಧಮಪ್ಪರ್ಚನೆಯಿಂದರ್ಚಿಸುತ್ತುಂ ಸ್ತುತಿಸಿ

ನಮಸ್ಕಾರಮಮಂ ಮಾಡಲಂದಿಂದಿತ್ತಲ್ ಸೂರ್ಯದೇವರುಪಾಸನೆಯಂ ಮಾಡುತ್ತುಂ ಬಂದರಲ್ಲಿ ಸೌರಮತಮಾಯ್ತು.

ಮತ್ತಮಯೋಧ್ಯಾಪುರದ ರಾಮಸ್ವಾಮಿಯ ತ್ರಿಜಗದ್ಭೂಷಣನೆಂಬ ಪಟ್ಟದ ಗಜೇಂದ್ರಂ ಮದದಿಂ ಬಪ್ಪವಸರದೊಳ್ ಭರತಂ ಬರೆ ಕಂಡು ಜಾತಿಸ್ಮರನಾಗಿ ಪೂರ್ವಭವಮಂ ತಿಳಿದಾ ಭರತನೊಡನಿರ್ದು ಪುಲ್ಲು ಕವಳಮಂ ಕೊಳ್ಳದಿರಲದರ ವೃತ್ತಾಂತಮಂ ತ್ರಿಜ್ಞಾನದರಸಂಗೆ ತಿಳಿಪೆಯದಕ್ಕೆ ವ್ರತನಿಯಮಂ ಕುಡೆ ಜ್ಞಾನಿಯಾಗಿರ್ಕೆಕೊಂಡು ಮಧ್ಯಾಹ್ನದೊಳ್ ಮನೆ ಮನೆ ಬಾಗಿಲೊಳ್ ಬಂದು ಪ್ರಾಸುಕಮಾಗಿ ಶುದ್ಧಾಹಾರಮಂ ಕೊಟ್ಟೆಡೆಯೊಳ್ ಕೊಂಡೊಡದಕ್ಕೆ ನೆನೆದಕ್ಕಿ ಕಡಲೆ ಚಿಗುಳಿ ತಂಬಿಟ್ಟು ಹಣ್ಣುಕಾಯಂ ಕೊಡುತ್ತಿರ್ದೊಡದು ಕಾಲಮಂ ಕಂಡು ದೇವನಾಗೆಯದರ ಪ್ರತಿರೂಪಂ ಶಿಲೆ ಮೊದಲಾದವರೊಳ್ ಮಾಡಿ ಪೂಜಿಸಲಾದೇವಂ ಪ್ರತ್ಯಕ್ಷನಾಗಿ ಜನರ ಮನೋಭೀಷ್ಟಮಂ ಸಲಿಸುತ್ತಿರೆ ದೇವಸಮೂಹಕ್ಕಧೀಶನಾದುದರಿಂ ಗಣೇಶನೆಂದು ಭಾದ್ರಪದ ಶುದ್ಧ ಚತುರ್ಥಿಯಲ್ಲ ಪ್ರತಿಷ್ಠೆಯಂ ಮಾಡಿದರ್.

ಮತ್ತಂ ವಜ್ರಬಾಹುವೆಂಬರಸಂ ವನವಿಹಾರಕ್ಕೆ ಪೋದಲ್ಲಿ ಒಂದು ರಮ್ಯ ಪ್ರದೇಶದೊಳ್ ವಂತೀಯವೃಕ್ಷಕ್ಕೆ ಮಲ್ಲಿಕಾಲತಾರೋಹಣಮಾಗಿರಲಲ್ಲಿಗೆಯ್ದಿ ನೋಡಲತಿಶಯಮಾಗಿರಲಲ್ಲಿ ದೇವತಾ ಮಹತ್ವಮಂ ಕಂಡೆಲ್ಲಮಂ ಕಂಡೆಲ್ಲರುಂ ಪೂಜಿಸಲವರವರ್ಗೆ ವರಮಂ ಕೊಟ್ಟುದರಿಂ ಮಲ್ಲಿಕಾರ್ಜುನನೆಂದಲ್ಲಿಂ ಬಳಿ[ಕ] ಸರ್ವರ್ ಪೂಜಿಸಿದರ್. ಆ ಕಾಲದೊಳ್ ಭಾರದ್ವಾಜ ಕಾಶ್ಯಪಾದಿಋಷಿಗಳ್ ಸಕಲ ಶಾಸ್ತ್ರಾದಿಗಳಂ ಕಲ್ತು ದೇವತಾ ಭೇದಂಗಳಂ ವಿಂಗಡಿಸಿ, ಬ್ರಹ್ಮ-ವಿಷ್ಣು-ಮಹೇಶ್ವರರ ಕಥಾಪ್ರಪಂಚಮಂ ಇತಿಹಾಸಂಗಳನನೇಕ ಪ್ರಕಾರವಾಗಿ ರಚಿಸಿ ಅರಸನ ಸಭೆಯೊಳ್ ಪೇಳಿ ಪೂಜ್ಯರಾದರ್. ಅದರೊಳ್ ಬ್ರಹ್ಮಂ ಸೃಷ್ಟಿಕರ್ತನಾತಂ ಶ್ರೇಷ್ಠನೆಂದರ್. ಕೆಲರ್ ಮಹಾವಿಷ್ಣುವೇ ಕರ್ತೃವೆಂದರ್. ಕೆಲಂಬರ್ ಈಶ್ವರಂ ಸರ್ವಶ್ರೇಷ್ಠನೆಂದರ್. ಇಂತು ಸಂವಾದಮಾಗಲೆಲ್ಲರುಂ ಸಮ್ಮತಿಸಿ ಮೂವರಂ ಸಮವೆಂದರ್.

ಆದಿಶಕ್ತಿಮಯಂ ಬೀಜಂ ಬೀಜಶಕ್ತಿಮಯಂ ಶಿವಃ
ಶಿವಶಕ್ತಿಮಯೋ ವಿಷ್ಣುಃ ಸರ್ವಂ ವಿಷ್ಣುಮಯಂ ಜಗತ್ ||
ಕಾರ್ಯೋ ವಿಷ್ಣುಃಕ್ರಿಯಾಬ್ರಹ್ಮಾ ಕಾರಣಂ ತು ಮಹೇಶ್ವರಃ
ಏಕಮೂರ್ತಿಸ್ತ್ರಯೋ ಭಾಗಾಃ ಬ್ರಹ್ಮಾ ವಿಷ್ಣು-ಮಹೇಶ್ವರಾಃ ||

ಎಂದನೇಕತೆರದ ಶಾಸ್ತ್ರಂಗಳಂ ಮಾಡಿದರಲ್ಲಿ ಭಾಟ್ಟ-ಪ್ರಭಾಕರ-ಮೀಮಾಂಸಕ- ವೈಶೇಷಿಕ-ಸೌತ್ರಾಂತಿಕ-ಯೋಗಾಚಾರ-ಮಾಧ್ಯಮಿಕರೆಂಬಿವರ್ಗೆ ಪರಸ್ಪರ ವಿರೋಧಂ ಪುಟ್ಟಿ ತಮ್ಮ ತಮ್ಮ ಶಾಸ್ತ್ರದಿಂ ವಾದಮಂ ಮಾಡುತ್ತಿರ್ದರ್. ರಾಮಪ್ರಪಿತಾಮಹನಜ ಮಹಾರಾಜಂ ಅನರಣ್ಯನೆನಿಸಿರ್ದಂ.

ಇದು ಸತ್ಯಪ್ರವಚನ ಕಾಲಪ್ರವರ್ತನದೊಳ್ ಕಿಂಚಿತ್ತನೆತ್ತಿ ವಿಬುಧೇಂದಂ ವಿರಚಿತಮಾದ ರಾಜಾವಲಿ ಕಥಾಸಾರದೊಳ್ ಷಣ್ಮತೋತ್ಪತ್ತಿಋಋಋ ವರ್ಣನಂ

ದ್ವಿತೀಯಾಧಿಕಾರಂ

ತೃತೀಯಾಧಿಕಾರಂ

ಶ್ರೀಸುಜನಸ್ತುತರಖಿಳ ಕ
ಳಾಸದನರ್ ಮೋಹತಿಮಿರಮಂ ಕಳೆದು ಕರಂ
ಭಾಸುರ ವಿಚಾರದಕ್ಷರ್
ವೈಷಮ್ಯಮನುಳಿದು ಕೇಳ್ವುದೀ ಸತ್ಕೃತಿಯಂ

ಮುಂದಣ ಕಥೆಯೇನೆಂದೊಡೆ ಚಂಪಾಪುರದರಸಂ ದಂತಿವಾಹನನಾತನರಸಿ ಪದ್ಮಾವತಿ ಗರ್ಭವಾಗಲಾಕೆಯ ಬಯಕೆಯಂ ತೀರ್ಚಲ್ ಪೋಪಾಗಲಾನೆಯನೇರಿಸಿಕೊಂಡು ಪೋಗುತ್ತಿರಲದು ಪೂರ್ವಜನ್ಮದ ವೈರದಿಂದಿರ್ವರುಮನರಣ್ಯದೊಳ್ ತಿರುಗಿಸುತ್ತಿರಲೊಂದುಮರದಡಿಯಂ ಪೊಗಲಾ ಸಮಯದೊಳಾ ಮರನಂ ಪಿಡಿದು ಪತ್ತಿದಂ ಆ ಪದ್ಮಾವತಿಯಂ ಕೊಂಡು ತಿರುಗುತ್ತುಮೊಂದು ಸರೋವರಮಂ ಪುಗೆಯಲ್ಲಿ ಬೀಳ್ವಳಂ ಸೊಂಡಿಲಿಂ ತೆಗೆದು ಸರೋವರದ ವೇದಿಕೆಯೊಳಿರಿಸಲೊರ್ವಂ ಕಮಲಮಂ ಕೊಳ್ಳಲ್ ಬಂದ ವೈಶ್ಯಂ ನೀನಾರೆಂಬುದುಂ ತನ್ನ ವೃತ್ತಾಂತಮಂ ಪೇಳೆ ತನ್ನನುಜಾತೆಗೆ ಸಮವೆಂದು ತನ್ನರಸಿಗೆ ಇವಳನಾದರಿಸೆಂದಪ್ಪೈಸಲವಳ್ ಅತ್ಯಂತ ಕೋಪದಿಂ ಮನೆಯಿಂ ತಗುಳ್ವುದುಂ, ಪದ್ಮಾವತಿ ಸ್ಮಶಾನದೊಳ್ ಪ್ರಸವಿಸಲೊರ್ವ ವಿದ್ಯಾಧರನ ವಿದ್ಯಮೆಲ್ಲಮಂ ಧರಣೇಂದ್ರಂ ವಿನಾಶಕ್ಕೆ ಸ[ಲಿ]ಸಲಾತಂ ಬೇಡಿಕೊಳೆ ಉಜ್ಜಯನಿಯ ಪ್ರೇತಾವಾಸದೊಳ್ ಪುಟ್ಟಿದಾ ತಂ[ಗೆ] ಧರಣೇಂದ್ರಂ ಪ್ರಸನ್ನನಪ್ಪನಾಗಳ್ ತನ್ನ ವಿದ್ಯಂ ಕೈಸಾರ್ಗುಮೆಂಬಾದೇಶದಿಂ ಸತಿಗೂಡಿ ಕಾಯ್ದುಕೊಂಡಿದ್ದ ಕೂಸಂ ಬೇಡಿಕೊಂಡು ತನ್ನಾವಾಸದೊಳ್ ಕರಕಂಡುವೆಂಬ ಪೆಸರಿಟ್ಟು ಸಾಕುತ್ತುಮಿರೆ ನವಯವ್ವನದೊಳಾ ಪುರದರಸಂಗೆ ಸಂತಾನಮಿಲ್ಲದುದರಿಂದಾನೆಯನರ್ಚಿಸೆ ಅಜು ಕರ ಕಂಡುವಂ ಪೂಜಿಸಿ ಸಿಂಹಾಸನಮನೇರಿಸೆ ಪಟ್ಟಂಗಟ್ಟಿರಲ್

ಅತ್ತ ಚಂಪಾನಗರಿಯೊಳಿರ್ದ ದಂತಿವಾಹನಂ ಮಗನೆಂಬುದರಿಯದೆ ಸಮರಕ್ಕುದ್ಯುಕ್ತನಪ್ಪುದುಂ ಕರಕಂಡು ಮಹಾರಾಜನ ತಾಯಪ್ಪ ಪದ್ಮಾವತಿ ಬಂದು ತದ್ವೃತಾಂತಮೆಲ್ಲಮಂ ಪೇಳಲೊಡಂ ದಂತಿವಾಹನಂ ಚಂಪಾನಗರಕ್ಕಾತನನರಸನಂ ಮಾಡಿ ಸುಖಮಿರಲಾ ಪುರದ ದಕ್ಷಿಣ ದಿಗ್ಭಾಗದ ಪರ್ವತದ ಮೇಲೊಂದು ವಲ್ಮೀಕದೊಳಗೊಂದು ಶ್ವೇತಗಜ ದಿನಂಪ್ರತಿ ಸರೋವರದಿಂ ತಾವರೆಯುದಕಮನೆರೆದು ನಾನಾ ಪುಷ್ಪಗಳಿಂ ಪೂಜಿಸುತೆ ಪ್ರದಕ್ಷಿಣ ನಮಸ್ಕಾರಮಂ ಮಾಡುತ್ತಿರಲಾ ವಾರ್ತೆಯಂ ಕರಕಂಡು ಮಹಾರಾಜಂ ಕೇಳಿ ಅಲ್ಲಿಗೆಯ್ದಿ ನೋಡುತ್ತಂ ಪುತ್ತಮನಗೆಯಿಸಿದೊಡಲ್ಲಿ ಸಹಸ್ರ ಪೆಡೆಯುಳ್ಳ ನಾಗೇಂದ್ರಂ ಪ್ರಸನ್ನನಾಗಲಲ್ಲಿಪ್ಪ ದೇವರಂ ಪೂಜಿಸಿ ಆನೆ ಸದ್ಗತಿಯಂ ಪಡೆಯೆ ಕರಕಂಡು ಮಹಾರಾಜಂ ಮೊದಲಾಗೆ ಸರ್ವರುಂ ಪೂಜಿಸುತ್ತೆ ಬರಲಲ್ಲಿಂದಿತ್ತ ಸರ್ಪನಂ ರಚಿಸಿ ಪೂಜಿಸುತ್ತೆ

ಸಂತಾನಾಭಿವೃದ್ಧಿಯಂ ಪಡೆವರ್. ಮತ್ತಂ ಚಿಂಚಗಾತೆಯೆಂಬೂರಗೌಡನ ಪೆಂಡತಿ ಪುತ್ರಮಂ ಪೂಜಿಸಲಂದಿಂದಂ ಹಿಟ್ಟಿನ ಬಂಡಿ ಹಾಲುತುಪ್ಪ ಮೊದಲಾಗಿ ಪುತ್ರಮಂ ಪೂಜಿಸುತ್ತೆ ಬಂದರ್.

ಅತ್ತಲಯೋಧ್ಯಾಪುರದೊಳಜಮಹಾರಾಜಂ ತನ್ನ ದೇಶದೊಳಿರ್ದರಣ್ಯಮೆಲ್ಲಮಂ ಪುರಂಗಳಂ ಮಾಡಿಸಿರಲನರಣ್ಯನೆಂಬ ಪೆಸರಾಗಿರಲಾತನ ಸಭೆಯೊಳ್ ಋಷಿಗಳುಂ ಬ್ರಾಹ್ಮಣರುಂ ಸಂವಾದಮಾಗೆ ದೇವರು ಮೂರ್ತಿಸ್ವರೂಪನಪ್ಪ ಉಪಾಧಿಯುಳ್ಳನದರಿಂದ ಮೂರ್ತನೆ ನಿರಂಜನನಪ್ಪನವನ ಸ್ವರೂಪವನರಿವುದಾರ್ಗಂ ಶಕ್ಯಮಲ್ಲದರಿಂ ನಿಷ್ಕಳಂಕನವನ ಗುರುತುಮಾತ್ರಮಂ ಗೋಳಕಾಕೃತಿಯಿಂ ಲಿಂಗಮಂ ಮಾಡಿ ಪೂಜಿಸಲ್ ನಿಶ್ಚೈಸಿದರ್.

ಲಿಂಗಮಧ್ಯೇ ಜಗತ್ಸರ್ವಂ ತ್ರೈಲೋಕ್ಯಂ ಸಚರಾಚರಮ್
ಲಿಂಗಾದ್ಬಾಹ್ಯಂ ಪರಂ ನಾಸ್ತಿ ತಸ್ಮಾಲ್ಲಿಂಗಂ ಪ್ರಪೂಜಯೇತ್

ಎಂದು ಲಿಂಗಪ್ರತಿಷ್ಠೆಯಂ ಮಾಡಿದರಲ್ಲಿಂದಿತ್ತ ಕೆಲಂಬರೀಶ್ವರನ ಲಿಂಗಮದಂ ಬ್ರಹ್ಮ ವಿಷ್ಣು ಪರೀಕ್ಷೆಯೊಳಂ ಋಷಿಯ ಶಾಪನಿಮಿತ್ತದಿಂದಂ ಲಿಂಗಮಂ ಪೂಜಿಸಿದರೆಂದರ್.

ಮತ್ತಂ ಸ್ವಸ್ತಿಕಾವತಿಯೊಳ್ ವಿಶ್ವಾವಸುಮಹಾರಾಜನಾತನ ಮಗಂ ವಸುವೆಂಬಂ ಆ ಪುರದೊಳ್ ಕ್ಷೀರಕದಂಬನೆಂಬನಾತನ ಮಕ್ಕಳ್ ನಾರದನುಂ ಪರ್ವತನುಮೆಂಬಿರ್ವರುಂ ಪೆರರ ಕುಮಾರರ್ ಸಹಿತಮೈನೂರ್ವರ್ಗಂ ಪನ್ನೆರಡು ವರ್ಷಂಬರೆಗಮನೇಕ ಶಾಸ್ತ್ರಂಗಳಂ ಕ್ಷೀರಕದಂಬನು ಕಲಿಸಲೆಲ್ಲರುಂ ಯಥೋಪದಿಷ್ಟಗ್ರಾಹಿಗಳಾದರ್. ಪರ್ವತನು ನಾರದನ ಮೇಲಣ ವೈಷಮ್ಯದಿಂ ವಿಪರೀತಗ್ರಾಹಿಯಾಗಿ ನಾರದನ ಮೇಲೆ ಇತರನಾಗಿ ಅಜೈರ್ಹೋತವ್ಯಮೆಂಬ ಸೂತ್ರಮಂ ಪಶುವಾಚಿಯೆಂದು (ತನ್ನ ಶಿಷ್ಯರ್ಗುಪದೇಶಂಗೆಯ್ಯಲೆಲ್ಲರುಂ ಕೇಳ್ದಾತನ ಊರಿಂ ತಗುಳೆ ದುಃಖದಿಂ ವನಮಂ ಪೊಕ್ಕಿರಲಲ್ಲಿಗರುವತ್ತು ಸಾಸಿರ ದೇವತೆಗಳ್ಗಧೀಶ್ವರನಪ್ಪ ಮಹಾಕಾಳನೆಂಬ ದೇವಂ ಭೌಮವಿಹಾರಾರ್ಥಂ ಬರುತ್ತಿರ್ದೀ ಬ್ರಾಹ್ಮಣನಂ ಕಂಡು ಜನ್ಮಾಂತರದ ವೈರಿಯಪ್ಪ ಸಾಕೇತದರಸಂ ಸಗರ ಸುಲಸಾ ವಿಶ್ವಭೂಪ್ರಭೃತಿಗಳನುಪಾಯದಿನಪಾಯಂ ಮಾಡಿ ಇಹಪರದೊಳಾಪತ್ತಂ ಪೊರ್ದಿಸಲೆಂದಾ ಪರ್ವತಂಗೆ ವೇದಶಾಸ್ತ್ರಮೆಂಬಥರ್ವಣಂಗಳುಮಂ ಅರವತ್ತಾರು ಸಾಸಿರ ಮರೀಚಿಗಳುಮನುತ್ಪಾದಿಸಿ ಕೊಟ್ಟಾತಂಗೆ ಪಶ್ಯಾದ್ಯಾಭಿಚಾರಗಳಂ ಕಲಿಸಿ ತಚ್ಛಾಂತಿಹೇತುವಾಗೆ ಯಜ್ಞಮಂ ಪ್ರಕಟಿಸಿ ನಾಲ್ಕು ಸಾವಿರ ದೇವತೆಗಳಂ ಪರ್ವತಂಗಪ್ಪೈಸಿಕೊಟ್ಟಯೋಧ್ಯೆಗೆ ಕಳಿಪುವುದುಂ ಸಗರ ವಿಷಯಕಂ ರೋಗಂ ಸಂಭವಿಸೆ ಯಜ್ಞಕ್ರಿಯೆಯಿಂ ತಚ್ಛಾತಿಹೇತುವಾಗೆ ಬೊಂದಿಗೆವೆರಸು ಸ್ವರ್ಗಕ್ಕೆ ಪೋಪಂತಾಗೆ ಮಾಡಿ ಅರವತ್ತು ಸಾವಿರ ಪಶುಗಳಂ ಪುಲಸೆಯಂ ಪಟ್ಟದ ಕುದುರೆಯಂ ಯಜ್ಞಂ ಮಾಡಿ ತೋರಿಸಲೆಲ್ಲರುಂ ನಂಬೆಯನೇಕ ಜನಂಗಳ್ ನಿಲಿಸಿದೊಡಂ ನಿಲ್ಲದೆ ನಡೆಯಲಲ್ಲಿಂದಿತ್ತಲ್ ಹಿಂಸಾಯಜ್ಞಂ ಪುಟ್ಟಿ ನಡೆಯಿತು.

ಮತ್ತಂ ಮಿಥಿಳಾಪುರದ ಹರಿವಂಶ ಜನಕಂ ಮೊದಲಾದ ಕ್ಷತ್ರಿಯರ್ ಯಜ್ಞಾಕಾಂಕ್ಷೆಯಂ ಮಾಡಿಸುತ್ತಂ ಬಂದರ್ ಬಳಿಕಮಯೋಧ್ಯೆಯೊಳ್ ದಶರಥಮಹಾರಾಜನಾತಂಗೆ ರಾಮನುಂ ಲಕ್ಷ್ಮಣಮಂ ಭರತನುಂ ಶತ್ರುಘ್ನನುಮೆಂಬ ನಾಲ್ವರ್ ಮಕ್ಕಳ್ ಅವರೊಳ್ ರಾಮಂಗೆ ಸೀತಾದೇವಿ ಪೆಂಡತಿಯಾಗಲ್ ರಾವಣಂ ಭವಬದ್ಧಸಂಬಂಧದಿಂ ಲಂಕಾಪತಿ ಕೊಂಡೊಯ್ದಡೆ ರಾಮಂ ಸುಗ್ರೀವ ಹನುಮಂತ ನಳ ನೀಳ ಜಾಂಬವಾದಿಗಳಾದಿಯಾಗೆ ಪೋಗಿ ರಾವಣನಂ ಕೊಂದು ಸೀತೆಯಂ ತಂದು ಪ್ರಜೆಗಳ ಮಾತಿಗವಳಂ ಬಿಡೆ ಲವಾಂಕುಶರೆಂಬ ಮಕ್ಕಳ್ ಪುಟ್ಟಿ ಅತಿಶೌರ್ಯಯುತರಾಗಿ ಬಂದು ತಂದೆಗಳೊಳ್ ಜಗಳಂ ಮಾಡೆ ತಿಳಿದು ಮಕ್ಕಳು ಸಮೇತ ರಾಜ್ಯಮಂ ಪ್ರತಿಪಾಲಿಸಿ ಕಡೆಯೊಳ್ ತಪದಿಂ ಮೋಕ್ಷಲಕ್ಷ್ಮೀಪತಿಯಾಗಲ್ ಇತ್ತ ತತ್ಪುತ್ರಂ ವಿಜಯರಾಮಂ ರಾಜ್ಯಂಗೆಯ್ದು ತಪಮಂ ಕೈಕೊಂಡನಿಂತು ಇಕ್ಷ್ವಾಕುವಂಶ ಕುರುವಂಶ ನಾಥವಂಶ ಉಗ್ರವಂಶಮೆಂಬಿವರೊಳೆ ಚತುರ್ವಿಂಶತಿ ತೀರ್ಥಕರರುಂ ದ್ವಾದಶ ಚಕ್ರವರ್ತಿಗಳುಂ ನವಬಲದೇವರುಂ ವಾಸುದೇವರುಂ ಏಕಾದಶ ರುದ್ರರುಂ ಮುಂತಾಗಿಯನೇಕ ಪುಣ್ಯಪುರುಷರ್ ಪುಟ್ಟಿ ಸ್ವರ್ಗಮುಕ್ತಿಯಂ ಪಡೆದರ್. ಹರಿವಂಶದೊಳ್ ಯದುವೆಂಬರಸನಿಂದಿತ್ತಲ್ ವಂಶಂ ಯದುವಂಶಮಾಗಲಲ್ಲಿ ಶೂರವೀರರೆಂಬರ್ ಪುಟ್ಟಿದೊಡಾ ಶೂರಮಹಾರಾಜಂ ಶೌರಿಪುರಮಂ ಮಾಡಿಸಿದಂ.

ಅತ್ತಲ್ ಕುರುವಂಶದವರ್ ಹಸ್ತಿನಾಪುರದೊಳ್ ಶಾಂತಿ ಕುಂಥು ಅರಚಕ್ರವರ್ತಿಗಳ್ ಪುಟ್ಟಿ ಶಿವಲೋಕದೊಳ್ ಶಾಶ್ವತಸಂಖಪ್ರಾಪ್ತರಾದರಿತ್ತಲನೇಕವತ್ಸರಂ ಕಳೆಯಲಾ ವಂಶದೊಳ್ ಶಕ್ತಿಯೆಂಬರಸಂಗಂ ಧಾರಿಣಿಯೆಂಬರಸಿಗಂ ವಶಿಷ್ಟನೆಂಬ ಮಗನಾದೊಡಾತಂ ರಾಜ್ಯದೊಳಿರ್ದು ಪರಾಶರನುಂ ಶಂತನುಮೆಂಬಿರ್ವರ್ ಮಕ್ಕಳಾಗೆ ಶಂತನುಗೆ ಪಟ್ಟಂಗಟ್ಟಿ ಪರಾಶರಂಬೆರಸು ಪರಿವ್ರಾಜಕನಾಗಿ ಪಂಚಾಗ್ನಿ ಮಧ್ಯದೊಳ್ ತಪಂಗೆಯ್ಯುತ್ತಿರಲಾ ಮಾರ್ಗದೊಳ್ ವೀರಭದ್ರನೆಂಬ ಮಹಾತಪೋಧನರ್ ತೀರ್ಥವಂದನಾ ನಿಮಿತ್ತಂ ಪೋಗುತಿರ್ಪರಂ ಕರೆದೆನ್ನ ತಪಸ್ಸಾಮರ್ಥ್ಯದಿಂದಗ್ಗಳಮುಂಟೆ ಎಂಬುದುಮೀ ತಪದಿಂ ಸಾವದ್ಯಮಪ್ಪುದರಿಂ ನಿಷ್ಪನ್ನತೆಯಾಗಲರಿಯದೀ ಕಾಯಕ್ಲೇಶದಿಂ ಸ್ವರ್ಗಾದಿ ಸುಖಮಂ ಮಾಳ್ಕುಮೆನಲತ್ಯಂತ ಕೋಪದಿಂ ಸಾವದ್ಯಮೆಂತಪ್ಪುದಂ ತೋರೆಂದಾ ಗ್ರಹಂಗೆಯ್ಯಲಲ್ಲಿರ್ದ ಪುಳ್ಳೆಯಂ ಕುಠಾರದಿಂ ಸೀಳಿಸಿದೊಡಲ್ಲಿರ್ದ ಕ್ರಿಮಿ ಪಿಪೀಲಿಕ ಸರ್ಪಂಗಳಾದಿ ನಾನಾ ಜೀವರಾಶಿಗಳ್ ಬೆಂದು ಕೆಲವು ಒರಲುತ್ತಿರ್ದ ಪ್ರಾಣಿಗಳಂ ತೋರಿ ತಪಕ್ಕೆ ಜ್ಞಾನಮೆ ಕಾರಣಂ ಅನಶನಾದಿ ತಪಂಗಳ್ ಮುಕ್ತಿಸಾಧನಮೆಂಬುದುಂ ವಶಿಷ್ಟಂ ವಿಶಿಷ್ಟಮಾದನಶನಾದಿ ತಪಮಂ ಕೈಕೊಂಡು ಏಕೋಪವಾಸ ಷಷ್ಠೋಪವಾಸ ಪಕ್ಷೋಪವಾಸಂಗಳಂ ಮಾಡಿ ಬಳಿಕಂ ನಿರವದ್ಯಮಾಗಿ ಮಾಸೋಪವಾಸಮಂ ಕೈಕೊಂಡು ಮಧುರಾಪುರದ ಬಹಿರುದ್ಯಾನದೊಳ್ ಕಾಯೋತ್ಸರ್ಗದಿಂ ಧ್ಯಾನಾರೂಢನಾಗಿರ್ಪುದುಂ ತತ್ಪುರಾಧಿಪನಪ್ಪ ಸೋಮವಂಶದುಗ್ರಸೇನಮಹಾರಾಜಂ ಪುರಜನ ಸಮೇತಂ ವನವಿಹಾರಾರ್ಥಂ ಬಂದಾ ಋಷಿಯಂ ಕಂಡೀ ತಪಸ್ವಿಗಳ ಮಾಸೋಪವಾಸದ ಪಾರಣೆಯಂ ನಾನೇ ಮಾಡಿಸುವೆನೀ

ಪೊಳಲೊಳಾರುಂ ಮಾಡಿಸಲಾಗದೆಂದು ಘೋಷಿಸಲಾ ಮುಮುಕ್ಷು ಕೈಯೆತ್ತಿಕೊಂಡು ಮಾಸೋಪವಾಸದ ಪಾರಣೆಗೆಂದು ಪಟ್ಟಣಮಂ ಪೊಕ್ಕು ಚರಿಸುತ್ತಿರಲರಸನ ಪಟ್ಟದಾನೆಗೆ ಮದವೇರಿ.ಕಂಭಮಂ ಕಿಳ್ತು ಜನಕ್ಷೋಭಮಂ ಮಾಡಲಾ ವ್ಯಥಿಕರದಿಂ ಯತಿಯಂ ನಿಲಿಸಲ್ ಮರೆಯೆ ಮುನಿಗಳ್ ಅಲಾಭಮಾಗೆ ಪೋಗಿ ಬಳಿಕೊಂದು ತಿಂಗಳ್ ತಪಂಗೆಯ್ದು ಚರಿಗೆವರೆಯಾ ದಿವಸಮರಮನೆಯಂ ಕಿಚ್ಚು ತಗುಳಿರಲದರಿಂ ವ್ರತಿಗಳಂ ನಿಲಿಸಲ್ ಮರೆಯಲಾ ಸಮಯಕಮಲಾಭಮಾಗೆ ತಪೋವನಕೆಯ್ದಿ ತ್ರಿಮಾಸಾಂತರದೊಳ್ ಬಂದ ಯೋಗಿಯಂ ನಿಲಿಸಲರಸನ ಬಿಯಗರಂ ಕಳುಹಿಸಲ್ ಸಂದಣಿಯಿಂ ಮರೆಯಲಾ ತಪೋಧನಂ ತಿರುಗಿ ವನಮನೆಯ್ದಲ್ ಶಕ್ತಿಯಿಲ್ಲದೆ ದಡದಡಿಸುತ್ತೆ ತರಗೆಲೆಯಂತೆ ತೂರಾಡುತ್ತೆ ಬಪ್ಪುದಂ ಪುರಜನಂಗಳ್ ಕಂಡು ಈ ಪುರದರಸು ತಾನುಂ ನಿಲಿಸನಾರುಮಂ ನಿಲಿಸಲೀಯನ್ ಏನು ವೈರವೊ ಎಂಬ ವಚನಂ ತಾಪಸಿಯ ಕಿವಿಯಂ ಪುಗೆ ಕ್ರೋಧವಂಕುರಿಸಿದಾ ಸಮಯದೊಳ್ ಅವಸಾನಮಾಗಲಾತನ ತಪಕ್ಕೇಳು ದೇವತೆಗಳ್ ಬಂದೆಮಗೆ ಬೆಸನಾವುದೆನೆ, ಉತ್ತರ ಭವಕ್ಕೊದಗುವುದೆಂದಾಗಳೆ ಶರೀರಮನುಳಿದುಗ್ರಸೇನಮಹಾರಾಜನರಸಿ ಪದ್ಮಾವತಿಯ ಗರ್ಭದೊಳ್ ಜನಿಸೆ ಪೊಲ್ಲದ ಬಯಕೆ ಪುಟ್ಟಿ ಕೃತ್ರಿಮದರಸನಂ ರಸರುಧಿರಾದಿ ಧಾತುಗಳಂ ಪಡೆದು ತೋರಿದಳುದರಮಂ ಸೀಳಿ ರಕ್ತಮಂ ಕುಡಿದಾಗಳೆ ಪತಿ ಸತ್ತನೆಂದು ಮೂರ್ಛೆಗೆ ಸಂದೆಚ್ಚೆತ್ತು ದುಃಖಿಸುತ್ತಿರಲರಸನಿಪ್ಪನೆಂದು ತೋರೆ ಸುಖಮಿರ್ದು ನವಮಾಸಂ ನೆರೆಯೆ ಗಂಡುಗೂಸು ಪುಟ್ಟಿದೊಡದರ ಮುಖಮಂ ತಂದೆ ನೋಡೆ ಕಡೆಗಣ್ಣೊಳ್ ಕಿಡಿ ಸೂಸೆಯಾ ಶಿಶುವಿಂದರಿಷ್ಟವೆಂದು ಮಂಜೂಷೆಯೊಳಿಟ್ಟು ವಂಶವಂ ಬರೆಯಿಸಿ ಜಗುನೆಯೊಳ್ ಬಿಡಲಾ ಮಂದಾಸಂ ನೀರೊಳ್ ಬಪ್ಪುದುಂ ಕೌಶಂಬಿಪುರದ ಕಿರಾತಂ ಕೊಂಡು ಪೋಗಿ ಶಿಶುವಂ ಕಂಡು ಕಂಸನೆಂದು ಪೆಸರಿಟ್ಟು ಸಲಹಿದೊಡೆ ಬೆಳೆದತಿಪ್ರಚಂಡನಾಗಿ ಪಟ್ಟಣಮಂ ಕ್ಷೋಭಿಸಲೆಲ್ಲರುಂ ಕೂಡಿಯಲ್ಲಿ ಪೊರಮಡಿಸಲ್ ಶೌರಿಪುರದ ಅಂಧಕವೃಷ್ಣಿಮಹಾರಾಜನನುಜಂ ನರಪತಿವೃಷ್ಟಿಯೆಂಬ ಅಧಿರಾಜಗಂ ಸಮುದ್ರವಿಜಯನಾದಿಯಾಗೆ ಕುಮಾರರ್ ಪತ್ತು ಜನರಿಂ ಕಿರಿಯ ವಸುದೇವನಲ್ಲಿಗೆ ಬಂದು ಬಿಲ್ವಿದ್ಯೆ ಮೊದಲಾದನೇಕ ರಾಜವಿದ್ಯಮಂ ಕಲ್ತು ಸಮರ್ಥನಾಗಿ ಸಿಂಹರಥನಂ ಪಿಡಿದು ತಂದು ಜರಾಸಂಧಂಗೊಪ್ಪಿಸೆ ಪ್ರತಿಜ್ಞೆಯಿಂ ತನ್ನ ಮಗಳ್ ಜೀವಂಜಸೆಯನರ್ಧರಾಜ್ಯಮುಮಂ ಕುಡುವಲ್ಲಿ ಮಧುರೆಯಂ ಬೇಡಿ ಪಡೆದು ತಂದೆತಾಯಿಗಳನಸಿಪಂಜರದೊಳಿಕ್ಕೆ ತಮ್ಮ ಚಿಕ್ಕಯ್ಯನ ಮಗನತಿಮುಕ್ತನೆಂಬಂ ದೀಕ್ಷೆಯಂ ಕೈಕೊಂಡೊಡಾತನಿಂ ಕಿರಿಯ ದೇವಕೀದೇವಿಯಂ ವಸುದೇವಂಗೆ ಮದುವೆಯಂ ಮಾಡಿ ಸುಖಮಿರಲೊಂದುದಿವಸಮತಿಮುಕ್ತಮುನಿಗಳ್ ಅವಧಿಜ್ಞಾನಸಂಪನ್ನರಾ ಮಧುರೆಗೆ ಭಿಕ್ಷಾರ್ಥಂ ಬಪ್ಪುದುಂ ದೇವಕಿ ನಿಲಿಸಿ ಆಹಾರ ದಾನಂ ಕುಡುವಾಗಳ್ ಜೀವಂಜಸೆ ಬಂದು ಸರಸದಿಂ ಎಲೆ ಭಾವಾ ಬತ್ತಲೆಯಿರ್ದಪೆ ಈ ವಸ್ತ್ರಮಂ ಕೊಳ್ಳೆಂದು ಕೆಲದೊಳಿರ್ದ ಮೈಲಿಗೆಯಂ ಮುಂದಿಕ್ಕೆ ಮೌನದಿಂ ಪೋಪ ಮುನಿಗಡ್ಡಂ ನಿಂದು ದೇವಕಿಯು ಗರ್ಭಮಾಗೆ ಎಂತಪ್ಪ ಮಗನಂ ಪಡೆವಳೆಂದು ಕಾಡಿದೊಡಾ ಮುನಿಗಳೆಂದರ್

ನಿನ್ನ ಪತಿಯಂ ಪಿತನುಮಂ ಕೊಲ್ವ ಪುರುಷಂ ಪುಟ್ಟುವನೆಂದು ಪೇಳಿ ಪೋಪುದುಂ ಚಿಂತಾಕ್ರಾಂತೆಯಾಗಿರಲರಸಂ ಕೇಳಿ ನಿಶ್ಚೈಸಿಯವಳಂ ಸಂತೈಸಿದಂ. ಮತ್ತಂ ದೇವಕಿ ಗರ್ಭಮಾಗೆ ಕಂಸಂ ತನ್ನ ಗೃಹದೊಳೆ ಪ್ರಸವವಾಗಲೆಂದು ವಸುದೇವನಂ ಬೇಡಿ ದೇವಕಿಯಂ ತನ್ನ ಮನೆಗೊಡಗೊಂಡು ಬಂದು ಆಕೆ ಮೂರು ಸೂಳ್ ಪೆತ್ತಮಳ್ಗಳಂ ನೈಗಮದೇವತೆ ತೆಗೆದುಕೊಂಡರ್ಧಾಯುಷ್ಯದ ಪೆಣ್ಗೂಸುಗಳಂ ತಂದಿರಿಸಲವನಾಗಳೆ ಕೊಲ್ಲಿಸಲ್ ಮತ್ತೆ ಗರ್ಭಮಾದೇಳು ತಿಂಗಳ್ಗೆ ಪುತ್ರನಂ ಪಡೆದೊಡಂ ವಸುದೇವ ಬಲಭದ್ರರು ಕಂಸನರಿಯದಂತು ನಾರಾಯಣನಂ ರಾತ್ರಿಯೊಳೆತ್ತಿಕೊಂಡೊಯ್ವಾಗಳಾ ಪುರದ ಬಾಗಿಲ ಕವಾಟಂಗಳಾ ಶಿಶುವಿನ ಪಾದಸ್ಪರ್ಶನ ಮಾತ್ರದೊಳೆ ಕವಾಟೋದ್ಘಾಟನವಾಗಲ್ ಪೊರಗೆ ಪೋಗಲತ್ಯಂಧಕಾರಮಾಗಿರಲ್ ಆ ಶಿಶುವಿನ ಪುಣ್ಯದೇವತೆ ಕೋಡುಗಳೊಳ್ ದೀಪಮಂ ಬೆಳಗುತ್ತುಂ ವೃಷಭಾಕಾರದೊಳ್ ಮುಂದೆ ಪೋಗುತ್ತುಂ ಜಗುನೆಯಂ ಪುಗೆ ಜಲಸ್ತಂಭದಿಂ ಮಾರ್ಗಮಾಗೆಯಲ್ಲಿ ಕೃಷ್ಣದೇವೀಗೃಹಾಸನ್ನರಾಗಿರೆ ತುರುಪಟ್ಟಿಯಿಂ ನಂದಗೋಪನೊಂದು ಪೆಣ್ಗೂಸನೆತ್ತಿಕೊಂಡು ಬಂದು ಎಲೆ ದೇವಿ ಪಲಸೂಳ್ ನಿನ್ನಂ ಪರಸಿ ಪುತ್ರನಂ ಪಡೆಯ ಲೆಂದೀಗಳುಂ ಪೆಣ್ಣಾದುದರಿಂದೀ ಶಿಶುವಂ ನೀನೆ ತೆಗೆದುಕೊಳ್ಳೆಂದು ಮುಂದಿಟ್ಟು ಪೋಗಲಾ ಶಿಶುವಂ ಕೊಂಡು ಬಾಲಕನನಲ್ಲಿರಿಸಿ ಪುತ್ರನಂ ಕೊಂಡುಪೋಗೆಂಬ ವಚನಮನಾ ದೇವಿ ಪೇಳ್ದಂತೆ ಪೇಳಿ ಮೈಗರೆದಿರಲವಂ ಬಂದು ನೋಡಿ ಗಂಡುಗೂಸನತ್ಯಂತ ಸಂತೋಷದಿಂ ಕೊಂಡು ಪೋಗಿ ಮಹಾದೇವಿ ಪುತ್ರನಂ ಕೊಟ್ಟಳೆಂದು ತನ್ನ ಪೆಂಡತಿಗೆ ಕುಡೆ ಹರುಷಂ ಮಿಗೆ ಕೃಷ್ಣನೆಂದು ಪೆಸರಿಟ್ಟು ಸಲಹುತಿರ್ದಂ. ಇತ್ತಲಾ ಪೆಣ್ಗೂಸಂ ತಂದು ದೇವಕಿಯ ಮುಂದಿಡೆ ಪೆಣ್ಣು ಪುಟ್ಟಿದುದೆಂದು ಕಂಸಂ ಕೇಳಿ ಅದರ ಗೋಣರಿಯಿಸಲದು ಬೆಳೆದು ವಿರೂಪಿಗೆ ಕೊಕ್ಕರಿಸಿ ವಿಂಧ್ಯಗಿರಿಯೊಳ್ ತಪಸ್ವಿಯಾಗಲ್ಲಿಯೆ ಮೂರಂಗುಲಿಯಂ ಕಾಣಿಸುತ್ತುಂ ವಿಂಧ್ಯದೇವತೆಯಾಗಿ ಪೂಜಿಸಿಕೊಂಡಳ್.

ಇತ್ತ ಮಧುರಾಪುರದೊಳುತ್ಪಾತಂಗಳ್ ಪುಟ್ಟೆ ಕಂಸಂ ನೈಮಿತ್ತಿಕನಂ ಬೆಸಗೊಂಡಡೆ ನಿನ್ನ ವೈರಿಯೊರ್ವಂ ಬಳೆವನವನಿಂದಂ ನಿನಗೆ ವಿನಾಶಮಪ್ಪುದೆಂದು ಪೇಳೆ ಶತ್ರು ವಿನಾಶನ ಕಾರಣಂಗಳಂ ಮಾಡಿಸುತ್ತುಂ ಚಿಂತಿಸುತ್ತಿರೆ ಪೂರ್ವಜನ್ಮದೊಳ್ ತನ್ನ ತಪದಗ್ಗಳಿಕ್ಕೆಗೆ ಪ್ರಸನ್ನರಾಗಿ ಬೆಸನಂ ಬೇಡಿದೇಳುದೇವತೆಗಳುಂ ಬರಲೆನ್ನ ವೈರಿಯೆಲ್ಲಿದ್ದಾನೆ ಆತನಂ ಪರಿಹರಿಸುವುದೆಂಬುದುಮಾ ದೇವತೆಗಳ್ ಪೂತಿನಿ ಮೊದಲಾದ ರೂಪಿನಿಂ ಪೋಗಿ ಪರಿಭವಿಸಲಾರದೆ ವಿಷ್ಣುವಿನಿಂ ಪರಾಜಿತಂಗಗಳಾಗಿ ಪೋದವು. ಕೃಷ್ಣಂ ಬಾಲ್ಯಾರಂಭದಿಂ ತನ್ನ ಶಕ್ತಿಯೊಳೆ ಪೂತಿನಿ ಮೊದಲಾದ ದೇವತೆಗಳಂ ಗೆಲ್ದು ಗೋವರ್ಧನ ಪರ್ವತಮನೆಡಗಯ್ಯೊಳೇಳು ದಿವಸಂಬರಂ ಪಿಡಿದಿರ್ದು ಕಾಳಾಹಿಯಂ ಕೊಂದು ಕಮಲಮಂ ತಂದು ವ್ಯಾಲಶಯನಮನೇರಿ ಕಾಲದಂಡೋಪಮ ಶಾರ್ಙ್ಗಮೆಂಬ ಚಾಪಮನೇರಿಸಿ ಪಾಂಚಜನ್ಯಮೆಂಬ ಪಂಚಮುಖ ಶಂಖಮನೂದಿ ಮದದಾನೆಯ ಕೊಂಬಂ ಕಿಳ್ತು ಚಾಣೂರ ಜಗಜಟ್ಟಿ ಮೊದಲಾದ ಮಲ್ಲರನಪ್ಪಳಿಸಿ ತನ್ನ ಮೇಲ್ವಾಯ್ದ ಕಂಸನ ಮಿದುಳಂ ಕಿತ್ತು ಸಮುದ್ರ

ಮಧ್ಯದೊಳೇಳುದಿವಸಂ ದರ್ಭಶಯನದಿನಿರ್ದು ಇಂದ್ರನಿಂ ದ್ವಾರಾವತಿಪುರಮಂ ಪಡೆದು ಬಂದು ಶಿಶುಪಾಲನಂ ಕೊಂದು ವಿಜಯಾರ್ಧ ಪರ್ವತಮನೆಯ್ದಿ ಜಾಂಬವನನಿಕ್ಕಿ ಹಿರಣ್ಯಕಶಿಪುವಂ ಪೊಡೆದು ಮುಠನಂ ಮರಣಂ ಮಾಡಿ ಎರಡನೆ ದಿವಿಯನೆಯ್ದಿ ಶಂಖಮಂ ಪೂರಿಸಿ ದೈತ್ಯರೆಲ್ಲರಂ ಸದೆದು ಮಧುಕೈಟಭರನೊದೆದು ಜರಾಸಂಧನನಾತನ ಚಕ್ರದಿಂ ಕೊಂದು ಪಾಂಡವರಂ ಪರಿಪಾಲಿಸಿ ತ್ರಿಖಂಡಾಧಿಪತಿಯಾಗಿ ದಿಗ್ವಿಜಯದೊಳ್ ಮಾಗಧವರತ ಪ್ರಭಾಸಾಮರರೆಂಬ ದೇವರಿಂ ದಿವ್ಯ ಕಟಕ ಕಟಿಸೂತ್ರ ಕುಂಡಲ ಕೇಯೂರ ಹಾರ ಮಣಿಮುದ್ರಿಕಾದ್ಯಾಭರಣಂಗಳಂ ದಿವ್ಯ ಪೀತಾಂಬರಾದಿ ವಸ್ತ್ರಂಗಳುಮಂ ಛತ್ರ ಚಾಮರ ಧ್ವಜ ಸಿಂಹಾಸನಂಗಳುಮಂ ದಿವ್ಯಾಯುಧಂಗಳುಮಂ ಪಡೆದು ದೇವತೆಗಳಿಂ ಸಹಸ್ರಸುವರ್ಣ ಘಟಂಗಳಿಂದಭಿಷಿಕ್ತನಾಗಿ ಸತ್ಯಭಾಮಾ ರುಕ್ಮಿಣಿ ಲಕ್ಷ್ಮೀ ಜಾಂಬವತಿ ಪದ್ಮಾವತಿ ಗೌರಿ ಗಾಂಧಾರಿ ಸುಸೀಮಾದೇವಿಯರ್ ಮೊದಲಾಗೆ ಹದಿನಾರು ಸಾಸಿರಮಂತಃಪುರಮಂ (೧೬೦೦೦) ಸಾಸಿರ ಯಕ್ಷ ರಕ್ಷಿತಂಗಳಪ್ಪ ಚಕ್ರ ಗದಾ ಶಂಖ ಖಡ್ಗ ಧನುಶಕ್ತಿ ದಂಡಂಗಳೆಂಬೇಳು ರತ್ನಂಗಳಂ ಕೇಶವಂಗೆ ಮುಸಲ [ಹಲ] ಗದಾ ರತ್ನಮಾಲೆ ಎಂಬ ನಾಲ್ಕು ರತ್ನಂಗಳು ಬಲಭದ್ರಂಗಾಗೆ ಮತ್ತಂ ದಾಮೋದರಂಗೆ ಪದಿನಾರು ಸಾವಿರ ಮಕುಟಬದ್ಧರುಂ (೧೬೦೦೦), ನೂರುಪದಿಂಬರ್ ವಿದ್ಯಾಧರಮಹಾರಾಜರುಂ (೧೧೨), ಎಣ್ಸಾಸಿರ್ವರ್ ಗಣಬದ್ಧದೇವರುಂ (೮೦೦೦), ನಾಲ್ವತ್ತೆಂಟು ಲಕ್ಷ ಗಜಂಗಳುಂ (೪೮,೦೦,೦೦೦), ಅನಿತೆ ರಥಂಗಳುಂ (೪೮,೦೦,೦೦೦), ಒಂಬತ್ತು ಕೋಟಿಯುಂ ನಾಲ್ವತ್ತೆರಡು ಲಕ್ಷ ಪದಾತಿಯುಂ (೯,೪೨,೦೦,೦೦೦), ಪದಿನಾರು ಸಾವಿರ ವಿಷಯಂಗಳುಂ (೧೬೦೦೦), ಒಂಬೈಸಾಸಿರದೆಂಟು ನೂರ್ರೈವತ್ತು ದ್ರೋಣಾಮುಖಂಗಳುಂ (೯೮೫೦), ಇಪ್ಪತ್ತೈಸಾಸಿರ ಪತ್ತನಂಗಳುಂ (೨೫,೦೦೦), ಪನ್ನಿಚ್ಛಾಸಿರ ಖರ್ವಡಂಗಳುಂ (೧೨,೦೦೦), ಅನಿತೆ ಮಡಂಬಂಗಳುಂ (೧೨,೦೦೦), ಎಣ್ಚಾಸಿರ ಖೇಟಂಗಳುಂ (೮೦೦೦), ಇಪ್ಪತ್ತೆಂಟಂತರದ್ವೀಪಂಗಳುಂ (೨೮), ನಾಲ್ವತ್ತೆಂಟುಕೋಟಿ ಗ್ರಾಮಂಗಳುಂ (೪೮,೦೦,೦೦,೦೦೦), ಒಂದು ಕೋಟಿ ಸ್ವಬಂಧುಗಳ್ವೆರಸು ಶಿವದೇವಿಮಹಾದೇವಿಗಂ ಜನಿಸಿ ಪಂಚಮಹಾಕಲ್ಯಾಣಮನಾಂತು ಕೇವಲಜ್ಞಾನಿಯಾಗಿ ತ್ರಿಲೋಕಂ ಸಂದಣಿಸಿದ ಸಮವಸರಣದೊಳೂರ್ಜಯಂತಗಿರಿಯೊಳ್ ವಿಹರಿಸುತ್ತಿಪ್ಪ ನೇಮೀಶ್ವರ ತೀರ್ಥಂಕರರಲ್ಲಿಗೆ ಬಲನಾರಾಯಣರ್ ಪೋಗಿ ತಂತಮ್ಮ ಭವಾವಳಿಯಂ ಸ್ತ್ರೀಯರ ಭವಸಂಬಂಧಮಂ ದ್ವಾರಾವತಿ ಪೋಪುದಂ ಮೊದಲಾಗೆ ಎಲ್ಲಾ ಪ್ರಪಂಚಮಂ ಕೇಳ್ದು ಬಂದು ಸುಖಮಿರ್ದರಾತನ ವಂಶಂ ಪರಂಪರೆಯಿಂ ಬರೆ

ವೃತ್ತ ||
ನೆಗಳ್ದೀ ಯಾದವವಂಶಜರ್ ಪುರುವರಾತ್ರೀ ಸೋಮ ಶ್ರೀಪಾಲ ಭೀ
ಮಗ ಜಂಬೂಕುಳ ಸಿಂಹವಿಕ್ರಮ ಯಯಾತಿ ಶ್ರೀಪ್ರಭಾಪದ್ಮಸಾ
ಸಿಗ ಸೂರ್ಯಪ್ರಭ ಚಂದ್ರಚೂಳ ನಹುಷ ಶ್ರೇಯಾಂಸ ಗೋಪಾಲರಾ
ದಿಗಳತ್ಯಂತ ಯಶಶ್ರೀಯಂ ಪಡೆದು ಧಾತ್ರೀಪಾಲರಾದರ್ ಪಲರ್

ಇಂತೀ ಕಥೆಯಂ ಕೇಳ್ವರ
ಭ್ರಾಂತಿಯು ನೆರೆ ಕೆಟ್ಟು ಬಳಿಕಮಾಯು ಶ್ರೀಯುಂ
ಸಂತಾನವೃದ್ಧಿಸಿದ್ಧಿಯು
ಸಂತತ ಸೌಖ್ಯಂಗಳಿಹಪರಂಗಳೊಳಕ್ಕುಂ

ಇದು ಸತ್ಯಪ್ರವಚನ ಪಾರಾವಾರ ಸಮುತ್ಪನ್ನ ಕಾಲಪ್ರವರ್ತನ ಕಿಂಚಿನ್ಮಾತ್ರದಿಂ ವಿಬುಧೇಂದು ವಿರಚಿತ ರಾಜಾವಲಿ ಕಥಾಸಾರದೊಳ್ ನಾರಾಯಣ ವಿಭೂತಿ

ತೃತೀಯಾಧಿಕಾರಂ

ಚತುರ್ಥಾಧಿಕಾರಂ

ಶ್ರೀಸುಜನಸ್ತುತರಖಿಳ ಕ
ಳಾಸದನರ್ ಮೋಹತಿಮಿರಮಂ ಕಳೆದು ಕರಂ
ಭಾಸುರ ವಿಚಾರದಕ್ಷರ್
ವೈಷಮ್ಯಮನುಳಿದು ಕೇಳ್ವುದೀ ಸತ್ಕೃತಿಯಂ

ಇಂತನೇಕ ರಾಜರ್ ರಾಜ್ಯಮಂ ಪ್ರತಿಪಾಲಿಸುತ್ತಿರೆ ಹಸ್ತಿನಾಗಪುರದೊಳ್ ಜನಮೇಜಯಂ ತಮ್ಮ ಪಿತೃವಪ್ಪ ಪರೀಕ್ಷಿದ್ರಾಜಂ ಸರ್ಪದಷ್ಟನಾಗಿ ಪೋದುದಕ್ಕೆ ಸರ್ಪಯಾಗಮಂ ಮಾಡಿಸಲ್ ಭೌತಿಕರಂ ಬರಿಸಿ ಸರ್ಪಗಳೆಲ್ಲವಂ ಯಜ್ಞಮುಖದಿಂದಗ್ನಿಯೊಳಿಕ್ಕಿಸೆ ಶರೀರದೊಳುದುಂಬರಕುಷ್ಟಂ ಪುಟ್ಟಿಪ್ಪುದುಂ ರೋಮಹರ್ಷನೆಂಬವಂ ಬಂದು ವಿವಿಧ ಪುರಾಣಮಂ ಪೇಳಿದನದೆಂತೆಂದೊಡೆ

ಪರಾಶರನಾತ್ಮಜಂ ವ್ಯಾಸನೆಂಬ ವೇದಕರ್ತನಾಗಿ [ಋಕ್] ಯಜುರ್ ಸಾಮಾಥರ್ವಣಭೇದದಿಂ ನಾಲ್ಕಾಗಿ ನಿರ್ಮಿಸಿಯವಕ್ಕಂ ಸಾಂಗೋಪಾಂಗದಿಂ ದೊಂದೊಂದಂಗಕ್ಕಮರುವತ್ತುಸಾಸಿರ ಗ್ರಂಥಮಂ ಮಾಡಿ ಆಶ್ವಲಾಯನ ಬೋಧಾಯನ ಆಪಸ್ತಂಭ ಜೈಮಿನಿಯೆಂಬ ಸೂತ್ರಚತುಷ್ಟಯಂಗಳಂ ಇತಿಹಾಸಂಗಳುಮಂ ಪೇಳಿ ಸೂತಂಗರಿಪಿದೊಡಾತಂ ಶೌನಕಾದಿ ಋಷಿಗಳ್ಗಂ ಪೇಳಿ ಪೂರ್ವಾಪರಕ್ಕಂ ದೃಷ್ಟೇಷ್ಟಕ್ಕಂ ವಿರೋಧಮಾಗಿಯುಂ ಸರ್ವರುಂ ನಂಬುವಂತೆ ವಿವಿಧ ಪುರಾಣಮಂ ರಚಿಸಿರ್ದು ಅವರೊಳ್ ಶ್ರೀಮದ್ಭಾಗವತಮಂ ಜನಮೇಜಯಂಗೆ ಪೇಳಿದಂ ಮತ್ತಂ ಕೆಲವು ದಿನಂ ಸಲ್ವಿನಂ ಬಲಭದ್ರನೆಂಬ ದೇವಂ ಬಂದು ವಿಷ್ಣುದೇವರಂ ಸ್ಥಾಪಿಸುವ ಕ್ರಮಮಂ ಪೇಳೆ ತದಾಲಯಮಂ ಮಾಡಿ ವಿಷ್ಣುದೇವರ ಪ್ರತಿಕೃತಿಯಂ ಮಾಡಿ ಪೂಜೆಯಂ ಮಾಡಿದರ್ ತದನಂತರಂ ಚಂದ್ರವರ್ಧನ ಮಹಾರಾಜನ ಸಭೆಗೆ ವೇದಾಂತಿಗಳ್ ಪೌರಾಣೀಕರ್ ಸಹಿತಂ ಬಂದು ತಮ್ಮೊಳೆ ವಾಗ್ವಾದಂ ಪುಟ್ಟೆ ಹಿಂಸಾಯಜ್ಞಮಾಗದೆಂದನೇಕ ತೆರದಿಂ ದೂಷಣಂ ಮಾಡಿ ಬ್ರಹ್ಮಾಂಡ ಪುರಾಣೋಕ್ತಮಂ "ನ ಹಿಂಸಾ ಲಕ್ಷಣಂ ಧರ್ಮಂ" ಹಿಂಸಾಯುಕ್ತಮಾದುದು ಧರ್ಮಮಲ್ಲಂ ಪಾಪಕ್ಕೆ ಕಾರಣಂ ಆತ್ಮಯಜ್ಞಂ ಧ್ಯಾನಲಕ್ಷಣಂ ಮುಕ್ತಿಸಾಧನಮೆಂದು ಪೇಳಿ ಶಾಸ್ತ್ರೋಕ್ತಮಂ ಪ್ರಕಟಿಸೆ ಕೆಲಂಬರ್ ಪಿಷ್ಟಪಶುವಂ ಮಾಳ್ಪುದೆಂತೆಂದರೆ ಕೆಲರೆಂದರ್ ನಾಮಸ್ಥಾಪನಾದ್ರವ್ಯ ಭಾವವೆಂಬ ಚತುರ್ವಿಧಂಗಳೊಳ್ ಪುಣ್ಯ ಪಾಪಂಗಳ್ ಸಮಾನಮಪ್ಪುದೆಂದು ಪೇಳ್ದರಲ್ಲಿ ಮತ್ತಂ ಕೆಲರಿಂತೆಂದರ್ ಯಜ್ಞಾರ್ಥಂ ಪಶುವಧೆಯುಂ ಪುತ್ರಾರ್ಥಂ ಪರಸ್ತ್ರೀಸಂಗಮುಂ ತ್ರಿದಿನ ಗ್ರಾಸಮಾತ್ರಂ ಚೌರ್ಯಮುಂ ದೋಷಮಿಲ್ಲೆಂದು ಆಪತ್ಕಾಲೇನಾಸ್ತಿಮರ್ಯಾದಾ ಇತ್ಯಾದಿ ಐಹಿಕಸುಖಾಭಿಲಷಿತ ಗ್ರಂಥಮಂ ಪೇಳಿ ಕಾರಣ ನಿಮಿತ್ತಂ ಪಿಶಿತಾಶನಮುಂ ಸುರಾಪಾನಮುಂ

ಬೇಂಟೆಯುಂ ವೇಶ್ಯಾಗಮನಮುಂ ರಾತ್ರಿಚರ್ಯಮುಂ ಪುಸಿಯುಂ ಕೊಲೆಯುಂ ವಂಚನೆಯುಮೆಂಬಿವರಿಂ ಪಾಪಮಿಲ್ಲೆಂದು ಶಾಸ್ತ್ರಮಂ ಕೆಲಂಬರುಸಿರಲಲ್ಲಿ ಆರ್ಹತ ಸಿದ್ಧಾಂತಿಗಳ್ ಮೂರ್ಖರುಂ ವ್ಯಸನಿಗರುಂ ಅಸತ್ಯಮುಳ್ಳರುಂ ಪಾಪಮಿಲ್ಲದೆ ಸ್ವರ್ಗಮನೆಯ್ದಿದೊಡೆ ಸತ್ಯವಂತರುಂ ಚಾರಿತ್ರಮುಳ್ಳರುಂ ವ್ಯಸನಮಂ ಬಿಟ್ಟರುಂ ಪಾಪಸಂಪಾದನೆಯಿಂ ನರಕಂಬುಗುವರೆಂಬೀ ಶಾಸ್ತ್ರಮಂ ಪೇಳ್ವರದರಿಂ ನಿಮ್ಮಂತಪ್ಪ ಪಾಪಸೂತ್ರಧಾರಿಗಳಿಲ್ಲೆಂದಿಂತೆಂದರ್

ದ್ಯೂತಂ ಮಾಂಸಂ ಸುರಾ ವೇಶ್ಯಾ ಪಾಪರ್ಧಿಃ ಪರದಾರತಾ
ಸ್ತೇಯೇನ ಸಹ ಸಪ್ತೈತೇ ವ್ಯಸನಾನಿ ವಿವರ್ಜಯೇತ್

ಎಂಬೀ ಸತ್ಯವಚನಮಂ ಬಿಟ್ಟು ನುಡಿವಿರಿ. ಇಲ್ಲಿ ಯುಧಿಷ್ಠಿರಾದಿಗಳುಂ ಜೂದುಗಳಿಂ ವನವಾಸಂ ಮೊದಲಾದ ಪರಿಭವಂಬಟ್ಟರ್, ಬಕನೆಂಬರಸಂ ಮಾಂಸಾಹಾರಿಯಾಗಿ ರಾಕ್ಷಸರೂಪದಿಂ ಮನುಷ್ಯರಂ ಭಕ್ಷಿಸಿ ಅತ್ಯಂತ ದುಃಖದಿಂ ನರಕಮನೆಯ್ದಿದಂ ಪ್ರಮಾದದಿಂ ಯಾದವರಲ್ಲಿ ಕೆಲಂಬರರಿಯದೆ ಮದ್ಯಮಂ ಸೇವಿಸಿದುದರಿಂ ದ್ವಾರಾವತಿ ನೀರೊಳ್ ನೆರೆಯೆ ಪರಿಭವಮಂ ಪಡೆದರ್. ಚಾರುದತ್ತನೆಂಬ ವೈಶ್ಯಜಂ ವೇಶ್ಯಾಗಮನದಿಂ ಮೂವತ್ತೆರಡು ಕೋಟಿ ದ್ರವ್ಯಮಂ ಪೋಗಾಡಿ ಚೀಲದೊಳ್ ಕಟ್ಟಿಸಿಕೊಂಡು ತಿಪ್ಪೆಯೊಳ್ ಕೆಡೆದಂ. ಬ್ರಹ್ಮದತ್ತನೆಂಬರಸಂ ಬೇಂಟೆಯಿಂ ಕೆಟ್ಟು ದುರ್ಗತಿಗೆ ಸಂದಂ. ಶಿವಭೂತಿಯೆಂಬರಸಂ ಚೋರತ್ವದಿಂದಿಹಪರ ದುಃಖಮನುಂಡಂ. ರಾವಣನುಂ ಪರವಧುವಿಗಾಟಿಸಿದುದರಿಂದಪಕೀರ್ತಿಯಿಂ ದುರ್ಗತಿಗೆ ಸಂದಂ. ಇಂತಪ್ಪ ಮಹಾಪುರುಷರೊಂದೊಂದರಿಂ ಕೆಟ್ಟರೆಂದೊಡೋರ್ವಂಗೇಳು ವ್ಯಸನಂ ಕೂಡಿದೊಡಾತಂಗಿಹಪರ ದುಃಖಮನೆಷ್ಟೆಂದು ಪೇಳ್ವುದದರಿಂ ನೀವು ಪೇಳುವುದೆಲ್ಲಮಸತ್ಯಮೆಂದು ನಿರಾಕರಿಸೆ ಅತ್ಯಂತ ಕ್ರೋಧಂ ಪುಟ್ಟಿ ಅನೇಕ ವಾಗ್ವಾದದಿಂ ಕೆಲರು ಸತ್ಯಮಂ ಪಿಡಿದುಂ ಕೆಲಬರಸತ್ಯಮಂ ಪಿಡಿದುಂ ಚರ್ಚಿಸುತ್ತಿರಲೆರಡು ಭಾಗಮಾಗೆ ವಾದಿಸಿ ತೀರದೆ ಕಾಶಿಗೆ ಬಂದು ವಿಶ್ವಸೇನಮಹಾರಾಜನ ಸಭೆಯೊಳೇಳುದಿವಸಂಬರಂ ವಿವಾದಮಾಗಲಲ್ಲಿರ್ದ ಭೂಸುರರ ಭೋಜನಕ್ಕೆ ಬರಿಸಿ ಮತ್ಸ್ಯ ಮಾಂಸಮಂ ವಿಪರೀತ ಬ್ರಾಹ್ಮಣರ ಪ್ರೇರಣೆಯಿಂದಿಕ್ಕಿಸಲ್ ಕೊಕ್ಕರಿಸಿ ಸಪ್ತದಿವಸಮುಪವಾಸಮಿರ್ದು ನಿಮ್ಮ ವರ್ತನೆಯಿಂದೆ ನೀವು ಕರ್ಮಚಾಂಡಾಲರೆಂದು ನಿರಾಕರಿಸೆ ರಾತ್ರಿವೇಳೆಯೊಳ್ ರುದ್ರಭೂತಿಯೆಂಬವಂ ತನ್ನಂತೆ ವಾಸಿಗಳ್ವೆರಸು ಜಿನದಾಸನಂ ಕೊಲ್ವುದುಂ ವಿಶ್ವಸೇನಮಹಾರಾಜನವನಂ ಪರಿಭವಿಸಿ ಕಳೆಯೆ ರೋಷಾವೇಶಂ ಪುಟ್ಟಿದವರೆಲ್ಲ ನಿತ್ಯ ನೈಮಿತ್ತಿಕ ಕರ್ಮಂಗಳ್ಗೆ ಮಂತ್ರಂಗಳಂ ಮಾಡಿಕೊಂಡಲ್ಲಿ ಕಾಲತ್ರಯದೊಳ್ ತರ್ಪಣಮಂ ಕುಡುವಲ್ಲಿ ಜಿನಮತ ಕ್ಷಯವಾಗಲೆಂದು ಮಂತ್ರಮಂ ಮಾಡಿದರಂದಿಂ ಬಳಿಯ ಬ್ರಾಹ್ಮರೊಳೆರಡು ಭಾಗಮಾಯ್ತು. ಅಲ್ಲಿ ವಿಂಗಡಿಸಿಕೊಂಡವರ್ ವಿರುದ್ಧಾಃ ಕಿಂ ನ ಜಲ್ಪಂತಿ

ಎಂಬುದರಿಂ ನಾನಾ ಪ್ರಕಾರದಿಂದಿತರ ಮತಮಂ ದೂಷಿಸಿ ಮೂಲಶಾಸ್ತ್ರಮಂ ನೋಡಲುಂ ಪೇಳಲುಂ ಕೇಳಲುಮಾಗದು. ಆನೆಯಟ್ಟಿದೊಡಂ ಜಿನಾಲಯಮಂ ಪುಗಲಾಗದು, ಜೈನರೊಳ್ ಸಂಭಾಷಣಮಂ ಮಾಡಲಾಗದೆಂದು ಪ್ರತಿಜ್ಞೆಯಂ ಮಾಡಿ ಏಂಗಡಿಸಿಕೊಂಡರ್.

ಇಂತು ಪ್ರವರ್ತಿಸೆ ಮಗಧವಿಷಯದ ರಾಜಗೃಹಮೆಂಬ ಪಟ್ಟಣದೊಳುಪರಿ ಶ್ರೇಣಿಕ ಮಹಾರಾಜಂಗೆ ಇಂದ್ರಾಣಿಯೆಂಬ ಪಟ್ಟದರಸಿ ಮೊದಲಾಗೆ ಮೂವತ್ತಿರ್ವರ ರಸಿಯರಾಗಲವರಿಗೆ ನೂರ್ವರ್ ಕುಮಾರರಾಗಿರಲೊಂದು ದಿನಂ ಯಮದಂಡನೆಂಬ ಸಾಮಾನ್ಯ ಕ್ಷತ್ರಿಯನ ಪುತ್ರಿ ತಿಲಕಾವತಿಯೆಂಬ ಅತಿರೂಪವತಿಯಂ ಕಂಡು ಸೋಲ್ತು ಬೇಡಿದೊಡೆ ಯಮದಂಡಂ ಎನ್ನ ಮಗಳ್ ಪೆತ್ತ ಮಗಂಗೆ ರಾಜ್ಯಮಂ ಕೊಡುವೊಡೆ ಕೊಂಬುದೆನೆ ಅಂತೆಗೆಯ್ವೆನೆಂದು ಭಾಷೆಯಂ ಮಾಡಿ ತರಲವಳ್ಗೆ ಪುಟ್ಟಿದ ಮಗನಿಗೆ ಚಿಳಾತಿಪುತ್ರನೆಂದು ಪೆಸರಿಡೆ ಪಟ್ಟದರಸಿ ಇಂದ್ರಾಣಿಗೆ ಪುಟ್ಟಿದ ಶ್ರೇಣಿಕನೆಂಬ ಕುಮಾರನತಿ ರೂಪನತಿಜಾಣನುಮಾಗಿರೆ ಒಂದು ದಿವಸಂ ನೈಮಿತ್ತಿಕನಂ ಕರೆದೆನ್ನ ಮಕ್ಕಳ್ ನೂರಿರ್ವರೊಳೀ ರಾಜ್ಯಮನಾವನಾಳ್ವನೆಂದು ಬೆಸಗೊಳೆಯದಂ ಪರೀಕ್ಷಿಸಲೋರೋರ್ವರ ಕೈಯೊಳೊಂದೊಂದು ಸಕ್ಕರೆಕೊಡಮಂ ಕೊಟ್ಟು ಸತ್ರಕ್ಕೆ ಕಳುಹಿಸಲೆಲ್ಲರುಂ ಕೊಂಡು ಪೋದರ್. ಶ್ರೇಣಿಕಂ ತನ್ನ ಕೊಡಮಂ ಕೆಲದೊಳಿರ್ದ ಮನುಷ್ಯನ ಕೈಯೊಳ್ ತೆಗೆಯಿಸಿಕೊಂಡು ಪೋದಂ. ಮತ್ತೊಂದು ದಿನಂ ಪೊಸಮಡಕೆಯೊಳ್ ಪುಲ್ಲನೀರಂ ತರವೇಳಲೆಲ್ಲರುಂ ತರಲಾರದಿರೆ ಶ್ರೇಣಿಕಂ ಸಣ್ಣ ಬಟ್ಟೆಯನೆಳೆದು ಪಿಂಡಿ ಕೊಡಮಂ ತುಂಬಿ ತಂದಂ. ಮತ್ತೊಂದು ದಿವಸಂ ಮನೆಯೊಳ್ ಪಾಯಸಮನುಣಲಿಕ್ಕೆ ನಾಯಕುನ್ನಿಗಳಂ ಬಿಡಲೆಲ್ಲರುಂ ಎಡೆಯಂ ಬಿಟ್ಟು ಪೋಗೆ ಶ್ರೇಣಿಕಂ ತನ್ನೆಡಗೈಯಿಂದೊಂದೊಂದು ತುತ್ತಂ ನಾಯಿಗಿಡುತ್ತುಂ ಪರಿಯಾಣಮಂ ಮುಟ್ಟಲೀಸದಾರೋಗಿಸಿದಂ. ಮತ್ತೊಂದು ದಿನಂ ಅರಮನೆಗೆ ಅಗ್ನಿಪ್ರವೇಶಮಾಗೆ ಕುಮಾರರೆಲ್ಲರಂಜಿ ಓಡುತ್ತಿರೆ ಶ್ರೇಣಿಕಂ ತಮ್ಮ ತಂದೆಯೇರುವ ಸಿಂಹಾಸನಮಂ ಕನಕಛತ್ರಮಂ ಧ್ವಜಮುಮಂ ಕೊಂಡು ಪೊರಮಡಲೀತಂ ರಾಜ್ಯಾರ್ಹನಪ್ಪನೆಂದರಿದು ತಿಲಕಾವತಿಯ ಪುತ್ರಂಗೆಂದಿತ್ತ ಭಾಷೆ ತಪ್ಪುವುದೆಂದಾಳೋಚಿಸಿ ಶ್ರೇಣಿಕನ ಮೇಲೆ ಅವಗುಣಂಗಳನಾರೋಪಿಸಿ ಪಟ್ಟಣದಿಂ ಶ್ರೇಣಿಕನಂ ಪೊರಮಡಿಸಲೊರ್ವನೆ ನಂದಿಗ್ರಾಮಮನೆಯ್ದಿ ಪಾರ್ವರ ಮಠದ ಮುಂದೆ ಕುಳ್ಳಿರ್ಪುದುಮೇಳಾತಟಾಕಮೆಂಬ ಪುರದ ಇಂದ್ರದತ್ತನೆಂಬನಾತ ತನ್ನ ಮಗಳತಿನಿಪುಣೆಯಾನಂದಶ್ರೀಯೆಂಬಳ್ಗೆ ವರಮಂ ನೋಡುತ್ತುಂ ಬಪ್ಪನೀ ರಾಜಕುಮಾರನಂ ಕಂಡು ಸಮೀಪಕ್ಕೆ ವರೆ ಮಾವಾ ಬನ್ನಿಮೆಂದು ಕರೆದು ನಿಮ್ಮ ಕೂಡೆ ನಾಂ ಬಪ್ಪೆನೆನಲಾತನ ಭದ್ರಾಕಾರಮಂ ನೋಡಿ ಸಂತಸಂಬಡೆ ಶ್ರೇಣಿಕನಾತನನೊಡಗೊಂಡಲ್ಲಿ ನೆರೆದಿರ್ದ ಬ್ರಾಹ್ಮಣರಲ್ಲಿಗೆಯ್ದಿ ಅರಮನೆಯ ಮನುಷ್ಯರಾವು ರಾಜಕಾರ್ಯಕ್ಕೆ ಪೋದಪೆವೆಮಗೆ ಭೋಜನಮನಿಕ್ಕುವುದೆನೆ ಅವರೆಲ್ಲಂ ನಕ್ಕು ಇದು ಸರ್ವಮಾನ್ಯದಗ್ರಹಾರಂ ಎಂತಪ್ಪ ಬಲ್ಲಿದಂ ಬಂದೊಡಂ ನೀರ್ಗುಡಿಯಲೆರೆವವರಲ್ಲವೆಂದು ನಿರಾಕರಿಸೆ ಪಸಿವಿಂ ಮರುಗುತ್ತುಂ ಬಂದು ಜಠರಾಗ್ನಿಯೆಂಬ ಬ್ರಾಹ್ಮಣನ ಗೃಹಕ್ಕೆಯ್ತಂದೆಮಗೆ ಅನ್ನಮನಿತ್ತೊಡೆ ರೊಕ್ಕಮನೀವೆವೆಂದು

ಬೇಡಿದೊಡಾತನಿವರಾಕಾರಮಂ ನೋಡಿ ಪ್ರೀತಿಯಿಂದುಣಲಿತ್ತು ಮನ್ನಿಸಿ ಶ್ರೇಣಿಕನಂ ತನ್ನ ವೈಷ್ಣವಧರ್ಮಮಂ ಕೈಕೊಳಿಸಲಾ ಭಾಗವತನಂ ಬೀಳ್ಕೊಂಡು ಮರುದಿವಸಂ ಇಂದ್ರದತ್ತನ ಪೊಳಲ್ಗೆ ಪೋಗಲ್ ಬಟ್ಟೆಯಂ ಪತ್ತಿ ಪೋಗುತ್ತುಂ ಎಲೆ ಮಾವಾ ನಾಲಗೆಯಂ ಭಂಡಿಯಂ ಮಾಡಿ ಏರಿ ಪೋಪಮೆನಲ್ ಮುಂದೆ ನದಿಯೊಳ್ ಪೋಪಾಗಳ್ ಕಾಲಮರೆಯಂ ಮೆಟ್ಟಿ ಪೋಗೆ ಮರದೆಡೆಯೊಳ್ ಕೊಡೆಯಂ ಪಿಡಿದು ನಡೆಯೆ ಮುಂದೊಂದೂರಂ ಕಂಡಿದು ಊರೊ ಪಾಳೊ ಎನೆ ಮತ್ತೋರ್ವಂ ತನ್ನ ಪೆಂಡತಿಯಂ ಬಡಿಯುತ್ತಿರೆ ಕಟ್ಟಿ ಬಡಿದಪನೊ ಕಟ್ಟಿಲ್ಲದೆ ಬಡಿದಪನೊ ಎಂದಂ. ಮುಂದೆ ಪೆಣನ ಕಂಡಿಂದು ಸತ್ತವನೊ ಅಂದೇ ಸತ್ತವನೊ ಎಂದಂ. ಒಬ್ಬನುಳುತಿರ್ದನಂ ಕಂಡೀ ನೇಗಿಲ್ಗೆಷ್ಟು ಪೆಂಟೆಯೆಂದಂ. ಬೆಳೆದಿರ್ದ ಪೊಲನಂ ಕಂಡಿವಂ ಪಿಂದುಂಡವನೊ ಮುಂದುಂಬನೊ ಎಂದಂ. ಏರದ ಮರಕ್ಕೆ ಮುಳ್ಳೆಷ್ಟೆಂದು ಪ್ರಶ್ನೆಗಳವನೇ ಕಂಗಳ ಮಾಡುತ್ತಂ ಬರೆ ಈತಂ ನಿರ್ಬುದ್ಧಿಗನೊ ಮರುಳನೊಯೆಂದರಿದು ಇಂದ್ರದತ್ತಂ ತನ್ನ ಪುರಮಂ ಪೊಗುವಾಗಳವನಂ ಪುರದ ಮುಂದಣ ಕೆರೆ ಬಳಿಯೊಳಿರಿಸಿ ತನ್ನ ಮನೆಗೆ ಬಂದು ಆನಂದಶ್ರೀಯಂ ಕಂಡು ಎಲೆ ಮಗಳೆ ನಿನಗೆ ವರಮಂ ನೋಡಲೆಂದು ಪೋದೊಡಗ್ರಹಾರದ ಬಳಿಯೊಳೋರ್ವನತಿರೂಪನಾದ ರಾಜಕುಮಾರಂ ಎನ್ನಂ ಮಾವಾ ಎಂದೆನ್ನೊಡನೆ ಬಂದಂ. ಆತಂ ಮರುಳಪ್ಪುದರಿಂದೂರ ಪೊರಗೆ ಬಿಟ್ಟು ಬಂದೆನೆನೆ ಎಂತಪ್ಪ ಮರುಳನೆಂಬುದುಮಾತಂ ಕೇಳಿದ ಪ್ರಶ್ನೆಗಳೆಲ್ಲಮಂ ಪೇಳ್ದೊಡಾತಂ ಮರುಳನಲ್ಲಂ ನಿಮ್ಮಂ ಮರುಳ್ಮಾಡಿದನೆಂದು ಬೇಗದಿಂ ತನ್ನ ಸಖಿಯಂ ಕರೆದು ಸೆಳ್ಳುಗುರೊಳ್ ಗಂಧದೆಣ್ಣೆಯಂ ತುಂಬಿಕೊಟ್ಟು ಮಿಂದು ಬರವೇಳೆಂದು ಕಳುಹಿಸಲಾಕೆ ಪೋಗಿ ಶ್ರೇಣಿಕನಂ ಕಂಡು ಇಂದ್ರದತ್ತರೊಡನೆ ಬಂದವರ್ ನೀವೇ ಎಂಬುದುಮಾತಂ ಮಾರ್ಗದೊಡನೆ ಬಂದೆನೆನೆ ಆದೊಡಾತನ ಮಗಳ್ ಆನಂದಶ್ರೀಯಂ ಕೆರೆಯೊಳ್ ಮಿಂದು ಬರಲೆಂದು ಗಂಧತೈಲಮಂ ಕಳುಹಿಸಿದಳೆಂಬುದುಮಾ ಎಣ್ಣೆಯಂ ಎರೆಯೆಂದು ಮಣ್ಣಿಂಗುಳಿಯಂ ಮಾಡಿ ನೀರಂ ತುಂಬಿ ಆ ಎಣ್ಣೆಯನೆರೆದು ಪೋಗೆನಲಂತೆ ಮಾಡಿ ಪೋಗುತ್ತಿರೆ ನಿನ್ನೊಡತಿಯ ಮನೆಯೆಲ್ಲಿರ್ಪುದೆಂದೊಡಾಕೆ ಕಿವಿಯಂ ಮುಟ್ಟಿಕೊಳ್ಳುತ್ತಂ ಪೋಗೆ ತಾನುಂ ಕೆರೆಯೊಳ್ ಸ್ನಾನಂಗೆಯ್ದು ಕುಳಿಯೊಳಿರ್ದೆಣ್ಣೆಯಂ ತಲೆಯ ನವಿರಿಂಗಿಕ್ಕಿಕೊಂಡು ತಾಳಮರದ ಮನೆಯನವಳೋಕಿಸುತ್ತುಂ ಬಪ್ಪಿನಂ ಮರನಂ ಕಡಿಯಿಸಿ ಪೊರಗೆ ಹಾಕಿಸಿ ತನ್ನ ಮಂದಿರದ ಮುಂದೆ ನೆಲನೆಲ್ಲನಂ ಕೆಸರಂ ಮಾಡಿ ನಡುವೆ ಬಪ್ಪ ದಾರಿಯೊಳ್ ಜಾರಗಲ್ಲನಿಕ್ಕಿರೆ ಶ್ರೇಣಿಕಂ ಬಂದು ಗೃಹಮಂ ಕಾಣದಿರ್ದು ತುಂಬಿಗಳಾಡುತ್ತಿರ್ದುದಂ ಕಂಡು ಬಪ್ಪಿನಮಾರ್ಗದೊಳಿರ್ದ ಜಾರಗಲ್ಲಂ ಮೆಟ್ಟದೆ ಕೆಸರೊಳೆ ಬಂದು ಗೃಹಾಂಗಣದ ವೇದಿಕಾಗ್ರದೊಳ್ ಕುಳ್ಳಿರೆ ಆನಂದಶ್ರೀ ಕಂಡು ಸಣ್ಣ ಚೆಂಬಿನೊಳ್ ಕಿರಿದುದಕಮಂ ಕಳಿಪಿ ಕಾಲಂ ಕರ್ಚಿ ಬರಲೆಂದೊಡೆ ಶ್ರೇಣಿಕಂ ಬಿದಿರ ಸೀಳಿನೊಳ್ ಕಾಲಂ ಪತ್ತಿದ ಕೆಸರೆಲ್ಲಮಂ ಕಳೆದು ಒದ್ದೆಯಿಂ ಒರಸಿ ಮಿಕ್ಕ ಜಲಮಂ ತಿರುಗಿ ಕಳುಪುವುದುಂ ಮೆಚ್ಚಿ ಇಂದೆಮ್ಮ ಗೃಹದೊಳ್ ಭೋಜನಂ ಮಾಳ್ಪುದೆನೆ ಎಮಗಿಂದು ಪರಾನ್ನಂ ಸಲ್ಲದೆನ್ನಲ್ಲಿ ಎರಡು ಸೊಲ್ಲಗೆ ಅಕ್ಕಿಯಿರ್ದಪುದದರಿಂದಂ ಪದಿನೆಂಟು ತೆರದ

ಪಕ್ವಾನ್ನಮಂ ಮಾಡಿ ಯಥೇಷ್ಟ ಭೋಜನಮನಿಕ್ಕಲುಂಬೆನೆಂದೊಡಾ ಅಕ್ಕಿಯಂ ತರಿಸಿ ಪಿಟ್ಟುಗುಟ್ಟಿ ಅಬಗನಟ್ಟು ನಿಪುಣಮತಿಯ ಕೈಯೊಳ್ಕೊಟ್ಟು ಜೂಜುಗಾರರಾಡುವಲ್ಲಿಗೆ ಪೋಗಿಯಲ್ಲಿ ಭಾಷೆಯಿಂದೇಳದೆ ಕ್ಷುಂಧಾ ತೃಷೆಯಿಂ ಬಳಲುತ್ತಿರ್ದವರ್ಗೆ ಖಾದ್ಯಪಾನಂಗಳ ಕೊಡಲವರ್ ಕೇಳಿದ ರೊಕ್ಕಮಂ ಕುಡೆ ಅದರಿಂ ಸಮಸ್ತ ವಸ್ತುಗಳಂ ತರಿಸಿ ಪದಿನೆಂಟು ತೆರದ ಪಕ್ವಾನ್ನಮಂ ಮಾಡಿ ಭೋಜನಮಂ ಮಾಡಿಸಿ ಒಂದು ಪಿಡಿಯಡಕೆಯುಮನೆರಡೆಲೆಯುಮಂ ಗಜ್ಜುಗದಷ್ಟು ಸುಣ್ಣಮಂ ಕುಡೆ ತಾಂಬೂಲಮಂ ಮಾಡೆ ಅಷ್ಟಡೊಂಕಿನ ಹವಳಕ್ಕೆ ಸೂತ್ರಮನೇರಿಸುವುದೆಂದು ಕೊಟ್ಟೊಡೆ ಆ ಸೂತ್ರಕ್ಕೆ ಬೆಲ್ಲದ ರಸಮನೂಡಿ ಇರುಪೆಯಿಂ ನೆತ್ತಿಯ ಮೊದಲ ಛಿದ್ರದೊಳ್ ಪೊರಮಡಲದಂ ನಂದಶ್ರೀಗೆ ಕುಡೆ ಸಂತೋಷದಿಂ ಪಿತೃಗಳನುಮತಿಯಿಂ ಶುಭಮುಹೂರ್ತದೊಳ್ ಮದುವೆನಿಂದು ಶ್ರೇಣಿಕಂ ಇಷ್ಟಭೋಗ ಕಾಮಸುಖಮನನುಭವಿಸುತ್ತಿರೆ ಕೆಲವು ದಿವಸಕ್ಕೆ ನಂದಶ್ರೀ ಗರ್ಭಮಾಗಿ ನವಮಾಸಂ ಕಳೆವನ್ನಮಭಯಘೋಷಣೆಯಂ ಮಾಳ್ಪ ಬಯಕೆಯಾಗೆ ಚಿಂತಿಸುತ್ತಿಪ್ಪಾಗಳಾ ಪುರದರಸಂ ವಸುಪಾಳನ ಪಟ್ಟದಾನೆ ಮದಂ ಪುಟ್ಟಿ ಕಂಭಮಂ ಕಿತ್ತು ಜನಂಗಳೆಲ್ಲಮಂ ಕೊಲ್ಲುತ್ತುಂ ಪುರದೊಳ್ ಚರಿಸುತ್ತಿರಲದಂ ಪಿಡಿಯಲಾರಿಗುಂ ಸೆಲವಿಲ್ಲದಿರೆ ಶ್ರೇಣಿಕನದಂ ಕಂಡುದ್ದಾಮದ ಗಜಮನೊಳಗುಮಾಡಿ ಅದರ ಮೇಲೇರಿ ಎಲ್ಲರಾಶ್ಚರ್ಯಂಬಡೆ ಕಂಭಕ್ಕೆ ತಂದು ಕಟ್ಟುವುದುಂ ವಸುಪಾಳಂ ಕರೆದು ಮನ್ನಿಸಿ ನಿನ್ನ ಮನೋಭೀಷ್ಟಮಾವುದದಂ ತೀರ್ಚುವೆನೆನೆ ಮಾನದಿಂ ಮೌನದೊಳ್ ಇಂದ್ರದತ್ತನೆಂದನೇಳು ದಿವಸಮಭಯಘೋಷಣೆಯಂ ಮಾಡಿಸಲಭೀಷ್ಟಮಿಪ್ಪುದೆನಲೇಳು ದಿವಸಮಭಯ ಘೋಷಣೆಯಂ ಮಾಡಿಸೆ ನಂದಶ್ರೀ ಬಯಕೆ ತೀರೆ ಗಂಡುಮಗನಂ ಪಡೆಯೆ ಅಭಯಕುಮಾರನೆಂದು ಪೆಸರಿಡಲನುಕ್ರಮದಿಂ ಬಳೆದು ಸಕಳಕಳಾಕುಶಲನಾಗಿ ಸುಖಮಿರಲತ್ತ ರಾಜಗೃಹಪಟ್ಟಣದೊಳುಪಶ್ರೇಣಿಕನೆಂಬ ವ್ಯಾಧಿತನಾಗಿ ತಾಂ ಮುನ್ನಂ ಭಾಷೆಯನಿತ್ತುದರಿಂ [ಚಿಳಾತಿ] ಪುತ್ರಂಗೆ ಪಟ್ಟಂಗಟ್ಟಿ ತಾಂ ಪರಲೋಕಮನೆಯ್ದೆ ಆತಂ ಸಕಲ ಜನಂಗಳ್ಗಂ ಕಷ್ಟಮನೊಡರ್ಚೆ ರಾಜ್ಯಮಂ ಅನ್ಯಾಯದಿಂ ಕ್ಷೋಭಿಸೆ ಮಂತ್ರಿನಿಯೋಗಿಗಳ್ ಬಂದು ಶ್ರೇಣಿಕಂಗರಿಪಿ ಸಹಸ್ರ ಭಟರನೊಳಗುಮಾಡಿಕೊಂಡೆತ್ತಿ ಬಪ್ಪುದುಂ ಚಿಳಾತಿಪುತ್ರಂ ಕೇಳ್ದೊಡೆ ಪೋಗೆ ಒಂದು ದುರ್ಗಮನಡರಿಪ್ಪುದುಂ ರಾಜಗೃಹದೊಳೆ ಶ್ರೇಣಿಕಂಗೆ ಪಟ್ಟಂಗಟ್ಟಿ ನಂದಶ್ರೀಯಂ ಮಗನಭಯಕುಮಾರನುಮನ್ ವೇಳಾತಟಪುರದೊಳೆ ಬಿಟ್ಟು ತಾನುಂ ರಾಜಗೃಹದೊಳ್ ಸುಖಮಿರ್ದು ನಂದಿಗ್ರಾಮದ ಬ್ರಾಹ್ಮಣರ್ ಪಿಂದೆ ತನ್ನ ನಿರಾಕರಿಸಿದುದಂ ನೆನೆದಾ ಗ್ರಾಮಮಂ ಕೆಡಿಸಲ್ ಬೆಸಸೆ ಪ್ರಧಾನನೆಂದರ್ ತಪ್ಪಿಲ್ಲದಾಜ್ಞೆಯಂ ಮಾಳ್ಪುದು ಕ್ಷತ್ರಿಯಧರ್ಮಮಲ್ಲದರಿನೇನಾದೊಡಮಾಜ್ಞೆಗೊಟ್ಟು ಅದಂ ಮೀರಿದೊಡಾಜ್ಞೆಯಂ ಮಾಳ್ಪುದೆನೆ ತಪ್ಪಂ ಪೊರಿಸಲೊಂದೆಳಗನಂ ಕಳಿಪಿ ಅದಕ್ಕಂ ಗ್ರಾಸಮನಿಕ್ಕೆ ವರುಷಂಬರಂ ಇದ್ದ ಪ್ರಮಾಣದೊಳೆ ಇರದೆ ಬಡವಾದೊಡಂ ದೊಡ್ಡಿತ್ತಾದೊಡಂ ನಿಮ್ಮ ಗ್ರಾಮಮಂ ಕೆಡಿಸಿ ನಿಮಗಾಜ್ಞೆಯಂ ಮಾಳ್ಪೆನೆಂದು ಕಾಪಿಟ್ಟು ಕಳುಹಿಸಲಾ ವೇಳೆಯೊಳಭಯಕುಮಾರಂ ಬಂದಿರಲಾ ಬ್ರಾಹ್ಮಣರೆಲ್ಲಂ ಚಿಂತಿಸಿ ಅಭಯಕುಮಾರಂಗರಿಪಿ

ದೈನ್ಯಂಬಟ್ಟು ಬೇಡಿಕೊಳಲಂಜಬೇಡೆಂದೆರಡು ಪುಲಿಯಂ ತರಿಸಿ ಅವರ ನಡುವೆ ಎಳಗನಂ ಕಟ್ಟಿಸಿ ಬಡವಾದೊಡೆ ಪುಲಿಗಳಂ ದೂರದೊಳ್ ಕಟ್ಟುವುದು ದೊಡ್ಡಿತ್ತಾದೊಡೆ ಸಮೀಪದೊಳ್ ಕಟ್ಟುವುದೆಂದು ಪೇಳ್ದೊಡಂತೆ ಮಾಡಿ ಕೆಲವು ದಿವಸಕ್ಕೆ ಎಳಗನಂ ಕೊಂಡುಪೋಗಿ ಶ್ರೇಣಿಕಂಗೆ ತೋರಿಬಂದು ನಿನ್ನ ಪ್ರಸಾದದಿಂ ಬದುಕಿದೆವೆಂದುಮಿನ್ನು ಅರಸಿಂಗೆಮ್ಮ ಮೇಲಣ ಕ್ರೋಧಂ ಪೋಪನ್ನೆಗಂ ನೀವೆಮ್ಮೊಳಿಪ್ಪುದೆಂದತ್ಯಾದರದಿಂದಭಯಕುಮಾರನಂ ಬ್ರಾಹ್ಮಣರೆಲ್ಲಂ ನಂದಿಗ್ರಾಮದೊಳಿರಿಕೊಂಡಿಪ್ಪುದುಂ ಮತ್ತೊಂದು ದಿನಂ ಕಪ್ಪುರದ ಬಾವಿಯಂ ಕಳುಹಿಸುವುದೆಂದು ಲೇಖನವುನಟ್ಟಿದೊಡಭಯಕುಮಾರೋಪದೇಶದಿಂದ ರಸನ ಸಮೀಪದವರ್ಗೆಲ್ಲಂ ಲಂಚಂಗೊಟ್ಟು ಶ್ರೇಣಿಕನ ನಿದ್ರಾವಸರದೊಳ್ ಪ್ರಧಾನರ್ ಬ್ರಾಹ್ಮಣರಂ ಬರಿಸಿ ಬಾವಿ ಬಂದಿದೆಯೆಂದು ಎಚ್ಚಿಸೆ ತಾನು ಬಾವಿಯಂ ತರವೇಳಿರ್ದುದರಿಂ ನಿದ್ರೆಗಣ್ಣಿನೊಳಿರ್ದಲ್ಲಿಯೆ ಇರಲಿಯೆಂಬುದುಂ ಬ್ರಾಹ್ಮಣರಂ ಕಳುಪೆ ನಿದ್ರೆ ತಿಳಿದೆದ್ದು ಎಲ್ಲಿ ಬಾವಿಯು ಬಂದಿಪ್ಪುದುಮೆಂದೊಡಿದ್ದಲ್ಲಿಯೆ ಇರಲಿಯೆಂದಪ್ಪಣೆಯಾದುದರಿಂ ಬ್ರಾಹ್ಮಣರ್ ಅಗ್ರಹಾರಕ್ಕೆ ಪೋದರೆನೆ ವಿಷಣ್ಣಚಿತ್ತನಾಗಿ ಒಂದು ಮದಕರಿಯಂ ನಂದಿಗ್ರಾಮಕ್ಕೊಯ್ದು ಅದರ ತೂಕವೆಷ್ಟು ಮಣವಿಪ್ಪುದದಂ ಬ್ರಾಹ್ಮಣರಿಂದಳೆಯಿಸಿ ತಪ್ಪುದೆಂದು ಕಳುಹಿಸಲತ್ಯಂತ ವ್ಯಾಕುಲರಾಗಿ ಕುಮಾರೋಪದೇಶದಿಂದೊಂದು ಛೈತ್ರದೊಳಾನೆಯನೇರಿಸಿ ನೀರೊಳಿಳಿಸಿ ಛೈತ್ರಂ ಮುಳುಗಿರ್ದ ಪ್ರಮಾಣಂ ತಿಳಿದಾನೆಯಂ ಕಳೆದಾ ಮುಳುಗಿರ್ದ ಪ್ರಮಾಣಂ ಗುಂಡುಗಳಂ ತುಂಬಿ ಆ ಪ್ರಮಾಣಂ ತೆಗೆದಾ ಗುಂಡುಗಳಂ ತೂಗಿ ಮಣಗಟ್ಟಲೆಯಿಂ ಆನೆಯ ತೂಕಮಂ ಬರೆದು ಕಳುಹಿಸೆ ಮತ್ತೊಮ್ಮೆ ಒಂದು ಮೊಳದುದ್ದ ತರಿಯ ಕೊರಡಂ ಕೆತ್ತಿಸಿ ಅದರ ತುದಿಮೊದಲಂ ಪೇಳ್ವುದೆಂದಟ್ಟಲದಂ ನೀರೊಳದ್ದಿ ಆರಿದ ದೆಸೆಯಂ ನೋಡಿ ಮೊದಲಿದು ತುದಿಯಿದೆಂದಟ್ಟೆ ಮತ್ತಂ ಪೆಡಗೆಯೊಳೆಳ್ಳಂ ಕಳುಹಿಸಿ ಎಳ್ಳನಳೆದ ಮಾನದೊಳೆಣ್ಣೆಯನಳೆದುಕೊಡುವುದೆಂಬುದುಂ ಕನ್ನಡಿಯೊಳೆಳ್ಳನಳೆದದರೊಳೆ ಎಣ್ಣೆಯ ನಳೆದು ಕೊಡುವುದುಂ. ಮತ್ತಂ ದ್ವಿಚತುಷ್ಪಾದಿಗಳದಲ್ಲದೆ ನಾರಿಕೇಳಾದಿ ವೃಕ್ಷಂಗಳ ಪಾಲಲ್ಲದೆ ರಾಜಭೋಜ್ಯಯೋಗ್ಯಮಪ್ಪ ಪಾಲಂ ಕಳಿಪುವುದೆನೆ ಕುಮಾರೋಪದೇಶದಿಂ ಪಾಲೇರುವ ಕಳವೆಯ ತೆನೆಗಳಂ ಪಿಂಡಿ ವಸ್ತ್ರಗಾಲಿತಂ ಮಾಡಿ ಕಳಿಪುವುದಂ ವಿಸ್ಮಯಂಬಟ್ಟು ಒಂದೇ ಕೋಳಿಯಂ ತಂದೆನ್ನ ಮುಂದೆ ಕಾದಿಸುವುದೆಂಬುದುಮೊಂದು ತೊಂಡೇರಿದ ಹುಂಜನಂ ಕೊಂಡುಪೋಗಿ ಶ್ರೇಣಿಕನ ಮುಂದಿಟ್ಟು ದೊಡ್ಡ ಕನ್ನಡಿಯಂ ತೋರೆ ಪ್ರತಿರೂಪಂ ಕಂಡು ಕೇಸರಂಗೆದರಿ ಕಂಠಮನೆತ್ತಿ ನಿಮಿರ್ದ ಚಂಚುವಿಂದಿರಿದು ಮಲ್ಲನಂತೆ ಕಾದುತ್ತಿಪ್ಪುದಂ ತೋರಿಸಿ ಬರೆ, ಮತ್ತಂ ಮಳಲ ಹಗ್ಗಮಂ ಮಾಡಿ ಕಳುಹಿಸಿರೆಂಬುದುಂ ಸಣ್ಣ ಮಳಲಂ ನೂಲ ಹಗ್ಗದೊಳ್ ಮೇಣದ ಸರಿಯಿಂ ಪತ್ತಿಸಿಯುಂ ಬರಿಯ ಮಳಲು ಕೊಂಡುಪೋಗಿ ದೇವಾ ನಿಮ್ಮ ಭಾಂಡಾರದೊಳಿರ್ದ ವೇಷ್ಟನಮಂ ತೋರಿದೊಡಾ ಪ್ರಮಾಣದಿಂ ಮಾಡಿಕುಡುವೆವೆನೆ ಯಷ್ಟಿಯಂ ತೋರೆ ಮಾತಿನ ಗೆಲ್ಲಂಗೊಂಡು ಪೋಗೆ

ಮತ್ತಂ ಪವಿರಯೊಳು ಕೂಷ್ಮಾಂಡಂ ತರವೇಳೆ ಕಾಯಂ ಬಳ್ಳಿವೆರಸಿ ಪರವಿಯೊಳಿಕ್ಕಿ

ಬೆಳೆದಾಗ ಬಳ್ಳಿಯಂ ಕೊಯ್ದುಟ್ಟುವುದುಂ ಶ್ರೇಣಿಕಂ ಕಂಡಿನಿತುಪಾಯಮುಂ ಬ್ರಾಹ್ಮಣರಿಗೆ ಪೇಳ್ವರಾರಫನ ತಿಳಿಯಲು ಚತುರತೆಯುಳ್ಳ ನಿಯೋಗಿಗಳಂ ಕಳಿಪೆ ಅವರ್ ಬರ್ಪಿನಮಾ ನಂದಿಗ್ರಾಮದುದ್ಯಾನವನದೊಳ್ ಪಾರ್ವರ ಮಕ್ಕಳ್ ಕೂಡಿ ಜಂಬೂವೃಕ್ಷದ ಮೇಲಭಯಕುಮಾರನಿರೆ ಅಲ್ಲಿಗೆ ಬಂದ ರಾಜಪುರುಷರ್ ನೇರಿಲಪಣ್ಣಂ ಬೇಡಿದೊಡಭಯಕುಮಾರಂ ಹಸಿಯ ಪಣ್ಣೋ ಬಿಸಿಯ ಪಣ್ಣೋ ಎನೆ ಪಸಿಯ ಪಣ್ಣಂ ಬಲ್ಲೆವು ಬಿಸಿಯ ಪಣ್ಣನೀವುದೆನೆ ಒಂದು ಪಕ್ವಫಲಮಂ ಈಶತ್ಕರಪಲ್ಲವದೊಳೊರಸಿ ಕಾದ ಮರಳಿನೊಳಿಕ್ಕಿ ಕೊಡಲವರ್ ಮರಳನೂದುವುದುಂ ಮುದಿಮೀಸೆ ಕಪ್ಪಾಗುವುದೆಂದಣಕಮನಾಡಲವರ್ ಲಜ್ಜಿಸಿ ನಂದಿಗ್ರಾಮಮಂ ಪುಗದೆ ರಾಜಗೃಹಕ್ಕೆ ಬರೆ.

ಮತ್ತೊಂದು ದಿವಸಂ ದ್ವಿಪಾದ ಚತುಷ್ಪಾದಿಗಳುಂ ನರಮೃಗಾದಿಗಳುಮಲ್ಲದ ವಾಹನದೊಳು ನಿಮ್ಮ ಮಕ್ಕಳಂ ಕಳುಹಿಸುವುದೆಂದು ಬ್ರಾಹ್ಮಣರಲ್ಲಿಗೆ ಕಳುಹಿಸೆ ಅಭಯಕುಮಾರೋಪದೇಶದಿಂ ಭಂಡಿಯ ತಳದಚ್ಚುಗಳೊಳ್ ನೆಲಹಂ ಕಟ್ಟಿಸಿ ಅವರೊಳ್ ತಾನುಂ ಬ್ರಾಹ್ಮಣರ ಮಕ್ಕಳ್ ಸಹ ಏರಿಕೊಂಡು ಸಂಜೆಯೊಳ್ ಬಂದು ತಂದೆಗೆ ವಿನಮಿತನಾಗಿ ಬ್ರಾಹ್ಮಣರಿಗಭಯದಾನಮಂ ಕೊಡಿಸಿ ಕಳಿಪುವುದುಂ ಶ್ರೇಣಿಕನಭಯಕುಮಾರಂಗೆ ಯುವರಾಜಪದವಿಯಂ ಕೊಟ್ಟು ಸುಖದಿನಿರ್ದು ನಂದಿಗ್ರಾಮದ ಮಠಪತಿಯಪ್ಪ ಭಾಗವತ ಜಠರಾಗ್ನಿಯಂ ಬರಿಸಿ ರಾಜಗುರುವಾಗೆ ವೈಷ್ಣವಧರ್ಮಮಂ ಪ್ರಕಾಶಿಸಿ ಮತ್ಸ್ಯ ಕೂರ್ಮ ವರಾಹ ನಾರಹಂಸಿ ವಾಮನ ಪರಶುರಾಮ ರಾಮ ಕೃಷ್ಣ ಬೌದ್ಧ ಕಲ್ಕಿ ಎಂಬೀ ದಶಾವತಾರ ಪ್ರತಿಮೆಗಳಂ ರಚಿಸಿ ಪೂಜಿಸುತ್ತುಂ ಭಕ್ತರಂ ಪರಿಪಾಲಿಸುತ್ತಿರ್ದಂ.

ಆ ಕಾಲದೊಳೆ ಬ್ರಾಹ್ಮೀ ಮೊದಲಾದ ಸಪ್ತಮಾತೃಕೆಯರಿಗೆ ಗುಡಿಗಳಂ ನಿರ್ಮಿಸಿ ಪೂಜಿಸಿ ಜನಗಳ್ ನಿರೋಗಿಗಳಾದರ್. ಮತ್ತಂ ಕೆಲಕೆಲವೆಡೆಯೊಳ್ ದುರ್ಗಾದೇವಿಯರೆಂದು ಪೂಜಿಸಿ ವರಮಂ ಪಡೆದರ್. ಮತ್ತಮಾ ರಾಜಗೃಹದ ವಸುಮಿತ್ರನೆಂಬ ಶೆಟ್ಟಿಗೆ ವಸುಮಿತ್ರೆ ಸುಮಿತ್ರೆಯೆಂಬೀರ್ವರ್ ಪೆಂಡಿರಾಗಲಾ ಕಿರಿಯ ಸುಮಿತ್ರೆಗೆ ಒಂದು ಗಂಡುಮಗನಪ್ಪುದುಮಿರ್ವರುಮಾ ಮಗುವನಾದರದಿಂ ಸಾಕಲಾ ವಸುಮಿತ್ರಂ ಸಾಯೆ ಮಗನಂ ತನ್ನ ಮಗಂ ಎನ್ನ ಮಗನೆಂದು ವಾದಿಸಿ ಅತ್ಯಂತ ಕಲಹಮಾಗಿಬರೆ ಅದಂ ತೀರಿಸಲಶಕ್ಯಮಾಗೆ ರಾಜಸಭೆಯೊಳ್ ಅಭಯಕುಮಾರಂ ಈ ಮಗನಂ ಪಂಚಿಕೊಟ್ಟಪೆನೆಂದಾ ಮಗುವಿನ ಮಸ್ತಕದೊಳ್ ಜಾಜ್ವಲ್ಯಮಾನಮಪ್ಪ ಶಸ್ತ್ರಮನಿರಿಸೆ ಪೆತ್ತ ತಾಯಿ ಕಂಡು ಕಣ್ಣಂ ಮುಚ್ಚಿ ಆಕೆಗೆ ದಯಂಗೆಯ್ಯುದೆಂದಡ್ಡಗೆಡೆಯಲವಳ್ ಪೆತ್ತವಳೆಂದು ಕೊಟ್ಟು ಪಿರಿಯವಳಂ ಬಗ್ಗಿಸಿ ಪೊರಮಡಿಸಿದರ್.

ಮತ್ತಮಯೋಧ್ಯಾಪುರದೊಕ್ಕಲಿಗಂ ಭದ್ರನೆಂಬನಾತನ ಪೆಂಡತಿ ಭದ್ರಿಯೆಂಬತಿ ರೂಪಯುತೆಯಂ ರಾಕ್ಷಸಂ ಕಂಡವಳ ಗಂಡನ ರೂಪಚ್ಚೊತ್ತಿದಂತೆ ಕೈಕೊಂಡವಳ ಮನೆಯೊಳಿರೆ ಗಂಡಂ ಬಂದೊಡಾಕೆ ಸಂದೇಹಂಬಡಲವರೀರ್ವರುಂ ಪೋರಾಟಗೊಳುತ್ತುಂ ಬರಲ್ ಅಭಯಕುಮಾರನಾಶ್ಚರ್ಯಂಬಟ್ಟು ಈರ್ವರುಮಂ ದೇವಾಲಯಮಂ ಪುಗಿಸಿ ಕದಮಂ ಪೊಚ್ಚಿ

ಈ ಕೂಚಿಗಂಡಿಯೊಳ್ ಆವಂ ಬಪ್ಪನವಂ ಗಂಡನೆಂಬುದುಂ ರಾಕ್ಷಸಂ ಪೊರಮಡಲಾಗಲವನಂ ನಿಗ್ರಹಿಸಿ ಕಳೆದಾ ಮನೆಯೊಡೆಯನಂ ಮನೆಗೆ ಕಳುಹಿಸಿದಂ.

ಶ್ರೇಣಿಕನ ಮಂತ್ರಿಗಳೊಳೋರ್ವಂ ಸತ್ಯಶರ್ಮನೆಂಬಂ ತಾನುಂ ಪುಸಿಯಂ ನುಡಿದೊಡಾಗಲೆ ನಾಲಗೆಯಂ ಕತ್ತರಿಸುವೆನೆಂದು ಜನ್ನವಾರದೊಳ್ ಕತ್ತರಿಯಂ ಕಟ್ಟಿಕೊಂಡು ಇರುತ್ತಿರೆ ಸಮುದ್ರದತ್ತನೆಂಬ ಪರದಂ ಪರದುಪೋಗಲ್ ತನ್ನಲ್ಲಿರ್ದ ರತ್ನಂಗಳಂ ಸತ್ಯಶರ್ಮಂಗೆ ಕೊಟ್ಟು ನಾಂ ಬಂದಲ್ಲಿ ಎನಗೀವುದೆಂದು ತಾನು ಪರದುಗೆಯ್ದು ಬಂದೆನ್ನ ರತ್ನಮನೀವುದೆನೆ ಆತನಂ ಮರುಳ್ಮಾಡಿ ಕಳೆಯೆ ಅರಸಿಂಗೆ ಮೊರೆಯಿಡಲವನಂ ಕೇಳಿ ಸತ್ಯವಂತನೆಂಬ ಪ್ರಸಿದ್ಧಿಯಿಂದೀತಂ ಮರುಳನೆಂದು ನಿರ್ಧರಿಸೆ ದುಃಖಿತನಾಗಿ ಅಭಯಕುಮಾರನಲ್ಲಿ ಪೇಳ್ದಿಪ್ಪಿನಮಾ ಮಂತ್ರಿಯಂ ಕರೆದು ಲೆತ್ತಮ ನಾಡುವಮೆಂದೊಂದೆರಡಾಟಮನಾಡಿ ಬಳಿಕ ವಿನೋದದಿಂ ತನ್ನಾಭರಣಮಂ ಜೂಜೆಂದು ಸೋಲ್ತು ಕೊಟ್ಟಾ ಬಳಿಕ ಈ ಆಟದೊಳ್ ನೀಂ ಸೋಲೆ ನಿನ್ನ ಮುದ್ರಿಕೆಯಂ ಯಜ್ಞೋಪವೀತಮಂ ಕೊಡುವುದೆಂದು ಸೋಲಿಸಿ ಅದಂ ಕಳೆದುಕೊಂಡಾರುಮರಿಯದಂತೆ ಓರ್ವ ಸಖಿಯೊಳ್ ಕೊಟ್ಟು ಸತ್ಯಶರ್ಮನ ಗೃಹಕ್ಕೆ ಕಳುಪಿ ಆತನ ಸತಿ ಸತ್ಯವತಿಗೆ ಕೊಟ್ಟು ವೈಶ್ಯನಿತ್ತ ರತ್ನದ ಕರಂಡಕಮಂ ತರವೇಳ್ದರೆಂದು ಬೇಡಿಸಲಾಕೆ ತನ್ನಯ ಪತಿಯ ಚಿಹ್ನಮಂ ಕಂಡು ಕರಂಡಕಮಂ ಕುಡೆ ತಂದಭಯಕುಮಾರಂಗೀಯಲವರೊಳ್ ಕೆಲವು ರತ್ನಂಗಳಂ ಬೆರಸಿ ಶೆಟ್ಟಿಯ ಮುಂದಿಟ್ಟು ತೋರಲಾತಂ ತನ್ನ ರತ್ನಂಗಳನಾಯ್ದುಕೊಂಡನದಂ ಕಂಡು ಮಂತ್ರಿಯಂ ಪರಿಭವಿಸಿ ಕಳೆದಂ

ಮತ್ತಮಾ ಪುರದ ಧನದತ್ತ ವಸುಮಿತ್ರರೆಂಬೀರ್ವರ್ ವೈಶ್ಯರೊಳ್ ಧನದತ್ತಂ ಪ್ರಯತ್ನಮೇ ದೊಡ್ಡದೆಂದು ವಸುಮಿತ್ರಂ ಪುಣ್ಯವೇ ದೊಡ್ಡದೆಂದನವರ್ಗದುವೆ ಸಂವಾದಮಾಗಲ್ ಪನ್ನೆರಡಬ್ದಂಬರಂ ಧರ್ಮಾಧಿಕರಣರ್ ನಿಶ್ಚಯಿಸಲಾರದಿರಲಾ ಈರ್ವರುಂ ಅಭಯಕುಮಾರನಲ್ಲಿಗೆ ಬಂದು ಬೆಸಗೊಳ್ವುದುಂ ಮೂರುದಿವಸಂಬರಂ ವಿಚಾರಿಸಿದೊಡಂ ನಿಜಾಭಿಪ್ರೇತಾರ್ಥಮಂ ನುಡಿಯೆ ಬಂದತ್ಯಂಧಕಾರಮಪ್ಪ ಮಹಾ ಗೃಹಂಗಳೊಳ್ ಸಕಲಸೋಪಸ್ಕರಮಂ ತುಂಬಿಸಿ ನಾಲ್ಕಾರು ಬಗೆಯ ಬುತ್ತಿಯಂ ಕಟ್ಟಿ ಒಂದರೊಳನರ್ಘ್ಯ ರತ್ನಂಗಳನಿಕ್ಕಿ ಅಮೃತಾನ್ನಮಂ ಕಟ್ಟಿರಿಸಿ ಪರೀಕ್ಷಿಸಲೆಂದಾ ಈರ್ವರಂ ಕೋಪದಿಂದಾ ಮನೆಯಂ ಕೂಡಿ ಬಾಗಿಲಂ ಮುದ್ರಿಸಿದೊಡಾ ವಸುಮಿತ್ರಂ ತನಗೆ ಪುಣ್ಯಮೆ ಶರಣೆಂದೊಂದು ಪ್ರದೇಶಮಂ ಕೈಯಿಂದೆಳವಿ ನೋಡಿ ಆ ಪ್ರದೇಶದೊಳ್ ಪಟ್ಟಿರ್ದಂ. ಧನದತ್ತಂ ಪ್ರಯತ್ನಮೆ ಕಾರ್ಯಮೆಂದಲ್ಲಲ್ಲಿ ಕೈಯಿಂದೆಳೆದು ನೋಡುತ್ತಂ ಸಕಲ ವಸ್ತುಗಳಂ ಸ್ಪರ್ಶನ ಮಾತ್ರದಿಂದರಿದು ಪೋಗುತ್ತಿರಲಲ್ಲಿ ಚಕ್ಕಮುಕ್ಕಿಯಿರ್ದೊಡದರಿಂ ಬೆಂಕಿಯಂ ಮಾಡಿ ದೀಪಮಂ ಪೊತ್ತಿಸಿ ನೋಡಿ ಸಕಲ ಸಾಮಗ್ರಿಯುಮಿರ್ದು ಬುತ್ತಿಯನುಂಬೆನಲ್ಲೆಂದು ಬೇಕಾದ ಪದಾರ್ಥಂಗಳಂ ಪಾಕಶುದ್ಧಿಯಿಂ ಜಿಹ್ವೆಗೆ ಹಿತಮಪ್ಪ ಭೋಜನಮಂ ಮಾಡಿ ಪವಡಿಸಿರ್ದು ಕಡೆಯೊಳ್ ವಸುಮಿತ್ರನಂ ಮೂದಲಿಸಿ ಒಂದು ಬುತ್ತಿಯನಿಟ್ಟು ಬೆಳಕಂ ಮಾಡಿ

ಉದಕಮನೀಯಲೆನ್ನ ಪುಣ್ಯಮೆಂದಾ ಬುತ್ತಿಯಂ ಬಿಚ್ಚೆ ಅನ್ನಮನುಂಡಲ್ಲಿರ್ದ ರತ್ನಂಗಳಂ ಕಟ್ಟಿಕೊಂಡಿರೆ ಮಾರನೆ ದಿವಸಕ್ಕೀರ್ವರಂ ಸಭೆಗೆ ಕರೆದು ಕೇಳ್ವುದುಂ ಧನದತ್ತಂ ತನ್ನ ಪ್ರಯತ್ನದ ಕಾರ್ಯಮೆಲ್ಲಮಂ ಪೇಳೆ ವಸುಮಿತ್ರಂ ತನ್ನ ಪುಣ್ಯಪ್ರಭಾವಮಂ ಪೇಳ್ದು ರತ್ನಂಗಳಂ ಮುಂದಿಕ್ಕುವುದುಂ ಎಲ್ಲರುಂ ಪುಣ್ಯಮನುತ್ಕೃಷ್ಟಮೆಂದುಂ ಪುಣ್ಯಾನುಸಾರಂ ಪ್ರಯತ್ನಮೆಂದು ಕಾರ್ಯಾನುರೂಪಂ ಕಾರಣಮೆಂಬುದೆಲ್ಲಾ ಕಾರ್ಯಸಿದ್ಧಿಗೆ ಕಾರಣಂಗಳಪ್ಪುವೆಂದವಂಗೆ ರತ್ನಂಗಳಂ ಕೊಟ್ಟು ಇರ್ವರ ಸಂವಾದಮಂ ಬಿಡಿಸಿ ಕಳುಹಿಸಿದಂ. ಇಂತನೇಕ ವ್ಯವಹಾರಗಳಂ ತೀರಿಸುತ್ತಂ ಶ್ರೇಣಿಕ ಮಹಾಮಂಡಳೇಶ್ವರಂ ಸುಖಸಂಕಥಾವಿನೋದದಿಂ ರಾಜ್ಯಮನಾಳುತ್ತಿರಲ್

ಅತ್ತಲ್ ಕುಂಡಿನಾಪುರದ ನಾಥವಂಶದ ಕಾಶ್ಯಪಗೋತ್ರದ ಸಿದ್ಧಾರ್ಥಮಹಾರಾಜಂಗಂ ವೈತಾಳಿಪುರದ ಚೇಟಕಮಹಾರಾಜನ ಜ್ಯೇಷ್ಠಪುತ್ರಿ ಪ್ರಿಯಕಾರಿಣಿಮಹಾದೇವಿಗಂ ವಿವಾಹಮಾಗೆ ಪೂರ್ವಕೃತ ಪುಣ್ಯದಿಂ ನಿರ್ಮಲದೇಹಿಗಳಾಗಿ ನೀಹಾರಾದಿಗಳಿಲ್ಲದೆ ಶುಚಿದೇಹವನಾಂತಿರ್ಪಿನಂ ಆ ವಿಶ್ವೇಶ್ವರಿಗೆ ಅಷ್ಟಮಹಾದೇವಿಯರೆಯ್ದಿ ಬಂದಾ ಜಗತ್ಪವಿತ್ರೀಗರ್ಭದೊಳ್ ತ್ರಿಲೋಕಸ್ವಾಮಿ ಪುಟ್ಟುವನೆಂದು ಗರ್ಭಶೋಧನೆಯಂ ಮಾಡಲರುದಿಂಗಳ್ ಇಂದ್ರನಾಜ್ಞೆಯಿಂ ಕುಬೇರಂ ಸಾರ್ದು ತ್ರಿಕೋಟಿ ರತ್ನವೃಷ್ಟಿ ಮೊದಲಾದ ಪಂಚಾಶ್ಚರ್ಯಂಗಳಂ ದಿನಂಪ್ರತಿ ಮಾಡುತ್ತುಮಿರೆ ಗರ್ಭಮಂ ಶೋಧಿಸಲ್ ಪದಿನಾರು ಶುಭಸ್ವಪ್ನಾನಂತರಂ ಶ್ವೇತವಾರಣಂ ನಿಜವದನಮಂ ಪುಗುವುದಂ ಕಂಡೆಚ್ಚರುವನ್ನೆಗಂ ಪೂರ್ವಭವದೊಳಾನಂದನೆಂಬರಸಂ ಸರ್ವಸಂಗ ಪರಿತ್ಯಾಗಂಗೆಯ್ದು ದ್ವಾದಶವಿಧ ತಪದೊಳ್ ನೆಗಳ್ದು ಏಕಾದಶಾಂಗಧಾರಿ ದ್ವಾದಶಾನುಪ್ರೇಕ್ಷೆಯಂ ಷೋಡಶ ಮಹಾಭಾವನೆಗಳಂ ಭಾವಿಸಿ ತೀರ್ಥಂಕರ ಪುಣ್ಯಮಂ ಕಟ್ಟಿ ಆರಾಧನಾವಿಧಿಯಿಂ ದೇಹಮನಳಿದು ಅಚ್ಯುತಕಲ್ಪದ ಪುಷ್ಪೋತ್ತರ ವಿಮಾನದೊಳ್ ಮಹಾರ್ಧಿಕದೇವನಾಗಿಪ್ಪತ್ತೆರಡು ಸಾಗರೋಪಮ ಕಾಲಂ ದಿವ್ಯಸುಖಮನನುಭವಿಸಿ ಬಂದಾ ದೇವಿಯ ಗರ್ಭಕ್ಕಂ ವಿಶ್ವಾವಸು ಸಂವತ್ಸರದಾಷಾಢ ಶುದ್ಧ ಷಷ್ಠಿ ಬೆಳಗಿನೊಳ್ ಹಸ್ತೋತ್ತರಾಮಧ್ಯದೊಳವತರಿಸೆ ಕಣ್ಣಂ ತೆರೆದು ದೇವಿಯರೆಸಗುವ ಉಪಚಾರದಿಂ ವಿಕಾರಂಗಳೊಂದಾದರುಂ ಆ ಲೋಕಮಾತೆಯ ದೇಹದೊಳ್ ಕಾಣಿಸದಿರೆ ನವಮಾಸಂ ಗರ್ಭದೊಳ್ ಬೆಳೆದು ಪರಾಭವಸಂವತ್ಸರದ ಚೈತ್ರ ಶುದ್ಧ ತ್ರಯೋದಶಿ ಫಲ್ಗುಣಿ ತಾರಾಂತ್ಯದೊಳ್ ಪಂಚಗ್ರಹೋಚ್ಚಮಾದಾಗಳ್ ತ್ರಿಜ್ಞಾನಧರಂ ಪುಟ್ಟುವ ಕ್ಷಣದೊಳ್ ಕಲ್ಪಲೋಕದೊಳ್ ಘಂಟಾನಾದಮುಂ ಭವನ ಲೋಕದೊಳ್ ಶಂಖನಾದಮುಂ ಜ್ಯೋತಿರ್ವಿಮಾನಂಗಳೊಳ್ ಸಿಂಹನಾದಮುಂ ವ್ಯಂತರ ಲೋಕದೊಳ್ ಭೇರಿಧ್ವನಿಯುಮಾಗೆ ದೇವೇಂದ್ರಂಗಾಸನಕಂಪಮಾಗೆ ಚತುರ್ನಿಕಾಯಾಮರರ್ ತಂತಮ್ಮಾಯುಧ ವಾಹನ ವಧೂಚಿಹ್ನಂವೆರಸಿ ಬಂದಾ ತ್ರಿಲೋಕೇಶ್ವರನಂ ಶಚಿಮಹಾದೇವಿಯಿಂ ತರಿಸಿ ತನ್ನೈರಾವಣವನೇರಿ ನಿಜಾಂಕದೊಳಿರಿಸಿ ಈಶಾನೇಂದ್ರಂ ಶ್ವೇತಚ್ಛತ್ರಮಂ ಪಿಡಿಯೆ ಜಂಬೂದ್ವೀಪಮಧ್ಯದೊಳಿಪ್ಪ ಲಕ್ಷಯೋಜನಮುಳ್ಳ ಸುದರ್ಶನಮೆಂಬ ಮಹಾಮೇರುಗಿರಿಯ ಶಿಖರದೊಳೊಪ್ಪುವ ಪಾಂಡುಕವನದೀಶಾನ ದಿಕ್ಕಿನೊಳೊಪ್ಪುವ ಪಾಂಡುಕಶಿಲೆಯ

ಸಿಂಹಪೀಠದೊಳಿರಿಸಿ ವಿಧಿಪೂರ್ವಕಮಸಂಖ್ಯಾತ ದೇವತೆಗಳ್ ಐದನೆಯ ಕ್ಷೀರಸಮುದ್ರಕ್ಕಂ ಮೇರುವಿಂಗಂ ಸಾಲಾಗಿ ನಿಂದು ನಾಲ್ಕು ಯೋಜನದಗಲವುಮೆಂಟು ಯೋಜನದುದ್ದಮುಮುಳ್ಳ ಸುವರ್ಣ ರತ್ನಘಟಂಗಳೊಳ್ ಕ್ಷೀರಾಬ್ಧಿಯೊಳ್ ತೀವಿ ತಂದೋಂಕಾರಪೂರ್ವಕಮೋರೋರ್ವರ್ ಸಾಸಿರ ಸಾಸಿರ ಬಾಹುಗಳಿಂ ಮಜ್ಜನಂಬುಗಿಸುವಲ್ಲಿಂದ್ರಂ ಸ್ವಾಮಿಗುಬ್ಬಸಮಪ್ಪುದೆಂಬ ಶಂಕೆಯಾಗೆಯದನರಿದು ನಾಸಿಕದೊಳ್ ತೀವಿದ ಪಾಲಂ ನಿಶ್ವಾಸಿಸೆ ಐದುಕೋಟಿಯುಂ ಪನ್ನೊಂದು ಲಕ್ಷ ಯೋಜನ ಪರಿಯಂತರಮಿರ್ದ ದಿವೌಕಸರೆಲ್ಲಂ ತರಗೆಲೆಯಂತೆ ತೂರಾಡುವುದುಮಪ್ರಮಿತ ವೀರ್ಯಮಂ ತಿಳಿದು ಜನ್ಮಾಭಿಷೇಕಾನಂತರಂ ದಿವ್ಯಗಂಧಮಾಲ್ಯ ವಸ್ತ್ರಾಭರಣಂಗಳಿಂ ಪೂಜಿಸಿ ಶ್ರೀವೀರವರ್ಧಮಾನರೆಂಬ ನಾಮಮನಿಟ್ಟಾನಂದನೃತ್ಯಮನಾಡಿ ಸಹಸ್ರ ಕಣ್ಣಿಂದೀಕ್ಷಿಸಿ ನಾಗೇಂದ್ರಂ ಸಹಸ್ರಜಿಹ್ವೆಯಿಂ ನುತಿಸುತ್ತಂ ಪಟ್ಟಣದೊಳಿರಿಸಿ ದೇವರ್ಕಳಂ ಭೋಗೋಪಭೋಗಮಂ ಕೊಡುತುಂ ಬೆಸಕೆಯ್ಯಲಿರಿಸಿ ಇಂದ್ರಂ ತನ್ನ ಲೋಕಮನೆಯ್ದೆ ತ್ರಿಜ್ಞಾನಧರಂ ಮೂವತ್ತುವರುಷಂ ಸಲೆ ಸಂಸಾರ ಶರೀರ ಭೋಗದೊಳ್ ಹೇಯಮಾಗೆ ನಿರ್ವೇಗದಿಂದಿರ್ಪುದುಂ ಲೌಕಾಂತಿಕದೇವರ್ ಬಂದು ಪೂಜಿಸಿ ಪ್ರತಿಬೋಧಿಸೆ ದೇವೇಂದ್ರಂ ಬಂದು ಪರಿನಿಷ್ಕ್ರಮಣಕಲ್ಯಾಣಂ ಮಾಡಿ ಚಂದ್ರಪ್ರಭಮೆಂಬ ಸಿವಿಗೆಯನೇರಿಸಿ ಮನುಷ್ಯಪತಿಗಳುಂ ನಾಗೇಂದ್ರರುಂ ವ್ಯಂತರ ಜ್ಯೋತಿಷ್ಕರುಂ ಪ್ರತ್ಯೇಕಮೇಳೇಳಡಿ ಪೊತ್ತುನಡೆಯೆ ಕಲ್ಪಾಮರರ್ ದೇವತೂರ್ಯತ್ರಯದಿಂ ಕೊಂಡುಪೋಗಿ ವನದೊಳಿಳಿಪೆ ನಿರ್ಮಲ ಶಿಲಾತಲದೊಳ್ ಪೂರ್ವಾಭಿಮುಖಮಾಗಿ ಪಲ್ಯಂಕಾಸನದಿಂ ಸಿದ್ಧನಮಸ್ಕಾರದಿಂ ಪಂಚಮುಷ್ಟಿಯಿಂ ಕುರುಳಂ ಕಿತ್ತು ದಿವ್ಯ ವಸ್ತ್ರಾಭರಣಮಂ ತೊಲಗಿಸಲಾಕ್ಷಣದೊಳ್ ಮನಃ ಪರ್ಯಾಯಮೆಂಬ ಚತುರ್ಥಜ್ಞಾನಂ ಪುಟ್ಟಿ ಧ್ಯಾನಮೌನಾನುಷ್ಠಾನ ತಪಸ್ಸಿಂ ಛದ್ಮಸ್ಥಕಾಲಂ ದ್ವಾದಶ ವರುಷಂ ಸಲೆ ಋಜುಕುಲಾತೀರ ರಸಾಲದ್ರುಮದ ಶಿಲಾಪಟ್ಟದೊಳ್ ನಿಂದು ಧ್ಯಾನಾನಲನಿಂ ಕರ್ಮೇಂಧನಂಗಳಂ ನಿರ್ದಗ್ಧಂಗಳಾಗೆ ಕ್ಷಪಕಶ್ರೇಣ್ಯಾರೋಹಣನಾಗಿ ನಾಲ್ಕು ಘಾತಿಕರ್ಮಂ ಪಿಂಗೆ ಪದಿನೆಂಟು ದೋಷಮಂ ಕೆಡಿಸಿದನವಾವುವೆಂದರೆ ಕ್ಷುಧೆ ತೃಷೆ ಜರೆ ರುಜೆ ಜನನ ಮರಣ ಭಯ ಮದ ರಾಗ ದ್ವೇಷ ಚಿಂತೆ ರತಿ ನಿದ್ರೆ ವಿಸ್ಮಯಂ ವಿಷಾದಂ ಸ್ವೇದಂ ಖೇದ ಮೋಹ ಎಂಬಿವು ಕಿಡುವುದುಮತೀಂದ್ರಿಯಮಪ್ಪನಂತಜ್ಞಾನ ದರ್ಶನ ವೀರ್ಯ ಸುಖಂಗಳ್ ಪುಟ್ಟಿ ಶರೀರದನಂತ ಪರಮಾಣು ಪುದ್ಗಲಂಗತಮಾಗಲಾತ್ಮಶಕ್ತಿಯೆ ಪುರುಷಪ್ರಮಾಣಮಾಗಿ ಜಾಜ್ವಲ್ಯಮಾಗೆ ದೇಹಭಾರಮಳಿವುದುಂ ನೀರೊಳಿರ್ದ ಕೆಸರಂ ಕಳೆದಾಲಾಬು ಮೇಲಕ್ಕೆ ನೆಗೆವಂತೆ ಎರಡೂವರೆ ಕ್ರೋಶವೆಂದೊಡ್ಡೈದು ಸಾವಿರ ಮಾರು ಪೋಗಿ ಆಕಾಶದೊಳಾ ಕೇವಲಜ್ಞಾನಿ ನಿಲ್ವುದುಂ ಸುರೇಂದ್ರನಾಸನಕಂಪಮಾಗಿ ಸುರರೊಡನೆ ಬಂದು ಪ್ರದಕ್ಷಿಣ ನಮಸ್ಕಾರಮಂ ಮಾಡಿ ರಾಜರಾಜಂಗೆ ನಿಯಮಿಸೆ ಸುವರ್ಣ ರೂಪ್ಯ ನವರತ್ನಪ್ರಭಾಪ್ರಕರಂಗಳಿಂ ಸಮವಸರಣಂ ನಿರ್ಮಿಸಿದನದಕ್ಕೆ ಹಸ್ತಪ್ರಮಾಣದ ಸೋಪಾನಂಗಳ್ ಚತುರ್ದಿಕ್ಕಿನೊಳ್ ಭೂಮಿಯಿಂ ತೊಟ್ಟು ಪ್ರತ್ಯೇಕಮಿಪ್ಪತ್ತುಸಾಸಿರಂಗಳಾಗೆ

ಮೇಲೊಂಬತ್ತು ಸುತ್ತಿನಾ ಕೋಂಟೆಯೊಳ್ ಮೊದಲು ಚತುರ್ದಿಕ್ಕಿನೊಳ್ ಸರೋವರ ಚತುಷ್ಟಯಂಗಳುಂ ಮಾನಸ್ತಂಭದೊಳೀರ್ಸಾಲ ಚೈತ್ಯಗೇಹಮುಂ ಮತ್ತೆ ಜಲಖಾತಿಕೆಯುಂ ಪುಷ್ಪವಾಟಿಯುಂ ಪ್ರಾಕಾರನಾಟ್ಯ ಶಾಲಾ ಉಪವನ ವೇದಿಕಾಧ್ವಜ ಭೂಮಿ ವೃಕ್ಷ ಸ್ತೂಪ ಹರ್ಮ್ಯಂ ಮೊದಲಾದುವುಮಿರ್ಪ ಒಂಬತ್ತು ಸುತ್ತಿನ ಚತುರ್ದ್ವಾರ ಗೋಪುರಯುಕ್ತವಾಗಿರ್ಪುದದರ ಮಧ್ಯದೊಳ್ ಗಂಧಕುಟಿಯ ನಡುವೆ ಪೀಠತ್ರಯ ಮೃಗೇಂದ್ರಾಸನದ ಮೇಲೆ ಸುವರ್ಣಮಯ ಸಹಸ್ರದಳ ಪೊಂದಾವರೆ ನಡುವಣ ವೈಡೂರ್ಯಕರ್ಣಿಕೆಯಿಂ ಚತುರಂಗುಲಂ ಸೋಂಕದೆ ಕೋಟಿ ಚಂದ್ರಾದಿತ್ಯರ ಕಾಂತಿಯಿಂದೊಪ್ಪುವ ಸರ್ವಜ್ಞ ವೀತರಾಗ ಪರಮಾತ್ಮನಾದ ಶ್ರೀ ವೀರವರ್ಧಮಾನಸ್ವಾಮಿಗಳೊಪ್ಪುತ್ತಿರೆ ಬಳಸಿ ಪ್ರದಕ್ಷಿಣದಿಂ ದ್ವಾದಶಗಣಂಗಳ್ ವಿರಾಜಿಸೆ ದೇವರ್ಕಳ್ ಮೇಲೆ ಛತ್ರತ್ರಯಂಗಳಂ ಪಿಡಿದಿರ್ಪುದುಂ ಮೇಲೆ ನಮೇರು ಮಂದಾರಪುಷ್ಪವೃಷ್ಟಿಯಂ ಕರೆಯುತ್ತಿರ್ಪುದುಂ ಯಕ್ಷರ ವಿಧೂಯಮಾನ ಚತುಃಷಷ್ಟಿಯ ಚಾಮರಂಗಳನಿಕ್ಕುವುದುಂ ಪರಮಾತ್ಮಕಾಂತಿಪ್ರಸರ ಪರಿವೇಷ ಭಾಮಂಡಲಮುಂ ಪರಮಾಪ್ತ ಸಮೀಪವರ್ತಿತಾಂತ್ಯತಿಶಯಮಾದಶೋಕವೃಕ್ಷಮುಂ ಶಂಖ ಭೇರೀಘಂಟಾ ಕಹಳಾದಿ ದೇವರ್ಕಳ್ ಬಾಜಿಸುವ ಪನ್ನೆರಡು ಕೋಟಿ ದೇವದುಂದುಭಿಯುಂ ಕಂಠೋಷ್ಠಾದಿ ವಚೋನಿಮಿತ್ತಂಗಳಿಲ್ಲದೆ ಓಂಕಾರಪೂರ್ವಕಂ ಮೃದುಮಧುರ ಶ್ರವ್ಯನವ್ಯದಿವ್ಯ ಭಾಷೆಯಿಂ ಸರ್ವಜ್ಞಮುಖದೊಳ್ ಜನಿಯಿಸುವ ದಿವ್ಯಧ್ವನಿಯುಮೆಂದೀ ಅಷ್ಟಮಹಾಪ್ರಾತಿಹಾರ್ಯಮುಂ ಸಹಜ ಘಾತಿಕ್ಷಯ ದೇವೋಪನಿಕಾತಿಶಯ ಭೇದದಿಂ ಮೂವತ್ತು ನಾಲ್ಕು ಅತಿಶಯಂಗಳಿಂ ತ್ರಿಲೋಕಂ ಸಂದಣಿಸಿದ ಸಮವಸರಣದೊಳ್ ಶತೇಂದ್ರವಂದಿತ ಪಾದಾರವಿಂದದ್ವಂದ್ವನರ್ಹತ್ ಪರಮೇಶ್ವರನೊಪ್ಪುತ್ತಿರೆ ದಿವ್ಯಧ್ವನಿಗೆ ಪ್ರತಿರಚನೆಯಿಂದರ್ಥಮಂ ಪ್ರಕಟಿಸುವ ಗಣಧರಪದಕ್ಕಾರುಮಾಗದಿರೆ ದೇವೇಂದ್ರನೊಂದು ಶ್ಲೋಕಮಂ ಬರೆದುಕೊಂಡು ಗೌತಮಗ್ರಾಮಮನೆಯ್ದಿ ಅಲ್ಲಿ ಗೌತಮಗೋತ್ರದ ಗೌತಮನೆಂಬ ಬ್ರಾಹ್ಮಣಂಗಂ ಕೊಟ್ಟದರರ್ಥಮಂ ಪೇಳ್ವುದೆಂದವರಂ ಪ್ರಾರ್ಥಿಸುವುದುಂ ಮೊದಲಹಂಕಾರದಿಂ ಸಿದ್ಧಾರ್ಥಪುತ್ರನಿಂದ್ರಜಾಲಿಗಶಿಷ್ಯನೆಯೆಂದು ಗ್ರಂಥಾರ್ಥಂ ತಿಳಿಯದಿರಲ್ ಭವ್ಯನಪ್ಪುದರಿಂ ನಮ್ಮವರ್ ಮೂಲಮತದ್ವೇಷಿಗಳಾಗಿಪ್ಪರದರಿಂ ಪಾಪಬದ್ಧಮಪ್ಪುದಲ್ಲದೆ ಪುಣ್ಯಬದ್ಧಮಲ್ಲದರಿಂ ನಾಮುಂ ಬಂದು ವರ್ಧಮಾನರಂ ಕಂಡುಬಪ್ಪೆವೆಂದು ನಿಜಾಗ್ರಜರಪ್ಪ ಗಾರ್ಗ್ಯ ಭಾರ್ಗವರುಂಬೆರಸೆ ಇಂದ್ರಭೂತಿ ವಾಯುಭೂತ್ಯಗ್ನಿಭೂತಿಗಳೆಂಬೀ ಪ್ರತಿನಾಮಮುಳ್ಳ ಮೂವರಂ ಐನೂರ್ವರ್ ದಿವಿಜ ಕುಮಾರರ್ವೆರಸಿ ಕೂಡಿಬಪ್ಪುದುಂ ಇಂದ್ರಂ ಕರೆತಂದೊಡೆ ವೈಭಾರಪರ್ವತೋಪರಿ ವಿರಾಜಿಸುತ್ತಿರ್ಪ ಸಮವಸರಣಮಂ ಕಂಡು ಮುಂದಿರ್ಪ ಮಾನಸ್ತಂಭಮಂ ನೋಡಿ ಮಾನಗರ್ವಂ ಪೋಗೆ ಸಾಷ್ಟಾಂಗಪ್ರಣತರಾಗಿ ಪರ್ವತಮನೇರಿ ಸೋಪಾನದ ಮೇಲೆ ಪಾದಮನಿಡೆ ಪಾದಲೇಪೌಷಧಿ ಸಾಮರ್ಥ್ಯದಿಂದಾಕ್ಷಣದೊಳೆ ಧೂಳೀಸಾಲೆಯನೆಯ್ದಿ

ಗೋಪುರದ್ವಾರದೊಳ್ ಪಾದಪ್ರಕ್ಷಾಲನಂಗೆಯ್ದು ದ್ವಾರಪಾಲಾಮರರನುಜ್ಞೆಯಿಂದಲ್ಲಲ್ಲಿಯ ಸೊಬಗನೀಕ್ಷಿಸುತ್ತೆ ನವಪ್ರಾಕಾರದೊಳಗಣಾಕಾರಸ್ಫಟಿಕ ಭಿತ್ತಿಯಿಂದೊಳಗಣ ಗಂಧಕುಟಿಯನೀಕ್ಷಿಸಿ ಮುಕುಳಿತಕರಸರೋಜಲಲಾಟಪಟ್ಟರಾಗಿ ತ್ರಿಲೋಕೇಶ್ವರ ಶ್ರೀಮುಖದರ್ಶನಮಾತ್ರದೊಳೆ ಗೌತಮರ್ಗವಧಿಜ್ಞಾನಂ ಪುಟ್ಟೆ ತ್ರಿಪ್ರದಕ್ಷಿಣಂಗೆಯ್ದನೇಕಸ್ತುತಿಶತಸಹಸ್ರಂಗಳಿಂ ನಮಸ್ಕರಿಸಿ ನಿಂದು ಸಂಸಾರ ಶರೀರಭೋಗ ನಿರ್ವಿಣ್ಣನಾಗಿ ತಲೆಯಂ ಪರಿದು ವಸ್ತ್ರಾಭರಣಮನೀಡಾಡಿ ಮೂಲೋತ್ತರ ಗುಣಂಗಳ್ ಮೊದಲಾದೆಂಭತ್ತುನಾಲ್ಕುಲಕ್ಷ ಗುಣಮುಂ ಅಷ್ಟಾದಶಸಹಸ್ರ ಶೀಲಂಗಳುಮಳವಡೆ ಸಪ್ತರ್ಧಿಸಂಪನ್ನನಾಗಿ ಚತುರ್ಥಜ್ಞಾನಂ ಪುಟ್ಟೆ ಗಣಧರಸಿಂಹಾಸನಮನೇರಿ ಸರ್ವಜ್ಞಂಗಭಿಮುಖನಾಗಿ ಜೀವಾದಿ ಪದಾರ್ಥಂಗಳ ಅಸ್ತಿನಾಸ್ತಿಕಿಮಿತ್ಯಾದಿಯಾದರು ವತ್ತುಮೂರು ಪ್ರಶ್ನೆಯಂ ಕೇಳೆ ಸರ್ವಭಾಷಾಸ್ವಭಾವಮಪ್ಪ ದಿವ್ಯಧ್ವನಿಯು ಶ್ರಾವಣ ಬಹುಳ ಪಾಡ್ಯದ ಸೂರ್ಯೋದಯ ರೌದ್ರಮುಹೂರ್ತದೊಳ್ ತ್ರಿಭುವನ ಪರಮೇಶ್ವರನ ಶ್ರೀಮುಖಕಮಲದಿಂದುದ್ಭವಿಸೆ ಇಂದ್ರಭೂತಿಗಳ್ ತತ್ತ್ವಬುದ್ಧಿಯಿಂದರಿದು ಗ್ರಂಥಾಂಗಪೂರ್ವಮನಪರಾಹ್ಣದೊಳ್ ಪ್ರತಿರಚನೆಗೆಯ್ದು ಆ ಶ್ರುತಮಂ ಸುಧರ್ಮ ಜಂಬೂನಾಮಧೇಯರ್ಗಂ ನಿಜಾನುಜರ್ ದೀಕ್ಷಿತರಾದ ವಾಯುಭೂತ್ಯಗ್ನಿಭೂತಿಗಳ್ಗಂ ಪೇಳಿ ಉಳಿದ ಗಣಧರಾದಿಗಳುಮಂ ಧರ್ಮಾಮೃತವರ್ಷದಿಂ ಪರಮಾನಂದದಿಂ ಹರ್ಷಿತರಂ ಮಾಡುತಿರ್ದರ್.

ಇತ್ತ ಗೌತಮಗ್ರಾಮದ ಇಂದ್ರಭೂತಿಯ ಬಂಧುಗಳ್ ವಿಷಣ್ಣರಾಗಿ ಸಿದ್ಧಾರ್ಥನೃಪಕುಮಾರನಿಂದ್ರಜಾಲಿಗನಲ್ಲಿಗೆಮ್ಮ ಮೂವರುಂ ಪೋಗೆ ಬರಲೀಸದೆ ಮುನಿಗಳಂ ಮಾಡಲ್ಲಿ ನಿಲಿಸಿದನೆಂದು ಕೋಪದಿಂ ಆರುಂ ಪೋಗಲಾಗದೆಂದೆಲ್ಲರ್ಗಂ ಪೇಳಿ ವೈಮನಸ್ಯಿಗಳಾದರ್.

ಇತ್ತಲಯೋಧ್ಯಾಪುರದ ಭರತನೆಂಬ ಚಿತ್ರಗಾರಂ ಪದ್ಮಾವತಿಯನಾರಾಧಿಸಿ ವರಮಂ ಪಡೆದು ಲೇಖಮನಿಟ್ಟಾಗಳೆ ಆ ಭಾವಂಗಳಾಗುತ್ತಿರೆ ಪ್ರಸಿದ್ಧಿವಡೆದುಂ ಅನೇಕ ದೇಶಂಗಳೊಳ್ ತನ್ನ ವಿದ್ಯಮಂ ಪ್ರಕಟಿಸುತ್ತುಂ ವೈತಾಳಿಪುರಕ್ಕೆ ಬರೆ ಚೇಟಕ ಮಹಾರಾಜಂ ಕಂಡು ತನ್ನ ಪುತ್ರಿಯರೆಣ್ಬರೊಳ್ ಪ್ರಿಯಕಾರಿಣಿಯುಂ ಮೃಗಯಾವತಿಯುಂ ಸುಪ್ರಭೆಯುಂ ಜ್ಯೇಷ್ಠೆಯುಮೆಂಬ ನಾಲ್ವರ್ ಮದುವೆಯಾಗೆ ಉಳಿದ ಚೇಳಿನಿಯುಂ ಚಂದನೆಯುಂ ಚೇಷ್ಟಿಯುಮೆಂಬ ಮೂವರಿರೆ ಚಿತ್ರಕನ ಸಾಮರ್ಥ್ಯಮನರಿದು ತನ್ನ ಪುತ್ರಿಯರ ರೂಪಂ ಬರೆಯಿಸೆ ಅದರೊಳ್ ಚೇಳಿನೀರೂಪಂ ಬರೆವಲ್ಲಿ ಒಳದೊಡೆಯೊಳ್ ಕಲೆ ನಿಲೆ ಅರಸಂ ಕಂಡು ಕೋಪಿಸಿ ಆ ಪಟಮಂ ರಾಜಗೃಹ ಪಟ್ಟಣಕ್ಕೆ ತಂದು ಶ್ರೇಣಿಕಂಗೆ ತೋರೆ ಆ ರೂಪಂ ಕಂಡತ್ಯಾಸಕ್ತನಾಗಿ ಬೇಡಿದೊಡಾತಂ ಸಮ್ಯಗ್‌ದೃಷ್ಟಿಗಲ್ಲದೆ ಕೊಡೆನೆನೆ ಚಿಂತಾಕ್ರಾಂತನಾಗಿರ್ದ ತಂದೆಯನಭಯಕುಮಾರಂ ತಾಂ ತಪ್ಪೆನೆಂದು ಅನರ್ಘ್ಯಮಪ್ಪ ವಸ್ತ್ರಾಭರಣ ರತ್ನಾದಿಗಳಂ ಕೊಂಡು ವ್ಯಾಪಾರಿಗನಾಗಿ ಪೋಗಿ ಚೇಟಕರಾಜಂಗಮೂಲ್ಯರತ್ನಹಾರಾದಿಗಳಂ ಕಾಣಿಕೆಗೊಟ್ಟು

ಅರಮನೆಯ ಸಮಿಪದಲ್ಲಿಯೇ ಬೀಡಂ ಬಿಟ್ಟಾ ಮೂವರ್ ಕುಮಾರಿಯರ್ಗಂ ಶ್ರೇಣಿಕನ ರೂಪು ಶೌರ್ಯಾದಿಗಳನಸಾಧಾರಣಂ ಮಾಡಿ ಪೊಗಳಿಸಿದೊಡಾಕೆಗಳ್ ಮೆಚ್ಚಿ ಅಲ್ಲಿಗೊಯ್ಯುದೆನೆ ತನ್ನ ಬೀಡಿಂಗಂ ಅವರ ಅರಮನೆಗಂ ಸುರಂಗಮಂ ಸಮೆದಾ ಮಾರ್ಗದೊಳೆ ಚೇಳಿನಿಯಂ ಬರಿಸಿ ರಾಜಗೃಹಕ್ಕೆ ತಪ್ಪುದುಂ ಶ್ರೇಣಿಕಂ ಚೇಟಕಮಹಾರಾಜನಂ ಬರಿಸಿ ವಿವಾಹಮಾಗಿ ಚೇಳಿನಿಯಂ ತನ್ನ ಗುರುವಪ್ಪ ಜಠರಾಗ್ನಿ ಭಾಗವತರ್ಗಂ ಭಕ್ತಿ ಮಾಡೆಂದು ಪೇಳೆ ಕೇಳದಿರೆ ಒಂದು ದಿವಸಂ ಚೇಳಿನೀಗೃಹಕ್ಕಂ ಜಠರಾಗ್ನಿ ಬರೆ ಎರಗದಿಪ್ಪುದುಂ ನಿಮ್ಮಾ ಸವಣರೆಲ್ಲ ಸ್ವರ್ಗದೊಳ್ ಬೆತ್ತಲೆಯುಣ್ಣಲುಡಲು ತೊಡಲುಮಿಲ್ಲದಿಪ್ಪರೆನೆ ಚೇಳಿನಿಯು ನೀವಿದನೆಂತರಿದಿರೆನಲ್ ಎಮಗೆ ವೈಕುಂಠಪತಿ ಮತಿಯಂ ಕೊಟ್ಟಿರ್ದಪನೆಂಬುದುಂ, ಮತ್ತೊಂದು ದಿನಂ ಬರಲವರ ಮೆಟ್ಟಂ ಸಖಿಯರಿಂ ಪ್ರಚ್ಛನ್ನಮಾಗಿರಿಸಿ ಅವರರಸುತ್ತೆ ಕೇಳ್ವುದುಂ ನಿಮ್ಮ ಮತಿಯಿಂ ನೋಡುವುದೆನಲಂತಪ್ಪ ಜ್ಞಾನಂ ನಮಗಿಲ್ಲೆಂಬುದುಮವರ ಮೊಟ್ಟೆಯೊಳೆ ತೋರಿಸಲ್ ಉಬ್ಬೆಗಮಾಗಿ ಪೋಗೆ, ಮತ್ತೊಂದು ದಿನಂ ಪೊರಗಣ ವನದೊಳ್ ಪರ್ಣಶಾಲೆಯಂ ಮಾಡಿಸಿ ಅದರೊಳ್ ಜಠರಾಗ್ನಿ ಮೊದಲಾದ ಭಾಗವತರ್ ದ್ವಾದಶನಾಮಮನಿಟ್ಟು ವೀರಾಸನಂ ಕುಕ್ಕುಟಾಸನಂ ಮೊದಲಾಗೆ ಕುಳ್ಳಿರ್ದು ದಶವಾಯುಗಳಂ ನಿರೋಧಿಸಿ ಧ್ಯಾನಾರೂಢರಾಗಿರೆ ಶ್ರೇಣಿಕಂ ಚೇಳಿನಿಯನವರ್ಗೆರಗಿಸಲ್ ಕರೆದೊಯ್ದು ತೋರಿ ಈ ಮಹಾನುಭಾವರ್ ಧ್ಯಾನಿಸುತಿಪ್ಪರೀಗಳವರಾತ್ಮಂ ವೈಕುಂಠದೊಳ್ ತಣ್ಣನೆ ಸುಖಮಿಪ್ಪುದೆನೆ ಇವರ ನಿಯಮವೆಷ್ಟುಂದಿನವೆಂದು ಚೇಳಿನಿ ಕೇಳೆ ಮೂರು ದಿನವು ಈ ಅಂದದೊಳಿಪ್ಪರೆಂಬುದುಂ ಆಗಳೆರಗುವೆನೆಂದು ಬಂದು ಆರುಮರಿಯದಂತೆ ತನ್ನಾಳಿಯರ ನಾಲ್ಕಾರು ಜನಮಂ ಕರೆದೊಂದೊಂದು ಪೊದೆಯಂ ಕೊಂಡೊಯ್ದಾರುಂ ಕಾಣದಂತೆ ಪೊತ್ತಿಸಿ ಮರೆಗೊಂಡಾ ಶಾಲೆಗೆ ಕಿಚ್ಚನಿಡುವುದುಂ ಅವರೋಡಿಪೋಗದೆ ಅಲ್ಲೇ ನಿಶ್ಚಲರಾಗಿರ್ದೊಡಾ ಕಿಚ್ಚಂ ನಂದಿಸಿ ಬರ್ಪುದೆನಲ್ ಅವರ್ ಪೋಗಿ ಪೊದೆಯ ಪತ್ತಿಸಿ ತೋರಿಸಲಾಕ್ಷಣವೇ ಭಯಂಗೊಂಡು ಬಿರಿತೋಡಿ ಪೋಗಲಾ ವಾರ್ತೆಯಂ ಚೇಳಿನಿಗೆ ಪೇಳ್ದರ್.

ಮತ್ತೊಂದು ದಿವಸಂ ಶ್ರೇಣಿಕಂ ಬೇಂಟೆಯೋಗಿ ಬರುತ್ತುಂ ಅರಣ್ಯದೊಳೊಂದು ಕಲ್ಲನೆಲೆಯೊಳ್ ತಪಂಗೆಯ್ವ ಯೋಗೀಶ್ವರರಂ ಕಂಡೀತನಂ ಕಂಡುದರಿಂ ಬೇಂಟೆಯಾಯ್ತಿಲ್ಲವೆಂದೊಂದು ಸತ್ತಿರ್ದ ಮಹೋರಗನಂ ತನ್ನ ಬಿಲ್ಲಿನ ಕೊನೆಯೊಳ್ ತೆಗೆದಾ ಮುನಿಯ ಕೊರಳೊಳಿಕ್ಕಿ ಪುರಕ್ಕೆಯ್ದಿ, ಮತ್ತೊಂದು ದಿವಸಂ ತನ್ನ ಪಟ್ಟಮಹಾದೇವಿವೆರಸು ಶಯ್ಯಾತಲದೊಳಿರ್ಪಾಗಲಾಂ ಬೇಂಟೆಯೋಗಿರಲಲ್ಲಿ ಓರ್ವ ಯತಿಯ ಕಂಠದೊಳ್ ಸತ್ತ ಪಾವನಿಕ್ಕಿ ಬಂದೆನೆಂಬುದುಂ ಚೇಳಿನಿ ಕೇಳ್ದು ಹಮ್ಮನೆ ಹಾರಿ ಭಯಂಗೊಂಡು ವಿಷಣ್ಣಚಿತ್ತೆಯಾಗಿ ದೇವಾ ನೀಂ ಪೊಲ್ಲದುಕಾರ್ಯಮಂ ಮಾಡಿದೆಯಾ ಪಾಪದಿಂದೇಳನೆಯ ನರಕಕ್ಕೆ ಭಾಜನನಾದೆ ಎನಲ್ ಆ ಮುನಿಯಾಗಳೆ ಬಿಸುಡದಿಪ್ಪನೆ ಅದರಿಂದೆನಗೆ ಪಾಪಮೆಲ್ಲಿಬಪ್ಪುದೆಂಬುದುಂ ಅವರಂತೆಗೆಯ್ವರಲ್ಲೆನಲ್ ಆದರೆ ನೋಳ್ಪಂ ಬನ್ನಿಂ ಎಂದಾ ರಾತ್ರಿಯೊಳ್ ಪರಿಜನಂಗೂಡಿ ಚೇಳಿನಿಯುಂ ಶ್ರೇಣಿಕನುಂ ಪೋಗಿ ನೋಳ್ಪಾಗಳಾ

ಕೊಳೆಸರ್ಪಂಗಾಗಿ ಅನೇಕ ಇರುವೆ ಸಾಲ್ಗಳ್ಯೆದಿ ಸರ್ವಾಂಗಮಂ ಮುತ್ತಿ ದೇಹಮನುಚ್ಚಳಿಸಿ ಕಡಿದು ತಿನ್ನುತ್ತಿರೆ ಕಣ್ಮುಚ್ಚಿ ಮಹೋಪಸರ್ಗಮಂ ಸೈರಿಸುತ್ತೆ ಧ್ಯಾನಾರೂಢನಾಗಿರ್ದ ಸಂಯಮಿಯಂ ಕಂಡು ಶ್ರೇಣಿಕಂ ತೆಗೆಯಲುದ್ಯೋಗಿಸಲ್ ನಿಲಿಸಿ ಚೇಳಿನಿಯು ಸಕ್ಕರೆಯಂ ತರಿಸಿ ಕೆಳಗೆಲ್ಲ ಹರಡಿಸಿ ಇರುವೆಗಳೆಲ್ಲ ಮಿಳಿದು ಮುತ್ತಿದೊಡೆ ಮಯೂರಪಿಂಛದಿಂದೆಲ್ಲಮಂ ನಿವಾರಿಸಿ ಪಾವಂ ಕಳೆದು ಒದ್ದೆಯೊಳೊರಸುತ್ತುಂ ಆ ಇರುಳು ಕಾಯ್ದಿರ್ದು ಸೂರ್ಯೋದಯಮಾಗಲ್ ಮಹೋಪಸರ್ಗಂ ಪಿಂಗಿತು ಕೈಯನೆತ್ತುವುದೆಂದು ಪ್ರಾರ್ಥಿಸಲಾ ಸಾಧುಗಳ್ ಕಣ್ಣಂ ತೆರೆದೊಡಿರ್ವರುಂ ಪೊಡಮಡುವುದುಂ ಗಂಭೀರನಿನಾದದಿಂದೆಲೆ ಭವ್ಯೋತ್ತಮ ನೀಂ ಸುಜ್ಞಾನ ಸಂಪ್ರಾಪ್ತಿಯಿಂ ಮೂರು ಜನ್ಮದೊಳೆ ಸಂಸಾರಾಂಬುಧಿಯನುತ್ತರಿಸೆಂದು ಚೇಳಿನಿಯುಮಂ ಪರಸಲಾಗಳೆ ಶ್ರೇಣಿಕನಜ್ಞಾನಾಂಧಕಾರಂ ಪರಿದವರ ಸಮತಾಭಾವಕ್ಕೆ ಮೆಚ್ಚಿ ಮನದೊಳೆ ಎನ್ನ ಶಿರಮನರಿದರ್ಚಿಸಿದೊಡಂ ಭಕ್ತಿ ತೀರದೆಂದು ಯೋಚಿಸುತ್ತಿಪ್ಪುದುಮಾ ಮುನಿಗಳೆಂದರೆಲೆ ಮಹಾರಾಜಾ ನೀಂ ಪೊಲ್ಲದಂತಪ್ಪ ಯೋಚನೆಯನೇಕೆ ಮಾಳ್ಪೆಯದಂ ಬಿಡುವುದೆನೆ ನಾನೇನಂ ಬಗೆದೆನೆಂಬುದುಮವರ್ ತನ್ನ ಮನದೊಳಿರ್ದುದಂ ಪೇಳ್ವುದುಂ ಸಂತುಷ್ಟನಾಗಿ ಚೇಳಿನಿಗೆಂದನಿವರೆನ್ನ ಮನಮನೆಂತರಿದರಿವರ ಜ್ಞಾನಮೆಂತಿಪ್ಪುದೆಂದಾಶ್ಚರ್ಯಂಬಡೆ ಎಲೆ ದೇವಾ ಇವರವಧಿಜ್ಞಾನಸಂಪನ್ನರ್ ನಿನ್ನ ಪೂರ್ವಭವಮಂ ಕೇಳ್ದೊಡೆ ಪೇಳ್ವರನೆ ಮತ್ತಂ ಪೊಡಮಟ್ಟೆಲೆ ಮುನೀಂದ್ರೋತ್ತಮ ನಾನು ಪೂರ್ವಭವದೊಳಾರೆಂದು ಬೆಸಗೊಳೆ ಸುರಕಾಂತದೇಶದ ಪ್ರತ್ಯಂತಮೆಂಬ ಪಟ್ಟಣದೊಳ್ ಸುಮಿತ್ರನಾಗಿರ್ದ ಸಪ್ರಪಂಚಮಂ ಪೇಳೆ ಕೇಳ್ದು ಜಾತಿಸ್ಮರನಾಗಿ ಉಪಶಮ ಸಮ್ಯಕ್ತ್ವಂ ದೊರೆಕೊಳೆ ಮುನೀಶ್ವರಂಗೆರಗಿ ಪಟ್ಟಣಕ್ಕೆ ಬಂದು ಸುಖದಿಂ ರಾಜ್ಯಮಂ ಪಾಲಿಸುತಿರ್ದಂ

ಇಂತೀ ಕಥೆಯಂ ಕೇಳ್ವರ
ಭ್ರಾಂತಿಯು ನೆರೆಕೆಟ್ಟು ಬಳಿಕಮಾಯುಂ ಶ್ರೀಯುಂ
ಸಂತಾನ ವೃದ್ಧಿ ಸಿದ್ಧಿಯು
ಸಂತತ ಸೌಖ್ಯಂಗಳಿಹಪರಂಗಳೊಳಕ್ಕುಂ

ಇದು ಸತ್ಯಪ್ರವಚನ ಪಾರಾವಾರ ಸಮುತ್ಪನ್ನ ಕಾಲಪ್ರವರ್ತನ ಕಿಂಚಿನ್ಮಾತ್ರದಿಂ ವಿಬುಧೇಂದಂ ವಿರಚಿತ ರಾಜಾವಲಿ ಕಥಾಸಾರದೊಳ್ ಶ್ರೇಣಿಕಮಹಾರಾಜ ಪ್ರವೃತ್ತಿ ವರ್ಣನಂ

ಚತುರ್ಥಾಧಿಕಾರಂ

ಪಂಚಮಾಧಿಕಾರಂ

ಶ್ರೀ ಸುಜನಸ್ತುತರಖಿಳ ಕ
ಳಾಸದನರ್ ಮೋಹತಿಮಿರಮಂ ಕಳೆದು ಕರಂ
ಭಾಸುರ ವಿಚಾರದಕ್ಷರ್
ವೈಷಮ್ಯಮನುಳಿದು ಕೇಳ್ವುದೀ ಸತ್ಕೃತಿಯಂ

ಮತ್ತಮೀ ಜಂಬೂದ್ವೀಪದ ಭರತಕ್ಷೇತ್ರದಾರ್ಯಾಖಂಡದ ರಾಜಪುರಮನಾಳ್ವ ಸತ್ಯಂಧರಮಹಾರಾಜನಾತನ ಪಟ್ಟಮಹಾದೇವಿ ವಿಜಯಾವತಿ ಮಂತ್ರಿ ಸುಬುದ್ಧಿಯಾಪುರ ದೊಳ್ ಕಾಷ್ಠಾಂಗಾರ ಶೂದ್ರನನವರತಂ ಕಾಷ್ಠಮಂ ತಂದು ಪುರದೊಳ್ ಮಾರುತ್ತುಂ ಜೀವಿಸುತ್ತಿರ್ದೊಂದು ದಿವಸಂ ಕಾಷ್ಠಮಂ ಪೊತ್ತು ಗ್ರಾಸಮಿಲ್ಲದೆ ಬಳಲುತ್ತುಂ ಬಿಸಿಲಿಂಗಾರದೆ ವಿಲಾಸಿನಿಯೆಂಬ ವೇಶ್ಯೆಯ ಗೃಹದ ಭಿತ್ತಿಯಂ ನೆಮ್ಮಿ ಛಾಯಾಶ್ರಯದೊಳ್ ನಿಂದಿಪ್ಪುದುಂ ಮೇಲಣುಪ್ಪರಿಗೆಯೊಳಾ ಸೂಳೆ ಬೊಜಗನೊಳ್ ಸರಸವಾಡುತ್ತಿರ್ದಾ ವಿಟಂ ಕಾಷ್ಠಾಂಗಾರನಂ ಕಂಡು ನಿನ್ನನಾಂ ವರಿಸಲ್ ಬಂದೆನೆಂದು ವಿಲಾಸಿನಿಗಂ ಪೇಳೆಯವಳ್ ಕೋಪಿಸಿ ಅವನ ವಿಕಾರಮನೀಕ್ಷಿಸಿ ಈ ಪಾಪಿಯಂ ನೆರೆವುದರಿಂ ಕೃಶಾನುವಿನೊಡಗೂಡುವುದು ಲೇಸೆಂದವನಂ ಕಿಡೆನುಡಿದವನ ಮೇಲುಗಿದೊಡಾ ಕಾಷ್ಠಾಂಗಾರಕನತಿಕುಪಿತನಾಗಿ ಪೋಗಿ ಈ ಸೂಳೆಗೊತ್ತೆಯೆನಿತೆಂದು ಪರದಿಯಂ ವಿಚಾರಿಸಲಾಕೆಯ ಹರ್ಮ್ಯದೊಳ್ ನೂರು ಹೊನ್ನುಳ್ಳಂ ಬಂದೊಡೆ ಪ್ರಥಮ ಘಂಟೆಯಂ ಧ್ವನಿಗೆಯ್ದು ಪೋಗಬೇಕು, ಐವತ್ತು ಹೊನ್ನ ತಂದವಂ ಎರಡನೆಯ ಘಂಟೆಯಂ ಬಾಜಿಸಬೇಕು, ವಿಂಶತಿ ಹೊನ್ನಂ ತಂದವಂ ಮೂರನೆಯ ಘಂಟೆಯಂ ಬಾಜಿಸಬೇಕು. ಇಂತುತ್ತಮ ಮಧ್ಯಮ ಜಘನ್ಯ ಭೇದಮಪ್ಪುದೆಂದು ಪೇಳೆ ಛಲಗ್ರಾಹಿಯಾಗಿ ದಿನಂಪ್ರತಿ ನಾಲ್ಕೈದು ಪೊರೆ ಪುಳ್ಳಿಗಳಂ ತಂದು ವಿಕ್ರಯುಮಂ ಮಾಡಿ ಪೊನ್ನಂ ಕೂಡಿಸುತ್ತಿರ್ದೊಂದು ದಿನಮರಣ್ಯದೊಳೋರ್ವ ಮಹಾನುಭಾವರಪ್ಪ ಯೋಗಿಗಳಂ ಕಂಡು ಪೊಡೆವಟ್ಟು ವರವೀವುದೆಂದೊಡವರಣುವ್ರತಂಗಳಂ ಪೇಳೆ ಕೊಳ್ಳಲಾರದಿರೆ ಪೌರ್ಣಮಿಯೊಳ್ ಸ್ತ್ರೀಸೇವಾನಿವೃತ್ತಿಯಂ ಕೈಕೊಂಡು ಕೆಲವಾನುದಿವಸಕ್ಕೆ ನೂರು ಪೊನ್ನಂ ಪಡೆದು ಸರ್ವಾಲಂಕಾರವನಾಂತಾ ವೇಶ್ಯಾವಾಟಮಂ ಪೊಕ್ಕು ವಿಲಾಸಿನೀಗೃಹದ ಶತಪೊನ್ನಿನ ಘಂಟೆಯಂ ಬಾಜಿಸುವುದುಂ ಸಖಿಯರ್ವೆರಸಿದಿರ್ವಂದುಪಚಾರದಿಂ ಮಂಚಮನೇರಿಸಿರಲನ್ನೆಗಂ ನಿಮ್ಮ ಗೃಹದೊಳುತ್ಸವಮೇನೆಂಬುದುಂ ಇಂದು ಪೌರ್ಣಮಿಯೆನೆ ಒತ್ತೆಯ ಕೊಟ್ಟು ಕೆಲಹೊತ್ತಿರ್ದು ವಂಚಿಸಿ ಪೋಗೆ ವಿಲಾಸಿನಿ ಬೊಜಗನಂ ಕಾಣದೆ ಕೊಟ್ಟ ಧನಂ ಋಣಮಪ್ಪುದೆಂದಾ ಮರುದಿನಮರಸಂಗರಿಪಿದೊಡರಸಂ ಪುರದ ಬಾಗಿಲೆಲ್ಲಮಂ ಮುಚ್ಚಿಸಿ ಒಂದು ಬಾಗಿಲಂ

ತೆಗೆದಲ್ಲಿಯವಳಂ ನಿಲಿಸಿ ನಿನ್ನ ಮನೆಗೆ ಬಂದಿರ್ದನಂ ಪಿಡಿವುದೆಂದಾ ಪುರದೊಳಿರ್ದ ಪುರುಷರೆಲ್ಲಮಂ ಪೊರಮಡಿಸಲೆಲ್ಲರುಂ ಪೋಪಾಗಳವಂ ಕಂಬಳಿ ಜೊತ್ತಿಗೆ ಪರಶುಸಹಿತನಾಗಿ ಕಾಷ್ಠಾಂಗಾರಂ ಪೊರಮಡುತ್ತಿರಲವನಂ ಪಿಡಿದು ಸತ್ಯಂಧರನಲ್ಲಿಗೆ ತಪ್ಪುದುಮರಸಂ ಬೆಸಗೊಳೆ ತನ್ನ ಪೂರ್ವ ವೃತ್ತಾಂತಮಂ ಸವಿಸ್ತರಂ ಪೇಳೆ ಸೂಳೆಯರ ದುರ್ಗುಣಾದಿಗಳಂ ಪೇಳಿಯವಳಂ ನಿರಾಕರಿಸಿ ಕಳೆದು ಮೆಚ್ಚಿಯಾತಂಗೆ ಮಂತ್ರಿಪದಮಂ ಕುಡೆ ಪಾವಿಂಗೆ ಪಾಲೆರೆದಂತೆಯವಂ ದುಷ್ಟಬುದ್ಧಿಯಂ ಯೋಚಿಸಿ ರಾಜಸೇವಕವರ್ಗಮನೊಳಗುಮಾಡಿಕೊಂಡರಸನಂ ಕೊಂದು ರಾಜ್ಯಮಂ ಕೊಳ್ಳಲೆಂದು ಚತುರಂಗಬಲಮಂ ಕೂಡಿಸಿ ಸನ್ನದ್ಧನಾಗಿಪ್ಪುದುಂ ಸತ್ಯಂಧರನರಿದು ತನ್ನರಿಸಿ ವಿಜಯಾವತಿ ಗರ್ಭಿಣಿಯಂ ಕೇಕಿಯಂತ್ರದೊಳೇರಿಸಿ ಕಳೆದು ತಾನುಂ ಏಕಾಂಗವೀರನಾಗಿ ಕೈದುಗೊಂಡು ರಣಮಂಡಲಮಂ ಪೊಕ್ಕನೇಕ ಬಲಮಂ ತವಿಸಿ ನಿರ್ವಾಹಮಿಲ್ಲದುದನರಿದು ಕೈದುವಂ ಬಿಸುಟು ಸರ್ವಸಂಗಪರಿತ್ಯಾಗಂಗೈದು ನಿಶ್ಚಲನಾಗಿ ರಿಪುಗಳಿಂ ಸತ್ತು ಸ್ವರ್ಗಕೆಯ್ದಲ್

ಇತ್ತ ಕೇಕಿಯಂತ್ರ ವಿಜಯಾವತಿಯನೊಯ್ದು ವಿಪಿನಾಂತರದೊಳಿಳಿಪೆ ವಟವಿಟಪಿಯ ಕೆಳಗಿರ್ಪುದುಂ ನವಮಾಸಂ ನೆರೆಯಲ್ ಪುತ್ರೋತ್ಪತ್ತಿಯಪ್ಪುದುಂ ದುಃಖಿತೆಯಾಗಿರೆ ಗಂಧೋತ್ಕಟನೆಂಬ ರಾಜಶ್ರೇಷ್ಠಿ ಪೋಗುತ್ತಿರ್ದಳುತ್ತಿರ್ಪ ಬಾಲಕನ ಸ್ವರಂಗೇಳ್ದಲ್ಲಿಗೆ ವಪ್ಪುದುಂ ವಿಜಯಾವತಿ ಮೈಗರೆಯಲಾ ಶಿಶುವಂ ಕಂಡತ್ಯಾದರದಿಂ ಕೊಂಡುಪೋಗಿ ತನ್ನರಸಿಗಿತ್ತು ಆಕೆಯೆ ಪೆತ್ತಳೆಂದು ಘೋಷಿಸಿ ಸಾಕಿ ಅರಣ್ಯದೊಳ್ ಜೀವಿಸಿರ್ದುದರಿಂದ ಜೀವಂಧರನೆಂದು ಪೆಸರಿಟ್ಟಾಗಳಾ ಪುರದೊಳ್ ಪುಟ್ಟಿದ ನೂರ್ವರ್ ತ್ರೈವರ್ಣಿಕರ ಮಕ್ಕಳನವನೊಡನಾಡುವಂತಾಗೆ ನೇಮಿಸೆ ಕುಮಾರಕಂ ಬಳೆದು ವಿದ್ಯಂಗಳಂ ಕಲ್ವಿನಮೊಂದು ದಿವಸಮೊರ್ವರಾಚಾರ್ಯರ್ ಭಸ್ಮಕವ್ಯಾಧಿಯಿಂ ಭಿಕ್ಷೆಗೆವರೆ ಜೀವಂಧರನವರ್ಗೆ ಸಾಲ್ವನಿತು ಅನ್ನಮನಿಕ್ಕಲುಂಡಾಗಳೆ ರೋಗಂ ಪೋದೊಡವರುಂ ಕುಮಾರಂಗುಪಕಾರಂಗೆಯ್ಯಲೆಂದಲ್ಲೆ ನಿಂತು ಸಕಲ ಗ್ರಂಥಂಗಳಂ ಕಲಿಸಿ ಶಸ್ತ್ರಶಾಸ್ತ್ರವಾಹನಾರೋಹಣಾದಿಗಳಂ ಕಲಿಸೆ ಕಲ್ತು ಶೌರ್ಯವೀರ್ಯ ಪರಾಕ್ರಮಯುತನಾಗಿರಲಾ ಪುರಕ್ಕೆ ಪರರಾಯರ ಬಲಂ ಬಂದು ತುರುವಂ ಕೊಂಡೊಯ್ಯುತ್ತಿರೆ ಕಾಷ್ಠಾಂಗಾರಂ ತಿರುಗಿಸಲಾರದೆ ಮಗುಳೆ ಜೀವಂಧರಂ ಕೇಳ್ದು ಪುರಜನಸಹಿತಂ ಪೋಗಿ ಅವರನಂಜಿಸಿ ತುರುವಂ ತಿರುಗಿಸೆ ಮತ್ತೊಂದು ದಿನಂ ಮತಂಗಜಂ ಮದವೇರಿ ಸಂಹರಿಸುತ್ತುಂ ಬರುತ್ತಿರಲಾರುಂ ಪಿಡಿಯದಿರೆ ಜೀವಂಧರನದರೊಳ್ ಪೊಣರ್ದು ಮೇಲೇರಿ ತಿರುಗಿಸಿ ತಂದು ಕಟ್ಟಿಲಿವಾದಿಯಾಗಾ ಕುಮಾರನ ಶೌರ್ಯದೇಳ್ಗೆಯಂ ಕಂಡು ಸೈರಿಸದೆ ಕೊಲಲ್ಬಗೆದೆತ್ತಿ ಬಪ್ಪುದುಂ ಆಹವದೊಳ್ ಕಾಷ್ಠಾಂಗಾರನನಿಕ್ಕಿ ಜಯಲಕ್ಷ್ಮಿಯಂ ಪಡೆದು ರಾಜ್ಯದೊಳ್ ನಿಂದು ಋಷ್ಯಾಶ್ರಮದೊಳಿರ್ದ ತಾಯುಂ ಬರಿಸಿ ಎಣ್ಬರ್ ಪಟ್ಟಮಹಾದೇವಿಯರಾಗೆ ವಿದ್ಯಾಗುರೂಪದೇಶದಿಂ ಮೈತ್ರಿ ಪ್ರಮೋದ ಕಾರುಣ್ಯ ಮಾಧ್ಯಸ್ಥಮೆಂಬ ಮಹಾಪುರುಷಸ್ವಭಾವಗುಣಂಗಳಳವಡೆ ಮತ್ತಮಾ ರಾಜ್ಯಂ

ಪರಸ್ತ್ರೀಷು ಸಜಾತ್ಯಂಧೋ ದುಷ್ಕಾರ್ಯೇಷು ಸದಾಲಸಃ
ಮೂಕಃ ಪರಾಪವಾದೇಷು ಪಂಗುಃ ಪ್ರಾಣವಧೇಷು ಚ

ಈ ಪ್ರಕಾರದಿಂ ಸದ್ಧರ್ಮಮಂ ಬಿಡದೆ ರಾಜ್ಯಮನಾಳುತ್ತಿರಲಾ ದೇಶಂ ರಾಜನ್ವತಿಯಾಗೆ ಪ್ರಜೆಪರಿವಾರಂಗಳ್ ಜೀವಂಧರನಂಕಮಾಲೆಯಿಂ ಜೋಗುಳವಾಡುತ್ತಿರೆ ಕ್ಷತ್ರಚೂಡಾಮಣಿಯೆಂದಾ ಮಹಾರಾಜಂಗೆ ಪೆಸರಾಗೆ ಸುಖಮಿರಲೊಂದು ದಿವಸಂ ಬೌದ್ಧಾದಿ ಷಣ್ಮತದವರ್ ಬಂದು ತಂತಮ್ಮ ಮತಪ್ರಮೇಯಮಂ ಪೇಳೆ ಅರಸಂ ಸತ್ಯಸಾಗರನೆಂಬ ಮಂತ್ರಿಯ ಮೊಗಮನೀಕ್ಷಿಸಲಾತಂ ಬೆಸಗೊಳೆ ಶೂನ್ಯವಾದಿಗಳ್ ಜೀವಾಭಾಸಮಂ ಪ್ರಕಟಂ ಮಾಡಿ

ಭಸ್ಮೀಭೂತಸ್ಯ ದೇಹಸ್ಯ ಪುನರಾಗಮನಂ ಕುತಃ
ತಸ್ಮಾತ್ ಸುಖೈಷೀ ಜೀವೋಯಂ ಋಣಂ ಕೃತ್ವಾ ಘೃತಂ ಪಿಬೇತ್

ಅಹಿಂಸಾ ಪರಮೋಧರ್ಮವೆಂಬುದುಂಟಾಗಿಯುಂ ಕರ್ಮಕರ್ತೃವಾಗಿಯುಂ ಭೋಕ್ತೃವಲ್ಲಂ

ಮಾಂಸಸ್ಯ ಮರಣಂ ನಾಸ್ತಿ ನಾಸ್ತಿ ಮಾಂಸಸ್ಯ ವೇದನಾ
ವೇದನಾ ಮರಣಾಭಾವೇಕೋ ದೋಷೋ ಮಾಂಸಭಕ್ಷಣಾತ್

ಎಂದು ನಿಜಾಭಿಪ್ರೇತಾರ್ಥಮಂ ಪ್ರಕಟಿಸೆ ಕೆಲಂಬರ್ ಪುಣ್ಯಪಾಪಂಗಳ್ ಸ್ವಾಧೀನಮಲ್ಲದುದರಿಂ ಈಶ್ವರಾಧೀನಮೆಂದುಂ

ಪಾತಾಳೇ ಚಾಂತರಿಕ್ಷೇ ದಶದಿಶಿಭುವನೇ
ಸರ್ವವ್ಯಾಪಿ ಶಿವೋಯಂ

ಎಂದುಮೀಶ್ವರಂಗೆ ಪಂಚವಿಂಶತಿಲೀಲಾಮೂರ್ತಿಯಂ ಪ್ರಕಟಿಸಿ ಶೈವ ಸಿದ್ಧಾಂತಾದ್ಯಂತಮಂ ಪೇಳೆ ಕೆಲಂಬರ್ ವಿಷ್ಣುಪಕ್ಷಮಂ ಪಿಡಿದು ಜಲೇ ವಿಷ್ಣು ಸ್ಥಲೇ ವಿಷ್ಣುಸ್ಸರ್ವಂ ವಿಷ್ಣುಮಯಂ ಜಗತ್ ಎಂದರ್. ಕೆಲಂಬರ್ ವೃದ್ಧರಂ ಮಾತಾಪಿತೃಗಳಂ ಪೂಜಿಸಲದು ಧರ್ಮಮೆಂದರ್. ಮತ್ತೆ ಕೆಲಂಬರ್

ನಷ್ಟಂ ಕುಲಂ ಕೂಪ ತಟಾಕವಾಪೀಪ್ರಭ್ರಷ್ಟ ರಾಜ್ಯಂ ಶರಣಾಗತಂ ಚ
ಗಾಂ ಬ್ರಾಹ್ಮಣಂ ಜೀರ್ಣ ಸುರಾಲಯಂ ಚ ವಿನಿರ್ಮಿತಂ ಧರ್ಮಮಿತಿ ಪ್ರಸಿದ್ಧಮ್

ಎಂದರ್. ದೇವತೆಗಳಂ ಹಿಂಸಾದಿಗಳಿಂ ಪೂಜಿಸೆಯುಂ ದುಷ್ಟರಂ ದುಷ್ಟಮೃಗಂಗಳಂ ಕೊಂದೊಡಂ ಧರ್ಮಮಪ್ಪುದೆಂದು ನುಡಿವ ಮಾತಂ ಕೇಳ್ದು ಸತ್ಯಸಾಗರಮಂತ್ರಿ ಸರ್ವಜ್ಞನಿರೂಪಮಂ ಕೇಳ್ದನಾದುದರಿಂದಿಂತೆಂದಂ. ಧರ್ಮಮೆಂದಾಗಲೆ ಸರ್ವರು ಪೇಳ್ವುದು ಹಿತ್ತಾಳೆಯು ಸುವರ್ಣಮಪ್ಪುದಂ ಪಾಲಂ ಕೊಳ್ಳುದೆನೆ ಕ್ಷೀರ ಸಾಮಾನ್ಯದಿಂದೆಕ್ಕೆಯ ಕಳ್ಳಿಯ ಪಾಲಂ ಕೊಂಡೊಡೆ ಪ್ರಾಣಂ ಪೋಗದಿರದಂತೆ ಬುದ್ಧಿವಡೆದರ್ ಧರ್ಮಮಂ ಕೊಳ್ವಲ್ಲಿ ಪರೀಕ್ಷಿಸಿಕೊಳ್ಳಬೇಕೆಂತೆಂದೊಡೆ

ಯಥಾ ಚತುರ್ಭಿಃ ಕನಕಂ ಪರೀಕ್ಷ್ಯತೇ
ನಿಘರ್ಷಣ ಛೇದನ ತಾಪತಾಡನೈಃ
ತಥಾ ಚತುರ್ಭಿಃ ಕನಕಂ ಪರೀಕ್ಷ್ಯತೇ
ಶ್ರುತೇನ ಶೀಲೇನ ಕುಲೇನ ಕರ್ಮಣಾಂ

ಎಂಬುದರಿಂ ಬುದ್ಧಿವಂತರ್ ಪರೀಕ್ಷಿಸಿಕೊಳ್ವರಲ್ಲಿ ಕ್ರೋಧಮಾನಮಾಯಾ ಲೋಭ ಮೋಹಂಗಳಂ ಬಿಟ್ಟು ಯಥಾತಥ್ಯಮಂ ನಂಬುವುದು ಪಂಡಿತ ಲಕ್ಷಣಂ. ಲುಬ್ಧರಿಗರ್ಥಂ ಸ್ತಬ್ಧರಿಗಂಜಲಿ ಮೂರ್ಖರ್ಗವರಿಚ್ಛೆಯದರಿಂ ಪಂಡಿತರಪ್ಪುದು ದುರ್ಲಭಂ. ಕಣ್ಣಿಲ್ಲದವಂ ವಸ್ತುಗಳಂ ಕಾಣದಂತೆ ಸಮ್ಯಗ್ದರ್ಶನಮಿಲ್ಲದವಂ ಧರ್ಮಮನರಿಯನೆಂತೆಂದೊಡೊರ್ವಂ ಹುಟ್ಟುಗುರುಡಂ ಬಾಲಕರಿಗೆ ಪಾಲನೆರೆಯಲದು ರೋದನಮಂ ಮಾಡುತ್ತಿರಲಾ ದನಿಯಂ ಕೇಳಿ ಮತ್ತೊರ್ವ ಕುರುಡನಂ ಬೆಸಗೊಳೆ ಮಗುವಿಂಗೆ ಪಾಲನೆರೆವರೆಂದೊಡೆ ಪಾಲೆಂತಿಪ್ಪುದೆನೆ ಶ್ವೇತವರ್ಣಮಾಗಿಹುದೆಂದೊಡಾ ಬಿಳಿಯ ವರ್ಣಮೆಂತೆನೆ ಬೆಳಕಪಕ್ಷಿಯ ಗರಿಯಂತೆಂಬುದುಂ. ಆ ಪಕ್ಷಿ ಹೆಂಗಿಹುದೆನೆ ಕೊಕ್ಕರೆಯ ಹಾಗಿಪ್ಪುದೆಂದು ತನ್ನ ಕೈಯಂ ಬಾಗಿಸಿ ತೋರಲು ತನ್ನ ಕೈಯಿಂದೆಳವಿನೋಡಿ ಈ ಉದ್ದ ಗಾತ್ರಮಪ್ಪಪಾಲನೆಂತು ನುಂಗಲ್ಬಕ್ಕು ಕೊಲ್ವರದಂ ಬಿಡಿಸಲೆಂದು ಪೋಗುತ್ತೆ ಕಣ್ಕಾಣದೆ ಬಾವಿಗೆ ಬಿದ್ದನೆಂಬಂತೆ ವಿಚಾರಜ್ಞಮಿಲ್ಲದೆ ಧರ್ಮಮಂ ಕೊಂಡೊಡನರ್ಥಕಮಕ್ಕುಂ.

ಮತ್ತಂ ಸದ್‌ಜ್ಞಾನಶತ್ರುತಮಂ ಕೇಳದಿರ್ದವಂ ಬಧಿರನ ಪೋಲ್ವನದೆಂತೆಂದೊಡೆ ಓರ್ವ ಪಾರ್ವಂ ಕಿವುಡನಾಗಿ ರಾಜನಂ ಬಹುದಿವಸದಿಂದಾಶ್ರಯಿಸಿರ್ದು ತನ್ನ ದರಿದ್ರಮಂ ಪೇಳುತಿರ್ಪುದುಮರಸಂ ಕರುಣಿಸಿ ಈತಂಗೆ ಜೀವನಮಂ ಮಾಡಲೆಂದಿರ್ದು ಪುಣ್ಯದಿವಸಂ ಬರಲೆಲ್ಲರ್ಗಂ ಭೂರಿದಾನಮಂ ಕೊಡುವಾಗಳೀ ಪಾರ್ವನಂ ನೋಡಲಿಲ್ಲದೊಡೆ ಪೆರ್ಗಡೆಗಳಂ ಕಳುಹಿಸಿ ಬರವೇಳಲಾ ವೇಳೆಯೊಳೀ ಪಾರ್ವಂ ತನ್ನ ಪೆಂಡತಿಯೊಳತ್ಯಂತ ಕಲಹಮಾಗೆ ಕೋಪಿಸಿ ನಿನ್ನ ಕೈಯೊಳನ್ನಮನಿಕ್ಕಲುಣ್ಣೆನೆಂದು ಸೂರುಳಿಟ್ಟು ಮನೆಯಿಂ ಪೊರಮಟ್ಟು ರಾಜಬೀದಿಯೊಳ್ ಕುಳ್ಳಿರಲರಸನ ಪೆರ್ಗಡೆಗಳ್ ಬಂದು ಸಂಜ್ಞೆಯಂ ತೋರಿ ಕರೆವುದುಂ ಯಾರು ಪೇಳಿದಾಗ್ಯೂ ಆ ರಂಡೆಯ ಕೈಯನ್ನಮನುಣ್ಬೆನಲ್ಲೆಂದು ಕೋಪಿಸುತ್ತುಂ ಎದ್ದು ಮತ್ತೊಂದೂರಿಗೆ ಪೋದಂ. ಅಂತೆಯಜ್ಞಾನಿಗಳ್ ಪಿಡಿದ ಧರ್ಮಫಲಮಂ ಕುಡಲಾರದೆಂದು ಮತ್ತಮಿಂತೆಂದಂ ಜೀವಂಗಳೊಳ್ ದಯಾಪರನಾಗಿ ಕೋಪಮೆಂಬ ಕ್ರೂರವ್ಯಾಘ್ರನಂ ಪರಿಹರಿಸಿ ಚಾರಿತ್ರಶೀಲಮುಳ್ಳುದೆ ಸದ್ಧರ್ಮಂ.

ಶ್ಲೋಕ || ದಯಾಮೂಲೋ ಭವೇದ್ಧರ್ಮಃ ಕ್ರೋಧಮಾನಾದಿ ವರ್ಜಿತಃ ಇತಿ ಅನ್ಯಮತೇ
ಸತ್ಯಾದುತ್ಪದ್ಯತೇ ಧರ್ಮಃ ದಯಾ ದಾನೇನ ವರ್ಧತೇ
ಕ್ಷಮಯಾ ಸ್ಥಾಪ್ಯತೇ ಧರ್ಮಃ ಕ್ರೋಧ ಲೋಭಾದ್ವಿನಶ್ಯತಿ ||
ಪುಣ್ಯ ಏಕೋ ಮಹಾಬಂಧುಃ ಪಾಪ ಏಕೋ ಮಹಾರಿಪುಃ ||

ಎರಡಕ್ಕುದಾಹರಣಂ-

"ಪರೋಪಕಾರಃ ಪುಣ್ಯಾಯ ಪಾಪಾಯ ಪರಪೀಡನಮ್"- ಇತಿ |

ಮಾಂಸಾಶಿಷು ದಯಾ ನಾಸ್ತಿ ನ ಸತ್ಯಂ ಮದ್ಯಪಾಯಿಷು |

ಎಂದು ಬ್ರಾಹ್ಮಣನ ಭಕ್ಷಿಪ ವ್ಯಾಘ್ರನಾದೊಡಂ ಕೊಲ್ಲಲಾಗದು ಕೊಂದೊಡಿವಂಗೆ ಸಂರಕ್ಷಣಾನಂದ ರೌದ್ರವಾಗೆ ನರಕಮಪ್ಪುದೆಂದವರಭಿಪ್ರೇತಾರ್ಥಮಂ ಬಿಡಿಸಿ ಜೀವಂಧರಂಗೆಂದಂ 'ಎಲೆ ಪ್ರಭುವೆ ನಿನಗೆ ದೃಷ್ಟ ಶ್ರುತಾನುಭವಮಂ ಪೇಳ್ವೆನೆಂ'ದಿಂತೆಂದಂ 'ಎಲೆ ರಾಜಾ ನೀವುಂ ನಾವುಂ ಕುಮಾರಕಾಲದೊಳ್ ಶ್ರೀವೀರವರ್ಧಮಾನ ಸ್ವಾಮಿಯ ಕೇವಲಜ್ಞಾನಪೂಜೆಗೆ ನೆರೆದ ದೇವರ್ಕಳಂ ನೋಡಿ ಸ್ವಾಮಿಯಂ ವಂದಿಸಿ ರಾಜಗೃಹಕ್ಕೆ ಬಂದು ಶ್ರೇಣಿಕನಂ ಕಂಡು ಬಪ್ಪಲ್ಲಿ ಆ ಪುರದ ವೈಶ್ಯೋತ್ತಮಂ ನಾಗದತ್ತನ ಪೆಂಡತಿ ಶ್ರುತಧರಮುನಿಗಳಂ ಬೆಸಗೊಳ್ವವಸರಂ ನಾಮುಮವಧಿಜ್ಞಾನಿಗಳಂ ವಂದಿಸಿ ಕುಳ್ಳಿರಲಾಗಭವರತ್ತೆ ಗುರುಗಳಂ ಬೆಸಗೊಂಡಳೆಲೆ ಸ್ವಾಮೀ ನಮ್ಮ ಹಿಂದಣ ವನಪ್ರದೇಶದೊಳೊಂದು ಮಂಡೂಕಂ ಪುಟ್ಟಿಪ್ಪುದದೆನ್ನ ಕಾಣುತ್ತುಂ[ಕೂಕಿರಿ]ಯುತೆನ್ನೊಡನೊಡನೆಯ್ದುತ್ತುಂ ಬಿಡದಿಪ್ಪ ಕಾರಣಮೇನೆಂದೊಡಾ ಮುನಿಗಳವಧಿಯಿಂದರಿದೆಂದರ್

ಈ ಮರದೊಳ್ ದೇವದತ್ತನೆಂಬ ವೈಶ್ಯನಾತಂಗೆ ನಾಗದತ್ತನೆಂಬ ಮಗಂ ಪುಟ್ಟಿ ಸುದತ್ತನ ಮಗಳ್ ನೀ ಭಗದತ್ತೆಯಾಗಿರೆ ನಿನ್ನಂ ಕಂಡು ಜನ್ಮಾಂತರ ಸ್ನೇಹದಿಂ ನಿನ್ನಂ ಮದುವೆಯಾಗಿ ಅತ್ಯಾಸಕ್ತನಾಗಿರ್ದಾರ್ತದಿಂ ಸತ್ತು ಮಂಡೂಕನಾಗಿರ್ದನೀಗ ಬೋಧಿಸೆ ನಿರ್ಮೋಹನಾಗಿ ಭವಸ್ಮರಣೆ ಬಂದು ಉಪದೇಶಮಂ ಕೈಕೊಂಡಿರ್ದು ಈ ಪುರದರಸಂ ಸಮವಸರಣಕ್ಕೆ ಪೋಪಾಗಳ್ ದರ್ದುರನೊಂದು ಪುಷ್ಪಮಂ ಕಚ್ಚಿ ಭಕ್ತಿಯಿಂ ಪೋಪೆನೆಂದು ರಾಜಬೀದಿಯೊಳ್ ಬರ್ಪಿನಂ ಶ್ರೇಣಿಕಂ ಏರಿದಾನೆ ಮೆಟ್ಟಿ ಸತ್ತಾಗಳೆ ಸೌಧರ್ಮಕಲ್ಪದೊಳ್ ಪಾಸಿನಪೊರೆಯೊಳ್ ದಿವ್ಯಗಂಧ ವಸ್ತ್ರಾಭರಣ ಮಾಲ್ಯಾದ್ಯಲಂಕೃತನಾಗಿ ಅವಧಿಯಿಂದರಿದು ಶ್ರೀ ವೀರವರ್ಧಮಾನಸ್ವಾಮಿ ಸೇವೆಯಂ ಮಾಡಲ್‌ಬಪ್ಪೆನೆಂಬ ಋಷಿ ವಾಕ್ಯಮಂ ಕೇಳ್ದಲ್ಲಿಗಾಮುಂ ಪೋಗಿಯಾ ಕಪ್ಪೆಯಂ ಬೋಧಿಸೆ ತನ್ನ ಚೇಷ್ಟೆಯನುಳಿದು ಧರ್ಮಮಂ ಕೈಕೊಂಡು ಶಾಂತನಾದುದಕ್ಕಾಶ್ಚರ್ಯಂಬಟ್ಟು ಬಂದುದು ದೃಷ್ಟಂ

ಇನ್ನು ಶ್ರುತಮಾವುದೆಂದೊಡೆ ಭೂತಿಳಕಪುರದ ದೃಢಸೂರ್ಪಂಗೆ ಧನ್ವಂತರಿಯೆಂಬ ಪೆಸರಾಗಿ ರಾಜಪುರೋಹಿತನ ಮಗಂ ವಿಶ್ವಾನುಲೋಮಂ ಅವರೀರ್ವರ್ಗತಿ ಸ್ನೇಹಮಾಗೆ ಕಿಚ್ಚುಂ ಗಾಳಿಯುಂ ಕೂಡಿದಂತೆ ಧನ್ವಂತರಿಯುಂ ವಿಶ್ವಾನುಲೋಮನುಂ ಕೂಡಿ ಸಪ್ತವ್ಯಸನದಿಂ ಮತ್ತರಾಗಿ ಪುರದೊಳ್ ಪ್ರಜಾಕ್ಷೋಭಂ ಮಾಡುತಿಪ್ಪುದುಂ ಪ್ರಜೆಗಳರಸಿಂಗೆ ಬಿನ್ನವಿಸೆ ಮೂರುವೇಳೆ ಪೇಳಿದಾಗ್ಯೂ ಆಜ್ಞೆಯಂ ಮೀರಿ ತುಂಟತನವಂ ಮಾಡೆ ಭೂಪಂ ಕೋಪಿಸಿ ಪುರದಿಂ ಪೊರಮಡಿಸೆ ಧನ್ವಂತರಿಯ ತಾಯುಂ ಈರ್ವರ್ ಪೆಂಡಿರ್ ಸಹಿತಂ ಪರದೇಶಕೆಯ್ದಿ

ಗಜಪುರದ ಚೋರರೊಳ್ ಕೂಡಿ ಕಳವಿನೊಳತಿ ನಿಪುಣರಾಗೆ ಅರಸಿನಾಜ್ಞೆಯೊಳೆ ಐನೂರ್ವೈನೂರ್ವರ್ ಕಳ್ಳಭಂಟರ್ಗೆ ಗೊತ್ತಾಗಿರಲದೆ ಸೌಖ್ಯಮಾಗೆ ತಾಮೀರ್ವರುಮೀ ಸುಖಕ್ಕೆ ಸಮಾನಮಿಲ್ಲೆಂದದಂ ಬಿಡಲಾಗದೆಲ್ಲಿಯಾನುಂ ಮುನಿಗಳೊಳ್ ಮಾತನಾಡಿದೊಡೆಮ್ಮ ಸುಖಕ್ಕೆ ವಿಘ್ನಮಕ್ಕುಮದರಿಂದ ಅವರೊರೆವ ಮಾತಂ ಕೇಳದಿಪ್ಪೆವೆಂದೊಬ್ಬರೊಬ್ಬರೊಳ್ ಭಾಷೆಯಂ ಮಾಡಿದರ್ೊಂದು ದಿನಂ ಪೊರಗಣಿಂ ಪಟ್ಟಣಕ್ಕೆ ಬಪ್ಪಲ್ಲಿ ಆನೆ ಮದದಿಂ ಬರುತ್ತಿರ್ದವರನಟ್ಟುತ್ತುಂ ಬರೆ ಪೋಗಲೇನುಮಂ ಕಾಣದೆ ಉದ್ಯಾನವನದ ಸಿದ್ಧಕೂಟ ಚೈತ್ಯಾಲಯಮಂ ಪೋಗಲನಿತಕ್ಕೆನೇಸರ್ಪಟ್ಟೊಡೆ. ವೃಷ್ಟಿ ಕರೆಯುತ್ತಿರಲಾ ಚೈತ್ಯಾಲಯದೊಳೊರಗಿ ನಿಲಲಲ್ಲಿ ಧರ್ಮಾಚಾರ್ಯರ್ ಅಷ್ಟೋಪವಾಸದಿಂ ತಮ್ಮ ಶಿಷ್ಯವರ್ಗಕ್ಕಂ ಧರ್ಮೋಪದೇಶಂಗೆಯ್ಯುತ್ತಿರಲಾಶಬ್ದಂ ಕಿವಿಯಂ ಪುಗುವುದೆಂದೋರೋರ್ವರುಂ ಕರ್ಣವಿವರದೊಳರಲೆಯಂ ಬಲಿದು ಮಲಗಿರ್ಪಿನಂ ವಿಶ್ವಾನುಲೋಮಂ ನಿದ್ರೆಯೋಗೆ ಧನ್ವಂತರಿ ನಿದ್ರೆಯಿಲ್ಲದೆ ಅರಳೆಯಂ ತೆಗೆದ ಸಮಯದೊಳಾ ಯತಿಗಳ್ ಧರ್ಮಮುಳ್ಳವಂ ಕಾಮಧೇನುಸ್ತನದಂತೆ ಧರ್ಮಮಿಲ್ಲದ ನಿರ್ಭಾಗ್ಯನಜಾಗಲಸ್ತನದಂತೆಂದು ಪೇಳುತ್ತಿರ್ದ ಮಾತು ಕಿವಿಯೊಳ್ ಪುಗುವುದುಂ ತಾನು ನಿರ್ಭಾಗ್ಯನಪ್ಪೆನಲ್ಲೆಂದುಪವಿಷ್ಟನಾಗಿ ಬೆಳಗಿನ ಜಾವಂಬರಂ ಧರ್ಮಸ್ವರೂಪಮಂ ಕೇಳ್ದು ಸಂತುಷ್ಟನಾಗಿ ಮುನಿಗಳ್ಗೆರಗಿ ಎನಗೊಂದು ವ್ರತಮಂ ದಯೆಗೆಯ್ವುದೆಂದು ಬೇಡಿದೊಡವರ್ ಭವ್ಯಜೀವಮೆಂದರಿದೀತಂಗೆ ತಕ್ಕ ವ್ರತಮಂ ಪೇಳೆ ನಡೆಯದೆಂದು ಬೋಳಮಂಡೆಯಂ ನೋಡಿಯುಂಬುದೆಂಬಾ ವ್ರತಮಂ ಕೊಂಡು ತನ್ನ ಮನೆಯ ಸಮೀಪದೊಳಿಪ್ಪ ಕುಂಭಕಾರನ ತಲೆಯಂ ನೋಡಿಯುಣ್ಣುತ್ತಿರಲೊಂದು ದಿನಮಾತಂ ಮಣ್ಣಗುಂಡಿಯನೆಯ್ದಿದೊಡಲ್ಲಿಗೆ ಪೋಗಿ ಕಂಡೆನೆಂದು ಬರಲಾತಂಗೆ ನಿಕ್ಷೇಪಂ ಸಿಕ್ಕೆ ಅದಂ ತಂದುಕುಡುವುದುಂ ನಂಬಿ ಮುನಿಯಲ್ಲಿಗೆಯ್ದಿ ನೀವ್ ಕೊಟ್ಟ ವ್ರತದಿಂ ಫಲಮಾದುದಿನ್ನೊಂದಂ ದಯಗೆಯ್ವುದೆನೆ ಪೆಸರರಿಯದ ಪಣ್ಣಂ ಮೆಲಲಾಗದೆಂದು ವ್ರತಮನೀಯಲಿರ್ವರುಂ ತಂತಮ್ಮ ಕಳ್ಳಭಂಟರಂ ಕೂಡಿಕೊಂಡು ಪರದೇಶಕ್ಕೆ ಪೋಗಿ ಬರುವಲ್ಲಿ ವಿಪಿನಾಂತರದೊಳ್ ಕ್ಷುತ್‌ಪಿಪಾಸದಿಂ ಬಳಲ್ದಲ್ಲಿರ್ದ ಫಲಾದಿಗಳಂ ತನ್ನಿಮೆಂದು ತಂತಮ್ಮ ಭೃತ್ಯರಂ ಬೆಸಸಲವರ್ ನೋಡಿದೊಡತಿಶಯಮಪ್ಪ ವಿಷಪಕ್ವಫಲಮಂ ತಂದೀಯಲ್ ಧನ್ವಂತರಿಯು ಇದಾವ ಫಲಮೆನೆ ಇದರ ಪೆಸರನರಿಯೆವೆಂಬುದುಂ ಅಂತಾದೊಡೀ ಪಣ್ಣಂ ಕೊಳ್ವೆನಲ್ಲೆನೆ ವಿಶ್ವಾನುಲೋಮನೀ ಸುಖಕ್ಕಿತರನಾಗಿ ನಾನರಿಯದಂತು ಮುನ್ನಿನ ಪ್ರತಿಜ್ಞೆಯಂ ಬಿಟ್ಟು ವ್ರತಮನಾಂತೆಯೆಂದು ಕೋಪಿಸಿದೊಡಾನುಂ ಕೊಳ್ವೆನಲ್ಲೆಂದು ಬಿಡಲ್ ಉಳಿದವರೆಲ್ಲರುಂ ತಿಂದು ಸಾಯೆ ವಿಸ್ಮಯಂಬಟ್ಟು ಅವರ್ ತಂದಿರ್ದ ಧನಮೆಲ್ಲಮಂ ಕೊಂಡು ಮತ್ತಂ ಭಂಟರಂ ಕೂಡಿಸಿ ಧನ್ವಂತರಿಯು ಗುರುಗಳಲ್ಲಿಗೆಯ್ದಿ ಕೊಟ್ಟ ವ್ರತಂ ಸಫಲಮಾಯ್ತಿನ್ನೊಂದಂ ಕೊಡುವುದೆನೆ ಪುತ್ತಿನ ಬಳಿಯೊಳಿರ್ದ ಹಿಟ್ಟಿನ ಭಂಡಿ ಮೊದಲಾಗೆ ಅರ್ಪಿಸಿರ್ದುದುಂ ಕೊಳ್ಳಲಾಗದೆಂದೊಡೆ ಮುನ್ನಿನಂತೆಯ್ದಿಬರ್ಪಾಗಳವಂ ತಂದು ಕುಡಲಲ್ಲಿ

ವಿಷಮಿಶ್ರಮಾಗಿರಲೆಲ್ಲರುಂ ಸತ್ತು ಇವರ್ಗೆ ಧನಮೆಲ್ಲಂ ದೊರಕೊಳೆ ನಾಲ್ಕನೆಯ ವ್ರತಂ ಪೌರ್ಣಮಿಯಂದು ಮದ್ಯಮಾಂಸದ ತೊರವಿ ಪರದೇಶದಿಂ ಬರುತ್ತುಂ ಅದರೊಳಿಚ್ಛೆಯಾಗಿ ಧನ್ವಂತರಿಜನಂಗಳುಂ ಮಾಂಸಮಂ ವಿಶ್ವಾನುಲೋಮನವರ್ ಮದ್ಯಮುಂ ತರಲ್ ಪೋಗಿ ಧನಮಂ ಕಳೆಯಲೆಂದವರವರರಿಯದಂತು ವಿಷಮಂ ಬೆರಸಿ ತಪ್ಪುದುಂ ಭಕ್ಷಿಪ ಸಮಯದೊಳ್ ಇಂದು ಪುಣ್ಣಮೆಯೆನಲ್ ಧನ್ವಂತರಿ ಮುಟ್ಟದಿರ್ಪುದುಂ ವಿಶ್ವಾನುಲೋಮನುಂ ತೊರೆದೊಡೆ ಉಳಿದಿದ್ದವರೆಲ್ಲಂ ತಿಂದು ಸಾವುದುಂ ಎಲ್ಲರ ದ್ರವ್ಯಮಂ ಕೊಂಡು ಮುನಿಗಳಂ ವಂದಿಸಿ ಮತ್ತೊಂದು ವ್ರತಮಂ ಬೇಡೆ ಜೀವಿಗಳ ಕೊಲ್ವಾಗಳ್ ಪಿಂದಕ್ಕೆರಡಡಿಯನಿಟ್ಟು ಕೊಲ್ವುದೆಂಬ ವ್ರತಮಂ ಕೈಕೊಂಡಿರ್ಪನ್ನೆಗಂ.

ದೂರದೇಶಮಂ ರಾಜಾಜ್ಞೆಯಿಂ ಪೋಗಿಬರ್ಪಿನಮರುದಿಂಗಳಾಗಲ್ ಬಂದು ಪೊರವೊಳಲೊಳ್ ಬಿಟ್ಟಿರ್ದು ತನ್ನ ಪೆಂಡತಿಯ ಗುಣಮಂ ನೋಳ್ಪೆನೆಂದು ಮಧ್ಯರಾತ್ರಿಯೊಳ್ ಬೇಳುವೆಯಂ ತಾಳ್ದು ಕವಾಟೋದ್ಘಾಟನದಿಂದೊರ್ವನೆ ಪೋಗಿ ತನ್ನ ಗೃಹಮಂ ಪೊಕ್ಕು ನೋಳ್ಪಾಗಳ್ ದೀಪಂ ಸಣ್ಣನಾಗುರಿಯುತ್ತಿರೆ ಮಂಚಾಗ್ರದೊಳವರ ತಾಯಿ ಗರ್ಭಿಣಿಯಾಗಿರ್ದ ತನ್ನ ಸೊಸೆಗೆ ರಕ್ಷಣಾರ್ಥಂ ಪುರುಷವೇಷದಿಂದಾಯುಧಂಬೆರಸು ಸೊಸೆಯನಪ್ಪಿ ಮಲಗಿರ್ಪುದಂ ಕಂಡು ಪರಪುರುಷನೆಂದು ಈರ್ವರುಮಂ ಪೊಡೆವೆನೆಂದು ಒರೆಯಿಂ ಕತ್ತಿಯನುರ್ಚಿ ಎತ್ತಿ ಪೊಡೆವಾಗಳ್ ಪಿಂದಕ್ಕೆರಡು ಪಜ್ಜೆಯಂ ತೆಗೆಯಲಾ ಖಡ್ಗಾಗ್ರದಿಂ ಮೇಲಿರ್ದ ನೆಲವಿನ ಭಾಂಡಂ ತಾಗಿ ಬೀಳಲಾಶಬ್ದದಿಂದವರಬ್ಬೆ ಎಚ್ಚೆತ್ತು ಧನ್ವಂತರಿ ಚಿರಂಜೀವಿಯಾಗೆಂದು ಕುಳ್ಳಿರಲಾಶ್ಚರ್ಯಮಾಗಿ ವ್ರತಂಗಳ ಫಲಮಂ ಕೊಂಡಾಡಿ ಈ ಸಂಸಾರದಜ್ಞಾನಾಂಧಕಾರಕ್ಕೆ ಬೆಚ್ಚಿ ನಿರ್ವೇಗಂ ಪುಟ್ಟಿ ತಾಂ ಗಳಿಸಿರ್ದ ಪೊನ್ನೆಲ್ಲಮಂ ತಾಯಿಗಂ ಪೆಂಡತಿಗಂ ಕೊಟ್ಟು ವೈರಾಗ್ಯದಿಂ ಗುರುವಿನ ಸನ್ನಿಧಿಯನೆಯ್ದಿ ನಮಸ್ಕಾರಂಗೆಯ್ದು ನಿಮ್ಮಂತಪ್ಪ ವ್ರತಂಗಳೆಲ್ಲಮನಿತ್ತು ದೀಕ್ಷೆಯಂ ಪಾಲಿಸುವುದೆಂಬುದುಮವರಿಂತೆಂದರ್

ಇಲ್ಲಿ ನೀಂ ದೀಕ್ಷೆಗೊಳೆ ಲೋಕಪ್ರಸಿದ್ಧಿಯೊಳ್ ವ್ಯಸನಿಯುಂ ನಿಕೃಷ್ಟನುಂ ಕಳ್ಳನುಮಾದುದರಿಂದಪಹಾಸ್ಯಂಗೆಯ್ದರಲ್ಲದೆ ಭಕ್ತಿಯಿಂ ವೈಯಾಪೃತ್ಯಮಂ ಮಾಡರದರಿಂ ಧರಣಿಭೂಷಣಮೆಂಬ ಪರ್ವತಾಗ್ರದೊಳನೇಕ ತಾಪಸರುಂಟಲ್ಲಿ ಸಮ್ಯಕ್ ತಪೋನಿಧಿಗಳ್ ಧರ್ಮಪಾಲರೆಂಬಾಚಾರ್ಯರಿಪ್ಪರಲ್ಲಿಗೆ ಲೇಖನಮನಿತ್ತಪೆವಲ್ಲಿಗೆ ನೀಂ ಪೋಗಿ ದೀಕ್ಷೆಗೊಂಡೊಡೆ ಪ್ರಸಿದ್ಧಿವಡೆದು ಸದ್ಗತಿಯಂ ಪಡೆದಪೆ ಪೋಗೆಂದು ಲೇಖನಮಂ ಕುಡೆ ಕೊಂಡು ತನ್ನ ಮಿತ್ರನಂ ಕಂಡು ತದ್ವೃತ್ತಾಂತಮಂ ಪೇಳೆ ಆತಂ ಬೆರಗಾಗಿ ಅಂತಾದೊಡಾನುಂ ಬಪ್ಪೆನೆನ್ನ ಸತಿಯನೆನ್ನ ತಾಯ ಬಳಿಗೊಯ್ದಿರಿಸಿ ಬಪ್ಪೆಂ ನಾಳೆಯವರೆಗಿಲ್ಲಿರ್ಪುದೆಂದು ಪೇಳಿ ಪೋಗಿ ಒಂದಿಪ್ಪು ತಡೆಯಲಾತನ ಮೇಲಣಾಸೆಯೇನೆಂದು ಧರಣಿಭೂಷಣಪರ್ವತಮನೆಯ್ದಿ ಧರ್ಮಪಾಲರಂ ಕಂಡು ವಂದಿಸಿ ಲೇಖನಮನಿತ್ತವರಿಂದುಪದೇಶಮನಾಂತು ದೀಕ್ಷೆಗೊಂಡು ಧ್ಯಾನಮೌನಾನುಷ್ಠಾನದಿಂ ಯೋಗನಿಯಮಿತನಾಗಿ ಕಾಯೋತ್ಸರ್ಗಮಿರಲಿತ್ತ ವಿಶ್ವಾನುಲೋಮಂ ಬಂದು ಧನ್ವಂತರಿ ಪರ್ವತಕ್ಕೆ ಪೋದನೆಂದು ತಾನುಂ ಬಂದಾ ಪರ್ವತಮಂ

ಪತ್ತಿ ನೋಳ್ಪಾಗಳಲ್ಲಿ ಏಕದಂಡಿ ತ್ರಿದಂಡಿ ಹಂಸ ಪರಮಹಂಸರ್ ಮೊದಲಾದನೇಕ ತೆರದ ತಪಸ್ವಿಗಳಿರಲೊರ್ವಂ ಪಂಚಾಗ್ನಿ ಮಧ್ಯಗತನಾಗಿರ್ದ ಕೌಶಿಕನೆಂಬ ತಾಪಸನಲ್ಲಿಗೆಯ್ದಿ ನೆನ್ನೆ ದಿವಸಂ ನನ್ನ ಮಿತ್ರನೊರ್ವಂ ತಪಂಗೆಯ್ಯಲ್ ಬಂದನಾತನೆಲ್ಲಿರ್ಪನೆಂದು ಬೆಸಗೊಳಲ್ ಏನು ಕಾರಣಮೆನೆ ತನ್ನ ನಿಜವೃತ್ತಾಂತಮಂ ಪೇಳೆ ಕೇಳ್ದಂತಾದೊಡೆನ್ನ ತಪದಿಂ ದೇವತ್ವಮಪ್ಪುದಿದಂ ಕೈಕೊಂಡೆನ್ನ ಶಿಷ್ಯನಪ್ಪುದೆನೆ ಎನಗಾತನ ಕ್ರಮಮೇ ಕ್ರಮಮಾಗಿರ್ಪುದದರಿಂ ಅವನಂ ಕಂಡು ಬಪ್ಪೆನೆನಲಾತಂ ಕ್ಷಪಣಕರೊಳ್ ದೀಕ್ಷೆಗೊಂಡಿರ್ದಪಂ ನಿನ್ನಂ ನುಡಿಸನೆಂಬುದುಂ ಆತನೆನ್ನೊಳಿರ್ದಿಷ್ಟತೆಗಂ ಎನ್ನಲೀಗಳ್ ನುಡಿಯದಿರ್ದೊಡೆ ನಿನ್ನ ತಪಮೆ ಶರಣೆಂದು ಪೇಳಿ ತಪೋನುಷ್ಠಾನದಿಂ ಮೌನಮಂ ಕೈಕೊಂಡು ಧ್ಯಾನಾರೂಢನಾಗಿ ನಿಯಮದಿಂ ನಿಂದಿರ್ದ ಧನ್ವಂತರಿಯೋಗಿಯಂ ಕಂಡು ನುಡಿಸಿದೊಡಂ ನುಡಿಯದಿರೆ ಕೋಪಿಸಿ ಬಂದಾ ಕೌಶಿಕನ ಶಿಷ್ಯನಾಗಿ ಪಂಚಾಗ್ನಿಯಿಂ ತಪಿಸುತ್ತುಂ ಭಸ್ಮಾಂಗನುಂ ಜಟಾಮಕುಟನುಂ ಕೌಪೀನಚರ್ಮದಂಡಧರನುಮಾಗಿ ಬ್ರಹ್ಮಚರ್ಯದಿಂದಿರುತ್ತಿರಲಾ ಧನ್ವಂತರಿಮುನಿಯುಂ ತ್ರಿದಿನಾಂತರದಿಂ ಮೇಲೆ ಕೈಯೆತ್ತಿ ಮಿತ್ರಾನುರಾಗವಾಗಿ ಬಂದು ವಿಶ್ವಾನುಲೋಮತಾಪಸಿಯಲ್ಲಿಗೆ ಬಂದು ಬೋಧಿಸಿದೊಡಂ ಮಾನಗರ್ವದಿಂ ತಾಂ ಮಾಳ್ಪ ತಪಮಂ ಪ್ರಶಂಸೆಗೆಯ್ಯಲಿಂತೆಂದಂ

ವೃತ್ತ || ಮೀನಃ ಸ್ನಾನಪರಃ ಫಣಿ ಪವನಭುಜ್‌ಮೇಷಸ್ತು ಪರ್ಣಾಶನೋ
ನೀರಾಶೀ ಸ್ಫುಟ ಚಾತಕಸ್ತ್ವನುದಿನಂ ಶ್ವೇತೇ ಬಿಲೇ ಮೂಷಕಃ |
ಭಸ್ಮೋದ್ಧೂಲಿತ ತತ್ಪರಃ ಖಲು ಖರೋ ಧ್ಯಾನಾಧಿರೂಢೋ ಬಕಃ
ಏವಂ ನಿಷ್ಫಲಿತಂ ವಿವೇಕರಹಿತಂ ಜ್ಞಾನಂ ಪ್ರಧಾನಂ ತಪಃ ||

ಎಂಬುದುಂ ಕೋಪಿಸಿದೊಡೆ ಮತ್ತಮಿಂತೆಂದಂ

ಶ್ಲೋಕ || ಪಕ್ಷಿಣಾಂ ಕಾಕಶ್ಚಾಂಡಾಲಃ ಮೃಗೇ ಚಾಂಡಾಲ ಗರ್ದಭಃ
ಯತೀನಾಂ ಕೋಽಪಿ ಚಾಂಡಾಲಃ ಸರ್ವಚಾಂಡಾಲ ದೂಷಕಃ ||

ಎಂಬುದರಿಂ ಸಮತಾಭಾವವಂ ತಾಳೆಂದು ಬೋಧಿಸೆ ಕೇಳದಿಪ್ಪುದುಂ ನಿನ್ನ ನನ್ನ ತಪಸ್ಸಿನ ಫಲವಂ ಮುಂದಣ ಗತಿಗಳೊಳ್ ಕಾಣಲಕ್ಕುಮೆಂದು ಪೋಗೆ ಧನ್ವಂತರಿಮುನಿ ಅನಶನಾದಿತಪದೊಳ್ ನೆಗಳ್ದು ಸಮಾಧಿವಡೆದು ಪದಿನಾರನೆಯ ಅಚ್ಯುತಕಲ್ಪದ ಉಪಪಾತತಳ್ಪದೊಳುದ್ಭವಿಸಿ ಅಂತರ್ಮುಹೂರ್ತದೊಳೆ ದಿವ್ಯ ಗಂಧಮಾಲ್ಯವಸ್ತ್ರಾಭರಣಭೂಷಿತನಾಗಿ ದ್ವಾವಿಂಶತಿ ಸಮುದ್ರೋಪಮ ಪರಮಾಯುಷ್ಯನುಂ ಇಪ್ಪತ್ತೆರಡುಸಾವಿರವರ್ಷಕ್ಕೊಮ್ಮೆ ಪರಮಾಮೃತ ಮಾನಸಿಕಾಹಾರನುಂ ಮನಃಪ್ರವಿಚಾರ ಸುಖಸಂತೃಪ್ತನುಂ ವೈಕ್ರೀಯಕಶರೀರನುಂ ಅಣಿಮಾದಿ ಸದ್ಗುಣೈಶ್ವರ್ಯೋಪೇತನುಂ ಪ್ರತೀಂದ್ರ ಸಾಮಾನಿಕಾತ್ಮರಕ್ಷಕ ಪಾರಿಷದಾಭಿಯೋಗ್ಯ ಕಿಲ್ಬಿಷಾದಿ ತ್ರಯತ್ರಿಂಶಲ್ಲೋಕಪಾಲ ಸಮನ್ವಿತನುಂ ಷಷ್ಠ ಪೃಥ್ವೀಗತಾವಧಿಜ್ಞಾನ ಸಂಪನ್ನನಚ್ಯುತೇಂದ್ರನಾದಂ

ವಿಶ್ವಾನುಲೋಮನು ತಪದಿಂ ಮುಡುಪಿ ದೇವಗತಿವಡೆದು ವ್ಯಂತರೇಂದ್ರನ ವಾಹನದೇವನಾಗಿ ಉಪಪಾದದೊಳೆ ದಿವ್ಯಾಭರಣವಸ್ತ್ರಾದಿಗಳಿಂದಲಂಕೃತನುಂ ವೈಕ್ರೀಯಕಶರೀರನುಂ ಮಾನಸಿಕಾಮೃತಾಹಾರನುಂ ಅಣಿಮಾದಿ ಗುಣೈಶ್ವರ್ಯನಾಗಿ ಪುಟ್ಟಿದನಂತೀರ್ವರುಂ ನಂದೀಶ್ವರ ಮಹಾಪೂಜೆಗೆ ಚತುರ್ನಿಕಾಯಾಮರರೊಡನೈದಿ ಎಂಟು ದಿವಸಂ ಪೂಜಿಸಿ ಮೇರುಪ್ರದಕ್ಷಿಣಂಗೆಯ್ದು ತಂತಮ್ಮ ದೇವಲೋಕಕ್ಕೆ ಪೋಪಾಗಲಾ ಧನ್ವಂತರಿಚರನಚ್ಯುತೇಂದ್ರನ್ ವಿಶ್ವಾನುಲೋಮಚರವಾಹನದೇವನಂ ಏನೈ ನಿನ್ನ ಪೂರ್ವಜನ್ಮದೊಳೆ ಸಮ್ಯಕ್‌ತಪಮನಾಚರಿಸದೆ ಸಾಮಾನ್ಯನಾಗಿ ಪುಟ್ಟಿದೆಯೆಂದು ಪೂರ್ವಪ್ರಪಂಚಮೆಲ್ಲಮಂ ಪೇಳಿ ಬೋಧಿಸಿದೊಡಂ ತಪದೊಳ್ ನಾನಾಚರಿಸುದುದೇ ಮಹಾತಪಂ ಅದರೊಳ್ ಸಮಗ್ರ ದೃಢಚಿತ್ತನಲ್ಲದುದರಿಂ ನೂನಮಾಗಲ್ ಅರಿದಿಂತಾದುದು. ಸಮಗ್ರಂ ನೆಗಳ್ದೊಡೆ ನಿನ್ನ ದೇವತ್ವದಿಂದಧಿಕಮಂ ಪಡೆವೆನೆನೆ ಸಮಗ್ರ ತಪಮಾವುದೆಂದೊಡೆ ಮಹಾರಣ್ಯ ಮಧ್ಯದೊಳ್ ಕಲ್ಲಕಂಭದಂತೆ ದೇಹಮೆಲ್ಲಮಂ ಬಳ್ಳಿ ಸುತ್ತಿ ಪುತ್ತಮೆದ್ದು ದುಸ್ಸಹಮಾಗಿ ಧ್ಯಾನಾರೂಢನಾಗಿರ್ದ ಜಮದಗ್ನಿಯಂ ತೋರುವುದುಂ ಆತನ ಮನಮಂ ಪರೀಕ್ಷಿಸಲೆಂದಿರ್ವರುಂ ಗೀಜಗಪಥತ್ರಿಮಿಥುನಂಗಳಾಗಿ ಜಮದಗ್ನಿಯ ಗಡ್ಡದೊಳ್ ನೇಲುವ ಕೂರ್ಚದೊಳ್ ಗೂಡನಿಕ್ಕಿ ಕ್ರಮದಿಂದಿರುತ್ತೆ ಗಂಡುಪಕ್ಷಿ ಎಲೆ ಪ್ರಿಯೆ ಮೇರುಗಿರಿಯೊಳ್ ಖಗೇಂದ್ರಂಗೆ ವಿವಾಹಮಾಗುವುದರಿಂ ಅಲ್ಲಿಗೆ ಪೋಗಿ ನಾಳೆ ಬರ್ಪೆ ನೀನಿಲ್ಲಿರ್ಪುದೆಂದು ಪ್ರಾರ್ಥಿಸೆ ನೀ ಬಪ್ಪುದಿಲ್ಲದರಿಂ ಪೋಗಲಾಗದೆನೆ ಎನ್ನಾಣೆ ನಿನ್ನಾಣೆ ದೇವರಾಣೆ ಬಂದಪೆನೆಂದನೇಕ ಸೂರುಳಂ ಮಾಡಿದೊಡಂ ನಂಬದಿರೆ ಆದರೆ ನೀನಾವ ಸೂರುಳಂ ಪೇಳಲದಂ ಸೂರುಳ್ದು ಪೋಪೆನೆನಲಂತಾದೊಡೆ ನೀಂ ನಾಳೆ ತಡೆದೆಯಾದೊಡೀ ಜಮದಗ್ನಿ ಸತ್ತೊಡಾವಗತಿಗೆ ಪೋಪನಾ ಗತಿಗೆ ಪೋಪೆನೆಂದು ಸೂರುಳ್ದು ಪೋಗೆಂಬುದತಿಭೀತಿಯಿಂ ಗಂಡುಪಕ್ಷಿ ಅಂತಪ್ಪ ಸೂರುಳ್ಗಂ ಪೇಳಬಹುದೆ ಎಂದೆರಡು ಪಕ್ಷಂಗಳಿಂ ಕಿವಿಯಂ ಮುಚ್ಚಿ ಇಂಥಾ ಪಾಪದ ಸೂರುಳಂ ಕೇಳಬಹುದೆ ಎಂಬುದುಂ ಜಮದಗ್ನಿ ಕೋಪಿಸಿ ತನ್ನೆರಡು ಕೈಯಿಂ ಪೊಸೆದೊಡೆ ಪಕ್ಕಿಗಳೆರಡುಂ ಪಾರಿ ತಮ್ಮ ದೇವತ್ವದ ನಿಜರೂಪಂ ತೋರೆ ಜಮದಗ್ನಿ ವಿಷಣ್ಣಚಿತ್ತನಾಗಿ ಭಯಂಗೊಂಡು ತಪಮಂ ಬಿಟ್ಟೆರಗಿ ಎನಗಾವ ಗತಿಯಪ್ಪುದೆನೆ ದೇವರ್ಕಳಿಂತೆಂದರ್

ಶ್ಲೋಕ || ಅಪುತ್ರಸ್ಯ ಗತಿರ್ನಾಸ್ತಿ ಸ್ವರ್ಗೋ ನೈವ ಚ ನೈವ ಚ
ತಸ್ಮಾತ್ಪುತ್ರ ಮುಖಂ ದೃಷ್ಟ್ವಾ ಪಶ್ಚಾದ್ಭವತಿ ಭಿಕ್ಷುಕಃ ||

ಎಂದು ಪೇಳ್ವ ವೇದೋಕ್ತಮಂ ಬಿಟ್ಟು ತಪಂಗೆಯ್ದೊಡೆ ನಿನಗೆ ದುರ್ಗತಿಯಪ್ಪುದರಿಂದೇನೆಂಬುದುಂ ನಿಶ್ಚಯಿಸಿ ಕನ್ಯಾರ್ಥಿಯಾಗಿ ಪೋಗಿ ರೇಣುಕೆಯಂ ಪರಿಗ್ರಹಿಸಿದರಂ.

ಅತ್ತಲ್ ಧನ್ವಂತರಿಚರಂ ವಿಶ್ವಾನುಲೋಮಚರಂಗೆ ಮಹಾತಪಸ್ವಿಯ ದೃಢಚಿತ್ತಮುಂ

ವಿಚಳಳಮಾಯ್ತು, ಈ ಸಮ್ಯಕ್ತ್ವವಿಲ್ಲದವರ ಚಾರಿತ್ರ್ಯಮಧಿಷ್ಠಾನವಿಲ್ಲದ ಗೋಪುರದಂತೆ ಕೆಡುವುದೆಂದು ಪೇಳಿ ಪೋಗುತ್ತಿರಲತ್ತ ರತ್ನಪುರಾಧಿಪಂ ಪದ್ಮರಾಜನೆಂಬರಸಂ ಬೇಂಟೆಗೆಯ್ದಿ ಒಂದು ಮೃಗದ ಬೆನ್ನೊಳೆ ಒಂದು ಪರ್ವತದ ಮಹಾಗಹ್ವರಮಂ ಪುಗಲಲ್ಲಿ ಅತ್ಯಂತ ಪ್ರಕಾಶವಾದ ದೀಪ್ತ ತಪೋಬುದ್ಧಿಯುಳ್ಳ ಭಾಸ್ಕರಯೋಗಿಗಳ್ ನಿಂದಿರ್ದರವರಂ ಕಂಡಾಶ್ಚರ್ಯದಿಂದೆರಗಿ ಎಲೆ ಸ್ವಾಮಿ ನಿಮ್ಮಂತಪ್ಪ ದೇಹದೀಪ್ತಿಯುಳ್ಳರೀ ಮರ್ತ್ಯರೊಳುಂಟೊ ಪೇಳಿಮೆನೆ ನಮ್ಮ ದೇಹಮೇನು ಚಂಪಾಪುರದೊಳುದಿಸಿದ ಶ್ರೀಮದ್ ವಾಸುಪೂಜ್ಯರೆಂಬ ತೀರ್ಥಂಕರಪರಮದೇವರ್ ಕೇವಲಜ್ಞಾನಾರ್ಕರೊಪ್ಪುತಿರ್ಪರ್. ಅವರ್ಗಂ ನಮಗಂ ಮೇರು ಸರ್ಷಪ ನ್ಯಾಯಮಪ್ಪುದೆನೆ ಭಕ್ತಿ ಪುಟ್ಟಿಯವರ್ಗಂ ವಂದಿಸಿ ಬಂದು ವಾಸುಪೂಜ್ಯಸ್ವಾಮಿಯಂ ಕಾಣ್ಬನ್ನೆಗಂ ಆಹಾರನಿವೃತ್ತಿಯೆಂದು ಭೇರಿಯಂ ಪೊಯಿಸಿ ಚತುರಂಗಂಬೆರಸು ಪೋಗುವನಂ ಕಂಡಿವನಂ ತಿರುಗಿಸಲೆಂದಾ ದೇವರ್ಕಳ್ ಉತ್ಪಾತಂಗಳಂ ತೋರಿದೊಡಾತಂ ಶಂಕಿಸದೆ ಪೋಗುತ್ತಿರೆ ಮಂತ್ರಿನಿಯೋಗಿಗಳಾರದೆ ಪೇಳಿದೊಡಂ ಪೋಗುತ್ತಿರಲತಿವೃಷ್ಟಿಯಿಂ ಬಲವೆಲ್ಲಂ ಕೆಸರೊಳ್ ಮುಳುಗೆ ತಾನೇರಿದಾನೆ ಪಜ್ಜೆಯಂ ತೆಗೆಯದೆ ಪಿಂದೆ ಸಾರ್ವುದದಂ ವಾಸುಪೂಜ್ಯಾಯ ನಮಃ ಎಂದು ಮುಂದಣ್ಗೆ ನೂಂಕುತಿರ್ಪುದುಮವನಂ ತಿರುಗಿಸಲಾರದೆ ದೃಢವ್ರತಕ್ಕೆ ಮೆಚ್ಚಿ ಸಮತಳಮಾಗೆ ಮಾರ್ಗಮಂ ಮಾಡಿ ತಂತಮ್ಮ ನಿಜಸ್ವರೂಪದಿಂ ಪದ್ಮರಾಜನಂ ಪೂಜಿಸಿಯಾತನೊಡನೆ ಸಮವಸರಣಮನೆಯ್ದಿ ದೇವಾದಿದೇವನಂ ವಂದಿಸಿ ಧರ್ಮಸ್ವರೂಪಮಂ ಕೇಳ್ದು ವಿಶ್ವಾನುಲೋಪಚರದೇವಂ ಸಮ್ಯಕ್ತ್ವಮಂ ಕೈಕೊಳೆ ಈರ್ವರ್ ದೇವರುಂ ತಮ್ಮ ಲೋಕಮನೈದುವಾಗಳ್ ರಾಜಗೃಹಪಟ್ಟಣದ ಶ್ಮಶಾನಭೂಮಿಯೊಳ್ ರಾತ್ರಿ ಪ್ರತಿಮೆಯೊಳಿರ್ದ ರಾಜಶ್ರೇಷ್ಠಿ ಜಿನದತ್ತನೆಂಬ ಗೃಹಿಯಂ ಕಂಡಿವನಂ ಚಲಿಸುವಮೆಂದು ಅನೇಕೋಪಸರ್ಗಂ ಮಾಡಿದೊಡಂ ಚಿತ್ತಚಲನಮಾಗದಿರೆ ಬಿಟ್ಟು ಈರ್ವರುಂ ಮಾರ್ಗಸ್ಥರಾಗಿ ಪೋಗುತ್ತುಮೊರ್ವ ಈ ನಿಂದಿರ್ಪನಾರೆನೆ ಜಿನದತ್ತನೀತಂ ಮರುಳಂ ಇವನಿಲ್ಲಿ ತಪಂಗೆಯ್ವಂ ಇವನ ಮಗಂ ಸತ್ತಂ ಮನೆಯ ಸರ್ವಸ್ವಮಂ ಈತನ ಪೆಂಡತಿಯಂ ಈ ಪೂರ್ವರಾತ್ರಿಯೊಳರಸಂ ಕವರ್ದುಕೊಂಡಂ. ಈತನದಂ ವಿಚಾರಿಸದಿರ್ಪ ನಿರ್ಭಾಗ್ಯನೆಂದಾಡಿದಾಗ್ಯು ಅಚಲಿತನಾಗಿರ್ದೊಡಂ ಮೆಚ್ಚಿ ಆತನ ಯೋಗಾವಸಾನಂಬರಮಿರ್ದಾತಂಗೆ ಬಹುರೂಪಿಣಿಯನಾಕಾಶಗಾಮಿನಿ ವಿದ್ಯಮಂ ಕೊಟ್ಟು ಪೂಜಿಸಿ ತಮ್ಮ ದೇವಲೋಕಕ್ಕೆ ಪೋದರ್. ಇತ್ತಲಾ ವಿದ್ಯಮಂ ಕಲಿಯಲೆಂದು ವರಸೇನನೆಂಬ ಪುಷ್ಪವಟು ಆ ಜಿನದತ್ತನ ದೇವತಾರ್ಚನೆಗೆ ಪುಷ್ಪಂಗಳಂ ತರುತ್ತುಂ ಪನ್ನೆರಡು ವರುಷಂಬರಂ ಶುಶ್ರೂಷಾದಿಗಳಂ ಮಾಡುತ್ತಿರಲವಂ ಪ್ರಸನ್ನತೆಯಿಂದುಪದೇಶಂಗೊಟ್ಟಂ ಎಂತೆಂದೊಡೊಂದು ಪರೇತ ಭೂಮಿಯ ವಟವೃಕ್ಷದ ಈಶಾನದಿಶಾಶಾಖೆಯೊಳ್ ನೂರೆಂಟು ಕಾಲ ದರ್ಭೆಯ ನೆಲಹಂ ಕಟ್ಟಿ ಕೆಳಗೆ ಬತ್ತೀಸಾಯುಧಂಗಳಂ ಜಾಜ್ವಲ್ಯಮಾನಂಗಳಂ ಊರ್ಧ್ವಮುಖಮಾಗಿರಿಸಿ ತಾನುಂ ನೆಲವಿನೊಳ್ ಕುಳಿತು ಅರ್ಚನಾಪೂರ್ವಕಂ ಮಂತ್ರಮಂ ಜಪಿಸುತ್ತಂ ಏಕ ಸಮಯದೊಳ್ ನೂರೆಂಟುಕಾಲಂ ಛೇದಿಸೆ ಭೂಪತನದೊಳೆ ಅಂಗುಷ್ಠಪ್ರಸವೆ ಮೊದಲಾದ ದೇವತೆಗಳ್ ಬೆಸಗೊಳ್ವರೆಂದು

ಜಿನದತ್ತಂ ಪುಷ್ಪವಟುವಿಂಗುಪದೇಶಂಗೈದಾ ಮಂತ್ರೋಪದೇಶಮಂ ಮಾಡಲಾ ಪ್ರಕಾರದೊಳೆ ಮಾಡಿ ನೆಲಹನೆಲ್ಲಂ ಕುಯ್ಯಲಂಜುತ್ತುಂ ಒಂದೊಂದು ಕಾಲಂ ಕೊಯ್ಯುತ್ತುಂ ಕಟ್ಟುತ್ತುಂ ಇರಲಾ ಪುರದರಸಿನರಸಿ ವನವಿಹಾರಕ್ಕೆ ಪೋಗುತ್ತಿರಲ್ ಸೌಂದರಿಯೆಂಬ ವೇಶ್ಯಾಸ್ತ್ರೀಯುಂ ಅರಸಿಯ ಕೊರಳೊಳಿರ್ದ ಸೂರ್ಯಪ್ರಭಾನಾಮಪದಕಮಂ ಕಂಡು ಅತ್ಯಾಸಕ್ತೆಯಾಗಿ ತನ್ನ ಬೊಜಗಂ ವಿಜಯಾಪುರದರಸನ ಮಗಂ ಲಲಿತಾಂಗನಂ ದುಷ್ಟಬುದ್ಧಿಗೆ ನಿರ್ಧಾಟಿಸಿದೊಡಾತಂ ಕಳ್ಳರೊಳ್ ಸೇರಿ ಅಂಜನಘುಟಿಕಾದಿಗಳಿಂ ಚೋರಶಿಖಾಮಣಿಯಾಗಿರ್ಪುದನರಿದಾ ಸೂಳೆ ತನ್ನಭಿಪ್ರಾಯಮಂ ಪೇಳೆ ಲಲಿತಾಂಗನಸಾಧ್ಯಮೆಂದೊಡಾ ಸೂಳೆ ತನ್ನಂ ಬಿಡುವೆನೆಂಬುದುಂ ಸಮರಾತ್ರಿಯೊಳ್ ಅದೃಶ್ಯದಿನರಮನೆಯನ್ನೈದಿ ಕಟ್ವಾಂಗ ನಿಕಟದೊಳ್ ನೇಲುತಿರ್ದ ಪದಕಮಂ ಕೊಂಡು ಬರ್ಪ ಸಮಯದೊಳದರ ಪ್ರಭಾವಕ್ಕೆ ದ್ವಾರಪಾಲರ್ ಕಲಕಲರವಮಂ ಮಾಡಲೋಡಿ ಬಂದು ಪಟ್ಟಣಮಂ ಪೊರಮಡೆ ಬೆನ್ನಟ್ಟಿ ಬರುವ ರಾಜದೂತರಂ ಕಂಡು ಪದಕಮನೀಡಾಡಿ ಪೋಗುವಲ್ಲಿ ಪಿತೃವನದಾಲದಮರದ ಮೇಲೆ ದೀಪಮಂ ಕಂಡಲ್ಲಿಗೈದಿ ಬಂದು ನೆಲಹಿನೊಳಿರ್ದ ಪುಷ್ಪವಟುವಂ ನೀನಾರೀ ವ್ಯವಸಾಯಮೇನೆಂದು ಬೆಸಗೊಳಲಾತಂ ತನ್ನ ನಿಜವೃತ್ತಾಂತಮಂ ಸವಿಸ್ತರಂ ಪೇಳೆ ಕೇಳ್ದು ಜಿನದತ್ತಂ ಸೂಕ್ಷ್ಮಪ್ರಾಣಿಯಂ ಕೊಲ್ವನಲ್ಲೀತನಂ ಕೊಲ್ಲನದರಿಂದೀ ಶಸ್ತ್ರಂಗಳಿಂ ಪ್ರಾಣಭಯಮಿಲ್ಲೆಂದಂತರಂಗದೊಳ್ ದೃಢನಾಗಿ ಆತನಾಗ್ರಹದಿಂದಿಳುಹಿಸಿ ತದುಪದೇಶದಿಂದೇಕಚಿತ್ತದಿಂ ಪಂಚಮಂತ್ರಮಂ ಜಪಿಸುತ್ತೆ ನೂರೆಂಟು ಕಾಲ ನೆಲಹಿನೊಳಿರ್ದೊಂದೆ ಸಮಯದೊಳೆ ನೆಲವಿನ ಕಾಲೆಲ್ಲಮಂ ಕೊಯ್ಯೆ ಆಯುಧಾಗ್ರಮಂ ಮುಟ್ಟುವ ಸಮಯದೊಳೆ ದೇವತೆಗಳಾಂತು ಬೆಸನಂ ಬೇಡೆ ಜಿನದತ್ತನೆಲ್ಲಿರ್ಪನಲ್ಲಿಗೊಯ್ವುದೆನೆ ಆ ಕ್ಷಣದೊಳೆ ಮಹಾಮೇರುಪರ್ವತಾಗ್ರದ ಭದ್ರಶಾಲವನದ ಚೈತ್ಯಾಲಯದ ಮುಖಮಂಟಪದೊಳಿಳುಹಿದೊಡಲ್ಲಿರ್ದ ಚಾರಣಪರಮೇಷ್ಠಿಗಳಿಂ ದೀಕ್ಷೆಯಂ ಕೈಕೊಂಡು ಉಗ್ರೋಗ್ರತಪದಿಂ ಕೇವಲಜ್ಞಾನಿಯಾಗಿ ಮೋಕ್ಷಲಕ್ಷ್ಮಿಯಂ ಕೈಕೊಂಡಂ ಅವರ ಪರಿನಿರ್ವಾಣಕಲ್ಯಾಣಕ್ಕೆ ಶತಮಖಾದಿ ದೇವರ್ಕಳೆಲ್ಲಂ ಬಂದು ತತ್ಕಲ್ಯಾಣಪೂಜೆಯಂ ಮಾಡಿ ಆನಂದನೃತ್ಯಮನಾಡಿದರ್ ಎಂಬೀ ಶ್ರುತದ ಕಥೆಯನೆಲ್ಲರುಂ ಪೇಳ್ವರೆಂದು ಕ್ಷತ್ರಚೂಡಾಮಣಿ ಜೀವಂಧರಂಗೆ ಸತ್ಯಸಾಗರಮಂತ್ರಿ ಪೇಳ್ದು ಮತ್ತಂ ಅನುಭವಮನಿಂತೆಂದಂ.

ನೀಮುಮಾಮುಂ ಕುಮಾರಕಾಲದೊಳೋರಗೆಯವರಂ ಕೂಡಿಕೊಂಡುದ್ಯಾನಕ್ಕೆ ಪೋಗಲಲ್ಲಿ ಮಕ್ಕಳಾಟಕ್ಕೆ ಹುಡುಗರೆಲ್ಲರೊಂದು ನಾಯಂ ಕೊಲುತ್ತಟ್ಟಿಬರೆ ಅದು ಬಾವಿಯೊಳ್ ಬಿಳ್ದು ಕಂಠಗತಪ್ರಾಣವಾಗಿಪ್ಪಿನಂ ನೀವುಂ ಕಂಡದಂ ತೆಗೆದು ಧರ್ಮೋಪದೇಶಮಂ ಪೇಳಿ ಪಂಚಮಂತ್ರಮನದರ ಕಿವಿಯೊಳ್ ಪೇಳೆ ಸತ್ತು ಸ್ವರ್ಗದೊಳ್ ದೇವನಾಗಿ ನಾಮುಂ ವನವಿಹಾರಮಂ ಮಾಡಿ ಪುರಮಂ ಪುಗುವಾಗಲಾ ದೇವನವಧಿಯಿಂದರಿದು ಬಂದು ದಿವ್ಯಗಂಧಮಾಲ್ಯವಸ್ತ್ರಾಲಂಕಾರಂಗಳಿಂ ಪೂಜಿಸಿ ರತ್ನಹಾರಮನಿತ್ತು ಪೋದನಾಹಾರಂ ನಿನ್ನ ಕೊರಳೊಳ್ ಮೆರೆವುದಿದನನುಭವಂ ಎಂದಿಂತು ದೃಷ್ಟಶ್ರುತಾನುಭೂತಮಂ ಪೇಳಿ

ಜೀವತ್ವಮಂ ಸದ್ಧರ್ಮಮಂ ಪೇಳ್ದೊಡೆಲ್ಲಮಂ ನಂಬಿ ಸದ್ಧರ್ಮಮಂ ಕೈಕೊಂಡೊಡೆ ಜೀವಂಧರಮಹಾರಾಜಂ ವೈರಾಗ್ಯಪರನಾಗಿ ನೂರ್ವರರಸುಗಳುಂ ದಿಜವ್ರಂದಂ ಮೊದಲಾಗಿ ಸಮವಸರಣಮನೆಯ್ದಿ ತ್ರಿಲೋಕಾಧೀಶ್ವರಾರ್ಚಿತ ಶ್ರೀ ವೀರವರ್ಧಮಾನಸ್ವಾಮಿಗಳ ಶ್ರೀಪಾದಮೂಲದೊಳ್ ದೀಕ್ಷೆಯಂ ಕೈಕೊಂಡಂ

ಅಂತಾ ವಾರ್ತೆಯಂ ರಾಜಗೃಹಾಧಿಪನಪ್ಪ ಶ್ರೇಣಿಕಮಹಾರಾಜಂ ಕೇಳ್ದು ತಾನುಂ ವರ್ಧಮಾನತೀರ್ಥಂಕರ ದರ್ಶನಕ್ಕೆ ಪೋಗಲೆಂದು ಪ್ರಯಾಣಂ ಮಾಳ್ಪಾಗಳ್ ಜಠರಾಗ್ನಿ ಮೊದಲಾದ ಭಾಗವತರ್ ಬಂದು ನೀಂ ಜೈನಾವಾಸಕ್ಕೆ ಪೋಗಲಾಗದು, ಪೋದವರ್ ಮರಳಿ ಬಪ್ಪುದಿಲ್ಲ. ಗೌತಮಗ್ರಾಮದ ಇಂದ್ರಭೂತಿ ವಾಯುಭೂತಿ ಅಗ್ನಿಭೂತಿಗಳ್ ಮೊದಲಾಗೆ ಬ್ರಾಹ್ಮಣರ್ ಪೋದವರುಂ ರಾಜಪುರಿಯ ಜೀವಂಧರಮಹಾರಾಜನ ಕೂಡೆ ಪೋದ ಷಣ್ಮತಸ್ಥರುಂ ತಿರುಗಲಿಲ್ಲಾದ್ದರಿಂದ ಪೋಗಲ್ಬಾರದೆಂದು ನಿಲಿಸೆ ನಿಂದು ಚೇಳಿನಿಮಹಾದೇವಿಯ ಸಮ್ಯಕ್ತ್ವಶೀಲಗುಣಕ್ಕೆ ಮೆಚ್ಚಿಯನುರಾಗದಿಂದಿಪ್ಪುದುಂ ಚೇಳಿನಿಮಹಾದೇವಿಗೆ ಗರ್ಭಮಾಗಿ ಕ್ರಮದಿಂ ಗಜಕುಮಾರನುಂ ವಾರಿಷೇಣಕುಮಾರನುಂ ಕುಣಿಕನುಮೆಂಬ ಮೂವರ್ ಮಕ್ಕಳುಂ ಪುಟ್ಟಿ ಬೆಳೆಯಲೊಂದುದಿನಂ ಧರ್ಮರುಚಿಗಳ್ ಮೊದಲಾಗಿ ಮೂವರ್ ತಪೋಧನರ್ ಮಾಸೋಪವಾಸದ ಪಾರಣೆಯಂ ಮಾಡಲೆಂದು ಬಾವಲಿಯಿಟ್ಟು ರಾಜವೀದಿಯೊಳ್ ಬರುತ್ತಿರಲರಸನುಂ ಚೇಳಿನಿಯುಂ ಬಂದು ನಿಲಿಸಲೆಂದು ಶುಚಿರ್ಭೂತರಾಗಿ ಅರಮನೆಯ ಬಾಗಿಲೊಳಿರ್ದವರಂ ತಡೆದು ತ್ರಿಗುಪ್ತಿಭ್ಯೋ ನಮಃ ಎಂದು ಹಸ್ತೋದಕಮನೆರೆಯಲವರಂತರಾಯಮಾಗಿ ಪೋಗಲಿದೇನುಕಾರಣಮೆಂದವರಂ ಬೆಸಗೊಳಲ್ ಚೇಳಿನಿಯುಂ ಪುರಜನ ಪರಿಜನಮುಂ ಸಹಿತ ವನಮನೆಯ್ದಿ ಪ್ರತ್ಯಾಖ್ಯಾನಂಗೊಂಡು ಯೋಗದೊಳಿರ್ದ ಮುನೀಶ್ವರರಂ ವಂದಿಸಿ 'ಎಲೆ ಸ್ವಾಮಿಗಳಿರಾ ನಿಮಗೆ ಭಿಕ್ಷೆಗೆ ವಿಘ್ನಮಾದಕಾರಣಮಾವುದದಂ ಬೆಸಸಿಮೆ'ನೆ ತಪಸ್ವಿಗಳೆಂದರ್ 'ಎಲೆ ಭವ್ಯೋತ್ತಮಾ ನೀನು ತ್ರಿಗುಪ್ತಿಯುಳ್ಳರೆಂದೆ ಎಮಗೊಂದೊಂದು ಗುಪ್ತಿಹೀನಮಾಗಿರ್ದುದರಿಂದಿಲ್ಲದ ಗುಣಂಗಳಂ ಒಡಂಬಡೆ ನಮ್ಮ ಸಂಯಮಕ್ಕೂನಮಪ್ಪುದರಿಂದಂತರಾಯಮಾಗೆ ಬಂದೆವೆನಲ್ ಶ್ರೇಣಿಕಂ ಅದೆಂತೆಂದು ಬೆಸಗೊಳೆ ಧರ್ಮಘೋಷಮುನಿಪತಿಗಳ್ ಇಂತೆಂದರ್.

ಆರ್ಯಾಖಂಡದ ದಂತಿಪುರದೊಳ್ ನಾವುಂ ರಾಜ್ಯವಾಳುತ್ತಿರ್ದು ಸೂರ್ಯಗ್ರಹಣದಿಂ ಪಗಲುಂ ರಾತ್ರಿಯಾಗಿ ತೋರಿದೊಡದಂ ಕಂಡು ನಿರ್ವೇಗಮಾಗಿ ತಪಮಂ ಕೈಕೊಂಡು ಗ್ರಾಮೈಕರಾತ್ರೇ ನಗರದೊಳ್ ಪಂಚರಾತ್ರೇ ಆಟವ್ಯಂ ದಶರಾತ್ರೇ ಎಂದೀ ಕ್ರಮದೊಳ್ ವಿಹರಿಸುತ್ತುಂ ಕೌಶಂಬೀಪುರಕ್ಕೆ ಬಾವಲಿಯನಿಡೆಯಾ ಪುರದರಸಿನ ಮಂತ್ರಿ ಗರುಡವೇಗಂ ತನ್ನ ಪೆಂಡತಿ ಸುಮತಿವೆರಸಿ ನಿಲಿಸಿ ಕೈಯಂ ಶೋಧಿಸುವಲ್ಲಿ ಒಂದಗಳು ಭೂಮಿಗೆ ಬೀಳಲದನೀಕ್ಷಿಸುವಾಗಳಾ ಸುಮತಿಯುಂಗುಟಂ ಪೂರ್ವದ ಪೆಂಡತಿ ಲಕ್ಷ್ಮೀಮತಿಯುಂಗುಟಮಂ ಪೋಲ್ವುದೆಂಬ ಮನೋಭಾವಂ ಪುಟ್ಟಲ್ ಚರಿಗೆಯಂ ಬಿಟ್ಟು ಬಂದು ಪ್ರತ್ಯಾಖ್ಯಾನಗೊಂಡೆವದರಿಂ ಮನೋಗುಪ್ತಿಪೋದುದೆಂದರ್.

ಮತ್ತಂ ಜಿನಪಾಳರೆಂಬ ಮುನಿಗಳೆಂದರ್ ಭೂತಿಳಕವೆಂಬ ಪುರದೊಳ್ ಜಿನಪಾಳನೆಂಬರಸನಾತನರಸಿ ಧಾರಿಣಿಯೆಂಬಳ್ ಸಹಿತಂ ರಾಜ್ಯಂಗೆಯ್ಯುತ್ತಿರ್ದು ಮಹೋಳ್ಕಾಪಾತದರ್ಶನದಿಂ ನಿರ್ವೇದಮಾಗೆ ಸಮಾಧಿಗುಪ್ತಾಚಾರ್ಯರಿಂ ಸರ್ವಸಂಗ ಪರಿತ್ಯಾಗಂಗೆಯ್ದು ಪುರದ ಬಹಿರುದ್ಯಾನದ ಚೈತ್ಯಾಗಾರದ ಮುಂಗಡೆಯೊಳ್ ಧ್ಯಾನಮೌನಾನುಷ್ಠಾನದಿಂ ಕಾಯೋತ್ಸರ್ಗಮಿರ್ದಾಗಳ್ ಜಿನಪಾಲನ ಪುತ್ರಂ ಪ್ರಜಾಪಾಲನ ಮಗಳ್ ಸುಕಾಂತೆಯಂ ಕೌಶಂಬಿಪುರದ ಚಂಡಪ್ರದ್ಯೋತಂ ಬೇಡಿದೊಡೀಯದಿರೆ ಬಂದು ಪುರಮಂ ಮುತ್ತುವಾಗಳ್ ಪ್ರಜಾಫಾಲಂ ಮುನಿಗಳಂ ಬಂದಿಸಿ ಚಂಡಪ್ರದ್ಯೋತಂ ಬಪ್ಪನೆನಗಭಯಮಂ ದಯುಗೆಯ್ವುದೆಂದು ಪ್ರಣತನಪ್ಪುದುಂ ನಾಂ ಮೌನದೊಳಿರ್ದೊಡಾತನ ಪುಣ್ಯದೇವತೆಯಿಂ ಅಂಜವೇಡಾತನೆ ಬಿಟ್ಟುಪೋಪನೆಂಬ ಧ್ವನಿಯುಣ್ಮೆ ಕೇಳ್ದು ಪುರಮಂ ಪುಗಲಾ ಚಂಡಪ್ರದ್ಯೋತಂ ಬಂದು ಪ್ರಜಾಪಾಳನ ಸತ್ಯಮಂ ಸದ್ಧರ್ಮಾಚರಣೆಯಂ ಕೇಳ್ದು ಧರ್ಮಪ್ರಭುವಿನೊಳ್ ಕಾಳೆಗಂ ಸಲ್ಲದೆಂದು ಬಿಟ್ಟುಪೋಗೆ ಕೆಲವಾನುಂ ದಿವಸದಿಂ ಚಂಡಪ್ರದ್ಯೋತನ ಸತ್ಯಮಂ ದಯಾಗುಣಮನರಿದು ಪ್ರಜಾಪಾಲಂ ಬರಿಸಿ ಸುಕಾಂತೆಯಂ ಕುಡೆ ಮದುವೆಯಾಗಿರ್ದು ಒಂದುದಿನಂ ಸುಕಾಂತೆಗೆ ಎಲೆ ಸತಿ ನಿನ್ನ ಪಿತಂ ಧರ್ಮಶೀಲನಾದುದರಿಂ ಬಿಟ್ಟೆನಲ್ಲದೊಡೆ ಪುರಂ ಪಾಳಪ್ಪುದೆನೆ ಸುಕಾಂತೆಯಿಂದಳ್ ನಮ್ಮ ಗುರುಗಳೆಮ್ಮ ಪಿತಂಗಭಯವನಿತ್ತರೆನೆ 'ಆದೊಡವರ್ಗೆ ಸಮತಾಭಾವಮೆಂತಪ್ಪುದೆಂಬುದು'ಮವರ ವಚನಮಲ್ಲೆಂದು ತಂದೆಯ ಪುಣ್ಯದೇವತೆ ಅವರ ಮುಂದೆ ಪೇಳ್ದುದೆಂ'ಬುದು'ಮಾದೊಡಲ್ಲಿಗೆ ಪೋಗಿ ಕೇಳ್ವೆ'ವೆಂದು ಬಂದೆಮ್ಮನಾ ದಂಪತಿಗಳ್ ವಂದಿಸಿ ಸದ್ಧರ್ಮಶ್ರವಣಾನಂತರಂ 'ಎಲೆ ಸಂಯಮಿಯೆ ಪ್ರಜಾಪಾಲಂ ತನಗಭಯಮಂ ಬೇಡಿದೊಡಾತನ ಪುಣ್ಯದೇವತೆ ಅಭಯಮನಿತ್ತೆನೆಂದು ಪೇಳ್ದುದುಂಟೆ' ಎಂಬುದುಮಾಗಳ್ ಮೌನಂಗೊಳ್ಳದೆ ಉಂಟೆಂಬ ವಚನಂ ಬಾಯಿಂ ಪೊರಮಡಲಾಗಳೆಮಗೆ ವಚನಗುಪ್ತಿ ಪೋದುದವರು ಮುನಿಗಳ್ ಸಾಕ್ಷಿ ನುಡಿದರೆಂದು ಪೋದರೆಂಬುದುಂ ಶ್ರೇಣಿಕಂ ಮೂರನೆಯ ಮಣಿಮಾಲರೆಂಬರಂ ಭವದೀಯ ಕಥನಮಂ ದಯಗೆಯ್ವುದೆನಲವರಿಂತೆಂದರ್;

ಮಣಿಮಂಥವಿಷಯದೊಳ್ ಮಣಿಮಂಥ ನಗರದೊಳ್ ಮಣಿಮಾಲನೆಂಬರಸನ ಪೆಂಡತಿ ಗುಣಮಾಲೆಯವರ್ಗಂ ಮಣಿಶೇಖರನೆಂಬ ಮಗನಾಗೆ ರಾಜ್ಯಂಗೆಯ್ಯುತ್ತಿರಲೊಂದುದಿವಸಂ ಗುಣಮಾಲೆ ತನ್ನರಸನ ಕೆನ್ನೆಯೊಳೆರಡು ಬಿಳಿಯ ಕೂದಲಂ ತೋರಿದೊಡೆ ಯಮದೂತರ್ ಬಂದರೆಂದರಿದದುವೆ ನಿರ್ವೇಗವಾಗಿ ಮಣಿಶೇಖರಂಗೆ ರಾಜ್ಯಮನಿತ್ತು ಜ್ಞಾನಸಾಗರಮುಮುಕ್ಷುಗಳ ಸಮಕ್ಷದೊಳ್ ದೀಕ್ಷೆಗೊಂಡು ಪರಮಾಗಮದೊಳ್ ಪರಿಣತನಾಗಿ ದ್ವಾದಶವಿಧ ತಪಂಗೆಯ್ಯುತ್ತಿರ್ದುಜ್ಜಯಿನೀ ನಗರದ ಪೊರಗಣ ಮಸಣಭೂಮಿಯೊಳಿರಲಾಗಳ್ ಸೂರ್ಯಾಸ್ತಮಯಮಾಗಲ್ ಕಾಯೋತ್ಸರ್ಗಕ್ಕಾರದೆ ಮೃತಶಯ್ಯೆಯಿಂದಾಗಮೋಕ್ತದಿಂ ಪಟ್ಟಿರ್ದ ಕಾಷ್ಠದಂತೆ ಮಲಗಿ ಧ್ಯಾನಾರೂಢನಾಗಿರಲಾಗ ಕೃಷ್ಣಚತುರ್ದಶಿಯಾದುದರಿಂದೊರ್ವಂ ಕಾಪಾಲಿಕಸಿದ್ಧಂ ಭೇತಾಳವಿದ್ಯೆಯಂ ಸಾಧಿಸಲ್

ಬಂದು ನರಶಿರಖರ್ಪರದೊಳ್ ಪಾಲನೆರೆದದರೊಳಕ್ಕಿಯನಿಕ್ಕಿ ಅಂಕೋಲೆ ಬೇರಂ ಪುದುಗಿಸಿ ತಂದದನಡಲ್ ಬಲೆಯಂ ಪೂಡಲೆರಡು ಪೆಣಂಗಳ ತಲೆಯನೆಮ್ಮ್ ತಲೆಯೊಳ್ ಸಮನಿಸಿ ಮೇಲೆಯಾ ಖಪ್ಪರೆಯನಿಟ್ಟು ಇಂಧನಮಂ ಸಂಧಿಸಿಯಗ್ನಿಯಂ ಪೊತ್ತಿಸಿ ಬೇಯಿಸುತ್ತಿರಲಾ ಬೆಂಕಿಯಿಂ ಶಿರಸ್ಸಿನೊಂದು ಪಾರ್ಶ್ವಂ ಬೆಂದೊಡಾ ಉಪಸರ್ಗಮಂ ಮನದೊಳುಂ ಭಾವಿಸದೆ ಬಾಯಂ ಬಿಡದೆ ಸೈರಿಸುತ್ತಿರ್ದೊಡೆ ಭುಜಂ ಕಡುಕಾಯ್ದು ಬೇಯಲೆಮ್ಮ ಕೈ ಸಿಡಿದೊಲೆಯ ಮೇಲಣಖರ್ಪರಮಂ ಬಡಿಯೆ ಒಳಗಿರ್ದ ಪಾಲುಂ ಬೆಂಕಿಯೊಳೊಕ್ಕೊಡಾ ಸಿದ್ಧಂ ಬೆದರಿಪೋದನ್.

ಅನ್ನೆಗಂ ಸೂರ್ಯೋದಯಮಪ್ಪುದುಮಾ ಪೊಳಲ ಜಿನದತ್ತನೆಂಬ ವೈಶ್ಯಂ ಮುನಿಯಂ ಕೊಂಡುಪೋಗಿ ತನ್ನ ಗೃಹದ ಚೈತ್ಯಭವನದೊಳಿರಿಸಿ ಲಾಕ್ಷಾಮೂಲತೈಲದಿಂ ಬೆಂದ ಪುಣ್ಣಂ ಮಾಣಿಸಿದನದರಿಂ ಕಾಯಗುಪ್ತಿಯಿಲ್ಲದುದರಿಂ ಚರಿಗೆಯನುಳಿದವೆಂಬುದುಂ ಶ್ರೇಣಿಕಂ ಕೇಳ್ದವರ ಸೂಕ್ಷ್ಮ ವ್ರತಾಚಾರಕ್ಕೆ ಮೆಚ್ಚಿ ದೃಢಚಿತ್ತನಾಗಿ ವೇದಕ ಸಮ್ಯಕ್‌ದೃಷ್ಟಿಯಾಗಿ ಮುನಿಗಳ್ಗೆರಗಿ ಪುರಮಂ ಪೊಕ್ಕಿರ್ಪುದುಂ ಚೇಳಿನಿಮಹಾದೇವಿಗೆ ಹಲ ಬೀಹಲ ಜಿತಶತ್ರು ಮೇಘಕುಮಾರರೆಂಬ ಮಕ್ಕಳಾಗಲಂತು ಕುಮಾರರೆಣ್ಬರುಂ ಬಳೆದು ಜವ್ವನವಾಂತು ಸಕಲ ಕಲಾಕುಶಲರಾದರ್. ಮತ್ತೊಂದು ದಿನಂ ಮರುಳ್ಗಳಂ ನೋಳ್ಪೆನೆಂದಭಯಕುಮಾರನ್ ರುದ್ರಭೂಮಿಯನೈದಿ ಆ ರಾತ್ರಿಯಲ್ಲಿಯಿರೆ ಅಲ್ಲಿ ಆಲದಮರದ ಮೂಲದೊಳ್ ವಿದ್ಯಮಂ ಸಾಧಿಸುತ್ತ ವಿದ್ಯಾಧರಂ ಪೆರಗೆ ಪನ್ನೆರಡು ವರ್ಷದಿಂ ಸಾಧಿತವಿದ್ಯನಾಗದಿರ್ದವನಂ ಬೆಸಗೊಂಡಡಾ ಮಂತ್ರದೊಳ್ ಬಿಂದುವಿಸರ್ಗ ದೀರ್ಘಸ್ವರ ವ್ಯಂಜನ ಉದಾತ್ತಾನುದಾತ್ತ ಸ್ವರಿತ ಪ್ರಚಯಾದಿ ಮಾತ್ರಾಹೀನ ಸಂಧಿಗಳಂ ತಿರ್ದಿಕೊಡಲಾ ಷೋಡಶಾಕ್ಷರಿ ದಶಾಷ್ಟ ಪಂಚಾಕ್ಷರಿ ಜಪದಿಂದಾಗಲೆ ಆತಂಗೆ ಪೋಗಿರ್ದ ವಿದ್ಯವೆಲ್ಲಂ ಕೈಸಾರಲಾತಂ ಅಭಯಕುಮಾರನಂ ಪೂಜಿಸಿ ಕೆಲವು ವಿದ್ಯಮಂ ಕೊಟ್ಟು ಪೋಗೆ ಕುಮಾರಂ ಪೊಳಲಂ ಪೊಕ್ಕು ಸುಖಮಿರ್ದಂ.

ಮತ್ತೊಂದು ದಿವಸಂ ವಾರಿಷೇಣಕುಮಾರಂ ಶ್ರಾವಕವ್ರತಮಂ ಕೈಕೊಂಡಿಪ್ಪುದರಿಂ ಚತುರ್ದಶಿಯೊಳುಪವಾಸದಿಂ ಶ್ಮಶಾನದೊಳ್ ರಾತ್ರಿ ಪ್ರತಿಮಾಯೋಗದೊಳಿರೆ ನಿಶಾಚರರ ಮನೆಯೊಳನರ್ಘ್ಯವಸ್ತುವಂ ಕಳ್ದು ಬಪ್ಪಾಗಳ್ ಬಾಗಿಲ ಭಟರ್ ಕಂಡಟ್ಟಿಬರೆ ಬೇಳುವೆಯಿಂ ಬಾಗಿಲ ತೆರೆದೋಡಿಬರುತ್ತುಂ ಬೆನ್ನಟ್ಟಿ ಬರ್ಪ ತೀಕ್ಷ್ಣಪುರುಷರಂ ಕಂಡಾ ವಸ್ತುವಂ ವಾರಿಷೇಣಕುಮಾರನ ಮುಂದಿಕ್ಕಿ ಪೋಗಲಾ ಭಟರ್ ಸುತ್ತಿಮುತ್ತಿ ಅರಸಂಗೆ ಪೇಳ್ವುದುಂ ಶ್ರೇಣಿಕಂ ತನ್ನ ಮಗನೆಂಬುದರಿಯದೆ ಆತನಂ ಕೊಲವೇಳ್ವುದುಂ ಚಂಡಕರ್ಮಂ ಪೋಗಿ ಮಸೆದ ಬಾಳಿಂ ಶಿರಮನರಿಯಲ್ ಬಪ್ಪಾಗಳ್ ಆಹಾರ ಶರೀರ ನಿವೃತ್ತಿಯಂ ಕೈಕೊಂಡಿರ್ದ ಕುಮಾರನಂ ಪೊಯ್ಯಲಾಗಳ್ ದೇವತೆಗಳ್ ಬಾಳಂ ಪುಷ್ಪಮಾಲೆಯಂ ಮಾಡಿ ಕೊರಳಂ ಸುತ್ತಿಪ್ಪಂತೆ ಮಾಡೆ ಅನೇಕ ಸೂಳ್ ಪೊಯ್ದು ತದ್ವಾರ್ತೆಯಂ ಅರಸಂಗರುಪಲ್ ಶ್ರೇಣಿಕಂ ಬಂದು ಮಗನೆಂದರಿದು ಮೋಸದಿಂದಿಂತಾಯ್ತಿದಕ್ಕೆ ಕ್ಷಮೆಗೊಂಬುದೆಂದು ಕೈಯನೆತ್ತಿಸೆ ಈ

ಉಪಸರ್ಗಂ ಪಿಂಗೆ ದೀಕ್ಷೆಗೊಳ್ವೆನೆಂದಿರ್ದುದರಿಂ ರತಿಗೆ ಸಮಾನಮಪ್ಪ ಮೂವತ್ತಿರ್ವರ್ ಸತಿಯರಂ ಯುವರಾಜಪದಮಂ ತೃಣಸಮಾನಮಾಗೆ ತೊರೆದು ಸಮವಸೃತಿಯನೈದಿ ತ್ರಿಲೋಕ ಸ್ವಾಮಿಗಭಿವಂದಿಸಿ ಬಂದು ಪುಷ್ಪಗಿರಿಯೊಳಿರ್ದ ಸುರಧೇನರೆಂಬಾಚಾರ್ಯರಲ್ಲಿ ಬಾಹ್ಯಾಭ್ಯಂತರ ಪರಿಗ್ರಹಂಗಳಂ ತೊರೆದುಗ್ರೋಗ್ರ ತಪಂಗೆಯ್ದು ತ್ರಿದಂಡ ತ್ರಿಶಲ್ಯ ತ್ರಿಗಾರವರ್ಜಿತನುಂ ತ್ರಿಗುಪ್ತಿಗುಪ್ತನುಂ ತ್ರಯೋದಶವಿಧ ಚಾರಿತ್ರಸಂಪನ್ನನುಂ ಅಷ್ಟವಿಂಶತಿ ಮೂಲಗುಣಸಂಪನ್ನನುಂ ದಶಧರ್ಮಸಮೇತನುಂ ಚತುಷ್ಕಷಾಯ ರಹಿತನುಂ ರಾಗದ್ವೇಷಮೋಹವರ್ಜಿತನುಮಾಗಿ ದ್ವಾದಶವಿಧ ತಪದೊಳ್ ನರಳುತ್ತಿರ್ಪಿನಂ ಜಂಘಚಾರಣತ್ವಂ ದೊರೆಕೊಂಡು ಮಾಸೋಪವಾಸಾನಂತರಂ ಬಾಡಿಗೆ ಎತ್ತಿಗೆ ತೃಣಮನಿಕ್ಕಿ ಹೇರಿಕೊಳ್ವಂತೆ ಕಾಯಸ್ಥಿತಿ ನಿಮಿತ್ತಂ ಪಾರಣಾರ್ಥಂ ರಾಜಗೃಹಕ್ಕೆ ಬಾವಲಿಯನಿಕ್ಕೆ ಶಾಂಡಿಲ್ಯನೆಂಬ ಪುರೋಹಿತನ ಮಗಂ ವ್ಯಾಕರಣಾದಿ ಶಾಸ್ತ್ರದೊಳ್ ಕುಶಲನಪ್ಪ ಪುಷ್ಪದಾಡಂ ಬಾಲಸಖನಾದುದರಿಂ ನಿಲಿಸಿ ನಿರವದ್ಯಾಹಾರಮಂ ಸಪ್ತಗುಣ ನವವಿಧ ಪುಣ್ಯಸಮೇತಂ ಕುಡೆ ನಿರಂತರಾಯಮಾಗೆ ಪರಸಿ ಆಶ್ಚರ್ಯಪಂಚಕಮಾಗೆ ಆತಂಗೆ ಧರ್ಮೋಪದೇಶಂಗೆಯ್ಯೆ ಕೇಳುತ್ತೆ ಮುನಿಗಳೊಡನೆ ಅರಣ್ಯಕ್ಕಂ ಬಂದು ಪುರಾಣವೈರಾಗ್ಯದಿಂ ದೀಕ್ಷೆಯಂ ಬೇಡಿ ದ್ರವ್ಯಋಷಿಯಾಗಿ ತನ್ನ ಪೊಸ ಪೆಂಡತಿಯ ಮನೆಯಂ ನೆನೆಯುತ್ತಿಪ್ಪುದುಂ ವಾರಿಷೇಣಮುನೀಂದ್ರನವನಂ ಬಿಡದೆ ಸಮೀಪದೊಳೆ ಚರಿಯಿಸುತ್ತಿರಿಸಿ ಹಿಂದಣ ಮಹಾಪುರುಷರ್ ಮಹದೈಶ್ವರ್ಯಮಂ ತೊರೆದು ತಪಂಗೆಯ್ದುದಂ ಪೇಳುತ್ತುಂ ಈ ಮನುಷ್ಯಲೋಕದೊಳಪ್ಪ ಶತಸಹಸ್ರ ಲಕ್ಷ ಕೋಟಿ ಕಾಲಭವಂಗಳೊಳಪ್ಪ ಸುಖಮೆಲ್ಲಂ ಸ್ವರ್ಗದ ವಾಹನದೇವನರೆಗಳಿಗೆಯ ಸುಖ ಸಮಾನಮಿಲ್ಲ. ದ್ವಾದಶ ತಪದಿಂ ಧ್ಯಾನಮೌನಾದಿಗಳಿಂ ಅನಂತಸುಖಂ ದೊರೆಕೊಳ್ಗುಮೆಂದು ದ್ವಾದಶಾನುಪ್ರೇಕ್ಷಾಭಾವನೆಯಂ ಪೇಳುತ್ತುಮಿರೆ ಒಡೆದ ದೋಣಿಯೊಳ್ ಪೊಯ್ದ ನೀರಂತೆ ನಿಲ್ಲದೊಡಂ, ಗಿಳಿಯಂ ಪಂಜರದೊಳಿಕ್ಕಿ ಸಾಕುವಂತೆ ಪನ್ನೆರಡು ವರುಷಂಬರಂ ಇರ್ದೊಂದುದಿನಂ ಸಮವಸರಣಕ್ಕೆ ವಂದನಾನಿಮಿತ್ತಂ ಪೋಗಿ ಕೆಳಗಣ ಸೋಪಾನದ ಪಾದಲೇಪೌಷಧಿಯಂ ಮೆಟ್ಟಿ ಮೇಗಣ ಧೂಳಿಸಾಲಮಂ ಪುಗಲಾ ಪುಷ್ಪದಾಡಂ ಮೆಟ್ಟದಿರ್ದು ರಾಜಗೃಹಪುರಕ್ಕೆ ಬಂದು ಊರ ಮುಂದಣ ವೃಕ್ಷವೇದಿಕಾಗ್ರದೊಳಿರ್ದ ಆರ್ಯಕಿಯರಂ ಕಂಡೊಡಾತನ ಮನಮನರಿದು ಕುಳ್ಳಿರಿಸಿ ಕಾರಿದಶನಮನುಂಡ ಕಥೆಯಾದಿಗಳಂ ಪೇಳುತ್ತುಮಿರಲಿತ್ತ ಲೋಕೇಶ್ವರಂಗಾನತನಾಗಿ ವಾರಿಷೇಣರ್ ಬಂದು ಪುಷ್ಪದಾಡನಂ ಕಾಣದೆ ಅವಧಿಯಿನರಿದಾ ಪುರಮಂ ಪೊಕ್ಕಾತನನೊಡಗೊಂಡು ತಮ್ಮರಮನೆಯಂ ಪುಗೆ ಚೇಳಿನಿಮಹಾದೇವಿ ಕಂಡು ಭಿಕ್ಷಾಕಾಲಾತಿಕ್ರಮಣಮಾಗೆ ಬಂದ ಋಷಿಗಳ ಪರೀಕ್ಷಾರ್ಥಂ ಸರಾಗಾಸನ ವಿರಾಗಾಸನಮನಿಕ್ಕೆ ವಿರಾಗಾಸದೊಳ್ ಪ್ರವಿಷ್ಟರಾಗಿ ನಿನ್ನ ಸೊಸೆವಿರಂ ಪುಷ್ಪದಾಡನ ಪೆಂಡತಿಯಂ ಸಹಾ ಸರ್ವಾಭರಣಭೂಷಿತೆಯರಂ ಮಾಡಿ ಬರಿಸುವುದೆಂದು ಬರಿಸಿ ಪುಷ್ಪದಾಡಂಗೆ ತೋರಿ ಲಜ್ಜಿಸಿ ಆತನಜ್ಞಾನತೆಯಂ ಕಳೆದು ಸಂಸಾರ ಶರೀರ ಭೋಗ ವೈರಾಗ್ಯಮಂ ಸ್ಥಿತಿಕರಣಂ ಮಾಡಿ ಸ್ವರ್ಗಾಪವರ್ಗ ಸುಖ ಸಂಪಾದಕನಂ ಮಾಡಿರುತ್ತಿರಲ್

ಶ್ರೇಣಿಕಮಹಾರಾಜನೊಂದು ದಿವಸಂ ಸರ್ವಾವಸರಮೆಂಬೋಲಗಂಗೊಟ್ಟಿರಲಾಗಳ್ ಋಷಿನಿವೇದಕನಪ್ಪ ವನಪಾಲಕನಕಾಲ ಪುಷ್ಪಫಲಾದಿಗಳಂ ಕೊಂಡುಬಂದಿರಿಸಿ ಸಾಷ್ಟಾಂಗಪ್ರಣತನಾಗಿ ದೇವಾ ಈ ನಗರದ ನೈರುತ್ಯ ದಿಗ್ಭಾಗದ ವಿಪುಲಾಚಲಪರ್ವತಶಿಖರಿಗೆ ಶ್ರೀ ವೀರವರ್ಧಮಾನ ತೀರ್ಥಂಕರರ ಸಮವಸರಣಂ ಬಂದು ನೆಲೆಗೊಂಡುದೆಂದು ಬಿನ್ನವಿಸೆ

ಶ್ರೇಣಿಕಂ ಲಲಾಟದೊಳ್ ಕರಪಲ್ಲವಕುಟ್ಮಲನಾಗಿ ನಮ್ರಮಸ್ತಕದಿಂ ಸಿಂಹಾಸನದಿನೆಳ್ದಾ ದೆಸೆಗೇಳಡಿಯಂ ನಡೆದು ಸಾಷ್ಟಾಂಗನಮಸ್ಕಾರಂಗೆಯ್ದು ವನಪಾಲಕಂಗಂಗಚಿತ್ತಮಂ ಕೊಟ್ಟಾನಂದಭೇರಿಯಂ ಪೊಯ್ಸಿ ಪುರಜನ ಪರಿಜನ ಪುತ್ರ ಕಲತ್ರಾದಿಗಳ್ವೆರಸು ಗಂಧಗಜಾರೂಢಂ ವಿಪುಲಾಚಲಮನೆಯ್ದಿ ದೂರೋತ್ಸಾರಿತ ರಾಜ ಚಿಹ್ನನಾಗಿ ಸಮವಸರಣಮಂ ಕಂಡು ವಿಂಶತಿಸಹಸ್ರ ಸೋಪಾನಮಂ ಕ್ಷಣಮಾತ್ರದಿಂದೇರಿ ಅಲ್ಲಲ್ಲಿಯ ಸೊಬಗನೀಕ್ಷಿಸುತ್ತ ಪೋಗಿ ಗಂಧಕುಟಿಯಂ ತ್ರಿಪ್ರದಕ್ಷಿಣಂಗೆಯ್ದು ದಿವ್ಯಾರ್ಚನೆಯಿಂದರ್ಚಿಸಿ ವಸ್ತುಗುಣ ರೂಪಸ್ತವಂಗಳಿಂ ಸ್ತುತಿಯಿಸಿ ಸಾಷ್ಟಾಂಗ ಪ್ರಣತನಾಗಿ ಗೌತಮಾದಿ ಋಷಿಸಮುದಾಯಮಂ ಪೂಜಿಸಿ ಪೊಡೆವಟ್ಟು ಪನ್ನೊಂದನೆಯ ಮನುಷ್ಯಕೋಷ್ಠದೊಳ್ ಕುಳ್ಳಿರ್ದು ಧರ್ಮಾಧರ್ಮಸ್ವರೂಪಮಂ ಸವಿಸ್ತರಂ ಕೇಳ್ದು ಶ್ರೋತೃಮುಖ್ಯನಾಗಿ ತದನಂತರಂ ಶ್ರೇಣಿಕಂ ತನ್ನ ಮುನ್ನಿನ ಭವ ಸಂಬಂಧಮಂ ಬೆಸಗೊಳೆ ಸರ್ವಜ್ಞಮುಖಕಮಲ ಸಂಜನಿತ ದಿವ್ಯಭಾಷಾಭಾಷಿತರುಂ ಗೌತಮಗಣನಾಥರುಂ ಈ ಜಂಬೂದ್ವೀಪದ ಭರತದಾರ್ಯಾಖಂಡದ ಸುರಕಾಂತ ದೇಶದ ಪ್ರತ್ಯಂತಪಟ್ಟಣದ ಸುಮಿತ್ರನೆಂಬರಸಂ ಸುಷೇಣನೆಂಬ ಪ್ರಧಾನನೊಳ್ ವೈರಮಾಗೆ ಬೇಂಟೆಯೋಗಿ ಮೃಗಂಗಳಂ ವಧಿಸಿ ಬಪ್ಪಾಗಳ್ ಸುಷೇಣಂ ಸುಮಿತ್ರನಂ ಬಾವಿಯೊಳ್ ಕೆಡೆನೂಂಕೆ ದುರ್ಧ್ಯಾನದಿಂ ಸತ್ತು ವಿಂಧ್ಯಮಲಯದ ಕುಟಜವನದಾ ಭೀರದೊಳ್ ಖದಿರಸಾಗರನೆಂಬ ಶಬರಮುಖ್ಯನಾಗಿಯರಣ್ಯದೊಳ್ ಬೇಂಟೆಬರುತ್ತಂ ಸಮಾಧಿಗುಪ್ತರೆಂಬ ಯೋಗೀಶ್ವರರಂ ಕಂಡು ಪೊಡಮಡೆಯವರ್ ಧರ್ಮಲಾಭಮಕ್ಕೆಂದು ಪರಸುವುದುಂ ಧರ್ಮಮೆಂಬುದೇನದರ ಲಾಭಮಾವುದೆಂದು ಕೇಳ್ವುದುಂ ಜವದಯೆಯಿಂ ಮಧು ಮದ್ಯ ಮಾಂಸಾದಿ ನಿವೃತ್ತಿಯೆ ಧರ್ಮಮೆಂಬುದದರಿಂ ಸ್ವರ್ಗಮೋಕ್ಷ ಸುಖಮಂ ಪಡೆವುದೆ ಲಾಭಮೆಂದೊಡೆ ಅಂತಾದೊಡಾ ಬಿಡಲಾರೆನೆಂದು ಪಶ್ಚಾತ್ತಾಪಂಬಡೆ ಮುನಿಗಳಾತನ ಚಿತ್ತವೃತ್ತಿಯನರಿದು 'ನೀಂ ಮುನ್ನೆ ಕಾಕಮಾಂಸಮಂ ಕೊಳ್ವೆಯಾ' ಎನೆ 'ನಾನರಿಯೆನೆ'ನಲು ಆದೊಡೀ ಜನ್ಮದೊಳ್ ತ್ರಿಕರಣ ಶುದ್ಧಿಯಿಂ ಕಾಕಮಾಂಸವರ್ಜನವ್ರತಮಂ ಕೈಕೊಳ್ವುದೆನೆ ಮಹಾಪ್ರಸಾದಮೆಂದಾ ವ್ರತಮಂ ಕೊಂಡು ಕೊಲೆಯುಂ ಪುಸಿಯುಂ ಕಳವುಂ ಪಾದರಮುಂ ಅತಿಕಾಂಕ್ಷೆಯುಂ ಎಂಬೀ ಪಂಚಮಹಾಪಾತಕಮಂ ತೊರೆವ ಪಂಚಾಣುವ್ರತಲಕ್ಷಣಮಂ ಕೇಳ್ದು ಮುನಿಗಳಂ ಬೀಳ್ಕೊಂಡು ಬಂದಾ ಕಾಗೆಯ ಮಾಂಸಮಂ ಕೊಳ್ಳದಿರುತ್ತಿರೆ ಕೆಲವು ದಿವಸಕ್ಕಾತನ ಶರೀರದೊಳ್ ವ್ಯಾಧಿ ಪುಟ್ಟಿ ನವೆಯುತ್ತಿರ್ದವಸಾನಕಾಲಮಾಗೆ ಚರಕವೈದ್ಯರ್ ಬಂದು ಕಾಕಮಾಂಸಭಕ್ಷಣದಿಂ ಮದ್ದನಿಕ್ಕಿ ಬದುಕಿಸುವೆವೆನೆ 'ಮುನಿಗಳಿತ್ತ ವ್ರತಮಂ ಬಿಡುವೆನಲ್ಲ ಪ್ರಾಣಮಂ ಬಿಡುವೆನೆಂ'ದೆಷ್ಟು ಬಗೆಯೊಳ್ ಪೇಳ್ದೊಡಂ ಕೊಳ್ಳದಿರೆ ಆತನ ಮೈದುನಂ

ಸಾರಸಪುರದ ನಾಯಕಂ ಸೂರವೀರಂ ನೋಡಲೆಂದು ಬರುತ್ತು ಮೊಂದಡವಿಯ ವಟತರುಮೂಲದೊಳೊರ್ವ ವ್ಯಂತರದೇವಸ್ತ್ರೀಯು ಶೋಕಂಗೆಯ್ಯುತ್ತಿರಲವಳಂ ಕಂಡು ನೀನಾರೇಂ ನಿಮಿತ್ತಂ ದುಃಖಿಸಿದಪೆ ಎಂಬುದುಂ ಆಕೆಯಿಂತೆಂದಳಾಂ ಯಕ್ಷಿಯೆಂ ವ್ಯಾಧಿಪೀಡಿತನಪ್ಪ ನಿನ್ನ ಮೈದುನಂ ಖದಿರಸಾಗರಂ ಕಾಕಮಾಂಸವಿರತಿವ್ರತಫಲದಿನೆನಗೆ ಪತಿಯಾಗೆ ದಿವ್ಯಸುಖಮಂ ಪಡೆಯಲಿರ್ದನಾತಂಗೆ ನೀಂ ಪೋಗಿ ಕಾಕಮಾಂಸಭಕ್ಷಣಂಗೆಯ್ಸಿ ನರಕದುಃಖಮನುಣ್ಬಂತು ಮಾಳ್ಪೆಯದರಿಂ ಶೋಕಿಸಿದಪೆ'ನೆನೆ ಅಂತಾದೊಡಾಂ ಮಾಣಿಸುನೆಂದು ಬಂದು ಖದಿರಸಾಗರನಂ ಕಂಡಾತನ ಮನಮಂ ನೋಡಲೆಂದು ನಾನಾಪ್ರಕಾರದಿಂ ಕಾಕಮಾಂಸಮಂ ಕೊಳ್ವುದೆಂದೊಡಂಬಡಿಸೆ ಪ್ರಾಣಂ ಪೋದೊಡೆ ಒಂದೆ ಭವದ ಕೇಡು ವ್ರತಂ ಕೆಟ್ಟೊಡೆ ಭವಭವದೊಳ್ ಕೇಡಪ್ಪುದರಿಂ ವ್ರತಮಂ ಬಿಟ್ಟಪೆನಲ್ಲೆಂದು ದೃಢಚಿತ್ತನಾಗಿರ್ಪಿನಮಾತನ ದೃಢಕ್ಕಂ ಮೆಚ್ಚಿ ತಾಂ ಬಪ್ಪಲ್ಲಿ ಯಕ್ಷಿಣಿ ಪೇಳ್ದ ವೃತ್ತಾಂತಮಂ ಸವಿಸ್ತರಂ ಪೇಳೆ ಪೂರ್ವದೊಳ್ ಮುನಿಪತಿಗಳ್ ಪೇಳ್ದ ವ್ರತಂಗಳೊಳ್ ಸಾಮಾನ್ಯಮಪ್ಪುದೊಂದು ವ್ರತದಿಂದಿಂತಾಗೆ ಅವರ್ ಪೇಳ್ದ ಅಣುಗುಣಶಿಕ್ಷಾವ್ರತಂಗಳಿಂದೆನಿತಾಗದಿಪ್ಪುದೆಂದು ಎಲ್ಲಾ ವ್ರತಂಗಳಂ ಕೊಂಡೆನೆಂದಾಹಾರ ಶರೀರ ನಿವೃತ್ತಿಗೆಯ್ದು ಮುನಿಗಳಂ ಭಾವಿಸುತ್ತಂ ಶರೀರಮಂ ಬಿಟ್ಟು ದಿವ್ಯಸುಖಮನೀವ ಸೌಧರ್ಮಕಲ್ಪಮೆಂಬ ಪ್ರಥಮ ಸ್ವರ್ಗದೊಳ್ ಮಹರ್ದಿಕದೇವನಾಗಲಿತ್ತ ಸೂರವೀರಂ ತನ್ನೂರ್ಗೆ ಪೋಪಾಗಲಾ ಯಕ್ಷೆಯಂ ಖದಿರಸಾಗರಚರಂ 'ನಿನಗೆ ಪತಿಯಾದನೇ' ಎಂದು ಕೇಳೆ 'ನೀಂ ಪೋಗಿ ಪೇಳ್ದುದಕ್ಕೆ ಸಂತೋಷಂಬಟ್ಟು ಅಣುಗುಣ ಶಿಕ್ಷಾವ್ರತಂಗಳೆಲ್ಲಮಂ ಕೊಂಡು ಸಮಾಧಿಯಿಂ ಅತ್ಯಂತ ಸುಖಮುಳ್ಳ ಸ್ವರ್ಗದೊಳ್ ಜನಿಸಿದನೆನಗಾಯ್ತಿಲ್ಲಮೆಂ'ದು ವ್ರತಮಹಾತ್ಮೆಯಂ ಪೇಳೆ ಆಶ್ಚರ್ಯದಿಂ ಸೂರವೀರಂ ಮುನಿಗಳ ಸಮಿಪಕ್ಕೆಯ್ದಿ ವ್ರತಂಗಳಂ ಕೊಂಡು ಸದ್ಗತಿಯಂ ಪಡೆದಂ.

ಆ ಸೌಧರ್ಮೇಂದ್ರಂ ಸಮುದ್ರೋಪಮಕಾಲಂ ದಿವ್ಯಭೋಗೋಪಭೋಗಂಗಳ ನುಂಡದರಶೇಷ ಕಿಂಚಿತ್ಸುಖದಿಂ ಬಂದು ಕೂಣಮೆಂಬ ಪುರದ ಕುಣಿಕನೆಂಬರಸಂಗಂ ಶ್ರೀಮತಿಯೆಂಬರಸಿಗಂ ನೀಂ ಶ್ರೇಣಿಕನಾಗಿ ಮಹಾಮಂಡಳಿಕಪದಮನಾಂತೆ ನಿಮ್ಮ ತಂದೆ ಕುಣಪಪುರದಿಂ ರಾಜಗೃಹಮಂ ಪೊಕ್ಕು ಉಪಶ್ರೇಣಿಕನೆಂಬ ಪೆಸರಾಗೆ ನಿನ್ನ ಬುದ್ಧಿಯಂ ಪರೀಕ್ಷಿಸಿ ಚಿಳಾತಿಪುತ್ರಂಗಂ ರಾಜ್ಯಮಂ ಕೊಡಲೆಂದು ನಿನ್ನಂ ಪುರದಿಂ ಪೊರಮಡಿಸೆ ಬಂದು ನಂದಿಗ್ರಾಮದ ಇಂದ್ರದತ್ತನೆಂಬ ಬ್ರಾಹ್ಮಣಂ ಕಂಡು ತಾನಿಪ್ಪ ವೇಳಾತಟಪುರಕ್ಕೊಡಗೊಂಡು ಪೋಗಿ ತನ್ನ ಮಗಳಂ ಕೊಟ್ಟಡಾ ನಂದಶ್ರೀಗಮಭಯಕುಮಾರಂ ಪುಟ್ಟಿ ಚೇಳಿನಿಯಂ ತಂದೊಡವಳ ಗರ್ಭದೊಳ್ ಮುನ್ನಿನ ಭವದ ಪ್ರಧಾನಂ ಸುಷೇಣಂ ನಿನ್ನಂ ಕೂಪದೊಳ್ ಕೆಡೆಯಿಸಿ ಭಯದಿಂ ಪೋಗಿ ತಾಪಸನಾಗಿರ್ದು ಮಾಸೋಪವಾಸದ ಪಾರಣೆಗೆ ಮೂರು ಬಾರಿಯ ಲಾಭಮಾದೊಡಂ ಸುಮಿತ್ರನ ಮೇಲೆ ಕ್ರೋಧಂ ಪುಟ್ಟಿ ವ್ಯಂತರನಾಗಿರ್ದು ಭವಾಂತರದಿಂ ಬಂದು ಕುಳಿಕಲಗ್ನದಲ್ಲಿ ಪುಟ್ಟಿದ ಕುಳಿಕನುಂ ವಾರಿಷೇಣ ಗಜಕುಮಾರಾದಿ ಪುತ್ರರಾಗಿರ್ದಪರ್.

ನೀನೀ ಜನ್ಮದೊಳೆ ಮಿಥ್ಯವಂ ಕೂಡಿ ಬಹ್ವಾರಂಭಪರಿಗ್ರಹದುತ್ಕೃಷ್ಟ ರೌದ್ರಧ್ಯಾನದಿಂದೇಳನೆಯ ನರಕಾಯುಷ್ಯಂ ಬದ್ಧಮಾಗಿರಲ್ ಅಧಿಗಮೋಪಶಮವೇದಕ ಸಮ್ಯಕ್ತ್ವಂ ದೊರೆಕೊಂಡುತ್ಕೃಷ್ಟದಿಂ ಕ್ಷಾಯಿಕ ಸಮ್ಯಗ್ದೃಷ್ಟಿಯಾಗಿ ದರ್ಶನವಿಶುದ್ಧಿ ಮೊದಲಾದ ತ್ರೈಲೋಕ್ಯ ಕ್ಷೋಭಾ ತೀರ್ಥಕರ ಪುಣ್ಯಮಂ ಕಟ್ಟೆ ನರಕಾಯುಷ್ಯಮೆಲ್ಲಂ ಸಮೆದು ಪೋಗೆ ಪ್ರಥಮನರಕದ ಜಘನ್ಯಾಯುಷ್ಯದಿಂ ಪೋಗಿ ಪರಸ್ಪರೋದೀರಿತ ದುಃಖಮಿಲ್ಲದಿರ್ದು ಈ ಭರತದೊಳ್ ಮುಂದೆ ಬಪ್ಪುತ್ಸರ್ಪಿಣಿಕಾಲದ ಮಹಾಪದ್ಮರೆಂಬ ಪ್ರಥಮ ತೀರ್ಥಕರನಪ್ಪೆಯೆಂದು ನಿರೂಪಿಸಲ್ ಅತ್ಯಂತ ಹರ್ಷೋತ್ಕರಚಿತ್ತನಾಗಿ ಪೊಡೆವಟ್ಟಿರಲಭಯಕುಮಾರನ ಭವಮಂ ಬೆಸಗೊಳಲಿಂತೆದರ್.

ಈ ಭರತಕ್ಷೇತ್ರದಾರ್ಯಾಖಂಡದ ಹಸ್ತಿನಾಪುರದ ಬ್ರಾಹ್ಮಣಪುತ್ರಂ ವಸುಭೂತಿಯೆಂಬಂ ದೈವಪಾಷಂಡಿ ತೀರ್ಥ ಜಾತಿ ಲೋಕ ಮೂಢ ವ್ಯಾಕುಲಿತ ಕೃತಮತಿ ತತ್ವಕಂಪಿತನತದಾಚರಣಮನೆನಿಸಿರ್ದು ವೇದಾಧ್ಯಯನ ನಿಮಿತ್ತಂ ದೇಶಾಂತರಂ ಪೋಗುತ್ತುಮೊರ್ವನಾರ್ಹತವಿಪ್ರಂ ವಿಪುಲಮತಿಯೆಂಬನಂ ಕಂಡೋರೋರ್ವರ್ಗಮತಿ ಸ್ನೇಹಮಾಗೆ ಈರ್ವರುಂ ಪೋಗುತ್ತುಂ ಬಟ್ಟೆಯೊಳೊಂದು ಕಲ್ಲ ಪುಂಜದ ಕೆಲದೊಳಿರ್ದ ಚಲದಲವೃಕ್ಷಮಂ ಕಂಡು ಪ್ರದಕ್ಷಿಣಂಗೆಯ್ದು ನುತಿಸುತ್ತೆ ಪೊಡೆವಟ್ಟು ಕೆಲದೊಳಿರ್ದ ತುಲಸಿಯಂ ಕಿವಿಯೊಳ್ ಧರಿಸಿದ ವಸುಭೂತಿಯಂ ಕಂಡಿದೇಕೆ ತರುವಂ ಪ್ರಾರ್ಥಿಸುವೆಯೆಂಬುದುಮಿದಂ ಬ್ರಹ್ಮವೃಕ್ಷಮಿದಂ ಪೂಜಿಸೆ ಸಕಲ ಕಾರ್ಯಂ ಸಿದ್ಧಿ ಸದ್ಗತಿಸಾಧನಂ ತುಲಸಿಯಿಂ ಪರಮಪವಿತ್ರಮಪ್ಪುದೆಂದು

ಶ್ಲೋಕ || **ಖಾದನ್ಮಾಂಸಂ ಪಿಬನ್ಮದ್ಯಂ ಸಂಗ [ವಾನಂತ್ಯಜೇಷ್ವಪಿ]**
ಸದ್ಯೋ ಭವತಿ ಪೂತಾತ್ಮಾ ಕರ್ಣೇ ತುಲಸಿಧಾರಣಾತ್ ||

ಎಂಬುದು ವಿಪುಲಮತಿಯೆಂದನ್ ಆದರೆಮಗೀ ವೃಕ್ಷಮೈದು ಬಪ್ಪಲಚ್ಛದಮಂ ಕುಡುಗೆಂದು ಪ್ರಾರ್ಥಿಸಿದೊಡದು ಕುಡದಿಪ್ಪುದುಂ ವಸುಭೂತಿಗೆಂದಂ ಈ ಮರಂ ತನ್ನಲ್ಲಿರ್ದುದಂ ಕೊಡಲಾರದಿಲ್ಲದುದನೆಂತು ಕೊಡುವುದು ತುಲಸಿ ಕೆಲದೊಳಿರ್ದುಚ್ಛಿಷ್ಟಮಂ ಕಳೆಯದುದಾತ್ಮನಂ ಪವಿತ್ರಮಂ ಮಾಳ್ಪುದೆಂತು? ನಿನ್ನ ದೈವಮಾರ್ಹತರ್ಗೇನಂ ಮಾಡಲಾರದೆಂದವೆರಡರ ಪತ್ರಮಂ ಕೊಯ್ದು ತನ್ನ ಕಾಲೆರಡಕ್ಕಮುಜ್ಜಿ ಪೊಡೆಯಂ ತೊಡೆದು ನನ್ನ ದೈವಮನಪಮಾನಂಗೆಯ್ದನೆನಲಾದೊಡೇನಾಯ್ತು ನಿನ್ನ ದೈವಮನಾನುಮಪಮಾನಂಗೆಯ್ಯದೆ ಬಿಡುವೆನಲ್ಲೆಂದು ಮುಂದೆ ಪೋಗುತ್ತಂ ವಿಪುಲಮತಿಯೊಂದು ನಸುಗುನ್ನಿಯಂ ಕಂಡದಂ ತನ್ನ ದೈವಮೆಂದು ಪ್ರದಕ್ಷಿಣ ನಮಸ್ಕಾರಂಗೆಯ್ಯಲದಂ ವಸುಭೂತಿ ಕಂಡು ಮೆಯ್ಯಂ ಕಾಲಂ ಪೂಸಿದೊಡತ್ಯಂತ ತೀನಿಪುಟ್ಟಿ ವೇದನೆಯಪ್ಪುದುಂ ಮಿಡುಕುತ್ತಿರ್ದನಂ ಎಲೆ ಮಿತ್ರನೆ ಕರ್ಮೋದಯದಿಂದಾತ್ಮಂ ಪಂಚಸ್ಥಾವರದೊಳ್ ಪುಟ್ಟಿ ಏಕೇಂದ್ರಿಯಮಪ್ಪ ತರು ಗುಲ್ಮ ಲತಾದಿಗಳಾಗಿ ಜ್ಞಾನಶೂನ್ಯಗಳಪ್ಪವಂ ಪ್ರಾರ್ಥಿಸಿದೊಡವು ನೀರಂ ಕಡೆದಂತೆ ಮಳಲನಾಡಿಸುವಂತೆ ಗೊಡ್ಡಿಗೆ

ಮುನ್ನಡಿಯುನಿಕ್ಕಿದಂತೆ ಫಲವಮಂ ಪಡೆಯುವೆಂತಂತೆಯುಕ್ಕುಮೆಂದು ಸಾರುತ್ತ ಮುಂದೊದೆಡೆಯೊಳ್ ತೊರೆಯಂ ಕಂಡದಂ ಪೊಕ್ಕು ಮುಳುಗಿ ಆತ್ಮಂ ಪವಿತ್ರನಾದನೆಂದು ಭಾಗೀರಥಿಯೆಂದು ಸ್ತುತಿಸುತ್ತಿರಲ್ ಇಂತಿದೇನೆಂದು ಬೆಸಗೊಳೆ ಸ್ನಾನದಿಂದಾನುಂ ಪವಿತ್ರನಾದೆನೆನೆ ತಾನುಂಡು ಮಿಕ್ಕ ಕೂಳಂ ನದಿಯೊಳಿಟ್ಟಿರ್ದಾಯೆಡೆಯಂ ಪವಿತ್ರಮಾದೊಡಿದಂ ಕೊಳ್ಳೆನೆ ಮುಟ್ಟದಿಪ್ಪುದಂ ನೀನಾಡಿದುದಂ ನೀನೆ ನಂಬದಿರ್ಪೆಯದರಿಂದೀ ನದಿಯಂ ದೇವರೆಂದು ಪೂಜಿಸಿಯಾ ಜಲಮಂ ಕಾಯಿಸಿ ಕುಡಿದು ಪಾದಮಂ ಕರ್ಚಿಯದರೊಳಶುಚಿಯಂ ಬಿಟ್ಟು ಕಳೆವುದರಿಂದಿದು ಬಾಹ್ಯಶರೀರಮಂ ಪ್ರಕ್ಷಾಲಿಸಿ ಪೊರಗಣ ಮಲಮಂ ಕಳೆವುದಲ್ಲದೆ ಕರ್ಮಮಲಮಂ ಕಳೆಯಲಾರದದರಿಂ

ಶ್ಲೋಕ || **ಯಾವದಸ್ಥಿ ಮನುಷ್ಯಾಣಾಂ ಗಂಗಾತೋಯೇನ ತಿಷ್ಠತಿ**
ತಾವದ್ವರ್ಷ ಸಹಸ್ರಾಣಿ ಪಿತಾ ಸ್ವರ್ಗೇ ಮಹೀಯತೇ ||

ಎಂಬುದರಿಂದಾ ನೀರೊಳ್ ಪುಟ್ಟಿಯಲ್ಲಿಯೆ ಸಾಯ್ವ ಜಲಚರರಾದಿಗಳೆಲ್ಲಕ್ಕಂ ಸ್ವರ್ಗಮಪ್ಪುದೇಕಿಲ್ಲದರಿಂ ಘಟಿಯಿಸದು ಮತ್ತಮಪಾತ್ರಕ್ಕೆ ದಾನಮೆಂದು ಭಕ್ತಿಪೂರ್ವಕಂ ಕುಡುವುದುಂ ಕಲ್ಲಂ ಮರಳಂ ಗೋವಂ ಕಂಬಮಂ ಪೊಸ್ತಿಲಂ ಶಸ್ತ್ರಮಂ ಜಲಮಂ ಕಿಚ್ಚುಮಂ ವಾಹನಮಂ ಆಸನ ಮುಂತಾದುದುವಂ ದೇವರೆಂದು ಪೂಜಿಸುವುದುಂ ರಣ ಜಲ ಗಿರಿ ಅಗ್ನಿ ಮೊದಲಾದವರಿಂ ಸತ್ತರೆ ಸ್ವರ್ಗಮಪ್ಪುದೆಂಬುದುಂ ಲೋಕ ಮೂಢಮೆಂದು ಪೇಳಿ ಪುತ್ರರಿಲ್ಲದೊಡೆ ಸ್ವರ್ಗಮಿಲ್ಲೆನಲ್ ಶುನಕ ವರಾಹ ಮಾರ್ಜಾಲ ಕುಕ್ಕುಟಾದಿಗಳುಮನೇಕ ಗಂಡುಮಕ್ಕಳಂ ಪಡೆವವಕ್ಕೆಲ್ಲಂ ಸ್ವರ್ಗಪ್ರಸಂಗಮಕ್ಕುಂ ಮತ್ತಂ ನೀಚದೇವತೆಗಳಂ ಪರಸಿಯವಕ್ಕೆ ಪ್ರಾಣಿಹಿಂಸೆಗಳಂ ಮಾಳ್ಪುದೇಕೆಯವರ ಸಾಮರ್ಥ್ಯಮುಳ್ಳೊಡೆ ಕುರಿ ಮೊದಲಾದ ಮೃಗವಿಂಡಂ ಪೊಕ್ಕು ತಂತಮ್ಮ ಮನಸ್ಸಿಗೆ ಬೇಕಾದ ಬಹತ್ ಕಾಯಂಗಳನಾಯ್ದು ಕೊಂಡೊಡೇನಾನುಂ ನಾಯಿ ಕಚ್ಚುಗುಮೊ? ಅಲ್ಲ ಅವಂ ಕಾಯ್ದುಕೊಂಡಿಪ್ಪರ್ ಕೋಲಿಂದಂ ಬಡಿದಪರೊ? ಸಿಂಹ ಶರಭ ಶಾರ್ದೂಲ ವೃಕಾದಿಗಳ ಸಾಮರ್ಥ್ಯಮಿಲ್ಲದುದರಿಂ ನೀಚದೇವತೆಗಳೆಂತು ವರಮಂ ಕೊಟ್ಟಪರ್ ರಾಗದ್ವೇಷಮೋಹಾದಿಗಳಿಂ ಸಂಸಾರಿಗಳಾಗಿ ಸುಖದುಃಖದೊಳ್ ಕೂಡಿದಜ್ಞಾನಿಗಳಂ ದೇವರೆಂದು ಪೂಜಿಸಲವರಿಂದಂ ಫಲಮಿಲ್ಲ. ಮತ್ತಂ ತನ್ನ ಪೂರ್ವಕೃತ ಪುಣ್ಯಮುಂಟಾದೊಡಂ ಸದ್ದೇವತಾರಾಧನೆಯಿಂದಂ ವಿಘ್ನಂ ಕೆಟ್ಟು ಫಲಮಪ್ಪುದಲ್ಲದೆ ಮುಂದಣಾಮುತ್ರಿಕಾ ಸೌಖ್ಯಮಂ ಮಾಡಲಾರದೆಂದವನ ದೇವತಾಮೂಢಮಂ ಬಿಡಿಸಿ, ಮತ್ತಂ ಪಾಷಂಡಮೂಢಮಾವುದೆಂದೊಡೆ

ಶ್ಲೋಕ || **ಸದ್ಗ್ರಂಥಾರಂಭ ಹೀನಾನಾಂ ಸಂಸಾರಾವರ್ತವರ್ತಿನಾಂ**
ಪಾಷಂಡಿನಾಂ ಪುರಸ್ಕಾರೋಜ್ಞೇಯಂ ಪಾಷಂಡಿಮೋಹನಂ

ಎಂಬಿದಂ ಬಿಟ್ಟು ಜ್ಞಾನಿಯಪ್ಪ ಮೋಕ್ಷಮಾರ್ಗಮಂ ಕಂಡಿಪ್ಪಾತಂ ಗುರುಃ ಸ್ವಯಂ ಪರಂ ತಾರಯಿತುಂ ಸಮರ್ಥಃ ಎಂಬುದರಿಂ ಸದ್‌ಜ್ಞಾನಮೆಂಬ ದೃಷ್ಟಿಯಿಂ ಮುಕ್ತಿಮಾರ್ಗಮಂ

ಕಂಡಿರ್ಪನಂ ಪೊರ್ದೆ ಸದ್ಗತಿಗೆಯ್ದಿಸುವಂ ಅಜ್ಞಾನದಿಂ ಕಣ್ಗಾಣದನಂ ಪೊರ್ದಿದೊಡೆ ಮಾರ್ಗಮಂ ಕಾಣದೆ ಕುರುಡನ ಕೈವಿಡಿದು ಪೋಗುತ್ತುಂ ಕುಳಿಯೊಳ್ ಬಿದ್ದಂತೆ ಈರ್ವರುಂ ನರಕಮೆಂಬ ಕುಳಿಯೊಳ್ ಬಿಳ್ದು ದುಃಖಮನುಂಬರೆಂದು ಗುರುಮೂಢಮಂ ಬಿಡಿಸಿ ಮತ್ತಂ ಶುಕ್ಲ ಶೋಣಿತ ಮೊದಲಾದ ಸಪ್ತಧಾತುವಿನೊಳುತ್ಪತ್ತಿಯಾಗಿಯಶುಚಿಯುಮಪ್ಪುದು ಆತ್ಮನೆಂಬತ್ತುನಾಲ್ಕು ಲಕ್ಷ ಯೋನಿಗಳೊಳುತ್ಪತ್ತಿಯಾಗಿ ಬಂದುದರಿಂ ಜಾತಿಯೆಂಬಹಂಕಾರಮಾವುದು.

ಶ್ಲೋಕ || ಮನುಷ್ಯಜಾತಿರೇಕೈವ ಜಾತಿನಾಮಾದಯೋದ್ಭವಃ
ವೃತ್ತಿಭೇದಾದ್ಧಿ ತದ್ಭೇದಾಃ............||

ಎಂಬುದರಿಂ ಕ್ರಿಯಾಜನ್ಮನಾಗಿ ಯಮ ನಿಯಮವ್ರತವಿಡಿದು ಮದ್ಯ ಮಾಂಸಾದಿಗಳಂ ತೊರೆದರು ಶ್ರೇಷ್ಠಜಾತಿಯಾದರ್. ಅಂತರಾಂತರಂ ಭೇದಮಾಗೆ ಜೀವದನದ ಮಾಂಸಮಂ ಸೇವಿಸುವುದರಿಂ ಪೊಲೆ ಮಾದಿಗರೆಂಬರ್. ನರಮಾಂಸಭಕ್ಷಣಂಗೆಯ್ವ ರಾಕ್ಷಸರೆಂಬರ್. ಬ್ರಾಹ್ಮಣರಾವದೇಶದೊಳಾದೊಡಂ ಗೋಮಾಂಸಮಂ ತಿಂದು ಸುರೆಯಂ ಕುಡಿದೊಡೆ ಪೊಲೆಯರೆಂಬೆವಲ್ಲದೆ ಬ್ರಾಹ್ಮಣರೆಂಬುದೆಂತು? ಅದರಿಂ ನೀಚಜಾತಿಯವನಾದೊಡಂ ಮದ್ಯಮಾಂಸಮಂ ಬಿಟ್ಟು ಜ್ಞಾನಿಯಾದೊಡಾತನೆ ಬ್ರಾಹ್ಮಣನಪ್ಪನೆಂದಾ ವಸುಭೂತಿಗಂ ವಿಪುಲಮತಿಯು ಪೇಳೆ ಕೇಳಿ ಮಿಥ್ಯಾಮೋಹಮೆಂಬಂಧಕಾರದಿಂ ಸುದರ್ಶನಮಂ ಕಾಣದಿರ್ದನಲ್ಲದೆ ಮದ್ದುಗುಣಿಕೆಯಂ ತಿಂದವರಿಗೆ ಮಣ್ಣುಂ ಕಲ್ಲುಂ ಮರಳುಮಿದ್ದಲುಮೆಲ್ಲಾ ಹೊಂಬಣ್ಣವಾಗಿ ತೋರುವಂತೆ ವಿಪರೀತವಾಗಿರ್ದ ಬುದ್ಧಿಪ್ರಕಾಶಮಾಯ್ತೆನ್ನ ಜನ್ಮಾಂತರದ ಮಿತ್ರಂ ನೀನೆ ಎಂದಾತನೊಳ್ ವಿನಯವಂ ನುಡಿದು ಕಳಿಪಿ ವೇದಾಧ್ಯಯನಮಂ ಕಲಿತು ಕೆಲವಾನು ದಿವಸಕ್ಕೆ ಮಿಶ್ರ ಪರಿಣಾಮದಿಂದಿರುತ್ತಿರ್ದು ಪದಿನಾಲ್ಕು ತೆರದ ಶ್ರೋತ್ರಿಗಳೊಳ್ ಮೃತ್ತಿಕಾಸಮಾನಮಾಗಿ ಮಾರ್ಜಾರನಂತೆ ದ್ವಿಸಮಯರುಚಿ ಪುಟ್ಟಿ ವರ್ತಿಸುತ್ತಿರ್ದೊಂದು ದಿವಸಮಾಪೊಳಲ ದಯಾಮಿತ್ರನೆಂಬ ಸಾರ್ಥವಾಹನಲ್ಲಿಗೆ ಪೋಗಿ 'ಪುನಶ್ಶ್ವಾನೋ ಭವಿಷ್ಯತಿ' ಎಂಬಂತೆ ತನ್ನ ಅಹಂಕಾರದಿಂ ಸರ್ವಶ್ರೇಷ್ಠನೆನ್ನಂ ಪೂಜಿಸಿ ಗೋವು ಮೊದಲಾಗೆ ಭೂರಿದಾನಂಗೊಟ್ಟು ಕರ್ಮಮಂ ಕಳೆಯದೆ ಬತ್ತಲೆತಲೆಯನರಿದು ಕೊಳೆ ಹತ್ತಿದ ಮೆಯ್ಯುಳ್ಳ ಸವಣರಲ್ಲಿ ಭಕ್ತಿಗೆಯ್ದು ಭೋಗಾಂತರಾಯಮಂ ಮಾಡಿಕೊಳ್ವೆಯೆಂದುಂ ವರ್ಣಾನಾಂ ಬ್ರಾಹ್ಮಣೋ ಗುರುವೆಂಬುದರಿಂದಾನೆ ಗುರುವೆನೆ ದಯಾಮಿತ್ರಶೆಟ್ಟಿ ಮುಗುಳ್ನಗೆವೆರಸಿ ಮನದೊಳ್ ಇಂತೆಂದರೀತಂ ಮಿಥ್ಯಾತ್ವಮೆಂಬ ದರ್ಶನ ಮೋಹನೀಯ ಕರ್ಮೋದಯ ತಮೋವಿಕಾರದಿಂ ಪೇಳ್ವನಿಮಗೆ ಸಮ್ಯಕ್ತ್ವ ಚಾರಿತ್ರಂಗಳಂ ಪೇಳ್ದೊಡೆಂತಪ್ಪುದೆಂದೊಡೆ ಪಿತ್ತಜ್ವರವಿಕಾರಮುಳ್ಳಂಗೆ ಪಾಲುಂ ಶರ್ಕರೆಯಂ ಕುಡಲೆಂತುಂ ಕೈಪೆಯಪ್ಪುದಂತಕ್ಕುಮೆಂದು 'ಬ್ರಹ್ಮಜ್ಞಾನೇನ ಬ್ರಾಹ್ಮಣಃ' ಎಂಬುದರಿಂ ಜ್ಞಾನಿಗಳಾಗಿಯುಮಾಚಾರಶೀಲಸಂಪನ್ನರಾದುದರಿಂ ನಿಮ್ಮಿಂದಧಿಕರಿಲ್ಲದರಿಂದೆಮ್ಮ ಪಿತೃಪಿತಾಮಹರ ಸಂತಾನದಿಂ ಬಂದುದೊಂದು ನೋಂಪಿಯುಂಟದಂ ನೀಮುಮೊಂದು ತಿಂಗಳ್ವರಮಿರ್ದಾ ವಿಧಾನಮಂ ಮಾಡಿಕೊಟ್ಟೊಡೆ

ನೀಮು ಬೇಡಿದನಿತು ದ್ರವ್ಯಮಂ ಕುಡುವೆನೆಂಬುದು ದ್ರವ್ಯಲೋಭದಿಂದೊಂದು ತಿಂಗಳೀತಂ ಪೇಳಿದಂತಿರ್ದು ಸಾಲ್ವನಿತು ದ್ರವ್ಯಮಂ ಕೊಂಬೆನೆಂದು 'ತಥಾಸ್ತು' ಎಂದೊಪ್ಪಿಕೊಂಡೊಡೆ ಶೆಟ್ಟಿಯಿಾತಂ ಲುಬ್ಧ ಪ್ರಕೃತಿಯಪ್ಪನೆಂತೆಂದೊಡೆ-

ಶ್ಲೋಕ || **ಲುಬ್ಧಮರ್ಥೇನ ಗೃಹ್ಣೀಯಾತ್ ಸ್ತಬ್ಧಮಂಜಲಿಕರ್ಮಣಾ**
ಮೂರ್ಖಂ ಛಂದಾನುರೋಧೇನ ಯಾಥಾ ತಥ್ಯೇನ ಪಂಡಿತಮ್ ||

ಎಂದವಂಗೆ ದ್ರವ್ಯದಾಸೆಯ ಮಾಡಿ ಲೋಚಂ ಮಾಡಿಸಿಕೊಳ್ಳಿಮೆಂದು ಮೌನದಿಂ ಕುಳ್ಳಿರಿಸಿ ತಲೆಯಂ ಕೀಳಿಸುವಾಗಳ್ ಶುಂಠಿಯಂ ತಿಂದ ಕೋಡಗದಂತೆ ಸಿಡಿಮಿಡಿಗೊಂಡು ಕ್ಷುತ್ಪಿಪಾಸಾದಿ ಪರೀಷಹಂಗಳಂ ಸೈರಿಸಲತ್ಯಂತ ಕಷ್ಟಮಾಗಿ ಸೈರಿಸಲನಿತಕ್ಕೆ ದಯಾಮಿತ್ರಶೆಟ್ಟಿ ಬಂದೆರಗೆ ನಿಮ್ಮಂತಪ್ಪ ಧನ್ಯರಾರುಮಿಲ್ಲ; ಕೃತಾರ್ಥರಾದಿರಾದೊಡಂ ಸುಜನತ್ವಮಂ ಕೈಕೊಂಡು ಸಮತಾಭಾವದಿಂ ಸದ್ಬುದ್ಧಿಯಿಂ ಇಂದ್ರಿಯನಿಗ್ರಹಂ ಮಾಡೆ ಅಭ್ಯುದಯ ನಿಃಶ್ರೇಯಸ ಪ್ರಾಪ್ತಿಯಪ್ಪುದೆನೆ

ಶ್ಲೋಕ || **ಬುದ್ಧೇಃ ಫಲಂ ತತ್ವವಿಚಾರಣಂ ಚ ದೇಹಸ್ಯಸಾರೋ ವ್ರತಧಾರಣಂ ಚ**
ವಿತ್ತಸ್ಯಸಾರಃ ಖಲು ಪಾತ್ರದಾನಂ ವಾಚಃ ಫಲಂ ಪ್ರೀತಿಕರಂ ನರಾಣಾಂ ||

ಎಂದಾತಂಗೆ ಸದ್ಧರ್ಮತತ್ವಮನೋದಿಸೆ ರಸಮಂ ಪೊರ್ದಿದ ಲೋಹದಂತೆ ಮುನ್ನೆ ವಿಪುಲಮತಿ ಪೇಳ್ದ ಸಮ್ಯಕ್ತ್ವಂ ತಲೆದೋರಿ ದೃಢಚಿತ್ತನಾಗೆ ದಯಾಮಿತ್ರಶೆಟ್ಟಿ ಪರದುಪೋಗುತ್ತುಂ ವಸುಭೂತಿಯಂ ತನ್ನೊಡನೆ ತನ್ನ ಸಮೀಪದೊಳಿರಿಸಿ ವೈಯಾಪೃತ್ಯಮಂ ಮಾಡುತ್ತುಂ ಭಕ್ತಿಯಿಂ ಕರೆದೊಯ್ಯುತ್ತಿರ್ದೊಡೊಂದು ವಿಪಿನಾಂತರದೊಳ್ ಬಿಟ್ಟಿರ್ದೊಡೆ ಕಿರಾತರ್ ಬಂದು ಮುತ್ತಿದಲ್ಲಿ ಘಾತಮಾಗಿ ವಸುಭೂತಿಯು ಬರ್ಪಲ್ಲಿ ಆಯುಷ್ಯಾವಸಾನಮಾಗೆ ವಿಪುಲಮತಿ ಪೇಳ್ದುದನೇ ನಂಬಿ ಭಾವಿಸುತ್ತೆ ಪಂಚಮಂತ್ರಸ್ಮರಣೆಯಿಂ ಶರೀರಭಾರಮನಿಳುಪಿ ಸ್ವರ್ಗದೊಳ್ ಮಹರ್ದಿಕದೇವನಾಗಿ ಸಮುದ್ರೋಪಮಕಾಲಂ ದಿವ್ಯಸುಖಮನುಂಡು ಬಂದು ನಿನಗಂ ಪಾರ್ವಂತಿ ನಂದಶ್ರೀಗಮಭಯಕುಮಾರನೆಂಬ ಮಗನಾಗಿ ಸಕಲ ಕಲಾಕುಶಲನಾದನೀತಂ ಮುಂದೆ ತಪಂಗೆಯ್ದು ಸರ್ವಾರ್ಥಸಿದ್ಧಿಯಂ ಪಡೆದು ಮೋಕ್ಷಲಕ್ಷ್ಮೀಪತಿಯಪ್ಪನೆಂದು ಗೌತಮಸ್ವಾಮಿಗಳ್ ಶ್ರೇಣಿಕಮಹಾರಾಜಂಗೆ ನಿರೂಪಿಸುವುದುಮಭಯಕುಮಾರಂ ಕೇಳಿ ನಿರ್ವೇಗಮಾಗೆ ಬಾಹ್ಯಾಭ್ಯಂತರ ಪರಿಗ್ರಹಂಗಳಂ ಪರಿಹರಿಸಿದನವಾವಾವೆನೆ

ಶ್ಲೋಕ || **ಕ್ಷೇತ್ರಂ ವಾಸ್ತು ಧನಂ ಧಾನ್ಯಂ ದ್ವಿಪದಂ ಚ ಚತುಷ್ಪದಮ್**
ಯಾನಂ ಶಯ್ಯಾಸನಂ ಕುಪ್ಯಂ ಭಾಂಡಂ ಚೇತಿ ಬಹಿರ್ದಶ |
ಮಿಥ್ಯಾತ್ವವೇದಹಾಸ್ಯಾದಿಷಟ್ಕಷಾಯಚತುಷ್ಟಯಮ್
ರಾಗದ್ವೇಷೌ ಚ ಮೋಹಶ್ಚ ಅಂತರಂಗಾಶ್ಚತುರ್ದಶ |

ಇಂತು ತೊರೆದು ಯೋಗೀಶ್ವರನಾಗಲಾ ಶ್ರೇಣಿಕಮಹಾಮಂಡಳಿಕಂ ಸರ್ವಜ್ಞರಿಂ ಸಕಲ

ಪದಪದಾರ್ಥಂಗಳಂ ಭೂತಕಾಲದೊಳಾದ ತ್ರಿಷಷ್ಟಿಮಹಾಪುರುಷರ ಕಥಾಪುರಾಣ ವರ್ತಮಾನರ ಪುರಾಣಮನಾ ಗತಕಾಲದೊಳಪ್ಪ ಶಲಾಕಾಪುರುಷರ ಪುರಾಣಂ ಮೊದಲಾದವಂ ಪ್ರಥಮಾನುಯೋಗದೊಳ್ ಜೀವಂಗಳ್ ಸಮ್ಯಕ್ತ್ವಗ್ರಹಣಾದಿ ಮುಕ್ತಿಯಂ ಪಡೆವ ಪರ್ಯಂತಮವರ ಕಥಾಪ್ರಪಂಚಮಂ ಪೇಳ್ವುದುಂ. ಕರಣಾನುಯೋಗಮೆಂಬುದು ನರಕ ತಿರಿಕ ಮನುಷ್ಯ ಸ್ವರ್ಗಾದಿಗಳಿಪ್ಪ ಮೂರು ಲೋಕಮನಳತೆಯಿಂ ಸವಿಸ್ತರಂ ಪೇಳ್ವುದು. ಚರಣಾನುಯೋಗಂ ಸಾಗಾರನಗಾರ ಸ್ವರೂಪ ಧರ್ಮಮಂ ಪೇಳ್ವುದು. ದ್ರವ್ಯಾನುಯೋಗಂ ಷಡ್ದ್ರವ್ಯ ಪಂಚಾಸ್ತಿಕಾಯ ಸಪ್ತತತ್ತ್ವ ನವಪದಾರ್ಥಮಂ ಪೇಳ್ವುದು. ಇವಾದಿಯಾದ ಸಕಲ ಪ್ರಪಂಚಮಂ ಕಂಠೋಷ್ಠಾದಿ ವಚೋನಿಮಿತ್ತಮಿಲ್ಲದೆ ಮೃದುಮಧುರ ಶ್ರವ್ಯ ನವ್ಯ ದಿವ್ಯಭಾಷಾ ಸ್ವಭಾವದಿಂ ಸರ್ವಜ್ಞಮುಖಪದ್ಮದಿಂ ಪುಟ್ಟಿದ ಶ್ರುತಾಂಬುಧಿಯಮೃತಮಂ ಶ್ರೇಣಿಕಂ ಕರ್ಣದ್ವಯಂಗಳಿಂದೀಂಟೆ ಎಲ್ಲಮಂ ತಿಳಿದು ಹೃಷ್ಟನಾಗಿ

ಮ || ಸ್ರ || ಸರಸಂ ಸಾಹಿತ್ಯ ವಿದ್ಯಾಧರನಮಲ ಯಶೋಭಾಮಿನೀವಲ್ಲಭಂ ಭಾ
ಸ್ಕರತೇಜಂ ಭವ್ಯಲೋಕಪ್ರಿಯನಮಳ ಗುಣಾಲಂಕೃತಂ ಧರ್ಮಪೀಯೂ
ಷರಸಾಸ್ವಾದಾಂತರಂಗಂ ಪರಮಗೆರಗಿ ಸಂತೋಷದಿಂ ಶ್ರೇಣಿಕಂ ಭಾ
ಸ್ಕರತೇಜಂ ಬಂದು ರಾಜಗೃಹದರಮನೆಯಂ ಪೊಕ್ಕನುತ್ಸಾಹದಿಂದಂ

ಇಂತೀ ಕಥೆಯಂ ಕೇಳ್ವರ
ಭ್ರಾಂತಿಯು ತಾಂ ಕೆಡುಗು ಬಳಿಕಮಾಯುಂ ಶ್ರೀಯುಂ
ಸಂತಾನವೃದ್ಧಿ ಸಿದ್ಧಿಯು
ಸಂತತ ಸೌಖ್ಯಂಗಳಿಹಪರಂಗಳೊಳಕ್ಕುಂ

ಇದು ಸತ್ಯಪ್ರವಚನ ಕಾಲಪ್ರವರ್ತನ ಕಥಾರ್ಣವದೊಳ್ ಕಿಂಚಿನ್ಮಾತ್ರಮನೆತ್ತಿ ವಿಬುಧೇಂದು ವಿರಚಿತ ರಾಜಾವಲಿ ಕಥಾವತಾರದೊಳ್ ಶ್ರೇಣಿಕಸಮ್ಯಕ್ತೋತ್ಪತ್ತಿ ವರ್ಣನಂ

ಪಂಚಮಾಧಿಕಾರಂ

ಷಷ್ಠಾಧಿಕಾರಂ

ಶ್ರೀ ಸುಜನಸ್ತುತರಖಿಳ ಕ
ಳಾ ಸುಗುಣವ್ರಾತ ಸತ್ಯನಿಧಿ ಸುವಿಚಾರರ್
ಭಾಸುರ ಧೀರೋದಾತ್ತರ್
ವೈಷಮ್ಯಮನುಳಿದು ಕೇಳ್ವುದೀ ಸತ್ಕಥೆಯಂ

ಮತ್ತಂ ಮುಂದಣ ಕಥಾಲಾಪಮೆಂತೆಂದೊಡಾ ರಾಜಗೃಹಪಟ್ಟಣದ ಶ್ರೇಣಿಕ ಮಹಾಮಂಡಲೇಶ್ವರನ ಪುತ್ರನಾದ ಗಜಕುಮಾರಂ ಜಿನಪಾಳಿತ ಧರ್ಮಮೂರ್ತಿಗಳೆಂಬವಧಿಜ್ಞಾನಿಗಳಂ ಕಂಡು ಪೊಡೆವಟ್ಟು ಧರ್ಮಶ್ರವಣಾನಂತರಂ ಬೆಸಗೊಂಡನೆಲೆ ಗುರುವೆ ಮಣಿಮಾಲಿಯೋಗೀಂದ್ರರು ಸ್ಮಶಾನದೊಳ್ ಮೃತಕಶಯ್ಯೆಯೊಳಿರ್ದಾಗಳ್ ಬೆಂದ ಶಿರೋಭಾಗಮೆಂತುಮಾದುದೆನೆ ಮುನಿಗಳಿಂತೆಂದರ್.

ಜೈಮಿನಿಪುರದ ಜಿನದತ್ತಶೆಟ್ಟಿ ಮುನಿಗಾದುಪಸರ್ಗಮಂ ಕೇಳಿಬಂದು ಕರೆದೊಯ್ದು ತನ್ನ ದೇವಾಲಯದೊಳಿರಿಸಿ ವೈದ್ಯರಂ ಬರಿಸಿ ಕೇಳ್ವುದುಂ ಸೋಮಶರ್ಮಭಟ್ಟರ ಮನೆಯೊಳ್ ಲಕ್ಷಮೂಲಮೆಂಬ ತೈಲಮಿಪ್ಪುದದರಿಂ ಬೆಂದ ಪುಣ್ಣು ಮಾಣ್ಗುಮೆನಲಲ್ಲಿಗೆ ಶೆಟ್ಟಿ ತಾನೆ ಪೋಗಿ ಸೋಮಶರ್ಮನ ಧರ್ಮಪತ್ನಿ ತೂಂಕಾರಿಯಂ ತೈಲಮಂ ಬೇಡುವುದುಮಾಗಿಯು ನಮ್ಮುಪ್ಪರಿಗೆಯ ಮೇಲಣ ನೆಲೆಯೊಳ್ ತೈಲದ ಕುಪ್ಪಿಗೆಯೊಳವಲ್ಲಿ ತೆಗೆದುಕೊಂಡು ಪೋಗಿಮೆನೆ ತಾಂ ಪೋಗಿಯೊಂದು ಕುಪ್ಪಿಗೆಯಂ ತನ್ನ ಮನುಷ್ಯನ ಕೈಯೊಳ್ ಕೊಡಲಾತಂ ಬರುತ್ತಂ ಜಾರಿ ಕುಪ್ಪಿಗೆಯೊಡೆಯಲದಕ್ಕೆ ಕೋಪಿಸುವಳೆಂದಂಜಿ ಸುಮ್ಮನೆ ನಿಂದಿರ್ದ ಶೆಟ್ಟಿಯಂ ನೋಡಿ ತಿಳಿದಿಂತೆಂದಳ್. ಪೋದಡೇನಾಯ್ತು ನಿಮಗೆ ಬೇಕಾದನಿತಂ ಕೊಂಡುಪೋಗಿಮೆನೆ ಹರ್ಷಿತನಾಗಿ ಬಳಿಕೊಂದು ಕುಪ್ಪಿಗೆಯಂ ಕೊಂಡುಬಪ್ಪಾಗಳೊರ್ವ ದುಷ್ಟಂ ಉಪಾದಾನಕ್ಕೆ ಬಂದು ತಡವಾದುದಕ್ಕೆ ಬಿಕನಾಶಿ ರಂಡೆ ಭಿಕ್ಷಮಿಕ್ಕೆಂದು ನಿಷ್ಠೂರ ವಚನಮಂ ಪೇಳ್ದೊಡಂ ದಯಾರಸದಿಂದುಪಾದಾನಮನಿಕ್ಕೆ ಶೆಟ್ಟಿಯವಳ ಕ್ಷಮಾಗುಣಕ್ಕಾಶ್ಚರ್ಯಂಬಟ್ಟೆಲೆ ತಾಯೆ ನಿಮಗೇನು ಕಾರಣ ಕೋಪಂ ಬಪ್ಪುದಿಲ್ಲಮೆಂದು ಬೆಸಗೊಳೆ

ಕ್ರೋಧಂ ಮೊದಲ ಕಷಾಯಂ
ವ್ಯಾಧಿ ಶರೀರಕ್ಕೆ ಉಭಯಲೋಕ ವಿರುದ್ಧಂ
ಭೇದಿಸಲನಂತ ಪಾಪ
ಕ್ಕಾಧಾರಮನುಳಿದೊಡುಳಿವನುಳಿಯದೊಡುಳಿಯಂ

ಕ್ರೋಧಂಚ ದೇಹಿನಾಂ ರಿಪುಃ ಎಂದು ನಾನುಂ ಕೋಪಮಂ ತೊರೆದೆನೆಂತೆಂದೊಡೆ ಆನಂದಪುರದ ದೇವಶರ್ಮನೆಂಬ ಬ್ರಾಹ್ಮಣನಾತನ ಭಾರ್ಯೆ ಕಮಳಶ್ರೀಯವರ್ಗೆಣ್ಬರ್ ಗಂಡುಮಕ್ಕಳವರಿಂ ಕಿರಿಯಳಾಂ ಭಟ್ಟಿನಿಯೆಂಬ ಕಡೆಯ ಮುದ್ದಿನ ಮಗಳ್ ಅತಿಭಯಸ್ಥೆಯಾಗಿ ಬೆಳೆದುಮಿರಲೊರ್ವಂ ಬಂದು ತೂಂ[ಯೆಂ]ದಂಜಿಸೆ ಅತಿಭಯದಿಂ ಮನೆಯಂ ಪೊರಮಡದಿಪ್ಪುದುಂ ತೂಂಕಾರಿಯೆಂಬ ಪೆಸರಾಗಲ್ ಕೋಪಮಿಲ್ಲದರಿಗೆ ಮದುವೆ ಮಾಡಲೆಂದು ಸೋಮಶರ್ಮನತಿಕ್ಷಮಾರೂಪನಾತಂಗೆ ಪರಿಣಯನ ವಿಧಿಯಿಂ ಕುಡಲ್ ಆದರದಿಂ ನಡಪುತ್ತಿರ್ದೊಂದು ದಿನಂ ಚಂದ್ರೋದಯದೊಳ್ ಎನ್ನರಸಂ ಪುರದೊಳಗಣ ನಾಟ್ಯಮಂ ನೋಡಿ ತಡೆದುಬಂದು ಎಲೆ ಪ್ರಿಯಳೆ ಕದಮಂ ತೆರೆಯೆನಲಾತಂ ತಡೆದುಬಂದುದಕ್ಕೆ ಕೋಪಿಸಿ ಕದಮಂ ತೆರೆಯದಿಪ್ಪುದು ಬಹಳ ಪೊತ್ತು ಪೊರಗೆ ಛಳಿಗಾರದೆ ಎಲೆ ತೂಂಕಾರಿ ಬಾಗಿಲ ತೆಗೆಯೆಂದುಚ್ಚಸ್ವರದಿಂ ಕೂಗಿದೊಡಾನತಿಕೋಪದಿಂ ಕದಮಂ ಬಿಚ್ಚಿ ಮನೆಯಂ ಪೊರಮಟ್ಟರ್ಧರಾತ್ರಿಯೊಳೆ ವನಮಂ ಪೊಕ್ಕೊಡೆ ಕಿರಾತರ್ ಕಂಡೆನ್ನುಡತೊಡವೆಲ್ಲಮಂ ಕೊಂಡೆನ್ನಂ ತಮ್ಮ ಭಿಲ್ಲರಾಜಂಗೊಪ್ಪಿಸೆಯಾತನೆನ್ನ ರೂಪಿಂಗಳಿಪಂ ತರಲಾಂ ಶೀಲದಿಂದೊಳಗಾಗದಿರಲಾತಂ ನಿಗ್ರಹಿಸುತ್ತಿರೆ ಸತ್ಯದೇವತೆಗಳಾತನಂ ಭಯಂಗೊಳಿಸುವುದುಂ ಸ್ವೇಚ್ಛಾಬಾಹುವೆಂಬ ಪರದಂಗೆ ಮಾರುವುದುಮಾತಂ ತನಗೊಳಗಂ ಮಾಡಲೆಂದು ನೋಯಿಸುತ್ತಿರ್ದೊಡಂ ನಗರದೇವತೆಗಳ್ ಆತನಂ ನಿಗ್ರಹಿಸಲಾತಂ ಎನ್ನಂ ಕ್ರಿಮಿರಾಗದ ಕಂಬಳಮಂ ಮಾಳ್ಪ ದ್ವೀಪಕೊಯ್ದುಮಲ್ಲಿ ಪಾರಸರಾಜಕುಲದವರಿಗೆ ಮಾರಲವರ್ ಸೆರೆಯೊಳಿಕ್ಕಿ ಪದಿನೈದು ದಿವಸಕ್ಕೊಮ್ಮೊಮ್ಮೆ ಸೆರೆಯಂ ಬಿಟ್ಟೆನ್ನ ಮೆಯ್ಯ ರಕ್ತಮಂ ತೆಗೆದು ನೂಲಿಂಗೂಡುತ್ತೆನ್ನ ಮೈವ್ರಣಕ್ಕೆ ಲಾಕ್ಷಾಮೂಲತೈಲಮನಿಕ್ಕಿ ಮಾಣಿಸುತ್ತಿರ್ದರಿಂತು ದುಃಖಕ್ಕೊಳಗಾಗಿರುತ್ತಿರೆ ಕೆಲವು ದಿವಸದಿಂದೆನ್ನಗ್ರಜಂ ಧನದೇವನೆಂಬಂ ಪಾರಸರಾಜನಲ್ಲಿಗೆ ಕಾರ್ಯಾರ್ಥಂ ಬಂದೆನ್ನ ಕಂಡು ಬಿಡಿಸಿಕೊಂಡು ಬಂದೆನ್ನರಸಂ ಸೋಮಶರ್ಮಂಗರ್ಪಿಸಿದಂದು ನಾಂ ಕೋಪದ ಫಲಮನಿಹಜನ್ಮದೊಳೆಯನುಭವಿಸಿದುದರಿಂ ಜ್ಞಾನಸಾಗರರೆಂಬ ಗುರುಗಳಿಂ ದೇವರ ಸಾಕ್ಷಿಯಿಂ ಕ್ರೋಧನಿವೃತ್ತಿವ್ರತಮಂ ಕೈಕೊಂಡೆನು. ಲಾಕ್ಷಾಮೂಲತೈಲ ಪ್ರಯೋಗಮಂ ತಿಳಿದಿರ್ದುದರಿಂ ಲೋಕೋಪಕಾರಮಾಗಿ ಮಾಡಿಸಿದೆನೆಂದು ಸೋಮಶರ್ಮನ ಭಾರ್ಯೆ ತೂಂಕಾರಿ ಪೇಳೆ ಜಿನದತ್ತಂ ಪೇಳ್ವಾಕೆಯ ಕ್ಷಮಾಭಾವಕ್ಕೆ ಸಂತೋಷಂಬಟ್ಟಿಂತೆಂದಂ ಕ್ಷಾಂತಿಶ್ಚೇತ್ಕವಚೇನ ಕಿಂ ಎಂಬುದಲ್ಲದೆ

ಶ್ಲೋಕ || ಕ್ಷಮಾಬಲಮಶಕ್ತಾನಾಂ ಶಕ್ತಾನಾಂ ಭೂಷಣಂ ಕ್ಷಮಾ
ಕ್ಷಮಾವಶೀಕೃತಿಃ ಲೋಕೇ ಕ್ಷಮಯಾ ಕಿಂ ನ[ಸಿದ್ಧ್ಯತಿ]
ದಾನಂ ಪ್ರಿಯವಾಕ್ಸಹಿತಂ ಜ್ಞಾನಮಗರ್ವಂ ಕ್ಷಮಾನ್ವಿತಂ ಶೌರ್ಯಮ್
ತ್ಯಾಗಸಹಿತಂ ಚ ವಿತ್ತಂ ದುರ್ಲಭಮೇತಚ್ಚತುರ್ಭದ್ರಮ್ ||

ಕಾರ್ಯೇಷು ಮಂತ್ರೀ ಕರುಣೇಷು ದಾಸೀ [ಭೋಜ್ಯೇಷು] ಮಾತಾ
ಶಯನೇಷು ವೇಶ್ಯಾ
ಧರ್ಮೇನುಕೂಲಾ ಕ್ಷಮಯಾ ಧರಿತ್ರೀ [ಭಾರ್ಯಾ ಚ ಷಾಡ್ಗುಣ್ಯವತೀಹ
ದುರ್ಲಭಾ] ||

ಎಂದು ಪ್ರಶಂಸೆಗೆಯ್ದು ಲಾಕ್ಷಾಮೂಲತೈಲಮಂ ಕೊಂಡುಬಂದು ಮುನಿಯ ಬೆಂದ ಪುಣ್ಣಂ ಮಾಣಿಸೆ ಕೆಲವು ದಿವಸಮಿಪ್ಪಲ್ಲಿಯಾ ಮುನಿ ಕಾಣೆ ತನ್ನಲ್ಲಿರ್ದನರ್ಘ್ಯ ರತ್ನಂಗಳಂ ತಾಮ್ರಕರಂಡಕದೊಳಿಕ್ಕಿ ಮುನಿಗಳ್ ಪಟ್ಟಿರ್ಪ ಮಣೆಯ ಕೆಳಗೆ ಪೂಳ್ದಿರ್ದೊಡದನಾ ಶೆಟ್ಟಿಯ ಮಗಂ ಕುಬೇರದತ್ತಂ ತಿಳಿದಾ ಮುನಿಗಳ್ ಕಂಡಂತೆ ತೆಗೆದು ಮತ್ತೊಂದು ಬಳಿಯೊಳ್ ಪೂಳ್ದು ಪೋದಂ. ಮತ್ತಮಾ ಮುನಿಗಳ್ ತಮ್ಮ ಯೋಗಸ್ಥಾನಕ್ಕೆ ಪೋಗಲ್ ಶೆಟ್ಟಿಯಂ ಪರಸಿ ಪೋಗೆ ತಾನು ಬಯ್ಚಿಟ್ಟ ರತ್ನಕರಂಡಕಮಂ ನೋಡಲಲ್ಲಿಯಿಲ್ಲದಿಪ್ಪುದುಂ ತಳವೆಳಗಾಗಿ ಮುನಿ ಪೋದ ಮಾರ್ಗವಿಡಿದು ಪೋಗಿಯವರಂ ಮಗುಳೊಡಗೊಂಡು ಬರುತ್ತಂ ಪೊತ್ತುಪೋಗಲೊಂದು ಕಥೆಯಂ ಪೇಳ್ವುದೆಂದು ಶೆಟ್ಟಿ ಬೆಸಗೊಂಡೊಡೆ ಮುನೀಂದ್ರಂ ನೀಂ ಪೇಳೆಂಬುದು ತನ್ನಭಿಪ್ರಾಯಮಂ ಸೂಚಿಸಲೆಂದಿಂತೆಂದಂ.

ಈ ವಾರಣಾಸಿಪುರದರಸಂ ಜಿತಶತ್ರುವಾತನ ಮನೆ ವೈದ್ಯಂ ಧನದತ್ತನಾತಂಗೆ ಧನಮಿತ್ತನು ಧನಚಂದ್ರರೆಂಬೀರ್ವರ್ ಮಕ್ಕಳಾಗಿ ತಂದೆಯಾಜ್ಞೆಯಂ ಕೇಳದೆ ವಿದ್ಯಮಿಲ್ಲದಿರೆ.

ಶ್ಲೋಕ || **ಅನೇಕ ದುಃಖಾನಿ ಭವಂತಿ ಲೋಕೇ ಚತ್ವಾರಿ ದುಃಖಾನಿ ಬಹೂನಿತಾನಿ**
ಕೃಷೀ ಚ ನಷ್ಟಾಗೃಹಣೀ ಚ ದುಷ್ಟಾ ಪುತ್ರೋಪ್ಯವಿದ್ವಾನು ಧರಾಂಶ್ಚಭಾದಾ||

ಎಂದಾ ಧನದತ್ತನಿರ್ದು ಸಾಯಲಾತನ ಜೀವಿತಮಂ ಜಿತಶತ್ರು ಮತ್ತೊರ್ವಂಗೀಯೆ ಧನದತ್ತನ ಸುತರೀರ್ವರುಂ ಸಿಗ್ಗಾಗಿಯಭಿಮಾನದಿ ಪೋಗಿ ಚಂಪಾಪುರದ ಶಿವಭೂತಿಯೊಳ್ ವೈದ್ಯಶಾಸ್ತ್ರಮನೊಳ್ಪಿತ್ತಾಗಿ ಕಲ್ತು ಬಪ್ಪಾಗಳ್ ಪೇರಡವಿಯೊಳೊಂದು ಪೆರ್ಬುಲಿಯಂ ಕಣ್ಣಬೇನೆಯಿಂದೊರಲುತ್ತಿರಲದಂ ಕಂಡು ಕರುಣಿಸಿ ಈ ಪ್ರಾಣಿಗೌಷಧಿಯಂ ಮಾಳ್ಪೆನೆಂದು ಧನಮಿತ್ರಂ, ಧನಚಂದ್ರಂ ಬೇಡೆಂದೊಡಂ ದುಷ್ಟಮೃಗಕ್ಕೆ ಮದ್ದನಿಕ್ಕಿದಾಕ್ಷಣದೊಳೆ ರೋಗೋಪಶಮುವಾಗೆ ಪಸಿದಿರ್ದ ಪುಲಿಯಾತನಂ ತಿಂದುದೆಂದು ಶೆಟ್ಟಿ ಪೇಳೆ ಮುನೀಶ್ವರನೆಂದನಂತಾದೊಡೆ

ಹಸ್ತಿನಾಪುರದ ವಿಶ್ವಸೇನನೆಂಬರಸಂಗೆ ಸುದತ್ತನೆಂಬ ಪರದಂ ದ್ವೀಪಾಂತರದಿಂ ಪ್ರಯತ್ನದಿಂ ರುಜಾಪಹಾರಮಾದ ಮಾವಿನ ಬೀಜಮಂ ತಂದೊಪ್ಪಿಸೆ ವನಪಾಲನಂ ಕರೆದು ಕೊಟ್ಟಿದಂ ಉದ್ಯಾನದೊಳ್ ಬಿತ್ತಿ ಸಲಹುವುದೆಂದು ಪೇಳಲಾತಂ ಬಹಳವಾಗಿ ನಡಪೆ ಬೆಳೆದು ಫಲಮಾಗಲಾಕಾಶದೊಳ್ ಗರುಡಂ ಕೃಷ್ಣಸರ್ಪನಂ ಕಚ್ಚಿ ಪೋಗುತ್ತಿರಲದರ ವಿಷಮೊಂದು ಫಲದ ಮೇಲೆ ಪನಿಯಲಾ ಉಷ್ಣದಿಂ ಪಣ್ಣಾದಂತಿರ್ದೊಡದಂ ವನಪಾಲನರಸಂಗೀಯೆ ತನ್ನ ಪ್ರಿಯಮಗಂ ರೋಗಿಯಪ್ಪನೆಂದವಂಗೆ ಕೊಟ್ಟಡವಂ ತಿಂದು ವಿಷ ಪೂರಿಸಿ ಸಾಯ್ವುದುಮರಸಂ

ಕೋಪಿಸಿಯಾ ಮರನಂ ಕಡಿದು ಬಿಸಾಡಿಸುವುದುಮಾ ಪೊಳಲೊಳ್ ಮತ್ತೊರ್ವಂ ರೋಗದಿಂ ನಿತ್ತರಿಸಲಾರದೆ ಸಾಯಲೆಂದಲ್ಲಿ ಬಿರ್ದಿರ್ದ ಕಾಯಂ ತಿನಲಾಕ್ಷಣದೊಳೆ ರೋಗಮೆಲ್ಲ ಪೋಗಿ ಸ್ವಸ್ಥಮಾಗಲದಂ ಕೇಳ್ದರಸಂ ಮರುಗುತ್ತಿರ್ದನೆಂದು

ಮತ್ತಂ ಚಂಪಾಪುರದ ಸುರಸೌಂದರಿಯೆಂಬ ಗಣಿಕೆಯೊಂದು ಗಿಳಿಯನತ್ಯಾದರದಿಂ ಸಾಕುತ್ತಿರಲದು ಸಕಲವಾದ ಕಾರ್ಯಕ್ಕನುಕೂಲದಿಂದಿರಲಾದಿತ್ಯವಾರ ಪಾಲಿಗೊಪ್ಪುತ್ತಿರಲೊಂದು ಬಟ್ಟಲೊಳು ಪಾಲಂ ತುಂಬಿಟ್ಟು ಗಿಳಿಯಂ ಬಿಟ್ಟು ಒಳಗಣ್ಗೆ ಪೋಗಿ ಬಪ್ಪನ್ನೆಗಾಕೆಗೆ ಶತ್ರುವಾಗಿರ್ದ ದೇವದತ್ತೆಯರಿದಾ ಪಾಲಿಂಗೆ ವಿಷಮನಿಕ್ಕಿ ಪೋಗಲಾ ಗಿಳಿಯು ತನ್ನಾಳ್ದಳ ಸಾವಂ ತಪ್ಪಿಸಲೆಂದಾ ಬಟ್ಟಲ ಕೆಡಪಲಾ ಸುರಸುಂದರಿ ಬಂದು ಗಿಳಿಯಂ ಕೊಂದಳದುಕಾರಣಂ ವಿಚಾರಮಿಲ್ಲದವರೆಂಬುದುಂ ಶೆಟ್ಟಿಯೆಂದಂ

ರಾಜಗೃಹಪುರದ ವಿಶ್ವಭೂತಿಯೆಂಬಂ ಗಂಗಾನದಿಯೊಳ್ ಬಿರ್ದು ಪೋಪು ದೊಂದಾನೆಯಮರಿಯಂ ತೆಗೆದುದದನತ್ಯಾದರದಿಂ ಸಾಕಿ ಮಹಾ ಮತಂಗನಾಗಿಪ್ಪುದುಂ ಶ್ರೇಣಿಕಮಹಾರಾಜಂ ಕೇಳಿ ಬೇಡಿಯಟ್ಟಲಾ ವಿಶ್ವಭೂತಿ ಶುಂಡಾಲನಂ ಕೊಂಡು ಪೋಗಿಯರಸಂಗೆ ಸಮರ್ಪಿಸಿದೊಡಾ ಸಾಮಜಂ ಮಗುಳ್ದು ಮಠಕ್ಕೆ ಬಂದಿರಲರಸನದಂ ತರಿಸಿ ಕಂಭದೊಳ್ ಕಟ್ಟಿಸೆ ಕಂಭಮಂ ಕಿಳ್ತುಬರಲದಂ ಕಂಡು ವಿಶ್ವಭೂತಿ ಮರಳಿ ಯರಮನೆಗೊಯ್ಯಲೆಂದು ಬಪ್ಪಾಗಳವನಂ ಕೊಂದರಣ್ಯಕ್ಕೆಯ್ದಿದುದು. ದುಷ್ಟರು ಮಾಡಿದುಪಕಾರಮನರಿಯರೆಂದುಂ.

ಮತ್ತಂ ವಾರಣಾಸಿಪುರದ ವರ್ತಕಂ ಡೊಳ್ಳು ಬೆಳೆದಿರಲಾತಂ ತನ್ನ ನಾಣ್ಯಂಗಳಂ ಚೀಲದೊಳ್ ಕಟ್ಟಿಕೊಂಡಂಗಡಿಯ ಮುಂದೆ ಕುಳ್ಳಿರಲೊರ್ವ ಕಳ್ಳಂ ಕದ್ದುಕೊಂಡೋಡಿ ಬಪ್ಪನಂ ತಳಾರನಟ್ಟಿಬರುತ್ತಿರಲಾ ಕಳ್ಳಂ ಶೆಟ್ಟಿಯಂ ಮರೆವುಗಲಾತನಂ ತನ್ನ ಚೀಲದ ಮರೆಯೊಳಿರಿಸಿ ದುಪ್ಪಟಮಂ ಹೊದೆಯಿಸಿಕೊಂಡಿರಲ್ ತಳಾರರ್ ಬಂದುಮಿಾತಂಗೆ ಡೊಳ್ಳು ಸ್ವಭಾವಮೆಂದು ಮುಂದಕ್ಕೆ ಪೋಗಲವನಂ ಮರಳಿ ಕಳಿಪುವುದುಂ ಆ ಶೆಟ್ಟಿಯ ಉಡಿಯೊಳಿರ್ದ ಚೀಲಮಂ ಕೊಯ್ದಲ್ಲಿರ್ದ ಪೊನ್ನೆಲ್ಲಮಂ ಕೊಂಡುಪೋದಂ.

ಅಯೋಧ್ಯಾಪುರದಡವಿಯೊಳೊರ್ವಂ ಕಪಿಳನೆಂಬಂ ನೀರಿಲ್ಲದೆ ತೃಷೆಯೊಳತಿ ಬಳಲುತ್ತಿಪ್ಪಂಗೊಂದು ಗೋಲಾಂಗುಲಂ ಸರೋವರಮಂ ತೋರೆ ನೀರ್ಗುಡಿದದ ಹತಿಯಿಸಿ ತಿತ್ತಿಯೊಳ್ ಮುಂದಣ್ಗೆ ನೀರಂ ಕೊಂಡೊಯ್ದಂ ಈ ಮೇರೆ ಉಪಕಾರ ಮಾಡಿದರ್ಗಪಕಾರಂ ಮಾಡಬಹುದೆನೆ ಮುನಿಗಳಿಂತೆಂದರ್.

ಚಂಪಾನಗರಿಯೊಳೊರ್ವ ಸೋವಿಲನೆಂಬ ಪಾರ್ವನಾತಂಗೆ ಸೋವಿಲೆ ಸೋಮದತ್ತೆಯರೆಂಬಿರ್ವರ್ ಪೆಂಡಿರಾಗೆ ಸೋವಿಲೆ ಗರ್ಭಮಾಗಿಯೊಂದು ಗಂಡುಗೂಸಂ ಪೆತ್ತಿಪ್ಪಿನಮಾ ಪುರದೊಳೊಂದು ಗೂಳಿಯತ್ಯಂತ ಸಾಧುವಾದುದರಿಂದೆಲ್ಲರುಂ ಪ್ರೀತಿಯಿಂ ಗ್ರಾಸಮನಿಕ್ಕುತ್ತಂ ಪೋಷಿಸುತ್ತಿರಲೊಂದು ದಿನಂ ಸೋವಿಲನ ಗೃಹಕ್ಕೆವಪ್ಪುದುಂ ಸೋಮದತ್ತೆ ಸವತಿಯೊಳಾದ ವೈರದಿಂದಂಗಣದೊಳಾಡುತ್ತಿರ್ದ ಮಗುವನೆತ್ತಿಯಾ ಗೂಳಿಯ ಕೊಂಬಿನೊಳ್

ಸೆಕ್ಕಿ ಕೊಲ್ವುದುಮಂದಿಂದಾ ಪೆಣನಂ ಕೊಂಬಿನೊಳಿಕ್ಕಿಕೊಂಡು ಬರಲದಂ ಕಂಡರೆಲ್ಲರುಮಾ ಗೂಳಿಯಂ ದಂಡಿಸುತ್ತಿರಲತಿಬಡವಾಗಿ ಮತ್ತೊಂದು ದಿನಮೊರ್ವ ಶೆಟ್ಟಿಯ ಪೆಂಡತಿಯೊಳ್ ಪಾದರದ ಮಾತು ಬೀಳೆಯವಳ್ ದಿವ್ಯಮಂ ಪಿಡಿವೆನೆಂದೊಡೊಂದು ಪಾಳಮಂ ಕಾಯ್ಸಿ ಪಿಡಿಯಿಸುವ ಸಮಯದೊಳಾ ವೃಷಭಂ ಕಾದಿರ್ದ ಪಾಳಮಂ ತನ್ನ ಬಾಯೊಳ್ ಕರ್ಚಿಕೊಂಡೂರೊಳ್ ತಿರುಗಿ ತಾನುಂ ಶುದ್ಧನಾಗೆ ಸೋಮದತ್ತೆ ಮಾಡಿದನ್ಯಾಯಮಂ ತಿಳಿದು ಆಕೆಯಂ ನಿಗ್ರಹಿಸಿದರಿದಲ್ಲದೆ

ಕೌಶಂಬಿಪುರದೊಳೊರ್ವ ಶಿವಶರ್ಮನೆಂಬನಾತನ ಪೆಂಡತಿ ಕಪಿಳೆಯವರ್ಗೆ ಮಕ್ಕಳಿಲ್ಲದಿರಲೊಂದು ದಿವಸಮಾ ಪಾರ್ವಂ ವನಾಂತರಕ್ಕೆ ಸಮಿದ್ದರ್ಭೆಯಂ ತರಲ್ ಪೋಗಿ ಬರುವಲ್ಲಿ ಒಂದು ಕೀರನ ಮರಿಯಂ ಕಂಡದಂ ತನ್ನ ಪೆಂಡತಿಗಂ ಕುಡೆ ಅತ್ಯಾದರದಿಂ ಮಗನೆಂದು ಸಾಕುತ್ತಿರಲನಿತಕ್ಕೆ ಕಪಿಳೆ ಗರ್ಭಮಾಗೆ ಗಂಡುಮಗುವಂ ಪೆತ್ತದಂ ನಡುಪುತಿರ್ದು ಒಂದು ದಿನಂ ತೊಟ್ಟಿಲೊಳ್ ಕೂಸಂ ಮಲಗಿಸಿ ನಕುಲನಂ ಕಾವಲಿಟ್ಟು ಭತ್ತವಂ ಕುಟ್ಟುತ್ತೆ ಪೊರಗಿರ್ಪಾಗಳ್ ತೊಟ್ಟಿಲ ಮೇಗಳಿಂದೊಂದು ಘಟಸರ್ಪನಿಳಿದು ತೊಟ್ಟಿಲಿಗೆ ಬಪ್ಪುದಂ ಕಂಡು ಶತಖಂಡಮಾಗೆ ಸರ್ಪನಂ ಬಾಯಿಂ ಖಂಡಿಸಿ ತನ್ನ ಸಲಹಿದಳಿಗೆ ಪೇಳಲು ಬಪ್ಪ ನಕುಲನ ಬಾಯೊಳು ರಕ್ತಮಂ ಕಂಡು ಮಗುವಂ ಕಚ್ಚಿ ಕೊಂದುದೆಂದು ಕೋಪದಿಂ ಒನಕೆಯಿಂ ಪೊಯ್ದು ಕೊಂದು ಬಳಿಕ ಬಂದು ಮಗುವಂ ನೋಡಿ ಕೀರನಂ ವಿಚಾರಮಿಲ್ಲದೆ ಕೊಂದೆನೆಂದು ಮರುಗಿದಳ್.

ವಿಚಾರಮಿಲ್ಲದವರ್ ಕಣ್ಣಾಣರೆಂದು ಮತ್ತಂ ಶಾಲಿಗ್ರಾಮದ ಕೇಶವಭಟ್ಟನೆಂಬನೊಂದು ಕಾಮಧೇನುವಿನಂತಪ್ಪ ಪಶುವಂ ಪಡೆದದರ ಗೋರಸಮಂ ವಿಕ್ರಯಂ ಮಾಡಿ ಗೃಹವ್ಯಾಪಾರಮಂ ಕಳಿಯುತ್ತಿರ್ದು ತಾನೊಂದೂರಿಗೆ ಪೋಗುತ್ತುಂ ತನ್ನ ಮಗಂಗೆ ಈ ಆಕಳಂ ಗ್ರಾಸಮಂ ಕೊಟ್ಟು ಸಲಹುವುದೆಂದು ಪೇಳಿ ಪೋಗಲಾತ ಸೂಳೆಗಾರನಪ್ಪುದರಿಂದಂ ಸೂಳೆಯಾತನಿಂ ತರಿಸಿಕೊಂಡಿರೆ ಪಾರ್ವಂ ಬಂದಾ ವಾರ್ತೆಯಂ ಕೇಳಿ ಸೂಳೆಯಲ್ಲಿಗೆಯ್ದಿ ಪಶುವಂ ಕೊಳ್ಳಲವಳ್ ಬ್ರಾಹ್ಮಣನ ತಿರಸ್ಕಾರಂ ಮಾಡೆ ಈರ್ವರುಮವಿಚಾರಿಯಾದರಸಂಗೆ ಪೇಳಲೆಂದು ಪೋಗೆ ಆ ಸೂಳೆಯೆಂದಳೆನ್ನ ಹಟ್ಟಿಯ ಎತ್ತು ಒಂದು ಪಶುವನೀದೊಡೀ ಬ್ರಾಹ್ಮಣಂ ತನ್ನದೆಂದು ಬೀದಿಗೆ ತಂದಿರ್ದನೆನೆಯರಸನಾ ಸೂಳೆಗೆ ಕೂರ್ಪನಪ್ಪುದರಿಂದಾ ಪಶುವಂ ಕೊಟ್ಟಗೆಯೊಳ್ ಕಟ್ಟಿ ಪುಲ್ಲನಿಕ್ಕೆಂದಾ ಬ್ರಾಹ್ಮಣನಂ ನೂಂಕಿಸಿದನಂತವಿಚಾರಿಗಳ್ ಕಾಣರೆಂದು ಮತ್ತಮಿಂತೆಂದಂ

ಕೌಶಂಬೀಪುರದರಸಂ ಗಂಧರ್ವಾನೀಕನಾತನ ಮನೆಯ ವ್ಯವಹಾರಿಯಂಗಾರವೇಗನೆಂಬಂ ಚರಿಗೆಮಂದ ಮಹಾಮುನಿಗಳ್ಗಾಹಾರದಾನಮನೀಯಲೆಂದವರಂ ನಿಲಿಸಿ ತನ್ನಂಗಣದೊಳವರ್ಗೆ ಪಾದೋದಕಮನೆರೆವಾಗಳ್ ಕೈಯೊಳಿರ್ದ ರತ್ನಮಂ ಕೆಲದೊಳಿಡುವುದುಂ ಮಯೂರನದಂ ಮಾಂಸಖಂಡಮೆಂದು ನುಂಗಲದು ಗಂಟಲೊಳ್ ಸಿಕ್ಕಿಪ್ಪುದುಮದನಂಗಾರವೇಗಂ ಕಾಣದೆ ಮುನಿಗಳ್ ಕೊಂದರೆಂದವರಂ ಕೇಳಿ ನಾನಾ ಭಾಷೆಯಿಂ ಕಾಡಿದೊಡವರ್ ಮೋನಮಂ ಕೊಂಡಿಪ್ಪುದುಂ ಕಿಡಿಕಿಡಿಯೋಗಿ ರತ್ನಮಂ ನುಂಗಿದೆ ನಿನ್ನ ಪೊಟ್ಟೆಯಂ ಸೀಳ್ದು ರತ್ನಮಂ

ತೆಗೆವೆನೆಂದಂಗಾರವೇಗನಾಗ್ರಹಿಸುವುದುಂ ಮುನೀಶ್ವರರೀ ಉಪಸರ್ಗಂ ಪಿಂಗುವನ್ನಮಾಹಾರ ಶರೀರ ನಿವೃತ್ತಿಯೆಂದು ಸಲ್ಲೇಖನದಿಂ ಧ್ಯಾನಾರೂಢರಾಗಿರೆ ಕೆಲದೊಳಿರ್ದ ಕಾಷ್ಠಮನಿಡಲದು ಮುನಿಪನಂತಾಗಿ ಕೆಲದೊಳಿರ್ದ ನವಿಲಂ ಪೊಡೆಯಲದರ ಕಂಠಂ ಮುರಿದಾ ರತ್ನಂ ಬೀಳೆಯದಂ ಕಂಡಂಗಾರವೇಗಂ ಪ್ರಮಾದಾಜ್ಞಾನದರ್ಪದಿಂ ಮುನಿಗಿಂತುಪಸರ್ಗಂ ಮಾಡಿದೆನೆಂದು ತನ್ನ ತಾಂ ನಿಂದಿಸಿಯವರ್ಗೆ ಪೊಡೆವಟ್ಟು ತಪಮಂ ಕೈಕೊಂಡನಿಂತು ಅವಿಚಾರಿಗಳ್ ಮುಂದುಗಾಣರೆಂದು ಯತೀಂದ್ರಂ ಪೇಳೆ ಶೆಟ್ಟಿ ಬಳಿಕಿಂತೆಂದಂ

ಶಾಲಿಗ್ರಾಮದೊಳ್ ಗೂಢಭೂತಿಯೆಂಬ ಬ್ರಾಹ್ಮಣಂ ಬಹುಕಾಲಂ ಸಂಪಾದಿಸಿದ ಧನಮೆಲ್ಲಮನೊಂದು ಯಷ್ಟಿಯೊಳಿಕ್ಕಿ ಯಾರುಂ ಕಾಣದಂತೆ ಅತಿಲೋಭದಿಂದತಿ ವೃದ್ಧನಾಗಿಯುಮಾ ಕೋಲನೊಮ್ಮೆಯುಂ ಬಿಡದಿರ್ದೊಮ್ಮೆ ಗಂಗಾತಟಮನೆಯ್ದಿ ಪೋಗುತ್ತಿಪ್ಪುದುಮೊರ್ವ ಧೂರ್ತನಪ್ಪ ಪಾರ್ವನಾತನ ಯಷ್ಟಿಯೊಳ್ ಪೊನ್ನಿಪ್ಪುದಂ ತಿಳಿದಾತಂಗೆ ಛಾತ್ರನಾಗಿ ಶುಶ್ರೂಶಾದಿಗಳಂ ಮಾಡುತ್ತಂ ನಿಮ್ಮೊಡನೆ ನಾನುಂ ಗಂಗೆಗೆ ಬಪ್ಪೆನೆಂದತಿಭಕ್ತಿಯಿಂದೊಡನಿರ್ದೊಂದು ದಿನದ ರಾತ್ರಿಯೊಳೊಂದೂರ ಕುಂಬಾರನ ಶಾಲೆಯೊಳ್ ನಿದ್ರೆಗೈದೆರ್ದು ಮರುವಗಲು ಪೋಗುತ್ತುಂ ಛಾತ್ರನತಿಭಯದಿಂದಾ ವೃದ್ಧಬ್ರಾಹ್ಮಣನೊಳಿಂತೆಂದಂ ಆರೂ ಕೊಡದ ಕುಂಬಾರನ ಮನೆಯ ಪುಲ್ಲಕಡ್ಡಿ ಎನ್ನ ತಲೆಯೊಳ್ ಪತ್ತಿ ಬಂದುದೀ ಪಾಪಕ್ಕೇಗೆಯ್ವೆನೆಂದು ನೊಂದು ನುಡಿದಾ ಪುಲ್ಲನಾತಂಗೊಪ್ಪಿಸಿ ಬಪ್ಪೆನೆಂದು ತಿರುಗಿ ಪೋಗಿಯಾ ಪುಲ್ಲನೊಪ್ಪಿಸಿ ಬರಲಾ ವೃದ್ಧನಾತನ ಶುದ್ಧವೃತ್ತಿಗೆ ಮೆಚ್ಚಿ ಪೋಗುತ್ತಂ ಮುಂದಣೊಂದೂರಲ್ಲಿಯೊರ್ವನ ಮನೆಯೊಳ್ ಗ್ರಾಸಮಂ ನಿಯಮಿಸಿಯೊಂದು ಮಂಠೆಯಮಂ ಸಾರ್ದಿರ್ಪನಿತಕ್ಕೆ ಸೂರ್ಯಾಸ್ತಮಯಮಾಗೆ ರಾತ್ರಿಯೊಳಾ ಶಿಷ್ಯಂ ಬರೆ ಸಂತೋಷದಿಂ ವೃದ್ಧನೆಂದನೊಂದು ಮನೆಯೊಳ್ ಗ್ರಾಸಮಂ ಪೇಳಿ ಬಂದೆನಲ್ಲಿಗೆ ನೀಂ ಪೋಗಿ ಭುಂಜಿಸಿಬಪ್ಪುದೆನೆ ತಾಮುಂ ದಯಮಾಡುವುದೆಂಬುದು ನಮಗೀ ರಾತ್ರಿಯಶನಂ ಬೇಡಾ ನೀ ಪೋಗಿ ಬಪ್ಪುದೆಂದುಪಚಾರವಚನದಿಂ ಕಳಿಪೆ ಪೋಗಿ ಬಂದುಮಾತನ ಮನೆಯೊಳ್ ಸಿಂಗದಂತಪ್ಪ ನಾಯಿಗಳ್ ಬಪ್ಪುದರಿಂ ಪೋಗಲುಮಾಗದೆ ಬಂದನೆಂಬುದುಂ ಕರುಣಿಸಿ ಆ ಮರದೊಳಿರ್ದೊಂದು ಸಣ್ಣ ಬೆತ್ತಮಂ ಕೊಟ್ಟು ಪೋಗೆನೆ ಗುಡಿಯೊಳಗಣ ಮೂಲದೇ ವರ್ಗಡೆಯಿಲ್ಲದೆ ಪಡಿಯಂ ತೆರೆವಾಗ ಬಾಗಿಲ ಭೈರವನಮ್ಮೃತಾನ್ನಮಂ ಬೇಡುವಂತೆ ದೇವರುಪವಾಸವಿರಲೆನ್ನ ಉದರಮನೆಂತು ಪೊರೆಯಲಪ್ಪುದಲ್ಲದೆಯಾ ಜಾಯಿಲ ನಾಯಿಗಳೀ ಸಣ್ಣ ಬೆತ್ತಕ್ಕಂಜುವವಲ್ಲದರಿಂ ಕ್ಷೇತ್ರಂ ಮಾಳ್ಪೆನೆಂಬುದುಂ ದಯಾರಸದಿಂದಾ ವೃದ್ಧನಾಗಲಿ ನನ್ನಗ್ರಯಷ್ಟಿಯಂ ಕೊಂಡು ಪೋಗಿ ಕುಕ್ಕುರಂಗಳಂ ನಿವಾರಿಸಿ ಜೋಪಾನದಿಂ ತಂದುಕೊಡೆಂದಾ ಕೋಲಂ ಕುಡುವುದುಂ ತಮ್ಮ ಕೃಪೆಯಿಂದನ್ನಮನುಣ್ಬೆನೆಂದು ಕುಣಿಯುತ್ತೆ ಪೋಗಿ ತನ್ನ ದೇಶಮನೆಯ್ದಿದನದರಿಂ ದ್ರೋಹಿಗಳಂ ನಂಬಿದರ್ಗೆ ಕೇಡು ತಪ್ಪದೆಂದು ಮತ್ತಮಿಂತೆಂದಂ

ಗಿರಿನಗರದಾತನೊರ್ವ ಪೌರುಷಪುರುಷನರಣ್ಯದೊಳರಸುತ್ತಂ ಬರ್ಪಾಗಲೊಂದು ಮದಗಜಂ ಕೊಲಲಟ್ಟಿಬರಲೊಂದು ಪೆರ್ಮರನನೇರಿ ತಪ್ಪಿಸಿರಲಾನೆ ಪೋಪುದುಂ ತಾನಾ

ಮರದಿಂದಿಳಿದು ದೆಸೆಯಂ ನೋಡುತ್ತೆ ಬಪ್ಪಾಗಲರಮನೆಯ ಬಡಗಿಗಳ್ ಬೇರಿಗೆ ಬಲುಮರನನವಳೋಕಿಸುತ್ತುಂ ಬರುತ್ತಿರಲ್ ದೇವದತ್ತಂ ತಾನೇರಿದ ಬಲು ಮರಂ ಭೇರಿಗೆ ತಕ್ಕುದೆಂದಾ ಮರನಂ ಕಡಿಯಿಸಿದನದರಿಂ ದುಷ್ಟರಾದರುಪಕಾರಕ್ಕಪಕಾರಮಂ ಮಾಳ್ಪರೆಂದು ಮತ್ತಮಿಂತೆಂದಂ

ವತ್ಸದೇಶದ ಕೌಶಂಬಿಪುರದೊಳ್ ಶುಭಚಂದ್ರನೆಂಬನಾತನ ಭಾರ್ಯೆ ಶುಭಾವತಿಯವರ್ಗೆ ಸ್ವಯಂಪ್ರಭೆ ಮೊದಲಾಗೆ ನಾಗದತ್ತೆ ಕಡೆಯಾಗೆ ಎಣ್ಬರುಮತ್ಯಂತ ರೂಪವತಿಯರಾಗೆ ಬೆಳೆಯುತ್ತಿಪ್ಪಿನಮತ್ತ ವಿಜಯಾರ್ಧಪರ್ವತದ ದಕ್ಷಿಣಶ್ರೇಣಿಯ ರತ್ನಸಂಚಯಪತ್ತನದ ಮೇಘವಾಹನನೆಂಬ ಖೇಚರೇಂದ್ರಂ ತನ್ನ ಭ್ರಾತೃವ್ಯನಪ್ಪ ಸುಕಂಠನೆಂಬನತಿದುಷ್ಟನಾಗಿ ದುರ್ಬುದ್ಧಿಯಿಂ ನಡೆದು ತನ್ನೊಳೊಡ್ಡಿ ಕಾಳಗಕ್ಕನುವಾಗೆ ಕೋಪಿಸಿ ಮೇಘವಾಹನಂ ಸುಕಂಠನಂ ವಿದ್ಯಾಧರಕ್ಷೇತ್ರಮಂ ಪೊಗಲೀಸದೆ ನಿರ್ದಾಟಿಸೆ ಇರವಿಲ್ಲದೆ ಕೌಶಂಬಿಪುರಕ್ಕೆಲ್ಲ ನಾಥನಾಗಿ ಬಂದು ಶುಭಚಂದ್ರಮಹಾರಾಜನಂ ಕಂಡು ತನ್ನ ವೃತ್ತಕಮಂ ಪೇಳ್ದಿಂತೆಂದಂ

ವೃ || ಬಂದುದನರ್ಘ್ಯಕಾಲ ಬಲುಗಾರರೊಳಾದುದು ಸಾಲ
ನಿಂದುದು ಶತ್ರು ಮಧ್ಯ ನಿಲಲಾರದೆ ಪೋದಡೆ ಹೀನ
ಸಂಧಿ ತನುವಿಗೆ ಬಂದುದು ವ್ಯಾಧಿ ಪಿರಿದಾದ ದರಿದ್ರತೆ ಪೇಳ್ವ
ರಂದಿನ ರಾಯರಿಲ್ಲ ಜನಕ್ಕೊಂದಡಸಿದರೇಳಡಸಿತೆಂಬ ನೀತಿ ನಿಶ್ಚಯಂ || (?)

ಎಂಬಂತಾಯ್ತೆನ್ನಿರವೆಂಬುದು ಶುಭಚಂದ್ರಂ ಕರುಣಿಸಿ ತನ್ನೊಳಿಂತೆಂದಂ

ಶ್ಲೋಕ || ನಷ್ಟಂ ಕುಲಂ ಕೂಪತಟಾಕವಾಪೀಪ್ರಭ್ರಷ್ಟರಾಜ್ಯಂ ಶರಣಾಗತಂ ಚ
ಗಾಂ ಬ್ರಾಹ್ಮಣಂ ಜೀರ್ಣಸುರಾಲಯಂ ಚ ಯಶ್ಶೋದ್ಧರೇತ್ ಪೂರ್ವ
ಚತುರ್ಗುಣಸ್ಸ್ಯಾತ್ ||

ಎಂಬ ನೀತಿಯಂ ನೆನೆದಾತನಂ ಮನ್ನಿಸಿ ಭೋಗೋಪಭೋಗಂಗಳಿಂ ಸಂತುಷ್ಟನಂ ಮಾಡಿ ತನ್ನಲ್ಲಿಟ್ಟುಕೊಂಡಿಪ್ಪುದುಂ ಕೆಲವು ದಿವಸದಿಂ ತಾನಿಪ್ಪುದಕ್ಕೆ ಪ್ರತ್ಯೇಕಮಾಗಿಯೊಂದು ಸ್ಥಳಮಂ ಬೇಡಿದೊಡೊಂದು ಪರಿಸ್ತರಣಮಂ ತನ್ನ ಪುರದ ಕಿರಿದುವೆಡೆಯೊಳ್ ತೋರಿಯದರಲ್ಲಿ ಒಂದು ಪೊಳಲಂ ಮಾಡಿಸಿಕುಡೆ ಬೆರಳಂ ತೋರಿದೊಡೆ ಹಸ್ತಮಂ ನುಂಗಿದಂತೆ ಕೆಲವು ರಾಜ್ಯಮಂ ವಶ್ಯಮಂ ಮಾಡಿಕೊಂಡು ತಾನಿಪ್ಪ ಪುರಕ್ಕೆ ದುರ್ಲಂಘ್ಯಪುರಮೆಂಬ ಪೆಸರಿಟ್ಟು 'ಸ್ವಯಮೇವ ಮೃಗೇಂದ್ರತಾ' ಎಂಬಂತೆ ದರ್ಪದಿಂ ರಾಜ್ಯದೊಳ್ ನಿಂದು ಶುಭಚಂದ್ರನ ಮಕ್ಕಳೆಣ್ಬರಂ ತನಗೆ ಬೇಡಿಯಟ್ಟಿದೊಡಾತಂ ಕುಡದಿಪ್ಪುದುಂ ಮೇಲೆತ್ತಿ ಬಂದವನಂ ಕೊಂದು ತತ್ಪುತ್ರಿಯರಂ ಮದುವೆಯಪ್ಪುದೆನೆ ಪೆಣ್ಗಳ್ ತಮ್ಮ ತಂದೆಯಂ ಕೊಂದಾತನನಾವಂ ಕೊಲ್ವನವಂಗೆ ಸತಿಯರಪ್ಪೆವೆಂದು ಪ್ರತಿಜ್ಞೆಯಂ ಮಾಡೆಯವರಂ ಸೆರೆಯೊಳಿಕ್ಕಿ ಬಾಧಿಸೆ ದೈವಾಯತ್ತದಿಂ ಕಿರಿಯ ನಾಗದತ್ತೆಯು ಹಸ್ತಿನಾಪುರಮನೆಯ್ದಿ ಅಭಿಚಂದ್ರನೆಂಬ ತಮ್ಮ ಚಿಕ್ಕಯ್ಯಂಗರಿಪುವುದುಂ ತಕ್ಷಣದೊಳೆ ನಾಗಕುಮಾರಂಗೆ ಬಳಿಯನಟ್ಟಲಾ ಮಹಾಪುರುಷಂ ಬಂದು ಸುಕಂಠನಂ ಕೊಂದಾ

ಸ್ತ್ರೀಯರಂ ಪರಿಣಯದಿ ಕೈಕೊಂಡನದರಿಂ ದುರ್ಜನರ್ಗೆ ಲೇಸ ಮಾಡಲು ಬೆಂಕಿಯೊಳ್ ಸಾಯ್ವ ವೃಶ್ಚಿಕನಂ ತೆಗೆದೊಡೆ ಕೈಯನೂರುವಂತೆ ನಚ್ಚುಗಮಂ ಮಾಳ್ಪರೆಂದು ಜಿನದತ್ತಶೆಟ್ಟಿ ಪೇಳೆ ಗುಣಪಾಳಮುನಿಪತಿಗಳಿದಂ ಬಲ್ಲೆವೆಂದು ಮತ್ತೊಂದು ಕಥೆಯನಿಂತೆಂದು ಪೇಳ್ದರ್

ದ್ವಾರಾವತಿಪುರದೊಳ್ ಶ್ರೀಮನ್ನಾರಾಯಣಂ ಸುಖದಿಂ ರಾಜ್ಯಂಗೆಯ್ವಾಗಳ್ ತತ್ಪುರೋಪವನದೊಳ್ ಯೋಗೀಶ್ವರರ್ ಬಂದಿರ್ದರೆಂದು ವನಪಾಲಕಂ ಪೇಳೆ ಕತಿಪಯ ಪರಿಜನಸಹಿತಂ ವಂದನಾನಿಮಿತ್ತಂ ಪೋಗಿ ನಿಷ್ಕಳಂಕ ಮುನೀಂದ್ರರ್ಗೊಂದಿಸಿ ಧರ್ಮಶ್ರವಣಮಂ ಕೇಳ್ದು ತದನಂತರಮಾ ಮುನಿಗಳ ಶರೀರದೊಳ್ ವ್ಯಾಧಿಯಿಪ್ಪುದರಿದದಕ್ಕೆ ಚಿಕಿತ್ಸೆಯಂ ಮಾಡಿಸಲ್ ತನ್ನರಮನೆಯ ವೈದ್ಯನಂ ಬರಿಸಿ ನೋಡಿಸೆ ಪಿತ್ತಮಯಮಿದಕ್ಕೆ ನವಣಕ್ಕಿಪಿಟ್ಟಿನ ಪಥ್ಯದೊಳಮಿರ್ದೊಡೆ ಪೋಪುದೆನಲಾ ನಾರಾಯಣನವರುಪವಾಸದಿನಂ ಪೊರಗಾಗೆ ಏಕಭುಕ್ತದಿನದೊಳ್ ನವಣಕ್ಕಿಪಿಟ್ಟಿನಿಂ ನಿರವದ್ಯಮಪ್ಪಾಹಾರಮಂ ಕೈಯೆತ್ತಿಸುತ್ತಂ ಬರಲಾ ದಾನದಿಂ

ಶ್ಲೋಕ || **ಭೇಷಜದಾನ ಫಲೋದಯತಃ ಸ್ಯಾತ್ ಸತ್ವಪರಃ ಸಕಲಾಮಯೈಶೂನ್ಯಃ**
ಶಂಬರವಿಂದು (?) ಝುಷಾಂಕುಶಪದ್ಮಾದ್ಯಕ್ಷಯಲಕ್ಷಣ ಲಕ್ಷಿತಗಾತ್ರಃ ||

ಎಂಬೀ ಫಲಪ್ರಾಪ್ತಿಯಾಗುವಿನಂ ಪದ್ಮನಾಭನಾ ಮುನಿಗಳ್ಗೆ ಮಾಡಿದ ಔಷಧ ದಾನದಿಂದಾ ರೋಗಂ ಪಿಂಗುವುದುಮದಂ ಕೇಳಿ ವೈದ್ಯಂ ಬಂದು ನಾಂ ಪೇಳಿದ ಮದ್ದಿನಿಂ ನಿಮ್ಮ ಕುತ್ತಂ ಪೋದುದೆ ಎಂದು ಬೆಸಗೊಂಡೊಡಾ ಮುನಿ ಎನ್ನ ಕರ್ಮೋದಯದಿಂ ಬಂದು ಕರ್ಮೋಪಶಮದಿಂ ಪೋದುದೆಂಬುದುಂ ಕೋಪಿಸಿಯರಣ್ಯದೊಳ್ ಕಾಯೋತ್ಸರ್ಗಮಿರ್ದ ಋಷಿಯರಂ ವಧಿಯಿಸಲೆಂದು ಪೋಪನಂ ಪುಲಿ ತಿನ್ನೆ ಸತ್ತುಮಾ ವನದೊಳ್ ಕೋಡಗನಾಗಿ ಪುಟ್ಟಿ ಯೋಗದೊಳಿರ್ದ ಮುನಿಯಂ ಕಂಡು ಕ್ರೋಧಂ ಪುಟ್ಟಿ ತೊಡೆಯೊಳ್ ದಸಿಯಂ ಬಲಿಯೆ ದೇಹದ ಮೇಲಾಸೆಯಿಲ್ಲದೆ ಸಮತಾಭಾವಮಾಗೆ ಶಾಂತತೆಯೊಳಿರ್ದೊಡೆ ಮುಳ್ಳುಗಳ ಮೈಯ್ಯೊಳ್ ಚುಚ್ಚಿಯವರ ಪರಿಣಾಮಂಗೆಡದಿರೆ ಕಂಡು ತಾನುಂ ಕ್ರೋಧಮನುಳಿದು ದಸಿಯಂ ಕಿಳ್ತು ಮುಳ್ಳುಗಳಂ ತೆಗೆದು ಗಾಯಕ್ಕೊಂದೌಷಧಿಯಂ ತಂದಿಕ್ಕಿ ಮಾಣಿಸಿಯಾ ಬನದೊಳಗಣ ಪುಷ್ಪಂಗಳಿಂ ಪಾದಾರ್ಚನೆಯಂ ಮಾಡಿ ಉಪಸರ್ಗಂ ಪಿಂಗಿತು ಕೈಯನೆತ್ತಿಕೊಳ್ಳಿಮೆಂದು ಹಸ್ತಸಂಜ್ಞೆಯಂ ಮಾಳ್ಪುದುಮವರ್ ಕಣ್ಣಂ ತೆರೆದು ಪರಸಿ ಧರ್ಮಮಂ ಪೇಳಿಯಹಿಂಸಾವ್ರತಮಂ ಕುಡೆ ಜಾತಿಸ್ಮರಣದಿಂ ತ್ರಿಕರಣಶುದ್ಧಿಯಿಂ ಕೈಕೊಂಡು ಸದ್ಗತಿಯಂ ಪಡೆದುದೆಂದು ಗುಣಪಾಲಮುನಿ ಜಿನದತ್ತಶೆಟ್ಟಿಗೆ ಪೇಳ್ವನಿತಕ್ಕೆ ಕುಬೇರದತ್ತಂ ಕೇಳ್ದು ಬಂದುಪವಾಸಸಹಿತಂ ಪ್ರಸಂಗಿಸುತ್ತಿಪ್ಪ ಯತೀಂದ್ರರುಮಂ ತಂದೆಯುಮಂ ಕಂಡಾಕ್ಷಣದೊಳೆ ತಾನುಂ ಬೈತಿಟ್ಟ ರತ್ನದ ಕಳಶಮಂ ತಂದು ಮುಂದಿಡೆ ಕ್ಷಮೆಯಿಂದೀ ಸಂಸಾರದೊಳಿರ್ಪಂಗೆ ಅಜ್ಞಾನಂ ಬಿಡದೆಂದು ಇಂತೆಂದರ್

ಭೋಗೇ ರೋಗಭಯಂ ಕುಲೇ ಚ್ಯುತಿಭಯಂ ವಿತ್ತೇ ನೃಪಾಲಾದ್ಭಯಂ
ಮಾನೇ ಧೈನ್ಯಭಯಂ ಬಲೇ ರಿಪುಭಯಂ ರೂಪೇ ಜರಾಯಾ ಭಯಮ್
ಶಾಸ್ತ್ರೇ ವಾದಭಯಂ ಗುಣೇ ಖಲಭಯಂ ಕಾಯೇ ಕೃತಾಂತಾದ್ಭಯಂ
ಸರ್ವಂ ವಸ್ತು ಭಯಾನ್ವಿತಂ ಭುವಿನೃಣಾಂ ವೈರಾಗ್ಯಮೇವಾಭಯಮ್ ||

-ಭರ್ತೃಹರಿಯ ಶತಕತ್ರಯ

ಎಂಬುದಂ ಬಗೆದಾ ಮುನಿಪತಿಗಳೊಡನೆ ವನಮಂ ಪೊಕ್ಕು ಪಿತನುಂ ಪುತ್ರನುಂ ತಪಮಂ ಕೈಕೊಂಡರೆಂದು ವಿಪುಲಮತಿಮುನಿಗಳ್ ಪೇಳ್ವುದುಂ ಗಜಕುಮಾರಂ ನೂರ್ವರರಸುಮಕ್ಕಳುಮೈವತ್ತು ಬ್ರಾಹ್ಮಣರುಮೈವತ್ತು ವೈಶ್ಯಪುತ್ರರುಂಬೆರಸು ಸಮವಸೃತಿಯನೆಯ್ದಿ ಒಂದು ಪಾದಲೇಪಯುಕ್ತಮಪ್ಪ ಪ್ರಥಮ ಸೋಪಾನಮಂ ಮೆಟ್ಟಿಯಾಕ್ಷಣದೊಳೆ ವಿಂಶತಿಸಹಸ್ರಸೋಪಾನಮಂ ಕಳೆದು ಧೂಳಿಸಾಲ ಮಾನಸ್ತಂಭ ಸರೋವರ ಪೊನ್ನುಪ್ಪರಿಕಾಗೋಪುರದಿಂದೊಳಗೆ ಕ್ರಮದಿಂ ಜಲಖಾತಿಕಾ ಪುಷ್ಪವಾಟಿ ಪ್ರಾಕಾರ ನಾಟ್ಯಶಾಲೋಪವನ ವೇದಿಕಾಧ್ವಜಭೂಮಿಸಾಲ ಕಲ್ಪದ್ರುಮ ಸ್ತೂಪ ಹರ್ಮ್ಯಾವನಿಯಿಂದೊಳಗೆ ಸ್ಫಟಿಕಪ್ರಾಕಾರದೊಳಗಣ ದ್ವಾದಶ ಕೋಷ್ಟಂಗಳೊಳ್ ಸಪ್ತವಿಧ ಋಷಿಸಮುದಾಯ ಸುರಾಸುರೋರಗ ಮನುಷ್ಯ ಮೃಗ ಪಕ್ಷಿಸಮೂಹದಿಂ ಬಳಸಿದ ತ್ರಿಪೀಠಂಗಳ ಮೇಲೆ ಸಿಂಹಾಸನದ ಮೇಲೆ ನಾಲ್ವೆರಳಂ ಮುಟ್ಟಿದಂಬರದೊಳಪ್ಪ ಮಹಾಪ್ರಾತಿಹಾರ್ಯದಿಂದೊಪ್ಪುವ ಸನ್ಮತಿ ಮಹತಿಮಹಾವೀರ ಶ್ರೀ ವರ್ಧಮಾನಸ್ವಾಮಿ ಕೋಟಿ ಶಶಿಸೂರ್ಯಕಾಂತಿಯಿಂ ದೇದೀಪ್ಯಮಾನದಿಂ ಪೊಳೆಯುತ್ತಿಪ್ಪುದುಂ ನೋಡಿ ತಮ್ಮ ಕಣ್ಗಳ್ ಸಫಲಂಗಳಾದವೆಂದು ತ್ರಿಲೋಕ ಸ್ವಾಮಿಯ ಗಂಧಕುಟಿಯಂ ತ್ರಿಪ್ರದಕ್ಷಿಣಂಗೆಯ್ದು ಸಾಷ್ಟಾಂಗಪ್ರಣಾಮದಿಂ ವಸ್ತುಸ್ತವ ಗುಣಸ್ತವ ರೂಪಸ್ತವಂಗಳಿಂ ನುತಿಯಿಸಿ ಗೌತಮಗಣಧರರ್ ಮೊದಲಾಗೆ ಋಷಿಗಳಿಗಭಿವಂದಿಸಿ ಪನ್ನೊಂದನೆಯ ಮನುಷ್ಯಕೋಷ್ಠದೊಳ್ ಕುಳ್ಳಿಪ್ಪುದುಂ ಸರ್ವಜ್ಞಮುಖ ಸರೋಜದಿಂ ಓಂಕಾರಮಾದ ಸರ್ವಾರ್ಥ ಮಾಗಧೀಯ ಭಾಷಾಸ್ವರೂಪ ದಿವ್ಯಧ್ವನಿ ಪೊಣ್ಮೆ ಗೌತಮಗಣಧರರದಂ ವ್ಯಕ್ತೀಕರಿಸಿ ಸಕಳ ತತ್ತ್ವಾರ್ಥಾದ್ಯಂತಮೆಲ್ಲಮಂ ಸವಿಸ್ತರಂ ಪೇಳಿ ಈ ಹುಂಡಾವಸರ್ಪಿಣಿ ಕಾಲಪ್ರವರ್ತನಮನಿಂತೆಂದು ಪೇಳ್ದರ್.

ಈ ಅವಸರ್ಪಿಣಿಯೊಳ್ ಒಂಬತ್ತು ಕೋಟಾಕೋಟಿ ಸಾಗರೋಪಮಕಾಲಮುತ್ತಮ ಮಧ್ಯಮ ಜಘನ್ಯವೆಂಬ ಭೋಗಭೂಮಿಗೆ ಸಲ್ವಿನಮುಳಿದೊಂದು ಕೋಟಾಕೋಟಿ ಸಾಗರೋಪಮದೊಳ್ ನಾಲ್ವತ್ತೆರಡು ಸಾವಿರ ವರ್ಷಂ ಕುಂದಿದರೊಳ್ ಮೊದಲೈನೂರು ಚಾಪೋತ್ಸೇಧಂ ಕಡೆಯೊಳೇಳು ಹಸ್ತ ಪ್ರಮಾಣ ಶರೀರಂ ಪಂಚವರ್ಣಂಗಳ್ ದಿವದೊಳೊಂದು ವೇಳೆ ಭುಕ್ತರುಮಾ ಕಾಲದೊಳೆ ಇಪ್ಪತ್ತುನಾಲ್ವರ್ ತೀರ್ಥಂಕರರ್ ದ್ವಾದಶ ಚಕ್ರವರ್ತಿಗಳ್ ನವಬಲದೇವ ವಾಸುದೇವ ಪ್ರತಿವಾಸುದೇವರುಂ ನವನಾರದರುಂ ಏಕಾದಶ ರುದ್ರರುಂ ಪುಟ್ಟಿ

ಕರ್ಮಭೂಮಿ ಪ್ರವರ್ತನದಿಂದಂ ನಡೆವುದು. ಬಳಿಯುಮಿಪ್ಪತ್ತೊಂದು ಸಾಸಿರ ವರ್ಷಸ್ಥಿತಿಯನುಳ್ಳ ದುಷ್ಷಮಮೆಂಬ ಪಂಚಮ ಕಾಲಮದರ ಮೊದಲ್ ಏಳು ಮೊಳದುನ್ನತಂ ನೂರಿಪ್ಪತ್ತು ವರುಷಾಯುಷ್ಯ ರೂಕ್ಷವರ್ಣ ಶರೀರರ್, ಎರಡು ಮೂರು ವೇಳೆ ಭುಕ್ತರ್, ಸಮ್ಯಕ್ತ್ವ ಸದಾಜ್ಞನ ಸಚ್ಚಾರಿತ್ರಹೀನರಾಗಿ ಪರಲೋಕಸುಖಮಂ ಬಯಸದೆ ಕ್ರೋಧಾಧಿಗಳಿಂ ದೊಪ್ಪುವ ನಾನಾ ಜಾತಿಗಳಾಗಿ ಮನುಷ್ಯರೆಲ್ಲಂ ವಿಪರೀತ ಗ್ರಾಹಿಗಳಪ್ಪರ್. ಮತ್ತಮಾ ಗಳತಿವೃಷ್ಟಿಯುಮನಾವೃಷ್ಟಿಯು ಮೃಗಪಕ್ಷಿ ಮೂಷಕ ಶಲಭ ಕ್ರಿಮಿ ಪಿಪೀಲಿಕಾದಿ ಬಾಧೆಯುಂ ಸ್ವಚಕ್ರಪರಚಕ್ರಾದಿ ರಾಜಾರಿ ಮಾರಿ ಚೋರಾದಿ ಬಾಧೆಗಳ್ ಪ್ರಬಲಮಾಗಿಪ್ಪುವು.

ಶ್ಲೋಕ || ದಾತಾ ದರಿದ್ರಃ ಕೃಪಣೋ ಧನಾಢ್ಯಃ
ಪಾಪೀ ಚಿರಾಯುಃ ಸುಕೃತೀ ಗತಾಯುಃ
ಅಕುಲೇ ಸುರಾಜ್ಯಂ ಸುಕುಲೇ ಚ ಸೇವಾ
ಕಾಲೇ ಕಲೌ ಷಡ್ಗುಣಮಾಶ್ರಯಂತಿ ||

ನಿರ್ವೀರ್ಯಾ ಪೃಥಿವೀ ನಿರೋಷಧಿರಸಾನೀ ಚಾ ಮಹತ್ವಂ ಗತಾಃ
[ಭೂಪಾಲಾ ನಿಜಕರ್ಮಧರ್ಮರಹಿತಾ ವಿಪ್ರಾಃ ಕುಮಾರ್ಗೇ ರತಾಃ]
ಭಾರ್ಯಾ ಭರ್ತೃಷ್ಟು [ವಿರೋಧಿನೀ ಪರರ್ ತಾ] ಪುತ್ರಾ ಪಿತುರ್ದ್ವೇಷಿಣಃ
[ಕಷ್ಟಂ ತತ್ಖಲುವರ್ತತೇ] ಕಲಿಯುಗೇ ವನಾಂತಂಗತಃ ||

ಧರ್ಮಃ ಪ್ರವ್ರಜಿತಸ್ತಪಃ ಪ್ರಚಲಿತಂ ಸತ್ಯಂ ಚ ದೂರಂ ಗತಂ
ಪೃಥ್ವೀ ಮಧ್ಯ ಫಲಾ ನೃಪಾಃ ಕಪಟಿನೋ ಲೌಲ್ಯೇ ಸ್ಥಿತಾ ಬ್ರಾಹ್ಮಣಾಃ ||

ಮತ್ಯಾಃಕಃ ಸ್ತ್ರೀವಶಗಾಃ ಸ್ತ್ರೀಯೋಽಪಿ ಚಪಲಾಃ ನೀಚಾಜನಾ ಉನ್ನತಾಃ
ಸಾಧುಸ್ಸೀದತಿ ದುರ್ಜನಃ ಪ್ರಭವತಿ ಪ್ರಾಯೇಣ ಕಾಲೇ ಕಲೌ ||

ಮತ್ತಮೀ ದುಷ್ಷಕಾಲದೊಳ್ ಸಾವಿರ ವರುಷಕ್ಕೊರ್ವ ಕಲ್ಕಿಯುಮೈನೂರು ವರುಷಕ್ಕೊರ್ವಮುಪಕಲ್ಕಿಯುಮಪ್ಪರ್. ದುಷ್ಷಮಕಾಲದ ಕಡೆಯೊಳ್ ಕಡೆಯ ಕಲ್ಕಿರಾಜಂ ಜಳಮಂಡನೆಂಬನಾ ಕಾಲದೊಳ್ ವೀರಾಂಗದನೆಂಬ ಋಷಿಯುಂ ಸರ್ವಶ್ರೀಯೆಂಬಜ್ಜಿಯುಂ ಅಗ್ಗಿಲನೆಂಬ ಶ್ರಾವಕನುಂ ಪಂಶುಶ್ರೀಯೆಂಬ ಶ್ರಾವಕಿಯುಮಿಪ್ಪಿನಾಗಳಾಯುಷ್ಯಮಿಪ್ಪತ್ತೈದು ವರುಷಮೆರಡು ಮೊಳನುತ್ಸೇಧ ಶರೀರಂಗಳಾಗೆ ಆ ಕಲ್ಕಿರಾಜಂ ತನಗೆ ತಕ್ಕನಿತು ರಾಜ್ಯಮಂ ಸಾಧಿಸಿ ಎನಗಸಾಧ್ಯರಾರೆಂದು ಮಂತ್ರಿಯಂ ಬೆಸಗೊಳಲೊರ್ವ ಮುನಿಯಿಪ್ಪನೆನಲಾತನೊಳೇನಿಪ್ಪುದೆಂದು ಬೆಸಗೊಳೆ ಬಾಹ್ಯಾಭ್ಯಂತರ ಪರಿಗ್ರಹ ರಹಿತನುಂ ಸಕಲ ಸಂಯಮಸಂಪನ್ನನುಂ ಸ್ವಾತ್ಮಧ್ಯಾನನಿರತನುಮಾಗಿ ಶರೀರ ಸಂರಕ್ಷಣಾರ್ಥಮಾಗೆ ಮಧ್ಯಾಹ್ನಕಾಲದೊಳ್ ಪರಗೃಹದಲ್ಲಿ ನಿರವದ್ಯಾಹಾರಮಂ ಪಾಣಿ ಪುಟದೊಳ್ ಚರಿಗೆಯಂ ಮಾಳ್ಪನೀತನೊರ್ವಂ ನಿನಗೆ ತೆತ್ತು ಬಾಳ್ವನಲ್ಲೆಂಬುದುಂ

ಕಾಲಾವಸಾನಮಪ್ಪುದರಿಂದಾತನ ಮೊದಲ ತುತ್ತಂ ಸುಂಕಂಗೊಳ್ಳಿಮೆಂದು ದೂತನನಟ್ಟಲವರ್ ಪೋಗಿ ಬೇಡಿದೊಡಾ ಮುನಿಗಳ್ ಪಾನೀಯಮುಂ ಕೊಟ್ಟಂತರಾಯಮಾಗೆ ನಿಜಯೋಗಸ್ಥಾನದೊಳಿಪ್ಪುದುಂ ಅಜ್ಜಿಕೆಯರುಂ ಶ್ರಾವಕ ಶ್ರಾವಕಿಯರುಂ ಪೋಗಿ ಮುನಿಗಳಂ ಕೇಳ್ದೊಡವರವಧಿಜ್ಞಾನದಿಂ ಕಾಲಾವಸಾನಮಾಯ್ತಿನ್ನು ಭರತಕ್ಷೇತ್ರದೊಳ್ ಧರ್ಮನಾಶನಮಪ್ಪುದು ಮೊದಲಾಗೆ ಪೇಳಿ ಇಲ್ಲಿಯ ಚತುಃಸಂಘ ಚಾತುರ್ವರ್ಣಂಗಳ್ಗಂ ಮೂರು ದಿನದಾಯುಷ್ಯವೆಂದು ಪೇಳಲನಿಬರುಮಾಹಾರ ಶರೀರ ನಿವೃತ್ತಿಗೆಯ್ದು ಸಕಲ ಸನ್ಯಸನವಿಧಿಯಿಂ ಕಾರ್ತಿಕ ಕೃಷ್ಣಾಂತ್ಯದೊಳ್ ಸ್ವಾತೀನಕ್ಷತ್ರದ ಸೂರ್ಯೋದಯದೊಳ್ ಶರೀರಂಗಳನುಳಿದರ್. ಆ ವೀರಾಂಗದ ಮುನೀಂದ್ರರ್ ಸೌಧರ್ಮವೆಂಬ ಮೊದಲ ಸ್ವರ್ಗದೊಳ್ ಸಾಗರೋಪಮಸ್ಥಿತಿಯಪ್ಪರ್. ಉಳಿದ ಮೂವರಾ ಸ್ವರ್ಗದೊಳೆ ಸಾಧಿತ ಪಲ್ಯೋಪಮಸ್ಥಿತಿಗೊಡೆಯರಪ್ಪರ್. ಅಂದಿನ ಪೂರ್ವಾಹ್ನದೊಳವರ ಮರಣದಿಂ ಧರ್ಮನಾಶನಮುಂ ಮಧ್ಯಾಹ್ನದೊಳಸುರದೇವಂ ಬಂದು ವಜ್ರಾಯುಧದಿಂ ಕಲ್ಕಿರಾಜನನಿರಿದು ಕೊಲ್ವುದುಂ ರಾಜನಾಶಮಕ್ಕುಂ. ಸಾಯಾಹ್ನಮಾಗೆ ಪುದ್ಗಲ ನಿಸ್ಸಾರತೆಯಿಂ ಕಿಚ್ಚು ಕೆಡುಗುಂ.

ಮುಂದೆ ದುಷ್ಷಮಮೆಂಬ ಪಂಚಮಕಾಲದೊಳ್ ಮೂರು ವರ್ಷಮೆಂಟು ತಿಂಗಳು ಪದಿನೈದು ದಿನಮಿರ್ದಲ್ಲಿಂದಿತ್ತಲತಿದುಷ್ಷಮಮೆಂಬ ಷಷ್ಠಮ ಕಾಲ ಪ್ರಾರಂಭಮಾ ಕಾಲಸ್ಥಿತಿ ಏಕವಿಂಶತಿ ಸಹಸ್ರವರುಷಮದರ ಮೊದಲೊಳ್ ಮನುಷ್ಯರಿಮ್ಮೊಳ ನಿಡಿಯರಿಪ್ಪತ್ತು ವರುಷಾಯುಷ್ಯರುಂ ಧೂಮ್ರವರ್ಣರುಂ ಸಂತತಾಹಾರಿಗಳುಮಾ ಕಾಲದ ಕಡೆಯೊಳೊಮ್ಮೊಳನ ತಪದಿನೈದು ಸಂವತ್ಸರಾಯುಷ್ಯಮಾಗೆ ಜೀವಿಸಿ ಸತ್ತು ನರಕ ತಿರಿಯಂಚಗತಿಯೊಳ್ ಪುಟ್ಟುವರುಮಾಜೀವಗ್ರ ವಸ್ತ್ರಾದಿ ವಸನಂಗಳಿಲ್ಲದೆ ಮೃಗಪಕ್ಷಿಯಂತೆವಾವೆ ವರ್ತನಂಗಳ್ ಕುಲಭೇದಮುಂ ಜಾತಿ ಧರ್ಮಮುಂ ಮರಸಾಳೆಂಬುದಿಲ್ಲದೆ ಮತ್ಸ್ಯಾದಿಗಳೆ ತಮಗಾಹಾರಮಾಗೆ ಜೀವಿಸಿ ಸತ್ತು ನರಕ ತಿರಿಯಂಚಗತಿಯೊಳ್ ಪುಟ್ಟುವರುಮಾ ಜೀವಗಳೆ ಬಂದಿಲ್ಲಿ ಪುಟ್ಟುವರಾ ಕಾಲ ಸ್ಥಿತಿ ಇಪ್ಪತ್ತೊಂದು ಸಾಸಿರ ವರುಷಂ ಸಲೆ ಕಡೆಯ ನಾಲ್ವತ್ತೊಂಬತ್ತು ದಿನಮುಳಿದಲ್ಲಿ ಪ್ರಳಯವೆಂಬುದಕ್ಕುಮವರೊಳೆ ಪ್ರಾಣಿಗಳ್ಗೆ ಘೋರತರ ಭಯಂಕರಮಾಗೆ ತೀವ್ರ ವಾತಮುಂ ಕ್ಷಾರಮುಂ ವಿಷಮುಂ ರೂಕ್ಷಮಗ್ನಿ ಮೊದಲಾಗೇಳೇಳು ದಿವಸಮಾಗೆ ಕ್ಷುಲ್ಲಕ ಪರ್ವತಮುಮುಪನದಿಯುಮುಪಸಮುದ್ರಂಗಳ್ ಕರಗೆ ಭೂಮಿ ಸಮತಲಮಾಗಲ್ ಮುಂದೇಳು ದಿವಸಂ ರಜಮುಂ ಧೂಮಮುಂ ವ್ಯಾಪಿಸಿಪ್ಪುವಲ್ಲಿಗೀಯವಸರ್ಪಿಣಿ ಕಾಲಂ ಪೋಗೆ ಬಳಿಕುತ್ಸರ್ಪಿಣಿಕಾಲಂ ಪುಟ್ಟುಗುಮದರ ಮೊದಲತಿ ದುಷ್ಷಮದ ನಾಲ್ವತ್ತೊಂಬತ್ತು ದಿನಂಬರಂ ಜಲಪ್ರಳಯದಿಂದೇಳು ದಿನಂ ಪಂಚಾಮೃತದಿಂದೇಳೇಳು ದಿನಂ ವರ್ಷಮಾಗೆಯಲ್ಲಿಂದತ್ತಲ್ ಜೀವಂಗಳ್ ವಿಜಯಾರ್ಧಗುಹೆಯಿಂ ಖೇಚರರಿಂ ಮ್ಲೇಂಛಾಂತ್ಯದಿಂ ಗಂಗಾ ಸಿಂಧುವಿಂ ಪೊರಮಟ್ಟು ಮೃಷ್ಟತರವಾದ ಮೃತ್ತಿಕಾಹಾರದಿಂ ಶರೀರೋನ್ನತಾಯರ್ಬಳಾದಿಗಳ್ ಪೆರ್ಚುತ್ತುಂ ಪೋಗಲಾ ಕಾಲದೊಳಾವ ಧರ್ಮದ ಸುಳುವಿಲ್ಲಮೆರಡನೆ ಕಾಲದ ಕಡೆಯೊಳ್ ಮನುಗಳುತ್ಪತ್ತಿಯುಂ ಮೂರನೆ ಕಾಲದೊಳ್

ತೀರ್ಥಂಕರ ಚಕ್ರವರ್ತಿ ಬಲ ವಾಸುದೇವರುತ್ಪತ್ತಿ ಉಳಿದ ಮೂರು ಕಾಲಂ ಭೋಗಭೂಮಿಯಪ್ಪವಲ್ಲಿಂದತ್ತಲವಸರ್ಪಿಣಿವರ್ತನಮೆಂದು ಗೌತಮಸ್ವಾಮಿಗಳ್ ನಿರೂಪಿಸಿ ಮತ್ತಮಿಂತೆಂದರ್.

ಈ ಕಾಲದ ಕಡೆ ಈ ವರ್ಧಮಾನ ತೀರ್ಥಂಕರರಿಂದತ್ತಲ್ ತೀರ್ಥಂಕರರಿಲ್ಲ ನಾಮುಂ ಸುಧರ್ಮರುಂ ಜಂಬೂನಾಮರುಂ ಮೂವರನುಬದ್ಧಕೇವಲಿಗಳ ಗಂಧಕುಟಿಯಿಂ ಬಳಿಕ್ಕೆ ಗಂಧಕುಟಿಯಿಲ್ಲ. ಕಡೆಯ ಕೇವಲಿಯಪ್ಪ ಶ್ರೀಧರರ್ ಕುಂತುಗಿರಿಯೊಳ್ ಮುಕ್ತರಾದಿಂ ಬಳಿಕ ಮೋಕ್ಷಮಾರ್ಗಮಿಲ್ಲ. ಚಾರಣೂತ್ಪೃಷ್ಟದಿಂ ಸುಪಾರ್ಶ್ವಚಂದ್ರರಿಂ ಬಳಿಕಿಲ್ಲಿ ಚತುರಂಗುಲ ಚಾರಣರ್ ಸಮಂತಭದ್ರರಿಂದತ್ತಲಿಲ್ಲ. ಪ್ರಜ್ಞಾಶ್ರಮಣರೊಳ್ ವಜ್ರಯಶನುಂ ಅವಧಿಜ್ಞಾನಿಗಳೊಳ್ ಶ್ರೀದಾಮನುಮೆಂಬವರಿಂ ಬಳಿಕ್ಕಂತಪ್ಪರಿಲ್ಲ. ಚಂದ್ರಗುಪ್ತನೆಂಬ ಮಕುಟಬದ್ಧಂ ದೀಕ್ಷೆಗೊಂಡಿಂ ಬಳಿಯಂ ಮಕುಟಬದ್ಧರ್ಗೆ ದೀಕ್ಷೆಯಿಲ್ಲಮಲ್ಲಿಂದತ್ತಂ ಕ್ರಮದಿಂ ಜ್ಞಾನಶೂನ್ಯರಪ್ಪರೆಂದು ಗೌತಮಗಣಾಗ್ರಹ್ಯರೊರೆವುದುಮಂತು ಕೇಳ್ದು ಮನುಷ್ಯರೆಂತಪ್ಪರೆಂದೊಡೆ

ಗಾಹೆ || **ಪಂಚಮಯಾಲಿ ಮಣುಜೋ ವಿಸಯಕಸಾಯಮಯಿಮುತ್ತೋ**
ಲಂಪಟಧಂಮವಿಹೀನೋ ಕುಡಿಲಪಪಂಚೇಹಿ ಭಟ್ಟದುಸ್ಸಂಗೋ ||

ದಾನಮೆಂತಪ್ಪುದೆನೆ

ವಿಣಓ ಭತ್ತಿವಿಹೀಣೋ ಮಹಿಳಾನಿಂ ರೋದಣಂ ವಿಣ್ಣಾಣೇಹಿಂ ಚ
ಗೋಯರಗ್ಗವಿಣಾ ಏದೇ ಡೊಂಬಾರಿಯಾ ಭಣಿಯಾ

ಭಯಾಶಾಸ್ನೇಹಲೋಭಾದಿಗಳಿಂ ಧರ್ಮಂ ಪ್ರವರ್ತಿಸುಗುಮಲ್ಲಿ ಧಾರ್ಮಿಕರ್ ಕೆಲಂಬರ್ ಭಕ್ತಿಪೂರ್ವಕಂ ಸಮ್ಯಗ್ದರ್ಶನದೊಳ್ ಮಿಶ್ರಪರಿಣಾಮರ್ ಸಾಧಾರಣದಿಂದನೇಕರಪ್ಪರ್ ಶುದ್ಧ ಸಮ್ಯಗ್ದೃಷ್ಟಿಗಳನವರತಂ ಮೂವರಿಂ ಕಡಮೆಯಿಲ್ಲಾದರಿಂ ಪೆರ್ಚರೆಂದರ್

ಗಾಹೆ || **ಪಂಚಮಯಾಲೇ ಮಣುಜೋ ಸಂಮದ್ದಿಟ್ಠೀ ಬದ್ಧಪರಿಣಾಮೀ**
ಸೇ ಮರಿಯೇ ವಿದೇಹೇ ಣವಮವಸ್ಸೇಹಿ ಕೇವಲಿ ಹೋ ಈ

ಎಂಬಿವಾದಿಯಾದ ಮುಂದಣ ಕಾಲದೊಳಗೆಲ್ಲಂ ಏಳುನೂರತೊಂಬತ್ತು ಜಾತಿಗಳುಮವರವರ ಒಳಭೇದಂಗಳುಮನೇಕಂಗಳಾಗಿ ಕುಧರ್ಮಂಗಳಪ್ಪವೆಂದೀ ಕಾಲದೋಷಂಗಳೆಲ್ಲಮಂ ಪೇಳೆ ಕೇಳ್ದನಿಬರುಂ ನಿರ್ವೇಗದಿಂ ದೀಕ್ಷಿತರಾದ ರಾತ್ರಿ ಲೋಕಸ್ವಾಮಿ ಮೂವತ್ತು ವರ್ಷಂ ವಿಹಾರಿಸುತ್ತೆ ಧರ್ಮಾಮೃತವರ್ಷದಿಂ ಭವ್ಯಸಸ್ಯಮಂ ತಣಿಪಿ ಬಳಿಕ ಪಾವಾಪುರದ ಬಹಿರುದ್ಯಾನವನದೊಳುನ್ನತ ಭೂಮಿ ಪ್ರದೇಶದೊಳ್ ಪದ್ಮಸರೋವರ ಮಧ್ಯದೊಳ್ ದಂಡಕವಾಟಪ್ರತರ ಲೋಕಪೂರಣಮೆಂಬ ಚತುಸ್ಸಮುದ್ಘಾತದಿಂ ಸಾತಾವೇದನೀಯಾಯುಷ್ಯ ನಾಮ ಗೋತ್ರಂಗಳೆಂಬ ನಾಲ್ಕುಮಘಾತಿಗಳ್ ದಗ್ಧರಜ್ಜುವಂತಿರ್ದವಂ ದೂರೀಕೃತಂ ಮಾಡಿ

ನಿತ್ಯ ನಿರಂಜನ ನಿರ್ಮಲ ಪಾವನ ಪವಿತ್ರ ನಿತ್ಯಾನಂದ ನಿರ್ವಿಕಲ್ಪ ಚಿದಾನಂದಸ್ವರೂಪನು ಸಮ್ಯಕ್ತ್ವಾದ್ಯಷ್ಟ ಗುಣ ನಿರುಪಮಾಮೂರ್ತ ಪರಮಾತ್ಮನು ಕಲ್ಯಬ್ದಂಗಳು ಎರಡು ಸಾವಿರದ ನಾನೂರ ಮೂವತ್ತೆಂಟು ಸಂದ ಕಳಾಯುಕ್ತಿ ಸಂವತ್ಸರದಾಶ್ವೀಜ ಬಹುಳಮಾ:ದ್ವಾದಶಿ ಸ್ವಾತೀ ನಕ್ಷತ್ರದ ಬೆಳಗಪ್ಪ ಜಾವದೊಳ್ ಪಂಚಹ್ರಸ್ವಾಕ್ಷರ ಮಾತ್ರದೊಳೆ ತ್ರಿಲೋಕದ ತುತ್ತತುದಿಯ ಈಷತ್ಪ್ರಾಗ್ಭಾರದ ಸಿದ್ಧಶಿಲೋಪರಿಯತನುಪಾಂತದೊಳ್ ಸರ್ವವ್ಯಾಪಿಯಾಗಿ ಮೋಕ್ಷಸಂಪತ್ತಿಗಧೀಶ್ವರನಾಗಲಿತ್ತಲಾ ಪ್ರದೇಶಕ್ಕೆ ಚತುರ್ನಿಕಾಯಸಮೇತಂ ದ್ವಾತ್ರಿಂಶತ್ ಸುರೇಂದ್ರರ್ ತಂತಮ್ಮ ವಾಹನ ವಧೂಚ್ಛಿನ್ನಸಹಿತಂ ಬಂದಾ ಪಾವಾಪುರದ ಸರಸಿಭೂಮಿಯಂ ದಿವ್ಯಾರ್ಚನೆಗಳಿಂದರ್ಚಿಸಿ ಚತುರಸ್ರಕುಂಡದೊಳ್ ಅಗ್ನೀಂದ್ರಾತಿರೀಟೋದ್ಭವ ಗಾರ್ಹಪತ್ಯಾಗ್ನಿಯೊಳಾ ದೇವದೇವನ ರೂಪ ಮಾಯಾಮಯಮಂ ಕಾಳಾಗರು ಗೋಶೀರ್ಷ ಸುರಭಿ ಚಂದನಾದಿಗಳಿಂ ಭಾವಸತ್ಕಾರಂಗೆಯ್ದು ಮುನಿನರಸುರಾಸುರರೆಲ್ಲ ಕರ್ಪೂರಘೃತಂ ಮೊದಲಾದ ಕೃತ್ರಿಮ ದೀಪವರ್ತಿಗಳುಂ ಪನ್ನೆರಡು ಲಕ್ಷಗಳು ಕೋಟಿರತ್ನದೀಪಂ ಮೆರೆಯೆ ದೇವಕಾಂತೆಯರು ಮಂಗಲ ದ್ರವ್ಯಂಗಳಂ ಭಾಜನದೊಳಿಟ್ಟು ಬರೆ ದಿವ್ಯಜಲ ಗಂಧಾಕ್ಷತೆ ಪುಷ್ಪಚರು ದೀಪಧೂಪ ಫಲಾರ್ಘ್ಯಂಗಳ ಪ್ರತ್ಯೇಕ ಪರ್ವತೋಪಮಮಾಗರ್ಚಿಸಿ ದಿವ್ಯವಾದಿತ್ರಮೊಸೆಯೆ ಸರ್ವರುಮಾ ವಿಭೂತಿಯಂ ಸ್ವಕೀಯ ದೇಹಂಗಳೊಳಿಟ್ಟು ಆನಂದನೃತ್ಯಮಾಡಿ ದೇವೇಂದ್ರಂ ಪರಿನಿರ್ವಾಣ ಕಲ್ಯಾಣಪೂಜೆಯಂ ಮಾಡಿ ಪೋದನಂದಿಂದಿತ್ತಲ್ ವರ್ಷಂಪ್ರತಿ ಜನರೆಲ್ಲ ದೀಪಾವಲಿಯೆಂದುಂ ಲಕ್ಷದೀಪಾವಳಿಯೆಂದುಂ ದೀಪಂಗಳಂ ಪೊತ್ತಿಸುವರ್. ಮತ್ತಮಾ ದಿವಸದೊಳೆ ಗೌತಮಸ್ವಾಮಿಗಳ್ಗೆ ಕೇವಲಜ್ಞಾನೋತ್ಪತ್ತಿಯಾಗೆ ಭೂಮಿಯಿಂ ಮೇಲೆ ಎರಡೂವರೆ ಕ್ರೋಶೋನ್ನತಮಾದಂಬರದೊಳ್ ನಿಲೆ ಇಂದ್ರನ ಬೆಸದಿಂ ರಾಜರಾಜನಿರ್ಮಿತಮಪ್ಪ ಮಾನಸ್ತಂಭಾದಿ ಚತುಃಪ್ರಾಕಾರ ಸಿಂಹಾಸನಾದಿ ನಾಲ್ಕು ಮಹಾಪ್ರಾತಿಹಾರ್ಯಾದ್ಯತಿಶಯದಿ ಋಷಿಯರ್ಜಿಕಾ ಶ್ರಾವಕ ಶ್ರಾವಿಕಾ ಚತುರ್ನಿಕಾಯ ದೇವ ತಿರ್ಯಂಚಾದಿ ಪರಿವೃತರಾಗಿ ದ್ವಾದಶ ವರುಷಂ ವಿಹಾರಿಸುತ್ತಂ ಧರ್ಮಾಮೃತಮಂ ಕರೆಯುತ್ತುಂ ಕುಳಿಕರಾಜಂಗೆ ಭವಾವಲಿಯಂ ಪೇಳಿ ಮೋಕ್ಷ ಲಕ್ಷ್ಮಿಯಂ ಕೈಕೊಳ್ವುದುಮಾ ದಿನವೆ ಸುಧರ್ಮರಿಗೆ ಕೇವಲೋತ್ಪತ್ತಿಯಾಗಿ ವಿಹಾರಿಸಿ ಮುಕ್ತರಾದರಾಗಳೆ ಜಂಬೂಸ್ವಾಮಿಗಳ್ಗೆ ಗಂಧಕುಟಿಯಾಯ್ತು. ಈ ಅನುಬದ್ಧಕೇವಲಿಗಳಾದರ್.

ಅತ್ತಲ್ ಸೌರಾಷ್ಟ್ರ ದೇಶದೊಳ್ ಪಾರ್ಶ್ವಭಟಾರಕಂ ಏಕಾದಶ ಶುತ್ರಧಾರಿಯಾಗಿ ಸಕಲ ವಿದ್ಯಾಪ್ರವೀಣಂ ವರ್ಧಮಾನಸ್ವಾಮಿಗಳ್ಗೆ ಗಣಧರನಾಗಲೆಂದಿರ್ದು ಗರ್ವಸ್ಥನಾಗೆ ಗೌತಮರ್ಗಾ ಪದಿವಿಯಪ್ಪುದುಮತ್ಯಂತ ಕ್ರೋಧಂ ಸಂಭವಿಸಿ ಇಂದ್ರಜಾಲದಿಂ ಪ್ರತಿ ಸಮವಸರಣಮನೊಡ್ಡಿ ತೋರಿದೊಡಂ ಭವ್ಯರೆರಗದಿಪ್ಪುದುಂ ತನ್ನ ಶಿಷ್ಯರ್ ಭಾವಸೇನ ವರಸೇನರ್ ಮೊದಲಾಗೆ ಐನೂರ್ವರ್ ಶಿಷ್ಯರ್ವೆರಸು ತಾನು ಅಜ್ಞಾನಮಿಥ್ಯಮುಂ ಕೈಕೊಂಡು ಮಸ್ಕರೀಪೂರಣಮುನವಲಂಬಿಸಿ ಅಲ್ಲಾಕುದನೆಂದು ತಾನೊಂದು ನವೀನ ಮತಮಂ

ನಿರ್ಮಿಸಲೆಂದು ಅದಕ್ಕೆ ತಕ್ಕ ಸೂತ್ರಂಗಳಂ ಕಲ್ಪಿಸಿ ಷಣ್ಮತಂಗಳಂ ಪೂರ್ವಪಕ್ಷಂಗೆಯ್ದು ವೇಷ ಭಾಷೆ ನಡೆಯೆಲ್ಲಮಂ ಪೊಸಕಂ ಮಾಡಿ ಪಾರ್ಶಿಯೊಳರಿಪು ಮೊದಲಾಗೆ ವರ್ಣಂಗಳಂ ಶಾಸ್ತ್ರಭೇದಮಂ ಶಿವಂ ದಯಗೆಯ್ದನೆಂದು ವಿದ್ಯಾಬಲದಿಂ ಮಕ್ಕಾದೇಶದ ಪೈಗಂಬರ ಮಹಮ್ಮದರೆಂದು ಬೌದ್ಧಾಚಾರಮುಳ್ಳ ದೊರೆಗಳ್ ನಾಲ್ವರಂ ವಶಂ ಮಾಡಿಕೊಂಡು ಪ್ರತ್ಯಂತ ದೇಶದರಸುಗಳ್ಗಂ ಉಪದೇಶಂಗೈದು ವೇದದೊಳ್ ಪೇಳ್ದಂತೆ ಮಂತ್ರಪೂರ್ವಕಂ ಜೀವಮಂ ಕೊಂದು ತಿಂದೊಡಂ ಪಾಪಮಿಲ್ಲೆಂದು ಇಹಲೋಕಸುಖಮಂ ಬಯಸಿ ಸರ್ವರ್ಗಂ ಪೇಳೆ ಎಲ್ಲರಂ ನಂಬಿಸಿ ಕೈಕೊಳಿಸಿ ತಾನುಂ ದೇವಾಲಯಮಂ ಪೊಕ್ಕು ಶಾಪಮನಿಕ್ಕಿ ಪೋಗಲಿತ್ತಲಾ ಮುಸಲಮಾನರುಂ ಪಿಂದಣರಸುಗಳ್ ಬಹುದಿನಂ ಕಾದಿ ಮಡಿದರ್. ಪಾರ್ಶ್ವಭಟ್ಟನ ಶಿಷ್ಯಂ ಮಲ್ಲಿಭಟ್ಟಂ ಮುಲ್ಲಾಶಾಸ್ತ್ರಮಂ ಮಾಡಿ ಅಲ್ಲಿ ಪಾರ್ಶಿ ದಕಿನಿಯೆಂದು ಎರಡು ಭೇದಮಾಯ್ತು. ಮುಸಲಮಾನರು ನಾಲ್ಕಾಗಿಯೂ ಮತ್ತೆ ಮತ್ತೆ ಪದಿನೆಂಟು ಭೇದಮಾಗೆ ವರ್ತಿಸುವರ್.

ಮತ್ತಂ ಕಿರಾತದೇಶದೊಳ್ ಭಿಲ್ಲರಾಜನೆಂಬನತಿಪ್ರಬಳನಾಗಿ ತನ್ನ ದೇಶದೊಳಿರ್ದರಂ ಯವನ ಬಿಲ್ಲ ಮೊದಲಾಗೆ ಇಪ್ಪತ್ತೊಂದು (೨೧) ಜಾತಿಯಂ ಮಾಡಿದನಿಂತಾಗೆ ಪಾಟಳಿಪುರದೊಳ್ ಹರಿವಾಹನನೆಂಬರಸನಾಳುತ್ತಿರೆ ಶಾಕ್ಯನೆಂಬ ಬೌದ್ಧಾಚಾರಿ ತನ್ನ ಶಿಷ್ಯವರ್ಗ ಸಹಿತಂ ಬಂದು ತನ್ನ ಮತಪ್ರಭಾವನೆಯಂ ಮಾಡುತ್ತ ವಿದ್ಯಾವಿಶೇಷ ರಾಜಸಭೆಯನೆಯ್ದಿದಂ. ಛಂದೋಲಂಕಾರ ತರ್ಕ ವ್ಯಾಕರಣಾದಿ ಶಾಸ್ತ್ರಂಗಳೊಳ್ ಪಾರಗಂ ಗರ್ವೋದ್ಧತನಾಗಿ ಜೀವಾಭಾವಮಂ ನುಡಿದು ಕರ್ಮ ಕರ್ತೃವಾಗಿಯುಂ ಭೋಕ್ತೃವಲ್ಲೆಂದು ನುಡಿವ ಮಾತಿಂಗೆ ವಿಷ್ಣುಯೋಗೀಶ್ವರರ ಶಿಷ್ಯಸ್ಥವಿಷ್ಟಾಚಾರ್ಯರೆಂದರ್. ಪಾಪಕರ್ತೃಗಳಿಗೆ ನರಕ ಪುಣ್ಯಕರ್ತೃಗಳಿಗೆ ಸ್ವರ್ಗ ಪಾಪಪುಣ್ಯಂ ಮಿಶ್ರವಾದ ಕರ್ತೃಗಳ್ಗೆ ಮನುಷ್ಯಗತಿಯಪ್ಪುದರಿಂದಲ್ಲಿಯ ದುಃಖ ಸುಖಾದಿಗಳಂ ಭುಂಜಿಸುವುದೆ ಫಲಮೆಂಬುದುಂ ಶಾಕ್ಯಂ ನಗುತ್ತುಮಿಂತೆಂದಂ ಪಾಪಪುಣ್ಯಂಗಳೆಂತಿಪ್ಪವವರ ಬಣ್ಣಮೆಂತುಟು ನರಕ ಸ್ವರ್ಗಂಗಳೆಲ್ಲಿಪ್ಪವವಂ ಕಂಡುಬಂದವರಾರು? ಬರಿಯ ಮಾತಿದು ಗಂಧರ್ವನಗರವಿಳಾಸದಂತೆಂದು ನುಡಿವುದಾಚಾರ್ಯನೆಂದಂ ಕಣ್ಣಿಲ್ಲದ ಕಂಗಳನೆಂತುಂ ಮುಂದಿರ್ದ ಮದ್ದಾನೆಯಂ ಕಾಣ್ಬನಲ್ಲನಂತೆ ಜ್ಞಾನಲೋಚನವಿಲ್ಲದವರು ಪಾಪಪುಣ್ಯ ಸ್ವರ್ಗಾದಿಗಳಂ ಕಾಣರದರಿಂ ಪಾಪಮಂಧಕಾರರೂಪದಿಂ ವ್ಯಾಪ್ಪುವದನದಂತಿಪ್ಪುದು. ಪುಣ್ಯಂ ಪ್ರಕಾಶಸ್ವರೂಪಾಗಿ ಚಂದನಕಲ್ಪದಂತಿಪ್ಪುದು. ದುಃಖ ಸುಖಾದಿಗಳನನುಭವಿಸಿದ ಜೀವಂಗಳೆಲ್ಲಂ ಕಂಡುಬಂದವರು. ನಿನ್ನ ಪತ್ತಿಪ್ಪ ಬೆನ್ನಂ ನೀ ಕಾಣೆ ಬಹುದೂರಮಾಗಿರ್ಪ ಸ್ವರ್ಗಮನೆಂತು ಕಾಣ್ಬೆ? ಲೋಕದೊಳ್ ಸುಲಭದಿ ಬಾಳುವವರಂ ಕಂಡು ಅವರ ಪುಣ್ಯಫಲಮೆಂಬರು. ದುಃಖದಿಂ ನಮೆವವರಂ ನೋಡಿ ಪಾಪದ ಫಲಮೆಂಬೀ ಜನವಾಕ್ಯಮಂ ಕಂಡು ಕೇಳಿ ಅಂಧ ಬಧಿರನಂತೆ ಜೀವಕ್ಕೆ ಪುಣ್ಯಪಾಪಮಿಲ್ಲೆಂದು ವಾದಿಸುವುದುಮುಗ್ರಮಪ್ಪ ಕರ್ಮ ಸಂಪೂರ್ಣಮಪ್ಪ ಸಂಸಾರ ಜೀವಸ್ವಭಾವಂ.

ಶ್ಲೋಕ || ಹಸಂತೀ ಕರ್ಮಮಾದತ್ತೇ ರುದಂತೀ ಚಾನುಭೂಯತೇ
ಹಸಂತೀ ಗರ್ಭಮಾದತ್ತೇ ರುದಂತೀವ ಪ್ರಸೂಯತೇ ||

ತರಣಿಪುಳು ಪ್ರಯತ್ನದಿ ಗೂಡಂ ಮುಚ್ಚಿ ಅಲ್ಲೆ ಸಾಯ್ಪಂತೆಯುಂ ಕೋಡಗನುರುಳಿಕ್ಕಿದ ಪಿಟ್ಟಿಗೆರಗಿಯುರುಳೊಳ್ ಸಿಕ್ಕಿ ಪಲ್ಲಂ ಕಿರಿವಂತೆ ಅಭವ್ಯಜೀವಕ್ಕೆಂದುಂ ಮುಕ್ತಿಯಿಲ್ಲದುದರಿಂ ಶೂನ್ಯವಾದಮಂ ಪಿಡಿದು ಚರ್ಚಿಸುವರೆಂದು ಆಚಾರ್ಯರ್ ಪೇಳ್ವುದು. ಮಿಥ್ಯಾ ಬ್ರಾಹ್ಮಣರ್ ಕೆಲರೆಂದರ್ ಪೂರ್ವಭವಸ್ಮರಣೆಯು ಆತ್ಮಂಗೇಕೆ ತಿಳಿಯದೆಂದೊಡಮಾಚಾರ್ಯನೆಂದನೀ ಭವದೊಳ್ ಗರ್ಭದೊಳಿರ್ದುದು ಪುಟ್ಟಿದುದು ತೊಟ್ಟಿಲೊಳ್ ಬೆಳೆದುದಾದಿಯಾಗಿ ತನ್ನನುಭವಂ ತನಗೆ ಅಜ್ಞಾನದಿಂ ತಿಳಿಯದಿರ್ದೊಡದೆಲ್ಲಂ ಪುಸಿಯೆಂದು ಪೇಳಬೇಕು. ಅಂತೆ ಪೂರ್ವಜನ್ಮಪ್ರಪಂಚಮಂ ಜ್ಞಾನಾವರಣೀಯ ಕರ್ಮಾಂಧಕಾರದಿಂ ಕಾಣರೆಂದಿವಾದಿ ಹೇತುದೃಷ್ಟಾಂತದಿಂ ಪೇಳಿ ಸಭಾಪತಿಯಂ ಸಭೆಯಂ ಮೆಚ್ಚಿಸೆ ಜೀವಸಿದ್ಧಿಯೆಲ್ಲರುಂ ನಂಬಿ ಷಣ್ಮತಂಗಳೊಳ್ ಜೈನಮತಮೆ ಸತ್ಯಮೆಂದು ಸರ್ವರ್ ನಿಶ್ಚಯಂ ಮಾಡಿದರ್.

ಈ ಪ್ರಕಾರದಿಂ ಕೆಲವು ಕಾಲಂ ಸಲೆ ಈ ಭರತ ಪುಂಡ್ರವರ್ಧನ ವಿಷಯದ ಕೋಟಿಕಪುರವಮಾನಾಳ್ವ ಪದ್ಮರಥನಾತನರಸಿ ಪದ್ಮಶ್ರೀಯವರ ಪುರೋಹಿತಂ ಸೋಮಶರ್ಮನೆಂಬ ಬ್ರಾಹ್ಮಣನಾತನ ಕುಲವಧು ಸೋಮಶ್ರೀಯವರ್ಗೊರ್ವ ಪುತ್ರಂ ಶುಭಲಗ್ನದೊಳ್ ಪುಟ್ಟೆ ಸೋಮಶರ್ಮಂ ಜ್ಯೋತಿಶ್ಶಾಸ್ತ್ರಪ್ರವೀಣನಪ್ಪುದರಿಂ ಶೋಧಿಸಿ ನೋಡಿ ಈತಂ ಜೈನದರ್ಶನದೊಳ್ ಮಾನ್ಯನಪ್ಪನೆಂದರಿದು ಭದ್ರಬಾಹುವೆಂದು ಪೆಸರಿಟ್ಟು ಜಿನಪೂಜೆಯಂ ಮಾಡಿಸಿ ಜಿನಮತ ಮರ್ಯಾದೆಯೊಳ್ ಬಾಳಾಕ್ಷರಾಭ್ಯಾಸೋಪನಯನಂ ಮಾಡೆ ಏಳುವರುಷಮಾಗಲೊಂದು ದಿವಸಂ ಭದ್ರಬಾಹುಕುಮಾರಂ ತನ್ನೊಡನಾಡುವ ಮಾಣಿಗಳಂ ಕೂಡಿಕೊಂಡು ಪುರದ ಪೊರವೊಳಲೊಳ್ ಗೊಟ್ಟಿಯನಾಡುತ್ತುಂ ಗೊಟ್ಟಿಗಳನೊಂದರ ಮೇಲಾಗೆ ಪದಿಮೂರು ಗೊಟ್ಟಿಯನಿರಿಸಿದ ಸಮಯದೊಳ್

ಇತ್ತ ಜಂಬೂಸ್ವಾಮಿ ನಿರಂಜನಪ್ರಾಪ್ತರಾದಿಂ ಬಳಿಯಂ ವಿಷ್ಣು ನಂದಿಮಿತ್ರಾಪರಾಜಿತ ಗೋವರ್ಧನರೆಂಬ ನಾಲ್ವರ್ ಶ್ರುತಕೇವಲಿಗಳ್ ವಂದನಾನಿಮಿತ್ತಂ ಪೋಗಿ ಜಂಬೂಸ್ವಾಮಿ ನಿರ್ವಾಣವಂದನೆಯಂ ಮಾಡಿಪ್ಪಲ್ಲಿ ಅವರೊಳ್ ಗೋವರ್ಧನ ಮಹಾ ಮುನಿಗಳ್ ಪಂಚಶತಮುನಿಗಳ್ವೆರಸು ಕೋಟಿಕಪುರದ ಪೊರವೊಳಲೊಳೆ ಬರುತ್ತುಂ ಪದಿಮೂರು ಗೊಟ್ಟಿಯನಿಟ್ಟು ಆಡುವ ಭದ್ರಬಾಹುವಂ ಕಂಡು ಆತನಷ್ಟಾಂಗ ಮಹಾ ಲಕ್ಷಣಮಂ ನೋಡಿ ಈತಂ ಕಡೆಯ ಶ್ರುತಕೇವಲಿಯಪ್ಪನೆಂದು ಗೋವರ್ಧನಸ್ವಾಮಿಗಳಾ ಭದ್ರಬಾಹುವಿನ ಕೈಯಂ ಪಿಡಿದೊಡಗೊಂಡು ಪೋಗಿ ಸೋಮಶರ್ಮಂಗೆ ಭವತ್ಪುತ್ರ ಭದ್ರಬಾಹುವನೆಮಗೆ ಕುಡಲ್ ಶಾಸ್ತ್ರಾಭ್ಯಾಸಮಂ ಪೇಳ್ದು ಸಕಲಾಗಮದೊಳ್ ಪ್ರವೀಣನಂ ಮಾಳ್ಪೆನೆನೆ ಸೋಮಶರ್ಮಂ ನಮಸ್ಕಾರಪೂರ್ವಕಂ ಇಂತೆಂದನೀತಂ ಪುಟ್ಟಿದಂದೆ ಜೈನಶಾಸನದೊಳ್ ಸಮರ್ಥನಪ್ಪನೆಂದರಿದಿರ್ದೆನೀತನಂ ನಿಮ್ಮಂತು ಮಾಳ್ಪುದೆಂದವರ್ಗೊಪ್ಪಿಸಲಾತನ ಜನನಿಯಪ್ಪ ಸೋಮಶ್ರೀ ವಿಷಣ್ಣೆಯಾಗಿ ಈತಂಗೆ ದೀಕ್ಷೆಯಂ ಕುಡುವಾಗಲೆಮ್ಮಲ್ಲಿಗಟ್ಟಿದೊಡವನಂ

ನೋಡಿ ಕಳುಹಿಸುವೆ ನೆನೆ ಗೋವರ್ಧನಸ್ವಾಮಿಗಳಾತನಂ ಕರೆದುಕೊಂಡು ಬಂದಾತಂಗೊರ್ವ ಶ್ರಾವಕನ ಗೃಹದೊಳ್ ಭೋಜನಾದಿಗಳ್ಗೆ ನಿಯಮಿಸಿಯಾತಂಗೆ ಯೋಗಿನಿ ಸಂಗಿನಿ ಪ್ರಜ್ಞಾನಿ ಪ್ರಜ್ಞಪ್ತಿಗಳೆಂಬ ನಾಲ್ಕು ಮಹಾವಿದ್ಯಮುಂ, ಅನುಯೋಗ ಚತುಷ್ಟಯವೇದಮಂ ಪರ್ಯಾಯಕ್ಷರ ಪದಸಂಘಾತ ಚತುರ್ದಶಪೂರ್ವ ಮೊದಲಾದ ಶಾಸ್ತ್ರಮನೋದಿಸೆ ಸಂಸಾರ ಶರೀರ ಭೋಗದೊಳ್ ವೈರಾಗ್ಯಂ ಪುಟ್ಟಿ ದೀಕ್ಷೆಯಂ ಬೇಡಲವರ ತಂದೆತಾಯಿಗಳಲ್ಲಿಗೆ ಕಾಣಿಸುವಾಗಳ್ ರಾಜಭವನದೊಳ್ ಪತ್ರಾಲಂಬನಮಂ ಮಾಡಿದುದನಾರ್ಗಂ ಭೇದಿಸಲ್ ನೆರೆಯದಿರಲದಂ ಭದ್ರಬಾಹು ನೋಡಿ ತಿಳಿದುಸುರ್ದೊಡರಸಂ ಸೋಮಶರ್ಮನುಂ ಗೋವರ್ಧನರುಂ ಭದ್ರಬಾಹುವಂ ಪೂಜಿಸಿ ಪೊಡೆವಟ್ಟು ಕಳಿಪೆ ತಾಯಂ ಕಂಡು ಕಳುಹಿಸಿಕೊಂಡು ಬಂದು ದೀಕ್ಷೆಗೊಂಡು ಜ್ಞಾನ ಧ್ಯಾನ ತಪಸ್ಯಯಮಸಂಪನ್ನರಾಗಿಯಾ ಚಾರ್ಯಪಟ್ಟಮನಾಂತಿರಲಾ ಗೋವರ್ಧನ ಶ್ರುತಕೇವಲಿಗಳ್ ಸಮಾಧಿವಿಧಿಯಿಂ ನಿರ್ಜರಲೋಕಪ್ರಾಪ್ತರಾದರಿತ್ತ ಮತ್ತೊಂದು ಕಥಾಂತರಮೆಂತೆಂದೊಡೆ

ಪಾಟಳೀಪುತ್ರಮೆಂಬ ಪುರದೊಳ್ ನಂದಮಹಾರಾಜನಾತನ ಮಂತ್ರಿಗಳ್ ಬಿಂದು ಸುಬಿಂದು ಕುಬೇರ ಸಕಟಾಳನೆಂಬ ನಾಲ್ವರೊಳ್ ಸಕಟಾಳಂ ಚತುರೋಪಾಯಸಂಪನ್ನ ನಾಗಿರಲೊಂದು ದಿನಂ ಪ್ರತ್ಯಂತವಾಸಿಗಳೆತ್ತಿಬಂದು ನಾಡ ಗಡಿಗಳಂ ಕೊಂಡು ನಂದನನಂ ಸಮರಕ್ಕೆ ಬರವೇಳ್ದುದಂ ಸಕಟಾಳ ಮಂತ್ರಿ ಪೇಳೆ ನಂದನಿಂತೆಂದನೀ ವಿಷಯಕ್ಕೆ ನೀನೆ ಸಮರ್ಥನಪ್ಪುದರಿಂ ನೀನೆಯದಕ್ಕುಪಾಯಮಂ ಪೇಳೆಂಬುದುಂ ಸಕಟಾಳಂ ಅವರತಿ ಬಲಿಷ್ಠರಾದುದರಿಂ ಕಾಳಗಂ ಸಲ್ಲದುದರಿಂದುಪಪ್ರದಾನಂ ಮಾಡಲಕ್ಕುಮೆನೆ, ಅಂತಾದೊಡೆ ನೀಂ ಪೇಳ್ದುದೆ ಕಾರ್ಯಮೆಂದು ಕೋಶಾಧ್ಯಕ್ಷನಂ ಕರೆದು ಸಕಟಾಳಮಂತ್ರಿಯು ಕೇಳಿದಷ್ಟು ದ್ರವ್ಯಮಂ ಕುಡುವುದೆಂದು ಪೇಳೆ ಬೊಕ್ಕಸದೊಳಿರ್ದ ವಿತ್ತಮಂ ಕೊಂಡೊಯ್ದು ಸಕಟಾಳಂ ಪರನೃಪರಂ ಮನ್ನಿಸಿ ಕೊಟ್ಟುಕಳುಪಿದಂ.

ಮತ್ತೊಂದು ದಿನಂ ನಂದನಂ ಭಂಡಾರಮಂ ನೋಡಿ ದ್ರವ್ಯಮೆಲ್ಲಂ ಎತ್ತ ಪೋದುದೆನೆ ಭಂಡಾರಿಯಿಂತೆಂದನೆಲ್ಲಮಂ ಸಕಟಾಳ ಮಂತ್ರಿ ಶತ್ರುಗಳ್ಗೆ ಕೊಟ್ಟನೆಂಬುದುಂ ವಿಚಾರವಿರಹಿತಂ ದುಷ್ಟಬುದ್ಧಿಯಿಂ ಸಕಟಾಳನಂ ಪುತ್ರ ಕಳತ್ರ ಸಹಿತಂ ನೆಲವಾಳಿಗೆಯೊಳಿಕ್ಕಿ ಮುಚ್ಚಿ ಒಂದು ಗವಾಕ್ಷದೊಳ್ ದಿನವೊಂದರೊಳೊಂದು ಮುಷ್ಟಿ ಪಿಟ್ಟಂ ಒಂದು ಮಾನಮುದಕಮುಮಂ ಕೊಡುವುದೆಂದಾ ಪ್ರಕಾರದೊಳೆ ಸೆರೆಯನಿಕ್ಕಿದೊಡೆ ಸಕಟಾಳಂ ನೋಡಿ ತಮ್ಮ ವರ್ಗೆ ಈ ಕೂಳಂ ನೀರುಮನಾವನೊರ್ವಂ ನಂದನನ ವಂಶ ನಿರ್ಮೂಲನಂ ಮಾಳ್ಪನಾತಂ ಕೊಂಡು ಬದುಕುವುದೆಂದು ಪೇಳೆ ಅವರ್ ನೀನೆ ಕೊಂಬುದೆಂದು ಪೇಳಿಯೆಲ್ಲರುಂ ಸಾಯೆ ತಾನದಂ ತಿಂದು ಜೀವಿಸಿಕೊಂಡಿರಲಿತ್ತಲ್ ಪರರಾಯರು ಮಂತ್ರಿಯಿಲ್ಲದುದನರಿದು ಪಟ್ಟಣಮಂ ಮುತ್ತುವುದುಂ ನಂದನಂ ಚಿಂತಿಸಿ ಪ್ರಧಾನರಿಲ್ಲದ ರಾಜ್ಯಂ ಪಾಳಪ್ಪುದೆಂದು ಸಕಟಾಳಮಂತ್ರಿಯಂ ನೆನೆದು ಎಲ್ಲಿರ್ಪನೆಂದು ವಿಚಾರಿಸೆ ಒರ್ವನೆಂದಂ ನಿಯಮಿಸಿದ ಮೇರೆಯೊಳೊಂದು ಮುಷ್ಟಿ ಪಿಟ್ಟಂ ನೀರುಮಂ ಗವಾಕ್ಷದಿಂ ನೀಡಲದಂ ಕೊಳ್ವರಲ್ಲಿ

ಯಾರುಳಿದಿಪ್ಪರೊ ಅರಿಯಲ್ ಬಾರದೆನೆಯರಸಂ ತಾನೆ ಪೋಗಿಯಾತನಂ ಕರೆದು ತಂದು ಮಜ್ಜನ ಭೋಜನಾದಿಗಳಂ ಮಾಡಿಸಿ ನೀನಂದು ಕಳುಪಿದ ಪರರಾಜರ್ ಮುತ್ತಿಪ್ಪರವರಂ ಸಮಾಧಾನಂ ಮಾಳ್ಪುದೆಂದು ಕಳುಪೆ ಪೋಗಿಯವರನುಪಾಯಾಂತರದಿಂದೋಡಿಸಿಬಪ್ಪುದುಂ ನಿನ್ನ ಮಂತ್ರಿಪದವಂ ಕೈಕೊಳ್ಳೆಂದೊಡೆ ಸಕಟಾಳನೊಲ್ಲದೆ ಛತ್ರಶಾಲೆಯ ನಿಯೋಗಕಧ್ಯಕ್ಷನಾಗಿಯರಸಂಗುಪಾಯಮಂ ಚಿಂತಿಸುತ್ತಿರ್ದೊಂದು ದಿನಂ ಪುರದ ಪೊರವೊಳಲೊಳೆ ಸುತ್ತಿಬರುತ್ತುಂ ದರ್ಭೆಯ ಮೊನೆ ಕಾಲ ತಳಮನಡರಲದರ ಸಮೂಲಮನಗುಳ್ದು ಕಿತ್ತು ಸುಟ್ಟು ತೂರುತ್ತಿರ್ದ ಚಾಣಕ್ಯನೆಂಬ ಪಾರ್ವನಂ ಕಂಡೀತನಿಂ ನಂದನನ ವಂಶನಿರ್ಮೂಲನಂ ಮಾಡಲಪ್ಪುದೆಂದು ಪೋಗಿ ಛತ್ರದಲ್ಲರಸನನತಿಸಂತೋಷಂಬಡಿಸುತ್ತಿರ್ದು ಕ್ರಮದಿಂ ತಿರಸ್ಕಾರವಂ ಮಾಡಿಸಿಯರಸಿನೊಳ್ ಮುನಿದು ಪ್ರತ್ಯಂತರಾಜರಂ ಮಂತ್ರೋಪಾಯದಿಂದೆತ್ತಿಸಿ ತಂದು ನಂದನನ ವಂಶಮಂ ನಿರ್ಮೂಲಮಂ ಮಾಡಿ ವೃದ್ಧ ಚಂದ್ರಗುಪ್ತನೆಂಬರಸಂಗೆ ಪಟ್ಟಂಗಟ್ಟಿಪ್ಪುದುಂ ಕೆಲವು ದಿವಸಕ್ಕೆ ಚಂದ್ರಗುಪ್ತಂ ತನ್ನ ಮಗಂ ಬಿಂದುಸಾಗರಂಗೆ ರಾಜ್ಯಮಂ ಕೊಟ್ಟು ಚಾಣಕ್ಯವೆರಸು ತಪಮಂ ಕೊಳಲ್

ಇತ್ತಲ್ ಬಿಂದುಸಾಗರಂ ರಾಜ್ಯಂಗೆಯ್ದು ತನ್ನ ಮಗನಶೋಕಂಗೆ ಪಟ್ಟಂಗಟ್ಟಿ ಜಾತರೂಪನಾಗೆ ಅಶೋಕಂಗೆ ಕುನಾಳನೆಂಬ ಮಗನಾಗಿ ಬಾಲಕಾಲದೊಳುಪಾಧ್ಯಾಯರಲ್ಲಿ ಓದಿಸುತ್ತಿರೆ ಅಶೋಕಂ ಆತ್ಮೀಯ ನಗರದ ಕಾಪಂ ಕಪಿಳನೆಂಬ ಮಂತ್ರಿಗಪ್ಪೈಸಿ ತಾಂ ಪರಚಕ್ರದ ಮೇಲೆತ್ತಿ ಪೋಗಿ ಪಲವು ದಿನಂ ತಡೆದ್ದುದಕ್ಕೆ ಲೇಖನವಂ ಪ್ರಧಾನನಲ್ಲಿಗೆ ಕಳಿಪಿದೊಡದನೋದಿ ನೋಳ್ಪಾಗದರೊಳುಪಾಧ್ಯಾಯಾಯ ಕೂರಂದತ್ವಾ ಕುಮಾರ ಆಪ್ಯಾಯತಾಂ ಕುಮಾರೋ ಮಂದಮಧ್ಯಾದಯತಾಂ (?) ಎಂದಿರ್ದೊಡುಪಾಧ್ಯಾಯಂಗೆ ಕಳವೆಯೋಗರಮನಿಕ್ಕಿಸಿ ಕುಮಾರನ ಕಣ್ಣಂ ಕಳೆಯಿಸೆ ಕೆಲವು ದಿವಸ ಶತ್ರುಗಳಂ ಗೆಲ್ದು ಪುರಕ್ಕೆ ಬಂದು ಕುರುಡನಾಗಿರ್ದ ಮಗನಂ ಕಂಡು ಪ್ರಧಾನನ ಕಣ್ಣಂ ಕೀಳಿಸಿ ಪುರದಿಂ ಪೊರಮಡಿಸಿ ಮಗಂಗೆ ಚಂದ್ರಾನನೆಯೆಂಬಳಂ ಮದುವೆಯಂ ಮಾಡಲಾ ಈರ್ವರ್ಗಂ ಚಂದ್ರಗುಪ್ತನೆಂಬ ಮಗನಾಗಿ ಬಳೆಯಲಾತಂಗೆ ಪಟ್ಟಂಗಟ್ಟಿ ಕುನಾಳ ಸಹಿತಂ ದೀಕ್ಷೆಗೊಳಲ್

ಇತ್ತಲ್ ಚಂದ್ರಗುಪ್ತಂ ರಾಜ್ಯಂಗೆಯುತ್ತಿರ್ದೊಂದು ದಿವಸಂ ಯಶೋಭದ್ರರೆಂಬ ದಿವ್ಯಜ್ಞಾನಿಗಳ್ ಉದ್ಯಾನವನಕ್ಕೆ ಬಂದಿರ್ದರೆಂದು ವನಪಾಲಕಂ ಪೇಳೆ ವಿನತಮಸ್ತಕನಾಗಿ ವನಪಾಲಂಗುಚಿತಮನಿತ್ತು ಕೆಲಂಬರ್ವೆರಸು ಪೋಗಿ ಭಕ್ತಿಪೂರ್ವಕಮಾ ಯೋಗೀಂದ್ರರಂ ಬಂದಿಸಿ ಧರ್ಮಶ್ರವಣಾನಂತರಂ ಚಂದ್ರಗುಪ್ತಮಹಾರಾಜಂ ತನ್ನ ಮುನ್ನಿನ ಭವಸಂಬಂಧಮಂ ಬೆಸಗೊಳೆ ಮುನೀಂದ್ರರಿಂತೆಂದು ಬೆಸಸಿದರ್.

ಜಂಬೂದ್ವೀಪದ ಭರತದಾರ್ಯಾಖಂಡದವಂತೀವಿಷಯದ ವೈಶೇಕಮೆಂಬ ಪೊಳಲನಾಳ್ವ ಜಯವರ್ಮನಾತಂಗೆ ಸತಿ ಧಾರಿಣೀ ಸಹಿತಂ ಸುಖಮಿರಲಾ ಸಮೀಪದ ಪಲಾಲಕೂಟಗ್ರಾಮದ ಪರದಂ ದಿವಿಜತನಾನ ಪೆಂಡತಿ ಪೃಥುವಿಯವರ ಮಗಂ ನಂದಿಮಿತ್ರನತಿ ದರಿದ್ರನಾಗಿರುತ್ತಿಪ್ಪಿನಂ

ಕಾಷ್ಠತಟುವೆಂಬ ಗಡಿಕಾರಂ ಪುಳ್ಳಿಯ ಪೊರೆಯಂ ಪೊತ್ತು ಬರುತ್ತಂ ಬಳಲಿ ಪೊರೆಯನಿಳುಪೆ ಮಲಗಿರ್ದನಂ ಕಂಡು ಕೇಳೆ ಪೇಳ್ದನೀ ಪೊರೆಯಂ ನಾಲ್ವರಿಂ ಮಿಗಿಲಾದ ಪೊರೆಯಂ ದಿನಂಪ್ರತಿ ತಂದಪೆನೆನಗೆ ಗ್ರಾಸಮನಿಕ್ಕಿಸುವುದೆನಲಾತನೊಡಂಬಟ್ಟು ಪೊರೆಯಂ ನಂದಿಮಿತ್ರಂ ತಲೆಯೊಳಿಟ್ಟು ತನ್ನ ಮನೆಗೊಡಗೊಂಡು ಪೋಗಿ ತನ್ನ ಪೆಂಡತಿ ಜಯಘಂಟೆಯಂ ಕರೆದು ಕಾಷ್ಠತಟುವಿಂಗೆ ಜೋಳದ ಪಿಟ್ಟಂ ನೀರಂಬಲಿಯಂ ಪ್ರತಿದಿನಂ ಕುಡುವುದದು ಹೆಚ್ಚುಕಡಮೆಯಾಗೆ ಲಗುಡ ತಾಡನೆಯಂ ಮಾಳ್ಪೆನೆಂದು ನಿಯಮಿಸೆ ಪ್ರತಿದಿನಂ ಭಾರಿ ಭಾರಿ ಪೊರೆಗಳಂ ತಪ್ಪುದುಂ ವಿಕ್ರಯಂ ಮಾಡಿ ಮಿತಿಯಿಲ್ಲದೊಡವೆಯಂ ಗಳಿಯಿಸಿ ಸುಖಮಿರ್ದೊಂದುದಿವಸಂ ಪರ್ವಮಾಗೆ ನೋಡಿ ಜಯಘಂಟೆ ತನ್ನ ಮನದೊಳಿಂತೆಂದಳ್

ಈತನ ಪ್ರಸಾದದಿಂದಿನಿತು ಸಿರಿಯಾದುದು, ಪಿಂದೆಯಾತಂಗೆ ಬಸುರು ತುಂಬಿ ಕೂಳನಿಕ್ಕಿದುದಿಲ್ಲೆಂದು ಪೇಳ್ದು ಇಂದೀತಂಗೆ ಯಥೇಪ್ಸಿತ ಭೋಜನಮನಿಕ್ಕುವೆನೆಂದು ಕ್ಷೀರಾನ್ನ ಘೃತ ಪೂರಿಕಾ ಮಂಡಗೆ ಮೋದಕಾದಿಗಳನಿಕ್ಕಿ ಬಸುರು ತೀವುವಂತೆ ತೃಪ್ತಿ ಬಡಿಸಿ ಕರ್ಪೂರ ವೀಳಯಮಂ ಕುಡೆ ಅತಿಸಂತುಷ್ಟನಾಗಿ ಪುಳ್ಳೆಯಂ ಮಾರುತ್ತಿರ್ದ ಕಾಷ್ಠಕೂಟದವನೆಂಬ ನಂದಿಮಿತ್ರನಲ್ಲಿಗೆ ಪೋಗಿ ಉಡಲೊಂದು ವಸ್ತ್ರಮಂ ಬೇಡೆ ಪೊರೆದು ಮಣೆಯನಿಂದಿರ್ದನಂ ನಂದಿಮಿತ್ರಂ ನೋಡಿ ತನ್ನ ಮನೆಗೆ ಬಂದು ತನ್ನ ಪೆಂಡತಿಯನೀತಂಗೇನನುಣಲಿಕ್ಕಿದೆಯೆನಲಾ ಸರೂಪಮಂ ಪೇಳೆ ಕೋಪಿಸಿ ಪಿಡಿದ ಕೋಲಿಂ ಪೇಸದೆ ಕೊಂದು ಕೆಡಹಿದುದಂ ಕಾಷ್ಠತಟು ಕಂಡೆನ್ನನಿಮಿತ್ತಮೀಕೆಗೆ ನೋವಾದುದೆಂದು ಇನ್ನೀ ಮನೆಯೊಳಿಪ್ಪುದನುಚಿತಮೆಂದು ಪೊರಮಟ್ಟುಪೋಗಿ ಮರುದಿವಸ ಭಾರಿಯ ಪುಳ್ಳೆಪೊರೆಯಂ ತಂದು ಸಂತೆಯೊಳಿಪ್ಪುದುಂ ಪೊರೆಯಂ ಕೊಳಲ್ಬಂದರೆಲ್ಲಂ ಕೆಲದ ಕಿರುಪೊರೆಗಳಂ ಮಾರುಗೊಂಡಾತನ ಪೊರೆಯನಾರು ನುಡಿಸದಿರೆ ಮಧ್ಯಾಹ್ನಮಾದಾಗಳ್ ಪಸಿದೆತ್ತ ಪೋಪೆನೆಂದಿರ್ಪ ಸಮಯದೊಳ್ ನಯಗುಪ್ತಾಚಾರ್ಯರ್ ಮಾಸೋಪವಾಸದ ಪಾರಣಾರ್ಥಂ ರಾಜವೀದಿಯೊಳೆಯ್ದುತ್ತಿಪ್ಪರಂ ಕಂಡೆನಗೊಂದು ಕಪ್ಪಡಮುಂಟವಂಗಮದು ದೊರಕಿದುದಿಲ್ಲೆನ್ನಿಂದಮತಿಬಡವನೀತನೆಂತು ಜೀವಿಪನೆಲ್ಲಿಗೆ ಪೋಪನಿದಂ ನೋಳ್ಪೆನೆಂದಾ ಕಾಷ್ಠದ ಪೊರೆಯನಲ್ಲೆ ಬಿಸುಟವರ ಪಿಂದೆ ಪೋಪುದುಮಾ ಮುನೀಂದ್ರರಾ ನಗರಾಧಿನಾಯಕಂ ನಿಲಿಸೆ ಸ್ಥಾಪನಾದಿ ನವವಿಧ ಪುಣ್ಯ ಶ್ರದ್ಧಾದಿ ಸಪ್ತಗುಣ ಸಮನ್ವಿತನಾಹಾರದಾನಮಂ ಕೊಟ್ಟು ನಿಂದಿರ್ದ ಕಾಷ್ಠತಟುವಂ ನಂದಿಮಿತ್ರಂ ಕಂಡೀತಂ ಶ್ರಾವಕನೆಂದು ಸಾಲ್ವನಿತು ಭೋಜನಮಂ ಯಥೇಷ್ಟಮನಿಕ್ಕೆ ಮುನಿಗಳ್ಗೆ ನಿರಂತರಾಯದೊಳ್ ಪಂಚಾಶ್ಚರ್ಯಮಾಗೆ ಕಂಡೀತಂ ದೇವನಪ್ಪನಿವರಡಿಯಂ ಬಿಡದಿಪ್ಪೆನೆಂದಿರ್ದನಂ ಮುನೀಂದ್ರಂ ಭವ್ಯನೆಂದರಿದಿಪ್ಪಿನಮವರೊಡನೆಯವರಿಪ್ಪ ಗುಹೆಗೆ ಪೋಗಿ ವಂದಿಸಿ ಪೇಳ್ದಂ ದೇವರೆನ್ನಂ ನಿಮ್ಮಂತೆ ಮಾಳ್ಪುದೆನೆ ಮುನಿಗಳುಮಿತನಾಸನ್ನಭವ್ಯನಾಗಿಯುಮಲ್ಪಾಯುಷ್ಯನೆಂದರಿದು ದೀಕ್ಷೆಯಂ ಕೊಟ್ಟು ಉಪದೇಶಂಗೆಯ್ಯೆ ಉಪವಾಸಮಂ ಕೈಕೊಂಡಿರೆ ಪಾರಣೆಯ ದಿವಸಂ ಶ್ರಾವಕರೆಲ್ಲಂ ನಮಗೆ ತಮಗೆ ಪುಣ್ಯಮೆಂದು ಸಂಭ್ರಮಂಗೊಳ್ಪುದುಂ ನೋಡಿಯಿಂದೆನಗೆ ಭವಮಿಂತಾದುದು,

ನಾಳಿನತಿಶಯಮೆಂತಪ್ಪುದೆಂದು ಪಾರಣೆಯನೊಲ್ಲದೆ ಮತ್ತಮುಪವಾಸಮಂ ಮಾಳ್ಪುದುಂ

ಮರುದಿವಸ ರಾಜಶ್ರೇಷ್ಠಿ ಮೊದಲಾಗೆಲ್ಲರುಂ ಬಂದತ್ಯಾದರದಿಂ ಬಾವಲಿಯಂ ಬೇಡೆ ನಂದಿಮಿತ್ರಮುನಿ ನಾಳಿನತಿಶಯಮೆಂತಪ್ಪುದೆಂದು ಇಂದುಮುಪವಾಸಮಂ ಕೈಕೊಂಡೆನೆನಲೆಲ್ಲರುಂ ಪ್ರಾರ್ಥಿಸಿದೊಡಮೊಲ್ಲದಿರಲೀ ವಾರ್ತೆಯರಸಂ ಕೇಳ್ದು ಮರುದಿವಸಂ ಪಟ್ಟಮಹಾದೇವಿವೆರಸು ವಿಭವದಿಂ ಗುಹೆಯನೆಯ್ದಿ ನಮೋಸ್ತುಗೆಯ್ದು ಬಾವಲಿಯಂ ಪ್ರಾರ್ಥಿಸೆ ಮುನಿಪಂ ದೃಢಚಿತ್ತದಿ ನಿಂದು ನಿರ್ಭರಮುಪವಾಸವೆಂದು ಪಂಚನಮಸ್ಕಾರಸ್ಮರಣೆಯಿಂದಾ ಇರುಳ ಬೆಳಗಿನೊಳ್ ನಿಜಾಯುಷ್ಯದವಸಾನಮಾಗೆ ನಯಗುಪ್ತಾಚಾರ್ಯರುಪದೇಶಭಾವನೆಯಿಂ ಮುಡಿಪಿ ಸಾಗರೋಪಮಸ್ಥಿತಿಯುಳ್ಳ ಸೌಧರ್ಮಕಲ್ಪದೊಳಣಿಮಾದಿ ಗುಣಯುಕ್ತಮಾದ ದಿವ್ಯಸುಖಸುಧಾರಸತೃಪ್ತನಾಗಿ ತನ್ನ ಮಹಿಮೆಯಂ ತೋರಲ್ ಬರ್ಪಿನಮಿತ್ತಲಾ ಸಾಧು ಸಮಾಧಿವಡೆದುದಂ ಕೇಳ್ದು ಸೂರ್ಯೋದಯದೊಳ್ ಪುರಜನ ಪರಿಜನಂಬೆರಸು ಜಯವರ್ಮಮಹಾರಾಜಂ ಬಂದನೇಕ ಪ್ರಕಾರ ವಸ್ತುಗಳಿಂ ಶರೀರಪೂಜೆಗೆಯ್ದು ಮಹಾಪ್ರಭಾವನೆಯಿಂ ಶರೀರ ಸಂಸ್ಕಾರಮಂ ಮಾಳ್ಪಾಗಲಾ ಇಂದ್ರಂ ತನ್ನ ಮುನ್ನಿನ ರೂಪುಗೊಂಡೊಂದು ಪುಳ್ಳೆಯ ಪೊರೆಯಂ ಪೊತ್ತು ಕುಣಿಯುತ್ತೆ ತನ್ನುಪವಸಾದ ಫಲಮಂ ಮುನ್ನೆ ತನ್ನ ಕಾಷ್ಠಕೂಟನಿಂದಾದ ವೃತ್ತಕಮೆಲ್ಲಮಂ ಪೇಳ್ದು ಆ ರೂಪಂ ಬಿಟ್ಟು ತನ್ನ ನಿಜಸ್ವರೂಪದಿಂ ಕಾಷ್ಠತಟು ದಿವ್ಯಗಂಧಮಾಲ್ಯ ವಸ್ತ್ರಭೂಷಣ ದಿವ್ಯಕಾಂತಾಜನಪರಿವಾರಸಹಿತಂ ದೇವವಿಮಾನ ಮೊದಲಾದ ದೇವವಿಭೂತಿಯಂ ತೋರಿ ನಂದಿಮಿತ್ರಚರದೇವಂ ದೇವಲೋಕಕ್ಕೆ ಪೋಗಲ್

ಇತ್ತಲರಸಂ ಮೊದಲಾದ ಸಮಸ್ತಜನಂ ಧರ್ಮಮಾಹಾತ್ಮ್ಯಕತ್ಯಾಶ್ಚರ್ಯಂಬಟ್ಟು ಮುನಿಯ ಕಳೇಬರಮಂ ಸಂಸ್ಕರಿಸೆ ವೈರಾಗ್ಯದಿಂ ಜಯವರ್ಮಂ ತನ್ನ ಮಗಂ ಶ್ರೀವರ್ಮಂಗೆ ರಾಜ್ಯಮನಿತ್ತು ಮಂತ್ರಿ ರಾಜಶ್ರೇಷ್ಠಿ ಮೊದಲಾಗೆ ಐನೂರ್ವರ್ವೆರಸು ದೀಕ್ಷೆಯಂ ಕೈಕೊಂಡರ್, ಕೆಲಂಬರ್ ಏಕಾದಶನಿಲಯಮಂ ತಾಳ್ದರ್, ಕೆಲಂಬರ್ ಸಮ್ಯಕ್ತ್ವದಿಂ ದೃಢಚಿತ್ತರಾದರ್, ಆ ಕಾಷ್ಠತಟು ಚರದೇವಂ ದಿವ್ಯಸುಖಮಂ ಸಮುದ್ರೋಪಮಕಾಲಮನುಭವಿಸಿ ಸ್ವರ್ಗದಿಂದ್ಯಶ್ಯನಾಗಿ ಬಂದು ಕುನಾಳನರಸಿ ಚಂದ್ರಾನನೆಯ ಗರ್ಭಕ್ಕವತರಿಸಿ ಚಂದ್ರಗುಪ್ತಮಹಾರಾಜಂ ನೀನಾದೆಯೆಂಬುದಂ ಕೇಳ್ದು ಮುನಿಗಳಿಗೆರಗಿ ಬೀಳ್ಕೊಂಡು ಪುರಮಂ ಪೊಕ್ಕು ಸುಖದಿಂ ರಾಜ್ಯಂಗೆಯ್ಯುತ್ತಿರ್ದೊಂದು ಕಾರ್ತಿಕದ ಪುಣ್ಣಮೆಯಂದು ಚಂದ್ರಿಕಾವಿಹಾರಂ ಮಾಡಿ ಶಯ್ಯಾಹದೊಳ್ ನಿದ್ರಾಮುದ್ರಿತನಾಗಿರ್ದು ನಿಶಾವಸಾನದೊಳ್ ಪದಿನಾರು ಸ್ವಪ್ನಂಗಳಂ ಕಂಡನೆಂತೆಂದೊಡೆ ಸೂರ್ಯಾಸ್ತಮಾನಮಂ ಕಲ್ಪವೃಕ್ಷ ಕೊಂಬು ಮುರಿದು ಬೀಳ್ವುದಂ ದೇವವಿಮಾನಂ ಬರುತ್ತಾಕಾಶಮಾರ್ಗದಿಂ ತಿರುಗಿಪೋಪುದಂ ಚಂದ್ರಮಂಡಲಂ ಭಿನ್ನಮಾಗಿರ್ದುದಂ ಕೃಷ್ಣಗಜಂಗಳ್ ಪೋರುತ್ತಿಪ್ಪುದಂ ಮಿಂಬುಳುಗಳ್ ಸಂಜೆಯ ಬೆಳಗಿನೊಳ್ ಚರಿಸುವುದಂ ಬತ್ತಿರ್ದ ಕೆರೆಯಂ ಧೂಮಂ ವ್ಯಾಪಿಸಿರ್ದುದಂ ಕೋಡಗಂ ಸಿಂಹಾಸನಮನೇರಿಪ್ಪುದಂ ಪಾಯಸಮಂ ಪೊನ್ನಹರಿವಾಣದೊಳ್ ನಾಯಿ ತಿಂಬುದಂ ಎಳೆಯ

ಹೋರಿಗಳುದ್ಯೋಗಮಂ ಕ್ಷತ್ರಿಯಪುತ್ರರ್ ಕತ್ತೆಯನೇರಿರ್ದುದಂ ಕಪಿಗಳು ಹಂಸೆಗಳಂ ಬಾಧಿಸುವುದಂ ಬಾಲವೃಷಭಂ ಸಮುದ್ರಮಂ ಪಾಯ್ವುದಂ ವೃದ್ಧವೃಷಭನಂ ನರಿಗಳಟ್ಟುವುದಂ ಪನ್ನೆರಡು ತಲೆಯ ಪಾವು ಬರ್ಪುದಂ ಇಂತು ಹದಿನಾರು ಸ್ವಪ್ನಮಂ ಕಂಡು ನಿದ್ರಿಯಿಂದೆಚ್ಚೆತ್ತು ಸೂರ್ಯೋದಯಮಾಗೆ ನಿತ್ಯಾಚಾರಮಂ ನಿರ್ವರ್ತಿಸಿ ಓಲಗದೊಳಿರೆ ವನಪಾಲಕಂ ಬಂದು ಭದ್ರಬಾಹುಸ್ವಾಮಿಗಳ್ ಸಮುದಾಯಂಬೆರಸು ಅನೇಕ ದೇಶಂಗಳೊಳ್ ವಿಹಾರಂ ಬಂದೆಮ್ಮ ಉದ್ಯಾನದೊಳಿರ್ದರೆನೆ ಪರಿಜನ ಪುರಜನಂಬೆರಸು ಪೋಗಿ ವಂದಿಸಿ ಧರ್ಮಶ್ರವಣಾನಂತರಂ ತಾನು ಕಂಡ ಕನಸಿನ ಫಲಮಂ ಬೆಸಗೊಂಬುದುಂ ಮುನೀಂದ್ರರಿಂತೆಂದು ಬೆಸಸಿದರ್

ಸೂರ್ಯನ ಅಸ್ತಮಾನಮಂ ಕಂಡುದರಿಂ ಸಕಲ ವಸ್ತುಪ್ರಕಾಶಮಪ್ಪ ಕೇವಲ ಜ್ಞಾನಾಸ್ತಮಯಮಪ್ಪುದು. ಕಲ್ಪದ್ರುಮದ ಕೊಂಬು ಮುರಿದುದರಿಂ ಜಿನಧರ್ಮಕ್ಷೀಣಮಾಗಿ ನಿನ್ನಿಂದ ಮುಂದೆ ಪುಟ್ಟಿದ ಮಕುಟಬದ್ಧರಾದಿಗಳ್ ಜಿನದೀಕ್ಷೆಯಂ ತಾಳುವ ರಾಜರಿಲ್ಲ. ವಿಮಾನಂ ಬಂದು ಮಗುಳೆ ಪೋದುದರಿಂದಿತ್ತ ಸುರರುಂ ವಿದ್ಯಾಧರರುಂ ಚಾರಣರುಂ ಭರತಕ್ಷೇತ್ರಕ್ಕೆ ಬಪ್ಪುದಿಲ್ಲ. ಚಂದ್ರಮಂಡಲಂ ಭಿನ್ನಮಾಗಿರ್ದುದರಿಂ ಜಿನಧರ್ಮಂ ಸಂಘಭೇದಮಾಗಿ ನಾನಾ ಬಗೆಯಪ್ಪುದು. ಕೃಷ್ಣಗಜಂಗಳ ಪೊರೆಯಿಂ ಮೇಘವರ್ಷಂ ಕಾಲಕಾಲಕ್ಕಾಗದೆ ಸಸಿಗಳಲ್ಪಫಲದಂಗಳಪ್ಪುವು. ಸಂಜೆಯೊಳ್ ಮಿಂಚುಂಬುಳುವಾಡುವುದಂ ಕಂಡುದರಿಂ ಮನಃಪರ್ಯಯಜ್ಞಾನಂ ಪೋಗೆ ಕ್ಷೀಣಮಾದವಳಿಯೊಳ್ ಕ್ರಮದಿಂ ಕುಂದುತ್ತಿಪ್ಪ ಮತಿಶ್ರುತಜ್ಞಾನದಿಂ ವಸ್ತುಸ್ವರೂಪಮನವ್ಯಕ್ತದಿಂ ತಾಳ್ವುದು. ನಡು ಬತ್ತಿದ ಕೆರೆಯಂ ಕಂಡುದರಿಂದಾರ್ಯಾಖಂಡ ಮಧ್ಯದೊಳ್ ಜಿನಧರ್ಮಮಿಲ್ಲದೆ ಕಡೆ ಕಡೆಯೊಳ್ ಮಿಥ್ಯಾಸಂಕಲಿತಮಾಗಿ ವರ್ತಿಸುವುದು. ಧೂಮವ್ಯಾಪನೆಯಂ ಕಂಡುದರಿಂ ದುರ್ಜನರು ಪ್ರಬಲದಿಂ ಸದ್ಧರ್ಮವಂ ಕಾಣದಂತೆ ಮರೆಸುವುದು. ಸಿಂಹಾಸನವಂ ಕೋಡಗನೇರಿರ್ದುದಂ ಕಂಡುದರಿಂ ನೀಚರು ಕುಲಹೀನರು ಕುಮಾನುಷ್ಯರೆ ರಾಜ್ಯಾಧಿಪರಪ್ಪರು. ಸುವರ್ಣಭಾಜನದೊಳ್ ಪಾಯಸಮಂ ನೆಕ್ಕುವ ಶ್ವಾನನ ಕಂಡುದರಿಂ ಪ್ರಜೆಗಳ ಷಡ್ಭಾಗಮಂ ಬಿಟ್ಟು ಸಿದ್ಧಾಯಮಂ ಮಾಡಿ ಕ್ರಮದಿಂದಾ ಕಂದಾಯಂ ದ್ವಿಗುಣ ತ್ರಿಗುಣಮಾಗೆ ತೆಗೆದು ಪ್ರಜೆಗಳಂ ಬಾಧಿಸುವರು. ತರುಣ ವೃಷಭಂಗಳುದ್ಯೋಗಮಂ ಕಂಡುದರಿಂ ಪೂರ್ವವಯಸ್ಸಿನೊಳೆ ವೈರಾಗ್ಯದಿಂ ಧರ್ಮೋದ್ಯೋಗಂಗೆಯ್ವರಪರವಯಸ್ಸಿನೊಳಿಲ್ಲದೆ ನಡೆವರು. ಖರಮನೇರಿದ ರಾಜಕುಮಾರರಂ ಕಂಡುದರಿಂ ಸತ್ಕುಲರಪ್ಪರಸುಗಳ್ ಕುಲಾಚಾರಮಂ ಬಿಟ್ಟು ಸಂಕರತ್ವದಿಂ ನೀಚರ ಸಂಧಿಯೊಳ್ ಜೀವಿಪರು. ಕಪಿಗಳು ಹಂಸೆಗಳನಂಜಿಸುವುದಂ ಕಂಡುದರಿಂ ನೀಚರ್ ಪ್ರಬಲವಾಗಿ ಸತ್ಕುಲರಂ ನಿಂದಿಸಿ ತಮ್ಮ ಕುಲಕ್ಕೆಲ್ಲರಂ ಮಾಳ್ಪೆಮೆಂದು ಜಾತಿಕುಲವಂ ಬಿಟ್ಟು ನೆಗಳ್ವರು. ವೃದ್ಧವೃಷಭಂಗಳಂ ನರಿಗಳಟ್ಟುವುದಂ ಕಂಡುದರಿಂ ಕುಜನರು ಗುಣಿಗಳಂ ಜ್ಞಾನಿಗಳಂ ವೃದ್ಧರಂ ಸದ್ದೇವರಂ ಸದ್ಗುಣಿಗಳಂ ಸತ್ಪುರುಷರಂ ನಿಂದಿಸಿ ಬಾಧಿಸಿ ಅಪಹಾಸ್ಯಂಗೆಯ್ದು ಕಳೆವರು. ಮತ್ತಮಾ ರಾಜಾಧ್ಯಕ್ಷರು ಪ್ರಜೆಗಳ್ಗೆ ಸುಂಕ ಮೊದಲಾದನ್ಯಾಯದ ತೆರಿಗೆಯಂ

ಮಾಡಿ ಬಾಧಿಸುವುದಕ್ಕೆ ಸಹಾಯರಪ್ಪರು. ಪನ್ನೆರಡು ತಲೆಯ ಪಾವಂ ಕಂಡುದರಿಂದೀ ದೇಶಕ್ಕೆಲ್ಲಾ ಪನ್ನೆರಡು ವರುಷಂ ಬರಂ ದುರ್ಭಿಕ್ಷಮಪ್ಪುದೆಂದಿಂತು ನಿರೂಪಿಸಿ ಮುನ್ನ ಪ್ರಥಮ ಚಕ್ರೇಶ್ವರಂ ಪದಿನಾರು ಸ್ವಪ್ನಮಂ ದುಷ್ಷಮಕಾಲಪ್ರವರ್ತನಕ್ಕೆ ಕಾರಣಂಗಳಪ್ಪವಂ ಕಂಡು ಆದೀಶ್ವರರಲ್ಲಿ ತತ್ಫಲಮಂ ಕೇಳ್ದಂ. ನೀಂ ಕಡೆಯ ಮಕುಟಬದ್ಧನಪ್ಪುದರಿಂದೀ ದುಷ್ಷಮಕಾಲದೊಳಪ್ಪ ವಿಪರೀತಂಗಳ್ಗೆ ಕಾರಣಮೀ ಸ್ವಪ್ನಮಂ ಕಂಡೆಯೆಂದು ಭದ್ರಬಾಹುಸ್ವಾಮಿಗಳ್ ಪೇಳೆ ಕೇಳ್ದು ವಿಷಣ್ಣಮನದಿ ಮುನಿಗಳಂ ಬೀಳ್ಕೊಂಡು ತಚ್ಛಾಂತಿಹೇತುವಾಗೆ ಮಹಾಭಿಷೇಕ ಕಲಿಕುಂಡಾದಿ ಯಂತ್ರಾರಾಧನೆ ಸಂಘಪೂಜಾದಿಗಳಂ ಮಾಡಿಸಲೆಂದಿರ್ಪಿನಂ.

ಇತ್ತ ಭದ್ರಬಾಹುಸ್ವಾಮಿಗಳುಮೊಡನಿರ್ದ ಸಮುದಾಯಮಂ ಚರ್ಯಾನಿಮಿತ್ತಂ ಶ್ರಾವಕರ ಮನೆಗಳಿಗೆ ಕಳಿಪಿ ತಾಮುಮೊಂದು ಮನೆಗೆ ಬಾವಲಿಯನಿಟ್ಟು ಪೋಗೆಯಲ್ಲಿ ತೊಟ್ಟಿಲೊಳಿರ್ದ ಶಿಶು ಬೊಳಹ ಬೊಳಹಮೆಂದು ಪನ್ನೆರಡು ವೇಳೆ ಪೇಳ್ವೊಡೆ ಪನ್ನೆರಡಬ್ದ ಪರ್ಯಂತರಂ ಈ ದೇಶಕ್ಕೆ ಬರನಂ ಬಪ್ಪುದೆಂದು ಚರ್ಯಾಂತರಾಯಮಾಗೆ ಯೋಗ ಸ್ಥಾನದೊಳ್ ಬಂದು ನಿಲ್ವುದುಂ ಚಂದ್ರಗುಪ್ತಮಹಾರಾಜನ ಮಂತ್ರಿ ಗೋಪಾಲನೆಂಬಂ ದುಃಸ್ವಪ್ನದೋಷಮಂ ಕಳೆಯಲೆಂದು ಪುರದೊಳಗಣ ಪೊರಗಣ ನೀಚದೈವಂಗಳ್ಗನೇಕವಾದ ಪ್ರಾಣಿಹಿಂಸೆಯ ಮಾಡಿಸುವುದಂ ಚಂದ್ರಗುಪ್ತಮಹಾರಾಜನರಿದು ಪಾಪಭೀರುವಾಗಿ ಭದ್ರಬಾಹುಮುನಿಗಂತರಾಯಮಾದುದ ತಿಳಿದವರ ಸಮೀಪಕ್ಕೆಯ್ದಿ ಸಂಸಾರ ಶರೀರಭೋಗ ನಿರ್ವೇಗದಿಂ ತನ್ನ ಮಗನಪ್ಪ ಸಿಂಹಸೇನಂಗೆ ರಾಜ್ಯಮಂ ಕೊಟ್ಟು ಭದ್ರಬಾಹುಸ್ವಾಮಿಗಳ ಸಮಕ್ಷದೊಳ್ ಜಿನದೀಕ್ಷೆಯಂ ಕೈಕೊಳಲಿತ್ತ ಸಿಂಹಸೇನನುಂ ಮಂತ್ರಿಗಳುಮಾಳೋಚಿಸಿ ದುರ್ಭಿಕ್ಷಾದಿ ರಾಜ್ಯಾರಿಷ್ಟಕ್ಕೇನಂ ಮಾಳ್ಪೆನೆಂದು ಭೌತಿಕರಂ ಬರಿಸಿ ಕೇಳ್ವುದುಂ ಯಜ್ಞಮಂ ಮಾಡಿಸಾದೊಡೆ ರಾಜಸ್ತರಾಷ್ಟ್ರಮೆಲ್ಲಂ ಸೌಖ್ಯದೊಳಿರ್ಕುಂ, ಪಿತೃಗಳ್ ತೃಪ್ತರಪ್ಪರ್, ಇಂದ್ರಪದವಿ ಉತ್ತರದೊಳಪ್ಪುದೆಂದು ಪೇಳಿ ಯಜ್ಞಕ್ಕೆ ತಕ್ಕ ಸಾಮಗ್ರಿಯಂ ಕೂಡಿಸುತ್ತೆ ಮೂಲಬ್ರಾಹ್ಮಣರಂ ಬರಿಸಿ ಕೇಳ್ವಿನಂ ಅವರಿಂತೆಂದರ್ ಯಜ್ಞೋದ್ಧರಾದಿ ಶಬ್ದ ದೇವಪೂಜೆ ದಾನಾದಿಗಳಪ್ಪ ಸಕಲ ಸಂಪತ್ಸಂಪಾದಕ ದಯಾಮಯ ಮಹಾಯಾಗಂ ಹಿಂಸಾಯಾಗದಿಂ ಪಾಪಸಾಧನಮಲ್ಲದೆ ಪುಣ್ಯಸಾಧನಮಲ್ಲದರಿಂದ ಹಿಂಸಾರೂಪಂ ಧರ್ಮಮಲ್ಲದೆ ಹಿಂಸೆಯುಂ ಧರ್ಮಮಾಗದು.

ಶ್ಲೋಕ || **ಅಹಿಂಸಾ ಪರಮೋ ಧರ್ಮೋಽಹ್ಯಧರ್ಮಃ ಪ್ರಾಣಿನಾಂ ವಧಃ**
ತಸ್ಮಾದ್ಧರ್ಮಾರ್ಥಿನಾ ಲೋಕೇ ಕರ್ತವ್ಯಾ ಪ್ರಾಣಿನಾ ದಯಾ ||
ಹಿಂಸಾಭಿಃ ರೌರವಂ ಭವೇತ್
ಆತ್ಮವತ್ ಸರ್ವಭೂತಾನಿ ಪರದ್ರವ್ಯಾಣಿ ಲೋಷ್ಟವತ್
ಮಾತೃವತ್ಪರದಾರೇಷು ಯಃ ಪಶ್ಯತಿ ಸ ಪಶ್ಯತಿ ||

ಧರ್ಮ ಕಾಮಾರ್ಥಕಾರ್ಯೇಭ್ಯೋ ಯೋಜಂತುಃ ಹನ್ಯತೇ ಯದಿ
ಸ ಸಪ್ತ ನರಕೇ ಘೋರದುಃಖಸಾಗರಮಾಪ್ನುಯಾತ್ ||

ಎಂಬುದರಿಂದಾರ್ಷಾಕ್ರಮವಲ್ಲ. ಮಧ್ಯದೊಳ್ ಮಹಾಕಾಳಾಸುರಂ ತನ್ನ ಶತ್ರುವಂ ನಿರ್ವಂಶಂ ಮಾಡಿ ನರಕದುಃಖಮಂ ಮಾಡಲ್ ಪರ್ವತನೆಂಬ ಪಾರ್ವಂಗೆ ಹಿಂಸಾವೇದಮಂ ರಚಿಸಿ ದೇವತೆಗಳಂ ಸಹಾಯಂ ಮಾಡಿಕೊಟ್ಟು ಪ್ರಕಟಿಸಿದನದು ವೇದಮುಖ್ಯಮಲ್ಲೆಂದು ಸದ್ಬ್ರಾಹ್ಮಣರ್ ಪೇಳೆ ವೇದಮಪೌರುಷೇಯಮದರೊಳೆ ಪೇಳ್ದುದನೆಂತು ಬಿಡುವುದು. ನೀವುಂ ವೇದಬಾಹ್ಯರಪ್ಪುದರಿಂ ನುಡಿವಿರೆನೆ ಅಪೌರುಷೇಯಮಾದೊಡೆ ಸರ್ವ ಜೀವಹಿತಕರಮಪ್ಪುದುಮನಾದಿಯಿಂ ಸರ್ವ ಪ್ರಾಣಿಗಳುಂ ಪರಿಣಾಮಮಾಗೆಯಿವಂ ಪರಸುಖಸಾಧನಂ. ಆವನಾನು ತನ್ನ ಇಹದ ಕಾರ್ಯನಿಮಿತ್ತಂ ಜೀವಮಂ ವಧಿಯಿಸಿ ರಾಕ್ಷಸರ್ ಮೊದಲಾಗೆ ದುರ್ದೇವತೆಗಳಂ ತೃಪ್ತಿಮಾಡಿಸಲ್ ನಿರ್ಮಿಸಿದುದೆಂದರಿವುದರಿಂದೆ ಪೌರುಷೇಯಮಲ್ಲ.

ಶ್ಲೋಕ || ಶ್ರುತಂ ಸುವಿಹಿತಂ ವೇದಂ ದ್ವಾದಶಾಂಗಮಕಲ್ಮಷಮ್
ಹಿಂಸ್ರೋಪದೇಶಮದ್ವಾಕ್ಯಂ ನ ವೇದಸ್ಸಾ ಕೃತಾಂತವತ್ ||

ನೆರೆದಾದಿಮಧ್ಯಾವಸಾನಂಬರಂ ಚೆನ್ನಾಗಿ ವಿಚಾರಿಸಿ ಮಣ್ಣಂ ಪೊದಿಸಿ ಸುವರ್ಣಮಂ ಕೊಂಬಂತೆ ವೇದಸಾರಮಪ್ಪ ಸದ್ದರ್ಶನ ಸದ್ಜ್ಞಾನ ಧ್ಯಾನ ಸಚ್ಚಾರಿತ್ರಮಂ ಭೇದಿಸಿಕೊಳ್ಳುವೆ ತಾಯ ದೇಹದೊಳಿರ್ದ ಸ್ತನ್ಯಮಂ ಸೇವಿಸಿ ಬೆಳೆವ ಮಗು ಅಜ್ಞಾನದಿಂ ಮಲಮೂತ್ರಮಂ ಸೇವಿಸಿ ಸಾಯ್ವಂತೆ ಹಿಂಸಾಯಜ್ಞಮಂ ಮಾಡಿ ಇಹಪರಮಂ ಕೆಡಿಸಿ ಪಾಪಾನುಬಂಧನಕ್ಕೊಳಗಪ್ಪುದು ಮತವಲ್ಲ.

ಶ್ಲೋಕ || ಅನೇಕ ಶಾಸ್ತ್ರಂ ಬಹುವೇದಿತವ್ಯಂ
ಅಲ್ಪಶ್ಚ ಕಾಲೋ ಬಹವಶ್ಚ ವಿಘ್ನಾಃ
ಯತ್ಸಾರಭೂತಂ ತದುಪಾಸಿತವ್ಯಂ
ಹಂಸೋ ಯಥಾ ಕ್ಷೀರಮಿವಾಂಬು ಮಧ್ಯಾತ್ ||

ತತ್ತ್ವಜ್ಞಾನಂ ಪರಮಾರ್ಥಾನಾಂ ಶ್ರದ್ಧಾನಂ ವೇದಮುಚ್ಯತೇ ಎಂಬುದರಿಂ ಕ್ಷಾರಜಲಧಿಯೊಳನರ್ಘ್ಯರತ್ನಮಿಪ್ಪಂತೆ ವೇದದೊಳ್ ನಿಶ್ಚಯತತ್ತ್ವಮಿಪ್ಪುದಂ ತಿಳಿಯದೆ ತೆಂಗಿನಫಲದೊಳಗಿಪ್ಪ ಕಾಯಂ ಕಾಣದೆ ಮೇಗಣ ಮಟ್ಟೆಯನಗಿವಂತೆ ವೇದವಿಚಾರವಿಲ್ಲದವರೆ ವೇದಬಾಹ್ಯರಪ್ಪರ್.

ಶ್ಲೋಕ || ಯಸ್ಯ ನಾಸ್ತಿಸ್ವಯಂ ಪ್ರಜ್ಞಾ ಶಾಸ್ತ್ರಂ ತಸ್ಯ ಕರೋತಿಕಿಂ
ಲೋಚನಾಭ್ಯಾಂ ವಿಹೀನಸ್ಯ ದರ್ಪಣಂ ಕಿಂ ಕರಿಷ್ಯತಿ (?)

ವಕ್ತೃ ಪ್ರಮಾಣದಿಂದ ವಚನಪ್ರಮಾಣಮಪ್ಪುದು. ಹಿಂಸಾವೇದಕ್ಕೆ ವಕ್ತೃ ಪ್ರಮಾಣಮಿಲ್ಲ,

ಕರ್ತೃವಿಲ್ಲ. ದೃಷ್ಟೇಷ್ಟಕ್ಕೆ ವಿರುದ್ಧ ಪೂರ್ವಾಪರ ವಿರುದ್ಧಮಾದುದರಿಂ ಬಿಟ್ಟುಳಿದ ಸಾರ ಸುಜ್ಞಾನ ಪ್ರವರ್ಧನ ದಯಾಮೂಲ ಧರ್ಮಮಂ ಕೈಕೊಳ್ವುದು.

ಶ್ಲೋಕ || ದಯಾಮೂಲೋ ಭವೇದ್ಧರ್ಮೋ ದಯಾ ಪ್ರಾಣ್ಯನುಕಂಪನಮ್
ದಯಾಯಾಃ ಪರಿರಕ್ಷಾರ್ಥಂ ಗುಣಾಃ ಶ್ರೇಷ್ಠಾಃ ಪ್ರಕೀರ್ತಿತಾಃ
ಧರ್ಮಃ ಪ್ರಾಣಿದಯಾ ಸತ್ಯಂ ಕ್ಷಾಂತಿಃ ಶೌಚಂ ವಿತೃಷ್ಣತಾ
ಜ್ಞಾನವೈರಾಗ್ಯಸಂಪತ್ತಿರಧರ್ಮಸ್ತದ್ವಿಪರ್ಯಯಃ ||

ಯಜ್ಞಾರ್ಥಂ ಪಶುಮಾಲ ಭೇತ್ಪರವಧೂ ಪುತ್ರಾರ್ಥಮಾಶ್ಲೇಷಯೇದಿತ್ಯಾದಿ ದುಶ್ಯಾಸ್ತ್ರಮಂ ನಂಬಿ ಮಾಂಸಾಶಿಗರಾಗಿ ಸುರಾಪಾನಾದ್ಯಭಕ್ಷಣಂಗಳಂ ಸೇವಿಸುವ ಮಹಾಪಾತಕರುಂ ನಿಂದ್ಯರುಂ ಪಾಪಸೂತ್ರಧಾರಿಗಳುಂ ಕರ್ಮಚಂಡಾಲರುಂ ದುರ್ಗತಿ ಸಾಧಕರೆನ್ನದೆ ಜಾತಿಶ್ರೇಷ್ಠರ್ ವರ್ಣೋತ್ತಮರ್ ಲೋಕಪೂಜ್ಯರ್ ಧರಾಮರರೆಂಬುದೆಂತು

ಶ್ಲೋಕ || ಸತ್ಯಂ ಬ್ರಹ್ಮ ತಪೋ ಬ್ರಹ್ಮ ಬ್ರಹ್ಮ ಇಂದ್ರಿಯಾನಿಗ್ರಹಃ
ಸರ್ವಭೂತದಯಾ ಬ್ರಹ್ಮ ಏತದ್ಬ್ರಾಹ್ಮಣ ಲಕ್ಷಣಮ್
ಸತ್ಯಂ ನಾಸ್ತಿ ತಪೋ ನಾಸ್ತಿ ನಾಸ್ತಿ ಚೇಂದ್ರಿಯನಿಗ್ರಹಃ
ಸರ್ವಭೂತದಯಾ ನಾಸ್ತಿ ಏತಚ್ಚಾಂಡಾಲಲಕ್ಷಣಮ್ ||

ಶ್ಲೋಕ || ಅಜಂ ಹತ್ವಾ ಸುರಾಂ ಪೀತ್ವಾ ಕೃತ್ವಾ ಪಲಲಭೋಜನಮ್
ಯದಿ ಸ್ವರ್ಗಂ ಗತಂ ಚಾಪಿ ನರಕಂ ಕೇನ ಲಭ್ಯತೇ ||

ಎಂದಾರ್ಹತ ವಿಪ್ರರಾದಿ ಸ್ಯಾದ್ವಾದಮತಾನುಸಾರಿಗಳ್ ಪೇಳೆ ಸಿಂಹಸೇನ ಮಹಾರಾಜನ ಸಭಾಸದರೆಲ್ಲಂ ಒಪ್ಪಿ ಸಂತೋಷಂಬಡೆ ಬ್ರಾಹ್ಮಣರೆಲ್ಲಂ ನಿರುತ್ತರರಾಗಿ ಕೆಲಂಬರ್ ಹಿಂಸಾಯಜ್ಞಮಂ ಬಿಟ್ಟರ್. ಕೆಲಂಬರ್ ಪಿಷ್ಟಪಶುವೆಂದು ಕಲ್ಪಿಸಿದರ್. ಕೆಲಂಬರ್ ನರ ಹಯಾದಿಗಳನುಳಿದರ್, ಮದ್ಯಮಾಂಸಾದಿಗಳಂ ಬಿಟ್ಟರ್.

ಶ್ಲೋಕ || ಅಶ್ವಾಲಂಬಂ ಗವಾಲಂಬಂ ಸನ್ಯಾಸಂ ಪಲಪೈತೃಕಂ
ದೇವರೇಣ ಸಂತೋತ್ಪತ್ತಿಃ ಕಲೌಪಂಚೌ ವಿವರ್ಜಯೇತ್ ||

ಎಂದು ಭ್ರಾತೃದಾರಾಸಂಗಮನುಳಿದು ಕೆಲಂಬರ್ ಮತ್ಸ್ಯಮಾಂಸಮಂ ಬಿಡದೆಯುಂ ಲೋಕಮರಿಯದಂತೆ ಮಧ್ಯಸೇವೆಯಂ ಮಾಡುವರ್. ಬ್ರಾಹ್ಮಣ್ಯಂ ಗೌಡಬ್ರಾಹ್ಮಣರೆಂದುಂ ದ್ರಾವಿಡ ಬ್ರಾಹ್ಮಣರೆಂದುಂ ಪ್ರತ್ಯೇಕಮೈದು ಭೇದದಿಂ ದಶವಿಧಮಾಯ್ತು.

ಶ್ಲೋಕ || ಸಾರಸ್ವತಾ ಕಾನ್ಯಕುಬ್ಜಾಃ ಗೌಡಮೈಥಿಲು ಉತ್ಕಾಲಾಃ
ಪಂಚ ಗೌಡಾ ಇತಿ ಖ್ಯಾತಾ ವಿಂಧ್ಯಸ್ಯೋತ್ತರ ವಾಸಿನಃ ||
ಮಹಾರಾಷ್ಟ್ರಾ ಗುರ್ಜರಾಶ್ಚಾ ಆಂಧ್ರಾ ಕರ್ನಾಟಕಾಸ್ತಥಾ
ದ್ರಾವಿಡಾಶ್ಚ ಸಮುಖ್ಯಾತಾ ವಿಂಧ್ಯ ದಕ್ಷಿಣ ವಾಸಿನಃ ||

ವಿಂಧ್ಯಪರ್ವತದುತ್ತರದೇಶದೊಳ್ ಪಂಚಗೌಡ ಬ್ರಾಹ್ಮಣರು-ಆ ಪರ್ವತದ ದಕ್ಷಿಣದೇಶದೊಳ್ ಪಂಚದ್ರಾವಿಡ ಬ್ರಾಹ್ಮಣರೆಂದು ಹತ್ತು ಭೇದಮಾಗಿಯವರೊಳೊಂದೊಂದಕ್ಕೆ ಐದು ಆರು ಭೇದಮಾಗಿ ಅವರವರೊಳ್ ಪರಸ್ಪರ ವಿರೋಧದಿಂದಿಪ್ಪುದುಮಾ ಸಿಂಹಸೇನ ಮಹಾರಾಜಂ ಜೈನನಾಗಿಯುಂ ಮಿಥ್ಯಮಂ ಪೊದ್ದಿರಲಾ ಕಾಲದೊಳ್ ವಿಂಧ್ಯಾದ್ರಿಯಿಂ ತೊಡಗಿ ನೀಲಗಿರಿಯವರೆಗೆ ಮಳೆ ಬೆಳೆಯಿಲ್ಲದೆ ಪ್ರಜೆಗಳ್ ಕ್ಷುಧಾತೃಷಾದಿಗಳಿಂ ಸಂತಪ್ತರಾಗಿ ನಿಧನರಾಗುವಂದಾ ಅತ್ಯುತ್ಕಟಮಪ್ಪ ಕ್ಷಾಮಂ ಪನ್ನೆರಡು ವರ್ಷಂಬರಂ ಬಪ್ಪಿನಮಿತ್ತ ಭದ್ರಬಾಹುಸ್ವಾಮಿಗಳ್ ಚಂದ್ರಗುಪ್ತಾಚಾರ್ಯರ್ ಮೊದಲಾಗಿರ್ದ ಶಿಷ್ಯರೆಲ್ಲರಂ ಬರಿಸಿ ಇಲ್ಲಿ ಪನ್ನೆರಡು ವರ್ಷಂಬರಂ ದುರ್ಭಿಕ್ಷಮಪ್ಪುದದರಿಂದಿಲ್ಲಿರ್ದೊಡೆ ನಿಮ್ಮ ವ್ರತಾಚಾರಂಗಳ್ಗೆ ಭಂಗಮಕ್ಕುಮದುಕಾರಣ ನೀಮೆಲ್ಲಂ ದಕ್ಷಿಣಾಭಿಮುಖರಾಗಿ ಪೋಪುದೆನೆ ರಾಮಿಲ್ಯಾಚಾರ್ಯರ್ ಸ್ಥೂಲಭದ್ರಾಚಾರ್ಯರ್ ಮೊದಲಾಗೆ ಅತಿಸಮರ್ಥರಾಗಿರ್ದ ಶ್ರಾವಕರ ವಚನದಿಂ ಕೆಲಂಬರ್ ಸಂಘಮಂ ಕೂಡಿಕೊಂಡಲ್ಲೆ ನಿಲ್ವುದುಂ ಭದ್ರಬಾಹುಸ್ವಾಮಿಗಳ್ ಪನ್ನೆರಡು ಸಾವಿರ ಶಿಷ್ಯರಂ ಕೂಡಿಕೊಂಡು ದಕ್ಷಿಣ ದೇಶಮನೆಯ್ದಿ ಬಂದು ಪಿರಿದಪ್ಪರಣ್ಯಮಂ ಪೊಕ್ಕು ಅಲ್ಲಿಪ್ಪ ಬೆಟ್ಟದ ಕಿರುಗುಹೆಯಂ ನಿಷಿದ್ಧಿಯಂ ಪುಗುವಾಗಲೊಂದು ವಚನಮಾದುದು. ನಿಮ್ಮನಿಲ್ಲಿಯೆ ನಿಷಿದ್ಧಿಯಕ್ಕುಮೆಂಬ ವಚನಮಂ ಕೇಳ್ದು ಎಮಗಾಯುಷ್ಯಾವಸಾನಮೆಂದರಿದು ತನ್ನ ಶಿಷ್ಯರೊಳೇಕಾದಶಾಂಗ ದಶಪೂರ್ವಧರರಪ್ಪ ವಿಶಾಖಾಚಾರ್ಯರೆಂಬ ಮುನಿಪತಿಗಳಂ ಸಮುದಾಯಕ್ಕಾಚಾರ್ಯರಂ ಮಾಡಿಯವರ ಕೂಡೆ ಸಮುದಾಯದ ಪನ್ನಿಚ್ಛಾಸಿರ ಶಿಷ್ಯರ್ ಸಹಿತ ದಕ್ಷಿಣದಿಕ್ಕಿನ ಚೋಳ ಪಾಂಡ್ಯದೇಶಕ್ಕೆ ಕಳುಹಿಸಿ

ಇತ್ತ ಚಂದ್ರಗುಪ್ತಮುನಿಗಳಂ ಕರೆದು ನೀಮುಮವರೊಡನೆ ಪೋಪುದೆನೆ ಪನ್ನೆರಡುವರುಷಂ ಗುರುಪಾದಸೇವೆಯಂ ಮಾಡುವುದದರಿಂ ಪೋಪೆನಲ್ಲೆಂದು ನಿಲ್ವುದುಮುಳಿದ ಸಮುದಾಯಂಬೆರಸು ವಿಶಾಖಮುನಿಪತಿಯು ದಕ್ಷಿಣದೇಶಮನೆಯ್ದಲಿತ್ತ ಭದ್ರಬಾಹುಸ್ವಾಮಿಗಳ್ ಸನ್ಯಸನಮಂ ಕೈಕೊಂಡು ತದ್ಗುಹಾಂತದೊಳಾರಾಧನಾ ವಿಧಿಯಿಂ ನೆಗಳುತ್ತಿರೆ ಚಂದ್ರಗುಪ್ತಯೋಗೀಂದ್ರಂ ಉಪವಾಸದೊಳ್ ಗುರುಸೇವೆಯಂ ಮಾಡುತ್ತಿಪ್ಪುದುಂ ಗುರುಗಳೆಂದರ್ ನಮ್ಮ ದರ್ಶನದೊಳುಪಾವಸ ನಿಯಮ ಪಾರಣಾರ್ಥಕ್ಕಮರಣ್ಯಚರ್ಯಮುಳ್ಳುದರಿಂ ಪೋಗಿ ವೃಕ್ಷಂಗಳ ಸಮೀಪಮನೆಯ್ದಿ ಬಾವಲಿಯನಿಕ್ಕಿ ಬಪ್ಪುದೆಂಬುದುಂ ಗುರುವಚನಮಂ ಮೀರದೆ ಪೋಗಲಾ ಚಂದ್ರಗುಪ್ತ ಮುನಿಯ ಮನಮಂ ಪರೀಕ್ಷಿಸಲೆಂದೊರ್ವ ಯಕ್ಷಿಯು ತನ್ನ ರೂಪಂ ಕಾಣಲೀಯದೆ ಕಂಕಣದ ಕೈಯೊಳ್ ಸುವರ್ಣದ ಸಟ್ಟುಗದೊಳ್ ತೊವ್ವೆಯಿಂದಂ ಕಲಸಿದ ಕಳವೆಯ ಕೂಳಂ ತುಪ್ಪ ಸಹಿತಂ ನಿಂದಿರೆ ಕಂಡು ಕಾಂತಾರಾಭಿಕ್ಷೆಯೊಳಕ್ರಮಮೆಂದಲಾಭದಿಂ ತಿರುಗಿಬಂದು ಗುರುಗಳಿಂ ಪ್ರತ್ಯಾಖ್ಯಾನಮಂ ಕೈಕೊಂಡು ಕಂಕಣದ ಕೈಯ ಸ್ವರೂಪಮಂ ಪೇಳ್ವುದುಂ ಮಾರ್ಗಮಲ್ಲೆಂದು ನಿಮ್ಮ ಪುಣ್ಯದೇವಿಯೆಂದರಿಪೆ ಮರುದಿವಸಂ ಮತ್ತೊಂದು ದೆಸೆಗೆ ಬಾವಲಿಯನಿಕ್ಕೆ ಒಂದೆಡೆಯೊಳ್ ಪೊನ್ನ ಪರಿಯಾಣದೊಳ್ ಪರಿಪರಿಯ ಪಕ್ವಾನ್ನಮನಿಟ್ಟು ಕಳಶದೊಳ್

ನೀರುಸಹಿತಮತ್ಯಂತ ರೂಪವತಿಯಪ್ಪ ಬಾಲಕಿಯು ಬರುತ್ತಿಪ್ಪುದುಂ ಯತೀಂದ್ರಂ ಕಂಡು ನೋಡುತಿಪ್ಪಿನಮಾಕೆ ಬಂದು ನಮೋಸ್ತು ಎಂದು ನಿಲಿಸಲೀಯರಣ್ಯದೊಳಾರುಮಿಲ್ಲದೊರ್ವ ಹೆಣ್ಣು ಬಂದು ನಿಲಿಸೆ ನಿಲ್ವುದುಚಿತಮಾರ್ಗಮಲ್ಲೆಂದು ಮಗುಳೆಬಂದು ಪ್ರತ್ಯಾಖ್ಯಾನಂಗೊಂಡಾ ಸ್ವರೂಪಮಂ ಗುರುಗಳ್ಗೆ ಪೇಳೆಯವರುಮೊಳ್ಳಿತ್ತಂ ಮಾಡಿದಿರಿ ಎಂಬುದುಂ ಮರುದಿವಸಂ ಭದ್ರಬಾಹುಸ್ವಾಮಿಗೆ ಮರಣಸಮಯವಾದಾಗಳ್ ಬೇರೊಂದೂರ್ಧ್ವಶಿಲಾವಳದೊಳಿರಿಸೆಯಾ ಮುನೀಂದ್ರರ್ ಸಮಾಧಿವಡೆಯೆ ಚಂದ್ರಗುಪ್ತರವರ ಶರೀರಮಂ ಸಂಸ್ಕರಿಸಿಯದರ ಶ್ರೀಪಾದಂಗಳಂ ಗುಹಾಭಿತ್ತಿಯೊಳ್ ರಚಿಸಿ ಆರಾಧಿಸುತ್ತಿರ್ದರಣ್ಯಚರ್ಯಂ ಪೊಗಲಲ್ಲಿರ್ದ ಶೋಭಾಕರಮಪ್ಪ ದೇವನಿರ್ಮಿತ ಪುರಮಂ ಕಂಡು ಪುಗಲಲ್ಲಿ ಶ್ರಾವಕಂ ವಿಧಿಪೂರ್ವಕ ಮಾಹಾರಮಂ ಕುಡೆ ಕೊಂಡುಬಂದಾ ಶಿಲಾಮಯಗಿರಿಯಲ್ಲಿ ಗುರುಪಾದ ಭಕ್ತಿಯಿಂದಷ್ಟ ಪಕ್ಷಮಾಸಾದ್ಯುಪವಾಸಂಗಳಿಂ ನೆಗಳುತ್ತೆ ಕಾಯಸ್ಥಿತಿನಿಮಿತ್ತಮಾಹಾರಂಗೊಳುತ್ತೆ ಧ್ಯಾನ ಮೌನಾನುಷ್ಠಾನದಿಂ ಕಾಲಮಂ ಕಳೆಯುತ್ತಿಪ್ಪುದುಂ

ಅತ್ತಲ್ ವಿಶಾಖಾಚಾರ್ಯರ್ ಸಮುದಾಯಂಬೆರಸು ಪೋಗುತ್ತಂ ಗ್ರಾಮ ನಗರಾದಿಗಳೊಳಿರ್ಪ ಜಿನಾಲಯ ಜಿನಬಿಂಬಗಳಂ ವಂದಿಸುತ್ತಮಲ್ಲಿರ್ದ ವಿನೇಯ ಜನಂಗಳ್ಗೆ ಧರ್ಮಾಮೃತಮಂ ಕರೆಯುತ್ತುಂ ಚೋಳಮಂಡಲ ಮೊದಲಾದ ದೇಶಂಗಳೊಳ್ ವಿಹಾರಿಸುತ್ತಿರ್ದರಿತ್ತಲ್ ಪಾಟಲೀಪುತ್ರನಗರದೊಳ್ ರಾಮಿಲ್ಯಾಚಾರ್ಯರ್ ಮೊದಲಾದವರ್ ದುರ್ಭಿಕ್ಷದೊಳಿರುತ್ತಮಿರೆ ಶ್ರಾವಕರವರ್ಗೆ ಪೂರ್ವಸ್ಥಿತಿಯೊಳೆ ವೈಯಾಪೃತ್ಯಮಂ ಮಾಡುತ್ತಿರೆ ರಾಜ್ಯದೊಳತ್ಯಂತ ಬರಮಾಗಿ ಧಾನ್ಯಮೆಲ್ಲ ಮರೆಯಾಗಿ ಪತ್ರ ಪುಷ್ಪ ಫಲ ಮೂಲ ಬೀಜಾದಿಗಳುಮಿಲ್ಲದೆ ಜನಂಗಳೆಲ್ಲಂ ತಿಟ್ಟನೆ ತಿರಿದು ಲಯಮಾಗುತ್ತಿಪ್ಪಾಗಳ್ ಜೈನಾಚಾರವ್ರತಾದಿಗಳ್ ಕೆಟ್ಟು ಭ್ರಷ್ಟಮಾಗಿ ನಡೆವಾಗ ಸ್ಥೂಳಭದ್ರಾದಿ ಮುನಿಗಳ್ಗೆ ಬಲ್ಲಿದರಾಗಿರ್ದ ಶ್ರಾವಕರ್ ಯಥೋಚಿತ ಭಿಕ್ಷೆಯಂ ಮಾಡಿಸುತ್ತಿರಲೊಂದು ದಿನಂ ಚರಿಗೆ ಪೋಗಿಬಪ್ಪ ಋಷಿಯರಂ ಬಣಗುಗಳ್ ಕಂಡವರ ಪೊಟ್ಟೆಯಂ ಸೀಳ್ದು ಬಸುರೊಳಿರ್ದನ್ನಮಂ ತೋಡಿತಿಂಬುದುಂ ಕಂಡು ಶ್ರಾವಕರ್ ಭಯಗೊಂಡಲ್ಲಿಂದಿತ್ತ ರಾತ್ರಿಯೊಳನ್ನಮಂ ಬೇಡಿಕೊಂಡು ಸ್ರಾವೆಯೊಳ್ ಬಸದಿಯೊಳಿಟ್ಟರ್ದು ಬಾಗಿಲಂ ಮುಚ್ಚಿ ಬೆಳಗಾದಾಗಳ್ ಗವಾಕ್ಷದ ಬೆಳಗಿನೊಳೊರ್ವರ್ಗೊರ್ವ ಕೈಸೋದಿಸಿಕೊಂಬುದು ಪಗಲು ಪೊರಮಡಲಾಗದೆಂಬುದುಮಂತೆಗೆಯ್ವೆಮೆಂದು ರಾಮಿಲ್ಯಾಚಾರ್ಯರ್ ಮೊದಲಾಗೆ ಒಪ್ಪಿ ಕೆಲವು ದಿವಸಂ ಪೋಗಲೊಂದು ರಾತ್ರಿಯೊಳ್ ದೀರ್ಘಶರೀರ ಭೇತಾಳಾಕೃತಿಯಿಂ ಪಿಂಛ ಕಮಂಡಲಯುತರ್ ಬೀದಿ ಬೀದಿಯೊಳ್ ಬರುವುದುಂ ನಾಯಿಗಳ್ ಕಂಡು ಕೂಕಿರಿಯುತ್ತಮಟ್ಟುತ್ತುಂ ಬಂದೊರ್ವ ಮುನಿಯಂ ಕಡಿವುದುಂ ಶ್ರಾವಕರ್ ನಾಯ್ಗಳಂ ನಿವಾರಿಸೆ ಬಪ್ಪುದೆನೆ ಕೈಯಲ್ಲೊಂದೊಂದು ದೊಣ್ಣೆಯಂ ಗ್ರಹಿಸಿ ಬರುತ್ತಿರಲೊಮ್ಮೆ ಕಾಷ್ಠದಂಡಮಂ ಕೈಯೊಳಾಂತು ತೊಟ್ಟನೆ ಮನೆಯಂಗಣದ ಮುಂದಿರ್ದ ಭೇತಾಳರೂಪನೊರ್ವ ಬಸುರ ಹೆಂಗಸು ಕಂಡು ನಡುಗಿ ಭಯಂಗೊಂಡಾಕ್ಷಣ ಪೊಟ್ಟೆಯೊಳಿರ್ದ ಗರ್ಭಂ ತೊಟ್ಟನೆ

ಕರಗಿ ಬೀಳ್ವುದುಂ ಶ್ರಾವಕರ್ ಕಂಡೆಂದರ್ ನೀವಿಲ್ಲಿಂದಿತ್ತ ರಾತ್ರಿಯೊಳನ್ನಮಂ ಬೇಡಿ ಬಪ್ಪಾಗಳ್ ಬಿಳಿಯ ಕಂಬಳಿಯಂ ಪೊದೆದು ಸೀರೆಯನುಟ್ಟು ಕುಂಚಮಂ ಕಟಿಯೊಳಡಂಗಿಸಿ ಗುಂಡಿಗೆಯಂ ಸ್ಕಂಧಪ್ರದೇಶದೊಳಳವಡಿಸಿ ಬಪ್ಪುದಲ್ಲದೆ ಬಂದಂದನರ್ಥಮಕ್ಕುಮೆಂದೊಡಾ ಪ್ರಕಾರದೊಳೆ ಕೆಲವು ದಿವಸಂ ನಡೆಯಲವರ್ಗಡ್ಡಕಪ್ಪಟ ತೀರ್ಥಕರೆಂಬ ಪೆಸರಾಗಲೀ ಕ್ರಮದಿಂದಿರುತ್ತಿರ್ದು ಪನ್ನೆರಡು ವರ್ಷದ ದುರ್ಭಿಕ್ಷಂ ತೀರಿಬರೆ ಸುಭಿಕ್ಷವಾಗಲಿತ್ತ ಪನ್ನಿಚ್ಛಾಸಿರ ಶಿಷ್ಯರ್ವೆರಸಿ ವಿಶಾಖಾಚಾರ್ಯರ್ ಉತ್ತರಾಭಿಮುಖದಿಂ ಕರ್ಣಾಟಕದೇಶಮನೆಯ್ದಿ ಬಂದು ಸ್ವಗುರು ಭದ್ರಬಾಹುಸ್ವಾಮಿಗಳ ನಿಷಿದ್ಧಿವಂದನಾರ್ಥಮವರಿರ್ದ ಗುಹೆಗೆಯ್ದಿ ಬಪ್ಪುದುಮಲ್ಲಿ ಗುರುಪಾದಾರಾಧನೆಯೊಳ್ ಪ್ರಥಮ ದೀಕ್ಷೆಯೊಳುದಲೋಚನಿಂ ಮೇಲೆ ಪುಟ್ಟಿದ ಜಟಾವಲಂಬಮಾಗಿರ್ದ ಚಂದ್ರಗುಪ್ತಮುನಿಗಳ್ ವಿಶಾಖಾಚಾರ್ಯರ್ಗಿದಿರೆದ್ದು ವಂದಿಸೆ ಇವರು ಕಂದ ಮೂಲ ಫಲಾಹಾರಿಗಳ್ ಕ್ಷಾರದೊಳ್ ಚಾರಿತ್ರಂಗೆಟ್ಟಿಪ್ಪರೆಂದು ಪ್ರತಿವಂದನೆಗೆಯ್ಯದೆ ನಿಷಿದ್ಧಿ ಕ್ರಿಯೆಯಂ ಮಾಡಿ ಭದ್ರಬಾಹುಸ್ವಾಮಿಯ ಪ್ರಪಂಚಮೆಲ್ಲಮಂ ಕೇಳ್ದುಪವಾಸಮಿರ್ದು ಮರುದಿವಸ ಪಾರಣೆಗೆ ಸಮೀಪದೊಳ್ ಗ್ರಾಮಮಿಲ್ಲದುದರಿಂ ಪೆರತೊಂದೂರಿಂಗೆ ಪೋಗಲುದ್ಯೋಗಿಸೆ ಚಂದ್ರಗುಪ್ತರೆಂದರೀ ವನದೊಳತ್ಯಾಸನ್ನಮಾಗೊಂದು ಪುರಮಿಪ್ಪುದಲ್ಲಿಗೆ ಪಾರಣೆಗೆ ಪೋಪಮೆನೆ ಆಶ್ಚರ್ಯಮಾಗೆ ಮಧ್ಯಾಹ್ನಂಬರಮಲ್ಲಿರ್ದು ಚಂದ್ರಗುಪ್ತಮುನಿಪುರಸ್ಸರಂ ಪೋಗೆ ಮುಂದೆ ಸೌಂದರತೆವೆತ್ತಿರ್ದ ಪಟ್ಟಣಮಂ ಕಂಡೊಳಗಂ ಪೊಕ್ಕು ಬಾವಲಿಯನಿಕ್ಕಲಲ್ಲಿರ್ದ ಶ್ರಾವಕರ್ ಬಂದು ಸ್ಥಾಪನಾದಿ ನವವಿಧ ಪುಣ್ಯ ಶ್ರದ್ಧಾದಿ ಸಪ್ತಗುಣ ಸಮೇತಮಾಹಾರಮಂ ಕುಡೆ ಕೊಂಡು ಗುಹೆಗೆ ಮಗುಳ್ದು ಬಪ್ಪವಸರದೊಳೊರ್ವ ಬ್ರಹ್ಮಚಾರಿ ತನ್ನ ಕಮಂಡಳಮಂ ಮರೆದು ಬಂದು ಪಿಂದಣಾ ಪುರಮನರಸಿ ಪೋಗೆ ಪತ್ತನಮದೃಶ್ಯಮಾಗಿಯೊಂದು ಗಿಡದ ಕೊಂಬಿನೊಳ್ ನೇಲ್ದಿರ್ದ ಗುಂಡಗೆಯಂ ಕೊಂಡು ಬಂದಾ ಪ್ರಪಂಚಮಂ ವಿಶಾಖಾಚಾರ್ಯರ್ಗೆ ಪೇಳೆ ಚಂದ್ರಗುಪ್ತಮುನಿಯ ಪುಣ್ಯಪ್ರಭಾವ ತಪಃಪ್ರಶಂಸೆಯಂ ಪೇಳ್ದು ಚಂದ್ರಗುಪ್ತರ ಜಟಾಭಾರವಂ ಲೋಚು ಮಾಡಿಸಿ ಪ್ರಾಯಶ್ಚಿತ್ತಂಗೊಟ್ಟು ಅಸಹ್ಯದತ್ತಾಹಾರಮಂ ಕೊಂಡುದಕ್ಕೆ ಸಂಘಂ ಬೆರಸು ತಾಮುಂ ಪ್ರಾಯಶ್ಚಿತ್ತಂಗೊಂಡೆಲ್ಲರ್ ತಮ್ಮ ತಮ್ಮ ಸ್ಥಾನಕ್ಕೆ ಪೋಗೆ ಪಾಟಲೀಪುರದ ಸಿಂಹಸೇನನ ಕುಮಾರಂ ಭಾಸ್ಕರನೆಂಬರಸಂ ಗುರುವಂದನಾರ್ಥಂ ಬಲಸಹಿತಂ ಬಂದು ಭದ್ರಬಾಹುಸ್ವಾಮಿಗಳ ನಿಷಿದ್ಧಿಸ್ಥಾನಮಂ ಪೂಜಿಸಿ ಗುರುಪಿತಾಮಹ ಚಂದ್ರಗುಪ್ತರ್ಗಂ ಪೊಡೆವಟ್ಟಲ್ಲಿಯೆ ಬೀಡುಬಿಟ್ಟು ಚೈತ್ಯಾಲಯಂಗಳನಲ್ಲಿ ನಿರ್ಮಿಸಿ ಆ ಗಿರಿಯ ಸಮೀಪದೊಳೊಂದು ಪುರಮಂ ನಿರ್ಮಿಸಿ ಕೆಲವು ದಿವಸಮಿರಲದಕ್ಕೆ ಬೆಳ್ಗುಳಮೆಂದು ಪೆಸರಾಯ್ತು

ಅಂದಿಂದಿತ್ತ ರಾಮಿಲ್ಯಾಚಾರ್ಯರ್ ಸ್ಥೂಳಭದ್ರಾಚಾರ್ಯರ್ ಸಮಾಳೋಚಿಸಿ ವೃದ್ಧರುಂ ತಾಮುಂ ಪ್ರಾಯಶ್ಚಿತ್ತಂಗೊಂಡು ಸ್ಥೂಳಾಚಾರ್ಯರ್ಗವರ ಶಿಷ್ಯರ್ಗಂ ಪ್ರಾಯಶ್ಚಿತ್ತಮಂ ಕೊಳ್ಳಿಮೆನಲವರೊಡಂಬಡದೆ ಚರ್ಚಿಸಿ ಕಮಲಭದ್ರ ಕಮಲಸೇನ ರೆಂಬತಿವಿದ್ಯಮುಳ್ಳವರಪ್ಪುದರಿಂ ಸ್ಥೂಳಾಚಾರ್ಯರ ಮಾತನೊಡಂಬಡದೆ

ಪ್ರಾಯಶ್ಚಿತ್ತಂಗೊಳ್ಳದಿರೆ ಸ್ಥೂಳಾಚಾರ್ಯರ್ ತಾವುಂ ಕೊಂಡವರ್ಗಮವರ ಶಿಷ್ಯರ್ಗಂ ನಿಚ್ಚ ನಿಚ್ಚಂ ಪೇಳುತ್ತಿಪ್ಪುದುಂ ಕ್ರೋಧಮನೆತ್ತಿಕೊಂಡು ರಾತ್ರಿಯೊಳೇಕಾಂತದೊಳಿರ್ದ ಸ್ಥೂಳಾಚಾರ್ಯರಂ ವಧಿಯಿಸಲವರ್ ಸಮಾಧಿಯಿಂ ಸ್ವರ್ಗಸ್ಥರಾದರುಳಿದರೆಲ್ಲ ಪ್ರಾಯಶ್ಚಿತ್ತಂಗೊಳ್ಳದೆ ಸ್ವೇಚ್ಛೆಯಿಂದಿಪ್ಪುದುಮೊಮ್ಮೆ ವಿಶಾಖಾಚಾರ್ಯರ್ ಸಮುದಾಯಂವೆರಸು ಬರ್ಪುದುಮವರೆಲ್ಲರಂ ಬಂದಿಸೆ ಪ್ರತಿವಂದನೆಯಂ ಕುಡದಿರ್ಪುದುಂ ಕ್ರೋಧಂ ಪುಟ್ಟಿ ಬೇರೆಯಾಗಿ ಕೇವಲಿಗಳ್ ಮಾತನಾಡುವರ್ ಕಬಳಾಹಾರಂಗೊಳ್ವರ್ ಪಶುಸ್ತ್ರೀಯರ್ ತದ್ಭವದೊಳೆ ಮುಕ್ತರಪ್ಪರ್ ಸಗ್ರಂಥ'ದೊಳ್ ಮುಕ್ತರಪ್ಪರೆಂದಾಗಮಾಭಾಸಮಂ ಕಲ್ಪಿಸಿ ಸ್ವಾಮಿಯೆಂಬ ರಾಜಪುತ್ರಿಯನೋದಿಸಿ ಆಕೆಯಂ ಸುರಾಷ್ಟ್ರದೇಶದ ವಾರಿಭಪುರಾಧಿಪಂ ಜಯನೃಪಂಗೆ ಮದುವೆಯಂ ಮಾಡಲಾಕೆಗಗ್ರಮಹಿಷಿ ಪಟ್ಟಂಗಟ್ಟೆ ತನ್ನ ಗುರುವಂ ಬರಿಸಿರೆಂದು ನೃಪಂಗರಿಪಿ ಕರೆಯಿಸಲಾತಂ ಬಪ್ಪುದಂ ಕೇಳ್ದಿದಿರ್ಗೊಳಲರಸನುಂ ತಾನುಂ ಪೋಗಲರಸಂ ದೂರದೊಳೆ ಕಂಡು ಎಲೆ ಮನಸ್ವಿ ನಿನ್ನ ಗುರುಗಳ್ ಸಂಪೂರ್ಣವಸ್ತ್ರವೇಷ್ಟಿತರಲ್ಲ ನಿರ್ಗ್ರಂಥರುಮಲ್ಲ ವಿಪರೀತಮಿಾ ವೇಷಧಾರಿ ಎನ್ನ ಪಟ್ಟಣಮಂ ಪುಗಲಾಗದೆಂದವರಂ ತಿರಸ್ಕರಿಸಿದೊಡವರ ಕಟಿಯ ಬಿಳಿ ಕಂಬಲ ಶ್ವೇತ ಪಟ್ಟಮಂ ತೆಗೆಯಿಸಿ ನಿರ್ಗ್ರಂಥರಾಗಿ ಬನ್ನಿಮೆಂದೊಡವರ್ ನಾಚಿಕೆಯಿಂ ಬಾರದೆ ಪೋಗೆ ಕೆಲವಾನು ದಿವಸಕ್ಕಾ ಸ್ವಾಮಿನಿಗೆ ಜಕ್ಕಳೆಯೆಂಬೊರ್ವ ಮಗಳ್ ಪುಟ್ಟಲಾಕೆಯಂ ಶ್ವೇತಾಂಬರರಲ್ಲಿ ಓದಲಿಡೆಯವರ ಶಾಸ್ತ್ರದೊಳ್ ಪ್ರವೀಣೆಯಾಗೆ ಕರ್ಣಾಟದೇಶದ ಕೊಲ್ಲಾಪುರಾಧಿಪತಿ ಭೂಪಾಲನೆಂಬರಸಂಗೆ ಕುಡೆ ಪಟ್ಟಮಹಾದೇವಿಯಾಗಿ ಶ್ವೇತಾಂಬರಾಗಮುಮನೆಲ್ಲರ್ಗುಪದೇಶಂಗೆಯ್ದು ಸುಖಮಿರ್ದಳಿತ್ತ ಚಂದ್ರಗುಪ್ತಮುನೀಂದ್ರಂ ಸಕಲ ಸನ್ಯಸನಂಗೆಯ್ದಾರಾಧನಾವಿಧಿಯಿಂ ಮುಡಿಪಿ ಸ್ವರ್ಗಮಂ ಪಡೆದರ್. ಶ್ರೀವರ್ಧಮಾನಸ್ವಾಮಿ ಮೋಕ್ಷಮನೆಯ್ದೆ ಗೌತಮರಾಯನು ಬದ್ಧಕೇವಲಿಗಳ ಕಾಲ ಅರವತ್ತೆರಡು (೬೨) ವರುಷ, ಮತ್ತಂ ಶಿಷ್ಯ ನಂದಿಮಿತ್ರಾದಿ ಶ್ರುತಕೇವಲಿಗಳೈವರ ಕಾಲ ನೂರು (೧೦೦) ವರುಷ, ಮತ್ತಂ ವಿಶಾಖರಾದಿ ದಶಪೂರ್ವಧರರ್ ಪನ್ನೊರ್ವರ ಕಾಲ ನೂರೆಂಬತ್ತುಮೂರು (೧೮೩) ವರುಷಮಕ್ಕುಂ, ಮತ್ತಂ ನಕ್ಷತ್ರರ್ ಮೊದಲಾದ ಏಕಾದಶಾಂಗಧರರೈವರ ಕಾಲಮಿನ್ನೂರಿಪ್ಪತ್ತುಮೂರು (೨೨೩) ವರುಷಮಕ್ಕುಂ.

ಇಂತು ಕಾಲಂ ಪ್ರವರ್ತಿಸುತ್ತಿರಲತ್ತ ಉಜ್ಜಯಿನಿ ನಗರಾಧಿಪತಿ ಭಾನುರಾಜಂಗಂ ಸುಪ್ರಭೆಗಂ ಪುಟ್ಟಿದ ಗೋವಿಂದನೆಂಬಂ ಪರಿವ್ರಾಜಕನಾಗಿರ್ದು ತಂದೆಯ ಪರೋಕ್ಷದೊಳ್ ಶ್ರೀಕಾಂತೆಯೆಂಬ ರಾಜಪುತ್ರಿಯಂ ಮದುವೆ ನಿಂದು ರಾಜ್ಯದೊಳ್ ನಿಲೆಯಾತನ ಸ್ತ್ರೀಗೆ ಗರ್ಭಮಾಗೆ ನವಮಾಸಂ ನೆರೆದು ಶುಭಲಗ್ನದೊಳ್ ವಿಕ್ರಮಾದಿತ್ಯನೆಂಬ ಮಗಂ ಪುಟ್ಟಿ ರಾಜ್ಯದೊಳ್ ನಿಂದು ರಾಜ್ಯಮಂ ಪಾಲಿಸುತ್ತುಂ ಸಿದ್ಧಾಂತದೊಳಿರ್ದ ಜ್ಯೋತಿರ್ಲೋಕ ಚಂದ್ರಸೂರ್ಯಪ್ರಜ್ಞಪ್ತಿಯಂ ಗ್ರಹಚಾರ ಕ್ಷೇತ್ರಭೇದಮಂ ವೇದಾಂತಿಗಳಪ್ಪ ಬ್ರಾಹ್ಮರನೋದಿಸಿ ಪಂಚಾಂಗಮಂ ಬರೆಯಿಸಿ ವರ್ಧಮಾನರ್ ಮುಕ್ತಿಗೆ ಸಂದ ಆರುನೂರೈದನೆಯ ರುಧಿರೋದ್ಗಾರಿ

ಸಂವತ್ಸರಾರಭ್ಯ ತನ್ನ ಶಕೆಯಂ ಪ್ರಕಟಿಸಿದಂ

ಅತ್ತ ಜಿನಚಂದ್ರನೆಂಬ ಯತೀಂದ್ರಂ ಶ್ವೇತಾಂಬರಮತಸ್ಥಾಪನೆಯಂ ಮಾಡಿ ಶಾಸ್ತ್ರಾದಿಳಂ ರಚಿಸಿ ಪ್ರಸಿದ್ಧಿಪಡೆದ ವೀರಸೇನಮುನಿ ಅಪಲಸಂಘಮೆಂದು ಮಾಡಿದರ್.

ಶ್ಲೋಕ || **ಷಟ್ಛತ ನವವರ್ಷೇಭ್ಯಃ ಶಕೇಸಮುತ್ಪನ್ನೇ**
ಶ್ರೀವರ್ಧಮಾನ ಭಗವತಿ ಮೋಕ್ಷಗತೇ ಶ್ವೇತಪಟದೃಶ್ಯಾಃ ||

ಮೇಲೆ ಇಪ್ಪತ್ತೈದು (೨೫) ವರುಷದಲ್ಲಿ ಅಪಲಸಂಘ ಪುಟ್ಟಿತು. ವಿಕ್ರಮಾರ್ಕನಿಂ ಮುಂದೆ ಐನೂರ್ಯೆವತ್ತಾರು (೫೫೬) ವರುಷದಂದು ಪೂಜ್ಯಪಾದರ ಶಿಷ್ಯ ವಜ್ರನಂದಿ ದ್ರಾವಿಡಮತಸ್ಥಾಪನಂಗೆಯ್ದಂ. ಮೇಲೆ ಧರ್ಮಸೇನಾಚಾರ್ಯ ಶಿಷ್ಯಂ ಕುರವಸೇನಂ ಶೀತವ್ಯಾಧಿಯಿಂ ನಿಶ್ವಾಸನಾಗೆ ಸ್ಮಶಾನಕ್ಕೊಯ್ದು ಚಿತೆಯೊಳಿಟ್ಟಗ್ನಿಯಂ ಪೊತ್ತಿಸಲಗ್ನಿ ಜ್ವಾಲೆಯಿಂ ಶೀತರೋಗಂ ಪರೆಯಲೆದ್ದು ಕುಂಚಂ ಬೆಂದಿರ್ದೊಡೆ ಪೊಂಬಾಳೆಯನಾಂತು ಬಪ್ಪುದುಮೂರಂ ಪುಗಲೀಸದಿರೆ ಪ್ರಾಯಶ್ಚಿತ್ತಂಗೊಳ್ಳದೆ ಶಿಷ್ಯರಂ ಕೂಡಿಕೊಂಡು ಕಾಷ್ಠಸಂಘವ ಮಾಡಿದರ್. ಮತ್ತಮೈವತ್ತು ವರ್ಷದಂದು ತುರಾನಗರದ ರಾಮಸೇನಮುನಿ ಮರುತುಸಂಘಸ್ಥಾಪನೆಯಂ ಮಾಡಿದಂ

ಮತ್ತಂ ದಕ್ಷಿಣದೇಶದ ಪುಷ್ಕರಾವತೀನಗರದ ಅಭಿಚಂದ್ರಮುನಿ ಬಿಲಸಂಘ ಸ್ಥಾಪನೆಯಂ ಮಾಡಿದಂ. ಈ ದುಷ್ಷಮಕಾಲದೋಷದಿಂ ಜೈನಮತದೊಳನೇಕ ಮತಮತಾಂತರಂಗಳಾದುವು, ಎಂಭತ್ತುನಾಲ್ಕು ಗಚ್ಛಂಗಳಾದುವು, ಗಣಂಗಳನೇಕ ಭೇದಮಾದವಲ್ಲಿ ಮುಂದೆ ಅಷ್ಟಾಂಗ ನಿಮಿತ್ತಜ್ಞರಪ್ಪರ್ಹದ್ಬಲ್ಯಾಚಾರ್ಯರಿಂ ಸೃಷ್ಟಿಸಿದ ಸಿಂಹಸಂಘಮುಂ ಸೇನಸಂಘಮುಂ ನಂದಿಸಂಘಮುಂ ದೇವಸಂಘಮುಮೆಂದು ಶ್ರೀಮೂಲಸಂಘದೊಳ್ ಸ್ಥಾನಸ್ಥಿತಿವಿಶೇಷದಿಂ ಗಣಗಚ್ಛಂಗಳಂ ಒಂದರೊಳೊಂದು ಭೇದಂಗಳಿಲ್ಲದಂತು ನಿಯಮಿಸಿ ಪಕ್ಷದಿಂ ಧರ್ಮಂ ವರ್ತಿಸುವುದೆಂದು ದೇಸೀಗಣ ಸೇನಗಣ ಕಾಣಾಗ್ರಗಣ ಬಲತ್ಕಾರಗಣಮೆಂದವರೊಳ್ ಸೇನಗಣಕ್ಕೆ ಪುಷ್ಕರಗಚ್ಛ ದಿಳ್ಳಿ ಕೊಲ್ಲಾಪುರ ಪೆನಗುಂಡೆ ಮೊದಲಾದ ಸ್ಥಾನಂಗಳ್, ಸೇನಭದ್ರ ವೀರರಾಚಾದಿ ನಾಮಂಗಳ್, ವೃಷಭಸೇನಾನ್ವಯ ಜ್ವಾಲಮಾಲಿನಿ ವರಪ್ರಸನ್ನ ರಾಜದ್ವಾರಸೇನಾ ಮಧ್ಯದೊಳ್ ಯೋಗಂಗೊಂಡಿರ್ದಾ ಸೇನೆಯೆಲ್ಲಮಂ ಶಿಷ್ಯರಂ ಮಾಡಿಕೊಂಡರ್. ವಂಕದಿ ಕಡಿವಾಣ ಬಿರಿದು ಮಂಗಳವಾರಗಟ್ಟಲೆಯಿಂದೆದ್ದು ಬಳಿಕಮದರೊಳೆ ಜೀನಸೇನ ಲಕ್ಷ್ಮೀಸೇನರೆಂದೆರಡು ಭೇದವಾಯ್ತು. ನಂದಿಸಂಘ ಬಲಾತ್ಕಾರಗಣ ಭಾರತಿಗಚ್ಛ ಡಿಳ್ಳಿಮಲೆಯ ಖೇಟ ವರಾಂಗ ಪೊಂಬುಚ್ಚಪುರಾದಿ ಸಿಂಹಾಸನಸ್ಥಾನಂಗಳ್ ನಂದ ನಂದಿ ಚಂದ್ರಕೀರ್ತಿ ಭೂಷಣಾದಿ ನಾಮಂಗಳ್ ಕುಂದಕುಂದಾನ್ವಯ ಪದ್ಮಾವತಿಪ್ರಸನ್ನ ಸ್ಮಶಾನದೊಳ್ ಬಲಾತ್ಕಾರಯೋಗದೊಳ್ ನಿಂದು ಶುಕ್ರವಾರಗಟ್ಟಲೆ ಸಿಂಹಸಂಘ ದೇಸಿಗಣ ಪುಸ್ತಕಗಚ್ಛ ದಿಳ್ಳಿಸೋದೆ ಗೇರೆಸೊಪ್ಪೆ ಸಂಗೀತಪುರ ಸುಧಾಪುರ ಕನಕಾದ್ರಿ ಹನಸೋಗೆ ಬೆಳ್ಗುಳ ಸಿಂಹಾಸನಂಗಳ್. ಸಿಂಹಕೀರ್ತಿ ಪ್ರಸಾದಶರ ಅಕಳಂಕಾದಿನಾಮ ಆಮ್ರಕೂಷ್ಮಾಂಡಿವರ

ಕುಂದಕುಂದಾನ್ವಯ ಗುರುವಾರಗಟ್ಟಲೆ ದೇಶ್ಯಾವಾಟದೊಳ್ ತಪಮಂ ಮಾಡಿಯವರೆಲ್ಲರಂ ವ್ರತಕ್ಕೆ ತಂದರ್. ಶ್ರೇಯಾಂಸನೀ ದೇವರಸಂಘ ಕಾಣಾಗ್ರಗಣ ತಿಂತ್ರಿಣಿ ಚಂದ್ರಕಾಂತಗಚ್ಛ ದಿಳ್ಳಿ ವೇದಲಾಪುರ ಕೊಪಣ ಲಕ್ಷ್ಮೇಶ್ವರ ವಾಲುಕ ದ್ವಾದಶ ನಗರಾದಿ ಸಿಂಹಾಸನಸ್ಥಾನಂಗಳ್ ದೇವದತ್ತ ನಾಗತುಂಗನಾಮಂಗಳ್ ಚಕ್ರೇಶ್ವರಿ ಮಹಾಕಾಳಿ ವರಗುತ್ತಿಯಮೆಲೆ ಉಗ್ರಯೋಗ ಕುಂದಕುಂದಾನ್ವಯ ಶನಿವಾರಗಟ್ಲೆ ಕೀರ್ತಿನಾಮಂ ಕೆಲದಿವಸದಿಂ ಮೇಲೆ ದೇಸಿಗಣಕ್ಕುಂ ಕಾಲೋಗ್ರಗಣಕ್ಕುಂ ಬಂತು ಅಜ್ಜಿಯರು ನಾಲ್ಕು ಗಣಕ್ಕು ಸಮ. ಈ ಚತುಸ್ಸಂಘಗಳ್ ಶ್ರೀಮೂಲಸಂಘಮೆ. ಅಲ್ಲಿ ವಿಸಂಘಂಗಳ್ ಪುಟ್ಟಿದವು.

ಶ್ಲೋಕ || ಶ್ವೇತಾಂಬರೋ ದ್ರಾವಿಡಶ್ಚ ಕಾಷ್ಠಸಂಘ ಸಮಾನ್ವಿತಃ
ಯಾಪನೀಯಾ ವಿಭೇದಾಶ್ಚ ವಿಸಂಘಾ ಪರಿಕೀರ್ತಿತಃ
ಗೋಪುಚ್ಛಕ ಶ್ವೇತವಾಸಾ ದ್ರಾವಿಡಾ ಯಾಪುನೀಯಕಃ
ನಿಷ್ಪಿಂಚಶ್ಚೇತಿ ಪಂಚೈ ತೇ ಜೈನಾಭಾಸಾ ಪ್ರಕೀರ್ತಿತಾಃ

ಅಲ್ಲಿ ಶ್ವೇತಾಂಬರರೊಳ್ ಲಕ್ಷ್ಮೀಸೇನರ್, ಕಾಷ್ಠಸಂಘದೊಳ್ ಕಮಲಭಟ್ಟಾರಕರ್, ದ್ರವಿಡಸಂಘದೊಳ್ ಧರಸೇನರ್, ಯಾಪನೀಯರೊಳ್ ಕೇಶವಚಂದ್ರದೇವರೆಂಬವರ್ ಪ್ರಸಿದ್ಧಿವಡೆದು ಕೀರ್ತಿಯಂ ಪಡೆದರ್.

ಇಂತೀ ಕಥೆಯಂ ಕೇಳ್ದರ
ಭ್ರಾಂತಿಯು ನೆರೆ ಕೆಡುಗು ಬಳಿಕಮಾಯುಂ ಶ್ರೀಯುಂ
ಸಂತಾನವೃದ್ಧಿ ಸಿದ್ಧಿಯ
ನಂತ ಸುಖಂ ತಪ್ಪದಿಹಪರಂಗಳೊಳಕ್ಕುಂ

ಇದು ಸತ್ಯಪ್ರವಚನ ಕಾಲಪ್ರವರ್ತನ ಕಥಾರ್ಣವೋದ್ಧೃತ ಸ್ಯಾದ್ವಾದಸಮಯ ಸಮುದಿತ ದೇವಚಂದ್ರ ವಿರಚಿತ ರಾಜಾವಳಿ ಕಥಾಸಾರದೊಳ್ ಗಣಗಚ್ಛೋತ್ಪತ್ತಿ ನಿರೂಪಣಂ

ಷಷ್ಠಾಧಿಕಾರಂ

ಸಪ್ತಮಾಧಿಕಾರಂ

ಶ್ರೀಸುಜನಸ್ತುತರಖಿಳ ಕ
ಳಾಸದನರ್ ಸುಗುಣಭೂಷಣರ್ ಸುವಿಚಾರರ್
ಲೇಸೆಂದು ಸತತ ಕೇಳ್ವುದು
ವೈಷಮ್ಯಮನುಳಿದು ಹುಂಡಕಾಲಮಹಾತ್ಮ್ಯಂ

ಈ ಪ್ರಕಾರದಿಂ ಪ್ರವರ್ತಿಸುತ್ತಿಪ್ಪಾಗಲುಜ್ಜಯಿನಿಯೊಳ್ ವಿಕ್ರಮಾಂಕನೃಪಾಲಂ ದುಷ್ಟನಿಗ್ರಹ ಶಿಷ್ಟಪಾಲನದಿಂ ರಾಜ್ಯಮನಾಳುತ್ತ ಶಕಪುರುಷನಾಗಿ ತನ್ನ ಶಕೆಯಂ ಪ್ರಾರಂಭಿಸಿ ದೈವಜ್ಞರಿಂ ಪಂಚಾಂಗದೊಳ್ ಬರೆಯಿಸಿ ಗಣಿತ ಸಿದ್ಧಾಂತ ಪ್ರಾರಂಭಮಾಗೆ ಪರಸಮಯಿಗಳ್ ಸಿದ್ಧಾಂತಗಣಿತಮಂ ಮಾಡಿ ಪಂಚಾಂಗಶ್ರವಣಮಂ ಮಾಡುತ್ತೆ ಬಂದರಾತನ ಕಾಲಂ ನೂರಮೂವತ್ತಾರು ವರ್ಷಂ ಸಲ್ವಿನಂ ಕ್ಷತ್ರಿಯಬೀಜದಿಂ ಕುಲಾಲಸ್ತ್ರೀಯೊಳ್ ಪುಟ್ಟಿಯತ್ಯಂತ ಪ್ರಬಲನಾಗಿ ಶಾಲಿವಾಹನನೆಂಬಂ ರಾಜ್ಯದೊಳ್ ನಿಂದು ಬಹುಧಾನ್ಯಸಂವತ್ಸರ ಮೊದಲಾಗೆ ತನ್ನ ಶಕೆಯಂ ಬರೆಯಿಸಿದಂ.

ಅತ್ತಲ್ ಒಳಲಂಕೆ ಮೂಲಿಕೆ ಗೇರುಸೊಪ್ಪೆ ಮೊದಲಾಗಿ ಗಟ್ಟದ ಕೆಳಗಿನ ರಾಜ್ಯ ಮೊದಲಾದವಕ್ಕೆ ಕದಂಬರಾಯ ಮೊದಲಾಗೆ ತಮ್ಮ ತಮ್ಮ ಶಕೆಯಂ ಬರೆಯಿಸಿದರ್. ಮೊರಿಯೆಂಬವರ್ ಕೆಲಕೆಲವು ಕರ್ಣಾಟದೇಶ ಮೊದಲಾಗಿ ರಾಜ್ಯವಾಳಿದರ್. ಅವರ ಬಂಟರ್ ಕದಂಬರೆಂಬವರೊಳಗೆ ಭೀಮಕದಂಬನೆಂಬಂ ಒಳಲಂಕೆ ಮೊದಲಾದ ರಾಜ್ಯದೊಳ್ ನಿಂದು ತನ್ನ ಶಕೆಯಂ ಬರೆಯಿಸಿದಂ. ಮತ್ತಂ ಲಂಕಾದ್ವೀಪ ಸಿಂಗಳದ್ವೀಪ ಅನುರುಹದ್ವೀಪ ಮೊದಲಾದಂತರದ್ವೀಪಗಳ ಉತ್ತರದ ಪೊರಗಣ ಭೂಪ್ರದೇಶದಲ್ಲಿ ವರ್ತಿಸುವ ವಿದ್ಯಾಧರ ಸಾಮಾನ್ಯರ್ ಕಾಲದೋಷದಿಂ ಆಯುರುತ್ಸೇಧಾದಿಗಳ್ ಕುಂದುತ್ತುಂ ಬರೆಯದರೊಳ್ ಕೆಲಂಬರ್ ಸರ್ವೇಶ್ವರಮತಮಂ ಪ್ರಕಟಿಸಿ ಶಾಸ್ತ್ರ ಪುರಣಾದಿಗಳಂ ನಿರ್ಮಾಪಣಂಗೆಯ್ದು ಪೂರ್ವಬೆತ್ತಲೆಯೆಂಬ ಪಟ್ಟಣಮಂ ದಾವಿದನೆಂಬರಸನಾಳುವಲ್ಲಿ ಜೇಸುನಾಥರ್ ನರಲೋಕಕ್ಕೆ ಪುಣ್ಯಪಾಪಮಂ ಕಾಣಿಸಿ ಸ್ವಾರ್ತಲೋಕಮಂ ಪಿಶಾಚಲೋಕಮನೆಯ್ದಿಸಲ್ ಇಪ್ಪರಿತು ಸಾಂತುವೆಂಬುದರಿಂ ಮಗನಾದ ಸರ್ವೇಶ್ವರನವತಾರದಿಂ ಬೆತ್ತಲೆಯೆಂಬ ಪುರದೊಳ್ ಕನ್ನೆ ಮರಿಯಮ್ಮನ ಗರ್ಭದೊಳ್ ವಿಕಾರವಿಲ್ಲದೆ ಬೆಳೆದು ಜೀವದನವಿನ ಕೊಟ್ಟಿಗೆಯೊಳುದಿಸೆ ಸಂಮನಸ್ಸರು ಬಂದು ಕತ್ತಲೊಳು ಕೊಂಡು ಹೊಸ ನಕ್ಷತ್ರದ ಬೆಳಗಿನೊಳ್ ಪೋಗಿ ಬೆಳೆದರಳಪ್ಪನಿಂದುಪದೇಶಂಗೊಂಡೆಲ್ಲಾ ಪ್ರಪಂಚವುಂ ತಿಳಿದಾ ರಾಜನಿಂ ಶೀರ್ಲ್ವೆಯೊಳೇರಿಸಿಕೊಂಡು ಪಾಡುಪಡುತ್ತ ಏಳು ದಿವಸದಲ್ಲಿ ಭೂಗತನಾಗಿ ಆದಿತ್ಯವಾರ ಭೂಮಿಯಿಂದೆದ್ದನೇಕವಾಗಿ ಅದ್ಭುತಂಗಳಂ ತೋರಿ ಈಪಾದಂ ಭಾವಿಸಿ ಸದ್ಗತಿಯಂ ಪಡೆವುದು.

ಇಲ್ಲದೊಡಂ ಪಿಶಾಚಲೋಕಮಪ್ಪುದೆಂದು ಆಮಂಜೆಸು ಎಂಬ ವಾಕ್ಯಸ್ಮರಣೆಯಿಂದೊಪ್ಪುವ ಪರಂಗಿಗಳಾ ಪರಾಶಿ ಇಂಗರೀಜರೆಂದೆರಡು ಮೂರು ನಾಲ್ಕು ಭೇದಂಗಳಾಗಿ ವರ್ತಿಸುತ್ತಿರ್ದವರೊಳ್ ಸಮ್ಮನ್ನೂಮಿಾಶ್ವರಂ ಅನೇಕ ಭೂಮಿಯನಾಳ್ದು ತನ್ನ ಶಕೆಯನಾ ದೇಶದೊಳ್ ಪ್ರಕಟಿಸಿದಂ. ಇಲ್ಲಿ ವಿಕ್ರಮಾರ್ಕ ಶಕೆಯಿಂ ಮೇಲೆ ೫೭ನೇ ದುರ್ಮತಿ ಸಂವತ್ಸರಾರಭ್ಯಮವರ್ಗೆ ಸಂದ ಶಕೆ ವರ್ತಿಸುವುದು. ಕೇರಳದೇಶ ಮೊದಲಾದವಕ್ಕೆ ಕೊಲ್ಲವೆ ಆದಿಯಾಗಿ ವರ್ತಿಸುವುದು. ಮಹಾರಾಷ್ಟ್ರ ತುರಷ್ಕ ಮೊದಲಾದ ದೇಶಂಗಳಿಗೆ ಪ್ರಸಿದ್ಧರಾದವರ ಶಕೆಯನೆಣಿಸುವರ್. ವಿಂಧ್ಯಪರ್ವತದುತ್ತರದೇಶಕ್ಕೆ ಬಾರ್ಹಸ್ಪತ್ಯಮಾನಮದರ ದಕ್ಷಿಣದೇಶಕ್ಕೆ ಚಾಂದ್ರಮಾನ, ದ್ರಾವಿಡದೇಶಕ್ಕೆ ಸೌರಮಾನ, ಸರ್ವದೇಶಕ್ಕುಂ ಗುರೂದಯಾಬ್ದಂಗಳ್. ಕರ್ಣಾಟ ಮೊದಲಾದವಕ್ಕೆ ಚಾಂದ್ರಮಾನ ಸೌರಮಾನಮೆಂಬೆರಡುಂ ವರ್ತಿಸುವುವು.

ಈ ಪ್ರಕಾರ ವರ್ತಿಸುತ್ತಿರ್ಪಲ್ಲಿ ಇಂದ್ರಪುರದೊಳ್ ವಸುಪಾಲನೆಂಬರಸಗೆ ಕುಟ್ಟಿಭಟ್ಟನೆಂಬ ವೇದಾಂತಿ ಬ್ರಾಹ್ಮಣಂ ಪ್ರತಿದಿವಸಂ ಪಂಚಾಂಗಮಂ ತತ್ಕ್ಷಣದೊಳೆ ವ್ಯರ್ಕೇಂದು ಗುಣಿಸಿ ಶ್ರವಣಮಂ ಮಾಡಿಸುತ್ತಾ ಬರುತ್ತಿರ್ದೊಂದು ದಿವಸಮಮಾವಾಸ್ಯೆಯೊಳ್ ಗ್ರಹಸ್ಫುಟದೊಳ್ ವಿಸ್ಮೃತಿಯಿಂ ವ್ಯರ್ಕೇಂದುಮಂ ಮರೆದು ಸಾರ್ಕೇಂದುವಂ ಲಿಪ್ತೀಕರಿಸಿ ಪ್ರಮಾದವಶದಿಂ ಈ ಹೊತ್ತು ಪೌರ್ಣಮಿ ಮೂವತ್ತು ಘಳಿಗೆಯೆಂದು ಪೇಳಿ ಬರೆ ಬ್ರಾಹ್ಮಣಂ ಬಂದು ಅಮಾವಾಸ್ಯೆ ಮೂವತ್ತು ಘಳಿಗೆಯೆಂಬುದುಂ ಸಿದ್ಧಾಂತಿ ವೇದಾಂತಿಗಳೆಲ್ಲರಂ ಬರಿಸಿ ವಿಚಾರಿಸಿ ಸಿದ್ಧಾಂತಮಂ ಪುಸಿಯಂ ಮಾಡಿ ಪೇಳ್ದ ವೇದಾಂತಿಗಳಿಲ್ಲಿಂದಿತ್ತ ಸಿದ್ಧಾಂತಮಂ ನೋಡಲಾಗದು, ಇವರಿಂದಾ ಪಂಚಾಂಗ ಶ್ರವಣಮಂ ಕೇಳಲಾಗದೆಂದವರ ತಿರಸ್ಕರಿಸೆ ವಿಷಣ್ಣರಾಗಿ ಚಿಂತಿಸಿ ಸಿದ್ಧಾಂತಕ್ಕೆ ಅಯೋಗ್ಯರಾಗಿ ಬಿಟ್ಟರೆ ಬ್ರಾಹ್ಮಣತ್ವಂ ಪೋಕುಮೆಂದು ಆರ್ಹಂತ್ಯ ಬ್ರಾಹ್ಮಣರೊಳಾಳೋಚಿಸಿ ತಮ್ಮಲ್ಲಿ ಮಂತ್ರವಾದಿಗಳಪ್ಪರಂ ಬರಿಸಿ ಯಕ್ಷಿಣಿಯನಾರಾಧಿಸಿ ಉಪವಾಸಪೂರ್ವಕಂ ಪುರದ ಮುಂಗಡೆಯ ಜಲಾಶಯನದೊಳ್ ನಿಂದು ಜಪಿಸುತ್ತಿರೆ ದೇವಿ ಪ್ರತ್ಯಕ್ಷಮಾಗಿ ಕರ್ಣವಲಯಮನರಮನೆ ಬಾಗಿಲ ವ್ಯೋಮದೊಳ್ ತೋರುವುದುಮದರ ಪ್ರಕಾಶಂ ಚಂದ್ರಕಿರಣದಂತೆ ಅರಮನೆಯೊಳಂ ಪುರದೊಳಂ ಬೆಳಗೆ ವಸುಪಾಲನಿದೇನೆಂದು ಕೇಳ್ವುದುಂ ವೇದಾಂತಿ ಭೂಸುರರ್ ಅಮಾವಾಸ್ಯೆಯಂ ಪುಣ್ಣಮಿಯಂ ಮಾಡಿದರೆನೆ ಮರುದಿವಸಂ ಮಾನ್ಯಮಂ ಪಡೆಯಲೆಂದು ಬಂದರಸನಂ ಕಾಣ್ಬುದುಮರಸಂ ಪೇಳ್ವಂ ನೀಂ ಮೂಲೋಕ ಸ್ಥಿತಿಯಂ ಕಾಲ ನಿರ್ಣಯಮುಂ ಜೀವಭೇದಮುಂ ರಾಜ ರಾಷ್ಟ್ರ ದೇವತಾದಿ ಸಕಲ ಪ್ರಪಂಚುಮನರಿಯದೆಯನೃತದಿಂ ಕೃತಕದೊಳಾಡಂಬರಮಂ ತೋರ್ದ ಅಸತ್ಯವಾದಿಗಳ್ ಸಿದ್ಧಾಂತ ವಚನ ಯೋಗ್ಯರಲ್ಲೆಂದು ನಿರಾಕರಿಸೆ ವೇದಾಂತರ ವಚನಪ್ರಕಾರ ಲೋಕ ಮೊದಲಾಗೆ ಸರ್ವಮುಂ ರಚಿಸಿ ಅರಸಂಗೊಪ್ಪಿಸಿ ಸಿದ್ಧಾಂತಮುಂ ಪಡೆದು ಮಾನ್ಯರಾದರಾ ಶಾಸ್ತ್ರ ಪ್ರಮೇಯಮೆಂತೆಂದೊಡೆ

ವೃತ್ತ ||	ಬ್ರಹ್ಮಾ ವಿಷ್ಣುಶ್ಚ ರುದ್ರಸ್ತಪನಶಶಿಕುಜಾಃ ಸೌಮ್ಯದೇವೇಜ್ಯ ಶುಕ್ರಾಃ
ಕಾರೀ ರಾಹುಶ್ಚ ಕೇತುರ್ಮನುಮುನಿ ದಿವಿಜಾಃ ಲೋಕಪಾಲಾಶ್ಚ ಸಿದ್ಧಾಃ
ದುರ್ಗಾ ವಿಘ್ನೇಶನಾಗಾ ವಸುನಗಖಚರಾ ಯೋಗಿನೀವಿಪ್ರವೃಂದಾಃ
ಕುರ್ವಂತ್ವೇತೆ ಶಮಸಾಸ್ತವಸುಖಮನಿಶಂ ಶ್ರೀಯಶೋ ವಾಂಛಿತಾರ್ಥಾಃ

ಎಂದಾಶೀರ್ವಾದಮಂ ಪೇಳಿ

ಶ್ಲೋಕ ||	ಯಥಾ ಶಿಖಾ ಮಯೂರಾಣಾಂ ನಾಗಾಣಾಂ ಮಣಯೊ ಯಥಾ
ತಥಾ ವೇದಾಂಗ ಶಾಸ್ತ್ರಾಣಾಂ ಜ್ಯೌತಿಷಂ ಮೂರ್ಧ್ನ್ಯರ್ವಸ್ಥಿತಮ್ || ೧ ||
ಮುಖಮರ್ಧಶರೀರಂ ವಾ ಸರ್ವಂ ವಾ ಮುಖಮುಚ್ಯತೇ
ತತ್ರಾಪಿ ನಾಸಿಕಾ ಶ್ರೇಷ್ಠಾ ನಾಸಿಕಾಯಾಶ್ಚ ಚಕ್ಷುಷೀ || ೨ ||

ಉಪಜಾತಿ ||ಅನ್ಯಾನಿ ಶಾಸ್ತ್ರಾಣಿ ವಿನೋದಮಾತ್ರೇ
ಸಂದೃಷ್ಟಕಂ ತೇಷು ಫಲಂ ನ ಕಿಂಚಿತ್
ಚಿಕಿತ್ಸಿಕ ಜ್ಯೋತಿಷಕಂ ಮಂತ್ರವಾದಾಃ
ಪದೇ ಪದೇ ಕೌತುಕಮಾವಹಂತಿ || ೩ ||

ವೃತ್ತ ||	ಶಬ್ದಾಲಂಕೃತಿ ತರ್ಕ ನಾಟಕ ಕಲಾ ಶಾಸ್ತ್ರೇಷು ಸಂವಾದನಾತ್
ಸಂದೇಹಃ ಪ್ರತಿಭಾತಿ ಕರ್ಕಶ ವಚಃ ಶೀಲಂ ನ ದೃಷ್ಟಂ ಫಲಂ
ತಸ್ಮಿನ್ ಜ್ಯೌತಿಷ ಮಂತ್ರವಾದಮಥನಾ ಚಾಶ್ಚರ್ಯ ಕಾರ್ಯಂ
ಮಹದ್ವಾಕ್ಯಂ ಸೂರ್ಯಶಶಾಂಕಸಾಕ್ಷಿಣಿ ಭವಾ ದೃಷ್ಟಾಂತಮಾಶಿಶ್ರಿಯೇ ||೪||

ಕ್ರತು ಕ್ರಿಯಾರ್ಥ ಕ್ರತವಃ ಪ್ರವೃತ್ತಾಃ ಕಾಲಾಶ್ರಯಾಸ್ತೇ ಕೃತವೋ ನಿವೃತ್ತಾಃ
ಶಾಸ್ತ್ರಾದ ಮುಷ್ಮಾತ್ಕಿಲ ಕಾಲಬೋಧೊ ದೇವಾಂಗತಾಮುಷ್ಯಕತಾ
ಪ್ರಸಿದ್ಧಾಃ || ೫ ||

ದಂಡಃ ಪಾದೌ ಶಬ್ದಶಾಸ್ತ್ರಂ ಚ ವಕ್ತ್ರಂ ಕಲ್ಪಃ ಪಾಣಿ ಜ್ಯೌತಿಷಂ ಚಕ್ಷುಷೀ ದ್ವೇ
ಶಿಕ್ಷಾ ಘ್ರಾಣಂ ಶ್ರೋತ್ರಮೇ ತನ್ನಿರುಕ್ತಂ ವೇದಸ್ಯಾಂಗಾನ್ಯಾಹುರೇ
ತಾನಿ ಷಟ್ಟ || ೬ ||

ವೇದಸ್ಯ ಚಕ್ಷುಃ ಕಿಲ ಶಾಸ್ತ್ರಮೇತತ್ ಪ್ರಧಾನತಾಂಗೇಷು ತತೋಽನ್ಯಜಾತಾ
ಅಂಗೈರ್ಯುತೋಽನ್ಯೈಃ ಪರಿಪೂರ್ಣಮೂತಿಃ ಚಕ್ಷುರ್ವಿಹೀನಃ ಪುರಕಷೋ ನ
ಭಾತಿ || ೭ ||

ಎಂಬುದರಿಂ ಸಿದ್ಧಾಂತದ ಜ್ಯೋತಿಷವೆ ವೇದಕ್ಕೆ ಮುಖ್ಯಮೆಂಬುದಂ ಪೇಳ್ದು ಅನುಷ್ಠಾನಮಂ ಪೇಳ್ದರೆಂತೆನೆ

ಜ್ಯೈತಾದಾವುಪಸಿ ಸ್ಮರೇತ್ ಪಶುಪತಿಂ ಚೋತ್ಥಾಯ ಚಂದ್ರಸ್ವರಾ
ದ್ವ್ಯದ್ಧಾಶೀಃ ಪರಿಗೃಹ ನಿಂಬಕದಳಂ ಪ್ರಾಶ್ಯಾಜ್ಯಪಾತ್ರೇ ಸ್ಥಿತಮ್
ದತ್ವಾ ವಿಕ್ಷಿತ ದರ್ಪಣಶ್ಚ ಸುಹೃದಂ ದೈವಜ್ಞಮಂತ್ರೀನ್ ಗುರೂನ್
ಸಂಭಾವ್ಯಸ್ತು ಸತಾ ಪ್ರವಿಶ್ಯತಿ ಸುಖಂ ಚೈತತ್ಪ್ರಮೋ ಭೂಪತೇ || ೮ ||

ಯಶ್ಶೃಣೋತಿ ಮಧುಶುಕ್ಲಪಕ್ಷಕೇ ವರ್ಷನಾಥ ಸಚಿವಾದಿಕಂ ಫಲಮ್
ಪ್ರಾಪ್ನುಯಾದ್ದುರಿತ ಮುಕ್ತವಿಗ್ರಹಶ್ಚಾಯುರರ್ಥಮತುಲಂ ಯಶಸ್ಸುಕಮ್||೯||

ಸರ್ವಜ್ಞುವಾಣಿ ದೈವಜ್ಞಪೂಜಾಂ ಕೃತ್ವಾ ಗಣಾಧಿಪಮ್
ಸಂವತ್ಸರಫಲಂ ಸಮ್ಯಕ್ ಶ್ರುತ್ವಾ ವಿಪ್ರಂ ಪ್ರಪೂಜಯೇತ್ || ೧೦ ||

ದೈವಜ್ಞ ಲಕ್ಷಣ

ಅಧೀತಶಾಸ್ತ್ರಾಖಿಲಾಶಾಸ್ತ್ರಯುಕ್ತೋ ಸಿದ್ಧಾಂತವೇತ್ತಾ ಬಹುಸಂಹಿತಜ್ಞಾಃ
ಅನಾತುಲಃ ಸತ್ಯಯುತಃ ಪುಮಾಂಶ್ಚ ಸದ್ಧರ್ಮಯುಕ್ತಸ್ಸ ಚ ದೈವವಂದ್ಯಃ||೧೧ ||

ಅದ್ವೇಷೀ ನಿತ್ಯ ಸಂತೋಷೀ ಗಣಿತಾಗಮಪಾರಗಃ
ಮುಹೂರ್ತಗುಣದೋಷಜ್ಞೋ ವಾಗ್ಮೀ ಕುಶಲಬುದ್ಧಿಮಾನ್ || ೧೨ ||

ಅಪ್ರದೀಪಾ ಯಥಾರಾತ್ರಿಃ ವಿನಾದಿತ್ಯಂ ಯಥಾ ನಭಃ
ತಥಾ ಜ್ಯೌತಿಷಹೀನೋಽಪಿ ಬ್ರಹ್ಮತ್ಯಂ ದೋಹವಾಧ್ವನಿಃ ? || ೧೩ ||

ಸ್ವಸ್ತಿ ಶ್ರೀಮನ್ಮಹಾಪುರಷಾದಿ ಪ್ರಮಾಣ ಸಂವತ್ಸರ ನವಾಧಿಕ ಷೋಡಶಾಧಿಕಾನಾಂ ಫಲಾನಿಗ್ರಹಾಣಾಂ ರಾಶಿಪ್ರದೇಶ ನಕ್ಷತ್ರಪ್ರದೇಶ ತಿಥಿ ವಾರರ್ಕ್ಷ ಯೋಗ ಕರಣಾದೀಷಾಮೃತನವಗ್ರಹಾಣಾಂ || ನಕ್ಷತ್ರಪಾದಾಚಾರ ಗೃಹ ವಕ್ರವಕ್ರ ತ್ಯಾಗ ಉದಯಾಸ್ತ ಸಮಾಗಮ ಗ್ರಹ ಯುದ್ಧ ಸೂರ್ಯ ಚಂದ್ರಗ್ರಹಣ ಮನ್ವಾದಿ ಯುಗಾದಿ ಮಹೋದಯಾರ್ಧೋದಯ ಗಜಚ್ಛಾಯಾ ಅಂಶಾದಿ ಕಾಲನಿರ್ಣಯ ಮಹಾಪಾತ ಸ್ಫುಟ ಪಾಶದ್ವಿರ್ಭಾವ ಸಾಮಾನ್ಯ ಮಧ್ಯಮ ಖಂಡಪಾತಪಾತಾ ಭಾವ ಲಕ್ಷಣಾ ಲಕ್ಷಿತ ಅಲಭ್ಯಯೋಗ ಅಮಯೋಗ ಸಿದ್ಧಾಮೃತಯೋಗ ತ್ರಿದ್ಯುಸ್ಪೃಗಾದಿ ಷಡಶೀತಿದೋಷ ವರ್ಷಾದ್ಯಾರ್ದ್ರಾಪ್ರವೇಶ ಜ್ಯೇಷ್ಠ ಶುಕ್ಲ ಪ್ರತಿಪತ್ ಆಷಾಢ ಶುಕ್ಲ ಪಂಚಮೀ ತಚ್ಛುಕ್ಲ ಪಂಚಮೀ ನವಮೀ ಸ್ವಾತೀಯುಕ್ತ ಕೃಷ್ಣರೋಹಿಣೀಯುತ ಫಲ ಗುರು ಶುಕ್ರ ಶನಿ ಚಾರ ಮೇಷಸಂಕ್ರಾಂತಿ ಮಕರಸಂಕ್ರಾಂತಿ ಫಲಃ ತತ್ಸಂಯೋಗ ವಾರಫಲ ಗುರೂ ದಯಾಬ್ದ ಮೇಘಫಲ ಬೀಸಿಕಾಯವ್ಯಯ ಕಂದಾಯ ಫಲಾದಿಗಳುಂ ಪಂಚಾಂಗ ತಿಥಿ ಲಗ್ನ ಶುದ್ಧಿರ್ವಿಲಗ್ನಹೋರಾ ದ್ರೇಕ್ಕಾಣ ನವಾಂಶ ದ್ವಾದಶಾಂಶ ತ್ರಿಂಶಾಂಶ ಷಡ್ವರ್ಗ ಶುದ್ಧಿ ಗುಳಿಕಾರ್ಧಪ್ರಹಾರ ಯಮಕಂಟಕ ಕಾಲ ಹೋರಾ ಉಷ್ಣ ಶಿಖಿ ಮೊದಲಾದ ದೋಷವರ್ಜಿತ ಸುಲಗ್ನ ಪುಷ್ಕಳಾ ಮುಹೂರ್ತ ವೇಳಾದಿರುದರ್ಕ ಫಲಾಗಮನಿಮಿತ್ತ ಪರೀಕ್ಷಾದಕ್ಷ ವಿಸಂವಾದಿ ಗಣಿತ ಜಾತಕ ಪ್ರಶ್ನಭೇದ ಆಧಾನಾದ್ಯಂತ

ಕ್ರಿಯಾಪರ್ಯಂತ ಶುಭಾಶುಭ ನಷ್ಟಮುಷ್ಟಿ ವಿಚಾರ ಸಹಿತಮುಳ್ಳ ಜ್ಯೋತಿರ್ಜ್ಞಾನಶಾಸ್ತ್ರದೊಳ್ ಫಲಭಾಗ ಪ್ರಶ್ನಭಾಗ ಜಾತಕಭಾಗದೊಳ್ ಪೇಳ್ವ ಚತುರ್ಲಕ್ಷ ಗ್ರಂಥಪ್ರಮಾಣಮಪ್ಪ ಸಿದ್ಧಾಂತೋಕ್ತದೊಳ್ ವೇದಾಂತರಚಿತ ಉತ್ಪತ್ತಿ ಸ್ಥಿತಿ ಲಯಹೇತುಭೂತ ಬ್ರಹ್ಮ ವಿಷ್ಣು ಮಹೇಶ್ವರಾದಿ ವರ್ತಮಾನ ಶ್ರೌತ ಸ್ಮಾರ್ತ ನಿತ್ಯ ನೈಮಿತ್ತಿಕ ಕರ್ಮ ಕಾಮ್ಯಾನುಷ್ಠಾನ ಕ್ರಿಯಾಜ್ಞಾನ ಸಾಧನ ಭೂತ ಭವಿಷ್ಯದ್ವರ್ತಮಾನಕಾಲ ಸೂರ್ಯ ಸಿದ್ಧಾಂತಿನಾಮ ಶಾಸ್ತ್ರಿ ಬ್ರಹ್ಮಣೋ ಪರಮಾಯುಃ ಪ್ರಮಾಣಂ ತಸ್ಯಾಯಷೋ ಗತೇಷ್ಯಕಾಲ ಕಲ್ಪೇ ತತ್ಸಂದಿಸೃಷ್ಟಿ ಚಕ್ರಭ್ರಮಣಕಾಲ ಪೃಷ್ಠಾದೌ ಗ್ರಹ ನಕ್ಷತ್ರ ದೇವ ದೈತ್ಯ ಸ್ಥಾವರ ಜಂಗಮ ಮಾನುಷಾದಿ ಪಂಚಭೂತಾತ್ಮಕ ವಿಶ್ವಕರ್ಮ ನಿರ್ಮಾಣ ವಿಲಂಬನ ಕಾಲಪ್ರಮಾಣಂ ಮನ್ವಿಂದ್ರಾದಿ ಸಪ್ತಋಷಿ ಪ್ರಮಾಣ ಉಡುನಾಮ ಗತ್ಯೆ ರೇಷಕಾಲ ಏಕೈಕಸ್ಯ ಮನೋಸ್ಸಂಧಿಜಕಾಲ ಸಪ್ತದ್ವೀಪ ನವಖಂಡಪ್ರಮಾಣ ಮಹಾ ಯುಗಾದಿ ಯುಗಕಾಲಪ್ರಮಾಣಂ ಬಲಿ ಬಂಧನಾದಿ ಪುಣ್ಯಪುರುಷಾ ಯಥಾಸಂಭವ ಭೂಗೋಲ ನವಖಂಡ ಪೃಥ್ವೀಭಾಗ ಸಹಿತಂ ಷಟ್ಚಕ್ರವರ್ತಿ ಷೋಡಶ ಮಹಾರಾಜ ಉಪರಾಜ ಶಕಪ್ರಮಾಣಾದಿಗಳಂ ಸಿದ್ಧಾಂತ ಪ್ರಮೇಯಮಂ ಬಿಟ್ಟು ತದ್ವ್ಯತಿರಿಕ್ತಮಾಗಿ ಪೇಳ್ದರೆಂತೆಂದೊಡೆ

ಸೂರ್ಯಸಿದ್ಧಾಂತ ಪ್ರಕಾರಂಗಳು, ನವಬ್ರಹ್ಮರು

ಶ್ಲೋಕ || ಭೃಗು ಪೌಲಸ್ತ್ಯ ಪುಲಹಕ್ರತುಶ್ಚೈ ವಾಂಗಿರಾಸ್ತಥಾ
ವಶಿಷ್ಠ ದಕ್ಷೌಅತ್ರೀ ಚ ಮರೀಚಿಶ್ಚ ತಥೈವ ಚ ||
ನವ ಬ್ರಹ್ಮಾಣ ಇತ್ಯತೇ ಪುರಾಣೇಷೂದಿತಾ ಮುನೇ ||

ದಶಾವತಾರ :

ಮತ್ಸ್ಯಃ ಕೂರ್ಮೋ ವರಾಹಶ್ಚ ನಾರಸಿಂಹೋಥ ವಾಮನಃ
ರಾಮೋ ರಾಮಶ್ಚ ರಾಮಶ್ಚ ಬೌದ್ಧಃ ಕಲ್ಕೀ ದಶಸ್ಮೃತಾಃ ||

ಅಷ್ಟವಸುಗಳು :

ಧನಾದೃತಸ್ತಥಾ ಸೋಮೋಽಲಸಶ್ಚೈ ವಾನಿಲೋ ನಲಃ
ಪ್ರತ್ಯೂಷಶ್ಚ ಪ್ರವಾಸಶ್ಚ ವಸವೋಷ್ಟೌ ಪ್ರಕೀರ್ತಿತಾ ||

ಏಕಾದಶರುದ್ರರು :

ವೀರಭದ್ರಶ್ಚ ಶಂಭುಶ್ತ ಗಿರೀಶಶ್ಚಾಜ ಏಕಪಾತ್
ಅಹಿರ್ಬುಧ್ನಃ ಪಿನಾಕೀಚ [ಭೈರವಶ್ಚೇಶ್ವರಸ್ತಥಾ]
ವಿಶಾಂಪತಿಃ ಪಶುಪತಿಃ ಸ್ಥಾಣುಶ್ಚೈವಾ ಭವಸ್ತಥಾ
ಏತಾನಿ ರುದ್ರನಾಮಾನಿ ಸಂಖ್ಯಾ ಏಕಾ [ದಶೈವತಂ] ||

ಮತ್ತಮೀಶ್ವರ ಪಂಚವಿಂಶತಿ ಲೀಲಾಮೂರ್ತಿಗಳ್ ತತ್ರಿಂಶತ್ತತ್ತ್ವಂಗಳಂ ಪೇಳ್ವಂ·

ದ್ವಾದಶಾದಿತ್ಯರು :

ಧಾತಾರ್ಯಮಾಶ್ಚ ಮಿತ್ರಶ್ಚ ಅಂಶುಮಾನರುಣೋ ಭಗಃ
ಇಂದ್ರೋ ವಿವಸ್ವಾನ್ ಪೂಷಾ ಚ ಪರ್ಜನ್ಯಶ್ಚೋಷ್ಟ ವಿಷ್ಣವಃ ||

ಅಷ್ಟಭೈರವರು :

ಅಸಿತಾಂಗೋ ರುರುಶ್ಚಂಡಃ ಕ್ರೋಧ ಉನ್ಮತ್ತ ಭೈರವಃ
ಕಪಾಲೀ ಭೀಷಣಶ್ಚೈವ ಸಂಹಾರಶ್ಚಾಷ್ಟ ಭೈರವಾಃ ||

ನವನಾದಗಳು

ಬಿಂದ್ವಾಕಾಶೇತಿನಾದಶ್ಚ ಆದ್ಯಾಕಾಶಾದ್ಯನಾದಿಕಂ
ಅನಾಮಯ ಚಿದಾಭಾಸಂ ಸಂಮನಾವ್ಯಾಪಕಾ ಮುನಿಃ ||
ಶಕ್ತ್ಯಾಕಾಶೇಶಿ ಧನ್ಯಾಶ್ಚ ನವನಾದಾಃ ಪ್ರಕೀರ್ತಿತಾಃ ||

ಅಷ್ಟ ವಸುಗಳು :

ಪಾರ್ಥಿವಃ ಕೂರ್ಮೋನಂ ತಶ್ಚ ಬ್ರಹ್ಮಶ್ವೇತ ವರಾಹಕಃ
ಬರಾಹಕಶ್ಚ ಸಾವಿತ್ರೀ ಪ್ರಳಯಶ್ಚಾಷ್ಟ ಸಂಖ್ಯಯಾ ||

ಚತುರ್ದಶ ಮನುಗಳು :

ಸ್ವಾಯಂಭುವಶ್ಚ ಸ್ವಾರೋಚಿರುತ್ತಮಸ್ತಾಮ ಸಸ್ತಥಾ
ರೈವತಶ್ಚಾಕ್ಷುಷಶ್ಚೈವ ತತೊ ವೈವಸ್ವತೋ ಮನುಃ ||
ಸೂರ್ಯಾಗ್ನಿ ಬ್ರಹ್ಮಾ ದಕ್ಷಶ್ಚ ರುದ್ರ ಸಾವರ್ಣಿಕಸ್ತಥಾ
ರೌಚ್ಯೋ ಭೌಚ್ಯೋ ಭವಶ್ಚೈವ ಮನವಸ್ತು ಚತುರ್ದಶ ||

ಸಪ್ತ ಋಷಿಗಳು :

ಕಶ್ಯಪೋಽತ್ರಿರ್ಭರದ್ವಾಜೋ ವಿಶ್ವಾಮಿತ್ರಶ್ಚ ಗೌತಮಃ
ಜಮದಗ್ನಿರ್ವಶಿಷ್ಠಶ್ಚ ಸಪ್ತೈತೇ ಋಷಯಸ್ತಥಾ ||

ಅಷ್ಟಾದಶ ಸಂಹಿತಾಚಾರ್ಯರು :

ಬ್ರಹ್ಮಾಚಾರ್ಯೋ ವಶಿಷ್ಠ ಶ್ರೀಮನುಪೌಲಸ್ತ್ಯ ರೋಮಶಾಃ
ಮರೀಚಿರಂಗಿರೋ ವ್ಯಾಸೋ ನಾರದಃ ಶೌನಕೋ ಭೃಗುಃ
ಚ್ಯವನೋ ಯಮನೊ ಗಾರ್ಗ್ಯಃ ಕಶ್ಯಪಶ್ಚ ಪರಾಶರಃ
ಅಷ್ಟಾದಶೈತೋ ಗಂಭೀರಾ ಜ್ಯೋತಿಶ್ಯಾಸ್ತ್ರ ಪ್ರವರ್ತಕಾಃ ||

ಸಪ್ತ ದ್ವೀಪಂಗಳು :

ಜಂಬೂಪ್ಲಕ್ಷಕುಶಾಶ್ಚೈವ ಶಾಕಶ್ಯಾಲ್ಮಲಿತಸ್ತಥಾ
ಕ್ರೌಂಚಃ ಪುಷ್ಕರ ಇತ್ಯೇತೇ ಸಪ್ತऽದ್ವೀಪಾ ಪ್ರಕೀರ್ತಿತಾಃ ||

ಸಪ್ತ ಸಮುದ್ರಂಗಳು :

ಲವಣೇಕ್ಷು ಸುರಾಸರ್ಪಿ ದಧಿ ಕ್ಷೀರೋದಕಾಶ್ಚ ತೇಃ

ಸಪ್ತ ಕಲ್ಪಂಗಳು :

ಪಾರ್ಥಿವೋ ಕೂರ್ಮಕಲ್ಪಶ್ಚ ಅನಂತೋ ಬ್ರಹ್ಮಕಲ್ಪಕಃ
ಶ್ವೇತೋ ವರಾಹ ಕಲ್ಪಶ್ಚ ಸಾವಿತ್ರೀಕಲ್ಪ ಏವ ಚ ||
ಪ್ರಲಯಶ್ಚ ತಥಾ ಕಲ್ಪಃ ಸಪ್ತಕಲ್ಪಾಃ ಪ್ರಕೀರ್ತಿತಾಃ

ನವಖಂಡಂಗಳು :

ಇಂದ್ರಃ ಕಶೇರುಸ್ತಾಮ್ರಶ್ಚ ಗಭಸ್ತಿರ್ನಾಗ ಏವ ಚ
ಗಂಧರ್ವಶ್ಚಾರುಣಶ್ಚೈವ ವಾರುಣೋ ಭರತಸ್ತಥಾ ||
ನವ ಖಂಡಾ ಇತಿಖ್ಯಾತಾಃ ಖಂಡನಾಮ ಯಥಾಕ್ರಮಮ್||

ಜಂತುಸ್ಥಾನಂಗಳು

ಜಲಜಾದ್ಯಾಃ ಮನುಷ್ಯಾದ್ಯಾ ಅಂಡಜಾಃ ಪನ್ನಗಾದಯಃ
ಸ್ವೇದಜಾಃ ಕ್ರಿಮಿಕೀಟಾಶ್ಚ ವಾಯುಜಾ ಬುದ್ಬುದಾದಯಃ ||

ಭೇದಂಗಳು :

ಜಲಜಂ ನವಲಕ್ಷಂತು ಸ್ಥಾವರಂ ಲಕ್ಷವಿಂಶತಿಃ
ಕ್ರಿಮಿಕೀಟಾ ರುದ್ರ ಸಂಖ್ಯಾಃ ಪಕ್ಷಿಣಾಂ ದಶಲಕ್ಷಕಮ್ ||
ತ್ರಿಂಶಲ್ಲಕ್ಷಂ ಗಜಾಶ್ವಾದಿ ಚಾತುರ್ಲಕ್ಷಂ ತು ಮಾನವಾಃ
ಚತ್ವಾರ್ಯಶೀತಿ ಲಕ್ಷಾಣಿ ಯೋನಿರ್ಜಾತಾಹಿಪ್ರಾಣಿನಾಮ್ ||

ಆಯುಃ ಪ್ರಮಾಣಂ :

ಶತಾಯುಃ ಪುರುಷಾಣಾಂ ಚ ಶತವಿಂಶತಿ ರಾಕ್ಷಸಾಃ
ತಟಿದ್ವೃಕ್ಷ ಸಹಸ್ರಾಶ್ಚ ತದರ್ಧಂ ಗುಲ್ಮ ಜಾತಯಃ ||
ಷಟ್ತ್ರಿಂಶನ್ಮೃಗಪಕ್ಷೀಣಾಂ ಕಾಕಃ ಫಣಿಸಹಸ್ರಕಮ್
ಚೌಷಷ್ಟಿ ವ್ಯಾಘ್ರ ಮಾರ್ಜಾರಾಃ ಶತಂ ಕುಂಜರಕೇಸರೀ ||
ಭಲ್ಲೂಕಾ ವಾನರಾಣಾಂ ಚ ಮಂಡೂಕಾಣಾಂ ಶತತ್ರಯಮ್
ತಥಾ ಕ್ರೋಷ್ಟ್ರ ಮೃಂಗಾದೀನಾಂ ವರಾಹಾಣಾಂ ತ್ರಯೋದಶ ||
ಮತ್ಸ್ಯಾನಾಂ ತು ಸಹಸ್ರಾಬ್ದೌ ದ್ವಾತ್ರಿಂಶದ್ವಾಜಿನಾಂ ತಥಾ
ಹಂಸಸ್ಯ ಪಂಚಶತಂ ಕಪೋತಂ ಚ ತಥೈವ ಚ ||
ಟಿಟ್ಟಭಂ ಪಂಚಶತಕಂ ಉಲೂಕಂ ಚ ತಥೈವ ಚ
ಪಾರಾವತಂ ಪಂಚಶತಂ ಕುಕ್ಕುಟಶ್ಚಾಷ್ಟ ವರ್ಷಕಮ್ ||

ಟಿಟ್ಟಿಭೋ ಬರ್ಹಿಣಶ್ಚೈವ ವತ್ಸರಾ ವಿಂಶತಿಸ್ತಥಾ
ಪಂಚಾವಿಂಶದ್ಗೋಮಹಿಷಾ ವೃಷಾಣಾಂ ಚ ತಥೈವ ಚ ||
ವಿಂಶದ್ವರ್ಷಂ ವಿಹಂಗಾನಾಂ ವರ್ಷಂ ಜೀವೇತ್ಪಿಪೀಲಿಕಾಃ
ಭಾಗಾನಾಂ ಷೋಡಶಾಬ್ದಶ್ಚ ಚತುರ್ವಿಂಶತಿ ಗಾರ್ದಭಃ
ಪಿಕಾನಾಂ ನವ ವರ್ಷಾಣಿ ಕೂರ್ಮಾಣಾಂ ಚ ಸಹಸ್ರಕಮ್ ||
ಉಲೂಕ ಶ್ವೇತ ಗೃಧ್ರಾಣಾಂ ಪಂಚವಿಂಶತಿವತ್ಸರಾಃ
ದ್ವಾದಶಂ ಶುನಕಾದೀನಾಂ ಶಶಾಂಕಾನಾಂ ತಥೈವ ಚ ||
ಭಾರದ್ವಾಜಸ್ತು ಷಡ್ವರ್ಷಂ ಕುಕ್ಕುಟೋ ನವಮಾಸಿಕಃ
ಗೋಧ್ದಾನಾಂ ಸರಟಾನಾಂ ಚ ವರ್ಷತ್ರಯಮುದಾಹೃತಮ್ ||
ತಥೈವ ಗೃಹನೊದೀನಾಂ (?) ದ್ವಾದಶಾಬ್ದಸ್ತು ಕೋಕಿಲಃ
ಜಂಬೂಮೂಷಿಕಭಲ್ಲೂಕಾ ಸಾರ್ಧವರ್ಷ ಚತುಷ್ಟಯಮ್ ||
ಪಂಚವಿಂಶತಿರಬ್ದಾಯುರ್ಗೃದ್ಧ್ರ ಪಿಂಗಲ ಕಂಜರೀ
ಶುಕಾನಾಂ ಷೋಡಶಾಬ್ದತ್ತ ಸಾಲಾನಾಂ ದಶವರ್ಷಕಮ್ ||
ಮಕ್ಷಿಕಾಣಾಂ ಷಣ್ಮಾಸಂ ಮತ್ಕುಣೋ ವತ್ಸರಸ್ಯ ಚ ||
ಪಿಟ್ಟಭ್ರಮರ ಕೀಟಾನಾಂ ತ್ರೀಣಿ ವತ್ಸರಮೇವ ಚ
ಮೂಷಕಾನಾಂ ತ್ರಿಮಾಸಂ ಸ್ಯಾತ್ ಶಲಭಾನಾಂತು ವತ್ಸರಃ ||
ಸ್ವೇದಜಾನಾಂ ತ್ರಿಮಾಸಂ ಸ್ಯಾದ್ವೃಶ್ಚಿಕಾದ್ವಯವರ್ಷಿಕಾ (?)
ಅಂಡಜಾನಾಂ ಚ ಸರ್ವೇಷಾಂ ಮಾಸಮೇಕಂ ಪ್ರಕೀರ್ತಿತಮ್ ||
ಕ್ರಿಮಿಬುದ್ಬುದ ಜಾತೀನಾಮಷ್ಟರಾತ್ರಂ ಪ್ರಕೀರ್ತಿತಮ್
ಅಸ್ಥಿರಾಣಾಂ ಚ ಸರ್ವೇಷಾಂ ಜಂತು ನಾಮಯುರಿತ್ಯಪಿ ||

ಕಾಲನಿರ್ಣಯ ಶತಮಾನಂಗಳು :

ಬ್ರಹ್ಮದೇವಮನುಮ್ಮಾನಂ ಪಿತೃಸಾರಂ ಚ ಸಾವನಮ್
ಚಾಂದ್ರನಕ್ಷತ್ರ ಸೌರಂ ಚ ನದಮಾನಃ ಪ್ರಕೀರ್ತಿತಃ (?) ||

ಅದೆಂತೆಂದೊಡೆ-

ಚತುರ್ಯುಗ ಸಹಸ್ರಾಣಿ ಬ್ರಹ್ಮಣೋ ದಿವಮುಚ್ಯತೇ
ಏತಾತಿ ಗಣಸಂಖ್ಯಾನಿ ಬ್ರಹ್ಮಮಾನಂ ವಿಧೀಯತೇ ||
ಷಷ್ಟಿ ಷಡ್ಗುಣಿತಂ ದಿವ್ಯಂ ವರ್ಷೇ ದ್ವೇ ಸುರಮೆಹನಿಂ (?)
ಮಾನಂ ಚ ಇತಿ ವಿಖ್ಯಾತಂ ದೇವಮಾನಂ ವಿಧೀಯತೆ ||
ಕಲ್ಪ ಬ್ರಹ್ಮಮಯಂ ಪ್ರೋಕ್ತಂ ಶಾರ್ವರೀತಶ್ಚರಾಷತಿ (?)
ಯುಗಾನಾಂ ಸಪ್ತತಿಶ್ಚೈಕಂ ಮನ್ವಂತರಮಿಹೋಚ್ಯತೆ ||

ಪಿತೃಮಾನ :

ಚಾಂದ್ರಮಾನಃ ತಥಾ ಸಂಖ್ಯಾ ಪಿತೃಮಾನಸ್ತ್ರದೈವ ಚ
ತತಃ ಪಂಚಮಾನಾನಿ ಉಚ್ಯಂತೆ
ಸೌರಸೂರೇಜ್ಯ ಸಾವನ ಶಶಿ ನಕ್ಷತ್ರಕಾಃ ಕ್ರಮಾತ್
ಪಂಚಮಾತುಲ ಪಾತಾಳಾ ಅತುಲೊ ವಿಮಲಸ್ತಥಾ ||
ವರಾಂಗ ಇತಿ ಸಂಖ್ಯಾತಾ ವತ್ಸರಾಶ್ಚೈವ ಪಂಚಭಿಃ ||

ವೃ || ಸಾರೊ ರಾಶಿಷು ಸೂರ್ಯಸಂಕ್ರಮಣಕಾಶ್ಚಾಂದ್ರಾಸ್ತು ದರ್ಶಾಂತಿಕಾಃ
ವಿಜ್ಞಾನೇ ಶಿತಪಕ್ಷಪಕ್ಷತಿ ಮುಖಾಸ್ತ್ರಿಂಶದ್ದಿನಂ ಸಾವನಮ್
ನಕ್ಷತ್ರಂ ಶಶಿಮಂಡಲಾದಿತಿಮತಂ ಮಾಸಾಶ್ಚತುರ್ಥಾಃ ಕ್ರಮಾತ್
ಸೌರೇಜ್ಯೇ ಸ್ಥಿರ ರಾಶಿ ರಾಶಿ ಗಮನಂ ಮಾನಾನಿ ಸಂಖ್ಯಾಕ್ರಮಾತ್ ||
ಚತುರ್ಭಿರ್ವ್ಯವಹಾರೋಕ್ತಂ ಸೌರಂ ಚಾಂದ್ರೇಕ್ಷುಸಾವನ್ಯೈಃ
ತೇಷಾಂ ಪೃಥಕ್ ಪೃಥಕ್ಕಾರ್ಯಂ ಪಕ್ಷಾಸ್ತು ವ್ಯವಹಾರಿಕಾಃ ||

ಇನ್ನು ದಶವಿಧ ಕಾಲಂ

ತ್ರುಟಿಲವನಿಮೇಷಶ್ಚಗುರ್ವೀ ಪ್ರಾಣವಿನಾಡಿಕಾನ್
ನಾಡೀನಕ್ಷತ್ರಮಾಸಾಶ್ಚ ಸಂವತ್ಸರಮುದಾಹೃತಂ ||

ಕಾಲನಿರ್ಣಯ

ತೀಕ್ಷ್ಣ ಸೂಚ್ಯಾಬ್ಜ ಪುಷ್ಪಸ್ಯ ದಳಭೇದ ಸೃಜಿರ್ಭವೇತ್
ತಚ್ಛತಂ ಲವಮಿತ್ಯುಕ್ತಂ ತತ್ರಿಂಶಸ್ತು ನಿಮೇಷಕಃ ||
ನಿಮಿಷೈಃ ಸಪ್ತವಿಂಶತ್ಯಾ ಕಾಲೋಗುರ್ವಕ್ಷರಸ್ಯ ತು
ದಶಗುರ್ವಕ್ಷರೋಚ್ಚಾರಃ ಕಾಲಃ ಪ್ರಾಣೋಭಿಧೀಯತೇ ||
ಷಡ್ಭಿಃ ಪ್ರಾಣೈರ್ವಿನಾಡೀ ಸ್ಯಾತ್ತತ್ಷಷ್ಟ್ಯಾ ನಾಡಿಕಾ ಸ್ಮೃತಾ
ನಾಡೀಷಷ್ಟ್ಯಾತು ನಾಕ್ಷತ್ರಂ ಅಹೋರಾತ್ರಂ ಪ್ರಕೀರ್ತಿತಮ್
ದಿನೈಃ ಪಂಚದಶೈಃ ಪಕ್ಷಂ ಪಕ್ಷೌ ದ್ವೌಮಾಸ ಉಚ್ಯತೇ
ಮಾಸದ್ವಯೌ ಋತುಶ್ಚೈವ ಋತುತ್ರಯ ಮಥಾಯನಮ್ ||
ಅಯನೆದ್ವೇ ಚ ವರ್ಷಂ ಸ್ಯಾತ್ಕಾಲಸಂಖ್ಯಾ ಪ್ರಕೀರ್ತಿತಾ

ಈ ನ್ಯಾಯದಿಂ ಬ್ರಹ್ಮಣಃ ತೃಟಿಕಾಲಪ್ರಮಾಣ || ತಿಂ=೫ ದಿ/೨೭ ಘ=೪೬ವಿ=೪೦. ಈ ಪ್ರಕಾರ ಪೆರ್ಚೆ ಲವಾದಿಗಳಂ ಗುಣಿಸುತ್ತಿರಲ್ ಬ್ರಹ್ಮಣ ವರುಷ ಪ್ರಮಾಣು ೩೧೧೦೪೦೦೦೦೦೦೦೦ ಬ್ರಹ್ಮಣ ಪರಮಾಯುಂ ಮೂರು ಪಲ್ಯವು ಒಂದು ಮಹಾಖರ್ವವು ಒಂದು ಖರ್ವದ ಮೇಲೆ ನಾಲ್ಕಬುರ್ದಂಗಳು ಮತ್ತಂ

ಪಿತಾಮಹ ಸಹಸ್ರೇಷು ವಿಷ್ಣೋಶ್ಚ ಘಟಿಕಾ ಭವೇತ್
ವಿಷ್ಣೋರ್ದ್ವಾದಶಲಕ್ಷಂ ತು ಈಶ್ವರಸ್ಯ ಕ್ಷಣಂ ಭವೇತ್ ||
ಈಶಾನಾಂ ಶತಕೋಟ್ಯಸ್ತು ಪರಮಾಣುಃ ಸದಾಶಿವಃ |

ಬ್ರಹ್ಮನ ಪರಮಾಯು ಕಾಲಮೆಂಬುದಾಗಳು ಸೂರ್ಯ ಬ್ರಹ್ಮಮಾನದಿಂ ನೂರು ವರ್ಷಮಕ್ಕುಂ. ಬ್ರಹ್ಮನ ಅಹೋರಾತ್ರಿ ಮನುಷ್ಯ ಸೃಷ್ಟಿಸಂಹಾರಕಲ್ಪಮಕ್ಕುಂ ದೇವರ್ಕಳ ೭೧ ಯಂಗಂಗಳ್ಗೆ ಮನ್ವಂತರವೆಂಬ ಪೆಸರಪ್ಪುದಂ ಬ್ರಹ್ಮಾಯುರ್ದಿನಂ ಪ್ರಲಯಕಾಲಮೆಂಬುದು. ಆಗಳ್ ಸೂರ್ಯ ಚಂದ್ರಾದಿಗಳಿಲ್ಲದಾ ಕಾಲ ಸೌರಾಬ್ದಂಗಳು ಮೂರು ಮಹಾಪದ್ಮ, ಒಂಬತ್ತು ಪದ್ಮ, ಒಂಬತ್ತು ಮಹಾಖರ್ವ, ಎರಡು ಖರ್ವ, ಒಂದು ನಿರ್ಬುದ, ನಾಲ್ಕರ್ಬುದ ಎಂಟುನೂರನಾಲ್ವತ್ತಾರುಕೋಟಿ ಎಂಬತ್ತಾರು ಲಕ್ಷ ತೊಂಬತ್ತೆಂಟು ಸಾವಿರದ ಮುನ್ನೂರರುವತ್ತೊಂದು ವರುಷಮಪ್ಪುದಾಗಳ್ ಸಪ್ತಸಾಗರ ದ್ವೀಪ ಪರ್ವತಂಗಳ್ ಜಲಪ್ರಳಯಮಾಗಿ ತುಂಬಿ ಬ್ರಹ್ಮಾಂಡ ಮುಳುಗೆ ಪುರುಷೋತ್ತಮ ಮಹಾದೋಷಮಾನಂದಲೀಲೆಯಿಂ ನಿದ್ರೆಯೊಳಿರ್ಪಂ ವಿಷ್ಣು ಪ್ರಣವಸಾನಂತರಂ ಈಶ್ವರಪ್ರಯತ್ನದಿಂ ಪುನಃ ಸೃಷ್ಟ್ಯಾರ್ಥಮಾಗಿ ಬ್ರಹ್ಮ ಪುಟ್ಟುವಂ ಬ್ರಹ್ಮರಾಜಸದಿಂ ನಿತ್ಯವಿಭು ವಿಷ್ಣುವ ಕೂಡೆ ಸಂವಾದಮಾಗೆ ತದುದರಮಾಶ್ರಯಿಸಿದನಂತಕೋಟಿ ಬ್ರಹ್ಮಾಂಡಂಗಳಂ ಕಂಡುಮದಂ ಪೊರಮಡಿಸಲಶಕ್ಯದಿಂ ದೇವದೇವನ ನುತಿಸುತ್ತಂ ನಿನ್ನ ಪ್ರಸಾದದಿ ಪೊರಮಟ್ಟಿಂತೆಂದಂ

ಶ್ಲೋಕ || **ಮಧುಕೈಟಭನಾಮಾನೌ ವಿಷ್ಣುಕರ್ಮಮಲೋದ್ಭವೌ**
ತೌ ಚಕ್ರಿಣಾ ಹತೌ ದಿವ್ಯಸಹಸ್ರಾಬ್ದೇನ ಸಂಯುಗೇ ||

ಆ ಯುದ್ಧಕಾಲ ೬೦೩೪೮ ವರುಷ ಧರ್ಮದಿಂ ನಿರ್ಮಿಸಿದ ಭೂಮಿಯದರರ್ಧ ದಿಂದೂರ್ಧ್ವಾಂಗ ಮಹಾಮೇರು ಒಂದು ಕೋಟಿ ವಿಸ್ತಾರ ಧ್ರುವಲೋಕೋಪರಿ ಶಿಖರಂ. ಅದರ ಮೂಲದೊಳ್ ಬ್ರಹ್ಮಲೋಕಂ ಮಧ್ಯದೊಳು ವಿಷ್ಣುಲೋಕಂ ಮೇಣ್ ರುದ್ರಲೋಕಮದರ ಭೂಮಂಡಲದೊಳ್ ದೀಪಸ್ತಂಭದಂತಿರ್ಪುದದರ ಭಾಜನದಂತಿಪ್ಪ ಲೋಕಂ ಪಂಚಾಶತ್ಕೋಟಿ ವಿಸ್ತಾರಮದರ ಕೆಳಗೆ ಅತಲ ವಿತಲ ಸುತಲ ಮಹಾತಲ ರಸಾತಲ ತಲಾತಲ ಪಾತಾಲಾದಿ ಪತ್ತನಾದಿಯದಸ್ಸಪ್ತಂಗಳು. ಮೇಲೆ ಕರ್ಕೋಟಕ ವಾಸುಕಿ ಕುಳಿಕ ಶಂಖಪಾಲ ಪದ್ಮ ತಕ್ಷಕ ಅನಂತಾದಿ ಸಪ್ತ ನಾಗರಾಜಾಧಿಷ್ಠಿತ ತಲ್ಲಲಾಟ ದೇವಾಂಗ ಕಿರೀಟಾಭರಣ ವಸ್ತ್ರಾದಿನಲಂಕೃತರು ಕಲ್ಪದ ನಡುವೆ ಅಮೃತಾನ್ನ ಹಾರ ಜೀವ ರತ್ನಲಲಾಟ ಪರಿವಾರ ಪ್ರಜಾಲ ಸಹಿತ ಕಾಮಧೇನು ಉಪಭೋಗಾರ್ಥಮಿಪ್ಪುದು ಅಧೋಲೋಕಂ. ಅದರ ಮೇಲೆ ಭೂಲೋಕದ ಮಹಾಮೇರುವಂದು ಹರಿದಾರಿಯಲ್ಲಿ ಅಷ್ಟದಳಾಕಾರದೊಳು ಇಂದ್ರಾದ್ರಿ ಪಾವಕಾದ್ರಿ ಕಾಲಾದ್ರಿ ರಾಕ್ಷಸಾದ್ರಿ ವರುಣಾದ್ರಿ ಅನಿಲಾದ್ರಿ ಅಲಕಾದ್ರಿ ರಜತಾದ್ರಿಗಳೆಂಬೆಂಟು ಪರ್ವತಂಗಳು, ಚತುರ್ದಶ ಲೋಕಂಗಳು, ಐರಾವತಾದಿ ಗಜಂಗಳು ಪೊತ್ತಿರ್ಪುವು. ಆ

ಪರ್ವತಂಗಳಲ್ಲಿ ದಿವ್ಯ ಸ್ತ್ರೀಯರ್ವೆರಸು ಅಮೃತಪಾನಂಗಳಿಂ ಕ್ರೀಡಿಸುತ್ತ ಇಂದ್ರಾದಿ ಲೋಕಪಾಲರು ದೇವರ್ಕಳು ಕ್ರೀಡಿಸುತ್ತಿದ್ದಾರೆ. ಬಹಿರ್ಲವಣಾದಿ ಸಪ್ತಸಾಗರಂಗಳು ವೇಷ್ಟಿಸಿದ ದ್ವೀಪಂಗಳುಮಂತರದೊಳು ಗರುಡ ಗಂಧರ್ವ ಕಿನ್ನರ ಕಿಂಪುರುಷ ಸಿದ್ಧ ವಿದ್ಯಾಧರಾದಿಗಳಿಪ್ಪರು. ಏಕ ಲಕ್ಷ ಯೋಜನ ಲವಣಾರ್ಣವದಂತರ ಭೂಮಂಡಲದೊಳು ನವ ಖಂಡಂಗಳಿಪ್ಪವು. ಇಳಾಮಧ್ಯವರ್ಷ ಮೇರುಪುರಸ್ಥ ಭದ್ರಾಶ್ವಾಖ್ಯಂ ತತ್ಪಶ್ಚಾತ್ಕೇತು ಮಾಲಾ ಉತ್ತರದಿ ತ್ರಯೋವರ್ಷ, ದಕ್ಷಿಣ ಹರಿವರ್ಷ, ಕಿಂಪುರುಷೋಪರಿ ಭಾರತ ವರ್ಷ, ಹಿಮಾದ್ರಿ ಲವಣಾರ್ಣವದ ಮಧ್ಯಮಿಪ್ಪುದು. ಹಿಮಾದ್ರಿವರುಷದ್ವಯದ ಸೀಮಾ ಪರ್ವತದ ದಕ್ಷಿಣದೊಳು ನೈಮಿಶಾರಣ್ಯವನಮಲ್ಲಿ ಸಿಂಹ ಶರಭ ಶಾರ್ದೂಲ ಗಂಡಭೇರುಂಡಾದಿಗಳಿರ್ಪವು. ವಶಿಷ್ಠ ವಿಶ್ವಾಮಿತ್ರ ವಾಮದೇವ ಪರಾಶರ ಯಾಜ್ಞ ವಲ್ಕ್ಯ ಅತ್ರಿ ಭೃಗು ಭರದ್ವಾಜಾದಿಗಳವರ ಶಿಷ್ಯರ್ವೆರಸು ಯಜ್ಞಾದಿ ಪುಣ್ಯಕರ್ಮದಿಂದಿರ್ಪರಲ್ಲಿಂ ದಕ್ಷಿಣವಿಂಧ್ಯಾದ್ರಿ ಕ್ರೌಂಚಾರಣ್ಯಮಲ್ಲಿಂದ ದಕ್ಷಿಣ ದಂಡಕಾರಣ್ಯಂ ಮತ್ತಂ ಗಂಗಾ ಹಿಮವನ್ಮಧ್ಯೇ ಸೂರ್ಯನಂದನಂಗೆ, ವಿಂಧ್ಯಾದ್ರಿ ಗಂಗಾಮಧ್ಯೇ ಭೂಮಿ ಬುಧಂಗೆ, ವಿಂಧ್ಯ ಗೋದಾವರಿ ಮಧ್ಯಭೂಮಿ ಗುರುವಿಂಗೆ, ಗೋದಾವರಿ ಕೃಷ್ಣವೇಣಿ ಮಧ್ಯಭೂಮಿ ಶುಕ್ರಂಗೆ, ಕೃಷ್ಣವೇಣಿ ಲಂಕಾಮಧ್ಯಭೂಮಿ ಭೌಮಂಗೆ, ಸಮುದ್ರಕ್ಷೋಣಿ ಸೂರ್ಯಂಗೆ, ತದ್ವಲಯಂ ಚಂದ್ರಂಗೆಂಬುದು.

ಭೂಮಿಯಿಂ ಮೇಲಯುತ ಯೋಜನದಿಂದ್ರಲೋಕಂ. ಲಕ್ಷಾಂತರಂ ಸೂರ್ಯಂ, ದ್ವಿಲಕ್ಷಾಂತರಂ ಚಂದ್ರಮಷ್ಟಲಕ್ಷಾಂತರಂ ಕುಜಂ, ದ್ವಾದಶಂ ಬುಧಂ, ಷೋಡಶಂ ಗುರು, ದ್ವಾದಶಂ ಶುಕ್ರಂ, ಚತುರ್ವಿಂಶಲ್ಲಕ್ಷಾಂತರೇ ಶನಿ, ಪಂಚವಿಂಶಲ್ಲಕ್ಷಾಂತರೇ ಧ್ರುವದ ಮೇಲೆ ಆಕಾಶಮೊಂದೆ. ಇಂತು ಲೋಕ ಸಮುದ್ರ ದ್ವೀಪ ನಂದನ ಪರ್ವತ ಪುಣ್ಯಾರಣ್ಯ ಭರತ ಕಿಂಪುರುಷ ಹರಿ ಇಳಾವೃತ ಮಂದಹರಣ ಕಲ್ಕಿಹರಣ ಪಾರಿಚಜಾದ್ಯ ಇಂದ್ರಕಶೇರು ತಾಮ್ರ ಗಭಸ್ತಿ ನಾಗ ಗಂಧರ್ವ ಅರುಣ ಭರತಾದಿ ದೇಶಂಗಳ ರಾಜರುಗಳು, ನವಖಂಡ ಭೂಮಂಡಲಮೆಲ್ಲಂ ಬ್ರಹ್ಮಾಂಡಮೊಂದರೊಳೆ ಅಡಗಿಪ್ಪವೆಂದು ಮತ್ತೆ ಬ್ರಹ್ಮಜನ್ಮಾಧಿಗತ ಏಷ್ಯಸಾರಾಬ್ದಂಗಳು ಬ್ರಹ್ಮಸೃಷ್ಟಿಗತಾಬ್ಧ ಗ್ರಹ ನಕ್ಷತ್ರ ದೇವ ದೈತ್ಯ ಸ್ಥಾವರ ಜಂಗಮ ಮಾನುಷಾದಿ ಪಂಚಭೂತಾತ್ಮಕ ವಿಶ್ವಕರ್ಮ ವಿಲಂಬನ ಕಾಲ ಪ್ರಮಾಣಂ ೧೭೦೧೨೦೦೦ ಕಲ್ಪಪ್ರಮಾಣಂ ೮೮೬೪೦೦೦೦೦೦೦. ಮತ್ತಂ ಕಲ್ಪಸಂಧಿಯಲ್ಲಿ ಚತುರ್ದಶ ಮನುಗಳು ವರುಷ ೪೩೧೮೩೭೨೦೦೦, ಮನ್ವಿಂದ್ರಾದಿ ಸಪ್ತಋಷಿ ಪ್ರಮಾಣಂ ೩೦೬೭೨೦೦೦೦ ವೈವಸ್ವತಮನು ಗತಕಾಲ ಮನುಸಂಧಿಕಲ್ಪಗತೋ ಉತ್ತರವೈವತ್ತು ವರುಷ ಶ್ವೇತ ವರಾಹ ಕಲ್ಪಂ ವರ್ತಿಸುಗುಂ.

ವೃತ್ತ ||
ತ್ರೈಲೋಕ್ಯೇ ಮಧುಸೂದನಸ್ಯ ಜಗತೇ ಸಾರ್ಪೇಕಶೇಷಾಶ್ರಯಾ
ಸೋಪ್ಯೇವಂ ಹರಕಂಕಣಸ್ಯ ಚ ಹರೇ ಕೈಲಾಸ ಕೋಣೇ ಸ್ಥಿತೇ
ಕೈಲಾಸೋಽಪಿನ ಲಕ್ಷ್ಯತೇ ಕ್ಷಿತಿತಲೇ ಸಾಯಸ್ಯಮಬ್ಧಿಂ ದವಃ (?)
ದಂಷ್ಟ್ರಾಗ್ರೇ ವಿಸಂಚಣ ವತುಕಲ (?) ಕ್ರೋಧಾವತಾರೋ ಹರಿಃ ||

ಬ್ರಹ್ಮ ಪ್ರಥಮ ಪ್ರಾಣಗತಕಾಲ ಸಾರಾಬ್ದ ೧೪೮೬೬೪ ವಿಷ್ಣ್ವಾಬ್ದ ೨೫೧೩೦೭, ಅಲ್ಲಿ ಸ್ವಾಯಂಭುವ ಸ್ವಾರೋಚಿಷ ಉತ್ತಮ, ತಾಮಸ, ರೈವತ, ಚಾಕ್ಷುಷಮೆಂಬ ಷಣ್ಮನುಗಳಾಗೆ, ಏಳನೆಯ ವೈವಸ್ವತ ಮನ್ವಂತರದೊಳು ಸಪ್ತವಿಂಶನ್ಮಹಾಯುಗಂಗಳ್ಪೋಗೆ ಇಪ್ಪತ್ತೆಂಟನೆ ಯುಗದೊಳು ಕೃತ ತ್ರೇತಾ ದ್ವಾಪರಯುಗಂ ಸಲ್ವುದೀಗಳು ಕಲಿಯುಗಂ ಪ್ರವರ್ತಿಪುದು.

ಮುಂದೆ ಸೂರ್ಯಸಾವರ್ಣಿ, ಅಗ್ನಿಸಾವರ್ಣಿ, ಬ್ರಹ್ಮಸಾವರ್ಣಿ, ದಕ್ಷಸಾವರ್ಣಿ, ರುದ್ರಸಾವರ್ಣಿ ರೌಚ್ಯ, ಭೌಚ್ಯರೆಂದೀ ಸಪ್ತ ಮನುಗಳು, ಬ್ರಹ್ಮಂತದೂರ್ಧ್ವದ ಪ್ರಲಯದ ಮೇಲೆ ಸಾನುಮತಂ ಬ್ರಹ್ಮನಪ್ಪಂ ಬಲೀಂದ್ರಂ ದ್ರೋಣಂ ವ್ಯಾಸನಪ್ಪಂ ಪುನಸ್ಸಪ್ತದ್ವೀಪ ನವಖಂಡಂಗಳಪ್ಪವವರ ಪ್ರಮಾಣಂ ೮೬೪ ಕೋಟಿಯಕ್ಕುಂ. ||೧|| ಮಹಾಯುಗ ಪ್ರಮಾಣಂ ೪೩೨೦೦೦೦. ಅಲ್ಲಿ ಕೃತಯುಗಾದಿಯನರಿವುದಕ್ಕೆ

ನನ್ನನತಪ್ಪರದರ್ಕರ
ಮನ್ನಾಲ್ಕು ಪ್ರತಿಯನಿಟ್ಟು ಜಿತವಾರದೊಳರಿ
ಯುನ್ನತ ಕೃತಯುಗ ಮೊದಲಾ
ದ ನಾಲ್ಕು ಯುಗಂಗಳಿಂತು ತಪ್ಪದೆ ಬಪ್ಪುವು (?)

ಕೃತಯುಗ ಪ್ರಮಾಣಂ ೧೭,೨೮,೦೦೦.

ಶ್ಲೋಕ || ಪರಿತ್ರಾಣಾಯ ಸಾಧೂನಾಂ ವಿನಾಶಾಯಾತಿ ದುಷ್ಕೃತಾಂ
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ||

ಅವತಾರ ||

ಮತ್ಸ್ಯಃ ಕೂರ್ಮೋ ವರಾಹಶ್ಚ ನಾರಸಿಂಹೋಥ ಭಾರ್ಗವಃ
ಶರಸಂಖ್ಯಾವತಾರಿಸ್ಯುರ್ಹರೇರ್ಜಾತಾ ಕೃತೆಯುಗೇ ||

ದೇವೋ ಆದಿವರಾಹಃ ಪುಷ್ಕರಿಣಿ ತೀರ್ಥಂ, ಊರ್ಜಯಂತ ನಗರಂ, ಪುರುಷ ಪ್ರಮಾಣಮಷ್ಟಾವಿಂಶತಿ ಹಸ್ತೋನ್ನತಂ ಚತುಶ್ಶತಾಯಃ; ದೀರ್ಘ ದೇಹಃ ಬ್ರಾಹ್ಮಣ ವರ್ಣ ಬಲವಾನ್, ಧರ್ಮಸಂಪೂರ್ಣ, ಅಭಿಗಮ್ಯಕೃತೆ ದಾನಂ, ಮನುಷ್ಯಾಪಸೋಧ್ಯಾ ನಿನಃ, ಪರ್ವತಾಗ್ರವಾಸಿನಃ, ತೇಷಾಮುಪಭೋಗಾರ್ಥಂ ಕಲ್ಪವೃಕ್ಷಾಃ, ಆರೋಗ್ಯವಂತಃ, ಯುಗಾಂತೇ ಮಾಸ ಮಾಸ ಗರ್ಭೋತ್ಪತ್ತಿಃ ತೆ ವಿಷಯಮುಕ್ತ್ವಸ್ತತೊ ವೃಕ್ಷಾದಯೊ ನಷ್ಟಫಲದಾಃ ಸದಾ ಧರ್ಮವ್ಯವಸ್ಥಾಸ್ಮಿನ್ಯುಗೇ ರಾಜಾನಃ ||

ಶ್ಲೋಕ || ಹರಿಶ್ಚಂದ್ರೋ ನಳೋ ರಾಜಾ ಪುರುಕುತ್ಸಃ ಪುರೂರವಃ
ಸಗರಃ ಕಾರ್ತವೀರ್ಯಶ್ಚ ಷಡೇತೇ ಚಕ್ರವರ್ತಿನಃ ||
ಬ್ರಹ್ಮಾಚ ವಾಲಖಿಲ್ಯಶ್ಚ ರಾಹುಕೇತುರ್ಜಯೋ ನೃಪಃ
ಹಿಮಗಂಧೋ ಮಹಾಗಂಧೋ ಹಿರಣ್ಯಾಕ್ಷೋ ಬಕಾಸುರಃ

ಕಾರ್ತವೀರ್ಯಸ್ತ್ಾರಕಶ್ಚ ಮಹಿಷೋ ಮಕುಟಾಸುರಃ
ವಿರೂಪಾಕ್ಷಃ ಕಾಲನೇಮಿರ್ದುಂದುಭಿರ್ಧೇನಂಕಾಸುರಃ ||
ನಳಸಿದ್ಧೋ ರಾವಣಶ್ಚ ಪಿಂಗಳೋ ಪದ್ಮಲೋಚನಃ
ಬ್ರಹ್ಮೋತ್ತರಬಲೀ ಚಂದ್ರೋ ವ್ಯಾಘ್ರಜೋ ರಕ್ತಕೇಶಿನಃ ||
ಸಹಸ್ರಾಕ್ಷಃ ಪದ್ಮಕಶ್ಚ ಶತಜಿಹ್ವೋ ವಿಭೀಷಣಃ
ಏಕೋನತ್ರಿಂಶತಿಶ್ಚೈವ ಭೂಪಾಃ ಕೃತಯುಗೇಶ್ವರಾಃ ||

ಕೃತಯುಗ ಸಂಧಿ ೨೮,೮೦೦ ವರ್ಷ. ಮತ್ತಂ ತ್ರೇತಾಯುಗಪ್ರಮಾಣಂ ೧೨೯೬,೦೦೦.

ಯದಾ ಯದಾ ಧರ್ಮಸ್ಯ ಗ್ಲಾನಿರ್ಭವತಿ ಭಾರತ
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ ||

ಅಸ್ಮಿನ್ಯುಗೆ ಅವತಾರಾಃ

ಬಲಿ ರಾವಣ ಶಿಕ್ಷಾಯಾಂ ದ್ವಿಧಾ ಜಾತೋ ಹರಿಃ ಸ್ವಯಮ್
ವಾಮನೊ ರಾಘವಶ್ಚೈವ ಲೋಕಾನುಗ್ರಹಕಾರಣಾತ್ ||

ದೇವೋ ರಘುನಾಯಕಃ, ಸರಯೂನದೀತೀರ್ಥಂ ಅಯೋಧ್ಯಾನಗರಂ ಪುರುಷಪ್ರಮಾಣಂ ಚತುರ್ದಶ ಹಸ್ತಾಃ ತ್ರಿಶತಾಯುಃ ಕ್ಷತ್ರಿಯವರ್ಣೋ ಬಲವಾನ್ ತ್ರಿಪಾದ ಧರ್ಮಃ ಮನುಷ್ಯಲೋಭಾಭಿಭೂತಾ ಇತರ ದೋಷರಹಿತಾ ಜ್ಞಾನಾನಾಜ್ಞಾದಿ ಶ್ರೀಹರಿಜ್ವಲಯತಿ ತೇಷಾಮುಪಭೋಗಾರ್ಥಂ ಕಲ್ಪವೃಕ್ಷ ಆಭರಣಾದಿ ಪ್ರಸೂಯಂತೆ. ಕಾಲಾಂತರೇಣ ಮಧುಫಲವೃಕ್ಷಂ ಹರತಿ. ತತಃ ಶೀತೋಷ್ಣಾಭಿಭೂತಾಃ ಗ್ರಹನಿರ್ಮಾಣೋ ಚಕ್ರಃ ಕೃಷ್ಯಾದಿ ರಾಷ್ಟ್ರಾದಿ ರೋಷಾದಿರುತ್ಪನ್ನಂ ||

ಅಸ್ಮಿನ್ಯುಗೆ ರಾಜಾನಃ

ವೃತ್ತ || ಗಯೋಂಬರೀಶಃ ಶತಿಬಿಂದು ಶಂತನುಃ
ಪೃಥುರ್ಗುರುತ್ಮೋ (?) ಭರತಃ ಸುಹೋತ್ರಃ
ರಾಮೋ ದಿಳೀಪೋ ರಘುದಂತಿ ದೇವೋ
ಯಯಾತಿ ಮಾಂಧಾತ ಭಗೀರಥೋ ಭೃಗುಃ ||

ಇತಿ ಷೋಡಶನೃಪಾಃ

ಅಗಸ್ತ್ಯ ಅಂಗೀರ ಮನುಃ ಕಶ್ಯಪಃ ಸೂರ್ಯನಂದನಃ
ಕಾಕುತ್ಸ್ಥಃ ಕುರುನೀಲಶ್ಚ ಶತಜಿಹ್ವಾ ವಿಭೀಶಣಃ ||
ವೈವಸ್ವತ ಮನುರ್ಬ್ರಹ್ಮಾ ಪೃಥುಶ್ಚಂದ್ರೋ ಮಹಾಜಯಃ
ಸ್ವಾಹಾ ಚ ಪುಷ್ಪದಂತಶ್ಚ ಸಮ್ಮೇದಶ್ಚ ಮಹಾತ್ಮನಃ ||
ಶಾತಾಂಶುಃ ಪೃಥುಕೇತುಶ್ಚ ಶ್ರೀಪಾಲಶ್ಚಂಧಕಾಸುರಃ

ವಸುಮಾನಾದಿಯಾರಣ್ಯೋ, (?) ಹರಿಶ್ಚಂದ್ರೋ ತ್ರಿಶಂಕುಕಃ ||
ಭೋಹಿತಾಶ್ಚ ದಿಲೀಪಶ್ಚ ಮಹಕಸ್ಯ (?) ಭಗೀರಥಃ
ಅಂಬರೀಷಃ ಸಿಂಧ್ವಧೀಶಯುಕ್ತಾಃ ಶೌರ್ಯಯುತಾಸ್ಸುತಾಃ ||
ಕುಬೇರಸೂನುಶ್ಚೈನಾಥಂ (?) ಶಾಲೀವಾಹಸಹಸ್ರಕಮ್
ಚಂದ್ರಸೇನಃ ಕುಶಲವೌ ಗೋಪಾಲಸ್ತುಂಬರದಃ (?) ||
ತ್ರೇತಾಯುಗದ್ವಯಸ್ತ್ರಾಣಾಂ (?) ಏತೇ ಭೂಪಾಃ ಪ್ರಕೀರ್ತಿತಾಃ ||

ತ್ರೇತಾಯುಗ ಸಂಧಿ ೨೧,೬೦೦ ದ್ವಾಪರಯುಗ ಪ್ರಮಾಣಂ ೮,೬೪,೦೦೦

ಯೆ ಯಥಾ ಮಾಂ ಪ್ರಪದ್ಯಂತೇ ತಾಂಸ್ತಥೈವ ಭಜಾಮ್ಯಹಮ್
ಮಮ ವೃತ್ತಾನುವರ್ತಂತೇ ಮನುಷ್ಯಾಃ ಪಾರ್ಥ ಸರ್ವಶಃ ||

ಅಸ್ಮಿನ್ಯುಗೆ ಅವತಾರಾಃ

ಹರೇರ್ಧರ್ಮ ಪ್ರತಿಷ್ಠಾರ್ಥಂ ದ್ವಾಜಾತೋ ದ್ವಾಪರೇ ಹರಿಃ
ತ್ರಿಪುರಂ ಹಂತಿ ಯತ್ನೇನ ಜಾತಃ ಸಾಕ್ಷಾತ್ ಸ್ವಯಂ ಹರಃ ||

ದೇವದೇವೋರಾಜಃ ವೇಗಾವತೀತೀರ್ಥಂ ಹಸ್ತಿನಾಪುರೀನಗರಂ ಪುರುಷಪ್ರಮಾಣ ಸಪ್ತಹಸ್ತಾಃ ದ್ವಿಶತಾಯುಃ ದೈತ್ಯರ್ಣೋಬಲವಾನ್ ದ್ವಿಪಾದ ಧರ್ಮಃ ದ್ವಾಪರೆ ಯಾಚ್ಯಮಾನೇನ ಮನುಷ್ಯ ಲೋಭಾಭಿಭೂತಾಃ ವರ್ಣಸಂಕರಪೂರೇನ ರಾಗ ದ್ವೇಷಿಣೋಪಿಸಂ ವೃಷ್ಟಿಃ ವ್ಯಾಧಿರುತ್ಪನ್ನಃ

ಅಸ್ಮಿನ್ಯುಗೇ ರಾಜಾನಃ

ಪುಲಸ್ತ್ಯಾ ಜಿತಧರ್ಮಶ್ಚ ಸೋಮಸೂರ್ಯ ಪುರೂರವಾs
ಶಂಭುಶ್ಚ ಗೃಹ ರಾಮಶ್ಚ ಸ್ವಾತಿಮಂದೋ ಮಹಾಜವಃ ||
ಗಜಕರ್ಣೋಭಿರಾಮಶ್ಚ ಭೌಮಶ್ಚ ಶ್ರೀಧರಸ್ತಥಾ
ಕುಮಾರಬುದ್ಧೋ ಮೇರುಶ್ಚ ಪುಂಡರೀಕಶ್ಚ ನಂದನಃ ||
ಅಜಿತಃ ಪುಷ್ಪದಂತಶ್ಚ ನೈಮಿ ಕೃಷ್ಣಶ್ಚ ಶಂತನುಃ
ಬಲಭದ್ರಶ್ಚ ಭೀಷ್ಮಶ್ಚ ಧೃತರಾಷ್ಟ್ರಶ್ಚ ಪಾಂಡವಃ ||
ದುರ್ಯೋಧನೋ ಧರ್ಮರಾಜಃ ಭೀಮಸೇನಸ್ತಥಾರ್ಜುನಃ
ನಕುಲಃ ಸಹದೇವಶ್ಚ ದ್ವಾತ್ರಿಂಶದ್ವಾಪರೇಯುಗೇ ||
ದ್ವಾಪರ ಸಂಧಿ ೧೪,೪೦೦, ಕಲಿಯುಗ ಪ್ರಮಾಣಂ ೪,೩೨,೦೦೦
ಕಾಂಕ್ಷಂತಃ ಕರ್ಮಣಾಂ ಸಿದ್ಧಿಂ ಜಯಂತೀಹ ದೇವತಾಃ
ಕ್ಷಿಪ್ರಂ ಹಿ ಮಾನುಷೇ ಲೋಕೇ ಸಿದ್ಧಿರ್ಭವತಿ ಕರ್ಮಜಾಃ ||

ಅಸ್ಮಿನ್ಯುಗೇ ಅವತಾರಾಃ

ಶಿಶುಪಾಲೋಹತಃ ಪ್ರೊಕ್ತಃ ಹರೇರ್ಲೋಕಾಭಿರಕ್ಷಯಾ
ರಾಮಕೃಷ್ಣಾ ಕಲೌ ಜಾತಾಃ ಕಲ್ಕಿಶ್ಚಾಗೇ ಭವಿಷ್ಯತಿ ||
ದೇವಃ ಪರ್ವತ ಮಲ್ಲಿಕಾರ್ಜುನಃ ಭಾಗೀರಥೀತೀರ್ಥಂ
ವಿದ್ಯಾನಗರಿ ಪುರುಷಪ್ರಮಾಣ ಸಾರ್ಧಹಸ್ತತ್ರಯಂ ||

ಶತಾಯುಃ ಶೂದ್ರವರ್ಣ ಬಲವಾನ್ ಏಕಪಾದ ಧರ್ಮಸೇವೆಯಾದೀರ್ಯಕೆ ಅಲ್ಪವೃಷ್ಟಿಃ ಜಾತಿಸಂಕರೋ ಭವತಿ ಪರ್ಜನ್ಯೋ ನಷ್ಟ ಫಲದಾಃ ಕಲಿಯುಗೇ ಧರ್ಮಮಾರ್ಗಂ ವಿನಶ್ಯತಿ||

ಶ್ಲೋಕ || ಪಾಷಂಡಾಚಾರ ವಿರತಾಃ ಪಾಪಾಲಯಸ್ಯ ಹೇತುಕಾಃ
ಅವಿಕಾಜಿನ ಕಾರ್ಪಾಸ ತೃಣಸ್ಯಾ (?)ಇವ ಏವ ಚ ||

ವಸ್ತ್ರಾಣಿ ಚ ಕಲೌ ಪ್ರಾಪ್ತೇನ ಕಾಂಕ್ಷೇ ಯೋಗಿನಃ ಕ್ವಚಿತ್
ಲಡ್ಡು ಮೋದಕ ಮಂಡಾನಾಂ ಪಿಷ್ಟಂ ಭಕ್ಷಂ ಭವಿಷ್ಯತಿ ||

ಭವೇತ್ಪ್ರಿಯೋಷಿತಾಸ್ಸೂತಿರ್ನವಾಷ್ಟ ದಸಮಾಂತಿಕೇ
ಚತುರ್ವರ್ಣಾಸ್ತಥಾ ಪಶ್ಚಾದೇಕ ವರ್ಣಂ ಭವಿಷ್ಯತಿ ||

ಮ್ಲೇಂಛ ಪ್ರಭುಃ ಕ್ಷತ್ರಿಯಸ್ಯ ಮೇಚ್ಛರಾಜ್ಯಮನೇಕಶಃ
ಅಲ್ಪೋದಕ ಸ್ತದಾ ಮೇಘಃ ಅಲ್ಪಸಸ್ಯಾ ವಸುಂಧರಾ ||

ಅಲ್ಪಕ್ಷೀರಾಸ್ತಥಾ ಗಾವಃ ಅಲ್ಪವಿದ್ಯಾಸ್ತಥಾ ದ್ವಿಜಾಃ
ನ ಶ್ರುಣ್ವಂತಿ ಪಿತುರ್ವಾಕ್ಯಂ ಪುತ್ರಾಶ್ಚ ಭ್ರಾತರಸ್ತಥಾ ||

ನಿರ್ವೀರ್ಯಾ ಪೃಥಿವೀ ದಾತಾ ದರಿದ್ರೋಽಸ್ಮಿನ್ಯುಗೆ ನೃಪಃ ||

ಚತುರ್ಮುಖೋ ಕಣ್ವಮನೂ ಜನಮೇಜಯ ರೋಹಿತೌ
ಗಂಗಾಧರೋ ವಾಮದೇವೋ ಭೌಮೇ ಚ ತ್ರಿಪುರಾಂತಕಃ ||

ಭಟ್ಟೀಚ ಸಗರೋ ಬಾಲೋ ನಿರ್ಮಲಶ್ಚ ಮಹಾಬಲಃ
ಶ್ರೀ ನಾಗೋಮಲ್ಲಿನಾಥಶ್ಚ ಅಭಿರಾಮಶ್ಚ ಸೂದ್ರಿಕಃ ||

ವಿಶ್ವೇಶರೋ ವಿಕ್ರಮಾರ್ಕೋ ವಿಮಲಾದಿತ್ಯ ಭೋಜರಾಟ್
ಹರಿತಃ ಶಾಲಿವಾಹಶ್ಚ ಶಾಂತಿಃ ಶೂದ್ರಶ್ಚ ಕಂಧರಃ

ವೀರಸೇನೋ ಜಯತ್ಸೇನೋ ವಿಕ್ರಮಾರ್ಕಶ್ಚ ಮಾಧವಃ
ವೀರಬಾಹುಃ ಪೀನಬಾಹುರ್ವೀರನಾರಾಯಣಸ್ತಥಾ ||

ಮಯ್ಯಾಳಿರ್ವಾಮನಶ್ಚೈವ ಯಯಸಿಂಹಶ್ಚ ಶಂಕರಃ
ಶ್ರೀಪತಿರ್ಗಂಧ ದೇವಶ್ಚ ಧವಲಶ್ಚಂದ್ರ ಲಕ್ಷಣಃ ||

ಕಾಲರುದ್ರಃ ಪ್ರತಾಪಶ್ಚ ದಿಳೀಶಃ ಕಟಕೇಶ್ವರಃ ||

ವ || ಎಂದಿಂತನೇಕ ತೆರದಿಂ ಕುಮತಿಜ್ಞಾನದಿಂ ಸಿದ್ಧಾಂತಮನಾಧಾರಂ ಮಾಡಿಯದಕ್ಕೆ ವೈಪರೀತ್ಯವಾಗೆಯನ್ಯತಂಗಳಂ ಮಿಥ್ಯಾತ್ವಕರ್ಮೋದಯದಿಂ ಸನ್ಮಾರ್ಗವಾದ ಸತ್ಯಾಗಮಪುರಾಣಮಪ್ಪ ಪ್ರಥಮಾನುಯೋಗ ಕರಣಾನುಯೋಗ ಚರಣಾನುಯೋಗ ದ್ರವ್ಯಾನುಯೋಗಮೆಂಬ ಸಿದ್ಧಾಂತ ಚತುರ್ವೇದ ವೇದಾಂಗ ಚತುರ್ದಶಪೂರ್ವೆಯಪ್ಪ ಶಾಸ್ತ್ರಸಮುದ್ರಮಂ ನೋಡಲುಂ ಪುಗಲುಂ ಭಾವಿಸಲುಂ ಭಯಮಾಗೆ ಮಿಥ್ಯಾ ಜ್ಞಾನದಿಂ ಮರೀಚಿ ಕಾಶ್ಯಪ ವಶಿಷ್ಠಾದಿಗಳು ಸ್ವಯಂಬುದ್ಧರಾಗಿ ರಚಿಸಿದುದಂ ಕ್ರಮದಿಂ ದನುಮಾನದಿನೊಬ್ಬೊಬ್ಬರೊಂದೊಂದು ತೆರನಾಗಿ ವಿಪರೀತಮಾಗೆ ರಚಿಸಿರ್ಪ ನವಯುಕ್ತಿಯಿಂ ಕಲ್ಪಿಸಿ ಪೇಳ್ವರಿದು ಪ್ರಮಾಣಮಲ್ಲೆಂದು ಜೈನಪಂಡಿತರೆಲ್ಲಂ ಪೇಳ್ವುದುಮಿಾ ಶಾಸ್ತ್ರದಿಂದಿನ್ನು ದೊಡ್ಡಿತ್ತಾದ ಶಾಸ್ತ್ರಂ ಲೋಕದೊಳಾವುದು ಸಕಲ ಪ್ರಪಂಚಮಿಲ್ಲಿಯಿರ್ಪುದು. ಲೋಕಕಾಲಸ್ಥಿತಿ ರಾಜಾದಿಗಳ ಪ್ರಪಂಚಮೆಲ್ಲಮಿದರೊಳಿರ್ಪುದಿದು ಸಿದ್ಧಾಂತಮಲ್ಲದೆ ಬೇರಾವುದಿದರೊಳಾವುದು ಪುಸಿ ಪೇಳಿಮೆಂದು ವೇದಾಂತಿಗಳು ಪೇಳೆ ಸಿದ್ಧಾಂತಿವಿಪ್ರರೆಂದರ್.

ಶ್ಲೋಕ || ಕೂಪಾವಾಸೇ ಚಿರಂ ಭೇಕಃ ಸಮುದ್ರಂ ನಾಸ್ತಿ ವಿದ್ಯತೆ

ಒಂದು ಕೂಪದೊಳೊಂದು ಕಪ್ಪೆಯು ಬಹಳ ದಿವಸಂ ವಾಸವಾಗಿ ಇಂಥಾ ಜಲಮಾವುದುಮಿಲ್ಲೆಂದು ಮೆಚ್ಚಿ ಗರ್ವದೊಳಿರಲೊಂದು ದಿನಂ ಸಿತಪಕ್ಷಿ ಬಂದಾ ಬಾವಿಯ ತಟಸ್ಥನಾಗಿರೆ ನೀನಾರೆಲ್ಲಿಂದ ಬಂದೆಯೆಂದು ಮಂಡೂಕಂ ಕೇಳಿದೊಡದು ಮಹಾಸಮುದ್ರದಿಂ ಬಂದೆನಾಂ ಸಿತಪಕ್ಷಿಯೆಂಬುದುಂ ಸಮುದ್ರಮೆನ್ನ ಕೂಪಸಮಮಪ್ಪುದೆ ಪೇಳೆಂಬುದುಂ ಬಹು ವಿಶಾಲಮಪ್ಪುದೆಂಬುದುಂ ಅತ್ಯಾಶ್ಚರ್ಯಮಾಗೆ ಮೇಲಣ ತಡಿಗೆ ಬಂದೊಂದು ಕುಪ್ಪಂ ಕುಪ್ಪಿ ಕೇಳಲಿನ್ನುಂ ವಿಸ್ತಾರಮೆನೆ ಮತ್ತೊಂದು ಕುಪ್ಪಿ ಕೇಳೆಯದರಿಂ ದೊಡ್ಡಿತ್ತೆಂದೊಡೆ ಮೂರು ಕುಪ್ಪು ಕುಪ್ಪಿ ಕೇಳಿದೊಡೀ ಭೂಮಿ ಎಷ್ಟಿಪ್ಪುದಿದರ ದ್ವಿಗುಣವೆಂದೊಡದಂ ಕೇಳ್ದು ಸಮುದ್ರವೆ ಪುಸಿಯೆಂದು ತಿರಸ್ಕರಿಸಿತೆಂಬಂತೆ ಸಮುದ್ರಕ್ಕತಿವಿಶಾಲಮಪ್ಪ ಪರಮಾಗಮಂ ಜ್ಞಾನಾವರಣೀಯ ಕರ್ಮೋದಯದಿ ಜ್ಞಾನಶೂನ್ಯರಪ್ಪ ಮನುಷ್ಯರು. ಇರುವೆಗೆ ಮೂತ್ರವೆ ಪ್ರಳಯಜಲಮಾಗಿ ಕಾಣ್ಬಂತೆ ಅಲ್ಪಶ್ರುತಮೆ ಅವಗಾಹನಮಿಲ್ಲದೆ ಜಾತ್ಯಂಧಂ ಮದಗಜಮಂ ಸ್ಪರ್ಶನದಿಂದರಿವಂತೆ ಕತ್ತಲೆಯೊಳ್ ಕನ್ನಡಿಯು ಕಾಣದಂತೆ ಕಣ್ಣು ಬೇನೆಯುಳ್ಳಂಗೆ ದೀಪಾದಿ ಪ್ರಭೆಗಳು ವಿರುದ್ಧಮಪ್ಪಂತೆ ಹುಚ್ಚು ಹಿಡಿದಂಗೆ ಲೋಕ ಪ್ರಪಂಚೆಲ್ಲಾ ವಿಪರೀತಮಾಗಿ ಕಾಣ್ಬ ತೆರದೊಳು ಸದ್ಧರ್ಮದೊಳುಂ ಸಚ್ಛಾಸ್ತ್ರದೊಳುಂ ವಿಪರೀತ ಗ್ರಾಹಿಗಳಾಗಿ ಇಹಲೋಕ ಸುಖಾಪೇಕ್ಷೆಯಿಂ ಸತ್ಯಾಸತ್ಯಮಂ ಮಿಶ್ರಂ ಮಾಡಿ ದಧಿಗುಡ ಮಿಶ್ರಮಾದರುಚೆಯಂತೆ, ಸುವರ್ಣದೊಳು ಹಿತ್ತಾಳೆಯಂ ಬೆರಸಿದಂತೆ, ಸಿದ್ಧಾಂತದೊಳು ಮಿಥ್ಯಮಂ ಸಂಗಡಿಸಿ ಪೇಳ್ವಪರಿದು ಕೆಲಕೆಲವು

ನಿಶ್ಚಯಮುಂಟಾಗಿಯು ಪ್ರಮಾಣಮಲ್ಲಿದು. ಇದರೊಳಾವುದು ತಪ್ಪು ಪೇಳಿಮೆಂಬರಿ ಪಾಲೊಳು ಪುಳಿಯಂ ಬೆರಸಿದೊಡೆ ಪಾಲಾವುದು ಪುಳಿ ಯಾವುದು ಎಂಬಂತೆ ಬದ್ಧಾಬದ್ಧಮಂ ಪೇಳ್ವುದು, ಮಳಲ ಪಾಯಸದೊಳ್ ಕಲ್ಲಂ ತಡಕುವಂತೆ ಪುಸಿಯಿದೆಂದು ಪೇಳಲಸಾಧ್ಯಮೆಲ್ಲಾ ಪುಸಿಯಿಪ್ಪುದು. ಈ ಭರತಕ್ಷೇತ್ರದಾರ್ಯಾಖಂಡದ ಐವತ್ತಾರು ದೇಶಂಗಳ ಅಯೋಧ್ಯಾಸ್ವಾದನಾ ವಾರಣಾಸಿ ಶ್ರಾವಸ್ತಿ ಚಂದ್ರಪುರಿ ರತ್ನಪುರಿ ಸಿಂಹಪುರಿ ಕಾಕಂದಿ ಭದ್ರಿಳಾ ಮಹೇಂದ್ರ ಸ್ವಸ್ತಿಕಾವತಿ ದ್ವಾರಾಣಾಶಿ ಚಂಪಾಪುರಿ ರೋರುಗಪುರಿ ಕೌಶಾಂಬಿ ಹರಿಪುರ ಕಾಪಿಲ್ಯ ಮಿಥಿಲಾ ರಾಜಗೃಹ ಶೌರಿಪುರ ಕಾಶಿಪುರಿ ಕುಂಡಿನಾಪುರಾದಿ ಮಹಾರಾಜಧಾನಿ ಪಟ್ಟಣಂಗಳಲ್ಲಿ ಪುಟ್ಟಿ ರಾಜ್ಯಮನಾಳ್ದು ಸಮ್ಯಕ್ತ್ವಸಂಪನ್ನರಾಗಿ ತಪೋನುಷ್ಠಾನದಿಂ ಜ್ಞಾನಸಾಮ್ರಾಜ್ಯವಾಂತು ಸ್ವರ್ಗಾಪವರ್ಗವ ಪಡೆದ ಚತುರ್ವಿಂಶತಿ ತೀರ್ಥಕರ ಪರಮದೇವರು ದ್ವಾದಶ ಮಹಾ ಚಕ್ರವರ್ತಿಗಳು, ನವ ಬಲದೇವರು, ನವ ಕೇಶವರು, ನವ ಪ್ರತಿಕೇಶವರು, ನವ ನಾರದರು, ಏಕಾದಶ ರುದ್ರರು, ಯುವರಾಜಾಧಿರಾಜ, ಮಹಾರಾಜ, ಅರ್ಧಮಂಡಲಿಕ, ಮಂಡಲಿಕ, ಮಹಾಮಂಡಲಿಕ, ಅರ್ಧಚಕ್ರಿಗಳು ಮೊದಲಾದವರ ಪೆಸರಂ ತೆಗೆದುಕೊಳ್ಳದೆ ಸರ್ವಜ್ಞಪ್ರಣೀತ ಸಿದ್ಧಾಂತಮಂ ಲೋಕಕಾಲಸ್ಥಿತಿಯಂ ವಿಪರೀತಮಾಗೆ ರಚಿಸಿದ ವೇದಾಂತಶಾಸ್ತ್ರಕ್ರಮಮಿದು ಪ್ರಮಾಣಮಲ್ಲದು. ಅದ್ಯಾಪಿ ಸಮ್ಯಕ್ತ್ವ ಸಂಪನ್ನರಪ್ಪ ಜೈನಕ್ಷತ್ರಿಯರು ದೇಶಂ ಪ್ರತಿದೇಶಂಗಳೊಳು ರಾಜ್ಯಮಂ ಪಾಲಿಸುತ್ತಿಪ್ಪರು. ಪ್ರತ್ಯಕ್ಷಮಾಗಿಪ್ಪವರಂ ನೀವು ಪೇಳುವ ಶಾಸ್ತ್ರದೊಳೇಕದೇಶವಾಗಿಯಾದರೂ ಪೇಳದಿಪ್ಪದರಿಂ ಮತದ್ವೇಷದಿಂ ಮಾಡಿದ ಪುರಾಣಮಿದುಂ ನಮಗೆ ಪ್ರಮಾಣಮಲ್ಲೆಂದು ಜೈನೋಪಾಧ್ಯಾಯರುಂ ಪಂಡಿತರುಂ ಪೇಳಿ ಸಿದ್ಧಾಂತೋಕ್ತಕ್ರಮದಿ ತ್ರಿಲೋಕ ಪ್ರಜ್ಞಪ್ತಿ ಮೊದಲಾಗೆ ಯುಗಭೇದಮೆಲ್ಲಮಂ ಪೇಳೆ ವೇದಾಂತಿಗಳೀ ಪ್ರಪಂಚುಗಳುಂ ಸುಶಾಸ್ತ್ರದೊಳಿಲ್ಲ. ನಾವಿದನೋದಿ ಕಂಡು ಕೇಳಿ ಇಲ್ಲಿ ನಮ್ಮ ಪೂರ್ವಜರು ಬಿಟ್ಟುದಂ ನಾವೆಂತು ಗ್ರಹಿಸಲಕ್ಕುಮೆನೆ ಆರ್ಹತ ವಿಪ್ರರೆಂದರು. ನೀಮು ಕಲಿವ ಶಾಸ್ತ್ರಪ್ರಾರಂಭದೊಳ್ ಓಂಕಾರಸಿದ್ಧ ನಮಸ್ಕಾರಪೂರ್ವಕಮಾಗಿ ಕಲಿವ ಶಾಸ್ತ್ರದೊಳ್ ರೂಪ ೧, ಯುಗ ೨, ಲೋಕರತ್ನ ೩, ಬಂಧ ಗತಿಕಷಾಯ ೪, ವ್ರತ ೫, ಜೀವ ಲೇಶ್ಯ ದ್ರವ್ಯ ೬, ಭಯವ್ಯಸನ ೭, ತನು, ಕರ್ಮ, ದುರಿತ ೮, ನಂದ ಪದಾರ್ಥ ಲಬ್ಧಕೆ ಶರ್ವ, ವಿಷ್ಣು ಪಾದಶೂನ್ಯಮೆಂದೀ ಲೆಕ್ಕಸಂಜ್ಞೆಯೊಳ್ ಜಿನ ೨೪ ಎಂದಿವಾದಿಯಾದ ಭೂತಸಂಜ್ಞೆಯನೆಂತು ಕಂಡು ಪೇಳ್ವರೀ ವೇದದೊಳ್ ಓಂ ಜಿನಃ ಅರ್ಹನ್ ಎಂಬುದೆಂತು ಪುರಾಣಂಗಳೊಳ್

ಶ್ಲೋಕ || ಅಹಿಂಸಾ ಸತ್ಯಮಸ್ತೇಯಂ ತ್ಯಾಗೋ ಮೈಥುನವರ್ಜನಮ್
ಏತತ್ಪಂ ಚ ನಿಯುಕ್ತೇಷು ಸರ್ವೇ ಧರ್ಮಾಃ ಪ್ರತಿಷ್ಠಿತಾಃ ||೧||

ಅಹಿಂಸಾಲಕ್ಷಣೋ ಧರ್ಮಃ ಪ್ರಾಣಿನಾಂ ವಧಃ
ತಸ್ಮಾದ್ಧರ್ಮಾರ್ಥಿನಾವಶ್ಯಂ ಕರ್ತವ್ಯಂ ಪ್ರಾಣಿನಾಂ ದಯಾ ||೨||

ಯಥಾ ಮಮ ಪ್ರಿಯಾಃ ಪ್ರಾಣಾಃ ತಥಾನ್ಯಸ್ಯಾಪಿ ದೇಹಿನಃ
ಇತಿ ಮತ್ವಾ ನ ಕರ್ತವ್ಯೋ ಘೋರಃ ಪ್ರಾಣಿವಧೋ ಬುಧೈಃ ||೩||

ವೃತ್ತ || ನಾಹಂ ಸ್ವರ್ಗಫಲೋಪಭೋಗ ತೃಷಿತೋ ನಾಭ್ಯರ್ಥಿ ತಸ್ತ್ವಂ ಮಯಾ
ಸಂತುಷ್ಟಸ್ತೃಣ ಭಕ್ಷಣೇನ ಸತತಂ ಹಂತುಂ ನ ಯುಕ್ತಂ ತವ
ಸ್ವರ್ಗಂ ಯಾಂತಿ ಯದಿ ತ್ವಯಾ ವಿಶಸಿತಾ ಯಜ್ಞೇ ಧ್ರುವಂ ಪ್ರಾಣಿನೋ
ಯಜ್ಞಂ ಕಿಂ ನ ಕರೋಷಿ ಮಾತೃ ಪಿತೃಭಿಃ ಪುತ್ರೈ ಸ್ತಥಾ ಬಂಧವೈಃ ||೪||

ಏಕತಃ ಕಾಂಚನೋ ಮೇರುಃ ಬಹುರತ್ನಾ ವಸುಂಧರಾ
ಏಕಸ್ಯ ಜೀವಿತಂ ದದ್ಯಾನ್ನ ಚ ತುಲ್ಯೋ ಯುಧಿಷ್ಠಿರ ||೫||

ಹೇಮಧೇನು ಧರಾದೀನಾಂ ದಾತಾರಃ ಸುಲಭಾ ಭುವಿ
ದುರ್ಲಭಃ ಪುರುಷೋ ಲೋಕೇ ಯಃ ಪ್ರಾಣೇಷ್ವಭಯಪ್ರದಃ ||೬||

ಏಕತಃ ಕ್ರತವಃ ಸರ್ವೇ ಸಮಗ್ರಾ ವರದಕ್ಷಿಣಾಃ
ಏಕತೋ ಭಯಭೀತಸ್ಯ ಪ್ರಾಣಿನಃ ಪ್ರಾಣರಕ್ಷಣಮ್ ||೭||

ಮಹಾಭಾರತೆ

ಯಾವಂತಿ ಪಶು ರೋಮಾಣಿ ಪಶು ಗಾತ್ರೇಷು ಭಾರತ
ತಾವದ್ವರ್ಷ ಸಹಸ್ರಾಣಿ ಪಚ್ಯತೇ ಪಶುಘಾತಕಾಃ ||೮||

ಪ್ರಭಾಸಂ ಪುಷ್ಕರಂ ಗಂಗಾ ಕುರುಕ್ಷೇತ್ರಂ ಸರಸ್ವತೀ
ಧೇನುಕಾ ಚಂದ್ರಭಾಗಾ ಚ ಸಿಂಧುಶ್ಚೈವ ಮಹಾನದೀ ||೯||

ಏಷಂ ತೀರ್ಥೇಷು ಯತ್ಪುಣ್ಯಂ ನೃಣಾಂ ಸ್ನಾನೇನ ಜಾಯತೇ
ತತ್ಸರ್ವಂ ನಿಷ್ಫಲಂ ಜ್ಞೇಯಂ ಯದಿ ಮಾಂಸಂ ನ ವರ್ಜಯೇತ್ ||೧೦||

ಅಸ್ಥೌ ನಿವಸತೇ ರುದ್ರೋ ಮಾಂಸೇ ವಸತಿ ಮಾಧವಃ
ಮಜ್ಜಾಯಾಂ ವಸತಿ ಬ್ರಹ್ಮಾ ತಸ್ಮಾನ್ಮಾಂಸಂ ನ ಭಕ್ಷಯೇತ್ ||೧೧||

ಋಷಯೋ ಬ್ರಾಹ್ಮಣಾಶ್ಚೈವ ಯೇ ಚಾನ್ಯೇ ಧರ್ಮಚಿಂತಕಾಃ
ಯದಿ ಮಧ್ಯೇನ ದೋಷೋಸ್ತಿ ಕಿಮರ್ಥಂ ನ ಪಿಬಂತಿ ತೇ ||೧೨||

ದೋಷಾಣಾಂ ಕಾರಣಂ ಮದ್ಯಂ ಮದ್ಯಂ ಕಾರಣಮಾಪದಾಮ್
ಅಜ್ಞಾನ ಕೃದಪಥ್ಯಂಚ ತಸ್ಮಾತ್ ಮದ್ಯಂ ವಿವರ್ಜಯೇತ್ ||೧೩||

ಯೋ ದದಾತಿ ಮಧುಂ ಶ್ರಾದ್ಧೇ ಮೋಹಿತೋ ಧರ್ಮಲಿಪ್ಸಯಾ
ಸ ಯಾತಿ ನರಕಂ ಘೋರಂ ಬಾಧಕೈಸ್ಸಹ ಲಂಪಟೈಃ ||೧೪||

ಸಪ್ತ ಗ್ರಾಮೇಷು ಯತ್ಪಾಪಂ ವಹ್ನಿನಾ ಭಸ್ಮಸಾತ್ಕೃತೇ
ಸತ್ಯಂ ತಜ್ಜಾಯತೇ ಪಾಪಂ ಮಧುಬಿಂದು ಪ್ರಭಕ್ಷಣಾತ್ ||೧೫||

ನ ಗ್ರಾಹ್ಯಾ ನಿನದೇ ಯಾನಿ ಷಡ್ವಸ್ತೂನಿ ಚ ಪಂಡಿತೈಃ
ಅಗ್ನಿಂ ಮಧು ವಿಷಂ ಶಸ್ತ್ರಂ ಮದ್ಯಂ ಮಾಂಸಂ ತಥೈವ ಚ ||೧೬||

ನೋದಕಂ ಚಾಪಿ ಪಾತವ್ಯಂ ರಾತ್ರೌ ಯತ್ರ ಯುಧಿಷ್ಠಿರ
ತಪಸ್ವಿನಾ ವಿಶೇಷೇಣ ಗೃಹಸ್ಥೇನ ವಿವೇಕಿನಾ ||೧೭||

ವಸ್ತ್ರಪೂತಂ ಭವೇತ್ತೋಯಂ ತೋಯಂ ಚಾತ್ಯಣ ವಸ್ತು ಚ
ದೃಷ್ಟಿ ಪೂತಾನಿ ಸರ್ವಾಣಿ ಸತ್ಯ ಪೂತಂ ಸಮಾಚರೇತ್ ||೧೮||

ಮೃತೇ ಸಜ್ಜನಮಾತ್ರೇಽಪಿ ಸೂತಕಂ ಜಾಯತೇ ಕಿಲ
ಅಸ್ತಂಗತೇ ದಿವಾನಾಥೇ ಭೋಜನಂ ಕ್ರಿಯತೇ ಕಥಂ ||೧೯||

ನೈವಾಹುತಿರ್ನ ಚ ಸ್ನಾನಂ ನ ಶ್ರಾದ್ಧಂ ದೇವತಾರ್ಚನಮ್
ನ ದಾನಂ ಗಮನಂ ರಾತ್ರೌ ಭೋಜನಂ ವಿಶೇಷತಃ ||೨೦||

ಉಲೂಕ ಕಾಕ ಮಾರ್ಜಾರ ಗೃಧ್ರ ಶಂಬರ ಸೂಕರಾಃ
ಅಹಿ ವೃಶ್ಚಿಕ ಗೊವಾಶ್ಚ (?) ಜಾಯತೇ ರಾತ್ರಿ ಭೋಜನಾತ್ ||೨೧||

ಯೇ ರಾತ್ರೌ ಸರ್ವಥಾಹಾರಂ ವರ್ಜಯಂತಿ ಸುಮೇಧಸಃ
ತೇಷಾಂ ಪಕ್ಷೋಪವಾಸಸ್ಯ ಫಲಂ ಮಾಸೇನ ಜಾಯತೇ ||೨೨||

ಮಹಾಭಾರತೇ ಶಾಂತಿಪರ್ವಣಿ

ಮದ್ಯಮಾಂಸಾಶನಂ ರಾತ್ರಿಭೋಜನಂ ಕಂದ ಭಕ್ಷಣಮ್
ಯೇ ಕುರ್ವಂತಿ ವೃಥಾ ಧರ್ಮಂ ತೇಷಾಂ ದುರ್ಗತಿಕಾರಣಮ್ ||೨೩||

ಪದ್ಮಪುರಾಣೇ

ಮೂಲಕಂ ಲಶುನಂ ಹಿಂಗು ಪಲಾಂಡು ನಾಳಕಂ ತಥಾ
ಭಕ್ಷಕಶ್ಚ ಸ ಮೂಢಾತ್ಮಾ ಪ್ರಯಾತಿ ನರಕಂ ಧ್ರುವಮ್ ||೨೪||

ಮೂಲಕೇನ ಸ ಮಜ್ಜಾನ್ನಂ ದ್ವಿದಲಂ ಗೋರಸೇನ ತು
ಭುಂಜಾನಶ್ಚ ಮಹಾಪಾಪಸ್ಸ ಯಾತಿ ನರಕಂ ಧ್ರುವಮ್ ||೨೫||

ಶಿವಪುರಾಣೇ

ಮಿಶತ್ಯಂಗುಲ ವಿಸ್ತೀರ್ಣಂ ತ್ರಿಂಶಂತ್ಯಂಗುಲಮಾಯತಮ್
ತದ್ವಸ್ತ್ರಂ ದ್ವಿಗುಣೇ ಕೃತ್ವಾ ಗಾಲಯಿತ್ವೋದಕಂ ಪಿಬೇತ್ ||೨೬||

ತತ್ರ ಸ್ಥಾನೇ ಸ್ಥಿತಾನ್ ಜಂತೂನ್ ಸ್ಥಾಪಯೇಜ್ಜವಮಧ್ಯತಃ
ಜೀವರಕ್ಷಣಹೇತೋಶ್ಚ ಇತ್ಯೇವಂ ಮನುರಬ್ರವೀತ್ ||೨೭||

ಮನುಸ್ಮೃತೌ-

ಮೃದೋ ಭಾರ ಸಹಸ್ರೇಣ ಜಲಕುಂಭೇನ ಕೋಟಿಭಿಃ
ನ ಶುದ್ಧ್ಯಂತೇ ದುರಾಚಾರಾಃ ಸ್ನಾತಾತೇಷ್ವಪಿ ಚ ತ್ರೈರಪಿ ||೨೮||

ವ್ರತಿನೋ ಬ್ರಾಹ್ಮಣಾ ಜ್ಞೇಯಾಃ ಕ್ಷತ್ರಿಯಾಶ್ಶಸ್ತ್ರಪಾಣಯಃ
ಕೃಷಿ ವಾಣಿಜ್ಯ ಕಾ ವೈಶ್ಯಾಃ ಶೂದ್ರಾಃ ಪ್ರೇಷಣ ಕಾರಕಾಃ ||೨೯||

ಅಷ್ಟಷಷ್ಟಿಷು ತೀರ್ಥೇಷು ಯಾತ್ರಾಯಾ ಯತ್ಫಲಂ ಭವೇತ್
ಆದಿನಾಥಸ್ಯ ತೀರ್ಥಸ್ಯ ಸ್ಮರಣೇನೈವ ತತ್ಫಲಮ್ ||೩೦||

ಸ್ಪೃತ್ವಾ ಶತ್ರುಂ ಜಯೇತ್ ತೀರ್ಥಂ ಕೃತ್ವಾ ರೈವತಕಾಚಲಮ್
ಸ್ನಾತ್ವಾ ಜನಪದೇ ಕುಂಡೇ ಪುನರ್ಜನ್ಮ ನ ವಿದ್ಯತೇ ||೩೧||

ಯುಗೇ ಯುಗೇ ಮಹಾಪುಣ್ಯಾ ದೃಶ್ಯಂತೇ ದ್ವಾರಕಾಪುರೀ
ಅವತೀರ್ಣೋ ಹರಿರ್ಯತ್ರ ಪ್ರಭಾಸಶಶಿಭೂಷಣಃ ||೩೨||

ಊರ್ಜಯಂತ ಗಿರೌ ನೇಮಿರ್ಯಾಗಾದಿರ್ವಿಪುಲಾಚಲೇ
ಏಷಣಾಮಾತ್ರಮಾದೇವಿ ಮೋಕ್ಷಮಾರ್ಗಸ್ಯ ಕಾರಣಮ್ ||೩೩||

ಪ್ರಭಾಸ ಪುರಾಣೆ-

ಕುಹು ಪೂರ್ಣೇಧಿ ಸಂಕ್ರಾಂತೌ ಚತುರ್ದಶ್ಯಷ್ಟಮಿಷು ಚ
ಯೋ ಭುಂಕ್ತೆ ತರ್ಪಣೇ ಹೀನೇಽಜನಿ ಚಾಂಡಾಲಜನ್ಮಸು ||೩೪||

ವೇಶ್ಯಾಯಾಃ ಸ್ಪರ್ಶನೇಸ್ನಾನಮುಪವಾಸಶ್ಚ ಮೈಥುನೇ
ಸಪ್ತರಾತ್ರೇಣ ಶೂದ್ರತ್ವಂ ಮಾಸೇನ ಪತಿತೋ ಭವೇತ್ ||೩೫||

ಯೂಪಂ ಕೃತ್ವಾ ಪಶೂನ್ ಹತ್ವಾ ಕೃತ್ವಾ ರುಧಿರಕರ್ದಮಮ್
ಯದೇವ ಗಮ್ಯತೇ ಸ್ವರ್ಗಂ ನರಕಂ ಕೇನ ಗಮ್ಯತೇ ||೩೬||

ಇಂದ್ರಿಯಾಣಿ ಪಶೂನ್ ಕೃತ್ವಾ ವೇದಿಂ ಕೃತ್ವಾ ತಪೋಮಯಾಮ್
ಅಹಿಂಸಾಮಾಹುತಿಂ ಕೃತ್ವಾ ಆತ್ಮಯಜ್ಞಂ ಯಜಾಮ್ಯಹಮ್ ||೩೭||

ಮಹಾಭಾರತೇ-

ಧ್ಯಾನಾಗ್ನೌ ಜೀವಕುಂಡಸ್ಥೇ ದಮಮಾರುತ ದೀಪಿತೇ
ಅಸತ್ಕರ್ಮಸಮಾಕ್ಷೇಪಿ ಆತ್ಮಯಜ್ಞಂ ಕುರೂತ್ತಮಃ ||೩೮||

ನಾನಾ ಸ್ಥಾನಾನಿ ದತ್ತಾನಿ ಮಾಗಧಾನಾಂ ಸುರೈರಪಿ
ಜಿನ ಚೈತ್ಯನಿವೇಶಂ ಕಿಂ ತೇಷು ಸರ್ವತ್ರ ದೃಶ್ಯತೇ ||೩೯||

ನಗರೇ ತ್ರೀಣಿ ಚೈತ್ಯಾನಿ ದ್ವಿತಯಂ ಬಾಡನಂ ತಥಾ
ಶದ್ಭುವೆ? ದ್ವಿತಯಂ ಚೈವ ಸತ್ಯ ಕ್ರಿತಯಮೇವ ಚ ||೪೦||

ವಿಕೋ ಗಚ್ಛ ಮಹಾಸ್ಥಾನೇ ಪಂಚಜಾಲಂ ವಿಶೇಷತಃ
ದಶಸಂಖ್ಯೇ ಚ ಯುಗ್ಮೇ ಚ ತ್ರಿಮೂಲೇ ಪಂಚಕಂ ಪುನಃ ||೪೧||

ಮನಾಕ್ಥ್ ವಾಚಾ ಜೈನಾನಾಂ ಬುಧಾನಾಂ ಪುಣ್ಯಹೇತುವೆ
ಗಚ್ಛಾಸ್ತೇಷಾಂ ಚ ನಾಮಾದ್ಯಾ ಅಪಿ ಸರ್ವತ್ರ ವಿಶ್ರುತಾಃ ||೪೨||

ಶಾಲಾ ಶಾಲಾ ನಿವೇಶೇಷು ತೇಷಾಂ ತತ್ರ ವ್ಯವಸ್ಥಿತೇ
ಕಿಂ ಕಥ್ಯಂತೇ ದ್ವಿಜೈರ್ಜಾನಾಃ ಪಾಶ್ಚಾತ್ಯಾ ಸಾಧವಸ್ತಯಾ ||೪೩||

ನಗರ ಪುರಾಣೆ ಪ್ರಭಾಸಪುರಾಣೇ ಚ
ಜಿನೇಂದ್ರೋ ವೀತರಾಗೋರ್ಹನ್ ಕೇವಲೀ ಚಕ್ರಕಾಲವಿತ್
ಏತಾನಿ ಕಸ್ಯ ನಾಮಾನಿ ಷಠಂತೇ ಬಾಲಕೈರಪಿ ||೪೪||

ತುಲಾದಿಬೀಜಂ ಸರ್ವೇಷಾಮಾದಿರ್ವಿಮಲವಾಹನಃ
ಚಕ್ಷುಷ್ಮಾಂಶ್ಚ ಯಶಸ್ವೀ ಚ ಅಭಿಚಂದ್ರಃ ಪ್ರಸೇನಜಿತ್ ||೪೫||

ಮರುದೇವಶ್ಚ ನಾಭಿಶ್ಚ ಭರತಃ ಕುಲಸತ್ತಮಃ
ಅಷ್ಟಮೋ ಮರುದೇವ್ಯಾಂ ಚ ನಾಭೇರ್ಜಾತ ಉರುಕ್ರಮಃ ||೪೬||

ದರ್ಶಯನ್ ಧರ್ಮವೀರಾಣಾಂ ಸುರಾಸುರ ನಮಸ್ಕೃತಃ
ನೀತಿತ್ರಯಸ್ಯ ಕರ್ತಾ ಚ ಯುಗಾದಿ ಪ್ರಥಮೋ ಜಿನಃ ||೪೭||

ನಗರ ಪುರಾಣೆ-

ಭವತಾರಕ ರಹಸ್ಯೇ ದಶಮೇ ರಾಹಸ್ತೇ ಚತುರ್ದಶತೇಽಪ್ಯುಕ್ತಂಚ
ಸ್ಮೃತ್ವಾ ಶತ್ರುಂ ಜಯತೀರ್ಥಂ ||
ಅಕಾರಾದಿ ಹಕಾರಾಂತ ಊರ್ವಾಧೋ ರೇಫ ಸಂಯಂತಂ
ನಾದಬಿಂದು ಕಲಾಕ್ರಾಂತಂ ಚಂದ್ರಮಂಡಲವೇಷ್ಟಿತಮ್ ||
ಏಕ ಏವ ಪರಂ ತತ್ತ್ವಂ ಯೋ ಜಾನಾತಿ ಸ ತತ್ವವಿತ್
ಸಂಸಾರಬಂಧನಂ ಜಿತ್ವಾ ಸ ಗಛೇತ್ರರಮಾಂ ಗತಿಮ್ ||೪೮||

ಪಂಚಾಶದಾದೌ ಕಿಲ ಮೂಲಭೂತೇಸ್ತತೋಧ್ವ ಭೂಮೇ ರಪಿ ವಿಸ್ತರಸ್ಯಾತ್
ಉಚ್ಚತ್ವಮಷ್ಟೈವ ಚ ಯೋಜನಾನಿ ಮಾನಂ ವದಂತೀಹ ಜಿನೇಶ್ವರಾಗ್ರೇ ||೪೯||

ಪದ್ಮಾಸನ ಸಮಾಸೀನಃ ಶ್ಯಾಮಮೂರ್ತಿರ್ದಿಗಂಬರಃ
ನೇಮಿನಾಥ ಇವೆತ್ಯಾದಿ ನಾಮ ಚಕ್ರೆ ಸ ವಾಮನಃ ||೫೦||

ಕಲಿಕಾಲೆ ಮಹಾಘೋರೇ ಸರ್ವಪಾಪ ಪ್ರಣಾಶಕಃ
ದರ್ಶನಾತ್ ಸ್ಪರ್ಶನಾದೇವ ಜಿನತೀರ್ಥ ಮಹಾಸ್ಥಲಃ ||೫೧||

ಊರ್ಜಯಂತಗಿರೌ ನೇಮಿ ಮಾಘ ಕೃಷ್ಣ ಚತುರ್ದಶೀ
ತಸ್ಯ ಜಾಗರಣಂ ಕೃತ್ವಾ ಸಂಜಾತೋ ನಿರ್ಮಲೋ ಹರಿಃ ||೫೨||

ಸಂಕಲ್ಪ ಸುಖಸಂತೋಷಾದ್ವಿಮುಖೇ ಸ್ವಾತ್ಮಜಃ ಸುಖಾತ್
ಕುಜಾಗ್ನಿ ತಾಪಸಂತುಷ್ಟಃ ಶಾಖಾಮೃಗಸಮೌಜಸಃ ||೫೩||

ಈ ಪ್ರಕಾರದಾಗಳಿಂ ಚತುರ್ವೇದಂಗಳೊಳುಮಷ್ಟಾದಶ ಪುರಾಣ ರಹಸ್ಯಂಗಳೊಳಂ ಕೆಲಕೆಲವು ಜಿನಾಗಮಕ್ರಮಂಗಳಂ ಪೇಳಿರುವವುಮಾ ಪುರಾಣಂಗಳಾವಾವೆಂದರೆ.

ಶ್ಲೋಕ || ಶೈವಂ ಸ್ಕಾಂದಂ ಚ ಲೈಂಗ್ಯಂ ಚ ಕೂರ್ಮಂ ವಾಮನಮೇವ ಚ
ವರಾಹಂ ಚ ಭವಿಷ್ಯಂ ಚ ಮಾತ್ಸ್ಯಂ ಮಾರ್ಕಂಡ್ಯಮೇವ ಚ ||
ಬ್ರಹ್ಮಾಂಡಂ ನಾರದೀಯಂ ಚ ಗಾರುಡಂ ವೈಷ್ಣವಂ ತಥಾ
ಶೃಣು ಭಾಗವತಂ ವತ್ಸಂ ಬ್ರಾಹ್ಮಂ ಪಾದ್ಮಂ ತತಃ ಪರಮ್ ||
ಇತ್ಯಾದಯೋ ಪುರಾಣಾಸ್ಸ್ಯುರ್ಭೇದಾಸ್ಸಂತಿ ತ್ವನೇ ಕಥಾ ||೧||

ಇಂತು ವೇದ ಪುರಾಣಾದಿಗಳಂ ವಿಪರೀತ ಮಿಥ್ಯಾ ಕರ್ಮೋದಯದೊಳೀ ಹುಂಡಾವಸರ್ಪಿಣಿಕಾಲಶಕ್ತಿಯೊಳೆ ದ್ರವ್ಯಮಿಥ್ಯಾತ್ವಂ ಪುಟ್ಟೆ ಕುಮತಿ ಕುಶ್ರುತಿ ಜ್ಞಾನಂ ಪುಟ್ಟಿ ಪೂರ್ವಾಪರ ವಿರುದ್ಧವಾಗಿ ದೃಷ್ಟೇಷ್ಟಕ್ಕೆ ಸತ್ಯಮಲ್ಲದ ಶಾಸ್ತ್ರಂಗಳಂ ರಚಿಸಿರ್ದವವರೊಳು ವಿಚಾರಿಸಿ ನೋಳ್ಪಾಗಲನೇಕ ಸಂಶಯಂ ಪುಟ್ಟುವುದರಿಂ ಬುದ್ಧಿಯೊಡೆಯರ್ ಗ್ರಹಿಸರೆಂದು ಪೇಳಿ

ಶ್ಲೋಕ || ಅವ್ರಣೇ ಮೃಗಶಾಬಸ್ಯ ಪ್ರತ್ಯಕ್ಷಂ ಮೃತದರ್ಶನೇ
ತಕ್ಷಣಂ ಖಾದಯೇತ್ಪುಣ್ಯಂ ತ್ಯಕ್ತಂ ಚೆನ್ನರಕಂ ವ್ರಜೇತ್ ||
ನದೀತೀರೇ ವಟೇವೃಕ್ಷೇ ಬಾಲರಂಡಾಂ ರಜಸ್ವಲಾಮ್
ಬಲಾತ್ಕಾರೇಣ ಗೃಹ್ಣೀಯಾತ್ಕೋಟಿ ಯಜ್ಞಫಲಂ ಭವೇತ್ ||
ಕಾಮಃ ಪುಣ್ಯವಶಾಜ್ಞಾತಃ ಕಾಮಿನೀ ಪುಣ್ಯಪ್ರೇರಿತಾ
ಸೇವ್ಯಾಸೇವ್ಯ ಚ ಕರ್ತವ್ಯಂ ಸ್ತ್ರೀರತ್ನಂ ದುಷ್ಕುಲಾದಪಿ ||

"ಸ್ತ್ರಿಯೊ ಮೇಧ್ಯಾಸ್ತು ಸರ್ವತ್ರ" ಎಂಬುದಲ್ಲದೆ-

ವೇಶ್ಯಾಯಾಃ ದರ್ಶನಂ ಪುಣ್ಯಂ ಸ್ಪರ್ಶನಂ ಪಾಪನಾಶನಮ್
ಚುಂಬನಂ ಸರ್ವ ತೀರ್ಥಸ್ಯಾನ್ಮೈಥುನಂ ಮೋಕ್ಷಸಾಧನಮ್ ||

ಗಂಡಕೀನದಿಯಂ ದೇವತಾಸ್ವರೂಪಂ ಸೂಳೆಯೆಂಬೀ ಭಾವದಿಂ ಕೂಡಿದೊಡೆ ವೇಶ್ಯಾಗಮನ ಫಲಪ್ರಾಪ್ತಿಯಪ್ಪುದು.

ಶ್ಲೋಕ || **ಯಾವದಸ್ಥಿ ಮನುಷ್ಯಾಣಾಂ ಗಂಗಾತೋಯೆನ ತಿಷ್ಠತಿ**
ತಾವದ್ವರ್ಷ ಸಹಸ್ರಾಣಿ ಪಿತಾ ಸ್ವರ್ಗೇ ಮಹೀಯತೇ ||

ಇವು ಮೊದಲಾಗಿ ಸ್ವೇಚ್ಛೆಯಿಂ ನಾನಾ ಪ್ರಕಾರದಿಂದೆ ಕರ್ತೃಪ್ರಾಮಾಣ್ಯವಿಲ್ಲದ ವೇದ ಶಾಸ್ತ್ರ ಪುರಾಣ ಮೊದಲಾದವು ಪ್ರಮಾಣಮಲ್ಲ. ಸರ್ವಜ್ಞಪ್ರಣೀತಮಪ್ಪಾರ್ಷೇಯ ಪರಮಾಗಮತತ್ವಂ ಪ್ರಮಾಣಮಪ್ಪುದು.

ಶ್ಲೋಕ || **ಆಪ್ತೋಪಜ್ಞಮನುಲ್ಲಂಘ್ಯ ಮಧ್ಯಷ್ಟೇಷ್ಟ ವಿರೋಧಕಂ**
ತತ್ವೋಪದೇಶ ಕೃತ್ಸರ್ವಂ ಶಾಸ್ತ್ರಂ ಕಾಪಥಘಟ್ಟನಂ ||

ಅಂತಪ್ಪ ಶ್ರುತಾರ್ಣವದೊಳ್ ಶಲಾಕಪುರುಷರ್ ಮೊದಲಾದನೇಕ ಸತ್ಪುರುಷರ ಭವಾವಳಿ ಸಹಿತಮವರ ವೃತ್ತಾಂತಮೆಲ್ಲಮಂ ಪೇಳ್ವುದು ಪ್ರಥಮಾನುಯೋಗಮೆಂಬುದು. ತ್ರಿಲೋಕಮಂ ಸವಿಸ್ತರಂ ಸಾಮಾನ್ಯ ವಿಶೇಷಂಗಳಂ ಪ್ರಮಾಣದಿಂ ಗಣಿಯಿಸಿ ಪೇಳ್ವುದು ಕರಣಾನುಯೋಗಮೆಂಬುದು, ಗೃಹಸ್ಥರ ಯತಿಗಳ ಚಾರಿತ್ರಾನುಷ್ಠಾನಂಗಳಂ ಪೇಳ್ವುದು ಚರಣಾನುಯೋಗಮೆಂಬುದು. ದ್ರವ್ಯಾಸ್ತಿಕಾಯ ತತ್ವ ಪದಾರ್ಥಂಗಳಂ ನಿಸ್ಸಂದೇಹಮಾಗೆ ಯಥಾಸ್ಥಿತಿಯಿಂ ಪೇಳ್ವುದು ದ್ರವ್ಯಾನುಯೋಗಮೆಂಬುದಿಂತು ಚತುರುದಧಿ ಸಿದ್ಧಾಂತ ಮಹಾಶಾಸ್ತ್ರಸಾರದೊಳುಳ್ಳ ಪರಮಾಗಮಮಂ ಯಥಾಸ್ಥಿತಿಯಿಂ ಪೇಳ್ವುದುಂ ಸಭೆಯುಂ ಸಭಾಪತಿಯುಂ ಮೆಚ್ಚಿ ಜಿನಮತಶಾಸ್ತ್ರಮೆ ಶಾಸ್ತ್ರಂ ಜನೇಶ್ವರನೆ ಪ್ರಾಣಿಗಳ್ಗೆ ಪರಮಾಪ್ತಂ ಜಿನತಪಸ್ವಿಗಳೆ ತಪಸ್ವಿಗಳೆಂದು ನಿಶ್ಚೈಸಿ ಜೈನೋಪಾಧ್ಯಾಯರ್ಗೆ ವಂದನಪೂರ್ವಕಂ ಪ್ರಶಂಸೆಗೆಯ್ದು ಜಯಪತ್ರಂಗುಡೆ ತತ್ವ ವಿಚಾರದಕ್ಷರೆಲ್ಲರ್ ಸನ್ಮಾರ್ಗಮಂ ಪಿಡಿದರ್, ಕೆಲಂಬರ್ ದೃಢಚಿತ್ತರಾದರ್.

ಶ್ಲೋಕ || **ಬುದ್ಧೇಃ ಫಲಂ ತತ್ತ್ವವಿಚಾರಣಂ ಚ ದೇಹಸ್ಯಸಾರೋ ವ್ರತಧಾರಣಂ ಚ**
ವಿತ್ತಸ್ಯಸಾರಂ ಖಲುಪಾತ್ರದಾನಂ ವಾ ಚ ಫಲಂ ಪ್ರೀತಿಕರಂ ನರಾಣಾಂ ||

ಎಂಬುದರಿಂದೀ ಚತುರ್ವಿಧದಿಂ ಕೂಡಿಯುಂ ಸತ್ಪುರುಷರ್ ಸಕಲ ದೇಶಂಗಳೊಳ್ ಜೈನಬ್ರಾಹ್ಮಣರ್ ಪೌರೋಹಿತ್ಯ ಮೊದಲಾದ ಕರ್ಮಾದಿಗಳಂ ಜೈನ ಬ್ರಾಹ್ಮಣರಿಂ ಮಾಡಿಸಿಕೊಂಬುದೆ ಯೋಗ್ಯಮೆಂದು ವಸುಪಾಲಮಹಾರಾಜಂ ಜೈನ ಬ್ರಾಹ್ಮಣರ್ಗೆ ಗ್ರಾಮ

ಕ್ಷೇತ್ರ ಗೃಹಾದಿ ದಾನಂಗೊಟ್ಟು ಮಂತ್ರಿಪದ ಪುರೋಹಿತ ವೈದ್ಯ ಜ್ಯೋತಿಷ ಮಂತ್ರವಾದಾದಿಗಳುಮಿವರ್ಗೆ ಸಲ್ಲುವುದೆಂದು ಶಾಸನ ಚಪ್ಪೋಡು ಮಾಡಿಸಿಕೊಟ್ಟು ಬೀಳ್ಕೊಡುವುದುಂ ವೇದಾಂತಾದಿ ಬ್ರಾಹ್ಮಣರ್ ಸಿದ್ಧಾಂತಮಂ ಪಿಡಿದಿಪ್ಪುದರಿಂದವರ್ಗಂ ನಮ್ಮಂತೆ ಮರ್ಯಾದೆಯಿಂ ಮನ್ನಿಸಿ ಯೋಗ್ಯತ್ವಮಂ ಮಾಡಲಕ್ಕುಮೆಂದಾರ್ಹತವಿಪ್ರರ್ ಪೇಳಿ ಸರ್ವರು ಸಮ್ಮತದಿಂದವರಂ ಮನ್ನಿಸಿ ಜೈನೋಪಾಧ್ಯಾಯರಿಲ್ಲವಾದ ಸ್ಥಳಂಗಳಲ್ಲಿ ವೇದಾಂತಿ ಬ್ರಾಹ್ಮಣರ್ ತ್ರಿವರ್ಣಂಗಳಿಗೂ ಪೌರೋಹಿತ್ಯವನ್ನು ಮಾಡಿಸುವಂತೆಯುಂ ದಾನಂಗುಡುವಂತೆಯುಂ ಕಟ್ಟಳೆ ಮಾಡಿಸಿ ಉಭಯ ಬ್ರಾಹ್ಮಣರುಮನ್ಯೋನ್ಯದಿಂ ನಡೆದುಬರುವಂತೆ ನಿಯಮಿಸಿದರಂದಿಂದಿತ್ತ ಸೌರಾಷ್ಟ್ರ ಮಹಾರಾಷ್ಟ್ರ ಗುರ್ಜರ ಬಾಹ್ಲಿಕಾದಿ ದೇಶಂಗಳೊಳ್ ಭಿನ್ನವಿಲ್ಲದೆ ಏಕ ಗೃಹರಾಗಿರ್ದು ಕಾಲಾಂತರದೊಳೆಲ್ಲಾ ವಿಪ್ರರ್ ಜಿನಸಮಯಮಂ ಬಿಟ್ಟು ಮಿಥ್ಯವಂ ಹೊಂದಿದರ್. ಕೆಲರು ಕ್ಷತ್ರಿಯ ವೈಶ್ಯರೊಳೆ ಕೂಡಿದರ್. ದಕ್ಷಿಣದೇಶ ಮೊದಲಾದವರೊಳ್ ಭಿನ್ನಮಾಗಿರ್ದು ಕೆಲಂಬರ್ ಪ್ರತಿನಾಮಧಾರಿಗಳಾಗಿ ಜೈನಸಮಯಮಂ ಬಿಡದಿಪ್ಪರ್ ಮಿಥ್ಯಮಂ ಪೊರ್ದಿದರ್. ಕ್ಷತ್ರಿಯರ್ ಕೆಲರ್ ಬೌದ್ಧ ಚಾರ್ವಾಕಮತಮಂ ಪೊರ್ದಿದರ್. ಕೆಲರ್ ಸಮ್ಯಕ್ತ್ವಮಂ ಬಿಟ್ಟು ವ್ಯಸನಿಗರಾಗಿ ವಿಜಾತಿಸ್ತ್ರೀಯರಂ ಕೂಡಿರ್ದರ್. ವೈಶ್ಯರ್ ನಾನಾ ಭೇದವಾಗಿ ಕೆಲರ್ ಮಿಥ್ಯವಂ ಪೊರ್ದಿದರ್. ಶೂದ್ರರೊಳುಮನೇಕ ವಿಕಲ್ಪಮಾಯ್ತಿಂತು ಜಾತಿಭೇದ ಮತಭೇದಂಗಳೊಳ್ ಪ್ರತ್ಯೇಕ ಪ್ರತ್ಯೇಕಮಾಯ್ತೆಂತೆಂದೊಡೆ

ಶ್ಲೋಕ || ಬ್ರಹ್ಮ ಕ್ಷತ್ರಿಯ ವೈಶ್ಯ ಶೂದ್ರವಿಪಣಿಗೋಪಾಲತೈಲಕ್ರಿಯಾ
ಪಾಂಚಾಲೀ ಘುಟ ಕೃದ್ವಿಚಿತ್ರಪಟ ಕೃದ್ವಸ್ತ್ರಾಭೃದೋ ನಾಪಿತಾ (?)
ವಸ್ತ್ರಕ್ಷಾಲನ ಚರ್ಮಲುಬ್ಧಕ ಕಥಾಚಾಂಡಾಲ ಮಾತಂಗಿನೋ
ಏತೇಷ್ಟಾದಶ ಜಾತಯೋ ಮುನಿವರಾಸ್ಸಂಗೀ ಕೃತಾಸ್ಸಂಕುರಃ||

ಇಂತಷ್ಟಾದಶ ಜಾತಿಗಳೊಳ್ ನೂರೊಂದು ಕುಲಂಗಳೊಳನೇಕ ಭೇದವಾಗಿ ಕಾಲದೋಷದಿಂಬಿಲ್ಲಾಯವನಾಂತಮಾಗಿಯೊಳ್ ನೂರೆಪ್ಪತ್ತು ಭೇದಂಗಳಾಗಿಪ್ಪವಿವರೊಳ್ ಮುಂದೆ ನಾನಾ ಸ್ವರೂಪದಿಂ ಸಹಸ್ರ ಭೇದಂಗಳಪ್ಪವು. ಅವರೊಳೊರ್ವರ್ಗಂ ವಿರೋಧಮುಂ ಪುಟ್ಟಿ ಕ್ರೋಧಮಾನ ಮಾಯಾಗ್ರಸ್ತರಪ್ಪರ್.

ಇಂತೀ ಕಥೆಯಂ ಕೇಳ್ವರ
ಭ್ರಾಂತಿಯು ನೆರೆ ಕೆಟ್ಟು ಬಳಿಕಮಾಯುಂ ಶ್ರೀಯುಂ
ಸಂತಾನವೃದ್ಧಿ ಸಿದ್ಧಿಯ
ನಂತಸುಖಂ ತಪ್ಪದಿಹಪರಂಗಳೊಳಕ್ಕುಂ

ಪರಮಾರ್ಥಮಪ್ಪುವಂ ಮ
ಚ್ಚರಿಸದೆ ಕೋಪಿಸರೆ ಮಾನಮಾಯಕ್ಕೆರಗದೆ
ದರಿಯ ಮಳಲಂತೆ ಜರಿಯದೆ
ನಿರುತಂ ಕೇಳ್ವಾತ ಧರ್ಮದೊಳಗಂ ತಿಳಿವಂ

ಇದು ಸತ್ಯಪ್ರವಚನ ಕಾಲಪ್ರವರ್ತನೋದ್ಧೃತ ದೇವಚಂದ್ರ ವಿರಚಿತ ರಾಜಾವಲಿ ಕಥಾಸಾರದೊಳ್ ಸಿದ್ಧಾಂತ ವೇದಾಂತ ಪ್ರಸಂಗ ಸಂಕ್ಷೇಪಂ

ಸಪ್ತಮಾಧಿಕಾರಂ

ಅಷ್ಟಮಾಧಿಕಾರಂ

ಶ್ರೀ ಸುಜನಸ್ತುತರಖಿಳಕ
ಳಾಸದನರ್ ಸುಗುಣಭೂಷಣರ್ ಸುವಿವೇಕಿಗ
ಳೀ ಸತ್ಕಥೆಯಂ ಕೇಳ್ವುದು
ವೈಷಮ್ಯವನುಳಿದು ಚಿತ್ತಶುದ್ಧಿಯೊಳಿಂತುಂ

ವ || ಮತ್ತಂ ಉತ್ತರ ಮಧುರಾಪಟ್ಟಣದೊಳ್ ಸಾಕಾರರಾಯನೆಂಬನಾತನ ಪೆಂಡತಿ ಶ್ರೀಯಲದೇವಿ ಮೂವರ್ ಪೆಣ್ಗಳಂ ಪಡೆದು ಪುತ್ರಸಂತಾನಮಿಲ್ಲದೆ ದಂಪತಿಗಳ್ ಚಿಂತಿಸುತ್ತಿರ್ದು ತತ್ಪುರದ ಚೈತ್ಯಾಲಕ್ಕೈದಿ ಜಿನಪ್ರತಿಮೆಯಂ ಪೂಜಿಸಿ ಪೊಡೆವಟ್ಟು ತದುಪಾಂತಸ್ಥಿತ ಮುನಿವಾಸದೊಳಿರ್ದ ಸಿದ್ಧಾಂತಕೀರ್ತಿ ಯೋಗೀಂದ್ರರಂ ಬಂದಿಸಿ ಬೆಸಗೊಳ್ವುದುಂ ಪದ್ಮಾವತೀದೇವೀವರದಿಂದೊರ್ವ ಕುಮಾರನಕ್ಕುಮೆಂದು ಬೆಸಸುವುದುಂ ನಾಗೇಂದ್ರನಂಗನೆಯಂ ಪ್ರಾರ್ಥಿಸಿ ಮನೆಗೆ ಬಂದಿಪ್ಪುದುಂ ಗರ್ಭಮಾಗೆ ನವಮಾಸಂ ನೆರೆದು ಶುಭಲಗ್ನ ಮುಹೂರ್ತದೊಳ್ ಗಂಡುಗೂಸಂ ಪಡೆದು ಜಿನದತ್ತ ರಾಯನೆಂದು ಪೆಸರಿಟ್ಟು ಸಲಹುತ್ತಿರೆ ಅಕ್ಷರ ಲೇಖ್ಯ ಗಣಿತಾದಿ ಶಸ್ತ್ರಶಾಸ್ತ್ರವಾಹನಾರೋಹಣಾದಿ ಪರಾಕ್ರಮಸಂಪನ್ನನಾಗಿ ಬೆಳೆದು ಜವ್ವನಂ ನೆರೆಯಲೊಂದು ದಿನಂ ಸಾಕಾರರಾಯಂ ಪರರಾಯರಂ ಸಾಧಿಸಲೆಂದು ಪೋಗಿಬಪ್ಪಲ್ಲಿ ಬಂದರಣ್ಯದ ಬೇಡವಳ್ಳಿಯ ಬೇಡರಾಜನ ಮಗಳ್ ಪದ್ಮಿನಿಜಾತಿಯೆಂದವಳಂ ಬರಿಸಿ ಆಕೆಯ ತಂದೆಯಂ ಬೇಡಿ ಕೂಗಿ ಮಾರಿಯಂ ಕರೆತಂದನೆಂಬಂತೆ ಪಟ್ಟಣಕ್ಕೆ ತಂದು ಕಾಂಜೀರದ ಪಲ್ಲಣಿ ನಂದಮಂ ನೋಡಿ ಸೇವಿಸಿದಂತೆಯವಳಂ ಕೂಡಿರ್ದು ಪಾಲಿಂಗೆ ಪುಳಿ ಸೋಂಕಿ ಕೆಟ್ಟಂತೆ ತನ್ನ ಚಾರಿತ್ರಾನುಷ್ಠಾನಮಂ ಬಿಟ್ಟು ಪಂದಿಯೊಡನಾಡಿದ ಕೆಂದಗರು ಪೇಲ ತಿಂದುದೆಂಬಂತೆ ಮಾಂಸಲೋಲುಪನಾಗಿರಲು ಬೇಡಿತಿಗೊರ್ವ ಮಾರಿದತ್ತನೆಂಬ ಮಗನಾಗೆ ದುಃಚಾರಿತ್ರದಿಂ ನೆಗಳುತ್ತಿರ್ದೊಂದು ದಿನಂ ನರಮಾಂಸಮನಟ್ಟು ಬಡಿಸಲದರೊಳೆ ಅತಿ ಪ್ರೀತನಾಗಿ ದಿನಂಪ್ರತಿಯಲ್ಲು ಪೊಸಬರಂ ಕೊಂಡು ಅಡಿಸುತ್ತಿರೆ ಜನರ್ ತಿಳಿಯೆ ಪಳಿಗಂಜಿ ಆಸ್ಥಾನದೊಳಿರ್ದು ಪಾಕಶಾಲೆಗೆ ಜಂಬೀರಫಲಮಂ ಕೂಡೆಂದಟ್ಟುವುದುಮಾತನಂ ಬಾಣಸಿಗಂ ಕೊಂದಡಿಗೆಯಂ ಮಾಡುತ್ತಮಿಪ್ಪಿನಂ

ಮತ್ತೊಂದು ದಿವಸಂ ಶಬರಿಯು ವೈಹಾಳಿಯಂ ಮಾಳ್ಪ ಜಿನದತ್ತಕುಮಾರನಂ ಕಂಡು ಕೊಲಲ್ಬಗೆದು ಪತಿಯೊಳೆ ಸಂಬಂಧಿಸಿಕೊಂಡು ಆಸ್ಥಾನಕ್ಕೆ ಬಂದಿರ್ದ ಜಿನದತ್ತಕುಮಾರನಂ ಕರೆದು ಕೈಯೊಳೆ ನಿಂಬೆಯಪಣ್ಣನಿತ್ತು ಪಾಕಿಗನ ಕೈಯೊಳ್ ಕೊಟ್ಟು ಬಾಯೆಂದಟ್ಟುವುದುಂ ಮಧ್ಯಮಾರ್ಗದೊಳೆ ಮಾರಿದತ್ತಂ ಕಂಡು ಪಾಪಮಿರ್ದಲ್ಲಿ ಪಾತಾಳಮೆಂಬಂತೆ ತಾನೆ ಕೊಡುವೆನೆಂದು ನಾನಾ ಬಗೆಯೊಳೆ ಬೇಡಿಕೊಂಡೊಡಂಬಡಿಸಿ ಜಿನದತ್ತನ ಕೈಯೊಳಿರ್ದ

ಜಂಬೀರಫಲಮಂ ಮಾರಿದತ್ತಂ ಪಾಕ ಶಾಲೆಗೆ ತಪ್ಪುದುಮಾತನನಾಕ್ಷಣವೆ ಕೊಯಿದಡಿಗೆಯಂ ಮಾಡಿದನಿತ್ತ ಜಿನದತ್ತಂ ವಿಷಣ್ಣ ಚಿತ್ತನಾಗಿ ತದ್ವೃತ್ತಾಂತಮಮಂ ನಿಜ ಜನನಿಯಲ್ಲಿಗೆ ಬಂದು ಪೇಳ್ವುದುಂ ಭೀತಿಯಿಂ ಮಗಂವೆರಸು ಚೈತ್ಯಾಲಯಮನೆಯ್ದಿ ಬಂದಿಸಿ ಸಿದ್ಧಾಂತಕೀರ್ತಿಮುನಿಗಳಂ ಬೆಸಗೊಳ್ವುದುಂ ಇಂದಿನ ದಿನಂ ನಿನ್ನ ಮಗಂಗಪಾಯಂ ಬಪ್ಪುದರಿಂ ಪದ್ಮಾವತಿ ದೇವಿಯ ಸುವರ್ಣಪ್ರತಿಮೆಯಂ ತೆಗೆದುಕೊಂಡು ಜಾತ್ಯಶ್ವಮನೇರಿ ದಕ್ಷಿಣಾಭಿಮುಖಮಾಗತಿದೂರಕ್ಕೆ ಪೋಪುದೆಂಬ ಗುರುನಿರೂಪಮಂ ಕೇಳಿಯಾಕ್ಷಣದೊಳೆ ಸ್ನಾನಂಗೆಯ್ದು ಧೌತವಸ್ತ್ರಮನುಟ್ಟು ಚೈತ್ಯಾಲಯಕ್ಕೆಯ್ದಿ ತ್ರಿಲೋಕಸ್ವಾಮಿಗಭಿವಂದಿಸಿ ಕಕ್ಷದೊಳ್ ನಾಗೇಂದ್ರನರಸಿಯ ಬಿಂಬಮನಳವಡಿಸಿ ಕುದುರೆಯ ಸಾಲೆಗೆ ಬಂದು ನೋಡಲಾಕ್ಷಣಮೆ ಹೇಮವರ್ಣದಶ್ವಂ ಕಾಲ್ಕೆರೆಯುತ್ತೆ ಬರಲದನೇರಿ ಕಡಿವಾಣ ಮಾತ್ರಮಿರ್ದಾತುರಂಗಮಂ ದಕ್ಷಿಣಮುಖಂ ಮಾಳ್ಪುದುಂ ವಾಯುವೇಗದಿಂ ಪೋಗಲ್

ಇತ್ತಲ್ ದುರಾಚಾರಿಯಪ್ಪ ಸಾಕಾರನಾರೋಗಣೆಗೆ ಬಂದು ಆರೋಗಿಸುವಲ್ಲಿ ಮಾರಿದತ್ತನಂ ಕೊಂದಟ್ಟಿರ್ದುದಂ ತಿಳಿದಾಕ್ಷಣಂ ಚತುರಂಗಂಬೆರಸು ಜಿನದತ್ತನಂ ಕೊಲಲಟ್ಟಿ ಬಂದು ಸಮೀಪವರ್ತಿಯಪ್ಪುದುಂ ದೇವಿಯ ಪ್ರತಿಮೆಯಂ ತೋರ್ಪುದುಂ ಬಲಂ ಪಿಂದಾಗೆ ಮುಂದೆ ಮುಂದಕ್ಕೆ ಪೋಗಿ ಮೂರು ದಿವಸಂ ಪೋಗಲೊಂದು ಮಹಾರಣ್ಯದೊಳತ್ಯಂತ ಪಥಶ್ರಮದಿಂ ಕುದುರೆಯಂ ಕಟ್ಟಿ ದೇವಿಯ ಪ್ರತಿಕೃತಿಯಂ ಅಕ್ಕಿಯ ಬನದಡಿಯೊಳಿರಿಸಿ ತಾನು ಧೂಪಿಸಿ ತಚ್ಛಾಯೆಯೊಳೊರಗಿರ್ದು ವಿಶ್ರಮಾನಂತರಂ ಮುಂದಣ್ಗೆ ಪೋಗಲೆಂದು ದೇವಿಯ ಬಿಂಬಮಂ ತೆಗೆಯಲದು ವಜ್ರಲೇಪಮಾದಂತೆ ಭೂಮಿಯಿಂ ಮೇಗಣ್ಗೆ ಬಾರದಿರಲತಿಚಿಂತಾಕ್ರಾಂತನಾಗಿಯಲ್ಲೆ ಮರೆದೊರಗಿರ್ದಂಗಾ ಮಹಾದೇವಿ ಸ್ವಪ್ನದೊಳಿಂತೆಂದಳಾನಿಲ್ಲಿಯೆ ನೆಲೆಗೊಳ್ವೆನೀ ಪಳುವಂ ಪಟ್ಟಣಮಂ ಮಾಳ್ಪೆನೀ ದೇಶಮಂ ನೀನಾಳ್ವೆ ಇವಕ್ಕೆ ಕಾರಣಮೆನ್ನ ಪ್ರತಿಮೆ ಪರುಷಮಾದುದರಿಂ ಲೋಹಮುಮಂ ಸೋಂಕಲ್ ಪೊನ್ನಪ್ಪುದದರಿಂದನ್ಯನಪ್ಪೆ ಎಂಬುದು ಮೆಚ್ಚುತ್ತೆ ಕನಸಂ ನೆನೆದು ಕಡಿವಾಣಮಂ ಪ್ರತಿಬಿಂಬಕ್ಕೆ ಮುಟ್ಟಿಸುವುದು ಕಡೆಯೂಣೆಯಾಗಲಾ ಬನದೊಳನತಿದೂರಳೊಂದು ಶಬರವಳ್ಳಿಯಿರ್ದುದಲ್ಲಿಯ ಶಬರರ್ ಬಂದು ಕಂಡು ಬೆಸಗೆಯ್ಯುತ್ತಿರಲ್ ಕ್ರಮದಿಂದಾ ಅರಣ್ಯಮಂ ಪಟ್ಟಣಮಂ ಮಾಡಿಸಿ ಪೂರ್ವಕೃತಪುಣ್ಯದಿಂದ ಚತುರಂಗಬಲಂಬೆರಸು ರಾಜ್ಯಮನಾಳ್ದು ಪರನೃಪರೊಳ್ ಕಪ್ಪಂಗೊಳ್ವುತ್ತುಂ ಪೊಂಬುಚ್ಚಪುರಮೆಂಬ ಪೆಸರಿಟ್ಟು ಆ ಪುರಕ್ಕುತ್ತರ ಮಧುರೆಯಿಂ ನಿಜಗುರುವುಂ ಜನನಿಯುಂ ಮಂತ್ರಿ ಸಾಮಂತಾದಿ ಚತುರಂಗಮುಮತ್ಯಂತ ರೋಗೋಪಸರ್ಗಮುಳ್ಳನ ಧಾತು ಬಿಡುವಂತೆ ದುಷ್ಟ ಸಾಕಾರನಂ ಬಿಟ್ಟು ಪೊಂಬುಜಪುರಕ್ಕೆ ಬಂದು ಜಿನದತ್ತರಾಯನೊಳ್ ಕೂಡಿ ಸುಖಮಿರೆ

ದಕ್ಷಿಣ ಮಧುರೆಯನಾಳ್ವ ಹರಿವಂಶದ ವೀರಪಾಂಡ್ಯನ ಸುತೆಯರಂ ಮದುವೆಯಾಗೆ ಜಿನದತ್ತರಾಯಂ ಪರುಸಪದ್ಮಾಂಬೆಯ ಪ್ರಸಾದದಿಂ ಕುಬೇರನಂತೆ ಧನಾಧಿಪನುಂ ಈಶಾನನಂತೆಯನೇಕ ದೇಶಾಧೀಶ್ವರನುಂ ಯಮನಂತೆ ಶತ್ರುಮರ್ದನನುಂ

ಇಂದ್ರನಂತೈಶ್ವರ್ಯಯುತನುಂ ದಾನದೊಳ್ ಶ್ರೇಯಾಂಸನುಂ ಪೂಜೆಯೊಳ್ ಭರತೇಶನುಂ ಶೀಲದೊಳ್ ಪ್ರಿಯಮಿತ್ರನುಂ ಉಪವಾಸದೊಳ್ ನಾಗದತ್ತನುಂ ಪೋಲೆ ಜಲ ಕೇಳಿ ವನಕೇಳಿ ಮುಂತಾದುದರಿಂ ಮನೋಭೀಷ್ಟಮಂ ಸಲಿಸುತ್ತಮಿರ್ದೊಂದು ದಿವಸಂ ತಟಾಕಮಂ ನೋಡುತ್ತೆ ಬರುವಲ್ಲಿ ಕೆರೆಯೊಳೆರಡು ಮುತ್ತುಗಳಂ ಕಂಡವಂ ನಾಸಿಕಾಭರಣಮಂ ಮಾಡಿಸಿ ನೋಡಲೊಂದು ಕರಿದು ಮಣಿಯಾಗೆ ತೋರ್ಪುದುಮದಂ ತಾಂ ಲಕ್ಕಿಯ ವನದೊಳೆ ಪ್ರತಿಷ್ಠೆಯಂ ಮಾಡಿಸಿರ್ದ ಶಿಲಾಮೂರ್ತಿಯಪ್ಪ ಪದ್ಮಾಂಬೆಗೊಪ್ಪಿಸಿ ಒಳ್ಳಿಹ ನಾಸಾಭರಣಮಂ ನಿಜಸತಿಗೆ ಕುಡೆ ಮರುದಿವಸಂ ನೋಳ್ಪಾಗಳ್ ಪಲ್ಲಟಮಾಗಿರೆ ಆ ರಾತ್ರಿ ಸ್ವಪ್ನದೊಳ್ ಮೂದಲಿಸಿ ದುಷ್ಷಮಕಾಲ ಪ್ರಾಬಲ್ಯದೊಳ್ ಪರುಷಮಿರಲಾಗದದರಿಂ ಪಾತಾಳಕ್ಕೆ ಪೋಪುದೆಂದು ಪೇಳಿ ಪಾತಾಳಕ್ಕೆ ಪರುಷಮಿಳಿಯೆ ದುಃಖಿತನಾಗಿರ್ದನು.

ಇತ್ತಲುತ್ತರ ಮಧುರೆಯೊಳ್ ಸಾಕಾರರಾಯಂ ದುಶ್ಚಾರಿತ್ರದೊಳುದುಂಬರ ಕುಷ್ಠಂ ಶರೀರದೊಳೆ ಪುಟ್ಟಿ ಪುಳಿತು ಮೋಟನಾಗಿ ಸತ್ತು ದುರ್ಗತಿಗೆ ಸಲ್ವುದುಮಲ್ಲಿಗೊರ್ವ ಮಗನಂ ಕಳುಹಿಸಿರ್ದುದರಿಂ ಕಿರಿಯ ಮಗಂಗೆ ಪೊಂಬುಚ್ಚಪುರಮಂ ರಾಜ್ಯಮುಮಂ ಕೊಟ್ಟು ಜಿನದತ್ತರಾಯಂ ತಪದಿಂ ಸದ್ಗತಿಪ್ರಾಪ್ತನಾದನಲ್ಲಿಂದಿತ್ತ ಕೇರಳ ಕಾಶ್ಮೀರ ಕಾಂಭೋಜ ಅಂಗ ವಂಗ ಪಾಂಡ್ಯ ಮೊದಲಾದ ದೇಶಾಧೀಶ್ವರರೆಲ್ಲಂ ಜಿನಧರ್ಮಮಂ ಪ್ರತಿಪಾಲಿಸುತ್ತಿರ್ದ ಕಾಲದೋಷದಿಂ ಮಿಥ್ಯಮಂ ಪೊರ್ದಿ ಜಿನಧರ್ಮಂ ಕ್ರಮದಿಂ ಕುಂದುತ್ತುಂಬರೆ ಚತುರ್ಥಕಾಲದಿಂದತ್ತಲೀ ಭರತಕ್ಷೇತ್ರದೊಳ್ ಪರ್ವತಂಗಳಲ್ಲಿ ನದಿಗಳ ಸಮೀಪಂಗಳೊಳರಣ್ಯಂಗಳ್ ಮೊದಲಾದ ಮಹಾಸ್ಥಾನಂಗಳೊಳ್ ಅನಾದಿ ಸಂಸಿದ್ಧದಿಂದಕೃತ್ರಿಮ ಚೈತ್ಯಾಲಯಂಗಳ್ ರಜತ ಸುವರ್ಣ ರತ್ನಮಯಂಗಳಿರ್ದು ಕಾಲದೋಷದಿಂ ವೀರಸ್ವಾಮಿಗಳಿಂದಿತ್ತ ಮನುಷ್ಯರ್ಗೆ ಕಾಣದಂತೆ ವಾನವ್ಯಂತರದಿಂ ಪೂಜೆಯಂ ಕೊಳ್ಳುತ್ತುಂ ಮರೆಗರೆವುದುಂ ಧಾರ್ಮಿಕರಾದ ಕ್ಷತ್ರಿಯ ವೈಶ್ಯಾದಿಗಳ್ ತಂತಮ್ಮ ಶಕ್ತಿಗೆ ತಕ್ಕಂತು ಗ್ರಾಮ ಪುರ ಖೇಡ ಮಡಂಬ ಪತ್ತನ ದ್ರೋಣಾಮುಖಾದಿಗಳೊಳ್ ವನಂಗಳೊಳ್ ಪರ್ವತಾದಿಗಳೊಳ್ ಮಹಾಕೂಟ ತ್ರಿಕೂಟ ಪಂಚಕೂಟಾದಿ ಮಹಾಪೂತ ಸಿದ್ಧಕೂಟಾದಿ ಜಿನಾಲಯಂಗಳಂ ಮಾಡಿಸಿ ಗ್ರಾಮ ಕ್ಷೇತ್ರಾದಿಗಳಂ ಶಾಸನ ದತ್ತಮಾಗಿ ಕೊಟ್ಟಿರ್ಪರವರೊಳ್ ಸಮ್ಯಗ್ದೃಷ್ಟಿಯಪ್ಪ ಚಾತುರ್ವರ್ಣಂಗಳ್ ದಾನ ಪೂಜೆ ಶೀಲೋಪವಾಸಂಗಳಿಂ ಪುಣ್ಯೋಪಾರ್ಜನೆಯಂ ಮಾಡುತ್ತಮಿರ್ದರ್.

ಇತ್ತಲ್ ನಗರಪುರದೊಳ್ ಚಂಡವಿಕ್ರಮನೆಂಬರಸನ ಸಾಮಂತಂ ನಿಂಬದೇವನೆಂಬಂ ಸಮ್ಯಗ್ದೃಷ್ಟಿಯಾಗಿ ಅಣುವ್ರತಧಾರಿಯಪ್ಪುದರಿಂ ಕಾಷ್ಠಕೃಪಾಣಮಂ ಪೊರೆಯೊಳಿಟ್ಟು [ವೋಲಯಿ]ಸುತ್ತಿರೆ ದುರ್ಜನರೀತನಂ ಪರಿಭವಿಸಲೆಂದು ಮಿಥ್ಯಾದೃಷ್ಟಿಯಪ್ಪರಸಂಗಂ ಪೇಳ್ವುದುಂ ಪರೀಕ್ಷಿಸಲ್ ತಮ್ಮ ತಮ್ಮ ಕೃಪಾಣಂಗಳಂ ಸಭೆಯೊಳೆ ಕಾಣಿಸುತ್ತುಂ ನಿಂಬದೇವಸಾಮಂತನಂ ನಿನ್ನ ಕತ್ತಿಯಂ ತೋರುವುದೆಂಬುದುಂ ಭಯಸ್ಥನಾಗಿ ಪಂಚನಮಸ್ಕಾರಮಂ ನೆನೆಯುತ್ತೆ ದೃಢವ್ರತನಪ್ಪುದರಿಂದೀ ಉಪಸರ್ಗಂ ಪಿಂಗುವನ್ನ

ಮಾಹಾರಶರೀರನಿವೃತ್ತಿಗೆಯ್ದಿಪ್ಪಿನಮರಸನಾಗ್ರಹದಿಂ ತೆಗೆಯಿಸುವಲ್ಲಿ ಜಿನಶಾಸನದೇವಿ ಪದ್ಮಾವತಿಯಾ ಕಾಷ್ಠಮಂ ನಿಶಿತಮಾದ ಜಾಜ್ವಲ್ಯಮಪ್ಪ ಖಡ್ಗರತ್ನಮಾಗೆ ನಿರ್ಮಿಸಿ ತೋರೆಯರಸಂ ಭಯಂಗೊಂಡು ಪೊರೆಯೊಳಿಕ್ಕಿಸಿ ತನಗೆ ಪೇಳ್ದರ್ಗೆ ಶಿಕ್ಷೆಯಂ ಮಾಡಲ್ ಬಗೆವುದುಂ ಸಾಮಂತಂ ತನ್ನ ವ್ರತಮಹಾತ್ಮೆಯಂ ಪೇಳ್ದು ಶ್ರಾವಕವ್ರತನಿರತನಾದಂ

ಮತ್ತಂ ಶಕವರುಷಂ ೩೦೦ ಸಂದಂದು ಕರ್ಣಾಟದೊಳ್ ಕೊಳ್ಳಾಗಾಲಮೆಂಬ ಪುರದೊಳ್ ಮಾಧವಭಟ್ಟನೆಂಬ ಬ್ರಾಹ್ಮಣನ ಪೆಂಡತಿ ಶ್ರೀದೇವಿಯೆಂಬೊಳ್ಗೆ ಗರ್ಭಮಪ್ಪುದುಂ ಜಿನಸಮಯದೊಳ್ ಶ್ರದ್ಧೆ ಪುಟ್ಟೆ ವ್ರತ ನೋಂಪಿ ದಾನ ಪೂಜಾ ಶೀಲೋಪವಾಸಾದಿಗಳಂ ಮಾಡಲರ್ತಿ ಪುಟ್ಟೆಯಲ್ಲಿಪ್ಪ ಚೈತ್ಯಾಲಯಕ್ಕೆಯ್ದಿ ಧರ್ಮಾಚಾರ್ಯರೊಳ್ ಪರಮಾಗಮಮಂ ಕೇಳ್ದು ಸಮ್ಯಕ್ತ್ವಂ ದೊರೆಕೊಳೆ ಮಾಧವಭಟ್ಟಂ ತನ್ನ ಮೈದುನಂಬೆರಸೈದು ಸಂತಾನದವರ್ ದೀಕ್ಷಾನ್ವಯಕ್ರಿಯೆವಿಡಿದು ಜಿನಮತಮನಾಚರಿಸಲಾ ಶ್ರೀದೇವಿಯ ಗರ್ಭಂ ಬೆಳೆದು ನವಮಾಸಂ ನೆರೆಯೆ ಶ್ರವಣ ನಕ್ಷತ್ರದೊಳ್ ಪುತ್ರೋತ್ಪತ್ತಿಯಪ್ಪುದುಂ ಜಾತನಾಮಕರ್ಮಾದಿಗಳಂ ಮಾಡಿ ಪೂಜ್ಯಪಾದನೆಂದು ಪೆಸರಿಟ್ಟು ಸಲಹಿದೊಡೆ ಜೈನಶಾಸ್ತ್ರಂಗಳೊಳ್ ಬಲ್ಲಿದನಾಗಿ ಬಾಲಕಾಲ ದೊಳೆ ಜಿನದೀಕ್ಷೆಯಂ ತಾಳಿ ದಕ್ಷಿಣ ದಿಗ್ಭಾಗದ ಶಿಲೋಚ್ಚಯದೊಳ್ ತಪಂಗೆಯ್ಯುತ್ತಿರ್ದಲ್ಲಿ ಚೈತ್ಯಾಲಯದೊಳಿಪ್ಪ ಶ್ರೀಪಾರ್ಶ್ವಜಿನಪ್ರತಿಮೆಯಂ ವಂದಿಸುತ್ತಮಿಪ್ಪುದುಮಾ ಸಮೀಪದ ಮುಡಿಗುಂಡಮೆಂಬ ಗ್ರಾಮದೊಳ್ ಪಾಣಿನ್ಯಾಚಾರ್ಯನೆಂಬ ಬ್ರಾಹ್ಮಣಂ ವ್ಯಾಕರಣಶಾಸ್ತ್ರಮಂ ಮಾಡಲೆಂದು ಪ್ರಾರಂಭಿಸಲಾ ಸೂತ್ರ ಪೂರ್ಣವಾಗುವುದರೊಳಗೆ ಆತಂಗವಸಾನಕಾಲಂ ಬರೆ ಪೂಜ್ಯಪಾದಂಗೀ ವ್ಯಾಕರಣಂ ನಿನ್ನಿಂದಂ ಸಂಪೂರ್ಣಮಪ್ಪುದಿದಂ ನಿರ್ವಹಿಸುವುದೆಂದು ಕೇಳ್ವುದುಂ ಪೂಜ್ಯಪಾದಂ ತಮ್ಮ ಸೋದರ ಮಾವನಪ್ಪ ಪಾಣಿನ್ಯಾಚಾರ್ಯಗಂತೆ ಮಾಳ್ಪೆನೆಂದು ಬೋಧಿಸಿ ಬಂದು ಒಂದು ದಿವಸಂ ಭಿಕ್ಷಾರ್ಥಮಾಗಿ ಪೋಪ ಮುನಿಪನಿದಿರೊಳ್ ಮಹಾಸರ್ಪಂ ಆರ್ಭಟೆಯಿಂದಿದಿರೊಳ್ ಬಂದು ನಿಲ್ವುದುಂ ಪಾಣಿನ್ಯನೆಂದರಿದು ತಿರುಗಿ ಯೋಗಸ್ಥಾನಮಪ್ಪ ಪರ್ವತಕ್ಕೆ ಬಂದು ಜೈನೇಂದ್ರವ್ಯಾಕರಣಸೂತ್ರಮಂ ರಚಿಸಿ ತದನಂತರಂ ಪಾಣಿನಿ ಸೂತ್ರವೃತ್ತಿಯಂ ರಚಿಸಿದಂ. ಧರಣೇಂದ್ರ ಪದ್ಮಾವತಿಗಳಾ ಮುನಿಪನ ತಪೋಬಲಕ್ಕಂ ಮೆಚ್ಚಿ ಬೆಸಗೆಯ್ಯುತ್ತಮಿರೆ ಬಳಿಕೊಂದು ದಿವಸದೊಳ್ ಕೊಳ್ಳಾಗಾಲಕ್ಕಂ ಬಾವಲಿಗೆವರೆ ಆ ಮುನೀಂದ್ರನ ಮುನ್ನಿನ ತಂಗಿ ಪತಿವಿಯೋಗದೊಳೆ ಅತ್ಯಂತ ದಾರಿದ್ರ್ಯಂ ಬಂದು ತನಗುಳ್ಳ ನಾಗಾರ್ಜುನನೆಂಬೊರ್ವ ಮಗನಂ ದ್ವಿಜರಾಕಳ ಕರುಗಳಂ ಕಾಯಿಸಿ ಉದರಮಂ ಪೊರೆಯುತ್ತಿಪ್ಪಳ್ ಚರಿಗೆವರ್ಪ ಮುನೀಂದ್ರನಂ ಕಂಡು ಶ್ರದ್ಧಾದಿ ಗುಣದಿಂ ವಿಧಿಪೂರ್ವಕಮಾಗೆ ಶುಷ್ಕಾಹಾರಂಗೊಟ್ಟು ನಿರಂತರಾಯಮಾಗೆ ಪರಸಿಪೋಪ ಋಷಿಯರಂ ಬಂದಿಸಿ ತನ್ನ ಬಡತನದ ಬಲ್ಪನೆಲ್ಲಂ ಪೇಳಿಯರುದಿಂಗಳಿಂದುಪ್ಪಿಗೆ ಬಗೆಗಾಣದೆ ಸಪ್ಪೆಯಂ ಕೊಳ್ವೆನೆನ್ನ ಬಡತನಂ ಪಿಂಗುವಂತೆ ಕಟ್ಟುಮಾಡೆಂದೊಡೆ ಪೂರ್ವದೊಳುಪಾರ್ಜಿಸಿದ ಪಾಪೋದಯಮದರಿಂದೀಗಲ್ ಬಯಸಲೆಂತಪ್ಪುದಿನ್ನಾದೊಡಂ ದಾನ ಪೂಜೆ ಶೀಲೋಪವಾಸಮಂ ನಿರ್ವ್ಯಾಜದಿಂ ಮಾಡಿದೊಡೈಶ್ವರ್ಯಂ ದೊರೆಕೊಳ್ಗುಮೆನೆ ನಾನೀಗಳತ್ಯಂತ ದರಿದ್ರೆಯ ದಾನ ಪೂಜಾದಿಗಳಂ

ಮಾಳ್ಪೆನೆಂಬುದು ಬಂಜೆಯ ಮಗಂಗೆ ಮದುವೆಯಂ ಮಾಳ್ಪೆನೆಂಬೆಗ್ಗನಂ ಪೋಲ್ಕುಮೆಂದು ದುಃಖಂಬಡೆ ಮುನಿಪಂ ಕರುಣಿಸಿ ಲೋಹಮಾವುದೊಂದಿರ್ದೊಡೆ ತಪ್ಪುದೆನೆ ತಳಿಗೆ ಚಂಬು ಕೊಡಲಿ ಕಬ್ಬುನಾದಿಗಳೊಂದಿಮಿಲ್ಲದಿರೆ ನಾಗಾರ್ಜುನನೆಂಬ ಹುಡುಗನುಣ್ಬುದೊಂದು ಕಬ್ಬಿನದ ಬಟ್ಟಲನೀಯಲದಂ ತಮ್ಮ ಕೈಯಿಂ ಪೂಸಿ ಒಲೆಯೊಳೆರಡು ಜಾವಮಿಟ್ಟಿರ್ದು ತೆಗೆಯಲಾಣೆಯಪ್ಪುದೆಂದು ಮುನಿಪಂ ಯೋಗಸ್ಥಾನಕ್ಕೆ ಪೋಗಲಿತ್ತ ಕರುಗಾಯಲ್ ಪೋಗಿರ್ದ ನಾಗಾರ್ಜುನನುಣಲ್ ಬಂದು ಬಟ್ಟಲಂ ಕಾಣದೆ ಚಂಡಿಯಂ ಮಾಡಿದೊಡೆ ನಿಜಮಾತೆಯಿಂತೆಂದಳ್ : 'ನಿಮ್ಮ ಸೋದರಮಾವನಪ್ಪ ಯತೀಂದ್ರನೆನ್ನ ಬಡತನಮಂ ಕೇಳಿ ಒಲೆಯೊಳಿಡಿಸಿ ಪದಿನಾರು ಘಳಿಗೆಗೆ ಸುವರ್ಣಮಪ್ಪುದೆಂದು ಪೋದರೆನೆ: ನೋಡಲೆಂದು ನಾಗಾರ್ಜುನನೊಂದು ಜಾವದೊಳೆ ತೆಗೆಯಲೆಂಟು ಬಣ್ಣ ಬಂದಿರಲಾ ವಿದ್ಯಮಂ ಕಲಿಯಲೆಂದು ಮುನಿಪನಲ್ಲಿಗೆಯ್ದಿ ಕಾಡುವುದುಮವರೆಂದರೆಮ್ಮ ರೂಪಂ ಧರಿಸಿದಲ್ಲದೀ ವಿದ್ಯಂ ಕೈಸಾರಲರಿಯದೆಂದು ಪದ್ಮಾವತಿಯ ಮಂತ್ರಾಕ್ಷರಮಂ ಜಪಿಸೆಂದುಪದೇಶಂ ಮಾಡೆ ಕೆಲದಿವಸಮಿರ್ದು ಚಂಚಲಚಿತ್ತದಿಂ ದೇಶಾಟನಂ ಮಾಡುತ್ತಮನೇಕ ಗಿರಿಗಹ್ವರಾರಣ್ಯಂಗಳಂ ಚರಿಸುತ್ತ ನೀಲಾಚಲದುತ್ತರಕರ್ಣಾಟ ಮಧ್ಯದೊಳಿರ್ದ ಪರ್ವತ, ದಕ್ಷಿಣಭಾಗದೊಳಿರ್ದ ಗುಹೆಯ ಬಾಗಿಲೊಳ್ ಶ್ರಮದಿಂದೊರಗಿರ್ದನಲ್ಲಿರ್ದ ಪದ್ಮಾವತಿಯು ಪ್ರತ್ಯಕ್ಷಮಾಗಿ ಸಿದ್ಧರಸಪ್ರಯೋಗಮಂ ತೋರೆ ಕಲ್ತು ತದ್ಗಿರಿಯಂ ಕನಕಗಿರಿಯಂ ಮಾಡಲೆಂದುದ್ಯೋಗಿಸೆ ಬ್ರಹ್ಮದೇವಂ ಬಂದು ಮಾಣಿಸೆಯಾ ಪರ್ವತಕ್ಕೆ ಹೇಮಗಿರಿಯೆಂಬನ್ವರ್ಥಮಂ ಮಾಡಿಯದರೊಳೆ ಪಾರ್ಶ್ವಜಿನ ಚೈತ್ಯಾಲಯಮಂ ನಿರ್ಮಿಸಿ ಬ್ರಹ್ಮ ಪದ್ಮಾವತಿ ಪ್ರತಿಷ್ಠೆಯಂ ಮಾಡಿ ಎಂಟು ಗ್ರಾಮಮಂ ದೇವತಾವಿನಿಯೋಗಕ್ಕಂ ಶಾಸನದತ್ತಮಾಗೆ ಕೊಟ್ಟು ಬಾವಿ ಕೊಳ ಪೂದೋಟಾದಿಗಳಂ ನಿರ್ಮಿಸಿ ಕೆಲವು ದೇಶಕ್ಕೆ ತಾನೇ ಪ್ರಭುವಾಗಿ ಯಂತ್ರ ಮಂತ್ರ ತಂತ್ರಾದಿಗಳಂ ಕಲ್ಪಿಸೆ ಸಿದ್ಧನಾಗಾರ್ಜುನನೆಂಬ ಕೀರ್ತಿ ದಿಗಂತವ್ಯಾಪಿಯಾಗಿರ್ದುದಂ ಪ್ರತ್ಯಂತವಾಸಿಗರರಿದು ಸೈರಿಸದೆ ಕೊಲಲ್‌ಬಗೆದು ಸಕಲ ವಿದ್ಯಾಪರಿಣತೆಯರಪ್ಪ ಈರ್ವರ್ ಸ್ತ್ರೀಯರಂ ಕಳುಹಿಸಿದೊಡವರ್ ಬಂದು ತಮ್ಮ ವಿದ್ಯಮಂ ತೋರ್ಪುದುಮವರಂ ಪರಿಗ್ರಹಿಸಲವರ್ ಮತಿಭ್ರಂಶಮಪ್ಪ ಮದ್ದನಿಕ್ಕುವುದುಮಿವರಿಂ ತನಗಪಾಯಮಕ್ಕುಮೆಂದರಿದು ಘುಟಿಕೆಯಂ ಬಾಯೊಳಿಟ್ಟು ಬಿಡದಿರ್ಪುದುಮೊಂದು ದಿನಂ ಕೆಲಂಬರ್ ರಾಜರ್ ಬಂದೀತನ ಮತಿಭ್ರಂಶಮಂ ತಿಳಿದು ಸಮರಮನೊಡರ್ಚೆ ಹಿಮಗಿರಿಯೆಂಬ ಬೆಟ್ಟಮನೇರಿಯಲ್ಲಿ ಪುರಮಂ ಮಾಡಿಸಿ ಗೋಪಾಲದೇವರ ಗುಡಿಯಂ ನಿರ್ಮಿಸಿ ಕೆಲದಿನಮಿರ್ದಲ್ಲಿಂ ಸ್ತ್ರೀಯರ್ ಒಡವರೆ ಶ್ರೀಶೈಲಮನೆಯ್ದಿದನಲ್ಲಿ ಪೂರ್ವ ಮಹಾತ್ಮ್ಯಮೆಂತೆಂದೊಡೆ

ಪೂರ್ವದೊಳನೇಕ ಋಷಿಗಳಾವಾಸವಾಗಿರ್ದುದರಿಂ ಋಷಿನಿವಾಸಗಿರಿಯೆಂಬನ್ವರ್ಥನಾಮಂ ಬಹುಕಾಲಂ ವರ್ತಿಸುವಲ್ಲಿ ಸಂಪೂಜ್ಯತೀರ್ಥದೊಳ್ ಚಂಪಾಪುರದ ಯಶೋಧರಮಹಾರಾಜನನೇಕ ದೇಶಮಂ ಸಾಧಿಸಿ ಬಂದು ಪ್ರತಿಪಾಲಮೆಂದೊಂದು ಪಟ್ಟಣಮಂ ಮಾಡಿಸಿ ರಾಜ್ಯಂಗೆಯ್ದು ಶ್ರೀಧರನೆಂಬ ಮಗಂಗೆ ರಾಜ್ಯಮಂ ಕೊಟ್ಟು ತಪಮಂ

ಕೈಕೊಳ್ವುದುಂ ಶ್ರೀಧರಂ ರಾಜ್ಯಮನೊಲ್ಲದೆ ಆ ಗಿರಿಯೊಳ್ ದ್ವಾದಶ ವಿಧ ತಪಂಗೆಯ್ದುಮಾ ಋಷಿನಿವಾಸ ಪರ್ವತದೊಳೆ ಮುಕ್ತಿಯಂ ಪಡೆವುದುಮಾ ಶ್ರೀಧರಮುನೀಂದ್ರರ ನಿರ್ವಾಣಪೂಜೆಗೆಯಾ ಗಿರಿಗೆ ಶ್ರೀಪರ್ವತಮೆಂದು ಪೇಳ್ವುದುಮಲ್ಲಿಂದಿತ್ತಲಾ ಗಿರಿಗೆ ಶ್ರೀಶೈಲಮೆಂಬ ಪೆಸರಾಯ್ತು. ತದ್ಗಿರಿಯ ದಕ್ಷಿಣ ಭಾಗದೊಳ್ ವಟವೃಕ್ಷದಡಿಯೊಳ್ ಕೇವಲಜ್ಞಾನಂ ಪುಟ್ಟಿ ಮುಕ್ತರಾದುದರಿಂ ಸಿದ್ಧವಟವೆಂಬ ಪೆಸರಾಯ್ತು. ಕೇವಲಪೂಜೆಗೆ ಚತುರ್ನಿಕಾಯದೇವರ್ ನೆರೆದುದಾಸ್ಥಾನಕ್ಕಮರಾವತಿಯೆಂಬ ಪೆಸರಾಯ್ತು.

ತದ್ಗಿರಿಯೊಳಿರ್ದ ಮಲ್ಲಿಕಾಲತಾವೇಷ್ಟಿತಮಪ್ಪರ್ಜುನವೃಕ್ಷದಡಿಯೊಳ್ ಶ್ರೀಧರ ಮುನಿ ತಪದಿಂ ಸಪ್ತರ್ಧಿ ಪುಟ್ಟಲಂದು ಖೇಚರರ್ ಮಲ್ಲಿಗೆ ಮಾಲತಿ ಚಂಪಕಾದಿ ಕುಸುಮಂಗಳಿಂ ಮಾಲೆಗಳಿಂ ಪೂಜಿಸಿದುದರಿಂದಾ ಸ್ಥಾನಕ್ಕೆ ಮಲ್ಲಿಕಾರ್ಜುನಮೆಂಬ ಪೆಸರಾಯ್ತು. ಇಂದ್ರಪ್ರಭನಾ ಮುನಿಯಂ ಭದ್ರಿಸಲೆಂದು ವೃದ್ಧರ್ ಬಂದಿರ್ದು ತಮ್ಮಂ ಪ್ರಶಂಸೆಗೆಯ್ಯಲ್ ವೃದ್ಧಗಿರಿಯೆಂದಾಯ್ತು. ಆ ಋಷಿಪುತ್ರನಪ್ಪ ಯಶೋಧರನ ಮೈದುನರ್ ವಿನೋದದಿಂ ಮುಂಡಿವಂಶಜನೆಂದು ಯಶೋಧರನಂ ಕರೆಯಲಾ ವಂಶಂ ಮುಂಡಿವಂಶಮೆಂದಾಯ್ತು, ಮುಂಡಿವಂಶಜನೆಂದಾ ಯಶೋಧರನಂ ಕರೆದರ್.

ಇಂತು ವರ್ಧಮಾನ ತೀರ್ಥಾವತಾರದೊಳೆ ಆಸ್ಥಾನಂ ಪ್ರಸಿದ್ಧಿಯಂ ಪಡೆದಲ್ಲಿ ತ್ರಿಕೂಟ ಸಿದ್ಧಕೂಟಮೆಂಬ ಜಿನಾಲಯಮಿರ್ದವು. ಅಂತಿರ್ಪಿನಂ ಹೇಮಾಂಗಮಹಾರಾಜನ ಮಂತ್ರಿ ಬೌದ್ಧಮತಾನುಸಾರಿಯಾದುದರಿಂದಾತನ ಗುರುವಪ್ಪ ಸಂಘಶ್ರೀಯ ಶಿಷ್ಯಂ ಬಂಧುಶ್ರೀಯಂ ವಶೀಕೃತಂ ಮಾಡಿ ಬೌದ್ಧರನಾ ದೇಶದೊಳೆ ಪ್ರಬಲಮಾಗಿರ್ದರವರೆಲ್ಲರ್ ಹೇಮಶೀತಲಮಹಾರಾಜನ ದಿವಸದೊಳೆ ಸಿಂಗಳದ್ವೀಪಕ್ಕೆ ಪೋದಿಂ ಬಳಿಕ್ಕಮಾ ಗಿರಿಯೊಳಿರ್ದ ಚೈತ್ಯಾಲಯಂಗಳ್ ಪೊರ್ಗಿಪಿನಂ ಕೆಲವು ದಿವಸದಿಂ ನಾಗಾರ್ಜುನಂ ಸ್ತ್ರೀಯರ ಪ್ರೇರಣೆಯಿಂ ಮತಿಗೆಟ್ಟು ತಿರುಗುವಲ್ಲಿ ಶ್ರೀಶೈಲಕ್ಕೆ ಪೋಗೆ ಈ ಸ್ಥಾನದ ಪೆಸರೊಳೊಂದು ದೇವರಿರಬೇಕೆಂದೊಂದು ಶಿಲಾಪ್ರತಿಷ್ಠೆಗೆಯ್ದು ಮಲ್ಲಿಕಾರ್ಜುನನೆಂದು ಪೆಸರಿಡಲದಂ ಶೈವರ್ ಮಲ್ಲಿಕಾರ್ಜುನಲಿಂಗ ಮಲ್ಲೇಶ್ವರಂ ಚಿನ್ನದ ಗುಡಿ ಮಲ್ಲಿಕಾರ್ಜುನಲಿಂಗಮೆಂದು ಪೂಜಿಸಿದರ್. ಆ ನಾಗಾರ್ಜುನಂ ಮೊದಲ್ ಈ ಗುಡಿ ಬಾಗಿಲಿಗೆ ಸಿದ್ಧರಸಪ್ರಯೋಗದಿಂ ಗಂದೊಟ್ಟಿಗೆಯಂ ಮಾಡಿಸಿರ್ದು ತಾನುತ್ತರದೇಶಮನೆಯ್ದಿ ಅಲ್ಲಿ ಒಂದೆರಡು ಬೆಟ್ಟಮಂ ಚಿನ್ನಮಂ ಮಾಳ್ಪೆನೆಂದು ಸಿದ್ಧರಸದಿಂ ಪುಟವಿಕ್ಕಿದೊಡೆ ಹರಿತಾಳಂ ಮೊದಲಾದ ಗೈರಿಕಾದಿ ಧಾತು ಮುರದಾರ ಶೃಂಗಿಯೆಂದಾಯ್ತು.

ಮತ್ತಮೀ ಪ್ರಕಾರದೊಳೆ ದೇಶಾಟನಂ ಮಾಳ್ಪಲ್ಲಿ ಒಂದೆಡೆಯಲ್ಲಿ ಘುಟಿಕೆಯ ನುಗುಳಿಯಶುಚಿಗೆ ಪೋಗಲಾ ಸಮಯದೊಳಾ ಸ್ತ್ರೀಯರ್ ಕಾಯ್ದಿರ್ದು ಪೊಯ್ವುದುಂ ಸಿದ್ಧರಸಪ್ರಯೋಗಮಮಾಗುತ್ತೆ ತಲೆ ಪರಿದು ಬಿದ್ದುದಾ ಸ್ತ್ರೀಯರ್ ತಮ್ಮ ದೇಶಕ್ಕೆ ಪೋದರಿತ್ತ ಪೂಜ್ಯಪಾದಯತೀಂದ್ರಂ ಪದಿನಾಡಿನೊಳ್ ತಪಂಗೆಯ್ವುತ್ತ ತೀರ್ಥವಂದನೆಯಂ ಮಾಡಲೆಂದು ಆಂಧ್ರ ಕರ್ಣಾಟ ಚೋಳ ಪಾಂಡ್ಯ ಮೊದಲಾದೆಲ್ಲಾ ದೇಶಂಗಳಂ ವಿಹಾರಿಸಿ ಕಾಂಗೆರೆಯಾ

ಶೈಲಕ್ಕಂ ಬಂದು ಜಿನಾಗಮಮಂ ಕೆಲವಂ ನೋಡಿ ತಿಳಿದುಪದೇಶಮಂ ಮಾಳ್ಪರಿಲ್ಲದೆ ಕೆಲವು ಸಿದ್ಧಾಂತಂ ಮರೆಗರೆದಿದ್ದುದರಿಂ ಸಂದೇಹಗ್ರಸ್ತಮಾಗೆ ಪೂರ್ವವಿದೇಹಕ್ಕೆ ಪಾದಲೇಪೌಷಧಿ ಸಾಮರ್ಥ್ಯದಿಂ ಪೋಗಿ ಸಮವಸರಣದೊಳಿರ್ದ ಶ್ರೀ ಜಿನಪತಿಗಳಂ ಬಂದಿಸಿ ತತ್ವಮಂ ನಿಸ್ಸಂದೇಹವಾಗರಿದಲ್ಲಿಯೆ ಪುಸ್ತಕದೊಳ್ ಬರೆದುಕೊಂಡು ದೈವಾಯತ್ತದಿಂ ಭರತಕ್ಷೇತ್ರವುನೆಯ್ದುವಲ್ಲಿ ಸೂರ್ಯ ಕಿರಣೋಷ್ಣದಿಂ ದೃಷ್ಟಿಪೋಗೆ ಬಂಕಾಪುರಮೆಂಬುದರೊಳ್ ಶಾಂತೀಶ್ವರರಂ ಬಂದಿಸಿ ಶಾಂತ್ಯಷ್ಟಕಮಂ ಪೇಳಿ ದೃಷ್ಟಿಯಂ ಪಡೆದು ಬಂದು ಸಿದ್ಧಾಂತವಂ ಶಿಷ್ಯಪ್ರಶಿಷ್ಯರ್ಗವುಪದೇಶಂಗೆಯ್ದು ಲೌಕಿಕ ಪಾರಮಾರ್ಥಂಗಳಂ ರಚಿಸಿ ಸುಗತಿಪ್ರಾಪ್ತರಾದರ್.

ಮ ||ಸ್ರ|| ಭರದಿಂ ಜೈನೇಂದ್ರಮಂ ಭಾಸುರಮೆನಲೊರೆದಂ ಪಾಣಿನೀಯಕ್ಕೆ ಟೀಕಂ
ಬರೆದು ತತ್ವಾರ್ಥಮಂ ಟಿಪ್ಪಣದಿನರುಪಿದಂ ಯಂತ್ರ ಸನ್ಮಂತ್ರ ವಿದ್ಯೋ
ತ್ಕರಮಂ ಭೂರಕ್ಷಣಾರ್ಥಂ ವಿರಚಿಸಿ ಜಸಮಂ ತಾಳ್ದಿದಂ ವಿಶ್ವವಿದ್ಯಾ
ಭರಣಂ ದೇವ್ಯಾಳಿಯಾರಾಧಿತ ಪದಕಮಲಂ ಪೂಜ್ಯಪಾದವ್ರತೀಂದ್ರಂ ||

ಶ್ರೀ ಪೂಜ್ಯ ಪಾದಮುನಿರಪ್ರತಿಮೌಷಧರ್ದಿ
ರ್ಜೀಯಾದ್ವಿದೇಹ ಜಿನದರ್ಶನಪೂತಗಾತ್ರಃ
ಯತ್ಪಾದಧೌತ ಜಲಸಂಸ್ಪರ್ಶ.... ಪ್ರಭಾವಃ
ಕಾಲಾಯ ಸಂಕಲತ... ದಾತನಕೀಚಕಾರ||

ಪಿಂದೆ ಆಚಾರಾಂಗಧರ ಕಾಲ ೨೧೮ ವರುಷದಂದು ಮಂಗ ಪೂರ್ವದೇಶಧರರಾದ ವಿನಯಂಧರ ಶ್ರೀದತ್ತ ಶಿವದತ್ತ ಅರ್ಹದ್ದತ್ತರೆಂಬಾರಾತಿಯಾಚಾರ್ಯರ್ ಸುಭದ್ರ ಯಶೋಭದ್ರ ಯಶೋಬಾಹುಮೆಂಬಿವರ್ ಪೂರ್ವಾಂಗಧಾರಿಗಳ್ ಮಾಘನಂದಿಗಳ್ ಪೂರ್ವಾಂಶಮಂ ಬಲ್ಲಂಥಾವರ್ ಸಿದ್ಧಾಂತಿಗಳಾಗಿ ತಪೋಭರಮನಾಂತಿರ್ದು ಚಾರಿತ್ರಂ ಗೆಟ್ಟಿರ್ದು ಪುನರ್ದೀಕ್ಷೆಯಿಂ ಸಿದ್ಧಾಂತಿಗಳಾಗಿರ್ದರ್.

ಮತ್ತಂ ಶ್ರೀಪುಂಡ್ರವರ್ಧನಪುರದೊಳ್ ಪುಟ್ಟಿದ ಧರಸೇನರೆಂಬ ಯತೀಶ್ವರರ್ ಸರ್ವಾಂಗ ಪೂರ್ವದೇಶೈಕ ದೇಶಜ್ಞಾನಿಗಳ ತತ್ವಸ್ಥಾರಣ ಧಾರಣಾ ವಿಶುದ್ಧಾತಿ ಸತ್ಕ್ರಿಯಾದ್ಯುಕ್ತರುಂ ಅಷ್ಟಾಂಗ ನಿಮಿತ್ತಜ್ಞರುಂ ಸಂಘಾನುಗ್ರಹನಿಗ್ರಹ ಸಮರ್ಥರುಂ ಸಂವತ್ಸರ ಪಂಚಕಾವಸಾನೆ ಯುಗಪ್ರತಿಕ್ರಮಣವಂ ಮಾಡಿ ನೂರು ಯೋಜನ ಮಾತ್ರವರ್ತಿ ಮುನಿಜನ ಸಮಾಜಪತಿಗಳಾಗಿರ್ದು ತಾಮುಂ ಯುಗಪ್ರತಿಕ್ರಮಣದೊಳೆ ಮುನಿಸಮೂಹಂಗಳೆಲ್ಲಂ ಬಂದು ವಂದಿಸಿ ನಿಲ್ವಿನಮೆಲ್ಲಮಂ ಯೋಗಾದಿಗಳಿಂ ಕ್ಷೇಮಮೆಯೆಂದು ಬೆಸಗೊಳೆ ತಾವುಂ ತಮ್ಮ ತಮ್ಮ ಸ್ವಕೀಯ ಶಿಷ್ಯವರ್ಗರಸು ಪರಿಣಾಮಮೆಂಬುದುಂ ದುಷ್ಷಮ ಕಲಿಯುಗದಿಂದಿಲ್ಲಿಂದಿತ್ತಲ್ ಜಿನಧರ್ಮಂ ಪಕ್ಷಪಾತದಿಂ ವರ್ತಿಪುದೆಂದರಿದು ಕೆಲಂಬರಂ ನಂದಿಸಂಘಮೆಂದು ವೀರಾಕ್ಯಮೆಂದುಮಶೋಕವಾಟದಿಂ ಬಂದಿರ್ದರುಮಂ

ಕೆಲಂಬರನಪರಾಜಿತರೆಂದುಂ ದೇವಾಹ್ವಯರೆಂದುಂ ಪಂಚಸ್ತೂಯೆಯಿಂ ಬಂದಿರ್ದರಂ ಕೆಲರಂ ಸೇನಾಭಿದಾನರುಂ ಭದ್ರಾಖ್ಯರೆಂದುಂ ಶಾಲ್ಮಲಿ ಮಹಾದ್ರುಮಗಳತ್ತಣಿಂ ಬಂದರಂ ಕೆಲರಂ ಗುಣಧರಾಭಿಧಾನರೆಂದುಂ ಗುಪ್ತಾಹ್ವಯರೆಂದುಂ ಕೇಸರದ್ರುಮದತ್ತಣಿಂ ಬಂದಿರ್ದರಂ ಕೆಲಂಬರಂ ಸಿಂಹ್ವಾಭಿಖ್ಯರೆಂದುಂ ಚಂದ್ರಾಹ್ವಯರೆಂದುಂ ನೇಮಿಸಿದರ್

ವೃತ್ತ || **ಆಯಾತಾನಂದಿವೀತಾ ಪ್ರಕಟಗಿರಿಗುಹಾವಾಸತೋಶೋಕವಾಟಾ**
ದ್ದೇವಶ್ಚಾನ್ಯೋಪರಾರಿರ್ಜಿತ ಯತಿಯತಿಪೋ ಸೇನಭದ್ರಾಹ್ವಯೌ ಚ
ಪಂಚಸ್ತೂಪ್ಯಾತ್ಸುಗುಪ್ತಾದ್ಗುಣಧರವೃಷಭಃ ಶಾಲ್ಮಲೀವೃಕ್ಷಮೂಲಾ
ನ್ನಿರ್ಯಾತೌ ಸಿಂಹಚಂದ್ರೌ ಪ್ರಥಿತ ಗುಣಗಣೌ ಕೇಸರಾತ್ ಖಂಡಪೂರ್ವಾತ್||

ಅನ್ಯೇಜಗುರ್ಗುಹಾಯಾನಿರ್ಗತಾನಂದಿನೋ ಮಹಾತ್ಮಾನಃ
ದೇವಾಶ್ಚಾಶೋಕವನಾಪೀ (?) ಪಂಚಸ್ತೂಪ್ಯಾಸ್ತಥಾಸೇನಾಃ
ವಿಪುಲತರ ಶಾಲ್ಮಲೀದ್ರುಮ ಮೂಲಗತಾವಾಸಿಶಿನೋಧೀರಾಃ
ಭದ್ರಾಶ್ಚಿಖಂಡಕೇಸರತರು ಮೂಲನಿವಾಸಿನೋ ಜಾತಾಃ ||

ಗುಹಾಯಾಂ ವಾಸಿತೋ ಜ್ಯೇಷ್ಠೋ ದ್ವಿತೀಯೋಽಶೋಕವಾಟಕಾತ್
ನಿರ್ಯಾತೋ ನಂದಿದೇವಾಭಿಧಾನಾವಾದ್ಯಾವನುಕ್ರಮಾತ್
ಪಂಚಸ್ತೂಪ್ಯಸ್ತು ಸೇನಾನಾಂ ವೀರಾಣಾಂ ಶಾಲ್ಮಲೀದ್ರುಮಃ
ಖಂಡಕೇಸರನಾಮಾ ಚ ಭದ್ರಸಂಘಸ್ಯ ಸಮ್ಮತಃ ||

ಈ ಪ್ರಕಾರದೊಳ್ ಅರ್ಹದ್ಬಲ್ಯಾಚಾರ್ಯರ್ ಸಂಘಪ್ರವರ್ತಕರಾಗೆಯನಂತರ ಮನಗಾರಪುಂಗವ ಮಾಘನಂದಿಗಳಂಗಪೂರ್ವದೇಶಪ್ರಕಾಶಕರಾಗಿ ದಿವಕ್ಕೆ ಸಲೆ

ಸುರಾಷ್ಟ್ರದೇಶದ ಗಿರಿನಗರಾಂತದೂರ್ಜಯಂತಗಿರಿ ಚಂದ್ರಗುಹಾವಾಸಿ ಆಗ್ರಹಾಯಣಿಯ ಪೂರ್ವಸ್ಥಿತ ಪಂಚವಸ್ತುಗಳಂ ಚತುರ್ಥಕರ್ಮ ಮಹಾಪ್ರಾಭೃತಜ್ಞರಾದ ಧರಸೇನರೆಂಬ ಯತೀಶ್ವರರ್ ತಮ್ಮವಸಾನಕಾಲಮನರಿದು ಶಾಸ್ತ್ರಂ ವಿಚ್ಛಿನ್ನಮಪ್ಪುದೆಂದು ಇಂದ್ರದೇಶದ ವೇಣಾತಟಪುರ ಸಮುದಿತ ಮುನಿಗಳೊಳ್ ಗ್ರಹಣ ಧಾರಣಸಮರ್ಥರಪ್ಪ ಪಟುಬುದ್ಧಿಗಳೀರ್ವರ್ಗಂ ಲೇಖಮನಟ್ಟಿ ಕರೆಸಿ ನೇಮೀಶ್ವರ ಸಿದ್ಧಶಿಲೆಯೊಳ್ ವಿದ್ಯಾಸಾಧನೆಯಂ ಮಾಡಿಸಲ್ ದೇವಿ ಪ್ರತ್ಯಕ್ಷಮಾಗೆ ಸಿದ್ಧವಿದ್ಯರಾಗಿ ಗುರುಪಾರ್ಶ್ವದೊಳೆ ಶುಭದಿವಸದೊಳ್ ವ್ಯಾಖ್ಯಾನ ಪ್ರಾರಂಭವಾಗೆ ಗ್ರಂಥಸಮಾಪ್ತಿಯೊಳ್ ಗುರುವಿನಯಪೂರ್ವಕಂ ಆಷಾಢ ಶುದ್ಧ ಏಕಾದಶಿಯೊಳ್ ಪೂರ್ಣಮಾಗಿ ದ್ವಿಜಪಂಕ್ತಿಯಂ ದೇವತೆಗಳಿಂದಾದ ಕುಂದಪುಷ್ಪಸಮಾದಂತ ಸುರಾರ್ಚಿತರಾದುದರಿಂ ಭೂತಬಲಿಯುಂ ಪುಷ್ಪದಂತರೆಂಬೀರ್ವರ್ಗಂ ಪೆಸರಾಗೆ ನಿಜಗುರುವಿನನುಜ್ಞೆಯಾಂತು ತತ್ಪುರಮನೆಯ್ದಿ ಯೋಗಂಗೊಂಡು ವರ್ಷಾಕಾಲಾನಂತರಂ ದಕ್ಷಿಣಮುಖದೆ ಬಂದು ಕರಹಾಟದೇಶಮನೆಯ್ದಿ

ಪುಷ್ಪದಂತಮುನಿಯಾ ಭಾಗಿನೇಗಿಯನಾದ ಜಿನಪಾಲಿತಂಗೆ ದೀಕ್ಷೆಗೊಟ್ಟು ನಿಲೆ ಭೂತಬಲಿಗಳ್ ದ್ರಾವಿಡದೇಶದ ಮಧುರೆಯಂ ಪೊಕ್ಕಿರ್ದರಿತ್ತ ಪುಷ್ಪದಂತರ್ ಭಾಗಿನೇಯಜಿನಪಾಲಿತರಂ ಷಟ್ಕರ್ಮ ಪ್ರಾಭೃತಕ ವಿಂಶತಿ ಭೇದ ಶತಸೂತ್ರಮನೋದಿಸೆ ಭೂತಬಲಿಗಳಲ್ಲಿಗೆ ಬಂದು ಪೇಳ್ವುದುಮವರೆಯ್ದೆವಂದು ಪುಷ್ಪದಂತರವಸಾನಮನರಿದು ದ್ರವ್ಯರೂಪಣಾದ್ಯಧಿಕಾರ ಪಂಚಕ ಷಟ್ಸಹಸ್ರಾಗ್ರ ಸೂತ್ರಗ್ರಂಥಂಗಳ ಷಟ್ಖಂಡಂ ಜೀವಸ್ಥಾನಾದಿ ಪರಮಾಗಮಮಂ ಪುಸ್ತಕದೊಳ್ ಬರೆದು ಶ್ರುತಪ್ರತಿಷ್ಠಾವಿಧಿಯಿಂದರ್ಚಿಸಿ ಜ್ಯೇಷ್ಠ ಶುದ್ಧ ಪಂಚಮಿಯಲ್ಲಿ ಶ್ರುತಪ್ರಭಾವನೆಯಂ ಮಾಡಿದುದರಿಂ ಶ್ರುತಪಂಚಮಿಯೆಂದಾದುದು. ಭೂತಬಲಿ ಪುಷ್ಪದಂತರ ಪಾರ್ಶ್ವದೊಳ್ ಜಿನಪಾಲಿತರಭ್ಯಾಸಿಸಿರ್ದು ಷಟ್‌ಖಂಡಂಗಳೊಳ್ ಕಷಾಯಪ್ರಾಭೃತ ಸೂತ್ರಜ್ಞಾನ ಪ್ರವಾದಸಂಜ್ಞಕ ಪಂಚಕಮಹಾಪೂರ್ವಸ್ಥ ದಶಮ ವಸ್ತು ತೃತೀಯ ಪ್ರಾಯೋದೋಷ ಪ್ರಾಭೃತಕಜ್ಞ ಗುಣಧರರೆಂಬವರಲ್ಲಿ ತದಾಗಮಂಗಳನೋದಲುಂ ತಿಳಿಯಲುಮಾರುಮಿಲ್ಲದೆ ಕೆಲದಿವಸಂ ಸಲೆ ಯತಿವೃಷರೆಂಬಾಚಾರ್ಯರ್ ಪುಟ್ಟಿಯನೇಕ ಸೂತ್ರಗ್ರಂಥ ರಚನಕರ್ತರೆನಿಸಿದರಿಂತು ದ್ರವ್ಯಭಾವ ದ್ವಿವಿಧ ಪುಸ್ತಕಗಚ್ಛರೆಂದು ಗುರುಪರಿಪಾಟಿಯಿಂ ತಿಳಿದು ಕುಂದಕುಂದಪುರದೊಳ್ ಶ್ರೀಪದ್ಮನಂದಿಮುನೀಂದ್ರರ್ ಷಟ್ಖಂಡಾದಿ ತ್ರಿಖಂಡ ಪರಿಕರ್ಮ ಕರ್ತ ಗ್ರಂಥ ದ್ವಾದಶ ಸಹಸ್ರಂಗಳಂ ಪೇಳ್ದರ್.

ತದನಂತರಂ ಶಾಮಕುಂಡಯತಿಗಳ್ ಪ್ರಾಕೃತ ಸಂಸ್ಕೃತಾದ್ಯನೇಕ ಗ್ರಂಥಕರ್ತೃಗಳಾದರ್. ಮತ್ತಂ ತುಂಬುಲೂರಲ್ಲಿ ಪುಟ್ಟಿದ ತುಂಬಲೂರುನಾಮಾಚಾರ್ಯರ್ ಪ್ರಾಕೃತ ಸಂಸ್ಕೃತ ಕರ್ಣಾಟಕಾದಿ ಭಾಷಾದಿಗಳಿಂ ಸಿದ್ಧಾಂತ ಪ್ರಬಂಧಕರ್ತೃಗಳ್ ಚೂಡಾಮಣಿವ್ಯಾಖ್ಯಾನ ಚತುರಶೀತಿ ಸಹಸ್ರ ಗ್ರಂಥರಚನೆಯಂ ಮಾಡಿದರ್. ಮತ್ತಂ ಸಮಂತಭದ್ರಸ್ವಾಮಿ ತತ್ವಾರ್ಥಸೂತ್ರ ಕರ್ತಾರಃ ಸ್ವಾಮೀತಿ ಪರಿಪಠ್ಯತೇ ಸಿದ್ಧಾಂತ ಷಟ್ಖಂಡಾಗಮ ಮೃದು ಸಂಸ್ಕೃತಭಾಷಾಪ್ರರೂಪಣ ದ್ವಿತೀಯ ಸಿದ್ಧಾಂತ ವ್ಯಾಖ್ಯಾನಾದಿ ಶುಭರವಿ ನಂದಿಮುನಿಗಳೆಂಬರೀರ್ವರಿಂ ಭೀಮರಥಿ ಕೃಷ್ಣವೇಣಿ ತೊರೆಗಳ ಮಧ್ಯವಿಷಯದ ಪುತ್ಕಲಿಗ್ರಾಮ ಸಮೀಪದ ಮಣುಕವಲ್ಲಿಯೆಂಬೂರ ಬಪ್ಪದೇವನೆಂಬ ಯತಿಪಂ ವ್ಯಾಖ್ಯಾಪ್ರಜ್ಞಪ್ತಿ ಮೊದಲಾಗೆ ಅರವತ್ತು ಸಾಸಿರ ಗ್ರಂಥರಚನಾಕರ್ತರಾದರ್. ಇಂತು ಮುನಿಪರಂಪರೆಯಿಂ ಪರಮಾಗಮಂ ನಡೆವಲ್ಲಿ ಮಧ್ಯೆ ಜಿನಧರ್ಮಂ ಕುಂದುತ್ತೆ ಬರ್ಪಿನಂ

ಅತ್ತಲ್ ಉಳಿಪುತ್ರನಗರದ ಶಿಶುಪಾಲನೆಂಬ ರಾಜಂಗಂ ಇಂದ್ರಪುರದ ಪೃಥ್ವೀಸುಂದರಿ ಪೆಂಡತಿಯಾಗೆಯುವರ್ಗೆ ಚತುರ್ಮುಖನೆಂಬ ಕಲ್ಕಿರಾಜಂ ಪುಟ್ಟಿ ಎಪ್ಪತ್ತು ಸಂವತ್ಸರಾಯುಷ್ಯನೈದು ಮೊಳ ನಿಡಿಯುಂ ರೂಕ್ಷವರ್ಣದೇಹನಾಗಿ ಬೆಳೆಯಲ್ ವಿಕ್ರಮಾರ್ಕ ಶಕರಾಜನ ಕಾಲ ನೂರತೊಂಬತ್ತನಾಲ್ಕು ವರುಷಂ ಸಲ್ವಿನಂ ಚತುರ್ಮುಖಂಗೆ ಕಲ್ಕಿ ಪುಟ್ಟಿ ಕುಮಾರಕಾಲಮಿಪ್ಪತ್ತೆಂಟು ಸಂವತ್ಸರಂ ಸಲೆ ಇಂದ್ರಪುರದೊಳ್ ಪಟ್ಟಂಗಟ್ಟಿದೊಡೆ ಪ್ರತಾಪದಿಂ ಕೆಲವು ರಾಜ್ಯಮೆಲ್ಲಮಂ ಸಾಧಿಸಿ ವಶಂ ಮಾಡಿ ದೇವಸ್ವ ಮುಂತಾದ ಧರ್ಮಂಗಳಂ ಕೆಡಿಸಿ ಅನೇಕ ಬಾಧೆಗಳಂ ಪ್ರಜೆಗಳ್ಗಂ ತೋರಿ ತನಗಿನ್ನಸಾಧ್ಯರಾರುಮಿಲ್ಲೆಂದು ಮಂತ್ರಿಯಂ

ಬೆಸಗೊಂಡೊಡೊರ್ವ ಜಿನಮುನಿ ನಿನ್ನ ಅಡ್ಡಿಯಿಲ್ಲದೆ ಉಭಯಪರಿಗ್ರಹದೂರನುಂ ದ್ವಾದಶವಿಧ ತಪೋನಿರತನುಂ ಧ್ಯಾನಮೌನಾನುಷ್ಠಾನಮಾಗಿರ್ಪನಾತಂ ನಿಯಮದಿಂ ನಾಲ್ವತ್ತಾರು ದೋಷಂ ಪೊರಗಾದ ನಿರವದ್ಯಮಪ್ಪಾಹಾರಮಂ ಶ್ರಾವಕರ ಮನೆಯೊಳೆ ಮಧ್ಯಾಹ್ನಕಾಲದೊಳ್ ಧರ್ಮದಿಂ ಕೊಟ್ಟನ್ನಮಂ ಕಾಯಸ್ಥಿತ್ಯರ್ಥಂ ಕೊಂಡು ಯೋಗನಿಯೋಗದೊಳಿಪ್ಪನಾತಂ ನಿನ್ನಧೀನನಲ್ಲೆಂದು ಮಂತ್ರಿ ಪೇಳೆ ಪ್ರಜೆಗಳೆಲ್ಲರುಂ ಸಿದ್ಧಾಯ ಗೃಹಾಯಮೆಂದೆನಗೆ ಕೊಟ್ಟು ಜೀವಿಸುವರೀ ತಪೋಧನಂಗೆ ಯಾವ ಬಗೆಯಂ ಮಾಡಲೆಂದು ಕಾಣದೆ ಶ್ರಾವಕರ ಕೈಯೊಳಿಕ್ಕುವ ಅನ್ನಕ್ಕಂ ಸುಂಕಮೆಂಬುದಂ ನಿಯಮಿಸಿ ದುಷ್ಷಮ ಕಾಲದೋಷದಿಂ ಮಹಾಮುನೀಶ್ವರನ ತುತ್ತಿಗೆ ಸುಂಕಮೆಂದು ಮೊದಲ ತುತ್ತಂ ತರವೇಳೆ ದೂತರನಟ್ಟಲವರ್ ಪೋಗಿ ಬೇಡಿದೊಡವರ್ ಪ್ರಥಮ ಪಾನೀಯಮಂ ಕೊಟ್ಟಂತರಾಯಮಾಗೆ ಅನಶನಮಂ ಕೈಕೊಂಡು ಯೋಗಸ್ಥಾನದೊಳ್ ನಿಲ್ವಿನಮವಧಿಜ್ಞಾನಂ ಪುಟ್ಟಿ ಹುಂಡಾವಸರ್ಪಿಣಿಯ ದುಷ್ಷಮಕಾಲಸ್ವಭಾವದಿಂ ಸನ್ಮಾರ್ಗಂಗೆಟ್ಟು ನಾನಾ ವಿಧ ದುರ್ಮಾರ್ಗಂಗಳ್ ಪುಟ್ಟಿ ಪ್ರಬಲಮಾಗಿ ಸಾವಿರ ವರ್ಷಕ್ಕೊರ್ವ ಕಲ್ಕಿಯುಮೈನೂರು ವರ್ಷಕ್ಕೊರ್ವನುಪಕಲ್ಕಿಯು ಪ್ರವರ್ತಿಸಿ ಸದ್ಧರ್ಮದ್ವೇಷಿಗಳಾಗಿಯಸುರದೇವನಿಂ ಸತ್ತು ಪ್ರಥಮ ನರಕಪ್ರಾಪ್ತರಪ್ಪರಿಂತೈನೂರುವರುಷಕ್ಕೊಮ್ಮೆ ಜಿನಧರ್ಮಂ ಪೆಚ್ಚುತ್ತುಂ ಕುಂದುತ್ತುಮಿರ್ದತಿದುಷ್ಷಮಕಾಲದೊಳಾವ ಧರ್ಮದ ಸುಳಿವುಮಿಲ್ಲದೆ ಉತ್ಸೇದಾಯುರ್ಬಳಾದಿಗಳತ್ಯಂತ ಹೀನಮಾಗೆ ಮೃಗಪಕ್ಷಿಗಳಂತೆ ಜೀವಿಸುವರಾ ಕಾಲದ ಕಡೆಯೊಳ್ ಪ್ರಳಯಕಾಲಮಪ್ಪುದೆಂದು ಪೇಳೆ ಅಜ್ಜಿಕೆ ಶ್ರಾವಕ ಶ್ರಾವಕಿಯರ್ಗಂ ಸನ್ಯಸನಂಗೊಟ್ಟು ತಾವು ಶುಭಧ್ಯಾನದಿ ಸಮಾಧಿವಡೆದು ಪ್ರಥಮ ಸ್ವರ್ಗದೊಳ್ ದೇವರಾಗಿ ಪುಟ್ಟಲಿತ್ತಂ ಧರ್ಮಕಂಟಕನಾದ ಕಲ್ಕಿರಾಜನನಸುರ ದೇವನರಿದು ಕೋಪದಿಂ ಬಂದು ವಜ್ರಾಯುಧದಿನಿರಿದುಕೊಲ್ವುದುಂ ಸತ್ತು ನರಕಪ್ರಾಪ್ತನಾಗಲಿತ್ತಲಾ ಚತುರ್ಮುಖ ಕಲ್ಕಿರಾಜನ ಮಗನಪ್ಪಜಿತಂಜಯಂ ತನ್ನರಸಿಯಪ್ಪ ಚೇಳಿನಿವೆರಸು ಅಸುರದೇವನಂ ಶರಣ್ಬುಗೆ ಸದ್ಧರ್ಮಮಂ ಪ್ರತಿಪಾಲಿಸೆಂದು ನಿಯಮಿಸಿ ಪೋಗಲತ್ತಲರಸಂ ಜಿನಧರ್ಮಮಂ ಪ್ರಕಟಿಸಿ ಚೈತ್ಯಾಲಯಂಗಳಂ ಮಾಡಿಸಿ ದಾನ ಪೂಜೆ ಶೀಲೋಪವಾಸಂಗಳಂ ಮಾಡುತ್ತುಮಿರೆಯದಂ ಕಂಡು ಕೇಳಿದರೆಲ್ಲಂ ಸದ್ಧರ್ಮರುಚಿಗಳಾದರ್. ಆಗಳ್ ಮಾಳವ ಮಗಧ ಕರ್ಣಾಟ ಗೊಲ್ಲ ಕರಹಾಟ ಗೌಳ ಲಾಳ ಚೋಳ ಕೇರಳ ಪಾಂಡ್ಯ ಕಳಿಂಗಾದಿ ನಾನಾ ದೇಶಂಗಳನಾಳ್ವ ಇಕ್ಷ್ವಾಕು ಕುರು ಸೋಮ ಹರಿ ನಾಥ ಉಗ್ರವಂಶದರಸುಗಳನ್ವಯದವರೆಲ್ಲಂ ಏಕಾಂತ ವಿನಯ ವಿಪರೀತ ಸಂದೇಹ [ಅಜ್ಞಾನ]ಮೆಂಬ ಪಂಚ ಮಿಥ್ಯಾವಲಂಬಿಗಳಾಗಿ ಸದ್ಧರ್ಮಮಂ ಬಿಟ್ಟು ಒಂದೊಂದು ಮತಮಂ ಪಿಡಿದು ಸಂಕರರಾಗಿರ್ದು ಇಂದ್ರಪುರದೊಳ್ ಅಸುರದೇವಂ ಕಲ್ಕಿರಾಜನಂ ಕೊಂದು ತತ್ಪುತ್ರನಪ್ಪ ಅಜಿತಂಜಯಂಗೆ ಸದ್ಧರ್ಮಮಂ ಪೇಳಿ ರಾಜ್ಯದೊಳ್ ನಿಲಿಸಿದ ಪ್ರಪಂಚೆಲ್ಲಮಂ ಕೇಳ್ದು ದೃಢಚಿತ್ತರಾಗಿ ಧರ್ಮದಿಂದ ಪ್ರಜಾಪಾಲನಂ ಮಾಡಿ ತಮ್ಮ ತಮ್ಮ ವಿಷಯದೊಳಿರ್ದು ಪೋಗಿರ್ದ ಚೈತ್ಯಾಲಯಂಗಳನುದ್ಧರಿಸಿ ದಾನ ಪೂಜಾದಿಗಳಂ ಮಾಡುತ್ತುಮಿರ್ದು ಕೆಲವಾನುಂ

ದಿವಸದಿಂ ಕೆಲಕೆಲರ್ ಮಿಥ್ಯಮಂ ಪೊರ್ದುತ್ತುಮಿರೆ ಉತ್ತರದೇಶದೊಳ್ ವೇದಾಂತಿಬ್ರಾಹ್ಮಣರೊಳ್ ಬಲಹೀನರಾದರಸುಗಳಂ ಜಯಿಸಿ ರಾಜ್ಯಭಾರ ಮಾಡುತ್ತಿಪ್ಪುದುಂ ಕೆಲಂಬರರಸುಗಳ್ ವಿಪ್ರರ್ ಮತಾಂತರಮಂ ಕಲ್ಪಿಸಿ ರಜಪುತ್ರ ಆರೆ ಮರಾಟ ಮೊದಲಾದ ಜಾತಿಗಳಂ ಮಾಡಿ ವೀರರಾಗಿ ಕೆಲವು ರಾಜ್ಯಮಂ ಪಾಲಿಸುತ್ತುಮಿರ್ದರ್

ತುರುಷ್ಕರು ಖಾನ ಮಲ್ಲುಕಾದಿ ಭೇದಂಗಳಾಗಿ ಭೂಪಾಲನಾಸೀನರಾದರ್ ಕಿರಾತರೊಳ್ ನಾಯಕರಾಗಿ ಈ ಕ್ರಮದಿಂ ರಾಜ್ಯಮನಾಳುತ್ತುಂ ಕಾಲಶಕ್ತಿಯಿಂ ನಾನಾವಿಧವಾಗಿ ನಡೆದುಬರುವಲ್ಲಿ ಮಧ್ಯದೇಶದೊಳ್ ಕಲ್ಯಾಣಪಟ್ಟಣದಲ್ಲಿ ಸಮ್ಯಕ್ತ್ವ ಚೂಡಾಮಣಿ ಚಾಣಾಂಕರಾಯನ ಮಗನಪ್ಪ ಬಿಜ್ಜಲರಾಜನೆಂಬರಸನಾತನ ಪೆಂಡತಿ ಗುಣಭದ್ರೆಯೆಂಬಳ್ ಮಂತ್ರಿ ಸುಬುದ್ಧಿ ಸಹಿತಂ ಧರ್ಮದಿಂ ರಾಜ್ಯಂಗೆಯ್ಯುತ್ತಿಪ್ಪಿನಮಿತ್ತಲಿಂಗಳೇಶ್ವರದ ಮಂಡಗೆಯೆಂಬ ಪುರದೊಳ್ ಜೈನವಿಪ್ರನೋರ್ವಂ ವೇದಾಂತಿ ದ್ವಿಜರೊಡನಾಡುತ್ತುಂ ವಿಷಯಾಸಕ್ತನಾಗಿ ಜಿನಧರ್ಮಮಂ ಪತ್ತುವಿಟ್ಟು ವೇದಾದ್ಯಂತಮನೋದಿ ಶೈವಬ್ರಾಹ್ಮಣನಾಗಿ ನೆಗಳುತ್ತಿರಲಾತನ ಮಗಂ ಲಿಂಗಭಟ್ಟಂ ಮಂತ್ರವಾದಮಂ ಬಲ್ಲನಾಗಿರ್ದನಾತಂಗೆ ಮಾದಿರಾಜನೆಂಬ ಪುತ್ರಂ ಪುಟ್ಟಿ ವಿದ್ಯಾಪಾರಗನಾಗಲವಂಗೆ ಮಾದಲೆಯೆಂಬಳಂ ಮದುವೆ ಮಾಳ್ಪುದುಮಾಕೆಗೆ ರೂಪು ಲಾವಣ್ಯ ವಿಲಾಸಾನ್ವಿತೆ ನಾಗಲೆಯೆಂಬಳ್ ಪುಟ್ಟಿ ಬಳಿಕ ಬಸವರಾಜನೆಂಬ ಕುಮಾರಂ ಪುಟ್ಟಿ ಬಾಲತ್ವದೊಳೆ ಮಂತ್ರವಾದ ಶಾಸ್ತ್ರಮಂ ಕಲ್ತು ಕಾಳಿಕಾದೇವಿಯನಾರಾಧಿಸಿ ವಶ್ಯ ಆಕರ್ಷಣ ವಿದ್ವೇಷಣ ಸ್ತಂಭನ, ಮೋಹನ ವ್ಯಭಿಚಾರಕರ್ಮವೆಂಬೀ ಷಟ್ಕರ್ಮಸಾಧನೆಗಳೊಳತಿನಿಪುಣನಾಗಿ ಸ್ವಮತದ್ವೇಷಿಯಾಗಿ ತನ್ನ ಪ್ರಸಿದ್ಧಿಯನುಂಟುಮಾಡುತ್ತಿಪ್ಪಿನಮಾತನ ಮಾತಾಪಿತೃಗಳ್ ಲೋಕಾಂತರಿತರಾಗೆ ತಾನು ವಿದ್ಯದೊಳತಿಪ್ರಸಿದ್ಧಿವಡೆದು ಬ್ರಾಹ್ಮಣರೊಳ್ ಕೂಡದೆ ಪೊರಗಾಗಿ ನಾಗಮ್ಮಂಗೆ ವಿವಾಹಂ ಮಾಡದೆ ಆಕೆಯನೊಡಗೊಂಡು ಕಲ್ಯಾಣಪಟ್ಟಣಕ್ಕೆ ಬಂದಿರ್ದಂ.

ಒಂದು ದಿನಂ ಬಿಜ್ಜಳರಾಯಂ ವೈಹಾಳಿಗೆ ಪೋಗುತ್ತಿರ್ಪಾಗಳ್ ನಾಗಲಾದೇವಿಯು ಮಿಂದು ಮಂಡೆಯನಾರಿಸುತ್ತಿರ್ದು ನೋಡುತ್ತಿರ್ಪ ರೂಪವತಿಯಂ ಬಿಜ್ಜಲಂ ನೋಡಿ ಮೋಹವಶಗತನಾಗಿ ಅವರ ಮನೆಗೆ ಬಂದು ಬಸವಣ್ಣನಂ ಬರಿಸಿಯಾತನ ವಿದ್ಯಂಗಳಿಗೆ ಮೆಚ್ಚಿ ತದಗ್ರಜೆಯಂ ಸ್ವೀಕರಿಸಿ ಆಕೆಗೆ ಗುಣವತಿ ನಾಮವನಿಟ್ಟು ಬಸವಂಗೆ ಕೋಶಾಧ್ಯಕ್ಷ ಪದವಿಯಂ ಕೊಟ್ಟು ಸುಖಮಿರೆ ನಿಧಾನಾಂಜನದಿಂ ನಿಕ್ಷೇಪದ್ರವ್ಯಮಂ ಬಸವಂ ತೋರ್ಪುದುಮಾತನೊಳತಿ ಮಮಕಾರಂ ಪುಟ್ಟಿ ಮಂತ್ರಿಪದವಿಯುನಿತ್ತು ರಾಜ್ಯಮನೊಪ್ಪಿಸಿ ತಾನು ಸ್ತ್ರೀಲೋಲತ್ವದಿಂದರಮನೆಯೊಳಿರೆ ಬಸವಂ ನಿರಂಕುಶನಾಗಿ ಷಣ್ಮತಂಗಳಂ ದೂಷಣಂಗೆಯ್ದು ಸಂದೇಹಂ ಪುಟ್ಟಿ ತಾನೊಂದು ಮತಮಂ ಮಾಳ್ಪೆನೆಂದು ವಿಪರೀತ ಕರ್ಮಜನಿತ ಶೈವಾಚಾರದೊಳೆ ನಂಬುಗೆ ಪುಟ್ಟೆ ಜನರೆಲ್ಲರಂ ವಶಗತರ್ಮಾಡಿ ತನ್ನ ವಿದ್ಯದಿಂದನೇಕಾಶ್ಚರ್ಯಂಗಳಂ ತೋರಿಸುತ್ತುಂ ತದಿತರ ಜನಂಗಳಂ ಮಾರಣಾದಿಗಳಿಂ ಭಯಂಗೊಳಿಸಿ ವೀರಶೈವಮೆಂಬ ಮತಮಂ ಪ್ರಕಟಿಸಲ್ ಸ್ವಾಮಿದ್ರೋಹಿಯಾಗಿ ಭಂಡಾರದ

ದ್ರವ್ಯಮಂ ಚಾಗಂಗೆಯ್ದು ಪದಿನೆಂಟು ಜಾತಿಗಂ ಲಿಂಗಮಂ ಪೂಜಿಸುವುದೆಂದು ಭಂಡಾರದ ಪೊನ್ನೆಲ್ಲಮನನೇಕವಾಗಿ ಕೊಟ್ಟು ಭಂಡಾರಮೆಲ್ಲಂ ಬರಿದಾಗಲುಳಿದ ಮಂತ್ರಿಗಳ್ ಬಂದು ಬಸವನೆಸಗುವ ಕೃತ್ಯಮಂ ದ್ರವ್ಯಂಗಳ ವೆಚ್ಚಮನರಸಂಗರಿಪುವುದುಂ ಬಸವರಾಜನಂ ಬರಿಸಿ ಕೋಡಗಗಟ್ಟಂ ಕಟ್ಟಿಸಿ ಭಂಗಿಸುತ್ತಿರೆ ನಾಗಲಾದೇವಿಯಡ್ಡ ಬಂದು ನಾನಾ ಪ್ರಕಾರದೊಳ್ ಬಾರಿಸಿ ಬುದ್ಧಿಯಂ ಪೇಳಿ ಬಿಟ್ಟೊಡೆ ಗ್ರಾಮ ಶಾರ್ದೂಲ ಪುಚ್ಛದಂತೆ ಜನಂಗಳೆಲ್ಲರಂ ವಶಂ ಮಾಡಿಕೊಂಡು ಎರಡು ಲಕ್ಷ ಮಾನವರ್ಗೆ ಬೇಕಾದನಿತು ಭೋಜನ ವಸ್ತ್ರ ತಾಂಬೂಲಾದಿ ಭೋಗೋಪಭೋಗಂಗಳಂ ಮಾಡಿಸಲ್ ಒಳ ಬೊಕ್ಕಸದ ಪೊನ್ನೆಲ್ಲಮಂ ಬೊಮ್ಮಯ್ಯನೆಂಬ ಚೋರನಿಂ ಕನ್ನವಿಕ್ಕಿ ತರಿಸುತ್ತುಂ ಬಸವನಲ್ಲಿ ಪಂಚಪುರುಷಮಿಪ್ಪುದೆಂದು ಪ್ರಸಿದ್ಧಿಯಂ ಮಾಡಿ ಹೊಲೆಯ ಮಾದಿಗ ಮುಂತಾದೆಲ್ಲರ್ಗಂ ಲಿಂಗಧಾರಣೆಯಂ ಮಾಡಿಸುತ್ತುಂ ತನ್ನಾಜ್ಞೆಯಂ ಮೀರಿದವರಂ ಕೊಲ್ಲಿಸುತ್ತಿಪ್ಪ ಸಮಾಚಾರಮೆಲ್ಲಮನಾತನ ಬಲಮುಮಂ ಕೇಳಿ ಕೋಪಾರೂಢನಾಗಿ ವೀರಭಟರಂ ಬಸವನಂ ಪಿಡಿದುತರಲ್ ಬಲಸಹಿತಂ ಕಳುಹಿಸಲಾ ಸಮಾಚಾರಮಂ ಕೇಳಿ ತನ್ನ ದ್ವಿಲಕ್ಷ ಜನರಂ ಬಲಂಬೆರಸು ಇದಿರಾಗಿ ನಿಲಲಾರದೆ ಚತುರಂಗಂಬೆರಸಿ ಹಾಗೆ ಕೇರಿಯೊಳ್ ಬೀಡಂಬಿಟ್ಟಿರ್ದ ಬಿಜ್ಜಲರಾಯಂ ತಾನು ಚತುರಂಗಸಹಿತನಾಗಿ ಬೆನ್ನಟ್ಟಿಬಪ್ಪುದಂ ತನ್ನ ಬಲಮೆಲ್ಲಂ ಪಲಾಯನಮಾಗೆ ಸಂದಿ ಗೊಂದಿ ಗಿಡುವಿನೊಳ್ ಬಸವನೋಡಿಪೋಗುತ್ತಿರ್ದು ಬಿಜ್ಜಲನ ಬರವಂ ಕಂಡಂಜಿ ಸಾವೆನೆಂದು ಪರಿಚ್ಛೇದಿಸಿ ಮಹಾಮಡುವಿನ ಗುಂಡಿಯೊಳ್ ಬೀಳ್ವುದುಂ ಬಿಜ್ಜಲನಾಗಲೆ ಜಾಲಗಾರರಿಂ ತೆಗೆಯಿಸಿ ಕರುಣಹೃದಯನಾಗಿ ಇಂತೆಂದನೆಲವೊ ಬಸವಣ್ಣನೆ ನೀನೆನಗತ್ಯಾಪ್ತನೆಂದು ಭಂಡಾರವೆಲ್ಲವನೊಪ್ಪಿಸಿದೊಡೆನ್ನ ಬೊಕ್ಕಸ ಭಂಡಾರವಂ ಬರಿದು ಮಾಡಿ ಸ್ವಾಮಿದ್ರೋಹಿಯಾದೆ ನಿನ್ನನೇನಂ ಮಾಡಿದೊಡೆ ತೀರದೆಂದು ನುಡಿಯೆ ಬಸವನೆಂದನೆನ್ನ ಗೈದಪರಾಧಮಂ ಕ್ಷಮಿಸುವುದೆಂದಿನಂತೆ ಭಂಡಾರಮಂ ತುಂಬುವೆನೆಂದು ಪೊಡೆವೊಡೆ ಎನ್ನ ಋಣಂ ತೀರುವನ್ನೆಗಂ ಕಲ್ಲಂ ಪೊರಿಸಿಮೆಂದೊಂದು ಶಿಲೆಯಂ ಪೊರಿಸಲನಿತಕ್ಕಾತನ ಸೇರಿದೆರಡು ಲಕ್ಷ ಪರಿಷೆಯು ಬಂದೆಲ್ಲರು ಪೊಡೆವಟ್ಟು ನಿಮ್ಮ ಸಾಲಂ ತೀರುವನ್ನೆಗಮೀ ಶಿಲೆಯಂ ಪಂಚುಗೊಂಡಾವೆಲ್ಲರುಂ ಪೊತ್ತಿರ್ಪೆವೆಂದು ನೇಣೊಳ್ ಕಟ್ಟಿಕೊಂಡಿಪ್ಪೆವೆಂದು ತಂತಮ್ಮ ಲಿಂಗಮಂ ತೋರಿಬಂದು ರಸವಾದಾದಿಗಳಿಂ ಸುವರ್ಣಮಂ ಮಾಡಿಕೊಡುವೆನೆಂದನೇಕ ತೆರನಪ್ಪ ವಾದಂಗಳಿಂ ಪಡೆಯದೆ ಲಿಂಗಧಾರಣಪೂಜೆಯಿಂ ಸಕಲವು ದೊರೆಕೊಳ್ಗುಮೆಂದು ಸರ್ವರ್ಗಂ ಲಿಂಗಮಂ ನಾಯಿಕುನ್ನಿಯು ಮೊದಲಾದುಪಕರಣಂಗಳಿಗೆಲ್ಲಂ ಲಿಂಗಸ್ಥಾಪನಂಗೆಯ್ದಿರಿಪ್ಪಿನ ಮತ್ತೊಂದು ದಿವಸಮರಮನೆಯೊಳಿರ್ದ ನಿಕ್ಷೇಪಮಂ ತೆಗೆದು ಪಂಚ ಪರುಷ ಸಾಮರ್ಥ್ಯದಿಂ ಮೊದಲಿಂಗೆ ನಾಲ್ಮಡಿ ದ್ರವ್ಯವಂ ತುಂಬಿಸುವೆನೆಂದು ಪೊನ್ನೆಲ್ಲವಂ ವೆಚ್ಚಿಸಿ ಗಣಾರಾಧನೆಯೆಂದೆಲ್ಲರುಮುಂಡು ತೇಕುತ್ತೆ ಸಾಲಮಂ ಸಲಿಸಿದೆವೆಂದುಮುಪಹಾಸ್ಯಂಗೆಯುತ್ತಿರೆ ಮಂಚಣ್ಣನೆಂಬಂ ತಿಳಿದವರ ನೆಗಳ್ತೆಯನೆಲ್ಲಂ ನಿಚ್ಚ ನಿಚ್ಚಂ ಬಂದರಸಂಗರುಪುತ್ತಿರೆ ಕೊಂಡಗದ ಮಂಚಣ್ಣನೆಂದವನೊಳ್ ಮುನಿಯುತ್ತಿರ್ದರಂತಿಪ್ಪುದುಮತ್ತಮರಮನೆಯೊಳ್ ನಾಗಮ್ಮಂ

ಗರ್ಭಿಣಿಯಾಗಿ ನವಮಾಸಂ ನೆರೆದು ಗಂಡುಗೂಸಂ ಪೆತ್ತಿಪ್ಪುದುಂ ಬಸವಂ ಬಂದು ಶಿಶುವಿಂಗಂ ಲಿಂಗಮಂ ಕಟ್ಟಿ ಚನ್ನಬಸವನೆಂದು ಪೆಸರಿಟ್ಟು ಪೋದಂ ಗುಣವತಿಮಹಾದೇವಿಗೆ ಮಾಘ ಶು ೧೫ ಮುಹೂರ್ತದೊಳ್ ಪುತ್ರೋತ್ಪತ್ತಿಯಾಗೆ ಮರುಬಿಜ್ಜಲನೆಂದು ಪೆಸರಿಟ್ಟು ಸಲಹುತ್ತಿರ್ದು ಬಲದೇವಮಂತ್ರಿಯ ಮಗಳ್ ನೀಲಮ್ಮನೆಂಬಳಂ ಬಸವರಾಜಂ ಮದುವೆಯಾಗಿ ತನ್ನ ಪರಿವಾರವೆಲ್ಲರ್ಗಂ ಮೆಚ್ಚುಗೊಡುತ್ತ ಇಂದ್ರಜಾಲ ಮಹೇಂದ್ರಜಾಲವಂ ತೋರಿಸುತ್ತುಂ ಬಲಾತ್ಕಾರದಿಂ ಜೈನ ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರಾದಿಗಳಂ ಲಿಂಗಧಾರಿಗಳ್ ಮಾಡಿ ಪರಸಮಯಗಳಂ ಪದಿನೆಂಟು ಜಾತಿಗಳಂ ಬಯಸಿದುದಂ ಕೊಟ್ಟು ಲಿಂಗಮಂ ಧರಿಸಿ ನೀಚ ಜಾತಿಗಳನ್ನೂ ಕೂಡಾ ನುತಿಸುತ್ತಯೆಲ್ಲರ್ಗೆ ಶರಣೆಂದೆರಗುತ್ತುಮಮರ ಪಾದಸ್ಪರ್ಶನಗೆಯ್ದು ತನ್ನುರದ ಲಿಂಗಕ್ಕಂ ತನ್ನ ಮಸ್ತಕಕ್ಕಂ ಮುಟ್ಟಿಸುತ್ತುಂ ಭಕ್ತಿಯ ಮಾಡುತ್ತುಂ ಜಂಗಮರೆಂದೆಲ್ಲರಂ ಪೂಜಿಸುವಂ. ಲಿಂಗಕ್ಕೆ ಪೊಲೆಯಿಲ್ಲ ಜಂಗಮಕ್ಕೆ ಪಾಪಮಿಲ್ಲೆಂದು ಜಾತ ಮೃತ ರಜಸ್ವಲಾದಿ ಪಂಚವಿಧ ಸೂತಕಮಿಲ್ಲಮೆಂದು ಎಂಜಲು ಮೊದಲಾದವಂ ದೇಹಕ್ಕೆ ಲೇಪಿಸುತ್ತ ಖಂಡಿತಮಾಯತಾದಿಗಳಂ ಕಲ್ಪಿಸಿ ಗಣಂಗಳ ಪಾದೋದಕಂ ಪರಮ ಪವಿತ್ರಮೆಂದು ಲಿಂಗಕ್ಕಂ ಮಜ್ಜನಂಗೈದು ದೇಹಕ್ಕಂ ಸೇವಿಸುತ್ತುಂ ಗುರುದೇವರೆಂಬುದರಿಂ ಗುರುವೆ ಉತ್ಕೃಷ್ಟನೆಂದವರವರ ಇಚ್ಛೆಯಂ ಸಲಿಸುತ್ತುಂ ಲಿಂಗಿಗಳ್ ವಿಭೂತಿ ರುದ್ರಾಕ್ಷಿ ಸಹಿತಮಿಪ್ಪರ್ಗೆ ಸಕಲ ಕರ್ಮಂ ಪೋಗಿ ಕೈಲಾಸಕ್ಕೆಯ್ದುವರ್. ಸಪ್ತವ್ಯಸನದಿಂದಂ ಪಾಪಮಿಲ್ಲೆಂದು ಕೊಲೆ ಹುಸಿ ಕಳವು ಪಾದರ ಸೂಳೆ ಸುರಾಮಾಂಸ ಮಧು ಮೊದಲಾದವರಿಂ ಪಾಪಮಿಲ್ಲೆಂದು ಶಾಸ್ತ್ರಮಂ ಮಾಡಿ ಕಲಿಸಿ ಹಾದರಿಗರ್ಗಂ ಮಿಂಡ ಜಂಗಮರ್ಗಮವರ ವ್ಯಸನಕ್ಕನುಕೂಲಂ ಮಾಡಿಸಿಕೊಡುತ್ತಂ ಬೇವಿನ ಬೀಜದನಿತು ಲಿಂಗಮುಳ್ಳಂಗಾವ ದೋಷಂಗಳ್ ಪೊರ್ದವಾತಂ ಕೈಲಾಸಕ್ಕೆ ಸಲ್ಗುಮೆಂದನೇಕ ದ್ರವ್ಯಮಂ ಕೊಡುತಿರ್ಪುದು ಕೆಲರಾಸೆವಟ್ಟು ಕಲ್ಲು ಅಡಕೆ ಬದನೆಯ ಕಾಯಿ ಮೊದಲಾದುವಂ ಕಟ್ಟಿಕೊಂಡು ಬಂದು ಬಸವನಿಂ ದ್ರವ್ಯಮಂ ಪಡೆವರ್. ಲಿಂಗಮಿಲ್ಲದವನಂ ಭವಿಯೆಂದು ನೋಡದೆ ಕೂಲಿಸುವನೆಂದು ಬರಿಯ ಸೆಜ್ಜೆ ವಸ್ತ್ರಾದಿಗಳಂ ಕೊರಳೊಳ್ ಕಟ್ಟಿ ಬಂದು ಮನ್ನಣೆವಡೆವರ್.

ಒಬ್ಬ ಬಳ್ಳಮಂ ಕವಚಿಕ್ಕಿ ಲಿಂಗಮೆಂದರ್ಚಿಸಿ ಧನಮಂ ಪಡೆದಂ. ಕಾರಗೊಟ್ಟೆಗನೆಂಬ ಗೊಲ್ಲನಾಡಿನ ಹಿಕ್ಕೆಯಂ ಲಿಂಗಮೆಂದರ್ಚಿಸಿ ಬಸವನಿಂ ಸಿರಿಯಂ ಪಡೆದಂ. ಬಾಗೂರ ಬೊಮ್ಮಂ ಜೋಳದ ರಾಶಿಯನರ್ಚಿಸಿ ಭಾಗ್ಯವಂತನಾದಂ. ಲಿಂಗಮಜ್ಜನಕ್ಕೆ ಪಾಲಂ ತಪ್ಪ ಸ್ತ್ರೀಯು ನಾಯನೆಡಹಿ ಬೀಳಲವಳಂ ಬಸವನೆತ್ತಿಕೊಂಡು ಬಂದು ಸಾಲ್ವನಿತು ಪೊನ್ನಂ ಕೊಟ್ಟಂ. ಮಿಂಡ ಜಂಗಮನ ಸೂಳೆ ಬಸವರಾಜನರಸಿ ನೀಲಮ್ಮನುಡುವ ಪೀತಾಂಬರಮಂ ಬೇಡಿ ಕೊಡದೆ ಪೋದಳೆಂದು ಪೇಳ್ದಾಗಳೆ ಆಕೆಯ ಸೀರೆಯ ಕೊಡಿಸುವಂ. ಮಿಂಡ ಜಂಗಮಂ ಸೂಳೆಯ ಕುಚಂಗಳಂ ಲಿಂಗಮೆಂದರ್ಚಿಸಿ ಪೊಡೆವಟ್ಟು ತಕ್ಕೈಸಿದನೆಂದೊಡಾತಂಗೆ ಕೈಲಾಸಮಾಯ್ತೆಂದು ನಂಬುವಂ. ಮಿಂಡ ಜಂಗಮಂ ಸೂಳೆಯೊಳುಪವಿಷ್ಟನಾಗಿ ಕೂಡಿದೊಡಂ ಶಿವಲಿಂಗಮಂ ಪಾಣಿಪಟ್ಟದೊಳ್ ಪ್ರತಿಷ್ಠೆಯಂ ಮಾಡಿದನೆಂದೀರ್ವರಂ ಪೂಜಿಸಿ

ಪೊಡೆವಡುವಂ. ಇಂತನೇಕ ತೆರದ ಲಿಂಗಾರ್ಚನೆಯಂ ನಂಬಿ ಭಕ್ತನಾಗಿ ಬಸವಂ ಅಗ್ಗಣಿ ಹೊನ್ನ, ಕೈಕೂಲಿ ಚಾಮು, ಹಾದರದ ಬೊಮ್ಮ, ಕನ್ನದ ಮಾರ, ನುತಿಗೆ ಚಾದ, ಒಕ್ಕಲಿಗ ಮುದ್ದ, ಮಾದಿರಾಜ, ಕುಂಬಾರ ಗುಂಡ, ಮಡಿವಾಳ ಮಾಚ, ಪೊಲೆಯರ ಹೊನ್ನ, ಮಾದಾರಿ ಚನ್ನಂ ಮೊದಲಾದ ತ್ರಿಷಷ್ಟಿ ಪುರಾತರಂ ಗೊತ್ತುಮಾಡಿ ಕಾಯಿಕವಮಂ ನಿರ್ಮಿಸಿ ಜೀವನಕ್ಕಾಧಾರಂ ಮಾಡಿಪ್ಪುದುಮೊಂದು ದಿವಸಂ ಮಡಿವಾಳ ಮಾಚಂ ಬಸವಣ್ಣನ ಮನೆ ಮಡಿಗಳಂ ಕತ್ತೆಗಳ ಮೇಲೊಟ್ಟಿಕೊಂಡು ರಾಜವೀದಿಯೊಳ್ ಬರುತ್ತುಮರಸನ ಪೆರ್ಗಡೆಗಳಂ ಕಂಡು ಭವಿಗಳ ಛಾಯಾಸ್ಪರ್ಶನಮಪ್ಪುದು ತೊಲಗು ತೊಲಗೆಂದಾರ್ಭಟಿಸಲವರ್ ಶಂಕಿಸದೆ ಸಮೀಪಕ್ಕೆವಪ್ಪುದುಂ ಕೈದುವಿಂದೀರ್ವರಂ ಕೊಂದು ಪೋಗಲವರ್ ಗತಜೀವಿಗಳಾಗೆ ಅರಸಂ ಕೇಳ್ದು ಕೋಪಿಸಿರೆ ಮಂಚಣ್ಣಂ ಬಂದು ಪುರದೊಳ್ ಶರಣರಿಂ ಲಿಂಗವಿಲ್ಲದ ಜನಕ್ಕೆ ಮಾಳ್ಪ ಬಾಧೆಯೆಲ್ಲಮಂ ಸವಿಸ್ತರಂ ಪೇಳೆ ಆ ಕ್ಷಣದೊಳೆ ಮಡಿವಾಳ ಮಾಚನಂ ಪೆಡಗಟ್ಟು ಕಟ್ಟಿ ತರಿಸಿ ಎರಡು ಕಣ್ಣಂ ಕೀಳಿಸಿ ಬಸವನ ಕಡೆ ದುಷ್ಟನೆನೆ ಆಜ್ಞೆಗೆಯ್ಸಿ ಬಿಡಲಾತಂ ಬಸವಂಗೆ ಮೊರೆಯಿಡೆ ರಾಯನಂ ಕೊಲಲ್ ಯೋಚಿಸಿ ಕ್ರಮದಿಂದೀರ್ವರ್ ತೀಕ್ಷ್ಣಪುರುಷರಂ ಮಾವಿನಪಣ್ಣಂ ಕಾಣಿಕೆಗೊಡುವ ವ್ಯಾಜದಿಂದೊಡ್ಡೋಲಗಂಗೊಟ್ಟಿರ್ದ ಬಿಜ್ಜಲರಾಯನಲ್ಲಿಗಟ್ಟಲವರ್ ಪೋಗಿಯರಸನಂ ನಿಶಿತಮಪ್ಪಾಯುಧದಿಂ ತರಿದು ತಾವು ತಪ್ಪಿಸಿಕೊಂಡರ್. ಆಗಳೆ ಬಸವಂ ತನ್ನ ಜನಂಗೂಡಿ ಬಂದು ಸತ್ತಿರ್ದರಸನಂ ನೋಡಿ ತಚ್ಛರೀರಮಂ ನಿಕ್ಷೇಪಂಗೆಯ್ಸಿ ಮರಿ ಬಿಜ್ಜಲಂಗೆ ಲಿಂಗಧಾರಣೆಯಂ ಮಾಡಿ ಪಟ್ಟಂಗಟ್ಟಿ ಚನ್ನಬಸವಂಗೆ ಸರ್ವಾಧಿಕಾರಮಂ ಕೊಟ್ಟು ಬಸವಂ ನಿಶ್ಚಿಂತನಾಗಿ ವೀರಶೈವಂ ಪೆರ್ಚಿಸಿ ದಿನವೊಂದಕ್ಕೆ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಗಣಂಗಳ್ಗೆ ಅನ್ನ ಮೊದಲಾಗೆ ನೀಡಿಯವರಿಚ್ಛೆಯಂ ಸಲಿಸುತ್ತೆ ವೀರಶೈವಕಥಾಲಾಪಂಗಳನನೇಕಮಾಗೆ ಕಲ್ಪಿಸಿ ಅಳಿಯನಪ್ಪ ಚನ್ನಬಸವಣ್ಣಂಗೆ ಪೇಳಿ ಕಲಿಸಿದನವರೊಳೆ ಕಿಂಚಿತ್ತಾಗಿ ಒಂದೆರಡು ಪುರಾಣಮಂ ಪೇಳ್ವೆನೆಂತೆನೆ

ಬೇಡರಕಣ್ಣಂ ಎಂಜಲ ಮಾಂಸಮನೆಡಗಯ್ಯೊಳಾಂತು ಬಂದು ಲಿಂಗಸ್ಥಾನಮನೆಯ್ದಿ ಮುನ್ನೆ ಮಾಡಿರ್ದಲಂಕಾರಮನೆಡಗಾಲ ಕೆರದಿಂದೋಸರಿಸಿ ಬಾಯೊಳಿರ್ದ ಗಂಡೂಷೋದಕಮನುಗುಳಿ ಎಡಗಯ್ಯ ಮಾಂಸಮಂ ತೋರಿ ಕೈಲಾಸಕ್ಕೆ ಸಂದನೆಂದುಂ

ವೃತ್ತ || **ಮಾರ್ಗೇವರ್ತಿತ ಪಾದುಕಾ ಪಶುಪತೇ ರಂಗಸ್ಯ ಕೂರ್ಚಾಯತೇ**
ಗಂಡೂಷಾಂಬುನಿಷೇಚನಂ ಪುರರಿಪೋರ್ದಿವ್ಯಾಭಿಷೇಕಾಯತೇ
ಕಿಂಚಿದ್ಭಕ್ಷಿತ ಮಾಂಸ ಶೇಷ ಶಕಲಂ ನವ್ಯೋಪಹಾರಾಯತೇ
ಭಕ್ತಿಃ ಕಿಂ ನಕರೋತ್ಯಹೋ ವನಚರೋ ಭಕ್ತಾವತಂಸಾಯತೇ ||

ಮತ್ತಂ ಸಿರಿಯಾಳನ ಪೆಂಡತಿ ತನ್ನ ಮಗನಂ ಕೊಂದಟ್ಟು ಜಂಗಮರೂಪಾದ ಶಿವಂಗಿಕ್ಕಿದೊಡೆ ಕೈಲಾಸಮಂ ಪಡೆದುದಂ, ಮತ್ತಂ ಏಳು ಕೇರಿ ಸಹಾ ಕಾಂಚೀಪುರಿಯೊಳ್ ಕೈಲಾಸಕ್ಕೆ ಪೋದುದಂ, ಚೀಲಾಳಂ ತನ್ನರಸಿಯಂ ಜಂಗಮಗಿತ್ತು ಶಿವಪುರಿಗೆ ಸಂದುದಂ,

ಪಿಟ್ಟವ್ವೆಗಾಳಾಗಿ ಸಿತಂಕ[ಟ್ಟೆ]ಗೆ ಮಣ್ಣಡಕಿ ಕೈಲಾಸಕ್ಕೆ ಸಂದುದಂ ಅಜಮಿಳಂ ಮಾತಂಗಿಯೊಡಗೂಡಿ ಮರನೇರಿರ್ದು ಮಗಳ್ ಪ್ರಾಯಕ್ಕೆವರೆ ವೃದ್ಧೆಯಪ್ಪಳಂ ಮರದಿಂ ತಳ್ಳಿಬಿಟ್ಟು ಸುತೆಯೊಡಗೂಡಿ ನಾರಂದನಂ (?) ಪಡೆದು ಕೈಲಾಸಕ್ಕೆ ಪೋದರೆಂಬುದಂ, ಶಿವಭಕ್ತೆಯ ಪಾಕರುಚಿಯಂ ನೋಡಲು ಜಂಗಮನಾಗಿ ಬರೆ ತನ್ನ ಪುರೀಷಮಂ ನೆಲವಿನೊಳಿಡಲದ ತರಿಸಿಯುಂಡು ಕೈಲಾಸಕ್ಕೊಯ್ದನೆಂಬುದು

ಮತ್ತಂ ಬಾಗೂರ ಕಥೆ ಸಾನಂದ ಗಣೇಶನ ಚರಿತೆ ಹಾದರದ ಬೊಮ್ಮನಾದಿ ಯಾಗರುವತ್ತುಮೂವರ ಕಾಯಕರ ಪ್ರಸಂಗಂ ಅಮ್ಮವ್ವೆ ಸುಗ್ಗವ್ವೆ ಬಾಚವ್ವೆ ಹೇರೂರ ಹೆಣ್ಣಾದಿಯಾದನೇಕ ಶರಣರ ಕಥೆಗಳಂ ಪೇಳುತ್ತುಂ ತನ್ನ ಕಾಲ್ತೊಳೆದುದಕಮಂ ತಾನುಂ ಕುಡಿದು ತನ್ನ ದೇವರಿಗೆರೆದು ಗಣಂಗಳ್ಗಂ ಕುಡಿಸಿ ಎಂಜಲು ಮೈಲಿಗೆ ಸೂತಕಾದಿಗಳಂ ಜಾತಿಭೇದಂಗಳಂ ಯೋಚಿಸದೆ ವೀರಶೈವಮೆಂದುದ್ದಂಡವೃತ್ತಿಯೊಳ್ ನಡೆಯುತ್ತುಂ ಸ್ವಯಂಬುದ್ಧರಾಗಿ ತಾ ಪಿಡಿದುದೆ ಧರ್ಮಮೆಂದು ಕುಬುದ್ಧಿಯಿಂ ಮತ ಮಂತಗಳೊಳ್ ವಾದಿಸುತ್ತೆ ಸಾವಿರದೇಳುನೂರು ಬಸ್ತಿಯಂ ಕಿತ್ತು ತಪಸ್ವಿಗಳನೇಕರಂ ವಧಿಯಿಸಿ ಕಾಲದೋಷದಿಂ ಸದ್ಧರ್ಮಮನಳಿಯುತ್ತಿರಲಿತ್ತ ಮರಿಬಿಜ್ಜಲನ ತಾಯಿ ನೆಲಮಾಳಿಗೆಯೊಳ್ ಚೈತ್ಯಂಗಳನಿರಿಸಿ ತ್ರಿಕಾಲದಲ್ಲು ಪೂಜಿಸುತ್ತೆ ಜಪ ಸ್ತೋತ್ರಾದಿಗಳಿಂದಿರುತ್ತಿರಲೊಂದು ದಿವಸಂ ತಾಯಿಯೊಡನೆ ನೆಲಮಾಳಿಗೆಯನೆಯ್ದಿ ತತ್ಪ್ರಪಂಚೆಲ್ಲಮಂ ತಾಯಂ ಬೆಸಗೊಂಡು ಬಸವನ ಪ್ರಪಂಚಮೆಲ್ಲಮಂ ಸವಿಸ್ತರಂ ಕೇಳಿ ಬುದ್ಧಿಸಾಗರಮಂತ್ರಿಯೊಳಾಳೋಚಿಸಿ ಬಸವನಂ ಗೆಲ್ವ ಪ್ರಯತ್ನದೊಳಿರ್ದ ನಿತ್ತಲರಸಿಕೆರೆ ಹಾನೆಕೆರೆ ಕೊಪಣ ಕೊಲ್ಲಾಪುರ ಲಕ್ಷ್ಮೇಶ್ವರ ಹಂಪೆ ಮುಂತಾದನೇಕ ಸ್ಥಳಂಗಳೊಳಿರ್ದ ಜಿನಾಲಯಂಗಳಂ ಮುರಿದಲ್ಲಲ್ಲಿ ಲಿಂಗದ ಗುಡಿಯೆಂದು ಲಿಂಗ ಪ್ರತಿಷ್ಠೆಯಂ ಮಾಡಿ ಅವಕ್ಕೆಲ್ಲಾ ಲಿಂಗದ ವೀರರೆಂದು ತಾನು ಮಾಡಿದವರಂ ಲಿಂಗಾರ್ಚನೆಗಿಟ್ಟು ತಮ್ಮಡಿಗಳೆಂದನ್ವರ್ಥಮಂ ಮಾಡಿದನೆಂತೆಂದೊಡೆ

ಪೂರ್ವದೊಳ್ ದಕ್ಷಬ್ರಹ್ಮನು ಈಶ್ವರನ ಮೃತಿ ನಿಮಿತ್ತಂ ಯಜ್ಞಮಂ ಮಾಡೆ ಈಶಂಗೆ ಕಷ್ಟಮಾದೊಡೆ ಯಜ್ಞಮಂ ಮಾಣಿಸಲಾರ್ಗಂ ಸಾಮರ್ಥ್ಯಮಿಲ್ಲದುದರಿಂದತಿ ಚಿಂತೆಯೊಳಿರೆ ದಾಕ್ಷಾಯಣಿ ದುಃಖಿಸುತ್ತೆ ವಿನಾಯಕನ ಕಳುಹಿಸಲಾತಂ ಪೋಗಿ ಮೋದಕಾದಿಗಳಂ ತಿನ್ನುತ್ತೆ ಮರೆದಿರೆ ಈಶ್ವರಂಗೆ ಪ್ರಾಣಾವಸ್ಥೆಯೊಳತಿರೌದ್ರದಿಂದುರಿಗಣ್ಣಿಂ ತಪ್ತ ಬೆ[ಮ]ರ್ವನಿಯಂ ತೆಗೆದಿದಿರೊಳಿರ್ದ ಕಂಭದ ಮೇಲೊಗೆದಾಕ್ಷಣದೊಳೆ ಅತ್ಯಂತ ರೌದ್ರಮೂರ್ತಿ ಸಹಸ್ರಾಯುಧಂ ಶರಭಾಕಾರದಿಂದತಿಭಯಂಕರಮಾದ ವೀರಭದ್ರಂ ಕಾಸೆವೆರಸಿ ಕಂಬದಿಂ ಪೊರಮಟ್ಟು ಸಿಂಹಾವತಾರಮಾಗಿರ್ದು ದಕ್ಷಂ ಮಾಳ್ಪ ಯಜ್ಞಶಾಲೆಯಂ ಪೊಕ್ಕಲ್ಲಿ ಮೋದಕಾದಿಗಳಂ ತಿಂದು ಬೃಹತ್ಕುಕ್ಷಿಯಾಗಿರ್ದ ಜಡಮತಿಯಪ್ಪ ಗಜವದನನಂ ಕಂಡಾತನ ಪೊಟ್ಟೆಯಂ ತನ್ನೆಡಗಾಲಿಂದೊದೆದೊಡಾತನ ಪೊಟ್ಟೆಯೊಡೆಯೆ ತಾನು ಮುಂದಕ್ಕೆಯ್ದಿ ದಕ್ಷಬ್ರಹ್ಮನ ಶಿರಚ್ಛೇದನಮಂ ಮಾಡಿದನನಿತರೊಳೆ ಮೃಡಾನಿ ಬಂದು ದುಃಖಿಸುತ್ತುಂ ತಂದೆಯಂ ತನ್ನ ಮಗನುಮಂ ಎತ್ತುವುದೆಂದು ಬೇಡಿಕೊಳ್ವುದುಂ ದಕ್ಷಬ್ರಹ್ಮನ ಮುಂಡದೊಳ್ ಪೋತನ

ತಲೆಯಂ ಪತ್ತಿಸಿ ವಿನಾಯಕನ ಪೊಟ್ಟೆಗೆ ಸರ್ಪನಂ ಕಟ್ಟಿ ಜೀವಮಂ ಪಡೆದೆಬ್ಬಿಸಿ ಯಜ್ಞಮಂ ಮಾಡಿಸಿ ಈಶ್ವರನಂ ಬದುಕಿಸಿದನಾ ವೀರಭದ್ರನ ಪ್ರತಿರೂಪುಧರರೀ ಲಿಂಗದ ವೀರರೆಂದವರ್ಗೆ ಷಟ್ಚಕ್ರ ಪುರಾಣಮಂ ಕಲಿಸಿ ಯಂತ್ರ ಮಂತ್ರ ತಂತ್ರಾದಿಗಳಂ ಪೇಳಿ ತಮ್ಮಡಿಗಳೆಂದು ಕೊಂಡಾಡುತ್ತುಂ ನೀರಂ ತರುವವರ್ಗೆ ಕಂಬಿ ಒಡೆಯರೆಂದು ತಾಳ ಮೇಳದವರ್ಗೆ ಮೇಳದೊಡೆಯರೆಂದು ಕೆರೆ ಪದ್ಮರಸನ ಸಂತತಿ, ಕೇಶಿರಾಜನ ಸಂತತಿ, ಮಲುಹಣ ಸಂತತಿ, ಮಯೂರ ಸಂತತಿಯವರಂ ಪಂಡಿತಾರಾಧ್ಯ ರೇವಣಾರಾಧ್ಯ ಏಕೋರಾಮಾರಾಧ್ಯ ಮರುಳಾರಾಧ್ಯ ಚತುಃಸಿಂಹಾಸನಾಧಿಪತಿಗಳಂ ಮಾಡಿ, ಆ ಮರುಳಾರಾಧ್ಯನಂ ಮಾನ್ಯರೆಂದಿರಿಸಿ ಲಿಂಗರಾಜ ಬಸವರಾಜ ಚೆನ್ನರಾಜಾದಿಗಳಂ ರಾಜ್ಯಮನಾಳುವ ರಾಜರೆಂದು ನಿಯಮಿಸಿ, ಚೆನ್ನಬಸವ ಮುದ್ದುಬಸವ ವೀರಬಸವಾದಿಗಳಂ ವೈಶ್ಯರೆಂದು ವ್ಯವಹಾರದೊಳ್ ನಿಲಿಸಿ, ಸಿದ್ದಗೌಡ ಮುಂದಗೌಡ ಮಹಂತಗೌಡಾದಿಗಳಂ ಕೃಷೀವಲರಂ ಮಾಡಿ, ವೈಶ್ಯ ಶೂದ್ರಾದಿಗಳೊಳ್ ರತ್ನಬಣ್ಣ ರಂಗುಬಣ್ಣ ಸಾರಬಣ್ಣ ಚೋರಿಬಣ್ಣ ಮೊದಲಾದ ಪದಿನೆಂಟು ಜಾತಿಗಳ್ಗಂ ಪದಿನೆಂಟು ಬಣ್ಣಮಂ ಕಲ್ಪಿಸಿ ಸರ್ವರು ಲಿಂಗಧಾರಿಗಳಾಗೆ ವೀರಬಸವಶೆಟ್ಟಿ ಕೋರೀಮನೆತನಮೆಂದು ಬಣ್ಣಕ್ಕೆ ಅಧ್ಯಕ್ಷನಂ ಮಾಡೆಯಾತಂ ತನ್ನಾಜ್ಞೆಯೊಳೆ ಬಣ್ಣಂಗಳಂ ನಿಯಮಿಸಲ್ ಸಾಲು ಮೂಲೆಯೆಂದವರವರ್ಗೆ ಸಂಕಲ್ಪಂ ಮಾಳ್ಪಲ್ಲಿ ಪಂಚಾಳನುಂ ಬೆಸ್ತನುಂ ಮಾದಿಗರಾದಿ ಕೆಲಂಬರುಂ ಒದಗದೆ ನಿಯಮಮಂ ಬಿಟ್ಟು ಪೋಗಲವರಂ ಶಿಕ್ಷಿಸಲ್ ಪೊಲೆಯಂ ಪಂಥಮನಾಡಲಾತಂಗೆ ಮೆಚ್ಚಿ ಬರಿದಿನ ಮುದ್ರೆಯ ಸಟ್ಟುಗಮಂ ಕೊಟ್ಟು ಪಂಚಾಳ ಮೊದಲಾದವರ ಬಣ್ಣ ಕೀಳೆಂದು ಗದ್ದುಗೆಯಂ ಕಳೆವರ್ ಬ್ರಾಹ್ಮಣರೊಳ್ ವಾದಿಸಿ ವೇದಮಂ ನಾಯಕುನ್ನಿಗಿತ್ತೊಡದು ಕೂಗಿದೊಡೆ ಓದಿಸಿದೆವೆಂದು ವ್ಯಾಸನ ಬಾಹುವಂ ತರಿದೆವೆಂದು ನಂದಿಧ್ವಜದೊಳ್ ಕಟ್ಟಿದರ್.

ಈ ಪ್ರಕಾರ ನಡೆವಲ್ಲಿ ಮರುಬಿಜ್ಜಲಂ ಚತುರಂಗಬಲಸನ್ನದ್ಧನಾಗಿ ಬಸವನಂ ಮುತ್ತಿ ಪಿಡಿಯಲ್ ಬಪ್ಪುದುಂ ಸಿದ್ಧಲಿಂಗ ಬಾಚಿರಾಜ ಮಾದಿರಾಜ ಮೊದಲಾಗೆ ಪದಿನಾರು ಸಾವಿರ ಮುಖ್ಯ ಗಣಂಗಳ್ವೆರಸು ನಿತ್ತರಿಸಲಾರದೆ ಜಗುನೆಯಂ ಪಾಯ್ದು ಪರ್ವತದೊಳಗಣ ಮಹಾಮಡುವಪ್ಪ ಉಳುವೆಯೆಂಬ ಖಾತದೊಳ್ ಮುಳುಗಿದರ್. ಚೆನ್ನಬಸವ ರುದ್ರದೇವತಾದಿಯಾಗೆ ನಾಲ್ವಾಸಿರ್ವರರಸುತ್ತುಂ ಪೋಗಿ ಆ ಮಡುವಿನೊಳೆ ಐಕ್ಯವಾದರ್. ಮರುಬಿಜ್ಜಲಂ ಲಿಂಗಮನೀಡಾಡಿ ತಾಯಿ ಪೇಳ್ದಂತೆ ಪ್ರಾಯಶ್ಚಿತ್ತಂಗೊಂಡಂ. ಆತನ ಬಂಧುಗಳ್ ಕೆಲಂಬರ್ ವೀರಶೈವದೊಳೆ ನೆಗಳುತ್ತಿರ್ದರ್. ಬಸವರಾಜ ಸೃಷ್ಟಿ ವೀರಶೈವದೊಳ್ ಅತೀತರ್ ಆರು ಸಾವಿರ (೬೦೦೦) ವಿರಕ್ತರು, ಮೂರು ಸಾವಿರ (೩೦೦೦) ಹಂಚಿಕಂತೆ ಹನ್ನೆರಡು ಸಾವಿರ (೧೨,೦೦೦) ಗೂಡಿ ಇಪ್ಪತ್ತೊಂದು ಸಾವಿರ (೨೧,೦೦೦) ಗಣಂಗಳುಂ ಮತ್ತಮವರೊಳೆ ಮುರಿಗೆ ಸಂಪಾದನೆ, ಚೀಲಾಳ, ಗದ್ದೆಗಟ್ಟುಗೂಳಿಕೊಂದ, ನಾಗಭಕ್ಷಣ, ಕೆಂಪಿನಗ್ಘಣಿ, ಅರೆಯಕಟ್ಟು ನೀಲಿ ಸಂತತಿ ಮೊದಲಾದ ಸಂತಾನಮುಂ, ಭಂಕ, ಹೆಂಡದಮಾರ, ಕನ್ನದ ಹಾದರದ ಬ್ರಹ್ಮ, ಕಟ್ಟಿಗೆ ಸಂಗ, ಮೋಳಗೆಮಾರ, ಮೂಗಸಂಗ, ಮುಸುಡಿ ಚೌಡ,

ಕೂಗಮಾರ, ಮಾದಿಗ ಹರಳ, ಹಡಪದಪ್ಪಣ್ಣ, ಬಿಬ್ಬಿಬಾಚಿ, ಅಮ್ಮಿ, ಸುಗ್ಗಿ ಸೂಳೆ ಮೊದಲಾಗೆ ಅರುವತ್ತು ಮೂರು ಕಾಯಿಕ ಭಕ್ತೆಯರ್ ತಂತಮ್ಮ ನಡೆಯೊಳೆ ವರ್ತಿಸುತ್ತಿರ್ದರ್. ಸಂಗನ ಬಸವನುಂ ರಾಜನುಂ ಸಿದ್ಧರಾಮನು ಸಂಗಮದೊಳೆ ಕಪ್ಪಡಿಯೊಳೊರಗಿ ಭೂಮಿಯೊಳೈಕ್ಯವಾದರಿವೆಲ್ಲ ಬಸವನ ವೃತ್ತಕಂ. ಅವರೊಳೆ ವಿದ್ವಾಂಸರಾದಾಯಾಯಾ ಅಧಿಪತಿಗಳ್ ಇತಿಹಾಸ ಪುರಾಣಂಗಳೆಂದು ಕಲ್ಪಿಸಿ ಮುಂದೆ ಚೆನ್ನಬಸವಂ ಪುಟ್ಟುವನೆಂಬುದು ಮೊದಲಾದ ಕಾಲಜ್ಞಾನಮಂ ಪೇಳ್ದರ್.

ಈ ಪ್ರಕಾರ ಮರಿಬಿಜ್ಜಲನಿಂದಿತ್ತಲೂ ದೇಶದೊಳ್ ವೀರಶೈವಂ ಪ್ರಬಲಮಾಗಿರಲಿತ್ತ ಕಾಂಚೀಪುರಿಯೊಳ್ ಶಿವಕೋಟಿ ಮಹಾರಾಜನೆಂಬಾತನನುಜಂ ಶಿವಾಯನಂಬೆರಸು ರಾಜ್ಯಂಗೆಯ್ಯುತ್ತೆ ಕೋಟಿಲಿಂಗ ಸ್ಥಾಪನೆಗೆಯ್ದವರೊಳ್ ಭೀಮಲಿಂಗದ ಗುಡಿಯೊಳ್ ದಿನವೊಂದಕ್ಕೆ ದ್ವಾದಶ ಖಂಡಂಗ ತಂಡುಲದನ್ನಮಂ ವಿನಿಯೋಗಂ ಮಾಡಿಸುತ್ತಿರ್ಪಿನಮಿತ್ತಲ್ ಉತ್ಕಲಿಕಾಗ್ರಾಮದೊಳುದ್ಭವಿಸಿದ ಸಮಂತಭದ್ರಾಚಾರ್ಯರೆಂಬ ಯತಿಪತಿಗಳ್ ಮಣುವಕಹಳ್ಳಿಯೊಳನಶನಾದಿ ತಪದಿಂ ಕ್ರಿಯಾಯುಕ್ತರಾಗಿರಲೊಂದು ಕಾರಣಮಾಗೆ ಭಸ್ಮಕವ್ಯಾಧಿ ಪುಟ್ಟೆಯದಕ್ಕೆ ಪ್ರತೀಕಾರಮಿಲ್ಲದುದರಿಂ ಸ್ವಗುರುವ ಸಮೀಪಮನೆಯ್ದಿ

ಆರ್ಯಾ || ಉಪಸರ್ಗೇ ದುರ್ಭಿಕ್ಷೇ ಜರಸಿರುಜಾಯಾಂಚ ನಿಷ್ಪ್ರತೀಕಾರೇ
ಧರ್ಮಾಯ ತನುವಿಮೋಚನಮಾಹುಸ್ಸಲ್ಲೇಖನಾಮಾರ್ಯಾಃ

ಎಂದು ಸಲ್ಲೇಖನಮಂ ಬೇಡುವುದುಂ ಗುರುಗಳೆಂದರ್ ನಿಮ್ಮಿಂದಂ ಮುಂದೆ ಧರ್ಮೋದ್ಧಾರಮಪ್ಪುದರಿಂದೆಲ್ಲಿಯಾನುಂ ತೃಪ್ತಿಯಪ್ಪಂತು ಭುಂಜಿಸಿ ರೋಗೋಪಶಮಮಾಗೆ ಪುನರ್ದೀಕ್ಷೆಗೊಳ್ವುದೆಂಬುದುಂ ಕಾಂಚೀಪುರಮನೆಯ್ದಿ ಶಿವಕೋಟಿಮಹಾರಾಜನಂ ಕಂಡಾಶೀರ್ವಾದಂಗುಡಲವರ ಶರೀರದ ಭದ್ರಾಕಾರಮಂ ವಾಗ್ವಾಲಮಂ ನೋಡಿ ಆಶ್ಚರ್ಯಮಾಗೆ ಶಿವನೆಂದೆ ಬಗೆದು ನಮಸ್ಕರಿಸಿ ನೀಂ ಮಾಳ್ಪ ಧರ್ಮಮೇನೆಂಬುದುಂ ತನ್ನ ಶಿವಭಕ್ತಿ ಶಿವಾಚಾರಮಂ ಕೋಟಿಲಿಂಗಾರಾಧನೆಯಂ ಭೀಮಲಿಂಗಕ್ಕೆ ಬಿಟ್ಟಿಹ ಪಡಿತರಮಂ ಪೇಳೆ ನಿನ್ನ ಧರ್ಮಮನಾ ಕೂಳುಮಂ ಶಿವಾರ್ಪಣಂ ಮಾಳ್ಪೆನೆಂದು ಪನ್ನೆರಡು ಖಂಡುಗದಕ್ಕಿಯನ್ನಕ್ಕೆ ತಕ್ಕ ವ್ಯಂಜನಪದಾರ್ಥಮನಿಕ್ಕಿಸಿ ಕವಾಟಬಂಧಮಂ ಮಾಡಿ ಪೋಗವೇಳ್ದು ತಾನುಮಾ ಭತ್ತಮೆಲ್ಲಮನೊಂದಗಳುಳಿಯದಂತೆ ತನ್ನುದರಾಗ್ನಿಗಾಹುತಿಗೊಟ್ಟು ತಣಿಪಿ ಕದಮಂ ತೆರೆಯಲತ್ಯಾಶ್ಚರ್ಯಂಬಟ್ಟು ಮರುದಿವಸಂ ರಾಶಿಯೊಳರ್ಧಾಂಶದೊಳೊಂದಂಶಮುಳಿದೊಡಿದೇಕುಳಿದುದೆಂದು ಬೆಸಗೊಳೆ ದೇವರು ಪ್ರಸಾದ ಶೇಷಾನ್ನಮನಿರಿಸಿದರೆಂದೊಡಂ ಬೆಳಗಿನೊಳ್ ನಾಲ್ಕರೊಳೊಂದಂಶಮುಳಿಯೆ ಪರೀಕ್ಷಿಸಲಾರೈದು ನೋಡಿ ತಿಳಿದೈದನೆ ದಿವಸಂ ಚತುರಂಗಬಲಂಬೆರಸರಸಂ ಮೂವಳಸು ಸುತ್ತಿ ಬಾಗಿಲಂ ತೆರೆವುದೆಂದು ಕಲಕಲರವಂ ಪೊಣ್ಮೆ ತದುಪಸರ್ಗಂ ಪಿಂಗುವನ್ನಮಾಹಾರ ಶರೀರನಿವೃತ್ತಿಗೆಯ್ದು ಸರ್ವಜ್ಞನ ವಸ್ತುಸ್ತವಾಗಿ ತ್ರಿವಿಧ ಸ್ತೋತ್ರಮನೇಕ ಚಿತ್ತದಿ ವೃಷಭಾದಿ

ಇಪ್ಪತ್ತುನಾಲ್ವರ್ಗಮುಪಜಾತಿವಂಶಸ್ಥ ಸ್ಕಂಧ ರಥೋದ್ಧತೆ ಮೊದಲಾದ ನಾನಾ ಜಾತಿ ವೃತ್ತಪದ್ಯಂಗಳಿಂ ಪೇಳಲ್ ತೊಡಗಿಯಷ್ಟಮತೀರ್ಥಕರ ಚಂದ್ರಪ್ರಭಸ್ವಾಮಿಗೈದು ಸ್ತುತಿಯಂ ಪೇಳಿ ಭೀಮಲಿಂಗಮನೀಕ್ಷಿಸುವುದುಂ ಜಿನ ಶಾಸನದೇವಿಯಿಂದಾ ಲಿಂಗದೊಳೆ ಮೂರು ಪುರುಷ ಪ್ರಮಾಣದ ಸುವರ್ಣಮಯ ಚಂದ್ರಲಾಂಛನಮಪ್ಪರ್ಹದ್ಭಟ್ಟಾರಕಪ್ರತಿಮೆಯು ಯಕ್ಷ ಯಕ್ಷೀ ಪ್ರತಿಮೆಯಿಂದಷ್ಟ ಮಹಾಪ್ರಾತಿಹಾರ್ಯದೊಡನೆ ಜಾಜ್ವಲ್ಯಮಾನವಾಗೆ ಸೂರ್ಯೋದಯಮಾದಂತುದ್ಭವಿಸಿ ತೋರುವುದುಂ ಮುನೀಶ್ವರಂ ಬಾಗಿಲಂ ತೆರೆದುಳಿದ ವೀತರಾಗನ ನುತಿಗೆಯ್ಯುತ್ತೆ ನಿಂದಿರ್ಪುದುಂ ಆ ಮಾಹಾತ್ಮ್ಯಕ್ಕತ್ಯಾಶ್ಚರ್ಯಮಾಗೆ ಶಿವಕೋಟಿಮಹಾರಾಜಂ ಭವ್ಯನಪ್ಪುದರಿಂ ನಿಜಾನುಜಂವೆರಸಾ ಮುನಿಮುಖ್ಯರ ಶ್ರೀಪಾದಕ್ಕಂ ಪೊಡೆವಟ್ಟಿಪ್ಪುದುಂ ಮಹಾವೀರ ವರ್ಧಮಾನಪರ್ಯಂತರ ನುತಿಗೆಯ್ದು ಕೈಯೆತ್ತಿಕೊಂಡು ಪರಸೆ ಅರಸಂ ಸದ್ಧರ್ಮಸ್ವರೂಪಮಂ ಸವಿಸ್ತರಂ ಕೇಳ್ದು ಸಂಸಾರ ಶರೀರಭೋಗನಿರ್ವೇಗದಿಂ ಶ್ರೀಕಂಠನೆಂಬ ಸುತಂಗೆ ರಾಜ್ಯಮನಿತ್ತು ಶಿವಾಯನಂಗೂಡಿಯಾ ಮುನಿಪರಲ್ಲಿಯೆ ಜಿನದೀಕ್ಷೆಯನಾಂತು ಶಿವಕೋಟ್ಯಾಚಾರ್ಯರಾಗಿ ರತ್ನಮಾಲಾದ್ಯನೇಕ ಶಾಸ್ತ್ರ ಪ್ರವರ್ಧಕರಾದರಾ ಮಹಾತ್ಮ್ಯದಿಂ ಕೆಲಂಬರಣುವ್ರತಧಾರಿಗಳಾದರ್, ಕೆಲರ್ ಸಮ್ಯಕ್ತ್ವಮಂ ಕೈಕೊಂಡರಾ ಭಾವಿತೀರ್ಥಕರರಪ್ಪ ಸಮಂತಭದ್ರಸ್ವಾಮಿಗಳ್ ಪುನರ್ದೀಕ್ಷೆಗೊಂಡು ತಪಸ್ಸಾಮರ್ಥ್ಯದಿಂ ಚತುರಂಗುಲ ಚಾರಣತ್ವಮಂ ಪಡೆದು ರತ್ನಕರಂಡಕಾದಿ ಜಿನಾಗಮ ಪುರಾಣಮಂ ಪೇಳಿ ಸ್ಯಾದ್ವದವಾದಿಗಳಾಗಿ ಸಮಾಧಿವಡೆದರ್.

ವೃತ್ತ || ಪೂರ್ವಂ ಪಾಟಲಿಪುತ್ರಮಧ್ಯನಗರೇ ಭೇರೀ ಮಯಾ ತಾಡಿತಾ
ಪಶ್ಚಾನ್ಮಾಳವಸಿಂಧುಢಕ್ಕ ವಿಷಯೇ ಕಾಂಚೀಪುರೇ ವೈದುಷೇ
ಕರ್ನಾಟೇ ಕರಹಾಟಕೇ ಬಹುಭಟೇ ವಿದ್ವತ್ಕಟೇ ಸಂಕಟೇ
ವಾದಾರ್ಥಂ ವಿಜಹಾರ ಸಂಪ್ರತಿ ದಿನಂ ಶಾರ್ದೂಲವಿಕ್ರೀಡಿತಮ್ ||
ಅವಟತಟಿಮಟತಿ ಝಡಿತಿ ಸ್ಫುಟ ಚಟುವಾಚಾಟ ಧೂರ್ಜಟೇರಪಿ ಜಿಹ್ವಾ
ವಾದೀಭೇ ಸಮಂತಭದ್ರೇ ಸ್ಥಿತವತಿ ಸತಿ ಕಾ ಕಥಾಽನ್ಯೇಷಮ್ ||

ಟೀ || ಕಾಂಚ್ಯಾನ್ನಗ್ನಾಟಕೋಽಹಂ ಮಲಮಲಿನ ತನುರ್ಲಾಂಬುಸೇ ಪಾಂಡು ಪಿಂಧುಃ
ಪುಂಡ್ರೇ ದುಶ್ಯಾಕ ಭಿಕ್ಷುರ್ದಶಪುರನಗರೇ ಮೃಷ್ಟಭೋಜೀ ಪರಿವ್ರಾಟ್
ವಾರಾಣಸ್ಯಾಮ ಭೂವಂ ಶಶಿಧರ ಧವಲಃ ಪಾಂಡುರಾಗಸ್ತಪಸ್ವೀ
ರಾಜನ್ಯೋಸ್ಯೋಸ್ತಿ ಶಕ್ತಿಃ ಪ್ರವದತು ಪುರತೋ ಜೈನ ನಿರ್ಗ್ರಂಥವಾದೀ

ಅವರ ಶಿಷ್ಯರ್ ಪ್ರಭಾಚಂದ್ರಸ್ವಾಮಿಗಳ್ ತರ್ಕಕರ್ಕಶರಾಗಿ ಸಾಂಖ್ಯ ಸೌಗತಾದಿ ಪ್ರತಿವಾದಿಗಳೆಂಬ ಮದೋನ್ಮತ್ತ ಗಜಸಮೂಹಕ್ಕೆ ಸ್ಯಾದ್ವಾದ ವನಕೇಸರಿಯಂತಿಪ್ಪುದುಂ ವೇದಾಂತಿಗಳೊಳ್ ಸಂವಾದಮಾಗೆ ಅಮಾವಾಸ್ಯೆಯೊಳೆ ರಾಕೇಂದುವಂ ಕಾಣಿಸಲೆಂದು ನುಡಿವುದುಂ ಜ್ವಾಲಾಮಾಲಿನಿಯನಾರಾಧಿಸಿ ಹನ್ನೆರಡು ಗಾವುದ ಪರ್ಯಂತಂ ಚಂದ್ರಪ್ರಭೆ

ಕಾಣ್ಬಂತೆ ಬೆಳ್ಳಿಯ ಹರಿವಾಣಮಂ ಮಂತ್ರಿಸಿ ಅಂತರಿಕ್ಷಕ್ಕೆ ಬಿಡೆ ನಾಲ್ಕು ಜಾವ ಪರ್ಯಂತರಂ ಚಂದ್ರೋದಯಂ ತೋರಿ ಮಿಥ್ಯಮಂ ಪತ್ತುವಿಡಿಸಿದರ್. ಅಲ್ಲಿಂದಿತ್ತಲ್ ಆಗಮಪುರಾಣ ಶಾಸ್ತ್ರಂಗಳ ಪೇಳ್ವರುಂ ಕೇಳ್ವರುಮಿಲ್ಲದೆ ವ್ಯಾಕರಣಾದಿ ಶಬ್ದ ಶಾಸ್ತ್ರ ಜ್ಞಾನಹೀನರಾಗಿಪ್ಪುದುಂ ಅರ್ಹದ್ವಿಜಕುಮಾರರ್ ಅಕಲಂಕ ನಿಷ್ಕಳಂಕರೆಂಬ ಸಹೋದರರ್ ಬೌದ್ಧರ ಗುರುವಪ್ಪ ಭಗವದ್ದಾಸನೆಂಬೈನೂರ್ವರ್ ವಟುಗಳ್ಗೆ ಶಬ್ದಶಾಸ್ತ್ರಮಂ ಪೇಳುತ್ತಿರಲಾ ಮಠದೊಳೆ ತಾಮಿರ್ವರುಮರಿಯದಂತು ಪೋಗಿ ವಿದ್ಯಾಭ್ಯಾಸಂಗೆಯ್ಯುತ್ತಿರ್ದು ಕೆಲವಾನುಂ ದಿವಸಂ ಸಲ್ವಿನಂ ಬೌದ್ಧಾಚಾರ್ಯಂ ತನ್ನಾಗಮದ ಪುಸ್ತಕಮನೋದುತ್ತಿರ್ದು ಬಿಟ್ಟುಪೋಗಲವಂ ನೋಡಿ ಸಮ್ಯಗ್ದರ್ಶನ ಜ್ಞಾನ ಚಾರಿತ್ರಂಗಳ್ ಮೋಕ್ಷಮಾರ್ಗಮೆಂದಾ ಪತ್ರದೊಳ್ ಬರೆದಿರಿಸಲಾಚಾರ್ಯಂ ಬಂದದನೀಕ್ಷಿಸಿ ಜೈನ ಲಿಖಿತಮೆಂದರಿದೀ ವಟುಗಳೊಳ್ ಜೈನರಿಪ್ಪರೆಂದರಿದವರಂ ಪರೀಕ್ಷಿಸಿ ತಿಳಿದು ಅಕಲಂಕ ನಿಷ್ಕಲಂಕರೀರ್ವರಂ ಪಿಡಿದು ಕಟ್ಟಿ ಕಾರಾಗಾರದೊಳಿಕ್ಕಿ ಅವರಂ ಕೊಲಲೆಂದಿಪ್ಪಿನಂ ಸಮರಾತ್ರಿಯೊಳಾ ಮನೆಯ ಸೂರನೆತ್ತಿಳಿದುಬಪ್ಪಲ್ಲಿ ಕಾಪಿನವರ್ ಕಂಡು ಬೆನ್ನಟ್ಟಿಬರಲೊಂದು ಗಾವುದಾಂತದೊಳೆ ನಿಷ್ಕಲಂಕನಂ ಕೊಲ್ವುದುಂ ಅಕಲಂಕಂ ತಪ್ಪಿಸಿಕೊಂಡು ಬಂದು ದೀಕ್ಷೆಗೊಂಡು ದೇಸಿಗಣದ ಸಿಂಹಾಸನಕ್ಕಧೀಶನಾಗಿ ಸುಧಾಪುರದೊಳಿರ್ದಂ

ಅತ್ತಲ್ ಬೌದ್ಧರ್ ರಾಜ್ಯದೊಳೆಲ್ಲಾ ವಿದ್ಯಂಗಳಿಂದತ್ಯಂತ ಪ್ರಾಬಲ್ಯದಿಂ ಸಾಂಖ್ಯಾದಿ ಮತಂಗಳಂ ವಾದದಿಂ ಗೆಲ್ದು ವೀರಶೈವರ ಪ್ರಕರಮಂ ಪಿಡಿದು ನೀವು ಕಟ್ಟಿಪ್ಪ ಲಿಂಗಮೇನಿದನೇಕೆ ಕಟ್ಟಿದಿರಾವ ಕಾರ್ಯವಿದರಂದಮನಾಮೂಲಂ ತಿಳಿವಂತು ಪೇಳಿಮಿಲ್ಲದೊಡೀ ಲಿಂಗಮಂ ಕಳೆವುದೆಂದು ಅಧ್ಯಾಹಾರದಿಂ ಚರ್ಚಿಸೆ ಕೆಲಂಬರೆಂದರ್ ಕೈಲಾಸದೊಳೆ ಪರಮೇಶ್ವರನ ವಾಹನನಪ್ಪ ನಂದಿಕೇಶ್ವರಂ ಭೂಮಿಯೊಳ್ ವೀರಶೈವಮಂ ಪ್ರಕಟಿಸಲೋಸ್ಕರ ಬಸವಾಖ್ಯದಿಂ ಪುಟ್ಟಿ ಶರಣನಾಗಿಯದ್ಭುತಮಂ ತೋರಿ ಲಿಂಗಮಂ ಧರಿಸಿದವರ್ ಕೈಲಾಸಕ್ಕೆ ಪೋಪರೆಂದು ಬಸವಚರಿತ್ರಮಂ ಪೇಳಿದುದಕ್ಕೆ ನಿಮ್ಮ ಶಾಸ್ತ್ರಮೆಲ್ಲಂ ಗಂಧರ್ವನಗರ ವಿಳಾಸದಂತೆ ಅಸಂಭಾವ್ಯಮಪ್ಪುದೆಂದವರ ವಾಂಛಿಕೆಯ ತಮ್ಮಧ್ಯಾಹಾರವಜ್ರದಿಂ ಚೂರ್ಣೀಕೃತಂ ಮಾಡಿ ಲೋಕದೊಳ್ ಗಂಡೆಲ್ಲಾ ಪುಲ್ಲಿಂಗಂ ಪೆಣ್ಣಾದವೆಲ್ಲಾ ಸ್ತ್ರೀಲಿಂಗಮುಳಿದ ವಸ್ತುವೆಲ್ಲಂ ನಪುಂಸಕಲಿಂಗಮದರೊಳ್ ಕೆಲವು ಸ್ತ್ರೀಪುಂಸಂಗಳ್ ಕೆಲವು ತ್ರಿಲಿಂಗಂಗಳ್. ಅಲ್ಲವೆ ಶಿಶ್ನಕ್ಕಂ ವ್ಯಂಜನಕ್ಕಂ ಲಕ್ಕಣಕ್ಕಂ ಲಿಂಗಶಬ್ದಮಪ್ಪುದರಿಂದಿದಾವ ಲಿಂಗಮೆಂದು ಬೆಸಗೊಳೆ ಶೈವಪುರಾಣಮಂ ಬಲ್ಲರ್ ಕೆಲರಿಂತೆಂದರ್.

ಪೂರ್ವದೊಳ್ ಈ ಭುವನಕ್ಕಾದಿಯೊಳೊಂದು ಸಚರಾಚರಮಿಲ್ಲದನಂತಕಾಲಂ ಪೋಪಿನಮಾಶ್ರಯದೊಳ್ ಬುದ್ಬುದಮೆಂದಾಗಲನುಕ್ರಮದಿಂದೆಳೆದೆರಡು ಹೋಳಾಗಿ ಮೇಲೊಂದು ಕೆಳಗೊಂದು ಭಾಗಮಾಗಿ ಸ್ವರ್ಗ ಮರ್ತ್ಯಂಗಳೆರಡಾಗಲಂತದರ ನಡುವೆ ತನ್ನಿಂತಾನೆ ಸದಾಶಿವಂ ಪುಟ್ಟಿ ಬೆಳೆದೆಣ್ದೆಸೆಯಂ ನೋಡಿದೊಡಾರುಮಿಲ್ಲದಿರೆ ಶಂಕಿಸಿ ಆ ಶಂಕರಂ ಬಲದ ಬಾಹುವನೀಕ್ಷಿಸೆ ಬ್ರಹ್ಮನುಂ ಎಡದ ಭಾಗಮಿನೀಕ್ಷಿಸಲ್ ವಿಷ್ಣುವುಂ ಪುಟ್ಟೆ

ಕಾಂತೆಯರಿಲ್ಲದನೇಕ ಕಾಲಂ ಕಾಮತಾಪದಿಂ ಬೆಂದು ಬಿಸುಸುಯ್ದು ಮೂವರುಂ ಮರುಗುತ್ತುಂ ಹರಿಭೂಮಿಯೊಳ್ ಬಳಹದಿಂದೊಂದು ಸ್ತ್ರೀರೂಪ ಬರೆಯಲದಕ್ಕೆ ಬ್ರಹ್ಮಂ ಜೀವಮಂ ಪಡೆಯಲೀಶ್ವರಂ ಬತ್ತಲೆಯಿರ್ದ ಸ್ತ್ರೀಗಂ ವಸ್ತ್ರಮನುಡಿಸಳವಳಂ ಮೂವರುಂ ನನಗೆ ತನಗೆಂದೋರೋರ್ವರುಂ ಕೇಶಾಕೇಶಿ ಮುಷ್ಟಾಮುಷ್ಟಿ ನಖಾನಖಿ ದಂತಾದಂತಿ ದಂಡಾದಂಡಿಗಳಿಂ ಮಹಾಯುದ್ಧಂಗೆಯ್ಯುತ್ತಿರೆ ಸಕಳ ದೇವತೆಗಳುಂ ಬಂದು ಬಾರಿಸಿಯನುಚಿತಮಂ ನೆಗಳಲಾಗದೆಂದಾಳೋಚಿಸಿ ತಿಳಿದಿಂತೆಂದರ್. ಬರೆದವಂ ತಂದೆ ಚೈತನ್ಯಗೊಟ್ಟಂ ತಾಯಿ ವಸ್ತ್ರಂಗೊಟ್ಟಂ ಗಂಡನೆಂದಾ ಕನ್ನೆಯಂ ಶಿವಂಗೆ ಕುಡೆ ಸುಖದಿನಿಷ್ಟ ಭೋಗ ಕಾಮಮನನುಭವಿಸುತ್ತಿಪ್ಪುದುಂ ಹರಿಬ್ರಹ್ಮರ್ ಸೈರಿಸದೆ ಬಂದಾ ಕನ್ನೆಯಂ ಝಂಪಿಸೆಯಾಕೆ ಲಜ್ಜೆಯಿಂ ನೀರಾಗೆ ಪರಿದು ಗಂಗೆಯೆಂಬ ನದಿಯಾಗಿ ಪೋಗೆ ಮೂವರುಮೇಕಾಕಾರಿಗಳಾಗೆ ಮುನ್ನಿನಂತೆ ಹರಿಯು ಸ್ತ್ರೀರೂಪಂ ಬರೆಯೆ ಬ್ರಹ್ಮಂ ಜೀವಂಬಡೆಯೆ ಮಹಾದೇವನುಡಕೊಟ್ಟು ಸುಖಮಿರೆ

ಶ್ಲೋಕ || **ಕಾರ್ಯಂ ವಿಷ್ಣುಃ ಕ್ರಿಯಾ ಬ್ರಹ್ಮಾ ಕಾರಣಂ ತು ಮಹೇಶ್ವರಃ**
ಏಕಮೂರ್ತೇಸ್ತ್ರಯೋ ಭಾಗಾಃ ಬ್ರಹ್ಮ ವಿಷ್ಣು ಮಹೇಶ್ವರಾಃ

ಎಂಬುದರಿಂದಾ ಮೂವರಿಂ ಸಚರಾಚರ ಜೀವರಾಶಿಗಳಾಗೆ ಅನಂತಯುಗಂ ಪೋಪಿನಂ ಬ್ರಹ್ಮ ವಿಷ್ಣುಗಳಿರ್ವರುಂ ನಾನಧಿಕಂ ತಾನಧಿಕನೆಂದು ವಿವಾದಿಸಿ ಓರೋರ್ವರುಂ ಗರ್ವದಿಂ ಸೆಣಸುತ್ತಿರೆ ಪರಮೇಶ್ವರಂ ಪರೀಕ್ಷಿಸಲೆಂದು ತಾಂ ಬೆಳೆದುನಿಂದು ಕಂಜಾಕ್ಷನಂ ಕರೆದೆನ್ನ ಪಾದಮನೀಕ್ಷಿಸಿಬಪ್ಪುದೆಂದುಂ ವಿರಿಂಚಿಯೆನೆನ್ನ ಜಟಾಮಕುಟಮನೀಕ್ಷಿಸಿಬಪ್ಪುದೆಂದುಂ ಈರ್ವರೊಳಾರ್ ಮುನ್ನಂ ಮುಟ್ಟಿಬಂದರವರ್ ಲೋಕವಂದ್ಯರತ್ಯಧಿಕರಪ್ಪರೆಂಬುದುಂ ಆ ಬೆಸನಂ ಕೈಕೊಂಡು ಬ್ರಹ್ಮಂ ಈಶನ ಲಿಂಗಪ್ರದೇಶದಿಂ ಪೊರಮಟ್ಟು ಅಣುವಾಕಾರದಿಂ ಪೋಗುತ್ತುಮನೇಕ ಕ್ಲೇಶಾಯಾಸದಿಂದೆತ್ತಾನುಂ ನಾಭಿಪ್ರದೇಶಂ ಬಪ್ಪಿನಂ ಮೇಗಣಿಂ ಬಪ್ಪ ಕೇತಕಿಕುಸುಮಮಂ ಕಂಡು ಎಲ್ಲಿಂದಂ ಬಂದೆಯೆಂದದಂ ಬೆಸಗೊಳಲಾನೀಶ್ವರನ ಪಿಂಗಲ ಜಟಾಜೂಟಮಕುಟದಿಂ ಬಂದೆನೆಂದೊಡಲ್ಲಿಂ ಬಂದೆನಿತು ದಿನಮೆನೆ ದಿವ್ಯಷಣ್ಮಾಸಮಾಯ್ತೆಂಬುದುಂ ಮನಂಗುಂದಿ ಪೋಗಲೆನ್ನಳವಲ್ಲೆಂದು ಕೇದಗೆಯಂ ನಾನಾಪ್ರಕಾರದಿಂ ಪ್ರಾರ್ಥಿಸಿ ನೀನೀಶ್ವರನ ಮುಂದೆ ಪಿಂಗಳ ಜಟಾಜೂಟದ ಸಮೀಪದೊಳೀತನಂ ಕಂಡೆನೆಂದು ಪೇಳೆಂದೊಡಂಬಡಿಸಿ ಬಂದು ಶಶಿಧರನ ಮುಂದೆ ನಿಂದು ದೇವಾ ನಾ ನಿನ್ನ ಪಿಂಗಳ ಜಟಾಜೂಟಮಂ ನೋಡಿಬಂದೆನಲ್ಲಿರ್ದ ಕೇದಗೆಯಂ ಕೇಳಿಮೆಂದು ಬಿನ್ನವಿಸಲಾ ಕೇದಗೆಯನೀಶ್ವರಂ ಬೆಸಗೊಳಲೀತಂ ಜಟಾಮಕುಟಕ್ಕೆ ಬಂದಿರ್ದನೆಂದು ಪುಸಿಯಂ ನುಡಿಯೆ ಹರನರಿದುಸಿರದಿಪ್ಪುದುಂ

ಅತ್ತಲ್ ಕಮಲಾಕ್ಷನೀಶ್ವರನ ಲಿಂಗದ ಸಮೀಪದಿಂ ಪೋಗಿಯನೇಕ ದಿವಸಂ ನಡೆದು ಜಂಘೆಯಂ ಮುಟ್ಟಿ ಬಳಲ್ದು ಮುಂದೆ ನನಗಸಾಧ್ಯಮೆಂದು ಅಹಂಕಾರಂಗುಂದಿ ಮಗುಳ್ದು ಬಂದು ಕೈಗಳಂ ಮುಗಿದೆಲೆ ವಿಭುವೆ ನಿನ್ನಂಘ್ರಿಯಂ ಕಾಣಲೆನಗಸಾಧ್ಯಮಾಗಿ ಜಂಘೆಯಂ

ಕಂಡುಬಂದೆನೆಂಬುದುಂ ಪುಸಿಯಲ್ಲೆಂದಾ ಪ್ರದೇಶಕ್ಕೆ ಜಂಗುಮೆಂಬ ಕಿಂಕಿಣೆಯನಲುಗಿಸಿ ಮೆಚ್ಚಿ ರಾಜಪೂಜ್ಯತೆಯಿಂ ಬಾಳೆಂದಾ ಹರಿಗೆ ವರವಿತ್ತು ವಿರಿಂಚಿಗೆ ಮುಳಿದು ನೋಡಿ ಸತ್ಯಾದುತ್ಪದ್ಯತೇ ಧರ್ಮವೆಂಬುದರಿಂ ನೀಂ ಪುಸಿಕಂ ಭಿಕ್ಷಾ ವೃತ್ತಿಯಿಂ ಬಾಳೆಂದುಮಾರಿಂದಂ ಪೂಜೆಗೊಳ್ಳದಿರೆಂದುಮಾ ವಿಧಿಯಂ ನುಡಿದು ಪಕ್ಷದಿಂದನೃತಮಂ ನುಡಿದ ಕೇದಗೆಯಂ ಕಂಟಕಿಯಾಗಿ ಜಟಾಮಕುಟಕ್ಕಯೋಗ್ಯನಾಗೆಂದು ಶಪಿಸಿದನದರಿಂ ಕೇದಗೆಮುಳ್ಳು ಪುಟ್ಟಿ ಈಶಂಗಯೋಗ್ಯಮಾಯ್ತೆಂದು ಪೇಳೆ ಈಶ್ವರನ ಪಾದಮಂ ಪಾತಾಳಲೋಕದವರುಂ ಲಿಂಗಮಂ ಮಧ್ಯಮ ಲೋಕದವರುಂ ಶಿರಮನೂರ್ಧ್ವಲೋಕದವರುಂ ಪೂಜಿಸುವರೆಂದು ವೀರಶೈವರ್ ನುಡಿಯೆ ಚೌಧ್ವರೆಂದರ್ ಕೇತಕಿ ಈಶ್ವರನೊಳ್ ಅಪಸಾಕ್ಷಿಯಿಂ ಕಂಟಕಿಯಾಯಿತು. ಬೊಬ್ಬುಳಿ ಬೇಲತರಿ ....ಗದುಗು ಪಲಸು ಮುಂತಾಗಿಯನೇಕವಾದ ಮುಳ್ಳುಗಿಡಂಗಳ್ಗಾರು ಶಾಪವಿತ್ತರ್ ಮಧ್ಯಲೋಕದೊಳೆಲ್ಲರ್ ಲಿಂಗಪೂಜೆಗೆಯ್ಯದೆ ಕೆಲಂಬರೆ ಪೂಜೆಗೆಯ್ವುದೇಕಿದೆಲ್ಲ ಮಸಂಭಾವ್ಯಮೆನೆ ಮತ್ತೆ ಕೆಲಂಬರ್ ಶೈವಪುರಾಣೀಕರೆಂದರ್ ಪರಮೇಶ್ವರಂ ಪಾರ್ವತಿಯೊಳಹರ್ನಿಶಂ ಕಾಮಸೇವೆಗೆಯ್ಯುತ್ತಿರ್ದೊಂದು ದಿನಂ ದಾರುಕವೆಂಬ ವನಕ್ಕೆ ಪೋಗಲಲ್ಲಿ ತಾಪಸನ ವಧೂಟಿಯಿರಲವಳನೀಕ್ಷಿಸಿ ಮೋಹದಿನಾಕೆಯನೊಲಿಸಿ ಆಕೆಯೊಳ್ ನಿಚ್ಚ ನಿಚ್ಚ ಕೂಡಿ ಸುರತಕ್ರೀಡೆಯೊಳಿರಲಾಕೆ ಗಂಡನೊಳ್ ಉದಾಸೀನ ಮಾಡಲದನಾರಯ್ಯಲೆಂದಾ ತಾಪಸಂ ಸ್ನಾನಕ್ಕೆ ಪೋಪೆನೆಂದು ಸತಿಯೊಳ್ ನುಡಿದು ಪೋಗಿ ಅರಿಯದಂತು ಮಗುಳ್ದು ಮನೆಯೊಳಡಗಿರಲ್ ಹರಂ ಬಂದಾ ವಧೂಟಿಯೊಡನೆ ಕ್ರೀಡಿಸುತ್ತಿರೆ ಅದನಾ ಋಷಿ ಕಂಡು ಕೋಪದಿಂದೀತನ ನಿಡುಲಿಂಗಂ ಸಂದಿಗೆ ಹರಿದು ಬೀಳಲೆಂದು ಶಾಪಂಗುಡೆ ತಕ್ಷಣದೊಳೆ ಲಿಂಗಂ ಹರಿದುಬೀಳುವುದುಂ ಈಶ್ವರಂ ಕೋಪದಿಂ ಹರಿದು ಬಿದ್ದ ಲಿಂಗಮೀ ತಾಪಸನ ಹಣೆಯಂ ಪತ್ತುಗೆಂದು ನಿಯಮಂಗುಡಲಾ ಲಿಂಗಂ ತಾಪಸನ ಪಣೆಯಂ ಪತ್ತಿ ಬೆಳೆಯುತ್ತಮಿರಲೀತನೀಶ್ವರನೆಂದರಿದು ಪಾದಾನತನಾಗಿ ನಾಂ ಮಾಡಿದಪರಾಧಮಂ ಕ್ಷಮಿಸಿ ಪಣೆಯ ಲಿಂಗಮಂ ಕಳೆದು ಕರುಣಿಪುದೆಂದು ದೈನ್ಯದಿಂ ಬೇಡಿಕೊಳೆ ಕೈಲಾಸಕ್ಕೆ ಪೊತ್ತುಬನ್ನಿಮೆಂದೀಶಂ ಪೋಪುದುಂ ತಾಪಸಂಗೆ ಪೊರಲಾರದತಿಭಾರದಿಂ ಕೈಲಾಸಮನೇರಿಬಪ್ಪುದುಂ ಪಾರ್ವತಿ ಕಂಡಟ್ಟಹಾಸಂಗೆಯ್ದು ನಗುತ್ತಿರಲೀಶ್ವರಂ ಕಂಡು ಸಂತುಷ್ಟನಾಗಿರಲಾ ಲಿಂಗಮನಿಳುಹಿದೊಡದು ಪರ್ವತದಾಕಾರದಿಂ ಕೈಲಾಸದಿಂದುರುಳುತ್ತೆ ಪರ್ವತಮಂ ನದಿಯಂ ಪುರ ಮೊದಲಾಗೆ ಚರಾಚರ ಪ್ರಾಣಿಗಳೆಲ್ಲಮನರೆಯುತ್ತಮುರುಳ್ವುದಂ ಕಂಡೆಲ್ಲರುಂ ಮೊರೆಯಿಡೆ ಶರ್ವಾಣಿ ಕಾರುಣ್ಯದಿಂ ಯೋನಿಯೊಳ್ ಸ್ಥಾಪನೆಗೆಯ್ದು ಪೂಜಿಸುವುದೆಂದು ಪೇಳಲಾ ಕ್ರಮದೊಳೆ ಪೂಜಿಸುವರೆಂದು ಪೇಳೆ ಮತ್ತೆ ಕೆಲಂಬರೆಂದರ್ ಶುಕಸಪ್ತತಿ ಕಥೆಯೊಳೊರ್ವ ಮಹಾ ಋಷಿಪತ್ನಿಯ ಪ್ರತಿವ್ರತಾಮಾಹಾತ್ಮ್ಯಂ ಲೋಕತ್ರಯ ಪ್ರಸಿದ್ಧಿಯಾಗೆ ಕೈಲಾಸದೊಳೀಶನ ಮುಂದೆ ಆ ಮಹಾಸತಿಯಂ ಪೊಗಳೆ ಈಶಂ ನೋಡಲೆಂದು ತಾನೆ ಬಂದತ್ಯಂತ ಸ್ಥೂಲಕಾಯಮಪ್ಪ ಗಡವಗತ್ತೆಯಾಗಿ ಆಕೆಯ ಇದಿರೊಳ್ ಸುಳಿಯುತ್ತುಂ ಲಿಂಗೋತ್ಥಾಪನೆಯಿಂ ಸರತ್ನಿಪ್ರಮಾಣದ ಲಾಂಗಲೋನ್ನತಮಾಗೆ ಆಂ ಆಂ ಎಂಬ

ಗಾರ್ದಭೋಚ್ಚಸ್ವರದಿಂ ಮೇಲ್ವಾಯುತ್ತುಂ ಬಪ್ಪುದುಂ ಕಂಡಾಕೆ ಈ ಮೇಢ್ರಂ ಷಡ್ಭಾಗಮಾಗಲಿ ಎಂದು ಶಾಪವಿಕ್ಕೆ ಚತುರಂಗುಲಮುಳಿಯಲುಳಿದೈದು ಖಂಡಂಗಳ್ ಪರಮೇಶನ ಲಿಂಗಂಗಳಾದುದರಿಂ ಲೋಕಸಂಹಾರಂ ಮಾಡುತ್ತಿರಲಾ ಪೂಜಾಯೋಗ್ಯಂಗಳೆಂದು ಐದು ಸ್ಥಾನಂಗಳೊಳ್ ಶಂಕರಲಿಂಗಂ ರಾಮಲಿಂಗಂ ಮೊದಲಾಗೈದುಮಂ ಸ್ಥಾಪಿಸಿ ಪೂಜಿಸಿ ವರಮಂ ಪಡೆದರ್. ನಾಲ್ಕಂಗುಲ ಪ್ರಮಾಣ ಪ್ರಜೋತ್ಪತ್ತಿ ಕಾರಣಮಾಗೆ ಮನುಷ್ಯರ್ಗೆ ನಿಂತು ಪ್ರಜಾಪತಿಯೆಂಬ ಪೆಸರಾಯ್ತೆಂದು ಲಿಂಗಪ್ರಪಂಚಮಂ ಪೇಳೆ ಸೌಗತರೆಲ್ಲಂ ಗಹಗಹಿಸಿ ನಕ್ಕದೆಲ್ಲಮಂ ಪೂರ್ವಪಕ್ಷಂಗೆಯ್ದುಸಂಭಾವ್ಯಮಾಗೆ ತಿರಸ್ಕಾರಂ ಮಾಡೆ ಲಿಂಗೋತ್ಸರ್ಜನಂ ಮಾಳ್ಪುದೆನೆ ವೀರಶೈವರೆಲ್ಲಂ ಪರಾಜಿತರಾಗಿ ನಾಳೆ ಬಿಟ್ಟುಕಳೆವೆನೆಂದು ಬಂದು ಸುಧಾಪುರದ ಸಿಂಹಾಸನಾಧೀಶ್ವರರಾದ ಭಟ್ಟಾಕಲಂಕರ ಸಮಿಪಮನೆಯ್ದಿ ನಿಜವೃತ್ತಾಂತಮೆಲ್ಲಮಂ ಪೇಳೆ ಕೇಳ್ದು ಜೀವಸ್ಥಾಪನೆಯಂ ಮಾಡಲೆಂದವರ್ ಪ್ರಾರ್ಥಿಸುವುದನೊಡಂಬಟ್ಟು ಭಟ್ಟಾರಕರ್ ತಾವೆ ಮರುದಿನಂ ಬಂದು ಪಿಂಛಮಂ ಕಾಣಲೀಸದೆ ಬೌದ್ಧಸಭೆಯಂ ಪೊಕ್ಕು ಸಿಂಹಾಸನಾರೂಢರಾಗಿ ಸುಗತಶಾಸ್ತ್ರಮಂ ಪೂರ್ವಪಕ್ಷಕ್ಕೆ ತಂದು ಲಿಂಗಮೆಂದೊಡೆ ಅಂಕಮದು ಭಗವತ್ಸ್ವರೂಪನ ಮೂರ್ತ ನಾದ ಬಿಂದು ಕಳಾಯುಕ್ತಮೋಂಕಾರಪ್ರಣವಮದು ಪದಸ್ಥ ಪಿಂಡಸ್ವರೂಪಸ್ಥ ರೂಪಾತೀತದಿಂ ನಾಲ್ಕು ತೆರದ ಧ್ಯಾನಮಿದು ಸರ್ವಜ್ಞ ಪರಮಾತ್ಮಂ ಕ್ರಮದಿಂ ಪದಸ್ಥಾದಿ ಧ್ಯಾನಗೋಚರನಪ್ಪುದರಿಂದಾ ನಿತ್ಯ ನಿರಂಜನ ನಿರ್ವಿಕಲ್ಪ ನಿರುಪಮ ನಿರುಪಾಧಿ ಜ್ಞಾನತೆಮೂರ್ತಿಯಪ್ಪುದರಿಂದ ಮೂರ್ತನಾದ ಚಿದಾತ್ಮಧ್ಯಾನಮುಂ ಬೆಂದು ಬಾಹ್ಯಚಿಹ್ನೆ ಕಾಣ್ಬುದಕ್ಕೋಸ್ಕರ ವ್ಯವಹಾರವಿಲ್ಲದೆ ನಿಶ್ಚಯಮಾದುದರಿಂ ಜ್ಞಾನಲಿಂಗದೊಳೆ ಪರಮಾತ್ಮನೈಕ್ಯಮೆಂದು ಪೊರಗೆ ಶರೀರದೊಳೆ ಲಿಂಗಮಂ ಧರಿಸಿ ಭಕ್ತಿಗೆಯ್ಯಲ್ವೇಳ್ಪುದದುಮಿಲ್ಲದೊಡೆ ಬಾಹ್ಯಜರುಮಿಲ್ಲಮದರಿಂ ಪ್ರಾಣಲಿಂಗಮುಳ್ಳ ಪರಮಾತ್ಮಲಿಂಗವರಿಯಲ್ ಬಾಹ್ಯಶರೀರದೊಳ್ ಲಿಂಗಮಿರಲ್ವೇಳ್ಕುಮೆಂದದರ ಪ್ರಮಾಣ ಷೋಡಶೋಪಚಾರ ಶಕ್ತಿಗಳಂ ಸಲಕ್ಷಣಂ ಪೇಳೆ ಸಮ್ಮತಿಯಾಗಿ ನಿರುತ್ತರಮಾಗೆ ಅಕಲಂಕಾಷ್ಟಕಮೆಂಬ ವೃತ್ತಮಂ ಪೇಳ್ದೊಡೆ ಸತ್ತಂ ಪುಟ್ಟಂ ಕೊಟ್ಟಂ ಕೆಟ್ಟಂ

ಶ್ಲೋಕ || **ಭಸ್ಮೀ ಭೂತಸ್ಯ ದೇಹಸ್ಯ ಪುನರಾಗಮನಂ ಕುತಃ**
ತಸ್ಮಾತ್ ಸುಖೈಷೀ ಜೀವೋಽಯಂ ಋಣಂ ಕೃತ್ವಾ ಘೃತಂ ಪಿಬೇತ್ ||
ಪೂರ್ವಜನ್ಮಕೃತಂ ಪಾಪಂ ಬಾಧತೇ ಸರ್ವಜಂತುನಿಷು
ದೃಷ್ಟ್ವಾ ಸುಖಂ ಮಹಾದುಃಖಂ ಕಥಂ ನಾಸ್ತಿ ಭವಂ ತವ ||
ಮದ್ಯ ಮಾಂಸಮಧೋಭ್ರೋಕ್ತ ಚೌರ್ಯೋ ದ್ಯೂತಾಕೃತ್ಸದಾ
ಸ ಯಾತಿ ನರಕಂ ಘೋರಂ ಯೋ ಮರ್ತ್ಯೋ ಜ್ಞಾನಶೂನ್ಯತಃ ||

ಬೌದ್ಧರೆಂದರ್:

ಮಾಂಸಸ್ಯ ಮರಣಂ ನಾಸ್ತಿ ನಾಸ್ತಿ ಮಾಂಸಸ್ಯ ವೇದನಾ
ವೇದನಾಮರಣಾಭಾವೇ ಕೋ ದೋಷೋ ಮಾಂಸಭಕ್ಷಣಾತ್ ||

ಎಂಬುದುಂ

ಗೂಥಸ್ಯ ಮರಣಂ ನಾಸ್ತಿ ನಾಸ್ತಿ ಗೂಥಸ್ಯ ವೇದನಾ
ವೇದನಾಮರಣಾಭಾವೇ ಕೋ ದೋಷೋ ಗೂಥಭಕ್ಷಣಾತ್ ||

ಎಂಬುದರಿಂ ಪೇಯಾಪೇಯ ಭಕ್ಷಾಭಕ್ಷ್ಯ ವಿಚಾರವಿಲ್ಲದರ್ಗಪ್ಪುದೆಂದು ಪೇಳಿ ಜಯಪತ್ರಂಗೊಂಡು ಬಪ್ಪಲ್ಲಿ ಪಿಂಛಮಂ ಕಂಡು ಶ್ರವಣರೆಂದರಿದು ಅತ್ಯಂತ ದ್ವೇಷಿಗಳಾಗಿ ಜೈನರ ಪೆಸರಿಲ್ಲದಂತೆ ಮಾಡಲೆಂದು ಹೇಮಶೀತಳಮಹಾರಾಜಂ ಬುದ್ಧ ಭಕ್ತನಪ್ಪುದರಿಂದಾತನಲ್ಲಿಗೆಯ್ದಿ ಜೈನರ್ಗಂ ನಮಗಂ ವಾದಂ ಬಂದಿಪ್ಪುದರಿಂದಕಲಂಕರಂ ಕರೆಸಿಮೆಂದು ಬರಿಸಿ ಜೈನರ್ ಸೋತು ಬಂದಡವರಂ ಕಲ್ಲುಗಾಣಕಿಕ್ಕಿ ಉಳಿದೆಲ್ಲರ ಸರ್ವಸ್ವಮಂ ಕವರ್ತೆಗೆಯ್ದುವರಂ ನಿಶ್ಶೇಷಮಾಗೆ ಕರ್ಣಾಟಾಂಧ್ರ ತುಳುವ ಪಾಂಡ್ಯ ಚೋಳ ಮೊದಲಾದ ದೇಶದಿಂ ಪೊರಮಡಿಸುವುದು, ಬೌದ್ಧರ್ ಸೋತು ಬಂದಡವರನಂತೆ ಗೆಯ್ವುದೆಂದು ಭಾಷಾಪತ್ರಮಂ ಬರೆಸಿಕೊಟ್ಟು ಸಭೆಯೊಳ್ ತಾರಾಶಕ್ತಿದೇವಿಯ ಘಟಸ್ಥಾಪನೆಗೆಯ್ದು ಪೂಜಿಸಿ ಜವನಿಕೆಯನಿಟ್ಟು ಶೂನ್ಯವಾದಮನೆತ್ತಿ ಪದಿನೆಂಟು ದಿವಸಂಬರಂ ವಾದಂಗೆಯ್ದು ತಾರಾದೇವಿ ಸತ್ಯವಾಕ್ಯಮಂ ನಿಲಲೀಸದೆ ಪ್ರತಿವಾಕ್ಯಂ ಗೊಡುತ್ತಿರ್ದೊಡೆ ಪದಿನೇಳು ದಿವಸಂ ಕಳಿಯೆ ಯತೀಶ್ವರಂ ಚಿಂತಾಕ್ರಾಂತಸ್ವಾಂತರಂಗನಾಗಿ ವಿವಿಕ್ತಶಯನನಾಗೆ ಬೆಳಗಪ್ಪ ಸಮಯದೊಳಾಮ್ರಕೂಷ್ಮಾಂಡಿನಿಯು ಸ್ವಪ್ನದೊಳ್ ನೀನು ಚಿಂತೆಯಂ ಬಿಡು ಪುನಃ ಪ್ರಶ್ನೆಗೆಯ್ದೊಡೆ ನಿರುತ್ತರಮಕ್ಕುಂ ಜಯಪ್ರದಮಪ್ಪುದೆಂದು ಪೇಳೆ ಬೆಳಗಾದಾಗಳಾ ಕ್ರಮದೊಳ್ ಪೇಳ್ದು ಜಯಪತ್ರಂಗೊಂಡು ಬೌದ್ಧರಂ ಗೆದ್ದು ಘಟವಾದಮಂ ಜಯಿಸಿ ವಾಮಪಾದದಿಂದೊದೆದುಬಿಟ್ಟರ್.

ಅದೆಂತೆಂದೊಡೆ ಮುನ್ನ ಬೌದ್ಧರೆಲ್ಲರುಂ ಕೂಡಿ ಜೈನಮತಾನುಸಾರಿಗಳೊಳತ್ಯಂತ ವಿರೋಧದಿಂದಕಲಂಕಸ್ವಾಮಿಗಳಂ ಗೆಲ್ವೆವೆಂದು ಹಿಮಶೀತಲಮಹಾರಾಜನಲ್ಲಿಗೆಯ್ದಿ ನಿಜಾಭಿಪ್ರಾಯಮಂ ಪೇಳೆಯಾ ಮಹಾನುಭಾವರೊಳ್ ನಿಮಗೆ ವಾದಂ ಸಲ್ಲದವರ್ ಸತ್ಯವಾದಿಗಳವರಿಂ ಮನದ ಸಂದಯಂ ಪಿಂಗಿ ನಿಶ್ಚಯಜ್ಞಾನ ಪುಟ್ಟಿ ಮುಂದಣ ಸದ್ಗತಿಸಾಧನಮಪ್ಪುದೆನೆ ಅದ್ವಯವಾದಿಗಳೆಂದರ್.

ಜೀವಂ ಧರ್ಮ ಕರ್ಮಮನುಪಾರ್ಜಿಸಿ ತತ್ಫಲಮನನ್ಯ ಭವಂಗಳೊಳ್ ಉಂಬನೆಂಬುದು ಗಡಾ ಪುಸಿಯದರಿಂ ಪರತ್ರಯಮನಾರು ಕಂಡರ್ ಬರಿಯ ಮಾತಂ ಕೇಳಿ ದೆಸೆಗೆಟ್ಟು ಜೀವಮುಂ ಗತಿಯುಂ ಧರ್ಮ ಕರ್ಮಂಗಳುಮೊಳವೆಂಬೀ ಗಾವಿಲತನವೇಕೆ ? ಸತ್ತವರನಾರು ಕಂಡರದರಿಂ ಜೀವಮುಂಟೆಂಬುದಕ್ಕಂ ಶುಭಾಶುಭಕರ್ಮಮೊಳವೆಂಬುದಕ್ಕಂ ತತ್ಫಲಮಂ ಮರುಭವದೊಳ್ ಮಗುಳ್ದು ತಾವೆಯುಂಬರೆಂಬುದಕ್ಕಂ ಸ್ವರ್ಗಾಪವರ್ಗಮಿಪ್ಪುದಕ್ಕಂ ಸಾಕ್ಷಿಗಳಾರಿಪ್ಪರಿಲ್ಲದುದರಿಂದಿದೆಲ್ಲಂ ಗಾಳಿಯಂ ಗಂಟಿಕ್ಕುವಂತೆ ಮಾಯಾವ್ಯವಹಾರಮಿದಂ ನಂಬಿ ಮರುಳಾಗಿ ತಪದಿಂದೊಡಲನೊಣಗಿಸಿ ನಿಷ್ಕಾರಣಂ ರಾಜ್ಯದೊಳಾದ ಭೋಗೋಪಭೋಗಂಗಳಂ

ಕೆಡಿಸವೇಡೆಂಬ ಸೌಗತಾಚಾರ್ಯನ ಮಾತನರಸಂ ಕೇಳಿ ತನ್ನೊಳಿಂತೆಂದಂ

ರವಿಯಿಲ್ಲದಂದು ಜ್ಯೋತಿರಿಂಗಣಂಗಳು ಪ್ರಕಾಶಿಸವು. ಸೂರ್ಯೋದಯಮಾಗಲ್ ಕಾಣದಂತೆ ಕುವಾದಿಗಳಪ್ಪ ಧೂರ್ತರ್ ಮಹಾವಾದಿಗಳಿಲ್ಲದಂದು ಮುಕ್ಕಿ ಸೊಕ್ಕಿ ತೇಜಮಂ ತೋರ್ಪರ್. ಮಹಾವಾದಿಗಳಾಸ್ಥಾನದೊಳ್ ಕುಂದಿ ಕುಸಿದೊಳ ಸಾರ್ದು ಕೇತಕಿಯನೇರಿದ ಕೋಡಗದಂತೆ ಸಿಡಿಮಿಡಿಗೊಂಡುಸುರದಿಪ್ಪರಲ್ಲದೆ ತಲೆಯೆತ್ತಲಣ್ಮರೆಂದು ಭಟ್ಟಾಕಲಂಕರಂ ಬರಿಸಿ ಮಹಾಸಭೆಯಂ ಪುಗಿಸಿ ವಿನಮಿತನಾಗಿ ಭಾಷಾಪತ್ರಿಕೆಯಂ ಬರೆಸಿ ಮೋಕ್ಷದ ನಿಚ್ಚಣಿಗೆಯೆನಿಪ ಜಿನಧರ್ಮಮಂ ಕೇಳುತ್ತಿರೆ ಷಡಭಿಜ್ಞಂ ಮೊರೆಯುಂ ಅಘಮುಂ ಅಳಿಪುಂ ಅರಿಪುಂ ಪರತ್ರಮುಂ ಜೀವನುಮಿಲ್ಲೆಂದು ಬಾಯ್ಗೆವಂದಂತೆ ನುಡಿವ ಮಾತಂ ಕೇಳಿ ಮುನೀಂದ್ರೋತ್ತಮನಿಂತೆಂದಂ

ಮೊರೆಯಿಲ್ಲಪ್ಪೊಡೆ ಸತಿಗಾದೆರಕಂ ತಂಗಿಗಂ ತಾಯ್ಗಮೇಕಾಗದು? ಲೋಕದೊಳ್ ಪ್ರಸಿದ್ಧಮಪ್ಪುದೆ ಪೇಳ್ಗ. ಸೂಳೆಯೊಡನೆನಿತು ಕಾಲಮಿರ್ದೊಡಂ ಮಿಂಡರೆಂಬರಲ್ಲದೆ ಪೆರತಿಲ್ಲ. ಕರ್ಮವಶದಿಂ ತಾಯಿ ತಂಗಿಗಳುಪಿದೊಡೆ ಕೊಲೆಗಂ ಕವರ್ತೆಗಂ ಭಾಜನನಾಗಿ ಪಳಿಗಮಪಖ್ಯಾತಿಗಂ ನಿಲಯನಪ್ಪನದರಿಂ ಮೊರೆಯುಂಟೆಂದು ನಂಬುವುದು. ಪರಿಭವಮಾಗಿ ಸತ್ತ ಜೀವಂ ಭವಭವದೊಳುಂಬನೆಂಬ ನಾಣ್ಣಾದೆಯಿಂ ಮರುಭವಮುಂಟೆಂದರಿವುದು. ಮತ್ತಂ ಪರಿಣತರಪ್ಪವರ್ ಪರೀಕ್ಷಿಸಿ ನೋಳ್ಪುದು. ಜಗದೊಳ್ ಕಲೆವೆರಸಿ ಮುನ್ನಿನ ರೂಪುವೆರಸಿ ಪುಟ್ಟುವ ಮಕ್ಕಳುಮಂ ಮೋಹದಿಂ ಕನಸುದೋರಿ ಬಂದು ಪುಟ್ಟುವ ಮಕ್ಕಳುಮಂ ಕಂಡು ಮರುಭವಮುಂಟೆಂದು ನಂಬುವುದು. ಅಂದಣಮನೇರಿ ಭೃತ್ಯರಂ ಕೂಡಿ ಐಶ್ವರ್ಯದಿಂ ಸುಖಿಸುವರಂ ಕಂಡು ಮುನ್ನೆ ಮಾಡಿದ ಪುಣ್ಯದ ಫಲಮೆಂಬ ನಾಣ್ನುಡಿಗೇಳಿ ಪುಣ್ಯದೇಳ್ಗೆಯುಂಟೆಂಬುದು. ಮತ್ತಂ ರೂಪು ಲಾವಣ್ಯ ಚೆಲ್ವು ಸಿರಿ ಸೌಭಾಗ್ಯ ವಿಳಾಸ ನಿರುಜೆ ವಿಭವ ಭೋಗೋಪಭೋಗಮುಳ್ಳ ಸುಖಿಗಳಂ ಕಂಡು ಮುನ್ನ ಮಾಡಿದ ದಾನ ಪೂಜೆ ತಪದ ಫಲಮೆಂದು ನುಡಿವ ಲೋಕವಾರ್ತೆಯಿಂ ಧರ್ಮಮುಂ ಪೂರ್ವಭವಮುಮುಂಟೆಂದರಿವುದು. ಕುರುಡರಂ ಕುಂಟರಂ ತಿರಿಕರಂ ಮೊದಲಾದ ಕಷ್ಟಪಡುವರಂ ಕಂಡು ಮುನ್ನಿನ ಪಾಪದ ಫಲಮೆಂಬ ಜನವಾಕ್ಯದಿಂ ಪಾಪಮುಂಟೆಂದರಿವುದು. ಮತ್ತಂ ಕೋಳ್ಪಟ್ಟು ಪುಯ್ಯಲಿಡುವರಂ, ಕುತ್ತದಿಂ ಮರುಗುವರಂ, ಕೂಳ್ಪಂ ಪಡೆಯದವರಂ, ನಿರ್ಭಾಗ್ಯರಂ, ಕುರೂಪಿಗಳಂ ಪಂದೆಗಳ್ ಮೊದಲಾದವರುಮಂ ಕಂಡಿವರ ಮುನ್ನಿನ ಕರ್ಮದ ಫಲಮೆಂಬ ಜನ ವಾಕ್ಯಮಂ ಕೇಳುತ್ತೆ ಕರ್ಮಮಿಲ್ಲೆಂಬ ಮರುಳ್ತನಮೇಕೆ ಅಳಿಪಿಂದುಗ್ರಪಾತನನನ್ಯ ವನಿತಾಸಕ್ತ ಗುಣಹೀನ ದುಶ್ಚರಿತ ಕೆಡುಕ ಪಾಪಿ ಸತ್ತನೊಳ್ಳಿತ್ತಾಯ್ತು ಧರ್ಮಹೀನಂ ನರಕಾರ್ಣವಂಬೊಕ್ಕಂ ಈತಂ ಸತ್ಪುರುಷಂ ಧಾರ್ಮಿಕಂ ಪರಹಿತಂ ಸಾಯಲಾಗದು ಸತ್ತೊಡಂ ಸ್ವರ್ಗಮಾಯ್ತೆಂಬುದಂ ಕೇಳ್ದು ಸ್ವರ್ಗಮಿಲ್ಲೆಂಬುದಾವ ಯುಕ್ತಿ? ಧರ್ಮಮಂ ತಾಳ್ದ ಮಹಾಪುರುಷರ್ಗೆ ಸ್ವರ್ಗಾಪವರ್ಗಮುಂಟೆಂದು ನಂಬುವುದುಮದರಿಂ ಜೀವಮುಂಟೆಂದು ನಂಬಲೀಯದ ಕುವಾದಿಗಳ ಕಣ್ಣಿದ್ದು ಕುರುಡರುಂ, ಕಿವಿಯಿದ್ದು ಕಿವುಡರುಂ, ಕಾಲಿದ್ದು ಹೆಳವರುಂ, ಮಾತಿದ್ದು

ಮೂಗರುಮಾಗಿ ನೀತಿಲ್ಲೆಂದು ಚರ್ಚಿಸಿ ನಿಗೋದಪ್ರಾಪ್ತರಪ್ಪರೆಂದು ಭಟ್ಟಾರಕರ್ ಬೆಸಸೆ ಶೂನ್ಯವಾದಿಗಳ್ ತುಂಬುರುಗೊಳ್ಳಿ ಸಿಡಿವಂತೆ ಸಿಡಿಲ್ದು ಸಮುದ್ರದೊಡನೆ ಮಚ್ಚರಿಸಿ ಕೂಪಂ ಪೊಣರ್ವ ತೆರದಿನಂ ಗಜಮದಮರ್ದನದೊಳ್ ತನ್ನಳವರಿಯದೆ ಮಾನಕಷಾಯ ತೀವ್ರೋದಯದಿಂ ಬುದ್ಧದಾಸಂ ತಾಂ ಪಿಡಿದ ಜೀವಾಭಾವಮನೆ ಬಲುವಿಡಿದಿಂತೆಂದಂ ಅರಹಂತನೆಂಬನೆಲ್ಲಿಪ್ಪನಾತನೊರೆದ ತಪದೊಳಾವುದು ಫಲ? ಕೊಲಲಾಗದೆಂಬ ಧರ್ಮಮೆತ್ತಿಪ್ಪುದದರಿಂ ಲಾಭಮೇನೆಂದು ಚರ್ಚಿಸೆ ಲೋಕದೊಳ್ ನೆಲ್ಲುಂ ಪುಲ್ಲುಂ ಕಾಡುದ್ದುಂ ಉದ್ದುಂ ಕಾಡನಿಂಬೆಯುಂ ನಿಂಬೆಯುಂ ಪಲಸುಂ ಕಾಡಪಲಸುಂ ಊರೆಮ್ಮೆಯುಂ ಕಾಡೆಮ್ಮೆಯುಂ ಕತ್ತಲೆಯುಂ ಬೆಳಕುಂ ಸಜ್ಜನೆಯುಂ ಸೂಳೆಯುಂ ಸಜ್ಜನರುಂ ದುರ್ಜನರುಂ ಸಿರಿವಂತರುಂ ತಿರಿಕರುಂ ಅರಸರುಂ ಬಡವರುಂ ಮೊದಲಾಗೆಂತೊಳವಂತೆ ಧರ್ಮಮುಂ ಪಾಪಮುಮುಂಟಪ್ಪುದರಿಂದವರ ಫಲಮನೀವಂತಪ್ಪ ಅರ್ಹತ್ಸರ್ವಜ್ಞರಂ ತೋರಲಾ ಜಿನಸ್ವಾಮಿಯಂ ಪೊಗೆಯಿಸಿದೊಡೆ ಕಳ್ದೊಡೆ ಪರವನಿತೆಯರ್ಗಳಿಪಿದೊಡೆ ಪಿರಿದಂ ಬಯಸಿದೊಡೆ ಪೊಲ್ಲಮೆಂದು ಪೇಳ್ವ ಜಿನೇಂದ್ರಾಜ್ಞೆಯಂ ಮಿರಿದೊಡಾ ಪರಮೇಶ್ವರನ ಸಾಮಂತದಂಡನಾಯಕರಂತೆ ಕೊಂದೊಡೆ ಕೊಲ್ಲುವ ಪುಸಿದೊಡೆ ನಾಲಗೆಯಂ ಕೀಳ್ವ ಕಳ್ದೊಡೆ ಶೂಲದೊಳಿಕ್ಕುವ ಪೆರರ ಪೆಂಡಿರ್ಗಳಿಪೆ ತಲೆಯನರಿವ ತಂತಮ್ಮ ಮೇರೆದಪ್ಪಿದೊಡೆ ದಂಡಂ ಕೊಳ್ವ ಭೂಪಾಲರ ನಾಡವರ ಮಾಟದಿಂ ಬಟ್ಟೆಗಳೂರಂ ಪೊರ್ದಿ ಪೋಪಂತೆ ಕೊಲೆ ಪುಸಿ ಕಳವನ್ಯಸ್ತ್ರೀಯತಿಕಾಂಕ್ಷೆಗಳಂ ಧರ್ಮವೆನ್ನದೆ ಜಿನವಲ್ಲಭನಮಾತನೆ ಪೊರ್ದಿ ನಡೆದು ನಾನಾ ಸಮಯಿಗಳಿಂದ ಮುಂ ಕೊಲೆ ಪುಸಿ ಕಳವಾದಿಗಳಂ ಕೂಡಿದ ಮಾನವರುಂ ಪಂಚಮಹಾಪಾತಕರೆಂದು ಬೈವ ನಾಡವರ ಬೈಗುಳಿಂದಂ ಕೊಲೆಯಾದಿ ಪಂಚಮಹಾಪಾತಕಂಗಳಂ ಮಾಡಿದ ನಲ್ಲನೆಂದು ಕಿಚ್ಚು ಮೊದಲಾದ ದೀಪ್ಯದಿಂ ಶುದ್ಧರಾಗಿ ಪಾಪದಿಂದಂ ಮತ್ತಂ ಕೊಲ್ಲದ ಧರ್ಮದಿಂ ಧರ್ಮಜನಂ ಗೌರಮನಂ ಸತ್ಯದೊಳ್ ಕರ್ಣಾಂಶಾಖ್ಯನಂ ಕಳವಿಲ್ಲವೆಂಬುದರೊಳರ್ಜುನನಂ, ಶೌಚದೊಳ್ ಗಾಂಗೇಯನಂ, ನಿಷ್ಪರಿಗ್ರಹದೊಳ್ ರಾಮನಂ ಕೊಡುಂಕೊನೆದು ಪೊಗಳ್ವ ಪರಸಮಯಿಗಳ್ ಬಕನಂ ಉತ್ತರನಂ ಸೂರ್ಪನಂ ರಾವಣನಂ ಕೌರವನನೇಕೆ ಪುರಾಣದೊಳ್ ನುತಿಸರ್? ಮುದದಿಂ ಮೌನದೊಳಿಪ್ಪ ಜಿನಾಧೀಶ್ವರನೆಂತು ಸ್ವರ್ಗಾಪವರ್ಗಮಂ ಕುಡುವನೆನೆ ನೆಲನುಂ ಬಟ್ಟೆಯುಂ ವೃಕ್ಷಮುಂ ಸೊಡರುಂ ಮನೆಯುಂ ತೊರೆಯುಂ ಶಾಸ್ತ್ರಮುಂ ಪಶುಗಳುಂ ತೋಂಟಗಳುಂ ಕಾಮಧೇನು ಕಲ್ಪವೃಕ್ಷ ಚಿಂತಾಮಣಿಗಳೆಲ್ಲಂ ಮೌನದೊಳಿರ್ದಭೀಷ್ಟಮಪ್ಪ ವಸ್ತುವಂ ವೀತರಾಗನೋಜೆಯೊಳೆ ಕೊಡುವುವು. ಅದು ಕಾರಣದಿಂ ಸಕಲಮೆಲ್ಲಂ ಜಿನೇಶ್ವರನಂತೆ ಮೌನಿಗಳಾಗಿ ಲೋಕೋಪಕಾರಂ ಮಾಳ್ಪವಲ್ಲದೆ ಜಿನರೋಜೆಯಂ ಮೀರದಿರವು. ಮತ್ತಂ ಸರ್ವಜ್ಞಂ ಉಡಿಗೆ ತೊಡಿಗೆ ಮೊದಲಾದನ್ಯವಸ್ತುಗಳ ಹಂಗಿಲ್ಲದತೀಂದ್ರಿಯ ಸುಖನಪ್ಪುದರಿಂ ಬೆತ್ತಲೆ ನಿರ್ಗ್ರಂಥನಾಗಿಪ್ಪುದು ಪೊಲ್ಲಮೆಂದೊಡಾವುದೊಂದು ವಸ್ತುವಾದೊಡಂ ನಿರ್ಗ್ರಂಥಮಾಗಲ್ಲದೆ ಯೋಗ್ಯ ಮಾಗದುದೆಂತೆನೆ ನೆಲಂ ನಿರ್ಗ್ರಂಥಮಾಗೆ ಬೀಜಕ್ಕೆ ಬಲಂ,

ಆಕಾಶಂ ನಿರ್ಗ್ರಂಥಮಾಗೆ ಶುಭಕಾರ್ಯಕ್ಕೊಳ್ಳಿತ್ತು, ನೀರು ನಿರ್ಗ್ರಂಥಮಾಗೆ ರೋಗಹರಂ, ಕಿಚ್ಚು ನಿರ್ಗ್ರಂಥಮಾದೊಡಡುಗೆಯ ಕಾರ್ಯಮಕ್ಕುಂ, ಸೂರ್ಯಂ ನಿರ್ಗ್ರಂಥಮಾಗೆ ದಿನಶುದ್ಧಿ, ಚಂದ್ರಂ ನಿರ್ಗ್ರಂಥಮಾಗೆ ರಾತ್ರಿ ಶುದ್ಧಿ, ಅಕ್ಕಿ ನಿರ್ಗ್ರಂಥಮಾಗಲ್ ಅನ್ನದರುಚಿ, ರತ್ನಂ ನಿರ್ಗ್ರಂಥಮಾದೊಡೆ ಬೆಲೆ ಪೆರ್ಚುಗುಮಿಂತೆಲ್ಲಾ ವಸ್ತುಗಳ್ ಗ್ರಂಥರಹಿತಮಾಗಲತಿಪೂಜ್ಯಂಗಳಂತೆ ಜಿನೇಶ್ವರನ ತಪದ ನಿರ್ಗ್ರಂಥದಿಂದಲೆ ಲೋಕದ ಕಾರ್ಯಂಗಳೆಲ್ಲಂ ಸಿದ್ಧಿಯಕ್ಕುಂ

ಮ || ವಿ || **ಧರೆಯುಂ ಪುಟ್ಟುವ ಮಕ್ಕಳುಂ ದಿನಪನುಂ ಗೋವೃಂದಮುಂ ವಾರಣೋ**
ತ್ಕರಮುಂ ವ್ಯೋಮಮುಮಬ್ಧಿಯುಂ ತುರುಗಮುಂ ಕಿಚ್ಚುಂ ತರುವ್ರಾತಮುಂ
ಗಿರಿಯುಂ ಲೋಕದೊಳುಳ್ಳ ವಸ್ತುವೆನಿತುಂ ನಿರ್ಗ್ರಂಥಮಪ್ಪಾಜಿನೇ
ಶ್ವರ ಮುದ್ರಾಂಕಿತಮಲ್ಲದುಂಟೆ ಜಗದೊಳ್ ಮತ್ತನ್ಯಸಲ್ಲಾಂಛನಂ ||

ಬತ್ತಲೆಯಿಪ್ಪುದೆಲ್ಲಾ ವಸ್ತುಗಳಂ ನೋಡುವ ರತಿಯೊಳ್ ತಾನುಂ ತನ್ನ ಪೆಂಡತಿಯುಂ ಬತ್ತಲೆ ರಾಗದಿಂ ನೆರೆವಂದು ಸತ್ತವರಾರುಮಿಲ್ಲದಿರಿಂದೆಲ್ಲಾ ಬತ್ತಲೆಯೆ ಎಂದು ಭಾವಿಪುದು ಸವಣರಂ ಕಂಡುದರಿಂ ದೋಷಮೆಂದೊಡಜ್ಞಾನಿಗಳಂ ಪೊಲೆಮಾದಿಗರಂ ದುಷ್ಟದುರ್ಜನರಂ ಮಾಯಾವಿಗಳಂ ಕುಲಹೀನರಂ ಪಾಪಿಗಳಂ ವರಾಹ ಶ್ವಾನಾದಿಗಳಂ ಕಂಡವರ್ ಪರಿಪೂರ್ಣಮಾಗೆ ಪುಣ್ಯಮಂ ಕೀರ್ತಿಯಂ ಲಾಭಮನಾಂತಿಪ್ಪರ್. ಅದನಾ ಜಿನಋಷಿಯರ ಕಂಡವರ ಮನೆ ಪಶು ಎಮ್ಮೆಗಳ್ ಕರೆಯವೇ ಕೂಳ್ ಬೇಯದೇ ಪುಳ್ಳೆಗಳಡುಕಿದೊಡಂ ಕಿಚ್ಚುರಿಯವೆ? ಮಕ್ಕಳು ಮರಿಗಳ್ ಕಾರಣಮಿಲ್ಲದೆ ಸಾವವೆ? ಉಂಡರೆ ಪಸಿವು ಪೋಗದೆ? ನೀರುಂ ಕೂಳುಂ ರುಚಿಯಾಗದೆ? ಆಯುಷ್ಯಮಿರ್ದು ಅಂದೆ ಸಾಯ್ವರೆ? ಋಷಿಗಳಂ ಎಂದುಂ ಕಾಣದವರ ಮನೆಯ ಪಶು ಎಮ್ಮೆಗಳ್ ಗೊಡ್ಡಿಗಳಾಗಿಯುಂ ಕರೆವವೆ? ಬೆಂಕಿಯಿಲ್ಲದೆ ಕೂಳ್ ಬೇವುದೆ? ಮಕ್ಕಳು ಮರಿಗಳ್ ಯಾವ ಬಾಧೆಯಿಂದಾದರು ಸಾಯದೆ

ಪೆರಗಣ ಮಾತುಗಳಂ ಮು
ನ್ನರಿಯದವರ ಮುಂದೆ ಬಪ್ಪ ಕಾರ್ಯಮನಿನಿತೆಂ
ದರಿವುದು ಜೀವಂ ಜೀವಂ
ಪರಿಪಡೆ ಧಾರಿಣಿಯೊಳರಿಯಲಾರ್ಕುಮೆ ದೇಹಂ

ಜಾತಿಸ್ಮರತ್ವದಿಂ ಕೆಲರ್ ತಂತಮ್ಮ ಭವಾಂತರಮನಸುವಿಲ್ಲದೊಡೆಂತರಿವರ್? ಜೀವನಿಪ್ಪನ್ನೆವರಂ ಚೈತನ್ಯಮಿಪ್ಪುದದಿಲ್ಲದಂದು ದಶಪ್ರಾಣಂಗಳುಮಿಲ್ಲದೆ ಪೆಣನಾಗಿ ನಿಶ್ಚೇಷ್ಟೆಯಾಗಿ ದೇಹಂ ಕೊಳೆತು ಪುಳಿತು ಪೋಪುದು. ಜೀವಂ ಮುಂದೊಂದು ದೇಹಮಂ ಪೊಕ್ಕು ಕರ್ಮಾಧೀನನಾಗಿಪ್ಪುದು. ಆಸೆಯಿಂ ಸತ್ತು ಭೂತ ಪಿಶಾಚಾದಿಗಳಾಗಿ ತನ್ನವರಂ ಪಿಡಿದು ಕಾಡಿಯುಣ್ಬುದಂ ಕಂಡು ಕೇಳಿಯುಂ ಅಸುವನಿಲ್ಲೆಂಬ ಮರುಳ್ತನಮೇಕೆ? ಮಂತ್ರವಾದಿಗಳಿಂ ಪಾತ್ರಾದಿಗಳೊಳ್ ಮುನ್ನಿನ ಭವದವನೀಕೆಗೆ ಮಕ್ಕಳಾಗಲೀಯನಿವಳ್

ಮುನ್ನಿನ ಪೆಂಡತಿಯುಪದ್ರಾದಿಗಳಂ ಮಾಡುವೆನೆಂಬುದರಿಂ ಇಂತಪ್ಪರಿಂತಪ್ಪೆಡೆಯೊಳ್ ಪುಟ್ಟಿದರೆಂದು ಜಾತಕಫಲಮಂ ನೋಡಿ ಇಂಥಾವನಾಗಿರ್ದಂ, ಮುಂದೆ ಇಂಥಾ ಗತಿಯಂ ಪಡೆವನೆಂದು ಪೇಳ್ವುದಂ ಕೇಳ್ದರಿಯದಂತೆ ನಿನ್ನೊಡಲ್ ತುಂಬಿ ನಿನ್ನ ನುಡಿಯಿಸುತ್ತ ಸುಖ ದುಃಖಾದಿಗಳನರಿವಂ ಜೀವವುನಿಲ್ಲೆಂದು ನುಡಿವುದಾಶ್ಚರ್ಯಂ. ನಿನ್ನ ಮಿಥ್ಯಾಂಧಕಾರದಿಂದತ್ಯಂತಾಸಂಭಾವ್ಯಮಂ ಪೇಳಲಾಗದೆಂದು ದೃಷ್ಟ ಶ್ರುತಾನುಭೂತಂಗಳಂ ಪೇಳ್ವೊಡಂ ನಂಬದೆ ಬುದ್ಧದಾಸಂ ಕೆರಳಿ ಪಲವುಂ ಮಾತಿಂದೇನಪ್ಪುದು? ನಿನ್ನ ದೇಹದೊಳ್ ಜೀವಮುಂಟಪ್ಪೊಡೀ ನೆರೆದಿಪ್ಪ ನೆರವಿಗಳ ಮುಂದೆ ನಿನ್ನ ದೇಹದಿಂ ಪೊರಮಡಿಸಿ ತೋರುವುದೆಂದು ನುಡಿವುದುಮಕಲಂಕರೆಂದರ್

ಮರುಳೆ ಮರುಳ್ತನದಿಂ [ದು]
ರ್ವರೇಶನಾಸ್ಥಾನರಂಗದೊಳ್ ನೀಂ ಪಿತ್ತ
ಜ್ವರಮಾದರಂತೆ ಗಳಪುವ
ಸೆರಗಿಲ್ಲದೆ ನುಡಿವ ಬಡತನಂಚರಿಕೆಯೆ (?)

ಮಾಗಿಯೊಳ್ ಬೇಸಗೆಯಂ ಬೇಸಗೆಯೊಳ್ ಮಳೆಗಾಲಮನಾರುಂ ತೋರಲಾರರ್. ನೀನೀ ಮಳೆಗಾಲದೊಳ್ ಬೇಸಗೆಯಂ ತೋರಿದೊಡೆ ಜೀವಮಂ ನಾಂ ತೋರುವೆಂ. ನೀಂ ನುಡಿಯುರಿಯುದಾಕಾಶವಮಂ ನೋಡಿದನೆಂಬಂತೆನ್ನ ನುಡಿಗುತ್ತರವಮಂ ಕಾಣದೆ ನಾನುಮೆಕ್ಕಸಿಕ್ಕಂಗಳ್ಗಳುಕದೆಯಾದೊಡಮೇಂ ಪಾಲೊಳ್ ತುಪ್ಪಮುಂಟೆಂದು ಕಲ್ಲೊಳ್ ಚಿನ್ನಮುಂಟೆಂದು ಮರದೊಳಗ್ನಿಯುಂಟೆಂದುಮೆಲ್ಲರ್ ಬಲ್ಲರಾಗಿಯುಂ ತೋರಲದಕ್ಕೆ ತಕ್ಕ ಕ್ರಿಯೆಯಂ ಮಾಡಿದೊಡಲ್ಲದೊಮ್ಮೆಯೆ ತೋರಬಾರದು. ಕ್ರಮವಿಡಿದು ಪಾಲಂ ಕಾಸಿ ಹೆಪ್ಪನಿಟ್ಟು ಕಡೆದು ಬೆಣ್ಣೆಗೊಂಡು ಪದವರಿದು ಕಾಸಿದಾಗಳ್ ತುಪ್ಪಮ್ಮಕುಂ. ಕಲ್ಲಗರಂ ಮೂಲಿಕಾಪ್ರಯೋಗವಿಡಿದು ಕರಗಲಯಃತಾಮ್ರಮದಂ ಕ್ರಮವಿಡಿದು ಮಾಳ್ಪ ಕ್ರಿಯೆಯಿಂ ಸುವರ್ಣಮಕ್ಕುಂ. ಮರನು ಮನೋಜಾಯಿಲನಾಗಿ ಪೊಸೆಯೆ ಕಿಚ್ಚಕ್ಕುಂ ಎಳ್ಳಂ ಗಾಣದೊಳಿಕ್ಕಿ ಪಿಳಿಯೆ ಎಣ್ಣೆಯಕ್ಕುಮಂತೆ ಕರ್ಮವಶದಿಂ ಶರೀರಿಯಪ್ಪ ಜೀವನೊರ್ಮೆಯೆ ತೋರಲ್ಬಾರದು. ಜೀವನುಂಟೆಂಬ ನಂಬುಗೆಯಿಂ ದಯಾಮೂಲಮಪ್ಪ ಸಾಗಾರನಗಾರ ಧರ್ಮಕ್ಕೆ ಶರೀರಮನೊಡ್ಡಿ ತಪದಿಂ ಪಾಪಾಂಕುರಂಗಳಂ ಕಿತ್ತೊಟ್ಟಿ ಮೆಲ್ಲನೆ ಸ್ವಸ್ವರೂಪನಾಗಿ ಶಾಶ್ವತ ಸುಖದೊಳ್ ಕೂಡಿದಂದು ಜೀವಂ ಬೇರಕ್ಕುವಾಗಲ್ ಜ್ಞಾನದರ್ಶನಸ್ವರೂಪಾಗಿಯಾಸನ್ನಭವ್ಯರ್ಗಂ ತೋರ್ಕುಮಲ್ಲದೆ ಮನೆಯ ಬಡತನಕ್ಕೆ ಪೊಡೆಯಂ ಕೊಯ್ದಟ್ಟನ್ನಮನರಸಲ್ ಕಾಣದಂತಕ್ಕುಂ. ನಿನಗೆ ಕರ್ಮಬಂಧಮಪ್ಪ ಜೀವನೆಂತು ಕಾಣ್ಬಂ? ಪಾಲೊಳ್ ಘೃತಚ್ಛಾಯೆಯಪ್ಪ ಸ್ನಿಗ್ಧಂ ಶಿಲೆಯೊಳ್ ಸುವರ್ಣದ ಪೊಗರ್ ಮರದೊಳ್ ಕಿಚ್ಚು ತೋರುವಂತೆ ನಿನ್ನ ಸೊಲ್ಲುಂ ಚೈತನ್ಯಮುಂ ಬೋಧಮುಮಿಪ್ಪುದರಿಂ ಜೀವನುಂಟೆಂದು ಕಾಂಬುದು. ಸೋರೆಯ ಬುರುಡೆಗೆ ಮಣ್ಣಂ ಮೆತ್ತಿ ಶರಧಿಯೊಳಿಕ್ಕಿದೊಡೆ ಮೇಲಕ್ಕೆ ಬಾರದಂತೆ

ಕರ್ಮಲೇಪನಾದಾತ್ಮನುಮಪವರ್ಗಮನೆಯ್ದಲಾರಂ. ತಾರೆಗಳುಂ ಚಂದ್ರನುಂ ಪಗಲೊಳ್ ಮುಗಿಲೊಳಿರ್ದು ಕಾಣದಿರೆ ತಾರೆಗಳುಂ ತಾರಾಪತಿಯುಮಿಲ್ಲೆಂದು ವಾದಿಸಲಾಗದು ಏರಂಡಬೀಜಂ ಬಿಸಿಲಿಂದೊಣಗಿ ಪಸುರ್ ಪೋಗೆ ಮೇಲಕ್ಕೆ ಪಾರುವಂತಾತ್ಮಂ ಕರ್ಮ ಚೋಹಂ ಪೋಗೆ ಮೋಕ್ಷದೊಳ್ ನೆಲೆಯಪ್ಪಂ. ಜೀವಂ ಅನಾದಿ ನಿಧನ ಕರ್ತೃತ್ವ ಭೋಕ್ತೃತ್ವಮುಳ್ಳನಾಗಿಯುಂ ಪಾಪದಿಂ ನಾರಕನುಂ ಪುಣ್ಯದಿಂ ಸ್ವರ್ಗಸ್ಥನುಂ ಪಾಪ ಪುಣ್ಯಮಿಶ್ರದಿಂ ಮನುಷ್ಯನುಂ ಪಾಪಪುಣ್ಯಕ್ಷಯದಿಂ ಮುಕ್ತನುಂ ಅಪ್ಪನೆಂದು ಪೇಳೆ ಸಭೆಯುಂ ಸಭಾಪತಿಯುಂ ಮೆಚ್ಚಿ ಜಯಪತ್ರಮಂ ಕುಡೆ ಸಂಸಾರಿ ಜೀವನಪ್ಪುದರಿಂ ಬುದ್ಧದಾಸಂ ಮೊದಲಾಗೆ ಜೀವನೆಂಬಂ ದೇಹದೊಳೆಲ್ಲಿಪ್ಪನವನ ಕಾಣ್ಬುದೆಂತೆಂದೊಡೆ ಭಟ್ಟಾರಕರಿಂತೆಂದರ್

ಶಾ || ಅಂಗುಷ್ಠಂ ಮೊದಲಾಗೆ ನೆತ್ತಿವರೆಗಂ ಸರ್ವಾಂಗ ಸಂಪೂರ್ಣನು
ತ್ತುಂಗಜ್ಞಾನಮಯಂ ಸಂದರ್ಶನಮಯಂ ಚಾರಿತ್ರತೇಜೋಮಯಂ
ಮಾಂಗಲ್ಯಂ ಮಹಿಮಂ ಸ್ವಯಂಭುಸುಖಿನಿರ್ಬಂಧಂ ನಿರಾಪೇಕ್ಷನಾ
ಗಂಗಂ ತುಂಬಿಹನೆಂದು ಭಾವಿಸುವವಂ ಕಾಣ್ಬಂ ಪೆರರ್ ಕಾಣ್ಬರೇ

ಯೋಜಗ್ಧ್ವಾ ಪಿಶಿತಂ ಸಮತ್ಸ್ಯಕಬಲಂ ಜೀವಂ ಚ ಶೂನ್ಯಂ
ವದನ್ಕರ್ತಾ ಕರ್ಮಫಲಂ ನ ಭುಂಕ್ತ ಇತಿ ಯೋ ವಕ್ತಾ ಸುಬುದ್ಧಾ ಕಥಮ್|
ಯದ್ಧ್ಯಾನಂ ಕ್ಷಣವೃತ್ತಿ ವಸ್ತು ಸಕಲಂ ಜ್ಞಾತುಂ ನ ಶಕ್ತುಂ ಸದಾ
ಯೋ ಜಾನನ್ಯುಗಪಜ್ಜಗತ್ರಯಮಿದಂ ಸಾಕ್ಷಾತ್ ಸ ಬುದ್ಧೋ ಮಮ ||

ಎಂದನೇಕ ತೆರದಿಂ ಶಬ್ದಾಗಮ ಯುಕ್ತ್ಯಾಗಮ ಪರಮಾಗಮಂ ಮೊದಲಾಗೆ ಸಂವಾದಘಟವಾದ ಪತ್ರವಾದಾದಿಗಳಿಂ ಸೌಗತಗರ್ವಪರ್ವತಮನಕಲಂಕವಾಗ್ವಜ್ರಪಾತದಿಂ ಚೂರ್ಣೀಕೃತಂ ಮಾಡೆಯಾ ಸಮಯದೊಳ್ ರಾಜಾಲಯದಿಂ ಭದ್ರಗಜಂ ಮದದಿಂ ಕಂಭಮಂ ಮುರಿದು ರಾಜವೀಧಿಯೊಳ್ ಕಂಡ ಜನಂಗಳಂ ಕೊಲ್ಲುತ್ತೆ ಬರುತ್ತಿರಲಾ ಸೌಗತರ ಮನೋಗತದಿಂದುಭಯ ಶಾಸ್ತ್ರಂಗಳನರ್ಚಿಸಿ ಕರಿಯು ಬಪ್ಪ ಮಾರ್ಗದೊಳಿಡುವುದುಂ ಮದಗಜಂ ಬೌದ್ಧಾಗಮ ಪುಸ್ತಕಮನೆಡಗಾಲಿಂ ಪುಡಿಯಂ ಮಾಡಿ ಜಿನಸಿದ್ಧಾಂತಮನೆತ್ತಿ ಮಸ್ತಕದೊಳಿಟ್ಟು ಗ್ರಾಮಪ್ರದಕ್ಷಿಣಂಗೆಯ್ದೊಡಾ ಶಾಸ್ತ್ರಕ್ಕೆ ಗಂಧಹಸ್ತಿಮಹಾಭಾಷ್ಯಮೆಂಬ ಪೆಸರಾದುದೆಲ್ಲಮಂ ಹಿಮಶೀತಲಮಹಾರಾಜಂ ಕಂಡು ಸುಗತಾಚಾರ್ಯನಂ ಕಲ್ಲುಗಾಣದೊಳಿಕ್ಕಿಸಲೆಂದುದ್ಯೋಗಿಸೆ ಭಟ್ಟಾಕಲಂಕರ್ ಜೀವಘಾತಭೀರುಗಳಾಗಿ ಅರಸಂಗರಿಪೆ ತಾವೇ ಗಾಣದ ಬಳಿಯೊಳಡ್ಡಬಂದು ನಿಲಿಸೆ ಸಕಲ ದೇಶಂಗಳೊಳಿಪ್ಪ ಬೌದ್ಧರೆಲ್ಲ ತಮ್ಮ ಸರ್ವಸ್ವಮನರಸಂಗೊಪ್ಪಿಸಿ ಅಂತರ ದ್ವೀಪಂಗಳಾದ ಸಿಂಗಳದ್ವೀಪ ಹಂಸದ್ವೀಪ ವಾನರದ್ವೀಪ ಮೊದಲಾದವರೊಳ್ ನಿಂತು ಕರ್ಣಾಟ ಮೊದಲಾದ ದೇಶಂಗಳೊಳ್ ಹೆಸರಿಲ್ಲದಂತಾಗೆ ಹಿಮಶೀತಲಮಹಾರಾಜಂ ಜೈನಾಗಮಮಂ ನಂಬಿ ಸುದೃಷ್ಟಿಯಾಗಿ ರಾಜ್ಯಮನಾಳಿದಂ ಸಪ್ತ

ಶೈಲಾದ್ರಿಶಾಖೆ ಹಿಮಶೀತಲಮಹಾರಾಜಾಃ

ವೃತ್ತ || ನಾಹಂಕಾರವಶೀಕೃತೇನ ಮನಸಾ ನ ದ್ವೇಷಿಣಃ ಕೇವಲಂ
ನೈರಾತ್ಮ್ಯಂ ಪ್ರತಿಪದ್ಯ ನಶ್ಯತಿ ಜನೇ ಕಾರುಣ್ಯಬುದ್ಧ್ಯಾ ಮಯಾ |
ರಾಜ್ಞಶ್ರೀ ಹಿಮಶೀತಲಸ್ಯ ಸದಸಿ ಪ್ರಾಯೋ ವಿದಗ್ಧಾತ್ಮಣಾನೋ
ಬೌದ್ಧೌಘಾನ್ ಸಕಲಾನ್ವಿಜಿತ್ಯ ಸಘುಟಃ ಪಾದೇನ ವಿಸ್ಫಾಟಿತಃ || ||೧||

ಸಂಕ್ಷೋಭೀಕೃತಪಂಕಜಸ್ಯ ವಿಸರೋ ಜ್ಞಾನಿಕೃತಾನೇಕ ಶೋ
ದ್ಭವ್ಯಾನಿ ಪ್ರಕಟೀಕೃತೋರ್ವಿಪ್ರಸರಃ ಸ್ಯಾದ್ವಾದ ಯುಕ್ತ್ಯಾಗಮಃ |
ಧಾವಲ್ಯೀಕೃತ ದಿಕ್ಸಮೂಹಗತ ಸತ್ಕೀರ್ತಿಸ್ಸಮುದ್ರೀಕೃತಃ
ಪ್ರಸ್ಫೀತೋದ್ಧತ ವಾದಿಜಾಲವದನಶ್ರೀ ಭಟ್ಟಾಕಲಂಕವ್ರತೀ || ||೨||

ಯೋರಾಗದ್ವೇಷ ಮೋಹಾದ್ಯ್ರತಮಲಿನಮಾಶ್ಲಿಷ್ಯದುಷ್ಟಾನ್
ಪ್ರಾಕೃಷ್ಯಾಕ್ಲಿಷ್ಟೈ ಕಾಂತ ಪ್ರವಾದ ಪ್ರಕಟನ ಪಟು ವಾಚಾಟವಾದೀಶವಾದಾನ್|
ಉಕ್ತ್ವಾ ಸಂಬೋಧ್ಯ ವಾದೇ ಪ್ರವಚನ ವಿಲಸತ್ಸಾರತತ್ತ್ವಾರ್ಥ ಸಾರ್ಥಾನ್
ಜಿತ್ವಾ ಜೇತೃಸ್ರಗಾ ಯಚ್ಛತಿ ಭುವಿ ತಮಹಂ ನೌಮಿ ಭಟ್ಟಾಕಲಂಕಮ್ || ||೩||

ಪ್ರತಿಕ್ಷಣಂ ಭಂಗಿ ಗತಾನ್ನಿರುದ್ಧ
ಧರ್ಮ ಪ್ರಬುದ್ಧಾಪನಯ ಪ್ರಣದ್ಧಾನ್ |
ದುರ್ಬುದ್ಧಿ ವಿದ್ಧಾನ ವಿಶುದ್ಧ ಬೌದ್ಧಾನ್
ಜೈತ್ರೋ ಭವತ್ಯೇಷ ಋಷೀಂದ್ರವಂದ್ಯಃ || ||೪|

ತರ್ಕಾತಿಕರ್ಕಶ ಪೃಥಗ್ವಿಧ ಯುಕ್ತಿಮಾರ್ಗೋ
ಚ್ಚ......... ಸಾ.......... ರುಂಬತಿದೊ................ |
ಚಾರ್ವಾಕಸಾಂ............... ಪೆಲಾದ್ಯಭಿಲಾನ್ಯವೃಂದಾನ್
ಬಹುಗ.................ಬಹುಶಸ್ಸಜಿ............ಕಲಂಕಃ || ||೫||

ಮತ್ತಮಾ ತರುವಾಯದೊಳ್ ಯದುಕುಲಾಗ್ರಗಣ್ಯನಪ್ಪನಪ್ರತಿಮಲ್ಲಂ ರಾಜಮಲ್ಲಂ ದಕ್ಷಿಣ ಮಧುರೆಯೊಳಿರ್ದ ಕರ್ನಾಟ ದ್ರಾವಿಡ ಮಹಾರಾಷ್ಟ್ರ ತೌರುಷ್ಕಂ ಮೊದಲಾದನೇಕ ದೇಶಮಂ ಸಾಧಿಸಿ ವೀರಮಾರ್ತಾಂಡದೇವನೆಂದು ಪೊಗಳಿಸಿಕೊಳುತಿರ್ದನಾ ಮಹಾಸಾಮಂತಂ ಚೌಂಡರಾಯಂ ಸಮ್ಯಕ್ತ್ವಯುಕ್ತ ಪರಾಕ್ರಮಶಾಲಿ ನೊಣಬಕುಲಾಂತಕ ಗಂಗವಂಶಲಲಾಮನನೇಕರಾಜ್ಯಮಂ ಸಾಧಿಸಿ ಸುಖಸಂಕಥಾ ವಿನೋದದಿಂದಿಪ್ಪುದುಮಾನಂಬಿಕೆ ಸಮ್ಯಕ್ತ್ವಸಂಪನ್ನೆ ಆದಿಪುರಾಣಮಂ ಕೇಳ್ದು ಪೌದನಪುರದೊಳ್ ಬಾಹುಬಲಿದೇವರ ಪ್ರತಿಬಿಂಬಮೈನೂರು ಚಾಪೋತ್ಸೇಧಮುಂಟೆಂಬುದಂ ಕೇಳ್ದಾತನಂಬಿಕೆ ಕಾಳಿಕಾದೇವಿಯುಂ

ತಾನುಮಾ ಬಿಂಬಮಂ ದರ್ಶನಂ ಮಾಡುವನ್ನೆಗಂ ಪಾಲುಂ ಪಣ್ಣುಂ ನಿವೃತ್ತಿಯೆಂದು ಚತುರಂಗಬಲಂಬೆರಸು ಪಯಣಂ ಬಪ್ಪಾಗಳಲ್ಲಲ್ಲಿ ಬೀಡಂ ಬಿಡುತ್ತೆ ಮಾರ್ಗದೊಳೊಂದೊಂದು ಚೈತ್ಯಾಲಯಂಗಳಂ ರಚಿಸಿ ಪ್ರತಿಷ್ಠೆಯಂ ಮಾಡಿಸುತ್ತೆ ಪೋಗಿ ಮುನ್ನ ಭದ್ರಬಾಹುಸ್ವಾಮಿಗಳ್ ನಿಷಿದ್ಧಿವಡೆದ ಬೆಟ್ಟದ ಬಳಿಯೊಳ್ ಬೀಡಂ ಬಿಟ್ಟಿರ್ದು ಮುಂದಕ್ಕೆ ಪೋಗಲೆಂದಿರ್ದಾ ರಾತ್ರಿಯೊಳ್ ಪದ್ಮಾವತಿದೇವಿಯು ಮಾತಾಪುತ್ರರ ಸಪ್ನದೊಳ್ ನೀಮುಂ ಪೌದನಾಪುರಕ್ಕೆ ಪೋಗಲ್ ಸಾಮರ್ಥ್ಯಮಿಲ್ಲಮಾದೊಡಂ ನಿಮ್ಮ ದೃಢಭಕ್ತಿಗೆ ಈ ದೊಡ್ಡ ಬೆಟ್ಟದೊಳೆ ಮುನ್ನ ರಾಮ ರಾವಣರಿಂ ಪೂಜಿತಮಪ್ಪ ಗೋಮಟಜಿನಪ್ರತಿಮೆ ಮಂಡೋದರಿಯ ದರ್ಶನದ ಶಿಲಾಬಿಂಬಮಿಪ್ಪುದದಕ್ಕೆ ಮರೆಯಾಗಿಪ್ಪ ಶಿಲೆಯಂ ತೆಗೆದೊಡೆ ಕಾಣ್ಬುಂ ಅದರ ಕಾಣ್ಕೆಗಾವುದು ಗುರುತೆಂದೊಡೆ ಶುಚಿರ್ಭೂತನಾಗಿ ಚಿಕ್ಕಬೆಟ್ಟದ ಗುಂಡನವಲಂಬಿಸಿ ದಕ್ಷಿಣಾಭಿಮುಖವಾಗಿ ಬಾಣಪ್ರಯೋಗಮಂ ಮಾಡಿದೊಡಾ ರವಕ್ಕೆ ನಿರೀಕ್ಷಣಂಗೆಯ್ಯುದಿರ್ದೊಡೆ ಬಿಂಬಂ ಬೆಳೆದು ತೋರ್ಪುದೆಂದು ಸ್ವಪ್ನಮಂ ಕಾಣಿಸಲರ್ಕೋದಯದೊಳಾ ಪ್ರಕಾರದೊಳೆ ಬಾಣಪ್ರಯೋಗಂ ಮಾಡಿದೊಡೆ ಮರಸಿರ್ದ ಗುಂಡುಗಳ ಮರೆಯೊಳಿರ್ದ ಭುಜಬಲಿಯತಿವರರ ಪ್ರತಿಬಿಂಬಂ ಕಾಣಲೊಡನವನೀಕ್ಷಿಸಿದೊಡೆ ಪದಿಮೂರು ಪುರುಷಪ್ರಮಾಣದಿಂ ನಿಲ್ಬುದುಮವರ ಸುತ್ತ ಪರಿಸ್ಥಲಂಗಳಂ ಮಾಡಿಸಿ ಪ್ರಾಕಾರದೊಳ್ ಚೈತ್ಯಾಲಯಂಗಳಂ ಮಾಡಿಸಿ ಪ್ರತಿಷ್ಠೆಯಂ ಮಾಡಿಸಿಯವಭೃತ ಸ್ನಾನದೊಳೆ ಎಳನೀರು ಮೊದಲಾದ ಪಂಚಾಮೃತಂಗಳಂ ಪ್ರತ್ಯೇಕಂ ನಾಲ್ಕು ಖಾರಿಯಂ ಸಂಪಾದಿಸಿ ಚಿತ್ತಸಮುನ್ನತಿಯಿಂ ಸ್ನಪನಂಗೆಯ್ಸಿದೊಡಂ ನಾಭಿಯಿಂ ಕೆಳಗಿಳಿಯದಿಪ್ಪುದುಂ ವಿಷಣ್ಣಮನದಿ ಲಕ್ಷ ಪರಿಷೆಗಳೆಲ್ಲರ್ಗಂ ಬೆಸಸಿದೊಡವರೆಲ್ಲರುಂ ತಂತಮ್ಮ ಶಕ್ತ್ಯಾನುಸಾರವಾಗಿ ಜಲ ಕ್ಷೀರಾದಿ ಧಾರೆಗಳಿಂದಾಗಲಿಳಿಯದಿರೆ ಚಿಂತಾಕ್ರಾಂತನಾಗೆ ಕೂಷ್ಮಾಂಡಿನೀ ದೇವಿ ವೃದ್ಧರೂಪಾಂತು ಗುಳ್ಳಕಾಯಪೋಳೊಳ್ ಕ್ಷೀರಮಂ ತಂದೆನ್ನ ಭಕ್ತಿಯಂ ಸಲಿಸಲೆಂಬುದೆಲ್ಲರುಮಪಹಾಸ್ಯಂಗೆಯ್ಯೆ ಕೆಲಂಬರದಂ ಕೊಂಡಾ ಪ್ರತಿಮೆಯ ಮಸ್ತಕದೊಳ್ ಬಿಡಲಾಕ್ಷಣವೆ ಬೆಟ್ಟಮನುರಮಂ ಪಾಲ್ ಮುಸುಕಲಾ ಪುರಕ್ಕೆ ಬೆಳ್ಗುಳಮೆಂಬ ಪೆಸರಿಟ್ಟನೇಕ ಗ್ರಾಮಂಗಳಂ ನಿರ್ಮಾಣಂ ಮಾಡಿ ತದ್ದೇವತಾವಿನಿಯೋಗಕ್ಕೆ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಪೊನ್ನಿನ ಗ್ರಾಮ ಸೀಮೆಗಳಂ ಶಿಲಾಶಾಸನಪೂರ್ವಕಂ ಕೊಟ್ಟು ನ್ಯಾಯದಿಂ ರಾಜ್ಯಮಂ ಪಾಲಿಸುತ್ತಿರ್ದಂ

ಮುನ್ನ ಸುರಾಷ್ಟ್ರದೇಶದ ಗಿರಿಪುರ ಸಮೀಪದೂರ್ಜಯಂತಗಿರಿಯ ಚಂದ್ರ ಗುಹಾನಿವಾಸಿ ಧರಸೇನಾಚಾರ್ಯ ಮಹಾತಪೋಧನ ಪರಮಮುನಿ ಮುಖ್ಯನಾ ಗ್ರಾಯಣಿಯ ಪೂರ್ವಸ್ಥಿತ ಪಂಚವಸ್ತುಗತ ಚತುರ್ಥ ಮಹಾ ಕರ್ಮಪ್ರಾಭೃತತಜ್ಞರಾಗಿರ್ದು ನೀಚಾಯುರಾವಸಾನದೊಳ್ ಇಂದ್ರಾದೇಶದ ವೇಣಾತಟಪುರಸ್ಥಿತ ಭೂತಬಲಿ ಪುಷ್ಪದಂತರಂ ಲೇಖನಮನಟ್ಟಿ ಬರಿಸಿ ಶ್ರೀಮನ್ನೇಮಿಜಿನನಾಥ ಸಿದ್ಧಶಿಲೊಯಳ್ ವಿದ್ಯಾಸಾಧನೆಗೆಯ್ಯೆ ವಿದ್ಯಾದೇವಿ ಪ್ರತ್ಯಕ್ಷಮಾಗೆ ಹೀನಾಧಿಕವರ್ಣಮನರಿದು ಮಂತ್ರ ವ್ಯಾಕರಣವಿಧಿಯಂ ವಿದ್ಯಮಂ ಸಾಧಿಸಿ ಸಿದ್ಧವಿದ್ಯರಾಗೆ ಶುಭ ತಿಥಿ ವಾರ ನಕ್ಷತ್ರದೊಳ್ ಗುರುವಿನ ಆಜ್ಞಾವಿನಯದಿಂ ವ್ಯಾಖ್ಯಾನ ಪ್ರಾರಂಭಮಾಗೆ

ಕೆಲದಿವಸದಿಂದಾಷಾಢ ಶುದ್ಧೈಕಾದಶಿಯೊಳ್ ಗ್ರಂಥಸಮಾಪ್ತಿಯೊಳೆ ದೇವತೆಗಳ್ ಪೂಜಿಸೆ ಭೂತಬಲಿ ಪುಷ್ಪದಂತರ್ ಪ್ರಿಯಹಿತವಚನಂಗಳಿಂ ದಕ್ಷಿಣಾಭಿಮುಖದೆ ಕರಹಾಟದೇಶಮನೆಯ್ದಿ ಜಿನಪಾಲಿತ ಮುನೀಶ್ವರ ಭಾಗಿನೇಯಂ ಕೂಡಿ ವನವಾಸಮಾಗಿರೆ ಭೂತಬಲಿ ಧ್ರಾವಿಡ ದೇಶದ ಮಧುರಾಪುರಕ್ಕೆಯ್ದಿ ಪುಷ್ಪದಂತರ್ ಸ್ವಭಾಗಿನೇಯ ಜಿನಪಾಲಿತಮುನಿಗೆ ಕರ್ಮಪ್ರಕೃತಿ ಪ್ರಭೃತಮುಪಸಂಹಾರ್ಯಗಳಿಂದಾರು ಖಂಡಂಗಳ ವಾಂಛನ್ಗುಣ ಜೀವಾಧಿಕ ವಿಂಶತಿವಿಧ ಸೂತ್ರ ಸತ್ಪ್ರರೂಪಣಯುಕ್ತ ಜೀವಸ್ಥಾನಾದ್ಯಧಿಕಾರಮಂ ವಿರಚಿಸಿ ತದಭಿಪ್ರಾಯಮಂ ಭೂತಬಲಿ ಗುರುಪಾರ್ಶ್ವದೊಳ್ ತತ್ಪ್ರರೂಪಣಮಂ ಕೇಳ್ದು ಮತ್ತಂ ದ್ರವ್ಯರೂಪಾದ್ಯಧಿಕಾರ ಖಂಡ ಪಂಚಕ ಸೂತ್ರಂಗಳಾರು ಸಾಸಿರ ಗ್ರಂಥರಚನೆಯಂ ಮಹಾಬಂಧ ಷಟ್ಖಂಡ ತ್ರಿಶಂತ್ಸಹಸ್ರ ಸೂತ್ರಗ್ರಂಥಂಗಳೈದು ಖಂಡಮಂ

ಮತ್ತಂ ಜೀವಸ್ಥಾನಂ ಕ್ಷುಲ್ಲಕಬಂಧಂ ಬಂಧಸ್ವಾಮಿತ್ವಂ ಭಾವಂ ವೇದನಾವರ್ಗಣೆಗಳೆಂಬಾರು ಖಂಡಮಂ ಭೂತಬಲಿಮುನಿ ವಿರಚಿಸೆ ಭಾವಸ್ಥಾಪನಾರೋಪಣಮಂ ಪುಸ್ತಕದೊಳ್ ಬರೆದು ಜ್ಯೇಷ್ಠ ಸಿತ ಪಂಚಮಿಯೊಳ್ ಚಾತುರ್ವರ್ಣ ಚತುಃಸಂಘಸಹಿತಂ ಶಾಸ್ತ್ರಪ್ರತಿಷ್ಠೆಯಿಂ ಪೂಜಿಸಿ ಪ್ರಭಾವನೆಯಂ ಮಾಡಿದರ್. ಜಿನಪಾಲಿತಮುನಿ ಪುಷ್ಪದಂತರ್ ಮಾಡಿದ ಷಟ್ಖಂಡಾಗಮಮೀ ಗ್ರಂಥಮಂ ಕ್ರಿಯಾಕರ್ಮರಚನಾ ಸಿದ್ಧಾಂತಮಂ ಕೂಡಿ ಘಂಟಾ ಧ್ವಜ ಛತ್ರ ಚಾಮರಾದಿಗಳಿನನೇಕ ತೂರ್ಯರವಂಗಳಿಂ ಪೂಜಿಸಲಂದಿಂ ಬಳಿಯಂ ಶ್ರುತಪಂಚಮಿಯೆಂದು ಪ್ರಸಿದ್ಧಿಯಾಗಲನಂತರಂ ಕಷಾಯ ಪ್ರಾಭೃತಜ್ಞಾನಪ್ರವಾದ ಪಂಚಮ ಪರ್ವಸ್ಥ ದಶಮ ವಸ್ತು ತೃತೀಯ ಪ್ರಾಯ ದೋಷ ಪ್ರಾಭೃತಕಜ್ಞ ಗುಣಧರಮುನೀಂದ್ರ ಧರಸೇನಮುನಿಗಳ್ ಪೋದಿಂಬಳಿಯಂ ಯತಿವೃಷಭಮುನಿಗಳ್ ಪಂಚದಶವಿಧ ಮಹಾಧಿಕಾರ ವೃತ್ತಿ ಸೂತ್ರ ರೂಪ ಷಟ್ಸಹಸ್ರಗ್ರಂಥ ಚೂರ್ಣಿಸೂತ್ರಜ್ಞ ದ್ವಾದಶ ಸಹಸ್ರ ಗ್ರಂಥ ಪ್ರಾಭೃತಕಜ್ಞರ್ ಗುಣಧರ ಯತಿವೃಷಭೋಚ್ಚಾರಣಾಚಾರ್ಯರಲ್ಲಿ ಗಾಥಾಚೂರ್ಣ್ಯಚಾರಣ ಸೂತ್ರಂಗಳಿಂದುಪಸಂಹೃತ ಕಷಾಯಪ್ರಾಭೃತಮಂ ತಿಳಿದು ದ್ರವ್ಯಭಾವ ಪುಸ್ತುಕಸಮಾಸಮಾಗಚ್ಛ ಗುರುಪರಿಪಾಟಿ ಸಿದ್ಧಾಂತ ಶ್ರೀಮತ್ಕುಂದಕುಂದ ಪುರಾಚಾರ್ಯ ಶ್ರೀಪದ್ಮನಂದಿ ಗೃದ್ಧಪಿಂಛ ಬಲಾಹಕಮಯೂರಪಿಂಛರ್ ಉಮಾಸ್ವಾತಿ ಪೂಜ್ಯಪಾದರೆಂದಿವರನೇಕ ಸಿದ್ಧಾಂತಕರ್ತೃಗಳ್ ಶಾಮಕುಂದಾಚಾರ್ಯರ್ ಮಹಾಬಂಧ ಪ್ರಾಕೃತ ಸಂಸ್ಕೃತ ಕರ್ಣಾಟಭಾಷೆಗಳಿಂ ಗ್ರಂಥರಚನಾಪ್ರವೀಣರಾದಿಂ ಬಳಿಯಂ ತುಂಬುಲೂರ ನಾಮಾಚಾರ್ಯರೆಂಬತ್ತುನಾಲ್ಕುಸಾಸಿರ ಗ್ರಂಥಕರ್ತೃಗಳಾಗೆ ಕರ್ಣಾಟಕಭಾಷೆಯಿಂ ಚೂಡಾಮಣಿವ್ಯಾಖ್ಯಾನಮಂ ಮಾಡಿದರ್.

ಮೊದಲು ಪದ್ಮನಂದಿಗಳುಂ ಪೂಜ್ಯಪಾದರುಂ ತತ್ವಾರ್ಥದೊಳ್ ಸಂದೇಹಂ ಬರೆ ಪ್ರಯತ್ನದಿಂ ಪೂರ್ವವಿದೇಹಮನೆಯ್ದಿ ಸಮವಸರಣ ದರ್ಶನ ತೀರ್ಥಂಕರಾವಲೋಕನದಿಂ ನಿಸ್ಸಂದೇಹಮಾಗೆ ಬಂದು ವಿರಚಿಸಿದ ಕ್ರಮದೊಳೆ ಸಮಂತಭದ್ರಾಚಾರ್ಯಸ್ವಾಮಿಗಳ್ ಕೌಶಂಭೀನಗರದೊಳ್ ಶಾಸನದೇವಿ ಪ್ರತ್ಯಕ್ಷಮಾಗೆ ಸುವರ್ಣಮಯ ಚಂದ್ರಪ್ರಭುಸ್ವಾಮಿ

ಪ್ರತಿಬಿಂಬಮಂ ಲೋಕಾಶ್ಚರ್ಯಮಾಗೆ ತೋರಿಸಿ ವಿವಿಧ ಸಿದ್ಧಾಂತ ಷಟ್ಖಂಡಾಗಮ ಮೃದು ಸಂಸ್ಕೃತಭಾಷಾಟೀಕಂ ವಿರಚಿಸಿರಲಾ ಪರಂಪರೆಯಿಂ ಶುಭರವಿ ನಂದಿಮುನಿಗಳ್ ಭೀಮರಥಿ ಕೃಷ್ಣವೇಣೀ ಮಧ್ಯಮವಿಷಯದ ಉತ್ಕಲಿಕಾ ಗ್ರಾಮಸಮೀಪದ ಮಣುವಕವಲ್ಲಿಗ್ರಾಮದ ಬಪ್ಪದೇವಗುರುಗಳ್ಗೆ ಮಹಾಬಂಧ ಷಟ್ಖಂಡದೊಳ್ ಪಂಚಖಂಡವ್ಯಾಖ್ಯಾಪ್ರಜ್ಞಪ್ತಿ ಷಟ್ಖಂಡಕಷಾಯಪ್ರಾಭೃತ ಮೊದಲಾದವನುಪದೇಶಂಗೆಯ್ದರಾ ಬಪ್ಪದೇವರ್ ಮಹಾಬಂಧಮಷ್ಟಸಹಸ್ರ ಗ್ರಂಥರಚನೆಯಂ ಮಾಡಿದನಂತರ ಚಿತ್ರಕೂಟ ನಗರವಾಸಿ ಶ್ರೀಏಲಾಚಾರ್ಯರ್ ಸಿದ್ಧಾಂತ ತತ್ವಜ್ಞರವರಲ್ಲಿ ವೀರಸೇನಗುರುಗಳ್ ಸಕಲ ತತ್ವಮನರಿದು ಉಪರಿಮನಿಬಂಧನಾದ್ಯಧಿಕಾರಮಷ್ಟಾದಶಾಧಿಕಾರಮಂ ಪೇಳ್ದರವರನುಜ್ಞೆಯಿಂ ವಾಟಗ್ರಾಮದ ಚೈತ್ಯಾಲಯದೊಳ್ ಉಪರಿಮನಿಬಂಧನಾದ್ಯಧಿಕಾರಮಷ್ಟಾದಶದೆಪ್ಪತ್ತೆರಡು ಸಾಸಿರ ಗ್ರಂಥರಚನಾ ಪ್ರಾಕೃತ ಸಂಸ್ಕೃತ ಮಿಶ್ರ ಟೀಕಂ ಬರೆದು ಧವಲಮೆಂದುಮವರ ಶಿಷ್ಯರ್ ಜಯಸೇನರ್ ಚತುಷ್ಕಷಾಯ ಪ್ರಾಭೃತ ವಿಂಶತಿಸಹಸ್ರಗ್ರಂಥರಚನಾ ತಚ್ಛೇಷ ಚತ್ವಾರಿಂಶತ್‌ಸಹಸ್ರಂ ರಚಿತ ಜಯಧವಲಮಾರು ಸಾವಿರ ಗ್ರಂಥಪ್ರಮಾಣ ಟೀಕಂ ಮಾಡಿದರಿಂತು ಮಹಾಧವಲಸಿದ್ಧಾಂತಮಂ ರಚಿಸಿರ್ದ ಪುಸ್ತಕಂಗಳಂ ರಕ್ಷಿಸಲ್ ಸಿದ್ಧಾಂತಬಸ್ತಿಯಂ ಮಾಡಿಸಿ ಅಲ್ಲಿ ಸ್ಥಾಪಿಸಿ ಪೂಜಿಸುತ್ತಂ ತತ್ಕಾಲದೊಳ್ ಸ್ವಬೋಧನಾರ್ಥಂ ನೇಮಿಚಂದ್ರಸೈದ್ಧಾಂತಿಕದೇವರ್ ತ್ರಿಲೋಕಸಾರ ಗೊಮ್ಮಟಸಾರ ಲಬ್ಧಿಸಾರಮೆಂಬ ಸಾರತ್ರಯಮಂ ಪ್ರಾಭೃತಕರಚನೆಯಂ ಮಾಡಿದರ್

ಈ ಚಾಮುಂಡರಾಯನುಮನೇಕ ಜಿನಾಲಯಂಗಳಂ ಸ್ಥಾಪಿಸಿ ಸ್ವಾಸ್ತ್ಯಂಗಳಂ ಬಿಡಿಸಿ ತನ್ನ ದೇಶದಿಂದರುವತ್ತುನಾಲ್ಕು ಜೈನಬ್ರಾಹ್ಮಣರಂ ಬರಿಸಿ ಅರ್ಚಕರಂ ಮಾಡಿಟ್ಟ ಶಕಾಬ್ದಂಗಳ್ ೭೮೦ರಲ್ಲಿ ಕೊಲ್ಲಾಪುರ ಡಿಲ್ಲಿಯೆಂಬುದದರೊಳ್ ಶ್ರೀಮಜ್ಜಿನಸೇನ ಮಹಾಮುನಿಗಳ್ ಮೊದಲು ನಂದಿಮುನಿ ಪದ್ಮಮುನಿ ಮಹಾಕವಿ ಸಿದ್ಧಸೇನರ್ ಕವಿಪರಮೇಷ್ಠಿಗಳೀ ವಿರಚಿಸಿರ್ದ ಸಪಾದ ಲಕ್ಷ ಗ್ರಂಥಮುಳ್ಳ ಪ್ರಥಮಾನುಯೋಗ ಮಹಾಪುರಾಣಮಂ ಓದಲಾರದ ಜಡಮತಿಗಳ್ಗೆ ತಿಳಿಯಲರಿದೆಂದು ಸತ್ಯಮಾ ಜೀನಸೇನಾಂತಮೆಂಬ ವಚನಮಿರ್ದುದರಿಂ ತ್ರಿಷಷ್ಟಿಲಕ್ಷಣಮಹಾಪುರಾಣಮಂ ದ್ವಾದಶ ಸಹಸ್ರ ಗ್ರಂಥಪ್ರಮಾಣದಿಂ ರಚಿಸಲೆಂದು ಪ್ರಾರಂಭಿಸುವಲ್ಲಿ ಮೊದಲು ಮಂಗಲಾಚರಣ ಶ್ಲೋಕದೊಳಗ್ನಿಗಣಮಾಗೆ ತಮ್ಮಿಂದಂ ಸುಪೂರ್ತಿಯಿಲ್ಲೆಂದು ತಮ್ಮ ಶಿಷ್ಯರೈನೂರ್ವ ರೊಳಿರ್ವರಂ ಶುಷ್ಕವೃಕ್ಷಮಂ ವರ್ಣಿಪುದೆನೆ ಮೊದಲೊರೆದರಂ ಕಠಿಣವಾಕ್ಯೆಂದು ಬಿಟ್ಟು ಮೃದುವಾಕ್ಯ ಸುಮತಿಗಳಪ್ಪ ಗುಣಭದ್ರಮುನಿಯಂ ಕರೆದು ಪತ್ತು ಸಾವಿರ ಗ್ರಂಥಮಂ ರಚಿಸಿರ್ದ ಪುರಾಣಮಂ ಪರಿಪೂರಿಸೆಂದಪ್ಪೈಸೆ ಅವರ್ ಪತ್ತು ಸಾವಿರ ಗ್ರಂಥಮಂ ರಚಿಸಿ ಎರಡು ಸಾವಿರ ಗ್ರಂಥದಿಂ ಪೂರ್ವಪುರಾಣಮಂ ಪೂರೈಸಿ ಉಳಿದೆಂಟು ಸಾವಿರದಿಂದುತ್ತರಪುರಾಣಮಂ ಮಾಡಿರ್ದೊಡದೆಲ್ಲಮಂ ಕರ್ಣಾಟಭಾಷೆಯಿಂ ನಿಜಗುರುವಪ್ಪ ಅಜಿತಸೇನಭಟ್ಟಾರಕರ ನಿರೂಪದಿಂ ಚಾಮುಂಡರಾಯಪುರಾಣಮೆಂಬುದಂ ಮಾಡಿದರ್.

ಇಂತನೇಕ ಧರ್ಮಮಂ ಮಾಡುತ್ತೆ ಸಕಲ ದೇಶಮಂ ಸಾಧಿಸಿ ದುಷ್ಟನಿಗ್ರಹ ಶಿಷ್ಟಪ್ರತಿಪಾಲನಂ ಮಾಡುತ್ತೆ ಪ್ರಜಾಪಾಲನದಿಂ ಕೃತಯುಗದೊಳ್ ಷಣ್ಮುಖಂ ತ್ರೇತಾಯುಗದೊಳ್ ರಾಮನುಂ ದ್ವಾಪರಯುಗದೊಳ್ ಗಾಂಡೀವಿಯುಮಿನ್ನೀ ಕಲಿಯುಗದೊಳ್ ವೀರಮಾರ್ತಾಂಡನೀ ಚಾಮುಂಡರಾಯನೆಂದು ಸಕಳ ಜನಂ ಪೊಗಳ್ವಿನಂ ಸುರಶೈಲದಿಂ ವಾರ್ಧಿ ವಿಸ್ತರವಾ ವಾರ್ಧಿಯಿಂ ಭೂತಳವಾ ಭೂಮಿಗಂ ದಿಗಂತರದಿಂದಾಕಾಶಮದರಿಂ ತನ್ನ ಕೀರ್ತಿ ವಿಶಾಲಮಾಗೆ ರಾಜಿಸಿದನು. ಅಂತಲ್ಲದೆ ಮುನ್ನ ಕಾಲದೋಷದಿಂ ಕಿರಾತರ್ ಪ್ರಬಳರಾಗಿ ರಾಜ್ಯಮೆಲ್ಲಮಂ ತಮ್ಮ ವಶಂ ಮಾಡಿಕೊಂಡು ಧರ್ಮಕಂಟಕರಾಗಿ ಪ್ರಜೆಗಳಂ ಕ್ಷೋಭಂ ಮಾಡುತ್ತಂ ಬರೆ ತನ್ನಾಳ್ದನ ಬೆಸದಿಂ ವಜ್ಜಳನ ನರಿಯ ತಲೆಯನಾನೆ ಮೆಟ್ಟುವಂತೆ ತನ್ನಾನೆಯಿಂ ಮೆಟ್ಟಿಸಿ ಗೆಲ್ದ ಸಹಾಯ ಪರಾಕ್ರಮನಾದುದರಿಂ ಸಮರಧುರಂಧರನುಂ ಸಿಂಗೊಮಾರ ಬಯಲೊಳ್ ಬಂದೊಡ್ಡಿದ ನೊಣಂಬರಂ ಕಾಳಗದೊಳ್ ಜಗದೇಕವೀರನ ಮುಂತೇರಿ ನಿರ್ಮೂಲಮಾಗೆ ಗೆಲ್ದುದರಿಂ ವೀರಮಾರ್ತಾಂಡನುಮುಚ್ಚಂಗೆಯ ಕೋಂಟೆಯೊಳ್ ರಾಜಾಯತನೊಳೊರ್ವನೆ ಪೆಣೆಗೆರೆದುದರಿಂ ರಣರಂಗಸಿಂಗನುಂ ಬಾಳೆಯೆಳೆಯ ಕೋಂಟೆಯೊಳ್ ತ್ರಿಭುವನವಿಜಯವೀರಂ ಮೊದಲಾಗೆ ಪಲಂಬರ್ ಮುಂಕೊಂಡು ಯಮೋದರಮಂ ಪುಗಿಸಿದುದರಿಂ ವೈರಿಕುಳಕಾಲದಂಡನುಂ ನೃಪಕಾಮನ ಕೋಂಟೆಯೊಳ್ ರಾಜನೆಂಬಧಟನಂ ಬಾಸನೆಂಬ ವಿಕ್ರಮನಂ ವರನೆಂಬ ಜಟ್ಟಿಗನಂ ಮಾಣಾಂಕನೆಂಬನಂ ಕಟ್ಟುಗೊಂಡನುಂ ಪೊಯಿಸಳನೆಂಬ ಬಿರಿದಾಂಕನಂ ಪೃಥುವನೆಂಬ ಪೂಣಿಗನಂ ಚಿತ್ತನೆಂಬ ಶೂರನಂ ಮೊದಲಾಗೆ ಪೆರವು ವೈರಿಭೂಭುಜರನೊಂದೆ ಮೊನೆಯೊಳೆ ಗೆಲ್ದುದರಿಂದಜೇಯ ಭುಜವಿಕ್ರಮಶಾಲಿಯುಂ ತನ್ನ ತಮ್ಮನಂ ನಾಗಧರ್ಮನಂ ಮಂಡಲದಿಂ ನಡಸಿದುದರಿಂ ಛಲದಂಕರಾಜ ಗಂಗನುಂ ಗಂಗರಭಂಟರೆನಿಸಿದ ಮುದುರಾಚಯನೊಳ್ ದಾಳಿಯಿಟ್ಟು ಛಲಂ ಮೆರೆದುದರಿಂ ಸಮರಪರಶುರಾಮನಂ ಮಾರ್ಗಮರಿಯದೊಟ್ಟೈಸಿದ ಜಟ್ಟಿಗರನಟ್ಟಿ ರಾಜ್ಯಮಂ ನಿಷ್ಕಂಟಕಂ ಮಾಡಿದುದರಿಂ ಪ್ರತಿಪಕ್ಷ ರಾಕ್ಷಸನುಂ ಕೆಲದ ನೆಲದ ಮಲೆಯ ವೈರಿಗಳ ತಲೆಯ ನೆಲಕ್ಕೆರಗಿಸಿದ ಭಟಮಾರಿಯುಂ ನಿಶ್ಯಂಕಾದಿ ಗುಣರಕ್ಷಣೈಕ ಕಾರಣನಪ್ಪುದರಿಂ ಸಮ್ಯಕ್ತಗುಣಾಳಂಕಾರನುಂ ಸತ್ಯತ್ಯಾಗಾದಿ ಯುಕ್ತನಪ್ಪುದರಿಂ ವಿವೇಕರತ್ನಾಕರನುಂ ಪರಾಂಗನಾ ಪರದ್ರವ್ಯ ಪರಾಙ್ಮುಖನಪ್ಪುದರಿಂ ಶೌಚಾಚಾರನಿರತನುಂ ಹಾಸದೊಳನೃತ ವಚನನಪ್ಪುದರಿಂ ಸತ್ಯಯುಧಿಷ್ಠಿರನುಂ ಸ್ವಪರ ಗುಣರಕ್ಷಣೈಕಕಾರಣನಪ್ಪುದರಿಂ ಗುಣರಕ್ಷಣನುಂ ಕುಲಾಚಲ ಕೂಟಮಾಟಂಗಳೊಳೆ ನವಶತ ಸಂಖ್ಯಾಶಕಾಬ್ದಂಬರಂ ರಾಜ್ಯಪಾಲನೆಯಂ ಮಾಡುತ್ತುಮಿರ್ದಂ

ತನ್ನ ವಂಶಜರಪ್ಪರಸುಮಕ್ಕಳ್ ಹತ್ತೊಕ್ಕಲಂ ಕರೆಯಿಸಿ ಇರಿಸಿದಂ ವಿಕ್ರಮಾರ್ಕನ ಕಾಲ ನೂರಮೂವತ್ತಾರು (೧೩೬) ವರುಷದ ಮೇಲೆ ಶಾಲಿವಾಹನಕಾಲಮಲ್ಲಿಂದೆಂಟುನೂರರಲ್ಲಿ ಭೂಪಾಲನೆಂಬರಸನಾಳುವಂದು ಜಿನಸೇನಾಚಾರ್ಯರವರ ಮೌಖರು ಗುಣಭದ್ರರವರ ಶಿಷ್ಯರ್ ಗೋವಿಂಧಭಟ್ಟರ್ ವೇದಾಗಮ ಸ್ತೋತ್ರ ವ್ಯಾಖ್ಯಾನಕರ್ತೃಗಳಾದರವರ ಕುಮಾರರ್

ಹಸ್ತಿಮಲ್ಲರಾಚಾರ್ಯರಾದರ್. ಬಳಿಕ ಧಾರಾಪುರದೊಳ್ ಭೋಜರಾಜಂ ದೇವೀವರದಿಂ ಕವೀಶ್ವರನೆನಿಸಿ ಅಮರ ದಂಡಿ ಭವಭೂತಿ ಧನಂಜಯರೆಂಬರ್ ಮೊದಲಾಗನೇಕ ಕವಿ ಗಮಕಿ ವಾದಿ ವಾಗ್ಮಿಗಳೊಡನೆ ವಿದ್ಯಾಗೋಷ್ಠಿಯೊಳೆ ದಿನಮಂ ಸಲಿಸುತ್ತೆ ಸಮ್ಯಕ್ತ್ವವಿಲ್ಲದೆ ಹಲವು ಸಮಯಂಗಳೊಳ್ ಕೂಡಿದನಾತಂಗೆ ಮತಿಸಾಗರನೆಂಬ ಸಮ್ಯಗ್ದೃಷ್ಟಿ ಮಂತ್ರಿಯಾಗಿ ಆತನ ಪರಂಪರೆಯಿಂದಿರ್ಪುದುಂ ಕಾಳಿದಾಸಾದಿಗಳ್ ಕವಿಗಳಾಗಿ ಕಾಳಿಕಾದೇವಿಯ ಆರಾಧನಮಂತ್ರವಾದಮಂ ಕಲ್ತು ಶಾಸ್ತ್ರದೊಳುಂ ತಾವೆ ಬಲ್ಲಿದರೆಂದು ಗರ್ವೋದ್ಧತರಾಗಿ ಒಂದು ದಿನಂ ರಾಜಸಭೆಯೊಳ್ ಕಾಲಂ ಕೊಯ್ದು ಕೆಂದಿಸುತ್ತಂ ಭಗಂದರರಾಗಿ ಬಂದು ಆ ಕ್ಷಣದೊಳೆ ಮನ್ಮಥರೂಪಂ ತೋರಿ ಗಳಗಂಡ ಮಾಡಿ ಆ ಕ್ಷಣದೊಳೆ ಪರಿಹರಿಸಿ ತೋರಿ ತಮ್ಮ ಸಾಮರ್ಥ್ಯಂ ಕ್ಷಪಣರ್ಗಿಲ್ಲೆಂದು ಪೇಳೆ ಭೋಜಂ ಸತ್ಯಸಾಗರಮಂತ್ರಿಯಂ ನಿಮ್ಮವರಲ್ಲಿ ಇಂಥಾ ಸಾಮರ್ಥ್ಯವುಂಟೆ ಇಲ್ಲವೆಂದು ನಾನಾ ವಿಧದಿಂ ಕ್ಷೀಣಮಾಗಿ ನುಡಿದೊಡೆ ಮಂತ್ರಿ ವಿಷಣ್ಣನಾಗಿ ಮತ್ತೊಂದುದಿನಂ ಮಾನತುಂಗರೆಂಬಾರ್ಯಂ ಬಂದಿರ್ಪುದುಂ ಸಭೆಗೆಯ್ದಿಸೆ ಭೋಜಂ ಲೋಹದ ೨೪ ನಿಗಳಮಂ ಮಸ್ತಕದಿಂ ಪಾವ...ರೆದ ಹಾಕಿಸಿ ನಾಲ್ಕು ನೆಲೆ ಉಪ್ಪರಿಕೆಯೊಳಿಟ್ಟು ನಾಲ್ಕು ಬಾಗಿಲಂ ಮುದ್ರಿಸಲಾ ರಾತ್ರಿಯೊಳಂ ಭಕ್ತಾಮರಸ್ತೋತ್ರಮಂ ಮಾಡಿ ಮಂತ್ರಸಹಿತಂ ಪೇಳುತ್ತಿರ್ದರೆರಡು ನುತಿಮಂತ್ರಂಗಳಿಗೊಂದೊಂದು ಸಂಕಲೆ ಪರಿದ... ಬಾಗಿಲ ತೆಗೆದು ಹಸ್ತದ ನಿಗಳವೆರಸಿ ಸಭೆಗೆ ಬಂದು ನಿಮ್ಮವರಿಂದಿದಂ ಪರಿಹರಿಸುವುದೆನೆ ಆರಿಂದಲುಂ ಸಾಗದಿರೆ ಕಡೆಯ ಎರಡು ಸ್ತೋತ್ರಮಂತ್ರಮಂ ಪೇ[ಳಲಾ]ಕ್ಷಣವೆ ಕಳೆದೊಡೆ ಮಹಾತ್ಮರೆಂದರಸಂ ನಮಿಸಿ ಧರ್ಮೋಪದೇಶಂಗೆ.... ಸಮ್ಯಕ್ತ್ವಮಂ ಕೈಕೊಂಡೊಡೆ ಇವರೆತಿಗಳು ಗೃಹಸ್ಥರೊಳಿಲ್ಲವೆಂದು ಪೇಳ್ದಡೆ. ಹೇಮಶ್ರೇಷ್ಠಿಯುಂ ಪೆಡಗೈಯಗಟ್ಟಿ ಅಂಧಕೂಪದೊಳಿಡಲಾತಂ ಸ್ತೋತ್ರಮಂತ್ರಮಂ ಪಠಿಸೆ ಚಕ್ರೇಶ್ವರಿ ಬಿಡಿಸಿ ಭೋಜನಂ ಕಜ್ಜದೊಳು ಹೇಮಶ್ರೇಷ್ಠಿ ಬಿಡಿಸಿದನು. ಆತನ ಮಗಳುಮಂ ಮಂತ್ರಿಗಳ್ ಕುರುಂಬನೆಂಬವಂಗೆ ಮದುವೆಯಂ ಮಾಡಿದೊಡವಂಗೆ ಕಾಳಿಕಾ ದೇವೀವರದಿಂ ಕಾಳಿದಾಸನೆಂಬಭಿಧಾನಮಾಗೆ ಕವಿಶ್ರೇಷ್ಠನೆಂದು ಪೊಗಳಿಸಿಕೊಂಬನು ಇಂತಿಪ್ಪುದುಮೊಂದು ದಿವಸಂ ವಿದ್ವಾಂಸರಂ ಬರಿಸಿ ಸಂಸ್ಕೃತಶಬ್ದ ನಿಘಂಟುಗಳು... ಮುನ್ನಿರ್ದವಂ ನೋಡಿ ಪೊಸತಾಗಿ ಮಾಡುವುದೆಂದು ಬುದ್ಧಸಮಯವನಾಶ್ರಯಿಸಿರ್ದು ದ್ವೀಪಾಂತರಕ್ಕೆ ಪೋಗದೆ ವಿಪರೀತ ಮಿಥ್ಯಾಪರಿಣಾಮನಾಗಿಯು ಮಹಾ ವಿದ್ವಾಂಸನಾಗಿರ್ದಮರಂಗಂ ಕವಿಶಿಖಾಮಣಿ ಜೈನಸಮಯ... ವ ಧನಂಜಯಮಹಾ ಕವಿಯಪ್ಪ ಅಮರನ ತಂಗಿಯ ಪತಿಗಂ ನಿಯಮಿಸಲೀರ್ವರುಂ ತಂತಮ್ಮ ಮತಿಗೆ ತಕ್ಕಂತು ಪ್ರತ್ಯೇಕಮೆರಡು ನಿಘಂಟು ಮಾಡಿರ್ದೊಡೊಮ್ಮೆ ಧನಂಜಯನ ಗೃಹದೊಳಿರ್ದ ನಿಘಂಟಂ ಕಂಡಿದರಿನ್ನಾಂ ರಚಿಸಿದ ಕೃತಿ ಪೂಜ್ಯಮಾಗದೆಂದದಂ ಕೊಂಡು ಪೊಳೆಯೊಳಿಕ್ಕಿ ಪೋಗೆ ಕೆಲವು ದಿವಸಕ್ಕರಸಂ ಪರೀಕ್ಷಿಸಲ್ ಬರಿಸಲಮರಸಿಂಹಂ ತಾಂ ಮಾಡಿದ ಪುಸ್ತಕಮಂ ಕೊಂಡು ಸಭೆಗೆ ಬಂದಂ. ಧನಂಜಯಂ ತಾಂ ಮಾಡಿದ ಕೃತಿ ಪೋದುದರಿದು ಸಭೆಗೆಯ್ದಿ ಅರಸಂ ನಾಮಲಿಂಗಾನುಶಾಸನಮಂ

ಕೇಳ್ವನಿತರೊಳೆ ಇನ್ನೂರು ಗ್ರಂಥದಿಂ ಶಬ್ದಸಂಕೀರ್ಣ ಪ್ರರೂಪಣಮನ್ನೈವತ್ತು ಶ್ಲೋಕದಿಂ ನಾನಾರ್ಥಮಂ ಕಲ್ಪಿಸೆ ಅಮರಸಿಂಹಂ ಪೇಳ್ವುದಂ ವಿದ್ವತ್ಸಭಾಜನರೆಲ್ಲಂ ಮೆಚ್ಚಿ ಸಭಾಪತಿಯಂ ಮೆಚ್ಚಿಸಿ ತದನಂತರಂ ಧನಂಜಯಕೃತಮಂ ಕೇಳ್ದು ಬುದ್ಧಿಚತುರತೆಗಾಶ್ಚರ್ಯಂಬಡೆದು ವಿದ್ಯಾ ಸಾಮರ್ಥ್ಯಮಂ ಪೊಗಳಿ ಮನ್ನಣೆಯಂ ಮಾಳ್ಪುದುಂ ಧನಂಜಯಂ ದ್ವಿಸಂಧಾನದಿಂ ರಾಘುವಪಾಂಡವೀಯಮಂ ರಚಿಸೆ ಸಮಸ್ತ ವಿದ್ವಜ್ಜನಂಗಳುಂ ಮೆಚ್ಚಿ ಕವಿತ್ವಮಂ ಪೂಜ್ಯಂ ಮಾಡಿದರ್.

ಶ್ಲೋಕ || ಪ್ರಮಾಣಮಕಲಂಕಸ್ಯ ಪೂಜ್ಯಪಾದಸ್ಯ ಲಕ್ಷಣಮ್
ದ್ವಿಸಂಧಾನಕವೇಃ ಕಾವ್ಯಂ ರತ್ನತ್ರಯಮಪಶ್ಚಿಮಮ್ ||

ಅಪಶಬ್ದ ಶತಃ ಮಾಘೇ ಭಾರವೇರೇಕವಿಂಶತಿಃ
ಅನಂತಾಃ ಕಾಳಿದಾಸಸ್ಯ ಕವಿರೇಕೋ ಧನಂಜಯಃ ||

ಜಾತೇ ಜಗತಿ ವಾಲ್ಮೀಕೌ ಶಬ್ದಃ ಕವಿರಿತಿ ಸ್ಥಿತಿಃ
ಕವಿಶ್ಚೇತಿ ತತೋ ವ್ಯಾಸೇ ಕವಯಶ್ಚೇತಿ ದಂಡಿನಿ ||

ಕವಯಃ ಕವಯಶ್ಚೇತಿ ಬಹುತ್ವಂ ದೂರಮಾಗತಮ್
ವಿನಿವೃತ್ತಂ ಚಿರಾದೇವಿ ಕವೌ ಜಾತೇ ಧನಂಜಯೇ ||

ಇತ್ಯಾದಿ ಪದ್ಯಂಗಳಿಂ ಪ್ರಶಂಸೆಗೆಯ್ದರ್. ಮತ್ತೊಂದು ದಿನಂ ಮೇಘಸಂದೇಶ ಕಾವ್ಯಮಂ ರಚಿಸಿ ಆನೆಯನೇರಿಸಿ ಗ್ರಾಮಪ್ರದಕ್ಷಿಣಂ ಬರಿಸುವಲ್ಲಿ ಜಿನಸೇನಭಟ್ಟಾರಕರ ಮಠದ ಬಾಗಿಲ್ಗೆ ಬಂದಾಗಳವರ ಶಿಷ್ಯರಿರ್ವರ್ ಮಠದ ಬಾಗಿಲೊಳಿದ್ದು ವಿದ್ವಾಂಸರೆಲ್ಲಾ ಮೆಚ್ಚಿ ಮೆರೆಯಿಸಬೇಕಲ್ಲದೆ ಪಾರ್ಥಿವರ್ ಮೆಚ್ಚಿ ಮಾಡಿಸಿದಲ್ಲಿ ಕಾವ್ಯಂ ಪೂಜ್ಯ ಮಾಗದಾ ಕಾವ್ಯಮೆಂತಿಪ್ಪುದೆಂದೋದಿಸಿ ತಾವೇಕಸಂಧಿ ದ್ವಿಸಂಧಿಗಳಪ್ಪುದರಿಂ ಗ್ರಹಿಸಿ ಈ ಕಾವ್ಯವೆಮ್ಮಲ್ಲಿಪ್ಪುದು. ಅದರೊಳೆ ಕೆಲ ಪ್ರಾಸಂಗಳಂ ಕಳ್ದು ರಚಿಸಿರ್ದ ಪರಿಂದೀ ಕಾವ್ಯಮಂ ದೂರದಿಂ ತರಿಸುವನ್ನೆಗಂ ತಿರುಗಿಸುವುದೆಂದು ತಿರುಗಿಸಿ ರಾಜನಂ ಒಪ್ಪಿಸಿ ತಮ್ಮ ಗುರುವಿಂಗರುಪಿ ಆ ಪದಪ್ರಾಸಂಗಳೆಲ್ಲಮಿಪ್ಪುದಾಗಿ ಪಾರ್ಶ್ವಾಭ್ಯುದಯಮೆಂದು ಕಾವ್ಯಮಂ ರಚಿಸಿ ಕೆಲದಿವಸದಿಂ ಭೋಜಂಗೊಪ್ಪಿಸಿ ಮನ್ನಣೆಯಂ ಪಡೆದರ್.

ಮತ್ತೊಂದು ದಿನಮೊರ್ವ ಮಂತ್ರವಾದಿ ವಿದ್ಯಾದೇವಿಯರನಾರಾಧಿಸಿ ಆಕರ್ಷಣ ವಿದ್ವೇಷಣ ಸ್ತಂಭ ಮೋಹ ವಶ್ಯಾದಿಗಳಂ ಬಲ್ಲವಂ ಬಂದೆರಗಲವನಂ ಬಹುಮೆಚ್ಚಿಯ ವನಂ ಪೊಗಳುತ್ತುಮಿರ್ದು ಜೈನಮತದ ಪ್ರಸಂಗಂ ಬರೆ ಈ ಮಂತ್ರವಾದಿ ಸಾಮರ್ಥ್ಯಮಾವ ಮತದೊಳಮಿಲ್ಲೆಂದರಸು ನುಡಿಯೆ ಶ್ರಾವಕರ್ ನಮ್ಮ ಗುರುಗಳೊಳುಂಟೆನಲ್ ಮಾನತುಂಗಾಚಾರ್ಯರಂ ಬರಿಸಲವರಿಗೆ ಆಪಾದಮಸ್ತಕಂಬರಮಿಪ್ಪತ್ತುನಾಲ್ಕು ಶೃಂಖಲೆಯಂ ಪೂಡಿಸಿ ಏಳನೆ ನೆಲೆಯೊಳಿಟ್ಟು ಬಂಧನಮಂ ಮಾಡಿಸೆ ಗಣಧರವಲಯ ಮಂತ್ರಂಗಳನೆರಡೆರಡಂ

ಭಕ್ತಾಮರಸ್ತುತಿಪೂರ್ವಕಂ ಪೇಳಲೊಂದೊಂದು ಸಂಕಲೆಯುಂ ಪರಿಯುತ್ತೆ ನಾಲ್ಕು ಸ್ತೋತ್ರಕೊಂದು ನೆಲೆಗಿಳಿಯುತ್ತುಂ ಬಂದು ಹಸ್ತದೊಂದು ಸಂಕಲೆಸಹಿತಂ ಸಭೆಯೊಳ್ ನಿಂದು ಎಲ್ಲಾ ಪೋದುವಿದೊಂದುಮಂ ನಿಮ್ಮ ವಿದ್ವಜ್ಜನರಿಂ ಬಿಡಿಸುವುದೆಂದು ಪೇಳಲೆಲ್ಲರುಮದಂ ತೊಲಗಿಸಲರಿಯದೆ ಮಂತ್ರವಾದಿ ಬಂದೆರಗೆ ಕಡೆಯವೆರಡು ಮಂತ್ರಮಂ ಸ್ತುತಿಪೂರ್ವಕಂ ಪೇಳ್ದೊಡಾಕ್ಷಣವೆ ಸಂಕಲೆ ಕಳೆದು ಬೀಳ್ವುದುಂ ಜಿನಸಮಯವೆ ಲೋಕೋತ್ತರಮೆಂದಾ ಯತಿಗಳಲ್ಲಿ ಧರ್ಮ ಕರ್ಮ ಸ್ವರೂಪಮಂ ಕೇಳ್ದು ಸಮ್ಯಗ್ದರ್ಶನಮಂ ತಾಳ್ದರ್.

ಭಕ್ತಾಮರಸ್ತೋತ್ರ ಸಾಮರ್ಥ್ಯದ ಕಥೆ ಇಪ್ಪತ್ತುನಾಲ್ಕಿಪ್ಪವವಂ ನೋಡಿಕೊಂಬುದು. ಮತ್ತಮೊಮ್ಮೆ ದಂಡು ಪೋಪಾಗಳುಜ್ಜೈನಿ ಸಮೀಪದ ಹೊಲದ ಬಳಿ ಕೃಷೀವಲನ ಜೀವಾರ್ಯಧೈರ್ಯಮಂ ಕಂಡಾ ಬಳಿಯೊಳ್ ನೋಳ್ಪುದುಂ ವಿಕ್ರಮಾರ್ಕನ ರತ್ನಮಯ ಸಿಂಸಾಸನಂ ಪದಿನಾರು ಸೋಪಾನಂಗಳಿಕ್ಕೆಲದೊಳ್ ಮೂವತ್ತೆರಡು ಸ್ತ್ರೀ ಪ್ರತಿಮೆ ಸಹಿತಂ ನಿಕ್ಷೇಪವಾಗಿರಲಾ ಸಿಂಹಾಸನಮಂ ತಂದದನೇರಲುದ್ಯೋಗಿಸಲಿದಂ ನೀನೇರಲ್ ಯೋಗ್ಯನಲ್ಲೆಂದು ದೈವಂಗಳ್ ಬಾರಿಸೆ ಮಾಣ್ದುನದರಿಂದಾ ಸ್ತ್ರೀಪತಿಮೆಗಳ್ ಕಥೆಗಳಂ ಪೇಳ್ದವೆಂದು ನಿರ್ಮಿಸಿದರ್. ಮತ್ತಂ ಭೋಜರಾಜನನವರತಂ ವಿದ್ವಾಂಸರೊಳೆ ಪೊತ್ತುಗಳೆಯುತ್ತುಂ ತಾನುಂ ಕವೀಶ್ವರನಾಗಿ ಸಂಸ್ಕೃತಭಾಷೆಯೆ ಪ್ರಸಂಗಮಾಗೆ ಕಾಳಿದಾಸನಂ ಪೂಜಿಸಿ ಮಾಘ ರಘುವಂಶ ಮೊದಲಾದನೇಕ ಕಾವ್ಯಮಂ ರಚಿಸಿ ಛಂದಸ್ಸು ಅಮರಕಾದಿ ಗ್ರಂಥರಚನೆಯಂ ಮಾಡಿಸಿದನಾ ಪ್ರಪಂಚೆಲ್ಲಮನಿಲ್ಲಿ ಪೇಳಲತಿವಿಶಾಲಮಪ್ಪುದದಂ ಬರೆಯಲಿಲ್ಲಾ ಪ್ರತ್ಯಂತರದಿಂ ನೋಡಿಕೊಂಬುದು.

ರಸನಗಷ್ಟಶಕೇ ಭೋಜರಾಜೋ ವಿರಾಜತೇ ಎಂಬುದರಿಂ ವೇದಾಂತಿಗಳ್ ಕೆಲರ್ ಶೂದ್ರಕನ ಮೇಲೆ ೨೦೨ ವರುಷ ವಿಕ್ರಮರಾಯನಲ್ಲಿ ೧೦೭೮ ರಲ್ಲಿ ಭೋಜರಾಜನಲ್ಲಿಂ ೫೩೫ರಲ್ಲಿ ಶಾಲೀವಾಹನಕಾಲಮೆಂದು ಪೇಳ್ವುದು ಪುಸಿ.

ವೃತ್ತ|| **ಯುಧಿಷ್ಠಿರೋ ವಿಕ್ರಮ ಶಾಲಿವಾಹನ**
ಸ್ತತೋ ನೃಪೋಸ್ತೋ ವಿಜಯಾಭಿನಂದನಃ |
ಕ್ರಮೇಣ ನಾಗಾರ್ಜುನಭೂಪತಿರ್ನೃಪಾಃ
ಕಲೌ ಯುಗೇ ಷಡ್ವಿಧಕಾಲವರ್ತತೇ ||

ಕ್ರಮೇಣ ವೇದಾಬ್ಧಿಕ ವಹ್ನಯಸ್ಸಮ ಶರಾಗ್ನಿಚಂದ್ರಃ ಖಖಾಷ್ಟಭೂಮಯಃ | ತತೋಯತಂ ಲಕ್ಷಚತುಷ್ಟಯಂ ಚ ಶಶಿದ್ವಿನಾಗಶ್ಚ ಭೂಪವತ್ಸರಃ || ಯು ೩೦೪೪ | ವಿ ೧೩೬ | [ಶಾ ೧೮,೦೦೦] || ೪,೦೦,೦೦೦ | [ವು ೨೧] ಅವ್ಂ ೪,೩೨,೦೦೦ ||

ಎಂಬುದರಿಂದಲ್ಲಿ ಪೂರ್ವಾಪರ ವಿರೋಧಮಪ್ಪುದು. ಅದರಿಂ ಮೊದಲ ವಾಕ್ಯ ಮೆಂದರಿವುದು.

ಇಂತೀ ಕಥೆಯಂ ಕೇಳ್ವರ
ಭ್ರಾಂತಿಯು ನೆರೆಕೆಟ್ಟು ಬಳಿಕಮಾಯುಂ ಶ್ರೀಯುಂ
ಸಂತಾನವೃದ್ಧಿಯಪ್ಪುದ
ನಂತಸುಖಂ ಇಹಪರತ್ರದೊಳ್ ಸಂಭವಿಕುಂ

ಇದು ಸತ್ಯಪ್ರವಚನ ಕಾಲಪ್ರವರ್ತನ ಪಾರಾವಾರೋದ್ಧತ ದೇವಚಂದ್ರ ವಿರಚಿತ ರಾಜಾವಲಿ ಕಥಾಸಾರದೊಳ್ ಜಿನದತ್ತರಾಯ ಪ್ರಮುಖ ಭೋಜರಾಜಾಂತ ಕಥಾ ನಿರೂಪಣಂ

ಅಷ್ಟಮಾಧಿಕಾರಂ

ನವಮಾಧಿಕಾರಂ

ಶ್ರೀ ಸುಜನಸ್ತುತ ಸಕಲ ಕ
ಳಾಸದನರ್ ಸುಗುಣಭೂಷಣರ್ ಸಂವಿಚಾರರ್
ಲೇಸೆಂದು ಬಗೆದು ಕೇಳ್ವುದು
ವೈಷಮ್ಯಮನುಳಿದು ಚಿತ್ತಸಂಶುದ್ಧಿಯೊಳುಂ

ಇಂತು ವರ್ತಿಸುತ್ತಿರಲತ್ತ ಧೋರರಾಯಂ ಬೀಡಂ ನಿರ್ಮಿಸಿ ತನಗೆ ವಶಮಾದ ನಾಡುಗಳನಾಳುತ್ತಂ ದೋರಸಮುದ್ರಮೆಂದು ತಟಾಕಮಂ ಕಟ್ಟಿಸಿ ಧರ್ಮಚಂದ್ರನೆಂಬ ದ್ವಿಜಂ ಮಂತ್ರಿಯಾಗಲಾತನ ಮಗನುಪಾಧ್ಯಾಯನಾಗಿ ಮುನ್ನೂರ್ವರಂತೇವಾಸಿಗಳ್ಗೆ ಛಂದೋಲಂಕಾರ ವ್ಯಾಕರಣ ಕಾವ್ಯಾದಿಗಳಂ ಪೇಳುತ್ತೆ ಮಕ್ಕಳ್ಗಳಮತಿ ಪ್ರಕಾಶಕ್ಕೆ ಜ್ಯೋತಿಷ್ಮತಿತೈಲಮಂ ಮಾಡಿ ಕಂಡಿಕೆಯೊಳಿಟ್ಟು ಮಂದಮತಿಯಾಗಿರ್ದರ್ಗರೆ ಬಿಂದುಮಾತ್ರಮಂ ಕುಡುತ್ತುಮಿಪ್ಪುದುಂ ಕಂತಿಯೆಂಬ ಕೆಳದಿಯರಿಯದೆಯಾ ತೈಲಮೆಲ್ಲಮಂ ಸೇವಿಸಲುರಿಹತ್ತಿ ಬಾವಿಯೊಳ್ ಬಿಳ್ದೊಡಂ ಕಂಠಪ್ರಮಾಣ ನೀರೊಳ್ ನಿಂದುಂ ಜೀವಮುಳಿಯೆ ವಿದ್ಯಾವಿಶಾರದೆಯಾಗಿ ಕವಿತ್ವಮಂ ಪೇಳುತ್ತುಂ ಬಾವಿಯೊಳಿಪ್ಪುದುಂ ದೋರರಾಯನಾಸ್ಥಾನದ ಕನ್ನಡ ಸಂಸ್ಕೃತ ಮಹಾಕವಿಗಧಿಪಂ ಪಂಪಕವಿಯಂ ಕಳುಹಿಸಲಾತಂ ಬಂದು ವಿದ್ಯದಿಂ ಸಾವಿರ ಪ್ರಶ್ನೆಯಂ ಕೇಳಲುತ್ತರಮಂ ಕುಡಲಾಕೆಯಂ ರಾಜಸಭೆಗೆಯ್ದಿಸೆ ವಿದ್ವತ್ಸಮೂಹದೊಳಧಿಕ ಕವೀಶ್ವರಿಯಾಗಿರ್ದಳ್. ಹಂಪಕವೀಶ್ವರನಾದಿಪುರಾಣಮಂ ವಸ್ತುಕದಿಂ ಮಾಡಿ ಕನ್ನಡಕವಿಗಾದಿಯಾಗಿರ್ದನತ್ತ ಚೋಳದೇಶದೊಳಿರ್ದರಸುಗಳೊಳುಗೊಂಡೆ ಚೋಳರಾಜಂ ಕೊಂಕಣ ಕೊಂಗು ಮಲೆಯಾಳ ಲೀಲಾದ್ರಿ ಕರ್ಣಾಟ ಮೊದಲಾದ ದೇಶಮಂ ಸಾಧಿಸಿ ಕುಡುಗನಾಡ ಕುಡುಗುಲೂರಿಂಗೆ ತೆರಕಣಾಂಬಿಯೆಂಬನ್ವರ್ಥನಾಮಮನಿಟ್ಟು ಲಂಬಕರ್ಣರಾಯನಾಳುತ್ತಿರ್ದನಾ ರಾಜ್ಯಮೆಲ್ಲಮಂ ವಶಂ ಮಾಡಿ ಮಿಶ್ರಪರಿಣಾಮನಾಗಿ ಪ್ರಜೆಗಳಂ ಚೆನ್ನಾಗಿ ಸಲಹುತ್ತಿರಲಂತಪ್ಪ ಚೋಳರ್ ಕ್ರಮದಿಂ ವೀರಪ್ರತಾಪರುಂ ಶಾಂತದೇವ ಭೂದೇವ ಭೀಮ ರುದ್ರ ಧರ್ಮ ಕಲಿಕಾಳಚೋಳರೆಂದು ನವಚೋಳರಾದವರಲ್ಲಿ ಮೂವರ್ ಜಿನಭಕ್ತರ್, ಇರ್ವರ್ ಶಿವಭಕ್ತರ್, ಇರ್ವರ್ ವಿಷ್ಣುಭಕ್ತರ್, ಮತ್ತೀರ್ವರ್ ಎಲ್ಲಾ ಮತಂಗಳಂ ಸಮಮಾಗಿ ಕಂಡು ಒಂದರಲ್ಲಿಯು ಶ್ರದ್ಧೆಯಿಲ್ಲದಿರ್ದರ್. ಧರ್ಮನೆಂಬ ಚೋಳರಾಜಂಗೆ ಜನ್ಮಾಂತರದ ಬ್ರಹ್ಮತ್ಯಂ ಬ್ರಹ್ಮಪಿಶಾಚಿಯಾಗಿ ಬಂದು ಆಹಾರಮಂ ಕೊಳ್ಳಲೀಸದೆ ನಿದ್ರೆಯಂ ಮಾಡದಂತು ಪಿಡಿದು ಬಾಧಿಸುತ್ತಿರಲ್ ತಾನಾಳುವ ದೇಶಂಗಳ ಗ್ರಾಮ ಗ್ರಾಮಂಗಳಲ್ಲಿ ತಪ್ಪದೆ ಜಿನಾಲಯ ಶಿವಾಲಯ ಕೆಲವು ವಿಷ್ಣುನಿಕೇತನಂಗಳಂ ಮಾಡಿಸಿ ತಾನುಂ ತನ್ನ ಮಂತ್ರಿಯಪ್ಪ ಕಾಳಿಂಗನೆಂಬಂ ಮೊದಲುಪ್ಪಾರರ ಹುಡುಗನಾಗಿಯು ಪರರ

ಮನೆಯ ಕಸಮಂ ಪೊತ್ತು ಬಾಳುತ್ತಿರ್ದನ ಬುದ್ಧಿಗೆ ಮೆಚ್ಚಿ ಮಂತ್ರಿಪದವಿಯಂ ಕೊಟ್ಟಿರ್ದನಾತನಂ ವಿಚಾರದೊಳಿರಿಸಿ ಬ್ರಹ್ಮಹತ್ಯಮಂ ಪರಿಹರಿಸಲೋಸ್ಕರ ಗ್ರಾಮ ಗ್ರಾಮಂಗಳಲ್ಲಿಯ ದೇವತಾಪ್ರತಿಷ್ಠೆಗಳಂ ಮಾಡಿ ಕಲ್ಲುಗಾಣಮನಿಕ್ಕಿಸಿ ಎಲ್ಲ ದೇವರ್ಗಂ ಎಣ್ಣೆಮಜ್ಜನಂಗೆಯ್ಸಿಯಾ ಎಣ್ಣೆಯೊಳೆ ಅನ್ನಮನುಣ್ಣುತ್ತುಂ ಪನ್ನೆರಡುವರುಷಂಬರಂ ಚರಿಸಿ ಉತ್ತರದ ದೇವಪುರಮೆಂಬೂರ ಬಸದಿಗೆರಡು ಬಾಗಿಲ ರಚಿಸಿರ್ದೊಡಾ ಬಸದಿಯ ಮಹಾದ್ವಾರದಿಂದೊಳಗಂ ಪೊಕ್ಕೊಡಾ ಪಿಶಾಚಿ ತನ್ನ ಕ್ರಮದೊಳಾ ಬಾಗಿಲೊಳೆ ನಿಲಲೆಂದಿನಂತಾ ದೇವರ ಮುಖವಸ್ತ್ರವಂ ತೆಗೆದವಭೃತಾನಂತರಂ ತೈಲಾನ್ನಮನುಂಡು ಕ್ಷುಲ್ಲುಕದ್ವಾರದಿಂ ಪೊರಮಟ್ಟು ಚೋಳರಾಯಂ ಪೋದೊಡಾ ಪಿಶಾಚಿ ಬಾಗಿಲೊಳೆ ನಿಂದು ಬರವಂ ನೋಡುತ್ತುಮಲ್ಲಿಯೆ ನಿಲ್ಚುದುಮಾ ಪ್ರತಿಮೆಯಂ ಮಾಡಿಸಿಯಾ ಪ್ರದೇಶದೊಳ್ ಸ್ಥಾಪಿಸಿ ಪೂಜಿಸುತ್ತಿರ್ದರಿತ್ತ ಕಾಳಿಂಗರಾಯಂ ರಾಜ್ಯದೊಳ್ ನಿಂದತಿಪ್ರಬಲನಾಗಿ ಚೋಳರಾಯನಂ ಪಟ್ಟಣಮಂ ಪುಗದಂತು ಕಾಪುಮಾಡಿ ಸ್ವಯಮೇವ ಮೃಗೇಂದ್ರತಾ ಎಂಬಾಂತಾತನು ತನ್ನಿಂದಲೆ ಭೂಪತಿಯಾಗಿಪ್ಪುದುಮಾ ಪುರದೊಳೊರ್ವ ಶೆಟ್ಟಿ ಕಾಳಿಂಗರಾಯಂಗೆ ಮಿತ್ರನಾಗಿರಲ್ ಮಂತ್ರಿ ಪದವಿಯನಿತ್ತಂ. ಮತ್ತೊರ್ವ ವ್ಯಾಪಾರಿಗೆ ಶೆಟ್ಟಿಪಟ್ಟವೆಂದು ಮುಖ್ಯಂ ಮಾಡಿ ಬಣಜವೆಂದು ಸಕಲ ಪದಾರ್ಥಂಗಳೊಳೊಂದುಳಿಯದೆಲ್ಲಮಂ ಕ್ರಯ ವಿಕ್ರಯಂ ಮಾಡಿಸುವುದಕ್ಕಧ್ಯಕ್ಷನಾಗಿ ರಲಾತನ ಕುಮಾರಿ ಪಂಚಾಳದ ಸಾಂಬಯ್ಯನೊಳ್ ಪುದುವಾಳುತ್ತಿರಲದಂ ಬಣಜಿಗರರಿದಾಕೆಯಂ ಕಳೆಯಲವಳ್ ಪಂಚಾಳದವನ ಮನೆಯೊಳೆ ನಿಲೆ ಕೋಪಿಸಿ ಕಾಳಿಂಗರಾಯಂಗರಿಕೆಯಂ ಮಾಡಲಾತನಂ ಪಿಡಿದು ಶಿಕ್ಷೆಯಂ ಮಾಡಿಸಲೆಂದಿಪ್ಪನ್ನೆಗಂ ಪಂಚಾಳರೆಲ್ಲಂ ಕೂಡಿ ನವರತ್ನಮಯದಿನನರ್ಘ್ಯಮಪ್ಪ ಕಿರೀಟಮಂ ಮಾಡಿ ಕಾಳಿಂಗರಾಯಂಗೊಪ್ಪಿಸೆ ರಾಯಂ ನೋಡಿ ಅತ್ಯಾಶ್ಚರ್ಯಮಾಗೆ ನಿನ್ನ ಮೆಚ್ಚಂ ಬೇಡೆಂಬುದುಂ ಸಾಂಬಯ್ಯಂ ಮರಳಿ ಬಂದರಿಕೆ ಮಾಡಿಕೊಳ್ಳುತ್ತೇನೆಂದೆಲ್ಲರೊಳಾಳೋಚಿಸಿ ಬಪ್ಪುದರೊಳೆ ಮಂತ್ರಿ ಆ ರತ್ನವಗೌಲಿಯಂ ನೋಡಿ ರಾಯಂಗೆಂದನೀ ಪಂಚಾಳಂ ಬಹು ಮರ್ಮೋದ್ಘಾಟನೆಯಂ ಮಾಡಿದನೀ ಜಾತಿ ಬಹು ಕೆಟ್ಟಜಾತಿ ನೋಡಿರೆ ಪಾಪ ಮುಂಡೆಯ ಮಗನಂ ನೀವು ಪೂರ್ವದೊಳ್ ಕಸಮಂ ಪೊರುತ್ತಿರ್ದ ಮರ್ಮಮನೆತ್ತಿ ಮಕ್ಕರಿಯ ಭಾವಮಂ ತೋರಿಸಿದ್ದಾನೆಯೆಂದು ಕಿರೀಟಮಂ ಹಿಂಭಾವಮಂ ತೋರಿಸಿದೊಡಾತಂ ಕೋಪಿಸಿಯಕ್ಕಸಾಲೆಯ ಕಣ್ಣಂ ಕೀಳಿಸಿ ಪಂಚಾಳದ ಜಾತಿಯವರೆಲ್ಲರ ಸರ್ವಸ್ವಮಂ ಕವರ್ತೆಗೊಂಬುದುಂ ಬಣಜಿಗರೆಲ್ಲಂ ಪಂಚಾಳದವರ ಮೇಲೆ ವೈರಮನೆತ್ತಿಕೊಂಡು ಹದಿನೆಂಟು ಬಣ್ಣಕ್ಕೆ ಹೊರಗೆಂದು ಮುನ್ನ ಪೊಲೆಯರತಿ ಬಲರಾಗಿರಲರಸಂ ಬ್ರಾಹ್ಮಣರಿಗೆ ಸುವರ್ಣಮಯ ಗೋದಾನಮಂ ಮಾಡಲದಂ ಕೊಂಡುಪೋಪ ಸಮಯದೊಳ್ ಪೊಲೆಯರೆಲ್ಲಂ ಕೂಡಿ ಬಂದಾ ಗೋವು ತಮಗೆ ಸಲ್ಬುದೆಂದಡ್ಡಂ ಬಂದಾ ಗೋವಂ ಪೊಲಗೇರಿಗೊಯ್ದಾ ಪೊಲೆಯರೆಲ್ಲ ಪಂಚುಗೊಂಡುದರಿಂದದರ ಕ್ರಯಂ ಪನ್ನೆರಡು ಸಾವಿರ ಪೊನ್ನಾದುದರಿಂ ಹೊಲೆಯರ್

ಪನ್ನೆರಡು ಸಾವಿರದವರೆಂದವರಂ ಬರಿಸಿ ನೀವು ಬಣ್ಣಕ್ಕೆ ಸಲ್ವರಾದುದರಿಂದ ನಿಮಗೆ ಬಿರಿದು ಬಂಕಂಗಳ್ ಸಲ್ಗುಮೆಂದವರಿಂ ಪಂಚಾಳರಂ ಕೊಲಿಸಲೆಂದು ರಾಜಾಜ್ಞೆಗೆಯ್ಸಲ್ ಪಂಚಾಳರೆಲ್ಲಂ ಕಾಳಿಂಗರಾಯನ ದೇಶಮಂ ಬಿಟ್ಟೋಡಿ ಪೋಗಿ ಓರುಗಲ್ಲ ಪ್ರತಾಪ ರುದ್ರನ ದೇಶದೊಳೊಂದು ಪುರಮಂ ಮಾಡಿಕೊಂಡಿರ್ದೊಮ್ಮೆ ಕೆಲಂಬರ್ ಛೈತ್ರಮನೇರಿಯಂತರದ್ವೀಪದೊಳ್ ಕೃತ್ರಿಮಬಾಣಪ್ರಯೋಗಮಂ ಕಲ್ತುಬಂದು ಚೋಳರಾಯಂ ರಾಜ್ಯಭ್ರಷ್ಟನಾಗಿಪ್ಪುದಂ ಕೇಳಬಂದು ಕಂಡು ನಿನ್ನಂ ರಾಜ್ಯದೊಳ್ ನಿಲಿಸುವೆನೆಂದಾರುಮರಿಯದಂತು ಮಾದಿಗರಂ ಬೆಸ್ತರಂ ಕೂಡಿಕೊಂಡು ಬೊಮ್ಮಲಾಟಮಂ ನಿರ್ಮಿಸಿ ಭಾರತ ರಾಮಾಯಣಮಂ ಆಟದೊಳೆ ಸಾಧಿಸುತ ಆ ರಾಜ್ಯದೊಳೆಲ್ಲಂ ಚರಿಸುತ್ತುಂ ಬಂದು ಕಾಳಿಂಗರಾಯನಂ ಕಂಡು ಬಹು ವಿದ್ವಾಂಸರೆಂದು ತಮ್ಮಾಟಪಾಟಂಗಳಂ ತೋರಿಸೆ ಮೆಚ್ಚಿಯವರ್ಗುಚಿತಂಗಳಂ ಕೊಡೆ ಪದಿನೆಂಟು ದಿವಸ ರಾಮ ರಾವಣ ಯುದ್ಧಮಂ ತೋರಿಸುತ್ತುಂ ಕಡೆಯ ದಿನದೊಳೆ ಕಡ್ಡುಪ್ಪು ಗಂಧಕ ಕರಿಗಳಿಂ ಮಾಡಿದ ಕ್ಷತ್ರಿಮ ಬಾಣದ ಗುಂಡುಗಳಿಂ ಕಾಳಿಂಗರಾಯನಮಾತನ ಮಂತ್ರಿ ಪ್ರಧಾನಿಗಳ್ ಸಹಿತಂ ಲೋಕಾಂತರಿತರಂಮಾಡಿ ಚೋಳರಾಯನಂ ರಾಜ್ಯದೊಳ್ ನಿಲಿಸಿ ಪಂಚಾಳದವರುಂ ತೊರೆಯರುಂ ಮಾದಿಗರುಂ ಕೂಟವಂ ಮಾಡಿ ಬಣಜಿಗರುಂ ಪೊಲೆಯರುಂ ಕೂಡಿ ಸಾಂಬಯ್ಯನ ಕುಲಸ್ತ್ರೀ ಮಗನ ಮದುವೆಯೊಳ್ ದಾಸಿಮಗನಂ ಪ್ರೇರಿಸಿ ಪೊಲೆ ಮಾದಿಗರ್ ಯುದ್ಧಂಗೆಯ್ದರೀ ಪ್ರಕಾರದೊಳೆ ನವಚೋಳರಾಳುತ್ತಿರ್ದರವರೆಲ್ಲಮಂ ಸೋಮವಂಶಜರ್ ಸ್ವೇಚ್ಛಾಚಾರಿಗಳಾಗಿ ಕೆಲಕೆಲವು ದೇಶಂಗಳನಾಳಿದರ್.

ಇತ್ತಲ್ ಕರ್ಣಾಟದೊಳ್ ಜೈನಬ್ರಾಹ್ಮಣನೊರ್ವಂ ವಿದ್ಯಾನಂದನೆಂಬುವಂ ಯವ್ವನದೊಳೆ ಉಣಲುಮುಡಲುಂ ಪಡೆಯದತಿದರಿದ್ರನೆ ಕಡೆ ಚೋಳರಾಯಂ ಪಂಚಾಳದವನೆಸಗಿದ ಬೊಮ್ಮಲಾಟದೊಳ್ ಶೃಂಗಾರ ವೀರ ಕರುಣಾದ್ಭುತ ಹಾಸ್ಯ ಭಯಾನಕ ಬೀಭತ್ಸ ರೌದ್ರಮೆಂಬ ಎಂಟು ರಸಂಗಳಂ ತ್ರಿಮೂರ್ತಿಗಳ ಕಥೆ ತಜ್ಜಾತಿಗಳೊಳ್ ಸಂಪೂರ್ಣಮಾಗಿ ರಚಿಸಿರ್ದೊಡಂ ಆ ಕಥೆಗಳೊಳ್ ಆಯಾಯ ಜಾತಿಗಳ ವೇಷಂಗಳಂ ತಂದು ಹಾಸ್ಯಕ್ಕೆ ಭಾಜನವಾಗೆ ಆಡಿಸುತ್ತಿರೆ ಒಮ್ಮೆ ಜೈನಸನ್ಯಾಸಿ ವೇಷಮಂ ತಪ್ಪುದುಂ ಹಾಸ್ಯಮಿಲ್ಲದಿರೆ ಅಲ್ಲಿ ಕೂಡಿರ್ದ ಜೈನರ್ ಲೋಚಂ ಮಾಳ್ಪುದುಂ ಇನ್ನು ಮೇಲೆ ಈ ವೇಷಮಂ ತಪ್ಪುದಿಲ್ಲೆಂದು ಆ ವೇಷಮಂ ಬಿಟ್ಟರೆಂತೆಂದೊಡೆ

ಶ್ಲೋಕ || **ಕಷ್ಟಂ ಖಲು ಮೂರ್ಖತ್ವಂ ಕಷ್ಟಂ ಖಲು ಯೌವನೇಽಪಿ ದಾರಿದ್ರ್ಯಮ್**
ಕಷ್ಟಾದಪಿ ಕಷ್ಟತರಂ ಪರಗೃಹವಾಸಃ ಪ್ರವಾಸಶ್ಚ ||
ಧನವಂತಮದಾತಾರಂ ದರಿದ್ರಮತಪಸ್ವಿನಮ್
ಕಂಠೇ ಬಧ್ವಾ ಶಿಲಾಂ ಗುರ್ವೀಂ ಸಿಂಧುಮಧ್ಯೇ ವಿನಿಕ್ಷಿಪೇತ್ ||

ಎಂಬ ನೀತಿಯಂ ನೆನೆದು ಉತ್ತರ ಯಾತ್ರೆಯಂ ಮಾಡಿ ಅಲ್ಲಿ ದೀಕ್ಷೆಯಂ ಕೈಕೊಂಡು ಕುರುಜಾಂಗಣದೇಶಮನೆಯ್ದಿ ದೇಹದೊಳಗಣಶುಚಿಯಂ ಕಳೆಯಲ್

ಪೋಗುತ್ತುಮರಸಿಕೊಂಡಿರ್ದ ನಿಧಿಯಂ ಕಂಡಾ ಖಾರಿಯ ಮೇಲೆ ವಿಪ್ಪಿಸಿ ಪೋದೊಡಲ್ಲಿಗೆ ವಿದ್ಯಾದೇವರಾಯನೆಂಬ ಕ್ಷತ್ರಿಯಪುತ್ರಂ ಬಂದಾ ನಿಧಿಯಂ ತೆಗೆಯಲಲ್ಲಿರ್ದ ಯಕ್ಷಂ ಕಡಾರದ ಕಸವರಮುಂ ವಿದ್ಯಾನಂದಮುನಿಗಲ್ಲದೀವೆನಲ್ಲೆಂದು ಪೇಳಲಾ ಯತೀಶ್ವರಂಗೆ ಶಿಷ್ಯತ್ವಮಂ ಪ್ರಕಟಿಸಿ ಉಪಾಯದಿಂ ಕರೆಯಲಾ ಯಕ್ಷಂ ಕಡಾರಂಗಳನೊಪ್ಪಿಸಲಾ ದೇವರಾಯನಾ ಯತಿಯಿಂ ನಿಧಿಯಂ ಪಡೆದಾ ಗಜಾರಣ್ಯದೊಳೆ ವಿದ್ಯಾನಗರಮಂ ಮಾಡಿಸಿ ಚತುರಂಗಬಲಮಂ ಪಡೆದು ರಾಜ್ಯಮಂ ಸಾಧಿಸಿ ಸದ್ಧರ್ಮದೋಚೆಯೊಳೆ ದಾನ ಪೂಜೆ ಶಿಲೋಪಾಸನಮೆಂಬ ಸಾಗಾರಧರ್ಮದಿಂ ಪನ್ನೊಂದು ವರುಷಂ ರಾಜ್ಯಮಂ ಪಾಲಿಸಿದನಂತರಂ ರಾಜಪರಮೇಶ್ವರನಾ ಪಟ್ಟಣದೊಳೆ ಪದಿಮೂರು ವರುಷ ರಾಜ್ಯಂಗೆಯ್ದನಲ್ಲಿಂದಿತ್ತ ಭೀಮರಾಯನುಂ ವಿರೂಪಾಕ್ಷರಾಯನುಂ ರಾಮದೇವರಾಯನುಂ ರಘುರಾಮದೇವನುಂ ವೀರಮಲ್ಲಿಕಾರ್ಜುನನುಂ ಲಕ್ಷ್ಮಣ ದೇವರಾಯನುಮೆಂಬೀ ಕ್ಷತ್ರಿಯಪಟಲ ಲಕ್ಕೆ ಶಕಾಬ್ದಂಗಳ್ ಒಂಬೈನೂರರುವತ್ತೆಂಟು ಪರ್ಯಂತರ ನಡೆದುದಿವರಲ್ಲಿ ಜಿನಸಮಯಿಗಳ್ ಮೂವರ್. ತತ್ಸಮಯದೊಳುದಾಸೀನರ್ ಮೂವರ್ ದ್ವೇಷಿಗಳೀರ್ವರಿಂತು ಕಳೆಯೆ ವೀರಪ್ರತಾಪರಾಯ ಹಂಪರಾಯ ಪ್ರತಾಪರುದ್ರ ಇಮ್ಮಡಿರಾಮದೇವ ಕಂಪರಾಯ ರಾಮಚಂದ್ರ ಸಾಳುವ ಕಂಪಿಲ್ಲ ಕಂಪಿಲರಾಯರೆಂಬೀ ಕಿರಾತಪಟಲ ಲಕ್ಕೆ ೨೫೩ ವರುಷಮಕ್ಕುಮಾ ವೀರಮಲ್ಲಿಕಾರ್ಜುನನಿಂ ಮೊದಲೆ ಕರ್ಣಾಟದೇಶದೊಳುತ್ಪಾತಂಗಳಾದವಾವೆನೆ ಭೌಮನಂಭಸ ದೈವಿಕಂಗಳೆಂಬ ಮೂರು ಭೇದಂಗಳೊಳ್ ಮನುಷ್ಯರ ಅನ್ಯಾಯ ಚರಿತದಿಂ ಪಾಪಪ್ರವರ್ಧನದಿಂ ದೇವತೆಗಳ್ ಕೋಪಿಸಿ ಭಯಂಕರಮಾಗೆ-ಸ್ಥಾವರ ಜಂಗಮ ಭೇದಂಗಳಾಗೆಯಲ್ಲಿ ಮಹೋಲ್ಕಾಶನಿ ವಾತೇಂದ್ರ ಭಾಪ ಮೊದಲಾಗೆ ನಾಭಸಂಗಳ್ ದಿವ್ಯೋತ್ಪಾತಮೆಂಬ ಗ್ರಹತಾರಕಾದಿ ವಿವಿಧ ವಿಚಾರಂಗಳ್. ಬೃಹತ್ ಮಧ್ಯ ಲಘುಭೇದದಿಂ ಪ್ರತ್ಯೇಕಮಾ ಭೂತಪ ಘೋಷದಿ ವಿವರ ವಿವರ್ಣಮುನ್ನಗ್ನ ದುರ್ಗಂಧಂ ಮೊದಲಾಗೆ ಶಿಲೆಯೊಳ್ ಸಲಿಲಕಂಪ ಮೊದಲಾದ ವಿಕಾರಂ ಕಾಂಬುದು ದೇವತಾಪ್ರತಿಮೆಯೊಳ್ ತನ್ನಿಂದಲೆ ಛೇದ ಭೇದ ಸ್ವೇದಾದ್ಯುನ್ಮಜ್ಜನಿಮಜ್ಜನ ರೋದನ ಆಸ್ಫೋಟನಾಕ್ರೋಶ ಕಂಪನ ಹಸನಂಗಳುಂ ಅರಣ್ಯ ಮೃಗ ಪಕ್ಷಿ ವಿಕಾರೋತ್ಪತ್ತಿ ಗುರು ಮಂದಸಿತಾ ವ್ಯವಸ್ಥಿತಿ ಬಾಲನಕ್ಷತ್ರ ಧೂಮಕೇತು ಮೊದಲಾಗೆ ಹಗಲುಗತ್ತಲೆ ಆಕಾಶ ಧೂಮ ಧೂಳಿಕ್ಷೇಪ ದಿವಾನಕ್ಷತ್ರದರ್ಶನ ರಾತ್ರಿ ನಕ್ಷತ್ರಾನವಿ ಲೋಕನ ಶಲಭ ಕ್ರಿಮಿ ವ್ಯಾಪಕಸಂಚಾರ ಫಲಪುಷ್ಪ ಹಿರಣ್ಯಧೂಳಿ ರಕ್ತ ಅಗ್ನಿ ಮೊದಲಾದ ವೃಷ್ಟಿ ಮತ್ಸ್ಯ ಮಂಡೂಕ ಮೃಗ ಸರ್ಪಾದಿಗಳ ವೃಷ್ಟಿಯುಂ ಅಸ್ಥಿಮಾಂಸ ಲೋಹ ಪಾಷಾಣಾದಿ ವೃಷ್ಟಿ ಅಮೋಘವರ್ಷ ನಿರ್ಮಲಗಗನದ ಸೂರ್ಯ ಚಂದ್ರಚ್ಛಾಯಾ ಹಾನಿ ಶೀತೋಷ್ಣವ್ಯತ್ಯಯ ಲತಾವೃಕ್ಷವಿಪರ್ಯಯಂಗಳ್ ಫಲಪುಷ್ಪಾದಿ ವಿಪರ್ಯಾಯ ರಾತ್ರಿ ಸುರಚಾಪ ಆಕಾಶ ರೋದನಾದಿ ಶಬ್ದಂಗಳ್ ಉಷಃಕಾಲ ನಿರ್ಘಾತ ಗ್ರಹಯುದ್ಧ ಪಂಚ ಷಷ್ಠ ಸಪ್ತ ಗ್ರಹಯೋಗ ಪರಿವೇಷ ಪ್ರತಿಸೂರ್ಯ ಗಂಧರ್ವ ನಗರದರ್ಶನ ಪಿಂಗಳ ಪೋತ ಘೂಕಾದಿಗಳ್ ಗೃಹಗ್ರಾಮಂಗಳೊಳ್ ಧ್ವನಿ ಗೆಯ್ವುದುಂ ಉಡವೋತಿ ಕಾಕ ಶ್ವಾನಾದಿಗಳ್ ಗೃಹಂಗಳಂ ಪುಗುವುದುಂ ಶಶಕಂ ಗ್ರಾಮಪ್ರವೇಶಂ

ಮಾಳ್ಪುದುಂ ಸರ್ಪ ಪಕ್ಷಿ ಸರಟಾದಿಗಳ್ ಗೃಹಂಗಳೊಳ್ ಗೂಡನಿಕ್ಕುವುದುಂ ಸ್ತ್ರೀಯರಕಾಲದೊಳ್ ವಿಕಾರಗರ್ಭದಿ ತ್ರಿವಿಕಾರ ಶಿಶುಗಳಂ ಪಡೆವುದುಂ.

ಇಂತಿವು ಮೊದಲಾದನೇಕ ಉತ್ಪಾತಂಗಳ್ ಪುಟ್ಟಿ ರಾಜ್ಯಕ್ಷೋಭಮಾಗೆ ಈ ದೇಶಕ್ಕೆ ಐದು ವರುಷ ದುರ್ಭಿಕ್ಷಮಪ್ಪುದೆಂದು ಸಂಗೀತಪುರ ಸಿದ್ಧಸಿಂಹಾಸನಾಧೀಶ್ವರ ಶ್ರೀಮದ್ವಿಜಯಕೀರ್ತಿಭಟ್ಟಾಕಲಂಕರ ಶಿಷ್ಯರ್ ಮುನಿಚಂದ್ರದೇವರ್ ಈ ದೇಶದ ಕ್ಷಾಮಮೈದು ವರ್ಷಂ ಕಳೆವನ್ನೆಗಮಿಲ್ಲಿ ಚಾರಿತ್ರಂಗೆಡುವುದರಿಂದುತ್ತರದೇಶಕ್ಕೆ ಜೈನ ಬ್ರಾಹ್ಮಣರ್ ಏಳುನೂರೆಪ್ಪತ್ತೈದು (೭೭೫) ಜನ ಕೆಲರು ಶ್ರಾವಕರ್ ಸಹಿತಮುತ್ತರ ದೇಶಕ್ಕೆ ವಿರೋಧಿಕೃತು ಸಂವತ್ಸರದ ಕಾರ್ತಿಕಮಾಸದೊಳ್ ಬಹುದೂರ ಯಾತ್ರೆ ಪೋಗೆ ಕೆಲರ್ ಕ್ಷತ್ರಿಯರ್ ೬೦ ಒಕ್ಕಲು ಪೋದರ್. ಮತ್ತಂ ಇಲ್ಲಿ ೧೮೫ ಒಕ್ಕಲು ಜೈನಬ್ರಾಹ್ಮಣರ್ ಅರಸುಗಳ್ ಶ್ರಾವಕರ್ ಸಹಿತ ಚೋಳದೇಶದಿಂ ಪಾಂಡ್ಯ ದೇಶಕ್ಕೆ ಪೋದರ್. ಕಡಮೆ ಬ್ರಾಹ್ಮಣರ್ ೨೦೦ ಒಕ್ಕಲು ಎಲ್ಲಿಗೂ ಪೋಗದೆ ಸ್ಥಳದಲ್ಲೇ ಇದ್ದು ದುರ್ಭಿಕ್ಷದೊಳೆ ಚಾರಿತ್ರಗೆಟ್ಟು ನಿಶಾಭೋಜನಾದಿಗಳಂ ಅಭಕ್ಷ್ಯಂಗಳಂ ಕೊಂಡು ಜೀವಿಸಿಕೊಂಡಿರ್ದರ್. ಸಿದ್ಧಾರ್ಥಿ ಸಂ. ಮಾಘಮಾಸದೊಳ್ ಮುನಿಚಂದ್ರದೇವರ್ ೫೦೦ ಜನ ಬ್ರಾಹ್ಮಣರ್, ೧೦೦ ಜನ ಶ್ರಾವಕರ್ ಸಹಿತ ಸ್ಥಳಕ್ಕೆ ಬಂದರ್. ಕಡಮೆ ಹೋಗಿದ್ದ ಜನ ಅಲ್ಲಿದ್ದ ಜಿನಸಮಯ ಚಾತುರ್ವರ್ಣಂಗಳ್ ವಿಪರೀತ ಬ್ರಾಹ್ಮಣರ್ ಮೊದಲಾಗೆ ಅನ್ಯಮಂ ಪ್ರಕಟಿಸಿದರ್. ಸಾಂಖ್ಯ ಚಾರ್ವಾಕ ಯೌಗ ಮೀಮಾಂಸಕರಾದಿ ಒಂದೊಂದು ಮತದೊಳ್ ಪ್ರತ್ಯೇಕಂ ಅರವತ್ತುನಾಲ್ಕು ಭೇದಂಗಳ್ ಪುಟ್ಟಿದರವರ ಪೆಸರಂ ಪ್ರತ್ಯಂತ್ರದೊಳ್ ನೋಡಿಕೊಂಬುದು.

ಕೆಲರ್ ಬ್ರಾಹ್ಮಣರ್ ರಾಯಶಬ್ದಮನಾಮಗೊಂಡು ರಾಜ್ಯಮನಾಳುವರ್. ಆರೆ ರಜಪುತ್ರ ಮರಾಟ ನಾಯಕ ಗೌಡರಾಜ ತೆಲುಗ ಸೆಕುಲಿಗ ಭಂಟ ಭಾರಜ ಮಲೆಯಾಳ ಲಾಳ ಮೊದಲಾದ ಜಾತಿಗಳ್ ಪುಟ್ಟಿ ವರ್ತಿಸಿದವು. ಜೈನದ್ವಿಜರೊಳ್ ಸ್ಥಾನಿಕರಾದರ್ ಕ್ಷತ್ರಿಯರೊಳ್ ಭೋಗಾರರ್ ಮೊದಲಾದರಾಗಿ ವರ್ತಿಸುವರ್. ತುಳುವರೊಳ್ ಕ್ಷತ್ರಿಯರ್ ಭಂಗರ್ ಚೌಡರ್ ಅಜಲರ್ ಸಾವಂತರ್ ಹೆಗ್ಗಡೆಗಳ್ ಒಂದು ಪೆಸರಾಗಲಿಂತು ಒಂದೊಂದು ಕಾರಣದಿಂ ಚಾತುರ್ವರ್ಣಂಗಳ್ ನಾನಾ ಬಗೆ ಪೆಸರಿಂದಂ ನಾನಾ ಜಾತಿಭೇದದಿಂದಮುಮೊಬ್ಬರೊಳೊಬ್ಬರ್ ವೈಷಮ್ಯದಿಂ ವಿರೋಧಮುಮಾಗೆ ಬಾಳುತ್ತಿರ್ದರ್ ಇತ್ತಲ್ ಕುಂಭಕೋಣೆಯೊಳ್ ಜೈನಮತದೊಳ್ ೧೨ ಭೇದವಾಯಿತು. ಕಂಚಿ ಚೋಳದೇಶ ಕೇರಳದೇಶ ಪಾಂಡ್ಯದೇಶಂಗಳೊಳುಪಾಧ್ಯಾಯರ್ ಪಂಡಿತರ್ ನೈಗಾರರೆಂಬ ಭೇದದಿಂ ಜೈನದ್ವಿಜರ್ ೫ ಭೇದವಾದರ್. ಕ್ಷತ್ರಿಯರ್ ಕೆಲರ್ ಈಶ್ವರ ಭಕ್ತರಾದರ್. ಕೆಲಂಬರ್ ವಿಷ್ಣುಭಕ್ತರಾದರ್. ವೈಶ್ಯರ್ ೧೪ ಭೇದವಾದರ್. ಕೊಂಗರೊಳ್ ೧೮ ಭೇದವಾಗಿ ನಡೆವರ್. ಮಲೆಯಾಳರ್ ೧೨ ತೆರನಾದರ್. ಪಾಂಡ್ಯದೇಶಮನಾಳ್ವ ದಕ್ಷಿಣ ಮಧುರೆಯೊಳ್ ವೀರಪಾಂಡ್ಯನ ಮಗಂ ಹರಿವಂಶ ಸಮ್ಯಕ್ತ್ವಸಂಪನ್ನನಾಗಿರ್ದು ಜಿನಧರ್ಮಪಾಲಕನಾಗಿರ್ದನಲ್ಲಿಗೆ ಬಸವಣ್ಣ ಸೃಷ್ಟಿ ಜಂಗಮರೆಯ್ತಂದು ತದ್ವಿಷಯಕ್ಕೆ ಜ್ವರಾದಿ

ರೋಗಂಗಳಂ ವ್ಯಭಿಚಾರಕರ್ಮದಿ ತೊಡಗಿಸಿ ತಚ್ಛಾಂತಿಹೇತುವಾಗೆ ಲಿಂಗ ವಿಭೂತಿ ರುದ್ರಾಕ್ಷಿಯಂ ಧರಿಸಿ ವೀರಶೈವಮಂ ಪ್ರಕಟಿಸಿ ಆಂಡಿಗಳ್ ಪ್ರಬಲಮಾಗೆ ಬಂದು ಕೂನಪಾಂಡ್ಯನಂ ಬೋಧಿಸೆ ಲಿಂಗಮಂ ಕಟ್ಟಿ ವೀರಶೈವದೊಳ್ ದೃಢಚಿತ್ತನಾಗಿ ತನ್ನ ಪುರಜನ ಪರಿಜನ ತಾನಾಳ್ವ ದೇಶದ ಚಾತುರ್ವರ್ಣಮೆಲ್ಲಕ್ಕಂ ಲಿಂಗಮಂ ಕಟ್ಟಿಸಿ ಬಲಾತ್ಕಾರದಿಂ ವೀರಶೈವರಂ ಮಾಡಿದ ನಂತರಂ ಜೈನವಿಪ್ರರಾದ ಗೋಪಾಚಾರ್ಯಂ ಗುಣಭದ್ರಯತೀಂದ್ರರಿಂ ರತ್ನತ್ರಯಾಲಂಕೃತನಾಗಿ ದೇವಾಗಮಸ್ತೋತ್ರ ವಿದೇಶಕರಣದ ಶ್ರೀವತ್ಸಗೋತ್ರದಾತನ ಕುಮಾರಂ ಮಲ್ಲಪಂಡಿತಂ ರಾಜಮಂತ್ರಿಯಾಗಿರ್ದೊಂದು ದಿವಸಮಾಸ್ಥಾನದಿಂ ಬಪ್ಪವಸರದೊಳ್ ಗಂಧಕರಿಯು ಮೇಲ್ವಾಯಲದರ ಎರಡು ಕೊಂಬನೆರಡು ಹಸ್ತದಿಂ ಪಿಡಿದವುಂಕಿ ನೂಂಕಿದೊಡದು ಕಂಗೆಟ್ಟು ಗೋಳಿಟ್ಟು ಪೋಗಲಾತಂಗೆ ಹಸ್ತಿಮಲ್ಲಾಭಿಧಾನಮಾಗೆ ಗೃಹಸ್ಥಾಚಾರ್ಯನಾಗಿರ್ದು ಪಾರ್ಶ್ವಪಂಡಿತರ್ ಮೊದಲಾದ ಪುತ್ರರಂ ಪಡೆದುಭಯಭಾಷಾ ಕವಿಚಕ್ರವರ್ತಿಯೆನಿಸಿರ್ದು ಸಂಸಾರಭೋಗನಿರ್ವೇಗದಿಂ ಜಿನದೀಕ್ಷೆಯಂ ಕೈಕೊಂಡು ಸರಸ್ವತಿ ಜ್ವಾಲಿನಿ ಪದ್ಮಾವತಿ ಕಾಮಚಾಂಡಾಲಿ ಮೊದಲಾದ ದೇವತೆಗಳ್ ಪ್ರತ್ಯಕ್ಷಮಾಗೆಯಲ್ಲಿ ದ್ವಾದಶಗೋತ್ರದ ವಿಪ್ರರೈವತ್ತು ಒಕ್ಕಲಿರ್ದಡವರೆಲ್ಲರಂ ಕೂನಪಾಂಡ್ಯಂ ಬರಿಸಿ ಲಿಂಗಮಂ ಕಟ್ಟಿಮೆನಲವರೊಡಂಬಡದಿರೆ ಜಂಗಮ ರಾಂಡಿಗಳ್ ಮಾಡಿದ ಕೃತ್ರಿಮಂ ಸೇರದಿರಲಾ ದ್ವಿಜರೆಲ್ಲರಂ ಕುಟುಂಬಸಮೇತಂ ಕೊಲಲೆಂದು ಚಂದಿರಾದ್ರಿಯೊಳೆಲ್ಲರಂ ಕಾವಲಿರಿಸೆ ಶಾಸನದೇವಿಯನಾರಾಧಿಸಿ ಅರ್ಘ್ಯ ಪಾದ್ಯಮಂ ಕೊಟ್ಟೊಡಾ ದೇವತೆಗಳ್ ಪ್ರಸನ್ನರಾಗಲದಂ ಕಾವಲವರ್ ಕಂಡು ಭಯಂಗೊಳೆ ಮರುದಿವಸ ರಾತ್ರಿಯೊಳಾ ಪರ್ವತಂ ಪಾಂಡ್ಯನ ದೇಶದಿಂ ದ್ವಾದಶ ಯೋಜನಮಂ ಬಿಟ್ಟು ಕೇರಳದೇಶದೊಳ್ ಬಂದು ನಿಲೆ ಹಸ್ತಿಮಲ್ಲಿಷೇಣಾಚಾರ್ಯರ್ ದ್ವಾದಶಗೋತ್ರದ ವಿಪ್ರರೈವತ್ತೊಕ್ಕಲು ಸಮೇತಂ ವಿಜಯಮಂಗಲಮೆಂಬ ಪಟ್ಟಣಮಂ ಪೊಕ್ಕಿರಲ್

ಇತ್ತ ಮಧುರಾಪುರದೊಳ್ ಕೂನಪಾಂಡ್ಯ ಜಿನಧರ್ಮದ್ವೇಷಿಯಾಗಿ ತನ್ನ ದೇಶದೊಳಿರ್ದ ಚೈತ್ಯಾಲಯಂಗಳ್ ೯೮೫ನ್ನು ತೆಗೆಯಿಸಿ ಮಧುರೆಯೊಳ್ ೫೦ ಬಸದಿಗಳಂ ತೆಗೆಯಿಸಿ ಪಾಂಡ್ಯವಂಶಕುಲಸ್ವಾಮಿಯಪ್ಪ ನೇಮೀಶ್ವರ ಮಹಾಚೈತ್ಯಾಲಯದೊಳ್ ಮೂಲಸ್ವಾಮಿಯಂ ಮರಸಿ ಕೂಷ್ಮಾಂಡಿದೇವಿಪ್ರತಿಮೆಗೆ ಮೀನಾಕ್ಷೀಯೆಂಬ ನಾಮಮಂ ಪ್ರಕಟಿಸಿ ಇರಿಸಿದರಲ್ಲಿರ್ದ ಜಿನಮುನಿಗಳಂ ವಧಿಯಿಸೆ ಆ ದೇಶದೊಳಿಪ್ಪ ಆಂಡಿಗಳೆಲ್ಲಂ ಜೈನದ್ವೇಷಿಗಳಾಗಿ ಕ್ರೋಧದಿಂ ಶ್ರವಣಶೂಲದ ಹಬ್ಬಮೆಂದು ಮೆರೆಯಿಸಿ ವರುಷಂಪ್ರತಿ ನಡೆಸುತ್ತಿರ್ದರ್

ಇತ್ತ ಸ್ಮಾರ್ತಬ್ರಾಹ್ಮಣಂ ಶಂಕರಾಚಾರ್ಯಂ ಜೈನೋಪಾಧ್ಯಾಯರಲ್ಲೆ ವಿದ್ಯಾಭ್ಯಾಸಂ ಮಾಡಿ ವೇದ ವೇದಾಂಗಾದಿ ಸಕಲ ಶಾಸ್ತ್ರಪ್ರವೀಣನಾಗಿ ದೇವತಾಪ್ರಸನ್ನತೆವಡೆದು ಶುದ್ಧ ಶೈವಾಚಾರ ಪ್ರವರ್ಧಮಾನನಾಗಿ ಶೃಂಗೇರಿ ಬಸದಿಯೊಳ್ ಮುನ್ನಿರ್ದ ಬಿಂಬಮಂ ಪೂಜಿಸಿ ಸರಸ್ವತಿಯೆಂದು ನಿಲಿಸಿ ಜಿನಪ್ರತಿಮೆಯಂ ಮರಸಿ ಅಲ್ಲಿ ಮಠಮಂ ನಿರ್ಮಿಸಿ ಮಹಾಭಾಷ್ಯಂ ಮೊದಲಾಗನೇಕ ಗ್ರಂಥಕರ್ತೃವಾಗಿ ಬಹುಜನಂಗಳಂ ಶಿಷ್ಯರಂ ಮಾಡಿಕೊಂಡು

ಪ್ರಸಿದ್ಧಿವಡೆಯಲಾ ಕಾಲದೊಳೆ ಕಾಶಿಪಟ್ಟಣದೊಳೆ ವಾಳವಿಭುವೆಂಬ ರಸಂ ಮಿಥ್ಯಮಂ ಪೊರ್ದಿ ವಿಪರೀತಗ್ರಾಹಿಗಳಪ್ಪ ಅನೇಕ ಬ್ರಾಹ್ಮಣರ್ವೆರಸಿ ಯಜ್ಞಮಂ ಮಾಡಿಸಿ ಬಹುವಿಧ ದಾನಂಗಳಂ ಕೊಟ್ಟು ಕಾಳಭೈರವನಂ ಪ್ರತಿಷ್ಠೆಗೆಯ್ದು ಅಲ್ಲಿರ್ಪ ನದಿಯನಿದು ಮಹಾಗಂಗಾನದಿಯೆಂದು ಕೊಂಡಾಡೆ ಪ್ರಸಿದ್ಧಿಯಾಗೆ ನಾನಾ ದೇಶಂಗಳ ಬ್ರಾಹ್ಮಣರೆಲ್ಲಂ ಬಂದು ತನ್ನದೀಸ್ನಾನಂಗೈದುಮಿಪ್ಪಿನಲ್ಲಿಪ್ಪ ದ್ವಿಜರ್ ಬೇರೊಂದು ಮಹಾನದಿಯಿಪ್ಪುದೆಂದ್ಯೆನೂರ್ವರ್ ವಿಪ್ರರಂ ಕರೆದೊಯ್ದು ಮತ್ತೊಂದು ತೊರೆಯ ಮಹಾಮಡುವಿನೊಳವರ್ಗಪಾಯಮಂ ಮಾಡಿಯವರೊಳಿರ್ದ ವಸ್ತುಗಳನಪಹರಿಸಿ ಕಾಶಿಗಂಗಾಸ್ನಾನಮಾತ್ರದಿಂದಾಗಲೆ ಬ್ರಾಹ್ಮಣರೆಲ್ಲಂ ಸ್ವರ್ಗಮಂ ಪಡೆದರೆಂಬ ವಾರ್ತೆಯಂ ಪುಟ್ಟಿಸೆ ನಾನಾ ದೇಶದ ವಿಪ್ರರ ಪುತ್ರ ಪೌತ್ರಾದಿಗಳ್ಬೆದೆ ಬಂದು ತಂತಮ್ಮ ಪಿತೃಗಳ್ಗೆ ದಶಕರ್ಮಮಂ ಮಾಡಿ ಅವರ್ ಗತವಾದ ಬಳಿಯಲ್ಲಿ ಪಿಂಡಪ್ರದಾನಮಂ ಮಾಡಿದರ್. ಆ ಪ್ರದೇಶಕ್ಕೆ ಗಯೆಯೆಂಬ ಪೆಸರಾಯ್ತಲ್ಲಿ ಬಪ್ಪ ದ್ವಿಜರ್ಗೆ ಗಯಾವಾಳರೆಂಬ ಪೆಸರಾಗೆ ಕಾಶಿ ಗಯಾಮಹಾತ್ಮೆಯ ಪುರಾಣಮಂ ರಚಿಸಿದರಲ್ಲಿಂದಾ ಗಂಗಾಜಲಮಂ ತಂದು ಮುನ್ನ ರಾಮಸ್ವಾಮಿ ಲಂಕೆಗೆತ್ತಿ ಬೀಡಂಬಿಟ್ಟಿರ್ದ ಭೂಮಿಯೊಳ್ ರಾಮೇಶ್ವರನೆಂದು ಲಿಂಗಸ್ಥಾಪನೆಗೆಯ್ದು ಗಂಗಾಜಲದಿಂದಭಿಷೇಕಂಗೆಯ್ದು ತೆಂಕಣ ಸಮುದ್ರಸ್ನಾನಮಂ ಮಾಡಿಬಂದರ್. ಒಬ್ಬ ಬ್ರಾಹ್ಮಣನು ವೇದಮಂ ಸಾಂಗಾಧ್ಯಯನಂಗೆಯ್ದು ಏಕವಿಂಶತಿ ಯಜ್ಞಮಂ ಮಾಡಿ ಕಾಶೀಗಂಗೆಯೊಳ್ ಸ್ನಾನಮಂ ಮಾಳ್ಪಾಗಲೊಂದು ವೃದ್ಧ ಗೋವು ದರ್ಭೆಯಂ ತಿನ್ನಲೆಂದು ಬರಲೊಂದು ಕಲ್ಲನಿಟ್ಟೊಡದು ಸುಳಿಯಂ ತಾಗಿದಾಗಲೆ ಸಾಯ್ವುದುಂ ಬ್ರಾಹ್ಮಣಂ ಸ್ನಾನಾರ್ಥದಿಂ ಮಡುವಿನೊಳ್ ಮುಳುಗಲೊಂದು ಮಕರಂ ಬಂದು ಕಚ್ಚಲದೆ ವ್ರಣಮಾಗೆ ಕ್ರಿಮಿಯಾಗಲನೇಕ ದಿವಸ ತೀವ್ರ ವೇದನೆಯಿಂ ನವೆದು ಸಾಯೆ ಗೋಹತ್ಯಫಲದಿಂದಾತಂಗೆ ನರಕಮಾದುದೆಂದವನ ಉತ್ತರಕ್ರಿಯೆಯಂ ಮಾಡದೆ ಬಿಟ್ಟರ್. ಮತ್ತೊಬ್ಬ ಬ್ರಾಹ್ಮಣಂ ವೇದ ಶಬ್ದ ತರ್ಕಾದಿ ಸಕಲ ಶಾಸ್ತ್ರಮಂ ಕಲ್ತು ಮಹಾಕವಿಯಾಗಿಯುಂ ವ್ಯಸನ ಲೋಲುಪ್ತನಾಗಿ ಮಾಂಸಪ್ರಿಯನಾಗಿ

ಶ್ಲೋಕ || **ಅವ್ರಣೇ ಮೃಗಶಾಬಸ್ಯ ಪ್ರತ್ಯಕ್ಷಂ ಮೃಗದರ್ಶನೇ**
ತಕ್ಷಣಂ ಬಾಧಯೇತ್ಪುಣ್ಯಂ ತ್ಯಕ್ತಂ ಚೇನ್ನರಕಂ ವ್ರಜೇತ್ ||

ಎಂಬ ಸೂತ್ರಾದಿಗಳಂ ಮಾಡಿದಂ ಮದ್ಯಪಾನದೊಳತ್ಯಾಸಕ್ತನಾಗಿ ಘಟಪೂಜೆಯಂ ನಿರ್ಮಿಸಿ 'ಮಂತ್ರಪೂತಂ ಸುರಾಸೇವ್ಯಂ' ಎಂದುಂ ಸುರಾಪಾನಮಂ ಮಾಡಿ 'ಆಪತ್ಕಾಲೇ ನಾಸ್ತಿಮರ್ಯಾದಾ' ಎಂದು ಬಟ್ಟೆಬಡಿಕನಾಗಿ ಗಂಡಕಿಯೆಂಬ ಸೂಳೆಯೊಳತ್ಯಾಸಕ್ತನಾಗಿ

ಶ್ಲೋಕ || **ವೇಶ್ಯಾನಾಂ ದರ್ಶನಂ ಪುಣ್ಯಂ ಸ್ಪರ್ಶನಂ ಪಾಪನಾಶನಮ್**
ಚುಂಬನಂ ಸರ್ವ ತೀರ್ಥಂ ಸ್ಯಾನ್ಮೈಥುನಂ ಮೋಕ್ಷಸಾಧನಮ್ ||

ನದೀತೀರೇ ವಟೇ ವೃಕ್ಷೇ ಬಾಲರಂಡಾಂ ರಜಸ್ವಲಾಮ್
ಬಲಾತ್ಕಾರೇಣ ಗೃಹ್ಣೀಯಾತ್ಕೋಟಿ ಯಜ್ಞಫಲಂ ಭವೇತ್ ||

ಎಂದು ಪೇಳ್ವುದು ಇಂತಪ್ಪ ಪಾಪಸೂತ್ರಮೇನೆಂಬುದುಂ ಗಂಡಕೀನದಿಯೆಂದು ಕಲ್ಪಿಸಿದರ್. ಮತ್ತಮಾ ದ್ವಿಜಂ ಚಾಂಡಾಲಸ್ತ್ರೀಸಂಪರ್ಕಮಂ ಮಾಡಿ ಕೇಳ್ವುದುಂ

ಶ್ಲೋಕ || ಖಾದನ್ಮಾಂಸಂ ಪಿಬೇನ್ಮದ್ಯಂ ಸಂಗಚ್ಛನ್ನಂತ್ಯಜಾಮಪಿ
ಸದ್ಯೋ ಭವತಿ ಪೂತಾತ್ಮಾ ಕರ್ಣೇ ತುಲಸಿಧಾರಣಾತ್ ||

ಎಂದು ತುಲಸಿಯಂ ಧರಿಸಿ ಕವೀಶ್ವರನಾಡಿದ ಮಾತಿಂಗೆ ಪ್ರತ್ಯುತ್ತರಮಿಲ್ಲೆಂದಾತನಂ ಯೋಗ್ಯಬ್ರಾಹ್ಮಣನೆಂದು ಕೊಂಡಾಡಿದರ್.

ಇತ್ತ ದೀಪಂಗುಡಿ ಚೋಳದೇಶ ಪಾಂಡ್ಯದೇಶದಿಂ ಬಂದ ಹಸ್ತಿಮಲ್ಲಿಷೇಣಾಚಾರ್ಯರುಂ ತಚ್ಛಿಷ್ಯರಪ್ಪ ಪಾರ್ಶ್ವಪಂಡಿತ ಲೋಕಪಾಲಾರ್ಯಂ ಮೊದಲಾದ ದ್ವಾದಶ ಗೋತ್ರದ ಜೈನವಿಪ್ರಮಹಾಜನಂಗಳೊಳ್ ಮೂರು ಗೋತ್ರದವರ್ ಜಾಂಗಲದೇಶಂಗಳೊಳೆ ನಿಂದರ್. ಒಂಬತ್ತು ಗೋತ್ರದವರ್ ಕರ್ಣಾಟದೇಶಕ್ಕೆ ಬಂದು ಅರಿಕುಠಾರದೊಳ್ ನಿಂತಲ್ಲಿಂ ಬಂದು ಹೊಯ್ಸಳದೇಶಾಧಿಪತಿ ಬಲ್ಲಾಳರಾಯನಿಂ ಮಾನ್ಯರಾಗಿ ಮಂತ್ರಿಗಳಾಗಿಯುಂ ಕರಣೀಯರಾಗಿಯುಂ ಉಪಾಧ್ಯಾಯರಾಗಿಯುಂ ಜ್ಯೋತಿಷ ಮೊದಲಾದ ಯೋಗ್ಯವೃತ್ತಿಯೊಳೊಂದೊಂದು ಗ್ರಾಮಮಂ ನೆಲೆಮಾಡಿಕೊಂಡು ಪ್ರಾಕು ಈ ಸ್ಥಳದೊಳಿರ್ದ ೭೦೦ ಒಕ್ಕಲು ಜೈನದ್ವಿಜರಂ ನೀಮುಂ ದುರ್ಭಿಕ್ಷದೊಳ್ ಚಾರಿತ್ರಗೆಟ್ಟು ರಾತ್ರಿಭೋಜನಂ ಮೊದಲಾದ ಭಕ್ಷ್ಯಂಗಳಂ ಸೇವಿಸಿದುದರಿಂ ಪ್ರಾಯಶ್ಚಿತ್ತಂಗೊಂಡಲ್ಲದೆ ಭೋಜನ ಪ್ರತಿಭೋಜನವಾಗದೆಂದು ಪೇಳ್ವೊಡೆ ದೇಶಭ್ರಷ್ಟರಾಗಿ ಬಂದವರ್ ನಿಮಗೆ ಪ್ರಾಯಶ್ಚಿತ್ತವಲ್ಲದೆ ನಮಗೇಕೆಂದು ೫೧೫ ಒಕ್ಕಲು ದ್ವೇಷಮಂ ಮಾಡಿ ಬೇರೆ ನಿಂತರ್. ಉಳಿದ ೧೮೫ ಒಕ್ಕಲೊಳ್ ಪಡುವಸೀಮೆ ಮಲಯಾಳ ತುಳುವ ರಾಜ್ಯ ಮೂಡದೇಶದವರ್ ಜೈನಾಚಾರಮಂ ಬಿಡದೆ ಇದ್ದರು. ಕರ್ಣಾಟ ಗೇರಸೊಪ್ಪೆ ಬಟ್ಕಳ ಮುಂತಾದ ದೇಶದವರೆಲ್ಲ ಪ್ರಾಯಶ್ಚಿತ್ತವಿಧಿಯಿಂ ಶುದ್ಧರಾಗಿ ಏಕವಾಗಿರಲಾ ಕಾಲದೊಳ್ ಹೊಯಿಸಳವಿಷಯದ ಶಾಲಿಗ್ರಾಮದೊಳ್ ಬ್ರಾಹ್ಮಣರ್ ಯಜ್ಞಮಂ ಮಾಡಲೆಂದು ಯಜ್ಞಶಾಲೆಯಂ ಮಾಡಿಸಿ ಯಜ್ಞಕ್ಕೆ ಯೋಗ್ಯವಾಗಿ ಲಕ್ಷಣವುಳ್ಳ ಸ್ಥೂಲವಾದ ಇಪ್ಪತ್ತೊಂದು (೨೧) ಮೇಕೆಯಂ ತರಿಸಿ ಕುಲಾಲನಿಂ ಮೇಯಿಸುತ್ತಿಪ್ಪುದುಮೊಂದುದಿನಮಾ ಏಕವಿಂಶತಿ ಪೋತುಗಳ್ ಜಿನಾಲಯಮಂ ಪುಗುವುದುಂ ಕುಂಭಕಾರಂ ಬಂದು ಪೊಡೆದಟ್ಟುವುದುಂ ಗಾಂಧಾರಸ್ವರದಿಂ ಗೋಳಿಡುತ್ತುಂ ಪೋಗದೆ ತಿರುಗಿ ಶರಣ್ಪೊಗುವವಂ ಕಂಡು ಅಲ್ಲಿರ್ದ ಧರ್ಮಾಚಾರ್ಯರೆಂಬ ಋಷಿಗಳ್ ದ್ವಿಜರ್ ಸಹಾ ಆ ಮೇಕೆಗಳಂ ಬಿಡದಿಪ್ಪುದುಂ ಸೋಮಯಾಜಿಗಳ್ ವೇದಾಂತಿಗಳೆಲ್ಲಂ ಬಂದು ಜೈನರಂ ನಿಕೃಷ್ಟಮಾಗೆ ನಿಂದಿಸುತ್ತುಂ ಮೇಕೆಗಳಂ ಕೊಳ್ಳಲೆಂದು ಗರ್ಜಿಸೆ ಕ್ಷಮೆಗೊಂಡು ವಿರುದ್ಧಾಃ ಕಿಂ ನ ಜಲ್ಪಂತಿ ಎಂಬುದರಿಂ ಕ್ರೋಧಾಗ್ನಿಸಂತಪ್ತರಾಗಿ ನುಡಿದರೇನಾಯ್ತು ನೀವು ಪಶುಗಳಂ ಕೊಂದು ನರಕಾದಿ ದುರ್ಗತಿಯೊಳ್ ಬಸವಳಿದು ನೋಯದೆ ಪುಣ್ಯ ವಿಘ್ನಮಪ್ಪ ಪಾಪಯಜ್ಞಮುಮಂ ಬಿಟ್ಟು ಕಳೆವುದೆಂಬ ಜೈನರ ಮಾತಿಂಗೆ ಕೋಪಿಸಿ ರಾಜಾದಿತ್ಯ

ರಾಜಸಭೆಗೊಯ್ದು ರಾಜಾಜ್ಞೆಯಿಂದುದ್ಯಾನವನದೊಳ್ ಧರ್ಮಾಧಿಕರಣರ ಮಧ್ಯದೊಳ್ ಸ್ಮಾರ್ತರ್ಗಂ ಜೈನರ್ಗಂ ಸಂವಾದವಾಗೆ ಪ್ರಮಾಣಪರೀಕ್ಷಾ ಪ್ರಮಾಣ ನಿರ್ಣಯ ಸ್ಯಾದ್ವಾದಮಂಜರಿ ಮೊದಲಾದ ಗ್ರಂಥಮಂ ಸವಿಸ್ತರಂ ಪೇಳ್ದು ಪ್ರಾಣಿವಧೆಯಿಂ ಧರ್ಮಮುಂಟೆಂದು ಮಾಡಿರ್ದ ಶಾಸ್ತ್ರಮಂ ನಿರಾಕರಿಸಿ ಜೀವಹಿಂಸೆಯಿಂ ಪುಣ್ಯಮುಂಟೆಂಬ ಪಾಪಸೂತ್ರಧಾರಿಗಳುಂ ಕರ್ಮಚಾಂಡಾಲರುಂ ದುರಾತ್ಮರುಂ ಜಡರುಂ ಮಾಯಾವಿಗಳುಂ ಲೋಭಿಗಳುಂ ರಾಗದ್ವೇಷ ಮಲೀಮಸ ಮಾನಸರುಂ ದುರ್ಗತಿ ಸಾಧನರುಂ ಪಾಪಿಷ್ಠರಲ್ಲದೆ ಬ್ರಾಹ್ಮಣರಲ್ಲವೆಂದವರ ಗರ್ವಪರ್ವತಮಂ ವಾಗ್ವಜ್ರದಿಂ ಚೂರ್ಣೀಕೃತಂ ಮಾಳ್ಪಾಗಲಾ ಜೀಯನ ಸಮೀಪದ ವೃಕ್ಷಮನೇರಿ ನೋಡುತ್ತಿರ್ದ ಐನೂರಹದಿನೈದು ಒಕ್ಕಲೊಳ್ ಕೆಲಂಬರ್ ವೃಕ್ಷಾರೂಢರವರ್ ತಸ್ಕರೆನೆ ಜೈನರೆ ಜಯವಾದಿಗಳಾದರವರೊಳೆ ಕೂಡಲ್ ಬನ್ನಿಮೆಂದು ಮರದ ಮೇಲಿರ್ದವರೊಳೆ ಕೆಲರ್ ಕೆಲಂಬರ ಕೈಯಂ ಪಿಡಿದೆಳೆವುದುಮವರೊಪ್ಪದೆ ಕರೆದರಂ ನೂಂಕುವುದುಂ ದ್ವಿ ತ್ರಿ ಪುರುಷರ್ ವೃಕ್ಷೋಪರಿಯಿಂ ಭೂಮಿಗಧಃಪಾತವಾಗಿ ಕಾಲಂಗಂಡರ್. ಉಳಿದರೆಲ್ಲಂ ಪೋಗಿ ರಾತ್ರಿಭೋಜನಪ್ರೀತರಾಗಿ ಶಂಕರಾಚಾರ್ಯರ ಶಿಷ್ಯರಾಗಿ ಐನೂರಪದಿನೈದು ಒಕ್ಕಲ್ ಹಳಗನ್ನಡಿಗರ್ ತಸ್ಕರು ಮಾರಕರೆಂಬ ಶಬ್ದಮಾಗೆ ಸ್ಮಾರ್ತರಿಂದಲೆ ಗರ್ಭಾದಾನಾದಿ ಕ್ರಿಯೆಯುಂ ಮಾಡಿಸಿಕೊಳ್ಳುತ್ತುಂ ಗ್ರಾಮಾಧಿಪತ್ಯ ಶಾನಭೋಗರಾಗಿರ್ದವರೊಳೆ ವಿರುದ್ಧಮಾಗಿ ಸ್ಥಾನವಿಶೇಷದಿಂ ಮೂರು ಭೇದದಿಂ ಮೂಗೂರು ಸೋಸಲೆ ಬಂಡಹಳ್ಳಿಯ ಪೈಕಮೆಂದಾದರ್. ವೇದಾಂತಿ ಬ್ರಾಹ್ಮಣರೊಳ್ ಕೆಲಂಬರ್ ಪಶುವಧೆಗೆ ಭೀತರಾಗಿ ಪಿಷ್ಟಪಶುವಂ ಮಾಡಿಕೊಂಡರ್. ಜೈನಬ್ರಾಹ್ಮಣರ್ ಏಕವಿಂಶತಿ ಬಸ್ತಂಗಳಂ ಸಲಹಿ ಸಮ್ಯಕ್ತ್ವಮಂ ಕೈಕೊಳಿಸಿದರ್.

ವೃ || **ವಿಪ್ರಾ ಮಂತ್ರಪದೇನ ಬಸ್ತನಿಕರಾನ್ ಹತ್ವಾ ಯಥೇಚ್ಛಂ ಕಿಲ**
ಯಜ್ಞೇ ಸಂಪ್ರತಿ ಭಕ್ಷಯಂತಿ ನಿಖಿಲಾನ್ ಮತ್ವೇತಿ ಬಸ್ತಾಃ ಪುನಃ
ಶೀಘ್ರಂ ತೇ ಜಿನಮಂದಿರಂ ಚ ಶರಣಂ ಯಾತಾಸ್ತದಾ ರಕ್ಷಣಂ
ಬಸ್ತಾನಾಂ ಪರಿರಕ್ಷಣಾಜ್ಜಗತಿ ಭೋ ಬಸ್ತೀತಿ ಭಂಭಣ್ಯತೇ

ಎಂದು ಜಿನವಸತಿಗೆ ಸಕಲ ದೇವರಿಂದಲ್ ಸಂಪತ್ತಿಯಿಂದಲ್ ತುಂಬಿಪ್ಪುದರಿಂ ಬಸ್ತಿಯೆಂಬ ನಾಮಂ ಪ್ರಸಿದ್ಧಿಯಾಯ್ತು. ಈ ಪ್ರಕಾರ ಕಾಲಶಕ್ತಿಯಿಂದಲೆ ವರ್ತಿಸುತ್ತಿರಲತ್ತಲ್ ಬ್ರಾಹ್ಮಣರೊಳ್ ಮಧ್ವಾಚಾರಿಯೆಂಬ ವಿದ್ವಾಂಸಂ ಪುಟ್ಟೆ ಮೊದಲ ಶಾಸ್ತ್ರಂಗಳೊಳ್ ಸಂದೇಹಗ್ರಸ್ತದಿಂ ವಿಷ್ಣುಪಕ್ಷವಿಡಿದು ಧರ್ಮಾರ್ಥಕಾಮ ತ್ರಿವರ್ಗವಲ್ಲದೆ ಮೋಕ್ಷಮೆಂಬುದಿಲ್ಲ, ಸಾಯುಜ್ಯಮಿಲ್ಲೆಂದು ನಾನಾ ಯುಕ್ತಿಯೊಳೆ ಅನೇಕ ಗ್ರಂಥಂಗಳಂ ರಚಿಸಿ ತನ್ನ ಶಿಷ್ಯವರ್ಗಂಗಳ್ಗೆಲ್ಲಮುಪದೇಶಂಗೆಯ್ದು ಮಾಧ್ವಮತಸ್ಥಾಪನೆ ಮಾಡಿದಂ. ಜೈನವೈಶ್ಯರ್ ವಿಜಯನಗರ ಕರ್ಣಾಟ ಮುಂತಾಗಿರ್ದವರ್ ಕೆಲರ್ ಚತುರ್ಥರೆಂದು ಕೆಲರ್ ಕ್ರಿಯಾಕರ್ಮವ್ಯತ್ಯಸ್ತರಾದರ್. ಕೆಲಂಬರ್ ಪಂಚಮರೆಂಬ ಪೆಸರಾಂತಿರ್ದು ಚಾರಿತ್ರಗೆಡದೆ

ದಾನಯೋಗ್ಯರಾಗಿ ಶೀಲೋಪವಾಸಮಂ ಬಿಡದೆ ಜಿನಭಕ್ತರಾಗಿಯು ಒಂದೆರಡು ಒಕ್ಕಲು ತಮ್ಮಿಷ್ಟಕ್ಕಾಗಿ ದುರ್ದೇವತಾ ಪ್ರಾರ್ಥನೆಯಂ ಮಾಡಿಕೊಂಡರ್. ಕೆಲಂಬರ್ ಉಡಿಕೆಯೆಂದು ಪತಿ ಹೋದ ಸ್ತ್ರೀಯರ್ಗೆ ಪತಿಗಳಾಗಿ ನಾನಾ ಪೆಸರಿಂ ವರ್ತಿಸುವರ್. ಜಯನಗರಿಯಿಂದತ್ತ ಪಶ್ಚಿಮೆಯೆಂದು ಹೆಚ್ಚು ಕಡಮೆಯಾಗಿ ವರ್ತಿಸುವರ್. ಗುರ್ಜರದೇಶ ಮೊದಲಾದವರೊಳಾಯಾಯ ದೇಶನಾಮದಿಂದಲೆ ರಾಜಿಸುವರ್. ಗೌಡದೇಶದಿಂದತ್ತ ಜಾತಿಭೇದಮಿಲ್ಲದೆ ಒಂದು ಗೃಹದೊಳೆ ಒಬ್ಬ ಜೈನಶ್ರಾವಕನು ಶಿವಭಕ್ತ ವಿಷ್ಣುಭಕ್ತನೆಂಬುದಲ್ಲದೆ ಜಾತಿಭೇದಮಿಲ್ಲ. ಜೈನಗೌಡರುಗಳ್ ಕರ್ಣಾಟ ಮೊದಲಾದ ದೇಶದೊಳ್ ಜಂಗಮರಿಂ ಲಿಂಗಧಾರಿಗಳಾಗಿ ಕೆಲರ್ ಜೈನರಲ್ಲೆ ಕೂಡಿರ್ದರ್. ವಿಜಯಮಂಗಲದಿಂ ಬಂದ ಜೈನಬ್ರಾಹ್ಮಣರ್ ಬಲ್ಲಾಳರಾಯರಿಂ ಪೂಜ್ಯರಾಗಿ ಛತ್ರತ್ರಯಪುರ ಮೊದಲಾದ ಸ್ಥಳಾಂತರಂಗಳೊಳ್ ನಿಂತರ್. ಆ ಬಲ್ಲಾಳರಾಯರ ವಂಶ ಪಾರಂಪರಿಯೇನೆಂದೊಡೆ

ದ್ವಾರಾವತಿಪುರಮಂ ಬಲ
ನಾರಾಯಣರಾಳ್ದು ಬಂದು ಶೌರಿಯಪುರಮಂ
ಸಾರಿರಲವರ ತನೂಭವ
ರೋರಂತೆಯನೇಕ ರಾಜ್ಯವಾಳುತ್ತಿರ್ದರ್

ಆ ವಂಶಪರಂಪರೆಯಿಂ ನಡೆದುಬರುತ್ತಿರ್ಪಿನಂ ವೀರಭೂಪನೆಂಬರಸಂ ಪಾಂಡ್ಯದೇಶದ ದಕ್ಷಿಣ ಮಧುರಾಪುರಕ್ಕೆ ಬಂದು ಪಾಂಡ್ಯರಾಜನೆಂದು ಪೆಸರಾಗೆ ಧರೆಯಂ ಪಾಲಿಸುತ್ತೆ ರತ್ನಮೌಳಿಯನಾಂತು ಕಿರೀಟಪತಿಯೆಂಬ ನಾಮದಿಂ ಪ್ರಸಿದ್ಧಿಯಾಗಿ ಕೆಲವು ದಿವಸ ರಾಜ್ಯಂಗೆಯ್ದನಾತನ ವಂಶದೊಳ್ ವಿಕ್ರಮವಿಜಯ ವಿಖ್ಯಾತ ಶೂರ ಸತ್ಯಂಧರ ಬ್ರಹ್ಮ ಸೋಮಕೀರ್ತಿ ವೀರಪಾಂಡ್ಯರೆಂಬ ಸಮ್ಯಕ್ತ್ವಚೂಡಾಮಣಿಗಳ್ ತಮ್ಮ ಸತ್ಯ ಸಮ್ಯಕ್ತ್ವಕ್ಕೆ ದೇವತೆಗಳ್ ಮೆಚ್ಚಿ ದಿನಂ ಪ್ರತಿದಿನಂ ದೇವತಾರ್ಚನೆಗೆ ಕರಿಯ ಮಲ್ಲಿಕಾ ಪುಷ್ಪಮಂ ತಂದುಕೊಡುತ್ತಿರ್ದರಂತು ಬರುತ್ತುಮಿರ್ದರಾ ವೀರಪಾಂಡ್ಯಪುತ್ರಂ ಕೂನ ಪಾಂಡ್ಯಂ ಕೆಲವು ದಿವಸದಿಂ ಮೇಲೆ ವೀರಶೈವಾಚಾರಮಂ ಪರಬೋಧನೆಯಿಂ ಕೈಕೊಂಡು ಲಿಂಗಮಂ ಕಟ್ಟಿ ಜಿನಧರ್ಮದ್ವೇಷಿಯಾಗಿರ್ದು ಕೆಲವು ದಿವಸಕ್ಕೆ ರಾಜ್ಯಮೆಲ್ಲಮನರಿ ನೃಪಾಲಕರ್ ಕಟ್ಟಿಕೊಳ್ಳೆ ಅಲ್ಪದೇಶಕ್ಕಧೀಶನಾಗಿರ್ದೊರ್ವ ಪಟ್ಟಸ್ತ್ರೀಯಪ್ಪ ಏಚಲದೇವಿ ಗರ್ಭವಾಗಿರ್ದೊಡಾಕೆಯಂ ಬೇರೂರಿಗೆ ತೌರುಮನೆಗೆ ಕಳುಹಿಸಿರ್ದೊಡಲ್ಲಿಯೆ ಪ್ರಸವವಾಗಿ ಬೆಳೆದು ಗಂಡವಿಮುಕ್ತ ಸಿದ್ಧಾಂತದೇವರ್ ಗುರುಗಳಾಗೆ ವಿದ್ಯಾಭ್ಯಾಸಂಗೆಯ್ದು ಸಪ್ತಮ ವರುಷಮಾಗೆ ವ್ರತಮಂ ಕೈಕೊಂಡು ಆ ಗುರುವಿನಲ್ಲಿ ಮಂತ್ರವಾದ ಶಾಸ್ತ್ರಮನಭ್ಯಾಸಮಂ ಮಾಡಲ್ ತನ್ಮುನಿಯುಪದೇಶದಿಂ ಶಶಕಪುರದ ಪದ್ಮಾವತಿಯ ಸನ್ನಿಧಿಯೊಳೆ ಷೋಡಶಾಕ್ಷರ ಮಹಾಮಂತ್ರಮಂ ಸಾಧಿಸುವಂದು ವಿದ್ಯಾದೇವತೆ ಮಹಾವ್ಯಾಘ್ರನ ರೂಪುಗೊಂಡು ಬಂದು

ಮೇಲ್ವಾಯ್ವುದುಂ ಹೊಯ್ಸಳಾ ಎಂದು ಗುರುಗಳ್ ತಮ್ಮ ಕೈಯ ಪಿಂಛಮನಿಡಲದರಿಂ ಪೋದೊಡದು ಕಳೆದು ಪುನರುಚ್ಚಾರಣೆಯಿಂ ಮಂತ್ರಸಿದ್ಧಿಯಂ ಪಡೆಯಲಾ ಬಾಲಕಂ

ಚಂ || **ಶಕ ಶರದೆಂಟುನೂರರ ವಿಳಂಬಿ [ಸು] ವತ್ಸರ ಚೈತ್ರ ಶುದ್ಧಮಾ**
ಪ್ರಕಟಿತಮಪ್ಪುದಾ ದಶಮಿ ಬೃಹಸ್ಪತಿವಾರ ಪುಷ್ಯತಾರೆ ಕೌ
ತುಕ ಧೃತಿಯೋಗ ಗರಿಜಾಕರಣಂ ಲಗ್ನತಾ ಗುರುವಾಗೆ ಸಪ್ರಂ
ದಕಲಂಕಮುನಿಪಂ ಹೊಯಿಸಳಂಗೆ ನೆರೆ ಕೊಟ್ಟುಮಂತ್ರಸಿದ್ಧಿಯಂ (?)

ಕುಡಲಾ ಕುಮಾರಂವೆರಸು ಮಧುರೆಯನೆಯ್ದಿಯಾ ತಪಸ್ವಿಗಳ್ ಕುಮಾರನಂ ಪ್ರೇರಿಸೆ ಪಾಂಡುಭೂಪನಲ್ಲಿಗೆ ಪೋಗಿ ನೀನು ಸದ್ಧರ್ಮಮಂ ಬಿಟ್ಟು ವಿಪರೀತಮಂ ಕೈಕೊಂಡೆ ಯದರಿಂದಿಹಪರಂ ಕೆಟ್ಟು ದುರ್ಗತಿಗೆ ಸಾಧನಮಪ್ಪುದದರಿಂದದಂ ಬಿಟ್ಟು ಸಮ್ಯಗ್ದರ್ಶನ ರನ್ನಮಂ ಕೈಕೊಳ್ವುದೆಂದೊಡೆ ಕಾಯವೆರಸಿ ಕೈಲಾಸಮಂ ಪಡೆವ ವೀರಶೈವಮನೆಂತು ಬಿಡಲಪ್ಪುದೆನೆ ಅದೆ ವಾಗ್ವಾದವಾಗೆ ಇಂದಿಂಗೆ ಮೂರನೆ ದಿವಸದೊಳ್ ಕೈಲಾಸ ದೇವರೆಂಬುವರ್ ಶಿವಕೃಪೆಯಿಂ ಕಾಯವೆರಸಿ ಕೈಲಾಸಮನೆಯ್ದಿದುದನೆಲ್ಲರ್ ಬಲ್ಲರ್. ಪ್ರತ್ಯಕ್ಷಮಾಗಿ ಕಂಡು ಎಂತು ಬಿಡಲಪ್ಪುದೆನೆ ಕುಮಾರನದು ಪುಸಿಯೆಂಬದುಮೋರೊರ್ವರ್ ಪ್ರತಿಜ್ಞೆಯಂ ಮಾಡೆ ಕುಮಾರಂ ಕೆಲರ್ವೆರಸು ಪೋಗಿ ಕೈಲಾಸದೇವರ ಜಂಗಮಗೃಹಮನೆಯ್ದಿಯಾ ಕೋಣೆಯೊಳ್ ಪೂಳಿರ್ದ ಪೆಣನಂ ಕಿತ್ತು ತೋರಿಸುವುದುಂ ಬೆರಗಾಗೆ ಪುಸಿದಂಗಾಜ್ಞೆಯೇನೆಂದು ಕುಮಾರಂ ಕುದುರೆಯನುಜ್ಜಿಸಿಬಿಡೆಂಬ ಸಳನ ಮಾತಿಂಗೆ ಕಿಂಕರರಾತನ ಕೈಯಂ ಪಿಡಿದು ಕುದುರೆಯಂ ಮೇಲೆ ತಿರುಗಿಸಿ ಬಿಡೆ ಕೂನಪಾಂಡ್ಯಂ ವಿಷಣ್ಣಚಿತ್ತನಾಗಿ ಅನ್ನಪಾನಂಗಳಂ ಬಿಟ್ಟು ಅಧೋಮುಖನಾಗೊರಗಿರ್ಪುದುಂ ಮುನಿಮುಖ್ಯಂ ಬಂದು ಈತಂ ನಿನ್ನ ಮಗನಪ್ಪ ಹೊಯಿಸಳನಾತನ ಗುರುಗಳ್ ನಿನಗಂ ಪ್ರತಿಬೋಧಿಸಲ್ ಬಂದೆವೆನೆ ಗಾಢಾಲಿಂಗನಂಗೆಯ್ದು ಗುರುವಿಂಗೆರಗಿ ಲಿಂಗಮಂ ಕಳೆದು ಸಮ್ಯಗ್ದರ್ಶನಮಂ ಕೈಕೊಂಬುದು ಹೊಯಿಸಳಕುಮಾರಂ ಬಂದು ಸ್ವಸ್ತಿಶ್ರೀ ಸಮಸ್ತ ಭುವನಾಶ್ರಯ ಪೃಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಪರಮಭಟ್ಟಾರಕ ಸತ್ಯಾಶ್ರಯಕುಳತಿಳಕಂ ಚಾಳುಕ್ಯಾಭರಣಂ ಶ್ರೀಮತ್ತ್ರಿಭುವನರಾಜ ಮಲ್ಲದೇವರ್ ಪೃಥ್ವೀರಾಜ್ಯಂಗೆಯ್ಯುತ್ತುಮಿರಲಲ್ಲಿಗೆಯ್ದಿ ಕಾಣಲೀ ಕುಮಾರನ ಸಾಹಸ ಧೈರ್ಯಕ್ಕಂ ಸಮ್ಯಕ್ತ್ವಕ್ಕಂ ಮೆಚ್ಚಿ ಕೆಲವು ರಾಜ್ಯಮನೀಯೆ ದೋರಸಮುದ್ರದೊಳ್ ಬೀಡಂ ಮಾಡಿ ರಾಜ್ಯಭೋಗಮನನುಭವಿಸುತ್ತುಮಿರೆ

ಮ || ಸ್ರ || **ಮುದದಿಂ ಜೈನವ್ರತೀಶಂ ಶಶಕಪುರದ ಪದ್ಮಾವತೀದೇವಿಯಂ ಮಂ**
ತ್ರದಿ ತಾನುಂ ಸಾಧಿಸಲ್ ಸತ್ಕ್ರಿಯೆಯೊಳು ಪುಲಿ ಮೇಲ್ವಾಯೆ ಯೋಗೀ
ಶ್ವರಂ ಕುಂ
ಚದ ಕಾವಿಂದಾಂತದಂ ಹೊಯ್ಸಳನೆನೆ ಅಭಯಂ ಪೊಯ್ದಡಂ ಹೊಯ್ಸಳಾಂಕಂ
ಯದುಭೂಪರ್ಗಾದುದಂದಿಂದೊಸೆದುದು ಶಳೆಯುಂ ಲೋಲ ಶಾರ್ದೂಲ
ಚಿಹ್ನಂ

ಆ ಸಂದ ಯುಕ್ತಿವರದೊಳ
ಗಾ ಸಂಕಾಳಿಕೆಯ ನಾಮದಿಂದಂ ಸಾಗಿಯು
ವಾಸಂತಿಕಾಖ್ಯ ಪೂಜಾ
ವ್ಯಾಸಂ[ಗಂ] ಮಾಡಿದಂ ನೃಪಾಲಾಗ್ರಣಿಯುಂ

ಕೈಸಾರ್ದಿರೆ ಪುಲಿಯೊಂದಿಗೆ
ಕೈಸಾರ್ದಿರೆ ವೀರಲಕ್ಷ್ಮಿ ರಿಪುನೃಪರಾಜ್ಯಂ
ಕೈಸಾರ್ದಿರೆ ಪಲಕಾಲದೆ
ಹೊಯ್ಸಳನಾಮದೊಳೆ ಯಾದವೋರ್ವೀಪತಿಗಳ್

ಸತ್ಕುಲದೊ[ಳಗಿಂ]ದು ಮಹೀ
ಭೃತ್ಕುಳಕೊಳಗಚಳನಾದವೆಸೆವಂತೆಸೆದಂ
ತತ್ಕುಲದೊಳ್ ವಿಜಿತರಿಪು ಕು
ಭೃತ್ಕುಳನಾದಿತ್ಯಮೂರ್ತಿ ವಿನಯಾದಿತ್ಯಂ

ಆ ಹೊಯ್ಸಳಬಲ್ಲಾಳಂಗೆ ವಿನಯಾದಿತ್ಯಬಲ್ಲಾಳಂ ಪುಟ್ಟಿ ಪದಿನಾಲ್ಕು ನಾಡಿಂಗರಸಾಗಿ ಸ್ಥಳ ಸಾಲದೆ ನೆಲವೀಡೆಂಬ ಪಟ್ಟಣಮಂ ಮಾಡಿಕೊಂಡು ಸುಖಮಿರ್ದನಾತನ ಮಂತ್ರಿ ಸಾಮಂತ ಪುರೋಹಿತಾದಿಗಳ್ ಜೈನಬ್ರಾಹ್ಮಣರ್ ಗುರುಗಳ್ ಪ್ರಭಾಚಂದ್ರದೇವರುಗಳಾದ ಮಲಧಾರಿದೇವರ್. ಆ ಕಾಲದೊಳೊರ್ವ ಬ್ರಹ್ಮಚಾರಿ ದ್ವಿಜಂ ಚಂದ್ರದ್ರೋಣಪರ್ವತದೊಳ್ ಪಾರ್ಶ್ವಕಲ್ಪ ನಾಗಾರ್ಜುನಕಲ್ಪ ಸಾಧನೆಯುಂ ಮಾಡಿ ಒಂದು ಮಾಸಂಬರಂ ತಪೋಯುಕ್ತನಾಗಿಪ್ಪುದುಂ ಸಿದ್ಧರಸಂ ಸಾಧ್ಯಮಾಗಲದನೊಂದು ಬುರುಡೆಯೊಳಿಟ್ಟು ನೆಲವೀಡಿಂಗೆ ಬಂದೊರ್ವ ಅಜ್ಜಿಯ ಮನೆಗೆಯ್ದಿ ಬಹಳ ಕ್ಷುತ್ತಾಗಿದೆ ಗ್ರಾಸಮನಿಕ್ಕೆಂದು ಪ್ರಾರ್ಥಿಸೆ ಸ್ನಾನಾದ್ಯನುಷ್ಠಾನಮಂ ಮಾಡಿಬಪ್ಪುದೆನಲೊಂದು ಗೂಢಪ್ರದೇಶದೊಳಾ ಬುರುಡೆಯಂ ನೇಲ್ದುಪೋಪುದುಮಾ ಅಜ್ಜಿ ನೋಳ್ಪೆನೆಂದು ತೆಗೆಯಲೊಂದು ಬಿಂದು ದೋಸೆ ಕಾವಲಿಯಂ ಸೋಂಕಿದಾಕ್ಷಣವೆ ಸುವರ್ಣಮಾಗೆಯುದನಪಹರಿಪೆನೆಂದು ತೆಗೆದು ಬೇರೊಂದೆಡೆಯೊಳಿಟ್ಟು ಮನೆಯನಗ್ನಿಪ್ರವೇಶಮಂ ಮಾಡಿ ಅಳುತ್ತಿರ್ದಜ್ಜಿಯಂ ಬ್ರಾಹ್ಮಣಂ ಬಂದು ಕಂಡು ತಿಳಿದು ಸಾಯಲಿರ್ದ ಮುದುಕಿಗಿಂತಾಸೆಯಂ ಮಾಡಿತೀ ತೃಷ್ಣಾಕಾರಿಯಪ್ಪ ಹೇಮಮಂ ನಿರಾಸೆಯಿಂ ತೊರೆದಾತನೆ ಯೋಗಿಯೆಂದು ಪೇಳುತ್ತಿರಲ್ ತಳಾರರ್ ಕೇಳ್ದು ಇರ್ವರುಮನೊಯಿದರಸಂಗೊಪ್ಪಿಸಲಾ ವೃದ್ಧೆ ತಾ ಮಾಡಿದ ಪ್ರಪಂಚಮಂ ಪೇಳ್ದಾ ಪರುಷಮನರಸಿನ ಮುಂತಿಟ್ಟೊಡಾ ಈರ್ವರಂ ಮೂರು ಕೋಟಿ ದ್ರವ್ಯಮಂ ತನ್ನ ಬೊಕ್ಕಸದಿಂ ತರಿಸಿ ಕನಾಕಾಭಿಷೇಕಂಗೆಯ್ಸೆ ಆ ಪರುಷಮಂ ಅರಸಂಗೊಪ್ಪಿಸಿ ಭೌತಿಕಂ ಪೋಪುದುಂ ರಾಯಂ ಪ್ರಜೆಗಳ್ಗೆಲ್ಲಾ ಕುಳಗಳ್ಗಂ ಹಣ ಮಟ್ಟು ಅಡ್ಡ ಹಾಗ ಬೇಳೆ ವೀಸಮಷ್ಟೆಂದವರವರ ಭೂಮಿಗಳ ಸಿದ್ಧಾಯಕ್ಕೆ ಅವರ್ ಉಳುವ ಗುಳುವನ್ನು ತೆಗೆದುಕೊಂಡು ಸುವರ್ಣ ಮಾಡಿಕೊಳ್ಳುತ್ತಾ

ನಾಲ್ಕಾರು ವರುಷಂಬರಂ ನಡೆದಷ್ಟರೊಳ್ ಒಬ್ಬ ದ್ವಿಜಂ ಪರುಷವಮಂ ಚೋರ ಪ್ರಯೋಗದಿಂದಪಹರಿಸಲ್ ದೇವತೆ ಮರಸಿಬಿಡಲ್ ನಿಲುಕಡೆಯಾದುದು.

ತದಪತ್ಯಂ ರಿಪುನೃಪಭುಜ
ಮದಮರ್ದನನಖಿಳ ವಿಬುಧಜನತಾ ಸೌಖ್ಯ
ಪ್ರದನುದಿತೋದಿತ ಮಹಿಮಾ
ಸ್ಪದನೆನಿಸಿದನಂಗಭೂಪನಂಗಜರೂಪಂ

ಮತ್ತಮಾ ಅಂಗರಾಜಂ ರಾಜ್ಯಂಗೆಯ್ಯುತ್ತಮಾತನರಸಿ ಏಚಲದೇವಿಗಂ ಪುರುಷಾರ್ಥಮಾದಂತೆ ಬಲ್ಲಾಳನುಂ ವಿಷ್ಣುನೃಪತಿಯುಂ ಉದಯಾದಿತ್ಯನುಮೆಂಬ ಮೂವರ್ ತನಯರಾಗೆಯವರೊಳ್ ವಿಷ್ಣುಮಹೀಭುಜಂ ನಳ ನಹುಷ ಭರತ ಚರಿತ್ರನೆನಿಸಿ

ಸ್ಥಿರಮಾಗಿ ವಿಷ್ಣುಪರಿವೃಢ
ಧರಣೀಶಂಗೊಲಿದು ಪಟ್ಟಮಾಗಲೊಡಂ ಸಾ
ಗರಪರ್ಯಂತಂ ಧರಣೀ
ಶ್ವರರೊಡನೆಯಿತ್ತು ವಿಶದ ಕೀರ್ತಿಪ್ರಸರಂ

ಶಕವರುಷಂಗಳ್ ೯೬೭ನೆ ಸರ್ವಜಿತು ಸಂವತ್ಸರದೊಳ್ ವಿನಯಾದಿತ್ಯ ಬಲ್ಲಾಳನರಸಿ ಏಚಲದೇವಿಯೆಂಬಳ್ ತಮ್ಮ ಸ್ವಕೀಯ ಅರಸಿನ ಪುತ್ರನಂ ತನ್ನ ತಮ್ಮನೆಂದು ಸಲಹಿ ಮರಿಯಾನೆಯೆಂದು ಪೆಸರಾಗೆಯಾತಂಗೆ ದಂಡನಾಯಕಪದಮಂ ಕೊಟ್ಟು ನಿಲಿಸೆ ಹೊಯ್ಸಳ ಕೊಂಕಣ ಸಾಳ್ವ ಖೇಡ ಬಯಲ್ನಾಡ ತಲಕಾಡ ಸಾನಿಮಲಯ ಮಲಪರ ತಲೆಯೊಳ್ ಕೈದುವಿಡಿದು ವಶಂ ಮಾಡಿ ವಿನಯಾದಿತ್ಯ ಮಂಡಳೇಶ್ವರಂ ತನ್ನ ಪ್ರಿಯವಲ್ಲಭೆ ಅತ್ಯಳೆ ಏಚಲದೇವಿವೆರಸು ಸೊಸೆವೂರ ನೆಲೆ ವೀಡಿನೊಳ್ ರಾಜ್ಯಂಗೆಯ್ಯುತ್ತುಂ ಮರಿಯಾನೆ ದಂಡನಾಯಕಂಗಂದ್ಯೆತವೆ ದಂಡ ನಾಯಕನಿಂ ಕಿರಿಯಂ ಕನ್ಯಾದಾನಮಂ ಮಾಡಿ ಸಂಧಿನಾಡ ಸಿಂದಿಗೆರೆಯ ಪ್ರಭುತ್ವ ಸಹಿತಂ ನೆಲೆಯಾಗಿ ಸರ್ವಜಿತು ಸಂವತ್ಸರದ ಫಾಲ್ಗುಣ ಶುದ್ಧ ತದಿಗೆ ಸೋಮವಾರ ಕನ್ಯಾಭೂದಾನಮಂ ಧಾರಾಪೂರ್ವಕಂ ಕೊಟ್ಟು ಸದ್ಧರ್ಮಮಾರ್ಗದಿಂ ರಕ್ಷಿಸುತ್ತಿರೆಯಾ ಮರಿಯಾನೆಯೆಂಬ ದಳಪತಿಗೆ ಪದ್ಮಲದೇವಿ ಚಾವಲದೇವಿ ಬಪ್ಪದೇವಿಯರೆಂಬ ಮೂರು ಕನ್ಯಾರತ್ನಮಂ ಸಕಲ ಶಾಸ್ತ್ರ ನೃತ್ಯಗೀತದಿಂದತಿಪ್ರೌಢೆಯರಾಗಲಾ ಕನ್ನಿಕೆಯರಂ ಸಾವಿರದಿಪ್ಪತ್ತೈದನೆಯ ಶಕೆಯ ಸ್ವಭಾನುಸಂವತ್ಸರದ ಕಾರ್ತಿಕ ಶುದ್ಧ ದಶಮಿ ಗುರುವಾರದಂದು ಬಲ್ಲಾಳಭೂಪಾಳಂ ಮದುವೆನಿಂದು ಸಂಧಿನಾಡಂ ಪುನರ್ದಾನ ಧಾರಾಪೂರ್ವಕಂ ಕುಡೆ ಕೊಂಡು ಸುಖಮಿರಲಿತ್ತ

ಮ ||| ಸ್ರ || ಪೆಸರ್ಗೊಂಡಾವಾವ ದೇಶಂಗಳನೆಸುವನದಾವಾವ ದೇಶಂಗಳಂ ಬ
ಣ್ಣಿಸಿ ಪೇಳುತ್ತಿರ್ಪುದಾವಾವನಿಪತಿಗಳನುಂ ಲೆಕ್ಕಿಸುತ್ತಿರ್ಪುದೆಂಬಂ
ತೆಸಕಂ ಕೈಗಣ್ಮೆ ನಾಲ್ಕುಂ ಕಡಲ ತಡಿವರಂ ದಿಗ್ಜಯಕ್ರೀಡೆಯೊಳ್ ಸಾ
ಧಿಸಿದಂ ಭೂಲೋಕಮಂ ಕ್ಷತ್ರಿಯಕುಳತಿಳಕಂ ಧೀರವಿಷ್ಣುಕ್ಷಿತೀಶಂ

ಅವನ ಬಿರುದಾವಳಿಯೆಂತೆಂದೊಡೆ ಸ್ವಸ್ತಿ ಸಮಧಿಗತ ಪಂಚಮಹಾಶಬ್ದ ಮಹಾಮಂಡಳೇಶ್ವರಂ ದ್ವಾರಾವತೀಪುರವರಾಧೀಶ್ವರಂ ಯಾದವ ಕುಳಾಂಬರದ್ಯುಮಣಿ ಸಮ್ಯಕ್ತ್ವಚೂಡಾಮಣಿ ಮಲೆಪರೊಳ್ಗಂಡಾದ್ಯನೇಕ ನಾಮಾವಳೀಸಮಲಂಕೃತರಪ್ಪ ಶ್ರೀಮದ್ಭುಜಬಳವೀರ ಗಂಗ ವಿಷ್ಣುವರ್ಧನ ಬೆಟ್ಟಿಗ ಹೊಯ್ಸಳದೇವರ್ ಗಂಗವಾಡಿ ತೊಂಬತ್ತಾರುಸಾಸಿರ ಗಡಿಕೊಂಗೊಳನಾಗಿ ಏಕಚ್ಛತ್ರಚ್ಛಾಯೆಯಿಂ ತಳಕಾಡು ಕೊಳಲಾ ಪುರದೊಳಮಿರ್ಪಂದು ಅರಸನ ದಳಪತಿ ಪರಮ ಸಮ್ಯಗ್ದೃಷ್ಟಿಯಾತನ ಗುರುಗಳ ನ್ವಯಮೆಂತೆಂದೊಡೆ

ವೃತ್ತ || ಶ್ರೀಮತ್ ಸ್ವಾಮಿಸಮಂತಭದ್ರಮುನಿಪೋ ದೇವಾಕಳಂಕಸ್ತುತಃ
ಶ್ರೀಪೂಜ್ಯಾಂಘ್ರಿರುದಾತ್ತವೃತ್ತಿವಿಳಯ ಶ್ರೀವಾದಿರಾಜಾಂಬುಧೌ |
ಆಚಾರ್ಯೋ ದ್ರವಿಳಾನ್ವಯೋ ಜಿನಮುನಿಶ್ರೀಮಲ್ಲಿಷೇಣವ್ರತೀ
ಶ್ರೀಚೋಳಃ ಪರಿಪಾಲಿತಾಖಿಲವ್ರತಿಸಾನಂತವೀರ್ಯೋ ಕ್ರಮಾತ್ ||

ಅವರೊಳಜಿತಸೇನರೆ ಗುರುಗಳಾಗೆ ಮಹಾಮಾತ್ಯಕುಲಜಂ ಸಕಳ ಶಾಸನ ಚಕ್ರವರ್ತಿ ಲೋಕತ್ರಯವರ್ತಿ ಪುಣಿಸಮ್ಮಿ ಚಮೂಪನಾತಂಗೆ ಶುದ್ಧ ಚರಿತ್ರ ಪವಿತ್ರ ಸೋವಲೆ ಸತಿಯವರ್ಗೆ ಚಾವಣಮಂತ್ರಿಯುಂ ಕೊರಪಚಮೂಪತಿಯುಂ ನಾಗದೇವ ಕೋಶಾಧ್ಯಕ್ಷನುಮೆಂಬರಾದರ್. ಚಾವಣಚಮೂಪಂಗೆ ಪುಣಿಸಮಯ್ಯನುಂ ಬೆಟ್ಟಿಗನುಂ ಸಂಧಿವಿಗ್ರಹಿ ಚಾಮರಾಜಂ

ಪಿರಿಯ ತೊರೆಯಿಂದ ಗಂಗಾ
ಪರಿಯಂತಂ ಗಂಗವಾಡಿಯಿಂದಂ ತೊಂಬ
ತ್ತರುಸಾಸಿರ ಬಸದಿಯಳಂ
ಕರಿಸಿದಪಂ ಪೊಣಿಸರಾಜದಂಡಾಧೀಶಂ

ಅವರೊಳ್ ನಿತ್ಯನೈಮಿತ್ತಿಕೋತ್ಸವಂಗಳಂ ಮಾಡಿಸುತ್ತಿರ್ದಾಗ್ಯೂ ಅರಿಕಂತಾರದೊಳ್ ತ್ರಿಕೂಟಮಪ್ಪ ಬಸದಿಯಂ ನೂತನಮಾಗೆ ನಿರ್ಮಿಸಿ ಶಕವರುಷ ಸಾವಿರದ ಮೂವತ್ತೊಂಬತ್ತ (೧೦೩೯)ನೆಯ ದುರ್ಮುಖಿಸಂವತ್ಸರದ ಜ್ಯೇಷ್ಠ ಬಹುಳ ೧ ಅರ್ಕವಾರ ತುಲಾರಾಶಿ ಬೃಹಸ್ಪತಿಯಂದು ಪ್ರತಿಷ್ಠೆ ಮಾಡಿಸಿ ಗ್ರಾಮಕ್ಷೇತ್ರಮಂ ಕೊಟ್ಟು ಸುಖಮಿರ್ದನತ್ತಲಾ ವಿಷ್ಣುಭೂಪಾಲಂ ಶ್ರೀಮನ್ಮಹಾಮಂಡಳೇಶ್ವರಂ ದ್ವಾರಾವತೀಶ್ವರ ಯಾದವಕುಳಾಂಬರದ್ಯುಮಣಿ ಮಂಡಳಿಕಚೂಡಾಮಣಿ ಶಶಕಪುರ ವಾಸಂತಿಕಾದೇವೀಲಬ್ಧ ವರಪ್ರಸಾದಂ ದರದಳ ಮಲ್ಲಿಕಾಮೋದಂ ದರಹಸಿತ ಶರದುದಿತ ತುಹಿನಕರಂ ಶರನಿಕರ ದರಹಸನ ಸುಚಿರತಿಶಯ ಶಂಕಾ ಶ್ರೀವಿಳಾಸಂ ನಿರತಿಶಯ ನಿಖಿಳವಿದ್ಯಾವಿಳಾಸಂ ವಿನಯ ದಹಿತ ವಹಿಲ ಚಂಡಾಲಿಡಾ ನೂತ್ನರತ್ನರಶ್ಮಿ ಜಳ ಜಟಿತ ಚರಣನಖಕಿರಣಂ ಚತುಸ್ಸಮಯ ಸಮುದ್ಧರಣಂ ಕರ ಕರಾಳ ಕರವಾಳ ಪ್ರಭಾಪ್ರಚಳಿತ ದಿಶಾಮಂಡಳಂ ವೀರಲಕ್ಷ್ಮೀರತ್ನಕುಂಡಳಂ ಹಿರಣ್ಯಗರ್ಭಕುಲ ಪುರುಷಸ್ವರದ ವಿಶ್ವಚಕ್ರಕಲ್ಪವೃಕ್ಷ ಪ್ರಮುಖ ಮಖ ಶತಮಖಂ ರಾಜವಿದ್ಯಾ

ವಿಳಾಸಿನೀಸಖಂ ಸ್ಥಿರೀಕೃತ ಯಾದವಸಮುದ್ರಿತ ವಿಷ್ಣುಸಮುದ್ರೋತ್ತುಂಗಂ ತರುಗಮ್ಮುಚ್ಚೋದಿತ ದಿಶಾಕುಂಜರಂ ಶರಣಾಗತವಜ್ರ ಆಮಳಕಪಳಕುಳಿತ ಮುಕ್ತಾಂತಾ ಲಕ್ಷ್ಮಿಲಕ್ಷಿತವಕ್ಷಂ ವಿಬುಧಜನಕಲ್ಪವೃಕ್ಷಂ ವಿಜಯಘುಟೋತ್ತರಳ ಮಾನಸಂಪದಂ ರಿಪುನೃಪಾಲಲಯಸಮಯಕ್ಷುಭಿತ ವಾರ್ಧಿವೀಚೀಚಯೋಚ್ಚಳಿತ ಜಾತ್ಯತ್ವಶಾರವಹಿಸೂರಿತ ದಿಶಾಪುಂಜಂ ಶಸ್ತ್ರೋದಾತ್ತ ಪುಣ್ಯಪುಂಜಂ ಇಂದು ಮಂದಾಕಿನೀಚ್ಛಳೋದಾತ್ತ ಗುಣಯುಕ್ತಂ ಗಂಡಗಿರಿವಾದಂ ಚಂಡಪಾಂಡ್ಯಕುಲಾಗ್ನಿಜಲಂ ಜಗದೇಕ ಜಳಾನಿಳಂ ಚಕ್ರಕೂಟಾಧೀಶ್ವರ ಸೋಮೇಶ್ವರಮದಮರ್ದನಂ ಕುಳುನೃಪಾಸುರ ಜನಾರ್ದನಂ ರಾಜಪ್ರಭಾವಂ ಕಂದವನದಡಂಭೋಗಿರಿಬಳಕಾನಳಂ ಕರವಾಳತಾರಕ ಮಯೂರವಾಹನಂ ನರಸಿಂಹಸಮ್ಮೋಹನಂ ಇರುಂಗೊಳಕುಳಜಳನಿಧಿ ಕುಂಭಸಂಭವಂ ದಳಿತ ತದೀಯ ಮರುನ್ನತ ಮಧ್ಯೆಯರ್ ಮನೋಹರತರ ಕಾಂಚಿಯರ್ದ್ಧೃತ ಜಯಕೇಶಿ ಮೇಘಾನಿಳನೆಂದಿವು ಮೊದಲಾದ ಬಿರುದಂಗಳಿಂ ಜನಂಗಳುಲಿಯುತ್ತಿರೆ

ಚಂ || ನಿರುಪಮ ಲಕ್ಷಣಾಂಗಿ [ರುಚಿಕುಂತಳೆ.................................ಸರಸತಿ
ಸದ್ವಿಳಾನ್ವಿತೆಯರುಂ..ಕೆ]
ಸ್ಫುರದುರುಕೀರ್ತಿವಾಗ್ಮಧುರೆಯರ್ ಸ್ಥಿರವಾಗಿರೆ ತನ್ನ ತೋಳೊಳೊ
ಲ್ದಿರಿಸಿದ ನೂರ್ವರಂಗನೆಯ[ರಪ್ರತಿಮಂ] ವಿಭು ವಿಷ್ಣುಭೂಭುಜಂ

ಇಂತು ಇಷ್ಟಭೋಗಕಾಮಸುಖಮನನುಭವಿಸುತ್ತಿಪ್ಪುದುಮಾತನ ಪಿರಿಯ ದಂಡನಾಯಕಂ ನಿರಂತರ ಭೋಗಾನುಭಾವಿ ಜಿನರಾಜರಾಜಿಪಾದ ರಾಜೀವ ಪೂಜಾದುರಂಧರಂ ಐಶ್ವರ್ಯಮಂದಿರ ಕೌಂಡಿನೀಗೋತ್ರಮಿತ್ರಂ ವಿಶುದ್ಧೋಭಯಾನ್ವಯ ಕರ್ಣಾಟಧರಾಮರೋತ್ತಂ ಸದಾನ ಶ್ರೇಯಾಂಸ ಯಶಃಪ್ರಕಾಶಂ ಮಂತ್ರವಿದ್ಯಾವಿಕಾಸ ಚಾರಿತ್ರ ಲಕ್ಷ್ಮೀಕರ್ಣಪೂರದ್ಧೃತ ಸತ್ಯವಾಕ್ಯ ಮಂತ್ರಿಮಾಣಿಕ್ಯ ಜಿನಧರ್ಮರಕ್ಷಾಮಣಿ ಸಮ್ಯಕ್ತ್ವಚೂಡಾಮಣಿ ಪದ್ಮಾವತೀದೇವೀ ವರಪ್ರಸಾದಕಂ ಸಕಲ ಜನರಕ್ಷಕಂ ಜಯಾಂಗನಾವಲ್ಲಭಂ ಭಯಲೋಭ ದುರ್ಲಭ ವೀರಭಟ ಲಾಟ ಪಟ್ಟದ್ರೋಹ ಘರಟ್ಟ ಅಪ್ರತಿಮತೇಜನಪ್ಪ ಗಂಗರಾಜನೆಂಬೊಂ ಶ್ರೀಗಂಗವಾಡೀ ತೊಂಬತ್ತಾರು ಸಾಸಿರ ಕೊಪಣದರುವತ್ತು ಸಾಸಿರದಧಿಕಾರಿಯಾ ಗಂಗಾರಾಜನೆಂಬೊಂ

ಆ ಗಂಗಣಭೂಪತಿಗಂ
ನಾಗಲದೇವಿಲೆಗಮುದಿಸಿದಂ ಸತ್ಪುತ್ರಂ
ಶೋಭಿಸೆ ಸದ್ಗುಣನಿಧಿಯುಂ (?)
ಭೋಗಪುರಂದರನೆನಿಪ್ಪನಪ್ಪಂ ಬೊಪ್ಪಂ

ಆ ವೀರಲಕ್ಷ್ಮೀಲೋಲವಿತರಣಶೀಲನ ಗುರು ಮಲಧಾರಿದೇವರ್ ಪೂರ್ವ ಸದ್ಗುಣಗಣಮುನಿವರಶಿಷ್ಯರಾದ್ಧಾಂತ ಸುರಾಂಬುಧಿಪಾರಗ ಶುಭಚಂದ್ರರ್ ಜಿನಧರ್ಮ ವನಧಿ

ಪರಿವರ್ಧನ ಗಂಗಮಂಡಲಾಚಾರ್ಯ ಪಾವನಚರಿತ ಪ್ರಭಾಚಂದ್ರಸಿದ್ಧಾಂತಿ ದೇವರ್ ಬೊಪ್ಪರಾಜನ ದೇವತಾರ್ಚನಾಗುರುವಾಗೆಯಾ ದೋರಸಮುದ್ರಮಧ್ಯದೊಳ್ ಗಂಗರಾಜಂಗೆ ಪರೋಕ್ಷವಿನಯವಾಗಿ ಸಾಸಿರದ್ಯೆವತ್ತೈದನೆಯ (೧೦೫೫) ಪ್ರಮಾದೀಚ ಸಂವತ್ಸರದ ಮಾಘ ಪೂರ್ವ ಪಂಚಮಿಯೊಳ್ ಮಹಾಚೈತ್ಯಾಲಯಮನೆತ್ತಿಸಿ ನಯಕೀರ್ತಿ ಸಿದ್ಧಾಂತಚಕ್ರವರ್ತಿಗಳೆ ಪ್ರತಿಷ್ಠಾಚಾರ್ಯರಾಗೆ ದ್ರೋಹಘರಟ್ಟ ಜಿನಾಲಯ ಪ್ರತಿಷ್ಠಾನಂತರಂ ದೇವರ್ ಕೊಡೆಯನಿಂದ್ರರ್ ಕೊಂಡುಪೋಗಿ ವಿಷ್ಣುನೃಪಾಲಂಗೆ ಬಂಕಾಪುರದೊಳ್ ಕೊಡುವ ಸಮಯದೊಳ್ ಸಮರಮಸಣನೆಂಬನಂ ಜಯಿಸಿ ಸಾಮ್ರಾಜ್ಯಮಂ ಕೊಂಬುದುಮಾತನ ಮಹಾದೇವಿ ಲಕ್ಷ್ಮೀದೇವಿಗೆ ಪುತ್ರೋತ್ಸವಮಾಗಲ್ ವಿಜಯೋತ್ಸವ ಪುತ್ರೋತ್ಸವದಿಂ ಸಂತುಷ್ಟನಾಗಿರ್ದ ವಿಷ್ಣುರಾಜಂಗೆ ಪಾರ್ಶ್ವಜಿನಪ್ರತಿಷ್ಠಾ ಗಂಧೋದಕಶೇಷೆಯಂ ಕುಡೆ ಇದಿರೆಳ್ದು ನಮಸ್ಕಾರದಿಂ ಗಂಧೋಧಕಶೇಷೆಯಂ ಭಕ್ತಿಯಿಂ ಕೊಂಡು ಸಂತೋಷದಿಂ ತನಗೆ ರಾಜ್ಯವಿಜಯಮಾದುದರಿಂದಾ ಜಿನಪ್ರತಿಮೆಗೆ ವಿಜಯಪಾರ್ಶ್ವದೇವರೆಂದುಂ ಪುತ್ರಂಗೆ ಶ್ರೀವಿಜಯ ನಾರಸಿಂಹನೆಂದುಂ ಪೆಸರಿಟ್ಟು ಕುಮಾರಂಗಭ್ಯುದಯನಿಮಿತ್ತಂ ಶ್ರೀವಿಜಯಪಾರ್ಶ್ವ ದೇವಂಗೆ ಚತುರ್ವಿಂಶತಿತೀರ್ಥಕರನಾಗತ ತ್ರಿಕಾಲಪೂಜೋಪಕರಣಾದಿಗಳ ಸಂಧಿನಾಡ ಜಾವಗಲ್ಲು ಮೊದಲಾದ ಗ್ರಾಮ ಸೀಮೆಗಳಂ ಶಾಸನದತ್ತಮಾಗೆ ಕುಡೆ ಸಂತೋಷದಿಂ ದಿಂದ್ರರ್ ಪೋದರಿತ್ತ ಹೊಯ್ಸಳದೇವರ್ ಗಂಗವಾಡಿ ತೊಂಬತ್ತಾರು ಸಾಸಿರ ನೊಳಂಬವಾಡಿ ಮೂವತ್ತಿರ್ಚ್ಛಾಸಿರ ಬನವಾಸಿ ಪನ್ನಿರ್ಚ್ಛಾಸಿರ ತೊಂಡನೂರು ಕೊಂಗಳ ನಾಡ ಮೆರೆವ ಅರುನೂರು ನಾಡೊಳ್ ದುಷ್ಟನಿಗ್ರಹ ಶಿಷ್ಟಪಾಲನೆಯಿಂದೇಕಚ್ಛತ್ರ ಛಾಯೆಯಿಂ ತಳಕಾಡ ಬೀಡಿನಲ್ಲು ಬಂಕಾಪುರದ ಬೀಡಿನಲ್ಲು ಸುಖದಿಂದಿಪ್ಪುದುಂ ಶ್ರೀಮನ್ಮಹಾಪ್ರಧಾನ ಸಂಧಿವಿಗ್ರಹಿ ದಂಡನಾಯಕ ಭಟ್ಟಮಯ್ಯನಾತನನುಜಂ ಸಮಸ್ತ ದೇಶಾಧಿಕಾರಿ ಭಾವರಾಜನಾತನ ಗುರುಸಂತಾನಂ

ಪಶ್ಚಿಮ ತೀರ್ಥದೊಳ್ ಗೌತಮರ ಸಂತಾನದೊಳ್ ಸಪ್ತರ್ಧಿಸಂಪನ್ನರುಂ ಶ್ರುತಕೇವಲಿಗಳ್ ತದನ್ವಯದೊಳ್ ಭೂತಬಲಿ ಪುಷ್ಪದಂತ ಭಟ್ಟಾರಕ ಏಕಸಂಧಿ ಸುಮತಿಭಟ್ಟಾರಕರಿಂದನಂತರ ಶ್ರೀವಾದಿರಾಜ ಶಾಂತಿಷೇಣ ಜಿನಸೇನ ಜಿತಷೇಣ ಮಲ್ಲಿಷೇಣ ಮಲಧಾರಿದೇವರಿಂ ಮತ್ತಮಕಳಂಕ ಸಿಂಹಾಸನಮನಳಂಕರಿಸಿದ ಶ್ರೀಪಾಲ ತ್ರೈವಿದ್ಯದೇವರಿಂ ಅನಂತವೀರ್ಯರಿಂ ವರ್ಧಮಾನದೇವರಿಂ ಗುಣಧರ ತ್ರೈವಿಧ್ಯ ದೇವರಿಂದಿಂತು ತನಗೆ ಗುರುಗಳಪ್ಪ ದ್ರವಿಳಾನ್ವಯದ ಪೆಸರುಮಂ ತನ್ನಾಳ್ದನ ಪೆಸರುಮಂ ತನ್ನನ್ವಯದ ಪೆಸರುಮಂ ನೆಗಳ್ದ ವೀರಮಹಾನುಭಾವಂ ಭಟ್ಟಿಮಯ್ಯಂ ಗಂಗಾನ್ವಯ ಗಗನದಿನೇಶನಪ್ಪ ಶಿವರಾಜನರಸಿ ಗಂಗಾದೇವಿಯರ ಪುತ್ರ ಮಾರವೀರಂಗೆ ಕಮಳಬ್ಬೆಯವರ್ಗೆ ಭಟ್ಟಿಮಯ್ಯ ಭಾವರಸನುಮೆಂಬ ಶೌರ್ಯವೀರ್ಯ ಪರಾಕ್ರಮಮುಳ್ಳರ್ ಬೆಳುಕೆರೆಯೊಳ್ ತ್ರಿಕೂಟ ಜಿನಾಲಯಮನೆತ್ತಿಸೆ ವಿಷ್ಣುಭೂಪಾಳಂ ಕೊಳಲಾ ಪುರದಿಂ ಬಂದು ಚೈತ್ಯಾಲಯಮಂ ನೋಡಿ ಆದೀಶ್ವರ ಶಾಂತೀಶ್ವರ ಪಾರ್ಶ್ವೇಶ್ವರಪ್ರತಿಮೆಗೆರಗಿ ಚಕ್ರೇಶ್ವರೀಮಹಾದೇವಿ ಪ್ರತಿಮೆಗಂ ಶಕವರುಷ ಸಾವಿರದರುವತ್ತ

(೧೦೬೦) ನೆಯ ಸಂದ ಪಿಂಗಳ ಸಂವತ್ಸರದ ಆಶ್ವೀಜ ಶುದ್ಧ ಏಕಾದಶಿ ಬುಧವಾರ ದೇವರ ಪ್ರತಿಷ್ಠೆಯಂ ಮಾಡಿಸಿ ಆರೆಧವಳನಾಡ ಬೆಳುಕೆರೆಯ ಗ್ರಾಮ ಗದ್ದೆಬೆದ್ದಲು ಮೊದಲಾಗೆ ಶಾಸನದತ್ತಮಾಗೆ ಕೊಟ್ಟನಂತು ಮತ್ತಂ ಶಕವರುಷ ಸಾವಿರದರುತ್ತವನೆಯ (೧೦೬೦) ಪಿಂಗಳ ಸಂವತ್ಸರದ ಪುಷ್ಯ ಶುದ್ಧ ದಶಮಿ ಆದಿತ್ಯವಾರ ಮರಿಯಾನೆ ದಂಡನಾಯಕನ ಪುತ್ರದ್ರೋಹಘರಟ್ಟ ಗಂಗಪ್ಪಭಾವರಸ ದಂಡನಾಯಕರ್ ಅತುಳ ಪುರುಷ ಮಹಾದಾನ ಉತ್ತಮ ನೆಲೆಯೂರು ಸಿಂಧಗೆರೆಯೊಳ್ ಮಾಡಿಸಿದ ಜಿನಾಲಯಕ್ಕೆ ಹೊಯ್ಸಳದೇವರ್ ಧಾರಾಪೂರ್ವಕ ಶ್ರವಣಾಂಗಿಹಳ್ಳಿಯ ಸೀಮೆಯೆಲ್ಲಮಂ ಕುಡಲ್ ಭರತದಂಡನಾಯಕಂ ಮಾಣಿಕಭಂಡಾರಿಗಳುಂ ಪ್ರಾಣಾಧಿಕಾರಿಗಳಾಗಿ ದಡಿಗದಕೆರೆ ಬಗ್ಗವಳ್ಳಿಯ ಪ್ರಭುತ್ವಮಂ ಪಡೆದು ತಮ್ಮನ್ವಯದಿಂ ಬಂದ ಸಿಂಧಗೆರೆಯೊಳಿರೆ ಇತ್ತಲ್ ನಾರಸಿಂಹಮಹೀನಾಥಂಗೆ ಶ್ರೀವೀರಬಲ್ಲಾಳಂ ಪುಟ್ಟಿ

ಮ || ಉದಯಂಗೆಯ್ದು ವಿರೋಧಿ ಭೂಭುಜ ಪುರಸ್ಸಂತಾನಮಂ ತೂಳ್ದಿ ತ
ನ್ನದಟಿಂ ಸಾಧಿಸಿ ವಿಶ್ವಭೂವಳಯಮಂ ಸಾಮ್ರಾಜ್ಯಲಕ್ಷ್ಮೀ ಮನೋ
ಮುದಮಂ ತಾಳ್ದು ಚಮೂಪಮಂತ್ರಿ ನಿಜವರ್ಗಶ್ರೀ ದಯಾಂಭೋತ್ಸಹಾ
ಭ್ಯುದಯಂಬೆತ್ತನತಿಪ್ರತಾಪ ದಿನಪಂ ಬಲ್ಲಾಳಭೂಪಾಳಕಂ

ಅಂತಸಹಾಯಶೂರ ಶನಿವಾರಸಿದ್ಧಿ ಗಿರಿದುರ್ಗಮಲ್ಲ ಬಲ್ಲಾಳ ಸಮಧಿಗತ ಪಂಚಮಹಾಶಬ್ದ ಮಹಾಮಂಡಳೇಶ್ವರ ದ್ವಾರಾವತೀಪುರಾಧೀಶಂ ಯದುಕುಲತಿಲಕ ವಸುಧಾಕರ ಚಕ್ರಕೂಟಕೋಟಿ ವಿವಿಧ ವಿಧಾನ ರಿಪುಜಲಧಿಬಡಬಾನಳ ಶೌರ್ಯ ಮೃಗರಾಜಕುಲಪಾಲನವಜ್ರದಂಡ ಮಲೆಪರೊಳ್ಗಂಡ ವಿವಿಧ ಯಾಚಕಜನ್ಯೈಚಿಂತಾ ಮಣಿ ಸಮ್ಯಕ್ತ್ವಚೂಡಾಮಣಿ ವಿವೇಕ ಕಮಲಾಸನಮೆಂದಿವು ಮೊದಲಾದ ನಾಮಾವಲಿ ಬಿರುದಾವಲಿಯಂ ತಲಕಾಡು ಕೊಂಗುಸಂಗಮ ಗಂಗವಾಡಿ ಮಳಂಬವಾಡಿ ಹುಲುಗೆರೆ ಬನವಾಸಿ ಹನುಗಲ್ಲು ಉಚ್ಚಂಗಿಗೊಂಡ ಭುಜಬಳವೀರ ಗಂಗನಸಹಾಯಶೂರ ಚಲದಂಕರಾಮಪ್ರತಾಪನೆನಿಸಿ ಶ್ರೀಮದ್ರಾಜಧಾನಿ ದೋರಸಮುದ್ರದ ನೆಲೆವೀಡಿನೊಳ್ ಸುಖಸಂಕಥಾವಿನೋದದಿಂ ರಾಜ್ಯಂಗೆಯ್ಯುತ್ತಮಿರ್ದೊಂದು ದಿವಸಂ ತನ್ನ ಎಂಟನೆಯ ದಳಪತಿಯಪ್ಪ ಶಿವಾಚಾರದ ಮಾಚಿರಾಜಂಗೆ ಕೊಳತೂರ ಸ್ಥಳದೊಳ್ ಕೆರೆಯಂ ಕಟ್ಟಿಸೆಂದು ಬೆಸನಿತ್ತೊಡಾತನ ಮನೋನಯನವಲ್ಲಭೆ ಶಾಂತವ್ವೆಯೆಂಬಳ್ ತಾನೆಯಧ್ಯಕ್ಷಳಾಗಿ ತಟಾಕಮಂ ಪೂರೈಸೆ ಬಲ್ಲಾಳನವಳ್ಗೆ ಪ್ರಧಾನಪದಮಂ ಕುಡೆ ತನ್ನ ಪ್ರಶಂಸೆಗೆ ಡೆಂಕಣಾಚಾರಿಯಿಂ ಶಾಂತಲೇಶ್ವರದೇವರ ಗುಡಿಯಂ ಕಟ್ಟಿಸಿ ಪ್ರತಿಷ್ಠೆಯಂ ಮಾಡಿ ಶಕಾಬ್ದ ಸಾವಿರದ ನೂರನಾಲ್ಕನೆಯ ಪ್ಲವಸಂವತ್ಸರದ ವೈಶಾಖ ಶುದ್ಧ ಪಂಚಮಿಯಂದು ಬಲ್ಲಾಳರಿಂ ಆ ದೇವರ್ಗಂ ತನ್ನ ಗುರುಗಳ್ಗಂ ಮಾನ್ಯಮಂ ಬಿಡಿಸಿದಳ್. ಹುಲುಗೆರೆಯೊಳ್ ಚೆನ್ನಸೋಮದೇವರ ನಿಲಯಮಂ ಹಂಪೆಯೊಳ್ ವಿರೂಪಾಕ್ಷಾಲಯಮನುದ್ಧರಿಸಿದಳ್. ಆ ತರುವಾಯ ಮಂತ್ರಿ ಚಂದ್ರಮೌಳಿಯ ಮಹಾಸತಿ ಲಕ್ಕಮ್ಮನೆಂಬವಳ್ ಬೆಳ್ಗುಳತೀರ್ಥದೊಳ್ ಬಸದಿಯಂ ಮಾಡಿಸಿ

ತನ್ನ ಸಂತತಿಯಂ ಶಾಸನದೊಳ್ ಬರೆಯಿಸಿ ಮಾನ್ಯಭೂಮಿ ಸೀಮೆಯಂ ಬಿಡಿಸಿದಳ್.

ಅದೆಂತೆಂದೊಡೆ ಶಂಭುದೇವನೆಂಬ ಶೈವಬ್ರಾಹ್ಮಣನಾತನರಸಿಯಕ್ಕಳೆಯವರ್ಗೆ ಚಂದ್ರಮೌಲಿಯೆಂಬಂ ಪುಟ್ಟಿ ವೀರಬಲ್ಲಾಳನ ಮಂತ್ರಿಯಾದನವಂಗೆ ಜೈನಶ್ರಾವಕಸುತೆ ಮದುವೆಯಾಗಿ ಜಿನಧರ್ಮದೊಳೆ ದಾನ ಪೂಜಾ ಶೀಲೋಪವಾಸದಿಂ ದಿನಮಂ ಸಲಿಸುತ್ತೆ ಪತಿಭಕ್ತೆಯಾಗಿ ಸೋಮನೆಂಬ ಮಗನಂ ಪಡೆದಳ್ ಅವಳನ್ವಯಂ ಮಾಸವಾಡಿ ಶ್ರಾವಕ ಶಿವೆಯನಾಯಕನಾತನರಸಿ ಚಂದವ್ವೆಯ ಮಗಂ ಬೊಮ್ಮದೇವಹೆಗ್ಗಡೆಯನುಜಂ ಭಾವೆಯನಾಯಕನನುಜೆ

ಸರಸಿರುಹವದನೆ ಘನಕುಚೆ
ಹರಿಣಾಕ್ಷಿ ಮದೋತ್ತ ಕೋಕಿಲಸ್ವನೆ ಮದವ
ತ್ಕರಿಗಮನೆ [ಯುಂ] ತಳೋದರಿ
ಧರೆಯೊಳ್ ಕಾಳಕ್ಕ ರೂಪಿಗಾಗರವಾದಳ್

ಆಕೆಯ ತಂಗಿ ಆಚಲದೇವಿಯು ಮಾಸವಾಡಿ ಹೇಮದೇವನೆಂಬರಸಂಗೆ ಮದುವೆಯಾಗಿರ್ದಳ್. ಆಕೆಯನುಜಂ ಸೋಮಣ್ಣನಾಯಕಂಗೆ ಶೀಲವತಿ ಬಾಚವ್ವೆಯರಸಿಯಾಗೆಯವರ ಮಗಂ ಚಾಮಣ್ಣನಾಯಕಂಗೆ ಮಾಚವ್ವೆಯರಸಿಗೆಯವನಿಂ ಕಿರಿಯ ಕುಮಾರನನುಜೆ ಆಚಲದೇವಿಯಾಕೆಯ ತಂಗಿ ಚಂದಮ್ಮಂ ಶಿವೆಯನಾಯಕನ ತಂಗಿ ಲಕ್ಕವ್ವೆಯೆಂಬಳ್ ಚಂದ್ರಮೌಲಿ ಸಚಿವಂಗೆ ಸತಿಯಾದಳ್. ಆ ಲಕ್ಕನಿಂದ ಬೆಳ್ಗುಳದೊಳ್ ಬಸದಿಯಂ ರಚಿಸಿ ಶಕವರುಷ ಸಾವಿರದ ನೂರ ನಾಲ್ಕನೆಯ (೧೧೦೪) ಪ್ಲವಸಂವತ್ಸರದ ಪುಷ್ಯ ಬಹುಳ ತದಿಗೆ ಶುಕ್ರವಾರ ಪ್ರತಿಷ್ಠೆ ಮಾಡಿಸಿದಳ್. ಆಕೆಯ ಸ್ವಗುರುಗಳ್ ನಯಕೀರ್ತಿ ದೇವರ್. ಆ ಕಾಲದೊಳ್ ಕಾಲದೋಷದಿಂ ಚತುರ್ಗಣದಾಚಾರ್ಯರ್ಗೆ ಪಕ್ಷಪಾತ ಪುಟ್ಟಿ ಒಬ್ಬರೊಳೊಬ್ಬರ್ ವಿರೋಧದಿಂದ ದೂಷಿಸಿ ಕಲಹಮಂ ಚರ್ಚಿಸುತ್ತಿರ್ದರ್. ಇತ್ತಲ್ ನಯಕೀರ್ತಿಗಳ್ ಪ್ರಸಿದ್ಧರಾಗಿ ತಪೋನಿಯತರಾಗಿರ್ದರವರ ಶಿಷ್ಯರಾರೆಂದೊಡೆ

ಮ || **ವರ ಸೈದ್ಧಾಂತಿಕ ಭಾನುಕೀರ್ತಿಮುನಿಪ ಶ್ರೀಮತ್ಪ್ರಭಾಚಂದ್ರದೇ**
ವರಶೇಷಸ್ತುತ ಮಾಘಣಂದಿಮುನಿ ರಾಜರ್ ಪದ್ಮನಂದೀಶ್ವರರ್
ಮೆರೆವಾ ಸನ್ನುತ ನೇಮಿಚಂದ್ರಮುನಿನಾಥಖ್ಯಾತರಾದರ್ ನಿರಂ
ತರರೀ ಶ್ರೀನಯಕೀರ್ತಿದೇವಮುನಿಪಾದಾಂಭೋರುಹಾರಾಧಕರ್

ಇವರ್ ಮೊದಲಾಗನೇಕ ಶಿಷ್ಯರವರೊಳ್ ಬಾಳಚಂದ್ರಮುನೀಂದ್ರರವರ ಶಿಷ್ಯಂ ನಾಗಚಂದ್ರನೆಂಬಂ ಜಿನಮುನಿತನಯ ಜಿನಾಕ್ಷರಮಾಲೆ ಮಲ್ಲಿನಾಥಪುರಾಣ ರಾಮಚರಿತ್ರೆ ಮೊದಲಾದ ವಸ್ತುಕಮಂ ರಚಿಯಿಸಿ ಅಭಿನವಪಂಪನೆನಿಸಿದನೀ ಪ್ರಕಾರದೊಳೆ ವೀರ ಬಲ್ಲಾಳರಾಯಂ ಶಿವಭಕ್ತನಪ್ಪ ತನ್ನನುಜ ಸಿಂಧುಬಲ್ಲಾಳನಂ ತೊಂಡನೂರಲ್ಲಿರಿಸಿ ತಾನುಂ ನೆಲೆವೀಡಿನೊಳ್ ರಾಜ್ಯಂಗೆಯ್ಯುತ್ತಮಿರಲ್

ಅತ್ತಲ್ ಡಿಳ್ಳೀಪಟ್ಟಣದೊಳ್ ಸೋಮವಂಶದವರ ಪರಂಪರೆ ಆಳುತ್ತಿಪ್ಪಲ್ಲಿಯೊಬ್ಬ ಪಕೀರಂ ಮಕ್ಕಾದಿಂದ ಅನೇಕ ವಿದ್ಯೆಗಳಂ ಸಾಧಿಸಿಬಂದು ಪಾದಶಾಯಿಗೆ ಪಟ್ಟಮಂ ಮಾಳ್ಪೆನೆಂದು ಒಬ್ಬ ಕುರುಬರ ಹುಡುಗನ ಲಕ್ಷಣಮಂ ನೋಡಿಯಾತಂಗಪ್ಪುದೆಂದು ತುರುಕನಂ ಮಾಡಲುದ್ಯೋಗಿಸೆ ಆತಂ ಒಪ್ಪದೆ ಮುರಾಡಮಂ ಮಾಡಿದೊಡೆ ತನ್ನ ಯಷ್ಟಿಯಿಂದಾತನಂ ಇಪ್ಪತ್ತೊಂದು ವೇಳೆ ಪೊಡೆಯೆ ಕಾಲುಮುರಿದು ಕುಂಟನಾಗಲವನಂ ಮುಸಲಮಾನನಂ ಮಾಡಿ ಕರೆದೊಯಿವಲ್ಲಿ ನಿಕ್ಷೇಪ ಸಿಕ್ಕುವುದುಂ ಬಲಮಂ ಕಟ್ಟಿ ಚತುರಂಗಮಂ ಕೂಡಿಸಿಕೊಟ್ಟು ಡಿಳ್ಳಿಗೆ ದಾಳಿಯನಿಟ್ಟು ಡಿಳ್ಳೀಶ್ವರನಂ ಪಿಡಿದು ಎರಡು ಕಣ್ಗಳಂ ಕೀಳಿಸಿ ಸೆರೆಯೊಳಿಟ್ಟು ತಿಮಿರಲಂಗುಪಾದಶಾಯನೆಂದು ಪೆಸರಿಟ್ಟು ಡಿಳ್ಳೀಪಟ್ಟಣಮಂ ಕಟ್ಟಿ ರಾಜ್ಯಮನಾಳುತ್ತಿರೆ ಕೆಲವಾನುದಿವಸ ಪೂರ್ವದರಸಿನ ಮಂತ್ರಿ ತನ್ನರಸಂಗೆ ಶಬ್ದಗುರಿಸಾಧನೆಯುಂಟೆಂದು ಪೇಳೆ ಪಾದಶಾಯಿಯಾತನಂ ಕರೆಸಿ ಬೇರೊಂದೆಡೆಯೊಳಿರಿಸಿ ಬಿಲ್ಲಂಬುಗಳಂ ಕೊಟ್ಟು ಮತ್ತೊಬ್ಬನಂ ಧ್ವನಿಯ ಮಾಡೆಂದು ಕೆಲದೂರದೊಳಿರಿಸಿ ತಾನು ನೋಡುತ್ತುಂ ಶಬ್ದಮಂ ಮಾಡೆನೆಯದಂ ಕೇಳ್ದು ಪಾದಶಾಯಂಗೆ ಗುರಿಯ ಪೊಡೆಯ ಪಾದಶಾಯಿ ಸಾಯ್ವುದುಂ

ಮತ್ತೊರ್ವಂ ಬೀದಿಯೊಳ್ ಬಪ್ಪಂಗೆ ಪಟ್ಟಮಂ ಕಟ್ಟಿ ರಾಜ್ಯಮುಂ ಸಾಧಿಸುತ್ತ ಮಿರಲಂತೈದಾರು ಪಟ್ಟಮಾಗಲ್ ಮತ್ತಂ ಜನ್ನುಪಾದಶಾಯಿಯೆಂಬಂ ಸಕಲ ದೇಶಮೆಲ್ಲಮಂ ವಶಂ ಮಾಡಿ ಕಪ್ಪಮಂ ಕೊಂಡುಬರುವಲ್ಲಿ ಹದಿನೆಂಟು ಮಂದಿ ವಜೀರರ್ ತಮ್ಮ ತಮ್ಮ ಚತುರಂಗಸಮೇತ ಬಂದು ಒಂದು ದಿನದೊಳ್ ೧೦೦ ಗಡಿಯಂ ಕಟ್ಟಿಕೊಂಡು ಬಂದರೆ ನೀವು ಮೆಚ್ಚಿದ ಇನಾಮು ಕೊಟ್ಟಪೆನೆಂದು ಭಾಷೆಯಂ ಮಾಡಿದೊಡದೇಮೇರೆ ಸಾಧ್ಯಮಂ ಮಾಡಿಕೊಂಡು ಬಂದು ವರುಷ ೧ಕ್ಕೆ ಎರಡೂವರೆ ಘಳಿಗೆ ಈ ಡಿಳ್ಳಿಪಟ್ಟಣಮಂ ಸೂರೆಗೊಂಬಂತೆ ಅಪ್ಪಣೆ ಬೇಡಿಕೊಂಡು ಎರಡೂವರೆ ಘಳಿಗೆ ಸೂರೆಮಾಡಿಕೊಳುತ್ತಾ ನಾವು ಮಾಡುವ ಸೂರೆಯನೆಂದಿಗೆ ಯಾವವನಾದರೂ ತಡೆವವ ಸಮರ್ಥನಾದಂದಿಗೆ ಬಿಟ್ಟುಬಿಡುತ್ತೇವೆಂದು ಎರಡೂವರೆ ಘಳಿಗೆ ಪ್ರತಿವರುಷಂ ಸೂರೆಯಂ ಮಾಡುತ್ತಿರಲಾ ಪಾದಶಾಯಿಗೆ ವರನಂದಿಯೆಂಬ ಮಗಳ್ ಅವರು ಮಾಳ್ಪ ಸೂರೆಯಂ ಸೈರಸಲಾರದೆ ಈ ಅಪಖ್ಯಾತಿಯನಾವ ಪುರುಷಂ ನಿಲಿಸುವನಾತಂಗಲ್ಲದೆ ಮದುವೆಯಾಗೆನೆಂದು ಪ್ರತಿಜ್ಞೆಯಂ ಮಾಡಿದಳ್.

ಇತ್ತಲ್ ಶ್ರೀವೀರಬಲ್ಲಾಳರಾಯ ವೀರ್ಯಶೌರ್ಯ ಪರಾಕ್ರಮಮಂ ಕಂಡು ದಕ್ಷಿಣ ಪಾದಶಾಯಿ ಎಂಬುದಾಗಿ ಡಿಳ್ಳಿಗೆ ಸಮಾಚಾರಂ ಪುಟ್ಟೆಯಾತನಂ ನೋಡಲ್ ಮೂರು ಲಕ್ಷ ಕುದುರೆಯಂ ಕಳುಹಿಸಿ ಬರವೇಳ್ಪುದುಂ ತನ್ನ ಚತುರಂಗಮಂ ಬೆರಸು ಡಿಳ್ಳಿಯ ಸಮೀಪದೊಳ್ ಬೀಡಂ ಬಿಟ್ಟಿರಲಲ್ಲಿ ಸೂರೆಸಮಯವಾಗಲ್ ಪೊರಗಣಿಂ ಪಟ್ಟಣಕ್ಕೆ ಬರುತ್ತಿಪ್ಪ ಬಲಮಂ ತಡೆದು ಎರಡೂವರೆ ಘಳಿಗೆ ನಿಲ್ಲಿಸೆ ಅವರ ಪ್ರತಿಜ್ಞೆ ಸಂದು ಸೂರೆ ನಿಂತುಹೋಯಿತು. ಆ ತರುವಾಯ ಪಾದಶಾಯಿ ವೀರತ್ವಕ್ಕೆ ಮೆಚ್ಚಿ ಸಂತೋಷದಿಂ ಬರಹೇಳೆಯಾತನ ಬಳಿಗೆ ಬರತಕ್ಕವನಲ್ಲೆಂದು ನಿರಾಕರಿಸುವುದುಂ ಮಂತ್ರಿಗಳುಪಾಯದಿಂ ಕರೆದೊಯ್ದು ಬಹುಮಾನಮಂ

ಮಾಡಿ ನಿನ್ನ ರಾಜ್ಯಮಂ ಪಾಲಿಸುತ್ತಿದ್ದಾರೆ. ನಮ್ಮ ಪಾದಶಾಯಿಗೆ ಸಲಾಮ ಮಾಡೆಂದು ಪೇಳ್ವುದುಂ ನೀಚನೀತಂಗೆ ಕೈಯನೆತ್ತೆನೀತನ ಕೆಳಗೆ ರಾಜ್ಯವಾಳುವವನಲ್ಲ. ಇವನಂ ನೆಲಕ್ಕೆರಗಿಸಿ ಕೊಂದುಹಾಕದೆ ಮಾಣೆನೆಂದು ನಿಷ್ಠುರವಚನಮನಾಡೆ ಕೋಪಿಸಿ ಇವನಂ ಶೂಲದೊಳಿಕ್ಕಿ ಶಿರಚ್ಛೇದನಮಂ ಮಾಡೆಂದಾಜ್ಞೆಗೊಟ್ಟಲ್ಲಿ ತಪ್ಪಿದನೆಂದು ಸಮೀಪಕ್ಕೊಯ್ದು ನಿನಗೆ ಮೃತ್ಯು ಬಂದಿದೆ ಇನ್ನಾದರೂ ಪಾದಶಾಯಿರಿಗೆರಗಿ ಜೀವಿಸೆಂದೆಲ್ಲರ್ ಪೇಳೆ ಬಾಯೊಳಿದ್ದ ತಂಬುಲಮಂ ತೂಯೆಂದಾತನ ಮುಂದೆ ಉಗುಳಲಾತಂ ಶೂಲದೊಳಿಕ್ಕೆಂದು ಎದ್ದು ಪೋಗಲಿತ್ತ ಮಂತ್ರಿ ಪ್ರಧಾನಿಗಳೆಲ್ಲರುಂ ಆಳೋಚಿಸಿ ಇಂತಪ್ಪ ಮಹಾವೀರಂ ಪುಟ್ಟಲಾರಂ ಇನ್ನೊಂದು ಅಪ್ಪಣೆಯಾಗುವುದರಿಂ ಮುನ್ನಮೆ ಹೇಳಿಕೊಳ್ವಮೆಂದೆಲ್ಲರುಂ ಪೋಗಿ ಪಾದಶಾಯಿಗೆ ಹೇಳಿಕೊಳ್ಳಲಾಗಿ ನಮ್ಮಾಜ್ಞೆಯಂ ಮೀರಲಾಗದು. ಆದೊಡವನ ಹಸ್ತಪಾದಚ್ಛೇದನಮಂ ಮಾಡಿಮೆನೆ ವರನಂದಿ ತಂದೆಗೆ ಹೇಳಿಕೊಂಡದ್ದರಿಂದ ದಕ್ಷಿಣಹಸ್ತದ ಕಿರುವೆರಲಂ ಕೊಯ್ದು ಕಳುಹಿಸಿದ ಕಾರಣ ಬೆಟ್ಟವರ್ಧನರಾಯನೆಂಬ ಪೆಸರಾಗೆ ರಾಜ್ಯಮನಾಳುತ್ತುಮಿರಲ್.

ಇತ್ತ ದ್ರಾವಿಡದೇಶದ ವೈಷ್ಣವದ್ವಿಜಸುತಂ ರಾಮಾನುಜನೆಂಬಂ ಶಬ್ದ ತರ್ಕ ಕಾವ್ಯ ನಾಟಕಾದಿ ಸಕಲ ಶಾಸ್ತ್ರಮಂ ಕಲ್ತು ವೇದಪುರಾಣಮಂ ಚೆನ್ನಾಗಿ ವಿಚಾರಿಸಿ ಸಂದೇಹಗ್ರಸ್ತದಿಂ ದರ್ಶನ ಮೋಹನೀಯ ಏಕಾಂತ ಮಿಶ್ರದಿಂ ಸರ್ವೋತ್ಕೃಷ್ಟತೆಯಿಂ ಮಹಾವಿಷ್ಣುವೊರ್ವನೆ ದೇವನೆಂದು ವೀರವೈಷ್ಣವತ್ವಮಂ ಪ್ರಕಟಿಸಿಯನೇಕ ಗ್ರಂಥಕರ್ತೃವಾಗಿ ಆನೆಯಟ್ಟಿಬಂದರು ಶಿವಾಲಯಮಂ ಪುಗಲಾಗದೆಂದು ಐನೂರ್ವರ್ ಶಿಷ್ಯರ್ಗೆಲ್ಲಮುಪದೇಶಂಗೆಯ್ದು ಶ್ವೇತಚ್ಛತ್ರ ಹಗಲುದೀವಟಿಗೆ ಮುಂತಾದ ಬಿರುದು ವೆರಸಿ ವಿದ್ಯಾನಗರಿಯೊಳ್ ಬರುವಲ್ಲಿ ಅಲ್ಲಿರ್ದ ಸ್ಯಾದ್ವಾದವಾದಿಗಳ್ ತಡೆದುವಾದದಿಂ ಸೋಲಿಸಿ ಬಿರುದುಗಳಂ ಕಳೆದುಕೊಂಬುದುಂ ವಿಷಣ್ಣಮನದಿನತಿ ಚಿಂತಾಕ್ರಾಂತನಾಗಿ ಪೋಗಿ ಸ್ವಗೃಹದೊಳನ್ನಪಾನಾದಿಗಳಂ ಬಿಟ್ಟು ಒರಗಿಪ್ಪುದುಂ ತತ್ಪುತ್ರಿಯರಪ್ಪ ಭಂಗಾರೆ ಸಿಂಗಾರೆಯೆಂಬವರ್ ಭರತಶಾಸ್ತ್ರದಿಂ ನಿಪುಣೆಯರಾಗಿ ಸಂಗೀತ ಸಾಹಿತ್ಯ ವಿದ್ಯಾವಿಶಾರದೆಯರಪ್ಪರ್ ಬಂದು ತದ್ವಾರ್ತೆಯೆಲ್ಲಮಂ ಕೇಳ್ದು ತಮ್ಮ ತಂದೆಯಂ ಸಂತೈಸಿ ಜೈನರೆಲ್ಲರಂ ಶ್ರೀವೈಷ್ಣವರಂ ಮಾಳ್ಪ ಕಜ್ಜಮನೆತ್ತಿಕೊಂಡು ಕುಂಟಸಿಂಗರಿಯಂ ಕೂಡಿಕೊಂಡು ಹೊಯ್ಸಳದೇಶದ ಬಲ್ಲಾಳನ ಬೀಡಂ ಪೊಕ್ಕು ತಮ್ಮ ಸೌಂದರ್ಯ ರೂಪುಲಾವಣ್ಯ ವಿದ್ಯಾಪ್ರೌಢಿ[ಮೆಯಂ] ತೋರಿಸುತ್ತುಂ ಇರಲಾ ಬಲ್ಲಾಳನವರ ವಿದ್ಯಕ್ಕಂ ಗಾಡಿಗಮನಕ್ಕಂ ಆಶ್ಚರ್ಯಂಬಟ್ಟು ಅತ್ಯಂತ ಪ್ರೀತಿಯಿಂ ಮನ್ನಿಸಿ ಅನವರತಮವರ ವಿದ್ಯಮಂ ಕೇಳುತ್ತುಮವರಂ ಸಮ್ಯಕ್ತ್ವಕ್ಕೆ ತರಲೆಂದು ಜೈನೋಪಾಧ್ಯಾಯರಿಂ ಜಿನಾಗಮ ಪುರಾಣ ಸಾಗರನಗಾರ ಧರ್ಮಂಗಳನುಪದೇಶಂಗೆಯಿಸುತ್ತಿರಲಾ ಕಾಲದೊಳೆ ಕನ್ನಡ ಪುರಾಣಂಗಳಂ ಸ್ಥಳಾಂತರಂಗಳೊಳ್ ಕನ್ನಡ ಕವಿಗಳ್ ಪೇಳ್ದರ್. ಅವರೊಳ್ ಅಗ್ಗಳಕವಿ ಕವಿರನ್ನ ಹೊನ್ನ ಜನ್ನುಗ ಕರ್ಣಪಾರ್ಯ ಮಧುರ ರಾಜಹಂಸ ಬಂಧುವರ್ಮ ನಾಗವರ್ಮ ಕೇಶವ ನೇಮಿಚಂದ್ರ ಮೊದಲಾಗನೇಕ ಕವಿಗಳ್ ಕರ್ಣಾಟಭಾಷೆಗಳಿಂ ಪೇಳ್ದರ್ ಬಲ್ಲಾಳರಾಯನ ಸಾಮಂತರ್ ಕ್ಷೇಮಂಕರ ನಾಯಕ ಪದ್ಮನಾಭ ದಾಮೋದರಾದಿಗಳ್

ಪುರಾಣಂಗಳಂ ಮಾಡಿಸಿದರ್. ನಯಸೇನಾಚಾರ್ಯರ್ ದಿಗಂಬರದಾಸ ನೂತ್ನ ಕವಿತಾವಿಳಾಸದಿಂ ಧರ್ಮಾಮೃತದ ಕಥೆಯಂ ಪೇಳ್ದರ್. ಕಾದಂಬರಿಯೆಂಬ ಶೃಂಗಾರಕಾವ್ಯಮಂ ಮಾಡಿ ದೊರೆಯಂ ಮೆಚ್ಚಿಸಿ ಆನೆಯ ಮೇಲೇರಿಸಿ ಬಪ್ಪಲ್ಲಿ ನೇಮಿಚಂದ್ರಕವಿ ತಡೆದು ಶೃಂಗಾರಮಪ್ಪ ಲೀಲಾವತಿಯಂ ರಚಿಸಿ ಸಭೆಯೊಳೋದಿಸೆ ಕಿರುಜವ್ವನರಪ್ಪ ಸ್ತ್ರೀಪುರುಷರ್ಗೆ ಕಾಮರಸಮೊಸರೆ ಮೆಚ್ಚಿ ಕಾದಂಬರೀಕಾವ್ಯ ಪುಸ್ತಕಮಂ ಸುಟ್ಟು ಲೀಲಾವತಿಗೆ ಕಪ್ಪನಿಡುವಲ್ಲಿ ಕೇಳಿಕೊಂಡು ಮೊದಲ ಒಂದೋಲೆಯಂ ಸುಡಿಸಿ ಲೀಲಾವತಿಗೆ ಕಪ್ಪನಿಡಿಸಿದರ್.

ಅಮರಕೀರ್ತಿರಾವಳಯತಿಯರ ಶಿಷ್ಯಂ ವೃತ್ತವಿಳಾಸನೆಂಬೊಂ ಸಂಸ್ಕೃತ ಧರ್ಮಪರೀಕ್ಷೆಯಂ ವಸ್ತುಕಮಾಗಿ ಮಾಡಿದಂ ಕವಿಕೇಶವಂ ಕರ್ಣಾಟಕ ಶಬ್ದಮಂಜರಿಯಂ ರಚಿಸದಂ ನಾಗವರ್ಮಂ ಕನ್ನಡ ಛಂದಸ್ಸುಮಂ ಮಾಡಿದಂ ಮತ್ತಂ ಸುಧಾಪುರದೊಳ್ ಭಟ್ಟಾಕಲಂಕಸ್ವಾಮಿಗಳ್ ಶಾಕಟಾಯನ ಜೈನೇಂದ್ರ ಕೌಮಾರ ಮೊದಲಾಗೆ ನವವ್ಯಾಕರಣಮುಮಂ ಅಮರ ಧನಂಜಯ ವಿಶ್ವವೈಜಯಂತಿ ರತ್ನಮಾಲೆ ಶಬ್ದಮಾಲೆ ರಭಸಕೋಶ ಮೊದಲಾದ ಪದಿನೆಂಟು ನಿಘಂಟುಗಳಂ ಕುವಲಯ ಮೊದಲಾದ ಅಲಂಕಾರಗಳಂ ರತ್ನಮಂಜೂಷೆ ವೃತ್ತರತ್ನಾಕರಂ ಮೊದಲಾದ ಛಂದಸ್ಸುಗಳಂ ಭರತಾದಿ ನೀತಿಶಾಸ್ತ್ರಮಂ ಸ್ವಸಮಯ ಪರಸಮಯ ಪುರಾಣಾಗಮ ತತ್ತ್ವಂಗಳಂ ಆಯುರ್ವೇದ ಶಿಲ್ಪ ವಾಸ್ತುಶಾಸ್ತ್ರಮಂ ಫಲಭಾಗೆ ಪ್ರಶ್ನಭಾಗೆ ಜಾತಕ ಭಾಗೆಯುಳ್ಳ ಜ್ಯೋತಿಶ್ಶಾಸ್ತ್ರಮಂ ಆದಾನ ನಿದಾನ ಚಿಕಿತ್ಸಾರೂಪ ವೈದ್ಯಶಾಸ್ತ್ರಮಂ ಇಂತನೇಕವಾದ ಶಾಸ್ತ್ರಂಗಳಂ ಕಲ್ತು ಮಹಾವಿದ್ವಾಂಸರೆನಿಸಿ ಪ್ರಾಕೃತ ಸಂಸ್ಕೃತ ಮಾಗಧ ಶೂರಸೇನ ಅಪಭ್ರಂಶಮೆಂಬ ಷಡ್ಭಾಷಾಕವಿಗಳಾಗಿ ಕರ್ಣಾಟಕ ವ್ಯಾಕರಣಮಂ ರಚಿಸಿ ಕೀರ್ತಿಯಂ ಪಡೆದರ್. ದೀಪಂಗುಡಿಯಿಂದ ಬಂದ ನವಗೋತ್ರದ ಜೈನವಿಪ್ರರೊಳ್ ಭಾರದ್ವಾಜಗೋತ್ರಜರ್ ಅರಿಕುಠಾರ ತೆರಕಣಾಂಬ ಮೊದಲಾದವರೊಳ್ ನಿಂತರ್, ಶ್ರೀವತ್ಸಗೋತ್ರದ ಪಾರ್ಶ್ವಪಂಡಿತರ ಮಕ್ಕಳ್ ಚಂದ್ರಪಾರ್ಯ ಚಂದ್ರನಾಥ ಚಂದ್ರಣಾರ್ಯ ಮೊದಲಾಗೆ ಎಣ್ಬರಾದರ್. ಆ ಚಂದ್ರಪಾರ್ಯರ ಕುಮಾರರ್ ಮೂವರೊಳ್ ಮಧ್ಯಮನಾದ ಬ್ರಹ್ಮಸೂರಿಯುಂ ಅನೇಕ ಶಾಸ್ತ್ರಾವಲೋಕನಂಗೆಯ್ದು ಮಹಾವಿದ್ವಾಂಸನಾಗಿ ತ್ರೈವರ್ಣಿಕಾಚಾರಮೆಂಬ ಗ್ರಂಥಮಂ ರಚಿಸಿದರ್. ಮತ್ತಂ ಪೂರ್ವದೊಳ್

ವೃ || ವೀರಾಚಾರ್ಯ ಸುಪೂಜ್ಯಪಾದ ಜಿನಸೇನಾಚಾರ್ಯ ಸಂಭಾಷಿತೋ
ಯಃ ಪೂರ್ವಂ ಗುಣಭದ್ರಸೂರಿ ವಸುನಂದೀಂದ್ರಾದಿನಂದ್ಯೂರ್ಜಿತಃ
ಯಶ್ಚಾಶಾಧರ ಹಸ್ತಿಮಲ್ಲಗದಿತೋ ಯಶ್ಚೈಕ ಸಂಧೀಡಿತಃ
ತೇಭ್ಯಶ್ಚಾಹೃತಸಾರ ಆರ್ಯರಚಿತಃ ಸ್ಯಾಜ್ಜೈನಪೂಜಾಕ್ರಮಃ ||

ಇಂತು ಆಚಾರ್ಯೋಕ್ತವಾದ ಜಿನಪ್ರತಿಷ್ಠಾಪೂಜಾಕ್ರಮಮುಳ್ಳ ಸಂಹಿತೆಯಂ ರಚಿಸಿದರ್. ಆತನ ಜಾಮಾತೃ ತ್ರಿಕದಂಬಪುರದೊಳ್ ದೇವಪ್ಪಗಳ ಮಧ್ಯಮ ಪುತ್ರಂ ನೇಮಿಚಂದ್ರನೆಂಬೊಂ ಅಭಯಚಂದ್ರಸೂರಿಗಳಲ್ಲಿ ಸಕಲಾಗಮಂಗಳಂ ಕಲ್ತು ಪ್ರತಿಷ್ಠಾದಿ ಶಾಸ್ತ್ರಮಂ ಮಾಡಿ

ತುಳುವದೇಶದೊಳ್ ಶ್ರಾವಕರ್ ಜಿನಾಲಯಗಳಂ ರಚಿಸಿ ಪ್ರತಿಷ್ಠೋತ್ಸವಕ್ಕೆ ಚತುರ್ಗಣದಾಚಾರ್ಯರ್ಗಳುಂ ಬಂದರಲ್ಲಿಗೆ ನೇಮಿಚಂದ್ರಂ ತಾಂ ರಚಿಸಿದ ಪ್ರತಿಷ್ಠಾತಿಲಕಮಂ ಕೊಂಡುಪೋಗಿ ಪೇಳ್ವುದುಮವರುಂ ಆ ಶಾಸ್ತ್ರಮಂ ವಿಚಾರಿಸಿ ಅತ್ಯಂತ ಸಂತೋಷಂಬಟ್ಟು ಉಪಾಧ್ಯಾಯಪಟ್ಟಮಂ ಕಟ್ಟಿ ಮನ್ನಣೆಯಂ ಮಾಡಿದರ್.

ಶ್ಲೋ || ವಿಹಾಯ ವಿಷ್ಣುಧಾತಾತಾ ನೇಮಿಚಂದ್ರೇಣ ಸಂಗತಿಮ್
ಶ್ರೀವಾಚಾ ಶಂಭುರಾಲೋಕ್ಯಾ ದೇಹಾರ್ಧೀಕೃತಪಾರ್ವತಿಃ ||
ನೇಮಿಚಂದ್ರಸ್ಸಮಾಯಾತಿ ಸ್ಯಾದ್ವಾದವನಕೇಸರೀ
ಪಲಾಯಧ್ವಂ ಪಲಾಯಧ್ವಂ ರೇ ರೇ ತಾರ್ಕಿಕ ದಿಗ್ಗಜಾಃ ||

ಮತ್ತಂ ಛತ್ರತ್ರಯಪುರದ ಚಂದ್ರನಾಥಾದಿ ಸುತರ್ ಕನಕಗಿರಿಯೊಳ್ ನಿಂತರ್. ಆ ಕಾಲದೊಳೆ ಪರಸಮಯಂಗಳ್ ವೈದ್ಯ ಜ್ಯೋತಿಷಾದಿ ಶಾಸ್ತ್ರಮಂ ರಚಿಸಿದರ್. ಈ ಪ್ರಕಾರದೊಳಿರುತ್ತಿರಲತ್ತ ಡಿಳ್ಳಿ ಪಾದಷಾಹಿ ತನ್ನ ಮಗಳಂ ಬಲ್ಲಾಳಂಗೆ ಕುಡಲ್ ಕರೆಯಬರೆ ತನ್ನ ಖಡ್ಗಮಂ ಕೊಟ್ಟು ಕಳಿಪುವುದುಂ ಆ ಖಡ್ಗಕ್ಕೆ ಧಾರೆಯನೆರೆದು ಆಪ್ತರಂ ಕೂಡಿಕೊಟ್ಟು ಅನೇಕ ಬಳುವಳಿಗಳನಿಪ್ಪತ್ತೈದು ಒಂಟೆಯ ಮೇಲೆ ಸಾಗಿಸಿ ಕೊಟ್ಟು ಅಶ್ವ ಗಜ ರಥ ಪದಾತಿಗಳ್ವೆರಸು ವರನಂದಿಕುಮಾರಿಯಂ ಬಲ್ಲಾಳನಲ್ಲಿಗೆ ಕಳುಹಿಸಲವಳ್ಗೆ ಒಂದರಮನೆಯಂ ಕಟ್ಟಿಸಿಕೊಟ್ಟನು. ಆ ಭಂಗಾರೆ ಸಿಂಗಾರಮ್ಮನೆಂಬೀರ್ವರು ವೀರಬಲ್ಲಾಳನೊಳ್ ಅತ್ಯಂತ ದಯಾರಸಕ್ಕೆ ಪಾತ್ರರಾಗಿ ನಮ್ಮ ಗುರುಗಳಪ್ಪ ರಾಮಾನುಜರಂ ಬರಿಸಿಮೆಂದು ಪೇಳಿಕೊಂಡು ವೈಭವದಿಂದಿದಿರ್ವೋಗಿ ಭಕ್ತಿಪೂರ್ವಕಂ ಕಂಡು ಸೇವೆಯಂ ಮಾಡುತ್ತುಮಿರಲೊಂದು ದಿವಸ ಮಧ್ಯಾಹ್ನಕಾಲದೊಳುಪ್ಪರಿಗೆಯ ಮೇಲಣ ನೆಲೆಯೊಳೀರ್ವರಂಗನೆಯರೊಡನೆ ವಿದ್ಯಾವಿನೊದದೊಳಿಪ್ಪ ವೇಳೆಯೊಳುಪವಾಸದ ಪಾರಣಾನಿಮಿತ್ತಂ ಜೈನಮುನಿಗಳ್ ಬೀದಿಯೊಳ್ ಈರ್ಯಾಸಮಿತಿಗೂಡಿ ಚಂದ್ರಗತಿಯಿಂ ಬರುತ್ತಿರಲವರನಾರೆಂದರಿಯದಂತೆ ರಾಯನಂ ಬೆಸಗೊಳೆ ನಮ್ಮ ಗುರುವೆನೆ ನಿಮ್ಮ ಗುರುವಾದಡೆ ನೀನೆ ಪೋಗಿ ನಿಲಿಸೆ ಭಿಕ್ಷೆಯ ಮಾಳ್ಪನೆ? ಆತ ನಿನ್ನ ಗುರುವಲ್ಲೆಂದು ವಾಗ್ವಾದಂ ಪುಟ್ಟಿ ಈ ಗುರು ನಿನ್ನ ಕೈಯಿಂ ದಾಹಾರಂಗೊಂಡರೆ ನಾವು ನಿಮ್ಮ ಜಿನಮತಕ್ಕೆ ಬಪ್ಪೆವಲ್ಲದೊಡೆಮ್ಮ ಗುರುವಿಂಗೆ ಶಿಷ್ಯನಾಗಿ ವೀರವೈಷ್ಣವನಪ್ಪುದೆಂದೋರೊರ್ವರೊಳ್ ಭಾಷೆಯಾಗೆ ಶೀಘ್ರದಿಂ ಶುಚಿರ್ಭೂತನಾಗಿ ಅರಮನೆ ಬಾಗಿಲಲ್ಲಿರ್ದು ಮುನೀಂದ್ರರಂ ಪ್ರದಕ್ಷಿಣಂಗೈದು "ತಿಷ್ಠತಿಷ್ಠ ಭ್ರಾಮ[ಣೀ]ಯಾಕಾರಣಂ ಭವತು" ಎಂದು ಸುವರ್ಣದ ಗಿಂಡಿಯಿಂದ ಹಸ್ತೋದಕಮಂ ಬಿಡುವಾಗಲವನ ಹೀನಾಂಗಮಂ ಕಾಣಲೊಡನೆ ಚರ್ಯಾಂತರಾಯಮಾಗಿಯರಣ್ಯಕ್ಕೆ ಪೋಪುದುಂ ಪರಿಜನಂಬೆರಸು ಪೋಗಿಯನೇಕ ತೆರದಿಂ ಪೇಳ್ದೊಡಂ ಬಾರದಿಪ್ಪುದುಂ ಜೈನಮತಂ ಮುಳುಗುತ್ತಿದೆಯೆಂದು ಕೋಪಂ ಪುಟ್ಟಿ ನುಡಿವುದುಂ ನ ಹಿ ಭೇಕೇ ಮೃತಿಂ ಯಾತೇ ಸಮುದ್ರಃ ಪೂತಿಗಂಧಿತಾ ಎಂಬುದರಿಂ ನಿನ್ನರ್ಥಿಗಾಗಿ ಹಿಡಿದ ವ್ರತಭಂಗಮಾಗೆ

ದುರ್ಗತಿಗೋಪೆನೆಲ್ಲೆಂದು ನಿರಾಕರಿಸುವುದುಂ ಕ್ರೋಧದಿಂ ಜೈನಮತದ್ವೇಷಿಯಾಗಿ ಬರೆ ಸ್ತ್ರೀಯರ್ ತಮ್ಮ ಮನೋಭೀಷ್ಟಂ ಸಂದುದೆಂದು ಸಂತೋಷಂಬಡೆ ರಾಮಾನುಜರಲ್ಲಿಗೆಯ್ದಿ ಸಾಷ್ಟಾಂಗಪ್ರಣತನಾಗಿ ಚಕ್ರಾಂಕಿತ ಮುದ್ರೆಯನೊತ್ತಿಸಿಕೊಂಡವರಿಂ ತತ್ತ್ವೋಪದೇಶಂಗೊಂಡು ದ್ವಾದಶನಾಮಧರನಾಗಿ ತನ್ನಂ ಪೊರ್ದಿದ ಬ್ರಹ್ಮ ಕ್ಷತ್ರಿಯ ವೈಶ್ಯ ಶೂದ್ರಾದಿಗಳೆಲ್ಲರಂ ವೀರವೈಷ್ಣವರಂ ಮಾಡಿ ಕೆಲಂಬರೊಡಂಬಡದಿರ್ದವರಂ ಬಲಾತ್ಕಾರದಿಂ ನಿಗ್ರಹಿಸಿ ವಿಷ್ಣುಭಕ್ತರಂ ಮಾಡಿಸುತ್ತೆ ತೊಂಡನೂರು ಸ್ಥಳದಲ್ಲಿದ್ದ ಏಳುನೂರೆಂಬತ್ತು ಬಸ್ತಿಯಂ ಕೀಳಿಸಿ ಸಿಂಧುಬಲ್ಲಾಳಂ ಕೆರೆಯಂ ಕಟ್ಟಿಸಿ ಕಲಶಶತವಾಡಿಯೊಳ್ ನೂರು ಜಿನಾಲಯಂಗಳಂ ತೆಗೆದು ಹೆಡತಲೆಯ ಪದಿನಾರು ಬಸದಿಯಂ ಕೀಳಿಸಿ ಪಂಚಪರಮೇಷ್ಠಿಗಳಂ ಸ್ಥಾಪಿಸಲೆಂದಿರ್ದ ಐದು ದೇವಾಸ್ಥಾನಕ್ಕೆ ಪಂಚನಾರಾಯಣರಂ ಸ್ಥಾಪಿಸಿ ಬಲ್ಲಾಳರಾಯ ವಿಷ್ಣುವರ್ಧನರಾಯನೆಂಬ ಪೆಸರಾಂತು ಪರಮಶಿಷ್ಯನಾಗೆ ರಾಮಾನುಜಂ ರತ್ನಮಯದಡ್ಡಸಿವಿಗೆಯನೇರಿ ಹತ್ತು ಸಾವಿರ ಭಕ್ತರ್ವೆರಸು ಭೂಪ್ರದಕ್ಷಿಣಂ ಮಾಡುತ್ತೆ ಅಲ್ಲಲ್ಲಿರ್ದ ಜಿನಾಲಯಂಗಳ ಕೆಡಿಸುತ್ತೆ ವಿಷ್ಣುದೇವರಂ ಸ್ಥಾಪಿಸುತ್ತೆ ಘಟಿಕಾಸ್ಥಳಂಗಳ ಶಿವಾಲಯದೊಳ್ ವಿಷ್ಣುವಂ ಸ್ಥಾಪಿಸುವರ್.

ಸರ್ವಕ್ಕೂ ತಿರುವೆಂಬ ಶಬ್ದ ಮೊದಲಾಗೆ ಪೇಳಿಸುತ್ತೆ ಜೈನೇಭಕಂಠೀರವಂ ಎಂದು ಪೊಗಳಿಸಿಕೊಳ್ಳುತ್ತುಂ ತಿರುಪತಿಗೆಯ್ದಿಯಲ್ಲಿ ಅನೇಕರಂ ಶ್ರೀವೈಷ್ಣವರಂ ಮಾಡಿ ವೃಕ್ಷಕೋಟರದೊಳ್ ಪುಟ್ಟಿಬಂದರೆಂದು ಚಕ್ರತ್ತಾಳ್ವಾರರ್ ಮೊದಲಾಗೆ ಆಳ್ವಾರರಂ ಬರೆಯಿಸಿ ಸಕಲ ದೇಶದೊಳ್ ದಿಗ್ವಿಜಯದಿಂ ಕಾಶೀದೇಶಮನೆಯ್ದಿ ಅಲ್ಲಿ ವಿಷ್ಣು ಮೂರ್ತಿಯಂ ಸ್ಥಾಪಿಸಿ ಮುಂದಕ್ಕೆ ಪೋಪಲ್ಲಿ ಜನರೆಲ್ಲ ಹಿಂದಾಗೆ ಸಹಸ್ರಜನ ಪೊಲೆಯರ್ ಬಿಡದೆ ಒಡನೆಯ್ದುವುದುಂ ತಿರುಕುಳದಾಸರೆಂದವರ್ಗೆ ಶಂಖು ಜಾಗಟೆ ಕೊಟ್ಟು ಮಂತ್ರವಾದದಿಂ ಪದ್ದಂ ಪಾವಾಡಂಗಳಂ ಮಾಡುತ್ತುಂ ರಾಜ್ಯಮೆಲ್ಲಮಂ ತೊಳಲಿ ಬಂದು ಮೇಲುಗೋಟೆಯೆಂದು ಮಧ್ಯದೇಶದೊಳಿರ್ದ ಜಿನಾಲಯಮಂ ಮರಸಿ ಚಲುವರಾಯನೆಂದು ಸ್ಥಾಪಿಸಿ ಇವು ಮೊದಲಾಗೆ ಬಸದಿಗಳೊಳಗಿರ್ದ ಹೇಮ ರಜತಮಯೋಪಕರಣಂಗಳಂ ಪ್ರತಿಮೆಗಳಂ ಕಳ್ಳಭಂಟರಿಂ ತರಿಸಿ ವಿಷ್ಣುಗೃಹದೊಳ್ ಪ್ರತಿಮೆಗಳಂ ಮಾಡಿಸುತ್ತಂ ೧೧೯೯ ರಿಂದ ೧೨೦೦ ಪರ್ಯಂತರ ನಡೆಯಿತು. ಅಷ್ಟರಲ್ಲೆ ರಾಜ್ಯದೊಳು ಧರ್ಮವಿಧ್ವಂಸಮಾಗೆಯನೇಕ ಉತ್ಪಾತಂಗಳಾಗಿ ಅಡುಗೂರು ಬಳಿಯಲ್ಲಿ ಭೂಮಿ ಬಾಯ್ದೆರೆದು ಅತಿಭಯಂಕರಮಾಗೆ ಭೂಮಿಹಿದ್ದಿ ಭೂವಿವರದಿಂ ಮಹಾಖಾತಮಾಗೆ ಆಕಾಶದೊಳ್ ಪಾರುವ ಪಕ್ಷಿಗಳನೆಳೆದುಕೊಳ್ಳುತ್ತೆ ಹೆಚ್ಚಿ ಬರುತ್ತಿಪ್ಪುದುಂ ಬಲ್ಲಾಳರಾಯನದಕ್ಕೆ ಉಪಶಮಮಂ ಮಾಡಲಶಕ್ಯಮಾಗೆ ನಾನಾವಿಧ ಪ್ರತೀಕಾರಮಂ ಷಣ್ಮತದವರೆಲ್ಲಂ ಮಾಡಿದೊಡಂ ನಿಲ್ಲದೆಯಿರಲನೇಕ ಪ್ರಾಣಿಹಿಂಸೆಗೆಯ್ದೊಡೆ ಪೆಚ್ಚುತ್ತುಂ ಬರೆ ನರಬಲಿಯಂ ಕೊಡಲೆಂದೊಡಂ ಅತ್ಯಾಸನ್ನಕ್ಕೆಯ್ದಿದ ನರಗೋಮಹಿಷಾದಿಗಳಂ ತಾನೆ ಎಳೆದುಕೊಳ್ವುದರಿ ನಿಲಲರಿದೆಂದತಿಭೀತಿಯಿಂ ಚಿಂತಾಕ್ರಾಂತನಾಗಿ ಜಿನಮುನಿಗಳಿಂದಲ್ಲದೆ ನಿಲ್ಲದೆಂದು ಬಲ್ಲಾಳರಾಯಂ ತಾನೆ ಹನಸೋಗೆಯಲ್ಲಿಗೆಯ್ದಿ ಅಲ್ಲಿ ಮಠದೊಳಿರ್ದ ಶ್ರೀಜೈನಯೋಗೀಶ್ವರರ್ಗೆ ನಮೋಸ್ತು ಮಾಡಿ ನನ್ನ ಪಾಪೋದಯದಿಂದೆನಗಿಂತಾದುದೆನ್ನ

ಜೀವರಕ್ಷದಕ್ಷನಾಗಿ ಪಾಲಿಸಬೇಕೆಂದು ಬೇಡಿಕೊಂಡವರಂ ರತ್ನಮಯ ಸಿವಿಗೆಯನೇರಿಸಿಕೊಂಡು ಬಂದಾ ಭೂಗರ್ತದ ಸಮೀಪದೊಳಿರಿಸಿ ಸಮಸ್ತ ಚರಾಚರಪ್ರಾಣಿಗಳುಳಿವಂತೆ ಏನಾದರಂ ತಾವು ಬಲ್ಲಂದದಿಂ ನಿಲ್ವಂತು ಮಾಳ್ಪುದೆಂದಡ್ಡಗೆಡೆದು ಬಿನ್ನವಿಸೆಯಾ ಪ್ರದೇಶದೊಳ್ ಚತುರ್ವಿಂಶತಿ ಹಸ್ತವಿಸ್ತಾರಾಯಾಮಸಮ ಚತುರಸ್ರ ಸಮತುಂಗ ಚತುದ್ವಾರವಿರಾಜಿತ ಕ್ಷೀರದ್ರುಮಾದಿಗಳಪ್ಪ ಷೋಡಶಸ್ತಂಭಸಂಭೃತ ಘಂಟಾ ದರ್ಪಣಾದಿಗಳಿಂ ಧವಲದುಕೂಲವಸನ ಸಮುತ್ತುಂಗಮಪ್ಪ ನಾಲ್ಕು ಮಂಡಪಂಗಳಂ ನಿರ್ಮಿಸಿ ಮಹಾಹೋಮಕಲಿಕುಂಡ ಮೃತ್ಯುಂಜಯ ಮೊದಲಾದ ಯಂತ್ರಾರಾಧನೆಗಳಿಂ ಅಂತರಂಗ ಬಹಿರಂಗ ತಪೋಲಕ್ಷ್ಮಿಯುಳ್ಳ ಚಂದ್ರಕೀರ್ತಿಗಳೆಂಬ ಮುನೀಶ್ವರರಿಂ ಊರ್ಜಯಂತಪರ್ವತದ ಶಿಖರದೊಳ್ ಶ್ರೀನೇಮಿತೀರ್ಥಂಕರ ಚರಣಮನಾರಾಧಿಸುವಲ್ಲಿ ದಶಧರ್ಮ ಸಂಪತ್ತಿಯುಳ್ಳ ಅನಂತವೀರ್ಯ ಮುನೀಶ್ವರರ್ ವಿದ್ಯಾಪತಿಯೆಂಬ ಸಮ್ಯಗ್ದೃಷ್ಟಿಗುಪದೇಶಿಸಲ್ಪಟ್ಟುದು. ಅಷ್ಟವಿಂಶತಿ ಮೂಲಗುಣ ಸಂಪನ್ನ ಪಂಡಿತ ಪದ್ಮಣಂದಿಗಳೆಂಬ ಪರಮಗುರುಗಳಿಂ ಪಡೆಯಲ್ಪಟ್ಟುದು ರತ್ನತ್ರಯಶ್ರೀಯನ್ನುಳ್ಳ ರಾಜಪುತ್ರಂಗುಪದೇಶಿಸಲ್ಪಟ್ಟು ಬೃಹತ್ಸಿದ್ಧಚಕ್ರಕ್ರಮಂ ಮಹಾಶಾಂತಿಚಕ್ರಮನಾರಾಧಿಸಿ ಸೆರೆ ಸಂಕಲೆ ಮೊದಲಾದುಪದ್ರವಂ ಜನರ್ಗಿಲ್ಲದಂತು ನಿರ್ಭಯಮಂ ಮಾಡಿಸಿ ದೇವ ಮನುಷ್ಯ ತಿರ್ಯಂಚ ಮೊದಲಾದ ಜೀವಂಗಳೆಲ್ಲ ಸಂತೋಷಮಪ್ಪಂತು ತೃಪ್ತಿಬಡಿಸಿ ಸಕಲ ಸಂಪತ್ಸಂಪಾದಕ ದಯಾಮಯ ಮಹಾ ಯಜ್ಞಮಂ ಮಾಡಿಸಿ ೧೦೮ ಬೂದಿಗುಂಬಳಕಾಯಂ ತರಿಸಿ ಮಂತ್ರಿಸಿ ಒಂದೊಂದ ಕೂಷ್ಮಾಂಡಮಂ ಭೂಮಿಯಗರ್ತಕ್ಕುರುಳಿಸಲೊಂದೊಂದಂಬಿನೆಸಗೆ ಹೂಳುತ್ತುಂಬರೆ ನೂರೇಳುಫಲಕ್ಕೆ ಮೇಲೊಂದೆಸಗೆಯುಳಿಯೆ ಷಣ್ಮತಸ್ಥರೆಲ್ಲರ್ ಮುಳಿದೊಂದಂಬಿನೆಸಗೆಯ ಮುಚ್ಚಿಸಿಮೆಂದೊಡವರಿಂ ತೀರದೆ ತಮ್ಮ ತಮ್ಮ ಬಿರುದು ಸಿಂಹಾಂಕಿತ ಸಿಬಿಗೆ ಶ್ವೇತಚ್ಛತ್ರಮುಭಯ ಚಾಮರ ಬಲಮುರಿ ಶಂಖ ಕಾವೀವಸ್ತ್ರ ಮೊದಲಾದ ಬಿರುದುಗಳಂ ಮುಂದಿರಿಸಿ ಪೊಗಳೆ ಉಳಿದಿರ್ದ ಕೂಷ್ಮಾಂಡಮೊಂದಂ ಮಂತ್ರಿಸಿಕ್ಕುವುದುಂ ಭೂಮಿ ಸಮತಳಮಾಗೆಯದರ ಮೇಲೆ ಜಿನಪ್ರತಿಮೆಗೆ ಮಹಾಸ್ನಪನಾರಾಧನೆಯಿಂ ಬಹುಜನಕ್ಕನ್ನದಾನ ಮೊದಲಾಗೆ ಮಾಡಿಸಿದರು. ಆವಾಗ ಆ ಯತೀಶ್ವರರಿಗೆ ಚಾರುಕೀರ್ತಿಯೆಂದು ಬಲ್ಲಾಳರಾಯ ಜೀವರಕ್ಷಾಪಾಲಕರೆಂದು ಮೊದಲಾದ ಬಿರುದಾವಲಿಯುಂಟಾಯಿತು. ಚಾರುಕೀರ್ತಿಗಳಿಗೆ ಅನೇಕ ಬಿರುದು ಕೊಟ್ಟು ಶಿಷ್ಯನಾದನು. ಆಳ್ವಾರ ಪೆರುಮಾಳಭಿಕ್ಷುಕ ರಾಮಾನುಜರನೇಕ ಶಿಷ್ಯರ್ವೆರಸಿ ಅನೇಕ ದೇಶಮಂ ಸಂಚರಿಸಿದರು. ದಿವ್ಯಕುಂಭಮೆಂದು ನಾಲ್ಕು ಸಾವಿರದ ನೂರ ಹದಿನೆಂಟು ಕಲಿವರುಷದಿಂತೊಟ್ಟು ನೂರಿಪ್ಪತ್ತು ವರುಷದವರೆಗೂ ಪ್ರಬಲವಾಗಿತ್ತು.

ಮತ್ತಂ ಅತ್ತಲು ಶ್ರೀವೀರಬಲ್ಲಾಳಬೀಡಿಂಗೆ ಡಿಳ್ಳಿಯಿಂದಾ ವರನಂದಿಬೀಬಿಯು ಬರುವಲ್ಲಿ ತಂದೆಯಂ ಬೀಳ್ಕೊಂಡು ನಾನು ದೂರ ಪೋದಪೆ ಸಮಾಚಾರಮನೆಂತು ತಿಳಿಯಬೇಕೆಂದುಂ ಗಾವುದಕೊಂದಭಯಭೇರಿಯಂ ಇಡಿಸಿದ್ದನು. ತಾನು ಬಂದು ಬೇರೊಂದರಮನೆಯೊಳಿರ್ದು ಬಲ್ಲಾಳಂ ತನ್ನ ಸೇರದೆ ಇರುವಲ್ಲಿ ಅರಸಿಯರು ವಿನೋದದಿಂ ಕಪಿಯನಲಂಕರಿಸಿ

ಕಳುಹಿಸುವುದುಂ ನೋಡಿ ತನ್ನಂ ಹಾಸ್ಯ ಮಾಳ್ಪ ಭಾವಮೆಂದು ಕೋಪಿಸಿ ಭೇರೀನಾದಮಂ ಮಾಡಿಸೆ ಪಾದಶಾಯಂ ಭೇರೀನಾದಮಂ ಕೇಳಿ ನಾಲ್ಕು ಜನ ತನ್ನ ವಜೀರರಂ ಬಣ್ಣಕ್ಕೆ ಲಕ್ಷ ಕುದುರೆಯ ಸಹಿತ ಹದಿನೆಂಟು ಲಕ್ಷ ಪಾಯಿದಳ ಸಹಿತಂ ಕಳಿಪೆ ಮಲ್ಲಿಗಸುಂದರ್ ಮಲ್ಲಿಗಜುನ್ನರ್ ಮಲ್ಲಿಗವಜೀರ ಎಂಬುವರು ಬಂದೊಟ್ಟನಿಲೆ ಬಲ್ಲಾಳಂ ತನ್ನ ಬಲಸಹಿತಂ ಚಂದ್ರದ್ರೋಣಪರ್ವತದೊಳು ಮಹಾಯುದ್ಧಮಂ ಮಾಳ್ಪಲ್ಲಿ ವರನಂದಿಬೀಬಿ ಒಂದು ಗುಹೆಯಂ ಹೊಕ್ಕು ಅಲ್ಲೇ ಹತವಾದಳು. ಬಲ್ಲಾಳನು ಸಮಸ್ತ ಬಲಮಂ ತರಿದೊಟ್ಟಿ ಏಳು ದಿವಸ ಹಗಲು ರಾತ್ರಿಯಲ್ಲಿ ಎತ್ತಿದ ಕತ್ತಿಯನಿಳುಕದೆ ಬಲಮಂ ಸಂಹಾರಮಂ ಮಾಡಿ ನಿತ್ತರಿಸಲಾರದೆ ಮತ್ತೊಂದು ಗುಹೆಯಂ ಪೊಕ್ಕು ಅಲ್ಲೆ ದೀರ್ಘನಿದ್ರಗೈದಂ

ಐದು ಜನ ವೃದ್ಧಫಕೀರರು ನಾವು ಈ ಸಮಾಚಾರವನೇನೆಂದು ಹೋಗಿ ಹೇಳಬೇಕೆಂದು ಜೀವವೆರಸಿಯಾ ಪರ್ವತದೊಳೆ ಗೋರಿಯಂ ಪೊಕ್ಕರು. ಸಿಂಧುಬಲ್ಲಾಳ ಮೊದಲಾದ ಹರಿವಂಶದರಸುಮಕ್ಕಳೆಲ್ಲಾ ಶ್ರೀಮುದ್ರೆನಾಮಧರರಾಗೆ ಒಂದೊಂದು ಗ್ರಾಮಮಂ ಪೊಕ್ಕು ಅಲ್ಲಲ್ಲಿ ಸ್ಥಳಮಂ ಮಾಡಿಕೊಂಡರು. ಜೈನವೈಶ್ಯರು ರಾಮಾನುಜರಿಂ ಶಿಕ್ಷಿಸಲ್ಪಟ್ಟರಾಗಿ ವೆಂಕಟಪುರಾಶ್ರಯದಿಂದ ನಾನಾ ಭೇದದಿಂದ ವರ್ತಿಸಿದರು. ಶೂದ್ರರೊಳು ದಾಸಗೌಡ ಬಣಜಿಗ ತಿರುಕುಲದಾಸರಾದಿಯನೇಕ ಭೇದದಿಂದೊಪ್ಪಿದರು. ಚಾತಾಳಾಭಿದಾನದಿಂ ೪೬ ಭೇದವಾಯಿತು. ಈ ಮೇರೆ ಬಲಾತ್ಕಾರದಿಂ ಜೈನ ಸ್ಮಾರ್ತ ಶೈವರ ಚಾತುರ್ವರ್ಣಕ್ಕಂ ನಾಮನಾಮವನಿಕ್ಕಿಸುವಲ್ಲಿ ದೇವಿಹಳ್ಳಿ ಕಡದರವಳ್ಳಿ ಅಡಗೂರು ಸಾವಂತನಹಳ್ಳಿ ಹೊಂಗೆರೆಯೆಂಬ ಪಂಚಗ್ರಾಮದ ಶ್ರಾವಕರು ಭಂಗಾರಮ್ಮ ಸಿಂಗಾರಮ್ಮಗಳಿಗೆ ಅತಿಶಯವಾದ ವಸ್ತ್ರಾಭರಣಾದಿಗಳಂ ಕೊಟ್ಟು ಬಹಳ ಬಗೆ ಹೇಳಿಕೊಂಡು ವಿಷ್ಣುವರ್ಧನಂಗರಿಕೆಯಂ ಮಾಡಿಕೊಂಡು ನಮ್ಮ ಮನೆ ಪ್ರಸ್ತ ಪ್ರಯೋಜನದೊಳು ರಾಮಾನುಜರ ಪೆಸರು ನಿಮ್ಮ ಹೆಸರುಮಂ ಹೇಳಿ ಪೂಜೆಯಂ ಮಾಡುತ್ತಿದ್ದೇವೆ ಎಂದು ಬಿಡಿಸಿಕೊಂಡರು. ಅದರಿಂದವರು ನಾಮವಿಕ್ಕದೆ ಗೌಡರೆಂದು ಪೆಸರಾಯ್ತು.

ಪೂರ್ವಾರಭ್ಯ ಅಷ್ಟರವರಿಗು ಮತಭೇದವಾದಾಗ್ಯು ಎಲ್ಲರುಂ ಅಭಕ್ಷ್ಯಂಗಳಂ ಮುಟ್ಟದೆ ಜಲಗಾಲನ ಮೊದಲಾದ ಶೋಧನೆ ಭೇದನೆಯಿಂ ಪಾಕಶುದ್ಧಿಯುಳ್ಳರಾಗಿರ್ದುದರಿಂ ಏಕರಾಗಿ ಭೋಜನ ಪ್ರತಿಭೋಜನಂ ಮೊದಲಾಗಿ ಕೆಲರು ಕೊಳ್ಕೊಡೆಯಿಂ ಜೈನ ಶೈವ ವೈಷ್ಣವರು ಏಕವಾಗಿ ನಡೆಯುತ್ತಿರಲೀ ರಾಮಾನುಜ ಶಂಕರಭಟ್ಟ ರುದ್ರಾರಾಧ್ಯರಿಂ ತಂತಮ್ಮ ಶಿಷ್ಯರಂ ವಿಂಗಡಿಸಿ ಪ್ರತ್ಯೇಕವಾಗಿ ನಿಂತು ಭೋಜನಾದಿಗಳಂ ಬಿಟ್ಟರು. ಅಲ್ಲಿಂದಿತ್ತ ಶೈವ ವೈಷ್ಣವಾದಿಗಳು ಶೋಧನೆ ಭೇದನೆಯಂ ಬಿಟ್ಟು ಅಭಕ್ಷ್ಯಂಗಳೆಲ್ಲಮಂ ಸೇವಿಸುತ್ತಾ ಬಂದರು. ಈ ಬಲ್ಲಾಳರ ಕಾಲದೊಳೆ ಶಕಾಬ್ದ ೧೧೧೩ ರಿಂ ೧೨೩೦ ಪರ್ಯಂತರಕ್ಕು ದಣಾಯಕರೆಂದು ಅರಸುಗಳೆ ಕೆಲಕೆಲವು ರಾಜ್ಯಮಂ ಬಲ್ಲಾಳರನುಮತದಿಂದಾಳಿದರವರಾರಾರೆಂದೊಡೆ ಕೇಶವದಣಾಯಕಂ ಬಲ್ಲಾಳನ ಮಹಾ ಪ್ರಧಾನಂ ನೀಲಗಿರಿಯೊಳು ನಿಂದು ರಾಜ್ಯಂಗೆಯ್ವನಾತನ ಮಗಂ ಮಾಧವದಣಾಯಕರವರ ಸಂತತಿಯವರು ಬೆಟ್ಟದಕೋಟೆಯೊಳಿದ್ದರು. ಅಲ್ಲಿ

ಮಾಧವದಣಾಯಕ ಭೀಮ ದಣಾಯಕನಾ ಮಾಧವದಣಾಯಕರು ತಮ್ಮ ಪ್ರಪಿತಾಮಹರು ಕಟ್ಟಿಸಿರ್ದ ವಾಸುದೇವರ ದೇವಸ್ಥಾನಮಂ ಜೀರ್ಣೋದ್ಧಾರಮಂ ಮಾಡಿ ಇಪ್ಪತ್ತೆರಡು ಹಳ್ಳಿಗೆ ಒಡೆಯನಾಗಿರ್ದಂ. ಹೆಡತಲೆಯಲ್ಲಿ ಚಂದಣ್ಣದಣಾಯಕಂ ೧೫ ಗ್ರಾಮಕ್ಕೆ ಪ್ರಭುವಾಗಿರ್ದಂ. ಗೋವಿಂದದಣಾಯಕ ಶ್ರೀಪತಿದಣಾಯಕ ದೇವಣ್ಣದಣಾಯಕ ವೆಂಕಟಪತಿದಣಾಯಕರು ಬಡಗಲ ಕೆಲವು ನಾಡಿಗೆ ಒಡೆಯರಾಗಿರ್ದರು. ಬೆಟ್ಟದ ಕೋಟೆ ಗೋವಿಂದದಣಾಯಕನ ಮನೆ ಪ್ರಸ್ತದೊಳು ಹಿಂಡಿ ಸಂಡಗೆ ವ್ಯವಹಾರದಿಂದ ನೀಲಗಿರಿಯ ಸೋಮದಣಾಯಕಂ ದಂಡೆತ್ತಿ ಬಂದು ಬೆಟ್ಟದಕೋಟೆ ಮುತ್ತಿ ಹಿಡಿವಲ್ಲಿ ಕುದುರೆಯನೇರಿ ಬೆಟ್ಟದ ಕಮರಿಗೆ ಲಂಘಿಸಿ ಬಿದ್ದುದರಿಂದಲ್ಲಿರ್ದರಸುಮಕ್ಕಳು ವರ್ತಕರು ಗವುಡಗಳು ಸಹಾ ಬಂದುತ್ತರದ ಕುಲುಗಣದಾ ಹೋಬಳಿಯೊಳು ಬಂದು ನಿಲಲು ಇಟ್ಟೆಡೆಯಾಗೆ ಹಿರೀಬೇಗೂರ ಕೂಚಿರಾಜನ ಮಗಂ ಜಿನಮತವಂ ಬಿಟ್ಟು ನಾಮಧಾರಿಯಾಗಿ ಮಹಂಕಾಳಿ ಯೆಂಬ ದೇವಿಗೆ............................ಂ ಣನೆಂಬ ಪೆಸರಿಂದಿರಲಲ್ಲಿಗೆ ಬೆಟ್ಟದ ಕೋಟೆಯಿಂ ಬಲದ..........................ಳಾದರು, ಅರಸುಗಳು ಉತ್ತರ ಪಶ್ಚಿಮದ ಸೀಮೆಗೆಯ್ದಿ ನಿಂತರು. ಕೆಲವು ದೇಶದೊಳು ದಣಾಯಕರು ಶಕ ೧೨೫೦ ವರಿಗೂ ಆಳಿದರು. ಅಷ್ಟರೊಳು ಲಕ್ಷ್ಮಣದೇವರಾಯಂ ರಾಜ್ಯಭಾರ................ಷಯಶ್ಚಂದ್ರಿಕೆಯ ಪಸರಿಸಿದುಂ

ಇಂತೀ ಕಥೆಯಂ ಕೇಳ್ವರ
ಭ್ರಾಂತಿಯು ನೆರೆ ಕೆಟ್ಟು ಬಳಿಕಮಾಯುಂ ಶ್ರೀಯುಂ
ಸಂತಾನವೃದ್ಧಿಯಪ್ಪುದ
ನಂತರ ಸುಖಕ್ರಮದಿ ಬಪ್ಪುದಿದು ಸಿದ್ಧಾಂತಂ

ಇದು ಸತ್ಯಪ್ರವಚನ ಕಾಲಪ್ರವರ್ತನ ಪಾರಾವಾರೋದ್ಧೃತ ದೇವಚಂದ್ರಕೃತ ರಾಜಾವಲೀ ಕಥಾಸಾರದೊಳ್ ಚೋಳ ಬಲ್ಲಾಳದಣಾಯಕ ರಾಜ್ಯಪಾಲನ ವಿವರಣಂ

ನವಮಾಧಿಕಾರಂ

ದಶಮಾಧಿಕಾರಂ

ಶ್ರೀಸುಜನಸ್ತುತರಖಿಳಕ
ಳಾಸದನರ್ ಸತ್ಯವಾದಿಗಳ್ ಸುವಿಚಾರರ್
ಲೇಸಾಗೆ ಬರೆಯೆ ಕೇಳ್ವುದು
ವೈಷಮ್ಯವನುಳಿದು ಕ್ರೋಧ ಮೋಹವನುಳಿದುಂ

ಈ ಪ್ರಕಾರದೊಳು ವರ್ತಿಸುತ್ತಿರಲಿತ್ತಲಾನೆಗೊಂದಿ ವಿದ್ಯಾನಗರಿಯೊಳು ಕೃಷ್ಣರಾಯುಂ ತಕ್ಕಷ್ಟು ರಾಜ್ಯದೊಳು ಕಪ್ಪಂಗೊಳ್ಳುತ್ತುಮಿರ್ದನತ್ತ ಕಿರಾತಪಟಲ ಎಂಟು ಜನದೊಳು ಪ್ರತಾಪರಾಯನುಂ ಹಂಸರಾಯನುಂ ಪ್ರತಾಪರುದ್ರನುಂ ಇಮ್ಮಡಿ ಜಗದೇವರಾಯನುಂ ರಾಮದೇವರಾಯನುಂ ಕಂಪರಾಯನುಂ ಸಾಳುವ ಕಂಪಿಲ್ಲರಾಯನುಂ ರಾಮಚಂದ್ರರಾಯನುಮೆಂಬಿವರು ಆಳಿದ್ದು ೨೦೦ ವರುಷವಷ್ಟರಲ್ಲಿ ಭರ್ತೃಹರಿಯೆಂಬಂ ಮಿಮಾಂಸಕಮತಾನುಸಾರಿ ಅತ್ಯಂತ ಸಾತ್ವಿಕ ಪ್ರಕೃತಿ ಪ್ರಜೆಗಳೊಳಗತ್ಯಂತ ದಯಾಪರನಾಗಿ ರಾಜ್ಯಮನಾಳುತ್ತಿರೆ ಪ್ರಜೆಗಳು ಸಿದ್ಧಾಯಮಂ ಕುಡದಿರೆ ನಾವೆಲ್ಲರು ಭೂಮಿಯುತ್ತು ಕಷ್ಟಪಟ್ಟು ನಿಮಗೇಕೆ ಹಣಮಂ ಕೊಡಬೇಕೆಂಬುದುಂ ಭೂಮಿಪತಿಗಳು ರಾಜರಪ್ಪುದರಿಂದಾ ಭೂಮಿಗೇನಾದರು ಕಂದಾಯಮಂ ಕೊಟ್ಟಲ್ಲದೆ ಉಳಲಾಗದೆಂದು ಮಂತ್ರಿ ಸಾಮಂತಾದಿಗಳ್ ಪೇಳ್ವುದುಂ. ಆದರೆ ಕಂದಾಯಮಂ ಕೊಡುವುದಿಲ್ಲ. ಈ ಭೂಮಿ ಬೇಡ, ಅರಣ್ಯದೊಳು ಬೆಳಸ ಮಾಳ್ಪೆವೆನೆ ಅರಣ್ಯ ಪರ್ವತ ನದಿಗಳೆಲ್ಲಾ ಸ್ವಾಮಿಗೆ ಸಲ್ವುವು ನೀವು ಎಲ್ಲಿ ಬೆಳೆಯ ಮಾಡಿದಾಗ್ಯು ಬಂದ ಧಾನ್ಯದೊಳು ಆರರೊಳೊಂದು ಭಾಗಮಂ ಪ್ರಭುವಿಂಗೊಪ್ಪಿಸಿ ಬಾಳಿಮೆನೆ ತಾವು ಮಾಡಿದ ಭೂಮಿಯೊಳಾರರೊಳೊಂದು ಭಾಗಮಂ ಬೆಳಸು ಮಾಡಿ ಅರವಾಸಿ ಕೊಡುತ್ತಿದ್ದೇವೆಂದು ನಿಮಗೆ ಮೇಗಣ ಭಾಗವೊ? ಕೆಳಗಣ ಭಾಗವೊ? ಎನೆ ಅರಿಯದವರೆಂದು ಧಾನ್ಯಗಳು ದೊರೆಗೆ ಹುಲ್ಲು ನಿಮಗೆಯಾದ್ದರಿಂದ ಮೇಗಣ ಭಾಗವನೊಪ್ಪಿಸುವುದೆನಲಾ ವರ್ಷಮೆಲ್ಲರು ಶುಂಠಿ ಅರಿಸಿನ ಗೆಣಸು ಮೂಲಂಗಿ ಈರುಳ್ಳಿ ಬೆಳ್ಳುಳ್ಳಿ ಮೊದಲಾದಮಂ ಬಿತ್ತಿ ಮೇಗಣ ಸೊಪ್ಪನರಮನೆಗೆ ಕುಡೆ ಕೆಳಗಣ ಬೆಳೆ ಬೇಕೆಂದಡೆ ಧಾನ್ಯಮಂ ಬಿತ್ತಿ ಹುಲ್ಲಂ ಕೊಡೆ ಪುನಹ ಕರೆಯಿಸುತ್ತಾ ಮುನ್ನೂರು ಮಾರಿಗೆ ಒಂದು ಹೊನ್ನಿಗೆ ನಿಯಮಕಮಂ ಮಾಡಿ ಮಂತ್ರಿ ಪ್ರಧಾನಿಗಳು ಬಂದು ಭರ್ತೃಹರಿಗೆ ಪೇಳೆ ಅತ್ಯಂತ ಕರುಣವಿಟ್ಟು ಬೆಳಸು ಸಂಪೂರ್ಣದಿಂ ಬೆಳೆದರೆ ಈ ಪ್ರಕಾರ ಕೊಟ್ಟು ಅರ್ಧ ಕಾಲು ಬೆಳೆಯಾಗೆ ಅರೆಹೊನ್ನು ಕಾಲುಹೊನ್ನಂ ಕುಡುವುದೆಂದು ಮನ್ನಿಸಿ ಕಳುಹಿಸೆ ಪೋಗಿ ರಾಜಂ ಬರುವಲ್ಲಿ ತಮ್ಮ ತಮ್ಮ ಇಚ್ಛೆಯೊಳು ಎರಡು ಕಾಲುಗಳಂ ನೀಡಿ ತೆಗೆಯದೆ ಹಾಸ್ಯ ಮಾಡುತ್ತಿರ್ಪುದುಂ ದೊರೆಯು ಬಪ್ಪಲ್ಲಿ ಕಾಲ ನೀಡಿ ತೆಗೆಯದಿಪ್ಪುದೆ ಎಂದು ಕೇಳಲು ದೊರೆಯೆಂದು ನಾವು ಹೇಗೆ ತಿಳಿಯಬೇಕು ? ಇನ್ನು

ಮೇಲೆ ದೊರೆ ಬರುವಲ್ಲಿ ನಡುವಿನೊಳೊಂದು ಘಂಟೆಯಂ ಕಟ್ಟಿಕೊಂಡು ಧ್ವನಿಯಂ ಮಾಡುತ್ತೆ ಬಂದರೆ ತಿಳಿದುಕೊಳ್ಳುತ್ತೇವೆ ಎಂದೊಡದು ಸಹಜವೆಂದು ನಡುವಿನೊಳು ಘಂಟೆವೆರಸು ಗಮಿಸುತ್ತ ೬ ವರುಷ ರಾಜ್ಯಂಗೆಯ್ದು

ಶ್ಲೋಕ || ಏಕಾಕೀ ನಿಸ್ಪೃಹಃ ಶಾಂತಃ ಪಾಣಿಪಾತ್ರೋ ದಿಗಂಬರಃ
ಕದಾ ಶಂಭೋ ಭವಿಷ್ಯಾಮಿ ಕರ್ಮನಿರ್ಮೂಲನ ಕ್ಷಮಃ ||

ಎಂದು ನಿರ್ವೇಗದಿಂ ಮಗಂಗೆ ರಾಜ್ಯಮಂ ಕೊಟ್ಟು ಶೃಂಗಾರ ನೀತಿ ವೈರಾಗ್ಯ ಮೆಂಬ ಶತಕತ್ರಯಮಂ ಮಾಡಿ ಶಿಷ್ಯರ್ಗುಪದೇಶಂಗೆಯ್ದು ಪರಿವ್ರಾಜಕನಾಗಿ ಏಕಾಕಿಯಾಗಿ ಪಗಲು ರಾತ್ರಿ ಧ್ಯಾನಮೌನದಿಂ ತಪಂಗೆಯ್ಯುತ್ತ ದೇಶಾಟನದಿ ಸಂಚರಿಸಿ ಬಂದ ಸ್ವಪುರದ ಪರೇತಭೂಮಿಯೊಳು ರಾತ್ರಿ ಪ್ರತಿಮೆ ನಿಲ್ಬುದುಂ

ತದ್ರಾತ್ರಿಯೊಳೆ ನಿಶಾಚರರು ಮನೆಬೊಕ್ಕಸಕ್ಕೆ ಕನ್ನಮನಿಕ್ಕಿ ಅಮೂಲ್ಯಮಪ್ಪ ವಸ್ತುವಂ ಕಳ್ದುಬಪ್ಪಲ್ಲಿ ತಳಾರರ್ ಕಂಡು ಬೆನ್ನಟ್ಟಿಬರೆ ನಿತ್ತರಿಸಲಾರದೆ ವಸ್ತುವೆಲ್ಲಮಂ ಯೋಗಿಯ ಮುಂದಿಕ್ಕಿ ಪೋಗೆ ಕಳ್ಳರಂ ಪಿಡಿಯಲಾರದೆ ಸನ್ಯಾಸಿಯೆ ಕೊಂಡಿರ್ದನೆಂದು ಕಾಮಗೊಂಡು ರಾಯಂಗೆ ಪೇಳಲಾತನಂ ಶೂಲದೊಳಿಕ್ಕಿಮೆಂದಾಜ್ಞೆಗೆಯ್ವುದುಂ ಶೂಲಮನೆತ್ತಿಯದರ ಬಳಿಯೊಳಾ ಯೋಗಿಯಂ ನಿಲಿಸಿ ನಿನ್ನಿಷ್ಟದೇವರಂ ನೆನೆದು ಭಾವಿಸು ಏರಿಸುವೆವೆಂದು ಪಿಡಿವುದುಮಾತನಿಂತೆಂದಂ

ವೃತ್ತ || ಬ್ರಹ್ಮಾ ಯೇನ ಕುಲಾಲವನ್ನಿಹಿತತೊ ಬ್ರಹ್ಮಾಂಡ ಭಾಂಡೋದರೇ
ವಿಷ್ಣುಸ್ತೇನ ದಶಾವತಾರಗಹನೇ ಕ್ಷಿಪ್ತೋ ಮಹಾಸಂಕಟೇ
ರುದ್ರೇಣೇಹ ಕಪಾಲಪಾಣಿ ಪುಟಕೇ ಭಿಕ್ಷಾಟನಂ ಕಾರಿತೇ
ಸೂರ್ಯಶ್ಚಂದ್ರ ಅನಿತ್ಯಮೇಘಗಮನಸ್ತಸ್ಮೈ ನಮಃ ಕರ್ಮಣೇ ||

ಎಂಬುದುಂ........ಂಬ ನಾಯಕಂ ಕಾಪಿನವರನಲ್ಲಿರಿಸಿ ತಾನು ರಾಯನಲ್ಲಿಗೆಯ್ದಿ ಅಪೂರ್ವಮಾದುದೊಂದು ವಿದ್ಯಮಂ ತೋರ್ಪುದುಂ ಮೆಚ್ಚಿದುದಂ ಬೇಡುವುದೆನೆ ನಿರಪರಾಧಿಯಂ ಶೂಲದೊಳಿಕ್ಕುವದಂ ಮಾಣಿಸಿ ಸಲಹೆನಲು ರಾಯನಿಂತೆಂದಂ

ಶ್ಲೋಕ || ಆಜ್ಞಾಭಂಗೋ ನರೇಂದ್ರಾಣಾಂ ಗುರೂಣಾಂ ಮಾನಮರ್ದನಮ್
ಪೃಥಕ್ಛಯ್ಯಾ ಚ ನಾರೀಣಾಮ ಶಸ್ತ್ರಂ ವಧಮುಚ್ಯತೇ ||

ಎಂಬುದುಂ ನಾಯಕನೆಂದಂ ಅವಿಚಾರೇಣ ರಾಜ್ಞಾಂತಂ ಕುರ್ವತೇ ರೌರವಂ ಭವೇತ್ ಎಂಬುದರಿಂದಾತನಂ ನೋಡಿ ಬಳಿಕಾಜ್ಞೆಯಂ ಮಾಳ್ಪುದೆನಲಾ ಋಷಿಯಂ ಕರೆಯಿಸೆ ತನ್ನ ತಂದೆಯೆಂದರಿದು ಸಾಷ್ಟಾಂಗಪ್ರಣತನಾಗಿ ಪೂಜಿಸಿ ತಾನೆಸಗಿದ ವಿಚಾರಕ್ಕೆ ಕೊಕ್ಕರಿಸಿ ನಾಯಕಂಗೆ ರಾಜ್ಯಭಾರಮಂ ಕೊಟ್ಟು ಪಾರಿವ್ರಾಜಕನಾದನತ್ತ ರಾಜಪುರದೊಳು ರಾಜನರೇಂದ್ರಂಗೆ ಸಾರಂಗಧರನೆಂಬೊಂ ಮಗನಾಗಿರೆ ಮತ್ತಂ ರಾಜಂ ಚಿತ್ರಾಂಕಿಯೆಂಬೊಳಂ ತಂದಿಷ್ಟಭೋಗಕಾಮಸುಖಮನನುಭಿಸುತ್ತಿರ್ದು ಮೃಗ ಬೇಂಟೆಗೆ ಪೋಗೆ ಚಿತ್ರಾಂಗಿ

ಪೂರ್ವಭವಸಂಬಂಧದಿಂ ಸಾರಂಗಧರನಂ ಬಯಸಿ ನಾನಾ ಬಗೆಯೊಳು ವಿರಹತಾಪದಿಂದೊಡಂಬಡಿಸಲೊಪ್ಪದೆ ಪಾಪಕ್ಕಮಪಖ್ಯಾತಿಗಂ ಭಯಸ್ಥನಾಗಿ ಬಪ್ಪದಿಪ್ಪುದುಂ ರಾಜಂ ಬರೆ ಚಿತ್ರಾಂಗಿ ತನ್ನ ದೇಹಮಂ ವಿಕಾರಂ ಮಾಡಿಕೊಂಡು ನಿನ್ನ ಮಗನೆನ್ನಂ ಬಲಾತ್ಕಾರದಿಂ ಪರಿಭವಿಸಿದನದರಿಂದೆನ್ನಸುವಂ ನೀಗುವೆನೆಂದು ದುಃಖಂಬಡುವುದುಮತ್ಯಂತ ಕೋಪದಿಂ ಮಗನೊಳು ಮುಳಿಯೆ ಅವನಂ ಕೊಂದಲ್ಲದುಳಿಯೆನೆಂದು ಪ್ರತಿಜ್ಞೆಯಂ ಮಾಳ್ಪುದುಂ ಸಾರಂಗಧರನ ಕೈಕಾಲಂ ತೆಗೆವುದೆಂದಾಜ್ಞೆಯಂ ಕುಡೆ ಮಂತ್ರಿಕುಮಾರನ ಸತ್ಯ ಶುಚಿತ್ವಮನರಿವನಾಗಿ ಆಜ್ಞೆಯಂ ನಿಲಿಸಿ ರಾಜಂಗಿಂತೆಂದುಂ

ಶ್ಲೋಕ || ಕವಯಃ ಕಿಂ ನಪಶ್ಯಂತೀ ಕಿಂ ನಜಾನಂತಿ ಯೋಗಿನಃ
ವಿರುದ್ಧಾಃ ಕಿಂ ನಜಲ್ಪಂತಿ ಕಿಂ ನಕುರ್ವಂತಿ ಯೋಷಿತಃ ||

ಎಂಬುದರಿಂದಿದು ಚಿತ್ರಾಂಗಿದೇವಿಯ ಪ್ರಪಂಚಲ್ಲದೆ ಸಾರಂಗಧರನ ದೋಷಮಲ್ಲದರಿಂದವಿಚಾರನಾದರಸು ಕೆಡುವನೆಂಬುದರಿಂ ವಿಚಾರಿಸಿ ನೆಗಳ್ವುದೆಂಬುದುಂ ಕ್ರಮದಿಂ ರಾಜೇಂದ್ರನರಿದು ರಾಜ್ಯಮಂ ಬಿಟ್ಟು ಕುಮಾರಸಹಿತ ಸದ್ಗತಿಯಂ ಸಾಧಿಸಿಕೊಂಡಂ. ಈ ಪ್ರಕಾರದೊಳೆ [ಕುಮಟ]ದೊಳ್ ಬೇಡರಸಪ್ಪ ಕಂಪಿಲ್ಲರಾಯನ ಮಗಂ ರಾಮಂಗೆ ಚಿಕ್ಕಮ್ಮನಾದ ರತ್ನಾಜಿಯು ಮೋಹಿಸಿದೊಡಂ ಕೊಡಲೊಲ್ಲದಿರಲವಂಗೆ ಮುನಿದು ಕೊಲಿಸಲ್ ಬಗೆದೊಡಾತನದಂ ತಪ್ಪಿಸಿ ಕೀರ್ತಿಯಂ ಪಡೆದಂ.

ಮತ್ತಿತ್ತಲ್ ಚಿತ್ರಶೇಖರ ಸೋಮಶೇಖರರೆಂಬರಸುಮಕ್ಕಳ್ ಸಮರ್ಥರಾಗಿಯು ವಂಚಿಸಿ ಕಾರ್ಯವಂ ಮಾಡಿಕೊಳುತ್ತೆ ರಾಜ್ಯಮನಾಳಿದರ್ ಮತ್ತಂ ಶಬರರೊಳ್ ಕರೀಭಂಟನೆಂಬನತಿಸಮರ್ಥನಾಗಿ ಕೆಲವು ಗ್ರಾಮಂಗಳ್ಗೆ ತಾನೆ ಒಡೆಯನಾಗಿರ್ದು ತೊಂಡನೂರಲ್ಲಿ ಒಬ್ಬ ಕಲುವೀರಿ ಹೆಣ್ಣು ಮಗಳಂ ಹಡೆದು ಮನುಷ್ಯರಂ ಭಕ್ಷಿಸುತ್ತೆ ರಕ್ಕಸಿರೂಪೆಯಾಗಿರಲವಳ ಹೆಣ್ಣುಮಗಳ್ ಕರೀಭಂಟಂಗೆ ವಶವಾಗಿರಲ್ ರಕ್ಕಸಿ ಕೊಲಲುದ್ಯೋಗಿಸಲವನುಪಾಯದಿಂದಾಕೆಯ ತಮ್ಮನಂ ಕೊಲಿಸಿ ಕಡೆಯೊಳಾ ರಕ್ಕಸಿಯಿಂದಲೆ ಮೃತನಾದಂ. ಬಲ್ಲಾಳ ಸಂತತಿಯರಸುಗಳ್ ಕೆಲಂಬರುತ್ತರಕ್ಕೆ ಪೋಗಿ ವಿಜಯನಗರದೊಳಿರ್ದರ್. ಕೆಲರ್ ಕಾರಗಹಳ್ಳಿ ಅರಿಕುಠಾರ ತಳಕಾಡು ಮೂಗೂರು ಮೊದಲಾದ ಗ್ರಾಮಂಗಳೊಳಿರ್ದರ್, ಕೆಲರ್ ಕೇರಳದೇಶಮನೆಯ್ದಿದರ್ ಚಂದ್ರವಂಶಾನ್ವಯಜರ್ ಕಳಲೆ ಹುಲ್ಲನಹಳ್ಳಿ ಮೊದಲಾದ ಗ್ರಾಮಾಂತರಗಳೊಳ್ ಪ್ರಭುಗಳಾಗಿರ್ದರ್. ಕಾರುಗಹಳ್ಳಿ ವೀರಸೂರನೆಂಬ ಮಹಾಬಳಪರಾಕ್ರಮಂ ಕೆಲವು ರಾಜ್ಯಮಂ ಸಾಧಿಸಿ ವಾಸಂತಿಕಾದೇವಿಗೆ ಚಾಮುಂಡಿಯೆಂಬ ಪೆಸರಿಟ್ಟು ಮಹಾಘೋರಾರಣ್ಯದೊಳ್ ಪರ್ವತದ ಮೇಲೆ ಸ್ಥಾಪಿಸಿಯಾ ದೇವಿಯ ವರದಿಂದ ಮಹಿಷಾಸುರನೆಂದಿರ್ದ ಮಹಾವನಮಹಿಷವಿರ್ದುದಂ ಕೊಂದು ಮಹಿಷಾಪುರಮೆಂಬ ಪೊಳಲಂ ಮಾಡಿ ಕೆಲವು ಸೀಮೆಯಂ ಸಾಧಿಸಿ ನಿಸ್ಸಂತಾನಮಾದುದರಿಂ ತನ್ನಳಿಯಂಗೆ ಪ್ರಭುತ್ವಮಂ ಕೊಟ್ಟನ್. ಈ ಕಾರಗಳ್ಳಿಯ ತೊರೆಯರೊಳೀರ್ವರತಿಪ್ರಬಳರಾಗಿ ಸಕಲ ವಿದ್ಯಂಗಳಂ ಕಲ್ತು ತಮ್ಮ

ಜಾತಿಯೊಳೆಂಟು ಭೇದಮಾದೆಲ್ಲರಂ ಕೂಡಿಕೊಂಡು ಲೋಕಮೆಲ್ಲ ತಮ್ಮ ವಂಶಜರೆ ಎಂದುಮದೆಂತೆಂದೊಡೆ ಮುನ್ನ ಲೋಕಮೆಲ್ಲ ಪ್ರಳಯದಿಂ ಜಲಪ್ರಳಯಮೇಳು ದಿವಸಂ ಬರಲಂಬಿಗಂ ತನ್ನ ಪೆಂಡತಿವೆರಸು ಸೋರೆಬುರುಡೆಯೊಳ್ ಪೊಕ್ಕು ತೇಲುತ್ತಿರ್ದು ಬಳಿಕ ಸ್ಥಲವಪ್ಪುದಾತಂಗೆ ಮೃತ್ಯುಂಜಯನೆಂಬ ಪೆಸರಾತನ ಸತಿಗೆ ಶಕ್ತಿಯೆಂದು ಪೆಸರಾಗಲವರಿರ್ವರ ಬಸಿರೊಳ್ ಮೂದೇವರಾದಿ ಚರಾಚರ ಜೀವಂಗಳುತ್ಪತ್ತಿಯಾದುದರಿಂದೆಲ್ಲರುಂ ತೊರೆಯನ ವಂಶಮೆಂದದಕ್ಕೆ ತಕ್ಕ ಶಾಸ್ತ್ರಂ ಕಲ್ಪಿಸಿ ದಕ್ಷಿಣಕ್ಕೆ ಬಂದು ನಿಡಗನಕೋಂಟೆಯೆಂಬ ಪುರಮಂ ಮಾಡಿಕೊಂಡಿರ್ದು ಪಶ್ಚಿಮಕ್ಕೆಯ್ದಿ ಸಿಂಗಪಟ್ಟಣಮಂ ಜಾಗನಕೋಂಟೆಯಂ ಮಾಡಿ ಕೆಲವು ಭೂಮಿಯನಾಳುತ್ತಿರ್ದರ್. ಅಗಳ್ ರಾಜ್ಯಕ್ಕೆ ಅತಿವೃಷ್ಟಿಯುಮನಾವೃಷ್ಟಿಯುಂ ಸ್ವಚಕ್ರ ಪರಚಕ್ರಂಗಳ್ ತೀರಿಕೋಪದ್ರಮುಂ ಚೋರಬಾಧೆಯುಂ ವ್ಯಾಧಿಯುಂ ಪುಟ್ಟಿ ಪ್ರಜೆಗಳ್ಗು ಪದ್ರವಮಾಗಿ ನರಮಾರಿ ಗೋಮಹಿಷ ಮೇಷಮಾರಿ ಗಜಾಶ್ವವೃಕ್ಷಮಾರಿ ಪುಟ್ಟಿ ದೇಶ ದೇಶಂಗಳೊಳ್ ಬಹಳ ಜನಂಗಳ್ ಸಾಯುತ್ತಿರೆ ಗ್ರಾಮಾನುಗ್ರಾಮಂಗಳೊಳ್ ಶಿಲೆಯೊಳ್ ಮಸನಾದಿ ದಾರುಗಳೊಳ್ ಅಂಕದ ಬಾಗಿಲೊಳ್ ಗ್ರಾಮದೇವತೆ ಮಾರಿಯೆಂದು ಸ್ಥಾಪನಂ ಮಾಡಿ ಕುರಿ ಕೋಳಿ ಕೋಣಂಗಳಂ ತರಿದು ಪೂಜಿಸಿದರಲ್ಲಿ ಕೆಲರ್ ಹಿಂಸೆಗೆ ಭೀರುಗಳಾದ ದಯಾಪರರ್ ಹಣ್ಣುಕಾಯಿ ಮೊದಲಾದವರಿಂ ಪೂಜಿಸುತ್ತೆ ವರುಷಕ್ಕೆ ಒಂದು ವೇಳೆ ಹಬ್ಬವೆಂದು ತಂದಾರಭ್ಯ ಮಾಡಿಕೊಂಡು ಬಂದರ್.

ವೀರಬಲ್ಲಾಳಂ ಪೋದಬಳಿಕ ಡಿಳ್ಳಿ ಪಾದಶಾಯಿ ತಾನಾಳುವ ದೇಶಂಗಳೊಳಿದ್ದಂಥ ಜಿನಗೃಹ ಶಿವಾಲಯ ವಿಷ್ಣುವಿನಾಲಯ ಮುಂತಾಗಿ ಸಕಲ ದೇವಸ್ಥಾನಂಗಳಂ ಇಪ್ಪತ್ತು ವರುಷದಿಂ ತೊಡಗಿ ಎಂಬತ್ತು ವರುಷದವರೆಗೂ ದಿನಂಪ್ರತಿ ತಪ್ಪದೆ ಉತ್ತರದೇಶ ಪೂರ್ವ ಪಶ್ಚಿಮ ದೇಶಂಗಳೊಳಿರ್ದವಂ ಹೆಸರಿಲ್ಲದಂತೆ ಪಾಳುಮಾಡಿ ಅಲ್ಲಲ್ಲಿ ಮಸೀತಿಗಳಂ ಮಾಡಿಸಿ ಚಂದ್ರದ್ರೋಣಪರ್ವತದೊಳಿರ್ದ ಚೈತ್ಯಾಲಯಗಳಂ ತೆಗೆದಲ್ಲಿ ಮುನಿವಾಸಮಪ್ಪ ಗಹ್ವರಂಗಳೊಳ್ ಪಕೀರರಂ ನಿಲಿಸಿ ನಿರ್ವಾಣಮಠ ಫಲಾರದ ಮಠಮೆಂದು ಹಿಂದೂಜನರನಿರಿಸಿ ಶಕವರುಷ ೧೩೦೫ ಜಯ ಸಂವತ್ಸರದೊಳಾ ಮಠಗಳಿಗೆ ಐವತ್ತಾರು ದೇಶಂಗಳೊಳ್ ದೊಡ್ಡ ಗ್ರಾಮಂಗಳಲ್ಲಿ ಎರಡು ಹಣ ನಗರ ಪಟ್ಟಣಂಗಳಲ್ಲಿ ಐದು ಹಣ ಧರ್ಮಮಂ ಕೊಡುವಂತೆ ತಾಮ್ರದ ಶಾಸನಮಂ ಬರೆಸಿಕೊಟ್ಟಂ. ಅದರ ಶಾಖೆಯೊಳ್ಬೆದು ಭೇದಂಗಳಾಗಿ ಸುಡುಗಾಡ ಸಿದ್ಧರೆಂದು ಸ್ಮಶಾನದ ಕಾವಲೆಂದವರ್ಗೆಲ್ಲಿಕ್ಕಿದ ವಸ್ತುವಂ ತೆಗೆದುಕೊಳ್ಳುತ್ತಾ ಬಂದರ್. ಡಿಳ್ಳಿ ಪಾದಶಾಯಿ ಸಮಸ್ತ ರಾಜ್ಯಂಗಳ ಅರಸುಗಳಿಂ ಕಪ್ಪಕಾಣಿಕೆಯಂ ತೆಗೆದುಕೊಳ್ಳುತ್ತಾ ನಿಷ್ಕಂಟಕನಾಗಿ ತಾನುಂ ತನ್ನ ಪೆಂಡತಿಯುಂ ಹೊಲಿಗೆಕೆಲಸದೊಳ್ ಪ್ರವೀಣತೆಯಿಂ ಕುಲಾವಿಚೊಗೆ ಮುಂತಾದವಂ ಕುಶಲತೆಯಿಂ ಪೊಲಿದು ವಿಕ್ರಯಮಂ ಮಾಡಿಬಂದು ಲಾಭದಿಂ ತಮ್ಮ ಗ್ರಾಸವುಂ ಮಾಡಿಕೊಳ್ಳುತ್ತಾ ಸಮಸ್ತ ಜಾತಿಯೊಳು ಮುಸಲ್ಮಾನ ಜಾತಿಯತ್ಯುತ್ಕೃಷ್ಟಮೆಂದು ಅಥರ್ವಣ ಮಂತ್ರ ತಂತ್ರಾದಿಗಳಂ ತನ್ನ ಖಾಜಿ ಪಕೀರರ್ಗೆ ಕಲಿಸಿ ಖಾದಿರಲಿಂಗರೆಂದು ತನ್ನ ಗುರುವಿಗಂ ಕಲಿಸೆ ಷಣ್ಮತದ ಹಿಂದೂಜನಂಗಳಂ

ಕರೆಯಿಸಿಯವರೊಳ್ ಮುಸಲ್ಮಾನಕುಲವೆ ಹೆಚ್ಚೆಂದು ವಾದಿಸುತ್ತಾ ಎಲ್ಲಾ ಜಾತಿಯವರಂ ತನ್ನ ಮತಕ್ಕೆ ತರಲೆಂದು ಖಾದಿರಲಿಂಗರಿಗೆ ಒಂದು ಕಾಲಿಂಗೆ ವಿಭೂತಿ ರುದ್ರಾಕ್ಷಿ ಗಂಧ ಜನಿವಾರ ಜಂಗು ಮತ್ತೊಂದು ಕಾಲಿಂಗೆ ನಾಮ ತಿರಿಚೂರ್ಣ ಗೋಪೀಚಂದನ ಮೊದಲಾದ ಷಣ್ಮತದ ಲಾಂಛನಂಗಳೆಲ್ಲಮಂ ಕಟ್ಟಿ ಚತುರ್ದಿಕ್ಕಿಗು ನಾಲ್ವರ್ ಶಿಷ್ಯರ್ ಸಹಿತ ಕೆಲವು ಮಂದಿ ಕುದುರೆ ಸಹಿತಂ ಪೂರ್ವ ಪಶ್ಚಿಮ ದಕ್ಷಿಣೋತ್ತರ ದೇಶಂಗಳಿಗೆ ಕಳುಹಿಸಿ ವಾದದಿಂದೆಲ್ಲಾ ಮತಂಗಳಂ ಜಯಿಸಿ ಎಲ್ಲರಂ ತನ್ನ ಮತಕ್ಕೆ ತಪ್ಪುದೆಂದು ಕಳುಹಿಸಲವರ್ ಪೋದರ್.

ಅವರೊಳ್ ದಕ್ಷಿಣದೇಶಕ್ಕೆ ಬಂದ ಖಾದಿರಂ ೫೦೦ ಜನ ಪಕೀರರ್ವೆರಸಿ ಬಂದಲ್ಲಿದ್ದ ದೇವರಂ ಸೆರೆಬಿಡಿಸುವೆನೆಂದು ದೇವಾಲಯಮಂ ಕೆಡಹಿಸುತ್ತಾ ಎಲ್ಲಾ ಮತಂಗಳಂ ನಿರಾಕರಿಸುತ್ತ ಹಂಪೆಗೆ ಬರುವಲ್ಲಿ ಪಂಪಾಪತಿ ಕೇಳಿ ವೀರಶೈವವನಳಿಯುತ್ತಿದಾನೆ. ಅವನೊಡನೆ ವಾದಮಂ ಮಾಡಿ ಗೆಲ್ದು ಬಪ್ಪುದೆಂದು ತನ್ನ ಗುರುವಪ್ಪ ಬಸವಲಿಂಗದೇವನೆಂಬವನ್ನೈನೂರ್ವರ್ ಶಿಷ್ಯರ್ ಸಹಿತವಾಗಿ ಕಳುಹಿಸಲವರ್ ಬಂದು ವಿನಯಂ ಮಾಡಿ ಲಿಂಗಮಂ ಕಾಲೊಳಂ ಧರಿಸಲಹುದೆ ಮಹಾಪಾತಕವಪ್ಪುದರಿಂ ಬಿಟ್ಟು ಕಳೆವುದೆಂದು ಪೇಳೆ ನಿನ್ನ ಮಾತಿಗೆ ಬಿಡುವೆನಲ್ಲೆಂದು ಪಂಪರಾಜನಲ್ಲಿಗೆ ಬಂದು ನಾನು ಪಾದಶಾಯಿ ಗುರು ಸಕಲ ಮತಂಗಳ್ ಕ್ಷೀಣವಾದ್ದರಿಂದ ಮೊಣಕಾಲಿಂ ಮೇಲಕ್ಕೆ ಬರಲು ಯೋಗ್ಯವಲ್ಲ. ಈ ಅರ್ಥಕ್ಕೆ ಶಾಸ್ತ್ರವಿದೆ ನಿಮ್ಮ ಹಿಂದೂಜನರಲ್ಲಿ ಘಟ್ಟಿಗರಾದವರಂ ಕರೆಸಿ ತೋರುವೆನೆಂದೊಡೆ ಚತುರಾಚಾರ್ಯರಂ ಬರಿಸೆಯವರ ಮಾತಿಂಗೆ ಪ್ರತ್ಯುತ್ತರಮಂ ಕೊಡಲಾರದೆ ಪರಾಜಿತರಾಗೆಯರಸಿನ ಗುರುವಾದ ಬಸವಲಿಂಗದೇವನೆಂಬಂ ಶಿವಭಕ್ತಿಯೊಳ್ ಬೇಡರ ಕಣ್ಣಯ್ಯನ ಸಮಾನ ದೃಢಚಿತ್ತನಪ್ಪುದರಿಂ ಮಾರ್ಕೊಂಡು ನೀವು ಬಲಿಷ್ಠರಾಗಿ ಸ್ವವಾಕ್ಯಸ್ಥಾಪನೆ ಮಾಡುವುದರಿಂದೆಮಗೆ ಬಪ್ಪದಿಲ್ಲಾದರೇನಾಯ್ತು; ನಮ್ಮ ಲಿಂಗ ನಿಮ್ಮ ಕಾಲ ಮೇಲೆ ಮೆರೆಯದಂತೆ ತೆಗೆಯಬೇಕೆಂದಾಗ್ರಹಿಸಿ ನುಡಿವುದುಂ ಲಿಂಗ ನಿಮ್ಮದೆಂತಪ್ಪುದಾದರೆ ನಾ ಕಟ್ಟಿದ ಲಿಂಗಮಂ ತೊರೆಯೊಳಿಕ್ಕುವೆಂ ನಿಮ್ಮ ೫೦೦ ಜನರ ಲಿಂಗಮಂ ಪೊಳೆಯೊಳಿಕ್ಕಿ ನಿಮ್ಮದಾದರೆ ನೀವು ಕರೆದು ತೆಗೆದುಕೊಳ್ಳಿ ಎಂದು ಪ್ರತಿಜ್ಞೆಗೆಯ್ದೆಲ್ಲರುಂ ನೀರೊಳ್ ಮುಳುಗಿ ತಂತಮ್ಮ ಲಿಂಗಮಂ ನೀರೊಳಿಕ್ಕಿ ತಡಿಯೊಳ್ ಕುಳಿತು ಮೂರು ದಿವಸಂಬರಂ ತಮ್ಮ ಭಕ್ತಿಯಿಂ ಮಂತ್ರ ತಂತ್ರಾದಿಗಳಿಂ ಬರಿಸಲಶಕ್ಯಮಾಗೆ ಖಾದಿರಲಿಂಗಂ ತನ್ನೆಡಗೆಯ್ಯಂ ನೀಡಿ ಕರೆಯೆ ಕೈಗೆ ಬಂದ ಲಿಂಗಂಗಳೈನೂರಂ ತನ್ನೆಡದ ಕಾಲ ಕೆಳಗಿಟ್ಟು ಬಲಗಯ್ಯಂ ನೀಡಿ ತಾನು ಕಟ್ಟಿದ್ದ ಲಿಂಗಮಂ ಕರೆದು ಕಾಲಿಗೆ ಕಟ್ಟಿಕೊಂಡಲ್ಲಿ ಜಂಗಮರೆಲ್ಲಾ ಉಪವಾಸದಿಂ ಹೊಳೆಗೆ ಬೀಳಲೆಂದಿಪ್ಪುದುಂ ಆ ಐನೂರು ಲಿಂಗಂಗಳಂ ತನ್ನೆಡಗಾಲಿಂ ಒತ್ತರಿಸಿ ಬಿಟ್ಟುಪೋದನು. ಜಂಗಮರಾ ಲಿಂಗಮಂ ತೆಗೆದು ಪ್ರತಿಷ್ಠೆಗೈದು ಕ್ರಿಯಾಸಮೇತಂ ಕಟ್ಟಿಕೊಂಡು ಪೋಗಿ ಪಂಪಾಪತಿಗೆ ವೀರಶೈವಮಂ ಮುಳುಗಿಸಿದಿರಿ ಎಂದು ವಿಷಣ್ಣಚಿತ್ತನಾಗಿರೆ ಆ ಊರೊಳು ಬಸವನ ಬಿಟ್ಟಿದ್ದ ಗೂಳಿಯಂ ಪಕೀರರಟ್ಟಿಕೊಂಡು ಬರೆ ಖಾದಿರಲಿಂಗನು ಆ ಗೂಳಿಯನಟ್ಟು ತಿಂದುಬಿಡಿ ಎನಲ್ ಅದನಟ್ಟು

ತಿನ್ನಲಾಗಿ ಪಂಪಾವತಿ ವಿರೂಪಾಕ್ಷದೇವರೆಂಬ ಜಂಗಮ ಸಹಿತಂ ಪೋಗಿ ನಮ್ಮ ಬಸವನಪ್ಪ ಗೂಳಿಯಂ ನಿಮ್ಮ ಫಕೀರರ್ ತಿಂದುಬಿಟ್ಟರಂತೆ ಇಂಥಾ ಅನ್ಯಾಯಮುಂಟೆ ಎಂದು ಕೇಳಲಾಗಿ ನಿಮ್ಮ ಬಸವನಾದರೆ ಕರೆಯಿರಿ ಬರುತ್ತದೆ ಎನಲಾಗಿ ಕೊಂದು ತಿಂದರ್ ಇನ್ನೆಂತು ಬಪ್ಪುದು ? ನೀವು ಇಂಥಾ ದ್ರೋಹಮಂ ಮಾಡಬಾರದೆಂಬುದುಂ ಪಕೀರರಿಂದಾ ಗೂಳಿಯ ಎಲುವಂ ತಲೆಯಂ ತರಿಸಿ ತೆರೆಯೊಳಿಟ್ಟು ಮಂತ್ರಿಸೆ ತೆರೆಯಿಂದ ಗುಟುರಿಕ್ಕುತಾ ಗೂಳಿ ಬಂದಂತೆ ಸರ್ವರಿಗೂ ಕಾಣೆ ಜನರೆಲ್ಲಾ ವಿಸ್ಮಯಂಬಡೆ ಪಂಪರಾಜನ ಗುರುವೆಂದನಿದೆಲ್ಲಂ ಈ ಪಕೀರಂ ಮಾಡುವ ಗಾರುಡಮಲ್ಲದೆ ಸತ್ಯಮಲ್ಲೆಂದು ತಿರಸ್ಕರಿಸಿ ನುಡಿವುದುಂ ಕೋಪದಿಂ ನಿನ್ನ ಗುರುವಿಗೂ ನಮಗೂ ಬಿಟ್ಟು ನೋಡೆಂದು ಒಂದು ಗೋಣಿಯ ಎರಡು ಅಂಡಿಗೆಯೊಳ್ ಸುಣ್ಣದ ಹರಳಂ ತುಂಬಿಸಿಯದರೊಳ್ ಈರ್ವರುಂ ಪೊಕ್ಕು ದಳೆಯಿಸಿ ಅದಂ ಹೊಳೆಯೊಳ್ ಹಾಕಿದೊಡಿರ್ವರ ಸತ್ಯಮಂ ಕಾಣಲಪ್ಪುದೆನಲಂತೆಗೆಯ್ವೆನೆಂದವನ ಮಾಯಮನರಿಯದೆ ಸತ್ಯವಿರ್ದಡೆ ಗೆಲ್ವುದೆಂದಾ ಮೇರೆಯೊಳೆ ಸುಣ್ಣದಂಡಿಗೆಗಳೊಳೀರ್ವರುಂ ಪೊಕ್ಕು ದಳೆಯಿಸಿಕೊಂಡು ಅದಂ ಹೊಳೆಯೊಳ್ ಹಾಕಿದೊಡೀರ್ವರಲ್ಲಿ ಜಂಗಮಂ ಬೇಯೆ ಖಾದಿರಲಿಂಗಂ ಮಾಯದಿಂದಾ ಸುಣ್ಣಮಂ ತಿನ್ನುತ್ತೆ ಜಲಕ್ರೀಡೆಯನಾಡುತ್ತುಂ ಬರಲೆಲ್ಲರುಂ ವಿಸ್ಮಿತರಾಗಿ ವಿಷಣ್ಣರಾಗೆ ಪಾದಶಾಹಿಯ ಮಂದಿ ಕುದುರೆ ಸಹವಾಗಿ ಬಂದು ಪಂಪಾ ಲಕ್ಷ್ಮೀಶ್ವರದೊಳ್ ಅಗ್ಗಣಿಹೊನ್ನಯ್ಯ ಮಾಡಿಸಿದ್ದ ಶಿವಾಲಯಂಗಳಂ ತೆಗೆದು ಕಲ್ಯಾಣ ಪಟ್ಟಣಮಂ ಕಟ್ಟಿಗೆಗೇರಿಯಂ ಮಾಡಿ ದೊಡ್ಡದೊಡ್ಡ ವೀರಶೈವರ ಮಠಮಂ ಮುರಿದು ಕೆಲಂಬರಂ ಚೇಲೀಮಾಡಿ ಎಲ್ಲಾ ಜಾತಿಗಳಂ ಚೇಲೀಮಾಡಲೆಂದು ಪಾದಶಾಯಿಗೆ ಪೇಳೆ ಸಕಲ ಮತಸ್ಥರಂ ವಾದದಿಂದೊಳಗುಮಾಡಿ ಮೊದಲು ಈ ಡಿಳ್ಳಿ ಸಂಸ್ಥಾನದೊಳೆ ಅವರವರಂ ಸಮ್ಮತಿಯಿಂದಂ ಚಿಪ್ಪಳಿದ ಮುತ್ತಿನಂತೆ ಹಿಂದೂಜನಮಂ ತುರುಕರಂ ಮಾಳ್ಪೆನೆಂದು ಸ್ಮಾರ್ತ ಶೈವ ವೈಷ್ಣವ ಜೈನರಾದಿ ಎಲ್ಲಾ ಮತದವರಂ ಕರೆಸಿ ಮುಸಲ್ಮಾನಕುಲವೆ ಎಲ್ಲಾ ಕುಲಕ್ಕು ದೊಡ್ಡದೆಂದು ತನ್ನ ಗುರುವಂ ಗೇಣುದ್ದದಿಂ ಮೇಲೆ ನಿಂತಂತೆ ತೋರಿಸುತ್ತುಮಿದಕ್ಕೆ ನಿಮ್ಮ ಮತ ಹೆಚ್ಚಾದರೆ ತೋರಿಸಿ ಇಲ್ಲ ನಮ್ಮ ಮತಮಂ ಕೈಕೊಳ್ಳಿಮೆಂದು ಮೂರು ಮೂರು ದಿವಸಕ್ಕೊಮ್ಮೊಮ್ಮೆ ಕರೆದು ಕೇಳುತ್ತುಮಿರೆ ಮತ್ತೊಂದು ದಿವಸಂ ವಿಷ್ಣು ಮನುಷ್ಯ ಸುಖ ದುಃಖಮನನುಭವಿಸುವುದಂ ಈಶ್ವರಂ ಭಿಕ್ಷಮಂ ಬೇಡಿದನದರಿಂದೆಂತು ದೇವರೆಂಬುದು? ಅರಿಪ ಅಲ್ಲಾ ಖುದ ಬೇರಿಪ್ಪನಾತಂ ದೇವಂ. ಮುನ್ನ ಶಿವನ ಬಳಿಯಿಂದಾ ಖುರಾನು ಬಪ್ಪುದುಂ ನೋಡಿ ಪರಿಣಮಿಸಿದವರ್ ಪರಂಗಿಗಳಾದರ್. ಒಡಂಬಡವರ್ ಹಿಂದೂಗಳಾದರ್. ಓದಿಸಿ ಕೇಳಿದವರ್ ಕರ್ಣಾಟತುರುಕರಾದರ್. ನಂಬಿದವರು ಮಕ್ಕಾಪಟ್ಟಣದ ತುರುಕರಾದರವರಿಂ ತುರುಕರೆ ಹೆಚ್ಚೆಂಬುದುಂ ಪದ್ಮನೆಂಬನೆಂದಂ ಎಲ್ಲರಿಂ ತುರುಕರು ಹೆಚ್ಚಾದೊಡಂ ಈಗಲೆಲ್ಲಾ ಜಾತಿಯು ಸಮನಾದುದರಿಂ ಭೂಮಿಯೊಳ್ ವರ್ತಿಪರದೆಂತೆನೆ.

ಶಿವಂ ಜಾತಿಯನೆಲ್ಲಾ ತೂಗಿನೋಡಲಾಗಿ ಕೆಲಂಬರ್ ಬಹಳ ಕಡಿಮೆಯಾಗೆ ಲಿಂಗಮೆಂದು ಕಲ್ಲಂ ಕಟ್ಟಿದಂ. ಕೆಲಂಬರಿಗೆ ಸ್ವಲ್ಪ ತಗ್ಗಿದುದರಿಂ ಜನಿವಾರದಾರಾ ಹಾಕಿದಂ. ಮತ್ತಮುಳಿದ

ಜಾತಿಗಳೆಲ್ಲಕ್ಕಮವರವರಿಗೊಂದೊಂದು ಚಿಹ್ನೆಯನಿಟ್ಟು ಸಮಮಂ ಮಾಡಿ ತುರುಕರಂ ತೂಗಲೆಲ್ಲರಿಂದಧಿಕವಾಗೆ ಇವರ್ ಎಲ್ಲಾ ಜಾತಿಗಿಂದಲು ಹೆಚ್ಚಾಗಿರೆ ಸರ್ವಸಮಾನವಾಗಬೇಕೆಂದು ಕಿಂಚಿತು ಚರ್ಮಮಂ ತೆಗೆದು ಮುಂಜಿಯಂ ಮಾಡಿ ಸಮಾಮಾಡಿದನೆಂಬುದುಂ ಕೋಪಿಸಿ ನಿಮ್ಮ ನಿಮ್ಮ ದರ್ಶನಾಂಕಮಂ ತೆಗೆದು ಜಾತರೂಪಾದೊಡೆಲ್ಲರಿಂದಧಿಕವಾಗಿ ಬಳಿಕ ಮುಂಜಿಯಾಗಿ ನಡುವಣ ಚರ್ಮಮಂ ಕಳೆದೊಡೆ ಸಮಮಾಗುವಿರೆಂದು ಚೇಲಿಮಾಡಿಸಿಕೊಳ್ಳಿಯೆಂದು ನುಡಿವುದುಂ. ಇಲ್ಲಿ ಜೈನರ್ ಪೂರ್ವಮತಮೆಂಬುದರಿಂದವರಂ ವಿಚಾರಿಸಿ ಒಪ್ಪಿಸಿದೊಡಾವೆಲ್ಲರುಂ ಒಪ್ಪಿಕೊಳ್ಳುತ್ತಿದೇವೆ ಎನಲಾಗಿ ಮೂರು ನಾಲ್ಕು ಜನ ಜೈನರಿರ್ದೊಡವರಂ ಕರೆದು ಎಲ್ಲಾ ಮತಂಗಳೊಳ್ ಆದಿಮತ ಜೈನಮತವೇ ದೊಡ್ಡದೆಂದು ತಿಳಿದಂಥಾವರು ಹೇಳುತ್ತಿದಾರೆ ಎಂಬುದು ಪಾದಶಾಯಿಯದಕ್ಕೆ ಸಾಕ್ಷಿ ಶಾಸನವೇನಿಪ್ಪುದದಂ ತೋರಿಸುವುದೆನೆ ನಮ್ಮ ಗುರುಗಳ್ ನೂರು ಗಾವುದದಲ್ಲಿದ್ದಾರೆ ಅವರಂ ಕರೆಸಿ ಕೇಳಿದರೆ ಹೇಳುತ್ತಿದಾರೆ ಎನೆ ಅವರು ಬರುವುದಕ್ಕೆಷ್ಟು ದಿವಸ ಬೇಕೆಂಬುದುಂ ಎರಡು ಮೂರು ತಿಂಗಳು ಬೇಕೆಂದೊಡೆ ಎರಡು ತಿಂಗಳೊಳ್ ನೀವು ಪೋಗಿ ಕರೆದುಕೊಂಡು ಬಂದು ಸಾಕ್ಷಿ ತೋರಿಸಿದರೆ ಸಮ, ಅದರ ಮೇಲೊಂದು ದಿನಂ ಮೀರಿದಲ್ಲಿ ಮುಸಲಮಾನರಾಗುತ್ತೇವೆಂದು ಕೈ ಕಾಗದವನ್ನು ಬರೆಸಿಕೊಂಡು ನಿಮ್ಮ ಗುರು ಬಂದು ನಮ್ಮ ಗುರುವಂ ಜಯಿಸಲೆಮ್ಮ ಗುರುವಿಗೆ ಚಿನ್ನದ ಕಡಿವಾಣಮಂ ಸೇರಿಸಿ ಮೇಲೆ ಕುಳಿತು ಮಸೀತಿಪರ್ಯಂತ ಪೋಪುದಿಲ್ಲದೊಡೆ ನಮ್ಮ ಗುರು ಪೋಪುದೆಂದು ಭಾಷೆಗೆಯ್ದುಬಿಡೆ ಯೋಚಿಸಿ ಪೆನುಗೊಂಡೆ ಲಕ್ಷ್ಮೀಸೇನ ಭಟ್ಟಾರಕಂ ವಿದ್ಯಾನುಶಾಸನಮಂ ಪಾರ್ಶ್ವಕಲ್ಪ ಜ್ವಾಲಿನೀಕಲ್ಪ ಪದ್ಮಾವತಿಕಲ್ಪ ಶಾರದಾ ಕಲ್ಪ ಕಾಮಚಾಂಡಾಳಿಕಲ್ಪ ರಕ್ತಚಾಮುಂಡೇಶ್ವರಿಕಲ್ಪ ಬಾಹುಬಲಿಕಲ್ಪ ಮತಂಗೇಶ್ವರಿಕಲ್ಪ ಕೂಷ್ಮಾಂಡೀಕಲ್ಪ ನಾಗಾರ್ಜುನಕಲ್ಪ ಬ್ರಹ್ಮವಿದ್ಯೆ ಬೀಜಕೋಶ ಮೊದಲಾದವಂ ನೋಡಿ ತಿಳಿದು ಜಾಲಿನೀಕಲ್ಪದ ಮಣಿವಿದ್ಯಮಂ ಸಾಧಿಸಿ ಷಟ್ಕರ್ಮದೊಳ್ ಬಲಿಷ್ಠರಾಗಿಪ್ಪವರ ಕರತಪ್ಪುದೆಂದತಿವೇಗದಿಂದೊಂದು ತಿಂಗಳ್ಗೆ ಬಂದಾ ಗುರುಗಳಂ ಕಂಡು ವಂದನೆಗೆಯ್ದು ತಾವು ಬಂದ ಕಾರ್ಯಮಂ ಪೇಳಿ ಬೇಗದಿಂ ಪೋಗಲೆಂಬುದು, ಆದೊಡಾಗಲಿ ಹೋಗಬಹುದೆಂದೇಳೆಂಟು ದಿವಸಂ ಕಳೆಯೆ ನಾವು ತಲಪುವನ್ನೆಗಂ ಗಡಿಯ ದಿವಸಮಿರುವುದೆಂದೊಡಾಗಲಿ ಎನ್ನುತ್ತಂ ಪದಿನೈದು ದಿವಸಮಾಗೆ ನಾವಿನ್ನಿವರಂ ಕರೆದುಕೊಂಡೆಯ್ದಿದರೂ ಎಲ್ಲರನ್ನು ಚೇಲಿಮಾಡದೆ ಬಿಡನೆಂದು ಬಹುಚಿಂತಾಕ್ರಾಂತರಾಗಿ ನಮ್ಮ ಜೀವಮಂ ತೊರೆವುದೆ ನಿಶ್ಚಯಮೆಂದಿರ್ದು

ಮತ್ತೊಂದು ದಿನಂ ಗುರುಗಳ್ ಕರೆದೆಷ್ಟು ದಿವಸಮಿಪ್ಪುದೆನಲಿನ್ನು ಮೂರು ದಿವಸಮೆಂಬುದು ಆ ದಿವಸಮಿರ್ದು ಮರುದಿವಸ ಸಂಜೆಯೊಳ್ ತಮ್ಮ ಸಾಮಾನು ಪುಸ್ತಕ ಮೊದಲಾದುವಂ ಸ್ವಪುರದ ಬಹಿರ್ಭಾಗದೊಳ್ ಗುಡಾರಮನಿಕ್ಕಿಸಿಯದರೊಳಿರಿಸಿ ಶಿಷ್ಯರ್ ಕರೆಯಬಂದ ಮನುಷ್ಯರ್ವೆರಸಿ ಪವಡಿಸಿರ್ದು ದೂರಾಗಮನವೆಂಬ ವಿದ್ಯದಿಂ ಮುಹೂರ್ತದೊಳಗಾಗಿ ಡಿಳ್ಳಿಯ ಬಹಿರ್ಭಾಗಮನೆಯ್ದಿ ಉಷಃಕಾಲದೊಳೆದ್ದು ಗುರುಗಳ್

ಕ್ರಿಯಾನುಷ್ಠಾನಮಂ ಮಾಡುತ್ತಿಪ್ಪ ಸಮಯದೊಳೆಲ್ಲರುಂ ಎದ್ದು ಪೊರಗೆ ಬಂದೀಕ್ಷಿಸೆ ಡಿಳ್ಳೀಪುರವಂ ಕಂಡಾಶ್ಚರ್ಯಂಬಟ್ಟು ಬದುಕಿದೆವೆಂದು ಗುರುಗಳ್ ಬಂದೂರ ಸಮೀಪದೊಳಿರ್ದಪರೆಂದು ಸುರತಾಳಂಗರಿಪಲವರಂ ಬರಿಸಲೆಂದು ಚಿನ್ನ ಬೆಳ್ಳಿತಟ್ಟೆಗಳೊಳ್ ಗೋಮಾಂಸ ಮೊದಲಾದ ನಾನಾ ಬಗೆಯಡಗಂ ತುಂಬಿಸಿ ಪಟ್ಟೆದುಕೂಲಂಗಳನಾಚ್ಛಾದಿಸಿ ಕಾಣಿಕೆಯೆಂದು ಕಳುಹಿಸಲವಂ ಕಂಡು ದೂರದೊಳೆ ಇರಿಸಲೆಂದದಕ್ಕೆ ಪುಷ್ಪಾಕರ್ಷಣಂಗೆಯ್ದು ನಾವಾಸ್ಥಾನಕ್ಕೆ ಬಪ್ಪರಲ್ಲ, ಏನು ಹೇಳಿ ಕಳುಹಿಸಿಕೊಟ್ಟಾಗ್ಯು ಪ್ರತ್ಯುತ್ತರಮಂ ಕೊಡಲಾದೀತು. ಪ್ರತಿಕಾಣಿಕೆಕೊಟ್ಟರೆಂದಾ ತಂದ ಭಾಜನಂಗಳಂ ಸುರಿತಾಳಗೊಪ್ಪಿಸಿ ಬನ್ನಿಯೆಂದು ಬಂದ ಮನುಷ್ಯರಂ ಕಳುಹಿಸಲಾ ವಾರ್ತೆಯಂ ಪಾದಶಾಯಿಗೆ ಪೇಳಿ ತಟ್ಟೆಗಳಂ ಮುಂದಿಕ್ಕುವುದುಮಾ ವಸ್ತ್ರಂಗಳಂ ತಾನೆ ತೆಗೆದು ನೋಳ್ಪಿನಂ ಜಪಾ ಜಾಜಿ ಕರವೀರ ಚಂಪಕಾ ಮಲ್ಲಿಕಾ ಕುಂದ ನಂದ್ಯಾವರ್ತಾದಿ ನಾನಾ ಜಾತಿ ಕುಸುಮಂಗಳತಿಪರಿಮಳದಿ ಬಿರಿಮುಗುಳ್ಗಳಿಂ ತೋರ್ಪುದುಮಾಶ್ಚರ್ಯಂಬಟ್ಟು ನಾಳೆ ನಾನೆ ಬರುವೆನೆಂದು ಮರುದಿವಸಂ ಸ್ವಗುರು ಸಮೇತಂ ಗೂಟಮಿಲ್ಲದ ಪಾವುಗೆಯಂ ಮೆಟ್ಟಿ ಬಪ್ಪಾಗಳಂತರಿಕ್ಷಮೆಂಬ ವಿದ್ಯೆಯಿಂ ಭೂಮಿಯಿಂ ಮೇಲಿಮ್ಮೊಳ ದೊಳು ಪದ್ಮಾಸನದೊಳ್ ಕುಳ್ಳಿರ್ದ ಜೈನಮುನಿಪಂಗೆ ಸುರಿತಾಳಂ ನಮ್ರನಾಗಿ ಸಲ್ಲಾಂ ಮಾಳ್ಪುದುಂ ಧರ್ಮಲಾಭಮೆಂದು ಪರಸೆ ಗುರುವೆರಸಿ ಕುಳ್ಳಿರ್ದು ಮತಂಗಳೆಲ್ಲಕ್ಕು ಆದಿ ಜೈನಮತಮುತ್ಕೃಷ್ಟಮೆಂಬುದಕ್ಕೆ ಶಾಸನಗುರಿತು ಸಾಕ್ಷಿಯಂ ತೋರಿಸುವುದೆಂಬುದುಮದು ಮಹಾಘೋರಾರಣ್ಯದೊಳುಂ ಪರ್ವತಂಗಳೊಳುಂ ಸಮುದ್ರದೊಳು ಮಿಪ್ಪುದರಿಂದಿಲ್ಲಿ ತೋರ್ಪುದೆಂತುಮೆಂದಾ ಮುನಿಗಳ್ಗೆಂದನಾವಾವೆಡೆಯೊಳೆಂದೊಡೆ ನೀಲಗಿರಿಯ ಪರ್ವತದೊಳಂ ಬೆಳ್ಗೊಳದೊಳು ರುಮ್ಮಿಯ ಉತ್ತರ ಮಹಾ ಅರಣ್ಯದೊಳುಂ ಪಶ್ಚಿಮಸಮುದ್ರದೊಳುಮಿಪ್ಪವಲ್ಲಿಗೆ ಪೋಗಲು ಕಾಣಲಪ್ಪುವುದೆನೆ ಆದೊಡೆ ಪಶ್ಚಿಮ ಸಮುದ್ರಮನೆಯ್ದಿ ನೋಳ್ಪೆವೆಂದದಕ್ಕೆ ತಕ್ಕ ಸಾಮಾಗ್ರಿಸಹಿತ ಮರುದಿವಸಂ ಪಯಣಂ ಮಾಡಿ ಕೆಲವು ದಿವಸಕ್ಕೆ ಸಮುದ್ರಮನೆಯ್ದಿ ತಡಿಯೊಳ್ ಬೀಡಂ ಬಿಟ್ಟು ಪಶ್ಚಿಮಾಭಿಮುಖದೆ ನೋಡೆಂದು ತೋಱಿಸೆ ಉಡಿಯಂ ಮುಟ್ಟಲಿರ್ದ ಸಮುದ್ರಮಂ ಮುಗಿಲಂ ಮುಟ್ಟುವ ಉತ್ತಮಾಂಗದಿಂ ಶುದ್ಧಸ್ಫಟಿಕಕಾಂತಿಯಿಂ ತೊಳಗಿ ಬೆಳಗುತ್ತಿರ್ದ ಪುರುಪರಮೇಶ್ವರನ ಪ್ರತಿಬಿಂಬಮಂ ತೋರ್ಪುದುಮತ್ಯಾಶ್ಚರ್ಯಮಾಗೆ ನೋಡಿ ಸಮೀಪಕೆಯ್ದಿ ನೋಡಲೆಂದು ದೋಣಿಗುರಾಬು ಮುಂತಾದವಂ ತರಿಸಿಮವರೊಳೆ ಸಮುದ್ರಮಂ ಪೊಕ್ಕು ನಡೆವುದುಮಾ ಭಟ್ಟಾರಕರ್ ವಸ್ತ್ರಚೌಕಮಂ ನೀರಮೇಲಿಕ್ಕಿ ಜಲಸ್ತಂಭದಿಂ ಕುಳಿತು ಮೇಲೊಂದು ವಸ್ತ್ರಮಂ ಛಾಯೆಗೆಯ್ದು ಆದಿ ಬ್ರಹ್ಮನ ಪ್ರತಿಬಿಂಬದ ಸನ್ನಿಧಿಗೆಯ್ದೆ ಸುರತಾಳಂ ಆಪ್ತರೊಡನೆ ಸಮೀಪಕ್ಕೆಯ್ದಲೆಂದು ಬಹಳ ಪೊತ್ತು ನಡೆಸಿದಾಗ್ಯೂ ನೂರು ಮಾರಿಂದೊಳಗೆ ಪೋಗಲೀಯದಿರೆಯಾ ದೇವನ ನೆಳಲುಪ್ಪಂದಸಮುದ್ರಂ ಸ್ವಾದೋದಕಮಪ್ಪುದುಂ ಛೈತ್ರಂಗಳು ಬಲಕಿಕ್ಕಿ ಪೋಗೆ ಶಂಭಮುಂ ಎಡದಿಂ ಪೋಗೆ ನಷ್ಟಮಪ್ಪುದುಂ ಇದಿರೊಳ್ ಪ್ರತಿದಿನಂ ಸೂರ್ಯೋದಯಮಾಗಲೊಂದು ಕಮಲಂ ವಿಕಸಿತಮಾಗೆ ಆ ಸಮಯದೊಳೊಪ್ಪುವುದುಂ

ದೇವ ದಾನವರೆಯ್ದಿ ಪೂಜಿಸುವುದುಂ ಮೊದಲಾದತಿಶಯುವುಂ ತೋರಿಸೆ ಮಹದಾಶ್ಚರ್ಯಂಬಟ್ಟು ದೇವಪ್ರತಿಮೆಯ ಪ್ರಮಾಣಮಂ ನೋಳ್ಪೆನೆಂದು ಸೂತ್ರದ ದಾರಮಂ ತರಿಸಿ ಅಳೆಯಿಸಲೆಷ್ಟಳೆಯುತ್ತಾ ಪೋಗಲಷ್ಟಷ್ಟು ಪೆರ್ಚುತ್ತುಂ ಬರಲನೇಕ ವಾರಂ ಅಳೆದಾಗ್ಯು ಪ್ರಮಾಣಮಂ ಕಾಣದೆ ಎಲ್ಲರು ಸಾಷ್ಟಾಂಗಪ್ರಣತರಾಗಿ ಡಿಳ್ಳಿಗೆ ಬಂದು ಜಿನಮತಮೆ ಆದಿಯೆಂದು ತನ್ನ ದೇಶಂಗಳ್ಗೆ ಪರವಾನೆ ಬರೆಸಿ ಭಟ್ಟಾರಕರಂ ಪೂಜಿಸಿ ಶ್ವೇತಚ್ಛತ್ರ ಚಾಮರ ಸಿವಿಗೆ ಸಿಂಹ ಶಾರ್ದೂಲ ಮಕರ ಮುಂತಾದ ಬಿರುದಂ ಕೊಟ್ಟು ಮೆರೆಯಿಸಿ ತಾನು ಮಾಡಿದ ಪ್ರತಿಜ್ಞೆಗೆ ಚಿನ್ನದ ಕಡಿವಾಣಮಂ ಕೊಟ್ಟೆಮ್ಮ ಗುರುವಿಗೆ ಹಾಕಿ ನಡೆಸುವುದೆನೆ ನಿಮ್ಮ ಭಾಷೆ ಸಂದುದೀ ಕಡಿವಾಣಮೆಮಗೆ ಬಿರಿದಾಯ್ತೆಂದು ಪೇಳಿದರಂದಿಂದಾ ಅನ್ವಯಕ್ಕೆ ವಂಕಟಿ ಕಡಿವಾಣವೆಂದು ಬಿರುದಾಯಿತು.

ಮತ್ತಂ ಪಾದಶಾಯಿ ಜೈನಪುರಾಣಮನೋದಿಸಿ ಕೇಳ್ದು ತನ್ನ ಭವಮಂ ಪೇಳಿಮೆಂದು ಬಹುಬಗೆಯೊಳ್ ಕಾಡಿದೊಡವಧಿಯಲ್ಲೆಂತು ಪೇಳುವೆವೆಂದು ಚಿಂತಿಸುವಾಗಲವರ್ಗೆ ಸ್ವಪ್ನವಾಗಲಾ ಕ್ರಮದೊಳೆ ಪೇಳ್ದರ್. ಸುರಾಷ್ಟ್ರದೇಶದೊಳೊರ್ವನವಧೂತಂ ಬಹುದಿವಸಂ ನಿರ್ವಾಣದಿಂ ತಪಂಗೆಯ್ದುಪವಾಸದಿಂ ಬರುತ್ತುವೊಂದೂರೊಳೊರ್ವ ಕುರುಬಂ ಕುರಿಯಮಾಂಸಮನಡುವಲ್ಲಿಗೆ ಪೋಗಿ ಗ್ರಾಸಮಂ ಬೇಡಿ ಕೈಯನೊಡ್ಡಿದೊಡಾತನಾ ಮಾಂಸಮನಿಕ್ಕಲುಂಬಲ್ಲಿ ಒಂದಿಲಿಯನಟ್ಟಿ ಬಪ್ಪ ಸರ್ಪನಾ ಸನ್ಯಾಸಿಯ ಪಾದಾಂಗುಷ್ಠಮಂ ಪಿಡಿದೊಡೆ ವಿಷಂ ಪೂರಿಸೆ ಸತ್ತು ಈ ಡಿಳ್ಳೀಪಟ್ಟಣದ ಪೊರವೊಳಲ ಕುರುಬಂ ಕರಿಗನೆಂಬಂಗೆ ಮಣಿಕನೆಂಬ ಮಗನಾಗಿ ಬೆಳೆದು ಪಿತನೊಡನೆ ಕುರಿಗಳಂ ಕಾಯಲ್ ಪೋದೊಡೆ ಪಿತಂ ಪಾಲಂ ಕರೆದು ಕರಗದೊಳ್ ತುಂಬಿಕೊಟ್ಟು ಮನೆಗೆ ಕಳಿಪೆ ಬರುವಲ್ಲಿ ಒಂದು ಮಾವಿನ ಮರದಡಿಯೊಳ್ ಧ್ಯಾನ ಮೌನಾನುಷ್ಠಾನದೊಳಿರ್ದ ಜಿನಮುನಿಯಂ ಕಂಡಡ್ಡಗೆಡೆದು ಸ್ವಾಮಿ ಯೋಗಿಗಳೆ ಮೂರು ದಿವಸದಿಂದಿಲ್ಲೆ ಇದ್ದೀರಿ, ಪಸುವನೆಂತು ಸೈರಿಪುದು. ಈ ಹಾಲನಾದರು ತೆಗೆದುಕೊಳ್ಳಿರೆಂದವರ ಬಳಿಯೊಳಾ ಕರಗಮನಿಸಿರಿ ಮನೆಗೆ ಬರೆ ರಾತ್ರಿಯೂಟದೊಳ್ ಪಾಲನೇನ ಮಾಡಿದೆಯೆಂದಾಗ್ರಹದಿಂ ಮಗನಂ ಪೊಯ್ದೊಡಂ ಪೋಗಿ ಪೊರಗೊಂದು ಬೇಲಿ ಮರೆಯೊಳೊರಗಿರಲೊಂದು ಪುಲಿ ಬಂದು ತಿನ್ನೆ ಸತ್ತು ಮೂವತ್ತೈದು ವರ್ಷದೊಳೆ ಬಂದು ಪುಟ್ಟಿ ಪಾದಶಾಯಾದಿರೆಂದು ಪೇಳ್ವುದುಮಾ ಕುರುಬನಂ ಬರಿಸಿ ಕೇಳಲವಂ ಬಂದು ಮೂವತ್ತೈದು ವರ್ಷದೊಳೆನ್ನ ಮಗಂ ಹಾಲ ತರದುದಕ್ಕೆ ನಾಂ ದಂಡಿಸೆ ಹೋಗಿ ಹೊಲದ ಬೇಲಿಯೊಳ್ ಪುಲಿ ಪಿಡಿಯೆ ಸತ್ತನೆಂದು ಪೇಳೆ ನಿಶ್ಚಯವೆಂದು ನಂಬಿದನು.

ಮತ್ತಂ ಕೆಲವು ದಿವಸದಿಂ ಮೇಲೆ ದಂಡಿನೊಳ್ ದೇವೇಂದ್ರಕೀರ್ತಿಗಳಂ ಮನ್ನಿಸಿ ತನ್ನಲ್ಲಿಯೆ ಇರಿಸಿಕೊಂಡಿರ್ದಂ. ಮತ್ತೊಂದು ದಿನಂ ಮೀಸೆಯುಳ್ಳನಾರೆನಲೊಬ್ಬನೆಂದಂ ಹೆಣ್ಣುಮಕ್ಕಳಂ ಪಡೆಯದನೆಂದೊಡೆ ಮೆಚ್ಚುಗೊಟ್ಟಂ. ತನ್ನ ಪೆಂಡತಿಗೆಂದ ನೀಂ ಬಸುರಾಗಿರ್ಪೆ ಕೆಂಪಾಗಿರ್ದ ಗಂಡುಮಗುವ ಹಡೆಯದಿರೆ ನಿನ್ನ ಕೊಂದುಹಾಕುವೆನೆಂದು ಪ್ರತಿಜ್ಞೆಯಂ ಮಾಡಿದೊಡಾಕೆ ತವರುಮನೆಗೆ ಪೋಗಿ ಕಪ್ಪಾದ ಗಂಡುಮಗುವಂ ಪೆತ್ತು ಚಿಪ್ಪಲಿಗಂಗಿತ್ತು

ಆತನ ಮಗು ಕೆಂಪಾಗಿರಲ್ದಂ ಕೊಂಡುಬರೆ ಕೆಲವಾನುದಿವಸಕ್ಕಾ ಮಗಂ ಬೆಳೆದು ಅಮಿಲದಾರ ಚೋಪದಾರ ಮಾಮಲದಾರ ವಜ್ಜೀವೀರರೆಂದು ಹುಡುಗರೆಲ್ಲರಂ ಕಟ್ಟಿಕೊಂಡಾಡುತ್ತಿರಲದಂ ದೇವೇಂದ್ರಕೀರ್ತಿಗಳ್ ನಿನ್ನ ಮಗನೆಂದು ಪೇಳಲ್ ಕರೆಯಿಸಿ ಸುವರ್ಣದಾಭರಣಮನಿಕ್ಕೆ ನಿರಾಜಿ ಪೊದಕೆಯಂ ಪೊದಿಸೆ ಆಡುತ್ತಿರಲೊಬ್ಬ ಭಟ್ಟಂ ಬಂದು ಪೊಗಳೆ ತಾನು ಪೊದೆದಿರ್ದ ವಸ್ತ್ರಮೆಲ್ಲಮಂ ಕೊಟ್ಟುಬರೆ ಪಿತಂ ಕೋಪಿಸೆ ಬೆಳಗಾಗೆ ಪೋಗಿ ಆಭರಣಂಗಳೆಲ್ಲಮಂ ಭಟ್ಟರ್ಗೆ ಕೊಟ್ಟು ಬರೆ ಶಾಭಾಸೆಂದನು

ಆ ಊರೊಳೊರ್ವ ವರ್ತಕನ ಮಗಳೊಡನೆ ಮತ್ತೊಬ್ಬ ಶೆಟ್ಟಿಯ ಮಗನು ಪುದುವಾಳುತ್ತಿರಲ್ ಯಾರು ಯಾರು ಎಷ್ಟು ಬಗೆ ಹೇಳಿದಾಗ್ಯು ಬಿಡದಿಪ್ಪುದುಂ ಪಾದಶಾಯಿಗೆ ಅರಿಕೆ ಮಾಡಲವರಂ ಹಿಡಿತರಿಸಿ ಬೇಸಗೆಯ ಬಿಸಿಲೊಳ್ ನಿಲಿಸಿರಲಾಗಿ ಹುಡಿ ಕಾದು ತಡವರಿಸುತ್ತಿದ್ದ ಮಿಂಡಗಾರನ ಕಾಲ ಕೆಳಗೆ ತಾನುಟ್ಟ ಸೀರೆಯನೆಲ್ಲಾ ಪರಿದು ಹಾಸುತ್ತಿರಲದಂ ನೋಡಿ ಜನ್ಮಾಂತರದ ಸಂಬಂಧವೆಂದಿರ್ವರಂ ಅಗಲಿಸದೆ ಕಳುಹಿಸಿಕೊಟ್ಟನು. ದೇವೇಂದ್ರಕೀರ್ತಿಗಳ್ ಆಚಾರಮೆಂಬ ಶಾಸ್ತ್ರಮನೋದುತ್ತಿರೆ ಪಟ್ಟದ ಕುದುರೆ ಹೊಲೆಯರಿಂ ಮೈಸೇವೆಯಂ ಮಾಡಿಸಿಕೊಳದೆ ಪುಲ್ಲಂ ನೀರಂ ಕುಡಿಯದಿರೆ ಮುನಿಯಂ ಕೇಳಿ ಉತ್ತಮ ಜಾತಿಗಳಿಂ ಸೇವೆಗೊಟ್ಟು ಶೋಧಿಸಿದ ನೀರು ಒಣಗಿದ ಹುಲ್ಲುಮಂ ಕುಡೆ ಕೊಂಡು ಪರಿಣಮಿಸುತ್ತಿರ್ದುದು. ಒಬ್ಬ ಜಮಾದಾರ ಸವಾರಿ ಪೋಗುತ್ತ ಮಾರ್ಗದೊಳು ಬಪ್ಪ ಶ್ರುತಿ ಮವುರಿಯವರಂ ಕಂಡು ಕರೆದು ಗೀತಾ ಬೋಲೆನಲಾ ಮೌರಿಕಾರಂ ತಾನ ಮಾನ ಗಮಕದಿಂ ತನ್ನ ಶಕ್ತಿಯಂ ಮೀರಿ ಅಂದ ಬಂಧುರನಯದಿಂದೊಂದು ಜಾವಪರ್ಯಂತರಕ್ಕು ಮೆಚ್ಚಿಸಲೆಂದು ಬಾಜಿಸಿದೊಡೆ ಅಚ್ಛಾ ಎಂದು ತಾನು ಪೊದ್ದಿರ್ದ ಪಟ್ಟೆಹಚ್ಚಡಮಂ ಶ್ರುತಿಯವಂಗೆ ಪೊದ್ದಿಸಿ ಸೂಲು ಬಿಡದೆ ಊದಿದನೀತನೆ ಘಟ್ಟಿಗನೆಂದು ಪೋಗುತ್ತಿರೆ ಮೌರಿಗಂ ತನಗೇನಾದರು ಕೂಡುವುದೆಂದು ಕಾಡಿದೊಡವನ ಮೌರಿಯಂ ಕಿತ್ತು ತನ್ನಾಳಿನಿಂ ಕಲ್ಲ ಮೇಲೆ ಬಡಿಸಿ ಪುಡಿಯಾಗಲಾತಂಗೆ ಒಳಗುದ್ದು ಹೊರಗುದ್ದುಮನಿಕ್ಕಿಸಿ ಕಳೆದಂ. ಒಬ್ಬ ವಿದ್ವಾಂಸಂ ಕೆಲವು ದಿವಸದಿಂ ಡಿಳ್ಳಿಯಂ ನೋಡಲೆಂದು ಪೋಗಿ ಅಲ್ಲಿರ್ದು ಇಂತೆಂದಂ

ವೃ || ಮಸೀತಿ ಶತ ಸಂಕುಲಾತ್ ಪಿಶಿತರಾಶಿ ಪೂರ್ಣಾಪಣಾತ್
ಧ್ವನದ್ಯವನ ಭೀಷಣಾದ್ರುಟದನೇಕ ಬಂದೀ ಜನಾತ್
ಸುವರ್ಣ ಸಮಕೇಂಧನಾದ್ದಧಿ ಘೃತಾಗ್ರ ಗಣ್ಯೋದಕಾತ್
ಸದಾ ಶಬರಕೇತನಾದಪಸರಾಮ ಡಿಳ್ಳೀಪುರಾತ್ ||

ಮತ್ತಿತ್ತಲ್ ಹರಿಹರರಾಯನೆಂಬೊಂ ರಾಜ್ಯಮನಾಳುತ್ತುಂ ಹರಿಹರಮೆಂಬ ಪುರಮಂ ಮಾಡಿ ಹರಿಹರದೇವರಂ ಸ್ಥಾಪಿಸಿ

ವೃ || ಪಾಯಾತ್ಕುಮಾರಜನಕಾಖ್ಯ ಉಮಾವಿಲಾಸ
ಶಂಖಪ್ರಭಾಶ್ಚನಿಧನೇಶ ಗವೀಶಯಾನಃ

ಗಂಗಾ ಚ ಪನ್ನಗಧರಾಶ್ಚ ಪಿನಾಕಸತ್ತ (?)
ಆದ್ಯಕ್ಷರೇಣ ಸಹಿತೋ ರಹಿತೋ ಭವಂತು (?) ||

ಎಂದು

ವೃ || ಅಳಿನೀಲಾಳಕ ಅಗ್ನಿಭಾಸುರಜಟಾ ಲೋಲೇಕ್ಷಮುಗ್ರೇಕ್ಷಣಂ
ತಿಲಕಾರ್ಧಂ ನಯನಾರ್ಧಮುನ್ನತ ಕುಚಂ ರಮ್ಯೋರುವಕ್ಷಸ್ಥಲಮ್
ವಲಯಾಂಕಂ ಫಣಿಕಂಕಣಂ ಸುವಸನಂ ವ್ಯಾಘ್ರಾಜಿನಂ ಲೀಲಯಾ
ಲಲಿತಂ ಭೀಷಣಮರ್ಧನಾರಿಘಟಿತಂ ರೂಪಃ ಶಿವಃ ಪಾತುವಃ ||

ಎಂಬುದರಿಂದರ್ಧನಾರೀಶ್ವರನಂ ಹರಿಹರನೆಂಬುದವಾ ಯುಕ್ತಿಯೆಂದು ವೀರ ಶೈವರ್ ಚರ್ಚಿಸುವುದುಂ ಹರಿಹರಮಹಾರಾಯಂ ವಿಷ್ಣುಗಮೀಶ್ವರಂಗಂ ಭೇದಮಿಲ್ಲ ಅಜ್ಞಾನಿಗಳ್ ಭೇದಮಂ ಮಾಡಿ ಇಹಪರಮಂ ಕೆಡಿಸಿಕೊಂಬರೆಂದು ಸೂತ್ರಮಂ ಪೇಳಿ ಕೆಲಂಬರನೊಪ್ಪಿಸಿದಂ. ಕೆಲಂಬರ್ ಈಶ್ವರನೇ ಸರ್ವೋತ್ಕೃಷ್ಟನಾತನೆ ಗತಿಮತಿಗೆ ಕಾರಣಮೆಂದು ನಂಬಿದರ್. ಕೆಲಂಬರ್ ವಿಷ್ಣುವೆ ಸಕಲ ದೇವರ್ಗೆ ಮುಖ್ಯಂ, ಈಶ್ವರಂ ಗೌಣಮೆಂದರ್.

ಈ ಹರಿಹರರಾಯನು ೩೬ ವರ್ಷ ರಾಜ್ಯವಾಳಿದಂ. ಬಳಿಕ ವೀರಬುಕ್ಕರಾಯಂ ೭ ವರ್ಷವಾಳಿದಂ. ಮತ್ತಂ ಇಮ್ಮಡಿ ಹರಿಹರರಾಯಂ ೧೦ ವರ್ಷವಾಳ್ದಂ ಭೋಜ ವಿಕ್ರಮಂ ೫ ವರ್ಷವಾಳ್ದನಿಂತೈವತ್ತಾರು ವರ್ಷಂ ಸಲೆ ಹೊಯಿಸಳದೇಶಾಧಿಪತಿ ಎರಡನೆ ಬುಕ್ಕರಾಯಂ ರಾಜ್ಯಪಾಲನೆ ಮಾಳ್ಪಲ್ಲಿ ಮೊದಲು ಕೆಲವಾನು ದಿವಸದಂದು ಕಂಚಿಯೊಳ್ ಶೈವರು ಸ್ಥಾನಮಂ ಮಾಡಿದನಂತರ ರಾಮಾನುಜಮತಸ್ಥಾನಮಂ ಮಾಡಿ ಜಿನಕಂಚಿ ಶಿವ [ಕಂಚಿ] ವಿಷ್ಣುಕಂಚಿಯೆಂದು ಮೂರಾದವರಲ್ಲಿ ಶೈವರೊಳ್ ಅಪ್ಪಯ್ಯ ದೀಕ್ಷಿತರುಂ ವೇದಾಂತಾಚಾರ್ಯರೀರ್ವರು ವಿದ್ವಾಂಸರಾಗತಿಪ್ರಬಳರಾಗಿರೆ ಅಪ್ಪಯ್ಯದೀಕ್ಷಿತಂ ಶತಕ್ರತುವಂ ಮಾಳ್ಪೆನೆಂದು ಬಹಳ ಮೇಕೆ ಆಡುಗಳ್ ಮೊದಲಾದವಂ ಹತಿಸಿಬೇಳೆ ಕೆಲವು ಬ್ರಾಹ್ಮಣರ್ಗೆ ಲಿಂಗಧಾರಣೆಯಂ ಮಾಡಿಸಿ ವೀರಶೈವಮಂ ಪ್ರಕಟಿಸುತ್ತಿಪ್ಪುದುಂ, ವೇದಾಂತಾಚಾರಿಗಳ್ ವೀರವೈಷ್ಣವರಂ ತೆಂಗಲೆ ವಡಗಲೆ ಎಂದಾದಿಯಾಗಿ ಚಾತಾಳಪರ್ಯಂತಂ ನಾನಾ ಭೇದಮಾಗೆ ಪೊಲೆಯರ್ಗೆ ತಿರುಕುಲಮೆಂದು ದಾಸರಂ ಪ್ರಕಟಂ ಮಾಡಿ ಬಿಳಿಯ ಕಲ್ಲುಬೆಟ್ಟದೊಳ್ ರಂಗಾಲಯೋದ್ಧಾರಣಂಗೆಯ್ದು ತಿರುಕುಲದಾಸರಿಂ ಪೂಜಿಸಿ ವೈಷ್ಣವಮತೋದ್ಧಾರಕರಾಗಿರ್ದು ಅಪ್ಪಯ್ಯದೀಕ್ಷಿತರು ಮಾಡುವ ಯಜ್ಞಮಂ ದೂಷಿಸೆ ಒಬ್ಬರೊಳೊಬ್ಬರ್ಗೆ ವಾಗ್ವಾದಮಾಗೆ

ವೃತ್ತ || ಯಜ್ಞೇ ಮಂತ್ರಮುಖೇನ ಮೇಷಹನನಾತ್ತಸ್ಯೈವ ಮಾಂಸಂ ಪುನ
ಶ್ಶೇಷನ್ಮಾತ್ರಸುಸೇವನಾಚ್ಚ ಸಫಲಂ ಸ್ವರ್ಗಂ ಚ ಗಚ್ಛಂತಿ ಯೇ
ನಿತ್ಯಂ ಕೋಟಿಮಿತಂ ಪಶುಂ ಚ ವಿವಿಧಂ ಹತ್ವಾ ಯಥೇಷ್ಟಂ ಪುನ
ರ್ಜಗ್ಧ್ವಾ ತೇ ಯವನಾಶ್ಚ ಶೂದ್ರನಿಚಯಾಃ ಮೋಕ್ಷಂ ನ ತೇ ಯಾಂತಿ ಕಿಮ್ ||

ಅಜಂ ಹತ್ವಾ ಸುರಾಂ ಪೀತ್ವಾ ಕೃತ್ವಾ ಪಲಲ ಭೋಜನಮ್
ಯದಿ ಸ್ವರ್ಗಮವಾಪ್ನೋತಿ ನರಕಂ ಕೇನ ಗಮ್ಯತೇ
ನಿಶ್ಚೇಷ್ಟಾನಾಂ ವಧೋ ರಾಜನ್ ಕುತ್ಸಿತೋ ಜಗತೀಪತೇ
ಕ್ರತುಮಧ್ಯೋಪನೀತಾನಾಂ ಪಶೂನಾಮಿವ ರಾಘವ ||
...ಕ್ರತುಂಧ್ವಂಸೀ ಮಹೇಶ್ವರಃ
ವಿರಿಂಚಿರ್ಜಗತಃ ಕರ್ತಾ ಸಹರ್ತಾ ಗಿರಿಜಾಪತಿಃ
ರಕ್ಷಕಃ ಪುಂಡರೀಕಾಕ್ಷ ಇತ್ಯೂಚುಃ ಶ್ರುತಿವೇದಿನಃ ||
ಏಕಾಮೂರ್ತಿಸ್ತ್ರಯೋಭಾಗಾಸ್ಸತ್ಯಂ ಸ್ಯಾದೀದೃಶಂ ವಚಃ
ನ ಶೈವೋ ವಂದತೇ ವಿಷ್ಣುಂ ಹರಿಭಕ್ತಾಸ್ತು ನೋ ಶಿವಮ್ ||

ಎಂಬುದುಂ ವಿಷ್ಣುವಿನ ಭಕ್ತಿವಿಶೇಷಮಂ ಪೇಳ್ದರ್

ವೃತ್ತ || ಯೂಯಂ ಕೇ ಹರಿಪಾದವಂದನರತಸ್ತ್ರಿಪಾದಪದ್ಮಾಂತರಾ
ನಾದಚ್ಛಿದ್ರವಿಲಂವಿಕೇಶವಿಲುಠಲ್ಲಿಕ್ಷಾಭವಂತೋಽಪಿ ಕೇ
ಶ್ರೀ ಮದ್ವೈಷ್ಣವಮೇಢದಂಡವಿಗಲನ್ಮೂತ್ರೋತ್ಥದೂರ್ವಾಂಕುರ
ಗ್ರಾಸಾಸಕ್ತಖರಕ್ಷತಕ್ರಿಮಿಭುಜಾಂ ದಾಸಾನುದಾಸಾವಯಮ್ ||

ಗ್ರಾಮೇ ಸಿಂಹಸಮಾ ರಣೇ ಪಶುಸಮಾಃ ದೇಶಾಂತರೇ ಜಂಬುಕಾಃ
ಆಹಾರೇ ಬಕ ಭೀಮಸೇನಸದೃಶಾಃ ಶ್ವಾನಸ್ಸಮಂ ಮೈಥುನೇ
ರೂಪಂ ಮರ್ಕಟವತ್ ಪಿಶಾಚಲಿಖಿತಂ ಕ್ರೂರಾಃ ಬಲಾ ನಿರ್ದಯಾಃ
ಕಾರ್ಯಾರ್ಥೇ ಮೃದುತಾ ಸಮಾಪ್ತ ಕಠಿಣಾ ಏತದ್ವಿಧಾ ದ್ರಾವಿಡಾಃ ||

ಶ್ಲೋಕ || ದ್ರಾವಿಡಾಶ್ಚ ಹತಾ ವಿಪ್ರಾಸ್ತದ್ಧಾರಾವಾರಯೋಷಿತಃ
ಲಾಲನಾದಿ ಪ್ರಬಂಧೇನ ಶ್ರುತಿಸ್ಮೃತಿಪರೋ ಭವೇತ್ ||
ದ್ರಾವಿಡೇಷು ಚ ಸರ್ವೇಷು ತ್ರಯ್ಯೈವ ಖಲು ಸಾಧವಃ
ಅಜಾತಶ್ಚ ಮೃತಶ್ಚೈವ ಯತ್ರ ಚಿತ್ರೇ ವಿಲೇಖಿತಃ ||

ಎಂದಿಂತು ಕೆಲಂಬರ್ ನುಡಿಯುತ್ತಿರ್ದರಿತ್ತ ಬೆಳ್ಗುಳತೀರ್ಥವಂ ವೈಷ್ಣವರ್ ಕೆಲಂಬರ್ ಕಿಡಿಸುತ್ತಿರಲಲ್ಲಿರ್ದ ಜೈನರ್ ನಿತ್ತರಿಸಲಾರದೆ ಇಂತೆಂದರ್ :

ವೃತ್ತ : ಬಂದುದನರ್ಘ್ಯಕಾಲ ಬಲುಗಾರರೊಳಾದುದು ಸಾಲಂ
ನಿಂದುದು ಶತ್ರು ಮಧ್ಯ ನಿಲಲಾರದೆ ಪೋದೊಡೆ ಹೀನ ಸಂಧಿ ತನುವಿಗೆ
ಬಂದುದು ವ್ಯಾಧಿ ಪಿರಿದಾದ ದರಿದ್ರತೆ ಪೇಳ್ವರಂದಿನ ರಾಯರಿಲ್ಲ ಜನ
ಗೊಂದಡಸಿದರೇಳಡಸಿತೆಂಬ ನೀತಿ ನಿಶ್ಚಯಂ (?) ||

ಎಂದು ಬುಸವಿಸಟ್ಟಿಯೆಂಬಂಗೆ ಪೇಳ್ವುದುಂ ಆತಂ ಸಿಂಗಾಚಾರಿ ಎಂಬ ತರುಣ ಪ್ರಾಯದಹಂಕಾರಿಗೆ ನಿಮ್ಮ ಕಡೆ ತುಂಟಜನರು ನಮ್ಮ ಜಿನಾಲಯಂಗಳ ಘಾತ ಪಾತಮಂ

ಮಾಡುತ್ತಿದಾರೆ. ಅವರಿಗೆ ಬುದ್ಧಿ ಹೇಳಿ ನಿಲಿಸುವುದೆನೆ ಕುಚೇಷ್ಟೆಯಿಂ ಕುಹಕಂಗಳಂ ಮಾಡಿದನದಕ್ಕೆ

> **ಕಪೀರಪಿಶ್ಲೋೕಕಾಪಿಶ | ಯೇನ ಮದೋನ್ಮತ್ತ ವೃಶ್ಚಿಕೇನಂ ಸಂದ**
> **ಷ್ಟಮಪಿ ಚ ಪಿಶಾಚಗ್ರಸ್ತೋೕ | ಕಿಂ ಬ್ರೂಮಶ್ಚೇಷ್ಟಿಕಂ ತಸ್ಯ ||**

ಎಂಬುದರಿಂ ಮಿಥ್ಯಾದೃಷ್ಟಿಗಿದು ಸ್ವಭಾವಮೆಂದು ಬುಸವಿಶೆಟ್ಟಿಯೊರ್ವನೆ ರಾತ್ರಿಯೊಳ್ ಗಿರಿಯೊಳೊರಗೆ ಸಿಂಗಾಚಾರಿ ತೀಕ್ಷ್ಣ ಪುರುಷರಪ್ಪ ಹರಿದಾಸರ್ ಬಂದು ಕೊಲಲೆಂದು ಬರಲವರ್ಗೆ ಪೊಟ್ಟೆಶೂಲೆಯಿಂ ಕಾಣದೆ ಪೋದರು.

ವೃತ್ತ || **ರಣೇವನೇ ಶತ್ರುಜಲಾಗ್ನಿ ಮಧ್ಯೇ | ಮಹಾರ್ಣವೇ ಪರ್ವತಮಸ್ತಕೇವಾ**
ಸುಪ್ತಂ ಪ್ರಮತ್ತಂ ವಿಷಮೇಸ್ಥಿತಂ | ವಾ ರಕ್ಷಂತಿ ಪುಣ್ಯಾನಿ ಪುರಕೃತಾನಿ ||

ಎಂಬುದರಿಂ ಮರುದಿವಸಂ ಶ್ರಾವಕವಿಪ್ರರ್ ಸಹಿತಂ ಬಂದು ಸಿಂಗಾಚಾರಿಯಂ ಕಾಣೆ ನಿಮ್ಮ ಜೈನಮತಮಂ ಕೆಡಿಸಹಬೇಕೆಂದು ನಮ್ಮ ಶಾಸ್ತ್ರವಿದೆಯೆನಲಾಗಿ ಜೈನಮತ ಮನಾವನಾದೊಡೆ ಪಾಲಿಪನಾತಂಗೆ ಸ್ವರ್ಗಮೋಕ್ಷಂ ಅದಕ್ಕಳುಪಿದಂಗನಂತ ಪಾಪ ಇಹದ ಕೇಡು ಪರದೊಳ್ ನರಕದುಃಖ ತಪ್ಪದೆಂದಾ ವೈಶ್ಯಶ್ರಾವಕದ್ವಿಜರ್ ಪೇಳೆ ಅದಕ್ಕೆ ದೃಷ್ಟ ಶ್ರುತಾನುಭವಂಗಳೈನೂರು ಶ್ಲೋಕಮಂ ಪೇಳೆ ನಿಮ್ಮ ಮತಕ್ಕೆ ನೀವು ಬಲಾಮಾಡಿ ಶಾಸ್ತ್ರಮಂ ಮಾಡಿದ್ದೀರಿ ಎಂಬುದುಂ ಬುಸವಿಶೆಟ್ಟಿಯು ಜಿನಮತಶಾಸ್ತ್ರಮೆ ಸತ್ಯಮುಳಿದ ಮತಂಗಳ ಶಾಸ್ತ್ರಂ ಮಿಥ್ಯಮಿದಕ್ಕೆ ನಾಂದೀಪ್ಯಮಂ ಪಿಡಿವೆ ನಿಮ್ಮ ಮತಂ ಸತ್ಯಮೆಂದು ಪಿಡಿಯಿರೆನೆ ಚರ್ಚಿಸಿ ವೀರಬುಕ್ಕರಾಯನಾಸ್ಥಾನಕ್ಕೆ ಪೋಗಿ ಭಾಷಾಪತ್ರಿಕೆಯಂ ಬರೆದು ಬುಸವಿಶೆಟ್ಟಿ ತಪ್ತಮಪ್ಪ ಲೋಹದ ಗುಂಡು ಜಾಜ್ವಲ್ಯಮಪ್ಪುದನೆರಡು ಕೈಯಿಂದೆತ್ತಿ ಪೆಗಲೊಳಿಟ್ಟುಕೊಂಡು ಎರಡು ಘಳಿಗೆವರಂ ಮೈಮೇಲಾಡಿಸಿ ನೆಲಕ್ಕಿಡಲಾ ಭೂಮಿ ಯೊಳುರಿಯುತ್ತಿರಲೆಲ್ಲರಾಶ್ಚರ್ಯಂಬಡೆ ಸತ್ಯಮತಮೆಂದು ನಿಶ್ಚೈಸಿ ವೀರ ಬುಕ್ಕರಾಯಂ ತಿರುಮಲೆ ತಾತಯ್ಯಗಳ್ ಮೊದಲಾದೆಲ್ಲಾ ವೈಷ್ಣವರಂ ಬರಿಸಿ ನಿಮ್ಮ ಜನರು ಜೈನರ ಮೇಲೆ ಮಾಡಿದನ್ಯಾಯಮಂ ಪೇಳೆ ವಿಷಣ್ಣಚಿತ್ತರಾಗಿ ಎಲ್ಲರು ಜೈನ ಮತಮೇ ಸತ್ಯಮೆಂದು ತಿಳಿದು ತಾವು ಮಾಡಿದ ಕೃತ್ಯಕ್ಕೆ ಕೊಕ್ಕರಿಸೆ ಶ್ರೀವೈಷ್ಣವರೊಳ್ ಜೈನರಂ ಕೂಡಿಸಿ ಶಿಲಾಶಾಸನಮಂ ಬರೆಸಿದರದೆಂತೆಂದೊಡೆ ಸ್ವಸ್ತಿ ಸಮಸ್ತ ಪ್ರಶಸ್ತಿಸಹಿತಂ ಪಾಷಂಡಸಾಗರಮಹಾವಡಬಾಮುಖಾಗ್ನಿ ಶ್ರೀರಂಗರಾಜಚರಣಾಂಬುಜ ಮೂಲದಾಸಃ ಶ್ರೀವಿಷ್ಣುಲೋಕಮಣಿಮಂಡಪಮಾರ್ಗದಾಯೀ ರಾಮಾನುಜೋ ವಿಜಯತೇಯತಿ ರಾಜರಾಜಃ

ಶಕವರುಷ ೧೨೭೦ನೆಯ ಕೀಲಕ ಸಂವತ್ಸರದ ಭಾದ್ರಪದ ಶುದ್ಧ ೧೦ ಬೃಹಸ್ಪತ್ಯವಾರ ಸ್ವಸ್ತಿಶ್ರೀಮನ್ಮಹಾಮಂಡಳೇಶ್ವರಂ ಅರಿರಾಯವಿಬಾಡ ಭಾಷೆಗೆ ತಪ್ಪುವ ರಾಯರ ಗಂಡ ಶ್ರೀವೀರಬುಕ್ಕರಾಯಂ ಪೃಥ್ವೀರಾಜ್ಯಮಂ ಮಾಡುತ್ತಾ ಇರುವಲ್ಲಿ ಜೈನರಿಗೂ ಭಕ್ತರಿಗೂ ಸಂವಾದಮಾದಲ್ಲಿ ಆನೆಗೊಂದಿ ಹೊಸಪಟ್ಟಣ ಪೆನಗೊಂಡೆ ಕಲ್ಲೇಹದ ಪಟ್ಟಣದೊಳಗಾದ

ಸಮಸ್ತ ಭವ್ಯಜನಂಗಳ್ ಬುಕ್ಕರಾಯಂಗೆ ಭಕ್ತರ್ ಮಾಡುವ ಅನ್ಯಾಯಂಗಳನ್ನು ಬಿನ್ನಹಂ ಮಾಡಲಾಗಿ ಕೋವಿಲ್ ತಿರುಮಲೆ ಪೆರುಗೋಯಿಲ್ ತಿರುನಾರಾಯಣಪುರಂ ಮುಖ್ಯವಾದ ಸಕಳಾಚಾರ್ಯರು ಸಕಳ ಸಮಯಿಗಳ್ ಸಕಳ ಸಾತ್ವಿಕರ್ ವೇಷ್ಟಿಕರ್ ತಿರುಮಣಿ ತಿರುವಿಡಿ ತಣೀರು ನಾಲ್ವತ್ತೆಂಟು ತಾತಯ್ಯಗಳು ಸಾವಂತಬೋವಕ್ಕಳು ತಿರುಕುಲ ಜಾಂಬವಕುಲದೊಳಾದದಿನ್ನೆರಡರೊಳಾದ ಒಳಗಾದ ಹದಿನೆಂಟುನಾಡ ರಾಯನು ಶ್ರೀವೈಷ್ಣವರ ಕೈಯೊಳು ಜೈನರ ಕೈವಿಡಿದು ಕೊಟ್ಟು, ಈ ಜೈನದರ್ಶನಕ್ಕೆ ಪೂರ್ವಮರ್ಯಾದೆಯಿಟ್ಟು ಪಂಚಮಹಾ ವಾದ್ಯಂಗಳುಂ ಕಳಶ ಕನ್ನಡಿ ಶ್ವೇತಚ್ಛತ್ರ ಚಾಮರಂಗಳ್ ಮೊದಲಾದ ಬಿರುದುಗಳು ಸಲುವುವು, ಜೈನದರ್ಶನಕ್ಕೆ ಭಕ್ತರ ದೆಸೆಯಿಂದ ಹಾನಿವೃದ್ಧಿಯಾದೊಡಂ ವೈಷ್ಣವ ಹಾನಿವೃದ್ಧಿಯೆಂದು ಪಾಲಿಸಬೇಕು. ಈ ಮರ್ಯಾದೆಯೊಳು ಎಲ್ಲಾ ರಾಜ್ಯಂಗಳೊಳಿಹ ಬಸ್ತಿಗಳಿಗೆ ಶ್ರೀ ವೈಷ್ಣವರು ಶಾಸನವಂ ಕೊಟ್ಟು ಪಾಲಿಸುವರು. ಚಂದ್ರಾರ್ಕಸ್ಥಾಯಿಯಾಗಿ ವೈಷ್ಣವಸಮಯದವರು ಶ್ರೀ ಜೈನದರ್ಶನದವರನತ್ಯಾದರದಿಂ ರಕ್ಷಿಸಿಕೊಂಡುಬಹೆವು. ವೈಷ್ಣವರೂ ಜೈನರ ಒಂದು ಭೇದವಾಗಿ ಕಾಣಲಾಗದು. ಶ್ರೀತಿರುಮಲೆಯ ತಾತಯ್ಯಂಗಳು ಸಮಸ್ತ ರಾಜ್ಯದ ಭವ್ಯಜನಂಗಳನುಮತಂಗಳಿಂದ ಬೆಳ್ಗುಳದ ತೀರ್ಥದಲ್ಲಿ ದೇವರ ಅಂಗರಕ್ಷಣೆಗೋಸ್ಕರ ಸಮಸ್ತ ರಾಜ್ಯಂಗಳೊಳಗುಳ್ಳಂಥ ವೈಷ್ಣವರು ಜೈನರ್ಗೆ ಬಾಗಿಲುಗಟ್ಟೆಯಾಗಿ ಮನೆಗೆ ವರುಷ ೧ಕ್ಕೆ ಒಂದು ಹಣವಂ ಕೊಟ್ಟು ಆಯತ್ತಿ ಬಂದ ಹೊನ್ನಿಂಗೆ ದೇವರ ಅಂಗರಕ್ಷಣೆಗೆ ೨೦ ಆಳನ್ನು ಸಂತವಿಟ್ಟು ಮಿಕ್ಕ ಹೊನ್ನಿಂಗೆ ಜೀರ್ಣ ಜಿನಚೈತ್ಯಾಲಯೋದ್ಧರಣಕ್ಕೆ ಸೋದೆಯನಿಕ್ಕುವುದು.

ಈ ಮರ್ಯಾದೆಯಲ್ಲು ಚಂದ್ರಾರ್ಕರುಳ್ಳನ್ನಂ ತಪ್ಪಲೀಯದೆ ವರ್ಷವರ್ಷಂಪ್ರತಿ ಕೊಟ್ಟು ಕೀರ್ತಿಸಂಪಾದನೆಯನ್ನೂ ಪುರ್ಣವನ್ನೂ ಉಪಾರ್ಜಿಸಿಕೊಂಬುದು. ಈ ಮಾಡಿದ ಕಟ್ಟಳೆಯನ್ನು ಆವನಾನೊಬ್ಬನು ಮೀರಿದವನು ರಾಜದ್ರೋಹಿ, ಸಂಘ ಸಮುದಾಯಕ್ಕೆ ದ್ರೋಹಿ, ತಪಸ್ವಿಯಾಗಲಿ ಗ್ರಾಮಣಿಯಾಗಲಿ ಈ ಧರ್ಮಮಂ ಕೆಡಿಸಿದರಾದೊಡೆ ಗಂಗೆಯ ತಡಿಯಲ್ಲಿ ಕಪಿಲೆಯನ್ನೂ ಬ್ರಾಹ್ಮಣನನ್ನೂ ಕೊಂದ ಪಾಪವನ್ನು ಪಡೆದುಪೋಪರು. ಸ್ವದಾತ್ತಂ ಪರದಾತ್ತಾಂ ವಾ || ಕಲ್ಲೇಹದ ಹೆತ್ತಶೆಟ್ಟಿ ಮಗ ಬುಸವಶೆಟ್ಟಿಗೆ ಉಭಯ ಸಮಯಗೂಡಿ ಸಂಘನಾಯಕ ಪಟ್ಟಮಂ ಕಟ್ಟಿದರು. ಈ ಶಾಸನಂ ಬೆಳುಗುಳದ ಭಂಡಾರಿ ಬಸದಿಯ ಬಲಗಡೆ ದಕ್ಷಿಣದೊಳುತ್ತರಾಭಿಮುಖವಾಗಿ ಸ್ಥಾಪಿಸಿದೆ. ಈ ಮೇರೆಗೆ ತಪ್ಪದೆ ಕೆಲವು ವರುಷ ನಡೆಸಿಬಂದರು.

ಬುಕ್ಕರಾಯ ರಾಜ್ಯಾನಂತರಂ ಪ್ರೌಢದೇವರಾಯನ ನಂತರ ರಾಮಚಂದ್ರರಾಯ ವಿಜಯರಾಯರೆಂದಿವರು ಕ್ರಮದಿಂದಾಳಿದರು. ಬಳಿಕ ಗದ್ದೆದೇವರಾಯನ ಕಾಲದಿಂ ಮೇಲೆ ರಾಮಚಂದ್ರ ವಿರೂಪಾಕ್ಷರಾಯರಾಳಿದನಂತರಂ ಮಲ್ಲಿಕಾರ್ಜುನರಾಯ ರಾಮ ರಾಯರಾಳುತ್ತಿರಲಿತ್ತ ವಿಜಯನಗರದ ಸೋಮಶೇಖರರಾಯನ ಮುಟ್ಟಗವುಡಿ ಹಂಡೆ ಕುರುಬರ ಜಾತಿ ದೀಪದಮಲ್ಲಿಗುದ್ಭವಿಸಿದ ಕೃಷ್ಣರಾಯಂ ಆನೆಗೊಂದಿಸಂಸ್ಥಾನಮಂ ಪರಾಕ್ರಮದಿಂ

ಸಾಧಿಸಿ ನಿಂದು ಬಳಿಕ ಎಲ್ಲಾ ರಾಜ್ಯಮಂ ಸಾಧಿಸಿ ತನ್ನ ಸಾಮಂತರೆಣ್ಬರ ವರೊಳು ದೇವರಾಯ ಮಹಾರಾಯನ ಕುಮಾರ ಹರಿಹರರಾಯ ದೇವಣ್ಣರಾಯ ಭುಜಂಗರಾಯರೆಂದೀ ಮೂವರ್ಗೆ ದಕ್ಷಿಣದೇಶದ ಪ್ರಭುತ್ವಮಂ ಕೊಟ್ಟು ಕಳುಹಿಸಲವರ್ ಬಂದು ತೆರಕಣಾಂಬಿ ಸ್ಥಳಕ್ಕೆ ಬಂದು ನಿಂತರ್. ಆ ಸ್ಥಳಂ ಪೂರ್ವದೊಳು ಶಕೆ ೬೦೦ ವರ್ಷಂ ಪೋದಂದು ಕುಡಗಣೂರಿಂಗೆ ತೆರಕಣಾಂಬಿ ಎಂದು ಪೆಸರಂ ಮಾಡಿ ಪುರಮಂ ಕಟ್ಟಿಸಿ ಲಂಬಕರ್ಣನೆಂಬ ಕ್ಷತ್ರಿಯನೈವತ್ತು ವರುಷವಾಳಿದನಲ್ಲಿಂದಿತ್ತ ಗೊಂಡೆ ಚೋಳ ರಾಯಂ ಇಪ್ಪತ್ತು ವರುಷಂ ಪಾರ್ಥಿವರಾಯಂ ನಾಲ್ವತ್ತು ವರುಷ ಸಾಳುವರಾಯ ತತ್ಪುತ್ರ ನರಸಿಂಗರಾಯ ಇವರ ಮಗನಹೋಬಳರಾಯನನಂತರಮಚ್ಯುತರಾಯನು ದತ್ತಪುತ್ರ ಪಾರ್ಥಿವರಾಯನೆಂದಿವರಾಳಿಕೆ ಪ್ರತಾಪರುದ್ರ ಚಾಮದೇವರಾಯ ಬೂಕರಾಯ ಮಾಳವರಾಯ ಪ್ರಭುದೇವರಾಯ ತಮ್ಮರಾಯ ನರಸಣ್ಣರಾಯ ವೀರ ನರಸಿಂಹರಾಯರಹವಾಲಿನಲ್ಲಿ ನಡೆದ ತರುವಾಯ ಚಿಕ್ಕರಾಯ ಶಿವನಸಮುದ್ರದ ಮಾಧವರಾಯ ವೆಂಕಟಪತಿರಾಯ ವಸಂತರಾಯ ಚಂದ್ರಗಿರಿರಾಯ ಗೋವಿಂದರಾಯರ್ ಮೊದಲಾಗೆ ಕೆಲಂಬರಾಳಿದರ್. ಆರುನೂರಿಪ್ಪತ್ತಾಗಲಂತು ಸಾವಿರದ ಮುನ್ನೂರ ಹತ್ತು ಶಕವರುಷಂಬರಂ ನಡೆಯಲು ತ್ರಿಯಂಬಕರಾಯ ತನ್ನ ಪೆಸರಿಂ ತ್ರ್ಯಂಬಕೇಶ್ವರಾಲಯಮಂ ಮಾಡಿಸಿ ತ್ರಿಯಂಬಕಪುರಮಂ ಕಟ್ಟಿಸಿ ಕೆಲದಿವಸಮಿರ್ದನಾತನಿಂ ಬಳಿಯಂ ಆನೆಗೊಂದಿಯಿಂ ಬಂದ ಹರಿಹರರಾಯನಾದಿ ಮೂವರೊಳು ದೇವಣ್ಣರಾಯಂ ಉಮ್ಮತ್ತೂರು ಸಂಸ್ಥಾನದೊಳಿರ್ದನವನ ಪೌತ್ರಂ ಭುಜಂಗರಾಯಂ ಹರಿಹರರಾಯಂ ಕುಡಗ ನಾಡ ತೆರಕಣಾಂಬಿಯೊಳಿರ್ದನಾತನ ಕುಮಾರಂ ವೀರರಾಯಂ ಹಿರಿಯನಾಡ ತಗಡೂರಲ್ಲಿ ಪ್ರಭುವಾದಂ.

ಇಂತು ರಾಜ್ಯಂಗೆಯ್ಯುತ್ತಿಪ್ಪುದುಂ ರಾಯನ ಶತ್ರುಗಳು ಆನೆಗೊಂದಿರಾಯಂಗೆ ಇಲ್ಲವಾದ ಅನ್ಯಾಯವಂ ಮಾಡಿದೆನೆಂದು ದೌರ್ಜನ್ಯದಿಂ ಕ್ಷುದ್ರಂಗಳಂ ಪೇಳೆ ಕೋಪಿಸಿ ಕರೆಯಲಟ್ಟಿದೊಡಾ ವಾರ್ತೆಯಂ ಕೇಳಿ ಪೋಗಲುದ್ಯೋಗಿಸಲೊರ್ವಂ ನಿಮ್ಮ ಭ್ರಾತೃವ್ಯಂ ನಿಮ್ಮ ನಾಡುಗಳ ಬೇಡಿರ್ದನೆನೆ ಇಂತೆಂದಂ

ವೃ || ಕ್ಷಾಂತಿಶ್ಚೇತ್ಕವಚೇನ ಕಿಂ ಕಿಮರಿಭಿಃ ಕ್ರೋಧೋಸ್ತಿ ಚೇದ್ದೇಹಿನಾಂ
ಜ್ಞಾತಿಶ್ಚೇದನಲೇನಕಿಂ ಯದಿ ಸುಹೃದ್ದಿವ್ಯೌಷಧೈಃ ಕಿಂ ಫಲಂ
ಕಿಂ ಸರ್ಪೈರ್ಯದಿ ದುರ್ಜನಾಃ ಕಿಮುದನ್ಯೈರ್ವಿದ್ಯಾನ ವಂದ್ಯಾಯದಿಕಿಂ
ವ್ರೀಡಾಚೇತ್ಕಿಮು ಭೂಷಣೈಸ್ಸುಕವಿತಾಯದ್ಯಸ್ತಿ ರಾಜ್ಯೇನ ಕಿಂ
ವ್ರೀಡಾಚೇತ್ಕಿಮುಭೂಷ್ಣೈಸ್ಸುಕವಿತಾಯುಷದ್ಯಸ್ತಿ ರಾಜ್ಯೇನಕಿಂ ||

ಎಂದು ಆನೆಗೊಂದಿಗೆ ಪೋಗಲ್ ಬರುತ್ತೆ ಕನಕಗಿರಿಯ ಸಮೀಪದೊಳ್ ಸಂಜೆ ಕಾಲದ ದೇವಭೋಗದ ಘಂಟೆಧ್ವನಿಯಂ ಕೇಳಿ ನನ್ನ ರಾಜ್ಯಂ ನನಗೆ ನಿಂತೊಡೆ ಈ ಮಲೆಯೂರಗ್ರಾಮಮಂ ಈ ಗಿರಿಯ ವಿಜಯ ಜಿನಪ್ರತಿಮೆಯ ಪೂಜಾರ್ಥವಾಗಿ

ಸರ್ವಸಾಮಾನ್ಯಮಾಗಿ ಕೊಡುವೆನೆಂದು ಪರಸಿಕೊಂಡು ಪೋಗೆ ಅಲ್ಲಿ ರಾಜಂ ಪ್ರಸಾದದಿಂ ಕೆಲವು ರಾಜ್ಯಮಂ ಹೆಚ್ಚಿಸಿಕೊಟ್ಟು ಸಂತೋಷಂಬಡಿಸಿ ಕಳುಹಿಸೆ ಬಂದು ಕನಕಗಿರಿಯ ವಿಜಯದೇವರಿಗೆ ಮಲೆಯೂರ ಗ್ರಾಮಮಂ ಶಾಸನದತ್ತವಾಗಿ ಕೊಟ್ಟನದೆಂತೆನೆ

ಶ್ಲೋಕ || ಶ್ರೀಮತ್ಪರಮಗಂಭೀರ ಸ್ಯಾದ್ವಾದಾಮೋಘಲಾಂಛನಮ್
ಜೀಯಾತ್ತ್ರೈಲೋಕ್ಯನಾಥಸ್ಯ ಶಾಸನಂ ಜಿನಶಾಸನಮ್ ||

ಸ್ವಸ್ತಿ ಸಮಸ್ತ ಪ್ರಶಸ್ತೋತ್ತರ ಶಾಲಿವಾಹನ ಶಕವರುಷ ೧೩೪೪ ನೆಯ ಶಂಭಕೃತು ಸಂವತ್ಸರದ ಶ್ರಾವಣ ಶುದ್ಧ ೧೫ಯಲ್ಲು ಶ್ರೀಮದ್ರಾಜಾಧಿರಾಜ ಸ್ರೀ ವೀರ ದೇವರಾಯಮಹಾರಾಯರ ಕುಮಾರ ಹರಿಹರರಾಯರು ಸೋಮಗ್ರಹಣದಲ್ಲು ಕನಕಗಿರಿ ವಿಜಯದೇವರ ಶ್ರೀಕಾರ್ಯದ ಅಂಗರಂಗವೈಭವಂ ಮೊದಲಾದ ದೇವತಾವಿನಿಯೋಗ್ಯಕ್ಕೆ ಮಲೆಯೂರಗ್ರಾಮದ ಚತುಸ್ಸೀಮೆಯೊಳಗಾದ ಗದ್ದೆ ಬೆದ್ದಲು ತೋಟ ತುಡಿಕೆ ಸುಂಕ ಸುವರ್ಣಾದಾಯ ತಳವಾರಿಕೆ ಅಕ್ಷಣಿ ಆಗಾಮಿ ಸರದಿ ಜಲಪಾಷಾಣ ಸಿದ್ಧಪಾಷಾಣ ಸಿದ್ಧಸಾಧ್ಯ ನಿಧಿ ನಿಕ್ಷೇಪ ಸರ್ವಾದಾಯ ಸರ್ವಸ್ವಾಮ್ಯ ಸಹಿತವಾಗಿ ಧಾರಾಪೂರ್ವಕಮಾಗಿಯಾ ಮಲೆಯೂರಗ್ರಾಮವನ್ನು ಶಾಸನದತ್ತವಾಗಿ ಕೊಟ್ಟ ದತ್ತಿ

ಶ್ಲೋಕ || ಸ್ವದತ್ತಾಂ ಪರದತ್ತಾಂ ವಾ ಯೋ ಹರೇತ ವಸುಂಧರಾಂ
ಷಷ್ಟಿರ್ವರ್ಷ ಸಹಸ್ರಾಣಿ ವಿಷ್ಠಾಯಾಂ ಜಾಯತೇಕ್ರಿಮಿಃ ||

ಎಂದು ಶಿಲಾಶಾಸನಮಂ ಬರೆಯಿಸಿ ತಾಮ್ರದ ಚಪ್ಪೋಡಿನೊಳಾ ಗ್ರಾಮದ ಎಲ್ಲೆ ಸಿದ್ಧಾಯ ಹುಟ್ಟುವಳಿ ಬರೆಯಿಸಿ ತ್ರಿಯಂಬಕೇಶ್ವರಸಾಕ್ಷಿಯಿಂ ಹಿರಣ್ಯೋದಕ ಧಾರಾಪೂರ್ವಕಂ ಕೊಟ್ಟು ಜಿನಧರ್ಮಮೆ ಸತ್ಯಮೆಂದು ಹರಿಹರರಾಯಂ

ಬಸದಿಗೆ ಕೊಟ್ಟೀ ಧರ್ಮವ
ಪಿಸುಣನು ತಾನಾಗಿಯುಳಿಪಲಾಯುಂ ಶ್ರೀಯುಂ
ಕುಸಿದು ನರಕಾದಿ ದುಃಖದ
ಶಶಿ ರವಿಯುಳ್ಳನಕಮುಂಡು ನವೆಯುತ್ತಿಪ್ಪರ್

ಎಂದು ದೃಢಚಿತ್ತನಾಗಿರ್ದಂ ಹಿಂದೆ ಅರುವತ್ತೇಳನೆಯ ವರುಷದಂದು ಶ್ರೀರಾಯನ ಪಟ್ಟಸ್ತ್ರೀಗೆ ವ್ಯಂತರಂ ಜನ್ಮಾಂತರ ಕಾರಣದಿಂ ಬಾಧಿಸುತ್ತಿರಲಾ ಕಾಲದೊಳ್ ಕನಕಗಿರಿಯೊಳಿರ್ದ ಲಲಿತಕೀರ್ತಿಗಳ ಬರಿಸಲಲ್ಲಿ ಬಸ್ತಿಯುಂ ಕಟ್ಟಿಸಿ ಜಿನಪ್ರತಿಷ್ಠೆಯಂ ದೇವಪ್ಪಗಳ ಪ್ರಪೌತ್ರನಿಂ ಮಾಡಿಸಿ ರಾಯನ ದೆವ್ವಮಂ ಬಿಡಿಸಿ ಸ್ವಾಸ್ಥ್ಯ ಮಾನ್ಯಮಂ ಬಿಡಿಸಿರ್ದರು. ಶಕವರುಷ ೧೨೭೭ನೆ ಮನ್ಮಥನಾಮ ಸಂವತ್ಸರದ ಚೈತ್ರದಲ್ಲಿ ಕನಕಗಿರಿಯೊಳ್ ತಮ್ಮ ನಿಷಿಧಿಯ ದೀಪಮಾಲೆಯ ತೋರಣಕಂಬಗಳಂ ಮಾಡಿಸಿ ಚತುಸ್ಸಂಗಮಂ ಪಾರ್ಶ್ವಪ್ರತಿಮೆಯೆಂಬ ಪ್ರತಿಮೆಯುಂ ಚತುಸ್ಸಂಗಸಹಿತಂ ಮಾಡಿಸಿದರಾ ಕಾಲದೊಳೆ ವಿಜಯನಗರದೇಶಕ್ಕೆ ಕ್ಷಾಮಂ ಬರಲಾ ದೇಶದೊಳಿರ್ದ ಚಾತುರ್ವರ್ಣಂಗಳನೇಕರೆಲ್ಲಂ ಬಂದೀ

ದೇಶದೊಳ್ ನಿಂತರವರೊಳು ಕೊಲುಗಾಣದ ಮಾರ್ಗವಾಗಿಬ್ಬರರಸುಗಳ್ ಬರಲು ಆ ಬೆಟ್ಟಮನಲ್ಲಿಪ್ಪ ಭೂಮಿವೆರಸೊರ್ವ ಕುರುಬಂ ಗುತ್ತಿಗೆಯಂ ಮಾಡಿ ಹುಂಡಿಯಂ ನಿರ್ಮಿಸಿರಲಲ್ಲಿಗೀ ಅರಸುಗಳು ಬಂದಿಳಿಯಲೆಂಬುದುಮಾ ಕುರುಬಂ ತನ್ನ ಜನಂಗಳು ಸಹಿತಂ ಬಂದವರಂ ನಿರಾಕರಿಸಿ ನೊಂಕಿ ಕಳೆಯೆ ತೆರಕಣಾಂಬಿಗೆಯ್ದಿ ಹರಿಹರರಾಯರಿಂ ಕುಲುಗಾಣಮಂ ಕೇಳಿ ಪಡೆದಾ ಹುಂಡಿಯ ಕುರುಬನಂ ನಿರ್ಧ್ವಂಸಂ ಮಾಡಿ ಹುಂಡಿಯಂ ಕಿತ್ತು ಪೊಲನಂ ಮಾಡಿಸಿ ಪಶ್ಚಿಮದೊಳು ಪರವಾಸುದೇವರ ಗುಡೀ ಬಳಿಯ ಕೋಟೆಯಂ ಮಾಡಿಯಾ ಕುಲುಗಾಣಕ್ಕೆ ಸೇರಿದ ಆರು ಗ್ರಾಮಮಂ ಕೈಕೊಂಡು ರಾಮರಾಯನಿರಲ್

ಅತ್ತಲು ಉಮ್ಮತ್ತೂರೊಳು ದೇವಣ್ಣರಾಯಂ ತಗಡೂರ ಪ್ರಭುರಾಯ ಸೋಮಸಮುದ್ರದ ಸೋಮಶೇಖರರಾಯಂ ಬೆಟ್ಟದಪುರದ ಪಟ್ಟರಾಯಂ ಪಿರಿಯಾಪಟ್ಟಣದ ನಂಜರಾಯಂ ಕಲ್ಲಹಳ್ಳಿ ಚಂಗಳ್ವರಾಯ ರಾಘವ ಮಾಧವರಾಯರಾದಿಯಾಗೆಯನೇಕವಾಗಿ ರಾಯರಾಳಿಕೆ ಪ್ರಬಳಮಾಗಿರಲಾಗಳು ಮಹಿಸೂರಿಗೆ ಸೇರಿದ ಮೂವತ್ತುಮೂರು ಹಳ್ಳಿಗೆ ಕಾರಗಹಳ್ಳಿ ಅರಸುಗಳಾಳುತ್ತಿರಲಲ್ಲಿ ಸಂತಾನದೊಳೊಂದು ಪೆಣ್ಣೂಸು ಪುಟ್ಟಿ ಬೆಳೆಯುತ್ತಿರಲಲ್ಲಿ ತೊರೇರು ನಾಯಕರೆಂದತಿ ಪ್ರಬಳವಾಗೆ ಸರ್ವಾಧಿಕಾರವೆಲ್ಲವಂ ತಮ್ಮ ವಶಂಮಾಡಿಕೊಂಡಿರ್ದುಮರಮನೆಯೊಳಿರ್ದ ರಾಜಪುತ್ರಿಯಂ ನಾಯಕಂ ತನ್ನ ಮಗಂಗೆ ಬೇಡಿದೊಡತಿಭೀತರಾಗಿ ಕುಡಲನುಮತಂ ಮಾಡಲತಿನಿಗ್ರಹಂಗೆಯ್ದು ಮದುವೆಯಂ ಮಾಡಲು ಸನ್ನಹಂ ಮಾಡುತ್ತಿರ್ಪಾಗಳು ವಿಜಯನಗರದಿಂ ಬಂದ ಯಾದವವಂಶ ಬಲ್ಲಾಳಸಂತತಿಯ ಈರ್ವರರಸುಮಕ್ಕಳು ಬಂದು ಕೆರೆಯಮೇಲಿರ್ದ ಸಮಯದೊಳರಮನೆಯಂಗನೆಯರು ಉದ್ದಿನಬೇಳೆಯಂ ತೊಳೆಯುತ್ತೆ ದುಃಖಿಸುತ್ತಿಪ್ಪುದಂ ಶುಭಕಾರ್ಯದೊಳೇಕೆ ಶೋಕಿಸುವಿರೆಂದು ಬೆಸಗೊಳೆ ತಮ್ಮ ಕುವಾರಿಯಂ ತೊರೆಯಂ ಪರಿಣಯಮಂ ಮಾಡಿಕೊಳ್ವುದಂ ಪೇಳೆ ತಮ್ಮ ವಿವರಮಂ ಪೇಳಿ ಯಾರುಮರಿಯದಂತು ಅರಮನೆಯಂ ಸೇರಿರ್ದು ನಮ್ಮ ದೊರೆಗಳ ಪದ್ಧತಿಯಿಂದಲೇ ಮಾಡಬೇಕೆಂದು ಅರಮನೆಯೊಳು ಕೋಣೆಕತ್ತಲೆಯಾಗಿ ಚಪ್ಪರಮಂ ಕಲ್ಪಿಸಿ ಒಂದೆರಡು ಜನಂ ಬಪ್ಪಂತಾಗಿ ಮಾರ್ಗದಾ ಬಾಗಿಲಿಂದೊಳಗೆ ಭೂಮಿಯೊಳು ಖಾತಂಗಳಂ ಸವೆದು ಧಾರಾಮುಹೂರ್ತಕೆಂದೊರ್ವರೀರ್ವರ್ ಬಂದೊಡಾಚೆಗೆ ಸುದ್ದಿಪೋಗದಂತು ತಾಮೀರ್ವರುಂ ಬಾಗಿಲೊಳ್ ನಿಂತು ಕೂರಲಗಿನಿಂ ಬಂದ ಬಂದ ಜನವೆಲ್ಲವಂ ಕೊಂದಾ ಹಳ್ಳದೊಳೆಳೆಯುತ್ತಾ ನಾಯಕರೆಲ್ಲಂ ಸಮಾಪ್ತಿಯಾಗೆ ತಮ್ಮ ಪ್ರಶಂಸೆ ಮೆರೆಯಲಾ ಕುಮಾರಿಯ ಮದುವೆ ನಿಲ್ಲದೆ ಅವರವರ ಕಡೆಗೆಯ್ದಿ ರಾಜಒಡೆಯರಂ ಪಡೆದಳು. ಪಡೆದಾ ರಾಜ್ಯಮಂ ಪಾಲಿಸುತ್ತ ರಾಜಒಡೆಯರಂ ನಾಯಕಂ ಕೊಂದನಾಕೆಯ ಸ್ತ್ರೀ... ರ್ಭಿಣಿ ತಪ್ಪಿಸಿಕೊಂಡು ಸುಖದಿಂದಿರ್ದರ್.

ಇತ್ತ ಹದಿನಾಡು ಮುಂತಾದ ಆರುನಾಡುಗಳಂ ಸೋಮವಂಶದ ಸಮ್ಯಗ್ದೃಷ್ಟಿ ಅಭಿಚಂದ್ರನಾಳುತ್ತಿರೆ ಕುಂತೂರುಮಠದೊಳು ನಂಜಯ್ಯನೆಂಬ ಜೋಳಿಗೆ ಒಡೆಯರಿರಲಲ್ಲಿಗೆ

ಬಡಗಸೀಮೆಯಿಂದೋರ್ವ ಮಾದಿಗರ ಹುಡುಗಂ ಪೂರ್ವಜನ್ಮದ ಸಂಸ್ಕಾರ... ವ್ಯಂತರದೇವತಾ ಒಲುಮೆಯಿಂ ದೇಶಾಂತರಂ ಬಂದಾ ಮಠಮಂ ಸೇರಿ ದನಮಂ ಕಾಯ್ದುಕೊಂಡಿರ್ದು ಹೂವಂ ತರಲ್‌ಪೋಗಿ ಹೇರಳೆ ಚಂಡು ಮೊದಲಾದಾಟದೊಳಿರ್ದು ಕರಡಗೆಯೊಳೆ ಸಿಕ್ಕಿದ ಪ್ರಾಣಿಯನಿಟ್ಟು ತರಲದಂ ಪೂವೆಂದು ಶಿಷ್ಯನೊಳತಿ ಶ್ರದ್ಧೆಯಿಂ ಜೋಳಿಗೆ ನಂಜಒಡೆಯಂಗೆ ದೊರೆತನ ಮಾಡಿಕೊಡುವೆನೆಂದು ನಂಬಿಸಿಯಾ ನಾಡರಸಪ್ಪಭಿಚಂದ್ರನೊಳು ಕಪಟಸ್ನೇಹದಿಂದಾಪ್ತನಾಗಿಯು ಮಂತ್ರಿಪ್ರಧಾನಿಗಳೆಲ್ಲರಂ ವಶಂ ಮಾಡಿಕೊಂಡಿರ್ದಾ ಮಲೆಯನಾಡ ಬೆಟ್ಟದ [ಬೋಳರೆ] ಯೊಳಷ್ಟಾಹ್ನಿಕದಷ್ಟೋಪವಾಸದಿಂ ಯೋಗಕ್ಕೆ ನಿಂದ ಭಾನುಕೀರ್ತಿಗಳೆಂಬ ಜಿನಮುನಿಯಂ ಬಂದಿಸಿ ಬಪ್ಪಂ ಬನ್ನಿಮೆಂದು ಲಾಕ್ಷವ ಪಾದುಕಮಂ ತೊಡಿಸಿ ಕಾಸಿದರೆಯ ಮೇಲೆ ನಿಲಿಸಿ ಅಲ್ಲೆ ಪರಿಹರಿಸಿಬಿಟ್ಟು ನಂಜರಾಜಒಡೆಯಂಗೆ ಪಟ್ಟಂಗಟ್ಟಿ ತಾನು ಗುಡ್ಡನಾಗಿರ್ದು ಪರ್ವತದ ಬೋಳರೆಯೊಳು ಯೋಗದೊಳಿರ್ದ ಶ್ರವಣಮುನಿಯಂ ಪಾಪಕ್ಕಳುಕದೆ ಕೊಂದಾ ನಂಜರಾಜಯ್ಯನ ರಾಜ್ಯಕ್ಕೆ ತಾನೆ ಅರಸಾಗಿ ಮಾದರಸನೆಂದು ಪ್ರಸಿದ್ಧಿಯಾಗಿ ತನ್ನ ಪೆಸರಿಂದಾ ಹೊಳೆಯ ಮಧ್ಯದೊಳು ಕಟ್ಟೆಯಂ ಕಟ್ಟಿಸಲು ಮಂತ್ರಶಕ್ತಿಯಿಂ ದೊಡ್ಡ ಕಲ್ಲನ್ನು ದೈವಂಗಳಿಂ ತರಿಸುತ್ತೆ ಇಲ್ಲಿಡಲ್ಲಿಡೆಂದು ಪೇಳುತ್ತಿರಲೊಮ್ಮೆ ಇಲ್ಲಿಡೆಂಬುದಂ ತಲೆಯಮೇಲಿಟ್ಟು ಕೊಲೆ ಸತ್ತು ವ್ಯಂತರನಾಗೆ ಆ ನಾಡುಗಳೆಲ್ಲರೊಳು ಅತ್ಯಂತ ರುಜೆ ಮೊದಲಾದವರಿಂ ಬಹಳ ಜನಂ ಸಾಯುತ್ತಿರ್ಪುದುಂ ಸರಗೂರ ಉಪ್ಪಲಿಗರು ಗುಡ್ಡರಾಗಿ ಆವೇಶ ಬಂದು ಏಳುಮಲೆ ಮಧ್ಯದಲ್ಲಿ ಪಶ್ಚಿಮಾಭಿಮುಖದಿ ಗುಡಿ ಕಟ್ಟಿಸಿ ಮಾದನೆಂಬುದರಿಂ ಮಾದೇಶ್ವರನೆಂದು ಪೆಸರಿಟ್ಟು ಅನೇಕ ತೆರದಿಂ ಪೂಜಿಸುತ್ತೆ ಜಗತ್ಪ್ರಸಿದ್ಧಿಯಾಗೆ ಸರಗೂರ ಗುಡ್ಡನೆ ಗೊತ್ತಾಗಿ ಜಾತ್ರೆ ತೇರುತಿರನಾಳೆಂದು ವರುಷಂಪ್ರತಿ ನಡೆಸುತ್ತೆ ಬರೆ ಬಹುದೇಶದ ಜನರೆಲ್ಲಂ ಮರುಳಾಗಿ ಕಾಣಿಕೆ ಕಪ್ಪಮಂ ಕೊಡುತ್ತಿರಲು ನಾಲ್ಕು ಒಕ್ಕಲು ತಮ್ಮಡಿಗಳನಲ್ಲಿರಿಸಿ ಭೂಮಿಯಂ ಕೊಟ್ಟು ಅರಮನೆ ಅದಿಕವಿಟ್ಟು ಬಂದ ಕಾಣಿಕೆಯೆಲ್ಲಮನರಮನೆಗೆ ತೆಗೆದುಕೊಂಬರಾ ಮಾದನ ಒಲುಮೆಬುಗತರೆಂದು ಅನೇಕ ಜನಂ ಗುಡ್ಡರಾಗಿರುತ್ತಿರಲಿತ್ತ ಮೂಗೂರೊಳರಸಂ ಅನಂತನಾಥ ಚೈತ್ಯಾಲಯದೊಳು ದೇಶಿಲಿಂಗಮೆಂದು ಸ್ಥಾಪಿಸಿ ನಿಕ್ಷೇಪಮಾಗಿರ್ದ ಯಕ್ಷೀಬಿಂಬಂ ಸಿದ್ಧಬಿಂಬವು ತಿಪ್ಪೆಯೊಳ್ ಸಿಕ್ಕಲಲ್ಲಿ ಗುಡಿಯಂ ನಿರ್ಮಿಸಿ ತಿಪ್ಪಾದೇವಿಯೆಂದು ಪೆಸರಿಟ್ಟಾ ಪ್ರತಿಮೆಯ ಬಸದೀ ಸಮೀಪದೊಳಗನಾದನೆಂದು ಪೂಜಿಸಿದರ್ ಅತ್ತ ಉಮ್ಮತ್ತೂರ ದೇವಣ್ಣರಾಯನ ಸಂತಾನದೊಳ್ ಭುಜಂಗರಾಯರ್ ಮೊದಲಾಗೆ ಊರುಗಳಲ್ಲಿ ರಾಯರೆಯಾಗಲ್

ಅತ್ತ ತುಳುವ ಪಟಳಪಟ್ಟದೊಳು ನರಸಿಂಗರಾಯಂ ತಮ್ಮರಾಯಂ ನರಸಣರಾಯಂ ವೀರನರಸಿಂಹರಾಯಂ ಕೃಷ್ಣರಾಯಂ ಅಚ್ಯುತರಾಯನಿಂದಿತ್ತ ತಿರುಮಲರಾಯ ಸದಾಶಿವರಾಯ ರಾಮರಾಜಯ್ಯ ಸಹಾ ಆಳಿದ ಶಕಾಬ್ದಾ ೧೪೮೫ ರಕ್ತಾಕ್ಷಿ ಸಂವತ್ಸರ ಮಾಘ ಶುದ್ಧ ೧೦ರಲ್ಲು ರಾಮರಾಜಯ್ಯನ ಮರಣ. ಬಳಿಕ ತಿರುಮಲರಾಜಯ್ಯ ಮಾಘ ಶುದ್ಧ ೫ ಆರಭ್ಯ ವರುಷ ೭, ತಿಂಗಳು ೫, ದಿನ ೧೨ ಬಳಿಕ ಅಂಗೀರಸಸಂವತ್ಸರದ ಆಷಾಢ ಬಹುಳ ೨ ಆರಭ್ಯ

ಶ್ರೀರಂಗರಾಯ ಶ್ರೀರಂಗಪಟ್ಟಣಮಂ ನಿರ್ಮಿಸುವಲ್ಲಿ ಅಲ್ಲಿ ನಿಕ್ಷೇಪವಾಗಿರ್ದ ಜ್ವರಮಾರಾಚಾರ್ಯರಚಿತ ಪುರುಷರಮೇಶ್ವರ ಬಿಂಬಮುಂ ರಂಗಪ್ರತಿಮೆಯುಂ ವೀರಭದ್ರಪ್ರತಿಕೃತಿಯುಮಿರ್ದೊಡವಕ್ಕೆ ಮೂರು ದೇವಾಲಯಮಂ ನಿರ್ಮಿಸಿ ಕಾವೇರಿಮಧ್ಯದೊಳು ಪಟ್ಟಣಮಂ ಮಾಡಿಸಿದನು. ಹಿಂದೆ ನಾಲ್ವತ್ತು ವರುಷದಂದು ಮಹಿಸೂರಲ್ಲಿ ಈರನಗೆರೆಯ ಮಾರನಾಯಕನೆಂಬನತ್ಯಂತ ಪ್ರಾಬಲ್ಯದಿಂದ ಸಕಲಾಧ್ಯಕ್ಷಮಂ ತಾನೇ ಕೈಗೊಂಡಿರ್ದು ರಾಜದ್ರೋಹಿ ಅರಸನಂ ಪರಿಹರಿಸುವುದೆಂದು ತೀಕ್ಷ್ಣಪುರುಷರನಟ್ಟಲವರ್ ಪೋಗಿ ಕೊಲ್ವಾಗಳು ಮಂತ್ರಿ ಶಾಂತಯ್ಯನ ಮರೆವುಗೆ ಸರ್ವಥಾ ಈತನಂ ಕೊಲಲಾಗದು ತಾನು ಹೇಳಿದ ಪ್ರಕಾರ ಕೇಳಿಕೊಂಡಿದ್ದೇವೆ ಎಂದು ದೈನ್ಯಂಬಡೆ ನುಡಿಯುತ್ತಿರಲಾ ಮಾತಂ ಕೇಳಿ ಈರ್ವರಂ ಕೊಲ್ಲಿಸಿ ಅರಮನೆಯೊಳಿರ್ದೆಲ್ಲಾ ಅರಸುಗಳ್ ಮುಂತಾಗೆ ಪರಿಜನ ಮುಂತಾಗೆ ಗಂಡು ಹೆಣ್ಣುಮಕ್ಕಳು ಮುಂತಾಗೆಲ್ಲರಂ ನಿಶ್ಶೇಷಮಾಗೆ ಪರಿಹರಿಸಲಾ ರಾತ್ರಿ ಶಾಂತಯ್ಯನ ತಮ್ಮನಪ್ಪ ಪದ್ಮಣಯ್ಯಂ ರಾಜನುಂ ತನ್ನಗ್ರಜನುಂ ಮೃತವಾದುದಕ್ಕತ್ಯಂತ ದುಃಖಿತನಾಗಿ ಮಧ್ಯರಾತ್ರಿಯೊಳ್ ಕಂಬಲವಂ ಪೊದೆದರಮನೆಯೊಳುರುಳಿರ್ದ ಪೆಣಂಗಳಂ ಕಳಿದರಮನೆಬಾಗಿಲೊಳ್ ನಿಂದು ಪ್ರಲಾಪದಿಂ ಶೋಕಿಸುತ್ತಿರಲಾ ಮನೆಯ ಕದವಿನ ಮರೆಯೊಳ್ ಬಳೆ ಮೊದಲಾದ ಶಬ್ದಮಂ ಕೇಳ್ವಾರೆಂದು ಕೇಳಲರಸನ ಮಹಾದೇವಿ ಮೂರು ತಿಂಗಳ ಗರ್ಭಿಣಿಯಿರ್ದೊಡಂ ಕಂಬಲಮಂ ಪೊದೆಯಿಸಿ ತನ್ನ ಗೃಹಕ್ಕೆಯ್ತಂದು ವಿಪರೀತವಾಗೆ ವಿರೂಪೆಯಂ ಮಾಡಿರ್ದು ಮರುದಿವಸಂ ನಾಯಕನಲ್ಲಿಗೆಯ್ದಿ ಎನ್ನಗ್ರಜನವಿವೇಕಿ ಮಹಾನಾಯಕರ ದಯಕ್ಕೆ ಪಾತ್ರನಾಗದೆ ಯಮಲೋಕಪ್ರಾಪ್ತನಾದನಾಂ ತಮ್ಮಾಜ್ಞೆಯ ಮೀರುವನಲ್ಲಮಾದೊಡಾತನ ಉತ್ತರ ಕ್ರಿಯೆಯಂ ಮಾಡಲದು ಶೂದ್ರಪೆಣವಾಯಿತದರಿಂ ನಮ್ಮ ದೇವರ ಬಳಿಯಲ್ಲಿ ಪುನಃ ಸಂಸ್ಕಾರಮಂ ಮಾಡುವುದಕ್ಕೆ ಏಚಗನಹಳ್ಳಿಗೆ ಪೋಗಲು ನಾಂ ಗಂಡುಜನ ೧ ನಿಜಭಾರ್ಯೆ ಹೆಣ್ಣುಜನ ೧ ಹಟ್ಟಿ ಚಾಕರಿ ಹೆಣ್ಣುಜನ ೧ ಸಹಾ ಮೂರು ಜನರ ಗುರುತಂ ನೋಡಿ ಬಿಟ್ಟು ಹತ್ತು ದಿವಸದ ಮೇಲೆ ಬಂದಲ್ಲಿ ಗುರುತು ನೋಡಿ ಕರೆದುಕೊಳ್ಳಬೇಕೆಂದು ವಚನರಚನೆಯಿಂ ನಂಬೆ ನುಡಿವುದುಂ ಈತಂ ನಮ್ಮ ಹಾರುವನೇ ಎಂದು ಆ ಪ್ರಕಾರದೊಳೆ ಅಪ್ಪಣೆಯಂ ಕುಡೆ ತಾವು ಮೂವರುಂ ಏಚಗನಹಳ್ಳಿಗೆ ಬಂದಿರಲಾ ದಿವಸ ಅರಮನೆಯ ಹೆಣಮನೆಲ್ಲ ಶೋಧಿಸಿದಲ್ಲಿ ರಾಜನ ಹೆಂಡತಿಯು ಪೆಣನಿಲ್ಲದಿರೆ ತೌರುಮನೆ ಬೆಟ್ಟದಪುರದೊಳಿರ್ದಳೆಂಬುದುಂ ಕೆಲಂಬರೆಂಟು ದಿನದೊಳು ಬಂದಳೆನಲೀ ಊರಿಂದಾರುಂ ಪೋದುದಿಲ್ಲ ಪದುಮಣ್ಣಯ್ಯ ಸಹಾ ಮೂರುಜನಂಗಳಪ್ಪಣೆಯ ಮೇಲೆ ಪೋದರವರೊಳಿದ್ದೊಡಾ ಮೂವರಂ ಪರಿಹರಿಸಿ ಬನ್ನಿಮೆಂದೀ ಪದುಮಣ್ಣಯ್ಯನ ಸ್ನೇಹಿತಂಗಪ್ಪಣೆಯಾಗಲಾ ರಾತ್ರಿಯೊಳು ನಾಲ್ವತ್ತು ಜನವೆರಸಿ ಬಪ್ಪುದುಮಿತ್ತಲು ನಿದ್ರೆಯೊಳಿರ್ದ ಪದುಮಣ್ಣಯ್ಯಂಗೆ ಸ್ವಪ್ನದೊಳು ಬ್ರಹ್ಮರಾಯಂ ಬಂದು ನಿನ್ನ ಪ್ರಾಣಕ್ಕೆ ಬಂದಾಪತ್ತಂ ಕಳೆದು ನಿನ್ನರಸಂಗೆ ಪುತ್ರಸಂತಾನಮಂ ಮಾಳ್ಪೆನದಕ್ಕೆ ಸಂದೇಹ ಬೇಡೆಂದೆದೆಯಂ

ತಟ್ಟಿ ಏಳಿಸಲವಂ ದೇವರಂ ಭಜಿಸುತ್ತಮಿಪ್ಪಾಗಲಾ ದೂತರ್ ಬಂದು ಪರಿಹರಿಪುದಂ ಬಿಟ್ಟು ಕರುಣಂ ಪುಟ್ಟಿ ನಿಮ್ಮಲ್ಲಿ ದೋಷಮಿಲ್ಲೆಂದು ಒಡನೆ ಬಂದರಂ ನಿಲಿಸಿ ತಾನೊರ್ವಂ ತಿರುಗಿ ಪೋಗಿ ಸರ್ವಥಾ ದೋಷಮಿಲ್ಲಾತನಂ ಕೊಲಲಾಗದೆಂದನೇಕ ತೆರದಿಂ ನಾಯಕನೊಳೊರೆದು ಬಿಡಿಸಲವರ್ ಬಿಟ್ಟು ಪೋಗಲಾ ಮರುದಿವಸಮರಸನ ಪೆಂಡಿರಂ ಬೆಟ್ಟದಪುರಕ್ಕೆ ನರಸಂ(?) ಮಲ್ಲನಹಳ್ಳಿಯೊಳಿರಲಲ್ಲಿಗಾಕೆಯಂ ಕಳುಹಿಸಿ ಬ್ರಹ್ಮರಾಯಂಗೆ ಪರಸಿಕೊಂಡು ಒಬ್ಬವ್ವೆಯಂ ಕರೆದುಕೊಂಡು ಮಹಿಸೂರಿಗೆಯ್ದಿ ನಾಯಕನ ದಯಕ್ಕೆ ಪಾತ್ರನಾಗಿರ್ದು ಕೆಲವು ದಿವಸಕ್ಕೊಮ್ಮೆ ದೇವರ ಸೇವೆಗೆಂದು ನಾಲ್ಕಾರು ದಿವಸಂ ಕೇಳಿಕೊಂಡು ಬಂದು ಮಲ್ಲನಹಳ್ಳಿಗಾರುಂ ಕಾಣದಂತೆ ಪೋಗಿರುತ್ತಿರ್ದನಾಗಲಾ ದೇವಿಯ ಗರ್ಭಂ ಬಳೆದು ನವಮಾಸಂ ನೆರೆದು ಪುತ್ರಂ ಪುಟ್ಟಲಾ ಶಿಶುವಿಂಗೆ ಜಾತಕರ್ಮ ನಾಮಕರ್ಮಮಂ ಮಾಡಿ ತತ್ಪಿತೃಗಳು ಶತ್ರುಗಳಂ ಜಯಿಸುವಂದು ಜಂಗಮನಾದ ಒಡೆಯರು ಸಹಾಯಮಾದುದರಿಂದಾ ಹೆಸರ ನಡೆಸಲು ರಾಜಒಡೆಯರೆಂದು ಪೆಸರಿಟ್ಟು ಬೆಳೆಯುತ್ತಿರಲಿತ್ತ ಶಾಂತಯ್ಯನ ಮಕ್ಕಳು ದೊಡ್ಡಶಾಂತಯ್ಯ ಚಿಕ್ಕಶಾಂತಯ್ಯನೆಂಬೀರ್ವರು ಬಳೆದು ಸಕಲ ವಿದ್ಯಮಂ ಕಲ್ತು ಮಾರನಾಯಕನ ಕಾರ್ಯಕಾರಣಕ್ಕನುಕೂಲರಾಗಿರೆ ಪದುಮಣ್ಣಯ್ಯಂ ರಾಜಕುಮಾರನಂ ನೋಡಲೆಂದು ಬರಲಾ ರಾಜಕುಮಾರಂ ನನ್ನ ರಾಜ್ಯಮಂ ಮಾಡಿಕೊಡೆಂದು ನುಡಿಯೆ

ವೃತ್ತ || ಕ್ರಮೇಣ ಭೂಮಿಸ್ಸಲಿಲೇನಭಿದ್ಯತೇ
ಕ್ರಮೇಣ ವೈರಿಃ ಕಪಟೇನ ಹನ್ಯತೇ
ಕ್ರಮೇಣ ವಿದ್ಯಾಸ್ಮರಣೇನ ಸಿದ್ಧ್ಯತೇ
ಕ್ರಮೇಣ ಮೋಕ್ಷಂ ಸುಕೃತೇನ ಗಮ್ಯತೇ ||

ಮತ್ತಂ

[ಅನಾರಂಭೋ ಮನುಷ್ಯಾಣಾಂ ಪ್ರಥಮಂ ಬುದ್ಧಿಲಕ್ಷಣಮ್]
ಪ್ರಾರಂಭೇ ಸರ್ವ ಕಾರ್ಯಾಣಿ ವಿಚಾರ್ಯಾಣಿ ಪುನಃ ಪುನಃ
ಪ್ರಾರಬ್ಧಸ್ಯಾಂತಗಮನಂ ಮಹಾಪುರುಷಲಕ್ಷಣಮ್ ||

ಶ್ಲೋಕ || ಅನುಚಿತ ಕರ್ಮಾರಂಭ ಸ್ವಜನವಿರೋಧೋ ಬಲೀಯಸಾ ಸ್ಪರ್ಧಾ
ಪ್ರಮಾದಾಜನ ವಿಶ್ವಾಸೋ ಮೃತ್ಯುರ್ದ್ವಾರಾಣಿ ಚತ್ವಾರಿ ||

ಅದರಿಂ ಬಡಕೊತ್ತಿ ಹೆಗ್ಗಣವಂ ಹಿಡಿದಂತಾಗದೆ ಬಲಿಷ್ಠರಂ ಸಹಾಯಂ ಮಾಡಲ್ವೇಳ್ಕೆಂದು ಪಿರಿಯಪಟ್ಟಣವಂ ಪದುಮಣ್ಣಯ್ಯಂ ಪೊಕ್ಕು ಪ್ರಧಾನ ಬೊಮ್ಮರಸಂಗರಿಪಿ ನಂಜುಂಡರಸಿಂಗೆ ರಾಜ್ಯಭ್ರಷ್ಟಾದನಂ ಯೇವುದ್ಧರೇತ್ಪೂರ್ವ ಚತುರ್ಗುಣವೆಂಬುದರಿಂ ಮಹಿಸೂರ ಸಂಸ್ಥಾನಮಂ ರಾಜಂಗೆ ಮಾಡಿಕೊಡುವುದಕ್ಕೆ ತಮ್ಮ ಬಲಮೆಲ್ಲಂ ಸಹಾಯಮಾಗಬೇಕೆಂದು ಕೇಳ್ವುದುಂ ಸುಖಿಗಾಪತ್ತಂ ಪೇಳ್ದಂತೆ ಮೂಗುವಟ್ಟಿರಲಾ ಪ್ರಧಾನಂ ನಿಮ್ಮ ಸ್ಥಾನಮಂ ಸೇರಿಸಿದೊಡೆಮ್ಮರಸಂಗೆ ವರುಷಂ ಪ್ರತಿ ಸಾವಿರ ಖಂಡಿಗ ಹುರುಳಿ

ಕೊಡುವುದೆಂದಾ ಹುಚ್ಚದೊರೆಯನೊಪ್ಪಿಸಿ ಪ್ರಧಾನಂ ಬಲಮೆಲ್ಲಮಂ ಕೂಡಿ ಎಡಬಲದ ಸಂಸ್ಥಾನದ ರಾಜಬಲಮಂ ಕೂಡಿಸಿ ಸಂಕೇತದಿನಕ್ಕೆ ಬಪ್ಪಂತು ನಿಯಮಿಸಿ ಶಾಂತಯ್ಯ ಪದ್ಮಣಯ್ಯ ಮಹಿಸೂರ ಹಳೆಪೈಕದ ಜನಮೆಲ್ಲಮಂ ಒಳಗುಮಾಡಿ ಬಾಗಿಲಂ ತೆಗೆದುಬಿಡುವಂತೆ ರಾತ್ರಿಯೊಳವರ್ ಬಂದಾಗಲು ಮಾಡಿದೊಡಾ ಬಲಮೆಲ್ಲಂ ಮೂವಳಸಾಗಿ ಮುತ್ತಿ ಒಳಗಂ ಪೊಕ್ಕು ನಾಯಕಂ ಮೊದಲಾದೆಲ್ಲಾ ಬೋಯಿಗಳಂ ನಿಶ್ಶೇಷಮಾಗೆ ಕೊಂದು ರಾಜಒಡೆಯರ್ಗೆ ಪಟ್ಟಂಗಟ್ಟಿದೊಡೆ ದೊಡ್ಡ ಶಾಂತಯ್ಯನೆಂಬ ಕರಣಿಕಂ ಮಂತ್ರಿಯಾಗೆ ಮಹಿಸೂರಿಗೆ ಸೇರಿದ ಮೂವತ್ತು ಮೂರು ಹಳ್ಳಿಯೊಳು ರಾಜ್ಯಂಗೆಯ್ಯುತ್ತಿರ್ದರಿತ್ತ ತೆಂಕಣನಾಡು ಮುಂತಾದ ನಾಡುಗಳಲ್ಲಿ ರಾಘವರಾಯ ತಮ್ಮರಾಯ ಅಹೋಬಲರಾಯ ವೀರರಾಯ ಪ್ರಭುರಾಯ ಜಗದೇಕರಾಯ ಸೋಮಶೇಖರರಾಯ ರಾಮರಾಯ ಚೆನ್ನರಾಯ ವಿಜಯರಾಯ ಭುಜಂಗರಾಯ ಗೋಪಾಲರಾಯರು ಮೊದಲಾದ ರಾಯರು ಅಲ್ಲಲ್ಲಿ ಆಳುತ್ತಿರ್ದು ಜನ ಬಹಳ ಹೆಚ್ಚಿ ಒಂದೊಂದೂರಿಗೆ ಒಬ್ಬೊಬ್ಬ ರಾಯರಾಗಿ ಊರೂರಿಗೂ ಕೋಟೆ ಕೊತ್ತಲ ಕಂದಾಚಾರದಿಂ ಪ್ರಜೆಗಳು ಮನೆಗುದುರೆ ಆಯುಧಪಾಣಿಗಳಾಂತು ದೊಡ್ಡ ಗ್ರಾಮಸ್ಥರು ಸಣ್ಣ ಗ್ರಾಮದವರೊಳಗುಮಾಡಿಕೊಂಡು ತಮ್ಮ ಹವಾಲು ಮಾಡಿಕೊಳ್ಳುತ್ತಾ ಗ್ರಾಮಗ್ರಾಮಕ್ಕೆ ದೊರೆದೊರೆಗಳಾಗಿ ನಡೆದ ವರುಷ ೩೨. ಅಷ್ಟರಲ್ಲಿ ಹದಿನಾರೊಳು ಚಂದಪ್ಪನಾಯಕ ಪಾಪನಾಯಕರೆಂಬಿರ್ವರು ತೆಲುಗರು ಕೆಲವು ಮಂದಿ ಕುದುರೆಯಂ ಸಂಪಾದಿಸಿಕೊಂಡು ಬಂದು ದೇವಾದಾಯ ಬ್ರಹ್ಮಾದಾಯ ಅಗ್ರಹಾರ ಉಂಬಳಿ ಮೊದಲಾದೆಲ್ಲಮಂ ತಮ್ಮಾಧೀನಂ ಮಾಡಿ ಮಾನ್ಯಂಗಳೆಲ್ಲಮಂ ಕರೆಕೆಡಿಸ ಜನರಿಗೆ ಉಪದ್ರಮಂ ಮಾಡುತ್ತಿರೆ ಆ ಕಾಲದೊಳು ಹಗಲುಗತ್ತಲೆ ಕವಿದು ಭಯಂಕರವಾಯಿತು. ಆ ತರುವಾಯ ನಾಡೆಲ್ಲಂ ಕೂಡಿ ಚಂದಪ್ಪನಾಯಕ ಪಾಪ ನಾಯಕರಂ ಪಿಡಿದು ಕೋಡಗಗಟ್ಟಂ ಕಟ್ಟೆ ಬಲಮೆಲ್ಲಂ ಪಲಾಯನಮಾಯಿತು.

ಆ ಬಳಿಕ ಪ್ರಜೆಗಳೆಲ್ಲಾ ಗ್ರಾಮಗ್ರಾಮಂಗಳ ರಾಯರಂ ತೆಗೆದುಬಿಟ್ಟು ಮನೆ ಮನೆಗಳ ಯಜಮಾನಿಗಳು ತಮ್ಮ ತಮ್ಮ ಹಟ್ಟಿಗಳಿಗೆ ತಾವೆ ದೊರೆಗಳಾಗಿ ಹಟ್ಟಿ ಕೊಟ್ಟವಾಗಿ ಮೂರು ವರುಷ ನಡೆದುಬರುತ್ತಿರೆ ಹದಿನಾಡ ನಂಜಯ್ಯಂ ಪ್ರಬಲನಾಗಿ ಕೆಲಕೆಲವು ಗ್ರಾಮಂಗಳಂ ವಶಕ್ಕೆ ತಂದು ಹಳ್ಳಿ ಕೊಟ್ಟಮಂ ಬಿಡಿಸಿ ಎಲ್ಲರಂ ಏಕ ಮುಖಾ ಮಾಡಿದಿಂ ಬಳಿಯ ಕೆಲವು ಗಡಿಗಳೊಳೊಬ್ಬೊಬ್ಬರು ಪ್ರಭುವಾಗಿರಲಾ ಕಾಲದೊಳು ನರಮಾರಿ ಗೋಮಾರಿ ಮುಂತಾದ ಮಾರಿ ಹುಟ್ಟಿ ಜನರೆಲ್ಲಾ ಲಯಮಾಗುತ್ತಿಪ್ಪುದುಂ ಗ್ರಾಮಾನುಗ್ರಾಮದೊಳು ಹಿಂದೆ ಕಾಳೆಗದೊಳು ಸತ್ತ ವೀರರಂ ಕಿಚ್ಚಂ ಪಾಯ್ದು ಸತ್ತ ಸ್ತ್ರೀಯರುಗಳಂ ಶಿಲೆಯೊಳು ಬರೆಯಿಸಿ ವೀರಜಡೆ ನಿಂಬೆಹಣ್ಣು ಒಕ್ಕಲ ಪ್ರತಾಪಾದಿಗಳಂ ಕಲ್ಪಿಸಿ ಗ್ರಾಮಗ್ರಾಮದ ಅಂಕದ ಬಾಗಿಲೊಳು ಶಿಲಾಪ್ರತಿಷ್ಠೆಯಂ ಮಾಡಿಸಿ ಕೋಲಾಹಲವಾಗೆ ಪೂಜಿಸಿ ಹಬ್ಬಮಂ ಮಾಡುತ್ತಾ ಬಂದರದಲ್ಲದೆ ಗ್ರಾಮಂಗಳ ಮುಂಗಡೆಯೊಳು ಒಂದೊಂದು ಗುಡಿಯಂ ಕಟ್ಟಿಸಿ ಕಾಳದೇವರೆಂದು ಪ್ರತಿಷ್ಠೆಯಂ ಮಾಡಿ ಪೂಜಿಸಿ ಕೊಂಡಂಗಳಂ ಮಾಡುತ್ತಾ ಬಂದುರು. ಕಪ್ಪಡಿ

ಸಂಗಮೇಶ್ವರನೆಂದು ಪೂರ್ವ ಬಸವಣ್ಣ ಉಳುಮೆ ಮನೆಪೊಕ್ಕು ಎಲೆರಾಜಯ್ಯ ಸಂಗಯ್ಯ ರುದ್ರದೇವರೆಂಬವರು ಜೀವವೆರಸಿ ಕಪ್ಪಡದೊಳೊರಗಿ ಪರವಶವಾಗೆ ಅಲ್ಲಿ ಗದ್ದುಗೆಯಿಟ್ಟು ಪೂಜಿಸುತ್ತಾ ಬಂದ ಪ್ರಕಾರ ಬೊಪ್ಪಗವುಡನಪುರ ಮೊದಲಾದ ಗ್ರಾಮಾಂತರಗಳಲ್ಲಿ ಮಂಟೇದುದ್ದಯ್ಯ ಸಿದ್ಧಯ್ಯ ರಾಜಯ್ಯನೆಂದಿವರೆ ಗದ್ದುಗೆ ಇಟ್ಟು ಪೂಜಿಸುತ ಹರಕೆ ಪ್ರಾರ್ಥನೆ ಮಾಡುತ್ತಾ ಬರುವರು. ಮತ್ತೊಬ್ಬ ಸಿದ್ಧಯ್ಯನೆಂಬಂ ಹೊಣೆಯಾಗಿ ಸತ್ತು ಗಿಡದ ಮಧ್ಯದೊಳು ವ್ಯಂತರದೇವನಾಗಿ ಬಾಧಿಸುತ್ತಿರೆ ಅಲ್ಲಿ ಗುಡಿಯಂ ಕಟ್ಟಿ ಹೊಣೆಗಾರ ಸಿದ್ಧೇಶ್ವರನೆಂದು ಪೂಜಿಸಿದರು. ಪಡುವಲು ಚಿಕ್ಕದೇವಿ ವೀರಮರಣಮಾಗೆ ಜನಕ್ಕೆ ಪೀಡೆಯಂ ಮಾಡಿದೊಡೆ ಬೆಟ್ಟದ ಮೇಲೆ ಗುಡಿಯಂ ಮಾಡಿ ಪೂಜಿಸುತ್ತಾ ಬಂದರು.

ಇತ್ತ ಉಮ್ಮತ್ತೂರಲ್ಲಿ ಭುಜಂಗರಾಯನಾಳುವಂದು ರಾಯರ ಅಪ್ಪಾಜಿಯೆಂಬ ಬ್ರಾಹ್ಮಣನು ವೇದಪಾರಾಯಣನಾಗಿ ಮಂತ್ರಿಪದವಿಯೊಳಿರ್ದು ಮೂವತ್ತುಮೂರು ಹಳ್ಳಿಯೊಳು ಮೂವತ್ತುಮೂರು ಒಕ್ಕಲಂ ಕ್ಷೇತ್ರಾದಿ ಮಾನ್ಯಮಂ ಪಡೆದು ಮಠಮಂ ಮಾಡಿಸಿ ತನ್ನ ಪುತ್ರರು ಶಿಷ್ಯರುಗಳ್ಗೆ ವೇದಸ್ಮೃತಿ ಮುಂತಾದ ಪಾಠಮಂ ಪೇಳುತ್ತಿರೆ ಬಡಗಸೀಮೆಯಿಂದೊರ್ವ ಹೊಲೆಯರ ಹುಡುಗಂ ಬುದ್ಧಿಚಾತುರ್ಯದಿಂ ವಿವೇಕ ವಿನಯಮಂ ಪ್ರಕಟಿಸಿ ಜಾತಿಯಂ ಮರಸಿ ಬಂದಾ ಮಠಮಂ ಸೇರಿ ವೇದಮಂ ಸಾಂಗಾಧ್ಯಯನಂ ಮಾಡಿ ಪ್ರಚುರನಾಗೆ ಅಪ್ಪಾಜಿದೀಕ್ಷಿತರವನ ಬುದ್ಧಿಗೆ ಮೆಚ್ಚಿ ತನ್ನ ಮಗಳಂ ಮದುವೆಯಂ ಮಾಡಿ ಪ್ರತ್ಯೇಕ ಗೃಹಮಂ ಮಾಡಿ ಅಗ್ರಹಾರದ ಮಧ್ಯದೊಳಿರಿಸಿ ಸೋಮಯಾಜಿಯೆಂದು ಪೂಜ್ಯನಂ ಮಾಡಿಪ್ಪುದುಂ ಕೆಲವಾನು ದಿವಸದಿಂ ಮೇಲಾತನ ತಾಯಿ ತನ್ನ ಮಗನನರಸಿ ಬಂದು ಕಾಣ್ಬುದುಮಾಕೆಯ ತಲೆಯಂ ಬೋಳಿಸಿ ಗುಪ್ತದಿಂ ಮಗನಂ ತನ್ನ ಮನೆಯೊಳಿಟ್ಟುಕೊಂಡಿಪ್ಪುದುಮಾಕೆಯ ಕುಲಮಂ ತತ್ಪತ್ನಿಯರಿದು ಪಿತನೊಳುಸುರೆ ಕ್ರಮದಿಂ ಜನಜನಿತಮಾಗೆ ಅಗ್ರಹಾರದ ಬ್ರಾಹ್ಮಣರೆಲ್ಲಂ ಕೇಳಿ ಪಾಪ ಸಂಪ್ರಾಪ್ತಿಯಾಯಿತೆಂದು ಕೊಕ್ಕರಿಸಿ ಅಲ್ಲಿ ಕೆಲಬರು ಹೊಳೆಯಂ ಪಾಯ್ದರು, ಕೆಲರು ವಿಷಮಂ ಗ್ರಹಿಸಿದರು, ಕೆಲರು ಅಗ್ನಿಪ್ರವೇಶಮಂ ಮಾಡಿದರು. ಅಪ್ಪಾಜಿದೀಕ್ಷಿತಂ ಯಾತ್ರೆಗೆಯ್ದು ಬಂದು ಲಿಂಗಧಾರಿಯಾಗಿ ಕೆಲಂಬರು ಬ್ರಾಹ್ಮಣರ್ಗೆ ಲಿಂಗಮಂ ಕಟ್ಟಿಸಿ ಚೋಳಪ್ರತಿಷ್ಠೆ ಲಿಂಗಾಲಯಮನುದ್ಧರಿಸಿ ಕಪಿನೀತೀರದೊಳು ಗರಳಪುರಿಯೆಂಬ ಪುರಮನುದ್ಧರಿಸಿ ವಿಷಕಂಠನ ಪಡಿತರಕ್ಕೆ ರಾಯಂಗೆ ಹೇಳಿ ಐದು ಹಳ್ಳಿಯಂ ಬಿಡಿಸಿ ನೂರೈವತ್ತು ಲಿಂಗಾಲಯಮಂ ಮಾಡಿಸಿಯಿರಲೊಂದು ದಿವಸಂ ಭುಜಂಗರಾಯಂ ನಂಜನಗೂಡಿಗೆ ಬರುವಲ್ಲಿ ಗೊಣನಹಳ್ಳಿ ಗಿಡದೊಳೊರ್ವ ತೊರೆಯ ಜಾತಿ ಸ್ತ್ರೀಯು ಮಾರ್ಗದೊಳ್ ಮೂತ್ರಿಸಿರ್ದೊಡೆ ರಾಯನ ಕುದುರೆ ಮೂಸಿಯಲ್ಲಿಂ ಮುಂದಕ್ಕಡಿಯಿಡದಿಪ್ಪುದುಮವಳಂ ಬರಿಸೆ ಕುದುರೆಯವಳಂ ಪತ್ತಿದೊಡಾಕೆ ಸತ್ತು ವ್ಯಂತರಿಯಾಗಿ ರಾಯನ ಬಲಕ್ಕೆಲ್ಲಂ ಮರಣಮಂ ಮಾಡುತ್ತಿರೆ ತಿಳಿದು ಪ್ರಾರ್ಥಿಸಿಕೊಂಡು ಗೊಣನಹಳ್ಳಿಯೊಳು ಗುಡಿಯಂ ಮಾಡಿಸಿ ಮಾರಿಯೆಂದು ಸ್ಥಾಪಿಸಿ ವರ್ಷವರ್ಷಂ ಜಾತ್ರೆ ಮಾಡಿದರು.

ಆ ತರುವಾಯ ಭುಜಂಗರಾಯನ ಕುಮಾರಂ ದೇವರಾಯನೊರ್ವನೆಯಾಗಿರೆ ಸೂಳೆಗಾರನಾಗಲಾ ಸ್ಥಳದ ಸೂಳೆಯರೆಲ್ಲರಂ ಹಿಡಿದು ತರಿಸಿ ತನ್ನ ಕುಮಾರನ ಸಂಪರ್ಕ ಮಾಡಿದವಳ್ಗೆ ಆಜ್ಞೆಯಂ ಮಾಡಿಸುವೆನೆಂದು ಎರಡು ಮೂರು ವೇಳೆ ಹೇಳಿದಾಗ್ಯು ಕುಮಾರಂ ವಸಂತಿಯೆಂಬ ಸೂಳೆಯ ಸಂಗತಿಯಂ ಮಾಡಿ ಹುಣ್ಣು ಹತ್ತಿ ಸಾಯ್ವುದುಮಾ ಸೂಳೆಗೆ ಹಾರೆಯಂ ಹಾಕಿ ಕೊಲಿಸಲವಳು ಮಹಾವ್ಯಂತರಿಯಾಗಿ ಪುರಜನ ಪರಿಜನರೆಲ್ಲರ್ಗಂ ಉರಿಜ್ವಾಲೆಯಂ ಕೊಡುತ್ತಾ ಬರುತ್ತಿರಲರಿದು ಆವೇಶಮಂ ಕರೆದುಕೇಳಲಾಂ ಮಹಾಮಾರಿಯೆ ಎನ್ನಂ ಪೂಜಿಸಿ ಸುಡುಗಾಡ ಕೊಳ್ಳಿಯಿಂ ಬೆಂದ ಕೂಳು ದಾಸವಾಳದ ಪೂವಿನಿಂದರ್ಚಿಸಿ ಪೂಜೆಗೊಂಡೊಡೆ ಶಾಂತವಪ್ಪೆನೆಂದು ಪೇಳಲಾ ಮೇರೆಯೊಳೆ ಗುಡಿಯಂ ಮಾಡಿಸಿ ಹುರಿಕಾತಿಯೆಂದು ಸ್ಥಾಪಿಸಿ ರಕ್ತಗೂಳ ಮುದ್ದೆಯಂ ಆಕಾಶಕ್ಕಿಟ್ಟೊಡಾ ದೇವತೆ ಮಾಯವಾಗೆ ವರುಷಂಪ್ರತಿ ಜಾತ್ರೆಯಂ ಮಾಡುವರು.

ಬಳಿಕ ಲಿಂಗರಾಯನೆಂಬ ಮಗನಾಗಿರಲಾ ಭುಜಂಗರಾಯಂ ಮೃತವಾಗಲಾ ಊರಮಧ್ಯದೊಳೆ ನಿಕ್ಷೇಪಮಂ ಮಾಡಿ ಅಲ್ಲಿ ಗುಡಿಯಂ ನಿರ್ಮಿಸಿ ಭುಜಂಗೇಶ್ವರನೆಂದು ಸ್ಥಾಪಿಸಿ ಪೂಜಿಸಿದರು. ತೆಳ್ಳನೂರ ವೀರಲಕ್ಷ್ಮಿಯೆಂಬವಳು ಕಿಚ್ಚಿನಿಂ ಸತ್ತು ಹುರಿಕಾತಿಯಾದಳು. ಇತ್ತ ಹುರಮೆಂಬ ಗ್ರಾಮದೊಳು ಹಂಪೆಯಿಂ ಬಂದ ದೇವರಾಜಯ್ಯನೆಂಬರಸಂ ಜಂಗಮನುಪದೇಶದಿಂದಲ್ಲಿಯ ಬಸ್ತಿಯೊಳು ಮಲ್ಲಿಕಾರ್ಜುನ ಸ್ಥಾಪನೆಯಂ ಮಾಡಿಸಿ ಜೈನಿಕೆ ಬಿಟ್ಟು ಆ ಮಲ್ಲಿಕಾರ್ಜುನಗೆ ಒಕ್ಕಲಾದಂ. ಅತ್ತಲು ಬೆಟ್ಟದಪುರದ ಬೆಟ್ಟದೊಳು ಮಲ್ಲಿಭಟ್ಟಾರಕನೆಂಬ ಜೈನಮುನಿಯು ಮಲ್ಲಿತೀರ್ಥಕರ ಪ್ರತಿಷ್ಠೆಯಂ ಮಾಡಲೆಂದು ಬಸ್ತಿಯಂ ಕಟ್ಟಿಸಿ ಬಿಂಬವನ್ನು ಗೈಸಿ ಒಳ್ಳೆಯ ಲಗ್ನಮಂ ಸಾಧಿಸಲು ಪನ್ನೆರಡು ವರುಷಂಬರ ನೋಡಿದಲ್ಲಿ ನಿರ್ದೋಷಮಾಗಿ ಕನ್ನಡಿಯ ಮೇಲೆ ಉದ್ದು ಉರುಳುವಷ್ಟು ಹೊತ್ತು ಇರಲದಂ ಸಾದಿಸುತ್ತಾ ಶಿಲ್ಪಿಯೊಳು ಪೇಳ್ದಂ ನಾಮುಂ ಶಂಖನಾದಂ ಮಾಡಲಾಕ್ಷಣದೊಳೆ ಬಿಂಬಮಂ ಸ್ಥಾಪನೆಯಂ ಮಾಳ್ಪುದೆಂದು ಪೇಳ್ದೊಡಾತಂ ರಾಯನ ಪ್ರೇರಣೆಯಿಂದಾರುಮರಿಯದಂತೊಂದು ಲಿಂಗಮಂ ಮಾಡಿರ್ದಾ ಶಂಖಧ್ವನಿಯಂ ಕೇಳುತವೆಯಾ ಲಿಂಗಮಂ ಪೀಠದೊಳ್ ತೊಡರ್ಚಲದು ವಜ್ರಬಂಧಮಾಗೆ ಮುನಿಪಂ ಬಂದು ನೋಡಿಯತ್ಯಂತ ಕ್ಲೇಶದಿಂ ಸತ್ತು ಸಿಡಿಲಾಗಿ ಪುಟ್ಟಿ ಬಂದು ಪೊಡೆದೊಡೆ ಲೇಶ ಚಕ್ಕೆ ಪಾರುವುದೇ ಹೊರತು ಲಿಂಗಮೊಡೆಯದಿರೆ ರಾಯಂ ಬಹು ಜನಕ್ಕನ್ನದಾನಮಂ ಮಾಡಿಸುತ್ತುಂ ಪಿಂದೆ ಗವಾಕ್ಷಮಂ ಮಾಡಿಸಲಶನಿಯ ಲಿಂಗ ಪ್ರದಕ್ಷಿಣಂಗೆಯ್ದು ಗವಾಕ್ಷದಿಂ ಪೋಗುತ್ತಿದ್ದುದಾ ಲಿಂಗಕ್ಕೆ ದೇವಾಶ್ರಯವಾಗಿ ತನಗೆ ಹಸಿಯವರೆ ಪದಾರ್ಥಮಂ ಪಿಟ್ಟುಮನರ್ಚಿಸಿ ಸಾವಿರಜನಕ್ಕನ್ನದಾನಂ ಮಾಳ್ಪುದೆಂದು ಪೇಳಲಾ ಪ್ರಕಾರಂ ಮಾಡುವರು, ಅನ್ನದಾನ ಮಲ್ಲೇಶ್ವರನೆಂದು ಪೆಸರಾಯ್ತು.

ಇತ್ತ ತಲಕಾಡೊಳೊಂದಾನೆಯು ದಿನಂಪ್ರತಿಯುದಕಮಂ ತಾವರೆಪೂವುಮಂ ತಂದು ಪುತ್ತಿನೊಳಿಕ್ಕಿ ಪೂಜಿಸುತ್ತಿಪ್ಪುದಂ ಗೋಪಾಲರಿಂ ವಿಜಯನೆಂಬರಸಂ ಕೇಳ್ದು ಬಂದು ಶೋಧಿಸಲಲ್ಲಿ ವೃಷಭಜಿನಪ್ರತಿಮೆಯಿಪ್ಪುದುಮದಕ್ಕಮಲ್ಲಿಯೆ ಬಸದಿಯಂ ಮಾಡಿಸಿಯಾ

ಬಳಿಯೊಳೆ ಪುರಮಂ ನಿರ್ಮಿಸಿ ರಾಜಧಾನಿಯ ಮಾಡಿಸಿಯಾ ರಾಯನಲ್ಲೆ ಬೀಡುಮಾಡಿ ಬಲ್ಲಾಳಂಗೆ ಸಾವಂತನಾಗಿರ್ದು ಆ ಸ್ಥಳದೊಳನೇಕ ದೇವಸ್ಥಾನಂಗಳಾಗಲಾ ದೇವರುಗಳಿಗೊಂದೊಂದಕ್ಕೆ ಸೊಲ್ಲಗೆ ಅಕ್ಕಿಯಂ ಪಡಿತರಂಗೊಡಲು ಮೂರು ಖಂಡುಗಮಪ್ಪುದರಿಂದಾ ದೇವರ್ಗೆ ದಿನಂಪ್ರತಿ ಸಣ್ಣಕ್ಕಿಯಂ ಮಾಡಿಸಿಕೊಡುತ್ತುಂ ತಾನುಂ ಸಣ್ಣಕ್ಕಿಯೊಳತಿಪ್ರೀತನಾಗಿರ್ದು ಕಡೆಯೊಳ್ ಜಂಗಮಭಕ್ತನಾಗಿ ಲಿಂಗಧಾರಿಯಾದನಾ ಸಣ್ಣಕ್ಕಿ ಸಾದಪ್ಪವಡೆಯರಸಂ ತಾನಜರು ಕೆಲಕೆಲವು ಗ್ರಾಮಮಂ ಸಾರಿರ್ದರು. ಕಳಲೆಯೊಳಿರ್ದರಸುಗಳು ಜಿನಮತಮಂ ಬಿಟ್ಟು ರಾಮಾನುಜರ ಕಾಲದೊಳೆ ವಿಷ್ಣುಮತಮನಾಚರಿಸಿರ್ದು ಕಾರ್ಯಾರ್ಥವಾಗೆ ನಂಜುಂಡದೇವರಂ ಪ್ರಾರ್ಥಿಸಿಯಾ ದೇವರಿಗೊಕ್ಕಲಾಗಿ ಶಿವಭಕ್ತರಾಗಿಯವರೊಳು ವೀರರಾಜಂ ಕೊಡಗಿನರಸಿಗೆ ದಳಪತಿಯಾಗಿದ್ದನವರ ಮಗಂ ಲಿಂಗರಾಜನೆಂಬಂ ತಾನೆ ಪ್ರಭುವಾಗಿ ಹರಿಮಲೆಯೊಳು ಮೊದಲು ಪ್ರಭುವಾಗಿರ್ದಂ ಪಿರಿಯಾಪಟ್ಟಣದ ನರಪಾಲನೆಂಬಂ ಕಲ್ಲಹಳ್ಳಿ ಆನವಾಳರಾಯಂ ಮೊದಲಾಗಿ ಎಡಬಲದೊಳಿರ್ದರಸುಗಳು ಸಾಳ್ವಕುಲದವರು ಆ ಸ್ಥಳದ ವೈಶ್ಯರು ಎಲ್ಲಾ ಲಿಂಗಮಂ ಕಟ್ಟಿಕೊಂಡು ವೀರಶೈವಾಚಾರರಾಗಿಯು ಜೈನರೊಳು ಕೊಳ್ಕೊಡೆಯಿಂದಮಿರೆ ಜಂಗಮರಿಗೂ ಉಳಿದಿರ್ದ ಶ್ರಾವಕರಿಗೂ ವಾಗ್ವಾದಮಾಗೆ ವಿಂಗಡಿಸಿ ಬೇರೆ ಬೇರೆಯಾದರು. ನರಪಾಲನ ವಂಶಜ ನಂಜುಂಡರಸು ಪಿರಿಯಾಪಟ್ಟಣದೊಳರಸುಗೆಯ್ಯುತ್ತಿರ್ದಂ.

ಅಘಾಟರಾಯನುತ್ತರದೇಶದಿಂ ದಂಡುಸಮೇತಂ ಕರ್ಣಾಟಮಂ ಸೂರೆಯಂ ಮಾಡುತ್ತಂ ಬರೆ ಬೆಳ್ಗುಳದೊಳಿರ್ದ ಜನರೆಲ್ಲಂ ಕೋಂಟೆಯಂ ಬಲಿದು ಕವಣೆ ಮುಂತಾದವರಿಂ ಬರಲೀಸದಿಪ್ಪುದುಮವರ್ ಬಿಟ್ಟು ಪೋಗುತ್ತಿರೆ ಬೆಳ್ಗುಳದವರು ನೀನೇನಘಾಟರಾಯನೋ ಎದೆಗೆಟ್ಟ ರಾಯನೋ? ಎಂದು ಮೂದಲಿಸುವುದುಂ ಕೋಪಿಸಿ ತಿರಿಗಿ ಪೋಗಿ ಹಲ್ಲಾ ಮಾಡಿ ಒಳಗಿರ್ದ ಹೆಣ್ಣು ಗಂಡಿನೊಳೊಂದುಳಿಯದಂತೆ ಕೊಂದು ಬಿಟ್ಟು ಪೋಗೆ ಜೈನಬ್ರಾಹ್ಮಣರ್ ಶ್ರೀಮುಖಮಂ ಕೊಂಡು ದೇಶದ ಮೇಲೆ ಪೋಗಿದ್ದವರು ಬಂದು ಶ್ರಾವಕರ ಮನೆಯ ಹೆಣ್ಣಂ ಮದುವೆಯಾಗೆ ವಂಶ ಹೆಚ್ಚಿತು. ಸ್ಥಾನದವರಾದರು ಸಾತಾರೆಯನಾಳ್ವ ಅರಸು ಆರೆಯವನಾಗಿ ಬ್ರಾಹ್ಮಣರನೆ ಮಂತ್ರಿ ಪ್ರಧಾನಿ ನಿಯೋಗಿ ಸೇನಾಪದ ಮೊದಲಾದ ಪದವಿಯೊಳ್ ನಿಲಿಸಿಪ್ಪುದುಮವರೆಲ್ಲ ಪುಣ್ಯಪಟ್ಟಣಮೆಂದಗ್ರಹಾರಮಂ ನಿರ್ಮಿಸಿ ಸರ್ವಾಧ್ಯಕ್ಷಮಾಗೆ ಶಾಹೋಜರಾಯನೆಂದು ರಾಜ್ಯಮನಾಳ್ದರು. ಚಿತ್ರಕಲ್ಲು ಉಚ್ಚಂಗಿ ಕುಮ್ಮಟ ಮುಂತಾದ ಪಲವು ಸ್ಥಾನಂಗಳೊಳು ಬೇಡರಾದರುಸುಗಳು ಆಳುವರು. ಡಿಳ್ಳಿ ಔರಂಗಾಬಾದು ಇರಾನು ಮಕ್ಕಾದಿ ದೇಶಮಂ ತುರಕರಾಳುವರು. ಗೇರಸೊಪ್ಪೆಯನಾಳ್ವ ಕದಂಬರಾಯನ ವಂಶಜರು ಭಂಗರೆಂಬವರು. ಒಳಲಂಕೆಯನಾಳ್ವ ಮೂಲಿಕೆ ಸಾವಂತ ಅಜಲರೆಂದಾ ಕಾರೇತ.... ಭೈರಸಒಡೆಯಂ ಜಿನದತ್ತನನ್ವಯ ಸೋಮವಂಶಜರು ಕೊಲ್ಲಾಪುರ ಬಿಳಿಗೆ ಸೋದೆ ಯಲ್ಲನಾಡು ಮೇಲುನಾಡು ಮಲೆಯೊಳ ಮುಂತಾದವಂ ಆಳಿದರವರೊಳಳಿಯಸಂತಾನಮಾಗೆ ನಡೆದುಬರುತ್ತಿದೆ. ವೀರಬಲ್ಲಾಳಂಗೆ ಭೈರವ ಪಾಂಡ್ಯರಾಯುಸುತೆ

ಅಳಕಶ್ರೀಯೆಂಬಳರಸಿಯಾಗಲವರ ಗರ್ಭಜಂ ಜಯನರಸಿಂಹನಾತನ ಸಂತತಿಯೊಳೆ ತೆಲುಗರಸುಗಳಾದರು. ಕೆಲರು ಪ್ರಭುವಾದರವರೊಳೆ ಆದುರು. ಕೆಲಂಬರಲ್ಲಲ್ಲಿ ಹೆಗ್ಗಡೆಗಳೆಂದು ವರ್ತಿಸುವರು. ಅವರೊಳು ಕುಮಾರಹೆಗ್ಗಡೆಗೆ ಗಟ್ಟಿತ್ತಳಗೆ (ಗಟ್ಟದ ಕೆಳಗೆ) ಮೂವರು ವ್ಯಂತರದೇವಿಯರು ಹಿಡಿದು ಪೂಜಿಸೆಂದೊಡಾಂ ಜೈನನಾಂ ಪೂಜಿಸಲು ಜಿನದರ್ಶನಕ್ಕಿತರನಕ್ಕುಮದರಿಂ ಪೂಜಿಸುವೆನಲ್ಲೆನೆಯಾದೊಡಂ ನಿನ್ನಂ ಬಿಟ್ಟಪೆವಲ್ಲದರಿಂ ಬ್ರಾಹ್ಮಣರಿಂ ಪೂಜಿಸೆಂಬುದುಂ ಸ್ಮಾರ್ತಬ್ರಾಹ್ಮಣರಂ ಪೂಜಿಸೆಂದು ನಿಯಮಿಸೆ ಶಿವಾಲಯಮಿಲ್ಲದೆ ಪೂಜಿಸೆನೆಂಬುದುಂ ಬಿದಿರೆಯಿಂ ಲಿಂಗಮಂ ತರಿಸಿ ಪ್ರತಿಷ್ಠೆಯಂ ಮಾಡಿಸಿ ಮಂಜೇಶ್ವರನೆಂದು ಪೆಸರಾಗೆ ಮೂಡಬಿದರೆಯಿಂ ಚಂದ್ರಜಿನ ಪ್ರತಿಮೆಯಂ ತಂದು ತನಗೆ ದರ್ಶನಕ್ಕೆ ಸ್ಥಾಪಿಸಿಯಾ ದೇವತೆಗಳಂ ಪೂಜಿಸಿ ಪ್ರಸಿದ್ಧಿವಡೆದಂ. ಕರ್ಣಾಟದೊಳು ಕೆಲ್ಲಂಬಳ್ಳಿಯೆಂಬ ಗ್ರಾಮದೊಳು ಮಹಾಧನಿಕರಾದ ಲಕ್ಕಪ್ಪ ಪಾಯಪ್ಪರೆಂಬ ಜೈನವರ್ತಕರು ಮಲೆಯೂರಲ್ಲಿ ಆದೀಶ್ವರ ಚೈತ್ಯಾಲಯಮಂ ಹೆಚ್ಚಿಸಿ ಜೀರ್ಣೋದ್ಧಾರಂ ಮಾಡಿಸುತ್ತುಂ ಇರಲಷ್ಟರಲ್ಲಿ ಒಂದು ಕಾರಣದಿಂದಂ ರಾಯಂಗಾತನ ಮೇಲೆ ಸಿಟ್ಟತಿ ಬಂದು ಹಿಡಿತರಿಸಲು ಕೆಲವು ಮಂದಿಯಂ ಕಳುಹಿಸಲಷ್ಟರಲ್ಲಿ ತಿಳಿದು ತನ್ನ ಮನೆಜನರೆಲ್ಲರಂ ಮುಂದೆ ಕಳುಹಿಸಿ ಎಂಟು ಒಂಟೆಯಮೇಲೆ ಪಣಮಂ ಸಾಗಿಸಿಕೊಂಡು ಪೋಗುತ್ತಿರಲವರು ಹಿಂದಟ್ಟಿಬಪ್ಪುದಂ ಕಂಡು ಒಂದು ಒಂಟೆಯ ಗೋಣಿಮೂಟೆಯ ಕೊಯ್ದುಬಿಡಲವರು ಬಿದ್ದ ಹಣಮನಾಯ್ದುಕೊಂಡು ಬಪ್ಪನ್ನೆಗಂ ದಕ್ಷಿಣಮುಖದೆ ನಡೆದು ಕಣಿವೆಯನಿಳಿದು ಪೋಗಿ ಪಾಲಕಾಡನೆಯ್ದಿಯಲ್ಲಿ ಭೂಮಿಯಂಕೊಂಡು ಮಾಣಕಪಟ್ಟಣಮಂ ಚೈತ್ಯಾಲಯಮಂ ಮಾಡಿಸಿ ಪ್ರತಿಷ್ಠೆಯಂ ಮಾಡಿಸಿ ಸ್ವಾಸ್ತಿಮಾನ್ಯಮಂ ಕೊಂಡು ಬಿಟ್ಟು ಅಲ್ಲೆ ನಿಂದರು.

ತೆರಕಣಾಂಬೀ ಸ್ಥಳದಲ್ಲಿ ವಿಜಯರಾಯನೆಂಬೊಂ ವಿಜಯಾಪುರದ ಕೋಂಟೆಯಂ ನಿರ್ಮಿಸಿ ಗುಂಡಲದ ಪಶ್ಚಿಮದೊಳು ಪೇಟೆಯಂ ಮಾಡಿಸಿದಂ ತತ್ಸಮೀಪದ ಇಂಗಳ ವಾಡಿಯೊಳು ಶೈವ ವೈಷ್ಣವರಾದೀರ್ವರ್ ವರ್ತಕರು ಒಬ್ಬರೊಬ್ಬರ್ಗೆ ವಾದಮಾಗೆ ಪ್ರತ್ಯೇಕ ಶಿವಾಲಯ ಗೋಪಾಲಾಲಯಮಂ ಮಾಡಿಸಿ ಎರಡು ಬೀದಿಯೊಳು ತಂತಮ್ಮ ಮತದಹಂಕಾರದಿಂದೊಬ್ಬೊಬ್ಬರಂ ಬೆರೆಯದೆ ವೈಷಮ್ಯದಿಂ ಶಿವಗುಣ ಹರಿಗುಣಯೆಂದು ಧನಮದದಿಂದಿರ್ವರಿಪ್ಪುದುಂ ಒಬ್ಬ ಶ್ರಾವಕಂ ನೋಡೆ ಬಪ್ಪುದುಮಾ ಶಿವಾಲಯ ದೊಳೊರ್ವ ಬ್ರಾಹ್ಮಣಂ ನಿಂದೆಲೆ ಮಹಾದೇವಾ ನಿನ್ನ ಗುಣ ಬೇರೆ ನಡೆ ಬೇರೆ ನುಡಿ ಬೇರೆ ಮನ ಬೇರೆ ಘನ ಬೇರೆಯೆಂದು ನುತಿಸುತ್ತಿರೆ ಭಂಗಿಯಸೊಪ್ಪಿನ ಬಗೆ ಬೇರೆ ಎಂದು ಪೇಳ್ವನದಕ್ಕಾಗ್ರಹಂಗೆಯ್ಯೆ ಮಹಾದೇವಂಗೆ ಗುಣಾದಿಗಳು ಬೇರಿಲ್ಲ ಭಂಗಿಯಂ ತಿಂದಂಗೆ ಬೇರೆಬೇರಪ್ಪುದೆಂದು ವಿಷ್ಣುವಿನಾಲಯಮಂ ನೋಡಲಲ್ಲಿ ವೈಷ್ಣವಬ್ರಾಹ್ಮಣಂ ನಾಮಮನಿಕ್ಕುತ್ತಮಂಬರೀಷ ಬಲ್ಲ, ಅಕ್ರೂರ ಬಲ್ಲ, ವೈಕುಂಠ ಬಲ್ಲ, ಶ್ರೀಪತಿ ಬಲ್ಲನೆಂದೊಡೆ, ನಾ ಬಲ್ಲೆ ನೀ ಬಲ್ಲೆ ಜೇಡಿಮಣ್ಣ ಎಂದು ಪೋದನು. ಬೇಗೂರೊಳು ದಾಸಕೇಶವಶೆಟ್ಟಿ ರತ್ನಪಡಿವ್ಯಾಪಾರಮಂ ಮಾಡುತ್ತುಮಿರೆ ಕಣವೆ ಕೀಳ ಮಹಾಧನಿಕನಾದ

ಕೇಶವದಾಸಶೆಟ್ಟಿಯು ಇವನ ಮಹತ್ತಂ ಕೇಳಿ ತನ್ನ ಸಮವೆಂದು ಹೆಣ್ಣ ಕೇಳಲು ನಂಟರುಗೂಡಿ ಬಂದು ಈ ಊರೊಳು ದಾಸಕೇಶವರೆಂಬ ವರ್ತಕರ ಗೃಹವಾವುದೆನೆ ಗೃಹಮಂ ತೋರಿಸೆ ಬಪ್ಪುದುಂ ತನ್ನ ಮನೆ ಮುಂಗಡೆ ತೋರದುಪ್ಪಟಮಂ ಪೊದ್ದು ಕೌಪೀನಮಾತ್ರದಿಂ ಬಿದ್ದ ಬತ್ತಂಗಳನಾಯುತ್ತಿಪ್ಪುದಂ ಕಂಡು ಮಹಾದರಿದ್ರನೆಂದು ಹಾಸ್ಯಮಾಗಿ ಪಿಂದಕ್ಕೆ ತಿರುಗಿ ಪೋಪುದಂ ಕೇಳಿ ತಾನೇ ಬಂದನೇಕತೆರದಿನೊಡಂಬಡಿಸಿ ಭೋಜನಕ್ಕೆ ಕರೆದು ಎಣ್ಬರ್ಗಂ ಸುವರ್ಣದ ಪರಿವಾಣದೊಳು ವಜ್ರವೈಡೂರ್ಯ ಪ್ರವಾಳ ಮೊದಲಾದ ನವರತ್ನಂಗಳಂ ಬೆರಸಿ ದ್ರವಿಣಮನಿಕ್ಕಿಸಿ ತಾನುಂ ತನ್ನ ಮಗನುಂ ಪಂಚಭಕ್ಷ್ಯಂಗಳನಿಕ್ಕಿಸಿಕೊಂಡು ಎಲ್ಲರಂ ಭೋಜನಮಂ ಮಾಡಿಮೆಂಬುದುಂ ಸುಮ್ಮನಿರ್ದು ವಿಷಣ್ಣರಾಗೆ ಮೂಹೂರ್ತಮಿರ್ದಾ ರತ್ನದ್ರವ್ಯಂಗಳಂ ಪೊರಗೆ ಸುರಿಯಿಸಿ ಭಕ್ಷ್ಯಾದಿಗಳನಿಕ್ಕಿಸಿ ತಾಂಬೂಲಸಹಿತಂ ಮನ್ನಿಸಿ ಕಳುಹಿಸಿದನಾ ರತ್ನಂಗಳಂ ದೀನಾನಾಥರ್ ಕೊಂಡರಿಂತಪ್ಪ ವರ್ತಕರು ಪಲಂಬರಿರ್ದು ಅಲ್ಲಲ್ಲಿ ಶಿವಾಲಯ ವಿಷ್ಣುಸದನಂಗಳಂ ಮಾಡಿಸಿದರತ್ತ ಸಾತಾದಿ ದೇಶದೊಳು ಜಗತ್‌ಶೆಟ್ಟಿಯೆಂಬ ಜೈನವರ್ತಕಂ ಹತ್ತು ಕೋಟಿ ಭಂಡವಾಲುಳ್ಳನಾಗಿರ್ದನಲ್ಲಿಂದತ್ತ ಉತ್ತರ ದೇಶದೊಳು ಕೋಟಿಗೊಂದು ಕಳಶಮಂ ಗೃಹದುಪರಿಯೊಳು ರಚಿಸಿ ಐದಾರೇಳೆಂಟು ಒಂಬತ್ತು ಪರ್ಯಂತರಕ್ಕು ಕಳಶಂಗಳಂ ಮಾಡಿಸಿಟ್ಟಿಪ್ಪರಲ್ಲಿಂ ದತ್ತಸವಾಜಾಯ ನಗರದವರಿಗೂ ಜಾತಿಯುಂ ವರ್ಣಾಶ್ರಮಂಗಳಿಲ್ಲದೆಯನೇಕ ತೆರದ ಪೆಸರ್ಗಳಾಗಿ ವರ್ತಿಸುತ್ತಿಪ್ಪರು. ಇತ್ತಲಾನೆಗೊಂದಿ ತೆಲುಗ ಪಟಲಂಗಳೊಳು ಅಚ್ಯುತರಾಯನಾಳಿದ ಮೇಲೆ ಕ್ಷತ್ರಿಯಪಟಲದ ತಿರುಮಲರಾಯ ಸದಾಶಿವರಾಯನಿಂದಿತ್ತಲು ರಾಮರಾಜಯ್ಯನಾಳ್ದು ಶಕವರುಷ ಸಾವಿರದ ನಾನೂರೆಂಬತ್ತಾರನೆ (೧೪೮೬) ರಕ್ತಾಕ್ಷಿ ಸಂವತ್ಸರದ ಮಾರ್ಗಶಿರ ಶುದ್ಧ ೧ರಲ್ಲು ಮೃತವಾಗೆ ಶ್ರೀರಂಗರಾಯಂ ಪ್ರಬಲನಾಗಿ ಆಂಗೀರಸಸಂವತ್ಸರದಾರಭ್ಯ ಶ್ರೀರಂಗಪಟ್ಟಣದೊಳಿರ್ದನತ್ತ ವೆಂಕಟಪತಿರಾಯ ಚಿಕ್ಕರಾಯ ಸಹಾ ಮೂವತ್ತು ವರುಷಮಾಗೆ ಶ್ರೀರಾಮದೇವರಾಯಂ ಆನಂದಸಂವತ್ಸರದಾಶ್ವೀಜ ಬಹುಳ ೩ ಆರಭ್ಯ ಆನೆಗೊಂದಿಪಟ್ಟಣಮನಾಳುತ್ತಿರ್ದನಿತ್ತಲು ಶ್ರೀರಂಗಪಟ್ಟಣದೊಳು ಶ್ರೀರಂಗರಾಯನಿರ್ದು ಕೆಲವು ಸಂಸ್ಥಾನಂಗಳಂ ಸಾಧಿಸಿ ವಶಂ ಮಾಡಿ ತಾನೆ ರಾಯನುಳಿದ ರಾಜರೆಲ್ಲಂ ಗೌಡರೆಂದು ಪ್ರಸಿದ್ಧಿಯಂ ಮಾಡಿ ಮಹಿಸೂರ ರಾಜಗೌಡನಂ ಬರಹೇಳಿ ಎರಡು ಮೂರು ವೇಳೆ ಹೇಳಿಕಳುಹಿಸಲಾಗಿ ಚಿಂತಾಕ್ರಾಂತನಾಗಿ ದೊಡ್ಡಶಾಂತಯ್ಯನೊಡನಾಲೋಚಿಸಲಿಂತೆಂದಂ

ಆರ್ಯೆ || **ಅನುಚಿತ ಕರ್ಮಾರಂಭಃ | ಸ್ವಜನ ವಿರೋಧಃ ಬಲೀಯಸಾ ಸ್ಪರ್ಧಾ**
ಪ್ರಮದಾಜನ ವಿಶ್ವಾಸೋ | ಮೃತ್ಯುದ್ವಾರಾಣಿ ಚತ್ವಾರಿ ||

ಎಂಬುದರಿಂ ರಾಯನೊಳೆಮಗೆ ವಿರೋಧಂ ಸಲ್ಲದು ಪೋಗಲೊಳ್ಳಿತ್ತೆನೆ

ಶ್ಲೋಕ || **ಪ್ರಾರಂಭೇ ಸರ್ವ ಕಾರ್ಯಾಣಿ ವಿಚಾರ್ಯಾಣಿ ಪುನಃ ಪುನಃ**
ಪ್ರಾರಬ್ಧಸ್ಯಾಂತ ಗಮನಂ ಮಹಾಪುರುಷಲಕ್ಷಣಂ ||

ಎಂಬುದರಿಂ ನಿಧಾನಿಸಿ ಕಾರ್ಯಮಂ ಮಾಳ್ಪುದೊಳ್ಳಿತ್ತೆನೆ

ಶ್ಲೋಕ || ಧರ್ಮಕಾರ್ಯೇ ಋಣಚ್ಛೇದೇ ಕನ್ಯಾದಾನೇ ಧನಾಗಮೇ
ಶತ್ರುವಿದ್ಯಾಗ್ನಿ ರೋಗೇಷು ಕಾಲಕ್ಷೇಪಂ ನಕಾರಯೇತ್ ||

ಪುರುಷಂಗೆ ಕಷ್ಟ ಬಂದ ವೇಳೆಯೊಳಾವುದೊಂದು ಕಾರ್ಯಮಂ ಶೀಘ್ರದಿಂ ಮಾಡಬೇಕಾದುದರಿಂ ಶ್ರೀರಂಗರಾಯನಂ ಕಂಡುಬಪ್ಪುದೆ ಕಾರ್ಯಮೆಂದು ಪೇಳೆ ರಾಜನೆಂದಂ ಅತಿರಭಸಕೃತಾನಾಂ ಶಲ್ಯತುಲ್ಯೋ ವಿಪಾಕಃ ಎಂಬುದರಿಂ ಪರಸೇವೆ ಕರಕಷ್ಟಮಾದುದರಿಂದಾನೊಬ್ಬನಂ ಸೇವೆಗೆಯ್ದು ಬಾಳ್ವನಲ್ಲದರಿಂ

ಸಾಲದೆ ಸೋಲದೆ ಪೊರಮ
ಟ್ಟೋಲೈಸದೆ ನಿಚ್ಚನಿಚ್ಚ ಪಯಣಂ ಮಾಡದೆ
ಆಲಯದೊಳಿರ್ದು ಸುಖಿಪುದೆ
ಮೂಲೋಕಮನಾಳ್ವ ಪದವಿ ಸುಜನೋತ್ತಂಸಾ

ಎಂಬುದರಿಂ

ಶ್ಲೋಕ || ತ್ಯಜೇದೇಕಂ ಕುಲಸ್ಯಾರ್ಥೇ ಗ್ರಾಮಸ್ಯಾರ್ಥೇ ಕುಲಂ ತ್ಯಜೇತ್
ಗ್ರಾಮಂ ಜನಪದಸ್ಯಾರ್ಥೇ ಆತ್ಮಾರ್ಥೇ ಪೃಥಿವೀಂ ತ್ಯಜೇತ್ ||

ಎಂಬುದರಿಂದೀ ಸ್ಥಾನಮಂ ಬಿಡಲೊಳ್ಳಿತ್ತೆನೆ ಶಾಂತಯ್ಯನೆಂದಂ

ಶ್ಲೋಕ || ಪುಣ್ಯಮೇಕೋ ಮಹಾಬಂಧುಃ ಪಾಪಮೇಕೋ ಮಹಾರಿಪುಃ
ಅಸಂತೋಷೋ ಮಹಾವ್ಯಾಧಿಃ ಧೈರ್ಯಂ ಸರ್ವತ್ರಸಾಧನಂ ||

ಆದೊಡಂ

ಶ್ಲೋಕ || ಉದ್ಯಮಂ ಸಾಹಸಂ ಧೈರ್ಯಂ ಬುದ್ಧಿಶಕ್ತಿಃ ಪರಾಕ್ರಮಮ್
ಷಡ್ಭಿರ್ಮನುಷ್ಯಚಿಂತಾ ಸ್ಯಾತ್ಸಪ್ತಮಂ ದೈವಚಿಂತನಮ್ ||
ಸ್ವಾಮಿಕಾರ್ಯಹಿತೋಸೂರೋ ಅನಾಲಸ್ಯಾತಿಥೀಧನಃ
ಕಾಮಿತಾರ್ಥಕರೋಜ್ಞೇಯೋ ಯಸ್ಯ ರಾಜಸ್ಯ ಸೇವಕಃ ||
ಭೃತ್ಯಂ ಬಹುವಿಧಂ ಜ್ಞೇಯಂ ಉತ್ತಮಾಧಮ ಮಧ್ಯಮಾನ್
ತೇನಯೋಜ್ಯಂ ಯಥಾರ್ಥೇಷು ಯದಾ ಕರ್ಮಣಿ ಕರ್ಮಣೇ ||
ಆದೇಶ್ಯಂ ಮುಖರಂ ಸ್ತಬ್ಧಂ ಕ್ರೂರಂ ದುರ್ವ್ಯಸನಂ ಶಠಂ
ಅಸಂತುಷ್ಟಮಭಕ್ತಂ ಚ ತ್ಯಜೇದ್ಭೃತ್ಯಂ ನರಾಧಿಪಃ ||
ಆಯುರ್ವೇದವಿದಃ ಪ್ರಾಜ್ಞಃ ಸರ್ವ ಶಾಸ್ತ್ರವಿಶಾರದಃ
ಶುಚಿಶೀಲ ಗುಣೋಪೇತೋ ಯಸ್ಯ ವೈದ್ಯೋ ವಿಧೀಯತೇ ||
ಪಿತೃಪೈತಾ ಮಹಾಪ್ರೋಕ್ತಃ ಸೂಪಶಾಸ್ತ್ರ ಪರಾಯಣಃ
ಪಾಕಶುದ್ಧಿಶ್ಶುಚಿಶ್ಶೀಲೋ ಸೂಪಕಾರಃ ಪ್ರಶಸ್ಯತೇ ||

ಶಸ್ತ್ರಶಾಸ್ತ್ರ ಕೃತಾಭ್ಯಾಸೋ ವಾಹನಾರೋಹಣೇ ತಥಾ
ಶೌರ್ಯ ಧೈರ್ಯ ಗುಣೋಪೇತಃ ಸೇನಾಧ್ಯಕ್ಷೋ ವಿಧೀಯತೇ ||
ಸಕೃದ್ವಕ್ತೈಗೃಹೀತಾರ್ಥೋ ಲಘುಹಸ್ತೋ ಜಿತೇಂದ್ರಿಯಃ
ಮೇಧಾವೀ ವಾಕ್ಪಟುಃ ಪ್ರಾಜ್ಞೋ ಸೇನಭೋಗೋ ವಿಧೀಯತೇ ||
ಪುರಾಣವೇದ ತತ್ತ್ವಜ್ಞೋ ಜಪಹೋಮಪರಾಯಣಃ
ಆಶೀರ್ವಾದ ಪರೋ ನಿತ್ಯಂ ಯೇಷ ರಾಜಪುರೋಹಿತಃ ||
ತಂತ್ರಾಲೋಚನವಿಜ್ಞೇಯಃ ದೃಢಚಿತ್ತೋ ಜಿತೇಂದ್ರಿಯಃ
ಶಾಂತೋ ನಿರ್ಲೋಭಿಃ ನೀತಿಜ್ಞೋ ರಾಜಮಂತ್ರಿಃ ಪ್ರಚಕ್ಷ್ಯತೇ ||

ಎಂಬುದರಿಂ ಸ್ವಾಮಿಗತಿಹಿತರಪ್ಪ ಬುದ್ಧಿಯುಳ್ಳ ಮಂತ್ರಿ ನಿಯೋಗಿ ಸಾಮಂತಾದಿಗಳಿಂ ನೃಪನ ಕಾರ್ಯಮಾಗಲ್ವೇಳ್ಕುಮದರಿಂ ದೂತಪ್ರೇಷಣೆಯಂ ಮಾಳ್ಪುದೆನಲ್ಕೆ ತನ್ನಲ್ಲರ್ದ ಪೆರ್ಗಡೆಗಳಂ ಪೋಗವೇಳಲವರು ತಮ್ಮಿಂದಂ ತೀರದೆಂಬುದುಂ ಶಾಂತಯ್ಯನಂ ಪ್ರಾರ್ಥಿಸಿ ಯಜಮಾನಂ ವಿವೇಕ ಚಾತುರ್ಯ ಧೈರ್ಯಸ್ಥೈರ್ಯದೊಳಂ ನೀತಿನಿಧಾನದೊಳಂ ನೀನೆ ಸಂಪನ್ನನಪ್ಪುದರಿಂ ಪೋಗಿ ನಿನ್ನ ಬಲ್ಲಂದದಿಂದೆನ್ನೊಳಂ ರಾಯಂ ಪ್ರೀತನಪ್ಪಂತು ಮಾಳ್ಪುದೆನೆ ತಥಾಸ್ತೆಂದು ಕೆಲವು ಕೈಗಾಣಿಕೆ ಮುಸ್ತೈದೆಯ ಸಾಗಿಸಿಕೊಂಡು ಪೋಗಿ ಶ್ರೀರಂಗಪತ್ತನದರಮನೆ ಬಾಗಿಲೊಳ್ ನಿಂದು ರಾಜಗೌಡನ ಮನೆ ಸೇನಬೋಗಂ ಬಂದಿದಾನೆಯೆಂದು ಪೇಳಿಸೆ ಬರವೇಳೆಂಬುದುಂ ಪೋಗಿ ಪಾವುಡಮಂ ಮುಂದಿರಿಸಿ ಭಯಭಕ್ತಿಯಿಂದಾಶೀರ್ವಾದಪೂರ್ವಕಮಂಜಲೀಪುಟನಾಗೆ ರಾಯಂ ನಿರೀಕ್ಷಿಸಿ ಏನೋ ನಿನ್ನ ಗೌಡಂಗೆ ಕುಂಡೆ ಕಡಿಯುತ್ತಿದೆಯೊ ? ಹೇಳಿ ಕಳುಹಿಸ್ತರೆ ಬಾರದೆಯಿದ್ದಾನೆ ಎಂದಾಗ್ರಹಂಗೆಯ್ಯೆ ವೈಮನಸ್ಕನಾಗಿ ತನ್ನ ಮನದೊಳೆ ಪ್ರಥಮ ಚುಂಬನಂ ದಂತಭಗ್ನಮೆಂಬಂತೆ ಕಂಡಾಗಲೆ ಅತ್ಯಾಗ್ರಹಂ ಮಾಳ್ಪನೀತಂ ಸತ್ಪುರುಷ ಲಕ್ಷಣನಲ್ಲಂ ಪ್ರಾಣರಕ್ಷಣಾರ್ಥಂ ಪುಸಿದೊಡಂ ದೋಷಮಿಲ್ಲಮೆಂದು ಮೆಲ್ಲನಿಂತೆಂದಂ ವಪುರಾಖ್ಯಾತಿ ಭೋಜನಮೆಂಬುದರಿಂದಾತನ ಶರೀರಮಂ ಪರಾಂಬರಿಕೆ ಮಾಡಿದಲ್ಲಿ ವೇದ್ಯಮಾಗುತ್ತಿದೆ ವೃಷ್ಟಾನ್ನಮಿಲ್ಲದುದರಿಂ ಕ್ಷುಧಾತುರಾಣಾಂ ನ ರುಚಿರ್ನಪಕ್ವಂ ಎಂದಪಥ್ಯ ಭೋಜನದಿಂ ದೇಹದೊಳುಯಟ್ಟೆಯಿಂ ವಿಸರ್ಪ ತಿಮಿರ ಕಂಡು ಪುಟ್ಟಿ ಎರಡು ಪೊರವಾರೊಳು ವೇದನೆ ತೋರಿಪ್ಪುದರಿಂ ಬರಲಾರದೆನ್ನಂ ಪೋಗಿ ಪಾದಕ್ಕರಿಕೆ ಮಾಡೆಂದಟ್ಟಿದನೆನೆ ಬಹಳ ಕಷ್ಟವೇ ಎನಲು

ಆರ್ಯೆ || ಕಷ್ಟಂ ಖಲು ಮೂರ್ಖತ್ವಂ ಕಷ್ಟಂ ಖಲು ಯವ್ವನೇ ಪಿ ದಾರಿದ್ರಂ
ಕಷ್ಟಾದಪಿ ಕಷ್ಟತರಂ | ಪರಗೃಹವಾಸಂ ಪ್ರವಾಸಂ ಚ ||

ಎಂಬುದರಿಂ ಪ್ರಾಯದೊಳ್ ದರಿದ್ರತ್ವದಿಂದನ್ನಮಿಲ್ಲಮದು ಕಷ್ಟಮೆನೆ ಅನ್ನಮಿಲ್ಲದೆ ಮಣ್ಣ ತಿನ್ನುತ್ತಾನೋ ಎನೆ, ಅನ್ನಮೇ ತಿಂಬುದಾದೊಡಂ ದಡದ ಸಣ್ಣಕ್ಕಿ ಅನ್ನ ಹಾಲು ಹಣ್ಣುವೆರಸಿ ಉಂಡದಂ ಶರೀರಕ್ಕೊಡಂಬಡದದೇನೆಂಬುದುಂ ಅದಾವುದೆನಲು

ಹಾರಕದಕ್ಕಿಯನ್ನಂ ಹುರುಳಿ ಹಾಲು ಮೆಣಸಿಹಣ್ಣೆಂಬುದುಮೀತಂ ಬಹುಚಾಳಕನೆಂದು ಕೋಪಿಸಿ ನಿನ್ನ ಗವುಡಂಗಾವುದುಮಿಲ್ಲೆಂದು ಸತ್ಯಮಂ ಮಾಡೆಂದು ಪೇಳೆಯಸತ್ಯಮನರಿಕೆಮಾಳ್ಪನಲ್ಲ ನಾನಾಡಿದುದೆ ಸತ್ಯಮೆಂಬುದುಮತ್ಯಂತ ರೋಷದಿಂ ತಾವ್ರುದ ಕೊಪ್ಪರಿಕೆಯಂ ತಿದಿಯಿಂದೊತ್ತಿದಗ್ನಿಯೊಳ್ ಕಾಸಿ ಕುಳ್ಳಿರಿಸೆನಲಂತೆ ಕಾಯ್ದ ಕೊಪ್ಪರಿಕೆಯಂ ಮೊಗಚಿಟ್ಟು ಕುಳ್ಳಿರೆನೆ ರಾಯಂಗೆ ಕೈಮುಗಿದು ಸಭಾಜನರ್ಗೆ ವಿನಯಮಂ ನುಡಿದಿಂತೆಂದಂ

ಆರ್ಯಾ || ಕವಿರಕವಿಃ ಪಟುರಪಟುಃ ಶೂರೋಭೀರುಶ್ಚಿರಾಯುರಲ್ಪಾಯುಃ
ಕುಲಜಃ ಕುಲಹೀನೋ ಭವತೀ ನರೋ ನರಪತೇಃ ಕೋಪಾತ್ ||

ಎಂದು ಸಭೆಗಭಿಮುಖನಾಗಿ ಪೇಳಿ ರಾಯಂಗೆ ಪೃಷ್ಠಭಾಗಮಾಗೆ ಬಗ್ಗಿ ಅಂತರೀಯ ವಸ್ತ್ರಮಂ ಕಟಿಯಿಂ ಮೇಲೆತ್ತಿ ಕುಂಡೆಯಂ ವೃಷಣಮಂ ತೋರಿಸುತ್ತಾ ಬಗ್ಗುವುದುಂ ರಾಯನ ಸನ್ನೆಯಿಂ ಕಟ್ಟಿಗೆಯವರು ಮುಚ್ಚೆಂದು ದಂಡದಿಂ ಪೊಡೆದಿದೇನೆಂಬುದುಂ ಮರಸಿಕೊಂಡು ಪೇಳ್ದನೀ ಮಹಾಪ್ರಭುವಿನ ಇದಿರೊಳು ಸತ್ಯಪ್ರಮಾಣಂ ನಡೆಯಲಾರದದರಿಂ ಧೋತ್ರಮನೆನ್ನ ಪ್ರಪಿತಾಮಹಂ ಬಹು ಪ್ರಯತ್ನದಿಂ ಸಂಪಾದಿಸಿ ಮಡಗಿರ್ದೋಡೀ ಮಹಾಸ್ವಾಮಿಯ ಪಾದಮಂ ಕಾಣಲ್ಕೆಂದು ಧರಿಸಿಬಂದೆನೀ ಪುರಾಣ ವಸ್ತ್ರಂ ಬೆಂದೊಡಿದಂ ಪೊಸತಂ ಮಾಡಲೆನಗಮೆಮ್ಮ ಗೌಡಂಗಂ ಸಾಧ್ಯಮಿಲ್ಲದುದರಿಂ ಪ್ರಯತ್ನದಿಂ ಪಟ್ಟಹಾಕಿರಿಸಿದೊಡೆನ್ನ ಪುತ್ರ ಪೌತ್ರ ಪ್ರಪೌತ್ರಾದಿಗಳು ನಿರ್ಭಾಗ್ಯಂ ಮಹಾರಾಯರ ಬಳಿಯಲ್ಲಿ ವಸ್ತ್ರಮಂ ಬೇಯಿಸಿಕೊಂಡು ಬಂದು ಪಟ್ಟ ಹಾಕಿಸಿದನಿದನುಡಲಾಗದೆಂದು ನೋಡಿ ನೋಡಿರಿಸುವರಾ ದುರ್ಯಶಸ್ಸು ಮಹಾರಾಯರ್ಗೆ ಬಹುಕಾಲ ಬಪ್ಪುದರಿಂದೀಯಳಿವ ದೇಹಂ ತಿಕಂ ಬೆಂದೊಡವುಷಧಿಯಿಂ ವಾಯಿಸಬಹುದಥವಾ ವಾಣದೊಡಂ ತನ್ನ ತಲೆಯೊಳಗಾಗಿಯಪಕೀರ್ತಿ ಪೋಪುದದರಿಂದೆತ್ತಿದೆನೆನೆ ರಾಯನಡ್ಡಮೋರೆಯೊಳ್ ದರಹಸಿತವದನನಾಗಿ ನಿನ್ನ ಗೌಡಂ ಸುಖಮನರಿಯನಾತಗೇನು ದುಃಖಮದಂ ಪೇಳೆನಲೆಂದಂ

ವೃತ್ತ || ಅನೇಕ ದುಃಖಾನಿ ಭವಂತಿ ಲೋಕೇ | ಚತ್ವಾರಿ ದುಃಖಾನಿ ಬಹೂನಿ ತಾನಿ
ಕೃಷೀ ಚ ನಷ್ಟಾ ಗೃಹಿಣೀ ಚ ದುಷ್ಟಾ | ಪುತ್ರೋಪ್ಯವಿದ್ವಾನುದರಸ್ಯ ಬಾಧಾ||

ಎಂಬುದರಿಂದನ್ನಕ್ಕೆ ನೆಲ್ಲಿಲ್ಲದೇಕೋದ್ರವಕುಲುತ್ಥಾದಿ ಕ್ಷುದ್ರ ಧಾನ್ಯಮನುಂಡು ಬಾಳ್ವ ರಾಜರ್ಗೆ ದುಃಖಂ ಪಿರಿದಪ್ಪುದೆಂಬುದಂ ಸರ್ವಜ್ಞಚಿತ್ತಕ್ಕೆ ತಿಳಿದಿದೆಯಾಗಿ ನಾನು ಬೇರೆಯರಿಕೆಯಂ ಮಾಳ್ಪ ಶಕ್ತನಲ್ಲೆಂಬುದುಂ ರಾಯಂಗೆ ಕರುಣಂ ಪುಟ್ಟಿ ಕೈಯೊಳಿರ್ದನಂ ಬಿಡಲಾಗದಾತನೆ ಎಮ್ಮಂ ಕಂಡು ಬಾಳ್ವನಲ್ಲದೆ ಪೆರತಿಲ್ಲೆಂದಷ್ಟಗ್ರಾಮದ ಕಾಲ್ವೆಯಿಂದಾಗತಕ್ಕ ಬತ್ತದ ಗದ್ದೆಗಳೊಳ್ ಸಾವಿರ ಖಂಡಿಗಂ ಬೀಜವರಿಯಂ ಮಹಿಸೂರಂ ಹವಾಲು ಮಾಡಿ ನಿರೂಪವನ್ನು ಬರೆಸಿಕೊಟ್ಟು ಭಾರಿ ಧೋತ್ರಜೋಡಿಯ ಶಾಂತಯ್ಯಂಗುಡುಗೊರೆ ಕೊಟ್ಟು ನಿನ್ನಂತಪ್ಪ ನಿಯೋಗಿಯಿಲ್ಲೆಂದು ನಿಮ್ಮ ರಾಜನುಂ ನೀನುಂ ನೆಲ್ಲನ್ನವನುಂಡು ಸುಖಮಿಪ್ಪುದೆಂದು ಹೇಳಿಕಳುಹಿಸಿದಾಗಳೆ ಬಪ್ಪುದೆಂದು ಪ್ರಿಯಮಂ ನುಡಿಯೆ

ಆರ್ಯೆ || ದಾನಂ ಪ್ರಿಯವಾಕ್ ಸಹಿತಂ | ಜ್ಞಾನಮಗರ್ವಂ ಕ್ಷಮಾನ್ವಿತಂ ಶೌರ್ಯಮ್
ತ್ಯಾಗಸಹಿತಂ ಚ ವಿತ್ತಂ | ದುರ್ಲಭಮೇತಚ್ಚತುರ್ಭದ್ರಮ್ ||

ಎಂದು ಶಾಂತಯ್ಯಂ ಮಹಿಸೂರಿಗೆ ಬರೆ ರಾಜೊಡೆಯಂ ಸಂತೋಷದಿಂ ಬಿಗಿಯಪ್ಪಿ ನೀನೆ ಎನ್ನ ತಂದೆ ಎನ್ನ ಭಾಗ್ಯಕ್ಕೆ ನೀನೆ ಸಹಕಾರಿ ನಿನಗೇನಂ ಮಾಳ್ಪೆನೆಂದಾ ಕ್ಷಣಮೆ ಗ್ರಾಮಕ್ಕೆ ಒಂದು ಒಕ್ಕಲುಮೇರೆ ಮೂವತ್ತುಮೂರು ಒಕ್ಕಲಂ ಶಾಂತಯ್ಯಂಗೆ ಧರ್ಮಶಾಸನಮಂ ಬರೆಯಿಸಿಕೊಟ್ಟು ಅವನ ದೇವರಿಪ್ಪ ಕನಕಗಿರಿಯ ಬಸ್ತಿಪ್ರಾಕರದ ಎಸಳಬೇಲಿ ತೆಗೆಯಿಸಿ ಕೋಟೆಯಂ ಹಾಕಿಸಿದನದರಿಂದರಸೊಲಿದೊಡಾಗದ ಕಾರ್ಯಮಿಲ್ಲೆಂಬ ಮಾತು ನಿಶ್ಚಯಮಾಯ್ತೆಂದೆಲ್ಲರುಂ ಸಂತೋಷಂಬಟ್ಟರ್.

ಮತ್ತೊಂದು ದಿವಸಂ ರಾಜಪುರೋಹಿತನ ಮಗಂಗೆ ಸರ್ಪದಷ್ಟಮಾಗೆ ಆರಿಂದಲೂ ವಿಷವಿಳಿಯದಿರಲು ಶಾಂತಯ್ಯನಂ ಕರೆಯಲೆಂದು ರಾಜಸೇವಕನಂ ಕಳುಹಿಸಿದೊಡಾತಂ ಪೋಗಿ ಪುರೋಹಿತನ ಮಗಂಗೆ ಸರ್ಪವಿಷ ಪೂರಿಸಿ ಪಲವು ಮಂತ್ರ ತಂತ್ರಂಗಳಿಂದಿಳಿದುದಿಲ್ಲದರಿಂ ತಮ್ಮಂ ಕರೆಯಲಟ್ಟಿದರೆಂಬುದುಂ ತಾನೆದ್ದುಬಂದಾತನ ಮಸ್ತಕಮಂ ಕೆನ್ನೆಯಂ ಮೂರು ವೇಳೆ ಗುದ್ದಿ ವಿಷವಿಳಿದುಹೋಯಿತೆಂದು ಮೂರು ವೇಳೆ ಹೇಳಿಸಿ ಕಳುಹಿಸಲಾತಂ ಬಪ್ಪನ್ನೆಗಂ ವಿಷವಿಳಿದು ಮೈಮುರಿದೆದ್ದು ಕುಳ್ಳಿರ್ದನಪ್ಪರೊಳು ಶಾಂತಯ್ಯಂ ಖಗೇಂದ್ರಮಣಿದರ್ಪಣಮೆಂಬ ಶಾಸ್ತ್ರಮಂ ಚೆನ್ನಾಗರಿವನಪ್ಪುದರಿಂ ಗರುಡಮಂತ್ರೋಚ್ಚಾರಣೆಯಿಂದಪ್ಪನ ಪೆಸರ್ಗೊಂಡು ಮಾಡಿ ರಾಜಾಸ್ಥಾನಮನೆಯ್ದೆವಪ್ಪುದುಂ ರಾಜಂ ನಿಮಗೀ ಮಂತ್ರಮೆಂತು ಸಾಧ್ಯಮಾಯ್ತೆಂದು ಬೆಸಗೊಳೆ ಶಾಂತಯ್ಯನೆಂದಂ

ಹೆಡತಲೆಯೆಂಬೂರೊಳು ದೇವರಸನೆಂಬೊಂ ಹೆಮ್ಮರಗಾಲಮೆಂಬುದರೊಳು ಲೆಪ್ಪರಸನೆಂಬೊಂ ನೇರಳೆಯೆಂಬೂರೊಳಂತಪ್ಪರಸರೆಂದಿರ್ದರಾ ಮೂವರು ಸಹೋದರರು ಮಂತ್ರವಾದಮಂ ಸಾಧಿಸಲೆಂದು ಮಲೆಯೂರು ಬೆಟ್ಟಮನೆಯ್ದಿ ಏಳುಪವಾಸದಿಂ ನಾಗಾರ್ಜುನಂಗೊರವಿತ್ತ ಪದ್ಮಾವತೀಕಲ್ಪಕ್ರಮದಿಂ ದೇವಿಯ ಮೂಲ ಮಂತ್ರಜಪಂಗೆಯ್ದು ಮಹಾದೇವಿ ಪ್ರತ್ಯಕ್ಷಮಾಗಿಯವನ ವಿಕಾರಮನಮನರಿದು ನೀನು ಉಮ್ಮತ್ತೂರನೆಯ್ದಿ ಭೈರವನನಾರಾಧಿಸೆಂದು ತಿರಸ್ಕರಿಸೆ ಚಿಂತೆಯಿಂ ಪೋಗಿ ಲೆಪ್ಪರಸಂ ತನ್ನ ನುಜನಂತಪ್ಪರಸನಂಬೆರಸು ದರಿದ್ರಕ್ಕಾರದೆ ಇಂತೆಂದಂ

ಕರೆಯದೆ ಪೋಪುದು ಕಷ್ಟಂ
ಸಿರಿವಂತರ ಮನೆಯ ಹೆಣ್ಣ ತರುವುದು ಕಷ್ಟಂ
ಧರಣಿಪತಿ ಸೇವೆ ಕಷ್ಟಂ
ಧರೆಯೊಳ್ ದಾರಿದ್ರ್ಯ ಕಷ್ಟದೊಳಗತಿಕಷ್ಟಂ

ಅದರಿಂ ಬೇಡಿದೊಡಂ

ಶ್ಲೋಕ || ದೇಹೀತಿವಚನಂ ದೃಷ್ಟ್ವಾ ದೇಹಸ್ಥಾಃ ಪಂಚದೇವತಾಃ
ದೇಹಂ ಮುಕ್ತ್ವಾ ಬಹಿರ್ಯಾಂತಿ ಶ್ರೀರ್ಹ್ರೀರ್ಧೀ ಧೃತಿ ಕೀರ್ತಯಃ ||

ಮತ್ತಂ

ಶ್ಲೋಕ || ತೃಣಾಲ್ಲಘುತರಸ್ಥೂಲಃ ತೂಲಾಲ್ಲಘು ಚ ಯಾಚಕಃ
ವಾಯುನಾ ಕಿಂ ನ ನೀತೋಸೌ ಮಾಮಯಂ ಪ್ರಾರ್ಥಯೇದ್ಯದಿ ||
ದಾರಿದ್ರ್ಯಾಯ ನಮಸ್ತುಭ್ಯಂ ಸಿದ್ಧೋಽಹಂ ತ್ವತ್ಪ್ರಸಾದತಃ
ವಿಶ್ವಂ ಪಶ್ಯಾಮ್ಯಹಂ ನಿತ್ಯಂ ಸರ್ವೋ ಮಾಂ ತು ನ ಪಶ್ಯತಿ ||

ಎಂದು ಸಮ್ಯಗ್ದೃಷ್ಟಿಗಳ್ಗೆ

ಮ || ಇರುಳೂಟಂ ಕೊಲೆ ಐದು ಪಾಲ್ಮರದ ಪಣ್ಣಾಣಂಚೆ ಬೆಳ್ಗಂಬಳಂ
ಪರದೈವಸ್ತುತಿ ಕಳ್ಳು ಜೇನಡಗದತ್ತಾ ದಾನಮನ್ಯಾಂಗನಾ
ಹರಣಂ ಪೂವಿನ ಶಾಖ ಗಿಣ್ಣು ನವನೀತಂ ಮಿಥ್ಯ ಶಾಸ್ತ್ರೌಷಧಂ
ಪರಪೀಡಾಕರ ಜೂಜು ಬೇಂಟೆಯಿನಿತುಂ ಜೈನಂಗೆ ಮೂಲವ್ರತಂ ||

ಎಂಬುದರಿಂ ಭೈರವನಾರಾಧಿಸುವುದಾಗದೆಂದು ಸ್ವಮತವ ಪೇಳ್ದೊಡಂ ಬಿಡದೆ ದಶಾಕ್ಷರೀಮಂತ್ರಮಂ ಹಿಂಡಿಯಂ ಮೆದ್ದು ಪನ್ನೆರಡು ಸಾವಿರ ಜಪಂಗೆಯ್ಯೆ ಸಿಂಗವದನಮುಗ್ರದಂಷ್ಟ್ರದಿನತಿಭಯಂಕರಮಪ್ಪ ನನ್ನ ರೂಪಿಂ ಗ್ರಾಮಶಾರ್ದೂಲವನೇರಿ ಪ್ರತ್ಯಕ್ಷಮಾಗಲತಿಭೀತನಾಗೆರಡು ಕಣ್ಣಂ ಮುಚ್ಚಿ ಪದ್ಮಾಸನಮಂ ಬಿಟ್ಟುರುಳುವಾತನ ಶಿಖಿಯಂ ಪಿಡಿದೆತ್ತಿಕೊಂಡು ಪೋಗಿ ಬೆಳುಗಿರಿರಂಗನ ಬೆಟ್ಟದ ಬಿದಿರಮೆಳೆಯೊಳ್ಕಟ್ಟಿದೊಡಾ ರಾತ್ರಿ ಬೆಳಗು ಪರ್ಯಂತಂ ನೇಲುತ್ತುಂ ಮಂತ್ರಮಂ ಜಪಿಸುತ್ತಿರೆ ಮೆಚ್ಚಿ ಏನು ಬೇಕು ಬೇಡಿಕೊ ಎಂಬುದುಂ ವೆಚ್ಚಕ್ಕೆ ಪಣಮಂ ಬೇಡಲೊಂದು ಹಣಮಂ ಕೊಟ್ಟು ನಿನಗೆ ಬೇಕಾದ ವ್ಯಾಪಾರಮಂ ಕೊಂಡು ಗಂಟಿಕ್ಕಲಲ್ಲೆ ಇಪ್ಪುದೆಂದು ಪೇಳಿ ಪೋಯಿತು.

ಆರ್ಯೆ || ಅಂಧುರ್ವಾ ಸಿಂಧುರ್ವಾ | ಕಿಯದ್ಭೀರಂ ಭೋಬಿರಂ ಭಯೇತ್ಕುಂಭಂ
ಡಿಲ್ಲೀವಾ ಪಲ್ಲೀವಾ | ನಾತಿಕ್ರಮೇಣ ಪೌರುಷಂ ಭಾಗ್ಯಂ ||

ಫಲಂ ಭಾಗ್ಯಾನುಸಾರಿಣೀ ಎಂಬುದರಿಂ ಲಭ್ಯವೆಷ್ಟೋ ಅಷ್ಟೇ ಅಪ್ಪುದೆಂದು ಕೊಂಡುಬಂದಾ ಪ್ರಕಾರ ಜೀವಿಸುತ್ತಿರಲಂತಪ್ಪರಸನುಂ ದೇವರಸನುಮಾ ಪ್ರಕಾರದೊಳೆ ಭೈರವನನಾರಾಧಿಸಿ ಎರಡು ದೈವಂಗಳಂ ಕೊಂಡು ದಿನಂಪ್ರತಿ ಭಕ್ಷ್ಯಾದಿಗಳ ತರಿಸಿ ಉಣ್ಣುತ್ತಿಪ್ಪುದುಮೊಂದಾನೊಂದು ಗೌರೀಹಬ್ಬದೊಳು ಹೊಲೆಯರ ಮನೆಯಿಂ ಸೇವಗೆಯಂ ತಂದೀಯಲಾ ಪೊಲತಿ ಬಂದೆನ್ನ ಮನೆಯೊಳಿರ್ದ ಸೇವಗೆ ಪೋಯಿತೆಂದು ಬೀದಿಯೊಳ್ ಬಯ್ಯುತ್ತಿರಲಂದಿಂದದು ಬಿಟ್ಟು ಕಾಲದೋಷದಿಂದೆಮಗತಿಪಾಪಂ ಸಂಭವಿಸಿತೆಂದು ಹಸಿದಪ್ಪ ಫಲಾಹಾರಮಂ ಮಾಡಿಕೊಂಡಿರ್ದನಾ ಅಂತಪ್ಪರಸಂ ಗಾರುಡವಿದ್ಯಂಗಳೊಳತಿಸಮರ್ಥನಾಗಿ

ಮಹಾಮಹಾ ಸಂರ್ಪಂಗಳನಾಕರ್ಷಣಂ ಮಾಡಿ ತನ್ನ ಗೃಹದ ಚಪ್ಪರದೊಳನೇಕ ಪಾವುಗಳನೇರಿಸಿ ಹೇಳಿದಂತೆ ಕೇಳಿಸಿಕೊಳ್ಳುತ್ತಿರ್ದಂ. ಲೆಪ್ಪರಸಂ ಭೈರವನಿತ್ತ ಹಣಮಂ ಬೇಹಾರಕ್ಕೆ ಕೊಟ್ಟು ಗಂಟಿಕ್ಕಿಕೊಳ್ಳುತ್ತಿರ್ದಂ. ಮತ್ತೊಂದು ದಿನಮೊಂದು ಮರನಂ ಕ್ರಯಕ್ಕೆ ಕೊಂಡು ಗಂಟಿಕ್ಕಲ್ ಮರೆದು ಬಂದು ಆ ಮರದ ಕಂಬಮಂ ತಂದು ತನ್ನ ಹಟ್ಟಿಯೊಳಿಟ್ಟೊಡದು ಪೆಗಲಂ ಪತ್ತೆ ಮತ್ತಂ ನೆಗೆನೆಗೆದಿಡುತ್ತಿರ್ದೊಡಂ ಬಿಡದೆ ಹೆಗಲೇರಿ ಬರುತ್ತಿರ್ದೊಡದಂ ಬಿಡಿಸುವುಪಾಯಮಂ ಕಾಣದೆ ನೂರುವೇಳೆ ಇಟ್ಟಾಗ್ಯೂ ಪೆಗಲಂ ಪತ್ತಿ ಬರುತ್ತಿರೆ ಆ ದಾರುವಂ ಪೊತ್ತು ನಿಜಗುರುಗಳಿಪ್ಪ ಕನಕಗಿರಿಗೆಯ್ದಿ ಮುನಿಪಂಗೆ ನಮೋಸ್ತು ಮಾಡಿ ತಾನು ಮಂತ್ರ ಸಾಧನಂ ಮಾಡಿದುದಾದಿಯಾಗಿ ತನ್ನ ತೆರನಂ ಸವಿಸ್ತರಂ ಪೇಳಿ ಈ ಮರನಂ ತೊಲಗಿಸುವ ತೆರನಾವುದೆಂದು ಬೇಡಿಕೊಂಬುದುಮಾ ಗುರುಗಳವನ ಪೂರ್ವಾಪರ ಸಂಬಂಧಮಂ ತಿಳಿದು ಈ ಮರಮಂ ಕೊಟ್ಟಂಗೆ ಕೊಟ್ಟು ನಿನ್ನ ಪಣದ ಗಂಟಿಕ್ಕಿಕೊಂಡು ಬಪ್ಪುದೆನಲು ಆ ಪ್ರಕಾರಂ ಮಾಡೆ ಆ ಮರಂ ಬಿಟ್ಟುಪೋಗೆ ಭೈರವನಿತ್ತ ಹಣಂ ಗಂಟಿಗೆ ಸೇರಿದೊಡೀ ಪಾಪಕೃತ್ಯಂ ಯೋಗ್ಯಮಲ್ಲೆಂದು ಗುರುಗಳಲ್ಲಿಗೆ ಬಂದು ನಮಿಸಿ ಈ ಹಣಮನೊಪ್ಪಿಸಿಕೊಂಡೆನಗೆ ವ್ರತಮನೀವುದೆಂಬುದುಂ ಮುನಿಗಳೆಂದರ್ ದಾನದೊಳು ದಾತೃವೆಂದು ಪಾತ್ರವೆಂದು ದೇಯವಸ್ತುವನರಿಯದೆ ದಾನಮಾಗಲಲ್ಲಿ ಧರ್ಮಮಂ ಕೈಗೊಳ್ಳಲ್ ಉಪದೇಶಂಗೇಳ್ವುದು. ಅಲ್ಲಿ ಮೂರ್ಖರು ಕೊಳ್ವರಲ್ಲದೆಂತೆನೆ

ವೃತ್ತ || ಕಿಂ ಮುಕ್ತಾಹಾರೇಣ ಚ ಮರ್ಕಟಸ್ಯ (?)
ಮೃಷ್ಟಾನ್ನಪಾನೇನ ಚ ಗರ್ದಭಸ್ಯ
ಅಂಧಸ್ಯ ನೃತ್ಯಂ ಬಧಿರಸ್ಯ ಗೀತಂ
ಮೂರ್ಖಸ್ಯ ಕಿಂ ಧರ್ಮಕಥಾಪ್ರಸಂಗಂ ||

ಶ್ಲೋಕ || ಕರ್ಮಪೂರಿತ ಜೀವಾನಾಂ ಧರ್ಮಶಾಸ್ತ್ರಮರೋಚಕಮ್
ಚರ್ಮಖಂಡನಭಕ್ಷಾಣಾಂ ಶೂನಾಂ ಘೃತಮರೋಚಕಮ್ ||

ತ್ರೈಲೋಕ್ಯದೀಪಮಪ್ಪ ಸದ್ಧರ್ಮಮಂ ಕೈಕೊಳ್ವಡಂ ಜ್ಞಾನಶೂನ್ಯಂಗಾಗದು

ಶ್ಲೋಕ || ಯಸ್ಯ ನಾಸ್ತಿ ಸ್ವಯಂ ಪ್ರಜ್ಞಾ ಶಾಸ್ತ್ರಂ ತಸ್ಯ ಕರೋತಿ ಕಿಮ್
ಲೋಚನಾಭ್ಯಾಂ ವಹೀನಸ್ಯ ದರ್ಪಣ ಕಿಂ ಕರಿಷ್ಯತಿ ||
– "ಜ್ಞಾನೇನ ಮೋಕ್ಷಂ ಸುಕೃತೇನ ಗಮ್ಯತೇ"
ದುಃಖಗ್ರಾಹಗಣಾಕೀರ್ಣೇ ಸಂಸಾರಕ್ಷಾರಸಾಗರೇ
ಧರ್ಮೋಪೇತಂ ಪರಂ ಪ್ರಾಹುಸ್ತರಣಾರ್ಥಂ ಮನೀಷಿಣಃ ||

ಅದರಿಂ ಜೀವಂಗಳ್ಗೆ ಧರ್ಮವೇ ಶ್ರೇಯಸ್ಕರಮೆಂದು

ವೃತ್ತ || ಧರ್ಮಃ ಸರ್ವಸುಖಾಕರೋ ಹಿತಕರೋ ಧರ್ಮಂ ಬುಧಾಶ್ಚಿನ್ವತೇ
ಧರ್ಮೇಭ್ಯೋವ ಸಮಾಪ್ಯತೇ ಶಿವಸುಖಂ ಧರ್ಮಾಯ ತಸ್ಮೈ ನಮಃ
ಧರ್ಮಾನ್ನಾಸ್ತ್ಯಪರಂ ಸುಹೃದ್ಭವಭೃತಾಂ ಧರ್ಮಸ್ಯ ಮೂಲಂ ದಯಾ
ಧರ್ಮೇ ಚಿತ್ತಮಹಂ ದಧೇ ಪ್ರತಿದಿನಂ ಹೇ ಧರ್ಮ ಮಾಂ ಪಾಲಯ ||

ಎಂಬುದರಿಂ ಧರ್ಮವಂ ಕೊಂಬವಂ ಮೊದಲು ಮೋಹಮಂ ಕ್ರೋಧಮಂ ಬಿಟ್ಟರೆ ಸಮ್ಯಗ್ದರ್ಶನಜ್ಞಾನ ಚಾರಿತ್ರದಿಂ ಮೋಕ್ಷಮಾರ್ಗಮಂ ಕಂಡು ಪೋಪನವರೊಳು ದರ್ಶನ ಮೋಹನೀಯ ಮೂರು ಅನಂತಾನುಬಂಧಿ ಕ್ರೋಧ ಮಾನ ಮಾಯಾ ಲೋಭಮೆಂಬ ನಾಲ್ಕುಗೂಡಿ ಏಳು ಪ್ರಕೃತಿಗಳು, ಪರಮ ಕ್ಷಾಯಿಕ ವೇದಕಮೆಂದು ಮೂರು ತೆರಂ

ಆರ್ಯೆ || ಮೋಹತಿಮಿರಾಪಹರಣೇ
ದರ್ಶನಲಾಭಾದವಾಪ್ತಸದ್ಜ್ಞಾನಃ
ರಾಗದ್ವೇಷ ನಿವೃತ್ತೈ
ಚಾರಣಂ ಪ್ರತಿಪಾದ್ಯತೇ ಸಾಧುಃ

ಶ್ಲೋಕ || ಕ್ರೋಧಮೂಲಮನಸ್ತಾಪೇ ಕ್ರೋಧಃ ಸಂಸಾರಬಂಧಕಃ
ಧರ್ಮಕ್ಷಯಕರಃ ಕ್ರೋಧಃ ತಸ್ಮಾತ್ ಕ್ರೋಧಂ ವಿವರ್ಜಯೇತ್ ||
ಪಕ್ಷಿಣಾಂ ಕಾಕಶ್ಚಾಂಡಾಲಃ (?) ಮೃಗಚಾಂಡಾಲ ಗಾರ್ದಭಃ
ಯತೀನಾಂ ಕೋಪೀ ಚಾಂಡಾಲಃ ಸರ್ವಚಾಂಡಾಲ ದೂಷಕಃ || (?)

ಕ್ಷಮಾರೂಪಂ ತಪಸ್ವಿನಾಂ ಎಂಬುದರಿಂ ಗೃಹಿಯಾದೊಡಂ ಯತಿಯಾದೊಡಂ ಕ್ಷಮಾಯುತನಾಗೆ ಧರ್ಮಮಕ್ಕುಂ

ಶ್ಲೋಕ || ಕ್ಷಮಾಬಲಮಶಕ್ತಾನಾಂ ಶಕ್ತಾನಾಂ ಭೂಷಣಂ ಕ್ಷಮಾ
ಕ್ಷಮಾ ವಶೀಕೃತಿಃ ಲೋಕೇ ಕ್ಷಮಯಾ ಕಿಂ ನ ಸಾಧ್ಯತೇ ||
ಪುಷ್ಪಕೋಟಿ ಸಮಂ ಸ್ತೋತ್ರಂ ಸ್ತೋತ್ರಕೋಟಿ ಸಮಂ ಜಪಃ
ಜಪಕೋಟಿ ಸಮಂ ಧ್ಯಾನಂ ಧ್ಯಾನಕೋಟಿ ಸಮಂ ಕ್ಷಮಾ ||

ವೃತ್ತ || ಅನೇಕ ಶಾಸ್ತ್ರಂ ಬಹುವೇದಿತವ್ಯಂ
ಅಲ್ಪಶ್ಚ ಕಾಲೋ ಬಹವಶ್ಚ ವಿಘ್ನಾಃ
ಯತ್ಸಾರಭೂತಂ ತದುಪಾಸಿತವ್ಯಂ
ಹಂಸೋ ಯಥಾ ಕ್ಷೀರಮಿವಾಂಬು ಮಿಶ್ರಂ ||

ಎಂಬುದರಿಂ ಮೋಹಮಂ ಕ್ರೋಧಮಾನಮಾಯಾಲೋಭಮಂ ಬಿಟ್ಟು ಸಮ್ಯಗ್ದರ್ಶನಮಂ ಪಿಡಿವುದುಮದು ಪರಮಾರ್ಥಸ್ವರೂಪಾಪ್ತಾಗಮ ತಪಸ್ವಿಗಳೆಂಬವರೊಳು ಶ್ರದ್ಧೆಯಿಂ ನಂಬಿ ಇಪ್ಪತ್ತೈದು ದೋಷಂಗಳು ಮೂರು ಮೂಢಂಗಳಂ ಎಂಟು ಮದಮಾರನಾಯತಂಗಳಂ ಶಂಕಾದಿ

ಎಂಟು ದೋಷವ್ಮಂ ಪೊರ್ದಿಸದಿಪ್ಪುದು ಸಮ್ಯಗ್ದರ್ಶನವೆಂಬುದದು ಧರ್ಮಕ್ಕಧಿಷ್ಠಾನಮಪ್ಪುದದರಿಂ ಮೂರು ಭವದೊಳು ಸಕಲ ಸಂಪತ್ಸಮೇತನಾಗಿ ಮುಕ್ತಿಯಂ ಪಡೆವಂ

ಶ್ಲೋಕ || **ಸಮ್ಯಗ್ದರ್ಶನಶುದ್ಧಮಪಿ ಮಾತಂಗದೇಹಜಮ್**
ದೇವಾದೇವ ವಿದುರ್ಭಸ್ಮ ಗೂಢಾಂಗಾರಾತ ಕಾಜಸಮ್ ||
ಜ್ಞಾತ್ವಾ ತಲಾಮಲಕವದ್ಭುವಿ ಸರ್ವವಿದ್ಯಾಂ
ಕೃತ್ವಾ (?) ತಪಾಂಸಿ ಬಹುಕೋಟಿ ಯುಗಾಂತರೇಷು ||
ಸದ್ದರ್ಶನಾಮೃತ ರಸಾಯನ ಪಾನಬಾಹ್ಯ
ನಾತ್ಯಂತಕೀಮನುಭವಂತಿ ಹ ಮೋಕ್ಷಲಕ್ಷ್ಮೀಃ ||

ಎಂಬುದರಿಂ ದರ್ಶನಂ ಭವಭವಂಗಳೊಳು ದೊರೆಯದೆ ಭವಮಾಲೆ ಯೋಗಿಗಳೊಳು ಭ್ರಮಿಸಿದೆನೀಗಳೆನಗಪೂರ್ವಲಾಭಂ ದೊರೆಕೊಂಡುದೆಂದು ನಿಶ್ಶಂಕೆಯಿಂ ಕಬ್ಬುನ ಉಂಡ ನೀರಂತೆ ದೃಢಚಿತ್ತದಿಂ ನಂಬಿ ಸಕಳ ಜೀವಂಗಳೊಳು ದಯಾಪರನಾಗಿಪ್ಪುದು ಧರ್ಮಮೆಂಬುದಕ್ಕುಂ. ಆ ಧರ್ಮಂ ಯತಿಧರ್ಮಂ ಗೃಹಸ್ಥಧರ್ಮಮೆಂದೆರಡು ಭೇದಮಲ್ಲಿ ಉತ್ತಮಕ್ಷಮೆ ಮೊದಲಾದ ಹತ್ತು ಧರ್ಮಮುಂ ಪಂಚಮಹಾ ವ್ರತ ಪಂಚಸಮಿತಿ ಪಂಚೇಂದ್ರಿಯ ಜಯ ಮೊದಲಾದಿಪ್ಪತ್ತೆಂಟು ಮೂಲಗುಣಂಗಳು ದ್ವಾದಶವಿಧ ತಪ ಪಂಚಾಚಾರ ಗುಪ್ತಿತ್ರಯ ಮೊದಲಾಗೆ ಮೂವತ್ತಾರುತ್ತರ ಗುಣಂಗಳ್ವೆರಸು ಎಂಬತ್ತುನಾಲ್ಕು ಲಕ್ಷ ಗುಣಂಗಳಂ ಪದಿನೆಂಟು ಸಹಸ್ರ ಶೀಲ ಸಹಿತಮಾದ ಯತಿಧರ್ಮಂ. ದಾನ ಪೂಜೆ ಶೀಲೋಪವಾಸಮೆಂಬೀ ನಾಲ್ಕು ಗೃಹಸ್ಥಗೆ ಧರ್ಮಮಪ್ಪವು. ಅಣುವ್ರತ ಗುಣವ್ರತ ಶಿಕ್ಷಾವ್ರತಂಗಳೈದುಂ ಮೂರು ನಾಲ್ಕು ಭೆದದಿಂದ ಹನ್ನೆರಡಪ್ಪವು. ದಾನಂ ಉತ್ತಮ ಮಧ್ಯಮ ಜಘನ್ಯಮೆಂಬ ಮೂರು ಪಾತ್ರಂಗಳ್ಗೆ ಆಹಾರಮಭಯ ಭೈಷಜ್ಯ ಶಾಸ್ತ್ರಮೆಂಬ ನಾಲ್ಕು ದಾನಂಗಳನೀವುದು.

ವೃತ್ತ || ಉತ್ಕೃಷ್ಟ ಪಾತ್ರಮನಗಾರಮಣುವ್ರತಾಢ್ಯಂ
ಮಧ್ಯವ್ರತೇನ ರಹಿತಂ ಸುದೃಢಂ ಜಘನ್ಯಮ್
ನಿರ್ದರ್ಶನಂ ವ್ರತನಿಕಾಯಯುತಂ ಕುಪಾತ್ರಂ
ಯುಗ್ಮೋಜ್ಝಿತಂ ನರಮಪಾತ್ರಮಿದಂ ತು ವಿದ್ಧಿ ||

ಶ್ಲೋಕ || ಪಾತ್ರಾಪಾತ್ರ ವಿಶೇಷೇಣ ಧೇನುಪನ್ನಗಯೋರಿವ
ತೃಣಾತ್ ಸಂಜಾಯತೇ ಕ್ಷೀರಂ ಕ್ಷೀರಾತ್ ಸಂಜಾಯತೇ ವಿಷಮ್ ||

ವೃತ್ತ || ಸಂತಪ್ತಾಯಸ ಸಂಸ್ಥಿತಸ್ಯ ಪಯಸೋ ನಾಮಾಪಿ ನ ಶ್ರೂಯತೇ
ಮುಕ್ತಾಕಾರತಯಾ ತದೇವ ನಳಿನೀಪತ್ರಸ್ಥಿತಂ ದೃಶ್ಯತೇ
ಅಂತಸ್ಸಾಗರ ಶುಕ್ತಿ ಮಧ್ಯಪತಿತಂ ತನ್ಮೌಕ್ತಿಕಂ ಜಾಯತೇ
ಪ್ರಾಯೇಣಾಧಮ ಮಧ್ಯಮೋತ್ತಮಜುಷಾ ಏವಂವಿಧಾ ವೃತ್ತಯಃ ||

ಶ್ಲೋಕ || ವಟಬೀಜಂ ಯಥಾ ತುಚ್ಛಂ ಸುಕ್ಷೇತ್ರೇ ತನ್ನಿವೇಶಿತಮ್
ಬಹು ವಿಸ್ತೀರ್ಣತಾಂ ಯಾತಿ ಪಾತ್ರದತ್ತಂ ತಥಾಶನಮ್ ||

ಇದು ದಾನಮೆಂಬುದು. ಮುನ್ನಂ ಮಹಾಪುರುಷರು ಗೃಹಸ್ಥಧರ್ಮ ಯತಿ ಧರ್ಮದೊಳ್ ಸಂಪೂರ್ಣಮಾಗೆ ನೆಗಳ್ದು ಸರ್ವಸಂಗ ಪರಿತ್ಯಾಗಂಗೆಯ್ದು ಪರಮಾತ್ಮ ಧ್ಯಾನಾಗ್ನಿಯಿಂ ಮೂಲೋತ್ತರ ಪ್ರಕೃತಿ ಸರ್ವಕರ್ಮಮಂ ದಹಿಸಿ ಪದಿನೆಂಟು ದೋಷಂಗಳಂ ಕಳೆದು ಅಷ್ಟಮಹಾಗುಣಂಗಳಂ ಪಡೆದು ಮೋಕ್ಷಮನೆಯ್ದಿದರ ಪ್ರತಿರೂಪಂ ಸುವರ್ಣ ರಜತ ತಾಮ್ರ ಲೋಹ ಶಿಲೆ ಕಾಷ್ಠ ಲೆಪ್ಪ ಚಿತ್ರಾದಿಗಳಿಂ ಸಲಕ್ಷಣಮಾಗಿ ಮಾಡಿಸಿ ಚೈತ್ಯಾಲಯದೊಳು ಯಥಾವಿಧಿಯಿಂ ಪ್ರತಿಷ್ಠೆಯಂ ಮಾಡಿಸಿ ನಿತ್ಯನೈಮಿತ್ತಿಕಂ ಮೊದಲಾಗೆ ವೈಶ್ವದೇವಂ ಮೊದಲಾಗೆ ಪೂಜಿಸುವುದು ಪೂಜೆಯೆಂಬುದು. ತತ್ಫಲಂ

ವೃತ್ತ || ಪಾಪಂ ಲುಂಪತಿ ದುರ್ಗತಿಂ ದಲಯತಿ ವ್ಯಾಪಾದಯತ್ಯಾಪದಂ
ಪುಣ್ಯಂ ಸಂಚಿನುತೇ ಶ್ರಿಯಂ ವಿತನುತೇ ಪುಷ್ಣಾತಿ ನೀರೋಗತಾಮ್
ಸೌಭಾಗ್ಯಂ ವಿತನೋತಿ ಪಲ್ಲವಯತಿ ಪ್ರೀತಿಂ ಪ್ರಸೂತೇ ಯಶಃ
ಸ್ವರ್ಗಂ ಯಚ್ಛತಿ ನಿರ್ವೃತಿಂ ಚ ರಚಯತ್ಯಶ್ಚಾರ್ಹತೋ ನಿರ್ಮಿತಿಃ ||

ಶೀಲಮೆಂಬುದು ತಾನು ಕೊಂಡ ವ್ರತಂಗಳಂ ಪೋಗಲೀಸದೆ ಸರ್ವ ಪ್ರಯತ್ನದಿಂ ರಕ್ಷಿಸುತ್ತೆ ಗುಣವ್ರತಂ ಮೂರು ಶಿಕ್ಷಾವ್ರತಂ ನಾಲ್ಕುಮೀ ಏಳು ಶೀಲಮಕ್ಕುಂ. ಉಪವಾಸಮೆಂಬುದು ಪರ್ವದಿವಸದೊಳನ್ನಪಾನ ಖಾದ್ಯಲೇಹ್ಯಮೆಂಬೀ ಚತುರ್ವಿಧ ಆಹಾರಮಂ ನೂರಿಪ್ಪತ್ತು ಘಳಿಗೆ ವರ್ಜಿಸಿ ಭೋಗೋಪಭೋಗಮಂ ಪಂಚಸೂನ ವರ್ಜಿಸಿ ನಿಯಮದಿಂದಿಪ್ಪುದು.

ಶ್ಲೋಕ || ಖಂಡಣೀ ಪೇಷಣೀ ಚುಲ್ಲೀವುದ ಕುಂಭೀ ಪ್ರಮಾರ್ಜನೀ (?)
ಪಂಚಸೂನಾ ಗೃಹಸ್ಥಸ್ಯ ತೇನ ಮೋಕ್ಷಂ ನ ಗಚ್ಛತಿ ||

ಎಂಬುದರಿಂದೀ ಸೂನಂ ಬಿಡುವುದು. ಈ ಪೇಳ್ದ ನಾಲ್ಕು ತೆರದ ಗೃಹಸ್ಥ ಧರ್ಮಮಂ ಭಟ್ಟಾಕಲಂಕಮುನಿಗಳು ದೇವರಸ ಲೆಪ್ಪರಸರ್ಗೆ ಪೇಳಿ ಈ ಪಾಪಸಾಧನಮಪ್ಪ ಪಣಮಂ ಕಳೆವುದೆನಲಲ್ಲೆಲ್ಲಿಟ್ಟೊಡಂ ಮರಳಿ ಬರುತ್ತಿರಲಮೇಧ್ಯದ ಕುಳಿಯೊಳಿಕ್ಕಿ ಮುಚ್ಚಿ ಬಂದು ಗುರುಗಳಲ್ಲಿ ಪ್ರಾಯಶ್ಚಿತ್ತವಾಂತು ಪಂಚಾಣುವ್ರತಂಗೊಂಡರಾ ಅಂತಪ್ಪರಸಂ ಸಕಲವಾದ ಸರ್ಪಂಗಳೆಲ್ಲಮಂ ತಾನು ಪೇಳಿದಂತೆ ಕೇಳಿಸಿಕೊಂಡು ಗರುಡ ಶಿರೋಮಣಿಯೆನಿಸಿರ್ದೊಂದು ದಿವಸಮಾ ಊರ ಚಾವಡಿಗೆಯ್ದಿಪ್ಪುದಲ್ಲಿಯ ಗೌಂಡರೆಲ್ಲಂ ಹಾಸ್ಯಂ ಮಾಡಲೆಂದೋರ್ವನಂ ಅಟ್ಟದೊಳು ಗೂಢದೊಳಿರಿಸಲವಂ ಪಲ್ಲಿಯಂತೆ ನಚ್ಚರಿಯಲು ಕೆಳಗಿರ್ದವರೆಂದರಾ ಪಲ್ಲಿ ಏನ ಪೇಳ್ವುದದಂ ಪೇಳ್ವುದೆಂದು ಕಾಡುತ್ತಿಪ್ಪುದಾ ದಿಕ್ಕಂ ನೋಡಿ ತನಗೆ ಮರಣಮಂ ಪೇಳ್ವುದೆಂಬುದುಂ ಆಹಾ ಎಂದಟ್ಟಹಾಸದಿ ಕೆಳಗೆ ನೆಗೆಯಲೆಂದು ಮೇಲೇಳ್ವುದು ಮೇಲೆ ಲೋಹದ ಮೋತೆಮೊಳೆ ನಡುನೆತ್ತಿಯನುರ್ಚಿಪೋಗುವುದು ಬಿದ್ದಾಗಳೆ ಸಾಯ್ವುದುಂ ತೆರಕಣಾಂಬಿರಾಯನೊಡನೆ ಬಂದು ತೆರಕಣಾಂಬಿಯೊಳಿಪ್ಪ ಹೆಬ್ಬಾರುವನನಂತಯ್ಯ

ಮಾರ್ಗಮಾಗಿ ಬಂದಿರ್ದು ಕಂಡಾಶ್ಚರ್ಯಂಬಟ್ಟು ತಾನುಂ ಮಂತ್ರವಾದಮಂ ಆತನಲ್ಲೆ ಕಲ್ತು ಪ್ರಸಿದ್ಧಿವಡೆದಂ. ಮತ್ತೊಂದು ದಿನಂ ಪೆರವೂರಿಗೆ ಪೋಗಿ ಬರುವಲ್ಲಿ ಒಂದು ಪೊಲದೊಳುಳುತ್ತಿರ್ದ ಕೃಷೀವಲರು ಏರಬಿಟ್ಟು ಹಾರುವಂ ಬಪ್ಪನವನ ಪರೀಕ್ಷಿಸುವವೆಂದೋರ್ವನ ಮಲಗಿಸಿ ಈಗಲುಳುತ್ತಿರ್ದಂಗತಿಕಷ್ಟಮಾಯ್ತಿದಂ ನೋಡಿಬನ್ನಿಮೆಂದು ಕೃತಕದಿಂ ಪೊರಳ್ವನಂ ತೋರಿದೊಡವನಂ ನೋಡಿ ರೋಗಮೇನುಮಿಲ್ಲದಿರೆ ಕೃತಕಮನರಿದು ತನ್ನಲ್ಲಿಪ್ಪ ದೈವಮಂ ಕರೆದಾತನ ಮೇಲಿರ್ದು ಬಾಯೆಂದುಮವರೊಡನೆಂದನೀತನಂ ಗ್ರಹಂ ಪಿಡಿದಂದಿದಂ ಬಿಡಿಸಲು ಮೂರು ದಿನವಾಗಬೇಕೆಂದು ಪೇಳಿ ಪೋಗಲತಿಹಾಸ್ಯಂಗೆಯ್ದಾತನನೆಬ್ಬಿಸಲೇಳದೆ ಪ್ರಜ್ಞೆಯಿಲ್ಲದೆ ಕಷ್ಟಮಾಗೆ ತಮ್ಮ ತಮ್ಮಡಿಯ ಕರೆದೀತನನೆಬ್ಬಿಸೆನಲಾತಂ ತನ್ನ ಬಲ್ಲ ಯಂತ್ರ ಮಂತ್ರ ತಂತ್ರಾದಿಗಳಿಂದೇಳಿಸಲಾರದೆ ಇದು ಪಾರ್ವನ ಕೃತ್ರಿಮಮಲ್ಲಿಗೆ ಪೋಗಿಯಾತನಂ ಬಗ್ಗಿಸುವೆನೆಂದಂತಪ್ಪರಸನ ಗೃಹಮಂ ಪುಗಲಾತಂ ಸಹಸ್ರ ಪನ್ನಗಂಗಳ ಮಧ್ಯದೊಳೊಂದು ಪಿಶಾಚಿಯಂ ತನ್ನ ದೈವದಿಂ ಮೂಗಂ ಕಟ್ಟಿಕೊಲಿ ಸುತ್ತಿರಲಂಜಿ ತಮ್ಮಡಿ ಪೊಡಮಡೆ ನೀನಾರೆಂಬುದುಂ ನಾಂ ಪೊಲದೊಳ್ ಬಿದ್ದಿಪ್ಪ ಕೃಷೀವಲನ ಸಹಚರನಾತನಂ ಏಳಿಸಲು ಪಣ್ಣು ಕಾಯಿ ಮುಂತಾದ ಸಾಮಾನುಂ ಪೊನ್ನುಂ ಎಷ್ಟು ಬೇಕದಂ ಕೇಳಬಂದೆನೆನೆ ಪತ್ತು ಕಾಯಿ ಇಪ್ಪತ್ತು ಹಣ್ಣು ಒಕ್ಕಳಿಕ್ಕಿ ಹತ್ತು ಪೊನ್ನು ಸಹಿತಂ ತರುವುದೆನಲಾ ಮಾತಂ ಬಂದಾ ಕೃಷೀವಲರ್ಗೆ ಪೇಳೆ ನಂದಿಗೌಡನಿಂತೆಂದಂ

ಪೂರ್ವದೊಳೊಬ್ಬ ಹರಿದಾಸನೆಂಬನತಿಸ್ಥೂಲಕಾಯಂ ನಿತ್ಯಯಾತ್ರೆಯಂ ಮಾಡಿ ಗ್ರಾಸಮಂ ಮಾಡುತ್ತಂ ಪೊಟ್ಟೆಗಟ್ಟದೆಯಿದ್ದೊಂದು ದಿನಂ ಗ್ರಾಮಾಂತರಕ್ಕೆ ಪೋಗಿ ಬೀಯಮಂ ಪಡೆಯದೆ ಬರುತ್ತೊಂದಾಲದಮರದ ಬುಡದೊಳ್ ಉಚ್ಚಸ್ವರಮಪ್ಪಪ ಸ್ವರದೊಳ್ ತಂಬುರಮಂ ಭಾಜಿಸಲಾ ವೃಕ್ಷಾನಿವಾಸಿಯಪ್ಪ ಕುಂಟದೈವಮಾ ಧ್ವನಿಗತಿ ಭಯಂಗೊಂಡೊಡಂಜಿ ಬಂದಾ ದಾಸಂಗೆ ಪೊಡೆವಟ್ಟೇನುಕಾರಣಮೀ ಘೋರಮಪ್ಪ ನಾದಮಂ ಮಾಳ್ಪೆಯೆನೆ ಗ್ರಾಸಕ್ಕಿಲ್ಲಮದರಿಂದೆಂಬುದುಂ ಗ್ರಾಸಮೆಷ್ಟು ಪೇಳಿಮೆನಲಾ ದಂಪತಿಗಳಿರ್ವರ್ಗಮೊಂದು ಖಂಡಿಗ ಬತ್ತಮಾದೊಡೆ ಅರೆ ಮುಕ್ಕಾಲು ಗ್ರಾಸಮಪ್ಪು ದೆನಲಾದೊಡೆ ತಿಂಗಳಿಂಗೊಂದು ಖಂಡಿಗ ಬತ್ತಮಂ ನೀವಿರ್ದಲ್ಲಿಗೆ ತಂದೊಪ್ಪಿಸುವೆ ನಿಮ್ಮ ಗೃಹದೊಳೆ ಇಪ್ಪುದೆಂದು ಕಳುಪಿ ಮನುಷ್ಯರೂಪಂಬಡೆದು ಗದ್ದೆಗಳೊಳ್ ಕಂಬಳಮಂ ಮಾಡಿ ತಿಂಗಳಿಗೊಂದು ಖಂಡಿಗ ಬತ್ತಮಂ ಹರಿದಾಸಂಗೆ ಕೊಡುತ್ತಿಪ್ಪುದುಂ ಕೆಲವು ದಿವಸದಿಂದಾ ಕುಂಟದೈವದ ಭಾವಮೈಂದಂ ಕುರುಡದೈವಂ ನಂಟುತನಕ್ಕಂ ಬರಲು ಕುಂಟಂ ಕೂಲಿಗೆ ಪೋಪುದಂ ಕಂಡು ಅತ್ಯಂತ ಕೋಪದಿಂ ದೈವಮಾಗಿ ಮನುಷ್ಯಂಗಾಳಾಗಿಪ್ಪುದಂ ನಿನ್ನೊಳೆ ಕಂಡೆನಿಂತಪ್ಪ ಹೀನತೆಯಂ ಬಿಡುವುದೆನೆ ಕೊಟ್ಟ ಭಾಷೆಯನೆಂತು ಬಿಡಲ್ಬಹುದೆಂಬುದುಮಂತಾದೊಡಾನುಂ ಪೋಗಿಯಾತನಂ ಭಯಂಗೊಳಿಸಿ ಬಿಡಿಸುವೆನೆಂದತ್ಯಾಗ್ರಹದಿಂದಾತನ ಗೃಹಕ್ಕಸ್ತಮಯಸಮಯದೊಳ್

ಬಂದೊಡಾತಂ ಅಪಸ್ವರದಿ ತಂಬುರಮಂ ಪಿಡಿದಿರಲ್ಕಂಡಂಜಿ ತಲೆವಾಗಿಲೊಳಿರ್ದಾಗಳಾತನ ಗೋವುಗಳ್ ಬರಲವರೊಳ್ ಕುಂಟಿಯುಂ ಕುರುಡಿ ಎರಡು ಪಸುಗಳ್ ಪೋರುತ್ತಿರೆ ದಾಸಂ ಕುಂಟಿಯಂ ಬಿಟ್ಟು ಕುರುಡಿಯಂ ಕಟ್ಟೆಂದುಚ್ಚಸ್ವರದಿಂ ತನ್ನ ಪೆಂಡತಿಗೆ ಪೇಳ್ವುದುಂ ಕುರುಡ ದೈವಂ ಭಯದಿಂ ನಡುಗುತ್ತುಂ ಸಾಷ್ಟಾಂಗಪ್ರಣತನಾದೊಡೆ ನೀನಾರು? ಏನು ನಿಮಿತ್ತಂ ಬಂದೆ? ಎಂಬುದುಂ ಭೀತಿಗೊಂಡೆಂದುದಾನಾಲದಮರದ ಕುಂಟನ ಭಾವಮೈದಂ ಕುರುಡನೆಂಬೆನೆಮ್ಮ ಭಾವಂ ತಿಂಗಳುಗಟ್ಟಲೆ ಒಂದು ಖಂಡಿಗ ಬತ್ತಮಂ ಕೊಡುವುದುಕ್ಕೆ ಒಂದು ಖಂಡಿಗ ಅಕ್ಕಿಯ ಕೊಡುವೆನೊ ಬತ್ತವೆ ಕೊಡಲೊ ಎಂದರಿಕೆ ಮಾಡಲೆನ್ನನಟ್ಟಿದನೆಂಬುದುಮಿಲ್ಲಿಂದಿತ್ತಲ್ ಬತ್ತಂ ಬೇಡಾ ಅಕ್ಕಿಯಂ ತಂದುಕೊಡು ಎಂದು ಪೇಳಲಂತೆಗೆಯ್ವೆನೆಂದು ತಾನುಂ ಪೋಗಿ ಕೂಲಿಯಿಂ ಬತ್ತಮಂ ಪಡೆದಕ್ಕಿಯಂ ಕೊಟ್ಟವೆಂಬ ಕಥೆಗೆ ಸರಿಯಾಗಿ ಅಂತಪ್ಪುರಸನಲ್ಲಿಗೆ ಪೋದುದು ಚೆನ್ನಾಯಿತೆಂದೆಲ್ಲರು ಮಾತಂ ಬೇಡಿದೊಸ್ತುಗಳೆಲ್ಲಮಂ ಕುಡೆ ದೈವಮಂ ಕರೆದುಕೊಂಡನಂತಿರ್ದು ಒಂದಾನೊಂದು ಕಾರಣದಿ ನೀಲಗಿರಿಶಿಖರದೊಳಿರ್ದ ಉರಿಸಿಂಗಿಯೆಂಬ ಮಹಾಸರ್ಪಂ ಜ್ವಾಲಾಮಾಲಿನೀ ಮಹಾದೇವಿಯ ಸೇವೆಯೊಳಿರ್ದು ಪೊರಮಟ್ಟು ಕನಕಗಿರಿಗೆ ಬಂದಿಪ್ಪುದೆಂಬ ವಾರ್ತೆಯಂ ಕೇಳಿಯದಂ ತನ್ನಲ್ಲಿಗೆ ಬರಿಸಲು ಸಾಮಾನ್ಯ ಮಂತ್ರಗಳಿಂದಾಗದೆ ದಿವ್ಯ ಮಂತ್ರಪ್ರಯೋಗಮಂ ಮಾಡಿದೊಡಂ ಬರದೆ ಇರಲೊಂದು ಮಂತ್ರಮಂ ಬರೆದದಂ ಸುಟ್ಟಲೀ ಕೊರಳೊಳ್ ಕಟ್ಟಿ ಮಂತ್ರಿಸಿಬಿಟ್ಟು ತಾನಾ ದಿವಸಮಭ್ಯಂಜನ ಮಾಡಲೆಂದು ತೈಲಮಂ ತನ್ನ ಮಗಳಿಂದಂ ಒತ್ತಿಸಿಕೊಳುತ್ತಿರಲಾ ಸಮಯದೊಳ್ ಅರ್ಧಕ್ರೋಶದೊಳನಿತರೊಳೆ ಭೋರ್ಗರೆಯುತ್ತೆ ಬರ್ಪ ಉರಿಸಿಂಗಿಯಾರ್ಭಟೆಯಂ ಕೇಳ್ದು ತನ್ನ ಸುತೆಗೆಂದಂ ಬೆಟ್ಟದುರಿಸಿಂಗಿ ಬಪ್ಪುದುಂ ಏಳು ಮಂಡಲಮಂ ಬರೆವುದದಂ ಮೀರಲ್ ಸೀಳುಮಂಡಲಮಂ ಬರೆವುದೆಂದು ಪೇಳಲಾಕೆಯಾ ಗಣದೊಳ್ ಬಪ್ಪ ದಾರಿಯೊಳೇಳು ಮಂಡಲಮಂ ಬರೆದು ಬಂದೆಣ್ಣೆಯನೊತ್ತುತ್ತಿಪ್ಪುದುಂ ಮಹೋರಗನತಿರಭಸದೊಳಾ ಮಂಡಲಮಂ ದಾಂಟಲೊಂದೊಂದು ತುಂಡಾಗೆ ಏಳು ಪೋಗೆ ಶಿರೋಭಾಗಮುಳಿದು ಬಂದಾತನುಂಗುಷ್ಟಮಂ ತಿನೆಯಾತನ ಮಗಳ್ ಮಂತ್ರಿಸಿ ವಿಷಮನಿಳಿಯಿಸುವೆನೆಂದುದ್ಯೋಗಿಸಲಪಖ್ಯಾತಿಯಿಂ ಬಾಳ್ವೆನಲ್ಲದರಿಂ ಬೇಡವೆಂದೊಂದು ಶಿಲೆಯಂ ತರಿಸಿ ಮಂತ್ರಪೂತಂ ಮಾಡಿಯಾ ಊರ ಮುಂಗಡೆಯೊಳ್ ನಿಲಿಸಿ ಆರಾದೊಡಂ ಸರ್ಪದಷ್ಟಮಾದರೀ ಶಿಲೆಯಂ ಮುಟ್ಟಲ್ ವಿಷಂ ತೀರ್ಗುಮೆಂದು ನೇರಳೆಯಂತಪ್ಪುರಸಂ ಮೃತವಾದನಾ ಸರ್ಪಂ ಕನಕಗಿರಿಗೆಯ್ದಿತು. ಅವನ ಪೆಸರಿಂ ಪಾರ್ವಂ ಕೆಲದಿವಸಂ ಪ್ರಸಿದ್ಧಿ ವಡೆದಿರ್ದನಾಗಳ್ ಅಸ್ಮತ್ ಪಿತಾಮಹಂ ನಮ್ಮ ವಂಶಜರಂ ಶ್ರೀವತ್ಸಗೋತ್ರದ ಸ್ಯಾದ್ವಾದಿಗಳ್ ಹಸ್ತಿಮಲ್ಲಾರ್ಯಾನ್ವಯರ್ ದೀಪಂಗುಡಿಯಿಂ ಬಂದರಿಕುತಾರದಿಂ ಛತ್ರತ್ರಯಪುರದ ಚಂದ್ರಪ್ರಭಸ್ವಾಮಿ ಸೇವೆಯೊಳಿದ್ದಲ್ಲಿ ಅಭಿವೃದ್ಧಿಯಿಂ ಚಂದ್ರನಾಥಂ ಮೊದಲಾಗೆಣ್ಬರ್ ಕನಕಗಿರಿ ಕೆಲಸೂರಾದಿ ಸ್ಥಳಂಗಳೊಳಿರ್ಪರಾ ಚಂದ್ರನಾಥನ ವಂಶಂ

ಶಾಖಾಕೀರ್ಣದಿಂ ಪ್ರಸರಿಸೆ ಜೀವನಕ್ಕಾಗಿಯವರೊಳೀರ್ವರ್ ಗಟ್ಟದ ತಳಕ್ಕೆ ಪೋಗೆಯಲ್ಲಿ ಭೈರಾದೇವಿ ಸಂತಾನಮಿಲ್ಲದುದರಿಂ ಬೊಕ್ಕಸದೊಳಿರ್ದ ನವರತ್ನಂಗಳಂ ವೆಚ್ಚಿಸಲಾರದೆಲ್ಲಮಂ ಕುಟ್ಟಿಸಿ ಪುಡಿಯಂ ಮಾಡಿಸುತ್ತಿರಲದಂ ಕೊಂಡು ಭಸ್ಮಮಂ ಮಾಡಿ ಮಹಮಹಾ ಮಾತ್ರೆಗಳಂ ಮಾಡಿ ವೈದ್ಯದೊಳತಿಪ್ರಸಿದ್ಧಿವಡೆದು ಉಮ್ಮತ್ತೂರಲ್ಲಿ ನಿಂತನು, ಈರ್ವರು ಮಹಿಸೂರಲ್ಲಿ ನಿಂತರು. ಮತ್ತಂ ಬೆಳುಕೆರೆ ಬೋಗಾದಿ ಹಡದಣ ಕಲಶತವಾಡಿ ಮೊದಲಾದವರೊಳ್ ನಿಂತರು. ಮಹಿಸೂರೊಳು ನಿಂದೆಮ್ಮ ಪಿತಾಮಹಂ ದೇವರಸಂ ಕನಕಗಿರಿಯ ಪದ್ಮಾವತಿಮಹಾದೇವಿ ಎಮಗಿಷ್ಟ ದೇವರಾದುದರಿಂ ದೇವರ ಸೇವೆಯಂ ಮಾಡಿ ಬರುವಲ್ಲಿ ನೇರಳೆಯಂತಪ್ಪರಸನಿಂ ವಿಷಹರಮಂತ್ರ ಬೀಜಾಕ್ಷರ ಸಂಪೂರ್ಣಮಾಗಿಯುಪದೇಶಂಗೊಂಡು ಬಂದರಾ ಮಂತ್ರದಿಂ ಮಂತ್ರಿಸಿದೆನೆಂದು ಶಾಂತಯ್ಯಂ ಪೇಳೆ ರಾಜಂ ಕೇಳ್ದು ಆಶ್ಚರ್ಯಂಬಟ್ಟು ಜೈನಮತಮೊಂದೆ ಆದಿಮತ ಸತ್ಯಮದೆ ಸರ್ವೋತ್ಕೃಷ್ಟಮೆಂದು ಸಭೆಯೊಳ್ ಪ್ರಶಂಸೆಗೆಯ್ದು ಸರ್ವ ಜೀವದಯಾಪರತ್ವಂ ಜೈನಧರ್ಮದೊಳಲ್ಲದುಳಿದ ಧರ್ಮಂಗಳೊಳಿಲ್ಲ.

ವೃತ್ತ || **ಹಸ್ತೌ ದಾನವಿವರ್ಜಿತೌ ಶ್ರುತಿಪುಟೌ ಸಾರಸ್ವತದ್ರೋಹಿಣೌ**
ನೇತ್ರೇ ಸಜ್ಜನವೀಕ್ಷಣೇನ ವಿಮುಖೇ ಪಾದೌ ನ ತೀರ್ಥಂ ಗತೌ
ಅನ್ಯಾಯಾರ್ಜಿತವಿತ್ತಪೂರ್ಣಮುದರಂ ಗರ್ವೇಣ ತುಂಗಂ ಶಿರಃ
ಭ್ರಾತಃ ಕುರ್ಕುರ ಮುಂಚ ಮುಂಚ ಸಹಸಾ ನೀಚಸ್ಯ ನಿಂದ್ಯಂ ವಪುಃ ||

ಅದರಿಂದೆಲ್ಲರು ಕಡಿವ ಕುಡಿವ ಪಾಪಮಂ ತೊರೆದವರಲ್ಲವೆಂದು

ಶ್ಲೋಕ || **ಮಾಂಸಾಶಿಷು ದಯಾ ನಾಸ್ತಿ ನ ಸತ್ಯಂ ಮದ್ಯಪಾಯಿಷು**
ಧರ್ಮಭಾವೋ ನ ಜೀವೇಷು ಮಧೂದುಂಬರ ಸೇವಿಷು ||

ಎಂಬುದರಿಂ ರಾತ್ರಿಭೋಜನಮಂ ಬಿಟ್ಟು ಪಾಲುಂ ನೀರುಂ ಸಾಧಿಸಿ ಪಂಚೋದುಂಬರ ಕಂದಮೂಲಾದಿಗಳಂ ತೊರೆದವರೆ ಮಹಾತ್ಮರದರಿಂ ಗುಣಕ್ಕೆ ಮತ್ಸರಮುಂಟೆ ಎಂದು ಅರಮನೆಯೊಳಿಂದಾರಭ್ಯ ಪಾಲಂ ನೀರಂ ಶೋಧಿಸಿದಲ್ಲದೆ ಮುಟ್ಟಲಾಗದೆಂದು ನಿಯಮಿಸಿ ತಾವುಂ ಇಂಗುಮಂ ಜೇನುಮಂ ವರ್ಜಿಸಿದರು.

ಶ್ಲೋಕ || **ದೃಷ್ಟಿಪೂತಂ ನ್ಯಸೇತ್ಪಾದಂ ವಸ್ತ್ರಪೂತಂ ಪಿಬೇಜ್ಜಲಮ್**
ಸತ್ಯಪೂತಂ ವದೇದ್ವಾಕ್ಯಂ ಮನಃಪೂತಂ ಸಮಾಚರೇತ್ ||

ಈ ಪ್ರಕಾರಂ ಇರುವಲ್ಲಿ ಒಂದುದಿನ ರಾತ್ರಿ ನಿಶಾವಸಾನದೊಳ್ ಒಬ್ಬ ಸ್ತ್ರೀಯಂ ಶ್ವೇತವಸ್ತ್ರಾಭರಣಭೂಷಿತೆ ಮಲ್ಲಿಕಾಮಾಲೆಯಂ ಕೈಯೊಳ್ ಕೊಟ್ಟು ಆನೆ ಶೃಂಗಾರವಾಗಿ ಬಂದಿದೆ ಏಳಿಮೆಂದು ಕೈಯಂ ಪಿಡಿವುದು ಸ್ವಪ್ನಂಗಂಡೆಚ್ಚತ್ತು ಶಾಂತಯ್ಯಂಗೆ ಪೇಳೆ ನಿಮಗೆ ಶೀಘ್ರದಲ್ಲೇ ಮಹದೈಶ್ವರ್ಯಂ ಬಪ್ಪುದೆಂಬುದು ಸಂತೋಷಮಿರಲತ್ತ ಶ್ರೀರಂಗಪಟ್ಟಣದೊಳೆ ರಂಗರಾಯಂಗಸಾತಾವೇದನೀಯ ಕರ್ಮೋದಯದಿಂ ಬೆನ್ನೊಳೊಂದು ಪುಣ್ಣು ಕಂಡು ನಾನಾ ಪ್ರತೀಕಾರದಿ ಶಮನಮಾಗದಿಪ್ಪುದುಂ

ವೃತ್ತ || ವೈದ್ಯೋ ವದತೀ ಕಫ ಮಾರುತ ಪಿತ್ತಜಾಲಂ
ಜ್ಯೋತಿರ್ವಿದೋ ಗ್ರಹಗಣಂ ಪರಿಕಲ್ಪಯಂತಿ
ಭೂತಾ ಪಿಶಾಚಾ ಇತಿ ಮಂತ್ರವಿದೋ ವದಂತಿ
ಪ್ರಾಚೀನಕರ್ಮ ಬಲವತ್ ಮುನಯೋ ವದಂತಿ ||

ಅದಲ್ಲದೆ

ಶ್ಲೋಕ || ವೈದ್ಯ-ಜ್ಯೋತಿಷ-ಮಂತ್ರಾದಿ-ಸಾಮುದ್ರಿಕಮುಪಶ್ರುತಿಃ
ಭಾಗ್ಯಕಾಲೇ ಪ್ರಸನ್ನಾಸ್ಯುರಭಾಗ್ಯೇ ಸತಿ ನಿಷ್ಫಲಃ ||

ಎಂಬುದರಿಂ ಕರ್ಮಜನ್ಯಮಾದುದರಿಂದಾರಿಂದು ಗುಣಮಾಗದೆ ಪೆರ್ಚುತ್ತಂ ಬಪ್ಪುದುಂ ಕೆಲಂಬರೆಂದರ್

ಶ್ಲೋಕ || ಪೂರ್ವಜನ್ಮಕೃತಂ ಪಾಪಂ ವ್ಯಾಧಿರೂಪೇಣ ಬಾಧತೇ
ತಚ್ಛಾಂತಿರೌಷಧೈರ್ಹೋಮೈರ್ಜಪದೇವಸುರಾರ್ಚನೈಃ ||

ಎಂಬುದರಿಂ ಜಪ ಹೋಮಾದಿ ದಾನಮಂ ಮಾಳ್ಪುದೆಂದು ಪಾರ್ವರನೇಕ ದ್ರವ್ಯಮಂ ಕೊಂಡು ಬೇಕಾದ ಭಕ್ಷ್ಯಭೋಜ್ಯ ವಸ್ತ್ರ ತಾಂಬೂಲಾದಿಗಳಿಂ ಸಂತೋಷಂ ಬಡಿಸೆ ಪರಸಿದರ್. ಕೆಲಂಬರ್ ಸಂಸಾರಂ ದುಃಖಮಯಂ ಶರೀರಂ ರೋಗಮಯಂ ಆದೊಡಿದು ದೇವತಾಕಟಾಕ್ಷದಿಂ ಪರಿಹರವಾಗಬೇಕದರಿಂದಿಲ್ಲಿ ರಾಮೇಶ್ವರ ತಳಕಾಡೆಂಬುದು ಮಹಾಕ್ಷೇತ್ರಮಲ್ಲಿಯನೇಕ ದೇವಾಲಯಮಿಪ್ಪುವವಂ ಬಂದಿಸಲೀ ಯಾತನೆ ವಿಮೋಚನಮಪ್ಪುದೆಂದು ಪೇಳಲಂತೆ ಮಾಳ್ಪೆನೆಂದು ರಾಯಂ ಪೋಗಲುದ್ಯುಕ್ತನಾಗಿ ಪಟ್ಟಣದೊಳಾರನಿರಿಸಿ ಪೋಗುವೆವೆಂದು ಯೋಚಿಸುವುದುಂ ಪಲಂಬರ್ ಬಂದು ನಾನು ತಾನೆಂದು ನಿಲ್ವುದುಂ ಬೊಮ್ಮರಸನೆಂಬ ಸಾಮಾಜಿಕನೆಂದಂ

ಶ್ಲೋಕ || ಮೂರ್ಖಂ ವ್ಯಸನಿಗಂ ಲುಬ್ಧಂ ಅಲ್ಪಸತ್ವಂ ಮತಿಭ್ರಮಮ್
ಶಬ್ದಂ ಜಾತ್ಯಾಯ ಕರ್ತಾರು ಆಧಿಪತ್ಯಂ ನ ಯೋಜಯೇತ್ ||

ಎಂಬುದರಿಂ

ವೃತ್ತ || ದಾಕ್ಷಿಣ್ಯಂ ಸ್ವಜನೇ ದಯಾ ಪರಿಜನೇ ಶಾಠ್ಯಂ ಸದಾ ದುರ್ಜನೇ
ಪ್ರೀತಿಸ್ಸಾಧುಜನೇ ನಯೋ ನೃಪಜನೇ ವಿದ್ವಜ್ಜನೇಷ್ವಾರ್ಜಮ್
ಶೌರ್ಯಂ ಶತ್ರುಜನೇ ಕ್ಷಮಾ ಗುರುಜನೇ ನಾರೀಜನೇ ಧೂರ್ತತಾ
ಇತ್ಯೇವಂ ಪುರುಷಃ ಕಲಾಸು ಕುಶಲಃ............ಷ್ವೇವ ಲೋಕಸ್ಥಿತಿಃ ||

ಎಂದು ಸಜ್ಜನನಪ್ಪ ಸತ್ಯವಂತಂ ಮಹಿಸೂರರಾಜಒಡೆಯನಂ ಕರೆಸಿ ಪಟ್ಟಣವನೊಪ್ಪಿಸಿ ಪೋಪವೆಂದು ಸಮಿಪದೊಳ್ ಕಾಯ್ದುಕೊಂಡಿರ್ದರಸುಗಳಂ ಬಿಟ್ಟು ಅವರ ಬರಲೆಂದಟ್ಟುವುದು ಬುದ್ಧಿಯೊಡೆಯರೆಂದರ್.

ಆರ್ಯೆ || ಗುಣಿನೋ ಗುಣಜ್ಞೋ ರಮತೇ | ನಾಗುಣ ಶೀಲಸ್ಯ ಗುಣಿನಿ ಪರಿತೋಷಃ
ಅಳಿರೇವ ವನಾತ್ಕಮಲಂ | ನದರ್ದುರಸ್ತ್ವೇಕವಾಸೋಪಿ ||

ಎನಲು ಪೆರ್ಗಡೆಗಳ್ ಮಹಿಸೂರನೆಯ್ದಿ ರಾಜಒಡೆಯರ್ಗೆರಗಿ ಬಿನ್ನವಿಸೆ ಶಾಂತಯ್ಯನಂ ಬರಿಸಿ ಕೇಳ್ವುದುಂ

ಶ್ಲೋಕ || ಯಸ್ಮಿನ್ ದೇಶೇ ಯದಾ ಕಾಲೇ ಯನ್ಮುಹೂರ್ತೇ ಪಿಯದ್ದಿನೇ
ಹಾನಿರ್ವೃದ್ಧಿರ್ಯಶೋಲಾಭಸ್ತತ್ತತ್ಕಾಲೇ ಭವಿಷ್ಯತಿ ||

ಅದರಿಂದೀ ದಿವಸವೇ ಸುಲಗ್ನ ಮುಹೂರ್ತ ಒಳ್ಳಿತೆಂಬುದುಂ ತನ್ನ ಸ್ವಕೀಯ ಪಿರಿಯ ಮಗನಪ್ಪ ಚಾಮರಾಜನಂ ದೊಡ್ಡಶಾಂತಯ್ಯನಂ ಮಹಿಸೂರಲ್ಲಿರವೇಳ್ದು ಕೆಲಂಬರಂ ಚಿಕ್ಕಶಾಂತಯ್ಯನಂ ಕೂಡಿಕೊಂಡು ಪಟ್ಟಣಮನೆಯ್ದಿ ರಾಯನಂ ಕಾಣ್ಬುದುಂ ವಿನಯದಿ ನೀನೀ ಪಟ್ಟಣದೊಳಿರ್ಪುದಾನು ತೀವ್ರ ರುಜಾಪೀಡಿತನಾದುದರಿಂ ತಲಕಾಡು ಮೊದಲಾದ ತೀರ್ಥಸ್ಥಳಮನೆಯ್ದಿ ಪೂರ್ವಾರ್ಜಿತ ಪುಣ್ಯದಿಂದೀ ರೋಗಂ ನಿರೋಗವಾಗೆ ಬಪ್ಪನ್ನೆವರಂ ನಾಡೆಲ್ಲಮಂ ಪಾಲಿಪುದೆಂದು ತನ್ನ ಶಿಖಿಯ ಸರಮನಿತ್ತು ಕೆಲರೊಡಗೂಡಿ ತಾನುಂ ಪೋಗಿ ದೇವತಾರ್ಚನೆ ಬ್ರಾಹ್ಮಣ ಸಂತರ್ಪಣೆಯೆಂಬ ಬಹುವಿಧದಿಂ ಮಾಡಿಸಿದಾಗ್ಯು ರೋಗಪ್ರಾಬಲ್ಯದಿಂದಲ್ಲೆ ನಾಕಸತಿಯರೊಡಗೂಡೆ

ಶಾ || ದೇವೇಂದ್ರಂ ಧರಣೇಂದ್ರ ದೈತ್ಯನಿವಹಂ ವಿದ್ಯಾಧರಾನೀಕಮುಂ
ಭಾವ ವ್ಯಂತರ ಚಂದ್ರ ಸೂರ್ಯಗ್ರಹಮುಂ ಮರ್ತ್ಯರ್ಕಳುಂ ಬಂಧುವುಂ
ದೇವಾನೀಕವು ಮಂತ್ರ ತಂತ್ರದೊದವುಂ ರುದ್ರರ್ಕಳುಂ ಬುದ್ಧಿಯುಂ
ಕಾಯಲ್ ಬಲ್ಲರೆ ಕಾಲನೆಂಬಸದಟಂ ಕೊಂಡೊಯ್ಯೆ ಮತ್ತಲ್ಲಿಯುಂ ||

ಅಂತಾಗಲಾತನ ಸ್ತ್ರೀಯರ ಸಹಗಮನಮಂ ಮಾಡಿಸಿ ಶಕವರುಷ ೧೫೦೫ ಪಾರ್ಥಿವ ಸಂವತ್ಸರದಲ್ಲಿ ಶ್ರೀರಂಗಪಟ್ಟಣದೊಳು ರಾಜಒಡೆಯರ್ಗೆ ಪಟ್ಟಾಭಿಷೇಕಮಾಗೆ ಉಭಯ ರಾಜ್ಯಮನಾಳುತ್ತಂ ಕೆಲವು ರಾಜ್ಯಮಂ ಸಾಧಿಸುತ್ತ ಸುಖಮಿರಲತ್ತ ಸಿರಿಯ ಪುರದುನ್ಮತ್ತರಾಯಂ ಮಹಿಸೂರಿಂ ಬಪ್ಪ ಸಾವಿರ ಖಂಡುಗ ಹುರುಳಿ ನಿಲಕಡೆಯಾದುದಕ್ಕೆ ಪ್ರಧಾನ ಬೊಮ್ಮರಸಯ್ಯನ ಮೇಲತ್ಯಾಗ್ರಂಹಂಗೆಯ್ದು ಹುರುಳಿಯಂ ತರಲ್ ಬಾರಿಸೆ

ಎಲೆಯುದುರಿದ ಮರದ ನೆಳಲ್
ಪೊಲತಿಯ ಲಾವಣ್ಯಮುರಿವ ಬಿಸಿಲೊಳ್ ಪಯಣಂ
ಕೊಲೆಗಡಿಕ ಭೂಪನೋಲಗ
ಮಲಗಿಲ್ಲದ ಪರಜಿನಂತೆ ಬಾಳ್ವುದು ಕಷ್ಟಂ

ಎಂದು ನೆನೆದು ನಾನುಂ ಪಟ್ಟಣಮನೆಯ್ದಿ ರಾಜನಂ ಬೇಡಿಬಪ್ಪೆನೆಂದು ಮನೆಗೆ ಬಂದು ಕೆಲವು ಪಾಗುಡಂಗೊಂಡು ಪಟ್ಟಣದ ಪ್ರತಿಹಾರರಿಂ ಪಿರಿಯಪುರದ ಪ್ರಧಾನಂ ಬಾಗಿಲ್ಗೆ ಬಂದಿರ್ದನೆಂದು ಪೇಳಿಸೆ ಬರವೇಳೆಂಬುದುಂ ಸಭೆಯನೆಯ್ದಿ ರಾಜನಂ ಕಾಣ್ಬುದುಂ ಕುಳ್ಳಿರೆಂದು

ನಿಮ್ಮ ನಾಡುಗಳ ಪ್ರಜೆಗಳು ಸುಖಮಿಪ್ಪರೆ ಎನೆ ಜನಂಗಳೆಲ್ಲಂ ಕಾಲಕ್ಷೇಪಂ ಮಾಳ್ಪರು. ನಮ್ಮರಸಂಗೆ ಕೆಲವು ಕುದುರೆಗಳಿರ್ದುವೀಗಲುಮವರೊಳೊಂದು ಭಾಗ ಮೃತವಾದವು. ಉಳಿದವೆಲ್ಲವತಿಬಡವಾಗಿರ್ಪವೆನೆ ನಿನ್ನ ರಾಜ್ಯದ ಪಟ್ಟಣಮಂ ಕಟ್ಟಿಕೊಳ್ಳದೆ ಸ್ವಾಭಿಮಾನಿಸಿ ಬಿಟ್ಟಿರ್ದೊಡೆಮ್ಮಲ್ಲಿ ಕಪ್ಪಮಂ ಹುರುಳಿಯಂ ಬೇಡಲು ನಿಮ್ಮರಸಂ ಕಳುಹಿಸಿದನೆ ನಾಳೆ ದಿವಸಂ ನಿನ್ನ ಪಟ್ಟಣಮಂ ತೆಗೆಯಲ್ ಬಪ್ಪರೆಂದು ನಿನ್ನರಸಂಗೆ ಪೇಳು ಪೋಗೆಂದಾಸ್ಫಾಟಿಸಿ ನುಡಿಯಲೆಮ್ಮ ಸ್ವಾಮಿಗಾಂ ಸಹಾಯಮಾಗಲೀಗಲೆ ಆಗುತ್ತಿದೆಯೆಂದು ನುಡಿವುದುಂ ತಿರಿಕೆ ಹಾರುವ ನಿನ್ನ ಸಹಾಯದಿಂದೇನಪ್ಪುದು ಆಳುಮಾತ್ರದೊರ್ವ ಭಟನ ಬಲದಿಂದ ನಿನ್ನ ಪಟ್ಟಣಮಂ ಕೊಳ್ವೆನೆನೆ ಬೊಮ್ಮರಸನೆಂದಂ ನಿಮ್ಮ ಕಟಾಕ್ಷವಿರ್ದೊಡಾವಂ ಬಂದೊಡತಿ ಹುಲಿಯಂ ಕಂಡ ಹರಿಣದಂತೋಡಿಬರುತ್ತುಂ ಭಯಂಗೊಂಡಾನೆ ಘಂಟೆಗೆ ಪುಲ್ಲಂ ಬರಿಸಿ ದೊಡೆನಗೆ ನೀರಾಜಿ ಪಾಗಂ ದಯಂ ಮಾಳ್ಪುದಲ್ಲದೊಡಾನೀ ಜನ್ಮಕ್ಕೆ ಪಾಗನೊಲ್ಲೆನೆಂದು ತನ್ನ ಶಿರದ ಪಾಗಂ ತೆಗೆದು ಮುಂದಿರಿಸಿ ತಾನುಂ ಪಿರಯಪುರಮನೆಯ್ದಲಿತ್ತ ತಿಮ್ಮನಾಯಕನೆಂಬ ಪೆರ್ಗಡೆಯಂ ಚತುರಂಗಂ ಬೆರಸಿ ಕಳುಹಿಸಲದಂ ಕೇಳ್ದು ಬೊಮ್ಮರಸಂ ಪುರದೊಳ್ ಸ್ವಲ್ಪ ಜನರನಿರಿಸಿ ಕಡಮೆ ಜನಮಂ ಹೊತ್ತು ಪುರದೊಳಿದ್ದ ಜನಸಹಿತ ಎಣ್ಣೆಯ ಬಟ್ಟೆ ಮುಂತಾಗಿ ಜೀವಧನವೆರಸಿ ತಾನುಮಡವಿಯಂ ಪೊಕ್ಕು ಗ್ರಾಮಾಂತರದ ಎತ್ತುಗಳು ಎಣ್ಣೆಯ ಅರುವೆ ಮುಂತಾಗಿ ಬರಿಸಿ ಗಿಡದೊಳಿರ್ದೊಡೆ ಮಹಿಸೂರ ದಂಡು ಬಂದು ಬಹಿಃಪುರದೊಳ್ ನಿಂದಾರುಮಂ ಕಾಣದೆ ಆರ್ಯೆದು ಕೋಟೆ ಬಳಿಯೊಳ್ ನಿಲ್ವುದುಂ ಕೊತ್ತಲಂಗಳೊಳ್ ಪತ್ತು ಇಪ್ಪತ್ತು ಗುಂಡಂ ಪಾರಿಸಿದೊಡೆ ಸಮೀಪಮಂ ಸಾರ್ದು ಹರುಷಿತರಾಗಿ ಕೋಟೆ ತಮ್ಮ ವಶವಾಯ್ತೆಂದು ಕೋಟೆಬುಡಮಂ ಪಿಡಿದೊಡಾಗಳಸ್ತಮಯವೇಳೆಯಾಗೆ ನಾಳೆ ಹಲ್ಲಂ ಮಾಳ್ಪಮೆಂದು ಎಲ್ಲರು ಇಳಿದು ಕುದುರೆ ಆನೆಗಳ ಸಾಮಾನುಗಳಂ ತೆಗೆದಿರಿಸಿ ಪಾಕಶುದ್ಧಿಯಂ ಮಾಡಲುದ್ಯುಕ್ತರಾಗಿ ಕೆಲಂಬರ್ ಅನ್ನ ಸಿದ್ಧಮಾಗೆ ಭುಂಜಿಸಲುದ್ಯೋಗಿಸಿದರು. ಪಾಕಮಂ ಮಾಡುವ ವೇಳೆಯರಿದು ಪತ್ತು ಸಾವಿರ ವೃಷಭಂಗಳ ಕೋಡುಗಳ್ಗೆ ಪಂಜುಗಳ ಬೆಳಗೆ ಪೂರ್ವಾಪರಂಗಳಿಂದೆರಡು ಭಾಗಮಾಗಿ ಬಿಳಿ ವಸ್ತ್ರಮಂ ಜನರ್ಗೆ ಪೊದ್ದಿಸಿ ಸಾಲುಸಾಲಾಗಿ ನಿಲಿಸಿ ಬಾಣಪ್ರಯೋಗದಿಂ ತಮ್ಮಟೆ ಕಹಳೆ ಮುಂತಾದ ಭೀಷಣಮಪ್ಪ ಧ್ವನಿಗಳಂ ಮಾಡುತ್ತಾ ಕೋಟೆಯ ಸಮಿಪಕ್ಕೆ ಬಪ್ಪುದುಂ ಮಹಿಸೂರಬಲಮೆಲ್ಲಂ ಭೀತಿಯಿಂದಂಜಿ ಭೋಜ ನಮನುಳಿದು ಆಯುಧಂಗಳಂ ಬಿಟ್ಟು ಬೆತ್ತಲಗುದುರೆಯಂ ಆನೆಯಂ ಪತ್ತಿ ಜಗಳಕ್ಕನು ಗಾಣದೆ ದಕ್ಷಿಣಮುಕಮಾಗಿ ಓಡಿಬಪ್ಪುದಂ ಕಂಡು ಹಿಂದಟ್ಟುವುದುಂ ಪಿಡಿಯಲ್ ಬಪ್ಪರೆಂದಾನೆ ಘಂಟೆಗೆ ಪುಲ್ಲನಿಕ್ಕಿ ಕತ್ತಲೆಯೊಳೆಲ್ಲೂ ನಿಲ್ಲದೆ ಪಟ್ಟಣಕ್ಕೆ ಬಂದು ನಿಲಲತ್ತಂ ಬೊಮ್ಮರಸನೆಂಟು ದಿನದೊಳೆ ಪಾಗುಡಸಹಿತಂ ಬಂದು ರಾಜನಂ ಕಾಣ್ಬುದುಂ ನಿರಾಜಿ ಪಾಗು ಧೋತ್ರ ಪಚ್ಚಡ ಮೊದಲಾಗೆ ಮನ್ನಿಸಿ ನೀನೆಮ್ಮಂ ಕಂಡು ಬಾಳ್ವುದಿನ್ನು ನಿನ್ನ ಮೇಲೆತ್ತಿಬರ್ಪುದಿಲ್ಲೆಂದು ಪೇಳಿ ಕಳುಹಿಸಲಾ ನಂಜುಂಡರಸಿಂಗೆ ಮಲ್ಲೇಶ್ವರನೊಲುಮೆಯಾಗೆ ರಾಜ್ಯಂ ರಾಜನ್ವತಿಯಂ ಪಡೆಯದಾಯ್ತು.

ಶ್ಲೋಕ || ರಾಜ್ಞಿಧರ್ಮಿಣಿ ಧರ್ಮಿಷ್ಠಾಃ ಪಾಪೇ ಪಾಪಾಸ್ಸಮೇ ಸಮಾಃ
ಭವಂತಿ ಸರ್ವಕರ್ಮೇಷು ಯಥಾ ರಾಜಾ ತಥಾ ಪ್ರಜಾಃ ||

ಅಂತರಸಂ ಒಲುಮೆಯಿಂ ಕವಿತ್ವಮನಿಂತು ಮಾಡುತಿರ್ದಂ

ಮುಳ್ಳಿಗೆ ಮೊನೆ ಪುಟ್ಟಿಸಿದೆ ಮಲ್ಲಯ್ಯ
ನಳ್ಳಿಗೆ ಕಾಲ ಪುಟ್ಟಿಸಿದೆ ಮಲ್ಲಯ್ಯ
ಕಲ್ಲಿಗೆ ಕಠಿಣ ಹುಟ್ಟಿಸಿದೆ
ಬಿಲ್ಲಿಗೆ ಬಾಗ ಹುಟ್ಟಿಸಿದೆ
ಎತ್ತಿಗೆ ಎರಡು ಕೊಂಬ ಹುಟ್ಟಿಸಿದೆ
ಕೊತ್ತಿಗೆರಡು ಕಿವಿಯ ಹುಟ್ಟಿಸಿದೆ ಮಲ್ಲಯ್ಯ

ಎಂದಿಂತನೇಕವಾಗಿ ಕವಿತ್ವಮಂ ಮಾಡುತ್ತುಂ ಪ್ರಧಾನ ಬೊಮ್ಮರಸಯ್ಯನಂ ಕರೆದು ನೀನೆನ್ನ ಕವಿತೆಯ ಬರೆಯುತ್ತಾ ಬಪ್ಪುದೆಂದು ನಿಯಮಿಸೆ ತಥಾಸ್ತು ಎಂದು ಅಹರ್ನಿಸಿಯು ಓಲೆ ಕಂಠಮಂ ಪಿಡಿದು ಬರೆಯುತ್ತುಮಿರಲೊಂದು ದಿನಂ ತಾನುಂ ಮಾಡಿಸಿದ ವನಮಂ ನೋಡಲೆಂದು ಪೋಗುತ್ತುಂ ಪೇಳ್ವ ಕವಿತೆಗಳ್ ಬರೆಯುತ್ತುಂ ಪೋಗುತ್ತಿರೆ ಒಂದು ವಾಕ್ಯಮಂ ಪೇಳೆ ಬರೆಯಲ್ ಕಂಠಂ ಜಳುಪಿ ಬೀಳ್ವುದುಂ ಕಂಠಮಂ ಕೊಂಡು ಈಗಲೊರೆದ ಕವಿತೆ ಯಾವುದದ ಕಟ್ಟುಮಾಡಿಸಿ ಬರೆವೆನೆಂಬುದುಂ ಎಲಾ ಎನ್ನಿಷ್ಟದೇವರ ಒಲುಮೆಯ ಕವಿತೆಯಂ ಬರೆಯದೆ ಮರೆದೆಯಾ ನಿನ್ನಂ ಕಡಿವೆನೆಂದು ಕತ್ತಿಯೊರೆಯನುರ್ಚುವುದುಂ ಕಂಡಾಕ್ಷಣವೆ ಕುದುರೆಯಿಂ ಲಂಘಿಸಿ ಹುಂಕಾರಂಗೆಯ್ಯುತ್ತೆ ವಸ್ತ್ರಾಭರಣಂಗಳ್ ದಿಕ್ಕುದಿಕ್ಕಿಗೆ ಚಲ್ಲರಿಯೆಯತಿವೇಗದಿಂ ತಲೆಯಂ ತಿರುಹುತ್ತುಮಾವೇಶವಾಡುವ ಪ್ರಧಾನನಂ ಕಂಡು ನೀನಾರೆನೆ ಎಲಾ ನಾನೇ ಮಲ್ಲಯ್ಯ ಕಾಣೋ ಎಂದತ್ಯಾಗ್ರಹಂಗೆಯ್ಯಲಂಜಿ ಕತ್ತಿಯ ಒರೆಯೊಳಿಕ್ಕಿ ಭಕ್ತಿಯಿಂ ಕೈಯಂ ಜೋಡಿಸಿಕೊಂಡೇನುಕಾರಣ ದಯಮಾಡಿದಿರೆಂಬುದುಂ ಎನ್ನ ನಾಮಸ್ಮರಣೆಯು ಮನಸ್ಸಿನೊಳ್ ಐಕ್ಯವಾಗಿರಬೇಕಲ್ಲದೆನ್ನಂ ಮಾರ್ಗದೊಳುಚ್ಚಿಷ್ಟದೆಡೆ ಮೊದಲಾದವರಲ್ಲಿ ಪೇಳಿಯೆನ್ನ ಗುಣಮೆಲ್ಲಂ ಬೀದಿಯ ಪಂಚಾಂಗಂ ಮಾಡಿದೆ ನಿನಗೆ ಕಿಚ್ಚ ಹಾಕದೆ ಬಿಡುವೆನೇ ಎಂದ ಮಾತಿಂಗಂಜಿ ಅಪ್ಪಣೆ ಪ್ರಕಾರ ನಡೆದುಕೊಳ್ಳುತ್ತಿದ್ದೇನೆ, ಇಂಬುಗೊಳ್ಳೆಂದು ಶೀತೋದಕಮನಿಟ್ಟು ಬೀಸುವುದುಂ ಮಹಾಕಷ್ಟದಿಂದೆಚ್ಚತ್ತು ತನ್ನ ವಸ್ತ್ರಾದಿಗಳಂ ಕೊಂಡು ಕುದುರೆಯನೇರಿಬಪ್ಪಾಗಳರಸಂ ದೇವರು ಬಂದು ತನಗರಿಪಿದುದೆಲ್ಲಂ ಪೇಳೆಯದು ಸಹಜವೆಂದಿತೆಂದಂ

ಶ್ಲೋಕ || ಸೂತಕೋಚ್ಛಿಷ್ಟವಿಣಾತ್ರೇ ನೀಚ ಸಂವೇಷ್ಟಿತ ಸ್ಥಲೇ
ಶಾಸ್ತ್ರಾಣಿ ಪಠತೇ ನಿತ್ಯಂ ಮಂದಬುದ್ಧಿ ಪ್ರಚಕ್ಷ್ಯತೇ ||

ಎಂಬುದರಿಂದನುಚಿತಮೆಂದು ಸಹಜಮೆನೆ ಮತ್ತೊಂದು ದಿವಸಂ ತನ್ನ ಮಗಳ ಸ್ತನಭಾವಂಗಳಂ ನೋಡಿ ಮೋಹವಶಗತನಾಗಿಯಾಸ್ಥಾನದೊಳೆದ್ದು ಬುದ್ಧಿವಂತರಂ

ಬರಿಸಿ ತಾನುಂ ಬಿತ್ತಿ ಬೆಳೆದ ಬೆಳೆಯುಂ ತಾನುಣಬಹುದೆ ಎನಲೆಲ್ಲರುಮುಣಬಹುದೆಂಬುದುಮಷ್ಟರೊಳು ಪ್ರಧಾನಂ ಬರಲಾತನಂ ಕೇಳ್ವುದುಂ ಕಾಲೋಚಿತಮನರಿದು ಆಗುವದಾಗುವುದಾಗದುದಾಗದೆಂದು ನುಡಿಯೆ ತಿಳಿದನೆಂದು ಕೋಪಿಸಿರ್ದು ಮತ್ತೊಂದು ದಿವಸಮಾರೋಗಿಸಿ ಶತಪಥಮಂ ಮಾಳ್ಪಾಗಳ್ ಬೊಮ್ಮರಸಂ ಬಂದು ಕಾಣಲು ಕೈಯಲ್ಲಿ ಕಠಾರಮಂ ಪಿಡಿದಿರ್ದು ಎಲಾ ಪ್ರಧಾನಿ ಈ ಕಠಾರಿಯೊಳ್ ನಿನ್ನಂ ತಿವಿಯಲು ಹೇಗೆನಲಾದೊಡೆ ಬದುಕಿದೆನೆನಲಾಗಳೆ ಪೊಟ್ಟೆಯೊಳಿಕ್ಕಿಯೆಳೆಯಲ್ ಪ್ರಧಾನಿ ಬೊಮ್ಮರಸಂ ಮೃತನಾದಂ.

ವೃತ್ತ || **ಕಾಕೇ ಶೌಚಂ ದ್ಯೂತ ಕಾರೇ ಚ ಸತ್ಯಂ**
ಸರ್ಪೇ ಕ್ಷಾಂತಿ ಸ್ತ್ರೀಷು ಕಾಮೋಪ ಶಾಂತಿಃ
ಕ್ಲೀಬೇ ಧೈರ್ಯಂ ಮದ್ಯಪೇ ತತ್ವಚಿಂತಾ
ರಾಜ್ಞಾಂ..... ಮೈತ್ರೀ ಕೇನ ದೃಷ್ಟಂ ಶ್ರುತಂ ವಾ ||

ಮತ್ತಿತ್ತ ಮಹಿಸೂರೊಳು ಕೆಲಕೆಲವು ರಾಜ್ಯಮಂ ವಶಂ ಮಾಡಿ ವಿವೇಕದಿಂ ರಾಜ್ಯಪಾಲನೆ ಮಾಡುತ್ತಿರ್ದರ್.

ಉಪಜಾತಿ

ವೃತ್ತ || **ಪ್ರಭುರ್ವಿವೇಕೀ ಪ್ರಮದಾ ಸುಶೀಲಃ**
ವಿದ್ವಾನ್ವಿರಾಗೀ ಧನವಾನ್ ಪ್ರದಾತಾ
ತುರಂಗಮಃ ಖಡ್ಗನಿಪಾತಧೀರಃ
ಪಂಚೈವ ರತ್ನಾನಿ ಭವಂತಿ ಲೋಕೇ ||

ಮತ್ತಾರಾದೊಡಂ

ವಿವೇಕ ವೈರಾಗ್ಯ ಸುಪಾದುಕಾಭ್ಯಾಂ
ಪದೇ ಪದೇ ಸಂಚರತೀತಿ ಸಾಧುಃ
ಗ್ರಾಮೇಷು ಖೇಟೇಷು ಚ ಪತ್ತನೇಷು
ಸ್ತ್ರೀಕಂಟಕಾಸ್ಸಂತಿ ವಿಚಿತ್ರ ರೂಪಾಃ ||

ಅದಲ್ಲದೆಯುಂ

ವೃತ್ತ || **ವಿದ್ಯಾರತ್ನಂ ಸರಸ ಕವಿತಾ ಯಾನರತ್ನಂ ತುರಂಗೋ**
ವಾಂಛಾರತ್ನಂ ಪರಮಪದವೀ ಭೋಗರತ್ನಂ ಮೃಗಾಕ್ಷೀ
ಅಂಬೋರತ್ನಂ ಗಗನತಟಿನೀ ಮಾಸರತ್ನಂ ವಸಂತೋ
ಭೂಭೃದ್ರತ್ನಂ ಕನಕಶಿಖರೀ ಜ್ಞಾನರತ್ನಂ ವಿವೇಕಃ ||

ಅಂತು ರಾಜನೀತಿಯಂ ಬಿಡದೆ ವಿವೇಕದಿಂ ಷಣ್ಮತಮಂ ಪರಿಪಾಲನೆಯಂ

ಮಾಡುತ್ತಿಪ್ಪುದುಂ ತೆಂಕಣನಾಡ ಪ್ರಜೆಗಳಂ ಮಠದ ಒಡೆಯರು ಪ್ರೇರಿಸೆ ಸಿದ್ಧಾಯಮಂ ಕುಡದಿಪ್ಪುದುಂ ವಿಚಾರದ ರಾಘವಯ್ಯನಂ ಕಳುಹಿಸೆ ನಮ್ಮ ಒಡೆಯರೆಮ್ಮ ಗುರುಗಳವರ್ಗೆ ಕೊಡುವೆವಲ್ಲದೆ ನಿಮಗೇಕೆ ಎಂಬುದುಂ ಅರಸುಗಳು ಭೂಮಿಯೆಲ್ಲಮಂ ನಿಮಗೆ ಕೊಟ್ಟಿಪ್ಪುದರಿಂದಾ ಭೂಮಿಯೊಳು ಪೈರುಮಾಡಿ ಅನುಭವಿಸುವುದರಿಂ ಸಿದ್ಧಾಯಮಂ ಭೂಮೀಶ್ವರ್ಗೆ ಕೊಟ್ಟು ಬಾಳ್ವುದು ಪ್ರಜೆಗೆ ನ್ಯಾಯಮದರಿಂ ಕೊಡಿವೆಂದು ತೆಗೆದುಕೊಂಬುದುಂ ಕೆಲಂಬರ್ ವಿವೇಕಶೂನ್ಯರ್ ಭೂಮಿಯಂ ನಮಗಿತ್ತು ಆ ಭೂಮಿಯೊಳ್ ತಾನಿರ್ದು ಹಜಾರಮಂ ಮಾಡಿ ಕುಳ್ಳಿಪ್ಪನದನುತ್ತು ಬೆಳಸಂ ಮಾಳ್ಪೆವೆಂದು ಗಡಿಯೊಳಿರ್ದ ಹಜಾರಮನುಳಲುದ್ಯೋಗಿಸಲಾ ವಾರ್ತೆಯಂ ಕೇಳಿ ಇನ್ನೂರು ಕುದುರೆಯನಟ್ಟಿ ಹಿಡಿತರಿಸಿ ೧೦೦ ಪ್ರಜೆಯಂ ತರಿಸಿ ಕಾವಲೊಳಿಟ್ಟು ಅಪರಾಧವಂ ತಾಯೆಂಬುದುಂ ಹಣಮೆಲ್ಲಿಪ್ಪುದೆಂದವರೊಳೊಬ್ಬನೆಂದನೊಂದೊಂದು ಎಮ್ಮೆಯಿಪ್ಪವನಂ ತೆಗೆದುಕೊಳ್ಳಿಮೆನೆ ಅವರ್ಗೆಲ್ಲಂ ವರುಷವೊಂದಕ್ಕೆ ಎಳ್ಳು ಬೆಳೆದವರು ಒಂದು ಕೊಳಗ ಎಮ್ಮೆ ಕರೆವರು ಒಂದು ಕೊಳಗ ಬೆಣ್ಣೆ ಈ ಪ್ರಕಾರ ಬೇಡಿದರೆಂದು ನಿಯಮಿಸಿ ಗ್ರಾಮಾದಿಗ್ರಾಮದಲ್ಲು ಪ್ರಜೆಗಳಿಂದರಮನೆಗೆ ತೆಗೆದು ಕಳುಹಿಸುವಂತೆ ನಿರೂಪಮಂ ಕೊಟ್ಟಾ ಪ್ರಜೆಗಳಂ ಬಿಟ್ಟರಲ್ಲಿಂದಿತ್ತಲು ಬೀಡಿಗೆ ಬೆಣ್ಣೆ ಎಳ್ಳು ಸಹಾ ವರುಷಂ ಪ್ರತಿವರ್ಷಂಗಳಲ್ಲಿ ಎತ್ತಿ ಕಳುಹಿಸುತ್ತಾ ಬಂದರು. ಮತ್ತೊಂದು ದಿವಸ ಡಿಳ್ಳಿಯಿಂದಮೋರ್ವ ವಿದ್ವಾಂಸಂ ಬಂದರಸನಂ ಕಾಣ್ಬುದುಂ ನೀನಾರೇನು ನಿಮಿತ್ತಮೆತ್ತಣಿಂ ಬರವೆಂಬುದುಂ ನಾಂ ಸೂರತಿದೇಶದ ಸಾಮಂತನಾಮಗ್ರಾಮದ ದೇವಶರ್ಮನೆಂಬ ದ್ವಿಜಂಗಂ ಜಯಲಕ್ಷ್ಮಿಯೆಂಬ ಸತಿಗಂ ಪುಟ್ಟಿದೆಂ ಮತಿವರನೆಂಬನೆನ್ನ ಪಿತಂ

ಶ್ಲೋಕ || ಏಕೋಪಿ ಗುಣವಾನ್ ಪುತ್ರೋ ನಿರ್ಗುಣೇನ ಶತೈರಪಿ
ಏಕಚಂದ್ರೋ ಜಗಚ್ಚಕ್ಷು ನಕ್ಷತ್ರಂ ಕಿಂ ಪ್ರಯೋಜನಂ ||

ವೃತ್ತ || ನಾಗೋ ಭಾತಿ ಮದೇನ ಕಂ ಜಲರುಹೈಃ ಪೂರ್ಣೇಂದು ನಾ ಶರ್ವರೀ
ವಾಣೀ ವ್ಯಾಕರಣೇನ ಹಂಸ ಮಿಥುನ್ಯೆ ನರನದ್ಯಸ್ಸಭಾಪಂಡಿತೈಃ
ಶೀಲೇನ ಪ್ರಮದಾ ಜವೇನ ತುರಗೋ ನಿತ್ಯೋತ್ಸವೈರ್ಮಂದಿರಂ
ಸತ್ಪುತ್ರೇಣ ಕುಲಂ ನೃಪೇಣ ವಸುಧಾ ಲೋಕತ್ರಯಂ ಧಾರ್ಮಿಕೈಃ ||

ಶ್ಲೋಕ || ಸಂಸಾರ ಶ್ರಾಂತ ಚಿತ್ತಾನಾಂ ತಿಸ್ರೋ ವಿಶ್ರಾಮಭೂಮಯ
ಅಪತ್ಯಂ ಚ ಕವಿತ್ವಂ ಚ ಸತಾಂ ಸಂಗತಿರೇವ ಚ ||

ಎಂಬ ನೀತಿಯ ನೆನೆದೆಮ್ಮ ಪಿತನೆನಗಕ್ಷರಾಭ್ಯಾಸಂ ಮಾಡಿ ವಿದ್ಯಮಂ ಕಲಿಸದೆ ಎನಗೆ ದ್ವಾದಶಾಬ್ದಮಪ್ಪುದುಂ

ಶ್ಲೋಕ || ಋಣಕರ್ತಾ ಪಿತಾ ಶತ್ರುರ್ಮಾತಾ ಚ ವ್ಯಭಿಚಾರಿಣೀ
ಭಾರ್ಯಾ ರೂಪವತೀ ಶತ್ರುಃ ಪುತ್ರಶ್ಶತ್ರುರಪಂಡಿತಃ

ಎಂದೆನ್ನಂ ಕರೆದಿಂತೆಂದಂ

ವೃತ್ತ || ಅಕ್ಕರವೋದದಂದು ಪರಿಪಟ್ಟಿತು ಪಾರ್ವನ ನೀತಿ ಸೂಳೆಗಂ
ಮಕ್ಕಳು ಪುಟ್ಟಿದಂದು ಪರಿಪಟ್ಟಿತು ಯೌವನದೇಳ್ಗೆಯಾಳ್ದನೊಳ್
ಕರ್ಕಶ ಪುಟ್ಟಿದಂದು ಪರಿಪಟ್ಟಿತು ಜೀವಿತದಾಸೆ ನಾರಿಯೊಳ್
ಮಿಕ್ಕ ಮುನೀಶ್ವರಂಗೆ ಪರಿಪಟ್ಟಿತು ಮೋಕ್ಷದ ಬಟ್ಟೆ ನಿಶ್ಚಯಂ

ಅಕ್ಕರವೆ ತಂದೆ ತಾಯುಂ
ಅಕ್ಕರವೇ ಬಂಧು ಬಳಗ ಸಮುಯದ ಧನಮುಂ
ಅಕ್ಕರವಾತ್ಮಕೆ ಹಿತಕರ
ಮಕ್ಕರ ಮೋಕ್ಷಕ್ಕೆ ಬೀಜ ಚಂದನತಿಲಕಂ

ವಿದ್ಯವೆ ಮಾತಾಪಿತರುಂ
ಬುದ್ಧಿಯೆ ಸೋದರರನು ವಿನಯವಚನವೆ ನಂಟಂ
ಅಧ್ಯಾನವಿಲ್ಲದಿಪ್ಪುದು
ಇದ್ದುದು ತನ್ನೂರು ಸುಕವಿಕರ್ಣಾಭರಣಾ

ವಿಶ್ವಮುಳ್ಳವಗೆ ಬಡತನಂ
ಹೊದ್ದದು ಹೊದ್ದಿದರು ಇರದು ಅನುಗಾಲದೊಳುಂ
ಅಧ್ಯಾನವಿಲ್ಲದಿಪ್ಪುದು
ವಿದ್ಯವೆ ಜನವಶ್ಯ ವಿದ್ಯವೆಲ್ಲರ ಮುಂದುಂ

ಒಡಲೊಳಗಿರ್ದುಂ ವಿದ್ಯಂ
ನಡೆದೊಡೆ ತಾಂ ಭಾರಮಿಲ್ಲ ತಸ್ಕರರೊಯ್ಯರ್
ಪೊಡವಿಪತಿ ಮುನಿಯಲರಿಯನು
ಒಡಹುಟ್ಟಿರೆ ಭಾಗೆಗೊಳ್ಳರು ಮೆಚ್ಚಿಸೆ ಪೆಚ್ಚುಗು (?)

ಶ್ಲೋಕ || ಕೋತಿಭಾರಸ್ಸಮರ್ಥಾನಾಂ ಕಿಂ ದೂರ ವ್ಯವಸಾಯಿನಾಮ್
ಕೋವಿದೇಶಸ್ಸುವಿದ್ಯಾನಾಂ ಕಃ ಪರಃ ಪ್ರಿಯವಾದಿನಾಮ್ ||

ವೃತ್ತ || ವಿದ್ಯಾನಾಮ ನರಸ್ಯರೂಪಮಧಿಕಂ ಪ್ರಚ್ಛನ್ನ ಗುಪ್ತಂ ಧನಂ
ವಿದ್ಯಾ ಭೋಗ ಕರೀ ಯಶಃ ಸುಖಕರೀ ವಿದ್ಯಾ ಗುರೂಣಾಂ ಗುರುಃ
ವಿದ್ಯಾ ಬಂಧುಜನೇ ವಿದೇಶಗಮನೇ ವಿದ್ಯಾಪರಂ ದೈವತಾ
ವಿದ್ಯಾರಾಜಸುಪೂಜ್ಯತೇ ನಹಿ ಧನಂ ವಿದ್ಯಾವಿಹೀನಃ ಪಶುಃ ||

"ವಾಗ್ದೇವೀ ವದನಾಂಬುಜೇ ವಸತಿ ಚೇತ್ಕೋ ನಾಮ ದೀನೋ ಜನಃ"-

ಎಂಬುದರಿಂ ನೀಂ ಪನ್ನೆರಡು ವರುಷಮಾಗಿಯು ವಿದ್ಯವಿಲ್ಲದೆನಗಮಳಲಂ ತಂದೆಯೆಂಬುದುಂ ಚಿಂತಾಕ್ರಾಂತನಾಗಿ

ವೃತ್ತ || ಆಚಾರ್ಯ ಪುಸ್ತಕ ಸಹಾಯ ನಿವಾಸ ಚರ್ಚಾ
ಬಾಹ್ಯಸ್ಥಿತಾಃ ಪಠನ ಪಂಚ ಗುಣಾ ಭವಂತಿ
ಆರೋಗ್ಯ ಬುದ್ಧಿ ವಿನಯೋದ್ಯಮ ಶಾಸ್ತ್ರರಾಗಾ
ಸ್ತೇಭ್ಯಂತರಾಃ ಪಠನ ಪಂಚಗುಣಾ ಭವಂತಿ ||

ಶ್ಲೋಕ || ಅಕ್ಷರಂ ಗುರುಹಸ್ತೇನ ಮಾತೃಹಸ್ತೇನ ಭೋಜನಮ್
ದಾನಂ ಪೂಜಾ ಸ್ವಹಸ್ತೇನ ಪರಹಸ್ತೇನ ಮರ್ದನಮ್ ||

ಅಲ್ಲದೆ

ವೃತ್ತ || ಉದರನಿಮಿತ್ತಂ ಬಹುಕೃತ ವೇಷಃ
ಕದನನಿಮಿತ್ತಂ ನಿಷ್ಠುರ ಭಾಷಾ |
ಜ್ಞಾನನಿಮಿತ್ತಂ ಗುರು[ಕುಲವಾಸಃ]
ಮರಣನಿಮಿತ್ತಂ ಗುಣ ವಿಪರೀತಮ್ ||

ಎಂಬುದರಿಂದೆಮ್ಮ ಗುರುಗಳು ಸತ್ಯಮೂರ್ತಿಗಳ ಪಾರ್ಶ್ವದೊಳೆ ಅಕ್ಷರ ಲೇಖ್ಯ ಗಣಿತ ಗಾಂಧರ್ವ ವೇದ ವೇದಾಂಗ ಕಲ್ಪ ನ್ಯಾಯ ಜ್ಯೋತಿರ್ಜ್ಞಾನ ಛಂದೋಲಂಕಾರಂ ಕಾವ್ಯ ನಾಟಕ ತರ್ಕಾಗಮ ವ್ಯಾಕರಣ ನಿಘಂಟು ಭರತ ಸುರಸಂಗೀತ ವೈದ್ಯ ಮಂತ್ರ ವಾದಂ ಮೊದಲಾದ ಲೌಕಿಕ ಪಾರಮಾರ್ಥಿಕ ಶಾಸ್ತ್ರಂಗಳನುಪದೇಶಂಗೊಂಡು

ಆರ್ಯೆ || ಯಃ ಪಠತೀ ಲಿಖಿತೀ ಪರಿಪೃಚ್ಛತಿ ಪಂಡಿತಾ[ಮು]ಪಾಶ್ರಯತಿ
ತಸ್ಯ ದಿವಾಕರ ಕಿರಣೈರ್ನಲಿನೀವ ವಿಸರ್ಪತೇ ಬುದ್ಧಿಃ ||

ಎಂದಭ್ಯಾಸಿಸುತ್ತೆ

ಶ್ಲೋಕ || ಉದ್ಯೋಗಸಾರಿಣೇ ಲಕ್ಷ್ಮೀ ಕೀರ್ತಿಸ್ತ್ಯಾಗಾನುಸಾರಿಣೇ
ಅಭ್ಯಾಸಸಾರಿಣೇ ವಿದ್ಯಾ ಬುದ್ಧಿಃ ಕರ್ಮಾನುಸಾರಿಣೇ ||

ಎಂದು ನೀತಿಶಾಸ್ತ್ರಾದ್ಯಶೇಷ ಶಾಸ್ತ್ರಂಗಳಭ್ಯಾಸಮಂ ಮಾಡಿ

ವೃತ್ತ || ಶಾಸ್ತ್ರಂ ಬಂದೊಡೆ ಶಾಂತಿ ಸೈರಣೆ ನಿಗರ್ವಂ ನೀತಿ ಮೆಲ್ವಾತು ಮು
ಕ್ತಿಸ್ತ್ರೀ ಚಿಂತೆ ನಿಜಾತ್ಮಚಿಂತೆ ನಿಜವೇಳ್ಕಂತಲ್ಲದಾ ಶಾಸ್ತ್ರದಿಂ
ದೂಸ್ತ್ರೀ ಚಿಂತೆ ವಿವಾದ ದುರ್ಮನದೊಳುಂ ಗರ್ವಂ ಮನಂಗೊಂಡೊಡಾ
ಶಾಸ್ತ್ರಂ ಶಸ್ತ್ರಮು ಶಾಸ್ತ್ರಿಶಸ್ತ್ರಿಕನಮುಂ ತನ್ನಂ ಸಮಂಗೊಲ್ವನುಂ ||

ಎಂಬುದರಿಂ ಸಜ್ಜನತ್ವಮಂ ಸಾಧಿಸಿ

ಇಂದ್ರವಜ್ರಂ|| ದೇಶಾಟನಂ ಪಂಡಿತ ಮಿತ್ರತಾ ಚ
ವಾರಾಂಗನಾ ರಾಜಸಭಾ ಪ್ರವೇಶಃ
ಅನೇಕ ಶಾಸ್ತ್ರಾರ್ಥವಿಲೋಕನಂ ಚ
ಚಾತುರ್ಯ ಮೂಲಾನಿ ಭವಂತಿ ಪಂಚ ||

ಎಂದು ದೇಶಾಟನ ಮಾಡಲ್ ಪೋಗಿಯಂಗದೇಶಮಂ ಪುಗೆಯಲ್ಲಿ ಬಲಾಹಕ ಮೆಂಬೂರೊಳೊರ್ವ ವಣಿಕ್ಪುತ್ರಂ ದ್ಯೂತಾರಂಭಮಂ ಮಾಡುತ್ತಂ ಕ್ರೋಧದಿಂ ಕಲಹಮಂ ಚರ್ಚಿಸಿ ಸ್ವಗೃಹದಿಂ ತನ್ನ ತಂದೆ ಮೃತವಾದುದಂ ಪೇಳ್ದೊಡಂ ದ್ಯೂತಾಕಾಂಕ್ಷೆಯೊಳಾತನ ಕಳೇವರಮೀ ಮಾರ್ಗದೊಳೆ ಬಪ್ಪುದು ನೋಳ್ಪೆನೆಂದು ಬಂದಲ್ಲಿ ಸಂಸ್ಕರಿಸಿಯೆಂದು ತಲೆಯನೆತ್ತದಿರೆ ನೋಡಿಯಾತಂಗೆ ನೀತಿಯಂ ಪೇಳ್ದೊಡವಂ ಕೇಳದಿರ್ದೊಡೆ

ಶ್ಲೋಕ || ಉದ್ಯೋಗಃ ಕಲಹಃ ಕಂಡೂರ್ದ್ಯೂತಂ ಮದ್ಯಂ ಪರಸ್ತ್ರೀಯಃ
ಆಹಾರೋ ಮೈಥುನಂ ನಿದ್ರಾ ಸೇವ್ಯ ಮಾನೇಸ ವರ್ಧತೇ ||
ವಿಷಾದಃ ಕಲಹೋ ಯುದ್ಧಃ ಕ್ರೋಧೋ ಮಾನ ಶ್ರಮೋ ಭ್ರಮಃ
ಪೈಶೂನ್ಯಂ ಮತ್ಸರಶ್ಯೋಕಃ ಸರ್ವೇ ದ್ಯೂತಸ್ಯ ಬಾಂಧವಾಃ ||

ಎಂಬುದರಿಂದೀ ದ್ಯೂತವ್ಯಸನಮನುಳಿವುದೆಂಬುದುಂ ಮತ್ತಮಾ ಚಿಂತೆಯಂ ಬಿಡುವಂದಮಾವುದೆನೆ

ಶ್ಲೋಕ || ಉತ್ತಮಂ ಸ್ವಾಂತ ಚಿಂತಾ ಚ ಮಧ್ಯಮಂ ಚಾರ್ಥ ಚಿಂತನಮ್
ಅಧಮಂ ಕಾಮಚಿಂತಾ ಚ ಪರಚಿಂತಾಧಮಾಧಮಾ ||

ಅದಲ್ಲದೆಯುಂ

ಶ್ಲೋಕ || ಶುಭಚಿಂತಾ ಮನೋಭೂಷಾ ದಾತೃತ್ವಂ ಭೂಷಣಂ ಶ್ರೀಯಃ
ವಿದ್ಯಾಯಾ ಭೂಷಣಂ ಶಾಂತಾ ಪ್ರಿಯವಾಕ್ಸರ್ವ ಭೂಷಣಮ್ ||
ಸ್ವಗೃಹೇ ಪೂಜ್ಯತೇ ಮೂರ್ಖಃ ಸ್ವಗ್ರಾಮೇ ಪೂಜ್ಯತೇ ಪ್ರಭುಃ
ಸ್ವದೇಶೇ ಪೂಜ್ಯತೇ ರಾಜಾ ವಿದ್ವಾನ್ ಸರ್ವತ್ರ ಪೂಜ್ಯತೇ ||
ಪ್ರಸ್ತಾವಸದೃಶಂ ವಾಕ್ಯಂ ಸ್ವಭಾವಸದೃಶಂ ಪ್ರಿಯಮ್
ಸ್ವಾತ್ಮಶಕ್ತಿ ಸಮಂತೋಪಂ ಯೋ ಜಾನಾತಿ ಸ ಪಂಡಿತಃ ||

ಎಂದಾ ವೈಶ್ಯಸುತಂಗೆ ವಿದ್ಯಾಭ್ಯಾಸಂ ಮಾಡಿ ವ್ಯಸನಮಂ ಬಿಡಿಸಿ

ವೃತ್ತ || ವಶ್ಯಾ ಸುತಾ ವೃತ್ತಕರೀ ಚ ವಿದ್ಯಾ | ನಿರೋಗತಾ ಸಜ್ಜನ ಸಂಗತಿಶ್ಚ
ಇಷ್ಟಾ ಚ ಭಾರ್ಯಾ ವಶವರ್ತಿನೀ ಚ | ದುಃಖಸ್ಯ ಮೂಲೋದ್ಧರಣಾನಿ ಪಂಚ||

ಶ್ಲೋಕ || ಅನಭ್ಯಾಸೇನ ಶಾಸ್ತ್ರಾಣಾಂ ಅಸಂಸರ್ಗೇಣ ಧೀಮತಾಮ್
ಅವಿಗ್ರಹೇಣ ಭಿಕ್ಷೂಣಾಂ ವ್ಯಸನಂ ಜಾಯತೇ ನೃಣಾಮ್ ||

ಎಂದು ಅಭ್ಯಾಸವಿದ್ಯನಂ ಮಾಡಿ ಸ್ವಕೀಯವೃತ್ತಿಯೊಳ್ ನಿಲಿಸಿ

ಶ್ಲೋಕ || ಅಫಲಾನಿ ದುರಂತಾನಿ ಸಮವ್ಯಯ ಫಲಾನಿ ಚ
ಅಶಕ್ಯಾನಿ ಚ ಕಾರ್ಯಾಣಿ ನಾರಭೇತ ವಿಚಕ್ಷಣಃ ||
ಯತ್ರ ವಿದ್ಯಾಗಮೋ ನಾಸ್ತಿ ಯತ್ರ ನಾಸ್ತಿ ಧನಾಗಮಃ
ಯತ್ರ ಜಾತ್ಮ ಸುಖಂ ನಾಸ್ತಿ ನ ತತ್ರ ದಿವಸಂ ವಸೇತ್ ||

ಎಂದವನಂ ನಿಲಿಸಿ ಬಪ್ಪಲ್ಲಿ

ವೃತ್ತ || ಪ್ರಥಮವಯಸಿ ಪೀತಂ ತೋಯಮಲ್ಪಂ ಸ್ಮರಂತಃ
ಶಿರಶಿ ನಿಹಿತ ಭಾರಾ ನಾಳಿಕೇರಾ ನರಾಣಾಮ್
ಉದಕಮಮೃತಕಲ್ಪಂ ದದ್ಯುರಾಜೀವಿತಾಂತಂ
ನ ಹಿ ಕೃತಮುಪಕಾರಂ ಸಾಧವೋ ವಿಸ್ಮರಂತಿ ||

ಎಂಬುದರಿಂ ನೀಂ ಮಾಡಿದುಪಕಾರಮಂ ಮರೆವನಲ್ಲೆನಗೆ ಜನ್ಮಾಂತರದ ಮಿತ್ರನೆಂದು

ಶ್ಲೋಕ || ದದಾತಿ ಪ್ರತಿಗ್ರಹ್ಣಾತಿ ಗುಹ್ಯಮಾಖ್ಯಾತಿ ಪೃಚ್ಛತಿ
ಭುಙ್ಕ್ತೇ ಭೋಜಯತೇ ಚೈವ ಷಡ್ವಿಧಂ ಮಿತ್ರಲಕ್ಷಣಮ್ ||

ಎಂದೆನಗೆ ನೂರು ಗದ್ಯಾಣಮಂ ಸಮರ್ಪಿಸಿ ಸಂತುಷ್ಟನಾಗಿಮೆಂದು ಪ್ರಣಾಮಂಗೆಯ್ಯೆ

ಶ್ಲೋಕ || ಅಸಂತುಷ್ಟೋ ದ್ವಿಜೋ ನಷ್ಟಃ ಸಂತುಷ್ಟಾಶ್ಚೈವ ಪಾರ್ಥಿವಾಃ
ಸಲಜ್ಜಾ ಗಣಿಕಾ ನಷ್ಟಾ ನಿರ್ಲಜ್ಜಾಶ್ಚ ಕುಲಾಂಗನಾ ||

ಎಂದಾಂ ಬರ್ಪಿನಂ

ಆರ್ಯಗೀತಾ||ಯಾವ ದ್ವಿತ್ತೋಪಾರ್ಜನ | ಸಕ್ತಸ್ತಾವನ್ನಿಜಪರಿವಾರೋ ರಕ್ತಃ
ಪಶ್ಚಾಜ್ಜೀವತಿ ಜರ್ಝರ | ದೇಹೇ ವಾರ್ತಾಂ ಕೋಽಪಿ ನ ಪೃಚ್ಛತಿ ಗೇಹೇ ||

ಎಂದಾ ವರ್ತಕಕುವಾರಂ ಜಲಸ್ಥಲಯಾತ್ರೆಯಂ ಪೋಗಲಾತಂ ತೆಲುಂಗಾದಿ ದೇಶಮನೆಯ್ದಿ ಒಂದೂರ ಮುಂಗಡೆ ಬಪ್ಪ ಕೋವಿದನಂ ಕಂಡು

ವೃತ್ತ || ಕೋಽಪ್ಯಾಸೀನ್ನಗರೇ ಮಹಾನ್ವಸತಿ ಕಿಂ ತಾಳದ್ರುಮಾಣಾಂ ಗಣ್ಯೈಃ
ಕೋ ದಾ... ತಾ ರಜಕೋ ದದಾತಿ ವಸನಂ ಪ್ರಾತುರ್ಗೃಹೀತ್ವಾ ನಿಶಿ
ಕೋ ವಿದ್ವಾನ್ ಪರದಾರವಂಚನ... ರತಾಸ್ಸರ್ವೇಽಪಿ ವಿದ್ವಜ್ಜನಾಃ
ತಸ್ಮಾಜ್ಜೀವಸಿ ಹೇ ಸಖೇ ವಿಷಕ್ರಿಮಿನ್ಯಾಯೇನ ಜೀವಾಮ್ಯಹಮ್ ||

ಆರ್ಯೆ || ಕಃ ಪಥ್ಯತರೋ ಧರ್ಮಃ | ಕಶ್ಶುಚಿರಿಹ ಯಸ್ಯ ಮಾನಸಂ ಶುದ್ಧಮ್
ಕಃ ಪಂಡಿತೋ ವಿವೇಕೀ | ಕಿಂ ವಿಷಮವಧೀರಣಾ ಗುರುಷು ||
ಕೋ ಧರ್ಮೋ ಭೂತದಯಾ | ಕಿಂ ಸೌಖ್ಯಮರೋಗತಾ ಜಗಜ್ಜಂ ತೋಃ
ಕಃ ಸ್ನೇಹಃ ಸದ್ಭಾವಃ | ಕಿಂ ಪಾಂಡಿತ್ಯಂ ಪರಿಚ್ಛೇದಃ ||

ಇಂತು ಪ್ರಸಂಗಿಸುತ್ತೆ ಕರ್ಣಾಟಮಂ ಪುಗುವಾಗಲೊರ್ವರ ಮಾರ್ಗದೊಳೆ ಬರುತ್ತುಂ ದಾರುವಂ ಪೊತ್ತು ಬಪ್ಪುದುಮಿದು ಏತಕೆಯೆನೆಯದಕ್ಕೆಯೆನಲು ಈ ನಾಡೊಳು ಮಳೆ ಬೆಳೆ ಚೆನ್ನಾಗಿದೆಯೊ ? ಎಂಬುದುಂ ಮೂರು ತಿಂಗಳ್ಗೊಮ್ಮೆ ಮಳೆಯದರಿಂದೀ ಪ್ರವಾಹಂ ದಿನಚರಿ ನೀರು ಈ ಓಣಿಯೊಳು ಆಳ ಮೇಲೆ ಬಪ್ಪುದು ಕೊಳಂಗಳು ತುಂಬಿ ಹರಿದವು. ಎಲ್ಲರೂ ಜೋಳಮಂ ಬಿತ್ತಿ ಅವರೆ ಕುಯಿದು ಸೆಜ್ಜೆ ಕಟ್ಟಿದರು. ಇಲ್ಲಿ ಪ್ರಭು ಒಂದು ಸಂಪಿಗೆವೃಕ್ಷಮಂ ಹಾಕಿಸಲದು ಪೂವಾಗೆ ಮಲ್ಲಿಗೆ ಆಗುತ್ತಿದೆ. ಇಲ್ಲಿಗು ರಾಮೇಶ್ವರಕ್ಕು ಮುನ್ನೂರು ಗಾವುದ ಮಾರಿಗೆ ಒಂದೊಂದು ಸೊಡರಂ ಪೊತ್ತಿಸುತ್ತಿದ್ದಾರೆ. ಈ ಕೆರೆಯೊಳೊರ್ವಂ ಆನೆ ಕುದುರೆ ಮುಂತಾದವಂ ಬಡಿದು ತಾನೆ ಮಡಿಯುತ್ತಿದಾನೆ. ಈ ಪಟ್ಟಣಕ್ಕೆ ಒಂದು ಕೋಟಿ ಪರರು ಬಂದು ಮುತ್ತು ಎಂದು ಹೇಳಿ ಒಂದು ಹತ್ತು ಎಂಬುದು. ಎತ್ತಂ ಹೇರೆಂಬರು ಹೇರೆತ್ತೆಂಬರು. ಆಟದವರ್ ಬಪ್ಪರು. ಗಾಣಗ ಆಡಿಸಬೇಕೆಂದು ದಿನಚರಿ ಆಡಿಸುವಂ ಕುರುಬ ನಾಡ ಬಿಡುವುದಿಲ್ಲವೆಂಬನು. ಇಲ್ಲಿ ಗೋಪಾಲಜಾತ್ರೆಯೊಳು ತೇರು ಹರಿಯದು, ದೀವಟಿಗೆ ಉರಿಯದು, ಪರಿಸೆ ನೆರೆಯದು, ಹಣ ದೊರೆಯದು, ಮಿಳೀ ಬಾರದು, ಬಿಲ್ಲು ಬಾಗದು, ಒಬ್ಬ ಸಿಪಾಯಿ ಮೇಲೆ ಬಾಣ ಬಿದ್ದು ಸಾಯ್ವುದುಮವನ ಕತ್ತಿಗೆ ನೇಣನಿಕ್ಕಿ ನೇರಿಬಿಟ್ಟರು. ಈ ಪಟ್ಟಣದ ಬಾಗಿಲೊಳೆಲ್ಲರು ಅಡಿಗೆ ಪೋಗುವರು ಎಂಬುದಂ ಕೇಳಿ ಅಗಳನೆತ್ತಿಕೊಂಡು ಪೋಗಿ ಪೊರಗೆ ತೊರೆಯೊಳುಂಡು ಸಂತೆಯೊಳು ಗವರಿಗ ಸಾಮಾನುಗಳು ಹೆಣದ ಮೇಲೆ ಬಂದು ಮಾರುತ್ತಿಪ್ಪುದುಮವಂ ಕೊಂಡು ಕಣ್ಣಿಗೆ ಕಟ್ಟಿಕೊಂಡು ಬಂದರು ಎಂದು ಪೇಳ್ವುದುಮಿದಾಶ್ಚರ್ಯಮಲ್ಲ ನಿನ್ನ ವೃತ್ತಿ ಯಾವುದೆನೆ

ಆನೀವೂರ ಮುದ್ದಗೌಂಡನ ಮಗನು. ಕೇತಗೌಡನೆನ್ನ ತಂಗಿ ಕೇತಿಯೆಂಬಳೆನಗೆ ಬಿರಿಗಿಯೆಂಬಳು ಜೊತೆಯಾಗಲೆಮ್ಮಪ್ಪಂ ಕಾಲಮಂ ಕಾಣಲೊಡಂ ಗೊಂಗನಾಡ ಸಿಂಗ ಗವುಡಂ ವೃದ್ಧಂ ಬಂದೆನ್ನ ತಂಗಿಯಂ ತನ್ನ ಮಗಂಗೆ ಕೊಡಿಸಲೆಂದೆಮ್ಮವ್ವೆಯೊಳು ಪ್ರಸಂಗಿಸೆ ನಿನ್ನ ಮಗಂ ರೂಪುಳ್ಳನಾಗಿ ಅಷ್ಟಾಂಗಪುಷ್ಪನೆ ? ಎನಲೊಂದು ಕಣ್ಣು ಘೋರದಿ ಬಿಳಿದಾಗಿ ಹಾಗಪಾಲು ದೃಷ್ಟಿಯಿಪ್ಪುದೆನಲ್ ಮತ್ತೊಂದು ಕಣ್ಣೊ ಎಂದು ಕೇಳಲದಿಲ್ಲ, ಈ ಕಣ್ಣೇ ಸ್ವಲ್ಪಮಪ್ಪುದೆನೆ ಮನೆಯೊಳಾರಿಪ್ಪರೆಂಬುದುಂ ನಮ್ಮಕ್ಕಂ ಪುರುಷವಿಯೋಗದಿಂ ನನ್ನ ಮನೆಯೊಳಿಪ್ಪಳಾಕೆಯೇ ನನ್ನ ಮಗನಂ ಸಲಹುತ್ತಿಪ್ಪಳಾಕೆಯೆ ನಿನ್ನ ಮಗಳಂ ಸಾಕಿಮಾಡುವಳು ಹಣಕಾಸು ಒಡವೆ ವಸ್ತುಗಳುಂಟೇ ಎಂಬುದುಂ ಮೌನದಿಂ ನೆಲಮಂ ಮೂರು ವೇಳೆ ಮುಟ್ಟಿದಂ. ಧ್ಯಾಮುಂಟೇ ಎಂಬುದುಂ ಅದೇತಕ್ಕೆ ಕೇಳುವುದು ಮನೆಯೊಳು ಮೂಡೆ ಮೂಲೆಯೊಳೆಲ್ಲಾ ರಾಶಿಯಿದೆಯೆನೆ ಕರವೇನೆಂಬುದುಂ ಹಟ್ಟಿಯಲ್ಲಿ ನಾಕೆಮ್ಮೆ ಕರೆವಾರಂಡೆ ಎಂಬುದೆಮ್ಮಬ್ಬೆ ಮರುಳಾಗಿ ಪೆಣ್ಣಂ ಕೊಡಲಾತ ಕಂಗಳನಪ್ಪುದರಿಂದನ್ನಂಬಡೆಯದೆನ್ನ ಮನೆಯೊಳೆ ಇಪ್ಪನೆನ್ನ ಮಹಾಲಕ್ಷ್ಮಿ ಸ್ವಸ್ವವಿನ ಕಟಾಕ್ಷದಿಂ ಕಿರಿದು ಐಶ್ವರ್ಯಮಾಗೆ ಕೃಷಿತೋ ನಾಸ್ತಿ ದುರ್ಭಿಕ್ಷಂ ಎಂದು ಆರಂಭಂ ಮಾಡಲು ಪದಿನಾರೆತ್ತಂ ತಂದು ಮಾಳಮಂ ಮಾಡಿ ನಾಕು ನೇಗಿಲಂ ಸಂಪಾದಿಸಿ ಎತ್ತಿಲ್ಲದೊಂದಿಪ್ಪತ್ತಂ ತಂದವಕ್ಕೆ ಜೊತೆಯಂ ಮಾಳ್ಪಾಗಲೊಂದು

ಸತ್ತೆಮ್ಮೆಯಕೋಣಂ ಗದ್ದೆಯನುಳುತ್ತಿಪ್ಪುದುಮದಂ ಕಂಡು ಕೊಳ್ಳಲೆಂದು ಮನೆಯೊಳಿರ್ದ ಮುನ್ನೂರು ದುಡ್ಡಿನೊಳಗೆ ಸಾನೂರು ದುಡ್ಡುಂ ಮಡಗಿ ಕಡಮೆ ದುಡ್ಡಿನೊಳು ನೂರು ದುಡ್ಡಿಗೆ ಸತ್ತೆಮ್ಮೆಕೋಣನಂ ಕೊಂಡು ಇನ್ನೂರು ದುಡ್ಡುಂ ಕಟ್ಟಿಕೊಂಡು ಪೋಪಲ್ಲಿ ಕಳ್ಳರು ಸುಲಿಕೊಂಡರು. ಕೋಣನ್ನೆತ್ತನ್ನು ಕಣ್ಣಿಗೆ ಎಣ್ಣೆಯಿಕ್ಕಿ ಕಟ್ಟಿ ಉತ್ತು ಹುರಿದ ರಾಗಿಯಂ ಬಿತ್ತಿದೊಡೆ ಅದು ಹಾರಕಂ ಬೆಳೆಯಲದರೊಳರ್ಧ ರಾಗಿಯನೆಮ್ಮ ನಂಟನ ಗುಳಿಗಿಟ್ಟು ಕಡಮೆಯ ರಾಗಿಯ ಮನೆಯೊಳಿರಿಸಿದೊಡಂ ಒಂದು ದಿವಸಂ ಸೇವಗೆ ಮಾಡಲೆಂಧವರೆ ಸೇವಗೆ ಮಾಡಿದರು.

ಮತ್ತೊಂದು ದಿವಸಮವರೆ ದೋಸೆಯಂ ಮಾಡುತ್ತಿಪ್ಪುದಾನುಮಿರೆ ಎನ್ನ ತಂಗಿಯು ಕಾವಲಿಯೊಳೇಳು ದೋಸೆ ಕೈವಟ್ಟಲೊಳಾರು ದೋಸೆ ನೆಲವಿನ ಮೇಲೆ ಹತ್ತು ದೋಸೆ ಕೈಯಲೆತ್ತಿ ನೋಡೆ ಮೂರೆ ದೋಸೆ ಎಂದಿಪ್ಪತ್ತುನಾಲ್ಕು ಲೆಕ್ಕದ ದೋಸೆಯಂ ಅತ್ತೆಯುಂ ಸೊಸೆಯುಂ ತಾಯುಂ ಮಗಳುಂ ಅತ್ತಿಗೆಯುಂ ನಾದಿನಿಯುಮೆಂಬರುವರು ಮೂರು ದೋಸೆಯಂ ಮುರಿಯದೆ ಮೆಲಲು ನಾನುಂ ಹದಿನಾರು ಮುದಿಹಿಟ್ಟು ಹುರಿದ ಹುರುಳಿ ಉದಕಮನುಂಡು ಭೂಮಿ ತಳಕೆಳಕೆ ಮಾಡಿ ಬೇಸತ್ತೆ ಹಟ್ಟಿಯೊಳಿಟ್ಟ ಮೇಟ್ಟುಗೊಂಡು ಪೋಗಿ ಬರುವಲ್ಲಿ ಮನೆಯೊಳವರೆ ಸೇವಗೆ ಮಾಡಿರಲದಕ್ಕೆ ಒಳ್ಳೆಣ್ಣೆಯಂ ತಂದೊಡದು ಕೈಯೆಣ್ಣೆಯಾದೊಡದಂ ಬಿಟ್ಟು ಕಣ್ಣು ಬಿಟ್ಟುಂಡು ಕೈಗಚ್ಚಿಕೊಂಡು ಬಂದೆನೊಂದು ನಿಂಬೆಕಾಯಿ ಗಾತ್ರ ರಾಗಿಹಿಟ್ಟನಾರಾದೊಡಂ ಕೊಟ್ಟೊಡೆ ಬೆಟ್ಟಮಂ ಕುಟ್ಟುವೆನೆಂದಿಂತಪ್ಪ ಅಪ್ರೌಢವಾಕ್ಯಮಂ ಕೇಳ್ದು ಇಂತಪ್ಪ ಶಬ್ದಂ ಕನ್ನಡ ದೊಳನೇಕಮಿಪ್ಪವವರೊಳೌಚಿತ್ಯದರ್ಥಮೆಂಬುದರಿಂ ಆಯಾಯಾ ಕಾರ್ಯವರಿತು ಗ್ರಹಿಸಬೇಕೆಂದು ಪೇಳಿದೆನು.

ಇಲ್ಲಿಂ ಬಂಧುಸತ್ಕಾರ ದಕ್ಷರುಂಟೆ ಎನಲೆಂದನೋರ್ವನೆಡಶ್ರುತಿಯೆಂಬಂ ಬಂಧಕಿಯೆಂಬ ಸ್ತ್ರೀಯಂಗೂಡಿಪ್ಪನಾತಂ ಬಂಧುಗಳ್ ಬರಲವರು ಮಾತಿಂದಂ ಮನ್ನಣೆಗೆಯ್ದವರೊಳೇನಾನುಮುಳ್ಳ ವಸ್ತುಮಂ ಕಳೆದುಕೊಂಡು ಬಾಯಾರಿದರ್ವರ್ಗೊಂದು ಚುಲುಕು ನೀರಂ ಕೊಡುವನಲ್ಲನಾತನ ಮನೆಗೋರ್ವ ಛಲಗ್ರಾಹಿ ಬಂದು ಮನೆಯೊಳೆ ಕುಳ್ಳಿರ್ದುಪಾಯದಿಂ ಪೊರಮಡಿಸಿದೊಡಂ ಪೋಗದೆ ಮಧ್ಯಾಹ್ನಮದಾಗಲಿಂದೆನಗೆ ಭೋಜನಂ ನಿಮ್ಮ ಗೃಹದೊಳಾಗದಿದ್ದುದೆನಲತಿಕ್ಲೇಶದಿ ಪೆಂಡತಿಯಂ ಕರೆದತಿಥಿಗಳ್ಗೆ ಭೋಜನ ಪಾಕಶುದ್ಧಿಯಂ ಮಾಡೆಂದಾಗ್ರಹಂ ಮಾಳ್ಪಿನಂ ಎಂದಿನ ಮೇರೆ ದಂಪತಿಗಳೀರ್ವರ್ಗಂ ಸರಿಯಾಗಟ್ಟು ಮಡಗಿ ಆಕ್ರಂದನಂ ಮಾಡುತ್ತುಮಿರೆ ಇನ್ನು ಪಾಕವಾಗಿಲ್ಲವೆ ಪಾಪಿಯೆನಲು ಅತ್ಯಂತ ಕೋಪದಿಂ ನಮ್ಮ ಮನೆಗೆಯ್ದಿ ಮಡಕೆ ಕುಡಿಕೆಯಿಲ್ಲ ಎನ್ನುಪಸ್ಥಿತಿಯೊಳಡಲೆ ಎಂದಭಿನಯಿಸಿದ ಸತಿಯಂ ನೋಡಿ ರೌದ್ರದಿಂದೆರ್ದು ನೀನಟ್ಟು ಇಕ್ಕದೆ ಇಂದು ಬಾರದ ನಂಟ ಪೋಗದಿಪ್ಪನೀತನೆನ್ನ ಶಿಶ್ನವನುಂಡು ಪೋಪನೆ? ಎಂಬುದೆನ್ನ ಮನೆಯೊಳೊಂದುಮನುಕೂಲಮಿಲ್ಲಮದರಿಂ ಮುಂದಕ್ಕೆ ಪೋಗೆಂಬುದುಂ ಮೌನಂಗೊಂಡಿರೆ ಪೆಂಡತಿಗೆಂದನೆಲೆ ಮನೆಹಾಳೀ ಎರಡು ರೊಟ್ಟಿಯನಾದರೂ ತಟ್ಟಿ ಬೇಯಿಸೆಂಬುದುಂ

ಸಮಿಧೆಯಿಲ್ಲ ಕಾಲನಿಕ್ಕಿ ಬೇಯಿಸಲೆ ಎನೆ ನಂಟನೆದ್ದು ಈ ಹೊತ್ತಿಗೆ ಈ ಗಳುವಂ ಮಾಡೆಂದಾ ಮನೆಯ ಹುಲ್ಲುಗಳುಮಂ ಕೀಳಲ್ ಪೋಪುದುಂ ಸಮಿಧೆಯಿದೆ ಎಂದು ಮಾಣಿಸಿ ತನ್ನ ಪೆಂಡತಿಯಂ ಕೃತಕದಿಂ ಬಡಿಯಲವಳತಿದುಃಖದಿಂದೀ ಪಾಪಿಯೆಲ್ಲಿ ಬಂದನಿಂದಿನ್ನೀ ಮನೆಯೆನಗೆರವಾದುದೆಂದು ಮನೆಯಂ ಬಿಟ್ಟು ಪೊರಗೆ ಪೋಗಲಾತ ಮನೆಯೊಳಿರ್ದ ನಂಟನೊಳು ದುಃಖದಿನೆಂದಂ ನೀಮುಂ ಮುಂದಕ್ಕೆ ದಯಮಾಡತಕ್ಕದ್ದು, ಆಕೆಯೇನಾದಳೊ ನೋಡಿಬಪ್ಪೆನೆನೆ ಆತಂ ಸುಮ್ಮನಿಪ್ಪುದುಂ ತಾನೆ ಪೊರಗೆ ಬಂದಾಗಳಾ ನಂಟಂ ಅಟ್ಟಮನೇರಿಯಡಗಿರೆ [ಎಡ]ಶ್ರುತಿ ಬಂದು ನೋಡಿ ಪೋದನೆಂದರಿದು ಮನೆಯ ಬಾಗಿಲನಿಕ್ಕಿ ಬೀಗಮನಮರ್ಚಿ ತಾನು ಪೊರಗೆ ಪೋಗಿರ್ದು ದಂಪತಿಗಳೀರ್ವರುಂ ನಂಟಂ ಪೋದನೆಂದು ಸಾಯಾಹ್ನದೊಳ್ ತಮ್ಮ ಗೃಹಮಂ ಪೊಕ್ಕು ಎರಡು ಎಡೆಯಂ ಬಡಿಸಿಕೊಂಡು ಭುಂಜಿಸುವ ವೇಳೆಯೊಳು ಸತಿಗೆಂದನೆಲೆ ಪ್ರಿಯಳೆ ನಾವೀ ಹೊತ್ತು ನಂಟಂಗೆ ಮಾಡಿದ ಕೆಲಸ ಹ್ಯಾಗೆ ಎನೆ ಅವಳು ನಾ ಮಾಡಿದ ಕೆಲಸ ಹ್ಯಾಗೆ ನೀವೇ ಬಲ್ಲಿರೆಂಬುದುಂ ನಂಟನುಮಟ್ಟದಿಂದಿಳಿದು ನಾನು ಮಾಡಿದ ಕೆಲಸ ಹ್ಯಾಗೆ ನೀವು ನೋಡಿ ಎಂದವರ ಬಳಿಯು ಬಂದು ಕುಳ್ಳಿರಲತಿಲಜ್ಜೆಯಿಂದಾತಗೆ ತಾನುಣಲಿಕ್ಕಿ ಕಳುಹಿಸಿದರು. ಒಬ್ಬ ಒಕ್ಕಲನ ಮನೆಗೋರ್ವ ಬಂದನ್ನಮಂ ಬೇಡಲಾತಂ ತುಪ್ಪದ ಮೊದಲೆಣ್ಣೆಯ ಕಡೆ ಚಪ್ಪರಿದುಣ್ಣೆಂಬುದುಮಾತನರಿದು ತುಟಿಯ ಮೊದಲು ಹಲ್ಲಿನ ಕಡೆಗೇರಿಸಿ ನೀನೆ ಉಣ್ಬುದೆಂದು ಪೋದಂ.

ಮತ್ತೊಬ್ಬ ಬ್ರಾಹ್ಮಣಂ ದರಿದ್ರನಾಗಿ ಶುಷ್ಕಮಪ್ಪಾಹಾರಂ ದೊರೆಯದಿರ್ದೊಡಂ ದಿನಚರಿ ಕೂಸಿಂಗೆ ಮಾಡಿದೊಂದಗುಳಂ ಮೊಸರೊಳದ್ದಿ ಮೀಸೆಯ ಕೊನೆಯಂ ಪತ್ತಿಸಿಕೊಂಡು ಸಭೆಗೆಯ್ದಿರ್ದು ಕೆಲಹೊತ್ತಾಗಲು ಎಲ್ಲರೂ ಕಾಣುವಂತೆ ತನ್ನೆಡಗಯ್ಯ ಸೆಳ್ಳುಗುರಿಂ ತೆಗೆದು ಮಿಡಿದು ಭೋಜನದ ಮಹತ್ತಂ ಪೇಳ್ವನು. ಮತ್ತೊಬ್ಬನ ಮನೆಯೊಳತ್ತೆಯುಂ ಸೊಸೆಯುಂ ಒಬ್ಬರನೊಬ್ಬರರಿಯದಂತೆ ಅತ್ತೆ ಮುಚ್ಚುಳೊಳು ಸೊಸೆಯುಂ ಕೈವಟ್ಟಲೊಳು ಅನ್ನಮನಾ ಮನೆಯ ಕದವಿನ ಮರೆಯೊಳ್ ನಿಂದುಂಡು ಬರುತ್ತಿರ್ದೊಂದು ದಿನ ಮತ್ತೆ ಬಂದು ಸೊಸೆ ಇಲ್ಲವೆಂದು ಮುಚ್ಚಳೊಳನ್ನಮಂ ಕಲಸಿ ಕದದ ಮರೆಯೊಳುಂಬಾಗ ಆ ಸೊಸೆ ಬಂದತ್ತೆಯಿಲ್ಲವೆಂದು ಬಟ್ಟಲಲ್ಲಿ ಅನ್ನಮಂ ಕಲಸಿ ಕೊಂಡಾ ಕದದ ಮರೆಗೆಯ್ದಲತ್ತೆ ಮುಚ್ಚುಳಂ ಮರಸಿಕೊಂಡಿದೇನೆಂಬುದುಂ ಮುಚ್ಚುಳೊಳುಂಬತ್ತೆಮ್ಮಗೀ ಬಟ್ಟಲೊಳ್ ಮಾಡಲೆಯಂ ತಂದೆನೆಂದವಳಂ ಭಂಗಿಸಿ ಒಂದು ದಿನಂ ಆಕೆಯ ಗಂಡಂ ಸಂಧ್ಯಾವಂದನೆಯಂ ಮಾಳ್ಪಾಗ ಸಗಣಿನೀರಂ ತಳಿಯುತ್ತಿರಲ್ ಹೊರಚ್ಚಾಗೆಂದು ಮಂತ್ರೋದಕಮಂ ಪ್ರೋಕ್ಷಿಸಲಾಕೆ ಸಗಣಿನೀರಂ ತಲೆಯೊಳೆರೆಯೆ ಕೋಪಿಸಿ ಬಳಿಕೊಮ್ಮೆ ಮಾರ್ಜನೆಯಿಂ ಗುಡಿಸುತ್ತೆ ಬಪ್ಪ ಸತಿಯಂ ಕಡೆಯೊಳ್ ಗುಡಿಸೆಂದು ಪಂಚಾಂಗಮಂ ಪಿಡಿದಿರ್ದು ಅದರೊಳೆ ಮಸ್ತಕಮಂ ಬಡಿಯಲವಳು ರಜ ಬಡಿಗೆಯಿಂ ತಲೆಯಂ ಬಡಿಯಲಾಕೆಯಂ ಮಾತನಾಡಿಸದೆ ಒಬ್ಬ ಗವುಡಿಯನಿಟ್ಟುಕೊಂಡಿರೆ ಅವಳ್ ಆಳು ಗುರಿಕಾರನಂ ಇಟ್ಟುಕೊಳ್ಳೆ ಪಂಚಾಯತಮಂ ಮಾಡಲಿಬ್ಬರು ಸಮನೆಂದರು.

ಐಶ್ವರ್ಯಮದದಿಂ ಜ್ಞಾನಮಿಲ್ಲೆಂತೆಂದೊಡೆ ಒಂದು ಗೊಲ್ಲರ ಹೆಣ್ಣು ತಾಯಿತಂದೆಗಳಿಲ್ಲದೆ ತಿರಿದುಣ್ಣಲಾಗದೆ ಹುಣಿಸೆಕಾಯನಾಯ್ದು ಮಾರಿ ಜೀವಿಸುತ್ತಿರಲದರ ಯೌವನದೊಳು ರಾಯಂ ಕಂಡದರ ರೂಪಿಂಗೆ ಸೋಲ್ತು ತನಗರಸಿಯಂ ಮಾಡಿ ಪಾಲಕಿ ಛತ್ರ ಚಾಮರಂಗಳಂ ಕುಡೆ ಮಾರ್ಗದೊಳ್ ಬರುತ್ತೆ ಹುಣಿಸೆಮರಮಂ ಕಂಡು ಆ ಅಂಕ ಡೊಂಕನ ಕಾಯಿ ಏತರ ಕಾಯೆಂದು ಕೇಳೆ ಕೆಲದೊಳಿದ್ದವನೆಂದಂ ತಾವು ಹೊತ್ತು ಮಾರುತ್ತಿರ್ದ ಹುಣಿಸೆಕಾಯಿ ಎನೆ ತನ್ನ ಮದಕ್ಕೆ ತಾನೆ ಸಿಗ್ಗಾಗಿ ನೀನಾರೊಳುಸುರದಿರೆಂದು ಪೋದಳು. ಒಬ್ಬ ಬಡ ಬ್ರಾಹ್ಮಣಂ ಯಾಚನೆ ಮಾಡುವಲ್ಲಿ ಮದುವೆ ವಸ್ತ್ರಂಗಳೊಳು ಎರಡು ಹಣಂ ಲಭ್ಯಮಾಗೆ ಸಂತೋಷದಿಂ ಮನೆಗೆ ಬಂದು ಪೆಂಡತಿಯಂ ಮಗಳಂ ಹಟ್ಟಿಯೊಳಿಪ್ಪ ಗವುಡಿಯಂ ಕರೆದು ನನಗೆ ಎರಡು ಹಣಂ ಲಾಭಮಾಯ್ತಿದಕೆ ನಿಮಗೇನು ಆಭರಣಂ ಬೇಕೆನೆ ಪೆಂಡತಿ ಮೂಗುತಿ ಬೇಕೆಂದಳು, ಮಗಳು ತಾಲಿ ಬೇಕೆಂದಳು, ಗವುಡಿ ಹಲ್ಲಿಗೆ ಕಪ್ಪನಿಡಬೇಕೆಂದಳು ಎನಲಾಗಿ ತಾನು ಸುಲಭ ದಿಂದೊಂದುಂಗುರಮಂ ಮಾಡಿಸಿ ಕಡಮೆಗವರವರು ಪೇಳಿದ ಮೇಲೆ ಆಭರಣಂಗಳಂ ಮಾಡಿಸಿಕೊಡಲಾ ಮಗಳು ತನ್ನ ತಾಲಿಯ ಕಾಣಿಸಲೆಂದು ಕತ್ತನೆತ್ತಿ ತೋರುತ್ತಿಪ್ಪಳು. ಆತಂ ತನ್ನ ಕಿರುಬೆರಲುಂಗುರಮಂ ತೋರಲಲಗಿಸುತ್ತಿಪ್ಪಂ ತದ್ವನಿತೆ ಮೂಗುತಿಯಂ ತೋರಿಸಲು ಮೊಗಮನೊಲೆಯುತ್ತಿರ್ದಳಾ ಗವುಡಿ ಪಲ್ಗಿರಿದು ತೋರಿಸುತ್ತ ಕರಣಮಂ ಮಾಳ್ಪಳಿದು ಆಭರಣದ ಹೆಮ್ಮೆಯೆಂಬುದು. ಒಬ್ಬ ಗೌಡಂಗೆ ಅಪ್ರಬುದ್ಧ ಮಗಂ ಪುಟ್ಟಿ ತನ್ನ ಪೆಂಡತಿಯ ತವರೂರಿಂದಾಕೆಯ ಕರೆದುಕೊಂಡು ಬರುತ್ತಾ ಮಳೆಗೆ ಸಿಕ್ಕಿದಲ್ಲಿ ತನ್ನ ಪೆಂಡತಿಯ ತಿರುಗಿ ನೋಡಿ ಸಣ್ಣ ಸೀರೆ ಮೆಯ್ಯ ಪತ್ತಿ ಪಣೆಯ ಕುಂಕುಮಂ ಪರಿದಿರಲೀಕೆಗೆ ದೊಡ್ಡ ಬಾವು ಮೂಡಿ ವ್ರಣಮಾಯಿತೀಕೆ ಉಳಿಯಳೆಂದು ಮಾರ್ಗದಲ್ಲಿ ಎತ್ತಂ ಕೊಂಡಾ ಹೆಣ್ಣಂ ಕೊಟ್ಟುಬಪ್ಪಲ್ಲಿ, ಎತ್ತು ಮೂತ್ರಮಂ ಪೊಯ್ಯೆ ಪೊಟ್ಟೆ ಕೂತಾದುದೆಂದು ಆ ಎತ್ತಂ ಕೊಟ್ಟೊಂದು ತಗರಂ ಕೊಂಡುಬಪ್ಪಲ್ಲಿ, ತಗರಾತನಂ ಗುದ್ದಿಕೆಡಹಿದೊಡದಂ ಕೊಟ್ಟೊರ್ಧ ಹಲಸಿನ ಹಣ್ಣಂ ಕೊಂಡು ತಲೆಯಮೇಲಿಟ್ಟು ಬಪ್ಪುದುಂ, ಅಂಟು ಜುಟ್ಟಿಗೆ ಹತ್ತಿ ಕಚ್ಚಿದೊಡೆ ಕೆಲಸಿ ಬಳಿಗೆ ಬಂದು ಜುಟ್ಟಂ ಬೋಳಿಸಿ ಪಣ್ಣಂ ತೆಗೆದುಕೋ ಎಂದು ಬೋಳನಾಗಿ ಮನೆಗೆ ಬಂದಂ ಅಂತಪ್ಪ ದುರ್ಬುದ್ಧಿವಂತನೆಂದು ಮತ್ತಮಿಂತೆಂದಂ.

ಮತ್ತೊಬ್ಬ ಕೃಷೀವಳಂ ಮಳೆಜಡಿಯೊಳು ಇಂಧನಂಗಳಿಲ್ಲದೆ ಒಂದುಪವಾಸಮಿರ್ದು ಬೆಳಗಿನೊಳು ಮಳೆ ಸ್ವಲ್ಪ ತವಲಾಗೆ ಕೊಡಲಿಯಂ ಕೊಂಡು ಊರ ಮುಂದಕ್ಕೆಯ್ದೆ ಮಹಾಮಳೆ ಬಪ್ಪುದುಂ ಚಾವಡಿಯನೇರಿರೆ ಮಳೆ ಬಿಡದೆ ಸಾಯಂಕಾಲಮಾಗೆ ಮಾರಿಯಂ ನೋಡಿ ಹೊನ್ನೆಮರನೆಂದರಿದೀ ಹೊತ್ತಿನ ಸಮಿಧೆಯಪ್ಪುದೆಂದು ಕೊಡಲಿಯನೆತ್ತಿ ಸೀಳ್ವ ಸಮಯದೊಳು ಹೋ ತಡೆಯೆಂದು ಮಾರಿ ಪ್ರತ್ಯಕ್ಷಮಾಗಿ ಎನ್ನನೇಕೆ ಸೀಳ್ವೆಯೆನಲೆನಗೆ ಮೂರುಪವಾಸಮಿದೆಯಿಲ್ಲೆಂಬುದುಂ ಧೈರ್ಯಕ್ಕೆ ಮೆಚ್ಚಿ ನಿನ್ನ ಮನೆಯ ಬಾಗಿಲೊಳೊಂದು ಪೊರೆ ಸಮಿಧೆಯಿದೆ ಪೋಗೆಂದು ಕಳುಹಿಸೆ ತನ್ನ ಪರಿವಾರಗಳಿಂ ನಿಚ್ಚಲೊಂದು ಪೊರೆ ಇಂಧನಮಂ ಹಾಕಿಸುತ್ತುಮಿರೆ

ಶ್ಲೋಕ || ಪುಣ್ಯಮೇಕೋ ಮಹಾಬಂಧುಃ ಪಾಪಮೇಕೋ ಮಹಾರಿಪುಃ
ಅಸಂತೋಷೇ ಮಹಾವ್ಯಾಧಿಃ ಧೈರ್ಯಂ ಸರ್ವತ್ರಸಾಧನಂ ||

ಇಂತಾಗಲಾ ನೆರೆಮನೆಯ ಗವುಡನ ಪೆಂಡತಿ ತನ್ನ ಗಂಡನಂ ಕಾಡಿ ಕೋಪಿಸಲು ಮಾರಿಯಂ ಸೀಳಲಂಜಿ ಭಯಂಗೊಳ್ಳುತ್ತಾ ಕೊಡಲಿಯನೆತ್ತಿದೊಡಾತನಂ ಸ್ತಂಭಿಸುವುದುಂ ಆತನ ಪೆಂಡತಿ ಇನ್ನೂ ಸಮಿಧೆಪೊರೆ ಬರಲಿಲ್ಲವೆಂದು ತಾನುಂ ಬಂದು ನೋಳ್ಪುದುಂ ಕುಠಾರಮನೆತ್ತಿ ಸ್ತಂಭಮಾಗಿರ್ದ ಪತಿಯಂ ಕಂಡು ತನ್ನ ಸುವರ್ಣ ಕರ್ಣಾಭರಣಮಂ ಕಾಣ್ಕೆಯಿತ್ತು ಬಿಡಿಸೆಂದೊಡಂ ಮುನ್ನೀ ಗವುಂಡನ ಮನೆಗೆ ನಿಚ್ಚಲೊಂದು ಪೊರೆ ಪುಳ್ಳಿಯನಡಕಿದೊಡಂ ಬಿಡುವೆನಲ್ಲದೊಡೆ ಬಿಡೆನೆಂದೊಡಂ ತಾನುಮಾತನ ಮನೆಗೆ ಕಟ್ಟಿಗೆ ಆಳಾದನದರಿಂ ಧೈರ್ಯಮಿಲ್ಲದಂಗಾವ ಕಾರ್ಯಮುಂ ಆಗದೆಂದು ಮತ್ತಮಿಂತೆಂದುಂ

ಶ್ಲೋಕ || ಆತ್ಮಬುದ್ಧಿಃ ಚಿರಂಜೀವೀ ಗುರುಬುದ್ಧಿ ವಿಶೇಷಣಃ
ಪರಬುದ್ಧಿರ್ವಿನಾಶಾಯ ಸ್ತ್ರೀಬುದ್ಧಿಃ ಪ್ರಲಯಾಂತಕಾ ||

ಎಂದು ಒಬ್ಬ ಬ್ರಾಹ್ಮಣಂ ರಾಜಾಶ್ರಯಂ ಮಾಡುತ್ತಾ ಅರಸಿನಲ್ಲಿ ಕಾಯ್ದು ಕೊಂಡಿಪ್ಪುದುಂ ಸಭೆಯೊಳರಸನಿಪ್ಪಲ್ಲಿ ಬಲಾಹಾರದಿಂದರಸಿಗೆ ಸಣ್ಣನಾಗಿ ಅಪಾನ ವಾಯು ಶಬ್ದಮಾಗೆ ಕಟ್ಟಿಗೆಯವರರಸನೆಂದರಿಯದೆ ಯಾರು ಯಾರೆಂದಾರ್ಭಟಿಸುವಲ್ಲಿಯಾ ಬ್ರಾಹ್ಮಣನರಿದು ನಾನು ತಪ್ಪಿದೆನೆಂದೆದ್ದು ಕೈಮುಗಿಯಲಾತನಂ ಸಭೆಯಿಂ ಗುದ್ದಿ ನೂಂಕಿದರ್ ಅರಸಂ ಮೆಚ್ಚಿ ಮತ್ತೊಂದು ನೆವದಿಂದಾತಂಗೆ ಒಂದೂರನುಂಬಳಿಗೊಡಲರಸನ ಮುಂದೆ ವಾಯು ನಡಸಿ ಉಂಬಳಿಯಂ ಪಡೆದನೆಂದು ಮತ್ತೊಬ್ಬ ಪಾರ್ವನ ಪೆಂಡತಿಯು ತನ್ನ ಗಂಡನಂ ನೀನುಂ ಅರಸನ ಬಳಿಗೆಯ್ದಿ ಅಪಾನವಾಯುವಂ ನಡಸಿ ಉಂಬಳಿಯಂ ಪಡೆವುದೆಂದತ್ಯಾಗ್ರಹಂಗೆಯ್ಯಲ್ ಅವರೆಯಂ ತಿಂದಾಸ್ಥಾನಮಂ ಪೊಕ್ಕು ಗುದದ್ವಾರದಿಂ ಶಬ್ದಮಂ ಮಾಡಲರಸಂ ಕೋಪಿಸಿ ಕುಂಡೆಯ ಮೇಲೆ ಮೂರು ಬರೆಯಂ ಹಾಕಿಸಿ ನೂಂಕಿಸಲ್ ಅಷ್ಟರೊಳಾ ಬ್ರಾಹ್ಮಣನ ಪೆಂಡತಿ ಬೀದಿಯ ಬಾಗಿಲೊಳ್ ಮಾನ್ಯಂಬಡೆದು ಬಪ್ಪನೆಂಬ ಸಂತೋಷದಿಂ ಕಾಯ್ದಿರ್ದು ಕುಂಟುತ್ತುಂ ಬಪ್ಪ ಪತಿಯಂ ಕಂಡು ಏನಿತ್ತರೇನಿತ್ತರೆಂದು ಕೇಳುತ್ತಿರೆ ಕೋಪಿಸಿ ಬರಗೆಯಂ ಕೊಟ್ಟರೆನೆ ಆ ಗ್ರಾಮ ಒಳ್ಳೇದು ನಾವಿಬ್ಬರಿಗೆ ಮೃಷ್ಟಾನ್ನವಾಗುತ್ತಿದೆ ಎಂಬುದು ಮರುಳೆ ತೇಜ ಬರೆಯೆನೆ ತೇಜಿಯನೇರೇಕೆ ಬರಲಿಲ್ಲೆಂಬಷ್ಟರೊಳು ಸಮಿಪಕ್ಕೆ ಬಂದು ಕುಂಡೆಯಂ ತೋರಿಸೆ ಹಸಿಯ ಬಿದಿರಂ ತೇದಿಕ್ಕಿ ವೇದನೆಬಟ್ಟರು.

ಶ್ಲೋಕ || ಅನಭ್ಯಾಸೇ ವಿಷಂ ಶಾಸ್ತ್ರಂ ಅಜೀರ್ಣೇ ಭೋಜನಂ ವಿಷಮ್
ದರಿದ್ರಸ್ಯ ವಿಷಂ ಗೋಷ್ಠೀ ವೃದ್ಧಸ್ಯ ತರುಣೀ ವಿಷಮ್ ||

ಒಂದು ಗ್ರಾಮದೊಳು ಕೆಂಚಂಭಟ್ಟಂಗೆ ಚುಂಚಂಭಟ್ಟನೆಂಬ ಮಗನಾಗೆ ವಿದ್ಯಾ ಭ್ಯಾಸಂಗೆಯ್ಯದೆ ಅನಕ್ಷರ ಕುಕ್ಷಿಯಾಗಿರ್ದನಾತನ ಪಿತಂ ಲೋಕಾಂತರಿತನಾಗಲ್ ತಾಯಿ ಮಗನಿಗಿಂತೆಂದಳ್ ನಿನ್ನ ತಾತಂ ವಿದ್ಯದೊಳ್ ಪ್ರಸಿದ್ಧನಾಗಿ ಪ್ರಶ್ನ ನಿಮಿತ್ತಂಗಳಿಂ

ಸಂಪಾದಿಸುತ್ತಿರ್ದಂ ನೀನೆಂತು ಬಾಳ್ವೆಯೆಂದು ನುಡಿವುದುಂ ಅದೃಷ್ಟಾನುಸಾರದಿಂ ಮನೆಯೊಳ್ ತಾಯಿ ಪೋಳಿಗೆಯಂ ಮಾಡುವ ಶಬ್ದಮಂ ಕೇಳಿ ನೋಡಿ ಲ್ಪಟಲ್ಪಟ ಶಬ್ದಂ ಹೋಳಿಗೆ ದೃಷ್ಟಮೆನಲವರಜ್ಞಿ ಮಗನು ನಿಮಿತ್ತಮನೊಳ್ಪಿತ್ತಾಗರಿವನೆಂದಸಗನ ಕತ್ತೆಯನರಸಿ ತಂದೊಂದು ಪ್ರದೇಶದೊಳ್ ಕಟ್ಟಿ ಅಸಗನ ಕತ್ತೆ ಕಂಡಂ ದೃಷ್ಟಂ ಎಂದಾಮೇಲೆ ಗೌಡನ ಬೆಳ್ಳೆ ಕಂಡಂ ದೃಷ್ಟವಮಾದೊಡೀ ವಾರ್ತೆಯಾ ದೇಶದರಸಿನರಮನೆಯೊಳನರ್ಘ್ಯಮಪ್ಪ ಪದಕಂ ಪೋದೊಡವನಂ ಕರಸಿ ಕೇಳ್ವೊಡಂ ಕಣ್ಣಿಂ ಕಾಲಿಗೆ ಬಂತಂ ದೃಷ್ಟಮೆನಲಾ ಹೆಸರ ಗೌಡಿಯರಿಂ ಬರಿಸೆ ತಾನೊಂದು ತಾವಿನೊಳಿಟ್ಟು ತೋರಿಸಲರಸಂ ಮೆಚ್ಚಿ ಉಂಬಳಿ ಸಂಬಳಂಗಳಂ ಕೊಟ್ಟಿಟ್ಟುಕೊಂಬುದುಂ ಮಂತ್ರಿ ಈತನೇನುಮನರಿಯನೆಂದು ತೊಣಚಿಯಂ ಪಿಡಿದು ಕೇಳ್ವುದುಮಿಲ್ಲೆ ಸಿಕ್ಕಿದೆ ಚುಂಚಂಭಟ್ಟಾ ಎಂದೊಡೆಲ್ಲ ಫಲಂ ಭಾಗ್ಯಾನುಸಾರಿಣೀ ಎಂಬುದರಿಂ ಕೂಡಿ ಬಪ್ಪುದೆಂದು ಮತ್ತಂ ಇಂತೆಂದ ಮಂಡಲಿಯೆಂಬಗ್ರಹಾರದೊಳೊರ್ವ ಬ್ರಾಹ್ಮಣಂ ವೃತ್ತಿಯಿಲ್ಲದೆ ಬಿಕ್ಷಾಟನದಿಂ ಜೀವಿಸಲಾರದೆ ತನ್ನೊಳಿಂತೆಂದಂ

ಆರ್ಯೆ || ಧನವಂತಮದಾತಾರಂ | ದರಿದ್ರಮತಪಸ್ವಿನಮ್ ಕಂಠೇ
ಬದ್ಧ್ವಾ ಶಿಲಾಂಮುರ್ವೀಂ | ಸಿಂಧುರ್ಮಧ್ಯೇ ವಿನಿಕ್ಷಿಪೇತ್ ||

ಎಂಬುದರಿಂ ತಪಂಗೆಯ್ಯಲುದ್ಯೋಗಿಸಿ ಭೋಗಾಕಾಂಕ್ಷೆಯಂ ಬಿಡದೆ ತಪಮಂ ಮಾಡುತ್ತಿಪ್ಪುದುಂ ದೇವತೆಗಳ್ ಪ್ರತ್ಯಕ್ಷಮಾಗಿ ನಿನ್ನಭೀಷ್ಟಮಾವುದೆನೆ ದಾರಿದ್ರ್ಯಂ ಪೋಪಂತೆ ಮಾಳ್ಪುದೆನಲೊಂದು ಝುೖಘಂಟೆಯಂ ಕೊಟ್ಟು ಇದನು ನಿನ್ನ ಮನೆಯೊಳ್ ಬಾರಿಸೆ ನಿನಗೆ ಪೂರ್ವಜನ್ಮದಲ್ಲಿ ಪುಣ್ಯಮಂ ಪಡೆಯದಿಪ್ಪುದರಿಂ ನೆರೆಯುವನ ಭಾಗ್ಯಮಂ ಪಚ್ಚಿಗೊಡುವುದರಿಂ ಧನಕನಕ ಸಮೃದ್ಧಿಯೆಂದು ಬಾಜಿಸಲು ಪೊನ್ನ ಮಳೆಗರೆವುದದರೊಳ್ ಅರ್ಧಂ ನೆರೆಯವಂಗಕ್ಕು ಪೋಗೆನಲಾ ಘಂಟೆಯಂ ತನ್ನ ಗೃಹಾಂಗಣದೊಳೆ ಧನಕನಕ ಸಮೃದ್ಧಿಯೆಂದು ಬಾಜಿಸುವುದುಂ ಸುವರ್ಣವೃಷ್ಟಿಯಾಯ್ತುದರೊಳರ್ಧಂ ನೆರೆಮನೆಯವಂಗಾಗಲದಂ ಕಂಡಾತನ ಪೆಂಡತಿ ಸೈರಿಸದೆ ಕಷ್ಟದಿಂ ಸಂಪಾದಿಸಿ ಪರಂಗೀವುದು ಎಂದು ಕೋಪಿಸಿ ಇದೆಲ್ಲಂ ಪೋಗಲಿಯೆಂದು ಬಾರಿಸೆನೆ ಬಾರಿಸುವುದುಂ ತನ್ನ ಮನೆಯೊಳಿರ್ದುದೆಲ್ಲಂ ಪೋಯಿತು ನೆರೆಮನೆಯವನರ್ಧಂ ಪೋಯಿತು, ಮತ್ತಂ ಕ್ಲೇಶಂ ಪುಟ್ಟಿ ನೆರೆಮನೆಯವೆರಡು ಕಣ್ಣುಂ ಪೋಗಲಿ ಎಂದು ಬಾರಿಸೆ ತನ್ನವೆರಡುಂ ಅವನದೊಂದು ಕಣ್ಣುಂ ಪೋಯಿತು, ಮತ್ತಮವನ ಕಾಲೆರಡುಂ ಪೋಕೆಂದು ಬಾಜಿಸೆ ತನ್ನವೆರಡುಂ ಅವನದೊಂದು ಕಾಲುಂ ಪೋಯಿತು. ಇಂತು ಪೆರರಂ ಕಂಡು ಸೈರಿಸದ ಪಾಪಿಗಳು ತಾವು ಕೆಡುವಲ್ಲಿ ಸಂದೇಹಮಿಲ್ಲದರಿಂ ನೀಚರು ಸೈರಿಸುವರಲ್ಲ "ಮಹಾಂತಹ ಪರಕಲ್ಯಾಣೇ ನೀಚಾಹ ಪರ ವಿಪತ್ತಿಷು" ಎಂಬುದರಿಂ ಮೋಹಿಗಳ್ ಮುಂಗಾಣರೆಂತೆಂದಡೆ ಒಬ್ಬ ವಿಟಪುರುಷಂ ಸೂಳೆಯಲ್ಲಿಗೆಯ್ದಿ ರಾತ್ರಿಗೆ ಬಪ್ಪೆನೆಂದು ಪೇಳಿ ರಾತ್ರಿಯೊಳ್ ಬಪ್ಪನ್ನೆಗಂ ಆಕೆಯ ಮನೆಯಗ್ನಿಪ್ರವೇಶಮಾಗುರಿಯುತ್ತಿರಲ್ ಆಕೆ ದುಃಖಿಸುತ್ತಿರೆ ಸಮಿಪಕ್ಕೆಯ್ದಿ ಹಾಸಿಗೆಯನೆಲ್ಲಿ ಮಾಳ್ಪೆಯೆಂದು ಕಾಡಿದೊಡಾಕೆ ಕೋಪಿಸೆ ಆ ಬೆಂಕಿಯೊಳೆ ಕುಂಡೆಯಂ ಕಾಸಿಕೊಂಡು

ಪೋದನೊಬ್ಬ ದಾಸಂ ತೊರೆಯ ತಡಿಯೊಳು ನಾಮಮಂ ಪೆಟ್ಟುಕೊಳ್ಳುತ್ತುಂ ಆಚೆ ಕರೆಯೊಳಿರ್ದನಂ ಬೇಗ ಬಪ್ಪುದೆಂದು ಕರೆದೊಡಾತನಿದೇಕೆಂದು ಪುರುಷಪ್ರಮಾಣ ನೀರಂ ಪಾಯ್ದು ಕಷ್ಟದಿಂ ಬಂದು ಕೇಳಿದೊಡೆನ್ನ ನಾಮ ಯಾವ ಭಾಗ ಚೆನ್ನಾಗಿ ನೆಟ್ಟಗೆ ಇದೆಯೋ ನೋಡೆಂದು ಕೇಳಿದಂತೆ ಪರರ ಕಷ್ಟಮಂ ಸುಖಿ ಅರಿಯನೆಂದಿವು ಮೊದಲಾದ ಕಥೆಗಳಂ ಪೇಳುತ್ತಿರ್ದ ಸಮಯದೊಳೊರ್ವ ಕುರುಬಂ ಬಂದಿರ್ದು ನಮ್ಮ ಗುರುವಿನೊಳ್ ಮಾತನಾಡಿ ಬನ್ನಿಮೆಂದು ಬಿಡದೆ ಕರೆದೊಯ್ಯಲಾತಂ ದುಷ್ಟ ಜನರಿಂ ಪರಿವೃತನಾಗಿರ್ದೊಡಾ ನೆರವಿಯೊಳೆನ್ನಂ ಕುಳ್ಳಿರಿಸಿ

ವೃತ್ತ || ಹಂಸೋ ನ ಭಾತಿ ಬಲಿಭೋಜನವೃಂದಮಧ್ಯೇ
ಗೋಮಾಯಮಂಡಲ ಗತೋ ನ ವಿಭಾತಿ ಸಿಂಹಃ
ಜಾತ್ಯಾ ನ ಭಾತಿ ತುರಗೋ ಖರಯೂಥ ಮಧ್ಯೇ
ವಿದ್ವಾನ್ ನ ಭಾತಿ ಪುರುಷೇಷು ನಿರಕ್ಷರೇಷು ||

ಎಂಬುದರಿಂ ಮೌನದೊಳಿಪ್ಪುದುಮಾ ಕುರುಬರೆಲ್ಲಂ 'ನೀಂ ತೀರಾ ಓದಿರ್ದೊಡೆಮ್ಮ ಗುರುವಿನೊಳ್ ನುಡಿಯದೇಕಿಪ್ಪೆ ಮಾತನಾಡೆಂದು ಬಾಧಿಸೆ

ಶ್ಲೋಕ || ಮೂರ್ಖೈರಪಕ್ವ ಬೋಧೈಶ್ಚ ಸಹಾಲಾಪೈಶ್ಚದುಷ್ಫಲಮ್
ವಾಚಾಂ ವ್ಯಯೋ ಮನಸ್ತಾಪಸ್ತಾಡನಂ ದುಷ್ಪ್ರವಾದನಮ್ ||

ಎಂಬುದುಂ ತಪ್ಪದೆಂದವರುಪದ್ರಕ್ಕಾರದವನ ಗುರುವಿಂಗಭಿಮುಖಮಾಗಿ ಕಿಂ ಎನಲಾತಂ ಕಿಂಕಂಘಂ ಮತ್ತಂ ಪೇಳೆನಲು ಆಲಸ್ಯಂ ಕಿಂ ಎಂದೊಡಾತಂ ಆಲಸ್ಯಂ ಅಧರಸ್ಯಂ ಇದರಾಸ್ಯಮೆನಲೀ ಮಟ್ಟೆಯೆಂಬುದುಂ ಯಿಂಮಟ್ಟೆ ಅಂಮಟ್ಟೆ ಲೊಳಲೊಟ್ಟೆ ಎಲ್ಲಾ ಪೊಸಪೊಟ್ಟೆ ಎನಲಾ ಕುರುಬರೆಲ್ಲಾ ನಮ್ಮೊಡೆಯಂ ಗಟ್ಟಿ ಇವನನಟ್ಟಿ ಎಂದು ಚಪ್ಪಟೆ ಹಾಕಲು

ಶ್ಲೋಕ || ಅಹೋ ಪ್ರಕೃತಿಸಾದೃಶ್ಯಂ ಶ್ಲೇಷ್ಮಣೋ ದುರ್ಜನಸ್ಯ ಚ
ಮಧುರೈಃ ಕೋಪಮಾಯಾತಿ ಕಟುಕೈರುಪಶಾಮ್ಯತಿ ||

"ಖಲಾನಾಂ ಕಂಟಕಾನಾಂಚ ಏಕಮೇವ ಪ್ರತಿಕ್ರಿಯಾ" ಎಂಬುದರಿಂ ದುಷ್ಟರು ನಿಗ್ರಹದಿಂದಲ್ಲದೆ ಕ್ರಮಕ್ಕೆ ಬಾರರಿವರಂ ಉಪಾಯದಿಂ ಗೆಲ್ವೆನೆಂದು ಇಂತೆಂದಂ ಈ ವಿದ್ಯದಿಂ ಗೆಲ್ವುದು ದೊಡ್ಡಿತ್ತಲ್ಲ ಇನ್ನೊಂದು ವಿದ್ಯಮುಂಟದರೊಳಾರು ಮುಂದಪ್ಪರವರೆ ಘಟ್ಟಿಗ ವಿದ್ವಾಂಸರದೇನೆಂದೊಡಾಮಿರ್ವರೊಂದೊಂದು ಚೂರಿಯ ತೆಗೆದುಕೊಂಡೀ ಊರ ಮುಂದಣ ಕೆರೆಯೊಳೆ ಮುಳುಗಿ ಚಮತ್ಕಾರದೊಳು ಕೊನೆಮೂಗನರಿದು ಏಳ್ವರವರ ವಿದ್ಯವೆ ದೊಡ್ಡಿತ್ತೆಂಬುದಾ ಕುರುಬಂ ನಾನೇ ದೊಡ್ಡ ವಿದ್ವಾಂಸನೆಂದು ಮುಂದರಿಯದೆ ಮೂಗಂ ಕೊಯ್ದು ರಕ್ತಮಂ ಪರಿಯಿಸುತ್ತಾ ಏಳ್ವುದುಂ ನಾನು ಪೊಲವಡೆದೆನೆಂದಲ್ಲಿಂದುತ್ತರಮುಖದೆ ನಡೆದು ಡಿಳ್ಳಿಯ ಪಟ್ಟಣಮಂ ಪುಗಲಲ್ಲಿ ಸರ್ವರು ತುರುಕವೇಷದೊಳೆ ಪುರುಷರೆಲ್ಲರ್ಗೆ ಕರ್ಣರಂಧ್ರವಿಲ್ಲದೆ ಯಾವ ಸಮಯದ ಲಾಂಛನಂಗಳಿಲ್ಲದೆ ಮುಸಲಮಾನವೇಷಭಾಷೆಯೊಂದೇ ವಿಜೃಂಭಿಸುತ್ತುಂ ಮತಮತದ

ಬ್ರಾಹ್ಮಣಾದಿ ಜಾತಿಯವರೆಲ್ಲರೂ ತಮ್ಮ ತಮ್ಮನುಷ್ಠಾನಂಗಳನೆಲ್ಲಾ ತಮ್ಮ ತಮ್ಮ ಗೃಹದೊಳೆ ಮಾಡಿಕೊಂಡು ಬೀದಿಗೆಯ್ದುವಲ್ಲಿ ಎಲ್ಲರು ಒಂದೇ ವೇಷಮಾಗಿ ಸುಳಿವರು. ಒಬ್ಬ ಪಾದಶಾಯಿ ಹದಿನಾರು ವರುಷದಿಂ ತೊಟ್ಟು ಎಂಬತ್ತು ವರುಷ ಪರ್ಯಂತರಕ್ಕೂ ತನ್ನ ದೇಶದೊಳಿರ್ದ ಚೈತ್ಯಾಲಯಂ ಮೊದಲಾಗೆ ಸರ್ವಮತಂಗಳ ದೇವಸ್ಥಾನಂಗಳೆಲ್ಲಮಂ ಹೆಸರಿಲ್ಲದಂತೆ ಮಾಡಿ ಜೈನಮುನಿಗಳ ಮಠಂಗಳು ಡಿಳ್ಳಿಯೊಳು ನಾಲ್ಕು ಆ ದೇಶಗಳೊಳು ಪದಿನಾರು ಇತರ ಗುರುಗಳ ಮಠಗಳು ಎಲ್ಲಮಂ ಕೆಡಿಸಿ ಏಕಜಾತಿಯಂ ಮಾಡಲುದ್ಯೋಗಿಸೆ ಅಷ್ಟರಲ್ಲೆ ಯಮನಿವಾಸಮಂ ಪೊಕ್ಕನಾತಂಗೆ ಸಂತಾನವಿಲ್ಲದೆ ಮತ್ತೊಬ್ಬ ತುರುಕಂಗೆ ಪಟ್ಟವಾಗಿರಲಾಂ ಪೋಗಿ ಕಾಣಲೆಂದವರ ವೇಷದೊಳೆ ಪೋಗಿ ಪಾದಶಾಯನಂ ಕಾಣಲು ನೀನಾರು ಏನು ಕಾರ್ಯನಿಮಿತ್ತಂ ಬಂದೆಯೆಂದು ತನ್ನ ಪಾರಸಿ ಮಾತಿನಿಂ ಕೇಳಲಾ ಭಾಷೆಯೊಳೆ ನಾನುಂ ದೇಶಾಂತರಿ ಬ್ರಾಹ್ಮಣಂ ತಮ್ಮ ಭೇಟಿಯಂ ಮಾಡಿ ಪೋಗಲೆಂದು ಬಂದೆನೆನೆ ಹಿಂದುವೆಂದು ಇಂತೆಂದಂ, ಲೋಕದೊಳು ಜಾತಿಯೆಷ್ಟು ಮನುಷ್ಯಂ ಬದುಕುವುದೆಷ್ಟುದಿನಂ ಸುಮಾನುಷನೆಂತು ಕುಮಾನುಷನೆಂತು ಆವುದಂ ಪೋಲ್ವರಿದಂ ಪೇಳೆಂದು ಕೇಳ್ಪುದುಮವನಭಿಪ್ರಾಯಮನರಿದೆಂದೆನೀ ಪ್ರಪಂಚದೊಳು ಹೆಣ್ಣೊಂದು ಗಂಡೊಂದು ಜಾತಿಯೆರಡು ಪುಟ್ಟಿ ಸಾಯ್ವುದೆರಡು ದಿನಂ ಪೋಗಲುಳಿದೈದು ದಿನಂ ಬದುಕುವುದು. ಸುಮಾನುಷಂ ಸೂಜಿಸುವಾಗದಂತೆ ಸಂಧಿಯಂ ಕೂಡಿಸುವಂ, ಕುಮಾನುಷಂ ಕರ್ತರಿಕುಠಾರದಂತೆ ಸಂಧಿಯನಗಲಿಸುವನೆಂಬುದುಂ ರಾಜ್ಯಂಗಳೊಳು ಹಿಂದುವೆಂಬ ಚಿಪ್ಪಿನೊಳು ಮುಸಲಮಾನನೆಂಬ ಮುತ್ತು ಪುಟ್ಟಿ ಅದರಿಂದಂ ತುರುಕರು ಶ್ರೇಷ್ಠಮಾದರೆಂಬುದುಂ

ಚೌಪದಿ || **ತುರುಕರುಗಳಿಲ್ಲದಿರೆ ನರಕಕ್ಕೆ ಭಾಜನವು**
ತುರುಕರುಗಳಿರೆ ಶುಚಿಯು ರುಚಿಯು ಪಿರಿದಹುದು
ತುರುಕರುಗಳಿಂದೆಲ್ಲರು ಬದುಕಿ ಬಾಳ್ವರು
ಸ[ರುವ]ರರಿಯದಿಪ್ಪರೆ ತುರುಕರುಗಳ ಸಾಹಸಮಂ

ಎಂಬುದುಂ ಮೆಚ್ಚಿ ಸಿರಾಜೀ ವಸ್ತ್ರಂಗಳಂ ಶಿರೋವೇಷ್ಟನಾದಿಗಳಂ ಕೊಟ್ಟು ಸಂತೋಷದಿಂ ನೂರು ಹೊನ್ನಂ ತರಿಸಿ ಕೊಟ್ಟೆನ್ನಂ ಬೀಳ್ಕೊಡುವನಿತರೊಳೊರ್ವ ವೈಶ್ಯಪುತ್ರನಾವೂರ ವೈಶ್ಯನ ಮಗಳೊಳು ಪುದುವಾಳುತ್ತಾ ಈರ್ವರುಂ ಬಹಳ ಜನಂಗಳು ಪೇಳಿದಾಗ್ಯು ಬಿಡದಿಪ್ಪುದುಂ ಪಾದಶಾಯಿಗರಿಪಿ ಬಿಡಿಸಲೆಂದವರೀರ್ವರಂ ತಂದಾಸ್ಥಾನದ ಮುಂಗಡೆಯೊಳ್ ನಿಲಿಸಿಪ್ಪುದುಂ ಗ್ರೀಷ್ಮಕಾಲದ ಉಷ್ಣಕರನಿಂ ಪುಡಿಕಾಯ್ದು ನಿಲಲಾರದೆ ಮಿಡುಕುತ್ತುಮಿಪ್ಪ ಮಿಂಡಗಾರನ ಚರಣಂಗಳಿಗೆ ಮಿಂಡಗಾತಿ ತನ್ನ ಶೀರೆಯಂ ಹರಿದು ಪಾಸುತ್ತಿಪ್ಪುದುಂ ಪಾದಶಾಯಿ ನೋಡಿ ಜನ್ಮಾಂತರ ಸ್ನೇಹಿತರಿವರನಗಲಿಸಲಾಗದೆಂದು ನೂರು ಪೊನ್ನನವರ್ಗೆ ಕೊಟ್ಟು ಕಳುಹಿಸ್ತನು. ಅಲ್ಲಿ ಮೊದಲೊರ್ವ ಕಾಮಾಟದ ನಾಯಕಂಗೆ ಕೋಟೆಯಂ ಹಾಕಿಸೆಂದಧ್ಯಕ್ಷ ಮಕುಡೆ ಸೌಡುಗೊರೆಯಂ ಜಾಳಾಂಜರದಿಂ ಗಾಳಿಬಪ್ಪಂತೆ ಹಾಕಿಸಿ ಕೋಟೆಯಂ ಪಾದಶಾಯಿಗೆ ತೋರಿಸೆ ಕ್ಷುದ್ರಜನರಾತನ ಮೇಲೆ ಕೊಂಡಗಮಂ ಪೇಳೆ ಕೋಪಿಸಿ ಆ ಕೋಟೆಯ ಸಂದಿಯೊಳಾತನಂ

ಇಕ್ಕಿ ಮುಚ್ಚಿಸಲು ಆತನ ಮಗನಾತಂಗಾ ಕೋಟೆಯ ರಂಧ್ರದಿಂ ದಿನಾಗಿಯೊಂದು ಸೇರು ತುಪ್ಪವಂ ಪೊಯ್ಯುತ್ತುಂ ಬರಲದರಿಂ ಜೀವಿಸುತ್ತಿರಲು ವರುಷದ ಮೇಲೆ ಪರದೇಶ ಕಳ್ಳಭಂಟರು ನಿಶಾವೇಳೆಯೊಳು ಪೊರಗಣಿಂ ಕೋಟೆಯ ಮೇಲೇರಿ ಬಂದು ಭಂಡಾರದೊಳೊಂದೊಂದು ವಸ್ತುವಂ ಸಾಗಿಸುತ್ತಿರಲದಕ್ಕಾರುಂ ನಿಲಿಸಲಾರದಿಪ್ಪುದುಂ ಕಾಮಾಟದ ನಾಯಕನ ಮಗನಂ ಬರಿಸಿ ನಿಮ್ಮ ತಂದೆಯಿದ್ದರೆ ಏನಾದರು ಉಪಾಯವಮಂ ಪೇಳ್ವನೆಂಬುದುಂ ದೇವರ ದಯಮಿರ್ದೊಡೆ ನಮ್ಮ ತಂದೆ ಬರುತ್ತಾನೆ ಎನೆ ಅದು ಹ್ಯಾಗೆನಲು ಕೋಟೆಯ ಮೆತ್ತಿದುದನಗೆಯಿಸಿದೊಡಲ್ಲೇಯಿಪ್ಪನೆನೆ ಆಶ್ಚರ್ಯಂಬಟ್ಟು ತಾನೆ ಪೋಗಿ ಕೀಳಿಸಿ ನೋಳ್ಪುದುಮಲ್ಲಿರ್ದ ನಾಯಕಂ ಪೊರಮಡಲಾತನಂ ಲೇಸು ಮಾಡಿಸಿ ಮೂರು ದಿನದಿಂ ಮೇಲೆ ಸಭೆಗೆ ಬರಿಸಿ ವಿಚಾರವಿಲ್ಲದೆ ನಿನ್ನಂ ಶಿಕ್ಷಿಸಿದೆ ನೀನಾವದರಿಂ ಬದುಕಿದೆ ಕ್ಷಮೆಗೊಳ್ವುದೆಂದು ಪೇಳೆ ನಾಯಕನೆಂದಂ ಸ್ವಾಮಿಯಿಂದೇನುಂ ದೋಷಮಿಲ್ಲ ಕಾಲದೋಷದಿಂ ರಾಜ್ಯಮಂ ಪಾಲಿಸುವರು, ದುಷ್ಟರು ಚೆನ್ನಾಗಿ ಮೂರು ವೇಳೆ ವಿಚಾರಣೆಯಂ ಮಾಡಿ ಆರು ತಪ್ಪಂ ಕ್ಷಮಿಸಿ ಅಲ್ಲಿಂ ಮೇಲೆಯು ಕರುಣಹೃದಯನಾಗಿ ಶಾಸ್ತ್ರೋಕ್ತಮಂ ಕೇಳಿ ಪರಹಸ್ತದಿಂ ಮರ್ದಿಸಿ ಮೈತ್ರಿ ಕಾರುಣ್ಯ ಮಧ್ಯಸ್ಥಮಾಗಿಪ್ಪ ರಾಜಧರ್ಮಮಂ ಬಿಟ್ಟು ಕ್ರೋಧ ಮಾನ ಮಾಯಾ ಲೋಭಮೆಂಬ ಕಷಾಯಮುದಯಿಸೆ ನಿಷ್ಕರುಣಿಗಳಾಗೆ ಸರ್ವ ಭೂಮಿಪತಿಗಳು ಕಾಲಸ್ವಭಾವದಿಂದೆಲ್ಲರುಮವಿಚಾರಿಗಳಾಗಿ ನಾಲ್ಕು ಭಾಗದೊಳೊಂದು ಭಾಗಂ ರಾಜರಿಂ ಲಯಮುಪ್ಪುದೆಂದು ಕಾಲಾದಿ ಜ್ಞಾನಿಗಳಪ್ಪ ಮಹಾನುಭಾವಿಗಳಿಂ ಕೇಳಿರ್ಪೆನದರಿಂ ಕಾಲದೋಷವಲ್ಲದೆ ರಾಜದೋಷವಲ್ಲದೊಡಮವಿಚಾರದೋಷಂ ಪೊರ್ದುಗುಮೆಂತೆಂದೊಡೆ ಅವಿಚಾರಿಯೆಂಬನೋರ್ವ ರಾಜಂ ತನ್ನಿಚ್ಛೆಯಿಂ ರಾಜಧರ್ಮ ಶ್ರವಣವಿಲ್ಲದೆ ರಾಜ್ಯಮಂ ತನ್ನಿಚ್ಛೆಯಿನಾಳುತ್ತಿರಲೊಂದುದಿನ ರಾತ್ರಿಯೊಳೋರ್ವ ಕಳ್ಳನಾ ಪುರಮಂ ಪೊಕ್ಕು ರಾತ್ರಿಯೊಳೊಂದು ಮನೆಗೆ ಕನ್ನಮಂ ಸಮೆಯುತ್ತಿರಲಾ ಭಿತ್ತಿ ಪುರಾಣಂ ಮಳೆಯಿಂದಡಿಯೆಲ್ಲಂ ಸಮೆದಿರ್ದುದರಿಂ ಪತನಮಾಗೆ ಕಳ್ಳಂ ಸಾಯ್ವುದುಂ ಅವಿಚಾರಿ ಕೇಳ್ದಾ ಮನೆಯವನಂ ಬರಿಸಿ ಈತಂಗಾಜ್ಞೆಯಂ ಮಾಡಿಮೆನಲಾತನೆನ್ನಿಂದಾವ ತಪ್ಪೆನೆ ನಿನ್ನ ಮನೆಯ ಗೋಡೆ ಬಿದ್ದು ಕಳ್ಳಂ ಸತ್ತನೆಂಬುದುಂ ಪ್ರಕೃತಮನರಿದಾತನಿಂತೆಂದಂ ಗೋಡೆಯು ನಾನು ಹಾಕಿದುದಲ್ಲ, ಕಾಮಾಟದವರಿಗೆ ಕೂಲಿಯಂ ಕೊಟ್ಟು ಹಾಕಿಸಿದೆನವರು ಘಟ್ಟಿಯಾಗಿ ಗೋಡಿಯ ನಿಕ್ಕದಿರಲೆನ್ನದೃಷ್ಟಮೆಂಬುದು, ಕಾಮಾಟದವರೆಲ್ಲರಂ ಕರೆದಾಜ್ಞೆಯಂ ಮಾಡಿಮೆನೆ ಅವರೆಂದರೆಲೆ ರಾಜಾ ನಾಮುಂ ಗೋಡೆಯನಿಕ್ಕುವಲ್ಲಿ ಸೂಳೆಯೋರ್ವಳೆಡೆಯಾಡುತ್ತಿರಲವಳ ನೋಡುತ್ತ ಗೋಡೆಯನಿಕ್ಕಿದುದರಿಂದೆಮ್ಮೊಳು ದೋಷಮಿಲ್ಲಾ ಸೂಳೆಯ ವಿಚಾರಿಸಿಮೆನಲವಳಂ ಪಿಡಿತಂದಾಜ್ಞೆಯ ಮಾಡಿಮೆನಲವಳು ನಾನುಂ ಅಕ್ಕಸಾಲೆಗೆ ಪೊನ್ನಂ ಕೊಟ್ಟಾಭರಣಮಂ ಮಾಡಿಕೊಡೆಂದೊಡಾತನು ಈಗ ಬಾ ತಿರುಗಿ ಬಾ ಇಂದು ಬಾ ನಾಳೆ ಬಾರೆಂದು ಜಾಲಂ ಮಾಡಿದುದರಿಂದೆಡೆಯಾಡಿದೆ ಯದರಿಂದಂ ತಪ್ಪಾವುದೆನೆ ಅಕ್ಕಸಾಲೆಯನಾಜ್ಞೆಯಂ ಮಾಡೆಂಬುದುಮಾತನೆಂದನೀಕೆ ಕೊಟ್ಟ ಪೊನ್ನೆಲ್ಲಮಂ ಕಟ್ಟಿಕೊಂಡು

ಸಂತೆಗೆ ಚಿನ್ನಮಂ ತರಲ್ಪೋಗೆ ಎನ್ನ ಬಂಡವಾಲು ಸಹಿತಂ ಕಳ್ಳರು ಚೀಲಮಂ ಕೊಯ್ದು ತೆಗೆದುಕೊಂಡುದರಿಂದಸಲಿಲ್ಲದೆ ಈಗ ಆಗ ಬಾರೆಂದೆನುತಿರ್ದೆ ಆದ್ದರಿಂ ಕಳ್ಳರಿಂದ ತಪ್ಪೆಂಬುದುಮಾ ಕಳ್ಳರಂ ತಂದೊಪ್ಪಿಸೆನೆ ನಾನವರಂ ಕಂಡು ತಿಳಿದೊಡೆನ್ನ ದ್ರವ್ಯಮಂ ತೆಗೆದುಕೊಂಬೆನೆನಗೆ ಕಾಣಿಸಿಕೊಳ್ಳರೆಂಬುದುಂ ರಾಯನಿಂತೆಂದಂ ಯಾವ ಸಂತೆಯಲ್ಲಿ ಎಷ್ಟು ಹೊತ್ತಿನಲ್ಲಿ ಯಾರ ನೆರವಿಯೊಳ್ ಬಂದರೆನೆ ಅಕ್ಕಸಾಲೆಯೆಂದಂ ಬೊಬ್ಬೂರ ಸಂತೆಯೊಳು ಮಧ್ಯಾಹ್ನ ಕಳಿದಾಗ ಸಂತೆ ಜನಂಗಳೆಲ್ಲಾ ತುಂಬಿ ಬಹು ಸಂದಣಿವೇಳೆಯೊಳೆ ತೆಗೆದರೆಂಬುದು ಅದೇ ವೇಳೆಯೊಳೆ ಬಪ್ಪರದರಿಂ ನಾಳೆ ಸಂತೆ ತುಂಬಿದ ಆ ವೇಳೆಯೊಳೆ ಐವತ್ತು ಕುದುರೆ ಪೋಗಿ ಮುತ್ತಿ ಒಂದು ಜನಮಂ ಬಿಡದೆ ಪರಿಹರಿಸಿದೊಡಾ ಕಳ್ಳರುಮಲ್ಲೆ ಸಾಯ್ವರೆಂದು ಸಂತೆಯವರೆಲ್ಲರುಮನಾರು ಮಾಣಿಸಲುಂ ಬಿಡದೆ ಪರಿಹರಿಸಿದನಂತಪ್ಪನವಿಚಾರಿಯಲ್ಲದೆ ದೇವರೆನ್ನಂ ಕೋಟೆಯೊಳು ಸೆರೆಯಿಕ್ಕಿದೊಡೇನಾಯ್ತೆಂದುಪಚಾರಮಂ ನುಡಿದ ಕಾಮಾಟದ ವಜ್ರದಾಡನೆಂಬ ನಾಯಕಂಗೆ ಕೋಟೆಯಧ್ಯಕ್ಷಮಪ್ಪ ಕಿಲ್ಲೆಯವೆಂದು ಕೊಟ್ಟು ಪರಸಂಸ್ಥಾನದ ಕಳ್ಳರು ಬಂದು ರಾತ್ರಿವೇಳೆ ಕೋಟೆಯಂ ಲಂಘಿಸಿಯೊಳಗೆ ಕಳವಂ ಮಾಡುವದಕ್ಕಾವುದು ಪಾಯಮೆನಲು ನಾಯಕನೆಂದನಾತಂ ಕೋಟೆಯನೇರುವ ಬಳಿಗೆ ಲೋಳಸರ ಮೊದಲಾದುವಂ ಲೇಪಿಸುವುದೆನಲಂತೆ ಮಾಡಿಪ್ಪುದುಂ ಲಂಘಿಸಿ ಮೇಲೇರುವುದುಂ ಜಾರಿ ಬಿದ್ದು ಅಗಳೊಳು ಸತ್ತನು, ಆ ಕೋಟೆ ಬಾಗಿಲೊಳು ಪಗಡೆಖಾಜಾ ಕೋಟೆ ಬಾಣಾ ಎಂದು ಬರೆದಿದೆ ನಾನುಂ ಡಿಳ್ಳಿಯಿಂ ಪೊರಮಟ್ಟು ನಾನಾ ದೇಶಂಗಳಂ ನೋಡುತ್ತುಂ ವಿದ್ವಾಂಸರಂ ಪರೀಕ್ಷಿಸುತ್ತೆ ಪುಣ್ಯಪಟ್ಟಣಮನೆಯ್ದಿ ಪ್ರಪಾಶಾಲೆಯೊಳು ಪಥಶ್ರಮುವನಾರಿಸುತ್ತಿರ್ದೊಡಲ್ಲಿರ್ದ ತರುಣಿಯೆಂದಳ್.

ವೃತ್ತ || ಮಧ್ಯಾಹ್ನೇ ನಿಬಿಡೇ ನಿದಾಘಸಮಯೇ ತಾಪಂ ರವೌ ಮುಂಚತಿ
ಶ್ಲಾಘ್ಯೇ ಕುಬ್ಜವಟೇ ಸುಶೀತಲತಲೇ ಹೇ ಪಾಂಥ ವಿಶ್ರಾಮ್ಯತಾಮ್
ಏಕಾಕೀ ಚ ಭವಾನಹಂ ಚ ತರುಣೀ ಶೂನ್ಯಾ ಪ್ರಪಾವರ್ತತೇ
ಲಜ್ಜಾ ಮೇ ಭಣಿತುಂ ತ್ವಮೇವ ಚತುರೋ ಜಾನಾಸಿ ಕಾಲೋಚಿತಮ್ ||

ಎಂಬುದಂ ಕೇಳಿ

ವೃತ್ತ || ವಿವೇಕ ವೈರಾಗ್ಯ ಸುಪಾದುಕಾಭ್ಯಾಂ | ಪದೇ ಪದೇ ಸಂಚರತೀತಿಸಾಧುಃ
ಗ್ರಾಮೇಷು ಖೇಡೇಷು ಚ ಪತ್ತನೇಷು | ಸ್ತ್ರೀಕಂಟಕಾಸ್ಸಂತಿ ವಿಚಿತ್ರರೂಪಾಃ||
ಎಂಬೀ ನೀತಿಯಂ ನೆನೆದಾಕೆಯೊಳು ಸದ್ಧರ್ಮಮಂ ಪೇಳ್ವಡೆ||

ಶ್ಲೋಕ || ಸ್ತ್ರೀಣಾಂ ದ್ವಿಗುಣಮಾಹಾರೋ ಬುದ್ಧಿಶ್ಚಾಪಿ ಚತುರ್ಗುಣಾ
ಸಾಹಸಂ ಷಡ್ಗುಣಂ ಚೈವ ಕಾಮಮಷ್ಟಗುಣಂ ಭವೇತ್ ||
ಅನೃತಂ ಸಾಹಸಂ ಮಾಯಾ ಮೂರ್ಖತ್ವಮತಿಲೌಲ್ಯತಾ
ಅಶೌಚಂ ನಿರ್ದಯತ್ವಂ ಚ ಸ್ತ್ರೀಣಾಂ ದೋಷಾಃ ಸ್ವಭಾವಜಾಃ ||

ಆವರ್ತಸ್ಸಂಶಯಾ ನಾಮ ವಿನಯಭವನಂ ಪತ್ತನಂ ಸಾಹಸಾನಾಂ ದೋಷಾಣಾಂ ಸನ್ನಿಧಾನಂ ಕಪಟಶತಮಯಂ ಕ್ಷೇತ್ರಮಪ್ರತ್ಯಯಾನಾಂ ಸ್ವರ್ಗದ್ವಾರಸ್ಯ ವಿಘ್ನಂ ನರಕ ಪುರ ಮುಖಂ ಸರ್ವಮಾಯಾಕರಂಡಂ ಸ್ತ್ರೀಯಂತ್ರಂ ಕೇನ ಸೃಷ್ಟಂ ವಿಷಮಮೃತಮಯಂ ಪ್ರಾಣಿಲೋಕಸ್ಯ ಪಾಂಶಃ

ಶ್ಲೋಕ || ದೀರ್ಘಶೃಂಗಮನಡ್ವಾಹಂ ನಿರ್ಲಜ್ಜಾ ವಿಧವಾ ಸ್ತ್ರೀಯಃ
ಶೂದ್ರಮಕ್ಷರ ಸಂಯುಕ್ತಂ ದೂರತಃ ಪರಿವರ್ಜಯೇತ್ ||
ಅಂಗಾರಸದೃಶಾ ನಾರೀ ನವನೀತಸಮಾ ನರಾಃ
ತತ್ತತ್ಸಾನ್ನಿಧ್ಯ ಮಾತ್ರೇಣ ದ್ರವೇತ್ಪುಂಸಾಂ ಹಿ ಮಾನಸಮ್ ||

ಎಂದೋದುವ ನೀತಿಯಂ ನೆನೆದು ಮೌನಮಂ ತಾಳ್ದು ಏಕಕಾಂತಾ ಗೃಹಂತ್ಯ ಜೇತ್ ಎಂದಲ್ಲಿಂದಂ ಮುಂದಕ್ಕೆ ಪೋಪಿನಂ ಒಂದೆಡೆಯೊಳೋರ್ವ ದ್ವಿಜನಂ ಕಂಡಾತನಂ ನೀನಾರೆಂದು ಬೆಸಗೊಳೆ ನಾಂ ಕರ್ಣಾಟದೇಶದಿಂ ಯಾತ್ರೆ ಬಂದಿರ್ದೆ. ನೀನಾವನೆಂದೊಡೆನ್ನ ಬಂದ ವೃತ್ತಾಂತಮಂ ಸವಿಸ್ತರಂ ಪೇಳ್ದು ಪರಸ್ಪರ ಸ್ನೇಹಮಾಗೆ ಒಂದೇ ಬಳಿಯೊಳಾರೋಗಿಸಿ ನೀನೆನಗೆ ಸನ್ಮಿತ್ರನೆಯೆಂದು

ವೃತ್ತ || ಪಾಪಾನ್ನಿವಾರಯತಿ ಯೋ ಜನಯೇತ್ ಹಿತೇಷು | ಗೋಪ್ಯಂ ಚ ಗೂಹತಿ ಗುಣಾನ್ ಪ್ರಕಟೀಕರೋತಿ
ಆಪದ್ಗತಂ ಚ ನ ಜಹಾತಿ ದದಾತಿ ಕಾಲೇ | ಸನ್ಮಿತ್ರ ಲಕ್ಷಣಮಿದಂ ಪ್ರವದಂತಿ ಸಂತಃ ||

ಶ್ಲೋಕ || ದದಾತಿ ಪ್ರತಿಗೃಹ್ಣಾತಿ ಗುಹ್ಯಮಾಖ್ಯಾತಿ ಪೃಚ್ಛತಿ
ಭುಂಜ್ತೇ ಭೋಜಯಚೈವ ಷಡ್ವಿಧಂ ಮಿತ್ರ ಲಕ್ಷಣಮ್ ||

ವೃತ್ತ || ಕ್ಷೀರೇಣಾತ್ಮಗತೋದ ಕಾಯ ಹಿ ಗುಣೋ ದತ್ತಃ ಪುರಾತೇ ಖಿಲಾಃ
ಕ್ಷೀರೋತ್ತಾಪಮವೇಕ್ಷ್ಯ ತೇನ ಪಯಸಾ ಸ್ವಾತ್ಮಾಕೃಶಾನೌ ಹುತಃ
ಗಂತುಂ ಪಾವಕಮುನ್ಮನಸ್ತದಪರಂ ದೃಷ್ಟ್ವಾತು ಮಿತ್ರಾಪದಂ
ಯುಕ್ತಂ ತೇನ ಜಲೇನ ಶಾಮ್ಯತಿ ಪುನಃ ಮೈತ್ರೀ ಸತಾಮಿದೃಶೀ ||

ಇಂತಪ್ಪ ಮಿತ್ರನಿಂದಾವುದುಮಧಿಕಮಿಲ್ಲೆಂದು ನಿಶಾಸಮಯದೊಳೊಂದು ಧರ್ಮಶಾಲೆಯೊಳುಪವಿಷ್ಟರಾಗೆ ಆತಂ ನಿಮ್ಮ ಪೆಸರಾವುದೆಂದೆನ್ನಂ ಕೇಳ್ವುದುಂ ನಾಂ ಪುಟ್ಟಲೆಮ್ಮ ಮಾತಾಪಿತೃಗಳಭಿರಾಮನೆಂದು ಪೆಸರಿಟ್ಟರಾನುಂ ಚತುರ್ಭಾಷಾ ಶಬ್ದ ಪಾರಂಗತನಾಗಿ ತರ್ಕಕರ್ಕಶಾಹಸ್ಕರನಾಗಿ ಬಂದ ಪ್ರಭಾಕರ ಕಾಣಾದ ಚಾರ್ವಾಕ ಬೌದ್ಧರೀ ನಾಲ್ಕು ಮತದವರನೇಕ ಸಮಯದೊಳೆ ರಾಹು ಕೊಂಡಂತೆ ದಿಙ್ಮೂಢರಂ ಮಾಡಿ ಜಯಿಸಿದಾಗಳೆಲ್ಲರುಂ ಚತುರ್ಮುಖಶಾಸ್ತ್ರಿಯೆಂದು ಕರೆದರಾ ನಾಮದಿಂದಲೆ ಕರೆವರೆಂದು

ಪೇಳ್ದೊಡಾತಂ ತನ್ನ ಪೆಸರು ಶಂಕರಭಟ್ಟನೆನಲು

ಶ್ಲೋಕ || ಧರ್ಮಸಾಸ್ತ್ರ ವಿನೋದೇನ ಕಾಲೋ ಗಚ್ಛತಿ ಧೀಮತಾಮ್
ಇತರೇಷಾಂ ಮನುಷ್ಯಾಣಾಂ ನಿದ್ರಯಾ ಕಲಹೇನ ವಾ ||

ಎಂಬುದರಿಂದೊಂದು ಧರ್ಮಪ್ರಸಂಗದಿಂ ಪೊತ್ತುಗಳೆವಂ ಮನುಷ್ಯತ್ವ ಜೀವಕ್ಕತಿದುರ್ಲಭಮಲ್ಲಿ

ವೃತ್ತ || ಮಾನುಷ್ಯಂ ವರವಂಶಜನ್ಮವಿಭವೋ ದೀರ್ಘಾಯುರಾರೋಗ್ಯತಾ
ಸಮ್ಯಙ್ಮಿತ್ರ ಕಲತ್ರ ಪುತ್ರನಿಚಯೋ ಭಕ್ತಿಶ್ಚ ರತ್ನತ್ರಯೇ
ವಿದ್ವತ್ವಂ ಸುಜನತ್ವಮಿಂದ್ರಿಯದಮಃ ಸತ್ಪಾತ್ರದಾನೇ ರತಿ
ಸ್ತೇಪುಣ್ಯೇನ ವಿನಾ ತ್ರಯೋದಶಗುಣಾಃ ಸಂಸಾರಿಣಾಂ ದುರ್ಲಭಾಃ ||

ಮಾನುಷ್ಯೇ ಸತಿ ದುರ್ಲಭಾಃ ಪುರುಷತಾ ಪುಂಸೇ ಪುನರ್ವಿಪ್ರತಾ ಎಂದು ಪ್ರತಿಯಂ ಮಾಡಿದರಾದೊಡಂ ಸಮ್ಯಗ್ಮಿತ್ರ ಕಲತ್ರ ಪುತ್ರನಿಚಯಂ ದೊರೆವುದರಿಂದದರಿಂ ಸಂಸಾರಸಮುದ್ರದೊಳ್ ಮುಳುಗಿ ನರಕ ತಿರಿಕದೊಳೆ ತೊಳಲುವನೆಂದು ಪುರುಷಂ ಸ್ತ್ರೀಯರಂ ದುಶ್ಚರಿತ್ರರಂ ಬಿಡುವುದೆ ಕಾರ್ಯಮೆಂದು ಪೇಳಲಾತನೆಂದಂ

ಶ್ಲೋಕ || ವಸ್ತ್ರಂ ಮುಖ್ಯಸ್ತ್ವಲಂಕಾರೋ ಘೃತಮುಖ್ಯಂ ತು ಭೋಜನಮ್
ಗುಣೋ ಮುಖ್ಯಂ ತು ನಾರೀಣಾಂ ವಿದ್ಯಾ ಮುಖ್ಯಂ ತು ಬ್ರಾಹ್ಮಣಾಃ ||

ವೃತ್ತ || ವಿವಾದಶೀಲಾಂ ಸ್ವಯಮರ್ಥ ಚೋರಿಣೀಂ
ಪರಾನುಕೂಲೀಂ ಬಹುಪಾಕಪಾಕಿನೀಮ್
ಆಕ್ರಂದಿನೀಮನ್ಯಗೃಹ ಪ್ರವೇಶಿನೀಂ
ತ್ಯಜೇತ್ಕುಭಾರ್ಯಾಂ ದಶಪುತ್ರಮಾತರಂ ||

ಎಂಬ ನೀತಿಯುಂಟಾಗಿಯು ಸರ್ವೇ ಸ್ತ್ರೀಷುವಶಾಃ ಎಂಬುದರಿಂ

ವೃತ್ತ || ಶಂಭು ಸ್ವಯಂಭು ಹರಯೋ ಹರಿಣೇಕ್ಷಣಾನಾಂ
ಯೇನಾಕ್ರಿಯಂತ ಸತತಂ ಗೃಹಕುಂಭದಾಸಾಃ
ವಾಚಾಮಗೋಚರ ಚರಿತ್ರ ವಿಚಿತ್ರಿತಾಯ
ತಸ್ಮೈ ನಮೋ ಭಗವತೇ ಮಕರಧ್ವಜಾಯ ||
ಶ್ರೂಯತೇ ಚ ನು ಪರವಶಃ ಪ್ರಜಾಪತಿರಾತ್ಮದುಹಿತರಿ
ಹರಿರ್ಗೋಪವಧೂಷು ಹರಶ್ಶಂತನುಕಲತ್ರೇ
ಸುರಪತಿ ಗೌತಮಭಾರ್ಯಾಯಾಂ
– ಚಂದ್ರಶ್ಚ ಬೃಹಸ್ಪತಿಪತ್ನ್ಯಾಂ ರವಿಃ ಕನ್ಯಾಯಾಂ ಚೇತಿ ||

ಎಂಬ ವಾಕ್ಯಂ ಪ್ರಮಾಣಂ ಘಟಿಯಿಸದು

ಶ್ಲೋಕ || ಪತಂಗ ಭೃಂಗ ಸಾರಂಗ ಗಜ ವೈಸಾರಿಣೋ ಯಥಾ
ಭುಜಂಗಮಾಃ ಪಕ್ಯೈಕಾಕ್ಷೇಣ ನಶ್ಯಂತಿ ಸರ್ವೇ ಕಿಂ ವಾ ನ ನಶ್ಯತಿ ||

ಸ್ತ್ರೀ ವಶಗತನಾದವಂಗಶುಚಿತ್ವಮುಂ ದುರ್ಗತಿಯುಂ ತಪ್ಪದಪ್ಪುದೆನೆ

ಶ್ಲೋಕ || ಕಾಮಃ ಪುಣ್ಯವಶಾಜ್ಞಾತಃ ಕಾಮಿನೀಪುಣ್ಯಪ್ರೇರಿತಾ
ಸೇವ್ಯಾಸೇವ್ಯಂ ನ ಕರ್ತವ್ಯಂ ಸ್ತ್ರೀರತ್ನಂ ದುಷ್ಕಲಾದಪಿ ||
ಅಜಾಶ್ವೌ ಮುಖತೋ ಮೇಧ್ಯೌ ಗಾವೋಮೇಧ್ಯಾಸ್ತು ಪೃಷ್ಠತಃ
ಬ್ರಾಹ್ಮಣಃ ಪಾದತೋಮೇಧ್ಯ ಸ್ತ್ರೀಯೋ ಮೇಧ್ಯಾಸ್ತು ಸರ್ವತಃ ||

ಎಂದು ಕಾಮಿಗಳು ಪಾಪಕ್ಕಂಜದೆ ವ್ಯಸನಿಗರಾಗಿ ತಮಗಿಚ್ಛೆಯಾದ ವಸ್ತುವಂ ಸರ್ವೋತ್ಕೃಷ್ಟಮಾಗಿ ಯೋಗ್ಯತೆಯೆಂದು ಪೊಗಳ್ವರದು ಪ್ರಮಾಣಮಲ್ಲಮೆಂದು ಹೆಂಡತಿಯ ಮೋಹಕ್ಕೆ ಅತ್ತೆಯ ಸುಲಿದ ಶ್ವಾನ ಕಣ್ಣ ನೆಕ್ಕಿದನೆಂಬಂತೆ.

ವೃತ್ತ || ಮುಖಂ ಶ್ಲೇಷ್ಮಾಗಾರಂ ತದಪಿಶಶಾಂಕೇನ ತುಲಿತಂ
ಸ್ತನೌ ಮಾಂಸಗ್ರಂಥೀ ಕನಕಕಲಶಾವಿತ್ಯುಪಮಿತೌ
ಸ್ರವನ್ಮೂತ್ರಕ್ಲಿನ್ನಂ ಕರಿವರಶಿರಸ್ಪರ್ಧಿ ಜಘನಂ
ಮುಹುರ್ನಿಂದ್ಯಂ ರೂಪಂ ಕವಿವರವಿಶೇಷೈರ್ಗುರು ಕೃತಮ್ ||

ಶ್ಲೋಕ || ನಾರೀ ಜಘನರಂಧ್ರಸ್ಥವಿಣ್ಮೂತ್ರಮಯ ಚರ್ಮಣಾ
ವರಾಹ್ಯೆ ಇವ ವಿಡ್ಭಕ್ಷೀ ಹಂತ ಮೂಢ ಸುಖಾಯತೇ ||
ನಾನಾ ಜನಪ್ರಣೀತಾರ್ದ್ರೇ ವೇಶ್ಯಾ ಮುಖ ಪತದ್ಗೃಹೇ
ಅಧರ ಗ್ರಹ ಸಂಪ್ರೀತಿಃ ಸುದೀಯಃ ಕಸ್ಯ ಜಾಯತೇ ||

ಆರ್ಯೆ || ಯೋ ನ ಚ ಯಾತಿರ್ವಿಕಾರಂ | ಯುವತೀಜನೈಃ ಕಟಾಕ್ಷಬಾಣ ವಿದ್ಧೋಽಪಿ
ಸತ್ವೇನ ಶೂರಶೂರೋ ರಣ | ಶೂರೋ ನೋ ಭವೇಚ್ಛೂರಃ ||

ಒಬ್ಬ ಬ್ರಾಹ್ಮಣನ ಪೆಂಡತಿ ಗಂಡನೊಳ್ ಕಲಹಮಂ ಮಾಡುತ್ತಾ ದಿನಂಪ್ರತಿ ಒಂದೊಂದು ಮಡಕೆಯನಾತನ ತಲೆಯ ಮೇಲೆ ಒಡೆಯುತ್ತಿಪ್ಪುದುಂ ನಿತ್ತರಿಸಲಾರದೆ ಕಾಶೀಯಾತ್ರೆಯಂ ಪೋಗಲೆಂದು ಕೆಲದೂರಂ ಪೋಗಿ ಒಂದೂರ ಬ್ರಾಹ್ಮಣನ ಮನೆಯೊಳ್ ತಳುಗಲಾ ಬ್ರಾಹ್ಮಣನ ಸತಿಯತಿದುಷ್ಟೆ ಗಂಡನೊಳ್ ಕಲಹಮಂ ಪಣ್ಣಿ ಗಂಡನ ತಲೆಯ ಮೇಲೊಂದು ಮಡಕೆಯನೊಡೆದು ಕೆಲಹೊತ್ತಿನ ಮೇಲೆ ಮಡಕೆ ಕ್ರಯಮಂ ಬೇಡಿಯತಿನಿಷ್ಠೂರಮಂ ಮಾಡುತ್ತಿಪ್ಪುದುಂ ಕಾಶೀಯಾತ್ರೆ ಪೋಗಲಿರ್ದವನಿಂತೆಂದು ನೆನೆದಂ

ಶ್ಲೋಕ || ಅಹೋಗುಣವತೀ ಭಾರ್ಯಾ ಭಾಂಡ ಮೌಲ್ಯಂ ನ ಯಾಚತಿ
ಸಹ ಸಾಣಿ ಚ ಭಾಂಡಾನಿ ಭಿನ್ನಾನಿ ಮಮ ಮಸ್ತಕೇ ||

ಎಂದು ತನ್ನ ಗೃಹಮಂ ಪೊಕ್ಕನಂತಲ್ಲದೆ ಮತ್ತೊಬ್ಬ ಪಾರ್ವನ ಪೆಂಡತಿಯತಿ

ದುಷ್ಟೆಯಾಗಿರಲಾತಂ ನಿತ್ಯಯಾತ್ರೆಯಿಂ ಜೀವಿಸುತ್ತೊಂದು ಪಗಲು ನಿತ್ಯಯಾತ್ರೆಯೊಳು ಬೀಯಮಂ ಪಡೆಯದೆ ದೂರಂ ಸಂಚರಿಸಿ ಅಪರಾಹ್ನಮಾಗಿ ಬರೆ ಆತನ ಪೆಂಡತಿ ಪೊಸ್ತಿಲ ನೊದೆಗಾಲಿಂಗೊರೆಯುತ್ತುಂ ಮಲಗಿರ್ದಳನೆಬ್ಬಿಸಿ ಕಾಲದೆಶೆ ನಿಂದು

ವೃತ್ತ || **ಪಾಕಂ ಕಿಂ ನ ಕರೋಷಿ ಪಾಪಿನಿ ಕುತಃ ಪಾಪೀ ತ್ವದೀಯಃ ಪಿತಾ**
ರಂಡೇ ಜಲ್ಪಸಿ ಕಿಂ ತ್ವದೀಯಜನನೀ ರಂಡಾ ತ್ವದೀಯಸ್ವಸಾ
ನಿರ್ಗಚ್ಛ ಸ್ವಗೃಹಾತ್ಕುತಸ್ತವ ಗೃಹಂ ಯಾಹಿ ತ್ವಮೇವಾಧುನಾ
ಹಾ ಹಾ ನಾಥ ಮಮಾದ್ಯ (?) ಮೇವ ಮರಣಂ ಶಷ್ಟಂ ಮದೀಯಂ ಗತಮ್ ||

ಅದಲ್ಲದೆ ಕಾಷ್ಠಾಷ್ಟಮೆಂಬೂರೊಳು ಭೂತಮತಿಯೆಂಬ ವಿಪ್ರಂ ಮುಂಜಿಗಟ್ಟಲು ಮೂವತ್ತು ವರುಷಂಬರಂ ವೇದಮಂ ಪಠಿಯಿಸಿ ಚೆನ್ನಾಗಿ ಸಾಂಗಾಧ್ಯಯನಮಾಗೆ ಬಳಿಕ ಮೂವತ್ತು ವರುಷಂಬರಂ ಶಿಷ್ಯರ್ಗುಪದೇಶಂಗೈದನಂತರಂ ಯಜ್ಞೆಯೆಂಬ ಚನ್ನೆಯಪ್ಪ ಕನ್ನೆಯಂ ಮದುವೆಯಾಗಿರ್ದು ಕೆಲವಾನು ದಿವಸದಿಂದತ್ತಲು ಪೌದನಾಪುರಾಧಿಪತಿ ಯಾಗಮಂ ಮಾಡಲೆಂದು ಯೋಗ್ಯರಂ ಬರವೇಳಲು ಭೂತಮತಿ ಪೋಗಲುದ್ಯುಕ್ತನಾಗಿ ತನ್ನ ವಲ್ಲಭೆ ಯಜ್ಞೆಯಂ ಮನೆಯ ಕೋಣೆಯಿಂ ಪೊರಮಡಲಾಗದೆಂದುಂ ತನ್ನ ಛಾತ್ರನಪ್ಪ ಯಜ್ಞನಂ ನಡುಮನೆಯ ಜಗಲಿಯಿಂ ಕೋಣೆಗೆ ಪೋಗಲಾಗದೆಂದುಂ ಒಬ್ಬ ಬ್ರಾಹ್ಮಣಂ ಕಳ್ಳ ಸಿಕ್ಕಿದನೆಂದು ತೆಂಗಿನ ಮರಕ್ಕೆ ಮಡಿಯ ಧೋತ್ರಮಂ ಕಟ್ಟಿ ಪುರಕೆ ಬಂದು ಪೇಳ್ದ ಮತಿಹೀನ ಬ್ರಾಹ್ಮಣನಂತೆ ತನ್ನ ಪೆಂಡತಿ ಯಜ್ಞೆಗಂ ಛಾತ್ರಂ ಯಜ್ಞಂಗಂ ನಿಯಮಾಜ್ಞೆಯಂ ಕೊಟ್ಟು ಭೂತಮತಿ ಪೌದನಾ ಪುರಕ್ಕಂ ಪೋಗಲಿತ್ತಲು ಯಜ್ಞೆ ಯಜ್ಞಂಗೆಂದಳು, ಎನ್ನ ವಿಳಾಸ ವಿವೇಕತೆ ಎನ್ನ ಸೊಬಗೆನ್ನ ರೂಪೆನ್ನ ಗಾಡಿಯುಳ್ಳವಳು ಯೌವನನಪ್ಪನೆನ್ನೊಳೋತು ಕೂಡೆ ಸಫಲವಪ್ಪುದದರಿಂ ವೃದ್ಧನೊಳೊಪ್ಪದು ನೀನೆನ್ನೊಳೆ ಕೂಡಿ ಈ ರಾತ್ರಿ ಸುಖಾಮೃತದೊಳೋಲಾಡೆಂದು ಬಂದು ತಕ್ಕೈಸುವುದುಂ ಯಜ್ಞನಿಂತೆಂದಂ

ನೀನಪ್ಪೊಡೆ ಗುರುವಿನ ಸತಿ
ಈ ನುಡಿ ನಿನಗುಚಿತಮಲ್ತು ಲೋಕಂ ಪಳಿಗುಂ
ಭೂನಾಥಂ ದಂಡಿಪನಭಿ
ಮಾನದ ಕೇಡಕ್ಕುಮೆಯ್ದೆ ನರಕಕ್ಕಿಳಿಗುಂ

ಎಂಬುದುಂ ಧೂರ್ತೆ ಗಹಗಹಿಸಿ ನಕ್ಕು ಪುಣ್ಯಂ ಪಾಪಂ ಸ್ವರ್ಗಂ ನರಕಮೆಂದು ಮಾಡಿದ ಧೂರ್ತನ ಮಾತಿಂಗೆ ಮರುಳಾದ ಪರಿಯ ನೋಡಾ ಪುಣ್ಯ ಪಾಪಮೆಂಬೆರಡರ ಬಣ್ಣಮಾವುದುಮವಂ ಬಲ್ಲವರಾರು ಸ್ವರ್ಗ ನರಕಮೆಲ್ಲಿಪ್ಪವಂ ಕಂಡು ಬಂದವರಾರು ಬರಿಯ ಮಾತಿಂಗೆ ಬೆಗಡುಗೊಂಡಿಪ್ಪ ಮೂರ್ಖನಂ ಕಂಡೆನೀಗಳಕಟಾ ವೃಥಾ ಸಂಸಾರ ಸುಖಕ್ಕಿತರನಾಗಿ ಜನ್ಮಮಂ ವ್ಯರ್ಥ ಮಾಡಿ ಕೆಡದೆನ್ನೊಳೆ ಕೂಡಿ ಸುರತಾಮೃತಾರ್ಣವ ದೊಳೋಲಾಡಿ ನಿಶ್ಚಿಂತಮಾಗಿರದೆ ಭ್ರಮೆಗೊಂಡಂತೆ ಮೂಗುವಟ್ಟಿರಲಾಗದೆಂದು ಮತ್ತಮೀ

ಪ್ರಾಯದೊಳು ತರುಣಿಯರೊಳೋಲಾಡಿ ಪಡೆವ ಸುಖಂ ಮುಪ್ಪಿನೊಳಪ್ಪುದೆ ಎಂದು ನಾನಾ ಬಗೆಯೊಳಾತನನೊಡಂಬಡಿಸಿ ಸಂಭೋಗಕೇಳೀವಿನೋದದಿಂ ಕುರಿ ಬಾಳೆಯಪಣ್ಣಂ ಮೆಚ್ಚಿದಂತೆ ಮೆಯ್ಯರಿಯದೆ ಮನೆಯ ವಾರ್ತೆಯಂ ಮರೆದು ಲಜ್ಜೆಯಂ ತೊರೆದಿರುತ್ತಿರಲು ಕೆಲವಾನು ದಿವಸಕ್ಕೆ ಉಪಾಧ್ಯಾಯಂ ಬಪ್ಪ ದಿನಮಾಗೆ ಲೆಕ್ಕಂ ಮರೆದ ಗಣಕನಂತೆ ಮುಗಿಲ್ ಕವಿದಂತೆ ಚಿಂತಾಕ್ರಾಂತನಾಗಿರ್ದ ಯಜ್ಞನಂ ಕಂಡು ಯಜ್ಞೆಯೆಂದಳಿಂತೇಕೆ ಚಿಂತಿಪೆ ಇಂದಿನಿರುಳು ಎರಡು ಪೆಣನಂ ತಂದು ಉಪಾಧ್ಯಾಯಂ ನಿಯಮಿಸಿದ ಠಾವಿನೊಳರಿಸಿ ಧನಮೆಲ್ಲಮಂ ಕೊಂಡು ಮನೆಗಗ್ನಿಪ್ರವೇಶಂ ಮಾಡಿ ಪೋಪಮೆಂದಾತೆರದಿಂದೀರ್ವರುಂ ದೇಶಾಂತರಂ ಪೋಗಲಿತ್ತಲು ವಿಪ್ರಂ ಬಂದು ಬೆಂದಿರ್ದ ಮನೆಯಂ ಕಂಡು ಇಂತೆಂದಂ

ಶ್ಲೋಕ || **ಯಾವದಸ್ಥಿಮನುಷ್ಯಾಣಾಂ ಗಂಗಾತೋಯೇಷುತಿಷ್ಠತೇ**
ತಾವದ್ವರ್ಷ ಸಹಸ್ರಾಣಿ ಪಿತಾ ಸ್ವರ್ಗೇಮಹೀಯತೇ ||

ಇವರೆನ್ನಾಜ್ಞೆಯಂ ಮೀರದಳಿದರಿವರ್ಗೆ ಪುಣ್ಯಮಂ ಮಾಡಿಕೊಡುವೆನೆಂದೆರಡೆಡೆಯಸ್ಥಿಗಳನಾಯ್ದೆರಡು ಕುಂಭದೊಳಿಕ್ಕಿ ಕರದ್ವಯದಿಂ ಧರಿಸಿ ಕಾಶಿಯ ಗಂಗೆಯನೆಯ್ದುವ ಮಧ್ಯ ಸಂದಿಗ್ಧ ಬಟ್ಟೆಯೊಳೆ ಈರ್ವರುಂ ಸಂಧಿಸೆ ಯಜ್ಞಂ ಭಯಸ್ಥನಾಗಿ ಯಜ್ಞೆ ಸಹಿತಂ ಭೂತಮತಿಯ ಪಾದಂಗಳಿಗೆ ಸಾಷ್ಟಾಂಗ ವಿನತನಾಗೆ ನೀನಾರೆಂದು ಭೂತಮತಿ ಬೆಸಗೊಳೆ ತಿಳಿದನೆಂದಂಜಿ ಸ್ವಾಮಿಯೇ ನಾಂ ನಿಮ್ಮ ಭಾತ್ರನಪ್ಪ ಯಜ್ಞನೀಕೆಯೇ ನಿಮ್ಮ ಧರ್ಮಪತ್ನಿ ಯಜ್ಞೆಯೆಂಬುದುಂ ಪಾರ್ವನವರ್ಗೆ ಪುಣ್ಯಸಂಪಾದನಾರ್ಥಮವರಸ್ಥಿಯಂ ಕೊಂಡು ಪೋಗುವಲ್ಲಿ ಧೂರ್ತನೆನ್ನ ಚಾಳಿಸಲಾಡುವನೆಂದು ಕೋಪಿಸುತ್ತಂ ಪೋಗುತ್ತಿರಲು ಯಜ್ಞೆಯಡ್ಡನಿಂದಾಂ ಬ್ರಾಹ್ಮಣಸುತೆಯೆನ್ನ ಪಿತೃಗಳು ಈತನೆಮ್ಮತ್ತೆಯ ಮಗನೀತಂಗೆ ಕೊಡಲೆಂದೀತನಂ ಮನೆಯೊಳಿಟ್ಟುಕೊಂಡಿದ್ದು ಮದುವೆ ಲಗ್ನದೊಳೆ ಪಿತೃಗಳಳಿವುದುಂ ನಾನುಮೀತನುಮೊಂದಾಗಿರ್ದು ಶೈಶವಂ ಪೋಗಲೆನ್ನೊಡನೆ ರಮಿಸಲುದ್ಯೋಗಿಸೆ ನಿನಗೆನ್ನಾ ಧಾರಾಪೂರ್ವಕವಾಗಿ ಯಾರಾದರು ಕುಡಲು ಗ್ರಹಿಪೆನಲ್ಲದೊಡೆ ಕೂಡೆನೆಂದಿರ್ದುದರಿಂದೀತನಿಂತು ನುಡಿದನದರಿಂ ಯೋಗ್ಯರ್ ನೀವೆನ್ನನೀತಂಗೆ ತುಲಸಿ ಸಲಿಲಧಾರೆಯಿಂ ಕೊಟ್ಟು ಕನ್ಯಾದಾನ ಫಲಮಂ ಕೊಂಬುದೆಂದಡ್ಡಗೆಡೆಯೆ ತುಲಸಿದಳಯುಕ್ತದಿಂದಾತಂಗೆ ಧಾರೆಯನೆರೆದು ಪೊಗಲೀರ್ವರು ದಂಪತಿಗಳು ಯೋಗ್ಯತೆಯಿಂ ಕಾಮ ಭೋಗದೊಳೋಲಾಡಿದರ್ ಅದರಿಂ ಸ್ತ್ರೀಯರ ಬುದ್ಧಿಚಾತುರ್ಯಮನಾರ್ ಅರಿವರೆಂದು ಮತ್ತೊಂದು ಕಥೆಯಂ ಪೇಳ್ದನೆಂತೆಂದೊಡೆ

ಸೌರಾಷ್ಟ್ರದೇಶದ ಕೋಟಿಗ್ರಾಮದೊಳು ಗಾರ್ಗ್ಯೋಪಾಧ್ಯಾಯರನೇಕ ವೇದಶಾಸ್ತ್ರ ಪಾರಂಗತರಾಗಿ ಐನೂರು ಜನ ಶಿಷ್ಯರ್ಗಮಧ್ಯಯನಮಂ ಪೇಳುತ್ತಿರಲೋರ್ವ ದೇಶಾಂತರದರಸುಮಗಂ ಬಂದು ಶಬ್ದಾಗಮಮಂ ಕಲಿಯುತ್ತಿರಲೊಂದು ದಿನಂ ಮಠದಲ್ಲಿ ಅಧ್ಯಾಪನಗೆಯ್ಯುತ್ತೆ ರಾತ್ರಿ ತಡೆದಿಪ್ಪುದುಮಾತನ ಪೆಂಡತಿಯೊಂದು ಸಣ್ಣ ಮಗುವಂ ಬಿಟ್ಟು ಜಾರತ್ವಕ್ಕೆ ಪೋಗದಿರ್ದು ಪೊತ್ತು ಕಳೆದುದೆಂದಾ ಮಗುವನೆತ್ತಿಕೊಂಡು ಪೋಗು

ತ್ತಿರಲಿದಿರೊಳುಪಾಧ್ಯಾಯರ್ ಬಂದೆಲ್ಲಿಗೆ ಪೋಗುವೆಯೆಂಬುದುಂ ನಿಮ್ಮಲ್ಲಿಗೆ ಬಂದೆನದೇಕೆಂದೊಡೀ ರಾತ್ರಿಯೊಳು ಪ್ರಭುವಿನ ಪಟ್ಟಸ್ತ್ರೀ ಭಾಗವತದಾಟವನಾಡಿಸುವಳಲ್ಲಿಗೆನ್ನಂ ಬಪ್ಪುದೆಂದು ನಾಲ್ಕಾರು ವೇಳೆ ಸಖಿಯರಂ ಕಳುಹಿಸಿದಳದರಿಂ ಪೋಗಲು ನೀವಿನಿತು ಪೊತ್ತೇಕೆ ತಡೆದಿರ್ದಿರೆಂದಾಗ್ರಹಿಸಿ ನುಡಿದು ನಾನು ಬಪ್ಪನ್ನೆವರಂ ಮಗುವಂ ತಡೆದಿರಿಯೆಂದುಪಾಧ್ಯಾಯರಿಂ ತಾಂಬೂಲಂಗೊಂಡು ಸಂಕೇತಾಗಾರಮನೆಯ್ದಿ ಬಂದೊಡನಿರ್ದ ರಾಜಕುಮಾರನೀಕೆಯುಂದವಮಂ ನೋಳ್ಪೆನೆಂದು ಗೂಢದಿಂದವಳ ಪಿಂದೆ ಪೋಗಿ ನೋಡುತ್ತಿರ್ಪುದು ಪಾಳ್ಮನೆಯೊಳಿರ್ದುಪಪತಿಯವಳು ತಡೆದುದಕ್ಕತಿಕೋಪಾರೂಢನಾಗಿ ಎಡಗಾಲಿಂದೊದೆದು ತಿರಸ್ಕರಿಸಲು ತಾನುಂ ಬಂದ ವೃತ್ತಕಮಂ ಪೇಳಿ ಚೇಷ್ಟೆಗೆಯ್ದು ವಚನರಚನೆಯಿಂ ತಿಳಿಸಿ ಕೂಡಿದಾಗಳಾ ಪಾಣ್ಬಂ ಕ್ರೀಡಿಸುತ್ತಲೀಗಂ ನಿನಗೆ ಹೇಗೆಯಿದೆ ಎನಲು ಮಹಾ ಆನಂದಮಾಗಿ ಈರೇಳು ಲೋಕಗಳು ಪ್ರತ್ಯಕ್ಷಮಾಗಿ ಕಂಡಂತಪ್ಪುದೆಂಬ ಮಾತಂ ಪೊರಗೆ ಕತ್ತೆಯನರಸುತ್ತ ಬಪ್ಪ ಮಡಿವಾಳಿಯೆಂದನೆಲೆ ಮಹಾ ಸತ್ಯವಂತೆ ಪುಣ್ಯಪುರುಷೆ ಈರೇಳು ಲೋಕಮಂ ಕಂಡ ಮಹಾತಾಯೆ ಎನ್ನದೊಂದು ಕುಂಟಗತ್ತೆಯಂ ಕಾಣಲಿಲ್ಲವೆ ಎಂಬುದುಂ ಮೌನದೊಳಿರ್ದು ಸ್ವಗೃಹದೊಳೆ ತನ್ನ ಪತಿಯಿರೆ ತಾವಲ್ಲಿಯೆ ಕೂಡುವ ಉಪಾಯಮಂ ಕಲಿಸೆ ಪಾಣ್ಬನವಳ್ಗೆ ಮುಸುಕಿಟ್ಟು ಪಿಂದೆ ಮೌನದಿಂ ಬರಲು ಬಂದು ಗಾರ್ಗೋಪಾಧ್ಯಾಯರ ಗೃಹಕ್ಕಂ ಬಂದವರ ಪೆಸರ್ಗೊಂಡು ಕರೆದು ಪಡಿಯಂ ತೆಗೆಯಿಸಿ ನಿಮ್ಮ ಕೀರ್ತಿ ಬಹುದೂರ ವ್ಯಾಪಿಸಿರ್ದುದರಿಂದಾಂ ಪರದೇಶದ ಬ್ರಾಹ್ಮಣಂ ಯಾತ್ರಾರ್ಥಂ ದಂಪತಿಗಳು ಬಂದಿಪ್ಪೆವು ಪುರದೊಳೆಲ್ಲಂ ನಿದ್ರಾಮುದ್ರಿತರಾಗಿಪ್ಪರ್. ಅದರಿಂದೀ ರಾತ್ರಿ ಕಳಿವನ್ನಂ ಸ್ಥಳಮಂ ದಯಗೆಯ್ದೊಡಂ ಭವದೀಯಾವಾಸದೊಳಿರ್ದು ಬೆಳಗಿನ ಮುನ್ನಮೆ ಪೋಪೆವೆನಲೆಂದ ನೆಮ್ಮಾಕೆಯರಮನೆಗೆ ಪೋಗಿದಾಳೆ ಬಂದರೆ ಕೋಣೆಯೊಳಿದಾಳೆಯದರಿಂ ನಡುಮನೆಯೊಳೊಂದು ಪ್ರದೇಶದೊಳೆ ಶಯನಂ ಮಾಡಿಮೆಂದವರಂ ಪಾಸಿನೊಳೊರಗಿಸಿ ತಾನು ಮಗುವೆರಸಿ ಮಲಗಿಪ್ಪುದುಮೊಂದು ಪೊತ್ತಿನೊಳೆ ಕೂಸು ಬಹಳ ಚಂಡಿಯಿಂದಳುತ್ತಿಪ್ಪುದುಂ ಉಪಾಧ್ಯಾಯರು ತಮ್ಮ ಕಲತ್ರಂ ಬರದೆ ತಡೆದುದಕ್ಕಂ ಕೋಪಿಸೆ ಪಾಣ್ಬಂ ಮೆಲ್ಲನಿಂತೆಂದನೆನ್ನ ಭಾರ್ಯೆಯೊಂದು ಶಿಶುವಂ ಪಡೆದಿರ್ದು ಅದು ಪೋಗಲಂದಿಂದಂ ಎದೆಯೊಳುಂ ಪಾಲುಂ ಪೋಗದಿಪ್ಪುದಾ ಮಗುವಂ ನಂಬಿಸಲು ದಯಮಾಳ್ಪುದೆಂದು ತಾನು ಬಂದಾ ಮಗುವನೆತ್ತಿಕೊಂಡದರ ತಾಯೊಳ್ಕೂಡಿಸೆ ಸುಮ್ಮನಾಯ್ತುದಕ್ಕಮುಪಾಧ್ಯಾಯಂ ಸಂತೋಷದಿಂ ನಿದ್ರೆಗೆಯ್ಯುತ್ತಿಪ್ಪುದುಮುಷಃ ಕಾಲಕ್ಕಂ ಮುನ್ನಲೆರ್ದು ಪೋಪೆನೆಂದು ನಾನಾ ಬಗೆ ಪ್ರಾರ್ಥಿಸಿದಾಗ್ಯು ನಿಲ್ಲದೆ ಮಗುವನೊಪ್ಪಿಸಿಯಾಗೃಹಮಂ ಪೊರಮಟ್ಟು ಪಾಣ್ಬನಂ ಕಾಂಪಿ ತಾನುಂ ತನ್ನ ಗೃಹಕ್ಕಂ ಬಂದೊಡುಪಾಧ್ಯಾಯಂ ಕೋಪಿಸಿ ಕೊಲಲು ಬಪ್ಪುದುಂ ಹೋ ತಡೆ ಎನ್ನ ಮಾತಂ ಕೇಳಿಯಾಬಳಿಕಾ ಏನಾದರು ಮಾಡೆಂದಿಂತೆಂದಳು ನಾನು ಅರಮನೆಗೆಯ್ದಿ ಒಂದಾಟಮಾಗಲೆದ್ದು ಬರುತ್ತಿರಲರಸಿ ಎನ್ನ ಕೈಯಂ ಪಿಡಿದಿನ್ನೊಂದಾಟಮಾಗಲೆಂದು ಕುಳ್ಳಿರಿಸೆ ಮತ್ತೊಂದಾಟಮಾಗೆ ಮಗುವಂ ಬಿಟ್ಟಿಪ್ಪೆನೆಂದು ಮರಳಿ ಬರುತ್ತಿರ್ದೊಡಾ ಮಗುವನಿಲ್ಲಿಗೆ

ತರಿಸುವೆನೆಂದೀರ್ವರ್ ಸಖಿಯರಂ ಕಳುಹಿಸಲವರೆಮ್ಮ ಮನೆಯ ಬಾಗಿಲೊಳು ಕೂಸಂ ಬೇಡಲಿಪ್ಪವಸರದೊಳೆಮ್ಮ ಮನೆಯೊಳು ಪರಸ್ಥಳದವರಿರ್ದು ಮಗುವಂ ನಂಬಿಸುವದಂ ಕಂಡು ಬಂದೀವಾರ್ತೆಯನರಸಿಗರಿಪಿದೊಡೆನ್ನ ಬರಲೀಸದೆ ಪ್ರೀತಿಯಿಂದಿಟ್ಟುಕೊಂಡಳದರಿಂ ತಡೆದೆನಿದಕ್ಕೆ ಕೋಪವಿಷ್ಟೇಕೆಂದು ಅನ್ಯಾಯದಿಂದೆನ್ನಂ ಬೈದುದಕ್ಕೆ ನೀವೇ ಪಾಕಶುದ್ಧಿಯಂ ಮಾಳ್ಪುದೆಂದು ಕೂಸುವೆರಸಿ ಮಲಗಿ ನಿದ್ರೆಗೆಯ್ದಿರ್ದು ತಾನು ಭುಂಜಿಸಿಯರಸುಮಗನ ರೂಪು ಲಾವಣ್ಯ ಯೌವ್ವನಮಂ ನೋಡಿ ಸೋಲ್ತು ಕೂಟಕ್ಕೆಳಸಲಾತನಿವಳು ರಾತ್ರಿ ಮಾಡಿದ ಪ್ರಪಂಚೆಲ್ಲವಂ ತಿಳಿದನಾಗಿ ಸ್ತ್ರೀಯರಾಟಕ್ಕೆ ವಿಸ್ಮಿತನಾಗಿ ವೈರಾಗ್ಯಪರನಪ್ಪುದರಿಂದೆನಗೊಂದುತಿಂಗಳು ಬ್ರಹ್ಮವ್ರತಮಾದುದರಿಂದಾಗದು ಮತ್ತೆ ಪೇಳ್ವೆನೆಂದು ಸಂತೈಸಿ ರಾತ್ರಿ ನೀ ಮಾಡಿದ ಹಾದರಮೆಲ್ಲಮಂ ತಿಳಿದೆನಾದುದರಿಂ ನಿನ್ನ ಚಾತುರ್ಯಮಾರಿಗಿಲ್ಲೆಂಬುದುಮಾಕೆಯಿಂತೆಂದಳ್ ಎನಗೆ ಗುರುವಾದವಳು ರಾಜಪುರೋಹಿತನ ಪುತ್ರಿಯಾದ ಭೋಗವತಿಯೆಂಬಳು ಪತಿಪುತ್ರರ್ಸಹಿತಂ ಸುಖ ಬಾಳ್ವಳಾಕೆಯ ಉಪದೇಶದಿಂದೆನಗೆ ಇನಿತು ಬುದ್ಧಿ ಬಂದುದವಳ ವೃತ್ತಾಂತಮೆಂತೆಂದೊಡೆ ಈ ಪುರದ ರಾಜಪುರೋಹಿತಂ ದೇವಶರ್ಮನಾತಂಗೆಣ್ಬರ್ಕುಮಾರರಿಂ ಕಿರಿಯ ಭೋಗಾವತಿಯೆಂಬ ಪೆಣ್ಣು ಪುಟ್ಟೆ ಪಿತೃ ಭ್ರಾತೃಗಳತಿಪ್ರೀತಿಯಿಂ ಸಲಹಿ ಕನ್ಯಾಕಾಲ ದೊಳೆ ಯೋಗ್ಯ ಬ್ರಾಹ್ಮಣಂಗೆ ಮದುವೆಯಂ ಮಾಡಿದೊಡೆ ತಿಂಗಳು ತುಂಬುವುದಕ್ಕೆ ಮುನ್ನಮೆ ಪತಿವಿಯೋಗಮಪ್ಪುದು ಪಿತ್ರಾದಿಗಳತಿಶೋಕಾಕುಲರಾಗಿ ಆಕೆಗೆ ಬೇಕಾದನಿತು ದ್ರವ್ಯಮಂ ಕೊಟ್ಟು ಬೇರೊಂದುಪ್ಪರಿಕೆಯಂ ಮಾಡಿಸಿ ಇರಿಸಿಪ್ಪುದುಂ ನವ ಯೌವ್ವನಪ್ರಾಪ್ತೆಯಾಗಿ

ಶ್ಲೋಕ || ಯತೀ ಚ ಬ್ರಹ್ಮಚಾರೀ ಚ ವಿಧವಾ ಬದ್ಧಘೋಟಿಕಃ
ಅಂತಃಪುರಸ್ಥನಾರೀಕರಣಾಂ ಸದಾ ಮೈಥುನ ಚಿಂತನಮ್ ||

ಎಂಬುದರಿಂ ಕಾಮಸಂತಾಪದಿಂ ಬೇಯುತ್ತ ಜನಾಪವಾದಕ್ಕಂಜಿ ಮಾಧವಭಕ್ತೆಯಾಗಿ ಅನುಷ್ಠಾನಪರೆ ತನ್ನ ಶೀಲಮಂ ಪ್ರಕಟಿಸಲು ಪುರುಷಮುಖಾವಲೋಕನಮಾಗದೆಂದು ನೀವೀ ವಸ್ತ್ರದಿಂ ಮುಖಾಚ್ಛಾದನಂಗೆಯ್ದು ಸ್ನಾನಾರ್ಥಂ ದಿನಂಪ್ರತಿ ನದಿಗೆ ಪೋಪಾಗಳು ಪುರುಷರು ಮೆಟ್ಟಿದ ಭೂಪ್ರದೇಶಮಂ ಮೆಟ್ಟಿದೊಡೆ ದೋಷಮೆಂದು ತಾಮ್ರಭಾಜನದೊಳುದಕಮಂ ಕೊಂಡು ದರ್ಭೆಯ ಪಿಂಜರೋದಕ ಸೇಚನೆಯಂ ಮಾಡಿ ಪಾದನ್ಯಾಸದಿಂ ಪೋಗೆಯಲ್ಲಿ ಬಂದಿರ್ದ ಪುರುಷರನೀಕ್ಷಿಸುತ್ತ ಬಹಳ ಪೊತ್ತುಗಳೆದು ಬರುತ್ತಿಪ್ಪಿನಮೊಂದು ದಿವಸಮಾತನ ಸೋದರದತ್ತೆಯ ಮಗಂ ಕಾಮಶಕ್ತಿಯೆಂಬ ತರುಣಂ ಯವ್ವನಂ ಸ್ನಾನಾರ್ಥದಿಂ ಬಂದವಳ ಸಮೀಪವರ್ತಿಯಾಗಿರಲೋರೋರ್ವರಂ ನೋಡಿ ವಿರಹೋದ್ರೇಕಮಾಗೆ ಸಲ್ಲಾಪದಿಂದಾ ನದಿಯೊಳೆ

ಸೌಂದರ್ಯಪುರುಷಂ ದೃಷ್ಟ್ವಾ ಪಿತರಂ ಭ್ರಾತರಂ ಸುತಂ ಯೋನಿದ್ರವತಿ ನಾರೀಣಾಂ ಎಂಬಂತಲ್ಲಿಯೆ ಕೂಡಿದೊಡೆ ನಿಚ್ಚನಿಚ್ಚಲಾ ನದೀ ಸಮೀಪದ ಜೀರ್ಣ ಸುರಾಲಯಮೆ ಸಂಕೇತಾಗಾರಮಾಗೆ ಕೊಡುತ್ತಮಿರ್ದೊಡೆ ಕೆಲವಾನುದಿವಸಕ್ಕಾ ದೇವರ ಜಾತ್ರೆ ಬಪ್ಪುದುಂ

ಪಾಣ್ಬಂ ಚಿಂತೆಯಂ ಪಾಣ್ಬೆಗರಿಪೆ ಇದಕ್ಕೆ ತಕ್ಕುಪಾಯವನಾಂ ಬಲ್ಲೆ ನಾಳೆ ದಿವಸಂ ನಾನುಂ ಭೂಮಿಶುದ್ಧಿಯಿಂ ಪೊಳೆಗೆ ಪೋಪಾಗಳ್ ರಾಜಬೀದಿಯ ಮಧ್ಯದೊಳು ನೀಂ ಬಂದು ಸರಸದಿಂದೀಕೆ ಎನ್ನ ಪೆಂಡತಿಯೆಂದೆನ್ನ ಮುಟ್ಟಿ ಪೋಗೆಂದು ಪೇಳಲಾತನಂತೆ ಬಂದು ಕೈಯಂ ಪಿಡಿದೊಡಂ ಆಕೆ ಗೋಳಿಟ್ಟಾ ಬೀದಿಯೊಳ್ ಬೀಳ್ವುದುಂ ಪಿತೃಭ್ರಾತೃಗಳ್ ಮೊದಲಾದ ಬಂಧುಗಳೆಲ್ಲ ನೆರೆದೆಬ್ಬಿಸಲಿನ್ನೆನ್ನಸುಮಂ ಬಿಡುವೆನಲ್ಲದುಳಿದೆನಲ್ಲಿಲ್ಲಿಯೆ ಚಿತೆಯ ಮಾಡಿ ಯಜ್ಞೇಶ್ವರನಂ ಪೊತ್ತಿಸಿ ಪರಪುರುಷ ಸ್ಪರ್ಶವಾದೆನ್ನ ಪಾಪದೇಹಮಂ ದಹಿಸಿಮೆಂದು ಬೇಡಿದೊಡೆ ಸಾವಿರ ಪೊನ್ನ ಮುಟ್ಟಿ ದೋಷಮಂ ಕಳೆವೆವೆಂದೆಲ್ಲರಾಕೆಯಂ ನಾನಾ ತೆರದಿಂದೊಡಂಬಡಿಸಿದೊಡಂ ಮಾಣದೆ ಸಾವಂ ನಿಶ್ಚೈಸಿಪ್ಪುದುಂ ಪಂಚಗವ್ಯಮಂ ತಂದಾಕೆಯ ಶರೀರಮಂ ಪ್ರಕ್ಷಾಲನಂಗೆಯ್ದಾಚಾರ್ಯೋಕ್ತ ಮಂತ್ರವಂ ನಿಜ ಮಾತೆ ದರ್ಭೆ ದೂರ್ವಾಂಕುರ ತೀರ್ಥೋದಕದಿಂ ಸೇಚನೆಗೆಯ್ದು ಪುರುಷಸ್ಪರ್ಶಪ್ರದೇಶ ಮಂತ್ರಪೂತ ತುಲಸೀದಳಂಗಳಿಂದಾಚ್ಛಾದಿಸಿ ಸಹಸ್ರ ಬ್ರಾಹ್ಮಣ್ಯಕ್ಕಂ ಸಮಾರಾಧನೆಯಂ ಮಾಡಿಸಿ ನೂರು ಕನ್ಯಾದಾನ ಅಶ್ವದಾನ ಗೋದಾನ ಮೊದಲಾದನೇಕ ಭೂರಿದಾನಂಗೊಟ್ಟಾಕೆಯಂ ನಿಜಹರ್ಮ್ಯಕ್ಕೊಯ್ದಿರಿಸುವುದುಂ ಮರುದಿವಸಂ ಬಂಧುಗಳೆಲ್ಲ ತಮ್ಮ ತಮ್ಮ ಸ್ಥಾನಕ್ಕೆಯ್ದುವುದುಂ

ಒಬ್ಬಳು ಜೋಗಿಣಿಯು ಭಿಕ್ಷಾರ್ಥಮಾಗಿಯಾಕೆಯ ಹರ್ಮ್ಯಮಂ ಪುಗಲಾಕೆಯಂ ಪ್ರೀತಿಯಿಂ ಕರೆದು ಮೃಷ್ಟಾನ್ನಮನಿಕ್ಕಿ ಸಂತೈಸಿಕೊಂಡಿರ್ದೊಂದು ಪಣಮಂ ಕೊಟ್ಟು ಸಾಯಂಕಾಲದೊಳೀ ಪಣಕ್ಕೆ ಸುರೆಯಂ ತಪ್ಪದೆನಲಾಕೆ ಮಹಾಪ್ರಸಾದಮೆಂದು ಪೋಗಿ ಸುರೆಯಂ ಕೊಂಡೊಂದು ಕೊಡದೊಳ್ ತುಂಬಿ ನಿಶಿಯೊಳು ಪೊತ್ತು ತಂದಿಳಿಪಿದೊಡಾಕೆಗೆ ನಾನಾ ಉಪಾಯಾಂತರದಿಂದಾ ಕಂಠಪರಿಪೂರ್ಣಮಾಗೆ ಕುಡಿಯಿಸುವುದುಂ ಪ್ರಜ್ಞೆಯಿಲ್ಲದೆ ಒರಗಿಪ್ಪುದುಂ ತಾನವಳ ಮೇಲೆ ಪುಳ್ಳಿಯ ಪೊರೆಯನಡುಕಿ ಕಸವರಮೆಲ್ಲಮಂ ಕೊಂಡಾ ಹರ್ಮ್ಯಕ್ಕೆ ಅಗ್ನಿಪ್ರವೇಶಮಂ ಮಾಡಿ ಪುರಮಂ ಪೊರಮಡಲು ತಾನು ಕಲಿಸಿದಂದದೊಳೆ ಕಾಮಶಕ್ತಿಯೆಂಬುಪಪತಿಯ ತೊರೆಯ ತಡಿಯೊಳ್ ತನ್ನ ವಸ್ತ್ರಾಭರಣಮೆಲ್ಲಮಂ ಕಳೆದಿರಿಸಿ ಮಹಾಪತಿವ್ರತೆಯನಜ್ಞಾನವಶದಿಂದೂರ ಮಧ್ಯದೊಳು ಹಸ್ತಸ್ಪರ್ಶನ ಮಾತ್ರದಿಂ ಶೀಲಮನಳಿದ ಪಾತಕ ಪ್ರಾಯಶ್ಚಿತ್ತಕ್ಕೆ ಪುಣ್ಯ ನದೀತೀರ್ಥದೊಳೆ ಪಾಯ್ದು ಸತ್ತು ಪರಮೇಶ್ವರನ ಪಾದಮಂ ಸೇರಿದೆನೆಂದು ಲೇಖನಮಂ ಬರೆದಿರಿಸಿ ತಾನುಂ ಬಂದು ಕೂಡುವುದುಮಿರ್ವರುಂ ರಾತ್ರಿಯೊಳೆ ಪಯಣಂ ಪೋಗಿ ದೂರಾಂತದೊಳೆ ದಂಪತಿಗಳಾಗಿ ಪಾಟಲೀಪುರಮಂ ಪೊಕ್ಕಿರ್ದಲ್ಲಿ ಮಂತ್ರವಾದಿಗಳೊಳು ಇಂದ್ರಜಾಲಾದಿಗಳಂ ಕಲ್ತು ರಾಯನಿಂ ಮಾನ್ಯಮಂ ಪಡೆದಿರ್ಪಿನಮಿತ್ತಲಾಕೆಯ ಮಾತಾ ಪಿತೃಗಳು ಕೆಲವು ದಿವಸದಿಂ ಲೋಕಾಂತರಿತರಾಗೆಯು ಪುತ್ರರೆಣ್ಬರೊಳೀರ್ವರ್ ನಿಬುದ್ಧಿಗಳುಳಿದೆಲ್ಲರುಂ ಪೋಗುವುದುಂ ರಾಜಪುರೋಹಿತಮನನ್ಯರ್ಗಿತ್ತೊಡಿವರ ಭಾಗ್ಯಮೆಲ್ಲಂ ಪೋಗಿಯತಿದಾರಿದ್ರ್ಯಂ ಬಂದೊಡೆ ದೇಶಾಂತರಿತರಾಗಿ ತಿರುಗುತ್ತಂ ಬಂದು ಪಾಟಳೀಪುರ ದೂರ ಮುಂದಣ ಜಗಲಿಯೊಳ್

ಕುಳ್ಳಿರ್ಪುದುಂ ಭೋಗವತಿ ಜಲಾಶಯಕ್ಕೆ ಪೋಗುತ್ತಂ ನಿಜಾಗ್ರಜರಂ ಕಂಡು ಗೃಹಮಂ ಪೊಕ್ಕು ನಿಮ್ಮ ಭಾವಂದಿರ್ ಬಂದಿಪ್ಪರವರಂ ಗೃಹಕ್ಕೊಡಗೊಂಡು ಬಪ್ಪುದೆಂದು ಬರಿಸಿ ಮಜ್ಜನ ಭೋಜನಾದಿಗಳಿಂದುಪಚರಿಸೆ ನಿಜವೃತ್ತಾಂತಮೆಲ್ಲಮಂ ಪೇಳಿ ವಶ್ಯತಂತ್ರಮಂ ಕಲಿಸಿ ನಿಜಪುರಕ್ಕೆ ಬಪ್ಪೆನದರಿಂ ಮುನ್ನಮೆ ಪೋಗಿ ಆ ರಾಯನಂ ವಶೀಕರಣಂ ಮಾಡಿ ಪುರಜನ ಪರಿಜನಂ ಬಂದಿದಿರ್ಗೊಳಲೆಂದು ಪೇಳಿ ಕಳುಹಿಸಲವರ್ ತಮ್ಮ ಪುರಮಂ ಪೊಕ್ಕು ಅರಸನಂ ಕಂಡು ತಮ್ಮನುಜೆ ಪರಮೇಶ್ವರನ ಬೆಸದಿಂ ನರಭೋಗಮಂ ಪಡೆದು ಬಪ್ಪಳೆಂದು ಪೇಳೆಯೆಂತು ಬಪ್ಪಳೆಂದನುಮಾನದೊಳಿರಲು ಸ್ವಪ್ನದೊಳು ಕರ್ಣಪಿಶಾಚಿಯು ಬಂದು ಭೋಗಾವತಿ ಮಹಾಸತಿ ಶೀಲದಿಂದಗ್ನಿಯಿಂ ಮೃತ್ಯುವಂ ಪಡೆದು ಕೈಲಾಸಮಂ ಪಡೆದು ಪಾರ್ವತಿಯ ರೂಪನಾಂತು ರುದ್ರನ ಸಮಿಪಮನೆಯ್ದಿರಲ್ ಹೈಮವತಿ ಕರುಣಿಸಿ ಈಕೆ ನರಭೋಗವಿಲ್ಲದೆ ಬಂದಳ್ ಇನ್ನು ಕೆಲದಿವಸಂ ಗಂಗೆಯಂ ಪಾಯ್ದು ಬಂದಂಗೀಕೆಯೊಳತ್ಯಾಸೆಯುಳ್ಳುದರಿಂ ಮರ್ತ್ಯಲೋಕದೊಳೆ ಈರ್ವರುಂ ಸುಖಂ ಬಾಳಿ ಬಪ್ಪಂತು ಕಳುಹಿಸುವುದೆಂದು ಮೃಡನಂ ಬೇಡಿಕೊಂಡಾ ಈರ್ವರ್ಗೆ ಪರಿಣಯಂ ಮಾಡಿ ಕಳುಹಿಸುವುದರಿಂ ನಾಳೆ ಸೋಮವಾರ ಮಹಾವೈಭವದಿಂ ಪುರಜನಮೆಲ್ಲಂ ಇದಿರ್ಗೊಂಡು ಭಕ್ತಿಪೂರ್ವಕ ಹರ್ಮ್ಯದೊಳಿರಿಸಿ ಪೂಜಿಸದಿರ್ದೊಡೆ ನಾಡುಂ ಬೀಡುಮೆಲ್ಲಂ ಪಾಳಪ್ಪುದೆಂದು ಅತ್ಯಾಗ್ರಹಂಗೆಯ್ದೊಡೆ ಕಣ್ದೆರೆದು ಭಯಂಗೊಂಡು ಸಕಲ ವಿಭವದಿ ನದೀತೀರದೊಳ್ ಬಂದಿದ್ದ ಭೋಗವತಿಯ ಪತಿಸಹಿತಂ ಪುರಮಂ ಪುಗಿಸಿ ಹರ್ಮ್ಯಮಂ ಮಾಡಿರಿಸಿ ಬೆಸಗೆಯ್ಯುತ್ತಿರಲಾಕೆ ಮಕ್ಕಳಂ ಪಡೆದು ಬದುಕುತಿಪ್ಪಳಾಕೆಯ ಶಿಕ್ಷೆಯೆನಗೆಂದು ಗಾರ್ಘ್ಯೋಪಾಧ್ಯಾಯರ ಪತ್ನಿ ರಾಜಪುತ್ರನೊಡನುಸುರಿ ಮತ್ತಂ ಕುಂಟಣಿಯ ಸಾಮರ್ಥ್ಯಮನೆಂದಳೀ ಪುರದ ಪರದಂ ಧನಮಿತ್ರನಾತನ ಸತಿ ರೂಪವತಿಯೆಂಬಳು ಮಹಾಪತಿವ್ರತೆ ಜಗತ್ಪ್ರಸಿದ್ಧಿವಡೆದಿಪ್ಪಿನಮೊಂದು ದಿವಸಮಾ ಪೊಳಲ ವಸುದತ್ತನಾಕೆಯ ರೂಪು ಲಾವಣ್ಯಮಂ ಕಂಡು ಕಾಮ ಮೋಹವಶಗತನಾಗಿ ವಿರಹತಾಪಂ ಪುಟ್ಟಿ ನಿತ್ತರಿಸಲಾರದೊರಲುತ್ತಿಪ್ಪುದುಮಾತನ ತಾಯಿಯವನವಸ್ಥೆಯ ಬೆಸಗೊಳ್ಳುದುಂ ನಿಜಾಭಿಪ್ರೇತಾರ್ಥಮಂ ಪೇಳಲಾಕೆಗೆ ಮಿಗಿಲಾದ ನಾಲ್ಕು ಪೆಣ್ಗಳಂ ತಂದು ಪರಿಣಯನಂ ಮಾಳ್ಪೆಯಾಕೆಯುಪೊ ್ಪಡೆ ಮಹಾಪತಿವ್ರತೆ ಆಕೆಯು ನೆರೆವುದಸಾಧ್ಯಮೆಂದನೇಕ ತೆರದಿನೊಡಂಬಡಿಸಿ ನುಡಿವುದುಮಂತಾದೊಡಾನುಂ ಸಾವೆನಲ್ಲದುಳಿವೆನಲ್ಲೆಂಬುದುಂ ತಾಯುಂ ಚಿಂತಾಕ್ರಾಂತೆಯಾಗಿ ಪಲವಂ ಪಂಬಲಿಸುತ್ತಮಿರ್ಪಿನಮೋರ್ವಳು ಕೊರವಿ ಬಂದು ಉಂಡ ಊಟಮಂ ಕಂಡ ಕನಸು ಕಾಮಕಾಂಡಂ ಮೊದಲಾದವಂ ನಿನ್ನ ಮನೋಭಾವಮೆಲ್ಲಮಂ ಕಡಲನಿತುಸುರ್ವೆ ಮೊರತುಂಬಾ ಬೀಯವನಿಕ್ಕು ತಾಯೆಯೆಂದು ಬರಲಾಕೆಯಂ ಕಂಡೆನ್ನ ಕುಮಾರನುಬ್ಬೆಗಮಿಕೆಯಿಂ ತೀರ್ಗುಮೆಂದವಳಂ ಕರೆದು ಮೃಷ್ಟಾನ್ನಮನಿಕ್ಕಿ ತನ್ನ ಮಗನವಸ್ಥೆಯಂ ಪೇಳಿದೊಡಿದಾವ ಗಹನವಿಂದಿಂಗೆ ಪದಿನೈದು ದಿವಸಕ್ಕಾಕೆಯ ನಿನ್ನ ಮಗನೊಳ್ ನೆರಪದೊಡೆನ್ನ ಸ್ತನಂಗಳೆಕ್ಕದಕಾಯಿಮೆಂದುಮಾಕೆಯ ಗಂಡನ ಅಂಗಡಿಗೆ ನಿನ್ನ ಮಗನಂ ಕಳುಹಿಸಿ ನಾಲ್ವರು ಕಾಣ್ಬಂತೆ ಒಂದು ದುಪ್ಪಟಮಂ ಕ್ರಯಕ್ಕೆ ತಂದು

ಪೊದೆದಿರ್ಪುದೆಂದು ಪೇಳಿ ತಾನಾಕೆಯಲ್ಲಿಗೆಯ್ದಿ ಮಹಾಸತಿ ಗಂಗಾಭವಾನಿ ನಿನ್ನ ಪತಿವ್ರತಾಮಾಹಾತ್ಮ್ಯಮಂ ಕೈಲಾಸ ವೈಕುಂಠದೊಳ್ ಪೊಗಳುವರಾದೊಡಂ ಕಡೆಯೊಳಲ್ಲದೆಲ್ಲವದಂ ಬಯಸಿದಾಗಳೆ ಪುತ್ರರಪ್ಪಂತು ತಂತ್ರಮಂ ಬಲ್ಲೆನೆಂದಾಕೆಯ ಶಯ್ಯಾಗೃಹದೊಳ್ ಪೊಕ್ಕು ರಹಸ್ಯದಿಂ ಪೇಳಿ ಅವಳ್ಗತಿಸ್ನೇಹಿತೆಯಾಗಿ ದಿನಂಪ್ರತಿ ಬಿಡದವಳಂ ನಂಬಿಸಿ ಸುದತ್ತನ ಗೃಹಕ್ಕೆ ಬಂದಾತಂ ಪೊದೆದಿರ್ದ ದುಪ್ಪಟದೊಳೊಂದೆಣೆಯಂ ಪರಿಯಿಸಿಕೊಂಡು ಬಂದು ರೂಪವತಿಯು ಕಾಣದಂತು ಆಕೆಯ ಮಂಚದ ಹಾಸಿಗೆಯೊಳ್ ಸೇರಿಸಿ ಅನ್ನಮಂ ಬೇಡಲ್ಪಂದೆನೆಂದುಂ ಅವಳಂ ಪೊಗಳುತ್ತಂ ಪೋಗಲಾ ರಾತ್ರಿಯೊಳೆ ಶೆಟ್ಟಿಯು ಬಂದಾ ಮಂಚದೊಳೊರಗುವಾಗಲಾ ದುಪ್ಪಟದೆಣೆಯಂ ನೋಡಿ ವಸುದತ್ತಂ ಕೊಂಡ ವಸ್ತ್ರಮೆಂದರಿದಾತಂ ಬಂದಿರ್ದನೆಂದು ನಿಶ್ಚೈಸಿ ಪೆಂಡತಿಯೊಳತಿಕೋಪಮನೆತ್ತಿಕೊಂಡು ಮೈಯೆಲ್ಲ ಜರ್ಝರಿತಮಾಗೆ ಬಡಿಗೋಲಿಂ ಪೊಡೆದಟ್ಟಲತಿದುಃಖಿತೆಯಾಗಿ ತಾಯ ಗೃಹಮಂ ಸೇರಲು ಮೂರು ದಿವಸಕ್ಕಾ ಕೊರವಿ ಬಂದು ಕಂಡರಿಯದಂತು ಬೆಸಗೊಂಡು ನಿನ್ನ ದುಃಖಮಂ ಬಿಡೆನ್ನ ಸಾಮರ್ಥ್ಯದಿಂ ನಿನ್ನ ಪುರುಷಂ ಬಂದತಿಪ್ರೀತಿಯಿಂ ಕರೆದೊಯ್ವಂತೆ ಮಾಳ್ಪೆನಂಜವೇಡವೆಂದು ಪೇಳ್ದಳೀ ರಾತ್ರಿಯೊಳೆ ಊರ ಮುಂದಣ ಕಾಳಭೈರವನಾರಾಧಿಸಿ ನಗ್ನವೇಷದಿಂ ಮಂತ್ರಮನೋದುತ್ತಂ ಪೊಡಮಡುವಾಗಲೊರ್ವ ಪುರುಷಂ ಬಂದು ನಿನ್ನೊಳು ರತಿಕ್ರೀಡೆಯಂ ಮಾಳ್ಪನದಕ್ಕೆ ಮನಂಗೊಟ್ಟು ಕೂಡಿದೊಡೆ ಮೂರು ದಿವಸಕ್ಕೆ ನಿನ್ನ ಪತಿಯು ಬಂದು ಅತ್ಯಾದರದಿಂ ಕರೆದೊಯ್ದು ಉಪಚರಿಸುವನಿದಕ್ಕೆ ಚಿಂತೆ ಬೇಡೆಂದು ಕಳಿಸಿ ಕೊಟ್ಟು ಬಂದಾ ವಸುಭೂತಿಯಂ ಕಳುಹಿಸಲಾ ಭೈರವಾಲಯದೊಳೆ ರೂಪವತಿಯೊಳು ಕೂಡಿ ತನ್ನಭಿಪ್ರಾಯಮೆಲ್ಲಮಂ ಪೇಳೆ ಆತನೊಳೆ ರಮಿಸುತ್ತಿರಲಿತ್ತ ಕಣಿತಿಯು ಧನಮಿತ್ರನ ಶಯ್ಯಾಗೃಹದ ಬಾಗಿಲೊಳು ರೂಪವತಿ ಪೆಸರ್ಗೊಂಡು ಕೂಗಿಡುತ್ತಿರಲ್ ಧನಮಿತ್ರನಾಕೆಯನಾ ಗ್ರಹಂಗೆಯ್ಯೆ ಇಂದಿಂಗೆಂಟು ದಿವಸದ ಸಂಜೆಯೊಳೆನ್ನ ತಾಯಿ ಬಳಿಗನ್ನಮಂ ಬೇಡಲು ಬಪ್ಪಲ್ಲಿ ವಸುದತ್ತನ ತಾಯಿ ಒಂದು ದುಪ್ಪಟದೆಣೆಯಂ ಅಸಗನಿಗೆ ಕೊಡೆಂದು ಕೊಡಲಾ ದುಪ್ಪಟದೆಣೆಯನಿಲ್ಲಿಗೆ ಬಂದನ್ನದ ಸಂಭ್ರಮದೊಳಿಲ್ಲಿಯ ಮಂಚದ ಕೊನೆಯೊಳಿರಿಸಿ ಮರೆದೆನೀಗಲಾಕೆಯುಪದ್ರಂ ಪರಿದಪ್ಪುದರಿಂದಾ ವಸ್ತ್ರದೆಣೆಯಂ ಕೊಡಿಯೆಂದತ್ಯಂತಮಾಗಿ ಬೇಡುವುದುಂ ವಿಷಣ್ಣಚಿತ್ತನಾಗಿ ಆ ವಸ್ತ್ರಮಂ ಕೊಟ್ಟು ನಿರಾಪರಾಧಿಯಂ ನಿಗ್ರಹಿಸಿದೆನೆಂದು ತನ್ನಂ ತಾಂ ನಿಂದಿಸಿ ಪೆಂಡತಿಯನೊಡಂಬಡಿಸಿ ಕರೆಯಲ್ಪಪ್ಪಿನಂ

ಇತ್ತಲ್ ವಸುದತ್ತನವೊಳೆ ನಿಚ್ಚ ನಿಚ್ಚ ಕೂಡಿ ಸುರತಕ್ರೀಡೆಯೊಳಿರ್ದಳಾಕೆಯಂ ಧನಮಿತ್ರಂ ಬಂದು ಅತ್ಯಾದರದಿಂದೊಡಂಬಡಿಸಿ ಕರೆದೊಯ್ದು ಸ್ನೇಹಂ ತಿಣ್ಣಮಾಗೆ ಸುಖಮಿರ್ದನಿಂತುಮುಭಯ ಪುರುಷರಂ ಸುರತದಿಂ ಸುಖಿಸುತ್ತ ಪತಿವ್ರತೆಯೆನ್ನಿಸಿಕೊಳ್ಳುತ್ತಿಪ್ಪರಿಂತಪ್ಪವರ ಬಳಿಯೊಳೆ ಪಾದರದ ಚಾತುರ್ಯಮಂ ಕಲ್ತೆ ನಿನ್ನ ನವ ಯೌವನಮುಂ ವ್ಯರ್ಥಂ ಮಾಡದೆನ್ನೊಳೆ ಕೂಡಿ ಸುಖಬಡುವುದೆಂದು ಸರಸ ಸಲ್ಲಾಪಗಳಂ ಮಾಡಿದೊಡಂ ರಾಜಪುತ್ರಂ ಮೌನಗೊಂಡು ತನ್ನ ಮನದೊಳಿಂತೆಂದಂ

ಆರ್ಯಾಗೀತಿ || ಬಾಲ ಸಖಿತ್ವಮಕಾರಣ | ಹಾಸ್ಯಂ ಸ್ತ್ರೀಷು ವಿವಾದಮಸಜ್ಜನಸಂಗಮ್
ಗರ್ದಭಯಾನಮಸಂಸ್ಕೃತ | ವಾಣೀ ಷಡೇಷು ನರೋ ಲಘುತಾಮುಪಯಾತಿ||

ಎಂಬುದರಿಂದೀಕೆಗೆ ಪ್ರತ್ಯುತ್ತರವಂ ನುಡಿಯಲಾಗದೆಂದು ಪವಮಾನಪುರದೊಳು ಕೇತಗೌಂಡನ ಪೆಂಡತಿ ಕಲುಷೆಯೆಂಬಳು ಕುಲಟೆಯಾಗಿಯೂ ಗಂಡ ಕಾಣ್ಬನೆಂದಂಜುತ್ತ ಮಿರ್ದೊಂದು ದಿನಂ ಪೊಲಕ್ಕೆ ತನ್ನ ಪತಿಗನ್ನಪಾನಮಂ ಕೊಂಡೊಯ್ದಿರ್ದಾಗಳಲ್ಲಿರ್ದ ಕಾಳಿದೇವಿಯ ಗುಡಿಯಂ ಪೊಕ್ಕು ಮುಗಿದಕೈವೆರಸಿ ಮಹಾದೇವಿಯೆನ್ನ ಗಂಡನ ಕಣ್ಣೆರಡು ಪೋದೊಡೆ ನಿನಗಪಾರ ಪೂಜೆಗೊಟ್ಟು ದಾಸರಿಗೆ ಹರಿಸೇವೆ ಮಾಳ್ಪೆನೆಂದು ಪರಸಿಕೊಂಬಾಗಳಾಕೆಯ ಗಂಡನಾಕೆಗೆ ಕಾಣದಂತಿರ್ದು ಈ ದಿನದೊಳೆ ಅಂಧಕನಂ ಮಾಳ್ಪೆನೆಂದೊಡೆನ್ನೊಡತಿವಡೆದು ಮಾತನಾಡಿದಳೆಂದು ಗೃಹಮಂ ಪೊಕ್ಕಿರಲಾ ದಿನಾವ ಸಾನದೊಳ್ ಕೇತಗೌಂಡಂ ತನ್ನ ಕಣ್ಣೆರಡು ಕಾಣದಿಪ್ಪವೆಂದು ವ್ಯಾಜದಿಂ ಬೀಳುತ್ತಮೇಳುತ್ತ ಗೋಡೆ ಕಂಬಂಗಳ ಹಾಯುತ್ತಂ ಮನೆಯ ಕೆಲದ ಮೂಲೆಯೊಳೆ ಪಟ್ಟಿರಲಾಕೆ ಬಂದುಪಚರಿಸಿ ಹರಿಸೇವೆಯಿನ್ನಯನಾಂಧಕಾರ ಪರಿಹರಂ ಮಾಳ್ಪೆನೆಂದು ಪೇಳಿ ಏಳು ಮಂದಿ ದಾಸರಂ ಬರಿಸಿ ನಾನಾ ಬಗೆ ಭಕ್ಷ್ಯಂಗಳಂ ಮಾಡಿರಿಸಲಾ ಗೌಂಡಂ ಪರಮಾನ್ನದೊಳ್ ವಿಷಮನಿಕ್ಕಿ ಅರಿಯದಂತಿರಲವರೆಲ್ಲ ಪಾಯಸಮನುಂಡಲ್ಲಿಯೆ ಸಾಯ್ವುದುಮಾಕೆ ಅತ್ಯಂತ ಶೋಕಾಕುಲೆಯಾಗಿರಲದೇನೆಂದು ಗೌಂಡಂ ಕೇಳಲೇಳು ಜನ ದಾಸರು ಸತ್ತರೆನಲಾ ಕ್ರೂರಮಾನಸಂ ಕಲಿಸಿದ ಮೇರೆ ಊರ ಚಾವಡಿಯೊಳಿರ್ದ ಭೈರಾಗಿಯಂ ಕರೆದು ಪಾಯಸಮಿಲ್ಲದ ಭಕ್ಷ್ಯಂಗಳೆಲ್ಲಮಂ ಸಂಪೂರ್ಣಗ್ರಾಸಮನಿಕ್ಕಿ ಒಂದು ಪಣಮಂ ಕೊಟ್ಟೊಂದು ದಾಶೀಭೂತಂ ಬಂದಿರಲದನೆನ್ನ ಪತಿ ಕೊಂದೊಡಾ ಪೆಣನಿಪ್ಪುದದಂ ಕೊಂಡು ಪೋಗಿ ಪೊಳಲ ಪೊರಗಿಕ್ಕಿ ಬಾಯೆಂದೊಂದು ಪೆಣಮಂ ನಾಮಾಂಕಿತಮಂ ತೋರಿದೊಡದಂ ಪೊತ್ತುಪೋಗಿ ಪಾಳಪ್ಪ ಪೂವಿನ ತೋಟದ ಪಾಳುಬಾವಿಯೊಳಿಕ್ಕಿ ಬರಲನಿತರೊಳೆ ಮತ್ತೊಂದಂ ತೋರಿ ಮೊದಲದೆ ಬಂದುದೆಂದು ಸಾಗಿಸಲಿಂತು ಏಳು ಪೆಣಂಗಳಂ ಪೊತ್ತುಪೋಗಿ ಪಾಳುಬಾವಿಯೊಳಿಕ್ಕಿ ಮುಳ್ಳು ಕಲ್ಲನಡಕಿ ಬಪ್ಪಿನ ಬೆಳಗಿನ ಕುರುಹುಮಾಗಲಾಗಳಾ ಊರ ಪೂವಾಡಿಗಂ ಬಂದು ಕಂಚಿವಾಳದ ಮರನೇರಿ ಪೂವಂ ಕೊಯ್ವನಂ ಕಂಡಾತನ ನಾಮಮನೀಕ್ಷಿಸಿ ಇದೇ ಪೆಣನೆಂದು ಆತನಂ ಪಿಡಿದು ಎಳೆಯಲಾತಂ ಯುದ್ಧಂಗೆಯ್ಯಲೀರ್ವರುಂ ಪೋರಟೆಯಿಂದಾ ಬಾವಿಯೊಳೆ ಬಿದ್ದು ಸತ್ತರೆಂಬುದರಿಂದೊರ್ವಳ ಪಾದರದ ಬಯಕೆಗೆ ಒಂಬತ್ತುಮಂದಿ ಸತ್ತರದರಿಂ ಸ್ತ್ರೀಯರ ಚರಿತಂ ಮಹಾಪಾತಕಮೆಂದಾ ರಾಜಪುತ್ರಂ

ವೃತ್ತ || ಕಾಯೋಯಂ ರಸರಕ್ತಮಾಂಸವಿಸರೋ ಮೇದೋಸ್ಥಿ ಮಜ್ಜಾಕುಲೋ
ಬೀಭತ್ಸೋ ವಿತತಾಂತ್ರಧಾತು ರುಧಿರೋಶುಕ್ಲಾರ್ತವಾಭ್ಯಾಂ ಕ್ಷಯೀ
ಜೀವಕ್ಲೇಶವಶಾತ್ತಕಾಂತಿರಖಿಲಃ ಕ್ಲೇಶೈಕ ನೀಡೋ ಜಡಃ
ಸಂಗೋಽನೇನ ಸತಾಂ ದುನೋತಿ ಹೃದಯಂ ಮೋದೋತ್ರ ಲಜ್ಜಾಸ್ಪದಮ್||

ಹುಳಿತ ಕಬ್ಬು ಮೆಲಲೊಳ್ಳಿತಲ್ಲ ಬಿತ್ತಿದರೆ ಫಲವಪ್ಪಂತೆ ದೇಹಮಂ ಭೋಗದೊಳು ಕೆಡಿಸದೆ ತಪಕ್ಕೊಡ್ಡಿ ಆಮುತ್ರಿಕಾಸುಖಮಂ ಪಡೆಯದೆ ಕಂಟಕಾರಿಗೆ ಕೆರಹಿನಟ್ಟೆಯಂ ಕೊಂಬಂತೆಯುಂ ಶಿರೋವ್ಯಥೆಯಿಂ ತ್ರಿಪಲೆವ್ಯಥೆಗಡಿಸಾಯಿತೆಂಬಂತೆ ಗೃಹಸ್ಥಮಾರ್ಗಮೊಳ್ಳಿತೆಂದು ಮೋಕ್ಷದ ಬಟ್ಟೆಗೆ ಮುಳ್ಳಿನಂತಪ್ಪ ಸ್ತ್ರೀಯರಂ ಕೂಡಿ ನರಕಮೆಂಬ ಕುಳಿಯೊಳೆ ಬೀಳ್ವರದರಿಂ ತಪೋಮಾರ್ಗ ಮೋಕ್ಷಮಾರ್ಗ ಸಂಸಾರಂ ಅಡವೀಮಾರ್ಗಮದಂ ಸಾರೆ ಮನ್ಮಥನೆಂಬಾನೆಯಟ್ಟಲು ದೇಹಕೂಪದೊಳ್ಬಿರ್ದು ಮಾಯುಷ್ಯಮೆಂಬ ಬೇರಂ ಪಿಡಿದು ನೇಲುತ್ತಿರಲುಮಾ ಬೇರಂ ದಿವಾ ರಾತ್ರಿಯೆಂಬ ಶೀತಾಶೀತ ಮೂಷಿಕಂಗಳು ಕಡಿವುತ್ತಾ ಬರಲು ಕ್ರೋಧಾದಿ ಕಷಾಯಮೆಂಬ ನಾಲ್ಕು ದುಷ್ಟೋರಗಂಗಳು ಕಚ್ಚಿದೊಡಸಾತಾವೇದನೀಯಮಾದ ಇಷ್ಟವಿಯೋಗಾನಿಷ್ಟ ಸಂಯೋಗಂಗಳೆಂಬ ಬಹಳ ಜೀವಪುಳುಗಳು ಮುತ್ತಿ ಶರೀರಮೆಲ್ಲಮನೂರಿ ಬಾಧಿಸುತ್ತಿರಲಾ ನೋವಿಂಗಾರದೆ ಬಾಯ್ಬಿಟ್ಟರೊಂದು ಬಿಂದು ಮಧು ಬೀಳಲದಂ ಸವಿವಂತೆ ಸಂಸಾರಸುಖಮದರಿಂ ಭೋಗಿಗೆ ರೋಗಭಯ ಸುಖಕ್ಕೆ ಕ್ಷಯಭಯ ವಿತ್ತಕ್ಕಗ್ನಿ ರಾಜ ಚೋರ ಶತ್ರುಭಯ ಶರೀರಕ್ಕೆ ಯಮನ ಭಯಮಿಂತು ಸರ್ವಕ್ಕೂ ಭಯಮುಂಟು ವೈರಾಗ್ಯಮೇವಾಭಯಂ ಎಂಬುದರಿಂದೆನಗೆ ತಪಮೆ ಶರಣೆಂದಲ್ಲಿಂ ಮೆಲ್ಲನೆರ್ದು ಪೋಗಿ ತತ್ಪುರವರೋದ್ಯಾನದೊಳಿರ್ದ ಧರ್ಮರುಚಿಯತೀಶ್ವರರಿಂ ಸಂಸಾರದಿಂದಪ್ಪ ದುರ್ಗತಿಯುಂ ಧರ್ಮದಿಂದಪ್ಪ ಮುಕ್ತಿಯಂ ಕೇಳ್ದು ಸರ್ವಸಂಗ ಪರಿತ್ಯಾಗಂಗೆಯ್ದು ದೀಕ್ಷೆಯುಂ ಸ್ವೀಕರಿಸಿ ಪಂಚಮಹಾವ್ರತ ಪಂಚಸಮಿತಿ ಸ್ಪರ್ಶನೇಂದ್ರಿಯಾದಿ ಪಂಚೇಂದ್ರಿಯಜಯ ಸಮತಾದಿ ಷಡಾವಶ್ಯಕ ಕ್ರಿಯಾ ಕಚೋತ್ಪಾಟನಾಸ್ನಾನಾದಂತಕಷಣ ದಿಗಂಬರ ಭೂಶಯನಮೇಕಭುಕ್ತಸ್ಥಿತಿ ಭೋಜನಮೆಂದೀ ಇಪ್ಪತ್ತೆಂಟು ಮೂಲಗುಣಂಗಳಂ ಅನಶನಾದಿ ಬಾಹ್ಯತಪವಾರುಂ ಪ್ರಾಯಶ್ಚಿತ್ತಾದ್ಯಭ್ಯಂತರ ತಪಮಾರುಂ ಪಂಚಾಚಾರಮುಂ ದಶಧರ್ಮಮುಂ ಗುಪ್ತಿತ್ರಯಮೆಂಬೀ ಉತ್ತರ ಗುಣಗಳೊಳ್ಕೂಡಿ ಷಡ್ಜೀವಿ ನಿಕಾಯದೊಳ್ ಅತ್ಯಂತ ದಯಾದ್ರ್ರಹೃದಯನಾಗಿ ಗುರುಗಳಂ ಬೀಳ್ಕೊಂಡು ಏಕವಿಹಾರಿಯಾಗಿ ಗ್ರಾಮೇಕರಾತ್ರೇ ನಗರೇ ಪಂಚರಾತ್ರೇ ಅಟವ್ಯಂ ದಶರಾತ್ರೇ ಎಂದಾಗಮೋಕ್ತದಿಂ ವಿಹಾರಿಸುತ್ತಂ ನಾಗಪುರಿಯಂ ಪುಗುವಲ್ಲಿ ಸೂರ್ಯಾಸ್ತಮಯಮಾಗಲಾ ಪುರದ ಮುಂದಣಿಪ್ಪುದೊಂದು ಪಾಳ್ಮನೆಯೊಳೊಂದು ಕೋಣೆಯೊಳ್ನಿಯುಮದಿಂ ಕಾರ್ಯೋತ್ಸರ್ಗದಿಂ ಪರಮಾತ್ಮಧ್ಯಾನಾರೂಢನಾಗಿಪ್ಪುದುಮಾ ಪುರದರಸಿನ ಮಾನಿನಿ ತಳವಾರನೊಳ್ಪುದುವಾಳುತ್ತಮಾ ಪಾಳ್ಮನೆಯೆ ಸಂಕೇತಾಗಾರಮಾಗೆ ಬಂದು ಕೂಡುತಿರ್ದಾ ರಾತ್ರಿಯೊಳುಪಪತಿ ಸಹಿತ ತನ್ನ ಮಗುವನ್ನೆತ್ತಿಕೊಂಡು ಬಂದು ಪಾಣ್ಬನೊಳ್ಕೊಡುವಾಗಳಾ ಕೂಸುಮತ್ಯಂತ ಚಂಡಿಯಂ ಮಾಡುತ್ತಿರೆ ಸೈರಿಸದೆ ಆ ಕೂಸಂ ಗೋಣಂ ಮುರಿದು ಕೆಲದೊಳಿರಿಸುವುದುಂ ತಳಾರನತಿಕುಪಿತನಾಗಿ ಇಂತಾ ಅನ್ಯಾಯಮುಂಟೆ ಎಂದಾಕೆಯ ಭಂಗಿಸುವುದುಂ ಈತನಿಂ ತನಗಪಾಯಂ ಬಪ್ಪುದೆಂದಾತನನ ನೇಕತೆರದಿಂದುಪಚರಿಸಿ ಅವನಂ ನಂಬಿಸಿ ಸುರತಮನೊಡರ್ಚಿ ನಿದ್ರೆಯೊಳಿರ್ದ ಸಮಯದೊಳಾತನ ಖಡ್ಗದಿಂದಲೆ ಅವನ

ಕೊಲರಲಂ ಕೊಯ್ದು ಎರಡು ಪೆಣನಂ ಸಮೀಪದೊಳಿರ್ದ ಕೂಪದೊಳಿಕ್ಕಿ ಬಂದು ಪಟ್ಟಿರ್ದ ಸ್ಥಾನಮಂ ನೋಳ್ಪಾಗಲು ಬೆಳಗಿನ ಕುರುಹು ತೋರಲಾ ಮೂಲೆಯೊಳ್ಕಾಯೋತ್ಸರ್ಗದಿಂದಿರ್ದ ಯೋಗಿಯಂ ಕಂಡತಿಭಯಂಗೊಂಡೀತನನಿಂದೆನಗಪಾಯಂ ತಪ್ಪದೆಂದು ನನ್ನ ಬಲ್ಲಂದದೊಳಾತನನೊಡಂಬಡಿಸಿ ಕೂಡಿಕೊಳ್ವೆನೆಂದನೇಕ ತೆರದಿಂ ರತಿಕಲೆಯಂ ತೋರಲಾ ಯೋಗೀಶ್ವರಂ ಮಂದರದಂತಚಲಿತನಾಗಿ ಮೌನಗೊಂಡಿರಲಾ ಯತೀಂದ್ರನಂ ಕೊಲಲ್ಬಗೆದು ಖಡ್ಗಮನೆತ್ತಲು ಗೃಹದೇವತೆಗಳಾಕೆಯ ಕೈಯ ಸ್ತಂಭಿಸಿ ನಿಲಿಸಲನಿತರೊಳೆ ಸೂರ್ಯೋದಯಮಪ್ಪುದುಂ ಯೋಗೀಂದ್ರಂ ಯೋಗಮಂ ಬಿಟ್ಟು ಪೋಪುದುಮರಸಂಗದೆಲ್ಲಂ ತಿಳಿಯಲಾ ಪಾಣ್ಬೆಗಾಜ್ಞೆಯಂ ಮಾಡಿಸಿದನದರಿಂ ಸ್ತ್ರೀಯರು

ವೃತ್ತ || ಮನದೊಳ್ಸಾಸಿರದೆಂಟುನೂರು ಕುಹಕಂ ಮಾತ್ಸರ್ಯದೊಳ್ ಕೋಟಿ ವಂ
ಚನೆಯೊಳ್ ಚೋರಶಿಖಾಮಣೀವಪುರ್ವಿನೋಳ್ತ್ರೋರ್ವಳ್ಜಗಜ್ಜಾಲಮಂ
ಜನಿತಂಗಾಲಿಗೆಯೊಳ್ಜಗತ್ರಯದದಾಳಾಪಮಂ ಕಣ್ಗಳೊಳ್
ಸನುಮಾನಂಗಳ ಮಾಳ್ಪ ನಾರಿಯರನಾವಂ ಗೆಲ್ವವಂ ಲೋಕದೊಳ್ (?) ||

ಮುಕ್ತಿಮಾರ್ಗದ ಕಾಪಿನ ನಾಯ್ಗಳಾದ ಸ್ತ್ರೀಯರಂ ಪೊರ್ದಿದಂಗಿಹ ಪರಂ ಕೆಡುವುದೆಂದೀ ವೃತ್ತಾಂತಮನಾಂ ಪೇಳ್ವುದುಮಾತನೆಂದಂ

ಶ್ಲೋಕ || ಕಾಮಃ ಪುಣ್ಯವಶಾಜ್ಜಾತಃ ಕಾಮಿನೀ ಪುಣ್ಯಪ್ರೇರಿತಃ
ಸೇವ್ಯಾಸೇವ್ಯಂ ನ ಕರ್ತವ್ಯಂ ಸ್ತ್ರೀರತ್ನಂ ದುಷ್ಕುಲಾದಪಿ ||

ಅದರಿಂ ನಿನ್ನ ವಂಚನಮನೆಂತು ನಂಬುವುದೆಂದು ಮತ್ತಮೀಶ್ವರಂ ಕೈಲಾಸದೊಳೆ ಗಿರಿಜೆಯೊಡನಿರ್ದು

ವೃತ್ತ || ಭ್ರೂಲಾಸೋತ್ಸವಿನೀ ಸವಿಭ್ರಮಗತಿರ್ಮೂರ್ಚ್ಛಾ ನಿತಂಬಸ್ಥಲೀ
ಸಂಕೀರ್ಣೇವಯಸಿ ಸ್ಮಿತಾರ್ಧಭಣಿಶಿಃ ಸಾ ಪಾರ್ವತೀ ಪಾತು ವಃ
ಯಸ್ಯಾಕರ್ಣತಟಂ ದೃಶಾವಗಮತಾ ತೂರ್ಣಂ ತ ದಂತಃ ಪಥೇ
ದೃಷ್ಟ್ವಾದೃಷ್ಟಮಪೀಶ್ವರಂ ಹೃದಿ ಕೃತಾಧಿಷ್ಠಾನಮುತ್ಕಂಠಿತಾ ||

ಪಾಣೌಕಂಕಣಮುತ್ಫಣಃ ಫಣಿಪತಿರ್ನೇತ್ರಂ ಜ್ವಲತ್ಪಾವಕಂ
ಕಂಠೇ ಕೂಜಿತಕಾಲಕೂಟ ಕುಟಿಲೋ ವಸ್ತ್ರಂ ಗಜೇಂದ್ರಾಜಿನಮ್
ಗೌರೀಲೋಚನಲೋಭಸಾಯ ಸುಭಗೋ ವೇಷೋ ವರಸ್ಯೇತಿಮೇ
ಗಂಡೋಲ್ಲಾಸಿವಿಭಾಷಿತಃ ಪಶುಪತೇರ್ಹಾಸೋದ್ಗಮಃ ಪಾತು ವಃ ||

ಇಂತಿರ್ದ ಶಿವಂ ಗಂಗೆಯಂ ಸ್ವೀಕರಿಸಿ ಜಡೆಯೊಳಿಟ್ಟುಮಿರೆ

ವೃತ್ತ || ಸಂಧ್ಯಾ ರಾಗವತೀ ಸ್ವಭಾವಚಪಲಾ ಗಂಗಾ ದ್ವಿಜಿಹ್ವಃ ಫಣೀ
ಚಂದ್ರೋ ವಕ್ರತನು ಸ್ವಭಾವಮಲಿನೋ ಜಾತ್ಯೇವ ಮೂರ್ಖೋ ವೃಷಃ

ಇತ್ಥಂ ದುರ್ಜನ ಸಂಕಟೇ ಪತಿಗೃಹೇ ವಾಶ್ತ್ರವ್ಯಮೇ ತತ್ಕಥಂ
ದೇವೀನ್ಯಸ್ತ ಕಪೋಲ ಪಾಣಿತಲಕಾ ಚಿಂತಾನ್ವಿತಾ ಪಾರ್ವತೀ ||

ಏಕಂ ಧ್ಯಾನನಿಮಿಲನಾನ್ಮುಕುಲಿತಂ ಚಕ್ಷುರ್ದ್ವಿತೀಯಂ ಪುನಃ
ಫಾರ್ವತ್ಯಾ ವಿಪುಲೇ ನಿತಂಬಫಲಕೇ ಶೃಂಗಾರಚಾರಾಲಸಮ್
ಅನ್ಯದ್ದೂರಸಿಕೃಷ್ಟಚಾಪಮದನಕ್ರೋಧಾನಲೋದ್ದೀಪಿತಂ
ಶಂಭೋರ್ಭಿನ್ನರಸಂ ಸಮಾಧಿಸಮಯೇ ನೇತ್ರತ್ರಯಃ ಪಾತು ವಃ ||

ಸ್ಮರಮಂದಿರಮಂ ರುದ್ರಂ
ನಿರೀಕ್ಷಿಸುತ್ತಿರಲು ಗೌರಿಹಸ್ತದ್ವಯದಿಂ
ಮರಸಲು ನಯನದ್ವಯಮಂ
ಭರದಿಂ ಭಾಳಾಕ್ಷನಾದನೆಂಬರ್ ಕೆಲಬರ್

ಮತ್ತಂ ಜಾಹ್ನವಿ ಶಿವನ ಜಡೆಯೊಳಿಪ್ಪುದರಿದುಂ

ವೃತ್ತ || ಮೌಳೌ ಕಿಂ ನು ಮಹೇಶ ಮಾನಿನಿ ಜಲಂ ವಕ್ತ್ರಂ ಕಿಮಂಭೋರುಹಂ
ಕಿಂ ನೀಳಾಳಕವೇಣಿಕಾ ಮಧುಕರಾಃ ಕಿಂ ಭ್ರೂಲತಾ ವೀಚಿಕಾ
ಕಿಂ ನೇತ್ರೇ ಶಫರೌ ಚ ಕಿಂ ಸ್ತನಯುಗಂ ಪ್ರೇಂಖದ್ರಥಾಂಗದ್ವಯಂ
ಪಾಶಂ ಕಾಮಿತಿ ವಂಚಯನ್ ಗಿರಿಸುತಾಂ ಗಂಗಾಧರಃ ಪಾತುವಃ ||

***

ವೃತ್ತ || ಕಾಮಿನಿ ಜಾಹ್ನವೀಕಿಮಹ ಕೇ ಭರ್ತಾ ಹರೋನನ್ವಸೌ
[ಅಭ್ಯಸ್ತಂ] ಕಿಲ ಮನ್ಮಥೋರಥರಸಂ ಜಾನಾತ್ಯಯಂ ತೇ ಪತಿಃ
ನಿತ್ಯಂ ಸ್ವಾಮಿ... ನಿಹಾಪ್ರಿಯತಮೇ ಸತ್ಯಂ ಕುತಃ ಕಾಮಿನಾಂ
ಇತ್ಯೇವಂ ಹರಜಾಹ್ನವೀಗಿರಿಸುತಾ ಸಂಜಲ್ಪಿತಂ ಪಾತು ವಃ ||

ಅಂತು ಪಾರ್ವತಿ ಕುಪಿತೆಯಾಗಿ ಈಶ್ವರನಂ ಭಂಗಿಸೆ ಮುನಿಸಿಂ ಪರಮೇಶಂ ಗಿರಿಜೆಯಂ ಬಿಟ್ಟು ಪೋಗಿಯನೇಕ ದಿವಸಮಿರಲಾತನಂ ತಿಳಿಪಿ ಗಂಗೆಯಂ ಬಿಡಿಸಲಾರುಮಂ ಕಾಣದೆ ಷಣ್ಮುಖಂ ಪ್ರಾಜ್ಞನೆಂದು ಕಳುಹಿಸಲಾತಂ ಪೋಗಿ

ವೃತ್ತ || ಅಂಬಾ ಕುಪ್ಯತಿ ತಾತ ಮೂರ್ಧ್ನಿ ನಿಹಿತಾ ಗಂಗೇಯಮುತ್ಸೃಜ್ಯತಾಂ
ವಿದ್ವನ್ ಷಣ್ಮುಖ ಕಾ ಗತಿರ್ಮಯಿ ಚಿರಂ ತಸ್ಯಾಸ್ಸಿತಾಯಾ ವದ
ದೋಷೋದ್ಘಾತವಶಾದಶೇಷವದನಾತ್ಪ್ರತ್ಯುತ್ತರಂ ದತ್ತವಾ
ನಂಬೋಧಿರ್ಜಲಧಿಃ ಪಯೋಧಿರುದಧಿರ್ವಾರಾನ್ನಿಧಿರ್ವಾಃರಿಧಿಃ ||

ಎಂದೊಡಂ ಗಂಗೆಯಂ ಬಿಡದಿರಲು ಪಾರ್ವತಿ ಅತ್ಯಂತ ವಿರಹತಾಪದಿಂದೀರ್ವರುಂ ಬೇಯುತ್ತುಮಾರಿಂದಂ ಕೂಡಿಸಲಾಗದಿರಲೊಂದು ದಿವಸಂ ವಿನಾಯಕಂ ಸಂಚರಿಸಿ ಬಂದು

ಉಲ್ಲಾಸದೊಳೆ ಕೈಲಾಶಶೈಲಮನೆರಡು ಕೋಡಿಂದಂ ನೂಂಕಲಂದು ಗಾಳಿಗೆ ಚಲಿಸುಚಲದಲದಂತೆ ಚಲಿಸಲು ರುದ್ರಾಣಿ ಭಯಂಗೊಂಡೀಶನನಪ್ಪಿಕೊಂಡಳೆಂಬುದುಂ ಮತ್ತಂ ಗಜಾಸುರಂ ಪರಮೇಶ್ವರನಂ ಕುರಿತು ತಪಂಗೆಯ್ದೊಡಾತಂಗೆ ಪ್ರತ್ಯಕ್ಷಮಾಗಿ ಬೇಡಿದಭೀಷ್ಟಮಂ ಕುಡುವೆ ಬೇಡೆಂಬುದೆನಗೆಲ್ಲಾ ವರಂಗಳಂ ಮೊದಲೆ ಕೊಟ್ಟಿರ್ದಪೆ ಈಗಲು ತ್ರಿಕಾಲದಲ್ಲು ನಿನ್ನ ಜಪಿಸಿ ಧ್ಯಾನಿಸಲು ನೀನೊಂದು ಕಡೆಯಾಗಿ ನನ್ನ ಕಂಠದೊಳಿಪ್ಪುದೆನ್ನನುಂ ಕರಾಟಕಮಾಗಲದಂತೆ ರಂಧ್ರಂ ಮಾಡಿ ಕಾವಿದಾರದೊಳು ಕಂಠಕ್ಕೆ ಕಟ್ಟಿಕೊಂಡನೇಕದಿನಂ ಪೋಗಲಿತ್ತ ಕೈಲಾಸದೊಳ್ ಗಿರಿಜೆ ಪ್ರಾಣೇಶಂ ಬಾರದಿರ್ದುದಕ್ಕಾಶ್ಚರ್ಯಂಬಟ್ಟು ಈಶನಿರವಂ ಕಾಣದೆ ಚಿಂತಾಕ್ರಾಂತೆಯಾಗಿ ದುಃಖಿಸುತ್ತಿರ್ದೊವ್ಮ್ಕೆ ನಾರದಂ ಬರೆ ಶಿವನೆಲ್ಲಿ ಸಿಕ್ಕಿಬಿರ್ದನಾರಯ್ವುದೆಂದು ದುಃಖದಿಂ ಪೇಳಲಾತನಂ ಕರಸಿ ಪೇಳ್ದಪೆನೆಂದು ಪೋಗಿ ಜಗತ್ರಯದೊಳೆಲ್ಲಿಯು ಕಾಣದೆ ಮತ್ತೊಂದು ದಿನಂ ಗಜಾಸುರನ ಪಟ್ಟಣಮನೆಯ್ದಿ ಆತನಂ ಕಂಡು ಕೊರಳೊಳಿರ್ದ ಕವಡೆಯನಿದೇನೆನಲಾತನೀಶ್ವರಂ ಸಿಕ್ಕಿದ ವೃತ್ತಾಂತಮಂ ಪೇಳೆ ಕೇಳ್ದು ಬಂದಾ ಪ್ರಪಂಚಮಂ ಹೈಮವತಿಗರಿಪಿಯಾತಂ ಇನ್ನು ಬಪ್ಪುದಘಟಿತನವಂಗೆ ಸಿಕ್ಕಿ ಪೋದನೆನಲತ್ಯಂತ ದುಃಖಿತೆಯಾಗಿ ಮೃಡನಂ ಬರಿಸಲಾವುದುಪಾಯಮದಂ ನೀವೆ ಮಾಳ್ಪುದೆಂದು ಬೇಡಿಕೊಳಲೆನ್ನಿಂದಂ ಸಾಧ್ಯಮಿಲ್ಲ ವೈಕುಂಠಪತಿಯು ನಿನ್ನಲ್ಲಿಗೆ ಕಳಿಪುವೆನೆಂದಾತನೊಳಾಳೋಚಿಸಿ ನಂದಿಕೇಶ್ವರನಂ ಕೌಲೆಬಸವನಂ ಮಾಡಿಯನೇಕ ಸುವರ್ಣ ರತ್ನಾಭರಣ ದುಕೂಲಾದಿಗಳಂ ಪೊದಯಿಸಿ ಅನೇಕ ಆಟಂಗಳಂ ಕಲಿಸಿ ತಾನುಂ ಹೆಳವವಮಲ್ಲನೆಂದಾಂ ಬಸವನಾಟಕೆ ಜನರೆಲ್ಲ ಮರುಳಾಗೆ ಗಜಾಸುರನ ಪಟ್ಟಣಮನೆಯ್ದಲಾತನುಂ ನೀನುಂ ಮೆಚ್ಚಿದುದೀವೆನೆಂದು ನೂರೆಂಟು ತೆರದಾಟಮಂ ತೋರಿಸಿ ಸಕಲವೆಲ್ಲ ಬಿರಿದು ಈ ಬಸವಂಗುಂಟು ನಿನ್ನ ಕಂಠದೊಳಿಪ್ಪ ಕವಡೆಯನೀವುದದನೀ ಬಸವನ ಪಣೆಯೊಳ್ಕಟ್ಟುವೆನೆಂದು ಬೇಡಲತಿ ವಿಸ್ಮಿತನಾಗಿ ಭಾಷೆಗೆ ತಪ್ಪಲಾಗದೆಂದು ವಿಷಣ್ಣಚಿತ್ತದಿಂದಾ ಕವಡೆಯಂ ಕುಡಲದಂ ಬಸವನ ಪಣೆಯೊಳ್ ಕಟ್ಟಿ ಶಿವನ ಸೆರೆಯಂ ಬಿಡಿಸಿ ಕೈಲಾಸಕ್ಕೆ ತಂದು ಕಾತ್ಯಾಯಿನಿಯೊಡಗೂಡಿಸಿದನೆಂಬ ಕೌಲೆಬಸವನಾದ ಕಥೆಯಂ ಪೇಳಿ ಮತ್ತಂ ಪಾರ್ವತಿಯು ಮಾಳ್ಪಾ ವನಭೋಜನಾಭಿಲಾಷೆಯಂ ಪತಿಗರಿಪುತ್ತಿರಲೊಮ್ಮೆ ಶಂಕರಂ ಕುಟುಂಬಂವೆರಸಿ ವನಮನ್ನೈದಿ ಭಕ್ಷ್ಯಾದಿಗಳಂ ಮಾಳ್ಪನ್ನೆಗಂ ವಿನಾಯಕಂ ವನದೊಳ್ ಚರಿಯಿಸುತ್ತ ನಾನಾ ಫಲಂಗಳಂ ತಿಂದು ಬರುತ್ತಂ ಮುಂದೆ ಮುಂದೆ ಪೋಗಿ ಫಲಂಗಳಂ ತಿಂದು ಬರುತ್ತಿರಲಾ ವನದ ಪಣ್ಣುಫಲಾದಿಗಳೆಲ್ಲ ತೀರೆ ಮುಂದಕ್ಕೆ ಪೋಪುದು ಗಜಾಸುರನ ಪುರೋದ್ಯಾನದೊಳಿರ್ದ ಫಲಂಗಳಂ ತಿನ್ನುತ್ತಮಿರಲಾಗಳವನ ನಿರೀಕ್ಷಣ ನಿಮಿತ್ತಂ ಗಜ ಭಕ್ಷಣಂಗೆಯ್ಯಲ್ಬಂದ ಗಜಾಸುರಂ ಬಂದು ಲಂಬೋದರನಂ ಕಂಡಿದೊಂದು ವಿಚಿತ್ರಮಾದ ಆನೆಯಮರಿಯೆಂದು ಸಮೀಪಕ್ಕೆ ಬಂದದರ ರೂಪುಮನಾಟಮುಮಂ ನೋಡಿ ಪೆಗಲೇರಿಸಿಕೊಂಡಿಂದಿನ ಗ್ರಾಸಕಪ್ಪುದೆಂದು ಪೊತ್ತು ಪುರಕ್ಕೆ ಬಪ್ಪಿನಂ ಆತನ ಪುತ್ರಿ ಸೌಧಾಗ್ರದೊಳಿರ್ದಾ ಬಪ್ಪ ತಂದೆಯ ಪೆಗಲೊಳಿರ್ದಾನೆಯಮರಿಯಂ ಕಂಡತ್ಯಂತ ಮೋಹದಿಂ ತಂದೆಯಂ ಬೇಡಿಕೊಂಡು ತನ್ನ

ಹರ್ಮ್ಯದೊಳಿರಿಸಿದೊಡಾಗಲು ಗಜಾನನಂ ಗ್ರಾಸಮಂ ಬೇಡಲತಿಮಮತೆಯಿಂದನ್ನ ಪಾನ ಖಾದ್ಯಲೇಹ್ಯಾದಿಯನೇಕ ತೆರದ ಭಕ್ಷ್ಯಮಂ ತರಿಸಿ ಕುಡಲುದರಪೂರಿತಮಾಗಿ ಭುಂಜಿಸಿ ನೂರೊಂದು ತಾಳಗಳರಿದು ಕಾಲ ಮಾರ್ಗ ಕ್ರಿಯ ಅಂಗ ಗ್ರಹ ಜಾತಿ ಕಲೆ ಲಯ ಯತಿ ಪ್ರಸ್ತಾರಮೆಂಬೀ ದಶಪ್ರಾಣಂಗಳ ಲಕ್ಷಣಂದಪ್ಪದೆ ನಿಚ್ಚ ನಿಚ್ಚ ನರ್ತಿಸುತ್ತಂ ಅವಳಿಚ್ಛೆಯಂ ಸಲಿಸುತ್ತಲಿರಲತ್ತ ವನಭೋಜನಕ್ಕೆ ವಿನಾಯಕಂ ಬಾರದಿರ್ದೊಡಂ ಪರಮೇಶಂಗರಿಪಿದೊಡಿಂದು ನಾಳೆಯೆಂದರಸಿ ತರದಿಪ್ಪುದು ದುಃಖಮಾಗಿರ್ದೊಂದು ದಿನ ನಾರದಂ ಬಂದೊಡಾತನಂ ವಿನಯದಿಂ ಮನ್ನಿಸಿ ಎನ್ನ ಪಿರಿಯಮಗಂ ವಿಘ್ನರಾಜನಪಾರದಿನದಿಂ ಬಾರದುದರಿನ್ನಾತನೆಲ್ಲಿಪ್ಪನದನಾರೈದು ಬರಲಪ್ಪುದೆಂದು ಬೇಡಿದೊಡಾತಂ ದಿನಂಪ್ರತಿ ಮೂರುಲೋಕಮೆಲ್ಲಮಂ ಸಂಚರಿಸಿ ಬಪ್ಪನಪ್ಪುದರಿಂ ಗಜಾಸುರನ ಪಟ್ಟಣಮನೆಯ್ದಿದಲ್ಲಿ ಉಪ್ಪರಿಕೆಯ ಮೇಲೆ ಅಂದುಗೆ ಗೆಜ್ಜೆ ಮೊದಲಾದ ನಾದಮಂ ಕೇಳ್ದಲ್ಲಿಗೆಯ್ದಿ ನೋಳ್ಪುದುಂ ಗಜಾಸುರಪುತ್ರಿ ಇದಿರೆದ್ದು ನಮಿಸಿ ಉನ್ನತಾಸನದೊಳ್ಕುಳ್ಳಿರಿಸೆ ಈ ನಾಟ್ಯವೇನೆಂದು ಬೆಸಗೊಳಲೆಮ್ಮ ತಂದೆ ವನದೊಳೀ ಸುರಲೋಕದಾನೆಮರಿಯಿರಲಿದಂ ಭಕ್ಷಿಸಲೆಂದು ತಪ್ಪುದುಮದಂ ನಾಂ ಬೇಡಿಕೊಂಡಾಡಿಸುತ್ತಿಪ್ಪೆನೆಂಬುದು ನಾರದನೆಂದನೀತಂ ಪರಮೇಶ್ವರನ ಜೇಷ್ಠಪುತ್ರಂ ವಿನಾಯಕಂ ಪಾರ್ವತಿಯುಮೀತನ ನೆಲೆಯನರಿಯದುಮ್ಮಳಿಸುತಿಪ್ಪಳಿವನನೀಗಳೆ ಕಳುಹಿಸದೊಡೀತನಿಂದಲೆ ನಿಮಗಪಾಯಂ ತಪ್ಪದೆಂದು ಗಜಾಸುರಂಗಂ ಪೇಳ್ವುದುಂ ವಿನಾಯಕಂ ಪೋಪನೆಂದು ತನಗೆ ಕೊಟ್ಟಿಪ್ಪ ವರಮಂ ನೆನೆದು ಗರ್ವದಿಂದ್ವೈಮಾತುರಂಗೆ ಸಂಕಲೆಯನಿಕ್ಕಲದಂ ನಾರದಂ ಬಂದು ಹೈಮವತಿಗರಿಯಪೇಳಲಾಕೆಯತಿ ಕೋಪದಿಂ ನಿಜಪತಿಯಂ ಕೂಡಿಕೊಂಡು ಬಂದಾ ಗಜಾಸುರನನಿಕ್ಕಿ ಮಗನಂ ತಪ್ಪುದೆನಲವಳಿಗೆ ರುದ್ರನೆಂದನಾತಂಗೆ ಮುನ್ನ ಭಾಷೆಯಂ ಕೊಟ್ಟಿಪ್ಪೆನದರಿಂದಾತನೊಳು ಮುನಿವೆನಲ್ಲೆಂದು ಸುಮ್ಮನಿರ್ದೊಡಾ ರುದ್ರಾಣಿ ಕೋಪಾನಳದಂದಹ್ಯಮಾಗೆ ದೇಹದೊಳೇಳು ರೂಪಾದವು. ಬ್ರಹ್ಮಾಣಿ ಮಹೇಶ್ವರಿ ಕೌಮಾರಿ ವೈಷ್ಣವಿ ವಾರಾಹಿ ಐಂದ್ರಿ ಚಾಮುಂಡಿಯುಮೆಂಬ ಸಪ್ತರೂಪಾಗಿ ಭೂಮಿಯಲ್ಲಿ ಆತನ ರಕ್ತಬಿಂದು ಮಾತ್ರ ಬೀಳ್ದೊಡಂ ಸಹಸ್ರ ಗಜಾಸುರರಪ್ಪುದರಿಂ ದುರ್ಗಿಯು ತನ್ನ ನಾಲಗೆಯಂ ಭೂಮಿಯೊಳೆಲ್ಲಾ ಪಾಸಿ ಆತನಂ ಯುದ್ಧದೊಳೆ ಕೊಂದು ವಿನಾಯಕನಂ ತಂದಳೆಂದು ಪೇಳ್ವುದು.

ಮತ್ತಮೊರ್ಮೆ ಕೈಲಾಸದೊಳೆ ಚಂಡಿಕೆಯುಮೀಶ್ವರಂ ಸಂಚರಿಸಲು ಪೋಗಿ ತಡೆದಿರೆ ಕಾಮಾತುರದಿಂ ವಿಗುರ್ವಿಸೆ ಮೂವತ್ತೀರ್ವರು ದಾಕ್ಷಾಯಣಿಯ ರೂಪಿನೊಳೆ ಅತ್ಯಂತ ಸೌಂದರ್ಯವಿಲಾಸವಾಗಿ ಚನ್ನೆಯರಾದ ಕನ್ನೆಯರೊಗೆಯಲಾ ಕುಮಾರಿಯರಂ ಬಾಗಿಲೊಳಿರವೇಳಲೀಶಂ ಬಂದು ಮೋಸಕಾತ್ಮಜೆ ಹಲವು ರೂಪಾದಳೆಂದವರೊಳೆ ಭ್ರಮಿಸಿದನೆಂಬುದುಂ ಮತ್ತಂ ರಾತ್ರಿಯೊಳು ದೇವಿಯಂ ಬಿಟ್ಟು ಹೊರಸಂಚಾರಂ ಮಾಡಿ ಬಂದು ಬಾಗಿಲೊಳೆ ನಿಂದು

ವೃತ್ತ || ಕೋ ವಾ ದ್ವಾರಾಗ್ರತಸ್ಥಃ ಸುದತಿ ಪಶುಪತಿಃ ಕಿಂ ವೃಷೋ ಸಾರ್ಧನಾರೀ
ಕಿಂ ಷಂಡೋ ನೈವ ಶೂಲೀ ಕಿಮಪಿ ಚ ಸುರುಜಾ ನೋ ಪ್ರಿಯೇ ನೀಲಕಂಠಃ
ಬ್ರೂಹಿ ತ್ವಂ ಕಿಂ ಮಯೂರೋ ನ ಹಿ ವಿದಿತಶಿವಃ ಕಿಂ ಪುರಾಣೋಽಶೃಗಾಲ
ಶ್ಚೇತ್ಯೇವಂ ಹೈಮವತ್ಯಾ ಪ್ರತಿವಚನ ಜಡಃ ಪಾತು ವಃ ಪಾರ್ವತೀಶಃ ||

ಎಂದನೇಕ ತೆರದ ವಕ್ರೋಕ್ತಿಯಪ್ಪುದಲ್ಲದೆ

ವೃತ್ತ || ಪಾಣೌ ಕಂಕಣಮುತ್ಫಣಃ ಫಣಿಪತಿರ್ನ್ನೇತ್ರಜ್ವಲತ್ಪಾವಕಃ
ಕಂಠೇ ಕೂಣಿತಕಾಲಕೂಟಕುಪಿತೋ ವಸ್ತ್ರಂ ಗಜೇಂದ್ರಾಜಿನಮ್
ಗೌರೀಲೋಚನಲೋಭನಾಯ ಸುಭಗೋ ವೇಷೋ ವರಸ್ಯೇತಿ ಮೇ
ಗಂಡೋಲ್ಲಾಸ ವಿಭಾಸಿತಃ ಪಶುಪತೇರ್ಹಾಸೋದ್ಗಮಃ ಪಾತು ವಃ ||

ಅದಲ್ಲದೆ ಬ್ರಹ್ಮನೂರ್ವಸಿಯಂ ನಿರೀಕ್ಷಿಸಲು ಮೂರು ಸಾವಿರ ವರ್ಷದ ತಪಸಿನ ಫಲಕ್ಕೆ ದಕ್ಷಿಣಾದಿ ತ್ರಿಮುಖಮಂ ಪಡೆದು ಮೇಲೆ ನೋಡಲು ಐನೂರು ವರ್ಷ ತಪದ ಫಲಕ್ಕೆ ಗಾರ್ದಭಶಿರದಂತೆ ಮೇಲೊಂದು ಮುಖಮಂ ಪಡೆದೊಡಾಕೆ ಸ್ವರ್ಗಮನೆಯ್ದಿದೊಡೆ ಬ್ರಹ್ಮ ಮರುಳಾಗಿ ಚರಿಯಿಸುತ್ತುಂ ಕೈಲಾಸಮನೆಯ್ದಿಪ್ಪುದುಂ ಭವಾನಿಯು ತನ್ನ ಪತಿಗಾರತಿಯನೆತ್ತಲು ಬಂದೀರ್ವರು ಪಂಚವಕ್ತ್ರರಂ ನೋಡಿ ಅನುಮನದಿಂ ನಿಲಲೀಶ್ವರಂ ಕೋಪಿಸಿ ತನ್ನ ಕೈಯುಗುರ್ಗಳಿಂ ಬ್ರಹ್ಮನ ನಡುವಣ ತಲೆಯಂ ಚಿಗುಟಿದೊಡಾ ಬ್ರಹ್ಮಕಪಾಲಮೀಶ್ವರನ ಕರಮಂ ಕಚ್ಚಿ ಆಹುತಿಯಂ ಬೇಡಿದೊಡೆ ತನ್ನ ಪರಮೈಶ್ವರ್ಯಮನೊಂದಿಲ್ಲದಿತ್ತೊಡಂ ತೃಪ್ತಿವಡೆಯದಿರೆ ತಾನು ಉಣ್ಬಲುಡಲುಮಿಲ್ಲದೆ ಬ್ರಹ್ಮಕಪಾಲಮಂ ಪೊರೆಯಲಿಲ್ಲದೆ ತ್ರಿಲೋಕದೊಳು ಭಿಕ್ಷಾಟನಮಂ ಮಾಡುತ್ತಂ ಕೇವಲ ದಾರಿದ್ರದಿಂದೊರಲುತ್ತಿರಲುಮೆಯಿಂತೆಂದಳು

ವೃತ್ತ || ಕೃಷಿತೋ ನಾಸ್ತಿ ದುರ್ಭಿಕ್ಷಂ ಜಪತೋ ನಾಸ್ತಿ ಪಾತಕಮ್
ಮೌನತಃ ಕಲಹೋ ನಾಸ್ತಿ ನಾಸ್ತಿ ಜಾಗರತೋ ಭಯಮ್ ||

ಎಂಬುದರಿಂ

ಶ್ಲೋಕ || ಕೃಷ್ಣಾತ್ಪ್ರಾರ್ಥಯ ಮೇದಿನೀಂ ಧನಪತೇರ್ಬೀಜಂ ಬಲಂ ಲಾಂಗಲಂ
ಪ್ರೇತೇಶಾನ್ಮಹಿಷಂ ವೃಷೋಽಸ್ತಿ ಭವತಃ ಫಾಲಂ ತ್ರಿಶೂಲಾದಪಿ
ಶಕ್ತಾಹಂ ತವ ಪಾನಭಕ್ತಕರಣೇ ಗೋರಕ್ಷಣೇ ಷಣ್ಮುಖಃ
ದಿಗ್ಧಾಹಂ ತವ ಭಿಕ್ಷಯಾ ಕುರು ಕೃಷಿಂ ಗೌರೀತ್ಯವೋಚಚ್ಛಿವಃ ||

ಎಂದನೇಕತೆರದಿಂ ಬುದ್ಧಿಗಲಿಸಲು ದಶಮಕ್ಕೆ ಗುರು ಬಂದು ಎಲ್ಲೂ ನಿಲಲೆಡೆಯಿಲ್ಲದೆ

ಶ್ಲೋಕ || ಹರಿಣಾಪಿ ಹರೇಣಾಪಿ ಬ್ರಹ್ಮಣಾಪಿ ಸುರೈರಪಿ
ಲಲಾಟಲಿಖಿತಾರೇಖಾ ಪರಿಮಾರ್ಷ್ಟುಂ ನ ಶಕ್ಯತೇ ||

ಅದರಿಂದೊಂದು ಕಾನನಮನೆಯ್ದಿ ಚಿಂತಾಕ್ರಾಂತನಾಗಿರಲದಂ ವಿಷ್ಣು ಕೇಳಿ ಬರಲೆಂದಿಪ್ಪಿನಮಾ ಬರವಂ ಕೇಳಿ

ವೃತ್ತ || ಕೃಷ್ಣಸ್ಯಾಗಮನಂ ನಿಶಮ್ಯ ಸಹಸಾ ಕೃತ್ವಾ ಫಣೇಂದ್ರಂ ಗುಣಂ
ಕೌಪೀನಂ ಪರಿಧಾಯ ಚರ್ಮ ಕಠಿಣಂ ಶಂಭುಃ ಪುರೋ ಧಾವತಿ
ದೃಷ್ಟ್ವಾ ಕೃಷ್ಣರಥಂ ಸಕಂಪ ಹೃದಯಃ ಸರ್ಪಃ ಪತದ್ಭೂತಲೇ
ಕೃತ್ತಿರ್ವಿಸ್ಫುಲಿತಾಪ್ರಿಯಾನತನಮುಖೋ ನಗ್ನಃ ಶಿವಃ ಪಾತು ವಃ ||

ಅಂತಾಗಿ ಬ್ರಹ್ಮಕಪಾಲಂ ಕಚ್ಚಿ ತನಗಾದ ದುಃಖಮಂ ಪೇಳೆ ಚಕ್ರಪಾಣಿಯೆಂದನೆಲೆ ಕಪಾಲವೆ ನಿನಗೆ ತೃಪ್ತಿಯಪ್ಪಂತು ಮಾಳ್ಪೆ ಪರಮೇಶನಂ ಬಿಟ್ಟೆನ್ನ ಕೈಗೆ ಬಪ್ಪುದೆಂದು ತನ್ನ ಕರತಳಮನೊಡ್ಡಿ ಕರೆವುದುಂ ನೀ ಬಹು ಚಾಳಕನಪ್ಪುದರಿಂ ನಂಬಲರಿದೆಂದೊಡಂ ನಂಬಿಸೆ ಈಶನ ಹಸ್ತದಿಂ ಕೃಷ್ಣನ ಹಸ್ತಕ್ಕೆ ನೆಗೆದು ಬಪ್ಪಲ್ಲಿ ತನ್ನ ಕೈಯಂ ತೆಗೆವುದು ಭೂಮಿಯೊಳ್ಬಿದ್ದು ಹಿಡಿ ಶಾಪಮನೆನಲಾಕ್ಷಣದೊಳೆ ತನ್ನುರಮನುಗುರಿಂ ಸೀಳ್ದಾನೆ ಶುಂಡಿಲಗಾತ್ರ ರಕ್ತಧಾರೆಯನಾ ಕಪಾಲಂ ತುಂಬುವುಂತೆ ಬಿಡಲದು ಪೂರಮಾಗಿ ನೊರೆಯುಗಲೆದೆಯಂ ಮುಚ್ಚಿದೊಡೆ ಆ ನೂರೆಯಿಂಗಿ ಬತ್ತದನಿತು ಕಡಮೆಯಾಗೆ ಇದಕ್ಕಾವುದುಮೆಂದೊಡೆ ಕೃಷ್ಣನೆಂದನೀ ನೊರೆ ಹಿಂಗಿ ಬತ್ತದ ಪ್ರಮಾಣ ಕಡಮೆಯಾದುದಕ್ಕೆ ಮುಂದೆ ಪರಶುರಾಮ ರಾಮ ಕೃಷ್ಣನೆಂದು ಮೂರುಂ ಅವತಾರಮನೆತ್ತಿ ಅನೇಕ ಕೋಟಿ ಬಲವಂ ಕೊಂದುಂ ಆ ರಕ್ತದಿಂ ತುಂಬುವೆನೆಂದವತಾರಮನೆತ್ತಿದನೆಂಬುದಂ ತಿಳಿದುದ ನೀಂ ಸ್ತ್ರೀವಿಷಯವಿಲ್ಲದರಾರಿಪ್ಪರೆಂದು ಪೇಳ್ವುದುಂ ಇಂತಿದೆಲ್ಲಂ ವ್ಯಸನಿಗಳಪ್ಪ ಕವಿಗಳ ಚಾತುರ್ಯಮಲ್ಲದೆ ಸತ್ಯಮಲ್ಲೆಂದು ಕಾಣ್ಬುದು ಸರ್ವವ್ಯಾಪಿ ಶಿವೋಯಂ ಎಂದಣುರೇಣುತೃಣಾದಿಗಳೊಳೆಲ್ಲಂ ವ್ಯಾಪಿಯೆಂಬ ಶೈವಸಿದ್ಧಾಂತ ವಿರೋಧಮೆನೆ ವಿಷ್ಣುವುಂ ಸರ್ವ ವ್ಯಾಪಕಂ ಚಿತ್ಸ್ವರೂಪನೆಂದು ಮತ್ತಂ ಗೋಪಾಂಗನಾ ಲೋಲಂ ರಾಧಾಸಂಭೋಗಕೇಳೀವಿಲಾಸಂ ನವನೀತಚೋರಂ ಪರಸ್ತ್ರೀರತಂ ಬೌದ್ಧಾವತಾರಂ ಸ್ತ್ರೀಯರ ವಸ್ತ್ರಾಪಹಾರನಾಗಿ ಅವರ ನಗ್ನರೂಪ ಭಗಾವಲೋಕನ ಭ್ರಾಂತಂ ಜಾರ ಚೋರ ಶಿಖಾಮಣೀ ಮಾಯಾವಿ ಎಂಬುದುಂ ಬ್ರಹ್ಮಂ ಗಿರಿಜಾ ಕಲ್ಯಾಣದೊಳೆ ಪುರೋಹಿತನಾಗಿ ಗೌರಿಯ ರೂಪಿಂಗಳುಪಲು ಕಳೆ ಸಡಿಲಿ ಸುರಿಯುತ್ತಮಲ್ಲಿ ಕುಂಭಜಂ ವಾಲ್ಮೀಕಿ ಮೊದಲಾದ ಅನೇಕ ಋಷಿಗಳುತ್ಪತ್ತಿಯಾದಡಂ ಉಳಿದಿಂದ್ರಿಯಮಂ ಪದ್ಮದೊಳ್ಬಿಟ್ಟಲ್ಲಿ ಪುಟ್ಟಿದ ಭಾರತಿಕುವರಿಯೊಳೆ ಸುರತಕ್ರೀಡೆಯೊಳು ಬಹುದಿವಸಮಿರ್ದು ತುಂಬುರನಾರದರ ಗೀತಮಂ ಕೇಳಿ ಎಲ್ಲಾಗಲಾಕೆಗೆ ಗರ್ಭಮಾಗಿರ್ದುದನಾಗ್ರಹಿಸಿದುದರಿಂ ದಂಡಂ ಲೋಕದಿಂದಧಿಕಮಾಯ್ತೆಂಬುದಿಂತಾದಿ ಅನೇಕಮುಪಾಧಿಕಮಂ ಪೇಳ್ವುದಿದು ಸಂಕ್ಷೇಪಮಾತ್ರಂ ಪೇಳ್ದೆಸಿದೆಲ್ಲಂ ಪೂರ್ವಾಪರ ವಿರುದ್ಧಮಾಗಿ ತೋರುತಿಪ್ಪುದು.

ವೃತ್ತ || ಶಂಭು ಸ್ವಯಂಭು-ಹರಯೋ ಹರಿಣೇಕ್ಷಣಾನಾಂ
ಯೇನಾಕ್ರಿಯಂತ ಸತತಂ ಗೃಹಕುಂಭದಾಸಾಃ

ವಾಚಾಮಗೋಚರ ಚರಿತ್ರ ಪವಿತ್ರತಾಯಾ
ತಸ್ಮೈ ನಮೋ ಭಗವತೇ ಮಕರಧ್ವಜಾಯ ||

ಶ್ಲೋಕ || ಮತ್ತೇಭಕುಂಭದಲನೇ ಭುವಿ ಸಂತಿ ಶೂರಾಃ
ಕೇಚಿತ್ಪ್ರಚಂಡ ಮೃಗರಾಜವಧೇಽಪಿ ದಕ್ಷಾಃ
ಕಿಂ ತು ಬ್ರವೀಮಿ ಬಲಿನಾಂ ಪುರತಃ ಪ್ರಸಹ್ಯಾ
ಕಂದರ್ಪದರ್ಪದಲನೇ ವಿರಲಾ ಮನುಷ್ಯಾಃ ||

ಎಂದು ಹೆಣ್ಣು ಹೊನ್ನು ಮಣ್ಣೆಂಬೀ ಮೂರರ ಆಸೆಯಂ ತೊರೆದು ಸಕಲೋಪಾಧಿ ನಿರ್ಮುಕ್ತರಾಗಿ ಸರ್ವಜ್ಞರಾದ ಮಹಾಪುರುಷರು ಇನ್ನಪ್ಪ ಮಹಾ ಪುರುಷರುಮಪ್ಪರು. ಸ್ತ್ರೀಯರೊಳು ಮಹಾಪುರುಷರ ಸವಿತ್ರಿಗಳು ಯಶಶ್ವತಿ, ಸುನಂದಾ, ಸೀತಾ, ತಾರಾ, ಮಂಡೋದರಿ, ರೇವತಿ, ಪ್ರಭಾವತಿಯವರ್ಮೊದಲಾದ ಪುಣ್ಯಸ್ತ್ರೀಯರವರಿಂದಂ ಸ್ವರ್ಗಾಪವರ್ಗಕ್ಕೆ ಕಾರಣಮಪ್ಪುದು. ಪುರುಷಂಗೆ ಸುಗುಣಮುಳ್ಳ ಸ್ತ್ರೀ ದೊರಕಿದೊಡೆ ಉಭಯ ಲೋಕ ಸೌಖ್ಯಂ ದೊರೆಕೊಳ್ಗುಂ,

ಶ್ಲೋಕ || ವಸ್ತ್ರಮುಖ್ಯಮಲಂಕಾರಂ ಘೃತಮುಖ್ಯಂ ತು ಭೋಜನಮ್
ಗುಣಮುಖ್ಯಾಸ್ತು ನಾರ್ಯಸ್ತ್ಯುಃ ವಿದ್ಯಾಮುಖ್ಯಾಸ್ತು ಬ್ರಾಹ್ಮಣಾಃ ||
ಅನುಕೂಲಾಂ ವಿಮಲಾಂಗೀಂ ಕುಲಜಾಂ ಕುಶಲಾಂ ಸುಶೀಲ ಸಂಪನ್ನಾಮ್
ಪಂಚಲಕಾರಾಂ ಭಾರ್ಯಾಂ ಪುರುಷಃ ಪುಣ್ಯೋದಯಾಲ್ಲಭತೇ ||

ವೃತ್ತ || ಕಾರ್ಯೇಷು ಮಂತ್ರೀ ಕರಣೇಷು ದಾಸೀ | ಭುಕ್ತೇಷು ಮಾತಾ ಶಯನೇಷುವೇಶ್ಯಾ
ಧರ್ಮಾನುಕೂಲಾ ಕ್ಷಮಯಾ ಧರಿತ್ರೀ | ಷಟ್ಕರ್ಮನಾರೀ ಕುಲಮುದ್ಧರಂತಿ||

ಎಂದಿಂತು ಧರ್ಮಶಾಸ್ತ್ರ ವಿನೋದದಿಂದಾಮೀರ್ವರುಂ ಪೊತ್ತುಗಳೆದಾ ಮರುದಿವಸಂ ಅಗ್ರಹಾರಮಂ ಪುಗಲಲ್ಲಿ ವಿಪ್ರರೆಲ್ಲಂ ವಾಣಿಜ್ಯ ರಾಜಸೇವಾದಿಗಳಿಂದಿರಲು

ಶ್ಲೋಕ || ಕೃಷಿವಾಣಿಜ್ಯಗೋರಕ್ಷಾ ರಾಜಸೇವಾ ಚಿಕಿತ್ಸಕಾಃ
ಯೇ ವಿಪ್ರಾಃ ಪ್ರತಿಪದ್ಯಂತೇ ಏತೇ ಕೌಲೇಯ ಬ್ರಾಹ್ಮಣಾಃ ||

ಎಂದಲ್ಲಿಂ ಪೋಗಿ ಶಾಹೋಜಿರಾಯನಂ ಕಾಣಲಾತಂ ಮರ್ಯಾದೆಯಿಂದಿದಿರೆದ್ದಿಚ್ಛಾಕಾರಮಂ ನುಡಿದುಚಿತಾಸನದೊಳ್ಕುಳ್ಳಿರಿಸಿ ನಮ್ಮ ಪೂರ್ವಾಪರ ಸಂಬಂಧಮಂ ಕೇಳ್ದು ಯೋಗ್ಯ ಬ್ರಾಹ್ಮಣರೆಂದಾನತನಾಗಿ ತಪದಿಂ ರಾಜ್ಯಂ ರಾಜ್ಯದಿಂ ನರಕಮೆಂಬುದು ನಿಶ್ಚಯಮೇ ಪೇಳಿಂ ಎನಲದು ನಿಶ್ಚಯಂ ಈ ಭವದೊಳಾವುದೊಂದು ವಸ್ತುವಂ ವ್ರತಂ ಮಾಡಿ ಬಿಟ್ಟಡಂ ಒಂದಕ್ಕೆ ನೂರಾಗಿ ಮುಂದಣಭವಕ್ಕೆ ಬಪ್ಪುದು, ಇಚ್ಛಾ ನಿರೋಧಂ ತಪಃ ಎಂಬುದರಿಂ ಭೋಗೋಪಭೋಗ ವಸ್ತುಗಳೊಳಾಸೆಯಿಲ್ಲದೆ ಬಿಟ್ಟು ವೈರಾಗ್ಯದಿಂದಿಪ್ಪುದದುವೇ ತಪಸೆಂಬುದರಿಂ ವಿಶೇಷ ಭೋಗೋಪಭೋಗಮುಳ್ಳ ರಾಜ್ಯಸುಖಮಪ್ಪುದದರೊಳು

ಮತ್ತನಾಗದೆ ಜ್ಞಾನದಿಂ ತತ್ವಮನರಿದುಂ ಈ ರಾಜ್ಯದೊಳಪ್ಪ ಸುಖಂ ಸ್ಥಿರವಿಲ್ಲೆಂದು ಭಾವಿಸುತ್ತಂ ಉದಾಸೀನದಿಂ ನೀರೊಳಿರ್ದ ನೀರೇಜ ಪತ್ರಂ ಎಂತು ನೀರಂ ಸೋಂಕದಿಪ್ಪಂತೆ ಬಾಹ್ಯಾಭ್ಯಂತರ ಜ್ಞಾನಸಂಪನ್ನನಾಗಿ ಭೋಗದೊಳಿರ್ದಡಂ ಭೂಮಿಯೊಳ್ ಪೂಳ್ದ ಲೋಹಂ ಕೆಡುವುದಲ್ಲದೆ ಸುವರ್ಣಮೆಷ್ಟು ದಿವಸಮಿರ್ದೊಡಂ ಕೆಡದಂತೆ ಜ್ಞಾನಿಯಂ ಕರ್ಮಂ ಕೆಡಿಸಲಾರದು, ಅದರಿಂ ರಾಜಂಗೆ ಅಂತರಂಗದೊಳು ನಿಶ್ಚಯಜ್ಞಾನಂ ದೊರೆಕೊಂಡೊಡೆ ಈಗಲು ಧರಾಪತಿ ನಾಳೆ ಭವಕ್ಕೆ ಸ್ವರ್ಗಪತಿ ಮುಂದೆ ಮುಕ್ತಿಪತಿಯಪ್ಪಂ. ಮರುಳಾಗಿ ನಿರ್ದಯನಹಂಕಾರಿ ವ್ಯಸನಿಯಾದವಂಗೆ ನರಕಂ ತಪ್ಪದೆಂಬುದುಮಾಕ್ಷಣದೊಳೆ ವಿದ್ವಾಂಸರೊಳು ಸಜ್ಜನರಪ್ಪ ನಾಲ್ವರಂ ಬರಿಸಿ ತನ್ನ ಜ್ಞಾನಂ ಜಾರಿದೊಡಾಗಳೆ ಕೂಡುವಂತೆ ತಾನು ಪೂರ್ವಾಪರದೊಳುಂ ದಕ್ಷಿಣೋತ್ತರದೊಳುಂ ನಾಲ್ವರುಂ ನಾಲ್ದೆಸೆಯೊಳ್ನಿಂದು ಒಂದು ಮುಹೂರ್ತವಾಗಲ ಹರ್ನಿಶಿಯೊಳು ಬಿಡದೆ

ಶ್ಲೋಕ || **ತ್ಯಜ ದುರ್ಜನಸಂಸರ್ಗಂ ಭಜ ಸಾಧು ಸಮಾಗಮಮ್**
ಕುರು ಪುಣ್ಯಮಹೋರಾತ್ರಂ ಸ್ಮರ ರೂಪಮನಿತ್ಯತಾಮ್ ||

ಎಂದೀ ನಾಲ್ಕು ಚರಣಂಗಳೊಳೊಂದೊಂದು ಚರಣಮಂ ಪೂರ್ವಾದಿಯಾಗಿ ನಿಂದಾತನ ಕಿವಿಯೊಳ್ಪುಗುವಂತೆ ಪೇಳಿಮೆಂದವರ್ಗೆ ವಿಶೇಷ ಜೀವನಕ್ಕೆ ಸಂಬಳಂಗೊಟ್ಟು ಎಚ್ಚರಿಸಲು ನಿಯಮಿಸಿದನೆಮಗಂ ಭೂರಿದಾನಂಗೊಟ್ಟು ಕಳುಹಿಸಲಲ್ಲಿಂ ಮಾರ್ಗಮಾಗೆ ಶ್ರವಣಬೆಳ್ಗುಳಕ್ಕೆ ಬಂದಾ ಮಠದ ಜೈನತಪಸ್ವಿಗಳಂ ಕಾಣಲವರು ನಾಲ್ಕು ಜನ ಮಹಾ ವಿದ್ವಾಂಸರು ಸಹಿತಂ ಧರ್ಮಪ್ರಸಂಗದೊಳಿರ್ದೆಮ್ಮೆ ವಿಚಾರಪೂರ್ವಕಂ ಕುಳ್ಳಿರಿಸಿ ಪ್ರಸಂಗಿಸೆದೆವವರೊಳ್

ಶ್ಲೋಕ || **ಸಕಲೋಪಾಧಿನಿರ್ಮುಕ್ತಂ ಜ್ಞಾನಾನಂದೈಕ ರೂಪಕಮ್**
ನಿಷ್ಕಳಂಕಂ ನಿರಾಪೇಕ್ಷಂ ವಂದೇ ಸತ್ವಹಿತಪ್ರದಂ ||
ಕ್ಷುಧಾ ತೃಷಾ ಭಯಂ ದ್ವೇಷೋ ರಾಗೋ ಮೋಹಶ್ಚ ಚಿಂತನಮ್
ಜರಾ ರುಜಾ ಚ ಮೃತ್ಯುಶ್ಚ ಸ್ವೇದಃ ಖೇದೋ ಮದೋರತಿಃ ||
ವಿಸ್ಮಯೋ ಜನನಂ ನಿದ್ರಾ ವಿಷಾದೋಽಷ್ಟಾದಶ ಸ್ಮೃತಾಃ
ತ್ರಿಜಗತ್ಸರ್ವಭೂತಾನಾಂ ದೋಷಾಃ ಸಾಧಾರಣಾ ಇಮೇ ||
ಏತೈರ್ದೋಷೈರ್ವಿನಿಮುಕ್ತಃ ಸೋಽಯಮಾತ್ಮಾ ನಿರಂಜನಃ
ವಿದ್ಯಂತೇ ಯೇಷು ತೇ ನಿತ್ಯಂ ತೇ ಚ ಸಂಸಾರಿಣಃ ಸ್ಮೃತಾಃ ||
ಸಂತಿ ಕ್ಷುಧಾದಯೋ ದೋಷಾಃ ಕಿಯಂತಶ್ಚೈಜ್ಜಿನೇಶಿನಃ
ನಿರಾಗೋ ವೀತರಾಗೋಽಸೌ ಪರಮಾತ್ಮಾ ಕಥಂ ಭವೇತ್ ||

ವೃತ್ತ || **ಯೋ ವಿಶ್ವಂ ವೇದವೇದ್ಯಂ ಜನನಜಲನಿಧೇರ್ಭಂಗಿನಃ ಪಾರದೃಶ್ವಾ**
ಪೂರ್ವಾಪರ್ಯಾವಿರುದ್ಧಂ ವಚನಮನುಪಮಂ ನಿಷ್ಕಳಂಕಂ ಯ ದೀಯಮ್
ತಂ ವಂದೇ ಸಾಧು ವಂದ್ಯಂ ಸಕಲ ಗುಣನಿಧಿಂ ಧ್ವಸ್ತದೋಷದ್ವಿಷಂತಂ
ಬುದ್ಧಂ ವಾ ವರ್ಧಮಾನಂ ಶತದಳನಿಳಯಂ ಕೇಶವಂ ವಾ ಶಿವಂ ವಾ ||

भवबीजांकुर जनन | रागाद्याः क्षयमुपागताः
यस्य ब्रह्मा वा वि | ष्णुर्वा महेश्वरो वा नमस्तस्मै ||

ಎಂಬುದರಿಂ ಸುಗುಣಮುಳ್ಳಂ ದೇವನಲ್ಲದೆ ರಾಗಾದ್ಯುಪಾಧಿಸಹಿತನೆಂದು ಪೇಳ್ವುದರಿಂ

ಶ್ಲೋಕ || ಪ್ರಮದಾ ಭಾಸತೇ ಕಾಮಂ ದ್ವೇಷಮಾಯುಧ ಸಂಗ್ರಹಃ
ಅಜ್ಞಾನಂ ಅಕ್ಷಸೂತ್ರಂ ಚ ಭಾವೇ ಕಮಂಡುಲುಃ ||

ವೃತ್ತ || ದ್ವೇಷಂ ವಾ ಭಯಮಸ್ತ್ರತೋ ವಸನತೋ ಲಜ್ಜಾ ಸುರಕ್ಷಾಂ ತನೋಃ
ಸ್ವಾತ್ಮಾಧೀನಸುಖಾತ್ಯಯಂ ವಿವಶತಾಂ ಸ್ತ್ರೀತ್ವಾಶುಚಿತ್ವಂ ತೃಷಾಂ
ಕುಂಡೀತೋ ಜಪಮಾಲಿಕಾಶ್ರಯಣತೋಽಜ್ಞತ್ವಪ್ಪನ್ನತಾ
ರಾಗಂ ಭೋಗಮಲಂಕೃತೇ ಪ್ರಥಯತೊ ವಂದೇ ಕಥಂ ಮಾದೃಶಾನ್ ||

ಇಂತು ಪೇಳಲೆಂತೆನೆ ವಿಶ್ವಾಸಿಯಪ್ಪ ವೀತರಾಗನೆಮಗಿಷ್ಟಮಪ್ಪ ಸ್ವರ್ಗ ಮುಕ್ತಿ ಸುಖಮನೆಂತು ಕೊಡುವನಾತನಂ ನುತಿಸಿದೊಡಂ ನಿಂದಿಸಿದೊಡಂ ಪ್ರೀತಿಕೋಪಮಿಲ್ಲದುದರಿಂದೆಂದು ಕೇಳಲಿಂತೆಂದರು

ಬೇಸಗೆಯೊಳ್ಬಟ್ಟೆವೋಪ ಮನುಜಂ ಮಹಾಛಾಯಮಾಗಿರ್ಪ ವೃಕ್ಷಮಂ ಕಂಡು ಪೊರ್ದಿದರೆ ತಾಪಮಂ ಕೆಡಿಸದಿಪ್ಪುದೆ ಪೊರ್ದದವನಂ ಪೊರ್ದೆಂದು ಪೇಳ್ವುದೆ ಇಲ್ಲ! ಕಲ್ಪವೃಕ್ಷಂ ಬೇಡಿದೊಡೆ ಮನಸಾಭೀಷ್ಟಮೆಲ್ಲಮಂ ಕುಡುವುದು ಬೇಡದಿರ್ದಂವಂಗೆ ಕುಡದಂತೆ

ಶ್ಲೋಕ || ಅನಾತ್ಮಾರ್ಥ ವಿನಾ ರಾಗೈಃ ಶಾಸ್ತಾ ಶಾಸ್ತಿ ಸತೋ ಹಿತಮ್
ಧ್ವನನ್ ಶಿಲ್ಪಿಕರಸ್ಪರ್ಶಾನ್ಮುರಜಃ ಕಿಮಪೇಕ್ಷ್ಯತೇ ||

ಎಂದು ಮತ್ತಮಿಂತೆದರು

ಶ್ಲೋಕ || ವಿರಿಂಚಿರ್ಜಗತಃ ಕರ್ತಾ ಸಹರ್ತಾ ಗಿರಿಜಾಪತಿಃ
ರಕ್ಷಕಃ ಪುಂಡರೀಕಾಕ್ಷ ಇತ್ಯೂಚುಃ ಶ್ರುತಿವೇದಿನಃ ||
ಭಸ್ಮಸಾತ್ಕುರುತೇ ರುದ್ರಃ ತ್ರೈಲೋಕ್ಯಂ ಸ್ವಲ್ಪ ಚಿಂತಯಾ
ತಪೋ ಸಂವಸತಿ ಕ್ವಾಸೌ ಗಂಗಾಗೌರೀ ಸಮನ್ವಿತಃ ||
ಗ್ರಾಮಮೇಕತರಂ ಹಂತಿ ಸ ಪಾಪೀ ಭಣ್ಯತೇ ಜನೈಃ
ಯೊ ವಿಶ್ವಂ ನಿರ್ದಹನ್ ಶಂಭುಸ್ಸಕಥಂ ಯಾತಿ ಪೂಜ್ಯತಾಮ್ ||
ಚರಾಚರಮಿದಂ ವಿಶ್ವಂ ಸಶೈಲವನಸಾಗರಮ್
ಕೃತ್ವಾಸ್ವೋದರ ಮಧ್ಯಸ್ಥಂ ಸಂರಕ್ಷತಿ ಜನಾರ್ದನಃ ||

ಮತ್ತಂ

ಶ್ಲೋಕ || ಮಾತೃದ್ರೋಹೀ ಪಿತೃದ್ರೋಹೀ ಭ್ರಾತೃದ್ರೋಹೀ ತಥೈವ ಚ
ಸ್ವಾಮಿದ್ರೋಹೀ ಗುರುದ್ರೋಹೀ ಷಡೇತೇ ಮಮ ಬಾಂಧವಾಃ ||

ವೃತ್ತಂ || ಕಾನೀನಸ್ತು ಪಿತಾಮಹಃ ಸಮಭವತ್ ಪಿತ್ರಾದಯೊ ಗೋಲಕಾಃ
ತತ್ಪುತ್ರಾಃ ಪೃಥಗನ್ಯತಾತ ಜನಿತಾಃ ಕುಂಡ್ಯಾಹ್ಯಮೀ ಪಾಂಡವಾಃ
ಪಂಚಾನಾಂ ದ್ರುಪದಾತ್ಮಜಾ ಸಹಚರೀ ಯದ್ದೇಹತಾಬಾಂಧವಾಃ
ಶ್ರೀಕೃಷ್ಣೇನ ಕುಲಂ ಕಲಂಕಮಲಿನಂ ನೀತಂ ಜಗದ್ವಂದ್ಯತಾಮ್ ||

ಇತ್ಯಾದ್ಯನೇಕ ಭೇದಾಭೇದ ವಿಪರ್ಯಾಯಮಂ ಪೇಳ್ವುದುಂ ಏಕಮೂರ್ತಿಗೆ ವಿಕಲ್ಪದಿಂ ನಾನಾರೂಪಂ ಪೇಳ್ವರೆಲ್ಲಾಮೋರ್ವನೆ ಅಲ್ಲದೆ ಬೇರಿಲ್ಲ "ಏಕಮೂರ್ತೇಃ ತ್ರಯೋ ಭಾಗಾಃ ಬ್ರಹ್ಮ ವಿಷ್ಣು ಮಹೇಶ್ವರಾಃ" ಎಂಬುದುಂ"ಏಕಾ ಮೂರ್ತಿಸ್ತ್ರಯೋ ಭಾಗಾಃ ಸತ್ಯಂ ಸ್ಯಾದೀದೃಶಂ ವಚಃ ನ ಶೈವೊ ವಂದತೇ ವಿಷ್ಣುಂ ಹರಿಭಕ್ತಾಸ್ತು ನೋ ಶಿವಮ್" || ಎಂಬುದುಮೇಕೋದೇವ ಎಂಬುದಲ್ಲದೆ ಭಿನ್ನವಿಲ್ಲೆಂದಾನಿಂತೆಂದಂ

ವೃತ್ತ || ಯಂ ಶೈವಸ್ಸಮುಪಾಸತೇ ಶಿವ ಇತಿ ಬ್ರಹ್ಮೇತಿ ವೇದಾಂತಿನೋ
ಬೌದ್ಧಾ ಬುದ್ಧ ಇತಿ ಪ್ರಮಾಣಪಟವಃ ಕರ್ತೇತಿ ನೈಯಾಯಿಕಾಃ
ಅರ್ಹನ್ನಿತ್ಯಪಿ ಜೈನಶಾಸನರತಾಃ ಕರ್ಮೇತಿ ಮೀಮಾಂಸಕಾಃ
ವಿಷ್ಣುರ್ವೈಷ್ಣವ ಶಾಸನಾದಿ ಜಗತಾಂ ದೇವೋ ಯುಗಾದೀಶ್ವರಃ ||

ಎಂದಪೇಕ್ಷ ಸಮಾಧಾನಮಾಗೆ ಪೇಳ್ವ ಸದ್ಗುರುವಿನುಪದೇಶದಿಂದರಿಯಲಕ್ಕು ಮೆಂಬುದುಂ "ಸ್ವಯಂ ತರನ್ ತಾರಯಿತುಂ ಸಮರ್ಥಃ" ಎಂಬುದರಿಂ ಗುರುವಪ್ಪಾತಂ ಜ್ಞಾನದೃಷ್ಟಿಯಿಂದ ಜ್ಞಾನಾಂಧಕಾರಂ ಪಿಂಗಿ ಮೋಕ್ಷಮಾರ್ಗಮಂ ಕಂಡರಿವಾತಂ ತನ್ನ ಪೊರ್ದಿದ ಜ್ಞಾನಲೋಚನಮಿಲ್ಲದರು ತಿಳಿವಂತು ಮೋಕ್ಷಮಾರ್ಗಮಂ ತೋರಿ ಸಂಸಾರಶರಧಿಯಂ ದಾಂಟಿಸುವಂ ಜ್ಞಾನಿಮಿಲ್ಲದ ಗುರುವಂ ಪೊರ್ದಿ ಮುಕ್ತಿಮಾರ್ಗಮಂ ಕಾಣ್ಬೆನೆಂಬಾತಂ ಕುರುಡಂ ಕುರುಡನಂ ನಂಬಿ ಪೋಗುತ್ತಮಿಬ್ಬರುಂ ಕುಳಿಯೊಳ್ಬಿದ್ದರಂತೆ ಸಂಸಾರದೊಳೆ ಬೀಳ್ವರಲ್ಲದೆ ಮುಕ್ತಿಯ ಕಾಣರದರಿಂ ಗುರೂಪದೇಶಮಿಲ್ಲದ ಜ್ಞಾನ ಚಾರಿತ್ರಾದಿ ಸಾಮಗ್ರೀಯಮೆಲ್ಲಂ ಅನಾಥಬಲದಂತಪ್ಪುದಾ ಗುರುವೆಂತೆಂದೊಡೆ

ಶ್ಲೋಕ || ವಿಷಯಾಶಾವಶಾತೀತೋ ನಿರಾರಂಭೋ ಪರಿಗ್ರಹಃ
ಜ್ಞಾನಧ್ಯಾನತಪೋರಕ್ತ ಸ್ತಪಶ್ವೀ ಸಂಪ್ರಶಸ್ಯತೇ ||

ಹೀಗಲ್ಲದೆ

ಶ್ಲೋಕ || - ಸಂಗ್ರಂಥಾರಂಭಹಿಂಸಾನಾಂ ಸಂಸಾರಾವರ್ತವರ್ತಿನಾಮ್
ಪಾಷಂಡಿನಾಂ ಪುರಸ್ಕಾರೋ ಜ್ಞೇಯಂ ಪಾಷಂಡಿಮೋಹನಮ್ ||

ಎಂಬುದರಿಂ ನದೀಮೂಲ ಋಷೀಮೂಲಮನರ್ಥಕಮೆಂದು ನಾನಾ ಪ್ರಕಾರಮಂ ಕಲ್ಪಿಸಿ ವಿಪರೀತ ಮಿಥ್ಯಾಕರ್ಮೋದಯದಿಂ ಸ್ವೇಚ್ಛೆಯಿಂ ಶಾಸ್ತ್ರಮಂ ಕಲ್ಪಿಸಿಪ್ಪುದರಿಂ ಜ್ಞಾನಶೂನ್ಯರು ನಂಬುವರು ವಿಶ್ವಾಮಿತ್ರ ಪರಾಶರ ಪ್ರಭೃತಯೋವಾ ತಾಂಬು ಪರ್ಣಾಶನಾಃ ತೇಪಿ ಸ್ತ್ರೀಮುಖಿ ಪಂಕಜಂ ಸುಲಲಿತಂ ದೃಷ್ಟ್ವಾಪಿ ಮೋಹಗತಾಃ ನೀಚಜಾತಿಸಮುದ್ಭವರುಂ ಆಸೆ ರೌದ್ರ

ಮೋಹಾದಿಗಳೊಳ್ ಕೂಡಿದ ನಿಷ್ಕರುಣೆಗಳುಂ ವಂಚಕರುಂ ಡಂಬಕರುಂ ಸ್ತ್ರೀಯರ ಸೇವಿಸುವ ಕೊಳಕರುಂ ಮುಕ್ತಿಮಾರ್ಗಮನರಿವರಲ್ಲದರಿಂ ರಾಗದ್ವೇಷಾದಿ ವಿಷಯಮುಳ್ಳರಂ ಬಿಟ್ಟು ಸದ್ಗುರುವಂ ಪೊರ್ದುವುದೆಂದೊರೆಯುತ್ತಿರಲು ನೀವು ವೇದಬಾಹ್ಯರೆಂಬುದರಿಂ ವೇದವಿಲ್ಲದ ಬ್ರಾಹ್ಮಣನೆಂತಪ್ಪನೆಂಬುದುಂ ತರ್ಕಕರ್ಕಶಮನೆತ್ತಿ ನಮ್ಮನೆ ವೇಧಬಾಹ್ಯರೆಂದಾರೋಪಿಸಿ ಅಪೌರುಷೇಯಮಾದನಂತ ವೇದ ಶಾಸ್ತ್ರಂ ಸರ್ವಜ್ಞಮುಖಜನಿತಮಾಗಿ ಅನಾದಿ ಸಂಸಿದ್ಧಮಾಗಿ ವರ್ತಿಸುತ್ತಿಪ್ಪುದುಂ. ಈ ಹುಂಡಾವಸರ್ಪಿಣೀಕಾಲದೋಷದಿಂದಾದಿಯೊಳೆ ಮರೀಚಿಯೆಂಬಂ ಮಿಥ್ಯಾಕರ್ಮೋದಯದಿಂ ಕಪಿಲ ಸಿದ್ಧಾಂತಮಂ ಮಾಡಿರ್ದನದರಿಂದಲೆ ಷಟ್‌ಶಾಸ್ತ್ರಂಗಳು ಪುಟ್ಟಿದವಲ್ಲಿ ಬಹುಕಾಲಂ ಪೋಗಲರುವತ್ತು ಸಾಸಿರ ದೇವತೆಗಳ್ಗಧಿಪಂ ಮಹಾಕಾಳನೆಂಬೊಂ ತನ್ನ ಶತ್ರುವಿಧ್ವಂಸನ ನಿಮಿತ್ತ ವಿದ್ಯಾನುವಾದ ಶಾಸ್ತ್ರಮನೆತ್ತಿ ಅಥರ್ವಣವೇದಮೆಂದು ಚತುಃಷಷ್ಟಿ ಮರೀಚಿಗಳನುತ್ಪಾದಿಸಿ ಪರ್ವತನೆಂಬ ಬ್ರಾಹ್ಮಣಂ ವಿಪರೀತಗ್ರಾಹಿಯಾತಂಗೆ ಕೊಟ್ಟು ಹಿಂಸೆಯಿಂ ಪುಣ್ಯ ಬಪ್ಪುದೆಂದು ವಿಧಿಪೂರ್ವಕಮಂತ್ರದಿಂ ಮಾಳ್ಪುದೆಂದು ಪೋಗಲಾಪೊತ್ತಿಗೆ ಸಮುದ್ರದೊಳ್ ಬೀಳ್ವುದುಂ ಒಂದು ಮಹಾಮತ್ಸ್ಯಜನಿದು ಕರೆಯೊಳುಗುಳ್ದಿರೆ ರಾವಳೇಶ್ವರಂ ಕಂಡದಂ ನೋಡಿ ಪೋಗಿದ್ದುದಂ ಖಂಡಿಸಿ ಬೇಕಾದನಿತಂ ಸಂಗ್ರಹಿಸಿ ತಂದು ಪರ್ವತಂ ತನ್ನ ಕಾರ್ಯಕ್ಕಾಗಿ ಹದಿನೆಂಟು ವಿದ್ಯಾದೇವತೆಗಳಂ ಮಹಾಕಾಳನಿಂ ಪಡೆದು ಅಜೈರ್ಹೋತವ್ಯಮೆಂಬ ಸೂತ್ರಕ್ಕೆ ತರುವಾಚಿಯಂ ಬಿಟ್ಟು ಪಶುವಾಚಿಯಂ ನಂಬಿ ಅಥರ್ವಣದೊಳೆ ಸರ್ವಾಭಿಪ್ರೇತಾರ್ಥಮಾಗೆಯಾ ವೇದಮಂ ವ್ಯಾಸಂ ನಾಲ್ಕಾಗಿ ಮಾಡಿಯವಕ್ಕವಯವಂ ಮೊದಲಾದವಂ ಮಾಡಿದನದರೊಳು ಯಜು ರುಕ್ ಸಾಮ ಮೂರಕ್ಕೆ ಪನ್ನಹನಸು ಮೊದಲಾಗಾದುದದರಿಂದ ನಿಮ್ಮ ವೇದಕ್ಕೆ ಕರ್ತೃವಿಲ್ಲ ವಕ್ತೃಪ್ರಮಾಣದಿಂ ವಚನಪ್ರಮಾಣಂ, ವಕ್ತೃಪ್ರಮಾಣವಿಲ್ಲದುದರಿಂ ವಚನಪ್ರಮಾಣಮಿಲ್ಲದರಿಂದಾ ವೇದಂ ಕರ್ಮಕಾಂಡ ವಿಶೇಷಮಲ್ಲದೆ ಮುಕ್ತಿಮಾರ್ಗವಿಲ್ಲದಿವರು ನಿಶ್ಚಯಮಿಲ್ಲ ಪೂರ್ವಾಪರವಿರೋಧಮಪ್ಪುದದರಿಂ ನೀವೂ,

ಶ್ಲೋಕ || ಮಾನವಂ ವ್ಯಾಸವಾಶಿಷ್ಠಂ ವಚನಂ ವೇದಸಮ್ಮತಮ್
ಅಪ್ರಮಾಣಂ ಹಿ ಯೋ ಬ್ರೂಯಾತ್ಸಭವೇತ್ ಬ್ರಹ್ಮಘಾತಕಃ ||

ಎಂಬುದುಂ

ವೃತ್ತ || ಸಾಂಖ್ಯಂ ಯೌಗಮತಂ ವಿಶೇಷ ರಚಿತಂ ವೈಶೇಷಿಕಂ ವೈ ಪುನಃ
ಬ್ರಹ್ಮಾದ್ವೈತಮತಂ ಚ ವೈಷ್ಣವಮತಂ ಮಾಧ್ವಂ ಚ ರಾಮಾನುಜಮ್
ಭಾಟ್ಟಂ ವಾ ಪ್ರಥಿತಂ ಪ್ರಭಾಕರಮತಂ ನಿತ್ಯಂ ವಿರೋಧಾಸ್ಪದಂ
ಲೋಕೇ ಸಂಪ್ರತಿ ವೈ ಪರಸ್ಪರಮಿದಂ ವೇದಾಃ ಪ್ರಮಾಣಂ ಕಥಮ್ ||

ಅದರಿಂ

ಶ್ಲೋಕ || ಶ್ರುತಂ ಸುವಿಹಿತಂ ವೇದಂ ದ್ವಾದಶಾಂಗಮಕಲ್ಮಷಮ್
ಹಿಂಸೋಪದೇಶಯದ್ವಾಕ್ಯಂ ನ ವೇದೋಽಸೌಕೃತಾಂತವಾಕ್ ||

ಆದರಿಂದೆಮಗೆ ಮಿಥ್ಯಾವೇದಂ ಪ್ರಮಾಣಮಿಲ್ಲ ವೇದಶಾಸ್ತ್ರಮಾವುದೆಂದೊಡೆ

ಶ್ಲೋಕ || ಆಪ್ತೋಪಜ್ಞಮನುಲ್ಲಂಘ್ಯಮದೃಷ್ಟೇಷ್ಟವಿರೋಧಕಮ್
ತತ್ವೋಪದೇಶಕೃತ್ಸರ್ವಂ ಶಾಸ್ತ್ರಂ ಕಾಪಥಘಟ್ಟನಮ್ ||

ವೃತ್ತ || ಅಪೌರುಷೇಯಾನಖಿಲಾನ ದೋಷಾ | ನಶೇಷವಿದ್ಭಿರ್ವಿಹಿತ ಪ್ರಕಾಶಾನ್
ಪ್ರಕಾಶಿತಾರ್ಥಾನ್ಪ್ರಯಜೇ ಪ್ರಮಾಣಂ| ಪ್ರವೇದಯ ದ್ವಾದಶದಿವ್ಯವೇದಾನ್||

ಎಂದು ಮರುಮಾತಿಂಗೆಡೆಯಿಲ್ಲದಂತೆ ಪ್ರಮಾಣನಿರ್ಣಯಮಂ ಪೇಳ್ದರೆಂದು ಚತುರ್ಮುಖಶಾಸ್ತ್ರಿಗಳು ರಾಜಒಡೆಯರವರ ಸಭಾಮಧ್ಯದೊಳು ಪೇಳುತ್ತಿಪ್ಪದು ಕತಿಪಯಶಾಸ್ತ್ರಿಗಳೆಂದರು ನೀವು ಬಿರಿದುಳ್ಳ ಚತುರ್ಮುಖಶಾಸ್ತ್ರಿಗಳಾಗಿಯು ಬೌದ್ಧರ ಮಾತಿಂಗೆ ಪ್ರತ್ಯುತ್ತರವಿಲ್ಲದೆ ಆ ಶಾಸ್ತ್ರಮಂ ಪ್ರಕಟಿಸುವುದಿದು ಬಹು ಹಸನಾಗಿದೆಯೆಂದು ದುರ್ವ್ಯಾಜ್ಯಮನಾಡುವುದುಂ ಶಾಸ್ತ್ರಿಗಳೆಂದರು ಅಹಂಕಾರದಿಂ ಸತ್ಯಮತಮನರಿಯದೆ ಗುಣಕ್ಕೆ ಮತ್ಸರಂ ಮಾಳ್ಪಾತಂಗಿಹಪರದೊಳು ಸೌಖ್ಯಂ ದೊರೆಯಲಾರದದರಿಂದಜ್ಞಾನತ್ವದಿಂ ಮತಭೇದಮಂ ಕಾಣದೆ ಅನಾದಿಮಪ್ಪಾರ್ಹತಮತಮಂ ಬೌದ್ಧ ಮತಮೆಂದು ವಿಚಾರವಿಲ್ಲದೆ ಮಾತನಾಡಿದರೆ ಹ್ಯಾಗೆ ರಾಗದ್ವೇಷಮೋಹಗ್ರಸ್ಥರಾದರ್ಗೆ ದೇವಾದೇವ ಗುರ್ವಗುರು ಧರ್ಮಾಧರ್ಮ ಕಾರ್ಯಾಕಾರ್ಯ ಕೃತ್ಯಾಕೃತ್ಯ ಗುಣಾಗುಣಂಗಳು ತಿಳಿಯಲ್ಬಾರದು

ಶ್ಲೋಕ || ಅದೇವೇ ದೇವತಾ ಬುದ್ಧಿರತತ್ವೇ ತತ್ವನಿಶ್ಚಯಃ
ಮಿಥ್ಯಾತ್ವಾವಿಲಚಿತ್ತಸ್ಯ ಜೀವಸ್ಯಾ ಜಾಯತೇ ಯಥಾ||
ಮಧುರಂ ಜಾಯತೇ ತೀಕ್ಷ್ಣಂ ತೀಕ್ಷ್ಣಂ ತು ಮಧುರಾಯತೇ
ಪಿತ್ತಜ್ವರಾರ್ತ ಜೀವಸ್ಯ ವೈಪರೀತ್ಯಂ ತಥಾಖಿಲಮ್ ||
ಮದ್ಯಪಾನಾತ್ಯದಾಸೇವೋ (?) ನ ಜಾನಾಸ್ಯಹಿತಂ ಹಿತಮ್
ಧರ್ಮಾಧರ್ಮಂ ನ ಜಾನಾತಿ ಮಿಥ್ಯಾವಾಸನಯಾ ತಥಾ ||

ಎಂಬುದರಿಂ ಜೈನಮತ ಆದಿ ನಿರ್ದೋಷವಾದಂತಾದ್ದು. ಅಲ್ಲಿ ಗುರುಗಳ ಬಳಿಯೊಳಿರುವ ವಿದ್ವಾಂಸರು ಚತುಃಶಾಸ್ತ್ರಪಂಡಿತರು ಷಡ್ಭಾಷಾಕವಿಚಕ್ರವರ್ತಿಗಳು ಅನೇಕ ತರ್ಕಕರ್ಕಶರು ಕಾವ್ಯ ನಾಟಕಾಲಂಕಾರ ಸಂಗೀತನಿಪುಣರು ವ್ಯಾಕರಣಂಗಳು

ಶ್ಲೋಕ || ಇಂದ್ರಶ್ಚಂದ್ರಶ್ಚಾಪಿಶಲಿಃಕಾಶಕೃಚ್ಛಾಕಟಾಯನಃ
ಪಾಣಿನ್ಯಮರಜೈನೇಂದ್ರಾಃ ಭವಂತ್ಯಷ್ಟೌ ಸುಶಾಬ್ದಿಕಾಃ ||

ಎಂಬುದಲ್ಲದೆ ಕೌಮಾರಾದಿಗಳ ವ್ಯಾಖ್ಯಾನಂಗಳೆಲ್ಲಮಂ ಬಲ್ಲರು ಪಿಂಗಲ ವರ್ಧಮಾನ ನಾಗರಾಜ ಸೈತವ ಕಾಶ್ಯಪ ವೃತ್ತರತ್ನಾಕರ ರತ್ನಮಂಜೂಷೆ ಛಂದೋರ್ನವಾದಿ ಶಾಸ್ತ್ರಪಾರಗರು ಸಾಂಖ್ಯ ಸೌಗತ ಚಾರ್ವಾಕ ಯೌಗ ಮೀಮಾಂಸಕಾದಿಗಳಿಂ ಜಯಿಸಲಶಕ್ಯಮಪ್ಪುದರಿಂದಜಿತರು ಮತ್ತಂ ಯೋಗಿಣಿ ಸಂಗಿನಿ ಪ್ರಜ್ಞಾನಿ ಪ್ರಜ್ಞಪ್ತಿಗಳೆಂಬ

ಮಹಾವಿದ್ಯದೊಳತಿನಿಪುಣರಾಗಿಪ್ಪರವರೊಳೆ ಮಾತನಾಡುವ ಸಾಮರ್ಥ್ಯರಾರುಮಿಲ್ಲ ಮಂತಿರ್ದೊಡಂ ನೀವು ನಮ್ಮಲ್ಲಿಯಿರುವಂಥಾ ವೇದ ಮಹಾಭಾರತ ರಾಮಾಯಣ ಮೊದಲಾದೆಲ್ಲಾ ಶಾಸ್ತ್ರಂಗಳನ್ನು ಪುಸಿಕಲ್ಪನೆಯಿಂ ಬೀರಿ ನೀವು ಪೇಳಿದ ನಾಮ ಲಿಂಗಾನುಶಾಸನ ಮೊದಾಲಾದ ನಿಘಂಟುಗಳೊಳಗೆಲ್ಲ ಶಬ್ದಂಗಳು ಸಂಭವಪರ್ವದೊಳೆ ನಿರ್ಣೈಸಿದ ಪ್ರಕಾರ ಆದಿತೇಯ ಮೊದಲಾದವಂ ಪ್ರಯೋಗಿಸಿರ್ಪರೆಂತು ಪುಸಿಯಿಂ ಬಿಡಿ ಎಂದು ಕೇಳ್ದೊಡೆ ಪೂರ್ವದೊಳೆ ಮಹಾಕವಿಗಳ್ಗೆ ವಿಪರೀತ ಮಿಥ್ಯಾತ್ವ ಪುಟ್ಟಿ ಕಾಲದೋಷದಿಂ ದೈವಸಹಾಯಮಾಗೆ ಸ್ವೇಚ್ಛಾಬುದ್ಧಿಯಿಂ ಇತಿಹಾಸಂಗಳಂ ಕಲ್ಪಿಸಿದ್ದರೆ ಆ ಪುರಾಣಂಗಳಂ ನೋಡಿ ಆ ಮರ್ಯಾದೆಯಲ್ಲಿ ಶಬ್ದಗಳಂ ನೋಡಿ ವಾಲ್ಮೀಕಿ ವ್ಯಾಸಾದಿಗಳು ನಿಘಂಟಂ ಮಾಡಿರ್ದುದರಿಂದ ಲೋಕರೂಢಿಯಾಗಿರ್ದುದರಿಂದಾ ಶಬ್ದಂಗಳಂ ಸರ್ವತ್ರ ಸಮಾನಮಾಗಿ ಪೇಳ್ದರಲ್ಲದೆ ಪ್ರಮಾಣಶಬ್ದಂಗಳಲ್ಲವವಂ ಬಿಟ್ಟರೆ ಆರುಂ ನೋಡರು ಎಂದು ನಮ್ಮ ಶಾಸ್ತ್ರಗಳೆಲ್ಲಂದು ಶ್ರುತಿಯೆಂಬರೆಂದು ಪೇಳೆ ರಾಜ ಒಡೆಯರ ಸಭೆಯೊಳಿರ್ದ ಮಿಥ್ಯಾಗ್ರಸ್ತರಾದ ವಿದ್ವಾಂಸರೆಲ್ಲಂ ಕೋಪಿಸಿ ಈ ಶಾಸ್ತ್ರಿಯು ಪರಮತಮಂ ಕೊಂಡಾಡಿ ತನ್ನ ಮತಮಂ ದೂಷಿಸುವನೀತ ಪತಿತನಾಗಲ್ವೇಳ್ಕು ನಮ್ಮ ಸಭೆಗೆ ಯೋಗ್ಯನಲ್ಲನೆಂದು ಕೆಲಂಬರು ನಿರಾಕರಿಸುವುದುಂ ಕೆಲಂಬರೆಂದರು ತಮಗೆ ತಿಳಿವಷ್ಟಂ ಪೇಳ್ದೊಡೆ ದೋಷಮೇನೆಂಬುದು ಚತುರ್ಮುಖಶಾಸ್ತ್ರಿ ತನ್ನೊಳಿಂತೆಂದಂ

ಶ್ಲೋಕ || ಮೂರ್ಖೈರಪಕ್ವ ಬೋಧೈಶ್ಚ ಸಹಾಲಾಪೈಶ್ಚತುಷ್ಫಲಮ್
ವಾಚಾ ವ್ಯಯಂ ಮನಸ್ತಾಪಂ ತಾಡನಂ ದುಷ್ಪ್ರವಾದನಮ್ ||

ಎಂದು ಮೌನದಿಂ ರಾಜಒಡೆಯರಿಂ ಯಥೋಚಿತಮರ್ಯಾದೆಯಿಂ ಪೊರಮಟ್ಟು ಪೋಪ ಶಾಸ್ತ್ರಿಯಂ ಕೆಲಂಬರಿದೇಕೆ ಮೌನದಿಂ ಪೋಪಿರವರಾಡಿದ ಮಾತಿಂಗೆ ಪ್ರತ್ಯುತ್ತರಂಗೊಡದೆ ಪೋದಪಿರೆನೆ ಶಾಸ್ತ್ರಿಯೆಂದಂ ಚರ್ಮದೃಷ್ಟಿಯಿಲ್ಲದಂಗೆ ಲೋಕದೊಳುಳ್ಳ ಪಧಾರ್ಥಮೆಂತು ಕಾಣಲರಿಯನಂತೆ ಜ್ಞಾನದೃಷ್ಟಿಯಿಲ್ಲದಂಗೆ ಶುದ್ಧ ತತ್ವಂಗಳಿಂದೆಷ್ಟು ಪ್ರಕಾಶಮಂ ತೋರಿದೊಡಂ ಕಾಣನದರಿಂ ಕಾಷಾಯೋದಯಮಾಗಿ ಕ್ಲೇಶಾಯಾಸದಿಂ ಸಾಯ್ಗುಮಲ್ಲದೆ ತಿಳಿವನಲ್ಲೆಂದು ಮತ್ತಮಿಂತೆಂದಂ "ಸ್ಥಾನಸ್ಥಾನೇಷು ಪೂಜ್ಯಂತೇ" ಎಂಬುದರಿಂದ

ವೃತ್ತ || ಉಡುಗಣಪರಿವಾರೋ ನಾಯಕೋಪ್ಯೋಷಧೀನಾಂ
ಅಮೃತಮಯಶರೀರಃ ಕಾಂತಿಯುಕ್ತೋಽಪಿ ಚಂದ್ರಃ
ಭವತಿ ವಿಗತರಶ್ಮಿರ್ಮಂಡಲಂ ಪ್ರಾಪ್ಯ ಭಾನೋಃ
ಪರಸದನನಿವಿಷ್ಟಃ ಕೋ ಲಘುತ್ವಂ ನ ಯಾತಿ ||

ನ್ಯಾಯವೆಂಬುದು ಬಲಿಷ್ಠಕ್ಕಿದಿರಾಗದದರಿಂ ಜನಬಲ ಧನಬಲ ಅಧಿಕಾರ ಬಲಮುಳ್ಳವರು ಪಿಡಿದ ಅನ್ಯಾಯವೆ ಕಾಲದೋಷದಿಂ ನ್ಯಾಯಮಪ್ಪುದು ಸತ್ಯವಾದಿಯ ಮಾತು ಬೋಡ ಔಡುಗಚ್ಚಿದಂತೆ ನಿಲ್ಲದು.

ಉಪಜಾತಿ ||ಯಸ್ಯಾಸ್ತಿ ವಿತ್ತಂ ಸ ನರಃ ಕುಲೀನಃ ಸ ಪಂಡಿತಃ
ಸ ಶ್ರುತವಾನ್ ಗುಣಜ್ಞಃ
ಸ ಏವ ವಕ್ತಾ ಸ ಚ ದರ್ಶನೀಯಃ
ಸರ್ವೇ ಗುಣಾಃ ಕಾಂಚನಮಾಶ್ರಯಂತಿ ||

ತಥಾ-

ಶ್ಲೋಕ || ಜ್ಞಾನವೃದ್ಧಾಸ್ತಪೋವೃದ್ಧಾಃ ವಯೋವೃದ್ಧಾ ಬಹುಶ್ರುತಾಃ
ಇತ್ಯೇತೇ ಧನವೃದ್ಧಸ್ಯ ದ್ವಾರೇ ತಿಷ್ಠಂತಿ ಕಿಂಕರಾಃ ||

ಅಸತ್ಯದನ್ಯಾಯಿಗರು ನಾಲ್ವರ ಮಧ್ಯದೊಳೋರ್ವ ಸತ್ಯವಾದಿಯ ನ್ಯಾಯಂ ಗೆಲಲಾರದು. ಯಾತ್ರೆಗೆಯ್ದಿಂ ಬಪ್ಪ ದ್ವಿಜರೆಣ್ಬರು ಮಾರ್ಗದೊಳು ಕ್ಷುದ್ಬಾಧೆ ತಿಣ್ಣಮಾಗೆ ಪಚನಮಂ ಮಾಡಲು ಪಾತ್ರೆಯಿಲ್ಲದೆ ಒಂದು ತೊರೆ ಬಳಿಯ ರಜಕನ ಬಾನಿಯಿರ್ದೊಡದರೊಳೆ ಅನ್ನಮಂ ಮಾಡಿಯುಣ್ಬಲ್ಲಿ ಓರ್ವಂ ಪೇಸಿಯುಣಲೊಲ್ಲದೆ ಸ್ಥಳಕ್ಕೆ ಬಂದಲ್ಲಿ ಅವರ ದುರಾಚಾರಮಂ ಪೇಳಲೆಲ್ಲರು ಈತನೇ ಕ್ಷುಧಾತುರನಾಗಿ ತಾನೇ ಮಾಡಿ ತಿಂದನೆಂದೊರ್ವಂಗೆ ಪ್ರಾಯಶ್ಚಿತ್ತಮಂ ಮಾಡಿದರದರಿಂ ನಾಲ್ವರನ್ಯಾಯಮಂ ಪಿಡಿದೊಡೊರ್ವನ ನ್ಯಾಯಂ ನಿಲಲರಿಯದಿದು ಕಾಲದೋಷಮದಲ್ಲದೆ ಬಲ್ಲಿದಂ ಪೇಲ ತಿಂದೊಡೆ ಅವುಷಧಿಯ ಕೊಂಡನೆಂಬರು ಬಡವಂ ತಿಂದೊಡೆ ಹೊಟ್ಟೆಗಿಲ್ಲದೆ ತಿಂದನೆಂದು ದುಃಕರ್ಮಪೂರಿತ ಜೀವಂಗಳ್ಗೆ ಧರ್ಮಶಾಸ್ತ್ರಮರೋಚಕಮಪ್ಪುದು ಸ್ವಭಾವಂ ಚರ್ಮಖಂಡಮಂ ಜಗಿವ ಶ್ವಾನಂಗೆ ತುಪ್ಪಮೆಂತರೋಚಕಮಂತೆ ಕರ್ಮಂಗಳೊಳೆಲ್ಲಾ ಮೋಹನೀಯ ಕರ್ಮಂ ದೊಡ್ಡಿತ್ತಾದುದರಿಂದಾ ಕರ್ಮೋದಯದಿಂ ನಿಶ್ಚಯ ನಯಮಂ ಬಿಟ್ಟು ವ್ಯವಹಾರನಯಾವಲಂಬಿಗಳಾಗಿ ಸದ್ಭೂತಾಸದ್ಭೂತ ವ್ಯವಹಾರದೊಳುಪಚರಿತಾನುಪಚರಿತ ಭೇದಂಗಳಂ ನಿಶ್ಚಯಮೆಂಬ ನಂಬುಗೆಯಿಂ ಗತಿಗೆಡುವರಲ್ಲದೆ ನಿಶ್ಚಯಮಂ ನಂಬಲಾರರೆಂದುಂ ಸ್ವರ್ಗದೊಳಿಪ್ಪ ದೇವಂಗಮುಮೇಧ್ಯಮಧ್ಯದೊಳಿಪ್ಪ ಕೀಟಕಕ್ಕಂ ಸಮಾನವಾಂಛೆಯಲ್ಲದೆ ಸಕಲ ಜೀವಂಗಳು ನಾನು ನನ್ನದೆಂಬ ಮೋಹಮಂ ಬಿಡಲಾರವದರಿಂದವರೊಳು ನುಡಿದೊಡಂ ವ್ಯರ್ಥಮಲ್ಲದೆ ಸ್ವಾರ್ಥಮಾಗದೆಂದು ಜೈನ ಬ್ರಾಹ್ಮಣರೊಳು ಪ್ರಸಂಗಿಸುತ್ತಂ ಶ್ರೀ ಆದಿಪರಮೇಶ್ವರನ ಬಸದಿಗೆ ಬಂದು ಸಾಷ್ಟಾಂಗ ಪ್ರಣಾಮಂಗೆಯ್ದು ಶ್ರಾವಕರೊಳ್ ವಿನಯಮಂ ನುಡಿದು ಚತುರ್ಮುಖಶಾಸ್ತ್ರಿ ನಂಜನಗೂಡಿಗೆಯ್ದಿ ವಟುಗಳಿಗೆ ಅಧ್ಯಯನಮಂ ಪೇಳುತ್ತ ಹತ್ತೆಂಟು ವರುಷಮಿರ್ದು ನಂಬೀರ ನಂಜಪ್ಪಯ್ಯಗೆ ತರ್ಕ ವ್ಯಾಕರಣ ಕಾವ್ಯ ನಾಟಕ ಛಂದೋಲಂಕಾರಾದಿಗಳಂ ವೇದಾಧ್ಯಯನಂ ಮೊದಲಾಗೆ ಉಪದೇಶಂಗೆಯ್ದು ಸನ್ಮಾರ್ಗದಾಗಮಮಂ ತಿಳುಹಿಸಿದೊಡಾತಂ ಆದೀಶ್ವರರ ಸ್ತೋತ್ರಮಂ ಪಂಚರತ್ನಮೆಂದೈದು ಕನ್ನಡ ವೃತ್ತಮಂ ಪೇಳಿದಂ. ಅತ್ತಂ ಶ್ರೀರಂಗಪಟ್ಟಣದೊಳು ರಾಜಒಡೆಯರು ಕೆಲದಿವಸಂ ರಾಜ್ಯಂಗೆಯ್ದು ಕಾಲಂಗಾಣಲು ಸದಾಶಿವರಾಯನ

ಸೇನಾಪತಿಯಪ್ಪ ರಾಮರಾಯನ್ ಆಂಧ್ರ ಕರ್ನಾಟಾದಿ ದೇಶಂಗಳಂ ವಶಂ ಮಾಡಿ ತನ್ನಾಳ್ದನ ರಾಜ್ಯಮೆಲ್ಲಮಂ ತಾನೇ ಸ್ವೀಕರಿಸಿ ಶ್ರೀರಂಗಪಟ್ಟಣಮಂ ಕೊಂಡಲ್ಲಿರ್ದ ರಾಜಪುತ್ರರಂ ಇಪ್ಪತ್ತುಮೂರು ಹಳ್ಳಿಯಂ ಕೊಟ್ಟು ಮಹಿಸೂರಲ್ಲಿರಿಸಿ ತಾನು ತನ್ನ ಮಗಂ ತಿರುಮಲರಾಯನು ಪಟ್ಟಣದೊಳಿರ್ದು ಸ್ವಲ್ಪದಿವಸದಲ್ಲೆ ಕಾಲಂಗಂಡೊಡಾ ತಿರುಮಲರಾಯಂ ಪಟ್ಟಣದೊಳಿರ್ದನ್. ಇತ್ತಲ್ ಮಹಿಸೂರ ಚಾಮರಾಜಂಗೆ ಮೂವರ್ ಮಕ್ಕಳೊಳು ಕಿರಿಯ ಚಾಮರಾಜಂಗೆ ನಾಲ್ವರು ಸುತರವರೊಳು ಪಿರಿಯರಾಜನೃಪಂ ದಿಗ್ವಿಜಯೋದ್ಯೋಗಂಗೆಯ್ದು ಕೆಲಕೆಲ ನೃಪರಂ ಸಾಧಿಸಿ ಕಪ್ಪಂಗೊಳ್ಳುತ್ತಂ ಸ್ವಾಧೀನಮಾಗೆ ನರಸರಾಜನು ಇಮ್ಮಡಿರಾಜರೆಂಬ ಅಣುಗರ್ವೆರಸಿ ತಿರುಮಲರಾಜನ ಮೇಲೆತ್ತಿಪೋಗಿ ಪಟ್ಟಣದಿಂ ಪೊರಮಡಿಸಿ ಅಲ್ಲಿಗಧೀಶನಾಗಿ ನಂಜರಾಜನಂ ಸದೆದು ಪದಿನಾಡು ಮುಂತಾದ ರಾಜ್ಯಮಂ ಕೊಂಡು ಸುಖದಿಂ

ಅರಿನೃಪಗಿರಿಕುಲಿಶಂ ಸುರ
ಧೀರನಜೇಯ ಶೌರ್ಯನಖಿಲಜನಾಳಿ
ಸುರಭೂಜ ಷಣ್ಮತಂಗಳ
ಪರಿಪಾಲಿಸಿಯರಸುಗೆಯ್ದನಾ ರಾಜನೃಪಂ
ಇಂತೀ ಕಥೆಯಂ ನೆರೆ ಸಂ
ತತ ಕೇಳ್ವರಿಗೆ ಬುದ್ಧಿ ಬಲ ಸದ್ಜ್ಞಾನಂ
ಸಂತಾನ ಸೌಖ್ಯಸಂಪದ
ಸಂತತ ದೊರೆಕೊಳ್ಗು ಭ್ರಾಂತಿವಿಚ್ಛಿತ್ತಿತೆಯಿಂ

ಇದು ಸತ್ಯಪ್ರವಚನ ಕಾಲಪ್ರವರ್ತನ ಸಾರೋದ್ಧೃತ ದೇವಚಂದ್ರಧರಾಮರ ವಿರಚಿತ ರಾಜಾವಲೀ ಕಥಾಸಾರದೊಳ್ ಚತುರ್ಮುಖಶಾಸ್ತ್ರಿ ನಿವೇದಿತ ಕಥಾ ಪ್ರರೂಪಣಂ

ದಶಮಾಧಿಕಾರಂ

ಏಕಾದಶಾಧಿಕಾರಂ

ಶ್ರೀ ಸುಜನಸ್ತುತರಖಿಳಕ
ಳಾಸದನರ್ ಸತ್ಯವಾದಿಗಳ್ ಸುವಿಚಾರರ್
ಲೇಸೆಂದು ನಂಬಿ ಕೇಳ್ವುದು
ವೈಷಮ್ಯಮನುಳಿದು ಮೋಹರೋಷವ ಕಳೆದುಂ

ಈ ಪ್ರಕಾರದೊಳೆ ರಾಜ ಒಡೆಯರು ರಾಜ್ಯಂಗೆಯ್ಯುತ್ತ ಪ್ರಜಾಪರಿವಾರಂಗಳನತ್ಯಾದರದಿಂ ರಕ್ಷಿಸುತ್ತಮೆಂಟುವರ್ಷಂಬರಂ ಸುಖಮಿರ್ದು ಕಾಲಂಗಂಡೊಡೆ ಬಳಿಕ ಚಾಮರಾಜ ಒಡೆಯರ್ಗೆ ಪಟ್ಟಮಾಗೆ ವೀರವಿತರಣದಿಂ ರಾಜನೀತಿಯಂ ಬಿಡದೆ ಚಾಮುಂಡಿವರಪ್ರಸನ್ನರಾಗಿ ನುಡಿದ ಮಾತಿಗೆ ತಪ್ಪುವರ ಗಂಡ ಚಾಡಿವೇಳುವರ ಮಿಂಡ ಕದನಪ್ರಚಂಡ ಅರಿರಾಯಗಿರಿವಜ್ರದಂಡನೆಂದು ಬಿರುದಾಂತು ಮಲ್ಲರಾಜೇಂದ್ರನೆಂಬ ದಳಪತಿಸಹಿತಂ ಇಕ್ಕೇರಿ ಮಧುರೆ ಚಂದಾವೂರು ಕೊಡಗು ಮಲಯಾಳ ಮುಂತಾದ ರಾಜ್ಯಮಂ ಪಾಲಿಸುತ್ತಂ ಚೊಕ್ಕಲಿಂಗನ ಮಹಾಬಲಮಂ ಗೆಲ್ಲಂಗೊಂಡು ನಿರಂಕುಶರಾಗಿ ಇಪ್ಪತ್ತು ವರುಷಂಬರಂ ರಾಜ್ಯಮಂ ಪ್ರತಿಪಾಲಿಸುತ್ತಮೊಂದುದಿನಂ ತತ್ತ್ವಶಾಸ್ತ್ರಮಂ ಪ್ರಸಂಗಿಸುತ್ತಿರ್ದು ಜೈನಸಮಯದ ತತ್ತ್ವ ವಿಚಾರಣೆಯಂ ಮಾಡುತ್ತಂ ರತ್ನಾಕರಾರ್ಯ ವಿರಚಿತ ಭರತೇಶ್ವರ ಚರಿತೆ ಎಂಭತ್ತುನಾಲ್ಕು ಸಂಧಿಯಂ ಬಸ್ತಿಯುಪಾಧ್ಯಾಯರಿಂ ತರಿಸಿ ಸಭೆಯೊಳೋದಿಸಿ ಈ ಜೈನತತ್ವಶಾಸ್ತ್ರಮಂ ತಿಳಿವುದು ದುರ್ಲಭಂ ಅದೊಡಮೀ ಕೃತಿಯಂ ಮಾಡಿದವನೀಶ್ವರಂ ಸರ್ವಜ್ಞನಲ್ಲದೆ ಮನುಷ್ಯನಲ್ಲಾತನಾರೆಂದು ದೊರೆಗಳು ಕೇಳ್ವುದುಂ ಉಪಾಧ್ಯಾಯನೆಂದಂ ತುಳುವ ದೇಶದ ಮೂಡಬಿದರೆಯೊಳು ಸೂರ್ಯವಂಶದರಸುಗಳನ್ವಯದೊಳೆ ದೇವರಾಜನ ಪುತ್ರಂಗೆ ಕಡಲಾದಿ ಪರಮೇಶನ ಪೆಸರಿಡೆ ಬಾಲಕಾಲದೊಳೆ ಕಾವ್ಯಾಲಂಕಾರ ಲಕ್ಷಣ ಶಾಸ್ತ್ರದೊಳತಿನಿಪುಣನಾಗಿ ಸಾರತ್ರಯಕ್ಕೆ ಕೇಶವರ್ಯರು ರಚಿಸಿದ ವ್ಯಾಖ್ಯಾನಂಗಳಂ ಕುಂದಕುಂದಾರ್ಯೋಕ್ತ ಅಧ್ಯಾತ್ಮಸಿದ್ಧಾಂತಕ್ಕೆ ಪ್ರಭೇಂದುಗಳು ಮಾಡಿದ ಟೀಕಂ ಸಮಾಧಿಶತಕ ಏಕಸಪ್ತತಿ ಸ್ವರೂಪಸಂಬೋಧನೆ ಮೊದಲಾದನೇಕ ಪರಮಾಗಮಂಗಳಂ ಹೃದ್ಗತಮಾಗೆ ತಿಳಿದು ಕವೀಶ್ವರನಾಗಿ ಆ ದೇಶದರಸು ಸೋಮವಂಶದ ಭೈರಸ ಒಡೆಯರ ಸಭೆಯೊಳೆ ಶೃಂಗಾರಕವಿಯೆಂಬ ಪೆಸರಾಂತು ವಿದ್ವಾಂಸರ್ಗಧಿಕನಾಗಿ ಯೋಗರತ್ನಾಕರ ಶಾಸ್ತ್ರಾಭ್ಯಾಸದಿಂ ದಶವಾಯುಗಳಂ ಸಾಧಿಸಿರ್ದು ರತ್ನಾಕರನೆಂಬಭಿದಾನದಿಂ ಪೂರ್ವ ವಯಸ್ಸಿನೊಳೆ ಭೈರಸೊಡೆಯರ ಪುತ್ರಿ ಮೋಹಿಸೆ ಸೌಧಾಗ್ರಮವೇರಿ ವಾಯುಧಾರಣೆಯಂ ಮಾಡಿ ದಶವಾಯುಗಳ ಸಾಧಿಸಿ ಯೋಗಾಭ್ಯಾಸದೊಳೆ ಪ್ರೌಢನಾಗಿಪ್ಪುದರಿಂದಾಕೆಯೊಳತ್ಯಾಸಕ್ತನಾಗಿ ಆಕೆಯಂ ಕೂಡಲು ಸೌಧಾಗ್ರದ ಮೇಖಲೆಯನ್ನೇರಿ ವಾಯುಧಾರಣೆಯಿಂ

ಗವಾಕ್ಷದಿಂದೆಯ್ದುತ್ತವಳೊಳೆ ನೇಹಂ ಮಾಡುತ್ತಿರಲರಸನರಿದು ಪಿಡಿಯಲುದ್ಯೋಗಿಸಲಾ ರಾತ್ರಿಯೊಳೆ ಪೋಗಿ ನಿಜಗುರುವಪ್ಪ ಮಹೇಂದ್ರಕೀರ್ತಿಗಳಿಂದ ಅಣುವ್ರತದೀಕ್ಷೆಗೊಂಡು ಆಗಮಂಗಳೊಳತಿನಿಪುಣನಾಗಿ ಅಧ್ಯಾತ್ಮದೊಳೆ ಅಹರ್ನಿಶಂ ಕೂಡಿರೆ ವಿಜಯಕೀರ್ತಿಗಳೆಂಬ ಪಟ್ಟಾಚಾರ್ಯರ ಶಿಷ್ಯರಾದ ವಿಜಯಣ್ಣಗಳು ದ್ವಾದಶಾನುಪ್ರೇಕ್ಷೆಗಳಂ ಕನ್ನಡದಿಂ ಸಂಗೀತಮಾಗಿ ಕನ್ನಡ ವೃತ್ತ ವಚನದಿಂ ಮಾಡಿ ಆನೆಯ ಮೇಲೆ ಪ್ರಭಾವನೆಯಂ ಮಾಡಿಸಲೀ ರತ್ನಾಕರಾರ್ಯಂ ಭರತೇಶ್ವರಚರಿತಂ ಈ ಎಂಭತ್ತುನಾಲ್ಕು ಸಂಧಿಯಂ ಮಾಡಿ ಮಾತಂಗಮನೇರಿಸಿ ಮೆರೆಯಿಸಲೆಂಬುದು ಪಟ್ಟಾಚಾರ್ಯರೆಂದರಿದರೊಳೆರಡು ಮೂರು ವಾಕ್ಯಂ ಪುರಾಣಕ್ಕೆ ವಿರೋಧಮಿಪ್ಪುದದರಿಂದಾಗದೆಂಬುದುಮದೆ ಸಂವಾದಮಾಗೆ ಚರ್ಚಿಸಿದೊಡೆ ತನ್ನ ತಿರಸ್ಕರಿಸಿ ಏಳುನೂಱು ಶ್ರಾವಕರ ಗೃಹದೊಳು ಚರಿಗೆಯಂ ಮಾಡದಿರಲು ನಿಜಾನುಜೆಯಿಂದಾಹಾರಮಂಗೊಳ್ಳುತ್ತಾ ಕೋಪಮುದಯಿಸಿ ಆತ್ಮಜ್ಞಾನಿಗೆ ಜಾತಿಕುಲ ಮಾವುದಾದೊಡಂ ಸಮಮೆಂದು ಲಿಂಗಮಂ ಕಟ್ಟಿಕೊಂಡು ವೀರಶೈವ ಶಾಸ್ತ್ರಂಗಳಂ ಬಸವ ಪುರಾಣಂ ಮೊದಲಾಗೆ ಮಾಡಿ ಕೆಲವು ದಿನದಿಂ ಮೇಲೆ ಉಪಶಮಮಂ ತಾಳ್ದು ಸನ್ಮಾರ್ಗದೊಳು ನಂಬಿ ನಡೆದಾರಾತನಿಂ ರತ್ನಾಕರ ಶತಕಂ ಅಪರಾಜಿತ ಶತಕಂ ತ್ರಿಲೋಕ ಶತಕಂ ಅಧ್ಯಾತ್ಮಗೀತಂಗಳು ಎರಡು ಸಾವಿರ ಗ್ರಂಥದಷ್ಟು ಪೇಳಿದ ಶಕವರುಷ ೧೪೭೯ ಸಂದಿರ್ದುದೆಂದು ಪೇಳಿ ಮತ್ತಂ ಕಲ್ಲಹಳ್ಳಿಯ ವಿಜಯಭೂಪಾಲ ಸಚಿವಾಗ್ರಗಣ್ಯ ಸುಪುತ್ರ ಮಂಗರಸನೆಂಬಂ ತದಗ್ರಜಂ ನಂಜುಂಡರಸೆಂದಿರಲಾ ಕಾಲದೊಳೆ ಗಂಗನೆಂಬಂ ಕುಮ್ಮಟದ ಬೇಡರಸಂ ರಾಮನ ಸಂಗೀತಮೆಂದು ಕೃತಿಯಂ ಮಾಡಿ ಓದುತ್ತಿಪ್ಪುದು ನಿಜಗಣಿಕೆಯಿಂ ಕೇಳಿ ಆತಂ ಲಿಂಗಧಾರಿಯಾಗಿ ವೀರಶೈವಾಚಾರಿಯಾಗಿರ್ದುದರಿಂದಾ ರಾಮನ ಸಂಗೀತಮಂ ವಿಶಾಲವಾಗಿ ಮಾಡಲೆಂದು ತೊಡಗಿ ತನ್ನ ತಮ್ಮನಪ್ಪ ಮಂಗರಸಂ ಜಿನಭಕ್ತಂಗರಿಪೆಯದಂ ತೊಡಗಿ ಮೂವತ್ತೆರಡು ಸಂಧಿಯಂ ಮಿಥ್ಯಾಮಾರ್ಗವಿಡಿದು ಕರ್ಣಾಟಕ ಭಾಷೆಯಿಂ ಶೃಂಗಾರರಸಂ ಪೂರಿತಮಾಗೆ ಕಿರಾತನ ಶುಚಿಯಂ ವರ್ಣಿಸಿ ಕೃತಿಯಂ ಮಾಡಿ ಜನಮಂ ಮೆಚ್ಚಿಸಲದಕ್ಕೆ ಮಂಗರಸನ ಗುರುಗಳು ನೀಂ ರಚಿಸಿದ ಮಿಥ್ಯಾಕಥೆಯಿಂ ಪಾಪಸಂಪಾದನೆಯಾಗಿ ಕೆಟ್ಟುಪೋಪೆ ಎನಲದರ ಪ್ರಾಯಶ್ಚಿತ್ತಕ್ಕೆ ಹರಿವಂಶಮಂ ಪ್ರಭಂಜನಕಥೆಯಂ ಶ್ರೀಪಾಲಚರಿತೆಯಂ ಜಯಕುಮಾರಪರಿವರ್ಧಿನೀಷಟ್ಪದಿಯಂ ಸಮ್ಯಕ್ತ್ವಕೌಮುದೀಷಟ್ಪದಿ ಎಂಬೀ ಪಂಚಕಾವ್ಯಮಂ ಸಂಸ್ಕೃತ ವಸ್ತುಕಂಗಳಂ ತೆಗೆದು ಕನ್ನಡದಿ ಪಂಚಕೃತಿಯಂ ಮಾಡಿಸಿದನ್. ಅದರೊಳೆ ಸ್ಯಾದ್ವಾದಮಾರ್ಗವಿಡಿದ ಹರಿವಂಶಮಂ ತಂದು ಮುಕ್ಕಾಲುವರಿಗೆ ಓದಿಸಿ ಕೇಳಿ ತೆರಕಣಾಂಬಿ ನೇಮಿಚಂದ್ರಾರ್ಯರ ಮೊಮ್ಮಗನಪ್ಪ ಬೊಮ್ಮರಸಂ ಪೇಳಿದ ಸನತ್ಕುಮಾರ ಷಟ್ಪದಿಯಂ ಪಿರಿಯಾಪಟ್ಟಣದ ದೊಡ್ಡಯ್ಯಂ ಪೇಳ್ದ ಚಂದ್ರಪ್ರಭಚರಿತೆ ಮೊದಲಾಗೆ ಕೇಳ್ದು ಜೈನಮತಂ ದೊಡ್ಡದೆಂದು ಪ್ರಶಂಸೆಗೆಯ್ದರ್.

ಇವರಾಳಿದ್ದ ೧೮ ವರುಷದವರಿಗು ನಡೆದುಬರುವಲ್ಲಿ ಪರಚಕ್ರಮಾಗೆ ಕೆಲಕೆಲವು ದಿವಸ ರಾಜಿಕದೈವಿಕದಿಂ ಪ್ರಜೆಗಳ್ಗೆ ಉಪದ್ರಂಗಳು ಕ್ಷಾಮಂಗಳು ಹಗಲುಗತ್ತಲೆ ಉತ್ಪಾತಂಗಳು

ಕಾಣುತ್ತಿರ್ದು ಮತ್ತೆ ರಾಜಒಡೆಯರ ಮೊಮ್ಮಗರಪ್ಪ ಇಮ್ಮಡಿ ರಾಜ ಒಡೆಯರು ಆಳಿದ್ದು ಒಂದೂವರೆವರ್ಷ. ಬಳಿಕ ಕಂಠೀರವ ನರಸರಾಜೊಡೆಯರು ದೊಡ್ಡ ದೇವರಾಜರು ಸಹಿತ ಹದಿಮೂರು ವರುಷದವರೆಗೆ ಆಳುತಲ್ಲಿ ಉಮ್ಮತ್ತೂರ ಜೈನಬ್ರಾಹ್ಮಣಂಗೆ ಸೂರಯ್ಯನೆಂಬ ಮಗನಾಗಿ ಅತಿಪ್ರಚಂಡನಾಗಿ ಪಂಚಮ ವರುಷದೊಳಕ್ಷರಾಭ್ಯಾಸಮಂ ಮಾಳ್ಪುದುಂ ಓದು ಬರಹಮಂ ಬಿಟ್ಟು ಹೆಳ್ಳೆಸೆಂಡು ಬುಗರಿ ಗೋಲಿ ಮೊದಲಾದವನಾಡುತ್ತ ತಂದೆಯಾಜ್ಞೆಯಂ ಮೀರಿ ನಡೆಯುತ್ತಿರೆ

ಶ್ಲೋಕ || **ಲಾಲನಾದ್ಬಹವೋ ದೋಷಾಸ್ತಾಡನಾದ್ಬಹವೋ ಗುಣಾಃ**
ತಸ್ಮಾತ್ಪುತ್ರಂ ಚ ಶಿಷ್ಯಂ ಚ ತಾಡಯೇನ್ನ ಚ ಲಾಲಯೇತ್ ||

ಎಂದು ಹಿಡಿದು ದಂಡಿಸಿ ಧೂಳಕ್ಷರಮಂ ಬರೆಯಿಸುತ್ತಾವ ಒತ್ತಂ ಕೊಟ್ಟು ಓದೆಂಬುದುಂ ಭದ್ರವಾಗಿ ಅಳ್ಳಾಡದಂದು ಕೊಟ್ಟೇನೆಂದುಂ ಕಲ್ಲು ಮೊದಲಾದವರಿಂದೊತ್ತನಿಕ್ಕುತಿಪ್ಪುದುಂ ಸ್ವರ ವ್ಯಂಜನಾಕ್ಷರ ಕೂಟಮುಂ ದಿನ ಎಂಟರೊಳೆ ಕಲಿಸೆ ಮತ್ತೊಮ್ಮೆ ಹಿಡಿತಂದು ನಾಮಲಿಂಗಾನುಶಾಸನಮಂ ಪೇಳೆಂದು ಪುಸ್ತಕಮಂ ಕೊಟ್ಟು ಓದೆಂದೊಡೆ ಇದನೋದುವಂದವ ಸವಿಸ್ತರಂ ಪೇಳಲೋದುವೆನೆನೆ ಶ್ಲೋಕ ಪದ ಅರ್ಥ ಲಿಂಗ ಸಾಹಚರ್ಯ ರೂಪ ಭೇದ ವಿಶೇಷಣ ವಿಧಿ ಎಂದೀ ಪತ್ತು ಗ್ರಂಥಕ್ಕೆ ಕೇಳಿ ನಾಲ್ಕುವೇಳೆ ಪಠಿಯಿಸಿ ಪುಸ್ತಕಮಂ ಕಟ್ಟಿ ಪೋಗಿ ಬಾಲಕ್ರೀಡೆಯೊಳಾಟಮನಾಡುತಿರ್ಪುದುಂ.

ಶ್ಲೋಕ || **ಆಲಸ್ಯಂ ಮಂದಬುದ್ಧಿಶ್ಚ ಸುಖೀ ಚ ವ್ಯಾಧಿಪೀಡಿತಃ**
ನಿದ್ರಾಲುಃ ಕಾಮುಕಶ್ಚೈವ ಷಡೇತೇ ಶಾಸ್ತ್ರವರ್ಜಿತಾಃ ||

ಶಾಸ್ತ್ರಾಭ್ಯಾಸಿಗೆ ಬಾಹ್ಯಾಭ್ಯಂತರ ಪತ್ತು ಗುಣವಿದ್ದರೆ ಬಪ್ಪುದೆಂಬುದರಿಂದಲೂ ಮತ್ತಂ

ಶ್ಲೋಕ || **ಯಃ ಪಠತಿ ಲಿಖತಿ ಪರಿಪೃಚ್ಛತಿ ಪಂಡಿತಾನುಪಾಸಯತಿ**
ತಸ್ಯ ದಿವಾಕರಕಿರಣೈರ್ನಲಿನೀವ ವಿಸರ್ಪತೇ ಬುದ್ಧಿಃ ||

ಎಂದಾತನಂ ಕರೆದಂ ಓದು ಬರಹಮಂ ಬಿಟ್ಟು ಅಪ್ರಬುದ್ಧನಾಗಿ ಕೆಟ್ಟೆ ಎಂದಾಗ್ರಹದಿಂ ನುಡಿವುದುಂ ರಾತ್ರಿ ಕಂಬದ ಮೇಲೆ ದೀಪಮನಿಟ್ಟು ಪುಸ್ತಕಮಂ ಮೊದಲಿಂದಂ ಕಡೆವರಂ ತಾನುಂ ಈಕ್ಷಿಸುತ್ತ ಗ್ರಹಿಸಿ ಪುಸ್ತಕಮಂ ಕಟ್ಟುತ್ತಿರೆ ತಂದೆ ಕೋಪಿಸಿ ತ್ರಿಕಾಂಡಂ ಮುಗಿದು ಬಂದು ಮಗನಂ ಮೂದಲಿಸಿ ದೀಪಮಂ ತೆಗೆದ ಕಂಬಮಂ ನೋಡಲುಬಾರದು ಕೆಡಹಿ ಮಡಗುವುದೆನೆ ಬಾಲಕನೆಂದನಿಲ್ಲಿ ಭುಜಂಗೇಶ್ವರನ ಗುಡಿಯ ಮುಂದಣ ಕಂಬಂ ಎದ್ದು ಬಂದಾಗಲೆ ಕಾಣ್ಬುದದಂ ಕೆಡಹಿ ಬೆಳಗಾಗಲೆತ್ತುವರಾರುಮಿಲ್ಲದೇ ಕೆಡವಿ ಎತ್ತಿದೊಡೆ ನಾನುಂ ಅಂತೆ ಮಾಳ್ಪೆನೆಂದೊಡೆ ನೀನಿಂತಾಡಿಪೆ ನಿನಗೆ ನಾಮಲಿಂಗಾನುಶಾಸನಮಂ ಪ್ರಾರಂಭಿಸಿ ತಿಂಗಳ ಮೇಲಾಗಿ ಇದುವರೆಗಂ ಒಂದು ಶ್ಲೋಕವೂ ಬಾಯಿಗೆ ಬರಲಿಲ್ಲಾ ವಿದ್ಯಾವಾಗ್ಜಾಲಯಕ್ಷನಂ ಎಂಬುದು ನೀನು ಮೂಗರಂತೆ ನೋಡಿ ಪುಸ್ತಕಮಂ ಕಟ್ಟಿದ ಮಂದಮತಿಯೆನ್ನ ಮಗನೆಂಬ ಮಮಕಾರವಿಲ್ಲ ಮನೆಯೊಳಿರಲಾಗದೆಂದತ್ಯಾಗ್ರಹಂ ಮಾಡಿದೊಡೆ ಆದರೀ ಪುಸ್ತಕಮಂ ತಪ್ಪಂ

ನೋಡಿಮೆಂದು ತಾತನ ಕೈಯೊಳ್ಕೊಟ್ಟು ತಾನುಂ ಸ್ವರ್ಗ ವರ್ಗ ಮೊದಲಾಗೆ ಸಂಕೀರ್ಣಾ ಲಿಂಗಾದಿ ಸಂಗ್ರಹಾಂತ್ಯಮಾಗೆ ಮೂರು ಕಾಂಡಮಪ್ಪಮರಗ್ರಂಥಮಂ ಬಿಂದು ವಿಸರ್ಗ ವ್ಯಂಜನ ಹ್ರಸ್ವ ದೀರ್ಘ ಪ್ಲುತ ನಾಸಿಕಾನುನಾಸಿಕಮುದಾತ್ತಾನುದಾತ್ತ ಸ್ವರಿತಪ್ರಚಯಾಲ್ಪ ಮಹಾ ಪ್ರಾಣ ಘೋಷಾಘೋಷ ಮೊದಲಾದವಂ ತಪ್ಪದಂತು ಸಂಪೂರ್ಣಮಾಗೆ ವಾಗ್ದೋರಣೆಯಿಂ ಕಂಠಸ್ಥಿತಮಾಗೆ ಪಾಠಮಂ ಪೇಳೆ ಇನ್ನು ಮೇಲೆ ನಾನು ನಿನಗೊಂದಕ್ಕರಮಂ ಪೇಳ್ವುದಿಲ್ಲೆಂದು ತಂದೆಯು ಪ್ರತಿಜ್ಞೆಯಂ ಮಾಡಿದೊಡಾ ಸೂರಿಯು ಭಲ್ಲಾತಕೀಪುರಮನೆಯ್ದಿ ಬಂಧುಗಳ ಮನೆಯೊಳಿರ್ದು ವಿದ್ಯಾಭ್ಯಾಸಂ ಮಾಡುತ್ತಿರಲಲ್ಲಿ ರಾಜಂ ಕರೆಯಿಸಿ ಪೂರ್ವ ಭೈರಾದೇವಿಯರು ನಿಮ್ಮ ವಂಶದೊಳು ಚಿಕಿತ್ಸಾರಸಂಗಳನನೇಕಂ ಮಾಡಿಸಿದರದರಿಂ ನೀಮುಂ ವೈದ್ಯಶಾಸ್ತ್ರಮಂ ಕಲ್ವುದೆನೆ ತಾನುಂ ವೈದ್ಯದಿಂ ಫಲಮಲ್ಲದೆ ನಿಷ್ಫಲವಾಗದು ಕೆಲವೆಡೆಯೊಳು ಲಾಭಂ ಸ್ನೇಹಂ ಪೂಜ್ಯಂ ಕೀರ್ತಿಮಭ್ಯಾಸಾದಿ ಫಲಂಗಳಿಂ ಧರ್ಮಮಾಗೆ ಉಭಯ ಲೋಕಹಿತಮೆಂದಾ ಚಿಕಿತ್ಸಾಶಾಸ್ತ್ರಂಗಳು

ಶ್ಲೋಕ || **ರಸಾರ್ಣವಂ ಬಾಹಟಂ ಚ ಪಾರಿಜಾತಂ ಚ ಕೌಮುದೀ**
ನಾಗಾರ್ಜುನಂ ಚ ಕಾಪಾಲಂ ದಾಮೋದರಮತಂ ತಥಾ ||

ರಸಹೃತ್ಸಿದ್ಧಸಾರಂ ಚ ಸೂತಸಾರಂ ಚ ಟಂಕಣಂ
ಗೋಪಾಲಿಂ ಇಂದುನಾಥಂ ಚ ಗುಣಚಿಂತಾಮಣಿಸ್ತಥಾ ||

ಶಾರೀರಂ ವೀರಭದ್ರೀಯಂ ವೈದ್ಯದೀಪಕಮೇವ ಚ
ಸೋಮನಾಥಮಹಾಶಾಸ್ತ್ರಂ ನಂದಿನಾಥಂ ಚಿಕಿತ್ಸಕಮ್ ||

ರಸಂ ಚ ಜೀವನೋಪಾಯಮಹಿತಾಸಾರಮೇವ ಚ
ಇನರತ್ನಾವಲೀಸಾರಂ ಯಮಲಂ ರಸದರ್ಪಣಮ್ ||

ಇಂದ್ರಸೇನಂ ಚ ಚರಕಂ ಸುಶ್ರುತಾನಿ ಸರಾನಿ ಚ
ಹಿತೋಪದೇಶವ್ಯಾಧಿಘ್ನಂ ರುಜಾನಾಶನದೀಪಿಕಾ ||

ನಿತ್ಯಾರೋಗ್ಯಂ ಚ ನಿರುಜಂ ನಿರ್ವ್ಯಾಧಿರ್ಭೇಷಜಾರ್ಣವಮ್
ಇತ್ಯಾದಯೋ ವೈದ್ಯಶಾಸ್ತ್ರೇಷ್ವಧೀತ್ಯ ಭಿಷಗುತ್ತಮಮ್ ||

ಇಂತಲ್ಲದೆ ಪೂರ್ವದೊಳು ಪಶುಪತಿ ಬೃಹಸ್ಪತಿ ನಾತನು ಅಗ್ನಿವೇಶ್ಯ ಹಸ್ತಚಾರಿ ವಾಗ್ಬಲಿ ರಾಜಪುತ್ರ ಗಾರ್ಗ್ಯ ಭಾರ್ಗವ ಭಾರದ್ವಾಜ ಪಾಲಕ ಅತಿವಿಶಾಲ ಕೌಶಿಕಪುತ್ರ ವೈದರ್ಭ್ಯ ನರನಾರಕ ಕುಂಭದತ್ತ ವಿಭಾಂಡಕ ಹಿರಣ್ಯಾಕ್ಷ ಪಾರಾಶರ ಕೌಂಡಿನ್ಯ ಕಾಂಡಾಯಿನ ತೈತ್ತಿರ ತೈತಿಲ್ಯ ಮಾಂಡವ್ಯ ಶಿಬಿ ಶೀಬಾ ಬಹುಪುತ್ರ ಅರಿಮೇಧ ಕಾಶ್ಯಪ ಯಾಜ್ಞವಲ್ಕ್ಯ ಮೃದಶರ್ಮ ಶಾಖಾಯಿನ ಬ್ರಹ್ಮ ಪ್ರಜಾಪತ್ಯ ಅಶ್ವಿನಿ ಸುರೇಂದ್ರ ಧನ್ವಂತರಿ ಎಂದಿವರ್ ಮೊದಲಾಗೆ ಪೇಳ್ದ ವೈದ್ಯಶಾಸ್ತ್ರಂಗಳೊಳ್ ಮತಿನಿಂದ್ಯವಪ್ಪ ಅಭಕ್ಷ್ಯಂಗಳಂ ಯೋಚಿಸಿಪ್ಪುದರಿಂದತಿ ಪಾಪಹೇತುವಪ್ಪುದರಿಂ ದ್ರವ್ಯಾಪೇಕ್ಷೆಯಿಂದ ಪಾತ್ರ ಕುಪಾತ್ರಂಗಳ್ಗೆ ಕೊಟ್ಟು ನರಕಾದಿ

ದುರ್ಗತಿಯಂ ಪಡೆವರದರಿಂ ಧರ್ಮಶಾಸ್ತ್ರದೊಳ್ ವೈದ್ಯ ಜ್ಯೋತಿಷಂಗಳಂ ವರ್ಜಿಸುವರ್.

ಶ್ಲೋಕ || **ವೈದ್ಯಜ್ಯೋತಿಷವಾದಾಭ್ಯೈರ್ನ್ನಾರಕತ್ವಮವಾಪ್ನುಯಾತ್**
ವೈದ್ಯರಾಜ ನಮಸ್ತುಭ್ಯಂ ಯಮಜ್ಯೇಷ್ಠ ಸಹೋದರಾ ||

ಜಾತಿಗಾಥಾ|| **ಯಮಸ್ತು ಹರತೇ ಪ್ರಾಣಾನ್ ಧನಪ್ರಾಣಹರೋ ಭಿಷಕ್**
ಯಮಃ ಕ್ರೂರೋ ಭಿಷಕ್ಕ್ರೂರೋ ಯಮಾತ್ಕ್ರೂರತರೋ ಭಿಷಕ್
ಯಮಸ್ತು ಹರತೇ ಪ್ರಾಣಾನ್ ವೈದ್ಯಸ್ತುಸವಸೂನಸೂನ್ ||

ಅದರಿಂ ವೈದ್ಯರು ನಿಃಕರುಣದಿ ಮಧುಮದ್ಯಮಾಂಸಾದಿ ಅಭಕ್ಷ್ಯಂಗಳಂ ಪೇಳ್ದೊಡಾಪ್ತರಲ್ಲದಾಗಮಮಲ್ಲಮೆಂದು

ಶ್ಲೋಕ || **ಆಗಮೋಹ್ಯಾಪ್ತವಚನಂ ಆಪ್ತಂ ದೋಷಕ್ಷಯಂ ವಿದುಃ**
ಕ್ಷೀಣದೋಷಾನೃತಂ ವಾಕ್ಯಂ ನ ಬ್ರೂಯಾದಿತ್ಯಸಂಭವಾನ್ ||
ಜ್ಞಾನಮಪ್ರತಿಹತಂ ತಸ್ಯ ವೈತಾನ್ಯಂ ಚ ಜಗತ್ಪತೇಃ
ಷಡೈಶ್ವರ್ಯಂ ಚ ಧರ್ಮಶ್ಚ ಸಹಸಿದ್ಧಂ ಚತುಷ್ಟಯಮ್ ||

ಅದರಿಂ ದ್ರವ್ಯರಸವೀರ್ಯ ವಿಪಾತ್ಮಾಕ ವಸ್ತು ಸ್ವರೂಪಕ ನಿರೂಪಣ ಸ್ಯಾದ್ವಾದ ವಾದಮಾಶ್ರಯ ಸರ್ವ ಜೀವದಯಾಪರ ಸರ್ವಜ್ಞ ಜಿನೇಂದ್ರಪ್ರಣೀತ ವಿವಕ್ಷಿತಾಧಿಕ ಕ್ಷೀರ ಸ್ವರೂಪಾನೇಕ ಧರ್ಮಾಧಿಷ್ಠಾನೈಕವಸ್ತು ತತ್ತ್ವ ಪ್ರತಿಪಾದನ ಪರಪ್ರಾಣವಾಯು ಮಹಾಸಮುದ್ರಜನಿತ ಲಕ್ಷ್ಮಿಯಂತೆ ಎಲ್ಲಾ ಲೋಕಹಿತ ನಿರವದ್ಯವೇದ್ಯಮೇ ಇಹಪರ ಲೋಕ ಹಿತಮಪ್ಪುದು

ಶ್ಲೋಕ || **ಆಗಮೋಹ್ಯಾಪ್ತವಚನಂ ಆಪ್ತಂ ದೋಷಕ್ಷಯಂ ವಿದುಃ**
ಕ್ಷೀಣದೋಷಾನೃತಂ ವಾಕ್ಯಂ ನ ಬ್ರೂಯಾದಿತ್ಯಸಂಭವಾನ್ ||

ಸ್ಥಾವರ ಜೀವವಧಾತ್ಪಾಪಂ ತ್ರಸಜೀವವಧಾದನಂತಗುಣ ಪಾಪಮಪ್ಪುದರಿಂ ಪಂಚೇಂದ್ರಿಯಮದೊಂದಕ್ಕನಂತಗುಣ ಪಾಪಸಂಪಾದನದೊಳೆ ಕೊಳ್ವುದರಿಂ ತ್ರಸವಧಾ ದೂಷಣಂ ಅದರಿಂ ನರಕಾದಿ ದುರ್ಗತಿ ಸಾಧನಮಪ್ಪುದರಿಂ ದುರ್ಮತ್ಯೇಕಾಂತವಾದಿಗಳು ರಚಿಸಿದ ವೈದ್ಯಶಾಸ್ತ್ರಮಂ ಬಿಟ್ಟು ಪ್ರಾಣಾವಾಯಮಹಾರ್ನವ ನಿರ್ಗತ ಸದ್ಧರ್ಮ ವೈದ್ಯ ಶಾಸ್ತ್ರಮಂ ಮೂಲಕರ್ತೃ ಉತ್ತರ ಕರ್ತೃ ಉತ್ತರೋತ್ತರ ಕರ್ತೃಗಳಾದ ಪೂರ್ವಾಚಾರ್ಯರ್ ಸರ್ವಭೂತಹಿತಾರ್ಥಿಗಳು ಪಾತ್ರಾಪಾತ್ರ ವಿವೇಕಜ್ಞರು ಕರ್ತವ್ಯಾಕರ್ತವ್ಯ ಚಿಕಿತ್ಸ ಶುದ್ಧಾಶುದ್ಧಾ ಯೋಗ್ಯಾಯೋಗ್ಯಾ ಭೋಗ್ಯಾಭೋಗ್ಯ ಭಕ್ಷ್ಯಾಭಕ್ಷ್ಯ ಪೇಯಾಪೇಯ ಗಮ್ಯಾಗಮ್ಯ ಮೊದಲಾದ ಲೋಕವ್ಯಾಪಾರಮನರಿವ ಶ್ರೀ ಸುಧರ್ಮ ಜಂಬೂ ವಿಷ್ಣು ನಂದಿಮಿತ್ರ ಭದ್ರಬಾಹು ವೀರಸೇನ ಜಿನಸೇನ ಕುಂದಕುಂದ ಪೂಜ್ಯಪಾದ ವೀರನಂದಿಷೇಣ ಇಂದ್ರನಂದಿ ಸಮಂತಭದ್ರ ಜಿನಚಂದ್ರ ಪ್ರಭಾಚಂದ್ರ ಶ್ರೀಧರ ಯಶೋಧರ ಕಲ್ಯಾಣಕೀರ್ತಿ ಕನಕಸೇನ ಉಗ್ರಾದಿತ್ಯಾಚಾರ್ಯರ್ ಮೊದಲಾದನೇಕ ಮಹಾ ಆಚಾರ್ಯೋಕ್ತ ಚಿಕಿತ್ಸಾರ್ಣವ ದೇಹಾಮೃತಭಿಷಜೋಕ್ತ

ವೈದ್ಯಾರ್ಣವ ಕಲ್ಯಾಣಕಾರಕರ್ ಮೊದಲಾದ ವೈದ್ಯಶಾಸ್ತ್ರಂಗಳೊಳು ಶುದ್ಧಾಶುದ್ಧಾದಿಗಳು ಪೇಳ್ವುದರಿಂದದನರಿದು ಮಾಳ್ಪುದು. ಅದಲ್ಲದೆ

ಜಾತಿಗಾಥಾ||ನಾಮ್ನಾನಾರೀತಿ ಸಾಮಾನ್ಯಂ ಭಗಿನೀ ಭಾರ್ಯಯೋರಿಹ
ಏಕಾ ಸೇವ್ಯಾ ನ ಸೇವ್ಯೈಕಾ ತಥಾ ಚೋದನಮಾಂಸಯೋಃ
ಸತ್ಯ ಧರ್ಮ ಪರೋ ವೈದ್ಯ ಸತ್ಕಾರ್ಯೇ ತದ್ವಿಧೇ ಷು ಚ ||

ಎಂಬುದರಿಂ ತ್ರಸಜೀವಘಾತಮಮಂ ಬಿಟ್ಟು ಸ್ಥಾವರಂಗಳೊಳು ಸೇವಾಸೇವ್ಯಮಾನವರಿದು ಪಾಪಕಂಜುವಂ ಪ್ರಯೋಗಿಸುವೆ. ಅಲ್ಲಿ ಧರ್ಮಾಧರ್ಮವಿಕಲ್ಪಂ ನಾಲ್ಕು ವಿಧಮಪ್ಪುದು.

ಶ್ಲೋಕ || ಪಾಪಂ ಧರ್ಮನಿಮಿತ್ತಂ ಧರ್ಮಂ ಪಾಪನಿಮಿತ್ತಂ
ಧರ್ಮಂ ಧರ್ಮನಿಮಿತ್ತಂ ಪಾಪಂ ಪಾಪನಿಮಿತ್ತಂ ||

ಎಂಬ ಅನ್ಯೋನ್ಯ ಸಂಬಂಧಂಗಳಪ್ಪುದರಿಂ ಓಷಧಿಗಳಪ್ಪ ತ್ರಸವರ್ಜಿತ ದ್ರವ್ಯಂಗಳಿಂ ಚಿಕಿತ್ಸೆಯಂ ಪಾತ್ರವರಿತು ಮಾಳ್ಪುದು.

ಪಾಪಂ ಧರ್ಮಾಭಿವೃದ್ಧಯೇ ಸಾವದ್ಯಲೇಶೋ ಬಹುಪುಣ್ಯರಾಶೌ ಅದರಿಂದಲ್ಪ ಪಾಪಂ ಮಹತ್ಪುಣ್ಯಸಂಪಾದಕಮಪ್ಪುದರಿಂ ಸದ್ಭಾವನೆಯಂ ಕರುಣದಿಂ ಪ್ರಾಣಿಗಳೊಳು ದಯನಾಗಿ ತೃಣ ಗುಲ್ಮಲತಾ ವೃಕ್ಷಾದಶೇಷ ಸ್ಥಾವರಂಗಳಂ ತರುವಲ್ಲಿ ಪ್ರಮಾದಾ ಜ್ಞಾನ ದರ್ಪದಿಂ ದ್ವೀಂದ್ರಿಯಾದಿ ತ್ರಸಘಾತಂ ಬಂದೊಡಂ ಪ್ರಾಯಶ್ಚಿತ್ತಗೊಂಬುದೆಂತೆಂದೊಡೆ

ಶ್ಲೋಕ || ಪ್ರಾಯ ಇತ್ಯುಚ್ಯತೇ ಲೋಕಶ್ಚಿತ್ತಂ ತಸ್ಯ ಮನೋ ಭವೇತ್
ತಚ್ಚಿತ್ತಂ ಗ್ರಾಹಕಂ ಕರ್ಮ ಪ್ರಾಯಶ್ಚಿತ್ತಮಿತಿ ಸ್ಮೃತಮ್ ||
ಅನುತಾಪೇನ ವಿಖ್ಯಾಜ್ಯಾದ್ಧಿತಮಾದ್ಯತಚರ್ಯಯೋಃ
ಪಾದಮರ್ಧತ್ರಯಂ ಸರ್ವಮಪಹನ್ಯಾದಿತಿಸ್ಮೃತಮ್ ||
ಏಕಭುಕ್ತಂ ತಥಾ ನಕ್ತಂ ತಥಾಪ್ಯಯಾಚಿತೇನ ಚ
ಏಕರಾತ್ರೋಪವಾಸಶ್ಚ ಪಾದಕೃಚ್ಛ್ರಂ ಪ್ರಕೀರ್ತಿತಮ್ ||
ಪ್ರಶಾಮ್ಯಂತ್ಯಲ್ಪಪಾಪಾನಿತ್ಯೇವಂ ಸಿದ್ಧಾಂತವಾಕ್ಯತಃ

ಇಂತೆಂಬುದರಿಂದ ಸಾಧುಗಳು ಸ್ಥಾವರಂ ಜಂಗಮಮೆಂಬೆರಡು ದ್ರವ್ಯಂಗಳೊಳು ಸಾಧ್ಯಸಾಧನರಕ್ಷ್ಯರಕ್ಷಣಭಕ್ಷ್ಯಭಕ್ಷಣತಾದಿ ದ್ವಿವಿಕಲಾತ್ಮಕದಿಂದಾ ಎರಡರೊಳು ದೇಹ ಪರಿರಕ್ಷಣಾರ್ಥಂ ಸ್ಥಾವರದ್ರವ್ಯಂಗಳಂ ಚಿಕಿತ್ಸೆಯೊಳು ಗ್ರಹಿಸಲು ಯೋಗ್ಯಂಗಳು ಜಂಗಮದೊಳು ಕ್ಷೀರ ಘೃತ ದಧಿ ತಕ್ರಪ್ರಭೃತಿಗಳು ಕೊಳಲ್ಪಡುಗುಂ.

ವೃತ್ತ || ಮಾಂ ಸಂತೋ ದಧಿಹಾಹೃತೀರ್ಣ ಭವತಿ ಪ್ರತ್ಯಾತ ಸದ್ಭೇಷಜಂ (?)
ನೈವಾತ್ಯುಕ್ತಮಸದ್ರಸಾಯನಮಪಿ ಪ್ರೋಕ್ತಂ ಕಥಂ ಬಾಹ್ಮಣಾಃ
ಸರ್ವಜ್ಞೇನ ದಯಾಲುನಾ ತನುಭೃತಾಮತ್ಯರ್ಥಮೇತತ್ಕೃತಂ
ತ್ಯಕ್ತ್ವಾ ತನ್ಮಧುಮಧ್ಯಮಾಂಸಸಹಿತಂ ಪಶ್ಚಾತ್ಕೃತಂ ಲಂಪಟೈಃ ||

ಎಂದು ವೈದ್ಯಶಾಸ್ತ್ರಂಗಳೆಲ್ಲಮಂ ಲಲಿತಕೀರ್ತಿಭಟ್ಟಾರಕರಿಂ ಕೇಳ್ದವರೊಳು ಪೂಜ್ಯಪಾದಕೃತ ಕಲ್ಯಾಣಕಲ್ಪಮಂ ಕಲ್ಯಾಣಕೀರ್ತಿಮುನಿಕಾರಿತ ಉಗ್ರಾದಿತ್ಯಾಚಾರ್ಯವಿರಚಿತ ಕಲ್ಯಾಣಕಾರಕಮಂ ಚೆನ್ನಾಗಭ್ಯಾಸಂಗೆಯ್ದಾ ಸೂರಿಪಂಡಿತಂ ಸಕಲ ವೈದ್ಯ ಶಾಸ್ತ್ರಂಗಳನವಲೋಕಿಸಿ

ಶ್ಲೋಕ || **ಬಾಹಟಂ ಕೋಹಟಂ ಚೈವ ಚರಕಂ ನರಕಂ ತಥಾ**
ಸಿದ್ಧಾ ಸಾರಮಸಾರಂ ಚ ಸಾರಂ ಕಲ್ಯಾಣಕಾರಕಮ್ ||

ಎಂಬುದರಿಂದವರೊಳು ದೇಶಂಗಳಂ ದೋಷಂಗಳಂ ತಿಳಿದು ಮತ್ತಂ ವಯಸ್ಸು ಸತ್ವಮಗ್ನಿ ಶರೀರಪ್ರಕೃತಿ ಮೊದಲಾಗಿ ಕಾಲಾಚರಿತ ರಸನಾಡಿಕಾ ದಾನ ಚಿಕಿತ್ಸಾದೂತ ಶಕುನ ನಿಮಿತ್ತ ಯಂತ್ರ ಮಂತ್ರ ತಂತ್ರಾದಿಗಳನರಿದು ನಿರವದ್ಯ ವೈದ್ಯಸಂಪ್ರದಾಯ ಕೌಶಲ್ಯ ಸುಶೀಲ ನೈರಾಸ್ಯ ನಿರೋಗತಾದಿ ಗುಣದಿ ಸಿದ್ಧಪ್ರಮಾದಿಗಳಂ ಬಿಟ್ಟು ಅಮೃತ ದಂತಮೋಘ ಫಲದಾಯಿಯಪ್ಪ ಭೇಷಜಕ್ರಿಯಾ ಪ್ರಸಿದ್ಧಮಾಗಿ ಪ್ರವಚನದೊಳ್ಪೇಳ್ದ ಐದು ಕೋಟಿಯುಂ ಅರುವತ್ತೆಂಟು ಲಕ್ಷದ ತೊಂಬತ್ತೊಂಬತ್ತು ಸಾವಿರದ್ಯೆನೂರೆಂಬತ್ತು ನಾಲ್ಕು ಭೇದಮುಳ್ಳ ನಾನಾ ರೋಗಪ್ರಶಮನಮಂ ಮಾಳ್ಪ ಚಿಕಿತ್ಸಕನಪ್ಪನೆಂದಾ ಸೂರಿಯು ವೈದ್ಯಶಾಸ್ತ್ರಮನೊಳ್ಪಿತ್ತಾಗಿ ಕಲ್ತು

ಶ್ಲೋಕ || **ಅವ್ಯಾಕರಣಶ್ರವಣಂ ಭಿನ್ನದ್ರೋಣೆತರಂಗಿಣೇಕರಣಮ್**
ಔಷಧಮಪಥ್ಯಕರಣಂ ತ್ರಯಮಪಿ ಕರಣಂ ವೃಥಾಕರಣಮ್ ||

ಅದಲ್ಲದೆ

ಗೀತಿ || **ವೈಯಾಕರಣಕಿರಾತಾ | ದಪಶಬ್ದ ಮೃಗಾಃ ಕ್ವ ಯಾಂತಿ ಸಂತ್ರಸ್ತಾಃ**
ನಟವಿಟಗಣಿಕಜ್ಯೋತಿಷ | ಭಿಷಗಾನನಗಹ್ವರಾಣಿಯದಿ ನ ಸ್ಯುಃ ||

ಎಂಬುದರಿಂ ಶಬ್ದಾಗಮಮನೋದಲೆಂದಲ್ಲಿರ್ದ ಪಟ್ಟಾಚಾರ್ಯರ ಬಳಿಯೊಳೆ ಸರ್ವ ವರ್ಮಣಾಚಾರ್ಯ ಶಾಬ್ದಿಕಾಗ್ರಗಣ್ಯ ವಿಶ್ವತಾರ್ಕಿಕ ಚಕ್ರವರ್ತಿ ಚೂಡಾಮಣಿಗಳಿಂ ರಚಿಸಲ್ಪಟ್ಟ ಸೂತ್ರಕೃತರವರ್ ವಿಶುದ್ಧ್ಯಾದಿ ಗಣನಾತೀತ ಗುಣಗಣಾಭರಣ ಶ್ರೀಮದ್ಭಾವಸೇನ ತ್ರೈವಿದ್ಯಚಕ್ರಿ ವಾದಿಪರ್ವತವಜ್ರದಂತ ವಾಕ್‌ಪ್ರಚುರತೆಯುಳ್ಳರಿಂ ಸಾರ್ವವರ್ಮಿಯ ಸೂತ್ರಕ್ಕಂ ಬಾಲಬೋಧಾರ್ಥವಾಗಿ ಕಾತಂತ್ರರೂಪಮಾಲಾಶಬ್ದಶಾಸ್ತ್ರಂ ಪುರಾಸಂಜ್ಞಾ ಸಂಧಿನಾಮ ಸ್ತ್ರೀಪ್ರತ್ಯಯ ಕಾರಕ ಸಮಾಸ ತದ್ಧಿತಾಖ್ಯಾತ ಕೃದಂತಮೆಂಬ ನವ ಸಂಗ್ರಹಮಂ ಚೆನ್ನಾಗಿ ಕಲ್ತು ಶಾಕಟಾಯನದೊಳ್ ಪ್ರಕ್ರಿಯಾ ಸಂಗ್ರಹಮಂ ಸಂಪೂರ್ಣವಾಗಿ ಓದಿ ತಿಳಿದು ರತ್ನಮಂಜೂಷೆ ವೃತ್ತರತ್ನಾಕರಮೆಂಬ ಛಂದದೊಳಿಪ್ಪತ್ತಾರು ಉಕ್ತಾದಿ ಛಂದದ ದ್ವಿಗುಣ ದ್ವಿಗುಣವಾದ ಪನ್ನೆರಡು ಕೋಟಿಯು ನಾಲ್ವತ್ತೆರಡಃ ಲಕ್ಷವು ಹದಿನೇಳು ಸಾವಿರದೇಳುನೂರಿಪ್ಪತ್ತಾರು ಸಮ ವೃತ್ತಂಗಳಂ ಮತ್ತಂ ಅನೇಕಮಾದ ವಿಷಮವೃತ್ತ ಗದ್ಯ ಪದ್ಯ ಚಂಪು ಮೊದಲಾದ ನಾನಾ ಪ್ರಕಾರಮನರಿದು

ಶ್ಲೋಕ || **ಕ್ವಚಿದೇವಾಮರೀಭಾಷಾ ಚಾಮರೀವ ವನಾಂತರೇ**
ಇಯಂ ತು ಪಾಮರೀ ಭಾಷಾ ಸೂಕರೀವ ಗೃಹೇ ಗೃಹೇ ||

ಎಂದು ಸಂಸ್ಕೃತ ಭಾಷಾಮಂಜರಿ ಮೊದಲಾಗರಿದು ಮತ್ತಂ

ಶ್ಲೋಕ || **ಸಂಗೀತಸಾಹಿತ್ಯಮಿತಿದ್ವಯಾಯಾಃ ಕರ್ಣದ್ವಯೇ ನಿರ್ಮಿತಮಬ್ಜಧಾಮಾ**
ಏಕಸ್ಯ ಹೀನಸ್ಯ ತು ಕರ್ಣಹೀನೋ ದ್ವಾಭ್ಯಾಂ ವಿಹೀನೋ ಬಧಿರಸ್ಸ ಏವ ||

ಎಂದು ಭರತಶಾಸ್ತ್ರಮನೋದಿ ತಾಳನಿರ್ಣಯಮನರಿದನದೆಂತೆನೆ

ಶ್ಲೋಕ || **ಕಾಲೋ ಮಾರ್ಗ ಕ್ರಿಯಾಙ್ಗಾನಿ ಗ್ರಹೋ ಜಾತಿಕಲಾಲಯಃ**
ಯತಿ ಪ್ರಸ್ಥಾದಕಾಶ್ಚೇತಿ ತಾಳ ಪ್ರಾಣಾಃ ದಶ ಸ್ಮೃತಾಃ ||

ಎಂದಿವರ ಪ್ರಪಂಚಮಂ ತಿಳಿದು ಪಂಚಮಹಾವಾದ್ಯ ಪ್ರಭೇದಂಗಳನರಿದು ಸುಕವಿತಾಯದ್ಯಸ್ತಿ ರಾಜ್ಯೇನ ಕಿಂ ಎಂದು ಕವಿತ್ವಮಂ ಮಾಡಲುದ್ಯೋಗಿಸಿ

ಶ್ಲೋಕ || **ಕವಿತಾ ವನಿತಾ ವಿತ್ತಂ ಸ್ವಯಮೇವ ವಶೀಕೃತಾ**
ಬಲಾತ್ಕಾರೇಣ ಗೃಹ್ಣೀಯಾತ್ಸರಸಾ ವಿರಸಾ ಭವೇತ್ ||

ಸರಸಕವಿತ್ವಮುಳ್ಳುದರಿಂ ಕವಿಸೂರಿ ಎಂಬನ್ವರ್ಥಮಾಗೆ ಸ್ವದೇಶಮನೆಯ್ದಿ ತನ್ನ ಕನಕಪುರದೊಳು ವರ್ಧಮಾನಸ್ವಾಮಿ ಚೈತ್ಯಾಲಯಮನುದ್ಧರಂ ಮಾಡಿ ಗೋಪುರ ಬಾಗಿಲಂ ನಿರ್ಮಿಸಿ ಸ್ಥಳದೊಳೆ ನಿಂತು ಪ್ರತಿಪುರುಷಾಃ ಭಿನ್ನಬುದ್ಧಯಃ ಎಂಬುದರಿಂ ವ್ಯಂಗ್ಯಂಗಳಂಬಿಡದೆ ಜನಂಗಳೆಲ್ಲ ಹೊಯ್ದು ಕೈ ಚಪ್ಪಾಳೆ ಕಳೆಯುತ್ತಂ ಹಾಸ್ಯಂ ಮಾಡುತ್ತಿಪ್ಪುದುಂ ವಿದ್ವೇಷಿಗಳು ಹುರಿಕಾತಿಗೆ ಹರಸಿ ಆತನಂ ಕೊಲಲ್ ಬಗೆದೊಡೆ ಕೈಕಾಲಂ ಸೇದಿಸಿದೊಡದನರಿದಸ್ತಮಯದಾಗಳಾ ಗುಡಿಗೆ ಮೆಲ್ಲನೆ ತೆವೆಯುತ್ತಾ ರಾತ್ರಿಯೊಳೆ ಬಾಗಿಲಂ ತೆಗೆದೊಳಗೆ ಪೊಕ್ಕಾ ದೇವರ ಬಳಿಯೊಳು ವಿಷ್ಟಿಸಿದೊಡಾಗಳೆ ಕೈಕಾಲು ಬಂದೊಡಂ ಮನೆಗೆ ಬರಲಾ ದೇವಿಯು ತಮ್ಮಡಿಯಂ ಜೋಯಿಸಸೂರಿ ವುಹುಹೂ ಎಂದು ಆ ರಾತ್ರಿಯಲ್ಲಿ ಉಪದ್ರಂ ಮಾಡಿದೊಡೆ ಬೆಳಗಾದಾಗಲು ಗುಡಿಯ ಶುದ್ಧಂ ಮಾಡಿಕೊಂಡರಾ ಸಂಸ್ಥಾನಮಂ ಮತ್ತೊಬ್ಬರು ಪುಗಲೀಸದೆ ಪುಂಡೆಬ್ಬಿಸಿ ಪೊರಡಿಸುತ್ತಿರೆ ಒಬ್ಬರು ಪುಗದಿಪ್ಪುದು ದೊರೆಗಳು ಯೋಚಿಸುತ್ತಿಪ್ಪಂದು ಅರಮನೆವಳಗುರಿಕಾರ ವೃದ್ಧನಾಗಿಯು ನೈಷ್ಠಿಕನಾಗಿ ಗಡ್ಡಮಂ ಬಹುದಿವಸದಿಂ ಗಡ್ಡದ ಬಸುವಲಿಂಗಯ್ಯನೆಂಬ ಗುರಿಕಾರು ಆ ಹಾರುವನ ಪುಂಡಂ ಬಿಡಿಸಿ ಆ ಗಡಿಯಂ ನಾನು ಮಾಡುವೆನೆಂದು ಅಪ್ಪಣೆಯಂ ತೆಗೆದುಕೊಂಡು ಬಪ್ಪ ಸಮಾಚಾರಮಂ ಬ್ರಹ್ಮಸೂರಿ ಕೇಳ್ದು ಹಾಗದಿಂ ತೊಡಗಿ ವರಹದವರೆಗು ನೇಮಕಮಾಗಿರುವದರಿಂ ಹೊನ್ನಿನ ಪಾರುಪತ್ಯಗಾರನೆಂದು ಒಂದು ಗಾವುದವೆಂಬಲ್ಲಿಗೆ ತಾಳ ಮೇಳ ಸೂಳೆಯರ್ವೆರಸಿದಿರ್ಗೊಂಡತ್ಯಾದರದಿಂ ಪುರಮಂ ಪುಗಿಸಿ ಉಪಾಯದಿಂ ನಿಚ್ಚಲೋಲಗಿಸುತ್ತ ಒಬ್ಬ ಸೂಳೆಯಂ ಸೇರಿಸಿ ಪ್ರೇರಿಸಿ ಗಡ್ಡಮಂ ಬೋಳಿಸಿ ಆ ಕೂರ್ಚೆಯಂ ಕಟ್ಟಿಯಾ ವರುಷ ಮಾಸ ತಿಥಿ ವಾರ ಘಳಿಗೆ ಲಗ್ನ ವೇಳೆ ಮುಹೂರ್ತದೊಳ್ ಉಮ್ಮತ್ತೂರ ಸಂಸ್ಥಾನವನಾಳ್ದ ಅರಮನೆವಳಗುರಿಕಾರರ್ಗೆ ಗಡ್ಡ ಬೋಳಾಗಿ ಅಮ್ಮನವರ್ಗೆ ಮುಡಿ ಒಪ್ಪಿಸಿದ ಕೂರ್ಚೆಯ ಆಳಿದ ಮಹಾ ಸ್ವಾಮಿಯವರ ಸನ್ನಿಧಾನಕ್ಕೆ ಕಳುಹಿಸಿಯಿದೆ ಎಂದು ಪ್ರಜೆಗಳ ಬಿನ್ನಹಪತ್ರಿಕೆ

ಸಹಾ ಕಳುಹಿಸಲದಂ ಧೊರೆಗಳಾದಿ ಸಭೆಯೆಲ್ಲಾ ಅಪಹಾಸ್ಯಂಗೆಯ್ವಾಕ್ಷಣವೆ ಗುರಿಕಾರನಂ ಕರೆಯಿಸಿ ವಿನೋದಮಂ ಮಾಡಿ ಭಂಗಿಸಿದರು.

ಮತ್ತಮಾ ಕವಿಸೂರಿಯಂ ಬರಿಸಿ ಆತಂಗಾ ಗಡಿಯಧಿಕಾರಮಂ ಕುಡಲಲ್ಲಿಯೆ ನಿಂತು ವಿಚಾರದ ವೇಳೆಯೊಳು ಸ್ಥಳ ವೆಚ್ಚಕ್ಕೇನು ಅಪ್ಪಣೆ ಎಂದು ಕೇಳುತ್ತಿರೆ ಆಯಕಟ್ಟಿನ ಮೇಲೆ ವೆಚ್ಚ ಮಾಡುವುದೆಂದಾ ಬಗೆ ನಿರೂಪಮಂ ಕೊಂಡು ಸ್ಥಳಕ್ಕೆ ಬಂದು ಅಧಿಕಾರಮಂ ಮಾಡುತ್ತಿಪ್ಪುದು ಯಾಚಕರ್ ಬಂದು ಪ್ರಸ್ತಪ್ರಯೋಜನಮೆಂದು ಕೇಳೆ ಮದುವೆ ಮೌಂಜಿ ಮುಂತಾದವಕ್ಕೆ ಆಯಕಟ್ಟು ಸಾಮಾನುಪಟ್ಟಿ ಬರೆಸಿ ವೆಚ್ಚವಂ ಮಾಡಿದೊಡೊಂದು ವರುಷಕ್ಕೆ ಹತ್ತುಸಾವಿರ ವರಹವಾಗಲಾತನಂ ಕರೆಸಿ ಕೇಳಿದೊಡೆ ಕರಣಿಕರ ಲೆಕ್ಕಮಂ ಕೇಳ್ವುದು ಅಪ್ಪಣೆ ಪ್ರಕಾರ ಆಯಕಟ್ಟಿನ ಮೇರೆ ವೆಚ್ಚಮಂ ಮಾಡಿದೆವೆಂಬುದು ಕೋಪಿಸಿ ಸೆರೆಯೊಳಿಕ್ಕಿಸೆ ಮೂರು ಉಪವಾಸಂ ಮಾಡಿ ಕಾವಲಿಕ್ಕಿದರು ಕವಿಸೂರಿ ಎಂದು ಒಂದು ಪದಮಂ ಪೇಳುತ್ತಿರ್ದೊಡಂ ಕೇಳ್ದರಸು ಮೆಚ್ಚಂ ಬೇಡುವುದೆನಲೊಂದು ಬಿಂದುವಂ ತೆಗೆಯಿಸಿ ಕೊಡಬೇಕೆಂಬುದು ಪತ್ತು ಸಾವಿರದೊಳೊಂದು ಬಿಂದುವಂ ತೆಗೆಯಲೊಂದು ಸಾವಿರಮಾಗಲದಂ ಬಿಟ್ಟು ಆತನ ಬುದ್ಧಿಚಾತುರ್ಯಂಗಳ್ಗೆ ಮನಂಗೊಂಡಾತನಂ ಸಮೀಪದೊಳೆ ಇಟ್ಟುಕೊಂಡು ಕಾರ್ಯಕಾರಣಂಗಳಂ ಕೇಳುತ್ತಮಿರೆ ರಾಜಸಭೆಯೊಳು ಕವಿತ್ವಮಂ ಪೇಳುತ್ತಿಪ್ಪುದು. ವಿದ್ವಾಂಸಂ ಗಣಗುಣಮೇನೆಂದು ಪೇಳ್ವುದು ನಾನು ಹೇಳುವುದೆ ಗಣ ಮಹಾಸ್ವಾಮಿ ಕೇಳುವುದೆ ಗುಣ ಇದಕ್ಕೆಡಬರುವನೆನ್ನ ಮನೆ ಹೆಗ್ಗಣಮೆಂದಂ. ಒಬ್ಬ ಕೈಕೊಳ ಜಾತಿಯವಂ ಸಭೆಯೊಳೆ ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರರೆಂದು ಕನಿಷ್ಠಾಂಗುಲಿ ಮೊದಲಾಗಿ ಕೊಂಕಿಸಿ ಮೇಲೆ ಕೈಕೊಳನೆಂದಂಗುಷ್ಠದಿಂದೌಂಕಿ ನಿಂದು ಇದ ವ್ಯಕ್ತೀಕರಿಸ ಸಮರ್ಥರಾರೆಂದು ದಿನಂ ಪ್ರತಿದಿನಂ ಬಿಡದೆ ಪೇಳುತ್ತಿದ್ದೊಡಾರುಂ ಅವನಂ ಬಿಡಸಲಾರದಿರಲೊಮ್ಮೆ ಕವಿಸೂರಿಯಂ ಕೇಳಲಾತಂ ಬಂದಾತನ ಸಮದೊಳ್ನಿಂದವಂ ಪೇಳಲಂತೆ ಅಹುದೆಂದು ತಾನುಂ ಅಶ್ವಪತಿ ಗಜಪತಿ ನರಪತಿ ಸುರಪತಿ ಪ್ರಜಾಪತಿ ಎಂಬುದು ಪ್ರಸಿದ್ಧಮನೆಲಾತಂ ಪೋದಂ. ಮತ್ತಂ ಸಭೆಗೆ ಬಂದ ಶಬ್ದಸಿಂಧುವಿಗಂ ಶಬ್ದಮಣಿಪಣಕ್ಕೆಷ್ಟೆಂದರುಂ ತಾಳ ಜ್ಞಾನಿಯಂ ಬಿದ್ದ ತಾಳವನೆತ್ತುವುದು ಹ್ಯಾಗೆಂದು ಮಾಲಂಗೀಮಡುವಿಂಗೆ ಹಿಂದಕ್ಕೆ ಬಿದ್ದು ಬದುಕಿದುದಂ ಪ್ರತ್ಯಕ್ಷಮಂ ತೋರಿಸಿ ಒಬ್ಬ ಸೂಳೆಯಂ ತಾನು ಮೂತ್ರಿಸಿದುದರಿಂದಾ ಪೋಲಿಸಿಯು ಇಂತನೇಕ ವಿದ್ಯಮುಳ್ಳರಂ ಹಾಸ್ಯಂಗೆಯ್ಯುತ್ತಂ ಪರಾಜಿತರಂ ಮಾಡುತ್ತಿರ್ದಂ. ಮತ್ತ ಪರರಾಯರೆಲ್ಲಂ ಭೇದದಿಂ ರಾಜಸೇವಕರ್ಗಮೆಲ್ಲಮನೊಳಗುಮಾಡಿ ದಂಡೆತ್ತಿ ಬಂದ ಸಮಾಚಾರಮಂ ಕೇಳಿ ಅರಸನದಕ್ಕಾವುದುಮುಪಾಯಮೆಂದೆಲ್ಲರೊಳಮಾಳೋಚಿಸಿ ಕವಿಸೂರಿಯುಂ ಕರೆಯಲಟ್ಟಿದೊಡಂ ಪೋಗದೆ ಹಿತ್ತಿಲೊಳಿರ್ದ ಸಸಿಗಳಂ ಕಿತ್ತು ಬೇರೊಂದೆಡೆಯೊಳೆ ನಾಟಿಯನೂರುತ್ತಂ ಈ ವಾರ್ತೆಯನರಸಂಗರಿಪೆಂದೊಡೆ ಕಂದಾಚಾರದ ಜನಂಗಳೆಲ್ಲಮಂ ಪಲ್ಲಟಮಂ ಮಾಡಲವರ್ ಬಂದು ಸಖ್ಯಮಿಲ್ಲದೆ ರಾಜ್ಯಮೆಲ್ಲಮಂ ಸೂರೆಗೊಂಡು ಪೋದರ್. ಈ ಪ್ರಸ್ತಾಪಂ ಚಿಕ್ಕದೇವರಾಜರಸ ಕಂಠೀರವಯ್ಯರಸಂಬರಂ ನಡೆದ ವೃತ್ತಕಂ. ಪಿಂದೆ

ಚಾಮರಾಜರಸನಾಳಿದಿಂಬಳಿಯ ಇಮ್ಮಡಿ ರಾಜನುಂ ಕಂಠೀರವ ನರಸರಾಜ ದೊಡ್ಡದೇವರಾಜರು ಪಟ್ಟಣ ಮಹಿಸೂರಂ ನಿಷ್ಕಂಟಕವಾಗೆ ಆಳ್ದು ಪೋಪಂದು ಚಿಕ್ಕದೇರಾಜರಸಂ ತೆಂಕಸೀಮೆ ಹಂಗಳಮೆಂಬ ಗ್ರಾಮದೊಳಿದ್ದು ವಿಶಾಲಾಕ್ಷಪಂಡಿತಂ ಬೆರಸು ಮಹಾರಾತ್ರಿಯೊಳೆ ಪಟ್ಟಣಮಂ ಪೊಕ್ಕು ರಾಜ್ಯಾಭಿಷೇಕಮನಾಂತು ಪಂಡಿತಂಗೆ ಮಂತ್ರಿ ಪದಮನಿತ್ತಾತಂ ಪೇಳ್ದಂತೆ ನಡಸುತ್ತಮಿರಲೊಂದು ದಿವಸಂ ಪುರುಪರಮೇಶ್ವರ ಚೈತ್ಯಾಲಯದೊಳೆಯರಸನ ದಯಕತ್ಯಂತಪಾತ್ರನಾದ ಜೈನಪಂಚಮ ಕಾಳಯ್ಯಶೆಟ್ಟಿಯು ಪ್ರಸಾದ ನಿಮಿತ್ತಮಾಗೆ ಮಾತಿನ ವಿರುದ್ಧಂ ಬೆಳೆದಾ ದೇವಾಲಯದ ಪ್ರಾಕಾರದೊಳೆ ಮತ್ತೊಂದು ಚೈತ್ಯಾಲಯಮಂ ನಿರ್ಮಿಸಿ ಒಳ್ಪಿತಪ್ಪ ರೀತಿಕಾಮಯದಿಂ ಪುರುಷಪ್ರಮಾಣವಾಗಿ ಶ್ರೀವರ್ಧಮಾನತೀರ್ಥಂಕರ ಪ್ರತಿಬಿಂಬಮಂ ಪ್ರತಿಷ್ಠೆಯಂ ಮಾಡಿಸಿ ಗಂಧಕುಟಿಯೊಳು ಲೋಹಮಯ ಚವ್ವೀಸ ತೀರ್ಥಂಕರಬಿಂಬಂಗಳಂ ಶಿಲಾಮಯಮಪ್ಪ ಇಪ್ಪತ್ತುನಾಲ್ಕು ಜೈನೇಂದ್ರ ಪ್ರತಿಕೃತಿಗಳನತಿಶಯವೆನಲ್ಮಾಡಿಸಿದಂ

ಶ್ಲೋಕ|| ಸೇವಾ ತೀರ್ಥಕೃತಾ ವೈದ್ಯವಿಶಾಲಾಕ್ಷೇಣ ನಿರ್ಮಿತಾ
ಪಿತ್ರೋರ್ಬೋಮ್ಮಾರ್ಯಸುಮ್ಮಾಂಬಾನಾಮ್ನೋ ಸ್ವರ್ಗಾಪವರ್ಗದಾ ||

ಎಂದು ಬರೆಯಿಸಿಯತಿವಿಭವದಿಂ ನಿತ್ಯೋತ್ಸವಂಗಳ್ ಮೊದಲಾಗೆ ಮಾಡಿಸುತ್ತಿರ್ದು ಆ ಕಾಳಯ್ಯಶೆಟ್ಟಿಯು ತನ್ನ ಮಗಳನೀವೆನೆಂದು ಅರಿಕುಠಾರದ ಬ್ರಹ್ಮಶೆಟ್ಟಿಯೆಂಬನಂ ತನ್ನ ಮನೆಯೊಳೆ ಏಳೆಂಟು ವರ್ಷಂಬರಂ ಸಮಸ್ತ ಗೃಹವ್ಯಾಪಾರಮನಾತನಿಂದಲೆ ಮಾಡಿಸುತಿರ್ದು ಕಡೆಯೊಳಾತನಂ ತಿರಸ್ಕರಿಸಲಾತಂ ಪಂಡಿತನಂ ಸೇರಿ ಅವನ ಸ್ಥಿತಿಯೆಲ್ಲಮಂ ಪಂಡಿತಂಗರಿಯಿಸಿಪ್ಪಿನಮಾ ಕಾಳಯ್ಯಶೆಟ್ಟಿಯು ತನ್ನ ಮಗಳ ಮದುವೆಯಂ ಮಾಡಲೆಂದು ಪೆರಗೊಂದು ವರಮಂ ತಂದು ಅತ್ಯಂತ ವಿಭವದೊಳ್ ನಾಂದೀ ಮಂಗಲಮಂ ಮಾಡಿಯಾ ರಾತ್ರಿಯೊಳ್ ದೇವರಂ ತರುವಲ್ಲಿ ಅರಮನೆಯುಪ್ಪರಿಗೆಯೊಳರಸಂ ನೋಡಿ ಆಶ್ಚರ್ಯಂಬಟ್ಟಿಪ್ಪಿನ ಶೆಟ್ಟಿ ಬಂದರಸನಂ ತನ್ನ ಗೃಹಕ್ಕಂ ಚಿತ್ತೈಸಿ ಎಂಬುದುಂ ಪೋಗಲುದ್ಯುಕ್ತನಾಗಿ ಪಂಡಿತನಂ ಬರಿಸಿ ಪೋಪವೆನಲರಮನೆ ನಿಮ್ಮದೀ ದ್ರವ್ಯಂ ಶೆಟ್ಟಿಯೊಳಿಪ್ಪುದರಿಂ ಪೋಪಮಕ್ಕುಮಾದೊಡವನ ಮನಮಂ ನೋಡಲು ನಮಗೆ ಸಮಯಮಾದುದರಿಂ ಪತ್ತು ಸಾವಿರ ವರಹಮಂ ಕೇಳ್ದೊಡಾತಂ ಕೊಡದೆ ಬಡತನಮಂ ಪೇಳೆ ಕೇಳಿಯಿಲ್ಲವೆಂದೆಮ್ಮ ಪಾದಮಂ ಮುಟ್ಟೆನಲಾತಂ ಮುಟ್ಟಲ್ ಬಪ್ಪುದುಂ ಆತನ ಗೃಹಮಂ ಮುತ್ತಿಸಿ ಅರಿಕುಠಾರದ ಬ್ರಹ್ಮಶೆಟ್ಟಿಯಿಂದ ನಿಕ್ಷೇಪಮಾಗಿರ್ದ ಪೊನ್ನೆಲ್ಲಮಂ ತರಿಸಿ ನೆಂಟರಿಪ್ಪರ ವಸ್ತ್ರಾಭರಣಂಗಳು ಮೊದಲಾಗಿ ಸರ್ವಸ್ವಮೆಲ್ಲಮನೆರಡು ಲಕ್ಷ ಪದಾರ್ಥಮನರಮನೆಗೆ ತೆಗೆದುಕೊಂಡೊಡಾತಂ ಸಂಕ್ಲೇಶ ಮನದಿ ಚಿಂತಾಕ್ರಾಂತನಾಗಿ ತಾನುಂ ಬೆಳ್ಗುಳದೊಳ್ಮಾಡಿಸಿದ ಶಿಲಾಮಯಮಠದ ಧರ್ಮಕೀರ್ತಿಯೊಂದು ಶಾಶ್ವತಮಾದುದೆಂದು ತಿಳಿದು ಪಟ್ಟಣಮಂ ಬಿಟ್ಟು ಶಾಲೀಗ್ರಾಮಮಂ ಸೇರಿದಂ

ಮತ್ತಂ ಗುಂಡಲದ ಬಳಿ ತಮ್ಮ ತಂದೆಯ ನಿಷಿಧಿಯೊಳೆ ಪರವಾಸು ದೇವಾಲಯಮಂ ಅತಿಶಯವೆನಲ್ಮಾಡಿಸಿ· ಅನೇಕೋತ್ಸಹಂಗಳಿಗೆ ಉಪಾಸ್ತಿಮಾದ್ಯಂಗಳಂ ಕೊಟ್ಟು ದ್ವಿಶತಕ ಅಗ್ರಹಾರಮಂ ಕೊಟ್ಟು ಪೇಟೆಯಂ ಕಟ್ಟಿಸಿ ರಾಜ್ಯದೊಳೆಲ್ಲಾ ದೇವಾಲಯಕ್ಕಂ ಬ್ರಾಹ್ಮರಿಗಂ ಮಾನ್ಯಂಗಳಂ ನಡಸುತ್ತಾ ಮತಮತಾಂತರಗಳನ್ನೆಲ್ಲಾ ವಿಚಾರಿಸಿ ತಿಳಿದು ಅರಸುಗಳ ವಂಶಪರಂಪರೆಯಂ ನಾನಾ ಭೇದಂಗಳಾಗಿರ್ದೊಡದರೊಳೆ ಹದಿಮೂರು ಮಂತನ ಹದಿನೆಂಟು ಮಂತನಂಗಳಂ ವಿಂಗಡಿಸಿ ಅವರವರ ಯೋಗ್ಯತಾನುಸಾರದಿ ಆಬಳಿ ಸಂಬಳಂಗಳಂ ನಿಯಮಿಸಿ ಬಳಿಕಾ ಅರವತ್ತು ಮಂತನದ ಶೆಟ್ಟಿಗಳಂ ತಮ್ಮ ಕಡೆ ಎಂದವರಂ ಸೇವಾಯೋಗ್ಯರಂ ಮಾಡಿ ಉಳಿದ ಜಾತಿಯ ವರ್ಗದವರೆಲ್ಲರಂ ವಿಚಾರಂಗೊಂಡು ವಿಂಗಡಿಸಿ ರಾಜ್ಯದೊಳಿಪ್ಪ ಪ್ರಜೆಗಳ್ಗೆ ಸಿದ್ಧಾಯಮಂ ಹೊಲಂಗಳಂ ಕಂಬಗಟ್ಟಲೆಯಿಂ ನೂರು ಕಂಬಕ್ಕೆ ಉತ್ತಮ ಮಧ್ಯಮ ಜಘನ್ಯದಿಂದಾರು ನಾಲ್ಕು ಎರಡು ಹಣ ಮೇರೆ ನಿರ್ಣಯಿಸಿ ನಿರ್ಬಾಧಕದಿಂ ಪ್ರಜೆಗಳಂ ಸಲಹುತ್ತಂ ಪಂಡಿತನಿಂದ ದಯಾಧರ್ಮಮಂ ಕೇಳಿ ನಿಶ್ಚಯಮೆಂದು ಜಲಗಾಲಮಂ ಕೊಡಲಾನೆ ಜೀವದಯಮಂ ಮಾಡುತ್ತಾ ಪೂರ್ವದೊಳೆ ದುರ್ದೇವತಾಸಂಕಲ್ಪದಿಂ ನೀಚರು ಮಾಳ್ಪ ಪ್ರಾಣಿಹಿಂಸೆಗಳ್ಗಂ ತೆಂಗಿನಕಾಯಂ ಕೊಡಿಸುತ್ತಂ ಡಂಬಕ ವಿಕೃತ್ತದ ದೇಶಾಡಂಬಗಳ ಮನಮಿಕ್ಕದಿರುತ್ತಮಿರಲ್ ಓರ್ವ ಕೈಲಾಸದಯ್ಯನೆಂಬ ಜಂಗಮಂ ದಿನಚರಿಯೊಳಾಸ್ಥಾನಮಂ ಪೊಕ್ಕು ಕೈಲಾಸದ ವಾರ್ತೆಯನತ್ಯದ್ಭುತಮಾಗೆ ಪೇಳುತ್ತಿಪ್ಪುದುಂ ಓರ್ವ ಜಟ್ಟಿಯಂ ವೈಕುಂಠದವನೆಂದು ತಾನು ಕೈಲಾಸಮಂ ಪೊಕ್ಕು ಬಂದೆನೆಂದರವರ್ಗೆ ಸಂವಾದಮಾಗೆ ಯುದ್ಧಕ್ಕಾರಂಭಿಸಿ ಪೊಡೆಯುತ್ತಿರಲವರಂ ಬಿಡಿಸಲು ಕೆಲರ್ ಪೋಗಲ್ ಕೈಲಾಸದವರು ವೈಕುಂಠದವರ್ ಬಲ್ಲರೆಂದು ಸುಮ್ಮನೆ ಇರಿಸಿದೊಡಾತಂ ತಾಳಲಾರದೆ ಕಂಗೆಟ್ಟು ತನ್ನ ವೃತ್ತಾಂತಮೆಲ್ಲಮಂ ಪೇಳ್ದು ಪೋದಂ ಕಲಿವೀರಲಕ್ಷ್ಮೀಯೆಂದೋರ್ವ ಮಾತಂಗ ಸ್ತ್ರೀಯು ವಿಷ್ಣುವಿನ ಸೂಳೆಯೆಂದತಿ ಅಟ್ಟಹಾಸದಿಂ ನಿರಾಹಾರಿ ವಿಷ್ಣುವಿನ ಅಧರಾಮೃತಪಾನದಿಂದಿಪ್ಪೆನೆಂದು ಸಭಾವಂದ್ಯಳಾಗಿ ದಿನಚರಿ ರಾಜಾಸ್ಥಾನಮಂ ಪೊಕ್ಕು ಪ್ರಸಂಗಿಸುತ್ತಿರ್ದೊಡಾಕೆಗೆ ಪುಷ್ಪದೊಳಾಘ್ರಾಣಭೇದಿ ತೈಲಮಂ ಲೇಪಿಸಿ ಕೊಟ್ಟೊಡಾಘ್ರಾಣಿಸಲಾಕ್ಷಣದೊಳೆ ಛರ್ದಿಯಾಗಲಾಕೆಯ ಪರಿಭವಿಸಿ ಕಳೆದರಿಂತು ಉದರನಿಮಿತ್ತಂ ಬಹುಕೃತ ವೇಷಂಗಳಂ ಧರಿಸಿ ಅದ್ಭುತಮಂ ತೋರ್ಪ ಜನಂಗಳಂ ಸಮ್ಮುಖಕ್ಕೆ ಸೇರಿಸದೆ ಡಂಬಕಂಗಳಂ ನಂಬದೆ ಪ್ರಮಾಣದರ್ಥ ಸಂಸಿದ್ಧಿ ಸದಾ ಭಾಷಾ ವಿಪರ್ಯಯಃ ಎಂದು ಪೇಳ್ವ ನಿಶ್ಚಯಮಂ ನಂಬಿ ರಾಜ್ಯಂಗೆಯ್ವಲ್ಲಿ ಡಿಳ್ಳಿಗೆ ಪಗದಿ ಕಳುಹಿಸಿದಲ್ಲಿ ಕಳ್ಳರು ಅಪಹರಿಸಲಾ ನಿಮಿತ್ತ ಅಣ್ಣಯಶೆಟ್ಟಿ ಎಂಬ ಜೈನಂಗಂ ದ್ರವ್ಯಮಂ ಕೊಟ್ಟು ಕಳುಹಿಸಿದೊಡಾತಂ ಪೋಗಿ ಡಿಳ್ಳಿಯನೈದಿ ಪಾದಶಾಯಿಗೆ ವರ್ತಕರಿಂ ಪೇಳಿಸಿ ಚೋರಪ್ರಯೋಗವಾಗಿರ್ದ ಪತ್ತು ಸಾಸಿರ ವರಹಕ್ಕೆ ಪಗದಿ ಹಣ ಸಂತೆಂದು ರಶೀತಿಯ ಬರೆಯಿಸಿ ತಾನು ಕೊಂಡುಪೋದ ವ್ಯಾಪಾರಕ್ಕೊಂದಕ್ಕೆರಡು ಮೂರು ಮಾಡಿ ಲಾಭಂಪಡೆದು ಬರಲು ಚಿಕ್ಕದೇವರಾಜಂ ಮೆಚ್ಚಿ ಟಂಕಸಾಲೆ ಬದುಕಂ ಕುಡೆ ಅರಮನೆಯೊಳ್ ಕೊಂಡಿರ್ದ ದ್ರವ್ಯಮೆಲ್ಲಮನೊಪ್ಪಿಸಿ ದಯಕ್ಕೆ

ಪಾತ್ರರಾಗಿರೆ ಕ್ಷುದ್ರಜನಂಗಳು ಪತ್ತು ಸಾವಿರ ಪರ್ಯಂತರಂ ಪಟ್ಟಿಯಾಗುತ್ತಿದೆ ಎಂದು ರಾಜಂಗರಿಪಲು ಲೆಕ್ಕಿಗರಂ ಬರಿಸಿ ಲೆಕ್ಕಮಂ ವಿಚಾರಿಸಲು ಒಂದು ಕಾಸು ಲೆಕ್ಕವಾಗಲಿಲ್ಲಾ ಆ ಸಮಾಚಾರಮಂ ಶೆಟ್ಟಿ ಕೇಳ್ದು ತನಗುಳ್ಳ ದ್ರವ್ಯಂಗಳೆಲ್ಲಮಂ ಏಳು ಒಂಟೆಯ ಮೇಲೆ ತಂದು ಅರಮನೆ ಬಾಗಿಲೊಳಿಟ್ಟೊಡರಸನ್ ಅನ್ಯಾಯ ದ್ರವ್ಯಮಂ ಕೊಳಲಾಗದೆಂದು ಮುಟ್ಟದೆ ಏಳೆಂಟು ದಿವಸಂಬರಂ ಅಲ್ಲೆಯಿರ್ದು ವರ್ತಕನ ಸತ್ವಮಂ ಕೊಳಲಾಗದು ತೆಗೆದುಕೊಳ್ಳೆನಲವಂ ಅರಮನೆಗೆ ಕೊಟ್ಟ ಧನಮಂ ತಿರುಗಿ ಕೊಳ್ಳಲಾಗದೊಡಂ ರಾಜನ ಪೆಸರಿಂ ನೀರಿಗೆ ಹಾಕುವೆನೆಂದು ಬೆಳ್ಗುಳದೊಳೆ ಕಲ್ಯಾಣಿಯಂ ಮಾಡಿಸಿ ಚಿಕ್ಕದೇವರಾಯ ಕಲ್ಯಾಣಿ ಎಂದು ಪೆಸರಿಟ್ಟು ಸರೋವರ ಪ್ರತಿಷ್ಠೆಯನತಿಶಯವೆನಲ್ ಮಾಡಿ ಆರು ಸಾವಿರ ಜನಕ್ಕೆ ಅನ್ನದಾನ ವಸ್ತ್ರದಾನಾದಿಗಳಂ ಮಾಡಿಸಿ ಸಾವಿರಾರು ವರಹ ಸಂಬಳಮಂಗೊಳ್ವ ಲೆಕ್ಕದ ಪಟ್ಟಿಗಳೆಲ್ಲಮಂ ತರಿಸಿ ಕಲ್ಯಾಣಿಯೊಳಿಕ್ಕಿಸಿ ರಾಜನಂ ಬರಿಸಿ ಮಸ್ತಕಾಭಿಷೇಕ ಜಲಕ್ರೀಡಾಮಹೋತ್ಸವಂ ಮೊದಲಾದುತ್ಸವಂಗಳಂ ಮಾಡಿಸಿ ಸ್ವಾಸ್ತಿಯಂ ಕೊಟ್ಟು ಸುಖಮಿದ್ದರು.

ಮತ್ತಂ ಕಂಚಿದೇಶದ ಮಹಾವಿದ್ವಾಂಸಂ ತಾರ್ಕಿಕಚಕ್ರವರ್ತಿಯಪ್ಪ ಬುದ್ಧಿಸಾಗರವರ್ಣಿ ಆಜಾನುಬಾಹು ದೀರ್ಘಶರೀರಿ ಪ್ರಾಂಶುಧವಳಾಂತರೀಯೋತ್ತರೀಯಂ ಬೆಳ್ಳಿಯ ಪಾವುಗೆ ಸುವರ್ಣ ಗೂಟಲಾಪಟಿಯಾಂತು ಪ್ರಮೇಯ ಕಮಲಮಾರ್ತಾಂಡಗ್ರಂಥ ಬಾಹುದಂಡ ಪುಸ್ತಕಮನಾಂತು ಪರವಾದಿಗರ್ವಕುಧರ ವಾಗ್ವಜ್ರದಂಡನೆನಿಸಿ ಬಪ್ಪುದುಮಾತಂ ಮಂತ್ರವಾದಿಯುಮಪ್ಪುದರಿಂ ರಾಜಪುತ್ರಂಗೆ ಭವಾಂತರಕಾಟದಿಂ ಶರೀರದೊಳು ರುಜೆ ತಿಣ್ಣಮಾಗಿರಲರಸಂ ಪಂಡಿತನಿಂದಾವರ್ಣಿಯಂ ಬರಿಸಿ ಆ ಭವಾಂತರವೈರಿಯಂ ಬಿಡಿಸಲದಕ್ಕೆ ದ್ವಾದಶವಿಧ ನಿಗ್ರಹಂ ಮಾಡಲದಕ್ಕೆ ತಕ್ಕ ಸಾಮಗ್ರಿಯಂ ಕೊಡಿಸಿ ಮಾಡುವಲ್ಲಿ ಕೆಲದಿವಸದೊಳೆ ಪಂಡಿತಂಗಂ ಬುದ್ಧಿಸಾಗರಂಗಂ ವಿರೋಧಂ ಪಟ್ಟಿ "ಕ್ರೋಧಂ ಸರ್ವಗುಣಂ ಹರೇತ್" ಎಂಬುದರಿಂ ಬಹುಭಾಷೆಗಳಿಂ ನಿಂದ್ಯಂಗಳನಾಡಿದೊಡೆ ಆ ವರ್ಣಿಯಂ ಕಾವಲೊಳಿಟ್ಟೊಡಾತಂ ಭಿಕ್ಷೆಯಂ ಬಿಟ್ಟು ಆದಿತ್ಯವಾರದೊಳೆ ದೇವತಾರಾಧನೆಗೆ ಎಂಟು ಬಗೆಯ ಪುಷ್ಪಮಂ ಪನ್ನೆರಡು ಬಗೆಯ ಫಲ ವಸ್ತುವಂ ಕಳುಹಿಸುವುದೆಂದು ಪಂಡಿತಂಗೆ ಪೇಳಿ ಕಳುಹಿಸಲೆಂದೊಡಾತ ಕಳುಹಿಸದಿರ್ದೊಡಾ ರಾತ್ರಿಯೊಳೆ ಚಿನ್ನ ಬೆಳ್ಳಿ ಭಾಜನಂಗಳೊಳೆ ಮಾಲತಿ ಮಲ್ಲಿಕಾ ಚಂಪಕ ಕುರವಕ ಕಮಲಾದಿ ಪುಷ್ಪಂಗಳಂ ಚೋಚ ಮೋಚ ದಾಡಿಮ ಜಂಬು ಜಂಬೀರಾಮ್ರ ಪನಸ ಮೊದಲಾದ ಸುಪಕ್ವಫಲಂಗಳಂ ಪಂಡಿತಂಗೆ ಕಳುಹಿಸಿದೊಡಾಶ್ಚರ್ಯಂಬಡೆದಿಪ್ಪಿನಂ ನಾಳೆ ಮಧ್ಯಾಹ್ನದೊಳಾನೀ ಪಟ್ಟಣಮಂ ಬಿಟ್ಟು ಪೋಪೆನೆಂದು ಪೇಳೆ ಕಾವಲಂ ಮೂವಳಸಿನಿಂದಿರಿಸುವುದುಮವರು ನೋಳ್ಪಿನಂ ತನ್ನ ದೇವತಾರ್ಚನೆ ಪುಸ್ತಕ ಮೊದಲಾದ ಸಾಮಾನುಗಳಂ ತನ್ನ ಕಡೆಯ ಹತ್ತು ಜನರಿಂ ತೆಗೆಯಿಸಿಕೊಂಡು ಸರ್ವರು ನೋಡುತ್ತಿರಲಾ ಕಾವಲಿಂ ಪೊರಮಟ್ಟು ಪಟ್ಟಣದ ಬಾಗಿಲಂ ದಾಂಟಿ ಶುಕ್ರವಾರದ ಪೇಟೆ ಹೊಳೆಯ ಬಳಿಯೊಳಿರ್ದು ಪಂಡಿತಂಗೆ ಹೇಳಿ ಕಳುಹಿಸಿಬಿಟ್ಟುತ್ತರದೇಶಕ್ಕೆ ಪೋಗಿ ಅಲ್ಲಿಂದಾ ಚಿಕ್ಕದೇವರಾಜರಸನ ಬಳಿಗೆ ಉಳ್ಳುದ ನಿಲ್ಲುದುದಂ ಸಂಗೀತವರ್ಣದೊಳೆ ಚರಿತ್ರೆಯ ಮಾಡಿ

ಕಳುಹಿಸಲರಸಂ ನೋಡಿ ಮರುಗಿ ಕರೆಯಲೆಂದಟ್ಟಿದೊಡಾತಂ ಬರಲಿಲ್ಲ ಮತ್ತಂ ರಕ್ತಾಕ್ಷಿವತ್ಸರದೊಳು ಜಂಗಮರ ಹಾವಳಿ ಅತಿಯಾಗೆ ರಾಜ್ಯಕ್ಕೆಲ್ಲಾ ನಾವೆ ಒಡೆಯರಲ್ಲದೆ ಅರಸಂಗೆ ಸಲ್ಲದೆಂದು ಸೀಮೆಯ ಪ್ರಜೆಗಳೆಲ್ಲಮಂ ಮೇಳಿಗೂಟಮಂ ಕೂಡಿಸಿ ತಾಯೂರ ಬಳಿಯೊಳ್ ಪರಗಂ ಮಾಡಿ ರಾಜ ಮಂತ್ರಿ ದಳವಾಯಿ ಎಂದು ತಾವೆ ನಿಂದು ಗಡಿಗಡಿಯವರ ಬದುಕಂ ನಿಲ್ಲಿಸಿದೊಡೆ ಚಿಕ್ಕದೇವರಾಜಂ ಮಂತ್ರಾಲೋಚನೆಯಂ ಮಾಡಿ ವೀರನಪ್ಪ ಜಮಾದಾರಂಗೆ ಬೆಸಸಲಾತಂ ತನ್ನ ಕುದುರೆ ಸಾವಿರ ಸಹಿತಂ ಬಂದಾ ರಾಜ ಮಂತ್ರಿ ಸೇನಾನಿಯನೊಂದೆ ಸೂಳು ಪರಿಹರಿಸಿ ಸಂಜೆವೇಳೆಯೊಳೆ ಕೂಟದ ಗುಂಪಿಗೆ ಬಾಣಂಗಳಂ ಮುರಿದು ಕಟ್ಟಿ ಪತ್ತಿ ಸುಡುವುದುಂ ಗಾಳಿಗೋಡುವ ತರಗೆಲೆಯಂತೆ ದೆಸೆಗೆಟ್ಟೋಡಿ ಪೋದೊಡೆ ಇದಿರಾದರಂ ಜಂಗಮರಂ ಸದೆದು ಕೂಟಮನೆಬ್ಬಿಸಿ ಬಂದೊಡಾತಂಗೆ ಮೆಚ್ಚುಗೊಟ್ಟು ರಾಜ್ಯದೊಳಿರ್ಪ ಜಂಗಮದ ಮಠ ಮನೆಯಾ ಹೊತ್ತು ನಿಃಶೇಷಂ ಮಾಡಿ ಸ್ವಾಸ್ತಿಮಾನ್ಯಮೆಲ್ಲಮಂ ತೆಗೆದುಕೊಂಡು ಜಂಗಮರ ಹೆಸರಿಲ್ಲದಂತಾಗೆ ಕೆಲಂಬರು ವೇಷಮಂ ಮಾಚಿಕೊಂಡಿರ್ದರಾಗಲ್ ಕಮರವಳ್ಳಿ ಗುರಿಕಾರ ನಂಜೇಗೌಡಂ ಬಿನ್ನವಿಸಿ ರಾಜದೂತರೊಡಗೊಂಡು ರಾಜ್ಯದೊಳೆ ವಿಕೃತ ವೇಷಧಾರಿಗಳಾಗಿರ್ಪ ಜಂಗಮರಂ ಕಂಡು ಶರಣಂ ಮಾಡಿದೊಡಾತನಂ ಬಂಧದಿಂ ಪಿಡಿದಿಂತು ಸಾವಿರ ಜನದವರಿಗೆ ಒಪ್ಪಿಸಿ ಅವರಂ ಪರಿಹರಿಸಿದರಿಂತು ಪ್ರಭುವಿನ ಕೋಪದಿಂದೇನಾಗದಿಹುದಾಗಲು ಪ್ರಜೆಗಳ ಮೇಲೆ ಕೋಪಿಸಿ ತಾಂ ನಿಯಮಿಸಿರ್ದ ಕಂದಾಯಕ್ಕೆ ಐದು ಬಗೆ ಸರತಿಯ ಕಲ್ಪಿಸಿ ಒಂದಕ್ಕೆ ಒಂದೂವರೆ ಕಂದಾಯಮಂ ನಿಯಮಿಸಿ ಸುಂಕ ಮೊಮ್ಮು ಮೊದಲಾಗೆ ಮಣಿಯ ಪೈಕಂಗಳಂ ಪದಿನೆಂಟು ಚಾವಡಿಯಂ ನಿರ್ಮಿಸಿ ಪ್ರಜೆಗಳ್ಗೆಲ್ಲಾ ಬಾಧಕ ಪಿರಿದಾಗಲಷ್ಟರೊಳೆ ವೀರಶೈವರೆಲ್ಲರು ವಿಶಾಲಾಕ್ಷಪಂಡಿತನಿಂ ಜಂಗಮರ್ಗೆ ಇನಿತಾದುದೆಂದು ಆಲೋಚಿಸಿ ಆತನಂ ಕೊಲಲ್ ಬಗೆದು ಪಟ್ಟಣದ ನಾಗಣ್ಣನೆಂಬ ಶೆಟ್ಟಿಯಂ ಮಧ್ಯಾಹ್ನದೊಳು ನಡುಬೀದಿಯೊಳರಮನೆಗೆ ಸಿಬಿಕಾರೂಢನಾಗಿ ಪೋಗುತ್ತಿರ್ದ ಪಂಡಿತನಂ ಆಲಿಕೊಂಡು ಬರಿದು ಕೈದು ನಿಂದುದರಮಂ ಸೀಳ್ದು ಪೋಗಲು ಪಂಡಿತನಂ ಗೃಹಕ್ಕೆ ತಂದು ಮೂರು ದಿನದೊಳೆ ಪರಲೋಕಪ್ರಾಪ್ತನಾಗೆ ಮಹಾರಾಜಂ ಚಿಂತಾಕ್ರಾಂತನಾಗಿರ್ದು ಪಂಡಿತನೊರೆದಂತೆ ತಿರುಮಲೆಯಯ್ಯಂಗಾರನಂ ಮುಂದುಮಾಡಿ ರಾಜ್ಯಂಗೆಯ್ಯುತ್ತಿರಲಂತಃಪುರಜನಪ್ರೇರಣೆಯಿಂ ಷಡಕ್ಷರಿಯಂ ಪ್ರಶಂಸೆಗೆಯಿಸಿ ವಿದ್ಯಾನಗರಿಯಿಂ ಮಹಿಸೂರು ಸೇರಿದಾರಭ್ಯ ರಾಜರು ಶಿವಭಕ್ತರಾಗಿ ಜಂಗಮ ಶಿಷ್ಯರಾಗಿರ್ದರ್.

ಇತ್ತ ಪಟ್ಟಣದಧಿಕಾರವಾಗುವಲ್ಲಿ ಅಳಗಿಯ ಶಿಂಗರಾರ್ಯರ್ಗೆ ರಾಜನೃಪಂ ಶಿಷ್ಯನಾಗೆಂದು ವೀರಶೈವಮಂ ಪ್ರಕಟಿಸಿ ಷಡಕ್ಷರಿದೇವಂ ಲೀಲಾವತಿ ಕಾದಂಬರಿ ಮೊದಲಾದ ಅನೇಕ ವಸ್ತುಕಕಾವ್ಯದೊಳ್ ನಿಪುಣನೆನಿಸಿ ಕವಿಯಾದುದರಿಂ ರಾಜಶೇಖರವೆಂದು ಪೊಸತೊಂದು ಕೃತಿಯಂ ಮಾಡಿ ಮೆಚ್ಚಿಸಿ ಕೆಲಕೆಲವು ಮಠಂಗಳಂ ಮಾನ್ಯಮಂ ಬಿಡಿಸಿ ಪದ್ದು ಪಾವಾಡವೆಂದದ್ಭುತಂಗಳಂ ತೋರಿಸಿದರು. ತಿರುಮಲೆ ಐಯ್ಯಂಗಾರಂ ನೋಡಿ

ವೀರವೈಷ್ಣವಮನ್ ಅತ್ಯಂತ ಪ್ರಬಲಂ ಮಾಡಲೆಂದು ಪೆರಸ್ಥರು ಜಾಂಬವ ಕುಲದವರ್ ಮೊದಲಾದ ಬೀಡುಮಣಿಯಮೆಂದನೇಕ ದಾಸ ತಿರುಕುಲದವರಂ ಪ್ರಬಲಂ ಮಾಡಿ ಪದ್ದು ಪಾವಾಡಂಗಳನದ್ಭುತವೆನೆ ಮಾಡಿಸುತ್ತಂ ನಾಮವಿಲ್ಲದರ ಮುಖನಿರೀಕ್ಷಣವಂ ಮಾಡಲಾಗದೆಂದು ರಾಜಾಜ್ಞೆಯಿಂದ ಅನೇಕ ಜನಂಗಳಂ ನಾಮಧಾರಿಗಳಂ ಮಾಡಿಸುತ್ತಿರೆ ಜೈನಪಂಡಿತ ವಿದ್ವಾಂಸನಪ್ಪ ಚಿಕ್ಕಯ್ಯಪಂಡಿತಂ ಬೊಮ್ಮರಸನಾದಿ ಮೂವರು ರಾಜನ ದಯಕ್ಕೆ ಪಾತ್ರರಾಗಿ ಬಹಳೈಶ್ವರ್ಯಮಾಗಿ ವೈಷ್ಣವರೊಳು ನಂಟಂ ಮಾಡಲೆಂದು ಮಕ್ಕಳಂ ಬಿಟ್ಟು ನಾಮ ಶ್ರೀಮುದ್ರೆಯಂ ಧರಿಸಿ ದ್ವಾದಶನಾಮಧಾರಿಗಳಾಗಿ ನಿಶಾಭೋಜನಲೋಲುಪ್ತರಾದರು.

ಮತ್ತಂ ಬಲಾತ್ಕಾರದಿಂ ಸ್ಥಳ ಪರಸ್ಥಳಂಗಳ ಜನಂಗಳೆಲ್ಲರ್ಗಂ ಕೊಪ್ಪರಿಕೆಯೊಳ್ ನಾಮಮಂ ಕರದಿ ಪಿಡಿತಂದು ಪಣೆ ಮೊದಲಾದವರೊಳಿಕ್ಕುತ್ತಿರಲು ಕೆಲಂಬರೊಪ್ಪಿದರ್. ಕೆಲಂಬರ್ ಒಪ್ಪದೆ ಇದಿರಾಗಿ ಸರ್ವದಾ ಆಗದೆನೆ ಬಲಾತ್ಕಾರದಿಂದಿಕ್ಕಿದೊಡೆ ಉಜ್ಜಿಬಿಡುವೆ ಎಂದಲ್ಲೆ ಉಜ್ಜಿಬಿಟ್ಟರು. ಕೆಲಂಬರ್ ಇಕ್ಕಿದರೇನು ತಿರಿಣಾಮಲೆ ಬರಹವೆ ಪೊಳೆಯೊಳ್ ತೊಳೆದುಕೊಳ್ಳುತ್ತಿದ್ದೇವೆ ಎಂದು ತೊಳೆದುಬಿಟ್ಟು ಪೋದರು. ಕೆಲಂಬರಂ ಪಿಡಿದು ಮುದ್ರಧಾರಣೆಯಂ ಮಾಳ್ಪಾಗ ಅಯ್ಯೋ ಎಂದು ಪ್ರಲಾಪಿಸಿ ಬಿಡಿಸಿಕೊಂಡೋಡಿದರ್. ಒಬ್ಬರಿಬ್ಬರದಕ್ಕೆ ಸಾಕೆಂದೊಂದರೊಳೆ ಪೋದರ್. ಕೆಲರು ಭುಜಮನೇಕೆ ಸುಡುವುದೀ ಪೊಟ್ಟೆಗೋಸ್ಕರ ಪಟ್ಟೆಯಡರಿಂ ಪೊಟ್ಟೆಯಂ ಸುಡಿ ಎಂದು ಡೊಳ್ಳನೊಡ್ಡಿಕೊಂಬರಿಂತನೇಕ ತೆರದಿಂ ಬಾಯಿಗೆ ಬಂದಂತೆ ನುಡಿದು ಪೋದರ್. ಭಾಗ್ಯಮಂ ಪಡೆವೆವೆಂದಾಸೆಯಿಂ ನಾಮಮನಿಕ್ಕಿಕೊಂಡ ಜನರ್ಗೆ ರಾಜನಾದರಿಸಿ ವಿಚಾರಿಸದೆ ಬಿಟ್ಟುದರಿಂ ನಾಮವಿಕ್ಕಿ ಕೆಟ್ಟೆವೆಂದುಂ ಕಾರ್ಯಮಂ ಕೆಡಿಸಿದೊಡಂ ನಂಬಿಸಿ ಕೊಡದಿರ್ದೊಡಂ ನಾಮವನಿಕ್ಕಿದನೆಂಬ ಮಾತು ಲೋಕಪ್ರಸಿದ್ಧಿಯಾಯ್ತು. ಅದರಿಂ ನಾಮದಿಂದಿಹ ಪರನಾಸ್ತಿ ಎಂದು ಕೆಲರ್ ಪೇಳ್ದರ್. ಮತ್ತಂ ಚಿಕ್ಕದೇವರಾಜನಂ ನಾನಾ ಜನಂ ನಾನಾ ವಿಧಮಾಗೆ ಬಾಧಿಸುತ್ತಾಕ್ಷಣ ಚಿತ್ತನಂ ಮಾಡಿದರ್. ಮತ್ತಮುತ್ತರ ಆರೆ ಮರಾಟಿಗಳಾದಿ ದಂಡೆತ್ತಿಬಪ್ಪುದು ರಾಜ್ಯದೊಳುಳ್ಳ ಪ್ರಜೆಗಳ್ಗೆ ದಂಡಿನ ಕಾಣಿಕೆಯೆಂದು ಮುನಸಾಬಿನಿಂ ವರಿಯನೆತ್ತಿಕೊಟ್ಟು ಬಿಟ್ಟು ಕಾಣಿಕೆ ಕಡ್ಡಾಯಮನೆತ್ತಿಸಿ ಮತ್ತಂ ನಾಮ ತೀರ್ಥಕಾಣಿಕೆಗೆಂದು ಶೀಮೆಯೊಳ್ ನಡೆವ ದೇವಸ್ಥಾನಂಗಳೆಲ್ಲಮನರವಾಸಿಯಂ ತೆಗೆದುಕೊಂಡದಕ್ಕೆ ಅರವಾಸಿಮಣಿಯೆಂದತಿನಿಷ್ಠೂರಂ ಮಾಡುತಿರ್ದರಾಗಳ್ ಕನಕಗಿರಿಯ ಬಸ್ತಿಯ ಸರ್ವಮಾನ್ಯಮಾಗಿರ್ದ ಮಲೆಯೂರಗ್ರಾಮದ ಶಾನುಭಾಗ ವಿಜಯಪ್ಪನಂ ಕಲ್ಲ ಚಾವಡಿಯೊಳ್ ಉಪವಾಸವಿರಿಸಿ ಗ್ರಾಮದ ಸರ್ವಾದಾಯಂ ನೂರ ಇಪ್ಪತ್ತು ವರಹ ಲೆಕ್ಕಮಾಗೆ ಅರವಾಸಿ ಅರುವತ್ತು ವರಹ ವರುಷಂಪ್ರತಿ ತೆಗೆದುಕೊಳ್ಳುತ್ತಿದ್ದರಷ್ಟರೊಳೆ ಚಿಕ್ಕದೇವರಾಜರಸಂ ರಾಜಕಾರ್ಯಮಾಗೆ ಉತ್ತರ ದಿಗ್ವಿಜಯಕ್ಕೆ ಪೋಪಾಗಳು ಪಟ್ಟಣದ ಸರ್ವಾಧಿಕಾರಮಂ ದೊಡ್ಡ ದೇವಯ್ಯನೆಂಬ ಮಹತ್ತರಂಗೊಪ್ಪಿಸಿ ಪೋಗಲಿತ್ತಲವಂಗೆ ವೀರಶೈವರೆಲ್ಲರು ಪಂಡಿತಂ ಪ್ರಬಲಮಾಗಿ ನಮ್ಮ ಮಠ ಮನೆಗಳನೇಕಂಗಳಂ ಕೆಡಿಸಿದಂ. ನೀಂ ಶಿವಭಕ್ತನಾಗಿಯು ರಾಜ್ಯಾಧಿಪತಿಯಾದೆನೀಗಳ್ ಜೈನರ ಬಸ್ತಿಗಳಂ ಕೆಡಿಸಿ ಅವರ ಪೆಸರಿಲ್ಲದಂತು

ಮಾಳ್ಪುದೆಂದನೇಕ ತೆರದಿಂ ಬೋಧಿಸೆ ಪಾಪಕ್ಕಂಜದೆ ಪಳಿಗಳ್ಕದೆ ದೈವದ್ರೋಹಮಂ ನಿಷ್ಕಾರಣಂ ಕಾಲದೋಷದಿಂ ರಾಜ್ಯಂಗಳೊಳು ಗ್ರಾಮಾನುಗ್ರಾಮಂಗಳೊಳು ತಪ್ಪದೆ ಒಂದು ಎರಡು ಮೂರು ನಾಲ್ಕು ಐದಾರಿದ್ದವಂ ಕಾವಾಟದ ಜನವಮಂ ಬಿಟ್ಟು ದಿನ ಮೂರರೊಳೆ ಸಾವಿರದೇಳುನೂರು ಜಿನಾಲಯಂಗಳಂ ಪ್ರತಿಮೆವೆರಸಿ ತಮ್ಮ ಸದ್ಗತಿಯಂ ಕೆಡಿಸಿ ಭೇದಿಸುವಂತೆ ಒಡೆದು ಕೆಡಿಸುತ್ತಿರ್ದರ್. ಅಷ್ಟರೊಳೆ ಈ ಅನ್ಯಾಯವಾರ್ತೆಯಂ ಚಿಕ್ಕದೇವರಾಜರಸಂ ಕೇಳಿ ಮಾಣಿಸಿದನಾ ದೊಡ್ಡದೇವಯ್ಯಂ ಕಾಲಾಂತರದಿಂ ಸೆರೆಯೊಳೆ ಸಿಕ್ಕಿರ್ದು ಸತ್ತಂ. ಪ್ರಜೆಗಳ್ಗೆ ರಾಗ್ನಿಕ ದೈವಿಕಮಾಗಿ ದುಃಖ ಪಿರಿದಾಗಲಿತ್ತಲು ಚಿಕ್ಕದೇವರಾಜರಸಂ ತಾರಣ ಸಂವತ್ಸರದೊಳೆ ಲೋಕಾಂತರಿತನಪ್ಪುದುಂ ಕಂಠೀರವಯ್ಯರಸಂಗೆ ಪಟ್ಟಮಾಗೆ. ಈ ವ್ಯಯ ಸಂವತ್ಸರದೊಳು ತೆಂಕಶೀಮೆಗಿಡದೊಳಾನೆಯಂ ಪಿಡಿಯಲ್ ಸಮರ್ಥರಾರೆನೆ ಅಣ್ಣಯ್ಯಶೆಟ್ಟಿಗಪ್ಪಣೆಯಂ ಕೊಡುವುದೆಂದು ವೈಷಮ್ಯದಿಂದರಸಂಗರಿಪಿ ಕಳುಹಿಸಲಾತಂ ಮಲೆಯೂರ ಮಾರ್ಗಮಾಗಿ ಬಂದು ತಳುಗಿದೊಡಾ ರಾತ್ರಿ ಪದ್ಮಾವತಿಮಹಾದೇವಿ ಸ್ವಪ್ನದೊಳೊರೆದ ಕ್ರಮದೊಳೆ ಅತಿ ಚಲ್ವನಪ್ಪ ಐದಾನೆ ಒಂದು ಧವಲವರ್ಣದ್ವಿರದ ಸಹಿತಂ ಕೊಂಡು ಪೋಗಿ ರಾಜಂಗಿತ್ತೊಡತಿಪ್ರೀತಿಯಿಂದಾತಂಗೆ ಟೆಂಕಸಾಲೆಯ ಸರ್ವಾಧ್ಯಕ್ಷತ್ವಮನಿತ್ತೊಡಾತಂ ನೂತನತರವಾದ ಸುವರ್ಣಾಭರಣಮಂ ಮಾಡಿಸಿ ತಿರುಮಲೆಯಾರ್ಯನ ಧರ್ಮಪತ್ನಿಗೊಪ್ಪಿಸಿ ಕೇಳಿಕೊಂಡಾಕೆ ತನ್ನ ಪತಿಯೊಳು ಭರವಶಂಗೊಂಡು ಅಣ್ಣಯ್ಯನ ಕುಲದೇವರಾದ ಕನಕಗಿರಿಯ ಬಸ್ತಿಗ್ರಾಮವನ್ನು ಪ್ರಾಕುಮೇರೆ ಸರ್ವಮಾನ್ಯವಾಗಿ ಬಿಟ್ಟುಕೊಟ್ಟು ಆ ದೇವರ ಪೂಜೆ ಮಾಡಿಸುವುದೆಂದು ರಾಜನ ನಿರೂಪಮಂ ಮಾಡಿಸಿ ಕೊಟ್ಟೊಡಾ ಶೆಟ್ಟಿಯು ಮಲೆಯೂರು ಬೆಟ್ಟವೆರಡರ ಜಿನಾಲಯಮನುದ್ಧರಿಸಿ ಬಾಚಹಳ್ಳಿ ಕಿರುಗುಂದದಿಂ ಮೂಲಬಿಂಬಂಗಳಂ ತಂದಿಟ್ಟು ಶಕವರುಷಂಗಳು ೧೬೨೯ನೆಯ ಸರ್ವಜಿತು ಸಂವತ್ಸರದಕ್ಷ ತ್ರಿತಯದೊಳು ಪ್ರತಿಷ್ಠೆ ಮಾಡಿಸಿ ಬಳಿಕಾ ಕ್ರೋಧಿ ಶುಭಕೃತುವರಿಗೆ ಏಚಗನಹಳ್ಳಿ ಕೆಲಸೂರು ಮೊದಲಾಗೆ ಏಳೆಂಟು ಚೈತ್ಯಾಲಯಂಗಳನುದ್ಧರಿಸಿದಂ. ಉಳಿದ ದೇವಸ್ಥಾನಂಗಳ ಜೈನಬ್ರಾಹ್ಮರುಗಳು ಕಾಲದೋಷದಿಂ ಶಿಥಿಲಮಂ ಹೊಂದಿದರ್. ಗ್ರಾಮಾನುಗ್ರಾಮದೊಳಿರ್ದ ಜೈನಗೌಡರೆಲ್ಲಂ ನಾಮಲಿಂಗಧಾರಿಗಳಾಗೆ ಊರು ಊರುಗಳೊಳೆ ಬಸವನ ಗುಡಿಗಳಂ ಮಾಡಿಕೊಂಡು ಜಂಗಮರ ಶಿಷ್ಯರಾದರಿಂತು ವರ್ತಿಸುತ್ತಿರಲು ವಿಶ್ವಾವಸು ಸಂವತ್ಸರದೊಳು ಸಮಂಜೆಯದಂದು ಬಂದು ವಿನಯದಿಂ ಕರ್ಣಾಟಕ ರಾಜ್ಯಮೆಲ್ಲಮಂ ಸೂರೆಗೊಂಡು ಪೋಗೆ ಪರಾಭವದೊಳೆ ಮರಾಟಿಗಳ ದಂಡು ಬಂದು ರಾಜ್ಯದೊಳಿರ್ದ ಪ್ರಜೆಗಳ್ಗೆಲ್ಲಾ ಹಿಂಸೆಗಳನೆಸಗಿ ಸರ್ವಸ್ವಮಂ ಸುಲಿದು ಸೂರೆಗೊಂಡು ಕೊಂದುಕೂಗಿದೊಡೆ ನಿಂದಲ್ಲಿ ನಿಲ್ಲದೆ ಸರ್ವರು ಅನ್ನ ನೀರಂ ಕಾಣದೆ ಸತ್ತು ಕೆಟ್ಟು ಪೋದರ್. ಅಂತು ವರುಷವರುಷಂಪ್ರತಿ ರಾಜಿಕಂ ತಪ್ಪದೆ ರಾಜ್ಯಕ್ಷೋಭಮಾಗಿ ಮೂಗಹರಿಕ ನಾನಾರಾಯಂ ಮೊದಲಾಗಿ ಆರೆಯವರಾದಿ ಪರರಾಯರ ದಂಡು ಬಂದು ಸುಟ್ಟು ಸೂರೆಯಂ ಮಾಡುತ್ತಿರ್ದೊಡೆ ಪ್ರಜೆಪರಿವಾರಮೆಲ್ಲಂ ನಿತ್ತರಿಸಲಾರದೆ ದಂಡು ತೀವ್ರವೇದನೆಯೊಳು ಕ್ಷಯಮಾಗಿ ತ್ರಿಭಾಗಶೇಷವಾಗಿ ಸ್ವಪರ ರಾಜರಿಂ ಕೆಟ್ಟುಮುಳಿದುದು.

ಬಳಿಕ ದೊಡ್ಡ ಕೃಷ್ಣರಾಜರ್ಗೆ ಪಟ್ಟಮಾಗಿ ರಾಜ್ಯಮಂ ಪಾಲಿಸಿದರಾಗಳ್ ಬೆಳ್ಗುಳಮಂ ನೋಡಲೆಂದು ವೈಭವ ಸಹಿತಂ ಪೋಗಿ ನೋಡಿ ಅತ್ಯಾಶ್ಚರ್ಯ ಬಡೆದು ಪಟ್ಟಾಚಾರ್ಯರೊಡಗೊಂಡು ಬಂದು ಪಟ್ಟದರಸಿಯ ಮೇಲಿದ್ದ ಪಿಶಾಚಿಯಂ ಬಿಡಿಸಿ ಮರ್ಯಾದೆಯಿಂ ಕಳುಹಿಸಿ ಕೆಲಕೆಲ ಸಂಸ್ಥಾನಂಗಳಂ ವಶಂ ಮಾಡಿದರಾಗಳು ರಾಜಿಕ ದೈವಿಕಂ ಪಿರಿದಾಗಿ ಅನರ್ಘ್ಯದಿಂ ಕ್ಷಾಮಡಾಮರದಿಂ ಪ್ರಜಾಕ್ಷೋಭಮಾಗೆ ಕೆಲದಿನಂ ಕಳಿದುದು.

ಅತ್ತಲ್ ಕಳಲೆಯರಸುಗಳು ಕೆಲದಿವಸದಿಂ ವೀರಶೈವಮನಾಚರಿಸಿ ನಂಜುಂಡೇಶ್ವರಂ ಇಷ್ಟದೇವರಾಗೆ ಶ್ರೀರಂಗಪಟ್ಟಣದೊಳೆ ಅಧಿಕಾರಿಗಳಾಗಿದ್ದರಾ ವಂಶದಳೆ ನಂದಿನಾಥ, ವೀರರಾಜ, ದೇವರಾಜ, ಚೆಲುವರಾಜರೆಂದಿವರಾದಿಯಾಗಿ ಸೇನಾಪತ್ಯದೊಳೆ ಸರ್ವಾಧಿಕಾರದೊಳು ನಿಂತು ವೀರವಿಕ್ರಮ ಪ್ರತಾಪದೊಳು ಕೆಲಕೆಲವು ಸಂಸ್ಥಾನಂಗಳ ಒಳಗುಮಾಡಿ ಅಜೇಯರೆನಿಸಿರ್ದರಾ ಸಂತತಿಯವರು ಕೊಡಗಿನ ಪ್ರಭುಗಳಾಗಿರ್ದರಿತ್ತಲ್ ದಳವಾಯಿ ದೊಡ್ಡಯ್ಯರಸಂ ಜಯಜಯಕಾಟೆಯುಂ ಜಗರೆಕಾಟಿಗಳೆಂಬ ವೀರಭಟರಂ ಗೆಲ್ದು ರಾಜ್ಯಂಗಳಂ ಸಾಧಿಸಿ ಜಗಜಟ್ಟಿಯಂ ಗೆಲ್ದು ಬಿರುದುಗಳನಾಂತಿರ್ದರಲ್ಲಿ ದೇವರಾಜ ವೀರರಾಜ ನಂಜರಾಜ ಪುಟ್ಟರಾಜಾದಿಯರಸುಗಳು ಪ್ರಬಳರಾಗಿ ಎಲ್ಲಾ ಅರಸುಗಳಂ ಪಿಂದಿಕ್ಕಿ ತಮ್ಮಾಜ್ಞೆಯಿಂ ಸರ್ವರ ನಿಗ್ರಹಿಸಿ ಶಿಕ್ಷರಕ್ಷೆಯಂ ಮಾಡುತ್ತಿರ್ದರಾಗಳೆ ಕೆಲಂಬರಂ ದುರ್ಗಮಂ ಪೊರ್ದಿಸಿ ಕೆಲರಿಗಾಜ್ಞೆಗೆಯ್ಸಿದರ್.

ನಂಜನಗೂಡ ದೇವಸ್ಥಾನ ಕೈಸಾಲೆ ಗೋಪುರ ಊರ ಸುತ್ತು ಕೋಟೆಯಂ ನಿರ್ಮಿಸಿ ಕಪಿನೀಹೊಳೆಗೆ ಭದ್ರಮಪ್ಪ ಸೇತುವೆಯಂ ಕಟ್ಟಿಸಿ ಪಟ್ಟಣದೊಳು ಜ್ಯೋತಿರ್ಮಹೇಶನಾಲಯಮಂ ಮಾಡಿಸಿ ಮಹಿಸೂರೊಳು ಆಂಗೀರಸ ಸಂವತ್ಸರದಂದು ತ್ರಿಣಯನಾಲಯಮಂ ಮಾಡಿಸಿ ಕೆರೆ ಕಟ್ಟೆ ಸರೋವರ ಸತ್ರ ಮೊದಲಾಗೆ ಮಾಡಿಸಿದರ್. ವಿದ್ಯಂಗಳೊಳು ನಿಪುಣರಾದುದರಿಂ ಜಯದೇವಕೃತ ಗೀತಗೋವಿಂದಮಂ ಚಾರುಕೀರ್ತಿಕೃತ ಗೀತವೀತರಾಗಮಂ ನೋಡಿ ಗೀತಗಂಗಾಧರನೆಂದಷ್ಟಪದಿಯಂ ಮಾಡಿ ಅನೇಕ ವೈದ್ಯಶಾಸ್ತ್ರಂಗಳೊಳಿಪ್ಪ ರೋಗಹರಮಪ್ಪ ಚಿಕಿತ್ಸೆಗಳಂ ಕನ್ನಡ ವಾಕ್ಯದೊಳು ವೀರರಾಜೋಕ್ತ ವಿಲಾಸಮೆಂದು ಬರೆಯಿಸಿ ಪ್ರಸಿದ್ಧಿವಡೆದರ್.

ಮತ್ತಂ ಮಹಿಸೂರ ದಳವಾಯಿ ದೊಡ್ಡಯ್ಯಪುತ್ರ ವೀರರಾಜಕುಮಾರ ದೇವರಾಜನನುಜ ಕಳಲೆ ನಂಜರಾಜಂಗೆ ಕೇರಳದೇಶ ಕೊಂಗನಾಡತ್ತಣಿಂ ದಾಂಡಿಗಳ್ ಬಂದು ಸೇರಿ ವೀರಶೈವ ಪುರಾಣಮೆಂದನೇಕ ಕಲ್ಪನಾಕಥೆಗಳಂ ಪೇಳ್ದರದರೊಳೆ ಅತಿ ಭಕ್ತಿ ಪುಟ್ಟಿ ಕನ್ನಡ ವಾಕ್ಯಂಗಳಿಂ ನಂಜರಾಜಕೃತಮೆಂದು ವಿರಚಿಸಿದನವಾವಾವೆಂದೊಡೆ ಭಕ್ತ ವಿಲಾಸಮೆಂಬ ಕಥಾಪ್ರಾರಂಭಂ ಮುನ್ನಂ ಈಶಂ ಗೌರಿಶಾಪದಿಂ ಕಮಲಾಲಯದ ತ್ಯಾಗರಾಯದೇವನಲ್ಲಿ ನರಬಾಲಕನಾಗಿ ಸದಾಪ್ರಿಯನೆಂಬ ಬ್ರಾಹ್ಮಣನಿಂ ಬೆಳೆದಂ ಸೌಂದರನೆಂಬ ಪೆಸರಿಂ ಜಯಭದ್ರನೆಂಬರಸನಿತ್ತ ಮನೆಯೊಳಿಪ್ಪಾಗಲ್ ಶಿವಂ ವೃದ್ಧ ಬ್ರಾಹ್ಮಣ ವೇಷದೆ ಬಂದು ಈತನಂ ಕ್ರಯಕ್ಕೆ ಕೊಂಡಿದೇನೆ ಎನ್ನ ದಾಸನೆಂದು ಪತ್ರ ಸಾಕ್ಷಿಯಂ ತೋರಿಸಿದೊಡೆ ನುತಿಸಿ ಪಂಚಾಕ್ಷರೀಮಂತ್ರಂಗೊಂಡು

ದ್ರಾವಿಡಭಾಷೆಯಿಂ ನುತಿಸುತ್ತ ಶಿವಾಲಯಂಗಳಂ ವಂದಿಸಿ ಸಿದ್ಧವಟದರ್ಶನಂ ಮಾಡಿ ರಾತ್ರಿಯೊಳು ಶಿವಂ ಬ್ರಾಹ್ಮಣರೂಪದಿಂ ಬಂದೊರೆಯಲು ಶಿವದರ್ಶನಮಂ ಮಾಡಿ ಚಿದಂಬರಮಂ ಪೊಕ್ಕು ಕಮಲಾಲಯಕ್ಕೆ ಬಂದಿದಿರೊಳೆ ಬಂದವಂ ನುತಿಸಿ ಶಿವನಿಧಿಯೆಂಬಳಂ ಮದುವೆಯಾಗಿ ತ್ಯಾಗರಾಯಸೇವೆಗೆಯ್ದು ವೇಶ್ಯಾಪುತ್ರಿ ರುದ್ರಕನ್ನೆಯಂ ಸ್ವೀಕರಿಸಿ ಸಂಶಯಬಡುವ ಸನಕಾದಿಗಳ್ಗೆ ವೇದಮಂ ತಿಳಿಯಿಸಿ ಚಿನ್ಮಯಮುದ್ರೆಯಿಂ ತಿಳುಹಿಸಿ ಪರಮೇಶ್ವರಂ ಕಳುಹಿಸಿದ ದಿವ್ಯ ವಿಮಾನಮನೇರಿ ಕೈಲಾಸಮನೆಯ್ದಿ ಸುಖಮಿಪ್ಪನೆಂದು ಉಪಮನ್ಯು ಮುನಿಯು ಶಿಷ್ಯರ್ಗೆ ಪೇಳಲದನ್ ಅಗಸ್ತ್ಯಂ ಕಾಂಚೀಕ್ಷೇತ್ರವಾಸಿಗಳಾದ ಋಷಿಗಳ್ಗೆ ಪೇಳ್ದನೆಂದು ಸೂತ ಪೌರಾಣೀಕಂ ಶೌನಕಾದಿ ಋಷಿಗಳ್ಗೆ ಪೇಳ್ದನೆಂದು ಪೇಳ್ದುದಂ ಮತ್ತಂ ಸಹಸ್ರಭೂಸುರಂ ಚಿದಂಬರದೊಳು ನರಯಾಗಾದಿ ಸಕಲ ಯಜ್ಞಮಂ ಮಾಡಿ ವಿಭೂತಿ ರುದ್ರಾಕ್ಷಿಧರನಾಗಿ ಶಿವಲೋಕಮಂ ಪೊಕ್ಕನೆಂದುಂ ಕುಂಬಾರ ನೀಲಕಂಠನೆಂಬಂ ಚಿದಂಬರೇಶ್ವರಂಗೆ ನಿಚ್ಚಲೊಂದೊಂದು ಮಡಕೆಯನೊಪ್ಪಿಸುತ್ತಾ ಸೂಳೆಗಾರನಾಗಿರಲವನ ಪೆಂಡತಿಯು ತನ್ನಂ ಮುಟ್ಟಬೇಡೆನಲಂತಿಪ್ಪುದು ಶಿವನಾತನಂ ಪರೀಕ್ಷಿಸಲೊಂದು ಮಡಕೆಯಂ ಕೊಟ್ಟು ಅದನ್ನು ಮರಸಿ ನಿನ್ನ ಪೆಂಡತಿಯ ಪಿಡಿದು ನುಡಿವುದೆನೆ ಆಕೆಯಂ ಮುಟ್ಟದೆ ಅವಳು ಪಿಡಿದ ಕೋಲಂ ಪಿಡಿದು ನುಡಿವುದುಂ ಶಿವಂ ಮೆಚ್ಚಿ ವೃಷಭಾರೂಢನಾಗಿ ಕೈಲಾಸಕೊಯ್ದನೆಂಬುದುಂ.

ಚೋಳದೇಶದ ಮಹಾಧನನೆಂಬ ವೈಶ್ಯಂ ಶಿವಭಕ್ತರ್ಗೆಲ್ಲಂ ಬೇಕಾದ ಪದಾರ್ಥ ವನೀವೆನೆಂದು ಪ್ರತಿಜ್ಞೆಯಿಂದಿರಲ್ ಆತನ ಪೆಂಡತಿಯಂ ಶಿವಂ ಬೇಡಿದೊಡೆ ಆಕೆಯ ನೊಪ್ಪಿಸಲ್ ಅವಳವನೊಯ್ವಾಗ ಅವನ ಬಂಧುಗಳೆಲ್ಲಂ ಬಂದು ತಡೆದೊಡಾಕೆಯ ಗಂಡಂ ಬಂಧುಗಳೆಲ್ಲರಂ ಭೇದಿಸಲು ವೃಷಭದ ಮೇಲಾ ದಂಪತಿಗಳನೇರಿಸಿ ಕೈಲಾಸ ಕ್ಕೊಯ್ದನೆಂಬುದುಂ

ಚಿದಂಬರದ ಕೊಡಲೂರ ವೆಳ್ಳಾಳಶೂದ್ರ ಮಾರನೆಂಬಂ ಶಿವಂಗೆ ಧಾನ್ಯದ ಮೊಳೆಯಂ ಕೀರೆಸೊಪ್ಪನು ಅಟ್ಟಿಕ್ಕಿ ಕೈಲಾಸಕ್ಕೆ ಸಂದನೆಂಬುದುಂ

ತಿರುಕೋವಿಲ ಸತ್ಯಾರ್ಥನೆಂಬ ಗೊಲ್ಲಂ ಶಿವಭಕ್ತರ್ಗೆ ಪ್ರಾಣಮನಾದರು ಕೊಡುತ್ತೇನೆಂದು ಪ್ರತಿಜ್ಞೆಯಿಂ ಮುಕ್ತಿನಾಥನೆಂಬರಸನ ಪಟ್ಟಣಮಂ ಕೊಂಡೊಡಾತಂ ವಿಭೂತಿ ರುದ್ರಾಕ್ಷಿಯಂ ಧರಿಸಿ ತತ್ತ್ವೋಪದೇಶಂಗೆಯ್ವೆನೆಂದು ಕಪಟದಿಂ ಬಂದು ಸತ್ಯಾರ್ಥನಂ ಕೊಲ್ವಾಗಳ್ ಬಾಗಿಲವರ್ ಬಂದು ಮುಕ್ತಿನಾಥನಂ ಕೊಲ್ವಾಗಳ್ ವಿಭೂತಿ ರುದ್ರಾಕ್ಷಿಯುಳ್ಳ ಶಿವಭಕ್ತನೆಂದು ಕೊಲೆಯಂ ಮಾಣಿಸೆ ಶಿವಂ ಮೆಚ್ಚಿ ಮುಕ್ತಿಯಂ ಕೊಟ್ಟನೆಂಬುದುಂ

ಕೇರಳದೇಶದ ವೆಳ್ಳಾಳ ಶೂದ್ರವೀರ ಮಿಂಡನೆಂಬಂ ಶಿವದ್ವೇಷಿಗಳಂ ಭೇದಿಸುವೆನೆಂಬ ಪ್ರತಿಜ್ಞೆಯಂ ಪರಶುಗೊಡಲಿಯಂ ಪಿಡಿದು ರೌದ್ರದಿಂ ಜನಂಗಳಂ ಕೊಲ್ಲುತ್ತಂ ತಿರುವಾಲೂರ ತ್ಯಾಗರಾಯನ ಗುಡಿಗೆ ಬಪ್ಪ ಸೌಂದರನಂ ಕಂಡು ಶಿವದ್ರೋಹಿ ಎಂದಟ್ಟಿಕೊಂಡು ಬರೆ ಗರ್ಭಗೃಹಮಂ ಪೊಕ್ಕಿರಲವನಂ ಭೇದಿಸುವಾಗ ಶಿವಂ ಮುಕ್ತಿಯ ಕೊಟ್ಟನೆಂಬುದುಂ

ಚೋಳದೇಶದ ವಳಯೂರೆಂಬ ಗ್ರಾಮದೊಳು ಅಮರನೀತಿ ಎಂಬ ವೈಶ್ಯಂ ಶಿವಭಕ್ತರ್ಗೆ ಬೇಕಾದವಂ ಕೊಡುತ್ತಿರೆ ಶಿವಂ ಪರೀಕ್ಷಿಸಲು ಬ್ರಹ್ಮಚಾರಿಯಾಗಿ ಬಂದು ಜಡಿಮಳೆಯೊಳು ತನ್ನ ಕೌಪೀನಮಂ ಕೊಟ್ಟುದಂ ಮರಸಿ ಬೇಡಿದೊಡೆ ಕಾಣದಿರೆ ಮತ್ತೊಂದು ಕೌಪೀನಮಂ ಕೊಟ್ಟು ಅದರ ತೂಕಕ್ಕೆ ಸರ್ವಸ್ವಮಂ ಕೊಡಲು ಸಾಲದಿರ್ದೊಡೆ ತನ್ನ ಪತ್ನಿವೆರಸು ತಾನೆ ಸೇರುವುದು ಮೆಚ್ಚಿ ಕೈಲಾಸಕ್ಕೊಯ್ದನೆಂಬುದುಂ

ಕರೂರಲ್ಲಿ ಜಾತಿಯಿಲ್ಲದ ಕಾರುಕಂ ಶಿವಭಕ್ತದ್ರೋಹಿಗಳಂ ಕೊಲ್ವೆನೆಂದು ಕೊಡಲಿಯಂ ಪಿಡಿದು ಕೊಲುತ್ತಿರೆ ಶಿವವ್ರತನೆಂಬ ಪಾರ್ವಂ ಶಿವಪೂಜಾರ್ಥಮಾಗಿ ಪುಷ್ಪಮಂ ತರುತ್ತಮಿರೆ ಆನೆ ಚೆಲ್ಲಿದೊಡದಂ ಕೊಡಲಿಯಿಂ ಕೊಂದೊಡೆ ಅರಸಂ ಕೇಳಿ ಶಿವದ್ರೋಹ ಬಂದುದೆಂದು ತನ್ನಂ ಛೇದಿಸೆನಲಲ್ಲಿಂದಾ ಶಿವಭಕ್ತನಂ ಕೊಲಲಾಗದೆಂದಿರ್ದೊಡಾ ಕೊಡಲಿಯಂ ಕೊಂಡು ತಾನೆ ಛೇದಿಸಿಕೊಂಬಲ್ಲಿ ಶಿವಂ ಮುಕ್ತಿಯಂ ಕೊಟ್ಟನೆಂಬುದಂ

ಈಡಿಗ ಏನಾದಿನಾಥನಂ ಶೂರನೆಂಬವಂ ಕಪಟದಿಂ ಭಸ್ಮರುದ್ರಾಕ್ಷಿಯಂ ಧರಿಸಿ ಬಂದು ಕೊಲ್ವವಸರದೊಳು ಶಿವಂ ಪ್ರತ್ಯಕ್ಷಮಾಗಿ ಮುಕ್ತಿಯನಿತ್ತನೆಂಬುದಂ

ಬೇಡರ ಕಣ್ಣಂ ಕಾಳಹಸ್ತಿ ಸಮೀಪದುಡಂಪೂರಲ್ಲಿ ಕಾಳಹಸ್ತೀಶ್ವರಂಗೆ ತನ್ನೆರಡು ಕಣ್ಣಂ ಕಳೆದರ್ಪಿಸಿ ಮುಕ್ತಿಯಂ ಪಡೆದನೆಂಬುದಂ

ಕಳನಾಥನೆಂಬ ಬ್ರಾಹ್ಮಣಂ ನಿತ್ಯದಲ್ಲು ಶಿವಂಗೆ ಧೂಪಮನಿಕ್ಕಿ ಕೈಲಾಸಕ್ಕೆ ಪೋದನೆಂಬುದಂ

ಒಬ್ಬ ಸ್ತ್ರೀಯು ಎರಡು ಕೈಯಿಂದಾ ಮಾಲೆಯನ್ನಿಕ್ಕುತ್ತಿರಲೊಂದು ದಿನಂ ಎರಡು ಕೈಯಿಂ ಪುಷ್ಪಮಾಲೆಯ ಶಿವನ ಕೊರಳೊಳಿಕ್ಕಲೆಂದೆತ್ತಿದಾಗಲುಟ್ಟಿರ್ದ ಸೀರೆಯಳಿದೊಡದನೆರಡು ಮೊಳಕೈಯಿಂದೆರಕಿ ಚಿಂತಿಸುವಲ್ಲಿ ದೇವರು ಬಗ್ಗಿ ಮಾಲೆಯಂ ಕೊಂಡುದರಿಂ ವಕ್ರತ್ವ ಬಂತೆಂಬುದುಂ

ಶೂದ್ರರ ಮಾನಚಂಡೆಯನೆಂಬವನ ಕಥಯಂ ಶೂದ್ರ ಶಂಕುಲಾದಾಯನ ಗೊಲ್ಲರ ಗೋನಾಥನ ಮೂರ್ತಿನಾಥನೆಂಬ ವೈಶ್ಯನ ಶೂದ್ರ ಪಶುಪತಿಯ ನಂದನನ ವಿಚಾರವಂತನ ಚಂಡೇಶ್ವರನ ಶೂದ್ರ ವಾಗೀಶ್ವರನ ವಿಜಾತಿಯ ಮಂತ್ರಕುಲಪಕ್ಷನ ವಿದ್ಯಾಶೂರನ ಪೂತವತಿಯ ಅಭೂತಿಚರನ ನೀಲನಗ್ನನ ನವನಂದಿಯ ಶಿವಜ್ಞಾನ ಸಂಬಂಧಿಯ ಕರಿಕಾಮನ ಗೊಲ್ಲರ ಕೈಲಾಸಸಿದ್ಧ ಶ್ರೀಮೂಲನ ಜಾತಿಯಿಲ್ಲದ ದಂಡಭಕ್ತನ ಮೂರ್ಖಭಕ್ತನ ಶೂದ್ರಶಾಭ್ಯನಾಥನನಿರುದ್ಧ ಶಾರ್ದೂಲರೆಂಬಿವರ ಕಥೆಯಂ ಮತ್ತಂ ದಭ್ರಭಕ್ತನೆಂಬನ ಮಗನ ಕೊಯ್ದಟ್ಟಿ ತಿಂದನೆಂಬುದಂ ಚೇರಭೂಪನ್ ಆನೇಯನೇರಿ ಪೋಗುತ್ತಮಸಗನ ಪಣೆಯಿಂ ಚೌಗಾರದ ನೀರು ಬಿಳಿದಾಗಿ ಪರಿದಿರೆ ಭಸ್ಮಾಂಗಧರನೆಂದಾನೆಯನಿಳಿದು ಸಾಷ್ಟಾಂಗವೆರಗಿನೆಂಬುದಂ

ಮತ್ತಂ ಪರಾಂತಕನೆಂಬನ ಗಣನಾಥನ ಸತ್ಯದಾಸನ ಧರ್ಮಕೇತನನ ಪ್ರತಾಪ ಸೂರ್ಯನ ಬೆಸ್ತರತಿಭಕ್ತನ ಮಾನಧನನೆಂಬನ ಗಾಣಿಗ ಕಲಿನೀತಿಯ ವೆಳ್ಳಾಳ ಶೂದ್ರ ಶಕ್ತಿನಾಥನ ಗೊಲ್ಲರ

ಪಂಚಪಾದನ ಮಂಡೆಕೂದಲಿಂ ದೀಪಮನೆತ್ತಿದ ಗಣೋಲ್ಲಾಸನ ಅಭಿರಾಮನೆಂಬಂ ದಕ್ಷಿಣ ಮಧುರೆಗೆರಸಾಗಿರ್ದು ವೀರಶೈವನಾಗಿ ಜೈನಮತದ್ವೇಷವಿಡಿದು ಜೈನಾಲಯಂಗಳಂ ಜೈನಸಂಗಮಂ ಕೆಡಿಸಿದನೆಂದುಂ

ನಿರ್ವಚನನೆಂಬನ ಮಾನಧನನ ಸಿಂಹಾಕನೆಂಬನ ಪೆಂಡತಿ ತಿರುವಾಲೂರ ದೇವರ ಪುಷ್ಪಮಂ ಮೂಸಲವಳ ಮೂಗಂ ಕುಯ್ಯಲು ಸಿಂಹಾಕನವಳ ಕೈಯ ಕುಯ್ದನೆಂಬುದುಂ

ಭೂತಿಧರನರಮನೆಯ ಕಣಜದ ಬತ್ತಮಂ ಕದ್ದು ಶಿವಪ್ರೀತನ್ನಾದನೆಂಬುದಂ ಸಾಹಸಪ್ರಿಯನರಸಿನ ಪಟ್ಟಸ್ತ್ರೀಯ ಮೂಗನರಿದನೆಂಬುದಂ ಕೀರ್ತಿಸಖಿಂಗೆ ದಿನಂಪ್ರತಿ ಶಿವಂ ಸುವರ್ಣಮಂ ಕೊಟ್ಟುಬಂದನೆಂಬುದಂ ಶೂರವ್ಯಾಘ್ರನೆಂಬ ವೆಳ್ಳಾಳಂ ಚೋಳಂಗೆ ಮಂತ್ರಿಯಾಗಿರ್ದು ರಾಜಕಾರ್ಯಕ್ಕೆ ಪೋಗೆ ಆತನ ನಂಟರ್ ಬಂದು ಕಣಜದ ಬತ್ತಮಂ ತೆಗೆದಾತನ ಪೆಂಡತಿಯಿಂದಡಿಸಿ ಉಂಡು ಮಂತ್ರಿಯನೇನಾದರು ಕೇಳಲೆಂದಿರಲವಂ ಬಂದು ಬತ್ತಮಂ ತೆಗೆದುದಂ ಕೇಳಿ ಕೋಪದಿಂ ಔತಣದ ನೇಮದಿಂದಾ ನೆಂಟರೆಲ್ಲರಂ ಬರಿಸಿ ನಡುಮನೆಯೊಳ್ ಕುಳ್ಳಿರಿಸಿ ಶಿವಾರ್ಪಣೆಗೆಂದಿರ್ದ ಬತ್ತಮಂ ಉಂಡೆರೆಂದೆಲ್ಲರಂ ತಲೆಗೊಯ್ದು ಪರಿಹರಿಸಿ ತನ್ನ ಪೆಂಡತಿಯು ಉಂಡಳೆಂದವಳ ಪೊಟ್ಟೆಯಂ ಸೀಳ್ದು ಅವಳ ಸ್ತನ್ಯಮನುಂಡ ಶಿಶುವಂ ಮೇಲಕ್ಕಿಟ್ಟು ಕತ್ತಿಯನೊಡ್ಡಿ ಕತ್ತರಿಸಿ ಕೈಲಾಸಮನೆಯ್ದಿದನೆಂಬ ಕಥೆಯಂ ಮತ್ತಂ ಕೀರ್ತಿನಾಥನ ಲೋಹಿತಾಕ್ಷನ ನಿರಾಕರನ ಕಥೆಯಂ ಮಧುರೆಯ ವೀರಪಾಂಡ್ಯನ ಮಗಂ ಕೂನಪಾಂಡ್ಯಂಗೆ ಚೋಳರಾಯನ ಮಗಳು ಪದ್ಮಾವತಿ ಎಂಬಳು ಅರಸಿಯಾಗಿರಲಾ ಪದ್ಮಾವತಿಯಂ ಬೋಧಿಸಿ ವೀರಶೈವದಾಂಡಿಗಳು ಕೃತ್ರಿಮವಿದ್ಯದಿಂ ಲಿಂಗಧಾರಿಯಂ ಮಾಡಿ ಚೋಳರಾಯನಂ ಶಿವಭಕ್ತನಂ ಮಾಡಿ ಜಿನಮತದ್ವೇಷದಿಂ ಜೈನರೆಲ್ಲರಂ ಶೂಲದೊಳಿಕ್ಕಿಸಿದನವನಂ ಸುಕುಮಾರನಾದನೆಂಬುದಿವು ಮೊದಲಾದನೇಕ ಕಥೆಗಳಂ ಕಲ್ಪಿಸಿ ಸೂತಪುರಾಣೀಕರು ಅಗಸ್ತ್ಯರುಷಿಯುಮುಪಮನ್ಯು ತಮ್ಮ ಶಿಷ್ಯರ್ಗೆ ಪೇಳ್ದರೆಂದು ರಚಿಸಿ ನಿತ್ಯದಲ್ಲು ಓದುತ್ತಂ ಶ್ರದ್ಧಾಪರನಾಗಿದಾಗಿಸುತ್ತಲಿತರಮತಂಗಳೊಳು ದ್ವೇಷಮಂ ತಾಳಿಯುಮಿರಲೊಂದು ದಿವಸಂ ಕೆಲಂಬರು ವಿದ್ವಾಂಸರುಂ ಪಂಡಿತರುಂ ದೇವರಾಜರಸು ಮೊದಲಾದ ಹಳೇಬೀಡು ಬೆಳುಕೆರೆ ಅರಸುಗಳು ಬಂದೀ ಕಥೆಗಳಂ ಕೇಳ್ದು ದೇವರಾಜರಸು ಪೆಣ್ಣಂಗೊಟ್ಟಿರ್ಪ ದಾಕ್ಷಿಣ್ಯಮುಳ್ಳುದರಿಂದಿಂತೆಂದನೀ ಕಥೆಗಳಾವ ಕಾಲದೊಳಾವ ಪುರಾಣದೊಳಿಪ್ಪವಿವಕ್ಕೆ ಕರ್ತೃಗಳಿಲ್ಲದುದರಿಂ ಸಂರಕ್ಷಣರೌದ್ರಮುಳ್ಳರಂ ಮೂಢಭಕ್ತರಂ ಜ್ಞಾನ ಧ್ಯಾನ ತಪೋಹೀನರಂ ಶಿವಂ ಪುತ್ರಮಿತ್ರರ್‌ವೆರಸಿ ಕಾಯ ಸಹಿತಂ ಕೈಲಾಕ್ಕೊಯ್ದನೆಂದರೆ ಕರುಣಾರ್ದ್ರ ಹೃದಯ ಜ್ಞಾನಚಾರಿತ್ರ ತಪೋನುಷ್ಠಾನಂಗಳು ವ್ಯರ್ಥಮಪ್ಪುದರಿಂದೀ ರಾಗದ್ವೇಷಮಯಮಪ್ಪ ಕಥೆಗಳಂ ಕಲ್ಪಿಸಿ ಪೇಳುವರ್ಗಂ ಕೇಳುವರ್ಗಂ ಭಾವಿಸುವರ್ಗಂ ಪಾಪಾಸ್ರವಮಲ್ಲದೆ ಪುಣ್ಯಾಸ್ರವಮಾಗದದರಿಂ ನಿರ್ದೋಷಿಗಳಂ ನಿಃಕರುಣದಿಂ ಕೊಂದರ್ಗಧೋಗತಿಯಿಲ್ಲದೆ ಊರ್ಧ್ವಗತಿಯಾಗದು, ಅದೆಂತೆಂದೊಡೆ 'ಯಾಗತಿಸಾಮತಿಃ' ಎಂಬ ಶ್ರುತಿಯಿಪ್ಪುದರಿಂ ದುರ್ಧ್ಯಾನಮಂ ಮಾಡಲಾಗದು

ಶ್ಲೋಕ || ಆರ್ತೇ ತಿರ್ಯಗ್ಗತಿಪ್ರಾಪ್ತೋ ರೌದ್ರೇ ನಾರಕಸಂಭವಃ
ಧರ್ಮಧ್ಯಾನೇನ ಸ್ವರ್ಗಂ ಸ್ಯಾಚ್ಛುಕ್ಲೇನಾಶಾಶ್ವತಂ ಪದಮ್ ||

ಮುನ್ನ ಶೈವಸಿದ್ಧಾಂತದಲ್ಲಿ ಕ್ರೋಧಮುಳ್ಳರ ಕಥೆಯಂ ಕೇಳ್ವೊಡೆ ಇಹಪರಮಿಲ್ಲೆಂಬುದಂ ಅನುಭವಾಮೃತದಲ್ಲಿ ಪೇಳ್ವುದಲ್ಲದೆ ಸೋಮೇಶ್ವರನ ಶತಕದೊಳ್

ಮ || ಶುಚಿ ತಾನಾಗದೆ ಸರ್ವಶಾಸ್ತ್ರನಿಪುಣಂ ತಾನಾಗದೆ ಕಾಮಮಂ
ಪಚನಂಗೆಯ್ಯದೆ ಕ್ರೋಧಮಂ ಬಿಡದೆ ಲೋಭಚ್ಛೇದನಂ ಮಾಡದೇ
ರಚನಾಮೋಹಮನುಗ್ಗಿನೆಗ್ಗಿ ಮದಮಾತ್ಸರ್ಯಂಗಳಂ ನೀಗದೇ
ವಚನಬ್ರಹ್ಮದಿ ಮುಕ್ತಿಯೇ ಹರಹರಾ ಶ್ರೀ ಚೆನ್ನ ಸೋಮೇಶ್ವರಾ

ಶ್ಲೋಕ || ಏಕಾಕೀ ನಿಸ್ಪೃಹಃ ಶಾಂತಃ ಪಾಣಿಪಾತ್ರೋ ದಿಗಂಬರಃ
ಕದಾ ಶಂಭೋ ಭವಿಷ್ಯಾಮಿ ಕರ್ಮನಿರ್ಮೂಲನಕ್ಷಮಃ ||

ಇಂತಾದಿಯಾಗಿ ಮೂವತ್ತೆರಡುಪನಿಷದ್ವಾಕ್ಯಂಗಳು ಸಾರ್ವುದರಿಂದ ಶಾಸ್ತ್ರಕ್ಕೆ ವಿರೋಧಮಪ್ಪವು. ವೀರಶೈವಮಾದ ಬಸವಣ್ಣನ ಸೃಷ್ಟಿಯೊಳೆ ಜನಂಗಳ್ಗದ್ಭುತಮಂ ತೋರಿಸಿ ದೃಢವಿಡಿಯಿಸಲೆಂದು ಕಲ್ಪಿಸಿದ ಕಥೆಗಳು ರೌದ್ರದಿಂ ಮನುಷ್ಯರಂ ಶೂಲದೊಳಿಕ್ಕಿ ಆಯುಧದಿಂ ಕೊಂದವರ್ಗೆ ಮುಕ್ತಿಯಾಯ್ತೆಂಬೀ ಕಥೆಗಳಂ ಕೇಳಿ ಸದ್ಗತಿವಡೆವೆನೆಂಬುದು ವಿಷಮಂ ಉಂಡು ಬದುಕುವೆನೆಂಬಂತೆಂದು ದೇವರಾಜರಸನು ಪಂಡಿತ ವಿದ್ವಾಂಸರು ಅರಸಂ ಕೇಳ್ವಂತೆ ನುಡಿಯುತ್ತ ಪೂರ್ವದೊಳು ಚಿಕ್ಕದೇವರಾಜರಸನುಂ ಜಾತಿಗಳ ವಿಚಾರಿಸಲೆಂದು ಸಕಲ ಜಾತಿಯೊಳು ಶ್ರೇಷ್ಠರಂ ಬರಿಸಿ ಉತ್ಕೃಷ್ಟ ನಿಕೃಷ್ಟಮನರಿಯಲೆಂದೊಡೆ ಯಾವುದೊಂದು ಜೀವಂ ಯಾವುದೊಂದು ಯೋನಿಯೊಳು ಪುಟ್ಟಿದೊಡಮಲ್ಲಿಯೆ ಪರಿಣಮಿಸಿ ಉತ್ಕೃಷ್ಟಮೆಂಬ ಬುದ್ಧಿ ಪುಟ್ಟುವುದರಿಂ ಸರ್ವಜಾತಿಯವರ್ ಬಂದು ತಂತಮ್ಮ ಕುಲಶ್ರೇಷ್ಠ ಪುರಾಣಮಂ ಪೇಳ್ದರುಮವರೊಳು ಪಂಚಾಳದವನೆಂದಂ ನಾನೀ ಲೋಕಕ್ಕೆ ಮೊದಲಿಗನಾಗಿ ಬ್ರಹ್ಮಾಂಡಂಗಳಂ ನಿರ್ಮಿಸಿ ಲೋಕಮಂ ಮಾಡಿ ಸಕಲ ಪದಾರ್ಥಂಗಳಂ ತುಂಬಿಡಲವರವರ ಕಾರಣಂಗಳಿಗೆಲ್ಲಂ ನೀನಿಲ್ಲದಾಗದೆಂದು ದೇವಾದಿ ತ್ರೈಮೂರ್ತಿಗಳ್ ವಿಶ್ವಬ್ರಹ್ಮನಂ ಪ್ರಾರ್ಥಿಸೆ ತನ್ನ ಕಳೆಯಪ್ಪ ವಿಶ್ವಕರ್ಮನಂ ಕಳುಹಿಸಲಾತಂ ಬಂದು ಲೋಕದೊಳುಳ್ಳ ಸಮಸ್ತೋಪಕರಣಂಗಳಂ ನಿರ್ಮಿಸಿ ಬ್ರಹ್ಮಂಗೆ ದಂಡುಕೋಲು ಕಮಂಡಲು ಅಕ್ಷಮಾಲೆಯಂ ಮಾಡಿಕೊಟ್ಟು ವಿಷ್ಣುವಿಂಗೆ ಶಂಖ ಚಕ್ರ ಗದಾಸಿ ಮೊದಲಾದವಂ ಈಶ್ವರಂಗೆ ಕಟ್ವಾಂಗ ತ್ರಿಶೂಲ ಪಿನಾಕಾದಿಗಳಂ ಕೊಟ್ಟು ಅವರವರ ಚಿಹ್ನೆಗಳನ್ನುಂಟುಮಾಡಿದಂ, ಅದಲ್ಲದೆ ದೇವತೆಗಳ್ಗೆ ದಾನವರ್ಗೆ ಕಾರ್ಯಕಾರಣಂಗಳಂ ನಿರ್ಮಿಸಿಕೊಟ್ಟನಾ ವಿಶ್ವಕರ್ಮನ ಸಂತತಿಯೊಳೆ ಸಮಸ್ತ ಚರಾಚರ ಜೀವಂಗಳು ಪುಟ್ಟಿದವೆಂದು

ಶ್ಲೋಕ || ವಿಶ್ವಕರ್ಮಕೃತಂ ಲೋಕಂ ತ್ರಿಮೂರ್ತೀನ್ ದೇವದಾನವಾನ್
ಸರ್ವೋಪಕರಣಂ ಚೈವ ವಿಶ್ವಕರ್ಮ ವಿನಾ ನ ಹಿ ||

ಎಂದು ಪೇರಸಾರೆ ಕುಂಭಕಾರನೆಂದಂ ನಾಂ ಲೋಕಕ್ಕೆ ಜ್ಯೇಷ್ಠನು ಮತ್ತೆ ಭೂಮಿ ಪುಟ್ಟಿತು.

ಭೂಮಿಯಲ್ಲಿ ನೀರು ಪುಟ್ಟಿತು. ಮತ್ತಂ ವಾಯು ಪುಟ್ಟಿತು. ಅಲ್ಲಿಂ ಮೇಲೆ ಅಗ್ನಿ ಪುಟ್ಟಿತು. ಮತ್ತಾಕಾಶಂ ಪುಟ್ಟಲು ಕುಲಾಲಂ ಆ ಮೃತ್ತಿಕೆಯಂ ನೀರೊಳ್ ಕಲಸಿ ಸಕಲ ಪ್ರಪಂಚನೆಲ್ಲಮಂ ಸ್ವರ್ಗಮರ್ತ್ಯಪಾತಾಳಂಗಳ ಮಾಡಿ ನಡಸುತ್ತಿಪ್ಪಿನ ಛಾಯೆ ಎಂಬ ಯಮನರಸಿಯು ಅಗ್ನಿಯಂ ನುಂಗಿರಲಾ ಸಕಲಂಗಳು ಜಲಸ್ಪರ್ಶನದಿಂ ಗತಮಾಗುತ್ತಿರೆ ಈಶ್ವರನ ಉರಿಗಣ್ಣಿಂ ಕೀಳ್ಪುದು ಕೋಪಿಸಿ ನೀನು ಸರ್ವಸೃಷ್ಟಿಯುಳ್ಳನಾಗಿಯೂ ಜಾತಿಯೋಗ್ಯನಾಗಬೇಡೆಂದು ಶಾಪವಿಕ್ಕಿದೊಡಾ ಯಜ್ಞೇಶ್ವರನಂ ಪ್ರಾರ್ಥಿಸೆ ದಕ್ಷ ಬ್ರಹ್ಮನಾಗಿ ಈಶ್ವರನಂ ಕೊಲಲ್ಬಗೆಯಲಾಗಲು ತನ್ನ ಶಕ್ತಿಯಿಂ ಪಾರ್ವತಿಯ ವರದಿಂ ವಿಷ್ಣುವಿನ ಚಕ್ರದಿಂ ದಕ್ಷಬ್ರಹ್ಮನಪಹರಿಸಲ್ ಬರೆ ಕುಂಭಕಾರಂ ಬ್ರಹ್ಮನಂ ಮರೆಗೊಂಡು ಮೃತ್ತಿಕೆಯೊಳ್ ಚತುರಂಗಬಲಮಂ ನಿರ್ಮಿಸಿ ಪಾರ್ವತೀವರಮಂ ವಿಷ್ಣುಚಕ್ರಮಂ ಗೆಲ್ದು ಯಜ್ಞಮಂ ಮಾಳ್ಪಿನ ವೀರಭದ್ರಂ ಬಂದು ಯಜ್ಞಮಂ ಮಾಣಿಸೆ ಆತನಂ ಗೆಲ್ದು ಬ್ರಹ್ಮವಶದವನಾದುದರಿಂ ಯಜ್ಞಸೂತ್ರಮಂ ಭಾಂಡದೊಳ್ ಕಲ್ಪಿಸಿ ಕುಂಭ ಹಾರುವನೆಂದು ಪೆಸರಾಗಿ ಕಡೆಯೊಳು ಶಾಲೀವಾಹನಂ ರಾಜ್ಯವನಾಳಿದನಾತನ ಶಕೆಯೆ ನಡೆಯುವುದಲ್ಲದೆ ಮತ್ತೊಂದಿಲ್ಲದರಿಂ ಕುಂಬಾರನೆ ಶ್ರೇಷ್ಠನೆಂದಂ.

ಕಿರಾತನೆಂದಂ ಮುನ್ನಲೀಶ್ವರಂಗಾಹಾರಮಿಲ್ಲದೆ ಜಠರಾಗ್ನಿಯಿಂ ಬೆಂದು ಸುಯ್ದು ತನ್ನ ಕಂಕುಳಬೆಮರಂ ತೆಗೆದಿಡೆ ಅಲ್ಲಿ ಶೌರ್ಯವೀರ್ಯಮುಳ್ಳ ಪುರುಷಂ ಪುಟ್ಟಿ ಪರಿಜನಮಂ ಪಡೆದು ಶೂಲಿಯೊಡವೆರಸಿ ಅರಣ್ಯಕ್ಕೆಯ್ದಿ ಮೃಗಪಕ್ಷಿಗಳಂ ಬೇಂಟೆಯನಾಡುತ್ತಮಿರೆ ಕೃಷ್ಣಂ ಕೇಳ್ದು ತನ್ನ ಕೈವಾಡದ ಜನಸಹಿತಂ ಬೇಂಟೆಯನಾಡಲ್ ಬಂದು ಅನೇಕ ಮೃಗ ಪಕ್ಷಿಗಳನೆಲ್ಲಮಂ ಕೊಂದು ಈಶಂಗುಣಲಿಕ್ಕುವುದುಂ ಈಶನೆಂದಂ ನೀನಿಕ್ಕಿದಾಗಲೆ ತೃಪ್ತಿಯಾದುದು ಬೇಡರಸೇಯೆನೆ ಆ ವೀರಪುರುಷಂಗೆ ಬೇಡನೆಂಬ ಪೆಸರಾದುದು ಆತಂಗೆ ಕೃಷ್ಣ ಮೆಚ್ಚಿ ಅರ್ಧರಾಜ್ಯಮಂ ಕೊಟ್ಟು ಆತನೊಡನೆ ಬೇಂಟೆಯನಾಡುತ್ತಿರಲಾತಂಗಮಿದಿರಾರುಮಿಲ್ಲದೆ ಬ್ರಹ್ಮನಂ ಗಣಿಸದೆಯಿರ್ದನಾ ವಂಶದೊಳೆ ಅನೇಕ ಜಾತಿ ಪುಟ್ಟಿದರಲ್ಲದೆ ಅರ್ಜುನಂ ಬೇಂಟೆಗೆವರೆ ಆತನೊಳೆ ಕೇಶಾಕೇಶಿ ಮುಷ್ಟಾಮುಷ್ಟಿ ಯುದ್ಧಂಗೆಯ್ದು ಸರ್ವಸ್ವಮಂ ಸುಲಿದುಕೊಂಡರ್. ಅದಲ್ಲದೆ ಪೂರ್ವದೊಳು ಕಿರಾತನ ಮಗಳಪ್ಪ ಸತ್ಯವತಿ ವ್ಯಾಸನಂ ಪೆತ್ತಳ್. ಆತನಿಂ ಪಾಂಡವರ ವಂಶಮಾಯ್ತು. ಅದರಿಂ ಕಿರಾತಕುಲವೆ ಶ್ರೇಷ್ಠವೆಂದು ನುಡಿದನು.

ಮತ್ತಂ ಕುರುಂಬನು ಮುನ್ನ ತಾನು ಬ್ರಹ್ಮನ ಹಸ್ತದೊಳು ಪುಟ್ಟಿ ವೀರ್ಯನೆಂಬ ಹೆಸರಾಂತು ಬ್ರಹ್ಮನುವೆರಸಿ ಬೇಂಟೆ ಹೋದಾಗಲು ಕಿರಾತರು ವನಮಂ ಪುಗಲೀಸದೆ ಪೊರಡಿಸುವುದು ಬೀರಂ ಪರಶುವನಾಂತು ವನಮಂ ಪೊಕ್ಕು ಆಡು ಕುರಿ ಮೊದಲಾದ ಕೆಲವು ಮೃಗಂಗಳನ್ನು ಬೇಂಟೆಗೊಳಗಾಗಲೀಸದೆ ಪಚ್ಚಂಗಿದಡಿಯಿಂದಟ್ಟಿತಂದು ಪುರದೊಳಿಟ್ಟು ಸಲಹುತಿರ್ದು ಮತ್ತೊಂದುದಿನಂ ಹುಲ್ಲೆಗಳಂ ಹಿಡಿತರುವಲ್ಲಿ ಬೇಟೆಗಾರರ್ ಬಂದು ಮೃಗಂಗಳ ಕೊಂದು ಕೊಂಡುಪೋಗುವಲ್ಲಿ ಬೆನ್ನಟ್ಟಿ ಆ ಮೃಗದ ಚರ್ಮಂಗಳಂ ಸುಲಿದು ಬ್ರಹ್ಮಂಗೆ ಕೊಟ್ಟೊಡೆ ಕೃಷ್ಣಾಂಜಿನಧರನಾದಂ. ಮತ್ತಂ ಮಾಂಸಮಂ ಭಕ್ಷಿಸಲು ಪ್ರೀತನಾಗಿ ಯಜ್ಞಮೆಂದು ವೇದಸೂತ್ರಮಂ ನಿರ್ಮಿಸಿ ಆ ಆಡು ಕುರಿಗಳಿಗೆ ಅಜನೆಂದು ತನ್ನ ಪೆಸರಿಟ್ಟು

ಯಜ್ಞಮುಖದಿಂದಾಡುಗಳಂ ಮಂತ್ರದಿಂ ಕೊಂದು ಸೇವಿಸುತಿರ್ದನಾ ಬೀರನ ವಂಶದೊಳೆ ಅನೇಕ ಜಾತಿಯು ಪುಟ್ಟಿತು. ಆ ಬೀರೇದೇವರಿಗೆ ಕಂಬಳಿ ಗದ್ದುಗೆ ಮೊದಲಾದ ಬಿರಿದು ಆ ಕುರುಬರೊಳು ಸಾದುಗುರುಬರು ಬೆಟ್ಟಕುರುಬರು ಹಂಡೆಕುರುಬರು ಮೊದಲಾದನೇಕ ಭೇದಮಾಯಿತು. ಅದರಿಂದೆಲ್ಲಾ ಕೈವಾಡಕ್ಕು ಕುರುಬಜಾತಿ ಶ್ರೇಷ್ಠನೆಂದಂ.

ತಂತುವಾಯನಿಂತೆಂದಂ ಮುನ್ನ ಪರಮೇಶ್ವರಂ ಲೋಕಸೃಷ್ಟಿಯೊಳು ಎಲ್ಲರು ಬೆತ್ತಲೆ ನಗ್ನರೂಪಾಗಿದ್ದುದರಿಂ ಅಂಬಿಕೆ ಚರ್ಮ ವಲ್ಕಲಾದಿಗಳಿಂ ಅಭಿಮಾನವಂ ಮರಸಿಪ್ಪುದಂ ಕಂಡು ಚಿಂತಿಸಿ ಚಳಿಯೊಳು ಕಂಪಿಸುವುದಂ ನೋಡಿ ಅದಕ್ಕುಪಾಯಮಾವುದೆಂದು ತನ್ನಂಗುಷ್ಠ ತರ್ಜನಿ ಎಂಬ ಎರಡಂಗುಲ ಸ್ಪರ್ಶನದಿಂ ಈರ್ವರ್ ಕುಮಾರರ್ ಪುಟ್ಟಿ ಬ್ರಹ್ಮನಿಂದೊರವಾಂತು ವೃಕ್ಷಂಗಳ ತಂತುಗಳಂ ಪೊಸೆದಾ ದಾರವಂ ಕಮವಿಡಿದು ನೇಯಿಸಿ ಸ್ತ್ರೀಪುರುಷರ್ಗೆ ಯೋಗ್ಯಮಪ್ಪ ವಸ್ತ್ರಂಗಳಂ ನಿರ್ಮಿಸಿ ಅವರೊಳೆ ಚೀನಿ ಚೀನಾಂಬರ ದುಕೂಲ ದೇವಾಂಗ ವಸ್ತ್ರಂಗಳಂ ನಿರ್ಮಿಸಿ ಬತ್ತಲೆಯಿರ್ದ ದೇವರ್ಕಳಿಗೆ ಕೊಡುವುದು ಅತ್ಯಂತ ಸಂತೋಷದಿಂ ತ್ರಿಮೂರ್ತಿಗಳ್ಬೆರಸಿ ದೇವಾಂಗದವನೆಂದು ಪೆಸರಂ ಕುಡೆ ಆ ದೇವಾಂಗದವನಂ ಮಾನ್ಯನಾಗಿರ್ದನಾತನನ್ವಯದೊಳೆ ಅನೇಕ ಭೇದಂಗಳಾದರೆಂದು ಪೇಳ್ದಂ.

ಮತ್ತಂ ಒಕ್ಕಲಿಗಂ ಭೂಮಿ ಪುಟ್ಟಿದ ಏಳು ದಿವಸಕ್ಕೆ ಮಳೆ ಹೊಯ್ದೊಡೆ ಕಾಡೊಳ್ ಬೆಳೆದೊರಗಿರ್ದ ಧಾನ್ಯ ವಿದಳಾದಿಗಳಂ ಕಸಮಂ ಕಳಿದು ಪಾಕಮಂ ಮಾಳ್ಪುದರಿಯದೆ ಸಕಲ ಜೀವಂಗಳು ಕ್ಷುಧಾಪೀಡಿತರಾಗಿರಲ್ ಬ್ರಹ್ಮಂ ಭ್ರಮಣೆಯಿಂ ಬರುತ್ತ ಬೆಳೆದಿರ್ದ ಧಾನ್ಯಂಗಳಂ ಕಂಡು ಸಂಸ್ಕಾರಂಗೆಯ್ಯಲುಪಾಯಮಂ ಕಾಣದೆ ತನ್ನ ದಕ್ಷಿಣಾಂಘ್ರಿಯನ್ನೆತ್ತಿ ಪೊಯ್ಯಲಾ ಪಾದದೊಳೆ ಅರಂಗಡ್ಡಿ ಮೆರೆಗೋಲು ಕೊಂಗಂಗಳು ಸಹಿತಮಾಗಿ ಪುಟ್ಟಿ ಸಂಸ್ಕಾರದಿಂ ಪಚನದಿಂದಷ್ಟುಸಿದ್ಧಾನ್ನಮಂ ದೇವಾದಿದೇವರ್ಕಳೆಲ್ಲರುಮುಂಡು ತೃಪ್ತಿವಡೆದು ಶಕ್ತಿ ಪುಟ್ಟಿದುದರಿಂ ದೇವತೆಗಳೆಲ್ಲರು ಮಹಾಮೇರುಮಂ ಮಂಥಂ ಮಾಡಿ ಆದಿಶೇಷನೆ ರಜ್ಜುವಾಗೆ ಸಮುದ್ರಮಂ ಕಡೆದೊಡೆ ಅಲ್ಲಿ ಚಂದ್ರನುಂ ಲಕ್ಷ್ಮಿಯುಂ ಕೌಸ್ತುಭಮುಂ ರತ್ನಮುಂ ಅಮೃತಮುಂ ಸುರೆ ಮೊದಲಾದವು ಪುಟ್ಟೆ ಈಶಂ ಚಂದ್ರನಂ ನಾರಾಯಣನು ಲಕ್ಷ್ಮಿಯಂ ಕೌಸ್ತುಭಮಂ ದೇವತೆಗಳು ಅಮೃತಮಂ ದಾನವರು ಸುರೆಯಂ ಕೊಂಡು ಮತ್ತಂ ಅತಿಮಥನಮಂ ಮಾಡಲು ವಿಷಂ ಪುಟ್ಟಿದೊಡಾರು ಕೊಳ್ಳದಿರಲ್ ಲೋಕಮಂ ದಹಿಸುತ್ತಿರಲ್ ಈಶ್ವರಂ ಕೊಂಡು ಕಂಠದೊಳ್ ಧರಿಸಿದುದರಿಂ ವಿಷಕಂಠನಾದಂ.

ಮತ್ತಂ ಈಶ್ವರಂ ಕಾಡೊಳಿರ್ದ ಧಾನ್ಯಂಗಳನೊಕ್ಕಿ ತರುವುದಕ್ಕೆ ಸಿಕ್ಕದಿರ್ಪುದು ತನ್ನ ಒಕ್ಕಲಿಂಗೆ ವೃಷಭನಂ ಕೊಟ್ಟು ಉತ್ತು ಆ ಭೂಮಿಯೊಳು ಬಿತ್ತಿ ಬೆಳೆ ಎಂದು ನೇಮಿಸೆ ಆ ಮೇರೆಯಲ್ಲು ಬಿತ್ತಿ ಬೆಳೆದು ಇರುವೆ ಮೊದಲಾದ ಎಂಬತ್ತುನಾಲ್ಕು ಜೀವರಾಶಿಗಳ್ಗೆಲ್ಲಾ ಅನ್ನಮಂ ಕೊಟ್ಟುದರಿಂ ನೀನೆ ಲೋಕಕ್ಕೆ ಜೀವನಕಾರಿ ಎಂದು ದೇವತೆಗಳಾದಿಯಾಗಿ ಅವನಂ ಕೊಂಡಾಡುವರು. ಆ ವಂಶದೊಳೆ ಅನೇಕ ಜಾತಿಗಳುತ್ಪತ್ತಿಯಾದವು. ಅದರಲ್ಲಿ ಸಾದ ಗುಡಿ ರಡ್ಡಿ ನೊಣಬ ಗಂಗಡಿಕಾರ ಕುಂಚಗ ದಾಸ ತೆಲುಗ ಮೊದಲಾದ ಭೇದಂಗಳಾಗಿ ವರ್ತಿಸುವರು.

ಅದರಿಂದ ಒಕ್ಕಲಿಗನೇ ಶ್ರೇಷ್ಠನೆಂದು ಪೇಳಿದಂ.

ಮತ್ತಂ ಗಾಣಿಗನಿಂತೆಂದಂ ಮುನ್ನ ಜಗದ ಸೃಷ್ಟಿಯೊಳು ಪ್ರಭೆಯಿಲ್ಲದೆ ಅಂಧಕಾರಮಾಗಿರೆ ದೇವದಾನವರು ಕಣ್ಕಾಣದೆ ತ್ರೈಮೂರ್ತಿಗಳ್ಗೆ ಮೊರೆಯಿಡುವುದು. ಆ ಮೂವರು ಕಾಣದೆ ಕತ್ತಲೆಯೊಳು ತಡವರಿಸುತ್ತಿರೆ ಈಶ್ವರಂ ಕೋಪಿಸಿ ಪಣೆಯೊಳೊಂದು ಉರಿಗಣ್ಣಂ ಪಡೆಯಲು ಅದರೊಳೊಬ್ಬ ದೀಪ್ತ ಪುರುಷಂ ಪುಟ್ಟಿ ಪ್ರದೀಪಮಂ ಮಾಳ್ಪುಪಾಯಮಂ ಕಲ್ತು ಸ್ನಿಗ್ಧಮಪ್ಪ ವಸ್ತುಗಳೊಳು ತೈಲಮಂ ಬರಿಸಿ ದೀಪವರ್ತಿಯಂ ತೋರಿಸಿದಂ. ಮತ್ತಂ ಬಸವಣ್ಣನ ಸೃಷ್ಟಿಯೊಳು ಆ ಅನ್ವಯದವರಂ ಜ್ಯೋತಿಬಣ್ಣಮೆಂದು ಬಣ್ಣದೊಳುತ್ಕೃಷ್ಟಮಾಡಿ ಮನ್ನಿಸಿದ. ಆ ವಂಶದೊಳೆ ಅನೇಕ ಜನಂ ಪುಟ್ಟಿ ಪ್ರಕಾಶಿಸಿದರ್. ಅದರಿಂ ನಾನೇ ಹೆಚ್ಚೆಂದು ಪೇಳ್ದಂ.

ಮತ್ತಂ ಗೊಲ್ಲನೆಂದಂ ಎಲ್ಲಾ ಕುಲಂಗಳೊಳು ಗೊಲ್ಲಕುಲಮೇ ಶ್ರೇಷ್ಠ ಗೊಲ್ಲನೇ ಮೊದಲಿಗನಾದುದರಿಂ ತ್ರೈಮೂರ್ತಿಗಳು ದೇವತೆಗಳು ಮನುಷ್ಯರು ಮೊದಲಾಗೆಲ್ಲರು ಗೊಲ್ಲರೆ ಅಲ್ಲದೆ ಬೇರಿಲ್ಲ. ಅದಕ್ಕೆ ಭಾಗವತದೊಳ್ ಪೇಳ್ವ ಗೊಲ್ಲಕಥೆಯೆ ದೃಷ್ಟಾಂತಮೆಂದು ಪೇಳ್ದನ್.

ಉಪ್ಪಲಿಗನು ಪೂರ್ವದೊಳು ಅಗಸ್ತ್ಯಋಷಿಯು ಸಮುದ್ರಮಂ ಪೀರಿದೊಡೆ ಲವಣಾಭಾವಮಾಗೆ ಈಶಂಗೆ ಮೃಡಾನಿಯು ಸಪ್ಪೆಯನಿಕ್ಕುತ್ತಮಿರಲಾತನ ಶರೀರಂ ರಸಗುಂದಿ ಕ್ಷೀಣಮಾಗೆ ದೇವಿಯು ಉಪ್ಪಿಲ್ಲದೆ ಕೋಪಿಸಲು ಈಶ್ವರಂ ತನ್ನ ಮುಂಗಾಲ ಮೊಗಿಲಂ ತೆಗೆದು ಒಂದು ವಿಗ್ರಹಮಂ ಮಾಡಿ ಜೀವಂಬಡೆದಾತನಂ ಲವಣಮಂ ಮಾಡೆಂದು ಒರ್ವ ರೂಪವತಿಯಾದ ಶೀಲಸಂಪನ್ನೆಯಪ್ಪ ಹೆಣ್ಣಂ ಮದುವೆಯಂ ಮಾಡಿ ಕಳುಹಿಸಿದೊಡಾತಂ ಉಪ್ಪು ಮಣ್ಣರ ಸಂಗ್ರಹಿಸಿ ಸಾರಮಂ ತೆಗೆದು ಕಾಯಿಸುತ್ತಿರಲಾತನ ಪೆಂಡತಿ ಶುಚಿಯಾಗಿ ಪಾಕಶುದ್ಧಿಯಂ ಮಾಡಿ ಕುಶಲದಿಂದನ್ನಪಾನಂಗಳಂ ಪೊತ್ತು ಬರೆ ಕೋಪಿಸಿ ಇಂತಪ್ಪಳೆನಗೆ ಆಗದೆಂದೊಡಗೊಂಡು ಪೋಗಿ ಶಿವಂಗೊಪ್ಪಿಸಿ ಕೃಷ್ಣಾಂಗಿಯಪ್ಪ ಕೊಳಕಿಯಂ ಬೇಡಿ ತಂದು ಲವಣಮಂ ಮಾಡಿ ಸರ್ವಲೋಕಂಗಳ್ಗೆ ಭೋಜನರಸ ಕೊಟ್ಟು ವಿಷ್ಣುವಿನ ಬೇಂಟೆಗೆ ತಾನೆ ಮುಖ್ಯನಾಗಿ ಆತನ ವಂಶದೊಳು ಹುಟ್ಟಿದ ಸಿದ್ಧನುಂ, ಚೆನ್ನಿಗ ಮಾರನೆಂಬೀರ್ವರು ಮಹಾಪ್ರತಾಪಿಗಳಾಗಿರ್ದ ಕಾಲದೊಳು ರಾಜ್ಯಕ್ಕೆ ಒಂದು ಮಹಾ ಪರಾಕ್ರಮಮುಳ್ಳ ಸಿಂಹಂ ಬಂದು ಬಾಧಿಸುತ್ತಿರೆ ಅದಂ ಪಿಡಿಯಲು ದೇವ ಮನುಷ್ಯಾದಿಗಳಿಗೆ ಅಶಕ್ಯಮಾಗಿರೆ ಚೆನ್ನಿಗಮಾರಂ ಮುನ್ನ ಭೂಮಿಯುಂ ಜಲಮುಂ ಅಗ್ನಿಯುಂ ಒಂದೊಂದರೊಳ್ವಾಗ್ವಾದಮಾಗಿ ನಾನು ಹೆಚ್ಚು ತಾನು ಹೆಚ್ಚೆಂದು ವಾದಿಸುತ್ತಮಿರೆ ಪಂಚಾಧಿಕಾರಿಗಳು ತೀರಿಸಲಾರದೆ ದೇವತೆಗಳಂ ತ್ರಿಮೂರ್ತಿಗಳಂ ಕೂಡಿ ತೀರಿಸಲಾರದೆ ಅರಣ್ಯದೊಳಿರ್ಪ ಮೃಗಪಕ್ಷಿಗಳಂ ಪೇಳೆ ತೀರದಿರ್ದೊಡೆ ಕುರ್ಕುರಮೆಂಬ ಶ್ವಾನಂ ಬಂದು ಮೂವರಂ ಕರೆದು ಕೇಳ್ವುದು. ಭೂಮಿಯು ತಾನೆ ಹೆಚ್ಚೆಂದು ನಿಲ್ವುದು ನೀನು ಹೆಚ್ಚಲ್ಲ ನಿನ್ನೊಳು ವಂಚನೆ ಉಂಟಪ್ಪುದರಿಂ ಒಂದೊಂದು ಮೇರೆ ಇರುವುದರಿಂ ಪೆಚ್ಚಲ್ಲಮೆಂಬುದು ನೀರು ಬಂದು ಕೇಳೆ ನಿನ್ನಲ್ಲಿ ವಂಚನೆ ಪ್ರಪಂಚು ಬಹಳಮಿಪ್ಪುದರಿಂ ಹೆಚ್ಚಲ್ಲವೆನೆ ನೀನೆನ್ನ ಕುಡಿವಲ್ಲಿ ನೆಕ್ಕುವುದಲ್ಲದೆ ಪೀರಲಾಗದೆಂದು ಶಾಪಮನಿತ್ತುದು. ಮತ್ತಂ ಬೆಂಕಿಯಂ ನೀನೆ ಜಗದೊಳುತ್ಕೃಷ್ಟ ನಿನ್ನಲ್ಲಿ ವಂಚನೆ

ಪ್ರಪಂಚಿಲ್ಲೆಂದು ಪೇಳ್ವುದು ಅಗ್ನಿಯು ನೀ ಎನ್ನ ಭಸ್ಮದೊಳೆ ಒರಗುವುದೆಂದು ಪೇಳೆ ನಾರಾಯಣನು ಈಶ್ವರನು ಮೆಚ್ಚಿ ತಮ್ಮ ಹೆಸರ ಮೊದಲಕ್ಷರಂಗಳಂ ಕೊಟ್ಟು ನಾಯಿ ಎಂದು ಪೆಸರಿಡೆ ಆ ನಾಯು ದೊಡ್ಡ ಮೃಗಮಂ ಸೇರಲೆಂದಾನೆಯಂ ಸೇರಿ ಹಗಲಿರ್ದು ರಾತ್ರಿಯೊಳು ಅಲ್ಲಿ ಮಲಗಲೆಂದು ಕೇಳ್ವುದು. ಎಚ್ಚರದಲ್ಲಿರ್ಪುದೆನ್ನಂ ಸಿಂಹಂ ಕೊಂಡುಪೋಪುದೆನೆ ಬೆಳಗಾಗೆ ಸಿಂಹನಂ ಸೇರಿ ಅದೇ ಪ್ರಕಾರ ಕೇಳ್ವುದು ತನಗೆ ಶರಭನ ಭಯಮುಂಟೆನೆ ಶರಭನಂ ಸೇರಿ ಕೇಳ್ವುದು ಭೇರುಂಡನ ಭಯಮುಂಟೆನೆ ಭೇರುಂಡನ ಸೇರಿದೊಡದು ರಾತ್ರಿಯೊಳು ಮರಸಿ ಬಂದು ಬೇಟೆಗಾರನೆನ್ನಂ ಕೊಲ್ವನದರಿಂದೆಚ್ಚರದಲ್ಲಿರ್ಪುದೆನೆ ಬೆಳಗಿನೊಳೆ ಬಂದು ಬೇಟೆಗಾರನಂ ಸೇರಿ ಆತಂ ಪೇಳ್ದಂತೆ ಕೇಳ್ದು ಪುರೋಗಮನಾಗಿ ನಿಂತಿತು. ಮತ್ತಮಾ ಬೇಂಟೆಗಾರಂ ನಾಯಂ ಕರೆದು ಸಿಂಗವೆಲ್ಲಿರ್ಪುದದಂ ತಿಳಿದು ಬಾ ಎಂದೊಡೆ ಪೋಗಿ ಸಪ್ತ ಸಮುದ್ರದ ಎಡತಿಟ್ಟಿನೊಳು ಇನಿದಾದ ಮಾವಿನಮರದಡಿಯೊಳಿರ್ಪುದಂ ಕಂಡು ಬಂದು ಚೆನ್ನನೊಡನೆ ಪೇಳ್ದೊಡೆ ಸಿದ್ಧಂ ಕೇಳಿ ಕಣ್ಣೆಗೆಣ್ಣೆಯ ಪಾವುಡೆಯಂ ಕಟ್ಟಿಕೊಂಡು ಮೇಣದೊಳೊಂದು ಪರಸುವಂ ಮಾಡಿದಟ್ಟಿ ಹಂಚಿಕಡ್ಡಿಯು ಕಾವಂ ಬಲ ಮಗ್ಗುಲೊಳಿಟ್ಟುಕೊಂಡು ಪೋಗುತ್ತಿರೆ ಒಂದು ಚಿಕ್ಕಟದ ಹೋರಿಯು ಸಮುದ್ರಮಂ ಲಂಘಿಸುತ್ತಿರೆ ಆನೆಗಬ್ಬಳಿ ಹಂಬಂ ಕೊಂಡದಕ್ಕೆ ಮೂಗರಾಣಿಯನ್ನಿಕ್ಕಿ ಮೇಲೇರಿ ಪೋಗಿ ಹನ್ನೆರಡು ಯೋಜನಮಪ್ಪ ಮಾಕಂದದ ವೃಕ್ಷದ ಬುಡಮಂ ಕೋಡರಿಯಿಂ ಪೊಯ್ಯೆ ಆ ಮರಂ ಬೀಳ್ವುದು ಸಿಂಗಂ ಸತ್ತಿರ್ದುದ ಕಂಡು ಆ ಮರದ ಶಾಖೆಯೊಳಿಟ್ಟು ಪರುಷದ ಕಾವಿಂದಲಪುರಕ್ಕೆ ತಂದು ಹೆಬ್ಬಾಗಿಲು ಪಿರಿಯಬಾಗಿಲು ಕಡೆಯದಿಪ್ಪುದು ಬಚ್ಚಲಗಿಂಡಿಯೊಳ್ಕೊಂಡುಪೋಗಿ ತನ್ನ ಹಟ್ಟಿಯ ಅಟ್ಟ ಮೊದಲಾಗಿ ಹಿಡಿಯದಿಪ್ಪುದು ಸೊಡರಗೂಡೊಳಿಟ್ಟು ಬಳಲುತಿರ್ದಂಗಾತನ ಪೆಂಡತಿ ಗುಳ್ಳಕಾಯ ಭಾಗದೊಳು ಏಳು ಖಂಡುಗ ಮಜ್ಜಿಗೆಯಂ ತುಂಬಿ ಕಿರಿಗೂಡೊಳಿರಿಸಿಪ್ಪುದುಮದಂ ಕುಡಿದು ಸಾಲದೆ ಸಂಕಟಂಗೊಂಡು ಮಜ್ಜಿಗೆಯನೆಲ್ಲಿ ತಂದೆ ಎಂದು ಕೇಳಲಾಗಿ ಕುರುಬಗೇರಿಯೊಳು ಕುರುಬರ ಮನೆಯೊಳು ತಂದೆನೆಂಬುದು ತಾನೆ ಅಲ್ಲಿಗೆ ಪೋಗುವುದು ಬಳಲಿ ಪುಟ್ಟುಗಲ್ಲಲ್ಲಿ ಪುಡಿಗಲ್ಲಲ್ಲಿ ಆಡಿನ ಹಿಕ್ಕೆಯನೆಡರಿ ಬಿದ್ದು ಸಾಯ್ವುದು ಶಿವಂ ಮೆಚ್ಚಿ ಕೈಲಾಸಕ್ಕೊಯ್ದನೆಂದು. ಮತ್ತಂ ಮಾರಿಸಾಲು ಬೀರರ ಸಾಲು ಮಹಿಮರ ಸಾಲುಗಳು ಪೇಳಿದೊಡೆ ಕೇಳ್ದು ಸಭಾಜನರೆಲ್ಲಂ ಇದು ಪುಸಿ ಎಂಬುದು ಚಿಕ್ಕದೇವರಾಜಂ ಪರಿಭವಿಸಲೆಂದಿರ್ಪಿನಮಾ ಉಪ್ಪಲಿಗನ ಗುರುವಪ್ಪ ಒಕ್ಕಳ ಕೀಳಕ್ಕಪ್ಪಯ್ಯನು ಕುಂಬಳಕಾಯಿ ಸಿಂಗಪ್ಪನಂ ಮಹತ್ತಂ ಪುಸಿಯೆನ್ನಲಾಗದು ಮೊದಲು ಮಹಾವಿಷ್ಣುವಿನ ಉದರದಿಂ ಲೋಕಮಂ ಪೊರಮಡಿಸಿದುದು ಧನಂಜಯನ ಶಸ್ತ್ರಾಸ್ತ್ರ ಪ್ರಪಂಚಂ ಸಂಭವ ಪರ್ವದ ಕಥೆಯಂ ಇತಿಹಾಸ ಮೊದಲಾದವರೊಳು ಪೇಳ್ವುದಂ ನಂಬುವಂತೆ ತಿಳುವುದೆಂದರು.

ಮತ್ತಂ ಕೆಲಸಿಕುಲದವಂ ಬಂದಿಂತೆಂದಂ ತಮ್ಮ ಪೂರ್ವಪುರುಷಂ ಶಿವನ ಕಂಕುಳ ಪೊದರಿನೊಳು ಪುಟ್ಟಿ ಕುಶಲಬುದ್ಧಿಯೊಳು ಹೆಚ್ಚೆನಿಸಿಪ್ಪುದು ಆಗಳು ಸ್ತ್ರೀ ಪುರುಷರೆಲ್ಲಂ

ಕರಡಿಯಂತೆ ಸರ್ವಾಂಗದೊಳು ರೋಮಂಗಳು ಪುಟ್ಟಿರ್ದುದರಿಂದುಬ್ಬೆಗವಾಗಿರೆ ಈಶ್ವರನಾತನಂ ಕರೆದು ಈ ರೋಮಂಗಳ್ ಪೋಪಂತೆ ಉಪಾಯಮಂ ಮಾಳ್ಪುದೆನೆ ಶಸ್ತ್ರಕರ್ತರಿಗಳಂ ನಿರ್ಮಿಸಿ ಕ್ಷೌರಮಂ ಮಾಳ್ಪಾಗಲು ಶಿಖಿಗಡ್ಡಮೀಸೆಗಳನುಳಿದು ಮುಖ ಕಂಠ ಬಾಹು ಉರ ಕುಕ್ಷಿ ಕಾಲ್ಗಳೆಂಬಿವುಗಳಂ ಕ್ಷೌರಂ ಮಾಳ್ಪಲ್ಲಿ ಕಕ್ಷ ಗುಹ್ಯಸ್ಥಾನಂಗಳಂ ಬಿಟ್ಟುದರಿಂ ಎಲ್ಲಾ ಬಳಿಯಲ್ಲು ರೋಮಂಗಳು ಶಿಥಿಲಮಾಗಿ ತಲೆ ಗಡ್ಡ ಮೊದಲಾದವರೊಳು ನಿಂತವು. ಅದರೊಳ್ ಸ್ತ್ರೀಜನಕ್ಕೆ ಛಾಯಾಕನ್ನೆಯು ಯಜ್ಞೇಶ್ವರನನುಗುಳ್ವಂದು ಗಡ್ಡ ಮಿಸೆಗಳುರಿದುಪೋದವು. ಅಂದಿಂದಿತ್ತ ಸ್ತ್ರೀಯರ್ಗೆ ಗಡ್ಡ ಮಿಸೆ ಚೌರಿಗಳು ಪೋಗಿ ನುಣ್ಣಗಾದವು. ಆಗಲು ಪುರುಷರ್ಗೆ ಶಿರ ಮೊದಲಾದವಂ ಕ್ಷೌರವಂ ಮಾಡಲೆಂದು ಶಿವಂ ನೇಮಿಸಿದಂ. ಆತನ ವಂಶಪರಂಪರೆಯೊಳೆ ಶೀಲವಂತೆ ಎಂಬ ರೂಪವತಿ ಪುಟ್ಟಿ ಶಿವಭಕ್ತರ್ಗೆ ಉಪಚಾರಮಂ ಮಾಡುತ್ತಿರೆ ಓರ್ವ ಜಂಗಮಂ ಶಿವಧ್ಯಾನದಿ ಬಂದು ಆಕೆಯಂ ಕಂಡು ಸೋಲ್ತು ದೈನ್ಯದಿಂ ಒಡಂಬಡಿಸಿದೊಡೆ ಭಿಕ್ಷಮನಿಡುವುದೆನಲಾಕೆ ನೀಡಿದೊಡಾ ಜಂಗಮಂ ಶಿವಾರ್ಪಣಮಸ್ತೆಂದು ಕೂಡಿದೊಡೆ ಶಿವನಾಕೆಗೆ ಅಷ್ಟೈಶ್ವರ್ಯಮನಿತ್ತು ಕೈಲಾಸಕ್ಕೆ ಕೊಂಡೊಯ್ದನಾ ನೆರೆಯವರೆಲ್ಲಂ ಪಡೆದಾಕೆಯು ಒಡೆಯರಂ ಪೋದಳೆಂದು ಪ್ರಸಿದ್ಧಿ ಮಾಡಿದರ್. ಆ ಕೆಲಸಿಗಳು ಅನೇಕ ಭೇದಮಾದರದರಿಂ ನಾವಿದನೆ ಹೆಚ್ಚೆಂದು ಪೇಳಿದಂ.

ಮತ್ತಂ ಅಗಸನಿಂತೆಂದಂ ಬ್ರಹ್ಮಾಂಡಂ ಬಲಿದು ತತ್ತಿಯಾಗಿ ಭೂಮಿಯು ಆಕಾಶಮುಂ ಎರಡು ಹೋಳಾಗಲದರೊಳೆ ಈರೇಳು ಲೋಕಮುತ್ಪತ್ತಿಯಾಯ್ತು. ಲೋಕದ ಜನಂಗಳ ಮಲಿನಮಾದ ವಸ್ತ್ರಾದಿಗಳಂ ತೊಳೆಯಲೋಸುಗ ಶಿವಂ ತನ್ನ ಮಗ್ಗುಲೊಳ್ ಮಡಿವಾಳನಂ ಪಡೆದು ನಿಯಮಿಸೆ ಶಿವನ ಕಂಥೆಯಂ ಅಂಬಿಕೆಯ ವಸ್ತ್ರಮಂ ಪೆರರ ಉಡಿಗೆಗಳಂ ಕಟ್ಟಿ ಪೊರಲಾರದೆ ಬಿದ್ದಿರ್ಪುದುಂ ಶಿವಂ ಮಾಣಿಕಶೆಟ್ಟಿಯಂ ಕರೆದು ಮಡಿವಾಳನೊಡನೆ ಪೊತ್ತು ಪೋಗೆಂಬುದು ನಾನು ಸನ್ನಿಧಾನಕ್ಕೆ ಯೋಗ್ಯ ಅಸಗಂಗಾಳಾಗಿಪ್ಪುದೆಂತೆಂದು ಕುದುರೆಯಾಕಾರದ ವಾಹನಮಂ ಕುಡಲ್ ಅದರೊಳ್ ಪೊರಿಸೆ ಪೊರಲಾರದೆ ಉಚ್ಚಸ್ವರದಿಂ ಕೂಗಲದಂ ಶಿವ ವಿರೂಪಂ ಮಾಡಿ ಕತ್ತೆಯೆಂದು ಪೆಸರಿಟ್ಟು ಕುಡೆ ಅದರೊಳ್ ಬಟ್ಟೆಯಂ ಪೊರಿಸಿಕೊಂಡು ಪೋಗಿ ಜಲಾಶಯದೊಳಿಳುಪಿ ಬಟ್ಟೆಗಳನೆತ್ತಿ ಒಗೆವಲ್ಲಿ ಆಕಾಶಂ ತಾಗುತ್ತಮಿರ್ಪುದು ಕೋಪಿಸಿ ಈ ಬಾನು ಆರ ಕೈಗೂ ಸಿಕ್ಕದಂತೆ ದೂರಕ್ಕೆ ಪೋಗಿಲಿ ಎಂದು ಶಾಪಮನಿಕ್ಕಿದೊಡಾಗಳೆ ಸೂಕ್ಷ್ಮರೂಪಾಗಿ ಬಹುದೂರಕ್ಕೆ ಪೋಯಿತು. ಕತ್ತೆಯನಟ್ಟಿತರಲು ಕಲ್ಲಿಲ್ಲದೆ ಕಲ್ಲೆಲ್ಲಂ ಬೆಲ್ಲಮಾಗಿರೆ ಬೆಲ್ಲಂಗಳೆಲ್ಲಂ ಕಲ್ಲಾಗಲಿ ಎಂದು ಶಪಿಸೆ ಅಕ್ಷಣಮೆ ಕಲ್ಗಳಾದವು. ಶಿವಂ ಪರೀಕ್ಷಿಸಲೆಂದು ತನ್ನ ಕಂತೆಯೊಳು ಕೂರೆಮರಿ ಸೀರ್ಗಳು ನೀವಡೀಕೃತಮಾಗೆ ನಿರ್ಮಿಸಿ ಈ ಪ್ರಾಣಿಗಳು ಒಂದೂ ಸಾಯದಂತೆ ಧಾವಲ್ಯಮಾಗಿ ಘಟ್ಟನೆಯಂ ಮಾಡಿತಪ್ಪುದೆನೆ ಕೊಂಡುಪೋಗಿ ತನ್ನ ಪೆಂಡತಿಯ ಬೆನ್ನ ಮಚ್ಚದ ಚರ್ಮಮನೆತ್ತಿ ಅವಂ ಪತ್ತಿಸೆ ಬಟ್ಟೆಯನುಬ್ಬೆಯೊಳ್ ಸಂಸ್ಕರಿಸಿ ಘಟ್ಟಿಸಿ ಆ ಪ್ರಾಣಿಗಳನೊಂದುಳಿಯದಂತೆ ಬಟ್ಟೆಗೆ ಪತ್ತಿಸಿ ತಂದೀಯಲಾ ದಂಪತಿಗಳಂ ಕೈಲಾಸಕ್ಕೊಯ್ದನ್. ಆ ವಂಶದೊಳ್ ಅನೇಕರ್ ಅತಿಕ್ರಾಂತರಾಗೆ

ಬಸವಣ್ಣನ ದಿನದೊಳೆ ಮಡಿವಾಳ ಮಾಚನು ಶರಣನಾಗಿ ದೇವತರ್ಕಾಗಮವಂ ಬಲ್ಲಂಥ ಬ್ರಾಹ್ಮರೊಳೆ ವಾದಂಗೆಯ್ದು ಎಲ್ಲಾ ಮತಂಗಳಂ ಗೆಲ್ದನದರಿಂ ಮಡಿವಾಳಜಾತಿಯೇ ಲೋಕಪಾವನಮೆಂದಂ.

ವಡ್ಡಂ ಬಂದು ತನ್ನ ಕುಲವೇ ಪೆಚ್ಚೆಂದೊಡೆ ಪೂರ್ವ ಲೋಕಸೃಷ್ಟಿಯೊಳೆಲ್ಲಮಂ ಸೃಷ್ಟಿಸಿ ಕುಡ್ಡೆಯಂ ಮಾಡಲದಂ ವಿಂಗಡಿಸಲಾರುಂ ಸಮರ್ಥರಿಲ್ಲದೆ ಸಂಕರಮಾಗಿರೆ ತ್ರಿಮೂರ್ತಿಗಳ್ ಯೋಚಿಸಿ ಕಾಣದಿಪ್ಪುದು ಮಹಾವಿಷ್ಣು ಒರ್ವ ಸಮರ್ಥ ಪುರುಷನಂ ಪಡೆದುಮಿರ್ಪಿನಂ ಆತನಂ ಕರೆದು ಈ ಸೃಷ್ಟಿಯಂ ವಿಂಗಡಿಸಿ ವಡ್ಡೆಂಬುದುಮಾತಂ ಕೇಳದಿರ್ಪುದುಂ. ವಿಷ್ಣುವಿನಲ್ಲಿಗೆ ಬ್ರಹ್ಮಂ ಬಂದು ಈತಂ ವಡ್ಡನೆಂ ಪೇಳೆ ವಿಷ್ಣುವಿನಾದೇಶದಿಂದಾ ವಡ್ಡಂ ತನ್ನ ಸರ್ವಶಕ್ತಿಯಿಂ ಆ ಸೃಷ್ಟಿಯ ವಿಂಗಡಿಸಿ ಪಾತಾಳದಿಂ ತೊಡಗಿ ಕೆಳಗೇಳುಂ ಮೇಲೇಳುಂ ಲೋಕ ಭುವರ್ಲೋಕ ಮೊದಲಾದುವುಂ ಪದಿನಾಲ್ಕು ಲೋಕಂಗಳಂ ನೋಡಿ ಮಹಾಮೇರು ಮೊದಲಾದ ಪರ್ವತಂಗಳಂ ಸಪ್ತದ್ವೀಪ ಸಪ್ತ ಸಮುದ್ರಂಗಳಂ ಕಾನನಂಗಳನಲ್ಲಲ್ಲಿ ಒಡ್ಡಿ ನಿಲಿಸುವಲ್ಲಿ ಬ್ರಹ್ಮಂ ತನ್ನ ಸತ್ಯಲೊಕಮನೆಲ್ಲರಿಂ ಮೇಲೆ ಶಿಖರಮಾಗಿ ಒಡ್ಡುವುದೆಂದಂ. ವಿಷ್ಣು ವೈಕುಂಠಮನೊಡ್ಡೆಂದಂ ಈಶ್ವರಂ ಕೆಲಾಸಮನೊಡ್ಡೆಂದಂ. ಇಂತು ಮೂವರು ಪೇಳೆ ಪೆಚ್ಚು ಕುಂದಪ್ಪುದೆಂದು ಒಡ್ಡದಿರಲು ಮೂವರು ವಡ್ಡನೆಂದು ಕೋಪಿಸಿ ನೀನೀ ಮೇರೆಯೊಳೆ ಕಲ್ಲು ಮಣ್ಣೊಡ್ಡಿ ಜೀವಿಸೆಂದು ಶಾಪಮನಿತ್ತರು. ಅದರಿಂದೊಡ್ಡನೇ ಶ್ರೇಷ್ಠನೆಂದು ಪೇಳ್ದಂ.

ದೊಂಬಂ ಬಂದಿಂತೆಂದಂ ಮುನ್ನ ಒಕ್ಕಲಿಗನ ದಾಯಿಗನೊರ್ವಂ ದರಿದ್ರನಾಗಿ ಪೆಣ್ಣುಮಕ್ಕಳ್ವೆರಸು ದಾಯಿಗನೊಳ್ಗೆಂಟುಗೊಂಡು ಕಾಡಿದೊಡಾತಂ ಮನೆಯಿಂ ಪೊರಮಡಿಸೆ ಬಹಿಪುಃರದೊಳ್ ನಿಂದು ಉಣಲುಡಲುಮಿಲ್ಲದೆ ನೀಚಾಹಾರಂ ಮಾಡುತ್ತಾ ವೃಕ್ಷಮೂಲದೊಳ್ ಪಡುತ್ತಮಿರ್ದು ಡಂಬಕವೇಷನಾಗಿ ಭಿಕ್ಷೆಯಂ ಮಾಡಲು ಪೋಗೆ ದಾಯಿಗಂ ಊರಂ ಪುಗಲೀಸದೆ ಅಟ್ಟುವುದು. ಊರ ಮುಂದಣ್ಗೆ ಬಂದು ದುಃಖಿಸುತ್ತಿರೆ ಶಿವಂ ಪೋಗುತ್ತಂ ಕಂಡು ಅವನ ಮಗಳಪ್ಪ ಚೆನ್ನೆಯ ರೂಪಿಂಗೆ ಸೋಲ್ತು ಸಮೀಪಕ್ಕೆ ಬಂದು ಅಲ್ಲಿ ಗುರುಗಳನೊಡ್ಡಿ ಆಕೆಯೊಳ್ ಕೂಡಲ್ ಅವಳ್ಗೆ ಮಕ್ಕಳು ಪುಟ್ಟಿ ಅವರ್ಗೆ ಲಾಗು ಲಂಘನ ಗಣೆಯೇರುವ ಮೊದಲಾದ ವಿದ್ಯೆಗಳೆಲ್ಲಮಂ ಕಲಿಸಿ ನೀನು ದಾಯಿಗದಿಂ ಜೀವಿಸೆಂದು ನೇಮಿಸಿ ಪೋಗೆ ಆ ವಂಶದೊಳು ಅನೇಕ ದೊಂಬರು ಪುಟ್ಟಿ ವಿದ್ಯೆಗಳಂ ತೋರಿಸಿ ಮಾನ್ಯಂಬಟ್ಟಿರ್ಪಿನ ಮತ್ತೊಂದು ಪಟ್ಟಣ ದೂರ ಮುಂದಣ ಬಯಲೊಳ್ಗುರಳನಿಕ್ಕಿರ್ಪುದು ಆ ಪಟ್ಟಣದ ರಾಜಗುರುವಪ್ಪ ಜಂಗಮಂ ಬಂದು ದೊಂಬರ ಚೆನ್ನಿಯಂ ನೋಡಿ ಆಸಕ್ತನಾಗಿ ಬೇಡುವುದು. ನೀನೀ ವೇಷಮಂ ಬಿಟ್ಟು ದೊಂಬನಾಗಿ ಕತ್ತೆಯಂ ಕಾಯ್ದುಕೊಂಡಿಪ್ಪುದೆನೆ ಚೆನ್ನಿ ಪೇಳ್ದಂತೆ ಕಾಯ್ದುಕೊಂಡಲ್ಲೆಯಿರಲು ರಾಜನು ತನ್ನ ಗುರುವನರಸಿ ಕಾಣದೆ ಡೊಂಬರ ಗುರುಗಳ ಸಮೀಪದೊಳು ಬಿದ್ದಿರ್ದ ಕಾವಿವಸ್ತ್ರ ಲಿಂಗರುದ್ರಾಕ್ಷಿಗಳಂ ಕಂಡು ಅರಸಂ ತಾನೆ ಬಂದು ಗುರುಭಕ್ತಿಪೂರ್ವಕಂ ವಂದಿಸಿ ಪರಕೆಯಂ ಬೇಡುವುದು. ಆತನೆಂದನೆನಗೆ ಸಾಮರ್ಥ್ಯಮಿಲ್ಲ ಚೆನ್ನಿಯಂ ಕೇಳೆನೆ ಪೋಗಿ ಚೆನ್ನಿಗೆ ಸಾಷ್ಟಾಂಗಪ್ರಣತನಾಗೆ ಆ ಗುರುಭಕ್ತಿಗೆ

ಶಿವಂ ಮೆಚ್ಚಿ ಅನಿಬರಂ ಕೈಲಾಸಕ್ಕೊಯ್ದನದರಿಂ ಡೊಂಬಕುಲವೆ ದೊಡ್ಡದೆಂದಂ.

ಪೊಲೆಯಂ ಉಮೆಯ ಮೊಲೆಯೊಳು ಕಡೆಯೊಳ್ ಪುಟ್ಟಿ ಕುಲದೊಳಗ್ಗಳನಾಗಿ ಶಿವನ ಬಲದ ಭುಜವಾಗಿಯು ನಿಜಾನ್ವಯದೊಳೆ ಋಷಿಗಳ್ಗೆ ಸ್ತುತ್ಯನೆನಿಸಿ ಆತನ ದುಹಿತೃಸಂತಾನದೊಳೆ ಋಷಿಗಳು ಅನೇಕವಾಗಿ ಹುಟ್ಟಿ ಬಸವಣ್ಣನ ಸೃಷ್ಟಿಯೊಳು ಹೊನ್ನನೆಂಬೊನತಿಶ್ರೇಷ್ಠನಾದುದರಿಂ ಬಣ್ಣದೊಳ್ ಪೊಲೆಯನೆ ದೊಡ್ಡವನೆಂದಂ.

ಮಾದಿಗಂ ಭೂಮಿಗೆ ಏಳುದಿನಕ್ಕೆ ಪಿರಿಯನಾಗಿ ಪುಟ್ಟಿದುದರಿಂ ತಾನುಂಡ ಎಂಜಲನೆಲ್ಲರ್ಗಂ ಯೋಗ್ಯಂ ಮಾಡೆ ವಶಿಷ್ಟಋಷಿಗೆ ಅರುಂಧತಿಯಂ ಕೊಟ್ಟನದಲ್ಲದೆ ಅಜಮಿಳನ ಸಂತತಿ ಕೋಮಟಿಗನಾಗಿ ದಾಯಿಗನಾಗಿ ಗಂಗಾಧರಂಗೆ ಗಜಚರ್ಮ ಪಾದುಕಮಂ ಕೊಟ್ಟುದರಿಂ ಮಾತಂಗನೆಂಬ ಪೆಸರಾಯ್ತು. ಅದಲ್ಲದೆ ಭಾಗವತದೊಳೆ ಮಾದಿಗವೇಷ ಪುರಾಣದೊಳ್ ಸವಿಸ್ತರಂ ಪೇಳ್ವುದರಿಂ ತಾನೆ ಪೆಚ್ಚೆಂದು ಪೇಳಿದಂ.

ಇಂತು ಅನೇಕ ಕುಲ ಜಾತಿ ರೂಪು ಬಲೈಶ್ವರ್ಯ ದೇವ ಗುರು ಮೊದಲಾದವರೊಳು ಅತ್ಯಂತ ಮೋಹಮಾಗಿ ಕುಮತಿ ಕುಶ್ರುತಿಜ್ಞಾನಂ ಪುಟ್ಟಿ ತನ್ನ ದೇಶ ಕುಲ ಮೊದಲಾದವು ಶ್ರೇಷ್ಠವೆಂಬ ನಂಬುಗೆಯಿಂದನೇಕ ದೃಷ್ಟಂಗಳಂ ತೋರಿ ಶಾಸ್ತ್ರಮಂ ಕಲ್ಪಿಸಿರ್ಪರ್ ಅದರಿಂದುಪಾದೇಯಮೆಂಬರಲ್ಲದೆ ಹೇಯಮೆಂದು ಬಿಡುವುರಲ್ಲಮದರಿಂದದ್ಭುತಂಗಳಂ ಪೇಳಿ ಜನರಂ ಮೆಚ್ಚಿಸುವರೆಂದು ತೋಟದ ದೇವರಾಜರಸಂ ವಿದ್ವಾಂಸರೋ ಪ್ರಸಂಗಿಸೆ ಕೆಲಂಬರೆಂದರ್. ತಮ್ಮ ಬಡತನಕ್ಕೋಸ್ಕರ ಧನಿಕರೊಳಿಲ್ಲದದ್ಭುತಂಗಳಂ ಪೇಳಿ ಲಾಭಮಂ ಪಡೆವರೆಂಬುದು ಪುಣ್ಯವಿಲ್ಲದಂಗೇನಾದರಲಭ್ಯಮಿಲ್ಲೆಂದಿಂತೆಂದಂ.

ಒಬ್ಬ ಬ್ರಾಹ್ಮಣನತಿದರಿದ್ರನಾಗಿ ಒಂದು ದೇವತೆಯಂ ಪ್ರಾರ್ಥಿಸಲಾತನ ಪುಣ್ಯಮಂ ನೋಡಲೆಂದು ಒಂದು ಕುಂಬಳಕಾಯೊಳ್ ಹಣಮಂ ತುಂಬಿ ಈ ಕಾಯಂ ಕೊಂಡು ಪೋಗಿ ನಿನ್ನ ಮನೆಯೊಳುಂಬುದೆನೆ ಆ ಕಾಯಂ ಕೊಂಡು ಬರುತ್ತ ಅಂಗಡಿಯಂ ಕಂಡು ಕಾಯನೆರಡು ಕಾಸಿಂಗೆ ಮಾರಿ ಹುರುಳಿಯಂ ಕೊಂಡು ಕುರುಕುತ್ತಂ ಮನೆಗೆ ಬರಲ್ ಮತ್ತೊಂದು ದಿನಂ ಬ್ರಾಹ್ಮಣಂ ಪೋಪಮಾರ್ಗದೊಳೆ ಒಂದು ಕೊಪ್ಪರಿಕೆ ದ್ರವ್ಯವನ್ನಿಡಲಾತನಾ ಪ್ರದೇಶದೊಳೆ ಕುರುಡರು ಮಾರ್ಗದೊಳೆಂತು ನಡೆವರೆಂದು ಕಣ್ಣಿಗೆ ಪಾವಡೆಯಂ ಕಟ್ಟಿ ಪೋಗಿ ದ್ರವ್ಯಮಂ ಕಳಿದು ಪೋದಂ.

ಒಬ್ಬ ಶೈವ ಗೌಂಡನ ಪೆಂಡತಿ ಓದು ಕೇಳುತಿರ್ಪಾಗಳ್ ವೃದ್ಧಿಪ್ರಾಪ್ತ ಋಷಿಗಳ್ಗೆ ಮೆಣಸಿನಕಾಯ ಮುದ್ದೆಯಂ ಕೊಟ್ಟು ಪಂಚಾಶ್ಚರ್ಯಮಂ ಪಡೆದಳೆಂದು ಕೇಳಿ ತನ್ನ ಗುರುವಪ್ಪ ಜಂಗಮಂಗೆ ಮೆಣಸಿನಕಾಯನರೆದು ಬಲಾತ್ಕಾರದಿಂ ಕೊಟ್ಟು ಪರಸಿಮೆನೆ ಒಡಲೊಳ್ ಉರಿ ಹತ್ತಿ ಕ್ಲೇಶದಿಂದೆನ್ನ ಪೊಟ್ಟೆ ಉರಿದಂತೆ ನಿನ್ನ ಮನೆಯು ಉರಿಯಲೆಂದು ಬಾವಿಯ ನೀರೊಳ್ ನಿಂದು ದುಃಖಂಬಟ್ಟು ಪೋದಂ.

ಒಬ್ಬ ವರ್ತಕನಂ ಕಾಂಚಿದೇಶಮನೆಯ್ದಿ ರತ್ನ ವ್ಯಾಪಾರದಿಂ ಅನೇಕ ಲಾಭಂಗೊಂಡು ಬಪ್ಪನಂ ಪಾಶಾಕಳ್ಳರು ಕಂಡು ವ್ಯಾಪಾರಿಗರೆಂದಾತನೊಡನೆ ಬರುತ್ತ ಮಾರ್ಗದೊಳು

ಶಕ್ಯಮಿಲ್ಲದೆ ಆತಂ ತನ್ನ ಹಟ್ಟಿಯಂ ಪುಗುವಲ್ಲಿ ಕಂಠಕ್ಕೆ ಪಾಶಮನಿಕ್ಕಿ ಚೀಲದೊಳಿಟ್ಟು ಅಲ್ಲಿಯೇ ತಳುಗೆ ಆತನ ಪೆಂಡತಿ ತನ್ನ ಗಂಡನ ಧ್ವನಿಯಂ ಪೊರಗೆ ಕೇಳ್ದುದರಿಂ ಚಿಂತಿಸಿ ಪುರಜನರಿಂದವರಂ ಶೋಧಿಸಲು ಚೀಲದೊಳು ಜೀವವೆರಸಿರ್ದ ಶೆಟ್ಟಿಯಂ ಕಂಠಪಾಶಮಂ ತೊಲಗಿಸಿ ಕಳ್ಳರ್ಗೆ ಆಜ್ಞೆಯಂ ಮಾಡಿದರ್.

ಒಬ್ಬ ವೇಷಧಾರಿ ಮುರಾರಿರಾಯನಂ ಕಾಯಲತಾಂ ಸಡ್ಡೆಮಾಡದಿಪ್ಪುದುಂ ಮುರಾರಿರಾಯ ಸತ್ತನೆಂದು ಬೊಬ್ಬೆಯಂ ರಾಜ್ಯದೊಳ್ ಪುಟ್ಟಿಸಲವನಂ ಕರೆಯಿಸಿ ಮರ್ಯಾದೆಯಂ ಮಾಡಿ ಅಂತಃಪುರಮಂ ಪುಗಲಪ್ಪಣೆಗುಡೆ ಮುರಾರಿರಾಯನ ವೇಷಮಂ ಧರಿಸಿ ಅಂತಃಪುರಮಂ ಪುಗೆ ಆತನರಸಿಯು ತನ್ನ ಗಂಡನೆಂದುಪಚರಿಸಿ ಮಂಚಮನೆಯ್ದಿಸಿ ವೀಳ್ಯವನಿಟ್ಟು ಎಲೆಯಂ ಮಡಿಸಿ ಕೊಡಲ್ ಬರಲೆದ್ದು ನಾನು ನಿನ್ನ ಮಗನೆಂದು ಪಾದಕ್ಕೆರಗಿ ಬರೆ ರಾಯಂ ಹೇರಳದ್ರವ್ಯಮಂ ಕೊಟ್ಟು ಕಳುಪಿದಂ.

ಹೂಲಿಕುಂಟೆ ತಮ್ಮಣ್ಣಗೌಂಡನೆಂಬಂ ಪುಲಿರೂಪಿನ ವಿದ್ಯಮಂ ಕಲ್ತು ಅರಣ್ಯದೊಳ್ ಚರಿಸುತ್ತಿರೆ ಪರಂಗಿಯು ಕಂಡು ಗುಂಡಿನಿಂ ಪೊಡೆದೊಡೆ ತೊಡೆಯನುಚ್ಚಿ ಪೋದುದರಿಂ ರಂಧ್ರೋರುವಾಗಿರ್ದು ತನ್ನ ಮಗಳ್ಗಾ ವಿದ್ಯಮಂ ಕಲಿಸಿರ್ಪನಮಾಕೆಯ ಗಂಡಂ ತನ್ನೂರಿಗೆ ಕರೆದುಕೊಂಡು ಬರುವ ಮಾರ್ಗದ ಗಿಡದೊಳೆ ನೀನು ಹುಲಿಯ ರೂಪಾಗುತ್ತಿದ್ದಿಯಷ್ಟೆ ನಾನು ನೋಡಬೇಕೆನೆ ಆತನ ಕೈಯೊಳು ಮೂರು ಕಲ್ಲಂ ಮಂತ್ರಿಸಿ ಕೊಟ್ಟು ನಾನು ಪುಲಿಯಾಗಿ ಬಂದು ಮೇಲ್ವಾಯ್ವಾಗಲೀ ಕಲ್ಲುಗಳಂ ಎನ್ನ ಮೇಲಿಟ್ಟೊಡಾ ರೂಪಳಿವುದೆಂದು ಪೇಳಿ ಪಳುವಿನ ಮರಗೆಯ್ದಿ ವ್ಯಾಘ್ರರೂಪಿನಿಂ ಬಂದು ಮೇಲ್ವಾಯ್ವುದುಂ ಹೆದರಿ ಕಲ್ಲುಗಳಂ ಬಿಸುಟು ಬೀಳ್ವುದುಂ ಆತನಂ ಬಗೆದು ತಿಂದು ಆ ಗಿಡದೊಳೆ ಇಪ್ಪುದುಂ. ಕೆಲವಾನು ದಿವಸದಿಂದಾಕೆಯ ತಂದೆ ತಿಳಿದು ಬಂದಾ ಪುಲಿಯಂ ಬರಿಸಿ ಆ ರೂಪಂ ವಿಸರ್ಜಿಸಿ ಗೃಹಕ್ಕೆಯ್ದೆಂಬುದು ಗಂಡನ ತಿಂದಪಕೀರ್ತಿಯಂ ಪೊತ್ತಿರಲಾರೆನೆಂದಾ ರೂಪಿನೊಳೆ ಕಾಲಂಗಂಡಳದರಿಂ ದುಷ್ಟ ವಿದ್ಯಮಂ ಕಲಿಯಲಾಗದೆಂದರು. ಆ ತಮ್ಮಣ್ಣಂ ಮಂತ್ರವಾದಿಯಾಗಿರ್ದು ಊರ ಮಾರ್ಗದ ದೇವಸ್ಥಾನದ ಹೊಸ್ತಿಲ ಮೇಲೆ ಮೂರು ದುಡ್ಡನ್ನು ಮಂತ್ರಿಸಿ ಮಡಗಿದಾನೆ, ಮಾರ್ಗಿಗರು ಅಂಗಡಿಗೊಯ್ದು ಒಪ್ಪತ್ತಿನ ಗ್ರಾಸಮಂ ಮಾಡಲಾ ದುಡ್ಡಲ್ಲೆಯಿದಾವೆ ಆತನಿಗೆ ಒಕ್ಕಲೊಂದಕ್ಕೆ ಒಂದು ಕೊಳಗ ಧಾನ್ಯಮಂ ಕೊಡುವರು, ತಪ್ಪಿದೊಡೆ ಬೆಂಡಿನಲ್ಲಿ ಪಕ್ಷಿಯ ಮಾಡಿ ಕಳ್ಳರಿಂ ತರಿಸುತ್ತಿರ್ದನಂತೆ ಒಬ್ಬ ಬ್ರಾಹ್ಮಣನು ತಾ ಕೊಳ್ಳುವಂಥಾ ವಸ್ತುವಂ ಭೋಗಿಸುವಲ್ಲಿ ಮೊದಲು ವಿಷ್ಣುವಿಂಗರ್ಪಿಸಿದಲ್ಲದೆ ಕೊಳಲಾಗದೆಂದು ವ್ರತಮಂ ಧರಿಸಿರ್ದು ಋತುಶಾಂತಿಯಲ್ಲಿ ಆ ಹೆಣ್ಣಿನ ನಾಣುಪ್ರದೇಶಮಂ ಚಿವುಟಿ ಅರ್ಪಿಸಿದೊಡಾಕೆ ಅತ್ಯಂತ ವೇದನೆಯಿಂ ದುಃಖಪಟ್ಟಳ್

ಮತ್ತೊಬ್ಬ ಬ್ರಾಹ್ಮಣ ರಾಮಾಯಣಮನೋದುತ್ತ ಎದೆ ಮೇಲೆ ಪುಸ್ತಕಮನಿಟ್ಟು ದಿನಂಪ್ರತಿ ನಿದ್ರೆಗೆಯ್ಯುತ್ತಿರ್ಪುದುಂ ಆತನ ಪೆಂಡತಿ ಮಗು ರಾತ್ರಿಯೊಳು ನಿದ್ರೆಗೆಯ್ಯದೆ ಚಂಡಿ ಮಾಡುತ್ತಮಿರೆ ಗಂಡನನೆಬ್ಬಿಸಿ ರಾಮಾಯಣದ ಪುಸ್ತಕವನ್ನು ಮಗುವಿನ ಎದೆ ಮೇಲೆ ಇರಿಸೆಂದು ಕಾಡಿದೊಡೆ ಆಗದೆಂಬುದು ನಿಮಗಾದರಾದೀತು ಮಗುವಿಗೆ ಆಗದೆ ಎಂದು ಆ ಪುಸ್ತಕಮಂ

ಮಗುವಿನೆದೆ ಮೇಲಿಟ್ಟು ಮೇಲೊಂದು ಶಿಲೆಯ[ನಿಡೆ] ಮಗು ಸತ್ತಿತು.

ಒಬ್ಬ ಬ್ರಾಹ್ಮಣಂ ನಾಯಕುನ್ನಿಯಂ ಕೊಂದೊಡೆ ಈತಂಗಾವುದು ಪ್ರಾಯಶ್ಚಿತ್ತಮೆನೆ ವಿದ್ವಾಂಸರೆಲ್ಲರು ಕೂಡಿ ಈತಂಗೆ ದೇವಸ್ಥಾನದ ಪಾರುಪತ್ಯಮಂ ಕೊಡಲೆಂಬುದು.

ವೃತ್ತ || ಪೌರೋಹಿತ್ಯಂ ರಜನಿಚರಿತಂ ಗ್ರಾಮಣಿತ್ವಂ ನಿಯೋಗಂ
ಮಾಠಾಪತ್ಯಂ ತ್ವನೃತವಚಸ್ಸಾಕ್ಷಿವಾದಂ ಪರಾನ್ನಮ್
ಧರ್ಮದ್ವೇಷೀ ಖಲಜನರತಿಂ ದುರ್ಮತಿಂ ಮಂದಬುದ್ಧಿಂ
ಮಾ ಭೂದೇವಂ ಮಮಜಗದಹಂ ಜನ್ಮಜನ್ಮಾಂತರೇಽಪಿ ||

ಎಂದು ಯಾತ್ರೆ ಪೋದನು. ಮತ್ತೊಬ್ಬ ಬ್ರಾಹ್ಮಣನ ಪೆಂಡತಿಯು ಸಿದ್ಧಿವಾಲನನಿಟ್ಟುಕೊಂಡಿದ್ದು ಮೂರು ತಿಂಗಳು ಗರ್ಭಮಾದಾಕೆಯಂ ಶುದ್ಧಮಂ ಮಾಡಿ ತೆಗೆದುಕೊಂಡು ಪೋಗುವಾಗ ನಿಷಿಧಿ ದುಗ್ಗಪ್ಪಯ್ಯನೆಂಬ ಪೆಸರಾಗೆ ಬ್ರಾಹ್ಮಣ ಶ್ರೇಷ್ಠನಾಗಿ ಐನೂರು ಜನ ಬ್ರಾಹ್ಮರಿಗೆ ಸಮಾರಾಧನೆ ಮಾಡಿಸುವಲ್ಲಿ ನಾಯಿಗಳು ಬಂದು ಎಲ್ಲಾ ಎಡೆಯಂ ಮೆಟ್ಟಿ ಪೋಗೆ ಬ್ರಾಹ್ಮರೆಲ್ಲರು ಯೋಚಿಸಿ ಅವರ ಹೆಜ್ಜೆ ತುಂಬಿ ಘೃತಮಂ ಬಿಡಿಸಿ ಭೋಜನಮಂ ಮಾಡಿದರ್.

ಮತ್ತೊಂದು ದಿನಂ ಪಾಯಸದ ಕೊಪರಿಕೆಯೊಳು ನಾಯಿ ಬಿದ್ದು ಸಾಯ್ದುದು ಕೇಳಿ ಕೊತ್ತಿ ಬಿದ್ದಿತೆಂದು ತೆಗೆವುದೆನೆ ಕೊತ್ತಿ ಬಿದ್ದರಾದೀತೆ ಎನೆ ಎಲಿ ಬಿದ್ದಿತ್ತೆಂದು ತೆಗೆವುದೆನೆ ಎಲಿಯಾದರಾದೀತೆ ಎನೆ ಪಲ್ಲಿ ಬಿದ್ದಿತ್ತೆಂದು ತೆಗೆವುದೆನೆ ಕಸಂ ಬಿದ್ದಿತ್ತೆಂದು ತೆಗೆದುಬಿಟ್ಟು ಭುಂಜಿಸಿದರ್.

ಅಪ್ಪಾಜಿದೀಕ್ಷಿತರ ಭಾರ್ಯೆ ಒಬ್ಬ ತುರುಕನನಿಟ್ಟುಕೊಂಡು ಮಗನಾಗಲಾತಂ ತುರುಕನೆಯಾಗಿ ಖಾನಖಾನನೆಂಬ ಪೆಸರಾಗೆ ಉತ್ತರ ದೇಶದೊಳು ಕೆಲವು ರಾಜ್ಯಮನಾಳಿ ಖಾನಖಾನಹಳಿಯೆಂಬ ಪುರಮಂ ಕಟ್ಟಿಸಿ ಬ್ರಾಹ್ಮರಿಗೆ ಆ ಗ್ರಾಮಮಂ ಕೊಟ್ಟು ಪ್ರಸಿದ್ಧಿವಡೆದಂ.

ತಿರಿಚಿನಾಪಳ್ಳಿಯಲ್ಲಿ ಸೋಮಯಾಜಿಗಳ ಹೆಂಡತಿಯ ಮೇಲೆ ಹಾದರದ ಮಾತಂ ಜನರಾಡುತ್ತಿರೆ ಸೋಮಯಾಜಿಗಳು ಅರಸಂ ಕೂರ್ಪುದರಿಂದ ಅರಸಂಗೆ ಪೇಳಿ ತನ್ನ ಪೆಂಡತಿಯ ಹಾದರದ ಮಾತನಾರು ಆಡದಂತೆ ಬಿಗಿ ಹತ್ತಿಸಿ ಕೊಡಬೇಕೆಂದು ಪುರದೊಳು ಡಂಗುರಮಂ ಪೊಯ್ಸಿ ರಾಜ್ಯದೊಳು ಆರು ಆಡದಂತೆ ಸಾರಿಸಿದಂ.

ಕೇರಳದೇಶದೊಳೊಬ್ಬ ಬ್ರಾಹ್ಮಣನ ಮಗಳು ರುತುವಾಗೆ ದೇವತಾಪ್ರೀತ್ಯರ್ಥಮಾಗಿ ಮೊದಲ ದಿವಸ ಯೋಗ್ಯ ಬ್ರಾಹ್ಮಣಂಗೆ ಸಮರ್ಪಿಸೆ ಕೊಡುವಲ್ಲಿ "ಅಹಂ ವಿಷ್ಣು ಭಾವಯಾಗಿ ತ್ವಂ ಸತ್ಯಭಾಮಾ ಭಾವದ ಭೂಮಿ" ಎಂದು ಕೂಡೆಂಬಾಗಲಾಕೆ ಗಂಡಂ ದೊಣ್ಣೆಯನ್ನೆತ್ತಿ "ಅಹಂ ಮೃತ್ಯುಭಾವ ಭೂಮಿ" ಎಂದು ಬಗ್ಗಿ ಪೊಡೆವಾಗಲಾತನ ರೇತಸ್ಸು ಕಣ್ಣಿಂ ಚುಚ್ಚಿ ದೃಷ್ಟಿ ಮಂದವಾಯಿತು.

ತಾತಾಚಾರ್ಯಂ ತನ್ನ ಗೃಹ ಛಿದ್ರಮಂ ದೊರೆಗರಿಕೆಯಂ ಮಾಡಿದೊಡೊಳ್ಳಿತೆನಲು ಕಾಯ್ದುಕೊಂಡಿರ್ದು ಮನೆಗೆ ಬರುವಲ್ಲಿ ಹಾಸ್ಯಗಾರನಂ ಕರೆದು ದೊರೆಗಳ ಸಮಯವರಿತು

ನಮ್ಮ ಮನೆ ವಿಚಾರಕ್ಕೇನೆಂದು ಅಪ್ಪಣೆಯಾದ ಪ್ರಕಾರ ಮಾಳ್ಪುದೆಂದು ಮನೆಗೆ ಬರೆ ಆ ದೊರೆಯು ಬರುವಲ್ಲಿ ಬಾಗಿಲ ಮೇಗಲ ಪೊಸ್ತಲು ಪೊಡೆದು ರಕ್ತಪ್ರವಾಹಮಾಗಿ ಕಣ್ಣೀರಿಂ ಸಂಕಟಪಡುವಲ್ಲಿ ಸ್ವಾಮಿ ತಾತಾಚಾರ್ಯನ ಮನೆ ವಿಚಾರ ಏನೆಂದು ಕೇಳುತ್ತಮಿರೆ ಕೋಪಿಸಿ ತಾತಾಚಾರ್ಯನ ಮನೆಗೆ ಬೆಂಕಿ ಹಾಕೆನಲಾಕ್ಷಣವೆ ಬಂದು ಆತನ ಮನೆಗೆ ಬೆಂಕಿ ಹಾಕಿ ಸುಟ್ಟುಬಿಟ್ಟನು.

ತಂಜಾವೂರು ಪ್ರತಾಪಸಿಂಗಂ ಬಾಲ್ಯದೊಳೆ ತಂದೆ ತೀರಿದೊಡೆ ದಕ್ಷರಿಲ್ಲದೆ ಒಬ್ಬ ಪಾರ್ವಂ ಅಧಿಕಾರಿಯಾಗಿ ಪಾಪಕ್ಕಂಜದೆ ಅರಮನೆಯವರಿಗೆಲ್ಲ ಆಹ್ವಾನಂಗಳಂ ಮಾಡಿ ಅಗ್ರಹಾರಮಾನ್ಯಂಗಳೆಲ್ಲಮಂ ಕಿತ್ತು ಸಂಬಳಗಳಂ ಕೊಡದೆ ಉಪದ್ರವಂ ಮಾಡುತ್ತಿರೆ ಒಂದೆರಡು ವರ್ಷಮಾ ಕುಮಾರಂ ತನಗೆ ಮದುವೆಯಿಲ್ಲಾ ತಾಯಿ ಒಬ್ಬಳಿದಾಳೆ ಪೋದೊಡೆನ್ನ ಜೀವಂ ಪೋಗಲಿ ಎಂದು ಅಧಿಕಾರಿಯಂ ಬರಿಸಿ ತನ್ನ ಶರೀರಕ್ಕೆ ಸ್ವಸ್ಥಮಿಲ್ಲೆಂದುಪಾಯಮಂ ಬಂದಧಿಕಾರಿಯೊಳು ಮಾತಿಂಗೆ ಮಾತಂ ತೆಗೆದು ಆತನ ಶಿರಚ್ಛೇದಮಂ ಮಾಡಿ ರಾಜ್ಯಮನಾಳಿದ. ಕೆಲವು ದಿವಸ ಆ ಬ್ರಾಹ್ಮಣನ ಮಗಂ ಒಂದು ಗಡಿ ಬದುಕು ಮಾಡಿಕೊಂಡು ಪ್ರಜೆಗಳ್ಗಂ ಬ್ರಾಹ್ಮಣರ್ಗಂ ಅತಿಉಪದ್ರಂ ಮಾಡುತ್ತಿರ್ದುಂ ಕೆಲವು ದಿವಸದಿಂ ರೋಗದಿಂ ನವೆದು ಅಂತ್ಯದೊಳು ಬ್ರಾಹ್ಮಣರೆಲ್ಲರಂ ಬರಿಸಿ ದೇಹಮುಳಿವುದಿಲ್ಲ ನಾನು ಮಾಡಿದ ಪಾಪಂ ಪೋಪಂತೆ ನಾನುಂ ಮಾಡಿ ಅಧೋಗತಿಯಾಗದಂತು ಮಾಳ್ಪುದೆನೆ ಅದರೊಳ್ ದುಷ್ಟಬ್ರಾಹ್ಮಣರುಂ ಊರ್ಧ್ವಗತಿಯಂ ಮಾಳ್ಪೆವೆಂದು ಭಗಿನಿಗೂಟಮಂ ತಂದು ಆತನ ಗುದದ್ವಾರಕ್ಕೆ ಪೆಟ್ಟಿ ಕೊಂದರ್.

ಆ ತಂಜಾವೂರ ದೊರೆಯು ಪರರಾಯರೊಳು ಕಾದಲೆಂದಾನೆಯನೇರಿ ಪೋಪಾಗಳ್ ಒಬ್ಬ ಸಿಪಾಯಿ ಅತ್ಯಂತ ಜವಮಪ್ಪ ಕುದುರೆಯಂ ಕುಂಭಸ್ಥಳಕ್ಕೇರಿಸಿ ಅರಸನಂ ಬಂತಿಯೊಳಿರಿದಾಗ ಸಮೀಪದೊಳಿರ್ದ ಮೈಭೋಗದ ಜೆಟ್ಟಿಯು ಕುದುರೆಯ ಕಾಲೆರಡಂ ಕತ್ತಿಯಿಂ ಕತ್ತರಿಸಿ ಕೆಡವಿದಂ. ಆತಂಗೆ ಸಪ್ತಾಂಗಮಂ ಕೊಟ್ಟಂ. ಒಬ್ಬ ಮಂತ್ರವಾದಿ ಮಂತ್ರಂಗಳಂ ಸಾಧಿಸಿ ಪಾವಿಂಗೆ ಒಂದು ಪಣಂ ನಾಯಿಗರ ಪಣಂ ಚೇಳಿಂಗೆ ಕಾಲಪಣಂ ಎಂದು ತೆಗೆದುಕೊಂಡು ವಿಷಮನಿಳಿಸುತ್ತಿರೆ ಒಬ್ಬ ಕೋಮಟಿಗಂ ಸರ್ಪದಷ್ಟಮಾಗೆ ಲೋಭದಿಂ ಚೇಳು ಕಡಿಯಿತ್ತೆಂದು ಪನ್ನೊಂದು ಖಂಡಿಗಮಂ ಬೆಳೆದ ಒಕ್ಕಲಿಗನಂತೆ ಹಾಗದ ಕಾಸಂ ಕೊಟ್ಟು ಮಂತ್ರಿಸಿಕೊಂಡು ಸಾಯೆ ಅವನ ಮನೆ ಆಧಾರಮೆರಡು ಸಾವಿರ ವರಹವು ಅರಮನೆಗಾಯ್ತು.

ಒಬ್ಬ ಬ್ರಾಹ್ಮಣಂ ಮಳಯಾಳದಿಂದಾ ಮಧುರೆಗೆ ಪೋಗಲಲ್ಲಿ ಬಿರುದಿನ ಜೆಟ್ಟಿಯ ಸರಪಣಿಯಂ ಮೆಟ್ಟಿದೊಡಾತಂ ದೊರೆಯಪ್ಪ ವೀರಪ್ಪನಾಯಕನಲ್ಲಿಗೆ ಕೊಂಡೊಯ್ದು ಈತಂಗು ನನಗು ಜೋಡಂ ಬರೆವುದೆನೆ ಪಾರ್ವನೆಂದಂ ನಾನಾಗಿ ಬಂದವನಲ್ಲಾ ಇವನಾಗಿ ಹೇಳಿದರೆ ಹಾಗೆ ಆಗಲಿ ಎಂದು ಬರೆಸಿಕೊಂಡು ಅರಸು ಕೊಟ್ಟ ರಾತೀಪನುಂಡು ಘಟ್ಟಿಯಾಗಿ ಮಹಾನವಮಿಯೊಳೊಂದು ಗೋಣಿ ಚೀಲಮನಾಂತು ನಿಂದೊಡಾ ಜಟ್ಟಿಯು ತನ್ನ ಸಾಧನೆಯಂ ತೋರುತ್ತ ಹಾರಿ ಮೇಲ್ವಾಯಲ್ ಗೋಣಿಚಿಲಮನೊಡ್ಡಿಯಾಂತು ಮೊಗಳಂ ಕಟ್ಟಿ

ಪೊತ್ತುಕೊಂಡು ಬಂದಿಳುಹಿ ಇನಾಮುಗೊಂಡೂರಿಗೆ ಬಂದಂ. ಮತ್ತೊಂದು ದೇವಿಗುಡಿಯೊಳು ಅನೇಕ ಒಡವೆ ವಸ್ತು ಕಾಣಿಕೆಗಳು ದೇವೀ ಭಯದಿಂ ಒಬ್ಬರು ಮುಟ್ಟದೆ ಕಂಡವರೆಲ್ಲ ಕಾಣಿಕೆಯೊಪ್ಪಿಸುತ್ತಿಪ್ಪುದು. ಈ ಬ್ರಾಹ್ಮಣಂ ಪೋಗಿ ನೋಡಿ ಸೈರಿಸದೆ ಜನರಿಲ್ಲದ ವೇಳೆಯೊಳು ತುಲಸಿದಳಮನಾ ದೇವಿಪ್ರತಿಮೆಯ ಹಸ್ತದೊಳಿಕ್ಕಿ ವಸ್ತುಗಳಂ ಮಟ್ಟಿಸಿ ಪೊರೆಗಟ್ಟಿ ಪೊತ್ತುಕೊಂಡು ಪೋದನೆಂಬೀ ವಿವಾದಿಯಾದ ಕಥೆಗಳಂ ಪೇಳ್ವ ತಾನು ಧರ್ಮಮಂ ಮಾಳ್ಪಲ್ಲಿ ಪರರಂ ನೋಯಿಸದೆ ಮಾಳ್ಪುದೆ ಧರ್ಮಂ ಪೆರರಂ ನೋಯಿಸಿ ಮಾಳ್ಪುದು ಅಧರ್ಮಂ.

ಶ್ಲೋಕ || ದುರ್ಜನಸ್ಯ ಕೃತಂ ಪುಣ್ಯಂ ಪರೋಪದ್ರವ ಕಾರಣಂ
ವ್ಯಾಘ್ರಸ್ಯ ಉಪವಾಸೇನ ಪಾರಣಂ ಪಶುಮಾರಣಂ ||

ಎನೆ ಇಲ್ಲದವಂ ಪರವಸ್ತುವಿಂದಾದರು ಮಾಳ್ಪುದೆಂಬುದು ಫಲವಿಲ್ಲೆಂದರು.... ಧಾರ್ಮಿಕನುಂ ಒಂದು ಬಾವಿ ತೆಗೆಯಿಸೆ ಸ್ವಾದೋದಕಮಾಗಿ ಸರ್ವರಂ ಕೊಳ್ಳುತ್ತಮಿರೆ ಆತಂಗೆ ನಾಲ್ವರ್ ಮಕ್ಕಳ್ಪುಟ್ಟಿ ಆ ಬಾವಿಯಂ ಪಂಚುಗೊಂಡು ಒಂದೊಂದು ಮೂಲೆಯೊಳು ಒಬ್ಬೊಬ್ಬ ಸೇದುತ್ತಮಿರೆ ಅದರೊಳೊಬ್ಬಂ ಸೈರಿಸದೆ ತನ್ನ ಮೂಲೆಯೊಳು ಅಶುಚಿಯಂ ಮಾಡಿದಂ

ನನೆವ ಮನೆ ಸಾಲದಟ್ಟುಳಿ
ನರಳುವ ಸೊಸೆ ಕಳ್ಳ ತೊತ್ತು ಕಾಡುವ ಹಯಿನುಂ
ಮರುಳು ಮಗ ಮರುಳ ಹೆಂಡತಿ
ದೊರೆಕೊಂಬುದು ಭಾಗ್ಯಲಕ್ಷ್ಮಿ ತೊಲಗಿದ ಬಳಿಕಂ

ಒಬ್ಬ ಬ್ರಾಹ್ಮಣಂ ಸತಿವೆರಸಿರ್ದು ನಿತ್ಯಯಾತ್ರೆಯಂ ಮಾಡಿತಂದ ಪಿಟ್ಟಿಂಗೆ ಮೂರು ಮಂಡಗೆಯಂ ಮಾಡಿ ಧರ್ಮಕ್ಕೊಂದಂ ಕೊಟ್ಟು ದಂಪತಿಗಳೊಂದೊಂದಂ ಭುಂಜಿಸುತ್ತಿಪ್ಪಿನ ಒಂದು ದಿನಂ ಓರ್ವ ಅತಿಥಿ ಬರಲವಂಗೆ ಒಂದು ಮಂಡಗೆ ಸಾಲದಿರೆ ತನಗೆಂದಿರ್ದುದಂ ಕೊಟ್ಟು ತೃಪ್ತಿಪಡಿಸಿದೊಡಾತಂ ತಳುಗಿದೊಡೆ ರಾತ್ರಿಯೊಳು ದಿನಂಪ್ರತಿ ವೃಷ್ಟಿಯಾಗೆ ಮನೆತುಂಬ ಜಲಪ್ರವಾಹ ಪೂರ್ಣಮಾಗುತ್ತಿರೆ ಪ್ರಯತ್ನದಿಂದ ನಾಲ್ಕಿಟ್ಟಿಗೆಯನ್ನು ಎರಡು ಮೊರಗಳಂ ಸಂಪಾದಿಸಿ ದಂಪತಿಗಳು ಎರಡಿಟ್ಟಿಗೆ ಮೇಲೆ ಪಾದಂಗಳನೂರೆ ಮಸ್ತಕದ ಮೇಲೆ ಮೊರಮಂ ಕೌಚಿಕ್ಕಿಕೊಂಡು ಬೆಳಗಂ ಕಳೆಯುತ್ತಮಿರ್ಪಿನಮಾ ದಿವಸಂ ಮಳೆಯೊಳು ಬ್ರಾಹ್ಮಣಂಗೆ ತನ್ನವೆರಡಿಟ್ಟಿಗೆಯಂ ಮೊರನಂ ಕೊಟ್ಟು ತಾನು ವೃಷ್ಟಿಯಿಂ ಜಲದೊಳೆ ಕಂಪಿಸುತ್ತಿಪ್ಪುದುಂ ಆತನ ಸತಿ ತನ್ನಿಟ್ಟಿಗೆಯಂ ತಂದಿಕ್ಕಿ ಮೊರನಂ ಪಿಡಿದೊಡೆ ಪೆಂಡತಿಗಾದವಸ್ಥೆಯಂ ನೋಡಿ ಚಿಂತಿಸಿ ಆರಿಟ್ಟಿಗೆಯು ಮೂರು ಮೊರನುಯಿಲ್ಲದವರ ಬಾಳೇತರ ಬಾಳೆಂದು ರಾತ್ರಿಯಂ ಕಳೆದರ್.

ಅದರಿಂ ಗೃಹೋಪಕರಣಗಳು ಮಿಗಿಲಾಗಿರಬೇಕೆಂದು ಪ್ರಸಂಗಿತ್ತಿರ್ದು ಅರಸಂ ಪೋಗೆ ರಾಮಶಾಸ್ತ್ರಿ ಎಂಬವಂ ಈ ಅರಸು ಆರೆಂದು ದೇವಚಂದ್ರಪಂಡಿತನಂ ಕೇಳೆ ಪಂಡಿತನೆಂದಂ

ಪೂರ್ವದೊಳು ಚಾಮುಂಡರಾಯಂ ತನ್ನ ವಂಶಜರನೀ ಸ್ಥಳದೊಳು ಇಟ್ಟುದರಿಂದವರು

ಪ್ರಬಲರಾಗೆ ನಾಮವನಿಕ್ಕದೆ ಕೆಲಕೆಲವು ನಾಡುಗಳನಾಳುತ್ತ ಹೊರಣಮತ್ತಿ ಹೊಸಕೋಟೆ ಹಳೆಯಬೀಡು ಬಿಳುಕೆರೆ ಮೊದಲಾದ ಸ್ಥಳಂಗಳಲ್ಲಿ ಅನೇಕ ಚೈತ್ಯಾಲಯಂಗಳಂ ಮಾಡಿಸಿ ಗೊಮಟಾಪುರವೆಂದು ನಿರ್ಮಿಸಿ ಬೆಟ್ಟದೊಳು ಗೊಮಟೇಶ್ವರ ಪ್ರತಿಷ್ಠೆಯಂ ಮಾಡಿಸಿ ದಾನ ಪೂಜೆ ಶೀಲೋಪವಾಸದಿಂದಿರುತ್ತ ಕೆಲವಾನುದಿವಸದಿಂ ಕಾಲದೋಷದೊಳೆ ನಷ್ಟವಾಗಿ ಹಳೇಬೀಡು ಬಿಳುಕೆರೆಯೊಳು ಎರಡು ಮೂರು ಒಕ್ಕಲುಳಿಯೆ ಕೊಟ್ಟು ತರುವುದಕ್ಕೆ ಇಲ್ಲದೆಯಿರ್ಪುದು ದಳವಾಯರು ನಾನಾ ಪ್ರಕಾರದಿಂದಾ ಅವರ ಮನೆ ಕರ್ಣಿಕೆಯಂ ತಂದು ಅವರೊಳ್ ಒಡಹುಟಿದ ಚೆಲುವಯ್ಯ ಅರಸನೆಂಬವಂಗೆ ಸತ್ಯಮಂಗಲದ ಗಡಿಯಂ ಕೊಟ್ಟು ಈ ತೋಟದ ದೇವರಾಜೇ ಅರಸನಂ ತಮ್ಮ ಮನೆಯೊಳು ಭೋಜನಾ ಮಾಡಿಸಲೆಂದು ಬಹಳವಾಗೆ ಪ್ರಾರ್ಥಿಸಿ ಗೃಹಶುದ್ಧಿಯಂ ಮಾಡಿಸಿ ಜೈನಬ್ರಾಹ್ಮರಿಂದಾ ಹೋಮ ದೇವತಾರ್ಚನೆಯಂ ಮಾಡಿಸಿ ಅವರ ಕಡೆಯಿಂ ಪಾಕಶುದ್ಧಿಯಿಂ ಭೋಜನ ಮಾಡಿಸ್ತರು. ಇವರು ಜೈನರಸುಗಳು ಸೋಮವಂಶಜರೆಂದು ಪೇಳಿದಂ

ಆ ಚಲುವಯ್ಯರಸು ಸತ್ಯಮಂಗಲದೊಳಿರ್ದ ಕೆಲವು ಜಿನಾಲಯಮಂ ಜೀರ್ಣೋದ್ಧಾರಮಂ ಮಾಡಿಸಿ ಗುರುಗಳ್ಗಂ ಬ್ರಾಹ್ಮಣರ್ಗಂ ಅನೇಕ ದಾನಂಗಳಂ ಕೊಟ್ಟು ಈ ಅರಸುಗಳಲ್ಲೆ ಕೊಳುಕೊಡೆಯಿಂ ಸುಖಮಿರ್ದರಿತ್ತ ದಳವಾಯಿ ಆಂಡಿಗಳುಪದೇಶದಿಂ ಪಟ್ಟಣದ ಮಧ್ಯದೊಳುನ್ನತಮಾಗಿರ್ದ ಜಿನಾಲಯಂಗಳ ಛಾಯಂ ಅರಮನೆ ಮೇಲೆ ಬೀಳ್ವುದೆಂದು ಎರಡು ದೇವಸ್ಥಾನದೊಳಿರ್ದ ಅನೇಕ ಬಿಂಬಂಗಳಂ ತೆಗೆಯಿಸಿ ಮತ್ತೊಂದು ಮನೆಯೊಳು ತುಂಬಿಸಿಬಿಟ್ಟು ದೇವಸ್ಥಾನಂಗಳಂ ಕೀಳಿಸಿ ಜೈನರಂ ಕರೆಯಿಸಿ ನಿಮ್ಮ ದೇವರಂ ಪೂಜಿಕೊಳ್ಳಿಮನೆ ಎಲ್ಲರು ಮೌನಂಗೊಂಡು ದೇವಸ್ಥಾನಂ ಪೋದುದಕ್ಕೆ ಚಿಂತಾಕ್ರಾಂತರಾಗಿ ತಮ್ಮ ತಮ್ಮ ಮನೆಗೆ ಪೋಗಿ ಮೂರು ನಾಲ್ಕು ಉಪವಾಸಂಗೆಯ್ದರ್. ಸೂರಿಪಂಡಿತಂ ಶಾಲ್ಯನ್ನಮಂ ವ್ರತಂ ಮಾಡಿದಂ. ಮತ್ತಂ ಕೆಲವು ದಿವಸಂ ಪೋಗೆ

ಅರುಹನ ಗೃಹಮಂ ತೆಗೆದೊಡೆ
ಸಿರಿ ಅಳಿದಾಯುಷ್ಯ ಕುಂದಿ ರುಜೆ ಪಿರಿದಾಗಿಯು
ನರಕದ ದುಃಖವು ಸಾಗರ
ಪರಿಯಂತಂ ಭುಂಜಿಸುತ ನವೆಯುತ್ತಿರ್ಪರ್

ಎಂಬುದಂ ಕೇಳಿ ಅಸಗಗೇರಿ ಬಳಿಯೊಳೆ ದೇವಸ್ಥಾನಮಂ ಮಾಡಿಸಿದರ್. ವಿರೋಧಿಕೃತು ಸಂವತ್ಸರದ ಪುಷ್ಯ ಬಹುಳ ಪಾಡ್ಯ ಆರಭ್ಯ ದೊಡ್ಡ ಕೃಷ್ಣರಾಜೊಡೆಯರಿಂದಿತ್ತಲು ಚಾಮರಾಜ ಕೃಷ್ಣರಾಜ ನಂಜರಾಜ ಬೆಟ್ಟದ ಚಾಮರಾಜರೆಂಬಿವರ ಪಟ್ಟದೊಳೆ ದಳವಾಯರೆ ಪ್ರಬಲವಾಗಿರೆ ಕೋಳಾಲದ ಪತ್ತೆಖಾನನ ಮಗಂ ಶಾಬಾಸಖಾನನಿಂ ಕಿರಿಯ ಹೈದರಾಖಾನನೆಂಬವಂ ಕುದುರೆಚಾಕರಿಯಲ್ಲಿರ್ದು ಅತಿಪ್ರಬಲನಾಗಿ ನೂರು ಕುದುರೆಗೆ ಜಮಾದಾರನಾಗಿರ್ದು ಗೋಲುಕೊಂಡೆ ನಿಜಾಮನ ಮಗಂ ನಾಸರಜಂಗಂ ಅವರ

ಕಾಡಮೇಲೆತ್ತಿಪೋಪಂದುಮಾವನೊಡನೆ ಕೆಲವು ಬಲಸಹಿತಂ ಅಂಬಾರಿಯನೇರಿ ಪೋಗುತ್ತಮಿರ್ದಲ್ಲಿ ನಾಸರಜಂಗಂ ಪಾಳ್ಯಗಾರ ಇಮಾಮುಖಾನನೊಳು ಮಾತು ಬರೆ ತನ್ನಂಬಾರಿಯಿಂದವನಂಬಾರಿಗೆ ನೆಗೆದು ಪೊಯ್ವುದು. ನಾಸರಜಂಗ ಪೊಯ್ಯೆ ಈರ್ವರು ಸಾಯ್ವುದು. ಬಲಮೆಲ್ಲಂ ಪಲಾಯನಮಾಗೆ ನಾಲ್ವತ್ತೆಂಟುಬಾರಿಯು ಯಥಾಯಥ ಮಾಗೆಯಾಸಮಯದೊಳೆ ಎರಡು ಒಂಟೆಯ ಮೇಗಣ ದ್ರವ್ಯಂ ಹೈದರಖಾನಂಗೆ ಸಿಕ್ಕಿದೊಡೆ ಅದಂ ಕೊಂಡು ಚನ್ನಪಟ್ಟಣದೊಳು ಮನೆಯಂ ಮಾಡಿರ್ದು ಶಕವರುಷ ೧೬೭೦ನೆ ಸರ್ವಧಾರಿ ಸಂವತ್ಸರದಾರಭ್ಯ ಹೈದರಖಾನ ರಾಜ್ಯಮೆಲ್ಲಮಂ ತಾನೆ ಆಕ್ರಮಿಸಿಕೊಂಡು ಕೆಲವು ಸಂಸ್ಥಾನಮಂ ಸಾಧಿಸಿಕೊಂಡು ತಿರಚನಾಪಳ್ಳಿಯೊಳ್ ಸಿಕ್ಕಿರ್ದ ಕತ್ತಿ ಗೋಪಾಲರಸನಂ ದಳವಾಯಿ ಸಹಾ ಕರೆದುಕೊಂಡು ಬಂದರಮನೆಯೊಳಂಕೆಯೊಳಿಟ್ಟು ರಾಜ್ಯಮನಾಳುತ್ತ ಅಧಿಕಾರಿಗಳ್ಗಂ ಪ್ರಜೆಗಳ್ಗಂ ಮುಗುವಳಿ ಮುಟ್ಟುಗೋಳು ಮುಂತಾದವಂ ಮಾಡಿ ಮಾಡಬಾರದ ಹಿಂಸೆಗಳಂ ಮಾನಪ್ರಾಣಾಪಹಾರಂಗಳಂ ಮಾಡುತ್ತ ಕುಳಮೆಂದುವಂಬರವ [0]ಬರ ಮೇಲೆತ್ತಿ ಸರ್ವಸ್ವಮಂ ಸುಲಿದು ಅಸುವಂಗಳಂ ತೆಗೆವರಾ ದಂಡಗೆಗಳೆಂತೆಂದೊಡೆ ಬಿಸಿಲೊಳ್ಕುಳ್ಳಿರಿಸುವುದುಂ ಒಂಟಿಗಾಲೊಳ್ ನಿಲಿಸುವುದುಂ ಅನೆಯಿಸಿ ಮೂಗಿನ ಮೇಲೆ ಸಣ್ಣ ಕಲ್ಲನಿಟ್ಟು ನಿಲಿಸುವುದುಂ ಕತ್ತಿಗು ಕಾಲಿಗು ನೇಣನಿಕ್ಕುವುದುಂ ಪಂಜರದೊಳ್ಕೂಡುವುದುಂ ಸೊಳ್ಳೆಮನೆಯೊಳು ಕೂಡುವುದು ಚಾಪನೇರಿಸುವುದುಂ ಕಿವಿ ಮೂಗು ಹಸ್ತ ಪಾದಂಗಳಂ ಕುಯ್ವುದುಂ ಕೈಕಾಲಿಗೆ ಹಗರನಿಕ್ಕಿ ತುಳಿವುದುಂ ಸ್ತ್ರೀಯರ ಎದೆಗೆ ಹಗರನಿಕ್ಕಿ ಕೊಯ್ವುದುಂ ಮರದೊಳ್ ಕಟ್ಟಿ ನೇರುವುದುಂ ಕಟ್ಟಿ ಪೊಡೆವುದುಂ ಗುಂಗರಕಾಲಂ ಕಟ್ಟಿ ಉರುಳಿಸುವುದುಂ ಕಾಸಿದ ಕುಡುವಿಂ ಮೈಯೆಲ್ಲವಂ ಬರೆವುದುಂ ಬಾಯಿ ಗುದದ್ವಾರ ಯೋನಿಗಳೊಳು ಹಾರೆಯಂ ಕಾಸಿಕ್ಕಿಸುವುದುಂ ಆನೆಕಾಲಿಗೆ ಕಟ್ಟಿಸುವುದುಂ ಶೂಲದ ಕುದುರೆಯೊಳು ಕುಳ್ಳಿರಿಸುವುದುಂ ಗುಡ್ಡದ ಮೇಲೆ ನಿಲಿಸಿ ಪೊಡೆವುದುಂ ದಬ್ಬಳದಿಂ ಮೈಯೆಲ್ಲಮಂ ಚುಚ್ಚಿ ಇರುವೆಯ ಗೂಡೊಳಿಡುವುದುಂ ಕಣ್ಣಿಗೆ ಸೂಜಿಯಂ ಬಲಿವುಧುಂ ಕತ್ತಿಯಿಂ ಪೊಯ್ವುದುಂ ಗುಂಡಿನೊಳಿಡುವುದುಂ ಗುಳಿ ತೋಡಿ ಮುಚ್ಚುವುದುಂ ಬಾಚಿಯಿಂ ಕೆತ್ತುವುದುಂ ಬಚ್ಚಲೊಳ್ ಮುಳುಗಿಸುವುದುಂ ಎಂಬಿವಾದಿಯಾದ ಅನೇಕ ವಿಚಿತ್ರಮಪ್ಪ ಕೊಲೆಗಳಂ ನಿಷ್ಕರುಣೆಗಳಾಗಿ ಪ್ರತ್ಯಕ್ಷನರಕದಂಡನೆಗಳು ಇಲ್ಲಿಯೆ ಕಾಣ್ಬಂತೆ ತಮಗೆ ಬಂದ ನೋವಿಂತೆಂದರಿಯದೆ ಪಾಪಕ್ಕೆ ಭೀತರಾಗದೆ ಮನುಷ್ಯರಂ ಕೊಲ್ಲುತ್ತ ಪೆಣ್ಗಳಂ ಪಿಡಿದು ತರಿಸುತ್ತ ಸೀಮೆಯೊಳು ವಿಂಗಡಮಣೆಯಗಳಂ ಮಾಡಿ ಬಾಲದೆರಿಗೆ ಅಂಕದೆರಿಗೆ ಮೊದಲಾದವಂ ಕಲ್ಪಿಸಿ ಆಧಾರಮಾಗಿರ್ದ ಕುಳಗಳಂ ಮುಳ್ಳುಗಳಂ ತೆಗೆದು ಬಾಧಿಸುತ್ತ ಹೈದರನಬಾಬನೆಂಬನ್ನರ್ಥದಿಂ ವಿಕಾರಿ ಸಂವತ್ಸರದ ಫಾಲ್ಗುಣದೊಳೆ ಆರಕಾಡ ಮೇಲೆ ದಂಡೆತ್ತಿ ಪೋಗಲಿತ್ತ ಮುಸ್ತಾಪಲ್ಲಿಖಾನರ್ ಮೊದಲಾಗೆ ಅಧಿಕಾರದೊಳಿದ್ದು ಪ್ರಜೆಗಳಂ ಸುಲಿಯುತ್ತಿರೆ ಆ ಕಾಲದೊಳು ಹಣಕ್ಕೊಂದು ಕೊಳಗ ಧಾನ್ಯಂ ಮಾರೆ ಜನರಿಗೆ ಹೊಟ್ಟೆಗಿಲ್ಲದೆ ಬೇಲದಕಾಯಿ ಹುಣಿಸೆಬೀಜ ಹತ್ತಿಬೀಜ ಹಳುವಿನಸೊಪ್ಪು ಮುಂತಾದವಂ ತಿಂದು ಜೀವಿಸುತ್ತಿರ್ದರತ್ತ ನಬಾಬಂಗೆ ತಾ ಮಾಡಿದ ಪಾಪಂ ಇಹದೊಳೆ ಬಂದು ನೋಡಿಸಲು

ಬೆನ್ನೊಳೆ ವ್ರಣಂ ಪುಟ್ಟಿ ತೀವ್ರವೇದನೆಯಿಂ ನವೆದು ಶೋಭಕೃತು ಸಂವತ್ಸರದೊಳು ಜೀವಂ ಪೋಗೆ ಸಾಮಾಜಿಕರು ಆತನ ಹಿರಿಯ ಮಗನಪ್ಪ ಟೀಪು ಸುಕಾಲನನೆಂಬಂ ಕಲ್ಲೀಕೋಟೆಯ ಮೇಲೆತ್ತಿಪೋಗಿರ್ದನಂ ಶೀಘ್ರದಿಂ ಬರಿಸಿ ಆತನ ಶರೀರಮನೊಣಗಿಸಿ ಕೊಲಾಳಕ್ಕೈದಿಸಿ ತಂದು ಪಟ್ಟಣದ ಮುಂದಣ ವನದೊಳು ನಿಕ್ಷೇಪಂಗೈದರಲ್ಲಿ ಮಂಡಪಮಂ ನಿರ್ಮಿಸಿ ಪಕೀರರನಿರಿಸಿ ಪೂಜಿಸಿದರ್.

ಮತ್ತಂ ಸುಲತಾನಂ ರಾಜ್ಯದೊಳ್ ನಿಂದು ಪ್ರಾಕು ಬಲಮಾಗಿರ್ದ ಅಧಿಕಾರಿಗಳ ಕೊಲಿಸಿ ಸರ್ವಸ್ವಮಂ ಕೊಂಡು ಕ್ರೋಧಿ ಸಂವತ್ಸರದೊಳೆ ರಾಜ್ಯದೊಳುಳ್ಳ ದೇವಸ್ಥಾನಂಗಳ ಮಾನ್ಯಂಗಳಂ ಕೊಂಡಲ್ಲಿರ್ದ ಚಿನ್ನ ಬೆಳ್ಳಿ ಮುಂತಾದ ಉಪಕರಣಮಂ ತರಿಸಿಕೊಂಡು ಅಗ್ರಹಾರ ಉಂಬಳಿ ಮುಖವಾಸೆ ಮೊದಲಾದ ಮಾನ್ಯಂಗಳೆಲ್ಲಮಂ ಕಿತ್ತು ಸೀಮೆಯೊಳಗಣ ಗಡಿಗಡಿಗೆ ಅಮಲದಾರನೆಂದು ಒಬ್ಬೊಬ್ಬ ತುರುಕನನಿಟ್ಟು ಶಿರಸ್ತೆ ಎಂದು ಒಬ್ಬಿಬ್ಬರ ಲೇಕಿಗಳನಿಟ್ಟು ಜಮಂಜಾಡೆ ನಪರಜಾಡೆ ಗೊರಜಾಡೆ ಎಂದು ಬರಸಿ ಸೀಮೆಗಳ ಅವಲ್ ದೂಯಂ ಸೀಯಂ ಚಾರಂ ಎಂದು ನಾಲ್ಕು ಸ್ರಯಮೆಂದು ಅಳೆಯಿಸಿ ಸಲಗಜಲುಬ್ಬು ಬೀಜವರಿಯಂ ಕಟ್ಟಿ ಎಲ್ಲೆ ಚತುಸ್ಸೀಮೆಯನಳೆದು ಮಾರ್ಗ ಬೆಟ್ಟ ಗಿಡ ಕಲ್ಲುಗಳಂ ವಿಂಗಡಿಸಿ ಅಳೆದು ಗ್ರಾಮಂಗಳೊಳಗಣ ಕುಳ ಜಾತಿ ಮನೆ ಕೊಟ್ಟಿಗೆ ಅಂಕಣ ಗಂಡು ಹೆಣ್ಣು ಮಕ್ಕಳು ಜೀವ ದನ ಎಮ್ಮೆ ಕುರಿ ಆಡು ಕತ್ತೆ ಮೊದಲಾದವಂ ಲೆಕ್ಕಿಸಿ ಹಾಳುಭೂಮಿಗೆ ಬಂಜರಕಂದಾಯವೆಂದು ಹೆಚ್ಚಿಗೆ ಮಾಡಿ ಗೌಡಗುತ್ತಿಗೆಯಂ ಕಲ್ಪಿಸಿ ಕಾಣಿಕೆ ಕಡ್ಡಾಯ ವರಿ ವಿರಾಡ ಮುಂತಾದವಂ ಎತ್ತಿ ಗುತ್ತಿಗೆ ಕೈವಳಿ ಎಂದು ಎತ್ತಿಸಿ ಹದಿನೆಂಟು ಧಾನ್ಯಂಗಳ ಜಿನಸಿ ಎಣ್ಣೆ ತುಪ್ಪ ಖಾದಿ ವಸ್ತ್ರ ತೃಣ ಕಾಷ್ಟ ಮೊದಲಾದೆಲ್ಲವಂ ಪ್ರಜೆಗಳಿಂದಲೆ ಉಗ್ರಾಣಕ್ಕೆ ತರಿಸಿಕೊಳ್ಳುತ್ತಂ ತಪ್ಪಾದವರ ಚೇಲಿ ಮಾಡಿಸುತ್ತ ಸರ್ವ ಜನರ್ಗೆ ಗುಡಿಗಿಚಲ್ಲಣಂಗಳಂ ಹೆಂಗಸರಿಗೆ ರವಕೆಗಳನಿಡುವಂತೆ ರಾಜ್ಯದೊಳೆಲ್ಲ ನಿಯಮಿಸಿ ವರುಷ ಮಾಸ ವಾರ ತಿಥಿ ಮೊದಲಾದ ಎಲ್ಲಾ ದ್ರವ್ಯಂಗಳ್ಗೆ ಪಾರಸೀಭಾಷೆಯನೆ ನೇಮಿಸಿ ಪಾದಶಾಯನಾಗಬೇಕೆಂದು ರತ್ನಪಡಿಸಿಂಹಾಸನಮಂ ತಕ್ತೆಯಂದು ಮಾಡಿಸುತ್ತಮಿರೆ ಸರ್ವೇ ಜನರು ಕೇಳಿಕೊಂಡದ್ದರಿಂದ ನಂಜನಗೂಡಿಗೆ ಇಲಾಬಾದೆಂದು ನಂಜುಂಡಲಿಂಗಮಂ ನಿರಂಜನಮೆಂದುಳಿಯಸಿ ಉಳಿದ ದೇವಸ್ಥಾನಂಗಳು ಪಾಳು ಮಾಡಿ ಮಹಿಸೂರಂ ತೆಗೆದು ಗಿಡಗಟ್ಟಿಸಿ ನಜರಬಾದೆಂದು ಮಾಡಿಸಿ ಸುಲತಾನಪೇಟೆ ನವಾಸಾಬಮೆಂದು ಕಲ್ಪಿಸಿದನ್.

ಅಷ್ಟರೊಳೆ ಸಮುದ್ರಾಂತರ ದ್ವೀಪದೊಳಿದ್ದ ಇಂಗ್ರೀಜ ಪರಂಗಿಗಳು ತಮ್ಮ ಸತ್ಯದಿಂ ಸಾಹಸದಿಂ ಇಲಾತಿಪಟ್ಟಣದೊಳು ರಾಜ್ಯಮನಾಳುತಿರ್ದು ಪೊರಗೆ ಬಂದು ತಿರಚನಾಪಳ್ಳಿ ಮೈಲಾಪುರ ಚೆನ್ನಪಟ್ಟಣ ಮೊದಲಾದ ರಾಜ್ಯಂಗಳಂ ವಶಂ ಮಾಡಿ ಯುಕ್ತಿ ಶಕ್ತಿ ಕೌಶಲ್ಯ ವೀರ್ಯ ಪರಾಕ್ರಮರಾದುದರಿಂ ಕರ್ನಾಟಕದೇಶಕ್ಕೆ ಬಂದು ಇಂಗರೀಜ ಸರದಾರರು ವಾಲೀಸು ಮೆಂಡ್ರೇಸು ಎಂಬೀರ್ವರು ಸುಲತಾನನ ಮೇಲೆತ್ತಿ ರಾಜ್ಯಕ್ಷೋಭಂ ಮಾಡದೆ ಸಮರಮನೊಡರ್ಚೆ ಸುಲತಾನಂ ನಿತ್ತರಿಸಲಾರದೆ ಹತ್ತು ವರುಷಕ್ಕೆ ಸಲ್ಲಹಂ ಮಾಡಿ

ಪಾಗುಡಮಂ ಕೊಡಲು ತನ್ನ ಮಕ್ಕಳನೆಡೆಗೊಟ್ಟು ಮನ್ನಿಸಿ ಕಳುಹಿಸಿ ರಾಜ್ಯದೊಳಿಪ್ಪ ಸರ್ವ ಜನಂಗಳಿಂದ ನಜರಾನಾರೂಪಾಯಂ ತೆತ್ತಿಕೊಟ್ಟು ಮಕ್ಕಳಂ ಬಿಡಿಸಿಕೊಂಡನ್. ಆ ವರುಷದೊಳು ಭೂಕಂಪ ಬಾಲನಕ್ಷತ್ರ ಮೊದಲಾದ ಉತ್ಪಾತಂಗಳ ಪುಟ್ಟಿ ಕ್ಷಾಮಂಬರೆ ಪ್ರಜೆಗಳೆಲ್ಲ ತಿರ್ರನೆ ತಿರಿದು ಗ್ರಾಸಮಿಲ್ಲದೆ ಕೈಯೊಳ್ ಕರಟಮಂ ಪಿಡಿದು ನೆಲದೊಳ್ ಬಿದ್ದು ಧಾನ್ಯ ಮೊದಲಾದವನಾಯ್ದುಕೊಳ್ಳುತ್ತ ಜೀವನಮಿಲ್ಲದೆ ಹೆಣ್ಣುಗಂಡೆಲ್ಲಾ ಪೋಗುವಲ್ಲಿ ನಿಂದಲ್ಲಿ ಮಲಗುವಲ್ಲಿಯೆ ಪ್ರಾಣಮಂ ಬಿಡೆ ಹೆಮಮಯವಾಗಿ ಹದ್ದು ಕಾಗೆಗಳ್ಗಾಹಾರ ಮಾತಾಗಲು ಹಣ ಒಂದಕ್ಕೆ ಮೂರು ಮಾನ ಜೋಳ ಮಾರಲು ಕುಂಬಳಕಾಯ್ಗಳಂ ತಿಂದು ಜೀವಿಸಿದರ್ ಆನಂದ ಸಂವತ್ಸರದೊಳು ಆ ದುರ್ಭಿಕ್ಷಂ ತೀರುವುದುಂ ಸುಲತಾನಂ ಗ್ರಾಮಾದಿಗ್ರಾಮದ ಶಾನುಭಾಗ ಗೌಡರಂ ಕರೆಯಿಸಿ ನೋಡಿ ಶೀಮೆಯೊಳು ಐದುಸಾವಿರ ವರಹಕ್ಕೆ ಒಂದು ಅಮಲು ಎರಡು ಶಿರಸ್ತೆಗಳಂ ನೇಮಿಸಿ ಲಕ್ಷ ಸೀಮೆಗೊಬ್ಬ ಅರಸಪ್ಪನೆಂದು ನೇಮಿಸಿ ಪ್ರಜೆಗಳ್ಗೆ ಗ್ರಾಮಗುತ್ತಿಗೆಯಂ ಮಾಡಿದನ್.

ಚಿಕ್ಕದೇವರಾಯನಿಂದಿತ್ತಲು ಪ್ರಜೆಗಳ್ಗೆ ತೆರಿಗೆ ಹೆಚ್ಚಿದವು. ಅವಾವೆಂದೊಡೆ ಎರೆಹೊಲದ ಕಂದಾಯ ಕಬ್ಬೆ ಅಡು ಹೊರಕೊಟ್ಟಿಗೆ ಹಿತ್ತಲು ತೋಟ ಬಂಜಲಭೂಮಿ ಚೌಳುಮಣ್ಣು ಹಟ್ಟಿ ಮೊದಲಾದವರ ಕಂದಾಯ ದೀಪಾವಳಿ ಯುಗಾದಿ ಬೇಡಿಗೆ ವ್ಯವರಣೆ ನಾಣ್ಯತುಂಡು ನಾಣ್ಯವಟ್ಟಿ ಹುಲ್ಲಸರತಿ ವರಹಸರತಿ ವಿನಾಯಕನ ಕಾಣಿಕೆ ಶಾನಾಯವಿಭೂತಿಕಾಣಿಕೆ ನಾಮಗಾಣಿಕೆ ಅಂಗಡಿತೆರಿಗೆ ಬಣಜ ಹತ್ತಿಪೊಮ್ಮು ಹೊಗೆಹಣ ಹೊಗೆಪೊಮ್ಮು ಸಂಬಳ ಸರತಿ ಜಾತಕೋಟಿ ತರಗು ಚೌರಿಗೆ ಉಪ್ಪಿನಕಾವಲಿ ಉಬ್ಬೆತೆರಿಗೆ ಚಿಕ್ಕದೆರಿಗೆ ಹಡಪ ಕುಮಟ ಕುಲುಮೆ ಮಗ್ಗ ಮಾದಾರಿಕ ಚರ್ಮತೆರಿಗೆ ಕಡ್ಡಾಯ ಕಾಣಿಕೆ ಸುಣ್ಣದಗೂಡು ಚಾವಡಿಕಾಣಿಕೆ ಚಪ್ಪಗಾಣಿಕೆ ಕೈವಾಡ ಅಟ್ಟವಣೆ ತೆರಿಗೆಗಳು ಮತ್ತಂ ವಿಂಗಡಮಣೆಯ ಸುಂಕ ಏರು ಬಾಗಿಲು ಪೊಮ್ಮುಗಳುವಿನ ಗುತ್ತಿಗೆ ಅರಶಿನ ದುಂಡಗೆ ಮಸಗೋಲು ಪಟ್ಟಿಡಿ ಮಾರ್ಗಸುಂಕ ತುಂಬೊಳಿ ಕರಗಪಡಿ ಮದುವೆ ಕೂಡೊಳಿ ಜೀತಸುಂಕ ಕಂಬಳದೆರಿಗೆ ಜಾತಿಮಣೆಯ ಶೇಂದಿಗುತ್ತಿಗೆ ಸಾರಾಯಿ ಹೊಗೆಸೊಪ್ಪು ಕೆಂಪಿನನೂಲು ಪಸಾರಿ ಗಿಡಕಾವಲು ಅಡಕೆಗುತ್ತಿಗೆ ಎಲೆಗುತ್ತಿಗೆ ಗಂಧದ ಮಣೆಯ ಮೊದಲಾದ ತೆರಿಗೆಗಳು ಕಂದಾಯ ತೆರಿಗೆ ಸಮಪ್ಪೈರು ಹಣ ಇದರ ಮೇಲೆ ಗುತ್ತಿಗೆ ಕೈವಳಿ ಸಹಿತ ತೆಗೆವರಲ್ಲದೆ ಚರಾದಾಯಮೆಂದು ಬಾಯಿತಪ್ಪು ಕೈತಪ್ಪು ಇರಳತಪ್ಪು ತೊಂಡು ಮೊದಲಾಗಿ ಲೆಕ್ಕದೊಳು ಸಾಗುವಳಿ ಸಂತವಳಿ ಉಟ್ಟವಳಿ ಕಟ್ಟುವಳಿ ಪತ್ತುವಳಿಯೆಂದಾದಿಯಾಗಿ ಅನೇಕ ತೆರಿಗೆಯಾಗಲು ಬಡಗಸೀಮೆಯ ರೈತರು ತಾಲೋಕ್ಕಿನ ಅಮಲದಾರರು ಮಾಳ್ಪಪದ್ರಕ್ಕಾರದೆ ಕೂಟಮೆದ್ದು ಮೂವರು ರೆಡ್ಡಿ ಒಕ್ಕಲಿಗರ ಮುಂದು ಮಾಡಿಕೊಂಡು ಕಂಬಳಿ ನಿಶಾನಿವೆರಸು ಸಾವಿರ ಜನದವರಿಗೆ ಕರಿಘಟ್ಟದ ಬಳಿಯೊಳು ನಿಂತು ಪೊಳೆಪರ್ಯಂತರ ವಾಟ ದೊರೆಪರ್ಯಂತರ ದೂರೆಂಬುದರಿಂ ಸುಲತಾನಂಗೆ ತಮ್ಮಿರಮಂ ಪೇಳಲವರಂ ಮನ್ನಿಸಿ ಪ್ರಜಾಕ್ಷೋಭಮಂ ಮಾಡಿದುವಕ್ಕೆ ಸರ್ವಾಧಿಕಾರಿಗಳ್ ಮೊದಲಾದಧಿಕಾರಿಗಳ ಮೇಲೆ ಕೋಪಿಸಿ ಪ್ರಜೆಗಳ್ಗೆ ಸರಾಗಂ ಮಾಡಿ ಕಳುಹಿಸಲೆಂದಿಪ್ಪಿನ

ಮೀರಸಾಬಿಯೆಂಬ ಸರ್ವಾಧಿಕಾರಿ ಅವರ ಮೇಲೆ ಇಲ್ಲದ ದೋಷಾರೋಪಣೆಯಂ ಕಲ್ಪಿಸಿ ಆ ಮೂವರ್ಗಂ ಕಂಠಿಪಾಶಮನಿಕ್ಕಿಸಿ ಕೊಂದು ರಾಜ್ಯದೊಳುಳ್ಳ ಗ್ರಾಮಾಧಿಗ್ರಾಮಗಳ ಗುತ್ತಿಗೆ ಮೇಲೆ ವರಹ ಒಂದಕ್ಕೆ ಮೂರು ಹಣ ಮೇರೆ ಹೆಚ್ಚಿಗೆ ಮಾಡಿದೊಡೆ ರೈತರೆಲ್ಲ ಮೊದಲು ತೆರುದ ಹಣಕ್ಕೆ ಆಧಾರಮಿಲ್ಲದೆ ಉಪದ್ರರಿಂದ ಕೆಲರು ದೇಶಾಂತರಮಂ ಪೊಕ್ಕರ್. ಕೆಲರು ಜಲಪಾತ ಮೊದಲಾದವರಿಂ ಸತ್ತರ್. ನಾರುವುದರ ಮೇಲೆ ನಾಯಿ ವಿಷ್ಟಿಸಿದಂತಾಯ್ತೆಂದು ಚಿಂತಿಸುತ್ತಿರಲತ್ತಲ್ ಇಂಗರೀಜ ಸರದಾರರು ನಿಯಮ ತೀರಿತೆಂದು ಇಲಾಯತಿಯತ್ತಣಿಂ ಚನ್ನಪಟ್ಟಣಕ್ಕಾಗಿ ಬಲಸಹಿತಂ ಬಪ್ಪುದಂ ಕೇಳ್ದು ಸುಲತಾನಂ ಮೀರಸಾಬಿ ಮೊದಲಾದ ಸಾಮಾಜಿಕರೊಳಾಳೋಚಿಸಿ ನಮ್ಮ ರಾಜ್ಯಮೆಲ್ಲಮಂ ಚತುರಂಗಬಲಕ್ಕೆಲ್ಲಾ ಪಂಚುಗೊಟ್ಟೊಡೆ ಅವರೆಲ್ಲರು ತಮ್ಮ ತಮ್ಮ ಗ್ರಾಮ ಸೀಮೆಯನುಳಿಯಿಸಲ್ ಪರಬಲದ ಮೇಲೆ ಕಾದಿ ಗೆಲ್ವರದರಿಂ ಪಟ್ಟಣಮೊಂದಳಿದೆಲ್ಲಮಂ ಆನೆ ಕುದುರೆ ಆಳುಗಳಿಗೆ ಸಹ ಉಂಬಳಿ ಬರೆಸಿಕೊಟ್ಟು ನಿಶ್ಚಿಂತಮಿರೆ ಸರದಾರರ ಪೌಜು ನಂಜನಗೂಡ ಮೇಲೆ ಬಂದು ಪಟ್ಟಣದ ಪಶ್ಚಿಮವಾಹಿನೀ ಬಯಲೊಳ್ ನಿಂದು ರಾಜ್ಯಕ್ಕುಪದ್ರಮಂ ಮಾಡದೆ ಪಟ್ಟಣದ ಕೋಟೆ ನೈರುತ್ಯ ಭಾಗಕ್ಕೆ ಮೂರ್ಛೆಯನೊಡ್ಡಿ ಪಿರಂಗಿಗಳನ್ನೇರಿಸಿ ಪ್ರಳಯಕಾಲದಗ್ನಿ ವೃಷ್ಟಿಯಂತೆ ಕರೆಯೆ ಸುಲತಾನನ ಪೌಜು ಪೊರಗಿರ್ದು ರಾಜ್ಯಮೆಲ್ಲಮಂ ಸುಡುತಿರ್ದರ್.

ಅತ್ತಲ್ ಬಾಣಪ್ರಯೋಗದಿಂ ಪಟ್ಟಣದ ಪ್ರತೋಳಿ ಅಶನಿಪಾತಂಗಳಿಂ ಬಿರಿದು ಬೀಳ್ವ ಬೆಟ್ಟದಂತೆ ಬೀಳ್ವುದು. ಶಕವರ್ಷ ೧೭೨೧ನೆ ಸಿದ್ಧಾರ್ಥಿ ಸಂವತ್ಸರದ ಚೈತ್ರ ಬಹುಳ ಅಮಾವಾಸಿ ಶನಿವಾರ ಮಧ್ಯಾಹ್ನದೊಳ್ ಇಂಗರೀಜಬಲಂ ಕೋಟೆಯನೇರಿ ಕಾರಮಳೆಕರೆವಂತೆ ಗುಂಡುಗಳಂ ಕರೆಯುತ್ತ ಪಟ್ಟಣದೊಳಗಂ ಪೊಗುವಾಗಲ್ ಮೀರ ಸಾಹೇಬನೊಳಗಿರ್ದು ಪೊರಗಣ್ಗೆ ಪೋಗಲೆಂದು ತನ್ನ ದ್ರವ್ಯಸಮೇತಂ ಮೂಡ ಬಾಗಿಲಿಗೆ ಬರಲು ಆ ಬಾಗಿಲವರೆ ಆತನಂ ಪರಿಹರಿಸಿಬಿಟ್ಟರ್. ಸುಲತಾನನು ಪೊರಗೆ ಪೋಪೆನೆಂದು ತುರಗಾರೂಢನಾಗಿ ಹುಲ್ಲೆಬಾಗಿಲ ಬಳಿಗೆ ಬರುತ್ತಿಪ್ಪಿನಪಲೀತಂ ಮಾಳ್ವರ ಗುಂಡು ತಗಲಿದೊಡೆ ಅಲ್ಲೆ ಮರಣವಾದಂ.

ಇಂಗರೀಜ ಫೌಜು ಪಟ್ಟಣಮನೊಂದು ಅರೆದಿವಸ ಸೂರೆಗೊಂಡು ನಿಂತರ್. ಉಳಿದ ಸುಲತಾನನ ಕಡೆ ವಜಿವೀರರು ಖಾನಖಾನರು ನಾಯಕರು ಮುಂತಾದವರು ಕೋಟೆ ಅಗಳ ಕಂದಕಕ್ಕೆ ಬಿದ್ದು ಸತ್ತರ್. ಇಂಗರೀಜ ಮೊಕಲೋಟು ಅರಸು ಮೊದಲಾದ ಸರದಾರರು ಅರಮನೆಯೊಳುಳ್ಳ ವಸ್ತುಗಳಂ ಪಂಚುಗೊಂಡು ತೋಳಶಿಖಾನೆ ಕರಣಿಕ ಪೂರ್ಣಯ್ಯನಂ ಬರಿಸಿ ಪೂರ್ವಾಪರ ಸಂಗತಿಗಳೆಲ್ಲಮಂ ವಿಚಾರಿಸಿ ದೊಡ್ಡ ನವಾಬನಾರಭ್ಯ ಅರಸುಗಳ್ಗೆ ಪಟ್ಟವೆಂದು ಮಡಗಿದ್ದರು. ಅವರೊಳು ಪೂರ್ವ ರಾಜಒಡೆಯರ ಸಂತಾನದ ದೇವರಾಜಒಡೆಯರ ಮಕ್ಕಳು ಅರಿಕುಠಾರದೊಳಿರೆ ದೇವರಾಜ ಅರಸಿನ ಕುಮಾರಂ ಚಾಮರಾಜ ಅರಸಿಂಗೆ ಪಟ್ಟವೆಂದು ಮಾಡಿರ್ದೊಡಾ ಕುಮಾರಂಗೆ ಕೆಂಪದೇವಾಜಮ್ಮಣ್ಣಿ ಎಂಬ ರಾಜಕುಮಾರಿಯಂ ಮದುವೆಯಾಗಿ ಆನಂದ ಸಂವತ್ಸರದೊಳು ಪುಣ್ಯಪುತ್ರನಪ್ಪ ಕೃಷ್ಣರಾಜರೆಂಬ ಕುಮಾರನಂ ಪಡೆದು ಭಾರ್ಯಾವಿಯೋಗಮಾಗೆ ಪಂಚಕಲ್ಯಾಣಮಾಗಿ ಐವರು ಸ್ತ್ರೀಯರೊಳಿರ್ದು

ಸ್ಫೋಟಕದಿಂ ಲೋಕಾಂತರಿತನಪ್ಪುದು ಶಿಶುವಂ ಲಕ್ಷ್ಮಮ್ಮಣ್ಣಿ ಆದರಿಸುತ್ತಿರಲಾ ಕೃಷ್ಣಮಹಾರಾಜಕುಮಾರಂಗೈದು ವರುಷಮಾಗಿರಲಾ ಕುಮಾರನಂ ಮಹಿಸೂರನಗರದ ಸಂಸ್ಥಾನಕ್ಕೆ ಅಧೀಶನಂ ಮಾಡಲು ಗಿಡಗಟ್ಟಿರ್ದ ಮಹಿಸೂರೊಳರಮನೆಯ ನಿರ್ಮಿಸಿ ಕೃಷ್ಣರಾಜೊಡೆಯರ್ಗೆ ಪಟ್ಟಂಗಟ್ಟಿ ಮೂಡಲು ಬೆಂಗಳೂರಾದಿಯಾಗಿ ಸತ್ಯಾಗಾಲದಿಂದೊಳಗೆ ತಳಕಾಡು ಹೊಂಗನೂರು ಹರದನಹಳ್ಳಿ ಮೊದಲಾಗಿ ತೆಂಕಣ ಕಣುಮೆಯಿಂದತ್ತ ಗುಂಡಲು ವಿಜಯಾಪುರ ಹುಲ್ಲನಹಳ್ಳಿ ಹೆಗ್ಗಡದೇವನಕೋಟೆ ಸಕ್ಕರೆಪಟ್ಟಣ ದೊಡ್ಡನಗರ ಮುಂತಾದ ಒಳನಾಡ ಗಡಿಗಳಂ ವಿಂಗಡಿಸಿ ಮಹಿಸೂರ ಹವಾಲು ಮಾಡಿ ದೊರೆಗಳಿಗೆ ನಡೆಯತಕ್ಕ ವಿನಿಯೋಗಗಳಂ ನೇಮಿಸಿ ಕಡಮೆ ಅರಸುಗಳಿಗೆ ದೇವಸ್ಥಾನಂಗಳಿಗೆ ಯಥೋಚಿತವಾಗಿ ಸಂಬಳವಮಂ ಮಾಡಿಸಿ ಮಹಾರಾಜಂಗೈದು ವರುಷವಾದುದರಿಂ ಪೂರ್ಣಯ್ಯಂಗೆ ಸರ್ವಾಧಿಕಾರಮನಿತ್ತು ರಾಜ್ಯಮನಾತಂಗಪ್ಪೈಸಿ ಕೊಟ್ಟು ಕೋಲಸಾಹೇಬನೆಂಬ ಸರದಾರನಂ ಕಾಪಿರಿಸಿ ಪಟ್ಟಣಂ ಮೊದಲಾದ ಕಡಮೆ ರಾಜ್ಯಂಗಳನ್ನೆಲ್ಲಾ ಕುಂಪಣಿಹವಾಲ ಮಾಡಿಕೊಂಡು ಸರದಾರರಿಗೆ ಪಂಚುಗೊಟ್ಟು ಸುಲತಾನನ ಸತಿ ಪುತ್ರರು ಸಹಿತಮಾಗಿ ರಾಯರಾಯ ವೇಲೂರಿನಲ್ಲಿ ಕೈದಿನಿಂ ಮಡಗಿದರ್.

ಇತ್ತ ರಾಜ್ಯದೊಳು ನಿರಾತಂಕಮಪ್ಪಂತು ಮಾಡಿರೆ ದೊಂಡಿ ಎಂಬವನು ತುಂಟನಾಗಿ ಕೆಲವು ಮಂದಿ ಕುದುರೆವೆರಸು ಕಳ್ಳತನದಿಂ ರಾಜ್ಯಕ್ಷೋಭಮಂ ಮಾಡುತ್ತಿರಲು ಆತನಂ ಪಿಡಿದು ಅಲ್ಲಲ್ಲಿ ತುಂಟರಾದೆಲ್ಲರಂ ಸದೆದು ಮಳೆಯಾಳದರಸನಂ ಸುಲಭದಿಂ ಗೆಲ್ದಾ ರಾಜ್ಯಮಂ ಕೊಂಡು ಕಲ್ಲಿಕೋಟೆ ಪಾಲಕಾಡು ಮೊದಲಾಗಿ ತೆಂಕಣ ಸಮುದ್ರದಿಂ ತೊಟ್ಟು ಮೂಡಣ ಪಡುವಣ ಸಮುದ್ರಾಂತಮುಳ್ಳ ಸಮಸ್ತ ದೇಶಂಗಳೆಲ್ಲಮಂ ಮುನ್ನಮೆ ವಶಂಮಾಡಿ ಉತ್ತರದೊಳು ಕಾಶಿ ಮೊದಲ್ಗೊಂಡು ಭರತಪುರ ಪರ್ಯಂತರಕ್ಕೂ ಸ್ವಾಜ್ಞಾನಿರರ್ಗಳಮಾಗೆ ಸರ್ವರ್ಗು ಹಿತಮಂ ಮಾಡುತ್ತ ಸತ್ಯಮಂ ಬಿಡದೆ ನಯ ವಿನಯ ನೀತಿ ನಿದಾನ ದಯ ದಾಕ್ಷಿಣ್ಯದಿಂ ಕ್ರೋಧಮಿಲ್ಲದೆ ಶೌರ್ಯ ವೀರ್ಯ ಪರಾಕ್ರಮದಿಂದಿಪ್ಪುದು ತಮ್ಮಂಕಮಾಲೆಯಂ ಪಟ್ಟಣದುತ್ತರದ ಚಿರಕುರುಳಿ ದಕ್ಷಿಣದ ತಿಟ್ಟಿನೊಳು ಮಹಾಶಿಲಾಸ್ತಂಭಮಂ ಮಾಡಿಸಿಯಿದರೆ.

ಮತ್ತಂ ಆ ವರುಷದೊಳೆ ಪಟಕಿ ಹಿಂಡುಗಳು ಮಿಡಚೆಗಳ ಮೊತ್ತಂಗಳು ಮುಸುಕಿ ಶಲಭಾದಿ ಪುಳುಗಳು ನಿಬಡೀಕೃತಮಾಗಿ ಪೋದವು, ಮತ್ತಮೇಳು ದಿವಸಂ ಮೇಘಚ್ಛನ್ನಮಾಗೆ ವೃಷ್ಟಿಯಿಂ ಸಮುದ್ರಂ ಪೆರ್ಚು ಬಂದು ಚನ್ನಪಟ್ಟಣದ ಪೇಟೆಯಂ ಮುಚ್ಚಿ ಕೆಲವು ಗೃಹಂಗಳನೊಳಗೊಂಡಿತು. ಚಿತ್ರಭಾನು ಸಂವತ್ಸರದೊಳು ಮಾರ್ಗಶಿರಮಾಸ ಗತವಾಗೆ ರಾಜ್ಯದೊಳು ಪ್ರಜಾಕ್ಷೋಭಮಾಯ್ತು. ಉಜ್ಜೈನಿಪಟ್ಟಣದ ಮೇಲೆತ್ತಿಪೋಗಿ ಬರುವಲ್ಲಿ ಕರ್ಣಾಟದೇಶಕ್ಕೆ ಶಾಂತಿಭೇದಿಯಾದ ನರಮಾರಿರೋಗಂ ಕರ್ನಾಟಮಂ ಪೊದ್ದಿ ಅನೇಕ ಜನರು ನಷ್ಟವಾದರು. ಆ ರೋಗಂ ಬಂದಲ್ಲಿ ಕೆಲವು ಕೆಲವು ದೊಡ್ಡಮ್ಮ ಚಿಕ್ಕಮ್ಮನೆಂದು ಪೆಸರಂ ಮಾಡಿ ಗುಡಿಯಂ ಕಟ್ಟಿಸಿ ದೇವತಾಸಂಕಲ್ಪಮಂ ಮಾಡಿದರ್. ಕೊಡಗಿನ ಅರಸನಂ ಕುಂಪಣಿಯವರ್ ಸಾಭಿಮಾನಿಸಿ ನಡೆಸುತ್ತಿರೆ ಅವರೊಳು ಇತರನಾದುದರಿಂದಾ ಕೊಡಗಂ

ಕಟ್ಟಿಕೊಂಡು ಅಲ್ಲಿಯರಸನಂ ಕಾಶಿಗೋದಿರಿಸಿದರ್.

ಮತ್ತಂ ಕುಂಪಣಿ ಸರದಾರರು ಲೋಕೋಪಕಾರಮಾಗೆ ತಮ್ಮ ಕಡೆಯ ಡಾಕತರರೆಂಬ ವೈದ್ಯಪರೀಕ್ಷಾಕುಶಲರಂ ಸಂಬಳಂಗೊಟ್ಟಲ್ಲಲ್ಲಿರಿಸಿ ಬಹುಕಾಲದಿಂ ಪ್ರತೀಕಾರಮಿಲ್ಲದ ಬಾಲಕರಿಗೆ ಬಪ್ಪ ಸ್ಫೋಟಕದಿಂದನೇಕಂ ಲಯವಾಗುತ್ತಿರೆ ಅದಕ್ಕೆ ಯುಕ್ತಿಯಿಂ ಹಸುವಿನ ಸಿಡಬನಂ ತೋಳ ಮೇಲಕ್ಕೇಳಿಸಿ ಒಂದೆರಡರೊಳೆ ಕಳಿವಂತೆ ಉಪಾಯಮಂ ಮಾಡಿದರ್. ರಾಜ್ಯಂಗಳೊಳು ಎಲ್ಲಿಂದೆಲ್ಲಿ ಪರ್ಯಂತರಂ ಪೋಗಲು ಮಾರ್ಗಮಂ ಲಕ್ಷಾಂತರಂ ಮುಟ್ಟಿಗಿಡ ಹಳ್ಳ ಬೆಟ್ಟಗಟ್ಟಂಗಳಂ ಸಮಂ ಮಾಡಿ ಅಲ್ಲಲ್ಲಿ ಬಂಗಲೀಗಳಂ ಮಾಡಿ ಗಮನನಾಗಮನಕ್ಕೆ ಸರಾಗಮಪ್ಪಂತು ಮಾಡಿ ಗ್ರಾಮಾನುಗ್ರಾಮಂಗಳ್ಗೆ ಮುಳ್ಳುಬೇಲಿ ಪೋಲೀಸ ಚಾವಡಿ ನಿಯಮಿಸಿದರ್

ಮಹಿಸೂರಧಿಕಾರಿ ಪೂರ್ಣಯ್ಯಂ ತನ್ನ ಜನರಂ ಗಡಿ ಮೊದಲಾಧಿಕಾರದೊಳಿಟ್ಟು ಸಿದ್ಧಾರ್ಥಿ ವತ್ಸರಾರಭ್ಯ ಪ್ರಜೋತ್ಪತ್ತಿ ಸಂವತ್ಸರದವರೆಗೆ ಮೊಗಮ್ಮು ಜಾಸ್ತಿಯಂ ಶೀಮೆಗೆ ಮಾಡುತ್ತಾ ಕಪಿನೀಹೊಳೆಗೆ ಕಾಲುವೆಗಳಂ ಮಾಡಿ ಗದ್ದೆಗಳಂ ಮಾಡಿಸಿ ಯಳವಂದೂರ ಹನ್ನೆರಡು ಸಾವಿರ ವರಹದ ಗಡಿಯಂ ಕುಂಪಣಿ ಅಪ್ಪಣೆಯಿಂ ಜಹಗೀರು ಪಡೆದರಮನೆ ಮೊದಲಾದವರ್ಗಂ ಮಿತಿಯಂ ಮಾಡಿ ತಾನೆ ಅಧ್ಯಕ್ಷನಾಗಿರ್ದು ಮಹಿಸೂರ ಬಸ್ತಿಮುಖಮಂಡಪಮಂ ಬೆಳ್ಳಿಯುಳಿಯ ಬಸ್ತಿ ಮೊದಲಾದಾರೇಳು ಪೂಜೆಯಿಲ್ಲದ ಬಸ್ತಿಯ ಕೀಳಿಸಿ ಕಲ್ಲುಗಳಂ ಸಾಗಿಸಿಕೊಂಡಂ. ತಾರಣಸಂವತ್ಸರ ದೇವರಾಜರಸಂ ಪಟ್ಟಣದೊಳಿದ್ದ ಬಸ್ತಿಯಂ ಬಿಡಿಸಿ ನಿಕ್ಷೇಪಮಾಗಿರ್ದ ದೇವರಂ ತೆಗೆಸಿ ವೈಶಾಖದೊಳು ಪ್ರತಿಷ್ಠೆ ಆಯ್ತು. ಮಹಿಸೂರಲ್ಲಿ ವರಹದ ದೇವಾಲಯಮಂ ಮಾಡಿಸಿ ತಸದೀಕು ಮಾಡಿಸಿದಂ ಅಷ್ಟರೊಳೆ ಕೃಷ್ಣರಾಜ ಮಹಾರಾಜಂ ಶುಕ್ಲಪಕ್ಷದ ಬಿದಿಗೆಯ ಚಂದ್ರನಂತೆ ಬೆಳೆದೆಳೆವರೆಯದೊಳೆ ಸಕಲ ಕಲಾಕುಶಲ ನೀತಿಶಾಸ್ತ್ರ ಪರಾಕ್ರಮಸಂಪನ್ನನಾಗಿ ಕುಂಪಣಿಯಿಂ ರಾಜಾಸನ್ನದಂ ತರಿಸಿ ತಾನೆ ವಿಚಾರಕರ್ತನಾಗಿ ನ್ಯಾಯವಿಹಿತ ಪ್ರಜಾಪಾಲನೆಯಿಂ ದೇವ ಗುರು ಬ್ರಾಹ್ಮಣರ್ಗಂ ಸಕಲವಾದ ಅರಸುಗಳ್ಗಂ ಕಾಮಧೇನು ಕಲ್ಪವೃಕ್ಷ ಚಿಂತಾಮಣಿ ಪ್ರಸನ್ನಮಾದಂತೆ ಅಪರಮಿತವಾಗಿ ಸಂಬಳುಂಬಳಿಗಳಂ ಕೊಟ್ಟು ಮಹಿಸೂರ ಶಾಂತೀಶ್ವರದೇವರ್ಗೆ ವರುಷಕ್ಕೆ ಮುನ್ನೂರು ವರಹ ತಸ್ತೀಕಂ ಮಾಡಿಸಿ ತಮ್ಮ ಪಿತೃಸ್ಥಾನವಾದರಿಕುಠಾರಮಂ ಚಾಮರಾಜನಗರಂ ಮಾಡಿ ಚಾಮರಾಜೇಶ್ವರಾಲಯಮಂ ನಿರ್ಮಿಸಿ ಅರಮನೆಯಂ ಸಾಮಾಜಿಕರ ಗೃಹ ಮೊದಲಾಗೆ ನಿರ್ಮಿಸಿ ದೇವಸ್ಥಾನಂ ಬ್ರಾಹ್ಮಣರಗ್ರಹಾರ ಛತ್ರ ಮೊದಲಾದನೇಕ ಧರ್ಮಂಗಳಿಗೆ ಅನೇಕ ಜಾಗಂಗೊಟ್ಟು ಸೂರಿಪಂಡಿತಂ ಕೇಳಿಕೊಂಡೊಡೆ ಬಸ್ತಿ ದೇವಸ್ಥಾನಂಗಳು ತ್ರಿವಿಂಶತಿಗಳ್ಗೆ ತಸ್ತೀಕಂ ಮಾಡಿಸಿಕೊಟ್ಟು ಮಹಿಸೂರೊಳು ಕೃಷ್ಣದೇವಾಲಾಯಂ ಮೊದಲಾಗೆ ನೂತನ ಪುರಾತನ ದೇವಾಲಾಯಗಳಂ ಮಾಡಿಸಿ ಸ್ವಾಸ್ತಿಮಾನ್ಯಂಗಳಂ ಕೊಟ್ಟು ಸ್ನಾನಘಟ್ಟ ವಾಪೀ ಕೂಪ ತಟಾಕ ಸರೋವರ ಉದ್ಯಾನಾರಾಮ ಪ್ರಪಾ ಸತ್ರಾದಿಗಳನನೇಕಮಾಗೆ ಮಾಡಿಸಿ ಬೆಳ್ಗುಳತೀರ್ಥಕೆಯ್ದಿ ಮಸ್ತಕಾಭಿಷೇಕ ಕನಕಾಭಿಷೇಕಮಂ ಮಾಡಿಸಿ ಘಟ್ಟದಕೀಳಿನ ಮೂಡಬಿದರೆಯೊಳಿಪ್ಪ

ಚೈತ್ಯಾಲಯಗಳನ್ನೀಕ್ಷಿಸಿ ಅತ್ಯಾಶ್ಚರ್ಯಂಬಟ್ಟು ಬಂದು ಬೆಳಿಕೆರೆ ಶಾಂತಪಂಡಿತಂ ಕೇಳಿಕೊಂಡೊಡೆ ಪಾರ್ಥಿವದೊಳು ಮಳಲಿ ದೊಡ್ಡ ಬಸ್ತಿಯಲ್ಲಿ ಶಾಂತೀಶ್ವರಪ್ರತಿಬಿಂಬಮಂ ಮಾಡಿಸಿ ಪ್ರತಿಷ್ಠೆ ಮಾಡುವುದಕ್ಕಂ ಜಯ ಸಂವತ್ಸರದೊಳು ಕೆಲಸೂರ ಬಸ್ತಿದೇವರ ಚಿತ್ರಮಂ ನವೀನಂ ಮಾಡಿ ಪ್ರತಿಷ್ಠೆ ಮಾಡುವುದಕ್ಕಂ ಆತನ ಉಗ್ರಶಾಂತಿಗೆ ಸಹಿತವಾಗಿ ಸಾವಿರಾರು ರೂಪಾಯಂ ಕೊಡಿಸಿ ದೊಡ್ಡ ಪಂಡಿತನ ಷಷ್ಟಿವರುಷನಪೂರಣದೊಳೆ ಬೆಳ್ಗುಳದ ದೇವರಿಗೆ ಏಳುನೂರು ವರಹದ ಗ್ರಾಮ ಮೂರನ್ನು ಸರ್ವಮಾನ್ಯಮಾಗೆ ಕೊಟ್ಟು ಅಲ್ಲಿಯ ಸುಂಕದ ಬಗ್ಗೆ ಐವತ್ತು ವರಹವಂ ಕನಕಗಿರಿಯ ಬಸ್ತಿ ಪಡಿತರ ಜೀರ್ಣೋದ್ಧಾರಕ್ಕಂ ಮಾಡಲು ತಾಜ ಸನ್ನದು ಶಾಸನಮಂ ಬರೆಯಿಸಿಕೊಟ್ಟು ಪಂಡಿತಂಗುಗ್ರಶಾಂತಿಯಂ ಪಂಚವಿಧಾರಾಧನೆಯವಭೃತ ಮಹಾಸ್ನಾನಮಂ ಮಹಿಸೂರೊಳೆ ಶಾಂತೀಶ್ವರಬಿಂಬಕ್ಕಂ ಸೂರಿಪಂಡಿತನಾ ವಿಧಿವಿಧಾನಂಗಳಿಗೆನ್ನಿಂದಲೆ ಮಾಡಿಸುವಾಗಲು ಖಾಸಾಪರಂಬರಿಕೆ ಮಾಡಿ ಅತಿ ಸಂತಸಮೊದವೆ ಎನಗೆ ಸಂಬಳಂ ಮಾಡಿದೇವೆ ಎಂದು ವಾಗ್ದತ್ತಂ ಕೊಟ್ಟು ಬಹಳ ಜನದ ದಾರಿದ್ರವಿದ್ರಾವಣನೆನಿಸಿ

ಮ || ನಳಮಾಂದಾತ್ರ ದಿನಾಧಿನಾಥಜ ಬಲಿಕ್ಷೋಣೀಶರಂ ತ್ಯಾಗದಿಂ
ಕಲಿ ಭೀಮಾರ್ಜುನಭೂಪರಂ ಸಮರದಿಂ ತಾ ಗೆಲ್ವ ಶೌರ್ಯೋನ್ನತಂ
ಛಲದಿಂ ಕೌರವನಂ ಸುಧರ್ಮಸುತನಂ ಸತ್ಯೋಕ್ತಿಯಿಂ ಶೇಷನಂ
ಬಲದಿಂ ಬಲ್ಲಿದ ಕೃಷ್ಣರಾಜನೆಸೆದಂ ರಾಜನ್ಯತೀನಾಯಕಂ ||

ಇಂತಪ್ಪ ಮಹಾರಾಜನ ರಾಜ್ಯದಧಿಕಾರಿಗಳು ಕಾಲದೋಷದಿಂ ತಮ್ಮ ಕಾರ್ಯಕ್ಕೋಸ್ಕರ ನ್ಯಾಯಾನ್ಯಾಯಂಗಳಂ ಮಾಡಿ ಪ್ರಜಾಬಾಧೆಯಂ ಮಾಡುತ್ತಿರ್ದರ್ ಅತ್ತಲ್ ಸರಜನಾಯಕನೆಂಬ ನಿರ್ಬುದ್ಧಿಗಂ ಅಲ್ಪ ಕುದುರೆಮಂದಿಗೂಡಿ ತುಂಟ ಭಂಟಕೆಯಂ ಮಾಡುತ್ತ ದೊಡ್ಡ ನಗರದ ಗಿಡದೊಳಡಗಿ ಆ ರಾಜ್ಯಮಂ ಸೂರೆಗೊಂಡು ಕೆಡಿಸುತ್ತಿರಲಲ್ಲಿ ಕೆಲವು ಪ್ರಜೆಗಳು ವಶಮಾಗಿರಲು ರಾಜಬಲದಧಿಕಾರಿಗಳು ವಿಚಾರವಿಲ್ಲದೆ ಕೆಲರಂ ಘಾತಪಾತಂಗಳಂ ಮಾಡುತ್ತಿರಲ್ ಕುಂಪಣಿ ಸರದಾರರರಿದು ಬಂದು ಸರಜನಾಯಕನಂ ಪರಿಭವಿಸಿ ಕಳೆದು ಮಹಾರಾಜನ ಸನ್ನಿಧಿಯೊಳಧಿಕಾರವಂ ಮಾಳ್ಪ ಬುದ್ಧಿವಂತರಿಲ್ಲೆಂದು ಖರಸಂವತ್ಸರದಾಶ್ವಯುಜ ಶು ೧೦ ಆರಭ್ಯ ವಿಚಾರಮೆಲ್ಲಮಂ ತಮ್ಮ ಹವಾಲು ಮಾಡಿಕೊಂಡು ರಾಜಂ ಮಾಡಿರ್ದ ಧರ್ಮಮಂ ನಡಸುತ್ತ ಅರಮನೆ ವೆಚ್ಚಕ್ಕೆ ಸಾಲ್ವನಿತು ದ್ರವ್ಯಮಂ ತಿಂಗಳುಗಟ್ಟಲೆ ಕೊಡುತ್ತಂ ಸಂಬಳದವರ್ಗುಳಿದಿರ್ದ ಸಂಬಳಮಂ ಕೊಡಿಸಿ ಸಾಲಗಾರರ ಸಾಲಮೆಲ್ಲಮಂ ತೀರಿಸಿ ಮಹಾರಾಜನಂ ನಿಶ್ಚಿಂತೆಯಿಂ ದಾನಧರ್ಮ ಪರೋಪಕಾರದಿಂದಿಪ್ಪಂತು ಮಾಡಿ ರಾಜ್ಯಮನೆರಡು ತುಕ್ಕಡಿಯಾಗೆ ಬೆಂಗಳೂರ ತುಕ್ಕಡಿಯೊಳು ಕಮೀಸಕಚೇರಿಯ ನಿಲಿಸಿ ಮೈಸೂರೊಳೆ ಸುಪ್ರಿಂಟ್ಯ ಕಚೇರಿಯಂ ಮಾಡಿ ಅಲ್ಲಿಗೆ ಸರದಾರರನ್ನು ಗೊತ್ತುಮಾಡಿ ಪ್ರಜೆಗಳಂ ಕರುಣವಿಡಿದು ರಕ್ಷಿಸಲು ಕೊಟ್ಟೆಂದು ನಿರ್ಮಿಸಿ ರಾಜ್ಯದೊಳು ಅನ್ಯಾಯಂ ನಡೆಯದಂತೆ ಒಬ್ಬರನ್ನೊಬ್ಬರು ಕೊಲ್ಲದಂತೆ ಬೈಯದಂತೆ ಉಪವಾಸಮಿರಿಸದಂತೆ ಪುಸಿಯ ನುಡಿಯದಂತೆ

ಒಬ್ಬರ ವಸ್ತುವನೊಬ್ಬ ಕೊಳ್ಳದಂತೆ ಕಳವಂ ಮಾಡದಂತೆ ಸತ್ಯದಿಂದಿಪ್ಪುದೆಂದು ಇಸ್ತ್ಯಾರು ಶಾಸನಮಂ ಬರೆಯಿಸಿಕೊಟ್ಟು ಬೂಸಾಜಿನಸಿಗೆ ಸುಂಕಮಂ ಇರುಳು ತಪ್ಪು ಮೊದಲಾಗೆ ಅಪರಾಧ ಜಾತಿವರಿ ಮೊದಲಾದವಂ ಬಿಟ್ಟು ಸರ್ವೇಜನರು ಸುಖದಿಂ ಬಾಳ್ವುದೆಂದು ನಡಸಿದೊಡಂ ಅಧಿಕಾರ ಮಾಡುವ ಕರ್ನಾಟಕ ಜನರ ದಯಕ್ಕೆ ಪಾತ್ರರಾಗುವೆನೆಂದು ಪೂರ್ಣಯ್ಯಂ ಮಾಡಿದ ಮುಗಂ ಜಾಸ್ತಿಯೆಲ್ಲಮಂ ಸೇರಿಸಿ ಕಾಳಾಯುಕ್ತಿಯ ಬೇರೇಜೆಂದು ಗ್ರಾಮಗುತ್ತಿಗೆಯಂ ಹೆಚ್ಚಿಸಿ ಕಂದಾಯ ಸರಿಪೈರು ಗುತ್ತಿಗೆ ಕೈವಳಿ ಸಹಿತವಾಗಿ ರೈತರ (ರಹಿತರ) ಭೂಮಿಕಂದಾಯಕ್ಕೆ ಸೇರಿಸಿ ಒಂದಕ್ಕೆ ಮೂರು ನಾಲ್ಕು ಕಂದಾಯಮಾಗೆ ಸರದಾರರಿಗೆ ಸಹಜವೆಂದು ಅರಿಕೆ ಮಾಡುತ್ತ ತಮ್ಮ ಕಾರ್ಯಕ್ಕಾಗಿ ಪ್ರಜೆಗಳಂ ಬಾಧಿಸಿ ನೋಯಿಸುವರಲ್ಲದೆ, ಸರದಾರರ ದೋಷ ಸ್ವಲ್ಪ ಮಾತ್ರವೂ ಇಲ್ಲ.

ಮ || ಅರಿಭೂಪಾಲ ಮಹಾಂಬುದಾಳಿ ಪವನಾಘಾತರ್ ಪ್ರತೀಪಕ್ಷತೀ
ಶ್ವರ ಭೂಭೃದ್ವಿಲಯಾಶನಿ ಪ್ರತಿನಿಧಿ ಪ್ರತ್ಯರ್ಥಿ ಭೂಪಾಲ ವಿ
ಸ್ಫುರಿತಾರಣ್ಯದವಾಗ್ನಿ ವೈರಿವನಿತಾವೈಧವ್ಯ ದೀಕ್ಷಾಗುರು
ಸ್ಥಿರ ಸಾಮ್ರಾಜ್ಯ ವಿರಾಜಮಾನ ಜಗದೀಶರ್ ಕುಂಪಿಣೀಭೂಮಿಪರ್ ||

ಮಾಲಿನಿ || ರಚಿತ ಚತುರುಪಾಯಪ್ರಾಪ್ತಸಪ್ತಾಂಗರಾಜ್ಯರ್
ನಿಚಿತ ಸುಗುಣ ಷಟ್ಕಸ್ತುತ್ಯ ರಾಜಪ್ರಪೂಜ್ಯರ್
ಪ್ರಚಲಿತರಿಪು ದುರ್ನಷ್ಟಪ್ರಾಪ್ತ ಷಡ್ವೈರಿವರ್ಗರ್
ಸುಚರಿತರುಪಕಾರರ್ ಕುಂಪಣೀಭೂಮಿಪಾಲರ್ ||

ಇಂತೊಪ್ಪುತಿರ್ಪುದುಂ ಮೈಸೂರರಮನೆ ಆಶ್ರಯದಿಂ ಪರಂಪರೆಯಾಗಿ ಬಂದ ವೈದ್ಯರಾದ ಅರಿಕುಠಾರದ ಜೈನವಿಪ್ರ ಭಾರದ್ವಾಜಗೋತ್ರದ ಸೂರಿಪಂಡಿತರ ಪುತ್ರ ಬೊಮ್ಮರಸಪಂಡಿತನಾತ್ಮಜಂ ಲಕ್ಷ್ಮೀಪತಿಪಂಡಿತಂ ಸುಗುಣ ಮಣಿಗಣಭೂಷಣನುಂ ನಯವಿನಯ ದಯದಾಕ್ಷಿಣ್ಯ ನೀತಿನಿಧಾನ ನಿಗರ್ವಶಿರೋಮಣಿಯನಿಸಿರ್ದನ್. ಆತನ ಭಾಗದೇಯಂ ಕಾಶ್ಯಪಗೋತ್ರ ಕೌಂಗೆರೆಯ ದ್ವಿಜಶ್ರೇಷ್ಠಂ ಪಾಲಕಾಡ ಮಾಣಿಕಪಟ್ಟಣದೊಳ್ ಮಾನ್ಯಂಬಡೆದಿರ್ದನಾ ವಂಶದೊಳೆ ಬ್ರಹ್ಮವೆಸರ ವಿಪ್ರಂಗಂ ಮಲೆಯೂರ ಬೊಮ್ಮರಸನ ಸುತೆ ವಿಜಯಮ್ಮನೆಂಬ ಧರ್ಮಪತ್ನಿಯಾಗಲವಳ ಗರ್ಭದೊಳು ಸೂರಯ್ಯಂ ಚೆಲುವಯ್ಯಂ ಭುಜಬಲಯ್ಯನೆಂಬ ಮೂವರ್ ಕುಮಾರರಾದರಲ್ಲಿ ಕಿರಿಯ ಭುಜಬಲಯ್ಯಂಗಂ ಆದಿರಾಜಪಂಡಿತ ಸುತೆಯುಪ್ಪ ಕಮಲಮ್ಮನಂ ಕೊಟ್ಟು ತಮ್ಮನ್ವಯಾಗತಮಾದರಿಕುಠಾರದೊಳ್ ನಿಲಿಸಿದೊಡಾ ದಂಪತಿಗಳ ಗರ್ಭದೊಳೆ ಸೂರಿ ಪಂಡಿತನೆಂಬ ಕುಲಭೂಷಣಂ ಪುಟ್ಟಿ ವಿದ್ಯಾವಿವೇಕ ಜ್ಞಾನ್ಮಗಳ್ವೆರಸಿ ಬೆಳೆದು ಯೌವನನಾಗೆ ಮಾತುಲಂ ಕರೆಯಿಸಿ ರಾಜಾಶ್ರಯದೊಳಿರಿಸೆ ಶ್ರೀಕೃಷ್ಣರಾಜಮಹಾರಾಜನ ಕಾರುಣ್ಯಾಮೃತಪಾತ್ರನಾಗಿ ಸತ್ಯಶೌಚ ಶೀಲಾಚಾರಸಂಪನ್ನನೆನಿಸಿದಂ

ಮಸ್ರ|| ವದನಂ ಚಂದ್ರೋದಯ ಶ್ರೀವಿಜಯಭುಜಬಲಂ ನಾಗರಾಜಪ್ರಸಾದಂ
ಹೃದಯಂ ಲಕ್ಷ್ಮೀವಿಲಾಸಂ ಪ್ರಬಲತರ ಮಹಾಚಂಡ ಭಾನುಪ್ರತಾಪಂ
ವಿದಿತ ಪ್ರಖ್ಯಾತ ಕೀರ್ತಿಸ್ಫುರಿತ ದಶದಿಶಂ ಸರ್ವರಕ್ಷೈಕದಕ್ಷಂ
ಬುಧಸೇವ್ಯಂ ಧರ್ಮಚಿತ್ತಂ ಪ್ರಥಿತ ಗುಣನಿಧಿಂ ಸೂರಿಸತ್ ಪಂಡಿತಾಖ್ಯಂ ||

ಇಂತಪ್ಪ ಸೂರಿಪಂಡಿತನೀ ರಾಜಾವಳಿಕಥೆಯಂ ಮಾಡಿಸಿದಂ. ಮತ್ತಂ ಕಥಕನ ವಂಶಾವಳಿಯೆಂತೆಂದೊಡೆ ಆದಿಬ್ರಹ್ಮತನೂಭವರಂತ್ಯಬ್ರಹ್ಮಸೃಷ್ಟಿ ಯಜನಾಧ್ಯಾಯ ಷಟ್ಕರ್ಮ ಕರ್ಮಠ ಧರ್ಮಕ್ರಿಯಾ ಕುತೂಹಲರನೇಕರ್ ಅತಿಕ್ರಾಂತರಾದಿಂ ಬಳಿಯ ಪಶ್ಚಿಮ ತೀರ್ಥಕರಿಂದಿತ್ತ ಸಮಂತಭದ್ರ ವಾದೀಭಸಿಂಹಸೂರಿ ವಾದಿರಾಜರಾದಿಂ ಬಳಿಕ ಶ್ರೀಗುಣಭದ್ರಯತಿಶಿಷ್ಯ ಶ್ರೀವತ್ಸಗೋತ್ರದ ಗೋಪಾಚಾರ್ಯಪುತ್ರ ಹಸ್ತಿಮಲ್ಲಿಷೇಣಸೂನು ಪಾರ್ಶ್ವಪಂಡಿತ ಚಂದಪಾರ್ಯವಂಶಜ ಚಂದ್ರನಾಥಂ ಕನಕಗಿರಿಯೊಳ್ ನಿಂತನಾ ವಂಶಪರಂಪರೆಯೊಳೆ ಮಧ್ಯಸ್ತ ಬ್ರಹ್ಮವಿಪ್ರತನೂಭವರ್ ನಾಲ್ವರವರೊಳೆ ಕಿರಿಯ ಶಾನುಭಾಗ ಬೊಮ್ಮರಸನಾತನ ಪುತ್ರಂ ವಿಜಯಪ್ಪಸೂನು ಬೊಮ್ಮರಸೋಪಾಧ್ಯಾಯರನ್ವಯಂ ವಿಜಯಾಪತ್ಯಂ ದೇವಯ್ಯನನುಜಂ ಅಂತಪ್ಪನಾತಂಗೆ ನಾಲ್ವರ್ ಕುಮಾರರಾಗೆ ಕಿರಿಯ ದೇವಚಂದ್ರನೈವರ್ ತನಯರೊಳು ಕಿರಿಯ ದೇವಯ್ಯನೆಂಬಂಗೆ ಬಾಚಹಳ್ಳಿ ಭಾರದ್ವಾಜಗೋತ್ರದ ಪುಟ್ಟುಪಾಧ್ಯಾಯಸುತೆ ಕುಸುಮಾಜಮ್ಮನೆಂಬಳು ಎರಡನೆಯ ವಿವಾಹಮಾಗಲಾಕೆಯ ಗರ್ಭದೊಳ್ ನಾಲ್ವರ್ ಕುಮಾರರಾಗೆ ದ್ವಿತೀಯಪುತ್ರನೈದನೆ ವರುಷದೊಳೆ ಕಾಲವಾಗಲುಳಿದ ಮೂವರು ದೀರ್ಘಾಯುಷ್ಯರಾಗಿ ಅನೇಕ ಶಾಸ್ತ್ರಾವಲೋಕನದಿಂ ಲೌಕಿಕ ಪಾರಮಾರ್ಥಿಕಮುಂ ತತ್ವ ನೀತಿ ವೈದ್ಯ ಜ್ಯೋತಿಷ ಮಂತ್ರವಾದಾದಿ ವಿದ್ಯಂಗಳಂ ಕಲ್ತು ಶಾಂತಿ ಸ್ಥೈರಣೆ ನಿಗರ್ವಮಂ ತಾಳಿ ಒಬ್ಬರನ್ನೊಬ್ಬರಗಲದೆ ಅತ್ಯಂತ ಪ್ರೀತಿಯೊಳತಿಸೌಜನ್ಯದಿಂದಿರ್ದರವರೊಳು ಜ್ಯೇಷ್ಠನಪ್ಪ ಚಂದಪಾರ್ಯ ಆಬಾಲ ಬ್ರಹ್ಮಚಾರಿ ಏಕಭುಕ್ತದಿಂದಾತ್ಮಧ್ಯಾನಶ್ರದ್ಧೆಯಿಂದಿಪ್ಪತ್ತುನಾಲ್ಕು ವರುಷಮಿರ್ದು ಶುಭಪರಿಣಾಮದೊಳೆ ಕಾಲಂಗಂಡಂ

ಮೂರನೆಯ ಪದ್ಮರಾಜನೆಂಬಂ ಸಕಲ ಕಲಾಕುಶಲಂ ಗೃಹಸ್ಥಾಚಾರ್ಯನಾಗಿ ಗಂಡು ಹೆಣ್ಣುಮಕ್ಕಳಂ ಪಡೆದು ಅನೇಕ ಗ್ರಂಥಂಗಳಂ ಮಾಡಿ ಪರೋಪಕಾರಿಯಾಗಿರ್ದು ಕಾಲಂಗಡಂ ನಾಲ್ಕನೆಯ ದೇವಚಂದ್ರನೆಂಬಂ ವಿಕೃತುವತ್ಸರದಾಷಾಢ ಶುದ್ಧ ಪೌರ್ಣಮಿಯೊಳ್ ಪುಟ್ಟಿ ಪದಿನಾಲ್ಕು ವರ್ಷಾರಭ್ಯದಿ ಕರಣಿಕಾಗ್ರಗಣ್ಯನೆನಿಸಿ ಕವಿ ಗಮಕ ವಾಗ್ಮಿತ್ವದಿಂ ಸಜ್ಜನನೆನಿಸಿಪ್ಪಿನ ರಕ್ತಾಕ್ಷಿಸಂವತ್ಸರಾಶ್ವಯುಜದೊಳು ಸೀಮೆ ಪೈಮಾಸಿಯಂ ಮಾಡಲ್ ಮಕಂಜಿಸರದಾರಂ ಲಕ್ಷ್ಮಣರಾಯಂವೆರಸು ಬಂದಲ್ಲಿ ಕನಕಗಿರಿಗೆ ಬಂದೆನ್ನಂ ಸ್ಥಳಪುರಾಣಮುಂಟೆ ಎಂದು ಕೇಳ್ವುದುಂ ನಾನು ಮಾಡಿದ ಪೂಜ್ಯಪಾದಚರಿತ್ರೆಯನ್ನೋದಿ ಪೇಳ್ವುದು ಎನ್ನಂ ಬಿಡದೆ ಕಮರಹಳ್ಳಿ ಬಳಿಯ ಒಡ್ಡಿರ್ದ ಗುಡಾರದ ಬಳಿಗೆ ಕರೆದುಕೊಂಡು ಪೋಗಿ ಪೂರ್ವದ ಕೆಲವು ಪ್ರಪಂಚುಗಳಂ ಮೂರು ರಾತ್ರಿ ಚೆನ್ನಾಗಿ ಲಾಲಿಸಿ ಕಳಿಲೆ ಮಹಿಸೂರುಪಟ್ಟಣ ಇಲವಾಲ ನಾಗವಾಲದವರಿಗು ಎರಡು

ತಿಂಗಳು ಪರ್ಯಂತರಂ ಬಿಡದೆ ದಿನ ಒಂದಕ್ಕೆ ಗ್ರಾಸಕ್ಕೆ ಒಂದು ಹಣಮಂ ಕೊಡುತ್ತ ರಾತ್ರಿಕಾಲದೊಳು ಪೂರ್ವದ ಪ್ರಪಂಚುಗಳಂ ಜಾತಿಭೇದಂಗಳು ಮೊದಲಾದ ವಿವರಗಳನೆಲ್ಲಮಂ ಕೇಳುತ್ತ ರಾಜ್ಯಸೀಮೆಗಳ ಚಕ್ರದಿಂದಳೆದು ವಿಂಗಡಿಸುತ್ತ ಗ್ರಾಮಾಧಿಗ್ರಾಮಂಗಳಿಗೆ ನಕ್ಷೆಯಂ ಬರೆಯಿಸಿ ಜಾತಿಕೋಮುವಾರು ಕುಳ ಮನೆ ಜನಜೀವನ ಮೊದಲಾದವಂ ಜಮಾಬಂದಿ ಮುಂತಾದವಂ ಬರೆಯಿಸಿಕೊಂಡು ನನ್ನನ್ನು ಬಿಡದೆ ಬಂಗಾಳಿಗೊಯ್ಯಲೆಂದು ಇಪ್ಪಿನ ನಾನಾ ಪ್ರಕಾರದಿಂ ಹೇಳಿಕೊಂಡದ್ದರಿಂದಲೂ ನಮ್ಮ ಧರ್ಮೋಪಾಧ್ಯಾಯರು ಬಂದದ್ದರಿಂದಲೂ ಪೂಜ್ಯಪಾದಚರಿತ್ರೆಯನ್ನು ತೆಗೆದುಕೊಂಡು ನಾನು ಪೂರ್ವದ ವೃತ್ತಾಂತಗಳನ್ನು ಪೇಳಿದುದು ಕಾಗದದ ವೈಯೊಳು ಬರೆಯಿಸಿಕೊಂಡು ಈ ಕರ್ನಾಟ ದೇಶದೊಳು ನಡೆದ ಪ್ರಪಂಚುಗಳನ್ನೆಲ್ಲಾ ಕ್ರೋಡೀಕರಿಸಿ ಬರೆದು ನಾವು ಇದ್ದಲ್ಲಿಗೆ ತೆಗೆದುಕೊಂಡು ತಿಂಗಳು ಒಳಗೆ ಬಂದರೆ ಭಾರಿ ಸಂಬಳವನ್ನು ಮಾಡಿಸಿಕೊಡುತ್ತೇವೆ ಎಂದು ಹೇಳಿ ಲಕ್ಷ್ಮಣರಾಯನ ಮಾರಿಫತ್ತು ಇಪ್ಪತ್ತೈದು ಕುಂಪಣಿ ರೂಪಾಯನ್ನು ಕೊಡಿಸಿ ಅಪ್ಪಣೆಕೊಟ್ಟು ಕಳುಹಿಸಿಕೊಟ್ಟನೆಂದು ಮೊದಲಾಗಿ ಈ ಕಥಾಸಂಗ್ರಹವಂ ಮಾಡುತ್ತಿಪ್ಪಿನ ಸರದಾರಂ ಬಹುದೂರಂ ಪೋದುದರಿಂ ಒಪ್ಪಿಸುವುದಕ್ಕಿಲ್ಲವಾಯಿತು. ಈವರಿಗೆ ನನ್ನಲ್ಪಮತಿಯಿಂದ ಸಂಗ್ರಹಿಸಿದ ಶಾಸ್ತ್ರಂಗಳು ಹದಿನಾಲ್ಕು ವರುಷದಿಂ ಪದ ಪದ್ಯಂಗಳಂ ತೊಡಗಿ ಪರೀಭಾವಿ ಸಂವತ್ಸರದೊಳು ಪೂಜ್ಯಪಾದ ಚರಿತ್ರೆಯನ್ನು ಪ್ರಾರಂಭಿಸಿ ಮಾಡಿದ ಕೃತಿಗಳು ಸುಮೇರು ಶತಕ, ಯಕ್ಷಗಾನ ರಾಮಕಥಾವತಾರ, ಭಕ್ತಿಸಾರ ಶತಕತ್ರಯ, ಶಾಸ್ತ್ರಸಾರ ಲಘುವೃತ್ತಿ, ಪ್ರವಚನ ಸಿದ್ಧಾಂತ, ದ್ರವ್ಯಸಂಗ್ರಹ ದ್ವಾದಶಾನುಪ್ರೇಕ್ಷೆ ಕಥೆ ಸಹಿತ ಧ್ಯಾನಸಾಮ್ರಾಜ್ಯ ಅಧ್ಯಾತ್ಮ ವಿಚಾರಾದಿ ಕರ್ನಾಟಕ ಸಂಸ್ಕೃತ ಬಾಲನುಡಿಯಿಂ ವಿರಚಿಸಿದೆನದರಿಂ ಪಾಪವಿಚ್ಛಿತ್ತಿ ಪುಣ್ಯಸಂಪಾದನ ದೊರೆ ಕೊಳ್ಳುಮೆಂದು ವಿರಚಿಸಿದೆಂ. ಅವರೊಳು ತಪ್ಪಿರ್ದೊಡೆ ತಿದ್ದಿ ಸತ್ಪುರುಷರು ಗ್ರಹಿಸಲೆಂದು ಪ್ರಾರ್ಥಿಸುವೆಂ.

ವ್ಯೋಮರ್ತು ಶೈಲಶಶಿರಕೆ
ಶ್ರೀಮದ್ವತ್ಸರ ವಿಳಂಬಿ ಚೈತ್ರದೊಳೀಕೃತಿ
ಭೂಮಿಗತಿಶಯದಿ ನೆಗಳ್ದುದು
ಸೋಮಾರ್ಕಸ್ಥಾಯಿಯಿರ್ಕೆ ರಾಜಾವಲಿಯುಂ

ಮತ್ತಂ ಸತ್ಪುರುಷರಾದ ವಿದ್ವಾಂಸರು ವಿಚಾರಿಸಿದ ಕಥಕನಂ ಪ್ರಶಂಸೆಗೆಯ್ದರೆಂತೆಂದೊಡೆ

ವೃತ್ತ || **ಜಯತಿ[ಜಿ]ನವರ್ಯೋ ದೇವಚಂದ್ರಾಖ್ಯವಿದ್ವಾನ್**
ಮಲಯಪುರಿನಿವಾಸೀ ಪಾರ್ಶ್ವನಾಥಸ್ಯ ಭಕ್ತಃ
ಸ್ವಜನ ಸುಹಿತಕಾರೀ ಸರ್ವ ಸಂತೋಷಭೂಮಿಃ
ನಿಖಿಲನಿಗಮವೇದೀ ಸರ್ವರಾಜಪ್ರಪೂಜ್ಯಃ ||

ಎಂದು ಶ್ರೀರಂಗಪಟ್ಟಣದ ರಾಮಶಾಸ್ತ್ರಿ ಎಂಬಂ ವ್ಯಾಕರಣತ್ರಯಮುಪನ್ಯಾಸ ಸಾಧನಂ ಬಂದಿರ್ದು ಪರೀಕ್ಷಿಸಿ ಶ್ಲೋಕಮಂ ಮಾಡಿದನಲ್ಲದೆ ನಂಜನಗೂಡ ಚಾಮರಾಜನಗರದ

ವಿದ್ವಾಂಸರಂ ಪರೀಕ್ಷಿಸಿ ಪ್ರಶಂಸೆಯಂ ಮಾಡಿ

ವೃತ್ತ || ಸಿದ್ಧಾಂತ ವೇದಾಂತ ವಿಚಾರದಕ್ಷಃ
ಸದ್ಧರ್ಮರಕ್ತಾತ್ಮವಿದಾಂತರಂಗಃ
ಶ್ರದ್ಧಾಪರಃ ಸಂತತ ಶುದ್ಧ ತತ್ವೇ
ಬುದ್ಧಿರ್ಜಯೋ ವೃದ್ಧಿಯುತಾಮರೇದುಃ ||

ಎಂದು ಪೇಳೆ ಆತ್ಮಸ್ತುತಿಗಳ್ಕಿ ನಾಂ ಪಾಪಿಷ್ಠನುಂ ಜಡಮತಿಯುಂ ದುರಾತ್ಮನುಂ ಲೋಭಿಯುಂ ಮಾಯಾವಿಯುಂ ಪ್ರಾಗ್ಜನ್ಮಕಷಾಯೋದಯದಿಂ ನಿರ್ಮಿಸಲ್ಪಟ್ಟ ದುಷ್ಕರ್ಮವುಂ ನಿಂದಾಪೂರ್ವಕಂ ಬಿಟ್ಟಪೆನೆಂದು ಸರ್ವಜ್ಞನುತಿಯಿಂದಾತ್ಮಪ್ರಶಂಸಾ ದೋಷಮಂ ಕಳೆದೆನ್ನಲ್ಪಮತಿಯೊಳೆ ರಚಿಸಿದ ಕೃತಿಗಳೆಲ್ಲಮನುಷ್ಟುಪ್ ಛಂದದೊಳ್ ಗಣಿಸಿದೊಡೀ ರಾಜಾವಳಿ ಸಹಿತಂ ಪಂಚವಿಂಶತಿ ಸಾಸಿರಮಕ್ಕುಂ

ಹಳಗನ್ನಡ ಬೆಳುಗನ್ನಡ
ವಳಗನ್ನಡ ಪಚ್ಚಗನ್ನಡಂಗಬ್ಬದೊಳುಂ
ತಿಳಿದೆಲ್ಲ ಮಿಶ್ರಮಾಗಿಯು
ಮಿಳೆಗರಿವಂದದೊಳೆ ಪೇಳ್ದೆ ರಾಜಾವಲಿಯಂ

ವೃತ್ತ || ಸ್ವಸ್ತಿಶ್ರೀ ಸುಖಸಿದ್ಧಿವೃದ್ಧಿ ವಿಭವಃ ಪ್ರಖ್ಯಾತಯಃ ಪೂಜ್ಯತಾ
ಕೀರ್ತಿಕ್ಷೇಮಮಗಣ್ಯಪುಣ್ಯಮಹಿಮಾ ದೀರ್ಘಾಯುರಾರೋಗ್ಯತಾ
ಸೌಭಾಗ್ಯಂ ಸುಖಸಂಪದಂ ವಿಜಯ ವೀರ್ಯಂ ಶಾಂತಿಕಾಂತಿ ಶ್ರೇಯೊಭೂ
ಯಾತ್ಸರ್ವತನೂಭೃತಾಮಿಹ ಸದಾ ಭದ್ರಂ ಶುಭಂ ಮಂಗಲಮ್ ||

ಇಂತೀ ಕಥೆಯಂ ಕೇಳ್ವರ
ಭ್ರಾಂತಿಯು ನೆರೆ ಕೆಟ್ಟು ಬಳಿಕಮಾಯುಂ ಶ್ರೀಯುಂ
ಸಂತಾನವೃದ್ಧಿಸಿದ್ಧಿಯು
ಸಂತತದೊರೆಕೊಳ್ಗು ಸ್ವರ್ಗಮೋಕ್ಷದ ಸುಖಮಂ

ಇದು ಸತ್ಯಪ್ರವಚನ ಕಾಲಪ್ರವರ್ತನ ಕರ್ನಾಟಕ ದೇಶಾಧಿಪ ವೃತ್ತಕಮಂ ಮಲೆಯೂರ ದೇವಚಂದ್ರಪಂಡಿತ ವಿರಚಿತ ರಾಜಾವಲಿ ಕಥಾಸಾರದೊಳ್ ಮಹಿಸೂರ ರಾಜಕುಲ ಜಾತಿ ವರ್ಣನಂ ಏಕದಶಾಧಿಕಾರಂ

ಏಕದಶಾಧಿಕಾರಂ

ದ್ವಾದಶಾಧಿಕಾರಂ

ಶ್ರೀ ಸುಜನಸ್ತುತರಖಿಳಕ
ಳಾಸನದರ್ ಮೋಹತಿಮಿರಮಂ ಕಳೆದು ಕರಂ
ಭಾಸುರ ವಿಚಾರದಕ್ಷರ್
ವೈಷಮ್ಯಮನುಳಿದು ಕೇಳ್ವುದೀ ಸತ್ಕೃತಿಯಂ

ಈ ಪ್ರಕಾರದೊಳು ರಾಜಾವಲಿ ಕಥೆಯನ್ನು ಸಂಗ್ರಹಿಸಿ ಹನ್ನೊಂದಧ್ಯಾಯವು ಮಹಾರಾಜಾಧಿರಾಜ ಮಹಿಸೂರ ಕೃಷ್ಣರಾಜ ಒಡೆಯರ್ಗೆ ಒಪ್ಪಿಸಲು ಮೂರು ನಾಲ್ಕು ವರುಷದಿಂ ಕೂಡಿಬರಲಿಲ್ಲಾ. ಈ ಪ್ಲವಸಂತವತ್ಸರದ ಆಶ್ವೀಜದೊಳು ಮಹಾಮಾತುಶ್ರೀ ದೇವೀರಾಂಬಿಕೆಯವರು ಮೊದಲಿಂ ಕಡೆವರೆಗೆ ಪರಾಂಬರಿಗೆ ಮಾಡಿದರೆಂತೆಂದೊಡೆ

ಶ್ರೀಯಂ ವಿತರಣದೊಳ್ ವಾಕ್
ಶ್ರೀಯಂ ಸೌಜನ್ಯವೃತ್ತಿಯೊಳ್ ದಿಗ್ವಿಜಯ
ಶ್ರೀಯಂ ಭುಜಬಲದೊಳ್ ಸ್ವ
ಶ್ರೀಯಂ ಸಮಂತಾಳ್ದ ಕೃಷ್ಣರಾಜನರೇಂದ್ರಂ (?)

ಅಂತು ಯಶಶ್ಚಂದ್ರಿಕೆಯಂ ದಿಗ್ಭಿತ್ತಿಯೊಳ್ ಪಸರಿಸಿ ರಾಜಾಧಿರಾಜ ರಾಜಪರಮೇಶ್ವರ ಶ್ರೀವೀರಪ್ರತಾಪ ಬಿರಿದೆಂತೆಂಬರಗಂಡನಾಖಂಡಲ ವೈಭವದಿಂ ಮಹಿಸೂರೊಳು ರತ್ನಸಿಂಹಾಸನಾರೂಢನಾಗಿ ಕೃಷ್ಣರಾಜೇಂದ್ರಂ ಪೃಥ್ವೀಸಾಮ್ರಾಜ್ಯಂಗೆಯ್ಯುತ್ತಿರಲಾ ಮಹಾಪ್ರಭುವಿನ ಮಹಾಮಾತುಶ್ರೀಯವರು

ಅತಿಶಯ ರೂಪಲಿ ರತಿ ಭಾ
ರತಿ ವಿದ್ಯದಿ ಸೊಬಗಿನಿಂದ ರೋಹಿಣಿಯೆನಿಸಿದ
ಪತಿಭಕ್ತೆ ಸಜ್ಜನಸ್ತುತೆ
ಮತಿಮಾನ್ವಿತೆ ಲೋಕದಾಂಬೆ ದೇವೀರಾಂಬೇ

ತಾರಾ ಮಂಡೋದರಿ ಸೀ
ತಾ ರೇವತಿ ಸುಪ್ರಭಾ ಯಶಸ್ವಿ ಸುನಂದಾ
ನಾರಿಯರ ಗುಣಮೆ ತಾ ದೇ
ವೀರಾಂಬೆಯ ದೇಹದೊಳಗೆ ನೆಲೆಯಾಗಿರ್ಪುದು

ರೂಪಿಗೆ ಗುಣಮಾಭರಣಂ
ರೂಪು ಗುಣಂಗಳಿಗೆ ಜ್ಞಾನ ತಾನಾಭರಣಂ

ರೂಪು ಗುಣ ಜ್ಞಾನ ಮೂರಕೆ
ತಾ ಪಿರಿದಾಭರಣ ಕ್ಷಮೆಯು ನೆಲೆಗೊಂಡಿಪ್ಪವು

ಆಚಾರ ಶೀಲ ನಿರ್ಮಲ
ಶ್ರೀ ಚೆಲುವಿಕೆ ಸತ್ಯವಾಣಿ ಸದ್ಗುಣಮಣಿಯುಂ
ಯಾಚಕಜನಚಿಂತಾಮಣಿ
ಭೂಚಕ್ರದಿ ಕೀರ್ತಿಬಿಂಬೆ ದೇವೀರಾಂಬೇ

ಚಾಮರಾಜೇಂದ್ರನೃಪಸತಿ
ಭಾಮಿನಿಯರಿಗಧಿಕ ಸುಗುಣೆ ಜ್ಞಾನಾಭರಣೇ
ಸೋಮೆ ಸದ್ಧರ್ಮವಾರ್ಧಿಗೆ
ಈ ಮಹಿಸೂರೀಶನಂಬೆ ದೇವೀರಾಂಬೇ

ಇಂತೀ ಸಕಲ ಸದ್ಗುಣಾಭರಣೆ ಲೋಕಮಾತೆ ಸಮ್ಯಕ್ತ್ವಚೂಡಾಮಣಿಯಪ್ಪ ದೇವೀರಾಂಬಿಕೆಯು ಈ ಸತ್ಯವಾಕ್ಯಮಾದ ರಾಜಾವಲಿ ಕಥಾಸಾರಮೆಲ್ಲಮಂ ಮೊದಲಿಂ ಕಡೆವರಂ ಚೆನ್ನಾಗಿ ಲಾಲಿಸಿ ಸಂತೋಷಂ ತಾಳ್ದು ಕಥಕಂಗೆ ಅತಿಶಯಮಾದ ವಸ್ತ್ರ ತಾಂಬೂಲಾದಿಗಳನ್ನಿತ್ತು ಮನ್ನಿಸಿ ಈ ಮಹಿಸೂರ ಮಹಾಪರಮೇಶ್ವರರುಗಳ ಅನ್ವಯ ಪರಂಪರೆಯುಮಿದರೊಳಿರ್ದುದಂ ತೆಗೆದು ಆ ವಂಶದಾಮೂಲ ಪರಂಪರೆಯಂ ವ್ಯಕ್ತ ಮಪ್ಪಂತು ಸಂಕ್ಷೇಪದಿಂ ಬೇರೆ ಬರೆದು ಒಪ್ಪಿಸುವುದೆಂದು ನಿರೂಪಿಸಲಾ ಪರಂಪರೆಯಂ ನಾಮಮಾತ್ರದಿಂ ಬರೆದೊಪ್ಪಿಸಿದೆನದೆಂತೆಂದೊಡೆ

ಬಲ ಗೋವಿಂದಾನತಪದ
ಜಲರುಹ ಯುಗ ನೇಮಿನಾಥಗಭಿವಂದಿಸಿ ಭೂ
ಲಲನೇಶರಾದ ಹರಿವಂ
ಶಲಲಾಮರ ವಂಶಪಂಕ್ತಿಯಂ ವಿರಚಿಸುವೆಂ

ಅದೆಂತೆಂದೊಡೀ ಜಂಬೂದ್ವೀಪದ ಭರತಕ್ಷೇತ್ರದ ಹುಂಡಾವಸರ್ಪಿಣಿಕಾಲಂ ದಶ ಕೋಟಾಕೋಟಿ ಸಾಗರೋಪಮದೊಳು ಒಂಭತ್ತು ಕೋಟಾಕೋಟಿ ಸಾಗರೋಪಮ ಕಾಲಂ ತ್ರಿವಿಧ ಭೋಗಭೂಮಿಗೆ ಸಲ್ವಿನಂ ಕಡೆಯೊಳು ಪಲ್ಯಾಷ್ಟಮ ಭಾಗೆಯೊಳೆ ಚತುರ್ದಶ ಮನುಗಳು ಪುಟ್ಟಿ ಕರ್ಮಭೂಮಿಸ್ಥಿತಿಯಂ ಪೇಳ್ದರ್. ತದನಂತರದೊಳು ಮತಿ ಶ್ರುತಾವಧಿಯೆಂಬ ತ್ರಿಜ್ಞಾನಧರನಾದ ಆದಿಬ್ರಹ್ಮನುದ್ಭವಿಸಿ ದೇಶವಿಭಾಗೆಯಂ ಕುಲಭೇದಮಂ ಜೀವನೋಪಾಯಮಪ್ಪ ಷಟ್ಕರ್ಮ ಮೊದಲಾದ ಸಕಲ ಪ್ರಪಂಚಮಂ ಕೃತಯುಗದಾದಿಯಾಗೆ ಪೇಳ್ದು ಚತುಃಷಷ್ಟಿ ಕಲೆಗಳಂ ತನ್ನ ಅನ್ವಯಜರೆಲ್ಲರ್ಗ ಮುಪದೇಶಂಗೆಯ್ದು ವರ್ಣತ್ರಯಮಂ ನಿಯಮಿಸುವಲ್ಲಿ ಕ್ಷತ್ರಿಯರಂ ಇಕ್ಷ್ವಾಕು ಹರಿ ವಂಶಮೆಂಬೆರಡಕ್ಕೆ ಸೂರ್ಯವಂಶಮೆಂದುಂ ಕುರುವಂಶಕ್ಕೆ ಸೋಮವಂಶಮೆಂದುಂ ಮತ್ತಂ ಉಗ್ರವಂಶಮಂ ನಾಥವಂಶಮೆಂದೀ ನಾಲ್ಕು

ವಂಶಮಂ ಪ್ರಕಟಿಸಿದಾತಂಗೆ ತ್ರಿಕಾಲಗೋಚರಮಪ್ಪ ಕೇವಲಜ್ಞಾನಂ ಪುಟ್ಟೆ ಸಮವಸರಣದೊಳು ಮೂವತ್ತು ನಾಲ್ಕತಿಶಯ ಅಷ್ಟಮಹಾಪ್ರಾತಿಹಾರ್ಯ ಸಮನ್ವಿತನಾಗಿ ತ್ರಿಲೋಕೇಶ್ವರನಪ್ಪ ಸರ್ವಜ್ಞನ ಮುಖಕಮಲದಿಂದಾ ಉದ್ಭವಿಸಿದ ಅಪೌರುಷೇಕ ಮಹಾವೇದ ಸಮುದ್ರದೊಳು ಚತುರನುಯೋಗಮಂ ಚತುರ್ದಶ ಪೂರ್ವೆಯುಂ ಪ್ರಕೀರ್ಣಕ ಶಾಸ್ತ್ರಮಂ ಸಹಿತವಾದ ದ್ವಾದಶಾಂಗ ಶ್ರುತಸಿದ್ಧಾಂತದೊಳೇಳನೆಯ ಅಂಗದೊಳು ಪೇಳ್ವ ಉಪವಾಸಕಾಚಾರ ಆರ್ಯ ಷಟ್ಕರ್ಮಗರ್ಭಾನ್ವಯ ದೀಕ್ಷಾನ್ವಯ ಕರ್ತನ್ವಯ ಭೇದಮುಂ ಕ್ರಿಯಾ ಮಂತ್ರ ತಂತ್ರ ವಿಧಿವಿಧಾನಂಗಳಂ ಕೇಳಿ ಅಂತ್ಯಬ್ರಹ್ಮಮಪ್ಪ ಪದಿನಾರನೆಯ ಮನು ಭರತೇಶ್ವರಂ ದಾನಮಂ ಕುಡಲು ಯೋಗ್ಯರಾಗಿರ್ದ ದ್ವಿಜರುಂ ಬರಿಸಿ ಉಪಾಸಕಾಚಾರಮಂ ಕೈಕೊಳಿಸಿ ಸಿದ್ಧಾಂತ ವೇದಶಾಸ್ತ್ರಮಂ ಕಲಿಸಿ ಪದ್ಮನಿಧಿಯಿಂ ಪವಿತ್ರಮಪ್ಪ ಯಜ್ಞಸೂತ್ರಮಂ ತರಿಸಿ ಅವರವರ ನೆರೆಯರಿತು ಸೂತ್ರಧಾರಮಂ ಮಾಡಿ ಲಿಂಗ ಚತುಷ್ಟಯಮಂ ಸ್ಥಾಪಿಸಿ ದೇದೀಪ್ಯ ವಸ್ತ್ರ ಷೋಡಶಾಭರಣಂಗಳಿಂ ಪೂಜಿಸಿ ಗ್ರಾಮ ಕ್ಷೇತ್ರ ಗೃಹ ಸುವರ್ಣ ಮೊದಲಾದ ದಾನಂಗಳಂ ಕೊಟ್ಟು ಪರಬ್ರಹ್ಮತನೂಭವರುಂ ದ್ವಿಜನ್ಮರುಂ ವರ್ಣೋತ್ತಮರುಂ ಚಾರಿತ್ರಶುದ್ಧರುಂ ಲೋಕವಂದ್ಯರುಂ ಜಗತ್ಪೂಜ್ಯರುಂ ಧರಾಮರರೀ ಬ್ರಾಹ್ಮಣರೆಂದು ಕೊಂಡುಕೊನೆದು ಪೊಗಳಿದಂ

ಆ ಕ್ಷತ್ರಿಯರೊಳು ಹರಿವಂಶದ ಹರಿಕೇತುವೆಂಬನಾತನ ಸಂತಾನಂ ಅರವತ್ತು ಲಕ್ಷ ಕೋಟಿ ಸಾಗರೋಪಮಂಬರಮವಿಚ್ಛಿನ್ನಮಾಗಿ ಬರ್ಪಿನಮಲ್ಲಿ ಸಿಂಹಸೇನರೆಂಬ ಮಹಾರಾಜಂ ಪುಟ್ಟಿ ನರಸಿಂಹನೆನಿಸಿದನಾತನ ಸಂತಾನಂ ನಾಲ್ವತ್ತೊಂಬತ್ತು ಲಕ್ಷಮುಂ ತೊಂಬತ್ತೊಂಬತ್ತು ಸಾಸಿರದೊಂಬೈನೂರ ತೊಂಬತ್ತೊಂಬತ್ತು ಕೋಟಿ ಸಾಗರಂ ಸಲ್ವಿನ ಶೀತಲತೀರ್ಥಸಂತಾನದೊಳೆ ಧರ್ಮಂ ಕೆಡಲಾ ಕಾಲದೊಳು ಬ್ರಾಹ್ಮಣರು ಕೆಲರು ಕಾಲದೋಷದಿಂ ಭೋಗಕಾಂಕ್ಷಿತರಾಗಿ ಮರೀಚಿ ರಚಿಸಿದ ಕಪಿಲಸಿದ್ಧಾಂತಮನವಲಂಬಿಸಿ ಕೆಲಂಬರು ಇಹದ ಸುಖಮನಾಪೇಕ್ಷಿತರಾಗಿ ಪ್ರಬಲ ವಿದ್ಯಾವಿಶಾರದರಪ್ಪುದರಿಂ ಶೂನ್ಯವಾದಮಂ ಪ್ರಕಟಂ ಮಾಡಿ ಬೌದ್ಧ ಚಾರ್ವಾಕಮತಮಂ ಪ್ರಕಟಿಸಿದರು. ಕೆಲಂಬರು ಸಾಂಖ್ಯ ಮೀಮಾಂಸಕ ವೈಶೇಷಿಕ ಮತಶಾಸ್ತ್ರಮಂ ವಿರಚಿಸಿದರ್. ಅಲ್ಲಿ ಮುಂಡಶಾಲಾಯನನೆಂಬ ಬ್ರಾಹ್ಮಣಂ ದಶದಾನಮಂ ಕಲ್ಪಿಸಿ ರಾಜನಂ ಮೆಚ್ಚಿಸಿದನಾಗ ಜೈನರಲ್ಲದೆ ಕೆಲಂಬರು ಇತರ ಮತಂಗಳಂ ನಂಬಿದರು. ಆ ಕಾಲದೊಳೆ ಹರಿವರ್ಷದ ಹರಿಪುರಾಧೀಶ್ವರ ಪವನಂಜಯವಿದ್ಯಾಧರಂಗೆ ಮೃಕಂಡುವೆಂಬಳ್ಗೆ ಮಾರ್ಕಂಡೇಯನೆಂಬ ವಿದ್ಯಾಧರಂ ತನ್ನ ಸತಿವೆರಸು ವನಕ್ರೀಡೆಯೊಳಿರೆ ಜನ್ಮಾಂತರ ವೈರಿಯಪ್ಪ ಚಿತ್ರಾಂಗದನೆಂಬ ದೇವಂ ಕೊಲಲ್ ಕೊಂಡು ಪೋಗುತ್ತಿರೆ ಸೂರ್ಯಪ್ರಭದೇವಂ ಮಾಣಿಸಿದೊಡೆ ಆ ಮಿಥುನಂಗಳಂ ಅಂಗದೇಶದ ಚಂಪಾಪುರದುದ್ಯಾನದೊಳು ಬಿಟ್ಟು ಪೋಗೆ ಆ ಪುರಾಧಿಪತಿ ಚಂದ್ರಕೀರ್ತಿಯೆಂಬನ ಪುತ್ರನಾಗಳಿಯಲು ಮತಂಗಜಮನರ್ಚಿಸಿದೊಡಾ ಮಿಥುನಂಗಳನೇರಿಸಿಕೊಂಡುಬರ್ಪುದು ಪೂರ್ವಾಪರದ ಸಂಬಂಧದಿಂ

ಹರಿಮಾರ್ಕಂಡೇಯನೆಂಬನ್ವರ್ಥಮಾಗೆ ಆತಂಗೆ ಹರಿಯೆಂಬ ಮಗಂ ಆತಂಗೆ ಮಹಾಹರಿಯೆಂಬಿವರನ್ವಯನೊಳು ಪದಿಮೂವರು ಅತಿಕ್ರಾಂತರಾಗೆ

ಇತ್ತಲು ರಾಜಗೃಹಪಟ್ಟಣದೊಳು ಸುಮಿತ್ರಮಹಾರಾಜಂಗಂ ಪದ್ಮಾವತಿ ಮಹಾದೇವಿಗಂ ಪುಟ್ಟಿದ ಮುನಿಸುವ್ರತಭಟ್ಟಾರಕಂ ತೀರ್ಥಂಕರನಾಗಿ ಧರ್ಮೋಪದೇಶಂಗೆಯ್ದು ಕರ್ಮವೈರಿಯಂ ಜಯಿಸಿ ಮುಕ್ತಿಗೆ ಸಂದಂ. ಅಲ್ಲಿಂದಿತ್ತ ಆ ವಂಶದೊಳು ಕುಣಿಕಮಹಾರಾಜಂ ಕುಂಡಿನಾಪುರಮಂ ಮಾಡಿಸಿದಂ. ಅವನ ಮಗಂ ಪುಲೋಮನುಂ ತತ್ಸೂನು ಪೌಲೋಮನುಂ ಆತನ ಮಗಂ ಚರಮನುಂ ರೇವಾತಟದೊಳು ವನಮಾಲಾಪುರಮಂ ಮಾಡಿಸಿದಂ. ಆತನ ಮೊಮ್ಮಗನಪ್ಪ ಮಹಿದತ್ತಂ ಕುಲ್ಯಮೆಂಬ ಪುರಮಂ ಮಾಡಿಸಿದಂ. ಆತನ ಮಗಂ ಅರಿಷ್ಟನೇಮಿಯುಂ ಮತ್ಸ್ಯರಾಜರೆಂಬೀರ್ವರು ಮತ್ಸ್ಯಪುರಮಂ ಭದ್ರಪುರಮಂ ಮಾಡಿಸಿದರು ಆತಂಗೆ ಅಯೋಧನಂ ಮೊದಲಾಗೆ ನೂರ್ವರು ಕುಮಾರರಾದರು. ಅಯೋಧಂಗೆ ಸ್ಥೂಲನುಂ ಸ್ಥೂಲಂಗೆ ವ್ಯಾಲಂ ವ್ಯಾಲಂಗೆ ಸೂರ್ಯನೆಂಬವಂ ಪುಟ್ಟಿ ಸೂರ್ಯಪುರಮಂ ಮಾಡಿಸಿದಂ. ಆತನ ಮಗಂ ಚರಮನೆಂಬಂ ವಜ್ರಪುರಮಂ ಮಾಡಿಸಿದಂ. ಆತನ ಮಗಂ ದೇವದತ್ತಂ ಯುದ್ಧದಿಂ ಮಿಥಿಲಾಪುರಮಂ ಕೊಂಡಂ. ಅಲ್ಲಿಂದಿತ್ತ ಆ ವಂಶದೊಳು ಹರಿಷೇಣನುಂ ನಭಷೇಣನುಂ ಸಾರಂಗನುಂ ಭದ್ರನುಂ ಅಭಿಚಂದ್ರನುಮೆಂದು ಕ್ರಮದಿಂದಾದರು. ಆ ಅಭಿಚಂದ್ರನು ಸೂಕ್ತಿಮತಿನದೀತೀರದೊಳು ಸ್ವಸ್ತಿಕಾವತಿಪುರಮಂ ಮಾಡಿಸಿದಂ. ಆತಂಗೆ ವಸುಮತಿಯೆಂಬಳ್ಗಂ ವಿಶ್ವಾವಸು ಎಂಬರಸನಾತಂಗೆ ವಸು ಎಂಬ ಮಗಂ ಪುಟ್ಟಿ ಕ್ಷೀರಕದಂಬನೆಂಬ ಮಹೋಪಾಧ್ಯಾಯನ ಸನ್ನಿಧಿಯಲ್ಲಿ ವಿದ್ಯಾಪಾರಗನಾಗಿ ರಾಜ್ಯದೊಳು ನಿಂದು ಸತ್ಯವಸುವೆನಿಸಿರ್ದು ಕ್ಷೀರಕದಂಬನ ಮಗನಪ್ಪ ಪರ್ವತಂಗೆ ಮಹಾಕಾಳಾಸುರದೇವಂ ಸಹಾಯನಾಗಿ ಕಾಲದೋಷದಿಂ ಹಿಂಸಾಯಜ್ಞಮಂ ಕಲ್ಪಿಸಿ ಮಾಡುತ್ತಿರ್ಪಿನಂ ನಾರದಪ್ರಭೃತಿಗಳು ವಾಗ್ವಾದಮಂ ಮಾಡೆ ಸತ್ಯವಸುವಂ ಸಾಕ್ಷೀಭೂತಮಂ ಮಾಡಿ ಬೆಸಗೊಳ್ವುದಂ ಸಂರಕ್ಷಣಾನಂದನೆಂಬ ರೌದ್ರಧ್ಯಾನದಿಂ ಹಿಂಸಾಯಜ್ಞಮಂ ಪರಮಾರ್ಥ ಮೆಂದು ನುಡಿಯೆ ಭೂಮಿ ಬಾಯಿದೆರೆದು ತದ್ವಿವರದೊಳೆ ನಿಮಗ್ನನಾದಂ. ಆ ವಸುವಿಂಗೆ ಹತ್ತು ಕುಮಾರರಿರ್ದರವರೊಳು ಅಷ್ಟವಸುಗಳು ತ್ರಿಮಾಸದೊಳೆ ಮೃತವಾಗೆ ಅಸತ್ಯಕ್ಕೆ ಅಳುಕಿಸುವ ಬೃಹದ್ವಸುಗಳೀರ್ವರು ರಾಜಗೃಹಮಂ ಸೇರಿದರು. ಅಲ್ಲಿ ಮಿಥಿಳೆಯಂ ಸೇರಿದ ಬೃಹದ್ವಸುವಿಗೆ ಸುಬಾಹುಯೆಂಬನಾತನ ವಂಶದಳು ದೀರ್ಘಬಾಹು ವಜ್ರಬಾಹು ಬಲಸ್ತನುಂ ಭಾನುವುಂ ಸುಭಾನುವುಂ ಭೀಮ ಮೊದಲಾದವರಾದರು. ಅಲ್ಲಿ ಪೃಥ್ವೀರಾಜನ ಸುತರಪ್ಪ ಜನಕನುಂ ಕನಕನುಂ ಪುಟ್ಟಿದರು. ಆ ಜನಕಂಗೆ ಪ್ರಭಾಮಂಡಲನುಂ ಸೀತಾದೇವಿಯೆಂಬ ಮಕ್ಕಳಾದರು. ಆ ಸೀತೆಯಂ ರಾಮಂಗೆ ಕೊಡುವಲ್ಲಿ ಭೌತಿಕರೆಲ್ಲಂ ಬಂದು ನಾನಾ ಪ್ರಕಾರದೊಳು ಕೇಳಿಕೊಂಡು ಯಜ್ಞಮಂ ಮಾಡಿದರು.

ಮತ್ತಂ ನಮಿತೀರ್ಥಸಂತಾನದೊಳು ಆ ಹರಿವಂಶದೊಳು ಯದು ಎಂಬರಸಂ ಪುಟ್ಟಿ ಪ್ರಸಿದ್ಧಿವಡೆದುದರಿಂದಾ ವಂಶಜರ್ಗೆ ಯಾದವರೆಂಬಭಿಧಾನಮಾಯ್ತು. ಯದು ವಿನ ಮಗಂ

ನರಪತಿಯೆಂಬನಾತಂಗೆ ಸೂರ ವೀರರೆಂಬೀರ್ವರ್ ಮಕ್ಕಳಾಗಲಾ ವೀರ ನೃಪಂ ಮಧುರಾಪುರದೊಳಿರ್ದಂ. ಆ ಸೂರಮಹಾರಾಜಂ ಶೌರಿಪುರಮಂ ಮಾಡಿಸಿದನಾತಂಗೆ ಅಂಧಕವೃಷ್ಟಿ ನರಪತಿವೃಷ್ಟಿಗಳಾದರು. ಆ ಅಂಧಕವೃಷ್ಟಿಗೆ ಸಮುದ್ರವಿಜಯಂ ಮೊದಲಾದ ದಶಕುಮಾ[ರರುಂ] ಕಿರಿಯ ವಸುದೇವನುಂ ಕುಂತಿ ಮಾದ್ರಿಯರು ಪುಟ್ಟಿದರು. ನರಪತಿವೃಷ್ಟಿಗೆ ವಜ್ರಬಾಹು ಮೊದಲಾದ ಪುತ್ರರಂ ಗಾಂಧಾರಿ ಮೊದಲಾದ ಪುತ್ರಿಯರುಂ ಪುಟ್ಟಿದರು. ರಾಜಗೃಹದೊಳಿರ್ದ ವೀರನೃಪಂಗೆ ಭೋಜವೃಷ್ಣಿ ಮೊದಲಾದವರಾಗಿ ಆ ಸಂತತಿಯೊಳು ಬೃಹದ್ರಥನೆಂಬನಾತಂಗೆ ಅರ್ಧಚಕ್ರಿಯಾದ ಜರಾಸಂಧನುಂ ಅಪರಾಜಿತರು ಮೊದಲಾದವರಾದರು. ಆ ಜರಾಸಂಧಂಗೆ ಕಾಳಿಂದಿಯೆಂಬ ಅರಸಿಯೆಂಬಳ್ಗೆ ಕಾಲಯಮಾದಿ ಪುತ್ರರುಂ ಜೀವಂಜಸೆ ಮೊದಲಾದ ಪುತ್ರಿಯರುಂ ಪುಟ್ಟಿದರ್.

ಇತ್ತಲ್ ಅಂಧಕವೃಷ್ಟಿಯ ಕಿರಿಯ ಕುಮಾರಂ ವಸುದೇವಂಗೆ ರೋಹಿಣಿಮಹಾ ದೇವಿಗಂ ಬಲಭದ್ರನುಂ ದೇವಕಿಮಹಾದೇವಿಗೆ ಕೃಷ್ಣನುಂ ಪುಟ್ಟಿ ಗೋಕುಲದೊಳ್ ಬೆಳೆದು ಅನೇಕ ಸತ್ವಯುತನಾಗಿ ಬಂದು ಕಂಸನಂ ವಧಿಯಿಸೆ ಜರಾಸಂಧನ ಕಾರಣಮಾಗಿ ಪುತ್ರಮಿತ್ರರ್ ಸಹಿತ ಸಮುದ್ರತಟಮನೆಯ್ದಿ ದರ್ಭಶಯನಮಂ ಮಾಡಿದೊಡೆ ದೇವೇಂದ್ರಂ ಬಂದು ತ್ರಿಲೋಕಸ್ವಾಮಿ ಪುಟ್ಟುವನೆಂದು ಸಮುದ್ರಮಧ್ಯದೊಳ್ ಸ್ಥಲಮಂ ಮಾಡಿ ಸೆಜ್ಜೆ ಪ್ರಾಸಾದ ಗೋಪುರಾಟ್ಟಾಳಕ ಮೊದಲಾದನೇಕ ಲಕ್ಷಣಮುಳ್ಳ ದ್ವಾರಾವತಿ ಪುರಮಂ ನಿರ್ಮಿಸೆ ಅಲ್ಲಿರ್ದು ಸಮುದ್ರವಿಜಯಮಹಾರಾಜಂಗಂ ಶಿವದೇವಿಮಹಾ ದೇವಿಗಂ ಗರ್ಭಾವತರಣಕಲ್ಯಾಣಪೂರ್ವಕಂ ನೇಮಿತೀರ್ಥಂಕರರ್ ಪುಟ್ಟಿ ಕೇವಲ ಜ್ಞಾನಮಂ ಪಡೆದು ಧರ್ಮಮಂ ಪೇಳಿ ಊರ್ಜಯಂತಗಿರಿಯೊಳ್ ಮೋಕ್ಷಲಕ್ಷ್ಮಿಯಂ ಕೈಕೊಂಡರ್. ಬಲನಾರಾಯಣರ್ ಜರಾಸಂಧಂ ಮೊದಲಾದನೇಕ ಶತ್ರುಗಳಂ ಜಯಿಸಿ ಕೃಷ್ಣನುಂ ತ್ರಿಖಂಡಾಧಿಪತಿಯಾಗಿ ಸಹಸ್ರಕಾಲಂ ಚಕ್ರವರ್ತಿತ್ವಮನನುಭವಿಸಿ ದ್ವಾರಾವತಿ ಪುರಂ ನೀರೊಳ್ ಪೋಗೆ ಕೆಲಂಬರ್ ಪುತ್ರಮಿತ್ರರ್ ಸಹಿತ ಶೌರಿಪುರ ರಾಜಗೃಹ ಮೊದಲಾದ ಪಟ್ಟಣದೊಳಿರ್ದು ತೀರ್ಥಕರಪುಣ್ಯಮಂ ಕಟ್ಟಿಕೊಂಡು ಪೋಗೆ ಅಲ್ಲಿಂದಿತ್ತ ವಿಶ್ವಸೇನನೆಂಬರಸಂ ಕಾಶೀಪಟ್ಟಣಮನಾಳುವಂದು ಬ್ರಾಹ್ಮಣರೊಳೆ ತಮತಮಗೆ ಸಂವಾದಮಾಗೆ ಎರಡು ಭಾಗಮಾಗಿ ಭೋಜನ ಪ್ರತಿಭೋಜನಮಂ ಕೊಳ್ಳದೆ ಎಂಬತ್ತೆರಡು ಭಾಗಮಾಯ್ತು. ಬಳಿಕಾ ಎಂಬತ್ತುನಾಲ್ಕು ಸಹಸ್ರ ವರ್ಷಂ ಸಲೆ ವರ್ಧಮಾನತೀರ್ಥಕರ ಕಾಲದೊಳ್ ಶ್ರೇಣಿಕಮಹಾಮಂಡಲೇಶ್ವರಂ ಪುಟ್ಟಿ ವಿಪರೀತ ಮಿಥ್ಯಾತ್ವಮಂ ತಾಳ್ದಿರ್ದು ಚೇಳಿನಿಮಹಾದೇವಿಯಿಂದಾ ಸಮ್ಯಕ್ತ್ವಂ ಪುಟ್ಟೆ ಶ್ರೋತೃ ಮುಖ್ಯನಾಗಿ ತೀರ್ಥಕರಪುಣ್ಯಮಂ ಕಟ್ಟಿಕೊಂಡಂ. ಆ ವಂಶದೊಳೆ ಸತ್ಯಂಧರ ಜೀವಂಧರ ಮಹೀಧರ ವೀರಭೋಜರೆಂಬರಸುಗಳಾದರ್. ಅವರೊಳ್ ವೀರರಾಮ ರಾಜನೆಂಬಂ ಪಾಂಡ್ಯದೇಶದ ದಕ್ಷಿಣ ಮಧುರೆಯೊಳ್ ಪಾಂಡುವಂಶಜನಪ್ಪ ಧರ್ಮ ಶೇಖರನೆಂಬಂ ನಿಸ್ಸಂತಾನಮಾಗೆ ಅಲ್ಲಿಗೆಯ್ದಿ ಕಿರೀಟಪತಿಯೆನಿಸಿ ರಾಜ್ಯಮಂ ಪಾಲಿಸುತ್ತಿರ್ದನವನ ಸಂತಾನದೊಳ್ ವೀರಪಾಂಡ್ಯ

ಕೂನಪಾಂಡ್ಯ ಬಲ್ಲಾಳರುದ್ಭವಿಸಿದರ್.

ಇತ್ತಲ್ ಉಜ್ಜಯಿನಿಪಟ್ಟಣದೊಳ್ ಗೋವಿಂದರಾಜನ ಪುತ್ರನಾದ ವಿಕ್ರಮಾದಿತ್ಯನೆಂಬ ರಾಜಂ ವೀರಸ್ವಾಮಿ ಮುಕ್ತರಾದ ೭೦೫ ವರ್ಷದಂದು ತನ್ನ ಶಕೆಯಂ ಬರೆಯಿಸಿದಂ. ಬಳಿಕ ನೂರಮೂವತ್ತಾರು ವರ್ಷ ಸಲ್ವಿನ ಮಾಘಣಂದಿಮುನಿಗಂ ಕುಲಾಲಸ್ತ್ರೀಗಂ ಪುಟ್ಟಿದ ಶಾಲೀವಾಹನ ಶಕರಾಜಂ ಬಹುಧಾನ್ಯಸಂವತ್ಸರಾರಭ್ಯ ತನ್ನ ಶಕೆಯಂ ಪ್ರಕಟಿಸಿದಂ. ಅಲ್ಲಿಂದಿತ್ತ ಯದುವಂಶದೊಳ್ ರಾಜಾದಿತ್ಯನಿಂಬಂ ಗಣಿತಶಾಸ್ತ್ರಮಂ ಕನ್ನಡದಿಂ ಮಾಡಿದಂ. ಭೂಪಾಲನೆಂಬರಸಂ ಭೂಪಾಲಸ್ತೋತ್ರಮಂ ಮಾಡದಂ. ಕೂನಪಾಂಡ್ಯನ ಪುತ್ರನಪ್ಪ ಹೊಯಿಸಳಬಲ್ಲಾಳಂ ರಾಜಮಲ್ಲನನುಜ್ಞೆಯಿಂ ದ್ವಾರಸಮುದ್ರದೊಳ್ ಬೀಡಂ ಮಾಡಿ ವಿನಯಾದಿತ್ಯಂ ಮೊದಲಾದ ಮಕ್ಕಳಂ ಪಡೆಯೆ ಆ ವಂಶದೊಳ್ ನವಬಲ್ಲಾಳರ್ ಸಾಳ್ವರಾಯರೆಂದಾದರ್. ಕಡೆಯ ವೀರಬಲ್ಲಾಳಂ ರಾಮಾನುಜನ ಶಿಷ್ಯನಾಗಿ ವೀರ ವೈಷ್ಣವನಾಗಿರ್ದು ಪಾದಶಾಯಿಯಿಂ ಚಂದ್ರದ್ರೋಣ ಪರ್ವತದ ಗುಹೆಯೊಳ್ ಮೃತನಾದನಾತನ ಮಕ್ಕಳ್ ಕೆಲಕೆಲವು ನಾಡೊಳಿರ್ದು ಪಾಲಿಸಿದರ್. ಚೋಳ ಬಲ್ಲಾಳಡಣಾಯಕರೆಂದಿವರ್ ಶಕವರ್ಷ ೭೫೦ ರಿಂ ತೊಡಗಿ ೧೧೦೦ ವರ್ಷ ಪರಿಯಂತರ ೩೫೦ ವರ್ಷ ಇವರಾಳಿಕೆ ಡಿಳ್ಳಿ ಪಾದಶಾಯನ ಬಗೆಯಲ್ಲು ವಿದ್ಯಾನಗರಿ ಸಂಬಂಧದಿಂದಲು ತೆಲುಗರಸುಗಳಿಂದಲೂ ನಡೆದು ವರ್ಷ ೩೦೦ ಅಪ್ಪರಲ್ಲಿ ಕರ್ಣಾಟ ದೇಶಕ್ಕೆ ೩ ವರ್ಷ ಬರಗಾಲಂ ಬಂದು ಕ್ಷಾಮಂ ಬಂದೊಡೆ ಕೆಲವು ಯದುವಂಶದರಸುಗಳ್ ಮೊದಲಾಗಿ ಅರಸುಗಳ್ ಶೆಟ್ಟಿಗಳ್ ಮುಂತಾದವರೆಲ್ಲಾ ವಿಜಯನಗರಮಂ ಸೇರಿದರ್. ಇಲ್ಲಿರ್ದರಸುಗಳ್ ಕೆಲರ್ ರಾಯರುಗಳೊಳ್ ಕೂಡಿದರ್. ಕೆಲಂಬರ್ ತೆಲುಗರಾದರ್. ಕೆಲಂಬರ್ ಕಿರಾತರುಗಳೊಳ್ ಕೂಡಿದರ್. ಕೆಲಂಬರ್ ರಾಯರ ಕೆಳಗೆ ಪ್ರಭುಗಳಾಗಿರ್ದರ್. ಶಕವರ್ಷ ೧೩೩೭ನೆ ಜಯಸಂವತ್ಸರಾರಭ್ಯ ಪರಾಭವ ಸಂವತ್ಸರದೊರೆಗೆ ವಿಜಯನಗರದಲ್ಲಿ ಕ್ಷಾಮ ಪುಟ್ಟಿ ಅವಾಂತರಂ ಪಿರಿದಾಗಲಲ್ಲಿರ್ದ ಅರಸುಗಳ್ ಶೆಟ್ಟಿಗಳ್ ಮುಂತಾದವರ್ ಬಂದು ಕರ್ಣಾಟಕ ಮೊದಲಾದ ದೇಶಂಗಳಂ ಸೇರಿದರ್.

ಅವರಲ್ಲಿ ಯದುವಂಶದರಸುಗಳ್ ಮೂವರ್ ಬಂದು ನುಗ್ಗೆಹಳ್ಳಿಯೊಳಿರ್ದರವರೊಳೆ ಕಿರಿಯ ವಿಜಯರಾಜನೆಂಬೊಂ ಮಹಿಸೂರ ಕುಂಭಕಾರಕೊಪ್ಪಿಲೊಳಿರ್ದ ಗೃಹಮಂ ಮಾಡಿರ್ದು ತೋಟ ಗದ್ದೆಗಳ ವ್ಯವಸಾಯದಿಂದಿರುತ್ತಮಲ್ಲಿರ್ದ ರೂಪವತಿಯಪ್ಪ ಕುಲಾಲಸ್ತ್ರೀಯನ್ನು ಪರಿಗ್ರಹಿಸಲವರ್ ಕೋಪಿಸಿರ್ದೊಡಲ್ಲಿರ್ದ ಐದು ಗ್ರಾಮಂಗಳಂ ಗುತ್ತಿಗೆ ಮಾಡಿಕೊಂಡಾಕೆಯಂ ಅರಸಿಯಂ ಮಾಡಿಕೊಂಡಿರಲಾಕೆಗೆ ಒಂದು ಪೆಣ್ಣೂಸು ಅತಿ ಸೌಂದರ್ಯದಿ ಪುಟ್ಟಲದಂ ಸಲಹುತ್ತಿರ್ದನಿವರೊಳೆಯರಸಂ ಕಾಲಮಂ ಕಾಣಲಾತನರಸಿ ಗ್ರಾಮಂಗಳಂ ಬಿಡನೆ ನಡಸುತ್ತಿರಲಲ್ಲಿ ತೊರೆಯರತಿಪ್ರಬಲಮಾಗಿಯಾ ಕನ್ನೆಯಂ ಬೇಡಲ್ ಮದುವೆಯಂ ಮಾಡಲೆಂದು ಯತ್ನಮಂ ಮಾಳ್ಪಾಗಲಾಕೆಯ ಸಖಿಯರ್ ಉದ್ವಿನಬೇಳೆಯಂ ತೊಳೆಯಲ್ ಗೊಬ್ಬಳಿಕಟ್ಟೆಕೆರೆಗೆ ಬಂದು ದುಃಖಂಗೆಯ್ಯುತ್ತಿರ್ಪಾಗಳ್ ಯದುವಂಶದ ವಿಷ್ಣುವರ್ಧನನ

ಸಂತತಿಯವರ್ ದೇವರಾಜ ತಿಮ್ಮರಾಜ ಶಾಂತರಾಜರೆಂಬ ಮೂವರ್ ಬಂದರವರೊಳ್ ತಿಮ್ಮರಾಜಂ ದನಗನಹಳ್ಳಿಯೊಳ್ ನಿಂತನುಮುಳಿದೀರ್ವರ್ ಕಪ್ಪಡಿಯಂ ಸೇರಿರ್ದು ಜಂಗಮವೇಷಧಾರಿಗಳಾಗಿ ರಾಜ್ಯ ನಿರೀಕ್ಷಣಾರ್ಥಂ ಬಂದು ಮಹಿಷಾಪುರದ ಕೆರೆಯ ಏರಿಯ ಮೇಲಿರ್ದು ಅಳುತ್ತಿರ್ಪ ಆಳಿಯರಿಂ ಮದುವೆ ವೃತ್ತಾಂತಮಂ ಕೇಳಿ ಪುರದೊಳಗಂ ಪೊಕ್ಕು ಉಪಾಯಾಂತರದೊಳೆ ಕೋಣೆಕೊತ್ತಲೆಯಾಗಿ ಚಪ್ಪರಮಂ ನಿರ್ಮಿಸಿ ಖಾತಂಗಳಂ ಮಾಡಿ ಒಬ್ಬರಿಬ್ಬರ್ ಮೂವರಂ ಬರಿಸಿ ಪರಿಹರಿಸುತ್ತಿರಲ್ ಉಳಿದವರೆಲ್ಲಂ ಓಡಿಪೋಪುದು ತಾವೆ ಪ್ರಭುಗಳಾದರ್. ಅವರೊಳ್ ಶಾಂತರಾಜನೆಂಬಂ ಅಣ್ಣನೊಳ್ ವಿರೋಧವಾಗಿ ಕಾರುಗೆಹಳ್ಳಿಯೊಳ್ ನಿಂತು ಕೆಲವು ಗ್ರಾಮಂಗಳಂ ಸ್ವಾಧೀನಂ ಮಾಡಿಕೊಂಡಿರ್ದಂ. ಇತ್ತ ದೇವರಾಜಂ ಮೈಸೂರಿಗೆ ಸ್ವಲ್ಪ ಕೆಲವು ಗ್ರಾಮಂಗಳಂ ಸ್ವಾಧೀನಕ್ಕೆ ತಂದು ಮಲಯೂರ ಜೈನಬ್ರಾಹ್ಮಣ ಶಾಂತಯ್ಯ ಪದುಮಣ್ಣಯ್ಯರೆಂಬೀರ್ವರಂ ಅಧ್ಯಕ್ಷರಂ ಮಾಡಿ ಹುಲ್ಲನಹಳ್ಳಿಯ ರಾಜಪುತ್ರಿಯಪ್ಪ ಕೃಷ್ಣಾಜಮ್ಮಣ್ಣಿಯಂ ಮದುವೆನಿಂದು ಬೆಟ್ಟದೊಳ್ ಮುನ್ನ ತಮ್ಮ ವಂಶದ ಬಲ್ಲಾಳರ್ಗೆ ವರಪ್ರಸನ್ನೆಯಾದ ಪದ್ಮಾವತಿದೇವಿಗೆ ವಾಸಂತಿಕಾದೇವಿಯೆಂದು ಪೂಜಿಸುತ್ತಿರ್ದರ್. ಆ ಮಹಾದೇವಿಗೆ ಚಾಮುಂಡೇಶ್ವರಿಯೆಂಬ ಅಭಿದಾನಮನಿಟ್ಟು ಬೆಟ್ಟದೊಳ್ ಗುಡಿ ಗೋಪುರಮಂ ಮಾಡಿಸಿ ಪೂಜಿಸುತ್ತ ಮೈಸೂರಿಗೆ ಕೋಟೆಯಂ ಕಟ್ಟಿಸಿ ಸುಖಮಿರಲ್ ಇತ್ತ ಕಾರುಗೆಹಳ್ಳಿಯ ಶಾಂತೊಡೆಯರ್ ಆ ಬೆಟ್ಟದ ಮೇಲೆ ಮಹಾಬಲೇಶ್ವರನ ಗುಡಿಯಂ ನಿರ್ಮಿಸಿ ಚಾಮುಂಡೇಶ್ವರಿಯಂ ಸ್ಥಾಪಿಸಿದಂ.

ಇತ್ತಲ್ ಕೆಲವಾನುದಿವಸದಿಂ ಮಾರನಾಯಕನೆಂಬ ತೊರೆಯನತಿಪ್ರಬಲನಾಗಿ ತನ್ನ ಜನಮಂ ಕೂಡಿಕೊಂಡು ಮೈಸೂರ ದೇವರಾಜಒಡೆಯನಂ ಕೊಲಲ್ ಬಪ್ಪುದು ಶಾಂತಯ್ಯಂ ತಡೆಯಲಾಗಿ ಶಾಂತಯ್ಯನಂ ಅರಸನಂ ಸಹಿತಂ ಕೊಂದು ಅರಮನೆಯೊಳಿರ್ದಖಿಲರಂ ಪರಿಹರಿಸುವಲ್ಲಿ ರಾಜನರಸಿಯು ಗರ್ಭಿಣಿಯಾಗಿರ್ದು ಭೀತಿಯಿಂ ಪಾಸಿನ ಮರೆಯೊಳ್ ಕದವಂ ಮರೆಗೊಂಡು ಮೈಗರೆದಿರ್ಪಿನಮಾ ರಾತ್ರಿಯೊಳ್ ಪದುಮಣ್ಣಯ್ಯಂ ಅರಮನೆ ಬಾಗಿಲಿಗೆ ಬಂದು ದುಃಖಿಸುತ್ತಿರ್ಪಿನಬಳೆಯ ಧ್ವನಿಯಂ ಕೇಳ್ದು ಅರಸಿಯಂ ಕಂಡು ವಿಕೃತವೇಷದಿಂ ತನ್ನ ಗೃಹಕ್ಕೆಯ್ದಿರ್ದು ಮರುದಿವಸಂ ನಾಯಕನಂ ಕಂಡು ತನ್ನಗ್ರಜಂಗುತ್ತರಕ್ರಿಯೆಯಂ ಮಾಡಲ್ ಏಚಗನಹಳ್ಳಿಗೆ ಪೋಪುದಕ್ಕೆ ಮೂರು ಜನಕ್ಕೆ ಬಾಗಿಲ್ಗಪ್ಪಣೆಯಂ ಮಾಡಿಸಿಕೊಂಡು ಪೋಗಲಿತ್ತಲ್ ರಣವಂ ಶೋಧಿಸುವಲ್ಲಿ ಅರಸಿಯ ಪೆಣನಂ ಕಾಣದೆ ಪದುಮಣ್ಣಯ್ಯಂ ಕರೆದೊಯ್ದನೆಂದು ತೀಕ್ಷ್ಣ ಪುರುಷರನಟ್ಟಿ ಕೊಲ್ವುದೆಂದು ಪೇಳೆಯವರ್ ಬಂದು ದೈವಾಯತ್ತದಿಂ ಕೊಲುವುದಂ ಬಿಟ್ಟು ಈತನಿಂ ತಪ್ಪಿಲ್ಲವೆಂದು ಪೋದರ್. ಇತ್ತಲ್ ಅರಸಿಯಂ ತೌರುಮನೆಗೆಯ್ದಿಸಲಲ್ಲಿ ನವಮಾಸಂ ನೆರೆದು ರಾಜಒಡೆಯರ್ ಪುಟ್ಟಿದರ್.

ಆತನು ಬಾಲ್ಯಕಾಲದೊಳೆ ತನ್ನ ರಾಜ್ಯಮಂ ಕೊಳ್ಳಲ್ ಬೆಟ್ಟದಪುರ ಪಿರಿಯಾಪಟ್ಟಣ ಮುಂತಾದರಸುಗಳ ಬಲಮಂ ಸಹಾಯಂ ಮಾಡಿಕೊಂಡು ಪದ್ಮಣ್ಣಯ್ಯಂ ಮೈಸೂರ ಹಳೆಪೈಕದ ಜನರೆಲ್ಲರನೊಳಗುಮಾಡಿಕೊಂಡು ಅವವೇಳೆಯ ಹೊತ್ತಿನೊಳ್ ಮೈಸೂರಂ ಮುತ್ತಿ ಶಾಂತಯ್ಯನ

ಮಗನಾದ ದೊಡ್ಡಶಾಂತಯ್ಯನ ಪ್ರೇರಣೆಯಿಂ ಬೀಗದಕ್ಕೆಯನೊಪ್ಪಿಸೆ ಕೋಂಟೆಯಂ ಕೊಂಡು ಮಾರನಾಯಕನಂ ಕಡೆಗಾಣಿಸಿ ರಾಜ್ಯದೊಳ್ ನಿಂದು ಮೈಸೂರಿಗೆ ಸಲುವ ಮೂವತ್ತುಮೂರು ಹಳ್ಳಿಗಧೀಶನಾಗಿ ದೊಡ್ಡಶಾಂತಯ್ಯನಂ ಮುಂದುಮಾಡಿಕೊಂಡು ಶ್ರೀರಂಗಾರಾಯರಿಂದಾ ಶ್ರೀರಂಗಪಟ್ಟಣಮಂ ಪಡೆದು ವೈಷ್ಣವಭಕ್ತನಾಗಿ ಶ್ರೀರಂಗಪಟ್ಟಣದೊಳಿರ್ದ ಆತನ ಕುಮಾರರ್ ಬೆಟ್ಟೊಡೆಯ ಚಾವೊಡೆಯರೆಂಬೀರ್ವರೊಳು ಚಾವೊಡೆಯರು ಕೆಂಚನಗೂಡು ದನಿಗನಹಳ್ಳಿಯೊಳು ನಿಂತು ಸಂತಾನಾಭಿವೃದ್ಧಿಯಂ ಪಡೆದರ್. ಹಿರಿಯ ಬೆಟ್ಟೊಡೆಯರು ಮೈಸೂರೊಳಿದ್ದು ಬೆಟ್ಟದಕೋಟೆಯ ರಾಜಪುತ್ರಿ ಗೋಪಾಜಮ್ಮನೆಂಬವಳಂ ಮದುವೆ ನಿಂದು ತಿಮ್ಮರಾಜ ಒಡೆಯರಂ ಪಡೆದರ್. ಆ ತಿಮ್ಮರಾಜಒಡೆಯರ್ಗೆ ಕಳಲೆ ಕಾಂತಾಜಮ್ಮಣ್ಣಿ ಸತಿಯಾಗಲವರ್ಗೆ ಹಿರಿಯಚಾಮ ರಾಮರಾಜಒಡೆಯರು ಪುಟ್ಟಿದರ್.

ಇತ್ತಲ್ ರಾಜಒಡೆಯರು ಶ್ರೀರಂಗಪಟ್ಟಣಕ್ಕೆ ಅಧೀಶರಾಗಿರ್ದು ಕಾಲಂಗಂಡೊಡೆ ರಾಮರಾಯನೆಂಬಂ ಪಟ್ಟಣಮಂ ಕೊಂಡು ಮೈಸೂರಿಗೆ ಸಲ್ವ ಹಳ್ಳಿಯೊಳ್ ಹತ್ತು ಹಳ್ಳಿಯ ತನ್ನ ವಶಮಂ ಮಾಡಿಕೊಂಡನು. ಇತ್ತಲ್ ಮಹಿಸೂರೊಳು ಹಿರಿಯ ಆರುವೆರಳ ಚಾಮರಸ ಒಡೆಯರ್ಗೆ ಬಿಳುಕೆರೆಯ ದೇವರಾಜನ ಸುತೆ ಪದ್ಮಾಜಮ್ಮನೆಂಬವಳರಸಿಯಾಗೆ ಅವರ್ಗೆ ಚಾಮರಾಸಒಡೆಯರ್ ಪುಟ್ಟಿದರ್. ಅವರ್ಗೆ ಕೋಟೆ ಅರಸಿನ ಕುಮಾರತಿ ಅಳಕಾಜಮ್ಮನೆಂಬವಳು ಸತಿಯಾದಳು. ಅವರ ಗರ್ಭದೊಳ್ ತಿಮ್ಮರಾಜ ಕೃಷ್ಣರಾಜ ಬೋಳಚಾಮರಾಜರೆಂಬ ಮೂವರರಸುಗಳಾದರಾ ತಿಮ್ಮರಾಜಂ ಯಮ್ಮನಳಿಯೊಳು ಕೃಷ್ಣರಾಜಂಗೆ ಕೆಂಬಲ್ಲು ಬೆಟ್ಟದರೆ ಚಾಮರಾಜಂಗೆ ಮಹಿಸೂರು ಈ ಮೇರೆಯೊಳಿರಲಾ ತಿಮ್ಮರಾಜಂ ಸಿಂಧುವಳ್ಳಿಯ ದೊರೆಯಂ ರಕ್ಷಿಸಿ ಹುಣಸನಾಳ ಪ್ರಭುಗಳಂ ಕೂಡಿಕೊಂಡು ನಂಜನಗೂಡ ಜಾತ್ರೆಗೆ ಹೋಗಿ ಬಿರುದಂತೆಂಬರ ಗಂಡನೆಂಬ ಬಿರುದಂ ಪೊಗಳಿಸಿಕೊಳ್ಳುತ್ತಿರೆ ನಾಡರಸುಗಳೆಲ್ಲರ್ ಕೂಡಿ ದೊಂಬೀಜಗಳವಂ ಮಾಡೆ ಮುನ್ನೂರಾಳುಗಳಿಂದ ಎಲ್ಲಾ ನಾಡರಸುಗಳಂ ಜಯಿಸಿ ಬಿರುದಂ ಪ್ರಸಿದ್ಧಿಯಂ ಮಾಡಿ ಉಮ್ಮತ್ತೂರರಸುಗಳಂ ವಶಂ ಮಾಡಿ ಮೋಸಗಾರನೆನಿಸಿದಂ. ಆತನ ಅನುಜಂ ಕೃಷ್ಣರಾಜಂ ಹಲವು ನಾಡ ಪ್ರಭುಗಳಂ ಗೆಲ್ದು ಪ್ರತಾಪಶೀಲನೆನಿಸಿದಂ ಆತನಿಂ ಕಿರಿಯ ಚಾಮರಾಜನೆಂಬವಂ ಅಶನಿಪಾತದೊಳೆ ತಲೆಯ ನವಿರು ಪೋಗಿ ಜಯಿಸಿದುದರಿಂ ಬೋಳಚಾಮರಸ ಒಡೆಯರೆಂಬನ್ವರ್ಥಮಾಯಿತು. ಆತಂಗೆ ಮರಸೆ ರಾಜಕಮಾರತಿ ವೀರಾಜಮ್ಮನುಂ ಕೋಟೆ ಅರಸಿನ ಪುತ್ರಿ ದೇವಾಜಮ್ಮನುಮೆಂಬ ಈರ್ವರರಸಿಯರಾಗೆ ಆ ವೀರಾಜಮ್ಮಂಗೆ ರಾಜನೃಪನುಂ ಬೆಟ್ಟದ ರಾಜರೆಂಬೀರ್ವರ್ ಕಮಾರರ್ ದೇವಾಜಮ್ಮಣ್ಣಿಗೆ ದೇವರಾಜನುಂ ಚನ್ನರಾಜನುಮೆಂಬೀರ್ವರ್ ಮಕ್ಕಳಾಗೆ ಅಂತು ನಾಲ್ವರ್ ಕಾಮಧೇನುವಿನ ಸ್ತನಗಳಂತೆ ರಾಜ್ಯಮಂ ಪ್ರತಿಪಾಲಿಸುತ್ತಿರ್ದರ್.

ಆ ರಾಜನೃಪಂಗೆ ಬೆಟ್ಟದಕೋಟೆ ರಾಜಪುತ್ರಿಗೆ ನರಸರಾಜನಂ ಇಮ್ಮಡಿರಾಜರೆಂಬ ತನಯರಾಗಿರೆ ಕೆಲವು ನಾಡುಗಳಂ ವಶಂ ಮಾಡಿ ಕಾರುಗೆಹಳ್ಳಿ ವಿಜಯರಾಜನಂ ಮೂಗನರಿದು ಆತನ ಪುರಮಂ ಕೊಂಡು ಕಡವೆಯ ನಾಡರಸುಗಳಂ ಭಂಗಿಸಿ

ಸುಖಮಿರ್ಪಿನಮಿತ್ತಲ್ ಉತ್ತರದೇಶದ ತುಂಗಭದ್ರಾತಟದೊಳ್ ರಾಜಿಸುತ್ತಿಪ್ಪ ವಿದ್ಯಾನಗರಿಯನಾಳ್ವ ಹರಿಹರ ವೀರಬುಕ್ಕರ್ ಮೊದಲಾದ ಕುರುಂಬರಾಯರಿಂದಿತ್ತ ಲಾಳ ಕುಳಾಧೀಶ್ವರ ವೀರನರಸಿಂಹ ನರಸ ಕೃಷ್ಣಾಚ್ಯುತ ರಾಮರಾಯರೆಂಬೈವರ ತರುವಾಯ ಎಳೆವರೆಯದ ಸದಾಶಿವರಾಯನಾಳ್ದನಾತನ ಸೇನಾಪತಿ ಆಂಧ್ರಕುಲದ ರಾಮರಾಜಂಗೆ ದ್ರಾವಿಡಾಂಧ್ರ ಕರ್ಣಾಟರಾಜ್ಯಮಂ ಕುಡಲಾತಂ ಪತಿಕಾರ್ಯದೊಳಪ್ರತಿಮನಾಗಿಯೊರ್ಮೆಯುತ್ತರ ದಿಗ್ವಿಜಯದೊಳ್ ಉದ್ವೃತ್ತ ಯಮನಂ ಸೇನಾಚಕ್ರಮನೊಕ್ಕಲಿಕ್ಕಿದೊಡಂದಿನಾಜಿಯೊಳಾಳ್ದನನುಜಂ ತಿಮ್ಮರಾಜನಳಿದೊಡುಳಿದರನೊಡ ಗೊಂಡೂರ್ಗೆ ನಡೆತಂದಾಳ್ದನ ಸಿರಿಗೆಳಸಿ ಯಮನಂ ಭಂಗಿಸಿ ತಾನೆ ರಾಯನೆನಿಸಿರ್ದನಾ ವಿದ್ಯಾನಗರಂ ಕಿರಿದು ದಿನದೊಳೆ ತುರುಷ್ಕರಿಂದಳಿದಡಲ್ಲಿಂ ಪೆನಗುಂಡಿಗೆಯ್ತಂದೊಂದೆರಡು ವರುಷಮಿರ್ದು ಹೊಂದಿ ಪೋಪಾಗಳ್ ತನ್ನ ಮೂವರ್ ಕುಮಾರರೊಳ್ ಪಿರಿಯನಪ್ಪ ಶ್ರೀರಂಗರಾಯನಂ ಪೆನಗುಂಡಿಯೊಳಿರಿಸಿ ತೆಲುಂಗನಾಡೊಡೆತನಮಂ ರಾಮರಾಯಂಗಿತ್ತಾತಂಗೆ ಕರ್ಣಾಟದೇಶಾಧಿಪತ್ಯಮನಿತ್ತು ಶ್ರೀರಂಗಪಟ್ಟೋಣದೊಳಿರಿಸಿ ಮೂರನೆ ವೆಂಕಟಪತಿರಾಯನಂ ಚಂದಿರಗಿರಿಯೊಳಿಟ್ಟಾತಂಗೆ ಚೋಳ ಪಾಂಡ್ಯ ತೊಂಡಿರ ಮಂಡಳೇಶ್ವರತ್ವಮನಿತ್ತನವರೊಳ್ ಶ್ರೀರಂಗರಾಯನ ಪುತ್ರನಾಗಳಿಯಲ್ ವೆಂಕಟಪತಿ ರಾಯನಾಳುತಿರ್ದನ್. ಇತ್ತಲ್ ರಾಮರಾಜಂ ಕೆಲದಿವಸದಿಂ ಕಾಲಂಗಂಡೊಡಾತನ ಸುತಂ ತಿರುಮಲರಾಜನಾದಿಯಾಗಿ ಶ್ರೀರಂಗಪಟ್ಟಣದೊಳಿರ್ದು ಮಟ್ಟಿವೆಂಕಟಯ್ಯನೆಂಬ ದಳವಾಯಿಯನಿರಿಸಿ ತಾವು ಎಳೆಯವರಾದುದರಿಂ ಪೆನಗುಂಡಿಗೆಯ್ದಿ ತಮ್ಮ ಕಿರಿಯೆಯ್ಯನಲ್ಲಿ ಬೆಳೆಯುತ್ತಿರಲಿತ್ತ ವೆಂಕಟಪತಿರಾಯಂ ಮಧುರೆಯ ವೀರಪ್ಪನಾಯಕನ ಮೇಲೆತ್ತಿನಡೆದು ಮುತ್ತಿದೊಡಾ ವೀರಪ್ಪನಾಯಕಂ ಭೇದೋಪಾಯಮನವಲಂಬಿಸೆ ರಾಯನ ಸೇನಾನಾಯಕರ್ಗೆಲ್ಲಂ ದ್ರವ್ಯ ವಸ್ತ್ರ ಭೂಷಣಾದಿಗಳಂ ಕಳುಹಿಸಿದೊಡಾ ಲಂಚಕ್ಕಂ ತಿರುಮಲರಾಯನೊಡಂಬಟ್ಟು ಕಾರ್ಯಮಂ ಬಿಟ್ಟುದಕ್ಕೆ ತನ್ನಾಳ್ದ ಕಿರಿ ಯಯ್ಯನೊಳ್ಗಂಟುಗೊಂಡು ತನ್ನ ಕರಿ ತುರಗ ಪದಾತಿಗಳ್ವೆರಸಿ ಶ್ರೀರಂಗಪಟ್ಟಣಕ್ಕೆ ಬಂದೊಡಾ ವಾರ್ತೆಯಂ ಮಹಿಸೂರ ರಾಜನೃಪಂ ಕೇಳ್ದು ತನ್ನನುಜ ಸೇನಾನಿ ಮಿತ್ರರೊಳಾಳೋಚಿಸಿ ಈತನೆಮ್ಮ ಪಿತೃಘಾತಕನಿವನಂ ಪಟ್ಟಣದಿಂ ಪೊರಮಡಿಸಲಕ್ಕುಮೆಂದಾತನ ಸಪ್ತಾಂಗಸತ್ವಮನಾರಯ್ಯಲ್ ಗೂಢಚರರನಟ್ಟಲವರ್ ಪೋಗಿ ಕತಿಪಯದಿಸಮಿರ್ದಾತನ ಜೂಜು ಬೇಂಟೆ ಮೊದಲಾದ ವ್ಯಸನದೇಳ್ಗೆಯಂ ಸಾಮಂತರ ಪಾಪಚರ್ಯೆಮಂ ಅಧಿಕಾರಿಗಳುಗ್ರ ಗ್ರಾಮಾನುಗ್ರಾಮದ ಪ್ರಜೆಗಳ್ಗೆ ಸಿದ್ಧಾಯಮಂ ಪೆರ್ಚಿಸಿ ಕಾಣಿಕೆ ಕಡ್ಡಾಯ ವರಿವಟ್ಟಮನೆತ್ತಿ ಕೆಡಿಸುತ್ತಿಪ್ಪುದುಂ ಮೊದಲಾದ ಭೋಗಂಗಳ ಚಿಂತೆಯಿಂ ಮತ್ತರಾಗಿರ್ಪರೆಂದಾತನ ಸತ್ವಮಂ ತಿಳಿದು ಗೂಢಚರರ್ ಪೇಳೆ ರಾಜನೃಪನವನ ಮೇಲೆತ್ತಿಪೋಗಲುದ್ಯುಕ್ತನಾಗಿ ತನ್ನ ನಾಡರಸು ಗಳಂ ಬರಿಸುತ್ತಿರಲಿತ್ತ ತಿರುಮಲರಾಯನೊಡ್ಡೋಲಗದೊಳಿರಲಾ ನಾಡಿನ ಅಖಿಲ ಪ್ರಭುಗಳೊಟ್ಟುಗೂಡಿ ಬಂದೆರಗಿ

ಮಹಿಸೂರವರುಟ್ಟುಳಿ ಪಿರಿದಾಗಿಪ್ಪುದೆಂದು ಗಲಭೆಯಿಂ ಕೋಲಾಹಲಂ ಮಾಡುತ್ತಿರಲಾ ಕಲಕಲಮಂ ಮಾಣಿಸಿ ಓರ್ರೋರ್ವರ್ ಪೇಳಿಮೆನೆ ಕಾರುಗೆಹಳ್ಳಿಯವನಿದಿರೊಳ್ ಕೈಮುಗಿದಿಂತೆಂದಂ

ದೇವಾ ನಮ್ಮ ಪೊಳಲ್ಗೆ ಕೇರಿಗಳಾರುಮುವನೆನ್ನೊಡಹುಟ್ಟಿದಾರು ಜನಂಗಳ್ ಪಂಚುಗೊಂಡಿರ್ದವೆಮುಗಾ ರಾಜನೃಪನೊಳ್ ಪಗೆತನಂ ಬಂದುದರಿಂದೆಡೆವಿಡದೆ ಕಾದುವಾಗಲೆನ್ನೊಡಹುಟ್ಟಿದರೈವರ್ ಮಡಿದರದಕ್ಕಾನತಿಕೋಪದಿಂದೆನ್ನನುಜರನಳಿದ ವೀರಭಟನ ನೆತ್ತಿಯನೊತ್ತಿ ಕತ್ತಿಯಿಂ ಕತ್ತರಿಸಿ ಪುತ್ತದೊಳಿಕ್ಕದೊಡೆನ್ನ ನಾಡುಂ ಬೀಡುಮನೊಪ್ಪಿಸಿ ಕಪ್ಪಟಮನುಟ್ಟು ಕಪ್ಪರೆವಿಡಿದು ಜೋಗಿಯಾಗಿ ಪೋಪೆನೆಂದು ಪ್ರತಿಜ್ಞೆಗೆಯ್ದು ಕಳಿಪಲಾತಂ ತನ್ನೆಡಗಯ್ಯ ಚಮಡೆಯಿಂ ಮೂಗನರಿಯದೊಡಾಂ ವೀರನಲ್ಲೆಂದು ಪೇಳಿ ಬೆಳಗಿನಾಹವದೊಳೀರ್ವರುಂ ವಾರಣಮನೇರಿ ರಾವುತತನದ ಬಿನ್ನಾಣಮುಂ ತೋರಲೆಂದು ನಡೆಯಿಪುದು ಕುಣಿಯಿಪುದು ಪಾಯಿಪುದು ಸುತ್ತಿಪುದು ತೊಲಗಿಪುದುಮವ್ವಳಿಪುದು ತರುಬುವುದುಮೆಂದಿವು ಮೊದಲಾದ ಗತಿಭೇದಂಗಳಿಂದಿನಿಸು ಪೊತ್ತುಗಳೆಯುತ್ತಮಾನುಂ ಕತ್ತಿಯಿಂ ನೆತ್ತಿಯಂ ಪೊಯ್ಯಲೊಡನಾತಂ ತನ್ನ ಬಲಗಯ್ಯಲಗಿನಿಂ ತಡೆದೆಡಗಯ್ಯ ಚಮ್ಮಟಿಯಿಂ ಎನ್ನ ಮೊಗಮಂ ಪೊಯ್ದೊಡೆನ್ನ ಮೂಗುಂ ಪರಿದುಪೋಗಲ್ ಮುನ್ನಾಡಿದ ಪಂಥಮನೆತ್ತಾನುಂ ಮಗುಳ್ಚುವೆನೆಂದಿಪ್ಪಿನ ಮಾತನೆನ್ನೂರಂ ಲಗ್ಗೆಯೇರಿ ಎನ್ನಂ ಪೊರಮಡಿಸಿ ಕೋಂಟೆಯಂ ಕೆಡಪಿ ಸರ್ವಸ್ವಮಂ ಕೊಂಡನಾಂ ಪೊಗಲೆಡೆಯಿಲ್ಲದೆ ಚಿಂತಿಸುತ್ತಿರ್ದೀಗಳೆನ್ನ ಭಾಗ್ಯೋದಯದಿಂ ನಿಮ್ಮಂ ಕಂಡೆನೆಂದು ತನ್ನ ಮೊಗದ ಮೈಯ ಬಾಸುಳಂ ತೋರಿ ಪೆರಸಾರ್ವುದುಂ ಕನ್ನಂಬಾಡಿಯವನೆದ್ದು ಕೈಮುಗಿದೆಂದಂ

ದೇವರಾಯ ವಜೀರರೊಳ್ ಜಗದೇವರಾಯರಸನಗ್ಗಳನೆಂಬುದು ಚಿತ್ತಕ್ಕೆ ವೇದ್ಯಮೈಸೆಯವನ ಗಡಿ ಕೋಂಟೆಗಳೆಮ್ಮ ನೆರೆಯೊಳಿಪ್ಪವವರೊಳ್ ಪೊಸ ಪೊಳಲಂ ಮೋಸದಿಂ ಕೊಳ್ಳಲೆಂದಾ ರಾಜನೃಪನೆಮ್ಮೊಳ್ ಸ್ನೇಹವಂ ಬೆರಸೆಮ್ಮ ನೆರೆಯೊಳ್ ನಡೆದಾ ಕೋಂಟೆಯಂ ಬೆಸಂಗೆಯ್ದನದಕ್ಕೆನ್ನ ಕುವರನಾತನ ಪ್ರಭು ಮಂತ್ರೋತ್ಸಾಹಶಕ್ತಿಯಂ ಭೃತ್ಯರ ಭಕ್ತಿಯಂ ಅನುಜರ ಸೌಜನ್ಯ ಸೌಶೀಲ್ಯಂಗಳಂ ಕುವರರ ಕೂರ್ಮೆ ಪೆರ್ಮೆಗಳಂ ದೈವದೊಲಮಂ ಕಂಡು ಕಾಣದಂತೆ ಕೆಣಕುಜಗಳದೊಳಿರಿಯಲವರಂ ಪಿಡಿದು ಕಟ್ಟಿಬಿಟ್ಟೆಂ ನೆರೆಯೂರೆಂಬ ಬೂಕನಕೆರೆಯಂ ಕೊಂಡದಕ್ಕೆ ಸ್ವಲ್ಪ ಹಳ್ಳಿಗಳಂ ತಿರುಕುಳಿ ಪಾರ್ವಗಿತ್ತಡವರೆನ್ನ ದಾಯಿಗರಾಗಿಪ್ಪರಿಂದು ನಾಳೆಯೊಳಾನಿಪ್ಪೂರಂ ಕೊಳ್ಳದೆ ಮಾಣನದರಿಂದೆನಗೆ ನೀನೇ ಗತಿಯೆಂದು ಪೇಳಿ ಪೆರಸಾರ್ವುದು ತಳಕಾಡವಂ ಕೈಮುಗಿದಿಂತೆಂದಂ

ದೇವಾ ಅವಧಾರಿಪುದಾ ಜಯದೇವರಾಯರಸಿನ ಪಡೆವಳರೊಳ್ ಮೊದಲಿಗನು ಬಲ್ಮೆಯನುಮಾದಧಟರಾಯನರಕೆರೆಯಂ ಬಲ್ಮೆಯೊಳ್ ಕೊಂಡವನ ಭಂಡಾರಮಂ ಸೂರೆಗೊಂಡದರಿಂ ಪೊರವಳೆಯದ ಕಲ್ಮ ಪಾಗರಂ ಕಟ್ಟಿಸಿದಂ. ಬಳಿಕಿನ್ನಿರವರೀಯಧಟರಾಯನ ದುಬೋಧನೆಯಿಂದರಕೆರೆಯ ನಾಡೊಳತಿಹೊಯ್ಲನೆಸಗುತ್ತಿಪ್ಪಾ ರಾಜ ನೃಪನೆನ್ನ ಬನ್ನೂರಂ ಕೊಂಡನಾ ರೋಷದಿಂದಾ ಪೆರ್ವಡೆವೆರಸಿ ಒಡ್ಡಿದೊಡೆನ್ನ ಬಲಮಂ ಲೆಕ್ಕಿಸದೆ ಸೊಕ್ಕಾನೆಯ

ಮೊಕ್ಕಳಮಂ ಪೊಕ್ಕು ಪಾಯ್ದು ಪೊಯ್ದಾಯ್ದು ಸಿಂಗದಂತೆ ಪೆರ್ವೆಟ್ಟಿನ ತಟ್ಟಿನೊಳ್ ನಟ್ಟುತಟ್ಟುಚ್ಚಲೆರಗುವ ಬರಸಿಡಿಲಂತೆ ಕಟ್ಟುಗ್ರದೊಳ್ ತುರುಬಿ ತರುಬಿ ಕೈಯಿಟ್ಟು ಪರುಂಬಳೆ ಪಂಡಿನಾಳ ಸಬಳ ಮೊದಲಾದನೇಕಾಯುಧಂಗಳಿಂ ಕೊಂಡು ಕೊರೆದಿರಿದರಿದು ನಾಂಟಿ ಅವುಂಕಿ ಕತ್ತರಿಸಿ ಉತ್ತರಿಸಿ ಕೊಯ್ದು ಕೋಟಲೆಗೊಳಿಸಿ ಪೊಕ್ಕೊಕ್ಕಲಿಕ್ಕಿ ಕೆಲರಂ ಸೆರೆವಿಡಿದು ಭಯಂಬಡಿಸಿ ಬಳಿನೀರ್ಗುಡಿಸಿ ಬವಣೆಬರಿಸಿದನದಂ ಪೇಳ್ವಡೆ ಎದೆಯೊಳಳಲುಂ ಮೆಯ್ಯೊಳ್ ನಡುಕಮುಂ ನುಡಿಯೊಳ್ ತಡಬಡಮಪ್ಪುದಾತನಂ ಗೆಲ್ವಡೆ ಮನುಷ್ಯಂಗಳವಲ್ಲೆಂದು ಕೊನೆಯುತ್ತಿರ್ಪರಾದೊಡಾತನಂ ಸದೆವುದಕ್ಕಿದು ವೇಳೆ ಈ ನೆರೆದರಸುಗಳ ಬಲಸಹಿತಂ ಸನ್ನದ್ಧರಂ ಮಾಳ್ಪುದೀ ರಾಯಗಬ್ಬದೊಳಾಂ ಪಡೆವಳನಪ್ಪೆನೆನಗಪ್ಪಣೆ ವೀಳ್ಯಮಂ ದಯಗೈವುದೆಂದು ಮಣಿದು ಪೋಪಿನಮಮಚವಾಡಿಯನೆದ್ದು ಕೈಜೋಡಿಸಿಕೊಂಡಿಂತೆಂದಂ

ದೇವಾ ಈ ತಳಕಾಡ ನಂಜರಾಜಂ ಪಾದಕ್ಕರಿಕೆಯಂ ಮಾಳ್ಪುದೆಂದಿಂತೆಂದು ಮಹಿಸೂರವಂಗೆ ದೈವಬಲ ಬೆಂಬಲಮಾಗಿಪ್ಪುದದರಿಂದಂ ಸೋಲ್ವನಲ್ಲ. ಕಳಲೆ ಬೆಳುಗುಲಿ ಬೆಳುಕೆರೆ ಹುರ ಹುಲ್ಲನಹಳ್ಳಿ ಮೂಗೂರು ಮೊದಲಾರಸುಗಳೆಲ್ಲರವಂಗೆ ಪೆಣ್ಗಳನಿತ್ತು ಕಪ್ಪಮಂ ತೆತ್ತು ಬಾಳ್ವರಾದೊಡಮಿನ್ನುಪೇಕ್ಷಿಸಲ್ತಕ್ಕುದಲ್ಲೆಂದು ಬಿನ್ನವಿಸಿದ ನಿನ್ನ ಪಡವಳತನಮಂ ನಂಜರಾಜಂಗಿತ್ತು ಎಲ್ಲರ ಬಲಮಂ ಸನ್ನಾಹಂಬೆರಸೊಡನಪ್ಪುದೆಂದು ನಿಯಮಿಸಿ ಸುತ್ತಣರಸುಗಳ್ಗೆಲ್ಲಂ ರಾಯಸಮನಟ್ಟಿ ಕರೆಸಲಕ್ಕುಮೆಂದು ಪೇಳ್ದೊಡಂತೆ ಸನ್ನಾಹಂ ಮಾಡಿರ್ಪಿನಮಿತ್ತಲ್ ರಾಜನೃಪನಾತನ ಮನಮಂ ನೋಡಲೆಂದು ಪೆರ್ಗಡೆಗಳ ಕಳುಹಿಸಲವರ್ ಬಂದು ಪಟ್ಟಣದುಪವನದೊಳಿರ್ಪಿನಂ ರಾಯಂ ಕೇಳ್ದು ಕರೆಯಿಸಿದೊಡವನಂ ಕಂಡು ಕಾಣ್ಕೆಗೊಟ್ಟು ಕುಳ್ಳಿರ್ಪಿನ ನೃಪನ ಕ್ಷೇಮ ವಾರ್ತೆಯಂ ಬೆಸಗೊಂಡೊಡೆಮ್ಮರಸಂ ಪರಿಣಾಮದೊಳಿಪ್ಪಂ ದೇವರಿಲ್ಲಿಗೈತಂದುದಕ್ಕೆ ತಮ್ಮ ಕುಶಲಮಂ ತಿಳಿಯಲ್ ಪಾಗುಡಮಂ ಕೊಟ್ಟೆನ್ನನಟ್ಟಿದನೆಂಬುದುಮವಂ ಕೊಂಡು ಸಂತಸದಿಂ ತಮ್ಮೆಮ್ಮ ನೇಹಂ ಬೆಳೆವುದಕ್ಕಿದು ನಾಂದಿಯೆಂದುಪಚರಿಸಿ ಬೀಡಾರಕ್ಕೆ ಕಳುಪಿ ಮತ್ತೊಂದು ದಿನಂ ರಹಸ್ಯದಿಂದೊಳವೋಲಗಕ್ಕೆ ಕರೆದಿಷ್ಟಾಲಾಪಂಗೆಯ್ದನಂತರಂ ನಿಮ್ಮಾಳ್ದನವತರಿಸಿದ ವಂಶಮೆಂತು ಆಚಾರಮೆಂತು ಅನುಜ ತನುಜರೆಂತು ದೇಶ ಕೋಶ ಬಲಂಗಳೆಂತೆಂತೆಂದು ಬೆಸಗೊಳೆ ಅವನೆಂದಂ ನಮ್ಮಾಳ್ದನ ವಂಶವಂ ಮಹಿಸೂರ ಕರಣಿಕನಿಂ ಕೇಳಿರ್ಪೆನೆಂತೆಂದೊಡೆ ಪೂರ್ವದೊಳ್ ಯದುಕುಲಾಗ್ರಗಣ್ಯರಪ್ಪ ಬಲನಾರಾಯಣರ ಪರಂಪರೆಯಿಂ ಬಂದು ಕೆಲಂಬರ್ ಪಾಂಡ್ಯ ಚೋಳ ಬಲ್ಲಾಳರಾದರಲ್ಲಿ ಕಡೆಯ ಬಲ್ಲಾಳಂ ವಿಷ್ಣುವರ್ಧನರಾಯನೆಂಬಭಿಧಾನದಿಂದಾ ವಂಶಶಾಖೆಯೊಳುಪಶಾಖೆ ಬೆಳೆದು ಬರೆ ಅವರೊಳ್ ಕೆಲಂಬರ್ ವಿಜಯನಗರಮಂ ಪೊಕ್ಕುಬಂದು ಮಹಿಸೂರೊಳ್ ನಿಂತ ದೇವರಾಜಸುತಂ ಮಹಿಸೂರಿಗೆ ಸಲ್ವ ಇಪ್ಪತ್ತುಮೂರು ಹಳ್ಳಿಗೆ ಪ್ರಭುವಾದ ರಾಜಒಡೆಯಂಗೆ ಸಂತಾನಂ ಬೆಳೆದವರೊಳ್ ಚಾಮರಾಜನೆಂಬ ನಾತನ ಮಕ್ಕಳ್ ತಿಮ್ಮರಾಜ ಕೃಷ್ಣರಾಜ ಚಾಮರಾಜರೆಂಬ ಮೂವರ್ ಕುಮಾರರವರೊಳ್ ಕಿರಿಯ ಚಾಮರಾಜಂಗೆ ರಾಜನೃಪಂ ಬೆಟ್ಟದ ಚಾಮರಾಜ ದೇವರಾಜ ಚೆನ್ನರಾಜರೆಂಬ ನಾಲ್ವರವರೊಳ್

ಜ್ಯೇಷ್ಠನಪ್ಪ ರಾಜನೃಪತಿ ಬಾಲ್ಯದೊಳೆ ಶಾಸ್ತ್ರ ಶಸ್ತ್ರ ಮೊದಲಾದವಂ ಕಲ್ತು ಯವ್ವನದೊಳ್ ದಿಗ್ವಿಜಯೋದ್ಯೋಗದಿಂ ಷಡ್ಗುಣ್ಯಚಿಂತನ ಪ್ರಜಾಪಾಲನ ಕಂಟಕ ಶೋಧನಾದಿಗಳಂ ವಿಕ್ರಮಭುಜಪ್ರತಾಪನೆನಿಸಿಪ್ಪನಾತಂಗೆ ನರಸರಾಜ ಇಮ್ಮಡಿರಾಜರೆಂಬ ಕುಮಾರರುದಿಸಿದರಿಂತು ಅನುಜ ತನುಜರ್ವೆರಸನ್ಯೋನ್ಯದಿಂ ಮಹಿಸೂರಿಗೆ ಸಲ್ವ ಇಪ್ಪತ್ತುಮೂರು ಮರವಳ್ಳಿಯೊಳೆತ್ತಿಬಪ್ಪ ಮೂರು ಸಾಸಿರ ಪೊನ್ನಂ ಮುನ್ನೂರಾಳ್ಗೆ ಪಂಚುಗೊಟ್ಟು ಎಡಬಲದ ಮನ್ನೆಯರಿಂ ಬಪ್ಪ ಕಪ್ಪಕಾಣಿಕೆಗಳಿಂ ಮನೆವಾರ್ತೆ ದಾನ ಧರ್ಮ ಮೊದಲಾದುವಂ ಮಾಳ್ಪರಲ್ಲದೆ ಇದಿರಾದವರನೊಕ್ಕಲಿಕ್ಕಿ ದೇವರ್ಗಂ ಬ್ರಾಹ್ಮಣರ್ಗಂ ಸತ್ರಕ್ಕಂ ಚಾಗಂಗೆಯ್ವನೆಂದು ಪೇಳೆ ಇಂತಪ್ಪ ಪುಣ್ಯಪುರುಷನಂ ಕಂಡು ಕೆಳೆಗೊಂಡು ಸ್ನೇಹಂಬೆರಸಿರ್ಪುದಕ್ಕಾನೆ ಬಪ್ಪುದಕ್ಕುಂ ಬೇಗಂ ಕಳುಹಿಸುವುದೆಂದುಡುಗೊರೆ ವೀಳೆಯಮನಿತ್ತು ಕಳುಹಿಸಲವಂ ಬಂದಾ ವಾರ್ತೆಯಂ ರಾಜನೃಪಂಗರುಪಿ ಮನದೆಗೊಂಡಿರ್ಪಿನಮಿತ್ತಲ್ ರಾಯಂ ಮತ್ತೊಂದು ದಿನ ತನ್ನ ನಾಡವರಂ ಸಾಮಾಜಿಕರುಮಂ ಕರೆಯಿಸಿ ಮಹಿಸೂರವರೊಳ್ ನಂಟಂ ಪಡೆಯಲಕ್ಕುಮೆ ಪೇಳಿಮೆನೆಯುವರುಪಟಳದಿ ನೊಂದು ಬೆಂದಿಪ್ಪೆವಾತನಂ ಕೂಡುವುದು ಒಡಲೊಳ್ ಸಲಾಕಿಯಂ ಪಾಸಿನೊಳ್ ಪಾವಂ ಮನೆಯೊಳ್ ಮಾರಿಯನೂರೊಳ್ ಪುಲಿಯಂ ಪುಗಿಸಿ ಬಾಳ್ವಂತಕ್ಕುಮೀ ಮಹಿಸೂರವನ ನೆರೆಯ ಬಾಳ್ಕೆ ಪಾವಿನ ಪೆಡೆಯ ನೆಳಲನಾಶ್ರೈಸುವ ಕಪ್ಪೆಯಂತಕ್ಕುಮದರಿಂ ಎತ್ತಾನುಮಾತನ ನಿಲ್ಲಿಗೆಯಿತಂದೊಡಂ ಬಂಧಿಸುವುದು ಅಲ್ಲದೊಡೆತ್ತಿಪೋಗಿ ಪಿಡಿತಪ್ಪುದೆ ಕಾರ್ಯಮೆನೆ ಆ ಮಹಾನವಮಿ ಒಸಗೆಯ ನೇಮದಿಂ ನಾಡರಸರ್ಗೆಲ್ಲಂ ಬಳಿಯನಟ್ಟಿ ಬಲವಂ ಸನ್ನಾಹಂ ಮಾಡಿ ಬರಿಸುವುದೆನಲಂತೆ ಬರಿಸೆ ಮುಂಗಾರೊಳ್ ಮೋಹರಮಾಗಿ ಬರ್ಪ ಮುಗಿಲೊಡ್ಡಿನಂತೆಯುಂ ಮಳೆಯೊಳ್ ತುಂಬಿ ಬರ್ಪ ಪೆರ್ದೊರೆಗಳಂತೆಯುಂ ದೆಸೆದೆಸೆಯಿಂ ನಡೆದುಬರ್ಪ ಸೇನೆಗಳೂರ ಮುಂದಣ ಬಯಲೊಳು ಪೊಳೆಯ ತಡಿಯೊಳು ತೋಪುಗಳೊಳಮಿಳಿದಿರ್ಪಿನಮುಮಂ ಲಾವಣಗೊಳಲೆಂದೊರ್ವ ಲೆಕ್ಕಿಗನಂ ಬೆಸಸಿಯುಪ್ಪರಿಕಿಯನೇರಿ ನೋಡುತ್ತಿರ್ದೊಡವಂ ಬಂದು ದೇವಬಳ್ಳಾಪುರ ಕೊಲಾಳ ಪುಂಗನೂರ್ ಮಾಗಡಿ ಬೆಂಗಳೂರ್ ಮೊದಲಾದ ಮೊರಸುನಾಡ ಮೊಹರದೊಳಿಪ್ಪತ್ತಾನೆ ಇಚ್ಛಾಸಿರ ಕುದುರೆ ಇಪ್ಪತ್ತು ಸಾಸಿರಾಳ್ಗಳುಂ ತಳಕಾಡೆಳವಂದೂರ ಮಚವಾಡಿ ತೆರಕಣಾಂಬಿ ಕೋಟೆ ಮೊದಲಾದ ಒಳನಾಡ ದಳದೊಳೀರ್ಯೆದಾನೆ ಇನ್ನೂರು ಕುದುರೆ ಈರ್ಯೆಸಾಸಿರಾಳ್ಗಳುಂ ಕೆಳಲೆ ಬೇಲೂರು ಕೆಳದಿ ಮೊದಲಾಗೆ ಮಲೆನಾಡ ಬಲದೊಳಿಪ್ಪತ್ತಾನೆ ಇಚ್ಛಾಸಿರ ಕುದುರೆ ಇಪ್ಪತ್ತು ಸಾಸಿರಾಳ್ಗಳುಂ ಚಿತ್ತನ ಕಲ್ಕಿಕ ನಾಯಕನಹಳ್ಳಿ ಬಾಣಾವರ ಬಸವಾಪಟ್ಟಣ ಶೀರೆಯ ಮೊದಲಾದ ಬೇಡವಡೆಯೊಳೈದಾನೆ ಐನೂರು ಕುದುರೆ ಈರ್ಯೆಸಾಸಿರಾಳ್ಗಳುಂ ತನ್ನ ಮೂಲಬಲದೊಳ್ ಮೂಸಾಸಿರ ಕುದುರೆ ಮೂವತ್ತಾನೆ ಮೂವತ್ತು ಸಾಸಿರಾಳ್ಗಳುಂ ಕೂಡಿ ನೂರಾನೆ ಈರಾರು ಸಾಸಿರ ಕುದುರೆ ಲಕ್ಕ ಪಾಯದಳಮೆಂದು ಲೆಕ್ಕಿಗಂ ಬಿನ್ನವಿಸೆ ಎಲ್ಲರ್ಗಂ ವೀಳೆಯಂಗೊಟ್ಟು ಬೀಡಿಂಗೆ ಬೀಳ್ಕೊಟ್ಟರಮನೆಗೆ ಪೋಗಲಿತ್ತಲಾ ವಾರ್ತೆಯೆಲ್ಲಮಂ ರಾಜನೃಪಂ ಕೇಳ್ದದಕ್ಕೇಗೆಯ್ವೆವೆಂದೊಡೆ ಬೆಟ್ಟದ ಚಾಮರಾಜನೆಂದನೆಲೆ ಜೀಯಾ

ನೀವಿದಕ್ಕೆಣಿಕೆಯನೇಕೆ ಮಾಳ್ಪಿರವರುಂ ಸಂತೆಯ ಸಂದಣಿಯಂತೆ ಜಾತ್ರೆಯ ಜಂಗುಳಿಯಂತೆ ಪರದರ ಪಾಳಯದಂತೆ ಒಕ್ಕಲಿಗಳ ಮೊಕ್ಕಳದಂತೆ ಮಿಗವಿಂಡಿನಂತೆ ಕಾಗೆಯ ಬಳಗದಂತೆಯು ಕೈಪರೆಗೆ ಬೆದರೋಡುವ ತೆಲುಂಗವಡೆಯದಕ್ಕಂ ಮೊತ್ತಮೊದಲನುವೇಳ್ಪುದುಂ ಕುಡುವುದುಂ ಓರೋರ್ವರಂ ಬೇರ್ಪಡಿಸುವುದುಮೆಂಬೀ ಮೂರುಪಾಯಮನೆಸಗಿ ಮದಕ್ಕೊಳಶಮಾರ್ಗದೊಡಂ ಕೊಳುಗುಳಮನೊಡರ್ಚುವುದೆಂದುಮದಕ್ಕೆ ಮೊದಲು ನಂಟಂಬಡೆದು ರಂಗನಾಥನ ದರ್ಶನಾರ್ಥಂ ಬಪ್ಪೆವೆಂದು ಬರೆದಟ್ಟೆಯದಕ್ಕವಂ ಒಪ್ಪಿದೊಡೆ ಪೋಗಿ ಆತನ ಸತ್ವಮನರಿದು ಮುನ್ನ ನಮ್ಮ ಪಿತೃಗಳ್ ಕಟ್ಟಿಸಿದ ರಂಗನಾಥನ ಮಂಡಪಮಂ ಪ್ರಾಕಾರದ ಭಿತ್ತಿಯಿಂ ನೋಡಿ ರಂಗನಾಥನಂ ಪೂಜಿಸಿ ಬಪ್ಪೆವೆಂದು ಪೇಳಲಂತೆಗೆಯ್ದು ಬೆಟ್ಟದರಸನಂ ಚೆನ್ನರಾಜನಂ ಮಹಿಸೂರೊಳಿರಿಸಿ ದೇವರಾಜಂವೆರಸು ಪಯಣಂ ಮಾಡಿ ಕಾವೇರಿ ಸನಿಹದೊಳಿರಲ್ ಅತ್ತಲ್ ತಿಮ್ಮರಾಜಂ ಬಂದಿದಿರ್ಗೊಂಡು ಉಪಚರಿಸಲರಸಿನ ಮನಮನೊಲಿಯಿಸುವುದೆ ಜಾಣ್ಮೆಯೆಂದಾಗಳೆ ಸರ್ವಸನ್ನಾಹಂ ಮಾಡಿಸಿ ತಾನು ಪೊರಮಟ್ಟು ತೆಂಕಣ ಪೊಳೆಯಂ ದಾಂಟಿ ಪಡುವಣ್ಗೆವರಿವ ಕಿರುವಳೆಯ ತಡಿಯೊಳ್ ಈರ್ವರ್ ಸಂಧಿಸಿ ದಂಡಿಗೆಯನಿಳಿದು ಕ್ಷೇಮಾಂಜಲಿಯಾಲಿಂಗನಂಗೈದು ಉಡುಗೊರೆಯಂ ಕೊಟ್ಟುಕೊಂಡು ಸರಿದಂಡಿಗೆಯೊಳ್ ಮಂಡಿಸಿಬಪ್ಪಲ್ಲಿ ರಾಜನೃಪಂ ತಿರುಮಲರಾಯನ ಮೊಗಮಂ ನೋಡಿ

ರಾಯಾ ನೀಂ ಪಲವುದಿವಸಮೀ ದೇಶಮಂ ಪೊದ್ದದೆ ಇದ್ದುದರಿಂ ಪಲಂಬರ್ ಪರಿದಾಡುತ್ತಿರ್ದರಿನ್ನೆಲ್ಲಾ ಮೇಕರಾಜ್ಯಮೆಯಪ್ಪುದಿದಕ್ಕೆ ಸಂದೇಹಮಿಲ್ಲೆಂಬುದುಂ ರಾಯನೆಂದಂ ನಾನೆಲ್ಲಿರ್ದೊಡಂ ಸಮಮೀ ನಾಡುಂ ಬೀಡುಂ ನಿಮ್ಮದೆಯಪ್ಪುದಿನ್ನು ನಾಮಿರ್ವರುಂ ಒಂದಾಗಿ ಪ್ರಜಾಪಾಲನೆಯಂ ಮಾಳ್ಪಮಿದು ದೇವತಾಕರುಣಮೆಂದಿಂತು ಇಷ್ಟಾಲಾಪಂಗೆಯ್ಯುತ್ತ ಪಟ್ಟಣದೊಳಗಂ ಪೊಕ್ಕು ಮುನ್ನಾ ರಾಜನೃಪಂಗೆಂದು ಸಜ್ಜುಕಂಗೆಯ್ದಿರ್ದ ಬಿಡಾರದ ಸರಿಸಕ್ಕೆ ಸಾರ್ತಪ್ಪುದುಂ ಪಡಿಯರರು ಜೀಯಾ ಪರಾಕೆಂದೆಚ್ಚರಿಸಲಲ್ಲಿ ದಂಡಿಗೆಯ ನಿಲಿಸಿ ತಿರುಮಲರಾಯಂ ತನ್ನ ದಂಡನಾಯಕ ಕೆಕ್ಕಟಿಗರಂ ಕರೆದೆನ್ನ ಪುಣ್ಯೋದಯದಿಂ ರಾಜನೃಪನೈತಂದನೀತನ ಕೆಳೆತನಮೆಮಗೆ ಮಂತ್ರಸಿದ್ಧಿಯಂತಾದುದೀತಂಗೆ ಸಂತಮಪ್ಪಂತು ಉಲುಪೆ ಉಪಚಾರಂಗಳಂ ಮಾಳ್ಪುದೆಂದು ನಿಯಮಿಸಿ ತಾನುಂ ರಾಜನೃಪನ ಮೊಗಮಂ ನೋಡಿ ವಿನಯಗೂಡಿ ಬೀಡಾರದೊಳ್ ವಿಶ್ರಮಮಂ ಮಾಳ್ಪುದೆಂದು ತಾನುಂ ತನ್ನರಮನೆಗೆ ಅಭಿಮುಖನಾಗೆ ರಾಜನೃಪನ ಕೈವಾರಿಗಳ್ ಕೈಯೆತ್ತಿ

'ಸ್ವಸ್ತಿ ಸಮಸ್ತ ಸಾಮಂತ ಮಹಾಮಹೀಪಾಲ ಮೌಳಿಮಾಲಾಲಾಲಿತಪದ ರಾಜೀವ ರಾಜೀವಸಖ ಗರ್ವನಿರ್ವಾಣ ಚಣಪ್ರತಾಪೋದಯ ದಯಾರಸತರಂಗಾ ಪಾಂಗಾಯತ ಲೋಚನಾಲೋಕನಾಪ್ಯಾಯಿತ ಕರ್ಣಾಟಮಂಡಲಾಗ್ರ ಖಂಡಿತಾರಾತಿ ನೃಪಕಂಠಕಾಂಡೋಚ್ಚಲದ್ರಕ್ತಧಾರಾಪರಿಮೃಷ್ಟ ತದೀಯ ಬಿರುದಂತೆಂಬರ ಗಂಡ ರಾಜನೃಪ ವಿಜಯೀಭವ ದಿಗ್ವಿಜಯೀಭವ' ಎಂದು ಪೊಗಳ್ವುದಂ ತಾನುಂ ಎಲ್ಲರುಂ ಕೇಳಿ ಪ್ರೇರಿಸೆ

ಮುಂಗಾರ ಮೊಳಗಂ ಕೇಳ್ದ ಕೇಸರಿಯಂತೆ ಕನಲ್ದು ಕಾಲೋಚಿತಮಲ್ಲೆಂದು ತನ್ನ ಕೆಲದೊಳಿರ್ಪ ಮಂತ್ರಿಯೊರ್ವರಂ ಕರೆದು ನೀನು ರಾಜನೃಪನೆಡೆಗೆಯ್ದಿ ಆತನ ಮನಂ ಕದಡದಂತೆ ಬಿರುದಂತೆಂಬರ ಗಂಡನೆಂಬಿದೊಂದು ಬಿರುದಂ ನಮ್ಮ ಮುಂದೆ ಪೊಗಳದಂತೆ ಪೇಳ್ವುದೆಂದು ಕಳುಹಿಸಲವನೆಯ್ದಿಬಂದು ಕೈಮುಗಿದು ದೇವ ದೇವರೆಡೆಯೊಳೆಮ್ಮಾಳ್ದರೆಡೆಯೊಳ್ ಸ್ನೇಹಮೆರಕಮಾಗಿರ್ಪುದದರೊಳೆ ನಾನುಂ ಊಣಯಮನೂಹಿಸಲ್ ಕಾದಿಪ್ಪರದರಿಂ ಬಿರುದಂತೆಂಬರ ಗಂಡನೆಂಬೀ ಬಿರುದು ದೇವರ ವಂಶಪರಂಪರೆಯೊಳ್ ನಮ್ಮಾಳ್ದರ ಪರಂಪರೆಯೊಳ್ ಬಂದುದನೀರ್ವರುಮಿಪ್ಪೆಡೆಯೊಳ್ ಪೇಳಸಲ್ಲದೆಂದೆಮ್ಮ ಕೈವಾರಿಗಳ್ಗೆ ಕಟ್ಟಲೆಯಾಯ್ತು ದೇವರ ಬಗೆಯ ವರ್ಗಮಂತು ನಿರವಿಸಲ್ಕೆ ಪೇಳ್ಗುಮೆಂದು ಬಿನ್ನವಿಸಲ್ ರಾಜನೃಪಂ ತನ್ನೊಡಹುಟ್ಟಿದವನ ಮೊಗಮಂ ನಿಟ್ಟಿಸಲಾ ದೇವರಾಜಂ ನಿಯೋಗಿಯಂ ನೋಡಿಯೆಂದಾಗಿ ಭಿನ್ನವಿಸಿದುದು ಸಹಜಮಾದೊಡಂ ನಿಮ್ಮರಸರ್ಗೆ ಕೈವಾರಿಗಳಿಂ ಬಂದುದರಿಂ ಬೇಡೆಂದೊಡೆ ಬಿಟ್ಟರು. ನಮ್ಮ ಪಿರಿಯರಿಂ ಬಂದು ನೆಗಳ್ದುದಾದುದರಿಂ ಕೈವಾರಿಗಳುಂ ಬಿಡುವರಲ್ಲೆಮ್ಮ ಮುತ್ತಯ್ಯಂ ಬೆಟ್ಟದ ಚಾಮರಾಜನ ಮನ್ನಣೆಯ ತುಳಿಲಾಳ್ಗಳು ಕಳಲೆಯ ನಂಜಶೆಟ್ಟಿಯು ನಂಜನಗೂಡಜಾತ್ರೆಯೊಳೆ ನೆರೆದ ಪಲಂಬರ್ ಪ್ರಭುಗಳ ಮುಂದುಗ್ಘಡಿಸುವ ಪಲವು ಬಿರುದುಗಳಂ ಸೈರಿಸದೆ ಪಲವು ಪಜ್ಜೆಗಳನೊಳಕೊಂಬ ಆನೆಯ ಪಜ್ಜೆಯಂತೆಯುಂ ಪಲವು ತೊರೆಗಳನೊಳಕೊಳ್ವ ಮುನ್ನೀರಂತೆಯುಂ ಪಲವು ಬಿರಿದನೊಳಗೊಳ್ವ ಬಿರುದಂತೆಂಬರ ಗಂಡನೆಂಬಿದಂ ಮಹಿಸೂರ ರಾಜನ ಮುಂದೆ ತಾಂ ಬಲಗಯ್ಯೊಳ್ ಪಿಡಿದ ಕಠಾರಿಯೆಂದೆಡಗಯ್ಯೊಳಂಗಡಿಯ ಮಾನಮಂ ಪಿಡಿದುಗ್ಘಡಿ ಪುದುಮಲ್ಲಿ ನೆರೆದ ಪ್ರಭುಗಳೆಲ್ಲ ಮೊಗ್ಗಾಗಿ ತಮ್ಮ ದಳದೊಳವನಂ ಸುತ್ತ ಮುತ್ತುವಿನ ಮಿಗವಿಂಡಿಂಗೆ ಪುಲಿಯುಂ ಗಿಳಿವಿಂಡಿಂಗೆ ಗಿಡಗನುಂ ಕುರಿವಿಂಡಿಂಗೆ ತೋಳನುಂ ಪೊಕ್ಕಂತೆ ಪಾಯ್ದೆಲ್ಲರ ಒಕ್ಕಲಿಕ್ಕಿ ಗೆಲ್ದುದರಿಂ ಪ್ರಭುಗಳ್ ಮಹಿಸೂರವಂಗೀ ಬಿರಿದು ಸಲ್ವುದೆಂದು ಉಗ್ಘಡಿಪುದೆಂದು ವೀಳೆಯಮಂ ಕೊಟ್ಟು ಕಳುಹಿಸಲದರಿಂ ಕೈವಾರಿಗಳಂ ಬಿಡಿಸಲಾಗದೆಂದು ಪೇಳ್ವುದುಮಾ ವಾರ್ತೆಯಂ ರಾಯಂಗರಿಪೆ ಅಕ್ಕಟಾ ಕೂಗಿ ಮಾರಿಯಂ ಕರೆದಂತಾಯ್ತೆಂದು ಎಲ್ಲರಂ ಬರಿಸಿ ಇನ್ನೀತಂಗೆ ಪಿಂದೆಗೆಯದೆ ಸೆರೆಗೊಂಡು ಕಡೆಗಾಣಿಪುದೆ ಕಜ್ಜಮೆಂದು ಮರುವಗಲ್ ಪೊತ್ತಾರೆ ವೈಯಾಳಿಯ ಬಯಲೊಳಿನಿಸಿರ್ದು ಬಪ್ಪೆ ನೀಮುಂ ರಂಗನಾಥನ ಸನ್ನಿಧಿಗೆಯ್ದಿ ಸಂದರ್ಶನಂಗೆಯ್ದು ವಂದಿಪುದೆಂದು ಪೇಳಿ ತಾಂ ಪೊರವಳಯದ ಮಂಡಪದೊಳಿರ್ದೆಲ್ಲರಂ ಬರಿಸಿ ಪುಸಿವಿನಯದಿಂ ಮಹಿಸೂರವನಂ ಪುಗಿಸಿರ್ಪನಾತನಂ ಸೆರೆಗೊಳಲ್ಕಿದು ವೇಳೆಯೆಂದು ಮೇಳೈಸುತ್ತಿರ್ಪಿನಮಿತ್ತ ರಾಜನೃಪಂ ಕಾವೇರಿಯೊಳ್ ಸ್ನಾನಂಗೆಯ್ದು ವಸ್ತ್ರಮಾಲ್ಯಾದಿಗಳಿಂ ಅಲಂಕರಿಸಿ ನಿತ್ಯ ದಾನಂಗೊಟ್ಟು ರಂಗನಾಥನ ಸಂದರ್ಶನಂಗೆಯ್ದು ವಂದಿಸಿ ತೀರ್ಥಪ್ರಸಾದಂಗೊಳ್ವನಿತಕ್ಕೆ ಪರೆಕಾರನೊರ್ವನೆಯ್ತಂದು ಕಿವಿಯೊಳಾ ಪ್ರಪಂಚಮನೊರೆಯಲಾಕ್ಷಣದೊಳೆ ತನ್ನ ಬಲಂಬೆರಸು ಪೋಪಾಗಲೆಡಬಲದೊಳಿರ್ದದಳಮಂ ಲೆಕ್ಕಿಸದೆ ಪೊಳೆಯಂ ದಾಂಟಲಿತ್ತಲ್ ತಿರುಮಲರಾಯಂ

ರಾಜನೃಪಂ ಮೀರಿ ಪೋದಂ ಬಲ್ಲಿದನೊಳ್ ವೈರಂ ಬೆಳೆದುದಿನ್ನುಪೇಕ್ಷಿಸಲಾಗದೆಂದು ನೆರೆದೆಲ್ಲಾ ಪ್ರಭುಗಳಂ ಕರೆದು ಮಹಿಸೂರಿಗೆ ಮುತ್ತಿಗೆಯನಿಡಲ್ ಪೋಗಿಮೆನೆಯವರ್ ಕೈಮುಗಿದೆಂದರ್

ಮುನ್ನೊಮ್ಮೆ ಪಿರಿಯರಸಂ ರಾಮಾನುಜನಂ ಎಲ್ಲರೊಡಗೊಂಡು ಮುತ್ತಿ ಮೂರು ತಿಂಗಳ್ವರಂ ಇರಲಾ ಮೈಸೂರ ಚಾಮರಾಜನೆಸಗಿದುಪಟಳಮನೆಷ್ಟೆಂದು ಪೇಳಬಹುದು. ಪಾಳಯಕ್ಕೆ ಬಪ್ಪ ಸಕಲ ವಸ್ತುಗಳಂ ನಿಲಿಸಲೊಂದೆರಳ್ಮೂರುಪವಾಸಮಿರ್ದು ಪೋದುದಕ್ಕೆ ದಾರಿಯಿಲ್ಲದೆ ನಟ್ಟಿರುಳೊಳೋಡಿಬಪ್ಪಾಗಳ್ ದಾರಿಯೊಳಡ್ಡಗಟ್ಟಿ ಕೆಲವಾನೆ ಕುದುರೆ ಕೈದುಗಳಂ ಸೆಳೆದುಕೊಂಡು ತಲೆಯನರಿದು ಮೂಗಂ ಕೊಯ್ದು ಕಳುಪಿದರಲ್ಲದೆಯವರಟ್ಟುಳಿಯಿಂ ಪಟ್ಟಣದೊಳ್ ಪದುಳಿಲ್ಲದೆ ಮೈಸೂರವರೊಳ್ ಸ್ನೇಹಂಬೆರಸಿ ಕಾಲ್ವೆಯ ಕೊತ್ತಾಗಾಲಮಂ ಕೊಟ್ಟರದರಿಂದೀಗಳ್ ಮೈಸೂರ ಮುತ್ತುವುದು ಮೋಸವೆಂದು ಮೊದಲೊಳ್ ಕೆಸರೆಯಂ ಮುತ್ತಿನೋಳ್ಪಮೆಂದು ತಾವರೆಗೆ ಮಂಜು ಮುಸುಕುವಂತೆ ಮುತ್ತಿ ಪಾಳೆಯಮನಿಳಿದು ತಳಿಮೇರುವೆಯ ನೊಡರ್ಚುತ್ತಿಪ್ಪುದುಮಲಿರ್ದ ಚಾಮರಾಜ ಚೆನ್ನರಾಜರ್ ಕೋಂಟೆ ಕೊತ್ತಳಮಂ ಬಲಿದಾಳ್ವೇರಿ ಮುಗಿಲಟ್ಟಣೆಗಳನೇರಿ ಕಾದುತ್ತೆ ಕತ್ತಲೆಯೊಳ್ ಪೊರಮಟ್ಟು ಪಾಳೆಯಮಂ ದಳದುಳವಾಯ್ದು ಪೊಯ್ದಾನೆ ಕುದುರೆಗಳಾನೊಯ್ವುದುಂ ಮರುವಗಲ್ ಪೊತ್ತಾರೆ ಕವಿದೊತ್ತರಿಸಿ ಮೇಲ್ವಾಯ್ದು ಗುಂಡುಗಳ ಮರೆಗೊಂಡು ಸಗ್ಗವನೇರುವ ಅಲ್ಪ ಪುಣ್ಯರಂತೆ ಕೋಂಟೆಯನೇರುತ್ತಿಪ್ಪರಂ ಕಡೆಗೋಲ್ಗಳಿಂ ನೂಂಕಿ ಕೈಯಿಟ್ಟಿಗಳಿಂದಿಟ್ಟು ಕಾಯ್ದ ಗಂಜಿ ಎಣ್ಣೆ ಹುರಿದ ಮಳಲುಮಂ ಸೂಸಿ ಮದ್ದಿನುರಿಯನ್ನೂರ್ಚಿ ಕವಣೆಗಲ್ಗಳಂ ಬೀರಿ ಕಣೆಗಳೆಂದೆಚ್ಚಿ ಕತ್ತಿಗಳಿಂ ಕಡಿದು ಕೆಡಪುತ್ತಿರ್ದೊಡಂ ಕಿಚ್ಚಿಂಗೆ ಪೆರಸಾರ್ವ ಮೃಗದಂತೆ ಪೆರಸಾರ್ವರಂ ಕಂಡು ಮಾಣದೆ ಮಿತಿಮೀರುತ್ತಿರ್ದಪರೆಂಬುದಂ ದೂತಮುಖದಿಂ ಕೇಳ್ದು ರಾಜನೃಪಂ ಮೂಲಬಲಂಬೆರಸು ಕಿಚ್ಚುಂ ಗಾಳಿಯುಂ ಕೂಡಿಯೊಣಗಿದ ಪಳುವಂ ಪುಗುವಂತೆ ದೇವರಾಜನೊಡಗೂಡಿ ಅವರ ತೆಂಕಣ ಪಡುವಣ ಪಾಳೆಯಮಂ ಪೊಕ್ಕೊಕ್ಕಲಿಕ್ಕಿ ತರಿದಿರಿದು ಗಾಳಿಯ ಸೊಡರಂತಾಗೆ ಅವರೊಳ್ ಮರೆವೊಕ್ಕರಂ ಕಾಯ್ದುದೆಂದವರಂ ಪುತ್ತವೇರಿದರಂ ಪುಲ್ಗರ್ಚಿದರಂ ನೀರೊಕ್ಕರಂ ಮರನನಡರ್ದರಂ ಓಡಿದರಂ ಕೈದುಬಿಟ್ಟರಂ ತಲೆಗಾಯ್ದು ಮನ್ನಿಸಿ ಮಿಕ್ಕರ ಸೊಕ್ಕನಡಂಗಿಸಿ ಸರ್ವಸ್ವಮಂ ಕೊಂಡು ಬರ್ಪಿನಂ ತೆಂಕಲ್ ಪಡುವಲ್ ಉಳಿದು ಮೂಡಲು ಬಡಗಲಲಿರ್ದರಂ ಚಾಮರಾಜ ಚೆನ್ನರಾಜರ್ ಸದೆದಟ್ಟಿಬರ್ಪಲ್ಲಿ ಅಣ್ಣಂದಿರಂ ಕಂಡೆರಗಿ ಬರ್ಪಿನ ಪಟ್ಟಣಮಂ ಬಿಟ್ಟು ಪೊರಗಿರ್ದ ತಿರುಮಲರಾಜನಂ ಕಂಡಟ್ಟುವುದುಮಳವಿಂಗಳ್ಕಿ ರಾಜಚಿಹ್ನೆಯನುಳಿದು ಗರಿ ಮೂಡಿದ ಪುಲ್ಲೆಯಂತೋಡಿ ವೇಷಮಂ ಮಾಚಿ ಮರೆಗೊಂಬುದುಂ ನಾಲ್ವರ್ ಮೈಸೂರ್ಗೆ ಬಂದರ್.

ಅತ್ತ ತಿರುಮಲರಾಯಂ ಮರುದಿವಸಮೊರ್ವನೆ ಪಟ್ಟಣಮಂ ಪೊರ್ದಿ ಅಳಿದುಳಿದರಂ ಬರಿಸಿ ಕೊಳುಗುಳದೊಳಂದು ದಳದೊಳಳಿದರಾರುಳಿದರಾರೆಂದು ಬೆಸಗೊಳೆ ಜೀಯ ಬಿನ್ನಪ ಈ ಒಳನಾಥಪ್ರಭುಗಳನಿಬರು ಪಲವು ಸೂಳ್ ಮಹಿಸೂರವರಿಂ ನೊಂದವರವರೆಸಗುವ

ಚತುರತೆ ಚೌರ್ಯದ ಪೊಯ್ಲು ಕೊಲೆಯಂ ಕಂಡಿಪ್ಪುದರಿಂದವರ ಮೊದಲ ಕೊಂಬು ಕಾಳೆಯ ಧ್ವನಿಯಂ ಕೇಳ್ದು ಸಿಂಗದ ರವಮಂ ಕೇಳ್ದಾನೆಯ ಪಿಂಡಿನಂತೆಯುಂ ತಳವರರ ದೀರ್ಗೋಲ ಧ್ವನಿಯಂ ಕೇಳ್ದ ಕಳ್ಳರಂತೆಯುಂ ಬೆರ್ಚಿ ಬಿಂಕಂಗುಂದಿ ಬೆವಸಂಗೊಂಡೆಡಬಲಮಂ ನೋಡದೆ ನಿಟ್ಟೋಟದಿಂ ನಿಂದಲ್ಲಿ ನಿಲ್ಲದೆ ನಿಜನಿವಾಸಮಂ ಪೊರ್ದಿ ಜಸಮಂ ಬಾರಿಸಿಯಸುವನಾದರಿಸಿ ಪೊಸತೊಂದು ಬಸಿರೊಳ್ ಬಂದಂತೆ ಸಂತಸದಿಂದಿರ್ಪರು. ಪೊರಸನಾಡ ಮೊಹರಂ ಮೊನೆಗಾರತನದ ಮೋಡಿಯೊಳ್ ಅರಿಯದೆ ಮೋಸಂಗೊಂಡಿರಲವರ್ ಬಂದು ಮುತ್ತಿ ಮೂದಲಿಸಿ ಮೂಗಂ ಕೊಯ್ದುರೆಯಟ್ಟಿದರವರ್ ನಿಲಲಾರದೆ ಮುರಿದೋಡಿದರ್. ಮಲೆಯನಾಡವರ್ ಮಲೆದು ನಿಲ್ವಿನಮವರೊಡ್ಡೈಸಿ ಮಿಸುಕಲೀಯದೆ ಕೈದುಗಳಂ ಸೆಳೆದುಕೊಂಡು ಆನೆ ಕುದುರೆ ಎಕ್ಕಟಿಗಳಂ ಕಟ್ಟರಸುಗಳಂ ಸೆರೆವಿಡಿದುಕೊಳಲ್ ಕಿರುದೊರೆಗಳುಳಿದ ಬಲಂಬೆರಸು ಮಲೆನಾಡಂ ಸಾರ್ದಿನ್ನಿತ್ತಂ ಬರಲಣ್ಮೆವೆಂದು ಭಾಷೆಗೆಯ್ದರ್. ಬೇಡವಡೆಯೆಲ್ಲಮಂ ಮುನ್ನಡವಿಯ ಗಿಡಮರಂಗಳ ಮರೆಯೊಳಿರ್ದ ಮೃಗಪಕ್ಷಿಗಳಂ ಕೋವಿಯೊಳಿಟ್ಟು ಕಣೆಯಿಂದೆಚ್ಚಿ ನಾನಾ ಬಾಧೆವಡಿಸಿ ಕೊಂದು ಕೂಗಿದ ಪಾಪಂ ತಿರುಗಿದಂತೆ ಕೆಸರೆಯ ಕೆರೆ ಕೋಡಿವಳ್ಳದೊಳೋಡುತ್ತಿಪ್ಪಾಗಲೆಡರಿ ಕೈಕಾಲ್ಗಳ್ ಮುರಿದು ನಡು ನೆಗ್ಗಿ ತೊಡೆಯುಡುಗಿ ಎದೆಯು ಬಿರಿದು ತೋಳು ತೊಳುಗಿ ಕೊರಳುಗ್ಗಿ ತಲೆಯೊಡೆದು ಪಾಶದಂತಾಗೆ ಪಳ್ಳದ ಹೆಂಟೆಗಳೆಲ್ಲಂ ಸಮತಳವಾಗೆ ಪಿಂದೆಬಪ್ಪವರ್ ಅಟ್ಟಿಬಪ್ಪರೆಂದೋಡುತ್ತಿರಲ್ ಬಿದ್ದು ಮಿದುಳ್ ಕಳೆದು ಉರುಳಿ ಕೈಕಾಲ್ಗಳೆಲ್ಲಾ ಮುಳ್ಳು ಬಲಿದು ತಂದೆ ಕಂದನೊಡಹುಟ್ಟಿದವರಾದೊಡಂ ಬಿದ್ದವರನೆತ್ತದೆ ಪಿಂದಿರುಗಿ ನೋಡದೆ ದೆಸೆಗೆಟ್ಟೋಡಿದರ್. ಮೂಲಬಲಂ ಮುರಿದ ತೆರನಂ ದೇವರೆ ಬಲ್ಲರೆಂದು ಪೇಳ್ವುದುಂ ರಾಯನೆಂದನಕಟಕಟ ಈ ಕೂಟದ ದಲಂಗಳ್ ಎನಿತಾದೊಡಂ ಬಳಿಸಲ್ಲದೀ ದಳವಾಯಿ ಚನ್ನಮನಾಯಕಂ ಪ್ರಧಾನಿ ರಾಮಾನುಜಯ್ಯನುಮೆನ್ನೆಡ ಬಲದೊಳಿರ್ದ ಮೈಗಾಪಿನವರ್ ಒಡೆದಿದ್ದು ಮುಂದಣ್ಗೆ ನಡೆದು ಪೊಗಮರೆಯುಪ್ಪುದುಮೆನ್ನನೊಪ್ಪಿಸಿ ತಪ್ಪುದಾರಿವಿಡಿದೊಪ್ಪದಿಂ ನಡೆದರಿನ್ನೆವರಂ ಮನ್ನಿಸಿದುದು ಕಾಡೊಳತ್ತಂತೆ ಕಲ್ಲರೆಯೊಳ್ ಬಿತ್ತಿದಂತೆ ಅಂಧನೊಳಾಡಿದಂತೆ ಬದಿರನೊಳ್ ಪಾಡಿದಂತೆ ಛಿದ್ರಕುಂಭದೊಳ್ ನೀರೆರೆದಂತಾಯ್ತು. ಇಂತಿವರಂ ಮೆಚ್ಚಿ ಮೈಸೂರವರೊಳಿದಿರ್ಚಿ ಕೊಡೆಯ ಮರೆಗೊಂಡು ಸಿಡಿಲಿದಿರೊಕ್ಕಂತಾಯ್ತು, ಇನ್ನೀ ಪಟ್ಟಣದೊಳಿರಲಾಗದೆಂದು ಪಯಣ ಸನ್ನಾಹದೊಳಿರಲಿತ್ತಾಳೋಡಿಬಂದು ತಳಕಾಡೆಳವಂದೂರ ಮಚವಾಡಿ ತಗಡೂರು ಮೊದಲಾದರಸುಗಳೆಲ್ಲಮೊಗ್ಗಾಗಿ ಮಹಿಸೂರವರಿಂದೆಮಗುಳಿವಿಲ್ಲಾಗಿ ತೆಲುಂಗರಾಯಂಗೆ ಧೈರ್ಯಮಂ ನೆರಪಿ ನಾಮೆಲ್ಲಂ ಬಲಮಾಗಿ ಕಾಲವಂ ಕಳಿವವೆಂದೊರ್ವ ನಿಯೋಗಿಯಂ ಕಳುಹಿಸಲವಂ ಬಂದು ತಿರುಮಲರಾಯಂಗೆಂದರ್ ನೀವೆಮ್ಮಂ ಕೈಕೊಂಡು ಇದಿರ್ಚಿ ಗೆಲ್ದು ಪಟ್ಟಣದೊಳ್ ಅಂಜದೆ ಸುಖಮಿಪ್ಪುದೆನೆ ಮಣ್ಣ ಕುಂಡೆಯಂ ನೆಚ್ಚಿ ಪೊಳೆಯಂ ಪಾಯ್ವಂತೆ ನೀವುಂ ಪಿಂಡಿಶೂರರ್ [ಗೇಹ] ನರ್ತಿಗರ್ ಧೈರ್ಯಹೀನರುಮಪ್ಪುದರಿಂ [ಇರುಳು ಕಂಡ

ಬಾವಿಯೊಳ್ ಪಗಲು] ಬೀಳ್ವಂತೆ ಪೋದ ಮಾರಿಯಂ ಕೂಗಿ ಕರೆವಂತೆ ತಳವಗಳ್ದು ಮೇಲೆ ಕೊಂಬಂತೆಯುಮಕ್ಕುಮದರಿಂದಿಲ್ಲಿಂದಾಂ ಪೋಪೆನೆಂದ ಮಾತಿಂಗವರೆಲ್ಲಂ ತಮ್ಮಾಳ್ಳ ಧನ ಧಾನ್ಯ ಮದ್ದು ಗುಂಡು ಬಾಣ ಬತ್ತಿ ಬಲಸಹಿತಂ ಬಂದು ಪಟ್ಟಣದ ಮುಂಗಡೆ ಪಾಳೆಯಮಂ ಬಿಟ್ಟಿರ್ಪ ವಾರ್ತೆಯಂ ರಾಜನೃಪಾಲಂ ಕೇಳ್ದು ಕೆಸರೆಯ ಹುಯ್ಯಲೊಳ್ ಸಿಕ್ಕಿದಾನೆ ಕುದುರೆ ಬಲಸಹಿತಂ ತನ್ನ ಪಿರಿಯಣುಗ ನರಸರಾಜಂಗಿತ್ತು ಕಳಿಪುವುದು ಆತಂ ನಡೆತಂದಾ ಪಾಳೆಯವನಿದಿರೊಳೊಡ್ಡಿ ನಿಂದೊರ್ವ ಭಟನಿಂದಾ ವೈರಿರಾಜ ವೇಶ್ಯಾಭುಜಂಗನೆನಿಪ ರಾಜಾಧಿರಾಜ ರಾಜನೃಪಾಲನ ಕುಮಾರಂ ಕೂರಾಳ್ಗಳ ಗಂಡನಾದ ನರಸರಾಜನರಿಕೆಗಾಳೆಗಂಗೊಳಲ್ ಬಂದ ನೀಮಿಂದುಮೆಲ್ಲರು ಮರೆದಿರ್ದೆ ಮದವೇರಿರ್ದೆ ಮರವಟ್ಟಿರ್ದೆ ಪಸಿದಿರ್ದೆ ಬಳಲಿರ್ದೆ ಊಣಲಿರ್ದೆ ಒರಗಿರ್ದೆವೆಂದು ಪಿಂದೆಗೆಯದೆ ಸನ್ನದ್ಧಮಾಗಿ ಬಪ್ಪುದೆಂದು ಸಾರಿಸುತ್ತ ಮೋಹರಮನೆಯ್ದಿ ನರಸಿಂಗಂ ರಕ್ಕಸರಂ ಸದೆದಂತೆ ತಟ್ಟುರ್ಚಿತರುಬಿ ನೆರೆಯಟ್ಟುವುದುಂ ಕೆಟ್ಟು ಮುರಿದೋಡಿ ಬಡಗಲ್ ಗಾವುದದೊಳೆ ಕೊಡೆಯಾಲಮಂ ಪುಗುವಿನ ಬೆಂಬತ್ತಿ ಸುತ್ತಿ ಮುತ್ತಿರ್ಪಿನ ಬಿಸಿಲೊಳ್ ಪರಿತಂದು ಪಸಿದು ನೀರಳ್ಕೆಯಿಂ ಬಾವಿಯನರಸಿ ಕಾಣದೆ ಬನ್ನಂಬಟ್ಟೋಡಿ ಬಸಂಗೆಟ್ಟು ಕೊಳೆತು ಪುಳಿತು ನಾರುವ ತಿಪ್ಪೆಯ ಹಳ್ಳದ ನೀರಂ ಕುಡಿದು ನೆಲನ ನೆಕ್ಕಿ ಕೆಟ್ಟೋಡಿದರೆಂಬ ನರಸರಾಜನ ವಿಜಯವಾರ್ತೆಯಂ ತಿರುಮಲರಾಯಂ ಕೇಳ್ದು ಪಟ್ಟಣಮಂ ಪುಗುವನೆಂದಳ್ಳಿ ಒಡಲಂ ಬಿಡುವ ಜೀವದಂತೆ ಪಲತೆರದೊಳ್ ಪಲುಂಬಿ ಕೊರಗಿ ಕೋಟಲೆಗೊಂಡು ಪೆಂಡಿರಂ ಬಿಟ್ಟು ಪೊರಮಟ್ಟು ಪೋಗಿ ತಳಕಾಡ ಬಳಿಯ ಮಾಲಂಗಿಯೊಳ್ ಮೈಮರಸಿರ್ಪಿನಮೀ ವಾರ್ತೆಯೆಲ್ಲಮಂ ನರಸರಾಜಂ ರಾಜನೃಪಂಗೆ ಬಿನ್ನವಿಸಿ ಕಳುಹಿಸಲ್ ತನ್ನ ಸೋದರರೊಡಗೊಂಡು ನಡೆತಂದೂರ ಮುಂದಣ ಬಯಲೊಳಿಳಿದು ಕುಮಾರನಂ ಬರಿಸಿ ಕೂರ್ಮೆಯಿಂದಪ್ಪಿ ಸಂತಸಂದಳೆದು ಪೊಳಲಂ ಪುಗಲ್ ಪರಿವ ಪಾವನುರಿವ ಕಿಚ್ಚಂ ಪರರ ಪೆಂಡಿರ ಪತ್ತಿರೆ ಸಾರ್ವುದು ಅನುಚಿತಮೆಂದೊರ್ವ ಮುತ್ತಮುದುಪನಂ ತಿರುಮಲರಾಯನ ರಾಣಿ ರಂಗಮ್ಮ ನೆಡೆಗೆಯ್ದಿ ನಿಮ್ಮಡಿಗೆ ತೊಡಿಗೆಗಳಂ ಸಾಮಾನುಮನೂಳಿಗವೆಣ್ಗಳುಮನೊಡಗೊಂಡು ನಿಮ್ಮರಸನಿರ್ಪಲ್ಲಿಗೆ ಪೋಪುದಕ್ಕೆ ದಂಡಿಗೆ ಭಂಡಿ ಕುದುರೆಗಳುಮನೊಡಗೊಂಡು ಬಂದೆಂ ತೆರಳುವುದೆಂದು ಪೇಳಿಸಲವಳ್ ರಾಯನ್ನಂ ಬಿಟ್ಟು ಪೋದಂ ಇಂತೆಂತಪ್ಪುದೊ ಎಂದು ಚಿಂತಾಸಾಗರದೊಳ್ ಮುಳುಗಿರ್ದನೆಲೆಯಣ್ಣಾ ನೀನು ಮಡದಿ ಮಕ್ಕಳ್ವೆರಸಿ ಸುಖದಿಂ ನೂರು ವರ್ಷಂ ಬಾಳೆಂದು ಪರಸಿ ಕೆಳದಿಯರಂ ಕರೆದು ರಾಜನೃಪಂ ಕರುಣವಿಟ್ಟಿಂದೆನ್ನನೆನ್ನಾಳ್ದನ ಬಳಿಗೆ ಕಳಿಪುವಂ ಪೋಪಮೆಂಬುದುಮವರ್ ತಂತಮ್ಮೂಳಿಗವೆಣ್ಗಳ್ ಸಹಿತಂ ಪೊರಮಟ್ಟು ಅಂದಳಮನೇರಿ ಪೊರಗಣೆ ಬಂದು ಕಿರಿದು ದೂರದೊಳ್ ರಾಜರರಸನ ಪೌಜಂ ಕಂಡು ನಿಂದು ಕೆಳದಿಯೋರ್ವಳಂ ಕರೆದು ನೀಂ ರಾಜನೃಪನ ಹತ್ತಿರೆಯ್ದಿ ನಿಂದೆನ್ನ ನುಡಿಯನಿಂತೆಂದು ಪೇಳ್ವುದೆಲೆ ತಂದೆ ಕೇಳೆನ್ನರಸನೂರೊಳಿಲ್ಲದೆ ಮೈಗಾವಲಿಲ್ಲದೆಯೊರ್ವಳೆ ದುಃಖದ ಕಡಲೊಳ್ ಮುಳುಗಿರ್ದನೆನ್ನಂ

ಕೃಪೆಯಿಂದೂಳಿಗವೆಣ್ಗಳ್ವೆರಸಿ ಕಾವಲಿಟ್ಟು ಕಡಲೊಳ್ ಮುಳುಗಿ ಕಣ್ಗೆಟ್ಟಿಪ್ಪಳನೆತ್ತಿ ಸಲಹಿ ಎನ್ನಾಳ್ದನೆಡೆಗೆ ಕಳುಪಿದೆ ಪ್ರಾಣ ಮಾನಂಗಳಂ ಕಾದೆನ್ನ ಕುಲಧರ್ಮಮಂ ಮನ್ನಿಸಿದೆ ನಾನೀಗಳ್ ನಿನ್ನ ಬಸುರೊಳುಂ ಬೆನ್ನೊಳುಂ ಬಂದೆ ನೀನೆನ್ನ ಪರಕೆಯೊಳ್ ಮಯ ಮಾಂಧಾತ ನಳ ನಹುಷನಂತಿಳೆಯಂ ಪಾಲಿಸಿ ಪಗೆಗಳಂ ಗೆಲ್ದು ಪೊರ್ದಿದರಂ ಪೊರೆದು ಕಳತ್ರ ಪುತ್ರ ಪೌತ್ರ ಬಂಧು ಮಿತ್ರರೊಡಗೂಡಿ ಧರ್ಮವಿಡಿದು ಬಹುಕಾಲ ಸುಖವಾಳೆಂದು ಪರಸಿಬಪ್ಪುದೆನಲಂತೆ ಪರಸಿಪೋದಳ್. ಮರುದಿವಸಂ ರಾಜನೃಪಂ ಶಕವರುಷ ೧೫೩೧ ಸಮ್ಯಸಂ. ಕಾರ್ತಿಕ ಶುದ್ಧ ೫ ಮಂಗಳವಾರ ಮೂಲಾನಕ್ಷತ್ರದ ೩ನೆ ಪಾದದಲ್ಲಿ ಶುಭಮುಹೂರ್ತದೊಳೆ ಗೀತ ವಾದ್ಯ ನರ್ತನಮೆಂಬ ತೌರ್ಯತ್ರಿಕದೊಡನೆ ಇತ್ತೆರದೊಳ್ ಕೈಯೆತ್ತಿ ಪೊಗಳ್ವ ಕೈವಾರಿಗಳ್ ಸಹಿತಂ ಪಟ್ಟಣಮರಮನೆಯಂ ಪೊಕ್ಕು ಶುಭಲಗ್ನದೊಳೋಲಗಂಗೊಟ್ಟು ದೇವಾದಾಯಮಂ ಬಿಟ್ಟು ಪಟ್ಟಣದ ಬಸ್ತಿಯ ಆದೀಶ್ವರಂಗೆ ಗ್ರಾಮ ಕ್ಷೇತ್ರ ಮಾನ್ಯಮಂ ಕೊಟ್ಟು ದೊಡ್ಡ ಶಾಂತಯ್ಯನರಿಕೆ ಮಾಡಿಕೊಂದೊಡೆ ಮಲೆಯೂರ ಬೆಟ್ಟದ ಬಸ್ತಿಯ ಪ್ರಾಕಾರದ ಕೋಂಟೆಯಂ ಭದ್ರಾಕಾರಮಾಗಿ ಮಾಡಿಸಿಕೊಟ್ಟು ಆ ಗ್ರಾಮದ ಶಾನುಭೋಗ ವಿಜಯಪ್ಪಂಗೆ ಹೆಚ್ಚು ಮಾನ್ಯಭೂಮಿಗೆ ಶಿಲಾಪ್ರತಿಷ್ಠೆಯಂ ಮಾಡಿಸಿಕೊಟ್ಟು ಬೆಳಗುಳದ ಧರಣಿಪಂಡಿತಂಗಂ ಅರಿಕುಠಾರದ ವಿಜಯಣ್ಣಪಂಡಿತಂಗಂ ಎರಡು ಗ್ರಾಮಮನುಂಬಳಿಕೊಟ್ಟು ಆ ರಾಜರಸಂಗೆ ಬೆಟ್ಟದಪುರ ಹುಲ್ಲನಹಳ್ಳಿ ಕಳಲೆ ಮೂಗೂರು ಬೆಳಗುಲಿ ಮುಂತಾದ ರಾಜಕುಮಾರತಿಯರೆಂಟು ಜನಂ ಅರಸಿಯರ್ ಪತ್ತು ಜನ ಭಂಗಾರದವರಾಗಿರ್ದರಾತಂ ತನ್ನವರ್ಗದವರ್ಗುಂಬಳಿಯುಚಿತಂಗಳಿಂ ಮನ್ನಿಸಿಯರಸುಗೆಯ್ಯುತ್ತಿರಲ್.

ಅತ್ತ ಮಧುರೆಯೊಳ್ ವೆಂಕಟಪತಿರಾಯಂ ತಿರುಮಲರಾಯನನಟ್ಟಿದುದಕ್ಕೆ ಕೋಪಿಸಿರ್ದು ಅವನ ಪೆಂಡಿರನವನ ಪೊರ್ದಿಸಿ ಜನರಂ ರಕ್ಷಿಸಿ ಕಳಿಪಿದುದಕ್ಕಂ ಮನವೆಗೊಂಡು ನಣ್ಪಂ ಪಡೆಯಲೆಂದು ನಯದಿಂ ಸಾಧಿಸಲ್ ಆನೆ ಕುದುರೆ ಉಡತೊಡವಾದಿ ಪಾಗುಡಂಗೊಟ್ಟು ತನ್ನ ಮಂತ್ರಿಗಳೊಳ್ ಕಟ್ಟಾಳೆನಿಸಿದ ಗಂಭೀರರಾಯ ವಿರುಪಣ್ಣನಂ ಕಳುಪೆಯವನೆಯ್ತಂದು ಒಪ್ಪಿಸಲವಂ ಕೊಂಡು ಅವನಂ ಮನ್ನಿಸಿ ರಾಯಂಗೆ ಪ್ರತಿ ಪಾಗುಡಮನಟ್ಟಿ ಸಂತಸದೊಳಿರಲತ್ತಲ್ ಪದಿನಾಡ ನಂಜರಾಜಂ ತನ್ನ ಮೊಲಗಿಪಾಲಂಬಾಡಿಯ ತೊರೆಯರ್ ಕೂಟದಾಳ್ಗಳ ನೆರವಿಯಂ ಎಳವಂದೂರು ಸತ್ಯಗಾಲದರಸರಪ್ಪ ತನ್ನೊಡಹುಟ್ಟಿದರಾ ಪಡೆಯಂ ತನ್ನ ನೆರೆಹೊರೆಯ ದೊರೆಗಳ ಪಡಿದಳಮಂ ತನ್ನ ಮೂಲಬಲಮಂ ತನಗೆ ಮಧುರೆಯವನೀವ ಕಪ್ಪದ ಹಣದೊಳ್ ಕಟ್ಟಿದಾಳ್ಗಳಂ ಕೂಡಿ ರಾಜನೃಪನೊಳ್ ಕಾದಲೆಂದೆಡದರೆಯ ಬಗಡಿಗೋಂಟೆಯೊಳ್ ಕಟ್ಟಿರ್ದ ಮೇಘ ಪುಷ್ಕರಿಣಿಯೆಂಬಾನೆಯ ಕಳವಿನಿಂ ಕೊಂಡೊಯ್ದುದುಂ ರಾಜನೃಪಂ ಕೇಳಿ ಸೈರಿಸದೆ ಬಲಂಗೂಡಿ ನಡೆದವನಂ ತಾಯ್ತೂರೆಂಬ ಗಡಿಗೋಂಟೆಯಂ ಒಡ್ಡೈಸಿ ಮುತ್ತುವಿನಮವಂ ಸಂವರೆಗೊಂಡು ಬಪ್ಪಿನ ದಾರಿಯೊಳಡ್ಡಗಟ್ಟಿ ಬೇಡವಡೆಯನಟ್ಟಿ ವೀರರೊಳ್ ಮೊನೆಯ ಹರಿಗೆಯ ನಂಜುಂಡನಂ ಕೋಡನಹಳ್ಳಿಯ ಕೊಂಡನಂ ಮೊದಲಾದ ಗಂಡುಗಲಿಗಳ ತಲೆಯಂ ಸಂಡಾಡಿ ನಂಜರಾಜನಂ ಕೈಸೆರೆವಿಡಿದು

ಬಿಡಲೆಂದಿರ್ಪಿನಮೊರ್ವ ಮೊನೆಯೊಳಾತನಂ ಕುರುಪುಗಾಣದೆ ತಲೆಯನರಿದು ತಂದೀಯಲರಿದು ಮರುಗಿಯಾ ಪಂದಲೆಯಂ ಪೊಂದಳಿಗೆಯೊಳಿಟ್ಟು ಪೊಂಬಟ್ಟೆಯಂ ಪೊದಿಸಿಯಾತನೂರ್ಗೆ ಕಳುಪಿಯವನ ಧನಕನಕ ವಸ್ತುವಾಹನ ನಾಡುಂಬೀಡೆಲ್ಲಮಂ ಕೊಂಡಾತನ ಬಲಮಂ ಕೊಂಡು ನಾಡರಸುಗಳಂ ಬೆಸಗೆಯ್ಸಿಕೊಂಡು ಮೂಗೂರ ಭಾಳಲೋಚನಂ ಉಮ್ಮತ್ತೂರ ಮಲ್ಲರಾಜನಂ ವಶಕ್ಕೆ ತಂದು ಪಟ್ಟಣಮಂ ಪೊಕ್ಕು ಮಹಿಸೂರ ಬಸ್ತಿ ಶಾಂತೀಶ್ವರಂಗೆ ಸ್ವಾಸ್ತಿಯಂ ಕೊಡಿಸಿ ತಾನಾಳ್ವ ನಾಡಿನ ಗ್ರಾಮಾನುಗ್ರಾಮದೊಳ್ ಜೈನಬ್ರಾಹ್ಮಣರಿಪ್ಪರವರಿಗಾ ಗ್ರಾಮದ ಶಾನುಭೋಗತನ ಪೌರೋಹಿತ್ಯ ಮೊದಲಾದ ಉಪಾಧ್ಯಾಯ ತನವು ಪೂರ್ವಪದ್ಧತಿಯಿಂದವರ್ಗೆ ಸಲ್ವುದರಿಂದ ಆಯಾಯ ಗ್ರಾಮದಿ ಶಾನು ಭೋಗತನ ಪಂಚಾಂಗಶ್ರವಣಮಂ ಗ್ರಾಮದೊಳಿಪ್ಪ ಎಲ್ಲ ಒಕ್ಕಲ ಪೌರೋಹಿತ್ಯ ಮೊದಲಾದುದಂ ಜೈನಬ್ರಾಹ್ಮಣರಿಂದಲೆ ಮಾಡಿಸಿಕೊಂಡು ಬಪ್ಪುದೆಂದು ನಿರೂಪಮಂ ಬರೆಯಿಸಿಕೊಟ್ಟು ಪಟ್ಟಣಮಂ ಪೊಕ್ಕು ರಾಜ್ಯಮಂ ಪಾಲಿಸಿ ಸುಖಮಿರ್ದು ಅಂತ್ಯದೊಳ ನುಜರಂ ಕರೆದು ಎಲೆ ಬೆಟ್ಟದಯ್ಯ ದೇವರಾಜರಿರಾ ಪಟ್ಟಣದೊಳ್ ನೀಂ ನಿಲ್ಬುದೆಂದೊಡವರಲೊಲ್ಲದಿಪ್ಪುದುಂ ಚೆನ್ನರಾಜನೆಂಬ ಕಿರಿಯಾತಂ ನಿರ್ವಹಿಸಲಾರನೆಂದು ತನ್ನಣುಗನಪ್ಪ ನರಸರಾಜನಣುಗಂ ತನ್ನ ಮೊಮ್ಮಗನಾದ ಚಾಮರಾಜಂಗೆ ರಾಜ್ಯಾಭಿ ಷೇಕಂಗೆಯ್ದು ತನ್ನ ಕುವರಂಗೆ ಪಡುವಣ ಡಣಾಯಕ ದೇವನಕೋಟೆಯಂ ಬೆಟ್ಟದ ಚಾಮರಾಜರಸನ ಕುವರರ್ಗೆ ರಂಗಸಮುದ್ರ ನಳೂರ್ವಿ ಜಯಾಪುರಮಂ ದೇವರಾಜ ರಸನ ಕುವರರ್ಗೆ ಅರಕೆರೆ ಎಲೆಯೂರು ಮಂಗಲಮಂ ಕೊಟ್ಟು ಅವರೊಳ್ ದೇವರಾಜನ ಕಿರಿಯ ಕುವರಂ ಮರಿದೇವರಾಜನಂ ಕಾರುಗೆಹಳ್ಳಿಯೊಳಿರಿಸಿರ್ದುಂ ಉಳಿದರಿಬ್ಬರುಮನೆನ್ನ ಕಂಡಂತೆ ಕಾಣ್ಬುದೆಂದು ಮೊಮ್ಮಗಂಗೆ ಬೆಸಸಿ ತಾ ಮೂವರು ಭಾಗವತರಂ ಪೊರ್ದಿರಲಾ ರಾಜನೃಪಂ ಪರಮಾಯುಷ್ಯಮಾಗಿ ಎಂಬತ್ತು ವರುಷಂ ಕಳಿಯೆ ನಳಸಂವತ್ಸರದ ಮಾರ್ಗಶಿರ ಶು ೧೦ ಸೋಮವಾರದಲ್ಲು ಸಗ್ಗದರಸಾದಂ.

ಇತ್ತಲ್ ಚಾಮರಾಜಂಗೆ ದೇವರಾಜ ಚಾಮರಾಜರೀರ್ವರ್ ತಮ್ಮಣುಗರಂ ತಮ್ಮ ಪೌತ್ರಂಗಪ್ಪೈಸಿ ಪುಣ್ಯಕ್ಷೇತ್ರದ ತೀರ್ಥಯಾತ್ರೆಗೈದಿದರ್. ಇತ್ತಲ್ ಪಟ್ಟಣದೊಳ್ ಚಾಮರಾಜನೆಳೆವರೆಯದೊಳೆ ತ್ರಿವಿಕ್ರಮನಂತೆ ಶೌರ್ಯ ವೀರ್ಯ ಪರಾಕ್ರಮದಿಂ ದಿಗ್ವಿಜಯಂಗೆಯ್ಯಲ್ ದಳವಾಯೊಡನೆ ಕಳುಪಿ ಮದ್ದೂರ ವೀರಣ್ಣನ ಗರ್ವಮಂ ಮುರಿದು ಜಗದೇವರಾಯನ ಮಗಳಂ ಭೋಗಸ್ತ್ರೀಯಂ ಮಾಡಲೆಂದು ಕೇಳಿಸಿ ಅದೆ ನೆವದಿಂದಾತನಂ ಕಡೆಗಾಣಿಸಿ ಭೈರನಾಯಕ ಪುವ್ವಲನಾಯಕ ಹನುಮಪ್ಪನಾಯಕ ಕೃಷ್ಣಪ್ಪನಾಯಕ ಮುಂತಾದವರಂ ಜಯಿಸಿ ಚನ್ನಪಟ್ಟಣಮಂ ಕೊಂಡು ಅವರವರ್ಥಾಯುಧಂಗಳಂ ತಗೆದುಕೊಂಡು ಬಂದು ಮಹಿಸೂರೊಳು ಅಲಗಿನ ಚಾವಡಿಯಂ ಮಾಡಿಸಿ ಮೂಡಲ್ ಕಲಕಾಡು ಮಳವಲ್ಲಿಯಂ ಮುತ್ತಿ ಬೇಲಿಯಂ ಬಲಿದು ತಳಿಯನೊತ್ತರಿಸಿಯವಂಗೆ ಸಹಾಯಿಗನಾಗಿ ಬಂದ ಜಗದೇವರಾಯನ ಪಡೆಯನೋಡಿಸಿಯೂರೂರ್ಗೆ ಕಾವಲ್ ನಂಬುಗೆಯಿತ್ತು ಬೆಸಂಗೆಯ್ದೊಡನೆ ತಳಕಾಡಂ ತನ್ನದೆನಿಸಿ ಅಲ್ಲಿಂದಾ ತೆಂಕಲ್ ಕಣಮೆಯ ಬೆಟ್ಟಮನಿಳಿದು ಗಟ್ಟಿ ಮದನಾರಿಯನಟ್ಟಿ ಪೊಂಗಳೊಡನೆ ಚಂಗೊಡೆಂಬಾನೆಯನಂಗೀಕರಿಸಿ ಬಂದು ಪಡುವಲ್ ಕಳಲೆಯ ನಾಡ ಪಿರಿಯಪಟ್ಟಣದ

ದೊರೆಯನರೆಯಟ್ಟಿಯುವಂಗೆ ನೆರವಾಗಿ ಬಂದ ಕೆಳದಿಯ ಸಿಂಗರಾಯನಂ ಭಂಗಿಸಿ ಬೋಳಮಲ್ಲನೆಂಬಾನೆಯೊಡನೆ ಪಾವುಡಂಗೊಂಡು ಬಡಗಲ್ ನರಸಿಂಗಪುರದ ಅರಸನಂ ಧುರದೊಳ್ ಪರಿಭವಿಸಿಯುವನಿತ್ತ ಕನಕಭೂಷಣದೊಡನೆ ಕನಕವಸಂತನೆಂಬಾನೆಯಂ ಸ್ವೀಕರಿಸಿ ಬೇಲೂರ ದಳಮಂ ಸೋಳೆಯನವಳ್ಳಿಯ ಬಳಿಯೊಳಂ ಅರಕೆರೆಯ ಸನಿಹದೊಳಂ ಎಲೆಯೂರ ಪೊಲದೊಳೊಮ್ಮೊಮ್ಮೆ ಕೊಳುಗುಳದೊಳೊಕ್ಕಲಿಕ್ಕಿ ಮಿಕ್ಕರ ಸೊಕ್ಕನಡಂಗಿಸಿ ಕೊಳತೂರಂ ಮುತ್ತಿ ಲಗ್ಗೆಯೇರಿ ಕಡಿದೊಟ್ಟಿದ ಪಂದಲೆಯಂ ಮೂನೆಲೆ ಜಗತಿಯೊಳ್ ಅಡ್ಡಗಟ್ಟಿ ಕೆಡಪಿದಾನೆಗಳನಿತು ಗೋಕುಲಗಳ ಕಂಭ ಬೋದಿಗೆ ನಿಡುಗೋವಿ ಸರಗೋವಿ ಕೈಸೆರೆ ಸಿಕ್ಕಿದ ಹದಿನಾರು ಸಾಸಿರ ಕಾಲಾಳ್ಗಳುಮಂ ಅನೇಕ ಆಯುಧಂಗಳುಮಂ ಕೊಂಡು ಬಳಿಕ್ಕೆ ಪೊಸಕೋಂಟೆಯಂ ಮುತ್ತಿ ಉಬ್ಬಸಂಗೈಸಲಲ್ಲಿಯ ದೊರೆಗೆ ನೆರವಾಗಿ ಬಂದ ಜಗದೇವರಾಯನ ಒಡಹುಟ್ಟಿದನಾದಂಕುಶರಾಯನನರೆಯಟ್ಟಿ ಭೋಜರಾಜ ಬೊಕ್ಕಳಿಕವೆಸರೆರಡಾನೆಯಂ ಕಳಿಪಿ ಪೊಸಕೋಂಟೆಯಂ ಬಸಂಗೈದು ಕೆಲವು ದಿನದಿಂ ಮೇಲೆ ಜಗದೇವರಾಯನ ಚನ್ನಪಟ್ಟಣ ನಾಗಮಂಗಲಮೆಂಬ ತಾಯಗೋಂಟೆಗಳಂ ಕೊಂಡುಮದಕ್ಕೆ ಸಲ್ವ ಬೆಳ್ಳೂರಂ ಜಳ್ಳುಮಾಡಿ ಎಡಬಲದ ರಾಯರಾಯುವಂ ತೀರ್ಚಿ ಮೇರೆಯರಿಯದೆ ಉಬ್ಬಿಕೊಬ್ಬಿದ ಚಿಕ್ಕನಾಯಕನಹಳ್ಳಿಯ ದಳವಾಯಾ ಗುರಿವನಾಯಕನನರಿದು ಕೆಡಪಿ ಬಲಮಂ ನೆರೆಯಟ್ಟಿ ವಸ್ತ್ರಭೂಷಣಂಗಳೊಡನೆ ರಾಮಲಿಂಗನೆಂಬಾನೆಯಂ ಕೊಂಡು ಮತ್ತಂ ಮಿತ್ರಭಾವದೊಳ್ ಪತ್ತಿ ಇಕ್ಕೇರಿ ಬಾಣಾವರ ಬಸವಾಪಟ್ಟಣಂಗಳ್ ಮೊದಲಾದ ಪೊಳಲಾಣ್ಮರೆಲ್ಲರಂ ಕನ್ನಡ ನಾಡುಮಂ ಬಸಕ್ಕೆ ತಂದು ಎಲ್ಲಾ ದೇಗುಲಗಳಂ ಪೊರೆಯುತ್ತಂ ಪೊಸತಂ ಮಾಡಿಸುತ್ತಂ ದಾನ ಧರ್ಮ ಪರೋಪಕಾರದಿಂ ರಾಜ್ಯಮಂ ಪಾಲಿಸುತ್ತಂ ಗರುಡಧ್ವಜ ಹನುಮಧ್ವಜ ಶಂಖ ಚಕ್ರ ಮಕರ ಟೆಕ್ಕೆ ಎಂಬೀ ಬಿರುದುಗಳನಾಂತು ಮಹಾನವಮಿ ಗಾಂಧರ್ವ ರಾಗಮಂ ಪ್ರಕಟಿಸಿ ಜೈನಪಂಡಿತರ್ಗೆವರ್ಗೆ ಗ್ರಾಮಾಂತರದೊಳ್ ಹೊಲ ಗದ್ದೆ ಮೊದಲಾದುಂಬಳಿಯಂ ಕೊಟ್ಟು ದೇವರಾಜಂ ಮೊದಲಾದ ಕುಮಾರರಂ ಪಡೆದು ಪದಿನೆಂಟು ವರುಷಂ ರಾಜ್ಯಶ್ರೀಯನನುಭವಿಸಿ ಶ್ರೀಮುಖಸಂವತ್ಸರದ ಮಾರ್ಗಶಿರ ಶುದ್ಧ ೧೧ ಭಾನುವಾರ ಸಗ್ಗದರಸಾದಂ.

ಇತ್ತ ಶ್ರೀಮುಖಸಂವತ್ಸರದ ಮಾರ್ಗಶಿರ ಶುದ್ಧ ೧೨ ಚಂದ್ರವಾರ ರಾಜರಸನ ಕುಮಾರನಾದಿಮ್ಮಡಿ ರಾಜರಸಗೆ ಪಟ್ಟಮಾದೊಡಾತನಳವುಂ ಸಾಹಸಮನನ್ಯೆಯುಂ ನಲ್ಮೆಯುಂ ಕೊಂಡಾಡುವಿನಂ ತನ್ನ ಪೆಸರನ್ವರ್ಥಗೆಯ್ಸಿ ಎಣ್ದೆಸೆಯಂ ಜಯಿಸಿ ಪಲಂಬರ್ ದೊರೆಗಳಿತ್ತ ಧನ ಕನಕ ವಸ್ತು ವಾಹನಂಗಳಂ ಕೊಂಡು ಪೊರ್ದಿದರಂ ಪೊರೆದು ತನ್ನ ತಂದೆ ಗಿಮ್ಮಡಿಯೆನಿಸಿ ಅರಕಲಗೂಡ ಕೃಷ್ಣಪ್ಪನಾಯಕನಂ ಜಯಿಸಿ ಪದಿನೆಂಟು ತಿಂಗಳು ರಾಜ್ಯಮನಾಳಿ ಯುವಸಂವತ್ಸರದ ಜ್ಯೇಷ್ಠ ಶುದ್ಧ ೧೫ ಯಲ್ಲು ದಳವಾಯಿ ವಿಕ್ರಮ ರಾಜಂ ವಿಷಮನಿಕ್ಕಿ ಕಾಲಂಗಂಡೊಡೆ ಬಳಿಕ ಬೆಟ್ಟದ ಚಾಮರಾಜರಸನ ಕುಮಾರಂ ವೈರಿರಾಜಗಜಕಂಠೀರವಂ ಕಂಠೀರವ ನರಸರಾಜನು ಯುವಸಂವತ್ಸರ ಜ್ಯೇಷ್ಠ ಬ ೧ ಶುಕ್ರವಾರ ರಾಜ್ಯಾಭಿಷೇಕಮನಾಂತು ರಾಜ್ಯದೊಳ್ ನಿಂದು ತನ್ನ ಚಿಕ್ಕಯ್ಯಂಗೆ ವಿಷಮನಿಕ್ಕಿದ ವಿಕ್ರಮನಂ ಕೊಲ್ಲಿಸಿದ. ಮತ್ತೆ

ಬೆಟ್ಟದಪುರ ಹಂಪಾಪುರ ಪಿರಿಯಾಪಟ್ಟಣ ಹೊಸೂರು ಮುಂತಾಗಿ ಕಟ್ಟಿ ಕೆಂಗೆ ಹನುಮಪ್ಪನಾಯಕನಂ ಇಕ್ಕೇರಿ ವೀರಭದ್ರ ನಾಯಕನಂ ಭೇದದಿಂ ಗೆಲ್ದು ವಿಜಯಾಪುರದ ಸುಲ್ತಾನ ಮಹಮದ ಪಾದಶಾಯನಂ ಕೊಂದವನ ಸೇನಾಪತಿ ರಣದುಲ್ಲಾಖಾನನೆಂಬಂ ನಾಲ್ವತ್ತು ಸಾಸಿರ ಕುದುರೆ ನಾಲ್ವತ್ತಾನೆ ಲಕ್ಕೆ ಪಾಯ್ದಳಂ ಬೆರಸೊಂದೆ ಸೂಳೊಳಿಕ್ಕೇರಿಯನೊಕ್ಕಲಿಕ್ಕಿದೊಡಾ ತುರುಕರ ಪಡೆ ಕೊಬ್ಬುಬ್ಬಿ ಕನ್ನಡನಾಡೊಳ್ ತನ್ನ ಪಡೆಗಿದಿರಿಲ್ಲೆಂದು ನಡೆದುಬಂದು ಸೀರೆಯದ ದೊರೆಯಂ ಸೆರೆವಿಡಿದು ಕುರುಗೆರೆಯವನಂ ತೊತ್ತಳದುಳಿದು ಬೆಂಗಳೂರವನಂ ಭಂಗಪಡಿಸಿ ಬರುತ್ತಿಪ್ಪಿನಂ ಕೆಂಗೆಯ ಹನುಮನಾಯಕಂ ತಕ್ಕುದಲ್ಲೆಂದೊಡಂಬಡದೆ ಕಡುಪಿಂದಟ್ಟಿ ಬಂದು ಪಟ್ಟಣವಮಂ ಬಳಸಿ ವೇಡೈಸಿ ಕಟ್ಟಳವಿಂದಿಟ್ಟಡಿಯಂ ಪೆರದೆಗೆಯ ಇಟ್ಟು ಕೆಡಪಿದ ಪೆಣದೊಟ್ಟುಗಳಂ ಪೂಳ್ದು ಮೆಟ್ಟಿ ಮಟ್ಟಮಧ್ಯಾಹ್ನದೊಳ್ ಹತ್ತಿಬಪ್ಪ ಕಟ್ಟಾಳ್ದಳವಿಟ್ಟಿದಟ್ಟೆಯಂ ಕೆಡಪಿ ಕಟ್ಟುತನದೊಳಿಟ್ಟೆರಿಸಿ ಕುಟ್ಟಿಕೆಡಪಿದೊಡವಂ ಕೆಟ್ಟುಮುರಿದು ನಿಟ್ಟೋಟದಿಂದೋಡಿ ಬಿಟ್ಟಬಾಯಂ ಕೆಂಗೆಯ ಹನುಮನ ಬಸಿರೊಳ್ದಲೆಯಿಟ್ಟು ನುಡಿದನೆಲೆ ನಾಯಕ ನೀನೆಂದ ನುಡಿ ನಿಜಮಾದುದು ನಾಂ ವಿಜಯಾಪುರಮಂ ಪೊರಮಟ್ಟಂದು ಮೊದಲಿಂದುವರೆಗೆ ತಾಯಿಪೊಟ್ಟೆಯಿಂದ ಪುಟ್ಟಿದಂದು ಮೊದಲಿಂದುವರೆಗಂ ಈ ಪರಿಯ ವೀರನಂ ಕಂಡುಕೇಳಿದುದುಮಿಲ್ಲಕಟಾ ಮುನ್ನೀ ತೆರದ ಬಲ್ಲಿದನೆಂದರಿಯದೆ ಬಲಮೆಲ್ಲಮಂ ಬಲಿಗೊಟ್ಟು ಪಿಂತನೋಜೆಯಂ ಕೀಳ್ಪಡಿಸಿದೆನಿನ್ನೆನ್ನ ಕಂಡವರ್ ಮೇಲ್ವಾಯದೆ ಬಿಡರೆನ್ನ ಶೌರ್ಯಂಗುಂದಿತು ತುಳಿಲಾಳ್ಗಳೊಳೀರಾರು ಸಾವಿರ ಮಡಿದರ್. ಉಳಿದವರ್ ಕಂಗೆಟ್ಟು ಕಟ್ಟಳಿದು ಮೂಗುಬ್ಬಸದಿಂ ಬಿಟ್ಟು ಪೋಪಡಂ ಬಟ್ಟೆಯಿಲ್ಲದರಿಂದೀ ಪಟ್ಟಣದವನ ಕಡೆ ಗಡಿವರೆಗಮೆಮ್ಮಂ ನಾಡವರ್ ಕಾದದಂತೆ ರಾಯಸಮನೀಯಲಾಂ ಪೋಪೆನೆಂದನು ವೇಳ್ಪುದುಮಂತೆಗೆಯ್ಯಲ್ ಕಪ್ಪಿನಿಂದೆದ್ದ ಕಾಡಾನೆಯಂತೆ ನಿಲ್ಲದಲ್ಲಿ ನಿಲ್ಲದೆ ತಿರಿಗಿ ನೋಡದೆ ತನ್ನೂರ್ಗೆ ನಡೆದಂ.

ಇತ್ತಲ್ ರಣಕಂಠೀರವ ಮೂಡಲ್ ನಡೆದು ಮುನ್ನಾ ವಿಜಯಾಪುರದ ಸೇನಾನಿಯೆನಿಸಿದ ಖಾನಖಾನನ ಸೇನೆಯನೆಬ್ಬಟ್ಟಿ ರಾಯಗೋಂಟೆ ರನ್ನಗಿರಿ ರಾಮಗಿರಿ ವೀರಭದ್ರದುರ್ಗ ಕೆಂಗೇರಿ ಪೆನ್ನಾಗರುಗಳಂ ಕಟ್ಟಿಕೊಂಡು ತೆಂಕಲ್ ಮಧುರೆಯ ವೀರಪ್ಪನಾಯಕ ತಿರುಮಲನಾಯಕನಂ ಜಯಿಸಿ ತೊರೆಯಸಾಂಬಳ್ಳಿ ಸತ್ಯಮಂಗಳ ಡಣಾಯಕನಕೋಟೆಗಳಂ ಕೊಂಡು ಕೊಂಗರಂ ಭಂಗಪಡಿಸಿ ಕೆಳದಿಯವರಂ ಕಳೆ ಗುಂದಿಸಿ ತೆಲುಗರ ಬಲವಂ ಮುರಿದು ವೀರಪ್ಪನಾಯಕನಂ ರತ್ನಗಿರಿಯೊಳಿರಿಸಿ ಶ್ರೀರಂಗರಾಯನ ಕಾರ್ಪಣ್ಯವ ಬಿಡಿಸಿ ಮಾಗಡಿಯಂ ಮುತ್ತಿ ತನ್ನ ಶರಣ್ಬೊಕ್ಕ ಚಿಕ್ಕ ಕೆಂಪೇಗೌಡಂಗಭಯಗೊಟ್ಟು ಯಲವಂಕನಾಡ ಮಾಗಡಿಯಂ ಕೊಟ್ಟು ಮನ್ನಿಸಿ ಕಲ್ಲೂರು ಕಡಬ ತುರುಕೆರೆ ಮಾಯಿಸಮುದ್ರಮಂ ಕಟ್ಟಿಕೊಂಡು ಪಡುವಲು ಕಳಲೆ ಪಿರಿಪಟ್ಟಣಮಂ ಕೊಂಡಾ ಮಲ್ಲರಾಜನಂ ಸೆರೆವಿಡಿದು ಬಡಗಲ್ ಮಲ್ಲುಕನ ದಳಮಂ ಗೆದ್ದು ತುರುಗೆರೆ ಕಡಬ ಕಲ್ಲೂರು ಹೆಬ್ಬೂರು ಮೊದಲಾದವಂ ಕೊಂಡು ಬಂದು ಹಳೆಬೀಡರಸುಗಳ ಮಕ್ಕಳ್ ಕುಸುಮಾಜಮ್ಮಣ್ಣಿ ಕಮಲ್ಜಾಜಮ್ಮಣ್ಣಿ ಎಂಬೀರ್ವರರಸಿಯರಾಗಿರೆ ದೊಡ್ಡಿಯೆಂಬ ಭಂಗಾರದವರಂ ಕೂಡಿ

ಸುಖಮಿರ್ದು ಸಂತಾನಂ ಇಲ್ಲದುದರಿಂ ಭಂಗಾರದದೊಡ್ಡಿ ಹೆಸರಿಂ ಪಟ್ಟಣದೊಳಗಣ್ಗೆ ಕಾಲ್ವೆಯಂ ಮಾಡಿಸಿ ಗೋಮಟಾಪುರದ ಬಸ್ತಿದೇವಸ್ಥಾನಕ್ಕೆ ಮಾನ್ಯಮಂ ಕೊಟ್ಟು ಬೊಮ್ಮರಸಪಂಡಿತ ಶಾಂತಪಂಡಿತ ಪದ್ಮಪಂಡಿತ ರಾಜಾಪಂಡಿತರ್ ಮೊದಲಾದವರ್ಗೆ ಉಂಬಳಿ ಸಂಬಳಮಂ ಕೊಟ್ಟು ಪಿರಿಯಾಪಟ್ಟಣದ ಭುವನೇಶ್ವರಿ ಅರಮನೆಯೊಳಿರ್ದ ಸರ್ವಾಭರಣಮಂ ಸಂಗ್ರಹಿಸಿ ಮಹಾಬಲಾಚಲದೊಳ್ ಶಿಲಾವೃಷಭನಂ ಮಾಡಿಸಿ ತನ್ನಂತೆ ಲೋಗರೆಲ್ಲರ್ ಬದುಕಲೆಂದು ಸುತ್ತಲ್ ಬಳಸಿದೆತ್ತರದ ಶಿಲಾಮಯ ಕೈಶಾಲೆ ಗೋಪುರ ಮಂಡಪ ಪರಿವಾರ ದೇವಾಲಯಂಗಳ್ ಬೆರಸಿದ ದೇಗುಲಮಂ ತನ್ನರಮನೆಯ ಮುಂದೆ ದೇಗುಲಮಂ ಕಟ್ಟಿಸಿ ನೃಸಿಂಹನ ಪ್ರತಿಷ್ಠೆಗೈಸಿ ತನ್ನ ಬೊಕ್ಕಸದ ಮುತ್ತುರತ್ನಪಚ್ಚೆಗಳಿಂ ಸಮೆದ ಅನೇಕ ತೊಡವುಗಳಂ ಮಿಸುನಿಯ ತಟ್ಟೆ ಬಟ್ಟಲ್ ಮೊದಲಾದುಪಕರಣಂಗಳಂ ಪಲತೆರದ ವಾಹನಂಗಳಂ ಮಾಡಿಸಿಕೊಟ್ಟು ನಿತ್ಯೋತ್ಸವ ನೈಮಿತ್ತಿಕೋತ್ಸವಮಂ ಮಾಡಿಸುತ್ತ ಕಂಠೀರವಸಮುದ್ರಮೆಂಬ ಕೆರೆ ಕಟ್ಟೆ ಕಾಲುವೆ ಮೊದಲಾದವಂ ನಿರ್ಮಿಸಿ ಟೆಂಕಸಾಲೆಯಂ ಮಾಡಿಸಿ ಕಂಠೀರವ ಪೆಸರ ಪಣವಂ ಪೆಟ್ಟಿಸಿ ನೂತನ ಪುರಾತನ ದೇಗುಲಂಗಳುಮಂ ಪ್ರಪಾಸತ್ರಾದಿಗಳಂ ಮಾಡಿಸಿದಂ. ಮುನ್ನಮೆ ತಿರಿಚಿನಾಪಳ್ಳಿಯ ಬ್ರಾಹ್ಮಣಂ ಬಂದು ಬಿರುದಿನ ಜಟ್ಟಿಯ ವೃತ್ತಾಂತಮಂ ಪೇಳೆ ಅಲ್ಲಿಗೆಯ್ದಿ ಆತನಂ ಪಟ್ಟಾಕತ್ತಿಯಿಂ ಕೊಂದು ರಾತ್ರಿಯೊಳೆ ಕಳಿದುಬಂದುದರಿಂ ಸಂಗಾತ ಬಂದ ಹೆಗ್ಗಡೆ ದೇವಂಗೆ ಉಂಬಳಿಕೊಟ್ಟದ್ದು ಹೆಗ್ಗಡದೇವನಕೋಟೆ. ಬಳಿಕ ಶ್ರೀರಂಗಪಟ್ಟಣಕ್ಕೆ ವಿಶೇಷವಾದ ಕೋಟೆಯಂ ನಿರ್ಮಿಸಿ ಆಯುಧವಸ್ತು ಸಾಮಾನುಗಳಂ ಇಟ್ಟನು. ಈ ಕಂಠೀರವ ನರಸರಾಜಂ ೨೫ ವರ್ಷ ರಾಜ್ಯಮಂ ಪ್ರತಿಪಾಲಿಸಿ ಶಾರ್ವರಿ ಸಂವತ್ಸರದ ಮಾರ್ಗಶಿರ ಶು ೧೧ಲ್ಲು ಸ್ವರ್ಗಸ್ತವಾದನು.

ಬಳಿಕ ಸಕಲ ಸಾಮಂತ ಚೂಡಾವತಂಸಪದ ರಾಜೀವ ರಾಜನೃಪನನುಜ ದೇವರಾಜಂಗೆ ನಾಲ್ವರ್ ಕುಮಾರರ್ ಐರಾವತಂಗೆ ನಾಲ್ಕು ಕೊಂಬು ಪುಟ್ಟಿದಂತೆ ದೊಡ್ಡ ದೇವರಾಜನುಂ ಮರಿದೇವರಾಜನುಂ ಕೆಂಪದೇವರಾಜನುಂ ಚನ್ನರಾಜರೆಂದಾದರ್. ಅವರೊಳ್ ಹಿರಿಯ ದೇವರಾಜಂ ರೂಪಿನೊಳ್ ಕಾಮನಂತೆ ಶೌರ್ಯದೊಳ್ ಭೀಮನಂತೆ ಬೆಳೆದೆಳೆವರೆಯದೊಳ್ ಯಳವಂದೂರ ಚನ್ನರಾಜನೆಂಬ ಜೈನನಾಗಿರ್ದರಸಂ ಕೆಲದಿವಸದಿಂ ಜಂಗಮರುಪದೇಶದಿಂ ಶಿವಭಕ್ತನಾಗಿ ಆರಾಧ್ಯನ ಶಿಷ್ಯನಾಗಿರ್ದನಾತನ ಪುತ್ರಿಯಾದ ಸದ್ಗುಣಾಭರಣೆ ಅಮೃತಮ್ಮನೆಂಬಳರಸಿಯಾಗೆ ಈಶ್ವರಂಗೆ ಪಾರ್ವತಿ ಕೂಡಿದಂತೆ ಸುಖಮಿರೆ ಒಂದು ದಿನ ಆತನರಸಿಯು ಹರ್ಮ್ಯದೊಳಿರ್ದು ವೀಥಿಯೊಳ್ ಬಾಲಕ್ರೀಡೆಯಂ ಮಾಳ್ಪ ಮಕ್ಕಳಂ ಕಂಡು ಪುತ್ರಕುತೂಹಲಂ ತಿಣ್ಣಮಾಗೆ ಚಿಂತೆಯಿಂ ಸಂತಾಪಂದಳೆದೆಡಗಯ್ಯ ದಳದೊಳ್ ಮೊಗದಾವರೆಯಂ ಮುಚ್ಚಿ ನಿಟ್ಟುಸುರಿಂ ಕಣ್ಬನಿಗಳಂ ಕಪಾಳದಿಂ ಪರಿದು ದುಕೂಲಮಂ ನೆನೆಯಿಸೆ ವಾಚಾಲಾಪಮನುಳಿದೊರಗಿರ್ದ ಅರಸಿಯಲ್ಲಿಗರಸಂ ಬಂದು ಮೇಲ್ವಾಸಿನೊಳ್ ಕುಳ್ಳಿರದಿದಿರೆರ್ದು ಪತಿಯ ಪಾದಾಬ್ಜದೊಳ್ ಅಳಕಾಳಿಗಳ್ ನಲಿದಾಡು ವಿನಮೊರಗಿರ್ದರಸಿಯ ಮೊಗಮನೆತ್ತಿ ಮುದ್ದು ಬೆಸಗೊಳಲ್ ಮೌನಮಂ ತಾಳ್ದಿರಲ್ಕೆ ಕೆಲದೊಳಿರ್ದ ಕೆಳದಿಯಿಂ ಪುತ್ರದೋಹಳಮನರಿದು ಸಂತೈಸಿ ಫಲಪ್ರಾಪ್ತಿಯಿರ್ದೊಡಪ್ಪುದೆಂದು

ಕಾಲಮಂ ಕಳೆಯುತ್ತಮಿರೆ ಕೆಲವಾನುದಿವಸದಿಂ ಗರ್ಭಮಾಗಿ ನವಮಾಸಂ ನೆರೆದು ಪಾರ್ಥಿವ ಸಂವತ್ಸರದ ಆಶ್ವೀಜ ಶುದ್ಧ ೧೨ ಚಂದ್ರವಾರ ಉತ್ತರಾಭಾದ್ರ ಶತತಾರೆಯೊಳ್ ಪುತ್ರೋತ್ಪತ್ತಿಯಪ್ಪುದಾ ಕಾಲದೊಳ್ ಕನ್ಯೆಯೊಳ್ ರವಿಯಂ ತೊಲೆಯೊಳ್ ಮಂಗಳ ಬುಧಕವಿಗಳುಂ ಮಿಥುನದೊಳ್ ಬೃಹಸ್ಪತಿಯುಂ ಮೇಷದೊಳ್ ಶನಿಯುಂ ಕರ್ಕಟಕ ಮಕರದೊಳ್ ರಾಹುಕೇತುಗಳ್ ನಿಂತ ಸಮಯದೊಳ್ ಜೋಯಿಸರುಗಳ್ ಜಾತಕಮಂ ನೋಡಿ ಮೂವತ್ತು ವರ್ಷದಿಂ ಮೇಲೆ ಪೃಥ್ವೀಪತಿಯಪ್ಪನೆಂದು ಪೇಳ್ದರ್. ಆ ಪುಟ್ಟಿದ ಶಿಶುವಿಂಗೆ ಜಾತನಾಮಕರ್ಮಂಗಳಂ ಮಾಡಿಸಿ ಚಿಕ್ಕದೇವರಾಜನೆಂದು ಪೆಸರಿಟ್ಟು ಸುಖಮಿರಲ್.

ಅತ್ತಲಳಕಿಯ ಸಿಂಗರಾರ್ಯಂಗೆ ಪುತ್ರೋತ್ಪತ್ತಿಯಾಗೆ ತಿರುಮಲಾರ್ಯನೆಂದು ಪೆಸರಿಟ್ಟು ಸಲಹುತ್ತಿರೆ ಈರ್ವರುಂ ಬೆಳೆದು ನಿಷ್ಕ್ರಮಣ ಬಹಿರ್ಯಾನಾನ್ನಪ್ರಾಶನ ಚೌಲಾಕ್ಷರಾಭ್ಯಾಸ ಪುಸ್ತಕಗ್ರಹಣ ಉಪನಯನಾದಿ ಕರ್ಮಂಗಳಂ ಮಾಡಿದಪ್ಪರೊಳೆ ಯಳವಂದೂರಮೃತಾಂಬಿಕ ತೌರುಮನೆಗೆ ಗುರುವಾದ ಆರಾಧ್ಯಪುತ್ರ ಷಡಕ್ಷರಿಯುಂ ತತ್ಪುರದ ಜೈನಬ್ರಾಹ್ಮಣನಪ್ಪ ಬೊಮ್ಮರಸನ ಪುತ್ರಂ ವಿಶಾಲಾಕ್ಷಪಂಡಿತನುಂ ತಿರುಮಲಾರ್ಯನುಮಿಂತು ಮೂವರ್ ಸಹಾಧ್ಯಾಯಿಗಳಾಗೆ ನಿಘಂಟು ವ್ಯಾಕರಣ ಕಾವ್ಯ ನಾಟಕ ಛಂದೋಲಂಕಾರ ತರ್ಕ ವೊದಲಾದ ವಿದ್ಯವೆಲ್ಲಮಂ ಕಲ್ತು ಅರ್ಥಾವಗ್ರಹ ವ್ಯಂಜನಾವಗ್ರಹ ಈಹ ಅವಾಯಧಾರಣಾದಿಗಳಿಂ ಶೇಮುಷಿಗಳಾಗಿ ತಂತಮ್ಮ ಮತಪ್ರಮೇಯಂಗಳೊಳು ಶಿಖಾಮಣಿಗಳೆನಿಸಿ ಕವಿ ಗಮಕಿ ವಾದಿ ವಾಗ್ಮಿತ್ವದೊಳಗ್ರಗಣ್ಯರೆನಿಸಿದರವರೊಳ್ ಚಿಕ್ಕದೇವರಾಜರಸಂ ಕೋವಿದಶಿಖಾಮಣಿಯೆನಿಸಿದಂ, ತಿರುಮಲಾರ್ಯಂ ವಿದ್ಯಾವಿಶಾರದನೆನಿಸಿದಂ, ವಿಶಾಲಾಕ್ಷಂ ಸಾಹಿತ್ಯಭಾರತಿಯೆನಿಸಿದಂ, ಷಡಕ್ಷರಿಯು ಕವಿಶೇಖರನೆನಿಸಿದನಂತನಿಬರುಂ ತಂತಮ್ಮ ಮತವಾತ್ಸಲ್ಯವಿಡಿದು ಅರಸಂಗೆ ತಿರುಮಲಾರ್ಯನು ವೈಷ್ಣವಮತ ಶಾಸ್ತ್ರಪುರಾಣಮೆ ಉತ್ಕೃಷ್ಟಮೆಂದು ಓದಿಸುವಂ, ಷಡಕ್ಷರಿಯು ವೀರಶೈವಸಿದ್ಧಾಂತಮೆ ಲೋಕಪಾವನಮೆಂದು ಮನಂಗೊಳಿಸುವಂ, ವಿಶಾಲಕ್ಷಂ ಜಿನಸಮಯ ಪುರಾಣಾಗಮಮಂ ತಿಳಿಯಿಸಿ ಆದಿಮತಮಿದು, ಇದರೊಳ್ ವಿರುದ್ಧದಿಂ ನಾನಾ ಮತಂಗಳ್ ಪುಟ್ಟಿದವೆಂದು ಪೇಳುತ್ತಿಪ್ಪುದು ಚಿಕ್ಕದೇವರಾಜಂ ಸೂಕ್ಷ್ಮಮತಿಯು ಸುವಿಚಾರಿಯುಮಾದುದರಿಂ ಎಲ್ಲಮಂ ಸಂಗ್ರಹಿಸಿಕೊಂಡು ಪ್ರಕರಣಂಗಳೊಳ್ ಪೂರ್ವಪಕ್ಷಸಿದ್ಧಾಂತಯುಕ್ತಿಗಳನಿತುಮಂ ಕ್ರೋಡೀಕರಿಸಿಯವರ ಒಟ್ಟುಗಳಂ ಕಳೆದು ಸಾರಂಗಳಂ ಸಂಗ್ರಹಿಸಿಯವರೊಳಿದು ಪ್ರಬಳಮಿದು ದುರ್ಬಳವೆಂದು ತಾರತಮ್ಯವನಾರೈದು ಮೂಲಯುಕ್ತಿಗಳನೆ ಕುರುಪುಗೊಂಡಿರ್ಪ ಪಾಂಡಿತ್ಯಮುಂ ವಾದ ಕಥಾವಿನೋದದೊಳೆಸಗುವ ಉಪನ್ಯಾಸಮನಾಲಿಸೆಯವರೊಳ್ ಪ್ರಕೃತೋಪಯೋಗಮಿಲ್ಲದ ಯುಕ್ತಿಗಳಂ ಬೇರ್ಪಡಿಸಿ ಕಳೆದು ಉಪಯುಕ್ತಮಾದವರೊಳ್ ಸಾಧ್ಯಸಾಧನ ಸಮರ್ಥಂಗಳಲ್ಲದ ಯುಕ್ತ್ಯಾಭ್ಯಾಸಂಗಳಂ ಕಡೆಗಾಣಿಸಿ ಮೂಲಯುಕ್ತಿಯಂ ಕುರುಪುಗೊಂಡು ಪ್ರತಿಯುಕ್ತಿಯಿಂ ಜಯಿಸುವ ಕೌಶಲ್ಯಮಂ ಸ್ವಪಕ್ಷನ್ಯಾಸಂಗೈವೆಡೆಯೊಳ್ ಪ್ರಕೃತ ಸಾಧ್ಯಸಾಧನದೊಳ್ ಪೆರ್ಚುಂ ಕುಂದುಮಿಲ್ಲದೆ

ಸಮರ್ಥಮಾದ ಮೂಲಯುಕ್ತಿಗಳ್ ಪವಣ್ಗೆಯ್ದು ವಾದಿಯಂ ನಿರುತ್ತರಂಗೆಯ್ವ ನೈಪುಣ್ಯಮುಂ ಎಂದಿಂತು ಪಲವು ವಾದಚಾತುರ್ಯನಪ್ಪುದರಿಂದಿದು ಮುಖ್ಯಮಿದು ಗೌಣಮೆಂದು ತಿಳಿದಿರ್ಪಂ.

ಅದಲ್ಲದೆ ಮತ್ತಂ ಬಿಲ್ವಿದ್ಯೆ ಶಸ್ತ್ರ ವಾಹನಾರೋಹಣ ವೀಣಾವಿದ್ಯಂ ಮೊದಲಾದ ಕಲಾಶಾಸ್ತ್ರವಂ ಕಲ್ತು ನೀತಿಶಾಸ್ತ್ರ ಪರಾಕ್ರಮಸಂಪನ್ನನಾಗಿ ಪಲವು ದೇಶಂಗಳ ಭಾಷೆ ಲಿಪಿಗಳೊಳ್ ನಿಪುಣನಾಗಿಯು ಪ್ರಾಯಂದಾಳ್ವುದುಮಾ ಯವ್ವನದೊಳೆ ರಾಜ್ಯಮಂ ಕುಡಲೆಂದು ಬಗೆದುಮಳಕಿಯ ಸಿಂಗರಾರ್ಯನಂ ಬರಿಸಿ ಚಿಕ್ಕದೇವರಾಜರಸಂಗೆ ರಾಜ್ಯಮಂ ಕುಡಲೆಂಬುದುಂ ಈತನು ಎಳೆವರೆಯದವನಾದುದರಿಂ ಕೆಲದಿವಸಂ ಆತನ ಚಿಕ್ಕಯ್ಯನಪ್ಪ ದೇವರಾಜಂ ಧೈರ್ಯಸ್ಥೈರ್ಯಶೌರ್ಯಾದಿಗಳಿಂ ಪ್ರಸಿದ್ಧನಪ್ಪುದರಿಂ ಆತಂಗೆ ಕೊಡಲೆಂದು ಶಾರ್ವರಿಸಂವತ್ಸರದ ಮಾರ್ಗಶಿರ ಬಹುಳ ಪಾಡ್ಯದೊಳ್ ರತ್ನಸಿಂಹಾಸನಾರೂಢನಾಗಿ ದೊಡ್ಡದೇವರಾಜಂ ಅನುಜತನುಜರ್ವೆರಸಿ ತೀರ್ಥ ವಂದನಾನಿಮಿತ್ತಂ ಪೋಗಿ ತಿರಿಗಿಬಪ್ಪಿನ ಪಟ್ಟಣಮಂ ಪುಗಲೀಸದಿರೆ ರಾಜ್ಯಮಂ ಸಂಚರಿಸುತ್ತ ಎಳವಂದೂರಿಗೆ ಬಪ್ಪುದುಂ ಚಿಕ್ಕದೇವರಾಜರಸನ ಸೋದರಮಾವಂ ತನ್ನ ಸುತೆಯಪ್ಪ ದೇವಾಜಮ್ಮಣ್ಣಿಯಂ ಧಾರಾಪೂರ್ವಕಮಾಗಿ ಮದುವೆಯಂ ಮಾಡೆ ಅಲ್ಲಿಂ ಪೊರಮಟ್ಟು ಗುಂಡಲ ವಿಜಯಾಪುರಕ್ಕೆ ಬಂದೊಡೆ ಅಲ್ಲಿ ಹಂಗಳಮೆಂಬ ಗ್ರಾಮದೊಳ್ ಆಕೆಯೊಳ್ ಹದಿನೆಂಟು ತಿಂಗಳ್ವರಮಿರಲಲ್ಲಿ ಚಿಕ್ಕದೇವರಾಜರಸಂಗೆ ಪಿತೃವಿಯೋಗಮಾಗೆ ಆ ಕಳೇವರಮಂ ಪುಣ್ಯನದಿಯೆಂದು ಗುಂಡಲದ ಬಳಿಯೊಳ್ ಸಂಸ್ಕರಿಸಿ ಅಲ್ಲಿ ಪರವಾಸುದೇವನಾದಂ.

ಇತ್ತ ಪಟ್ಟಣದೊಳ್ ದೊಡ್ಡದೇವಾರಾಜನೆನಿಸಿದ ದೇವರಾಜಂ ರಾಜ್ಯಂಗೆಯ್ಯುತ್ತಮೊಮ್ಮೆ ಮಹಾನವಮಿಯೋಲಗದೊಳ್ ಎಣ್ದೆಸೆಯ ದೊರೆಗಳ್ ಕಪ್ಪ ಕಾಣಿಕೆಗಳನೊಪ್ಪಿಸುವಲ್ಲಿ ಇಕ್ಕೇರಿಯೊಳ್ ಶಿವಪ್ಪನಾಯಕಂ ತನ್ನಾಳ್ದನಪ್ಪ ವೀರಭದ್ರ ನಾಯಕನಂ ಪರಿಹರಿಸಿ ಆ ದೊರೆತನಮಂ ಕೊಂಡು ಕಾಣ್ಕೆ ಪಾಗುಡಮಂ ಕಳಿಪೆ ಕೋಪಿಸಿ ಬಂದ ಪಾಗುಡವಮಂ ತಿರುಗಿ ಕಳುಹಿಸಿದೊಡವಂ ಬಿಗುರ್ತೆಯಿಂ ವಿದ್ಯಾನಗರಿಯ ತೆಲುಂಗರಾಯನ ಬಗೆ ಶ್ರೀರಂಗರಾಯನೆಂಬಂ ತನ್ನ ಬೇಲೂರು ಚಂದ್ರಗಿರಿ ಮುಂತಾದ ಕೋಟೆ ದುರ್ಗಂಗಳಂ ತುರುಕರ್ಗೆ ಸೂರೆಗೊಟ್ಟು ತಾನುಂ ತನ್ನ ಪರಿಜನಂಬೆರಸು ಖಂಚಿ ತಂಜಾವೂರ ಮಧುರೆಯಂ ಪೊರ್ದಿಯವರಿತ್ತ ಬಲದಿಂ ಬಂದಿರ್ದೊಡವನಂ ಕೂಡಿಕೊಂಡು ಮಹಿಸೂರ ಮೇಲೆತ್ತಲೆಂದಿರಲೀ ದೇವರಾಜಂ ಮದ್ದುಗಿರಿ ಹಾಸನ ಬೇಲೂರು ಕೊಂಡ್ಯೆಗೂರು ತರಿಕೆರೆ ಹರಪನಹಳಿ **ಚಿತ್ರಕಲ್** ಮದ್ದಗಿರಿ ಮುಂತಾದ ಹಟ್ಟಿಕೊಟ್ಟಿದ ದೊರೆಗಳ ಬಲಮಂ ತನ್ನ ಸೇರಿದ ತುಳುವ ಕೊಂಕಣ ಕೊಡಗು ಮಳೆಯಾಳಂಗಳಂ ಕೊಂಡು ಶಿವಪ್ಪನಾಯಕನಂ ಗೆಲ್ದು ಪಟ್ಟಣಕ್ಕೆ ಬಂದನಾತಂಗೆ ಮೂವರರಸಿಯರ್ ಐವರ್ ಬಂಗಾರದವರಾಗಲ್ ರಾಜ್ಯವಾಳುತ್ತಿರ್ದಂ.

ಇತ್ತ ಚಿಕ್ಕದೇವರಾಜಂ ಹಂಗಳಗ್ರಾಮದೊಳಿರಲವನ ಚಿಕ್ಕಯ್ಯರಂ ಕರೆಸಿ ಗ್ರಾಮಂಗಳಂ

ಉಂಬಳಿಗೊಟ್ಟಿರಲಿತ್ತ ಚಿಕ್ಕದೇವರಾಜನ ಬಳಿಗೆ ವಿಶಾಲಕ್ಷಂ ಬಂದಿಷ್ಟಾಲಾಪಂಗೆಯ್ಯುತ್ತಂ ನಿನಗೆ ರಾಜ್ಯಮಪ್ಪುದೆಂದು ಪೇಳುತ್ತಿರ್ದೊಡಾ ದೊಡ್ಡದೇವರಾಜಂ ಪರಿಧಾವಿಸಂವತ್ಸರದ ಕಾರ್ತಿಕ ಶುದ್ಧ ೪ ಯಲ್ಲು ಸ್ವರ್ಗಸ್ಥನಾಗಲಾ ರಾತ್ರಿಯೊಳೆ ವಂದಿಗೆಯಂ ಪರಿಜನಮಂ ಕಳುಹಿಸಲಾ ರಾತ್ರಿಯೊಳೆ ಪಟ್ಟಣಮಂ ಪೊಕ್ಕು ಶಕವರುಷ ೧೬೯೩ ಸಾವಿರದ ಆರುನೂರ ತೊಂಬತ್ತುಮೂರನೆಯ ಪರೀಧಾವಿ ಸಂವತ್ಸರದ ಕಾರ್ತಿಕ ಶು ೫ ಆದಿವಾರ ಮೂಲಾನಕ್ಷತ್ರದ ಶುಭಮುಹೂರ್ತದೊಳ್ ರತ್ನಸಿಂಹಾಸನಾರೂಢನಾಗಿ ಪಟ್ಟಮಂ ತಾಳ್ದು ತನ್ನ ಚಿಕ್ಕಯ್ಯಂಗುತ್ತರಕ್ರಿಯೆಯಂ ಮಾಡಿಸಿ ವಿಶಾಲಾಕ್ಷ ಪಂಡಿತಂಗೆ ಮಂತ್ರಿಪದಮನಿತ್ತು ಈ ಫಾಲ್ಗುಣ ಶು ೫ ಆರಭ್ಯ ಸೀಮೆನಾಡುಗಳೆಲ್ಲಮಂ ಮಂತ್ರಾಲೋಚನೆಯಿಂ ರಾಜ್ಯದ ಪ್ರಜೆಗಳ್ಗೆಲ್ಲಂ ಸರಾಗಮಪ್ಪಂತು ಹೊಲಂಗಳೆಲ್ಲಕ್ಕಂ ಕಂಭಗಟ್ಟಲೆಯಂ ಮಾಡಿಸಿ ಉತ್ತಮ ಭೂಮಿ ಕಂಭ ೧೦೦ಂಕ್ಕೆ ಸಿದ್ಧಾಯ ಆರುಹಣ ||೧ ಮಧ್ಯಮ ಭೂಮಿ ನೂರಕ್ಕೆ ನಾಲ್ಕು ಹಣ ಜಘನ್ಯಭೂಮಿ ಎರಡು ಹಣವೆಂದು ನಿಯಮಿಸಿ ಕಾಣಿಕೆ ಕಡ್ಡಾಯಮಂ ಬಿಡಿಸಿ ನಿರ್ಬಾಧಕಮಾಗಿ ಪ್ರಜೆಯಂ ಪಾಲಿಸುತ್ತ ಷಣ್ಮತಂಗಳಂ ಪರೀಕ್ಷಿಸಿರ್ದೊಂದು ದಿನಂ ಮತಾಂತರಂಗಳೆಲ್ಲಮಂ ವಿಚಾರಿಸಿ ಜಾತಿ ಕುಲಾಚಾರಂಗಳ ಭೇದಂಗಳೆಲ್ಲಮಂ ಮನಸಿನೊಳವಗಹನಕ್ಕೆ ತಂದುಕೊಂಡು ಅರಸುಗಳ ವಂಶಪರಂಪರೆಯಂ ಪೂರ್ವಿಕರಾದ ಬುದ್ಧಿವಂತರಂ ಬರಿಸಿಯರಸುಗಳ್ ನಾನಾ ವಿಧಮಾಗಿ ಕೂಡಿಪ್ಪುದಂ ವಿಚಾರಿಸಿ ಪದಿಮೂರು ಮಂತನಂ ಪದಿನೆಂಟು ಮಂತನಮಂ ವಿಂಗಡಿಸಿ ಮತ್ತಂ ನೂರೊಂದು ಮಂತನಮಂ ಬೇರಿರಿಸಿ ಮತ್ತಮರುವತ್ತು ಮಂತನದ ಶೆಟ್ಟಿಗಳಂ ರಾಜಸೇವೆಯೊಳಿರಿಸಿ ನಮ್ಮ ಯದುವಂಶಕ್ಕೆ ಚಂದ್ರವಂಶಮೆಂದೆಂತಾದುದೆನೆ ಪೂರ್ವಿಕರೆಂದರ್.

ಯದುವಂಶಂ ಹರಿವಂಶಜರ್ಗಪ್ಪುದು ಚಂದ್ರವಂಶಂ ಪಾಂಡವರ್ಗಪ್ಪುದುಮದರಿಂ ಯದುವಂಶಮೆ ಹರಿವಂಶಜರ್ಗೆ ಪರಂಪರೆಯಿಂ ಬಂದುದು. ಅಲ್ಲಿ ಚೋಳ ಬಲ್ಲಾಳ ಡಣಾಯಕರಾದರವರೊಳ್ ಕಡೆಯ ವೀರಬಲ್ಲಾಳಂ ವಿಷ್ಣುವರ್ಧನನೆಂದಾದನಾತನ ವಂಶಪರಂಪರೆಯಿಂ ಬಂದುದರಿಂ ಈ ವಂಶಂ ಹರಿವಂಶ ಆ ಯದುವಂಶಜರಪ್ಪರಾದೊಡಂ ಮುನ್ನಂ ಡಿಳ್ಳಿ ಪಾದಶಾಯಿ ವೀರಬಲ್ಲಾಳನ ಪ್ರತಾಪಮಂ ಕೇಳ್ದು ಚಂದ್ರ ವಂಶಜ ಕರ್ಣಾಟಕದೇಶಾಧೀಶ್ವರನೆಂದು ಶಾಸನಮಂ ಬರೆಯಿಸಿದನಂದಿಂದಾ ಸೋಮ ವಂಶಮೆಂಬರಲ್ಲದೆ ಚಂದ್ರವಂಶಜರಲ್ಲವೆಂದು ಪೇಳೆ ಕೆಲಂಬರೆಂದರ್ ಆ ಹರಿವಂಶಮಂ ಚಂದ್ರವಂಶಮೆನ್ನಬಹುದೆಂತೆಂದೊಡೆ

ಶ್ಲೋಕ || **ಚಂದ್ರೇ ಸೂರ್ಯೇ ಯಮೇ ವಿಷ್ಣೌ ವಾಸವೇ ದರ್ದುರೇ ಹಯೇ**
ಮೃಗೇಂದ್ರೇ ವಾಸರೇ ವಾಯೌ ದಶಸ್ವಪಿ ಹರಿಸ್ಮೃತಃ ||

ಹರಿಯೆಂಬುದು ಚಂದ್ರನಾಮವಾದುದರಿಂ ಪೇಳಬಹುದೆಂದರ್. ಮತ್ತಮಾ ಮೂರು ವಿಧಮಾಗಿ ಮಾಡಿದ ಕ್ಷತ್ರಿಯರ್ಗೆ ಗೋತ್ರಮಂ ಪ್ರಕಟಿಸಲೆಂದು ವಿಚಾರಿಸೆ

ವೃತ್ತ || ಶ್ರೀವತ್ಸಕಾಶ್ಯಪ ವಶಿಷ್ಠ ಪ್ರಶಸ್ತ
ಭಾರದ್ವಾಜೋಲ್ಲತ್ಪ್ರಚುರ ಗೌತಮ ಭಾರ್ಗವೌಚ
ಆತ್ರೇಯ ಕೌಂಡಿನ ಮಹತ್ಸಮಗಸ್ತ್ಯ
ವಿಶ್ವಾಮಿತ್ರಾಸ್ಸುಗೋತ್ರಾ ಬಹುಧಾ ಪ್ರಭವಂತಿ ಲೋಕೇ ||

ಎಂದು ಪೇಳಲಲ್ಲಿ ಯದುವಂಶದ ರಾಜನೃಪನ ವಂಶಪರಂಪರೆಗೆ ಆತ್ರೇಯ ಗೋತ್ರ ಆಶ್ವಲಾಯನಸೂತ್ರ ಋಕ್ಶಾಖೆಯೆಂದು ನಿರ್ಣಯಿಸಿ ಕನ್ಯಾಸ್ವೀಕಾರ ಮೊದಲಾದುದಂ ಹದಿಮೂರು ಹದಿನೆಂಟು ಮಂತನದೊಳೆಯಪ್ಪುದೆಂದು ನಿಯಮಿಸಿ ಜಾತಿಸಂಕರಮಾಗದಂತೆ ನಡೆಯಿಸುತ್ತಿರಲಲ್ಲಿ ಕೆಲಂಬರ್ ಹದಿಮೂರು ಮಂತನದವರೆ ಪಟ್ಟಕ್ಕೆ ಯೋಗ್ಯರುಳಿದರಯೋಗ್ಯಮೆನೆ ರಾಜನೆಂದನೀ ಕಾಲದೊಳ್ ಜಾತಿಕ್ಷತ್ರಿಯ ತೀರ್ಥಕ್ಷತ್ರಿಯರೆಂದಿತ್ತೆರದ ಕ್ಷತ್ರಿಯರೊಳ್ ನಾನಾ ವಿಧವಾಗಿ ಸಜ್ಜಾತಿಯಲ್ಲದೆ ಸಂಕರವಾಗಿಪ್ಪುದದರಿಂ ಯೋಗ್ಯಾಯೋಗ್ಯತೆ ಎಂಬುದದೆಂತಪ್ಪುದಲ್ಲದೆ ಭೂಪತಿಯ ಸ್ವಯಮೇವ ಮೃಗೇಂದ್ರತಾ ಎಂಬುದರಿಂದಾವ ಜಾತಿಯಾದೊಡಂ ಪೂರ್ವಪುಣ್ಯೋದಯದಿ ಶೌರ್ಯ ವೀರ್ಯ ಪರಾಕ್ರಮಮುಳ್ಳರಾಗಿ ರಾಜ್ಯದೊಳ್ ನಿಂದು ಅಧಿಪತಿಗಳಪ್ಪರ್. ಅದರಿಂದೀ ಕಾಲದೊಳ್ ತುರುಷ್ಕ ರಜಪುತ್ರ ಮರಾಟ ಆರೆ ತೆಲುಂಗ ಕುರುಂಬ ಕುಂಬಾರ ವೈತಾಳಿ ಕುಂಡಗೋಳಕ ಉಗ್ರಪಾಷಂಡರ್ ಮೊದಲಾಗಿ ಬ್ರಾಹ್ಮಣರಿಂ ತೊಡಗಿ ಆ ಚಾಂಡಾಲ ಮಾತಂಗಜಾತಿಗಳೊಳ್ ಪುಟ್ಟಿದರೆಲ್ಲಂ ಸಿಂಹಾಸನಕ್ಕಧಿಪರಾಗಿ ಕುಲಜರನೆರಗಿಸಿಕೊಳ್ಳುತ್ತ ರಾಜ್ಯಮನಾಳುವರೆಂದು ಪೇಳಿ ತಾನು ನಿಯಮಿಸಿದರಸುಗಳೆಲ್ಲರ್ಗಮಧಿಕಾರಮುದ್ಯೋಗಮುಂಬಳಿ ಸಂಬಳಂಗಳಂ ಮಾಡಿಸಿಕೊಟ್ಟು ಅರಿಕುಠಾದ ಪ್ರಭು ಚೆನ್ನರಾಜನ ಪುತ್ರ ಚಂದ್ರಶೇಖರನ ಮಕ್ಕಳು ಪಟ್ಟಣಕ್ಕೆ ಬಂದಿರ್ದೊಡವರ್ಗೆ ಅಧಿಕಾರಮಂ ಕೊಟ್ಟು ಮುನ್ನ ರಾಜಒಡೆಯರ ಸಂತತಿ ದೇವರಾಜವಂಶಕರು ಕಾರುಗೆಹಳ್ಳಿಯಿಂ ಪೋಗಿ ಹೊಸೂರು ಬಾಗಲೂರೊಳಿರ್ದ ಬೆಟ್ಟರಾಜನೆಂಬನಂ ಅರಿಕುಠಾರದೊಳಿರಿಸಿ ಉಂಬಳಿಗೊಟ್ಟು ತಾನು ತನ್ನ ಪಟ್ಟದರಸಿ ದೇವಾಜಮ್ಮಣ್ಣಿ ಮೊದಲಾದ ಹತ್ತು ಜನ ರಾಜಪುತ್ರಿಯರಂ ಮದುವೆನಿಂದು ಮತ್ತಂ ಪಾಳ್ಯಗಾರರ ಸುತೆಯರ ಶಿವಾಚಾರರ ಕುಮಾರಿಯರ್ ಬಣಜಗಿತ್ತಿಯರ್ ಸಹಿತಂ ಮೂವತ್ತು ಜನಂ ಭಂಗಾರಸ್ತ್ರೀಯರಾಗೆ ವಿಶಾಳಾಕ್ಷಪಂಡಿತನ ಮಂತ್ರಾಲೋಚನೆಯಿಂ ರಾಜ್ಯಂಗೆಯ್ಯುತ್ತಂ ತನ್ನ ಪಿತೃ ನಿಷಿದ್ಧಿಕಾ ಸ್ಥಾನಮಪ್ಪ ಗುಂಡಲ ಬಳಿಯೊಳ್ ಗೋಪುರ ಪ್ರಾಸಾದ ಶಿಖರಯುಕ್ತಮಾಗೆ ಪರವಾಸುದೇವಂಗೆ ಕೈಸಾಲೆವೆರಸಿದಾಲಯಂ ಮಾಡಿಸಿ ನಿತ್ಯ ನೈಮಿತ್ತಿಕ ರಥೋತ್ಸವಾದಿಗಳ್ಗೆ ಗ್ರಾಮ ಕ್ಷೇತ್ರಾದಿಗಳಂ ಕೊಟ್ಟು ತದಗ್ರದೊಳ್ ಸ್ಮಾರ್ತವೈಷ್ಣವರ್ಗೆ ಪ್ರಥಮ ಶತಕ ದ್ವಿತಿಯ ಶತಕಮೆಂದಿನ್ನೂರು ವೃತ್ತಿಯಗ್ರಹಾರಮಂ ಮಾಡಿಸಿಕೊಟ್ಟು ಮತ್ತಂ ಮಂತ್ರಿಯಂ ಕರೆದು ನಿಮ್ಮ ಜೈನಬ್ರಾಹ್ಮಣರ್ಗೆ ನೂರು ವೃತ್ತಿಯಂ ಕೊಡುವೆನೆಲ್ಲರಂ ಕರೆಯಿಸುವುದೆಂದಪ್ಪಣೆಯಾಗಲಾ ಪಂಡಿತಂ ಕೆಲಂಬರ್ ಜೈನವಿಪ್ರರಂ ತನ್ನ ಗೃಹಕ್ಕಂ ಕರೆಯಿಸಿ ರಾಜದರ್ಶನಪರರಂ ಮಾಡುತ್ತಿಪ್ಪಿನ

ಮತ ಮತಾಂತರಂಗಳ ತತ್ವಪ್ರಮೇಯಂಗಳೆಲ್ಲಮಂ ವಿಚಾರಿಸಿ ಜಿನಮತಂ ಮೊದಲು ಜೈನತತ್ವಂ ಪರಮಾರ್ಥಮೆಂದು ಜೈನಾಚಾರಂ ಪಾವನಮೆಂದು ತನ್ನರಮನೆಯವರ್ಗೆಲ್ಲಾ ನೀರಂ ಶೋಧಿಸಿ ತರುವಂತೆ ನಿಯಮಿಸೆ ಕೆಲವು ದೋಷವಸ್ತುಗಳಂ ಕೊಳ್ಳದೆ ಜೀವದಯಾಪರನಾಗಿ ಹಿಂದೆ ನೀಚರ್ ತಿನ್ನಲೋಸ್ಕರಮಾಗಿ ದೇವತಾಸಂಕಲ್ಪ ಮೊದಲಾದವೆಂದು ಕುರಿ ಮೊದಲಾದ ಪ್ರಾಣಿಗಳಂ ಲೆಕ್ಕಮಿಲ್ಲದೆಕೊಂದು ಹಿಂಸೆಯಂ ಮಾಡಿಸುತ್ತಿರ್ದವೆಲ್ಲಕ್ಕಂ ತೆಂಗಿನಕಾಯ್ಗಳಂ ನೇಮಿಸಿ ಜೀವದಯದೊಳ್ ತತ್ಪರನಾಗಿ ದಯಾಧರ್ಮದೊಳಿರ್ದನಂತಿರ್ಪುದುಮಮೊರ್ವ ಜಂಗಮ ಮಹಂತ ಕುಲದವಂ ವೇಷಧಾರಿಯಾಗಿ ಕೈಲಾಸದಯ್ಯನೆಂದು ಪಲವು ಮಹತ್ತಂ ಪೇಳುತ್ತ ಸಭೆಯೊಳ್ ಆಸ್ಫೋಟಿಸುತ್ತಿರಲ್ ಆತನಂ ಪರೀಕ್ಷಿಸಲು ವೈಕುಂಠದವನೆಂದು ಜಟ್ಟಿಯಂ ಬಿಟ್ಟೊಡವಂ ಮೊರೆಯಿಡೆ ಕೈಲಾಸದವರ್ ವೈಕುಂಠದವರ್ ಬಲ್ಲರೆಂದಿರಲಾತಂ ತನ್ನ ನಿಜಪ್ರಪಂಚಂ ಪೇಳ್ದು ಪೋದಂ.

ಮತ್ತೊಮ್ಮೆ ಕವಿ ವೀರಲಕ್ಷ್ಮಿಯೆಂದೊರ್ವೆ ಮಾದಗಿತ್ತಿಯು ಅಟ್ಟಹಾಸದಿಂ ಬಂದು ತಾನು ಕೇಶವನ ಸೂಳೆ ರಾತ್ರಿಕಾಲದೊಳ್ ಗೋಪಾಲಂ ಬಂದು ಕ್ರೀಡಿಸುವ ಪ್ರಪಂಚಂ ಪೇಳುತ್ತಾ ತನಗೆ ಅಶನಮಿಲ್ಲ ರಾತ್ರಿವೇಳೆ ಕುಟುಕುದಂಬುಲದೊಳ್ ಮೂರು ಯಾಲಕ್ಕಿಕಾಳಂ ಪುರುಷೋತ್ತಮನೀವನೆಂದಿಪ್ಪುದುಂ ಆಕೆಯನಾಘ್ರಾಣವ ಮನದಿಂ ಪರೀಕ್ಷಿಸಿ ಕಳೆದು ಈ ಪ್ರಕಾರ ಉದರನಿಮಿತ್ತಂ ಬಹುವೇಷಧಾರಿಗಳಾಗಿ ಡಂಬಕದಿಂದಾಡಂಬರವೇಷಧಾರಿಗಳಾಗಿ ಬಪ್ಪರ ಮುಖಮಂ ನೋಡದೆ ಪಟ್ಟಣಮಂ ಪುಗದಂತೆ ನಿಯಮಿಸಿ ವಿಸ್ಮಯಂಗಳಂ ಗ್ರಹಿಸದೆ ಪಂಡಿತಂ ಪೇಳ್ದಂತೆ ಪಟ್ಟಣದೊಳ್ ಪುರಾಣ ಬಸದಿಯ ಸಮೀಪದೊಳೆ ವರ್ಧಮಾನತೀರ್ಥಕರ ಚೈತ್ಯಾಲಯಮಂ ಮಾಡಿಸಿ ರೀತಿ ಕಾಮಯ ಪುರುಷಪ್ರಮಾಣಿನ ಬಿಂಬಮಂ ಅಷ್ಟಮಹಾಪ್ರಾತಿಹಾರ್ಯಂಬೆರಸು ಪ್ರತಿಷ್ಠೆಯಂ ಮಾಡಿಸಿ ಶಿಲೆಯೊಳುಂ ಹಿತ್ತಾಳೆಯೊಳುಂ ಪ್ರತ್ಯೇಕ ಪ್ರತ್ಯೇಕ ಚತುರ್ವಿಂಶತಿ ಪ್ರತಿಮೆಯಂ ಮಾಡಿಸಿರಿಸಿ ಬೆಳ್ಗೊಳಕ್ಕೆ ಎರಡು ಮೂರು ವೇಳೆ ಮಸ್ತಕಾಭಿಷೇಕವಂ ಮಾಡಿಸಿ ಪ್ರಸಾದಫಲವಂ ತರಿಸಿಕೊಂಡು ಸುಖಮಿರ್ದನಾ ರಾಜನ ದಯಕ್ಕೆ ಪಾತ್ರನಾಗಿರ್ದ ಕಾಳಶೆಟ್ಟಿಯುಂ ಅರಸಿನನುಜ್ಞೆಯಿಂದಾ ಬೆಳ್ಗುಳದೊಳ್ ಶಿಲಾಮಯಮಪ್ಪ ನೂತನವಾದ ಮಠವನ್ನು ಪಟ್ಟಾಚಾರ್ಯಂಗೆ ಮಾಡಿಸಿಕೊಟ್ಟನು. ಬಳಿಕ ಡಿಳ್ಳಿಗೆ ಸಲ್ಲತಕ್ಕ ಪಗದಿಹಣ ಹತ್ತುಸಾವಿರ ವರಹವನ್ನು ಡಿಳ್ಳೀಸಮೀಪದಲ್ಲಿ ಕಳ್ಳರು ಅಪಹರಿಸಿಕೊಳ್ಳಲಾಗಿ ಅದಕ್ಕಾವುದು ಕಾಣದಿರ್ದು ಜವನಶೆಟ್ಟಿ ಮಗನು ಅಣ್ಣಯ್ಯಶೆಟ್ಟಿಯೆಂಬವನು ಅಪ್ಪಣೆಯಿಂ ಪೋಗಿ ರಶೀತಿ ತೆಗೆದುಕೊಂಡು ತನಗೆ ಲಾಭಮಾಗಿ ತಂದೊಪ್ಪಿಸೆ ಟೆಂಕಸಾಲೆ ಬದುಕಿಗೆ ಅಧ್ಯಕ್ಷನಂ ಮಾಡಿ ಆನೆಯುಂ ಪಿಡಿಯಲ್ ಕಳಿಪುವುದಾನೆಗಳಂ ವಶಂ ಮಾಡಿ ತಂದೊಪ್ಪಿಸೆ ಅತ್ಯಂತ ಪ್ರೀತಿಯಿಂ ಮುಂದ ಮಾಡಿಪ್ಪುದು ಕ್ಷುದ್ರ ಜನಂಗಳ್ ಅರಮನೆ ಹಣವಂ ತಿಂದನೆಂದು ಐವತ್ತು ಸಾವಿರ ವರಹಕ್ಕೆ ಪಟ್ಟಿಯಂ ಬರೆದು ಕೊಡೆ ಚಿಕ್ಕದೇವರಾಜಂ ನ್ಯಾಯದಿಂ ವಿಚಾರಿಸಲು ಒಂದು ಕಾಸುಂ ಅವನ ಮೇಲೆ ರುಜು ಆಗದೆ ಇದ್ದಲ್ಲಿ ಅಷ್ಟರೊಳೆ ಶೆಟ್ಟಿಯು ತಾನು ಸಂಪಾದಿಸಿದ ಹಣವೆಲ್ಲಮಂ ಏಳು ಒಂಟೆ ಮೇಲೆ

ಸಾಗಿಸಿಕೊಂಡು ಬಂದು ಅರಮನೆ ಮುಂದೆ ಇಳುಹಿದೊಡೆ ಅರಸನನ್ಯಾಯದ್ರವ್ಯಮಂ ಕೊಳ್ಳಲಾಗದೆಂದು ತಿರುಗಿಸಿದೊಡೆ ಆ ದ್ರವ್ಯಕ್ಕೆ ರಾಜಾಜ್ಞೆಯಿಂದಲೆ ಬೆಳ್ಗುಳದೊಳ್ ಕಲ್ಯಾಣಿಯಂ ಮಾಡಿಸಿ ಸಾವಿರ ವರಹದೊರಿಗು ಜನಂಗಳ ಮೇಗೊಳನ್ನು ಧರ್ಮಕ್ಕೆ ಬಿಟ್ಟು ಅನೇಕ ಧರ್ಮಮಂ ಮಾಡಿದನು, ಚಿಕ್ಕದೇವರಾಜ ಕಲ್ಯಾಣಿಯೆಂದು ಹೆಸರಾಯ್ತು.

ಮತ್ತೊಂದು ದಿನಂ ಕಂಚಿದೇಶದ ಬುದ್ಧಿಸಾಗರನೆಂಬ ಆರ್ಯನು ತರ್ಕದೊಳ್ ವದೀಭಸಿಂಹನೆನಿಸಿ ಮಹಾಮಂತ್ರವಾದಿಯಾಗಿ ದೇಶಮಂ ಸಂಚರಿಸುತ್ತ ಏಚಗನಹಳ್ಳಿಗೆ ಬಂದಿರೆ ಚಿಕ್ಕದೇವರಾಜಂ ಕೇಳ್ದು ತನ್ನ ಕುಮಾರರ್ ದೇವರಾಜಯ್ಯ ಕಂಠೀರವಯ್ಯರೆಂಬೀರ್ವರೊಳ್ ಪಿರಿಯವಂಗೆ ಗ್ರಹಚೇಷ್ಟೆಯಂ ಕ್ಷಯರೋಗವಾಗಿಪ್ಪುದುಮಂ ಬಿಡಿಸಲ್ ಬುದ್ಧಿಸಾಗರಲಣ್ಣಗಳಂ ವೈಭವದಿಂ ಪಟ್ಟಣದರಮನೆಯಂ ಪುಗಿಸೆ ರಾಜಕುಮಾರನ ದೇಹಸ್ಥಿತಿಯಂ ನಿರೀಕ್ಷಿಸಿ ಲಕ್ಷಣಂಗಳೊಳ್ ರತಿಕಾಮ ಬಲಿಕಾಮ ಹಂತುಕಾಮಗಳೆಂಬ ತ್ರಿವಿಧಮಪ್ಪವಲ್ಲಿ ಜನ್ಮಾಂತರವೈರಸಂಬಂಧದಿಂ ಪಿಡಿದು ಬಾಧಿಸುವವು, ದಿವ್ಯಾದಿವ್ಯ ಭೇದದಿಂ ಪುರುಷಗ್ರಹ ಸ್ತ್ರೀಗ್ರಹಗಳೆಂದು ದ್ವಿವಿಧಂಗಳಿಂ, ದೇವ ನಾಗ ಯಕ್ಷ ಗಂಧರ್ವ ಬ್ರಹ್ಮರಾಕ್ಷಸ ಭೂತ ವ್ಯಂತರಮೆಂದು ಸಪ್ತವಿಧ ಪುರುಷಗ್ರಹಂಗಳ್, ಕಾಳಿ ಕಂಕಾಳಿ ಕರಾಳಿ ಕಾಳರಾಕ್ಷಸಿ ಜಂಘೆ ಪ್ರೇತಾಸಿನಿ ನೀಚಯಕ್ಷಿ ವೈತಾಳಿ ಕ್ಷೇತ್ರವಾಸಿನಿಯರೆಂಬ ನವವಿಧ ಸ್ತ್ರೀಗ್ರಹಂಗಳ ಲಕ್ಷಣಂಗಳಂ ನೋಡಿಯವಕ್ಕೆ ಯಂತ್ರ ಮಂತ್ರ ತಂತ್ರಾದಿಗಳಿಂ ನಿಗ್ರಹಿಸಲ್ ಹನ್ನೆರಡು ತೆರನಪ್ಪ ಪ್ರಯೋಗಮಂ ಮಾಳ್ಪುದಕ್ಕೆ ತಕ್ಕ ಸಾಮಗ್ರಿಯಂ ತರಿಸಿ ಕೆಲವಂ ಮಾಳ್ಪನ್ನೆಗಂ ತಾರ್ಕಿಕರ ಸೋಲ ಗೆಲವಂ ನೋಡಲ್ ಬುದ್ಧಿಸಾಗರನಂ ಕಳುಹಿಸಲಾ ಈರ್ವರಂ ಚಪ್ಪಟೆಗೆಯ್ಯೆ ಆ ಕಾರಣದಿಂ ಪಂಡಿತಂಗಂ ಬುದ್ಧಿಸಾಗರಂಗಮತ್ಯಂತ ಕಲಹಮಾಗೆ "ಕ್ರೋಧಂ ಸರ್ವಗುಣಂ ಹರೇತ್" ಎಂಬುದರಿಂ ಪಂಡಿತಂ ಬುದ್ಧಿಸಾಗರನಂ ಕಾವಲೊಳಿಡಲಾತಂ ಮಂತ್ರವಾದ ಸಾಮರ್ಥ್ಯದಿಂ ಫಲಪುಷ್ಪಾದಿಗಳನಾಕರ್ಷಣಮಂ ಮಾಡುತ್ತಿರ್ದು ಮಧ್ಯಾಹ್ನದೊಳೆ ತನ್ನ ಸಾಮಗ್ರಿ ಸಹಿತಮಾಗಿ ಪಟ್ಟಣಮಂ ಬಿಟ್ಟು ಶುಕ್ರವಾರಪೇಟೆ ಹೊಳೆಯೊಳಿನಿಸಿರ್ದು ಉತ್ತರ ದೇಶಕ್ಕೆ ಯಾತ್ರೆ ಪೋಗಿ ಸಂಗೀತಪ್ರಬಂಧಮಂ ಮನೋಯಿಚ್ಛೆಯಿಂ ಬರೆದು ಅರಸಿನ ಬಳಿಗೆ ಕಳುಹಿಸಿದಂ

ಮತ್ತೊಂದು ದಿವಸಂ ಷಡಕ್ಷರಿಯು ಲೀಲಾವತಿ ಮೊದಲಾದ ವಸ್ತುಕ ಕಾವ್ಯಮಂ ಚೆನ್ನಾಗರಿವನಾಗಿ ರಾಜಶೇಖಮೆಂಬ ಪ್ರಬಂಧಮಂ ಮಾಡಿ ಅರಸಿಂಗೊಪ್ಪಿಸಿದಂ. ಇಂತು ಪಂಡಿತನುಂ ಷಡಕ್ಷರಿದೇವನುಂ ತಿರುಮಲೆಯಯ್ಯಂಗಾರನುಂ ಅನ್ಯೋನ್ಯದಿಂ ಸ್ವಾಮಿಹಿತಕಾರ್ಯಕ್ಕನುಕೂಲಮಾಗಿರೆ ಚಿಕ್ಕದೇವರಾಜಂ ತಂಜಾವೂರ ಯಂಕೋಜಿಯಿಂದಾ ಮೂರು ಲಕ್ಷ ರೂಪಾಯಿಗೆ ಬೆಂಗಳೂರಂ ಕ್ರಯಕ್ಕೆ ಕೊಂಡು ತುಮಕೂರು ಹೊಸಕೋಟೆ ಹೊನ್ನವಳ್ಳಿ ಮೊದಲಾದ ಕೆಲವು ಸಂಸ್ಥಾನಗಳಂ ವಶಂ ಮಾಡಿ ಪ್ರಜೆಗಳಂ ಪರಿಪಾಲಿಸುತ್ತಿರೆ ರಾಜ್ಯದೊಳ್ ಮಠ ಮನೆ ಸ್ವಾಸ್ತಿಗಳನೇಕಮಿರ್ದುದರಿಂ ಜಂಗಮರತಿಪ್ರಬಲರಾಗಿ ಒಡೆಯರೆಂಬ ಹೆಸರೆಮಗಲ್ಲದಾರಿಗೂ ಸಲ್ಲದದರಿಂ ರಾಜ್ಯಕ್ಕೆ ತಾವೆ ಒಡೆಯರೆಂದು ರಕ್ತಾಕ್ಷಿ

ಸಂವತ್ಸರದಾಶ್ವೀಜಮಾಸದೊಳೆ ಜಂಗಮರೆಲ್ಲಂ ಕೂಡಿ ರಾಜ್ಯದ ಪ್ರಜೆಗಳೆಲ್ಲರಂ ಮೇಳುಗೂಟಕೂಡಿಸಿ ಲಕ್ಷ ಜನರವರೆಗೆ ತಾಯೂರ ಬಳಿ ದೊಡ್ಡ ಹೊಲದೊಳ್ ಮುಳ್ಳುಬೇಲಿಯನಿಕ್ಕಿ ಗುಡಾರಂಗಳೊಳ್ ರಾಜ ಮಂತ್ರಿ ಸೇನಾಪತಿಯೆಂದು ನಿಯಮಿಸಿ ಗಡಿಗಡಿಗಳ ಬದುಕು ಮಾಳ್ಪರಂ ಪೊರಡಿಸಿ ತಾವೆ ದೊರೆಗಳಾಗಿ ರಾಜ್ಯದೊಳೆಲ್ಲಾ ಜಂಗಮರ ಹಾವಳಿ ಅತ್ಯಂತಮಾಗೆ ಕಂದಾಯಮಂ ನಿಲ್ಲಿಸಿ ಮನೆಗೊಂದೊಂದು ಜನಂ ಹಿಟ್ಟುಬುತ್ತಿ ಹಸಿಹಿಟ್ಟು ದೊಣ್ಣೆ ಕವಣೆ ಸಹಿತ ಕಾಯಿಸಿ ತಾವೆ ದೊರೆಗಳೆಂದಿಪ್ಪಿನ ಅರಸಂ ಕೇಳ್ದು ಸಾಮಭೇದಂಗಳಿಂ ಮಾಣಿಸಲಾರದೆ ಷಡಕ್ಷರಿ ಮೊದಲಾದ ಸಾಮಾಜಿಕರಂ ಕರೆದುಮಿದಕ್ಕಾವುದು ಕಜ್ಜಮೆನಲಿಂತೆಂದರ್

ಮ || **ಅರಸಿರ್ದಾರಡಿಗೇಳ್ದಡಂ ಪುರವನುಂ ರಕ್ಷಿಪ್ಪವಂ ಕಳ್ದೊಡಂ**
ಪರದಂ ಸದ್ವ್ಯವಹಾರದೊಳ್ ಪುಸಿದೊಡಂ ಊರೆದ್ದು ಬಾಯಾರ್ದೊಡಂ
ಪರಿರಕ್ಷಿಪ್ಪುದು ಬೇಲಿಯಿದ್ದು ಪೊಲನಂ ಪೈರ್ಮೇದೊಡಂ ಭೂಪ ಕೇಳ್
ಕರುಣಾರ್ ಸಾಕ್ಷಿಗಳಾರ್ [ಸ] ಪಕ್ಷದವರಾರ್ ಕೈಕೊಳ್ವರಾರ್ ಕಾಯ್ವರಾರ್||

ಶ್ಲೋಕ || **ಬಹವೋಽಪಿ ವಿಶೋದ್ಧವ್ಯೋ ದುರ್ಜಯೋಽಪಿ ಮಹಾಜನಃ**
ಸ್ಫುರಂತಮಪಿ ನಾಗೇಂದ್ರಂ ಭಕ್ಷಯಂತಿ ಪಿಪೀಲಿಕಾ ||

ಎಂಬುದರಿಂದೆಲ್ಲರುಮಸಾಧ್ಯಮೆನೆ ಪಂಡಿತನಂ ಕರೆದು ಬೆಸಗೊಳೆ ಇದಿರ ಮನೆಯ ಇನ್ನೂರು ಕುದುರೆಗೆ ಜಮಾದಾರನಾದ ಪರಿದುಲ್ಲಾಖಾನನಂ ಸಾಮಗ್ರಿಸಹಿತಂ ಕಳುಹಿಸಿಕೊಟ್ಟರೆ ಕೂಟಮನೆಬ್ಬಿಸಿ ಬಪ್ಪನೆಂಬುದು ಅಂತೆ ಆತಂಗೆ ಸಾವಿರ ಬಾಣಮಂ ಕೊಟ್ಟು ಕಳುಹಿಸಲಾತನ ಕುದುರೆ ಸಿಪಾಯಿಗಳು ನಡುವಂ ಕಟ್ಟಿ ರೊಟ್ಟಿ ನೀರು ಸಹಿತಂ ಕುದುರೆಯನೇರಿಬಂದು ನೂರು ಇನ್ನೂರು ಕುದುರೆಗಳಂ ವಿಂಗಡಿಸಿ ಬಂದು ಚರಾಯಿನಿಮಿತ್ತಂ ಕಣಮೆಕೆಳಕ್ಕೆ ಅಪ್ಪಣೆಯಾಗಿದೆ ಎಂದು ಸುತ್ತಾ ಮುತ್ತಿನಿಲ್ಬುದು ಜಮಾದಾರಂ ಈರ್ವರ್ ಸಿಪಾಯಿಗಳ್ವೆರಸು ಮುಳ್ಳುಬೇಲಿ ಬಾಗಿಲಿಗೆ ಬಂದು ನಾನು ಜಮಾದಾರನು ತನ್ನ ಕುದುರೆಗಳಂ ಕೇರಳದೇಶಕ್ಕೆ ಪೋಗಿರೆಂದಪ್ಪಣೆಯಾಯ್ತು. ಮುಂದಣ ದೊರೆತನಂ ತಮ್ಮದೆಂದು ಕೇಳಿಬಂದೆನದರಿಂ ಒಡೆಯರಂ ಕಂಡುಪೋಪೆನೆಂದು ಬಾಗಿಲವರಿಂ ಪೇಳಿಸೆ ಕರೆಯಿಸಲ್ ಮೂವರ್ ಉನ್ನತಾಸನದೊಳ್ ಕುಳ್ಳಿರ್ದ ರಾಜ ಮಂತ್ರಿ ಸೇನಾಪತಿಗಳ ಇದಿರೊಳ್ ಸಣ್ಣ ತುಪಾಕಿಗಳಂ ನಡುವಿನೊಳಳವಡಿಸಿ ಕೊಂಡು ವೀರಮಂಡಿಯಿಂ ನತರಾಗಿ ಆಲಾಪಿಸೆ ಮೂರು ದಿವಸದಲ್ಲಿ ನಿಮ್ಮರಸನಂ ತೆಗೆದು ನಾವೇ ರಾಜ್ಯಕ್ಕೊಡೆಯರಪ್ಪೆವು. ನೀವೆಮ್ಮ ಬಳಿಯೊಳೆ ಕಾದಿರ್ಪುದೆನೆ ಒಡೆಯನುಪ್ಪಿಂಗೆರಡ ಚಿಂತಿಸಲಾಗದೆಂದು ವಾಗ್ವಾದವಾಗೆ ಗುದ್ದಿನೂಂಕಿಮೆನೆ ಮೂವರನೊಂದೆ ಸಮಯದಿ ಬಾಣಪ್ರಯೋಗದಿಂ ಕೆಡಿಪೆ ಆ ಧ್ವನಿಯಂ ಕೇಳ್ದು ಕುರಿಯವಿಂಡಿಗೆ ತೋಳನುಮಾನೆಸಮೂಹಕ್ಕೆ ಸಿಂಗನುಂ ಪಕ್ಷಿವಿಂಡಿಂಗೆ ಬಿಜ್ಜುಂ ಎರಗುವಂತೆ ಪೊಕ್ಕು ಸದೆವುದು ಪುಲಿಯಂ ಕಂಡ ಪುಲ್ಲೆಯಂತೆ ಪಾವಂ ಕಂಡ ಪಂದೆಯಂತೆ ಸಿಂಗಮಂ ಕಂಡ ಮೃಗವಿಂಡಿನಂತೆ

ಗುಂಪಳಿದೋಡುವರ ಸಂದಣಿಗಂ ಬಾಣಂಗಳ ಮುರಿದುಕಟ್ಟಿ ಪೊತ್ತಿಸಿಡುತ್ತಿರೆ ಬಿರುಗಾಳಿಗೆ ಚಲ್ಲರಿವರಳೆಯಂತೆ ಪಲಾಯನಮಾಗೋಡುವರಂ ಬಿಟ್ಟು ಇದಿರಾದರಂ ಜಂಗಮರಂ ತೊತ್ತಳದುಳಿದು ಕೊಂದೊಡೆ ಜಂಗಮರ ಕಾಟ ಗೌಡಗಳ ಕೂಟ ಬೇಲಿವಿಡಿದೋಟ ಮುಂದೆ ಪ್ರಜೆಗಳ್ಗೆ ಗುದದ ಗೂಟಮೆಂದೆಲ್ಲರ್. ಪಿಟ್ಟಿನ ಚೀಲಮಂ ಬಿಟ್ಟು ಉಟ್ಟರಿವೆ ಕಂಬಳೆಯಂ ನಿಟ್ಟಿಸದೆ ಕಟ್ಟಿ ಪಾವಡೆ ಸಮೇತಂ ಬಿಟ್ಟ ಒಕ್ಕಲಿಗಳೆಲ್ಲಂ ಬಟ್ಟೆ ತಪ್ಪಿಸಿ ಕೆಟ್ಟು ಮುರಿದು ಓಡುತ್ತ ಅಟ್ಟಿಬಪ್ಪರೆಂದು ದಟ್ಟಡಿಯಿಂ ಬೀಳುತ್ತೇಳುತ್ತ ಹೊಟ್ಟೆಯ ಪೊಸೆದುಕೊಳ್ಳುತ್ತಾ ಪೋದರ್.

ಅಂತು ಕೂಟಮೆಲ್ಲಂ ಪರೆದೋಡುವುದುಂ ಆ ವಾರ್ತೆಯಂ ಜಮಾದಾರಂ ಪೋಗಿ ರಾಜಂಗರಿಪೆ ಗ್ರಾಮಾನುಗ್ರಾಮಂಗಳೊಳಿರ್ಪ ಜಂಗಮರ ಮಠಮನೆಗಳೆಲ್ಲಮಂ ಕಿತ್ತು ಸ್ವಾಸ್ತಿಮಾನ್ಯಂಗಳಂ ಕೊಂಡು ಆಜ್ಞೆಯಂ ಮಾಡಿಸುತ್ತಿಪ್ಪಿನ ಕೆಲಂಬರ್ ಮೈಗರೆಯಲ್ ರಾಜನರಸುತ್ತಿರೆ ಕಮರದಲ್ಲಿ ಗುರಿಕಾರ ನಂಜೇಗೌಡನೆಂಬನೆನಗಪ್ಪಣೆಯಾದೊಡೆ ಸಾವಿರ ಜನಮನೊಪ್ಪಿಸುವೆನೆಂದು ವೀಳ್ಯಮಂ ಸಿಪಾಯರುಮಂ ಕೊಂಡು ರಾಜ್ಯದ ಮೇಲೆ ಬಂದು ವೇಷಮಂ ಮಾಚಿಕೊಂಡು ಒಕ್ಕಲಿಗರ ಕೆಲಸದ ಮೇಲಿರುವ ಜಂಗಮರಂ ಕಂಡು ಶರಣಂ ಮಾಡುವುದು ಅವರಂ ಕಟ್ಟಿಕೊಂಬರು. ಈ ಪ್ರಕಾರ ಸಾವಿರ ಜನಮಂ ತಂದೊಪ್ಪಿಸೆ ಅರಸಂ ಕೋಪಿಸಿ ಎಲ್ಲರಂ ಪರಿಹರಿಸಿದನು. ಆಗಳ್ ಸ್ವಾಮಿದ್ರೋಹಿಗಳೀ ಜಂಗಮರೊಳ್ ಕೂಡಿದ ರಾಜದ್ರೋಹಿಗಳಪ್ಪ ಪ್ರಜೆಗಳ್ಗೆ ತಾನು ನೇಮಿಸಿರ್ದ ಸಿದ್ಧಾಯಗಟ್ಟಿ ಒಂದೊರಹಕ್ಕೆ ಬೇಡಿಗೆ ನಾಣ್ಯವೊಟ್ಟಿ ಹುಲ್ಲುಸರತಿ ವ್ಯವಹರಣೆಯೆಂಬೀ ನಾಲ್ಕು ತೆರಿಗೆಯಿಂದೈದು ಹಣ ಅಡ್ಡ ಹೆಚ್ಚುಗೆಯ ವರಹಾ ಸರದಿವೆರಸಿ ಒಂದು ಅರಗಂದಾಯವನ್ನು ಹೊಲಕ್ಕೆ ಹೆಚ್ಚಿಸಿ ಹದಿನೆಂಟು ತೆರದ ಚಾವಡಿಯಂ ನಿರ್ಮಿಸಿ ಮಣೆಯ ಪೈಕಮಂ ಮಾಡಲ್ ಪ್ರಜೆಗಳ್ಗೆ ಬಾಧೆ ಪಿರಿದಾಯ್ತು.

ಅಷ್ಟರೊಳ್ ಮುಳಿದ ವೀರಶೈವರೆಲ್ಲಂ ಪಂಡಿತನ ಮೇಲೆ ಕೋಪಮನೆತ್ತಿಕೊಂಡು ಈ ಜೈನನೆ ನಮ್ಮ ಗುರುಗಳಪ್ಪ ಜಂಗಮರೆಲ್ಲರಂ ಕೊಲ್ಲಿಸಿ ಮಠ ಮನೆ ಸ್ವಾಸ್ತಿಯೆಲ್ಲಮಂ ಕೀಳಿಸಿದನೀತನಂ ಪರಿಹರಿಸಬೇಕೆಂದು ಸಂಪಾದಿಸಿಕೊಂಡು ನಾಗಣ್ಣನೆಂಬವಂ ಶಸ್ತ್ರಸಾಧನೆ ಮಾಡಿರ್ಪನಂ ಪ್ರೇರಿಸಲಾತಂ ಪಂಡಿತನ ಪರಿಜನಂಗಳನೊಳಗುಮಾಡಿಕೊಂಡಿರ್ದೊಂದು ದಿನಂ ಶಿಬಿಗೆಯನೇರಿ ಅರಮನೆಗೆ ಪೋಪನಂ ಆಲಿಕೊಂಡು ಬಂದು ಪೊಟ್ಟೆಯ ಕೈ ಅಂಬಿನಿಂದುರ್ಚೆ ಮೂರ್ಛೆಯಿಂ ಗೃಹಕ್ಕೆ ತರಲಾ ವಾರ್ತೆಯಂ ರಾಜಂ ಕೇಳ್ದು ತಾನೆ ಬಂದು ನೋಡಿ ತನ್ನ ಸರ್ವಶಕ್ತಿಯು ಪೋಯ್ತೆಂದು ದುಃಖದಿಂ ಚಿಂತಿಸುತ್ತಿರೆ ಪಂಡಿತನೆಂದನೆನಗವಸಾನಗಾಲಂ ಬಂದುದಿನ್ನು ಬುದ್ಧಿವಂತರಾರುಮಿಲ್ಲೀ ತಿರುಮಲಾರ್ಯನಂ ಮುಂದುಮಾಡಿ ಆಳೋಚಿಸಿ ರಾಜಕಾರ್ಯಮಂ ಮಾಳ್ಪುದೆಂದು ಪೇಳಿ ಮೃತವಾಗೆ ಆತನ ಮಗನಪ್ಪ ಬೊಮ್ಮರಸಂಗೆ ಏಚಗನಹಳ್ಳಿ ಗ್ರಾಮಮಂ ರಕ್ತಗೊಡಗೆಯೆಂದು ಶಿಲಾಪ್ರತಿಷ್ಠೆಯಂ ಮಾಡಿಸಿಕೊಟ್ಟು ತಾನುಂ ತಿರುಮಲಾರ್ಯನೊಳಾಳೋಚಿಸಿಕೊಂಡು ರಾಜ್ಯಮನಾಳುತ್ತಿರ್ದೊಂದು ದಿವಸಂ ವಿಹಾರಾರ್ಥಮಾಗಿ ಶುಕ್ರವಾರಪೇಟೆಯೊಳಿರ್ಪಾಗಳ್ ಆಟಗಾರ ಬಸವನೆಂಬಂ ಆರುದಿಂಗಳಿಂ

ಕಾದಿರ್ದು ರಾಜನಂ ಕಾಣಲ್ಪಡೆಯದೆ ಪಟ್ಟಣಮಂ ಪುಗಿಸದಿರ್ಪುದರಿಂ ತನ್ನ ಪೆಂಡತಿ ಸಹಿತಂ ಬಂದು ಅರಸಂಗೆ ಸಾಷ್ಟಾಂಗವೆರಗಿ ತನ್ನ ವಿದ್ಯಮನೀಕ್ಷಿಸಲೆಂದು ಜಾವಮಿಲ್ಲಿರ್ಪುದೆಂದು ಬೇಡಿಕೊಂಡಾ ಬಳಿಯೊಳೆ ಇಂದ್ರಜಾಲದಾಸ್ಥಾನಮಂಟಪಮಂ ವಿಗುರ್ವಿಸಲಲ್ಲಿ ಕುಳ್ಳಿರ್ದು ನೋಡುತ್ತಿರ್ಪಿನವಮಾ ಬಸವಂ ತಾನೊಂದು ಬೆಳ್ಳಿಯ ಬಸವರಾಗಿ ತನ್ನ ಪೆಂಡತಿ ಬಾಜಿಸುವಾತೋದ್ಯಲಯಕ್ಕೆ ಸಮನಾಗಿ ಮೂವತ್ತೆರಡು ಭಾರಣೆ ವಿದ್ಯಂಗಳನಾಡಲೊಂದೊಂದು ವಿದ್ಯಾಸಾಮರ್ಥ್ಯಕ್ಕಂ ಮೆಚ್ಚಿ ರಾಜ ಮಂತ್ರಿ ಸೇನಾನಿ ಅಧಿಕಾರಿ ಗುರಿಕಾರ ಸೇನಭಾಗ ಪಾರುಪತ್ಯಾಗಾರ ಶೆಟ್ಟಿ ಗೌಡರು ಮೊದಲಾದವರೆಲ್ಲಂ ತಮ್ಮ ತಮ್ಮೊಳಿರ್ದ ಶಾಲು ಸಕಲಾತಿ ಪಾಗು ಹಚ್ಚಡ ಮುಂತಾದವನಿಡುತ್ತಿರ್ದೊಡಾ ಬಸವಂ ತನ್ನೆಡಗೈಯಿಂದೆತ್ತಿ ರಾಶಿಯಂ ಮಾಡುತ್ತಿರ್ಪಿನಮೊರ್ವಂ ಬಿಟ್ಟಿಗೆ ಬಂದ ಕುರುಬನಾ ಬಸವನಂ ಪರೀಕ್ಷಿಸಲೊಂದು ಸಣ್ಣನಪ್ಪ ಕಲ್ಲನದರ ದೇಹದೊಳಿಡಲವನರಿದಾ ಪ್ರದೇಶಮನಲುಗಿಸಲಾತಂ ಮೆಚ್ಚಿ ತನ್ನ ಪೊರ್ದಿರ್ದ ಕಂಬಲಮನಿಡಲದಂ ಬಲಗೈಯಿಂದೆತ್ತಿ ರಾಶಿಯೊಳ್ ನಿಲಿಸೆ ಇಂತು ನಾನಾ ವಿಸ್ಮಯಂಗಳಂ ತೋರಿಸಿ ಆ ವೇಷಮನುಳಿದು ಸಿಪಾಯಿವೇಷದಿಂ ಖಡ್ಗಮನಾಂತು ಬಂದು ಸ್ವರ್ಗಕೆಯ್ದಿ ಇಂದ್ರನ ಖಾಂಡವ ವನಮಂ ಕತ್ತರಿಸಲ್ ಪೋಪೆನೆಂದೊಂದು ನೂಲಿನುಂಡೆಯ ಕೊನೆಯಂ ಪಿಡಿದು ಮೇಲಕ್ಕೆಸೆದೊಡಂ ನೂಲು ಸರಿಸಮಾಗಿ ನಿಲಲದರ ಮೇಲೆ ಪತ್ತಿ ಸರ್ವರೂ ಕಾಣುವಂತೆ ಆಕಾಶಕ್ಕೆ ಪೋಗಿಪ್ಪುದಾತನ ಪೆಂಡತಿಯು ದೇವೇಂದ್ರನ ಮಾತಲಿಯಂ ಭೇದಿಸಲ್ ಪೋದನಿವನಂ ಕೊಲ್ವನಲ್ಲದೆ ಮಾಣನೆಂದು ಅತಿದುಃಖದಿಂ ಪ್ರಳಾಪಿಸುತ್ತಿರೆ ಒಂದು ಮುಹೂರ್ತದೊಳೆ ಅಶೋಕ ಪುನ್ನಾಗ ಚಂಪಕ ಸುರಗಿ ಸುರಹೊನ್ನೆ ಮೊದಲಾದ ವೃಕ್ಷಂಗಳಂ ಪೊಲ್ಲೆ ಮಲ್ಲಿಕಾದಿ ವಲ್ಲಿಗಳ ಮಾಕಂದಾದಿ ಫಲತರುಗಳ ಕಿರುಕೊಂಬು ಗೊಂಚಲು ಪತ್ರಪುಷ್ಪಫಲಾದಿಗಳ್ ರಾಶಿಯಾಗಿ ಆಕಾಶದಿಂ ಉದುರುತ್ತಮಿರ್ದುದಾಕೆ ಮತ್ತಂ ದುಃಖಿಸೆ ಕಡೆಯೊಳ್ ರುಧಿರಪ್ರವಾಹದಿಂದಾತನ ತಲೆಯುಂ ಮುಂಡಮುಂ ಬಿದ್ದುರುಳ್ವುದುಂ ತದ್ದೇಹಸಂಸ್ಕಾರಂಗೆಯ್ಯಲ್ ಪುಳ್ಳಿಯಂ ತಂದೊಟ್ಟಿಸಿಮದರೊಳೆ ಶಿರಮುಂಡಂಗಳನಿಟ್ಟು ಅಗ್ನಿಯಂ ಪೊತ್ತಿಸುವಾಗಲಾತನ ಪೆಂಡತಿ ಸರ್ವದಾ ನಿಲ್ಲೆನೆಂದು ತಾನುಂ ಪೊಕ್ಕು ಅಗ್ನಿಯಂ ಪೊತ್ತಿಸಲಾಗಲೆ ದಹಿಸಿ ಭಸ್ಮವಾಗೆ ಅರಸಂ ವಿಷಣ್ಣ ಮನದಿಂ ನೋಳ್ಪಿನಮಿಂದ್ರಜಾಲದಾಸ್ಥಾನಮಂಟಪಮದೃಶ್ಯಮಪ್ಪುದು ರಾಜಂ ವೈಮನಸ್ಯದಿಂ ಪಟ್ಟಣಮಂ ಪುಗುವಾಗಲಾ ಬಸವಂ ತನ್ನ ಪೆಂಡತಿಯಂ ಕೈಹೊಯ್ದುಟ್ಟಹಾಸದಿಂ ನಗುತ್ತಂ ಬರೆ ಅತ್ಯಾಶ್ಚರ್ಯಂಬಟ್ಟಾತಂಗೆ ಸಾಲ್ವನಿತು ಹೊನ್ನಂ ಕೊಟ್ಟು ಮನ್ನಿಸಿ ಕಳುಹಿದನಂದಿಂದಿತ್ತ ಅನೇಕ ವೇಷಧಾರಿಗಳು ಬಂದು ತಂತಮ್ಮ ಆಟಂಗಳಂ ತೋರಿಸುವರ್.

ಮತ್ತಂ ಶೈವಾಚಾರದೊಳ್ ಮಹತ್ತಂ ತೋರಿಸಿ ಪಾವಾಡಮನೆತ್ತಿ ಮಾನ್ಯಂಬಡೆದರ್. ಕಂಬಿಯವರ್ಗಂ ಮೇಳದವರ್ಗಂ ರಾಜ್ಯದೊಳ್ ಮನ್ನಿಸುವಂತೆ ನಿರೂಪಮಂ ಮಾಡಿಸಿಕೊಟ್ಟು ಕೆಲಕೆಲವು ಮಠಂಗಳ್ಗೆ ಸ್ವಾಸ್ತಿಕೊಟ್ಟರ್. ತಿರುಮಲೆಯಾರ್ಯಂ ವೈಷ್ಣವಮತಮಾಹಾತ್ಮ್ಯಮಂ ತೋರಿಸುತ್ತ ಪದ್ದುಪಾವಾಡಮನೆತ್ತಿಸಿ ಬಿಡು ಮಣೆಯರ ದಾಸಗಳ್ಗನೇಕ ಬಿರಿದು

ಬಾವಲಿಗಳನಿತ್ತು ಸರ್ವೋತ್ಕೃಷ್ಟಂ ಮಾಡಿದೊಡಾಗಲ್ ಅನೇಕ ಜರನಂ ವೀರವೈಷ್ಣವರಂ ಮಾಡುತ್ತಮಿರೆ ಜೈನಬ್ರಾಹ್ಮಣರಂ ಚಿಕ್ಕಯ್ಯ ಪಂಡಿತಂ ವಿದ್ವಾಂಸನಾಗಿಯುಂ ದಯಕ್ಕೆ ಪಾತ್ರನಾಗಲೆಂದು ತಾನುಂ ಬೊಮ್ಮರಸ ಪಂಡಿತನು ದೇವರಸನು ಸಹಿತ ಕಿರುಮಾಳಿಗೆಯೊಳ್ ಮುದ್ರೆಯಂ ಧರಿಸಿ ನಾಮಧಾರಿಗಳಾಗಿ ಜೈನಮತದ್ವೇಷಿಗಳಾದರ್. ಆ ತಿರುಮಲಯ್ಯಂಗಾರ ಮಂತ್ರಿ ಮಂತ್ರಾಲೋಚನೆಯಿಂ ವೈಷ್ಣವಮತಮಂ ಪೆರ್ಚಿಸಿಯನೇಕ ಜನರ್ಗೆ ನಾಮಮನಿಕ್ಕಿಸಿ ಮುದ್ರ ಧಾರಣೆಯಂ ಮಾಡಿಸಿ ಬಿಡುಮಣೆಯದ ದಾಸರುಗಳಂ ಪ್ರಬಲಂ ಮಾಡಿರುತ್ತ ಮತ್ತೊಂದು ದಿವಸಂ ಉತ್ತರದಿಗ್ವಿಜಯಂ ಮಾಡಲೆಂದು ಪೋಪಾಗಳ್ ಪಟ್ಟಣದೊಳ್ ದೊಡ್ಡದೇವಯ್ಯನೆಂಬ ಮಹತ್ತರನಂ ಸರ್ವಾಧಿಕಾರದೊಳಿರಿಸಿ ಪೋಪುದುಮಾತಂಗೆ ವೀರಶೈವರೆಲ್ಲಂ ಹಿಂದೆ ಪಂಡಿತಂ ಮುಖ್ಯನಾಗಿರ್ದು ಮಠಮನೆಗಳಂ ಕೆಡಿಸಿದಂ. ನೀನು ವೀರಶೈವನಪ್ಪುದರಿಂ ರಾಜ್ಯಗಳೊಳಿಪ್ಪ ಜಿನಾಲಯಮಾದ ಬಸ್ತಿಗಳಂ ಪರಿಹರಿಸುವುದೆಂದು ಬೋಧಿಸೆ ಕ್ರೋಧಮುದ್ರೇಕಮಾಗಿ ಪತ್ತು ಸಾಸಿರ ಕಾಮಾಟಿಗಳಂ ಬೆಸಸಿ ಶಕ ವರ್ಷಂಗಳ್ ೧೬೨೦ನೆ ಬಹುಧಾನ್ಯ ಸಂವತ್ಸರದ ಭಾದ್ರಪದಮಾಸದೊಳ್ ಮೈಸೂರಿಗೆ ಸೇರಿದ ಗ್ರಾಮಾನುಗ್ರಾಮಂಗಳೊಳ್ ತಪ್ಪದೆ ಇರುತ್ತಿರ್ಪ ೧೭೦೦ ಬಸದಿಗಳೊಳಗೆ ಆರೇಳು ಉಳಿದು ಕಡಮೆ ದೇವಸ್ಥಾನಂಗಳಂ ದೇವರಬಿಂಬ ಸಹಿತ ಒಡೆಯಿಸುತ್ತಿರಲಾಗಿ ಆ ಸಮಾಚಾರಮಂ ಮಹಾರಾಜಂ ಕೇಳಿ ನಿಲ್ಲಿಸಿದನಷ್ಟರಲ್ಲಿ ದೊಡ್ಡದೇವಯ್ಯಂ ಕೆಲವು ದಿವಸದೊಳ್ ಸೆರೆಯೊಳ್ ಮೃತವಾದಂ.

ಚಿಕ್ಕದೇವರಾಜರಸಂ ಶಕವರುಷ ೧೬೨೬ನೆ ತಾರಣಸಂವತ್ಸರದ ಕಾರ್ತಿಕ ಬಹುಳ ಅಮಾವಾಶಿಯೊಳು ಸ್ವರ್ಗಸ್ಥನಾಗೆ ಈ ಮಾರ್ಗಶಿರ ಶುದ್ಧ ಪಾಡ್ಯಾರಭ್ಯವಾಗಿ ಆತನ ಕುಮಾರಂ ಕಂಠೀರವಯ್ಯರಸಂ ರಾಜ್ಯಪಾಲನೆಯಂ ಮಾಡುವಲ್ಲಿಯುವರಿಗೆ ಮದುವೆ ಎಳವಂದೂರಮ್ಮಣ್ಣಿಯವರ ಸೋದರದ ಸೊಸೆಯಾದ ಚಾಮಮ್ಮಣ್ಣಿಯಂ ಕಳಶೆ ದೊಡ್ಡಚಿಕ್ಕರಸಿನನುಜೆ ಚಲುವಾಜಮ್ಮಣ್ಣಿಯುಂ ಅಂತೀರ್ವರರಸಿಯರುಮೊರ್ವ ಭೋಗಸ್ತ್ರೀಯುಂ ಸಹಿತ ಸುಖಮಿರ್ದು ಆಯಕಟ್ಟಿನ ಚಾವಡಿ ಪದುಮಣ್ಣಯ್ಯ ಮೈಸೂರ ಕರ್ಣಿಕದೇವರಸ ಸೂರಪಂಡಿತ ಧರಣಿಪಂಡಿತ ಕುದೇರು ದೇವಚಂದ್ರಪಂಡಿತ ಉಗ್ರಾಣದ ಚಲುವಯ್ಯ ಮುಂತಾದ ಜೈನಬ್ರಾಹ್ಮರಿಗೆ ಸಂಬಳ ಉಂಬಳಿಗಳಿಗೆ ನಿರ್ಬಾಧಕಮಾಗಿ ನಿರೂಪಮಂ ಬರೆಯಿಸಿಕೊಟ್ಟು ಕನಕಗಿರಿ ಮೊದಲಾದ ಬಸ್ತಿ ದೇವಸ್ಥಾನಂಗಳಂ ಹತ್ತು ದೇವಸ್ಥಾನಂಗಳನುದ್ಧರಿಸಿ ಪೂರ್ವ ಮೇರೆ ಗ್ರಾಮ ಕ್ಷೇತ್ರಂಗಳ ಕೊಡಿಸಿ ಕೆಲ ಅಗ್ರಹಾರ ಮುಖವಾಸಿಗಳಂ ಕೊಟ್ಟು ಒಂಬತ್ತು ವರ್ಷ ದೊಡ್ಡಮ್ಮನವರು ದಳವಾಯರ ಮೇಲೆ ರಾಜ್ಯಮನಿರಿಸೆ ಹಸ್ತಸಂಜ್ಞೆಯಿಂದಾ ಒಂಬತ್ತು ವರ್ಷ ರಾಜ್ಯಮನಾಳಿ ಶಕವರುಷ ೧೬೩೪ ವಿಜಯಸಂವತ್ಸರದ ಪಾಲ್ಗುಣ ಬಹುಳ ಪಾಡ್ಯದಲ್ಲು ದಿವಮಂ ಪೊಕ್ಕೊಡೆ ಆತನ ಭಾರ್ಯೆ ಚೆಲುವಾಜಮ್ಮಣ್ಣಿಯ ಗರ್ಭೋದ್ಭವನಾದ ದೊಡ್ಡಕೃಷ್ಣರಾಜ ಒಡೆಯರು ರತ್ನಸಿಂಹಾಸನಾರೂಢರಾಗಿರ್ದರ್. ಇವರಿಗೆ ಕಳಲೆ ಚಿಕ್ಕಅರಸಿನವರ ಕುಮಾರತಿ ಚೆಲುವಾಜಮ್ಮಣ್ಣಿಯುಂ ದೇವಾಜಮ್ಮಣ್ಣಿಯುಂ ಕಳಲೆ ದೊಡ್ಡ ಚೆಲುವೆಅರಸಿನವರ

ಕುಮಾರತಿ ಚೆಲುವಾಜಮ್ಮಣ್ಣಿಯುಂ ಕಾಂತಮ್ಮಣ್ಣಿಯುಂ ಕಳಲೆ ತಿಮ್ಮರಾಜೆ ಅರಸಿನವರ ಪುತ್ರಿ ಚೆಲುವಾಜಮ್ಮಣ್ಣಿಯುಂ ಕೊತ್ತಾಗಾಲದ ಕೃಷ್ಣೇಅರಸಿನವರ ಕುಮಾರತಿ ಕಾಂತಮ್ಮಣ್ಣಿಯುಂ ಹುಲ್ಲನಹಳ್ಳಿ ಚಿಕ್ಕೆಅರಸಿನವರ ಪುತ್ರಿ ಕೆಂಪನಂಜಮ್ಮಣ್ಣಿಯುಂ ನಿಲಸೊಗೆ ದೊಡ್ಡೆಅರಸಿನವರ ಕುಮಾರತಿ ದೇವೀರಮ್ಮಣ್ಣಿಯುಂ ಮೂಗೂರ ಕೆಂಪಮ್ಮಣ್ಣಿಯುಮೆಂದೀ ಒಂಬತ್ತು ಜನ ಅರಸಿಯರಾಗೆ ಇದಲ್ಲದೆ ಪಾಳೇಗಾರರ ಮಕ್ಕಳು ಶಿವಾಚಾರದ ಶೆಟ್ಟಿಗಳ ಮಕ್ಕಳು ಸಹ ಮೂವತ್ತು ಜನ ಬಂಗಾರಸ್ತ್ರೀಯರು ಆಗೆ ಸುಖದಿಂ ರಾಜ್ಯವಾಳುತ್ತಮಿರ್ದೊಡೆ ಆತನರಸಿ ಚಾಮಮ್ಮಣ್ಣಿಗೆ ಭವಾಂತರದ ಕಾಟಮಾಗಿರಲಾರಿಂದಂ ಕಳಿಯದಿರಲು ಬೆಳ್ಗುಳಕ್ಕೆ ಈಕ್ಷಣಾರ್ಥ೯ಂ ಪೋಗಿ ಮಸ್ತಕ ಪೂಜೆಯುಂ ಮಾಡಿಸಿ ಚಾರುಕೀರ್ತಿಪಂಡಿತಾಚಾರ್ಯರನೊಡಗೊಂಡು ಬಂದು ತನ್ನರಸಿಯ ಭವಾಂತರಮಂ ಬಿಡಿಸುವುದೆಂದು ಪೇಳೆ ಅವರಾ ದೈವಮಂ ನುಡಿಸಿದೊಡಂ ನುಡಿಯದಿಪ್ಪುದುಮದಕ್ಕೆ ಸ್ತಂಭನ ಸ್ತೋಬನ ತಾಡನ ಅಂಧಿಕರಣ ಪ್ರೇಷಣ ದಹನ ಭೇದನ ಬಂಧನ ಖಂಡನ ಗ್ರೀವಾಭಂಗ ಕಂಠಮೋಟನ ಆಂತ್ರಭೇದನ ಹಿಂಸನ ಆಪ್ಯಾಯನಮೆಂಬೀ ದ್ವಾದಶ ವಿದ ನಿಗ್ರಹಂಗೆಯ್ಯೆ ಕಂಗೆಟ್ಟು ನಾನೀಕೆಯುಂ ಬಿಟ್ಟಪೆನಲ್ಲ ನೀಂ ಬಿಡಿಸಿದೊಡಂ ನಿನ್ನಂ ಬಿಡುವೆನಲ್ಲೆಂದೊಡಾದರಾಗಲಿಯೆಂದು ಬಿಡಿಸಲು ಆತನೊಡನೆ ಬಂದು ಕೊಲಲಿಪ್ಪುದು ಆ ಮುನಿಯಂ ತನ್ನ ಬಳಸಿ ಯುಗದ್ವಯಂಬರಂ ದಿಗ್ಬಂಧನದಿಂದಿರುತ್ತಿರಲೊಂದು ದಿನ ಶೌಚಕ್ಕೆ ಕಾಡಿಗೆ ಪೋಗಲ್ಲಿ ದಿಗ್ಬಂಧನದೊಳ್ ಕಮಂಡಲಮನಿಟ್ಟು ಮೌನಗೊಂಡಿರೆ ಗುಂಡಿಗೆಯ ಜೂಳಿ ಪೊರಗೆ ನೀಡಿಪ್ಪುದು ಅದಂ ಬಗ್ಗಿಸಿ ಜಲಮಂ ಸೋಸಿಸೆ ಅವರ್ ನಿಯಮದ ಪೊರಗೆ ಬಂದಾಗಳ್ ಪಿಶಾಚಂ ಕೊರಳನೌಂಕಿ ಕೆಡಿಪೆ ರಕ್ತಮಂ ಕಾರಿ ಮೃತವಾದನು.

ಈ ಕೃಷ್ಣರಾಜಂ ಹದಿನೆಂಟು ವರ್ಷ ರಾಜ್ಯದೊಳಿರ್ದು ಶಕವರ್ಷ ೧೬೫೩ನೆ ವಿರೋಧಿಕೃತು ಸಂವತ್ಸರದ ಫಾಲ್ಗುಣ ಬ ೫ಯಲ್ಲು ಕಾಲಂಗಂಡೊಡೆ ಅಪುತ್ರನಾದುದರಿಂ ಆ ವಂಶದಲ್ಲಿಯ ಹದಿನೆಂಟು ವರ್ಷದ ಚಾಮರಾಜನೆಂಬಂಗೆ ಪಟ್ಟಮಂ ಕಟ್ಟಿ ಮೂರು ವರ್ಷ ನಡೆವಾಗ ದಳವಾಯಿಗಳೊಳ್ ವಿರುದ್ಧಮಾಗೆ ಆತನಂ ಕಬ್ಬಾಳ ದುರ್ಗಕ್ಕೆ ಹಾಕಲಲ್ಲಿಯೆ ತೀರಿಹೋದ. ಅಷ್ಟರಲ್ಲಿ ಕೃಷ್ಣರಾಜನೆಂಬ ಐದು ವರ್ಷದ ದತ್ತು ಪುತ್ರ ಇಮ್ಮಡಿ ಕೃಷ್ಣರಾಜನೆಂಬವಂ ಐದು ವರ್ಷದ ಮಗುವಿಗೆ ಪಟ್ಟಮಾಯ್ತು. ಬಳಿಕ ಶುಕ್ಲಸಂವತ್ಸರದಲ್ಲಿ ನಿಜಾಮಯೆಂಬವನು ನಾಸರಜಂಘನ ಮಗನ ಮೈಸೂರಿಗೆ ಕಳುಹಿಸಿ ಪಗದಿಗೆ ನೆಲೆ ಮಾಡಿದನು. ಶಕವರುಷ ೧೬೭೧ನೇ ಪ್ರಮೋದೂತ ಸಂವತ್ಸರದಲ್ಲಿ ಬೆಂಗಳೂರಿಗೆ ಗಾವುದದೊಳಿರುವ ರೇವಂಡಹಳ್ಳಿಗೆ ದಳವಾಯರು ಹೈದರಲ್ಲಿಯ ಸರದಾರನ ಮಾಡಿ ಮುತ್ತಿಗೆ ಹಾಕಿಸಿದರು. ಆಗ ನವಾಬು ಮುತ್ತಿಗೆ ವಿಡಿದಲ್ಲಿ ಜಮಾದಾರನಾದನು. ಶಕವರುಷ ೧೬೭೭ನೇ ಯುವಸಂವತ್ಸರದಲ್ಲಿ ಹೈದರಲ್ಲಿಯು ದಿಂಡಿಕಲ್ಲಿಗೆ ಹೋಗಿದ್ದನು. ಶಕವರುಷ ೧೬೮೦ನೆ ಬಹುಧಾನ್ಯ ಸಂವತ್ಸರದಲ್ಲಿ ಹೈದರಲ್ಲಿಗೆ ಬೆಂಗಳೂರನ್ನು ಜಾಗೇರಿ ಮಾಡಿಕೊಟ್ಟರು. ಪ್ರಮಾದಿ ಸಂವತ್ಸರದಲ್ಲು ಆತನಿಗೆ ಬಹದರನೆಂಬ ಹೆಸರಾಯ್ತು. ಅಲ್ಲಿಂದಿತ್ತ ರಾಜನ ಹೆಸರಿಂದಾ ತಾನೆ ರಾಜ್ಯವಾಳುವನು. ವಿಷುಸಂವತ್ಸರದಲ್ಲು

ಈ ಕೃಷ್ಣರಾಜಂಗೆ ಮೂರು ಲಕ್ಷ ರೂಪಾಯಿ ನಿರ್ಮಿಸಿ ರಾಜ್ಯಮನೆಲ್ಲಾ ತನ್ನ ವಶಮಾಡಿಕೊಂಡನು. ಶಕವರುಷ ೧೬೮೮ ವ್ಯಯ ಸಂವತ್ಸರದಲ್ಲಿ ಚಿಕ್ಕಕೃಷ್ಣರಾಜಂ ಕಾಲಂಗಂಡೊಡೆ ಈತನ ಕುಮಾರ ೧೮ ವರುಷದ ನಂಜರಾಜನೆಂಬರಸಂ ನಾಮಮಾತ್ರದಿಂ ಸಿಂಹಾಸನಮನೇರಿರ್ದೊಡಾತನ ಬಂಧನಮಂ ಮಾಡಿ ಮೂರು ಲಕ್ಷ ರೂಪಾಯನ್ನು ನಿಲಿಸಿಬಿಟ್ಟು ಆತನ ನಂದನ ಸಂವತ್ಸರದಲ್ಲಿ ಸ್ನಾನದ ಮನೆಯೊಳಗೆ ಕುತ್ತಿಗೆ ಕುಯ್ಸಿ ಆತನನುಜನಾದ ಚಾಮರಾಜನಂ ಲಾವನಾ ಬರಸಿಟ್ಟನು.

ಇಂತು ದೊಡ್ಡಕೃಷ್ಣರಾಜ ಒಡೆಯರ ಸ್ವೀಕಾರಪುತ್ರರಾದ ಇಮ್ಮಡಿ ಕೃಷ್ಣರಾಜ ಒಡೆಯರಿಗೆ ಕಳಲೆ ದಳವಾಯರ ಮಕ್ಕಳು ದೇವಾಜಮ್ಮಣ್ಣಿಯುಂ ಬೆಳುಗುಲಿ ದೇವಾಜಮ್ಮಣ್ಣಿಯುಂ ಬೆಟ್ಟದಕೋಟೆ ಲಕ್ಷ್ಮಮ್ಮಣ್ಣಿಯುಮೆಂಬ ಮೂವರರಸಿಯರಾಗೆ ಹನ್ನೆರಡು ಜನ ಭಂಗಾರದ ಭೋಗಸ್ತ್ರೀಯರೊಡನೆ ಸುಖಮಿರ್ದು ನಂಜರಾಜನುಂ ಚಾಮರಾಜರುಮೆಂಬ ಈರ್ವರ್ ಕುಮಾರರು ಕಾಲವಾದ ಬಳಿಕ ಅರಿಕುಠಾರದೊಳಿರ್ದ ರಾಜಒಡೆಯರ ವಂಶದಲ್ಲಿ ಪುಟ್ಟಿದ ದೇವರಾಜರ ಅರಸಿ ಹೊನ್ನಾಜಮ್ಮಣಿಗಂ ಉದ್ಭವಿಸಿದ ಚಾಮರಾಜನೆಂಬ ಕುಮಾರನ ದತ್ತುವಾಗಿ ಶಕವರುಷ ೧೬೯೯ನೆ ಹೇವಿಳಂಬಿ ಸಂವತ್ಸರದೊಳ್ ಪಟ್ಟಾಭಿಷೇಕಮಾಗೆ ಆತಂಗೆ ಮೂಗೂರ ಭಾಳಲೋಚನನಗ್ರತನೂಭವೆ ರೂಪುಸಂಪನ್ನೆಯಪ್ಪ ಕೆಂಪನಂಜಾಂಬೆಯು ಹುರಕ್ಕಿ ನಂಜರಾಜತನೂಭವೆಯು ದ್ವಿಜ ರಾಜಸದೃಶವದನೆಯು ಗಜಗಮನೆಯು ತರುರಾಜೋಪಮಜಂಘೇರ ಸತಿಯಂ ಕೋಕಿಲಾಲಾಪೆಯುಮಾಗಿ ರತಿದೇವಿಯ ರೂಪ ಗೆಲ್ವ ಕೆಂಪದೇವಾಂಬೆಯುಮೆಂಬ ಇಂತೀರ್ವರು ಅರಸಿಯರಾಗೆ ಸುಖಸಂಕಥಾವಿನೋದದಿಂದಿರುತ್ತಿರಲ್ ಆ ಕೆಂಪದೇವಾಂಬೆಯು ಭೋಗಾಂತರಾಯೋದಯದಿಂ ವಿಯೋಗಮಾಗೆ ತದ್ವಿರಹಾಂಧಕಾರದಿಂ ಚಿಂತಾಕ್ರಾಂತ ಸ್ವಾಂತರಂಗನಾಗಿರ್ದು ಬಳಿಕ ಅತಿಶಯ ರೂಪನಾಂತ ಕೀಲಾಪುರದ ರಾಜಪುತ್ರಿ ಚೆಲುವಾಂಬೆಯು ಬಾಳೆಸುಳಿಯಂತೆ ತೊಳಗಿ ಬೆಳಗಿ ನಳನಳಿಸುವ ರೂಪಿನ ಬಾಲೆ ಅರಸನನುಗಿ ಜ್ಯೇಷ್ಠಪತ್ನಿಯ ಅನುಜೆಯಪ್ಪ ದೇವಾಂಬಿಕೆಯು ಅತಿಶಯ ರೂಪಿನೊಳ್ ರತಿಯಂ ವಿದ್ಯಾನಿಪುಣೆಯಿಂ ಭಾರತಿಯಂ ಸುಗುಣ ಸೊಬಗು ಶಾಂತತೆಯೊಳ್ ರೋಹಿಣಿಯಂ ಪೋಲ್ವ ಪಂಪಾನ್ವಯನಪ್ಪ ಹುರದ ಪುಟ್ಟರಾಜರಸನ ಕುಮಾರತಿ ಪಾವನೆಯಾದ ದೇವೀರಾಂಬಿಕೆಯುಂ ರೂಪು ಲಾವಣ್ಯ ವಿಲಾಸದೊಳ್ ಸಲಕ್ಷಣಮುಳ್ಳ ತೊಂಡವಾಡಿ ಕಾಂತೆಯರಸಿನ ಪುತ್ರಿ ಲಕ್ಷ್ಮಣಾಂಬೆಯುಂ ಫುಲ್ಲಶರನ ವಲ್ಲಭೆಯ ರೂಪಂ ಗೆಲ್ವ ಹುಲ್ಲನಹಳ್ಳಿಯ ಭೂವಲ್ಲಭನ ಸುತೆ ನಂಜಾಂಬೆಯುಮೆಂಬೀ ಐವರಂ ಮಹಾದೇವಿಯರಂ ಮದುವೆಯಾಗೆ

> ಇಡಿದಿರೆ ಕಾಂತಾವಿರಹದ
> ಕಡುಗತ್ತಲೆ ಚಾಮನೃಪನ ಮಾನಸದೊಳಗಂ
> ಕಿಡಿಸಲ್ ರತ್ನಂಗಳೊಳ್ಳೆ

ಸೊಡರಂ ಪಿಡಿದಂತೆ ಚಿತ್ತ ಬೆಳಗಿದುದಾಗಳ್

ಅಂತು ಪಂಚಕಲ್ಯಾಣೋತ್ಸವದಿಂ

ಶಾ || **ಆ ರಾಜಾಗ್ರಣಿಯಪ್ಪ ಸದ್ಗುಣ ಲಸತ್ಸರ್ವಾಂಗ ಶೋಭಾಕರಂ**
ಧೀರಂ ಭೀಮಬಲಂ ಪ್ರತಾಪನಿಳಯಂ ಗಾಂಭೀರ್ಯ ಸೌಂದರ್ಯದೊಳ್
ಪಾರಾವಾರ ಪರಾಕ್ರಮಾನ್ವಿತ ಕಲಾವಿಜ್ಞಾನಸಂಪನ್ನನಾ
ದಾ ರಾಜೇಂದ್ರಶಿರೋಮಣೀಪೃಥುಯಶಂ ಚಾಮೇಂದ್ರಭೂಪಾಲಕಂ

ಅಂತಪ್ಪ ಸಾಮರ್ಥ್ಯಮನುಳ್ಳವನಾಗಿಯು ಹಿಂದೆ ಶುಭಕೃತು ಸಂವತ್ಸರದಲ್ಲಿ ಹೈದರಲ್ಲಿಯು ಸ್ವಾಮಿದ್ರೋಹಿಯಾಗಿ ರಾಜ್ಯದೊಳಿರ್ದು ಆರುಕಾಡಿಗೆ ಉತ್ತರದಿಕ್ಕಿನ ಗಾವುದದಲ್ಲಿ ತೀರಿಹೋದ್ದರಿಂದಾ ಆತನ ಶರೀರಂ ಕೊಳಾಳದಲ್ಲಿ ಹೂಳಿದ್ದು ಸುಲತಾನಂ ತಂದು ಲಾಲಬಾಗಿಲೊಳು ಹೂಳಿಸಿಟ್ಟಿದ್ದು ಸುಲತಾನಂ ಪಾದಶಾಯನಪ್ಪೆನೆಂದು ಕರ್ನಾಟಗಳಂ ಪಿಂದಿಕ್ಕಿ ಮೈಸೂರನ್ನು ಕಿತ್ತು ನಜರಬಾದೆಂದು ಮಾಡಿಸಿ ಸರ್ವೇಜನರಂ ತನ್ನೊಳಗುಮಾಡಿಕೊಂಡು ಇರುತ್ತಿರೆ

ಇತ್ತಲ್ ಚಾಮರಾಜೇಂದ್ರನ ಪಿರಿಯರಸಿ ಕೆಂಪನಂಜಾಂಬಿಕೆ ಪುತ್ರದೋಹಳದೊಳಿರ್ದು ಪ್ರಮಾದಿ ಸಂವತ್ಸರದ ಆಶ್ವೀಜಮಾಸದೊಳು ರುತುಮತಿಯಾಗಿರ್ದು ಚತುರ್ಥಸ್ನಾನಾನಂತರಂ ದುಕೂಲವಸ್ತ್ರಾಭರಣ ಮಾಲ್ಯಾನುಲೇಪನವಂ ಬಿಟ್ಟು ಖುಷ್ಯಾ ಹಾರಮಂ ಭುಂಜಿಸಿ ನಿಶಿಯೊಳು ಚಾಮರಾಜೇಂದ್ರನ ಸೂಳ್ಗೆವಂದು ಸುರತಸುಖದ ಸಮುದ್ರದೊಳೋಲಾಡಿ ನಿದ್ರಾಮುದ್ರಿತೆಯಾಗೆ ಮನೋಹರಮೆಂಬ ಬೆಳಗಿನ ಜಾವದೊಳ್ ಪ್ರಸನ್ನ ಸರೋವರದೊಳ್ ತಾವರೆಯರಳಿರ್ಪುದಂ ಮತಂಗಜಂ ಸಮೀಪಕ್ಕೆ ಬಂದುದಂ ಎಣ್ಣೆಯು ಬತ್ತಿಯು ಸಮೆದಿರ್ಪ ಸೊಡರಂ ಸ್ವಪ್ನದೊಳ್ ಕಂಡು ಸುಖಮಿರ್ಪುದುಮೊರ್ವ ಪುರುಷಂ ಮುನ್ನಿನ ಜನ್ಮದೊಳ್ ಪಡೆದಿರ್ದ ಮಹದೈಶ್ವರ್ಯಮಾ ಧರ್ಮಕ್ಕಂ ತ್ಯಾಗಂಗೆಯ್ದು ಸಂಸಾರ ಶರೀರಭೋಗದೊಳ್ ನಿರ್ವೇಗಮಾಗೆ ಕಳತ್ರ ಪುತ್ರ ಬಂಧುಗಳಂ ವಿಸರ್ಜಿಸಿ ತಪಂಗೆಯ್ದು ಪುಣ್ಯದ ಫಲದಿಂ ಸ್ವರ್ಗಮನೆಯ್ದಿ ಸಮುದ್ರೋಪಮಕಾಲಂ ದಿವ್ಯಸುಖಮನನುಭವಿಸಿ ಶೇಷಪುಣ್ಯದಿಂದಾಕೆಯ ಗರ್ಭಕ್ಕವತರಿಸೆ

ಹೊಂಗಿತು ಬಲದುದರಂ ನೆರೆ
ತುಂಗಕುಚಂ ಬಿಗಿದವಕ್ಷಿ ಜಡನಾದವು ತಾ
ನಂಗನೆಯ ತ್ರಿವಳಿ ಮರಸಿದ
ವಂಗಂ ಬೆಳ್ಪಾಗಿ ತೋರಿತಾ ಗರ್ಭದೊಳುಂ

ಅಂತು ಸತಿಯ ಗರ್ಭಮುಂ ಜನರ ಹರುಷಗರ್ಭಮುಂ ಬೆಳೆಯೆ ಪುಂಸವನ ಪ್ರಮೋದ ಸೀಮಂತಾದಿ ಕರ್ಮಂಗಳಂ ನಿರ್ವರ್ತಿಸಿ ಮೃದ್ಭಕ್ಷಣೆ ಮೊದಲಾದ ಬಯಕೆ ತೀರ್ವುದುಂ

ನವಮಾಸಂಬರಂ ಕ್ರಮದಿಂ ಗರ್ಭಾರ್ಭಕಂ ಬೆಳೆದು ಪುಟ್ಟಿದನದೆಂತೆನೆ

ಶ್ಲೋಕ || ಏಕರಾತ್ರೇ ತು ಗರ್ಭಂ ಸ್ಯಾತ್ಪಂಚರಾತ್ರೇ ತು ಬುದ್ಬುದಮ್
ಅರ್ಧಮಾಸೇಂಡ ರೂಪಂ ಸ್ಯಾನ್ಮಾಸೇ ಚೈಕೇ ಶಿರೋದ್ಭವಃ ||
ದ್ವಿಮಾಸೇ ಹೃದಯಂ ಬಾಹೂ ತ್ರಿಮಾಸೇ ಚೋದರಂ ಭವೇತ್
ಚತುರ್ಮಾಸೇ ತು ಸರ್ವಾಂಗಂ ಪಂಚಮಾಸೇ ಪ್ರಪೂರಿತಮ್ ||
ಷಣ್ಮಾಸೇ ಚಾಸ್ಥಿ ಸಂಯುಕ್ತಂ ಸಪ್ತಮಾಸೇ ಚ ರೋಮಕಮ್
ಅಷ್ಟಮಾಸೇ ಚ ವಿಜ್ಞಾನಂ ನವಮಾಸೇ ಪ್ರಬೋಧನಮ್ ||
ಪ್ರಸೂತಿರ್ದಶಮೇ ಮಾಸೇ ತಸ್ಯ ದೇಹಸ್ಯ ಲಕ್ಷಣಮ್ ||

ಈ ಪ್ರಕಾರವಾಗಿ ಶಕವರ್ಷ ೧೭೧೬ ಸಂದ ವರ್ತಮಾನ ಆನಂದನಾಮ ಸಂವತ್ಸರದ ಆಷಾಢ ಬಹುಳ ೨ ಚಂದ್ರವಾರ ಶ್ರವಣನಕ್ಷತ್ರಮಾಗೆ ಆ ಮಧ್ಯಾಹ್ನ ಅಭಿಜನ್ಮುಹೂರ್ತದ ಕನ್ಯಾಲಗ್ನದೊಳ್ ವಿಲಗ್ನ ಹೋರಾದ್ರೇಕ್ಕಾಣ ನವಾಂಶ ದ್ವಾದಶಾಂಶ ತ್ರಿಂಶಾಂಶಮೆಂಬೀ ಷಡ್ವರ್ಗಂಗಳೊಳ್ ವಿಜಯನೆಂಬ ಮೂಹೂರ್ತ ಸತ್ವವೇಳೆಯುಮಾಗೆ

ಪೂರ್ವರಮಣಿ ಪರ್ವತಮಂ
ಶಾರ್ವರಿ ಸಂಪೂರ್ಣಚಂದ್ರನಂ ಪಡೆವಂತಂ
ತರ್ವತಿ ಸರ್ವಲಕ್ಷಣ
ಸರ್ವ [illegible]ಣಾನ್ವಿತನೆನಿಪ್ಪ ಸುತನಂ ಪಡೆದಳ್

ಆಗಳ್

ಶ್ಲೋಕ || ತಮೋರವಿಜ್ಞಾಃ ಕಟಕೇ ತುಲಾಯಾಂ ಗುಳಿಕಃ ಕುಜಃ
ಚಾಪೇ ಗುರುರ್ವೃಷೇ ಶೌರಿಃ ಚಂದ್ರಕೇತೂ ಚ ನಕ್ರಕೇ ||
ಸಿಂಹೇ ದೈತ್ಯ ಗುರೌಯುಕ್ತೇ ಕೃಷ್ಣರಾ[ಜಸ್ಯ ಚೋದಯಃ] ||

ಅಂತು ಪುಟ್ಟುವುದುಂ ಜಾತ ನಾಮಕರ್ಮ ಬಹಿರ್ಯಾನ ನಿಷಧ್ಯಾನ್ನಪ್ರಾಶನ ಚೌಲಾದಿ ಕರ್ಮಂಗಳಂ ನಿರ್ವರ್ತಿಸೆ ತುಂಬಿಗರೆದಂ ಮೊಗಮುಂ ನೋಡಿಯುಂ ಮಗುಚಿ ಕೊಂಡುಪವಿಷ್ಟನಾಗಂಬೆಗಾಲನಿಕ್ಕಿ ಎದ್ದುನಿಂದು ದಟ್ಟಡಿಯಂ ತಳರ್ದಡಿಯಂ ಸ್ಥಿರಗಮನಮಂ ಮಾಡಿ ಶುಕ್ಲಪಕ್ಷದ ಬಿದಿಗೆ ಎಳೆವೆರೆ ಬೆಳೆವಂತೆ ಶರೀರೇಂದ್ರಿಯಂಗಳ್ ಬೆಳೆದು ಹಲ ಕುಲಿಶ ಸ್ವಸ್ತಿಕಾದಿ ಶುಭಲಕ್ಷಣಂಗಳಿಂದ ಮರಿಯಾನೆಯಂತೆ ಬಾಲಕ್ರೀಡೆಯಿಂದೊಪ್ಪುತ್ತಿರ್ದನು.

ಅಷ್ಟರೊಳ್ ತತ್ಪಿತೃವಪ್ಪ ಚಾಮರಾಜೇಂದ್ರಂ ೨೦ ವರ್ಷಂಬರಂ ಶ್ರೀರಂಗಪಟ್ಟಣದ ರತ್ನಸಿಂಹಾಸನಕ್ಕಧೀಶ್ವರನಾಗಿರ್ದು ನಳಸಂವತ್ಸರದೊಳ್ ತ್ರಿದಶಲೋಕಪ್ರಾಪ್ತನಪ್ಪುದು ಮಾತಾಪಿತೃವಿಯೋಗದೊಳ್ ಲಕ್ಷ್ಮಣಾಂಬಿಕೆ ಸಡಪುತ್ರಿರಲಷ್ಟರೊಳ್ ಇಂಗರೀಜ ಸರದಾರರ್ ಬಲಂಗೂಡಿ ಬಂದು ಸಿದ್ಧಾರ್ಥಿ ಸಂವತ್ಸರದ ಚೈತ್ರ ಬ ೩೦ ಶನಿವಾರ ಮಧ್ಯಾಹ್ನದೊಳೆ

ಶ್ರೀರಂಗಪಟ್ಟಣಮಂ ಹಲ್ಲಮಂ ಹತ್ತಿ ಕೋಂಟೆಯಂ ಕೊಂಬಲ್ಲಿ ಸುಲತಾನಂ ಗುಂಡು ತಾಗಿ ಸಾಯುವುದು ಪೂರ್ವಾಪರ ಸಂಬಂಧಮಂ ವಿಚಾರಿಸಿ ಕರ್ಣಾಟ ಮೊದಲಾದ ದೇಶಂಗಳ್ಗೆ ಮೈಸೂರರಸುಗಳ್ ಪ್ರಭುಗಳೆಂದರಿದು ಪೂರ್ಣಯ್ಯನೆಂಬ ದ್ವಿಜನುಗೂಡಿ ಸರದಾರರೆಲ್ಲಂ ಕೃಷ್ಣರಾಜರಿಗೆ ಸೇವಾಸಕ್ತರಾಗಿ ಮೈಸೂರಿಗೆಯ್ತಂದು ಶಕವರುಷ ೧೭೨೧ನೆ ಸಿದ್ಧಾರ್ಥಿಸಂವತ್ಸರದ ಜೇಷ್ಠ ಶುದ್ಧ ೫ ಯೊಳೆ ಸಮಸ್ತ ದೇಶಾಧೀಶ್ವರ ಸರದಾರರು ರಾಜ ಮಂತ್ರಿ ಸಾಮಂತ ಪುರೋಹಿತ ಮೊದಲಾಗಿ ಚಪ್ಪನ್ನದೇಶದಖಿಲ ಭೂಸುರ ಕ್ಷತ್ರಿಯ ವೈಶ್ಯ ಶೂದ್ರ ನಾನಾ ಜಾತಿಗಳಂ ಕೂಡಿ ಕಾಮದಿವಸದ ಶುಭಲಗ್ನದೊಳ್ ನವರತ್ನನಿರ್ಮಿತ ಸಿಂಹಾಸನದೊಳೈದು ವರ್ಷದ ಕೃಷ್ಣರಾಜಕುಮಾರನಂ ಕುಳ್ಳಿರಿಸಿ ಪಟ್ಟಾಭಿಷೇಕಂಗೆಯ್ದು ಸರ್ವರು ಸಂತುಷ್ಟರಾಗಿ ಹರುಷಗಡಲೊಳೋಲಾಡುತ್ತಿರೆ ಇಂಗರೀಷ್ ಜನರಲ್ ಆರಿಷ್ ಎಂಬ ಸೇನಾಧಿಪತಿಯು ಪೂರ್ಣಯ್ಯನೆಂಬ ಬ್ರಾಹ್ಮಣಂಗೆ ಸರ್ವಾಧಿಕಾಮನಿತ್ತು ರಾಜಸೇವಾ ಕ್ರಮದೊಳಿರಿಸಿ ಕೋಲನೆಂಬ ಸರದಾರನಂ ಮೈಗಾಪಿನೊಳಿಟ್ಟು ಪೋಗೆ ಪೂರ್ಣಯ್ಯಂ ಬೆಸಗೆಯುತ್ತಿರ್ದನಾ ಮಹಾರಾಜಕುಮಾರಂ ಕ್ರಮದಿಂ ಬೆಳೆದು ಚೌಷಷ್ಟಿಕಲಾಧರನಾಗಿ ಸ್ವಕುಲಾಬ್ಧಿಯಂ ಪೆರ್ಚಿಸುತ್ತ ಯಾಚಕ ಜಾತಕಂಗಳಿಗೆ ಮುದಮನೊದಗಿಸುತ್ತಂ ವಿದ್ವದ್ವೃಂದಕುಮುದಪ್ರಿಯಂ ನೋಳ್ಪ ಜನಂಗಳ್ಗೆ ಅತ್ಯಂತ ಸೌಂದರನುಂ ಸತ್ಯದೊಳ್ ರಾಮಚಂದ್ರನುಂ ಧರ್ಮದೊಳ್ ಧರ್ಮರಾಯನುಂ ವಿಕ್ರಮದೊಳ್ ಲವನುಂ ದಾನದೊಳ್ ಕರ್ಣನುಮೆನಿಸಿ ನ್ಯಾಯವಿಹಿತ ಪ್ರಜಾಪಾಲನಮುಂ ಮತಿಪಾಲನಮುಂ ಕುಲ ಪಾಲನಮುಂ ಆತ್ಮಪಾಲನಮುಮೆಂಬ ಸಮಂಜಸತ್ವಲಕ್ಷಣ ಕ್ಷಾತ್ರಧರ್ಮದೊಳ್ ಕೂಡಿದಾನಾಗಿಯು ಕಾಮಾದಿ ಅರಿಷಡ್ವರ್ಗಮಂ ಜಯಿಸುತ್ತ ವಿದ್ಯಾಭ್ಯಾಸಂಗೆಯ್ದು ಚಾಗದ ಪೆರ್ಮೆಯಂ ಪೆರ್ಚಿಸುತ್ತಿರ್ಪಂ ಮತ್ತಂ ಕೊಲೆಗಂ ಪುಸಿಗಂ ಕಳವಿಂಗಂ ಮನಂಗೊಡದೆ ಮರವೆಗಂ ಬಿರುನೋಟಕ್ಕಂ ಬಿರುನುಡಿಗಂ ಬೇಂಟೆಗಂ ಸೊಕ್ಕಿಂಗಂ ಜೂಜಿಂಗಂ ಮನಮನೆಳಸದೆ ದಯಾರಸಮೆ ರೂಪಾದಂತೆ ಬೆಳೆದೆಳೆಜವ್ವನವೇರಿ ಸೊರ್ಪುಂ ಸೌಂದರ್ಯವಿಲಾಸಮಂ ಕಂಡ ಕಾಮಿನಿಯರ್ ಬೆಂಡಾಗಿ ದಿಂಡುಗೆಡೆದಂತೆ ಬೆಂಡಾಗಿ ಮರುಳ್ಗೊಂಡು ಮೇರೆ ಮೀರಿ ಮೈಮರೆದೆಕ್ಕಟಿಯೊಳ್ ಸೊಕ್ಕಿ ಮೇಲಿಕ್ಕುವ ಸರಿಮಿಂಡಿವೆಣ್ಗಳಂ ಸದೆದು ನೋಟ ನುಡಿಯೊಳಂ ಪಿಂಗಿಸಿ ಸದಾಚಾರ ಸಂಪನ್ನತೆಯಂ ಬಿಡದೆ ನನ್ನಿಯ ನಲ್ಲ, ನಾಣ್ಬ ಪುಸಿವರ ಬೊಜಗ, ಮುದ್ದುಗರ ಮೊದಲಿಗ, ಬಲ್ಲಿದರ ಬಲ್ಲಹ, ವೀರರ ವೀರ, ಸಿತಗರ ಮಿಂಡ, ಬಿರುದಂತೆಂಬರ ಗಂಡನೆಂದು ನಾಡು ಬೀಡು ರಾಜ್ಯದ ಜನಂಗಳೆಲ್ಲಾ ಒಂದೆ ಕೊರಲೊಳ್ ಕೊನೆದಾಡುತ್ತಮಿರೆ ಪ್ರಜಾನುರಾಗದ ಮೊದಲು, ರಾಮಚಂದ್ರಗೆ ಬದಲು, ವೀರದ ಮೊಳೆ ಬಿನ್ನಣದ ಬೆಳೆ, ದಯದ ಸೊಂಪು, ದಾಕ್ಷಿಣ್ಯದ ಪೆಂಪು, ನಯದ ಕೂರ್ಪು, ನನ್ನಿಯಾರ್ಪು, ಚತುರದ ಬಲ್ಬು, ಜಾಣ್ಮೆಯ ತೋರ್ಪು, ಜಯದ ಮೋಡಿ, ಜಸದ ಗಾಡಿ, ದಾನದ ಪೊಣ್ಕೆ, ಧರ್ಮದ ಕಾಣ್ಕೆ, ತಿಳಿವಿನ ಮೆಚ್ಚು, ಧೀರತೆಯ ಪೆಚ್ಚು ಒಸಗೆಯ ಉಬ್ಬು, ಓಜೆಯ ಕೊಬ್ಬು, ಸಿರಿಯ ಕೂಟ, ಸಿಂಗದಾಮೆಂದಾ ರಾಜನಂ ಬಲ್ಲರ್ ಬಗೆದು ಪೇಳ್ವರ್.

ಮತ್ತಮೀ ರಾಜಂಗಂ ನಿತ್ಯದೊಳ್ ಸರಸ್ವತಿಯು ಪ್ರಸನ್ನಮಾಗಿ ಕರುಣಾಮೃತ ರಸದಿಂ ತುಂಬಿದ ಮುಖವೆಂಬ ಸರೋವರಕಮಲದೊಳ್ ನರ್ತಿಸಿ ನಲಿಯುತ್ತ ತನ್ನಂಕಮಾಲೆಯಂ ಪೇಳುತ್ತಿರ್ಪಳ್. ಹೃದಯದೊಳ್ ಧರ್ಮಂ ಸ್ವಾಧೀನವಾಗಿ ನಾಲು ಪಾದದಿಂ ಸಂಪೂರ್ಣತೆಯಪ್ಪುದರಿಂ ಕೃತಯುಗಮಲ್ಲದೆ ಕಲಿಯುಗಮಲ್ಲೆಂದು ಪೇಳುತ್ತಿರ್ಪರ್. ಮತ್ತಮೀ ರಾಜನಿರವಂ ಭಾವಿಸೆ ಕೃಪೆಯ ಪೊಲನಂ ಕಷ್ಟಮೆಂಬ ಕಡಲಂ ಕಳಿವ ಭೈತ್ರನು ಮುನಿಸೆಂಬ ಪಾವಿಂಗೆ ಗರುಡನಾಗಿಯುಂ ದುರ್ನಯತಮಕ್ಕೆ ಸೂರ್ಯನುಂ ಕುಲಕುಮುದಕ್ಕೆ ಚಂದ್ರನುಂ ದಾನಧರ್ಮೋತ್ಸವಕ್ಕೆ ಮಂಗಳನುಂ ತತ್ವಾರ್ಥದೊಳ್ ಬುಧನುಂ ಸುಗಣಂಗಳೊಳ್ ಗುರುವುಂ ಸರಸಕವಿತೆಯೊಳ್ ಕವಿಯುಂ ನಿಷ್ಕಾರ್ಯದೊಳ್ ಮಂದನುಂ ಅರಾತಿಗಳೊಳ್ ರಾಹುವುಂ ಧರ್ಮಕೀರ್ತಿಯೊಳ್ ಕೇತುವೆನಿಸಿ ಸುಜನದಾರಿದ್ರವಿದ್ರಾವಣಮೆನಿಸಿದ ಶ್ರೀಕೃಷ್ಣರಾಜಮಹಾರಾಜಂ ಸಕಲ ಶಸ್ತ್ರಶಾಸ್ತ್ರ ವಾಹನಾರೋಹಣಾದಿಗಳೊಳ್ ಅಗ್ಗಳನೆನಿಸಿ ನೀತಿಶಾಸ್ತ್ರ ಪರಾಕ್ರಮದೊಳ್ ಸಂಪನ್ನನಾಗಿ ದಿಕ್ಕುಮಾರನಂತೆ ಬೆಳೆದೆಳೆಜವ್ವನ ನೆರವುದುಂ

ಕಂಡೊಡೆ ಕಾಮಿನಿಯರ್ ಭ್ರಮೆ
ಗೊಂಡಾ ನೃಪನಂಗಸೌಂದರಕ್ಕೆಳಸಿ ಕರಂ
ಬೆಂಡಾಗಿ ವಿರಹತಾಪದೊ
ಳಂಡಲೆಯುತ್ತಿಪ್ಪರಲ್ಲದುಳಿದವರಿಲ್ಲಂ

ಅಂತತಿಶಯರೂಪನಾಗಿ ಬೆಳೆದಿರ್ಪುದುಂ ಲಾವಣ್ಯ ವಿನಯ ವಿವೇಕ ಕೌಶಲ್ಯ ಸೌಶೀಲ್ಯ ಪಾತಿವ್ರತ್ಯ ಪ್ರತ್ಯಾನುಕೂಲೆಯರಾಗಿ ರತಿಗೆ ಸಮನಾದ ರೂಪಾತಿಶಯಮುಳ್ಳ ದೇವಾಂಬಿಕೆಯಂ ಲಿಂಗಾಂಬಿಕೆಯಂ ಗೌರಾಂಬಿಕೆಯಂ ದೇವಾಜಾಂಬೆಯಂ ಲಕ್ಷ್ಮಾಂಬೆಯರೆಂಬ ರಾಜಪುತ್ರಿಯರಂ ಪ್ರತ್ಯೇಕಮಾಗಿ ಅತ್ಯಂತ ವಿಭವದಿಂ ಮದುವೆ ನಿಂದುಮದಲ್ಲದೆ ಭ್ರಮರಾಳಕದ ಹೆರೆನೊಸಲ ಕನ್ನಡಿಗದಪಿನ ಕರ್ಣಾಟ ಶ್ರೀಕಾರ ಕರ್ಣಯುಗದ ಚಂಪಕನಾಸಿಕದ ಬಿಂಬೋಷ್ಠದ ಕುಂದರದನದ ರಾಕೇಂದುಮುಖದ ಕಂಬುಕಂಠದ ಚಕ್ರವಾಕಸ್ತನದ ನಿಡುದೋಳಿನ ಪದ್ಮಪಾಣಿಯ ತೆಳುವಸುರ ಸುಳಿನಾಭಿಯ ಬಡಬಾಸೆಯ ಘನನಿತಂಬದ ಕದಳೀಸ್ತಂಭೋರುವಿನ ಹ್ರಸ್ವಜಂಘೆಯ ಗೂಢಗುಲ್ಫದ ಕೂರ್ಮಪಾದದ ತಳಿರಡಿಯ ತಾರಾಳಿನಖದ ಗಿಳಿನುಡಿಯ ಕೋಕಿಲ ನಿನಾದದ ಸ್ತ್ರೀರತ್ನಂಗಳ್ ಪಲಂಬರಾಗಲವರೊಳ್ ಮದನವಿಲಾಸದ ಮುದ್ದುಲಿಂಗಾಂಬೆಯು ಗುರುಸಿದ್ಧಮಾಂಬೆಯು ಕೆಂಪಬಸವಾಂಬೆಯು ಮರಿದೇವಾಂಬೆಯು ಲಿಂಗಮಾಂಬೆಯರ್ ಮೊದಲಾದ ಪಲಂಬರ್ ಕಳತ್ರಂಗಳಾಗೆ ಅವರೊಳ್ ದೇವಾಂಬಿಕೆಯೂ ಗರ್ಭಮಾಗಿ ಸುಖಪ್ರಸವವಾಗೆ

ಆ ತನ್ವಂಗಿಯ ಗರ್ಭದಿ
ಜಾತಂ ಸದ್ಗುಣವಿಭೂಷಣಂ ಸುಭಗಾಂಗಂ
ನೀತಿನಿಧಾನಂ ವಿಶಸ
ಖ್ಯಾತ ಯಶಂ ನಂಜರಾಜನೆಂಬ ಕುಮಾರಂ

ಅಂತಪ್ಪ ಕುಮಾರಂ ಪುಟ್ಟಿ ಬೆಳೆದು ಧೈರ್ಯ ಸ್ಥೈರ್ಯ ವೀರ್ಯ ವಿಕ್ರಮದೊಳ್ ಅಗ್ಗಳನೆನಿಸಿಪ್ಪಂ ಮತ್ತಂ ಕೆಂಪಬಸವಾಜಮ್ಮನ ಗರ್ಭದೊಳ್ ಕೆಂಪನಂಜಾಂಬೆಯೆಂಬ ಪುತ್ರಿಯುಮಾಗೆ ಇಂತಾದಿ ಪುತ್ರಪುತ್ರಿಯರೊಡನೆ ಧರ್ಮಮಂ ಬಿಡದೆ

ಉಪಜಾತಿ|| ಆ ರಾಜಾಗ್ರಣಿಯಪ್ಪ ಕೃಷ್ಣಧರಣೀಪಾಲಂ ಸುಖಾಸೀನನುಂ
ಧೀರಂ ಭೀಮಬಲಂ ಪ್ರತಾಪನಿಳಯಂ ಗಾಂಭೀರ್ಯಮೌದಾರ್ಯದೊಳ್
ಪಾರಾವಾರ ಪರಾಕ್ರಮಾನ್ವಿತ ಕಲಾವಿಜ್ಞಾನಸಂಪನ್ನ ಮೈ
ಸೂರೊಳ್ ಹರ್ಯಕ್ಷಪೀಠೋ[ಪರಿ ಸೊಗಯಿ]ಸಿದಂ ಬಾಲಸೂರ್ಯ ಪ್ರಭಾಂಗಂ

ಅಂತಿರ್ದು ಆಂಗೀರಸ ವತ್ಸರಾರಭ್ಯ ಪೂರ್ಣಯ್ಯನಂ ವಿಸರ್ಜಿಸಿ ಸ್ವತಂತ್ರದಿಂ ಸ್ವಜನಂಗಳನೆ ಸಮಸ್ತ ಅಧಿಕಾರಂಗಳೊಳ್ ನಿಲ್ಲಿಸಿ ಸಂಬಳುಂಬಳಿಗಳಂ ಪೆರ್ಚಿಸಿ ದೇವಾಲಯ ದೇವಗುರು ಬ್ರಾಹ್ಮಣ ಕ್ಷತ್ರಿಯ ಸ್ವಜನ ಪರಿಜನ ವಿದ್ವಜ್ಜನಂಗಳ್ಗೆಲ್ಲಾ ಕಾಮಧೇನು ಕಲ್ಪವೃಕ್ಷ ಚಿಂತಾಮಣಿಗಳೆಂಬೀ ತ್ರಿವಿಧಾಭೀಷ್ಟ ಫಲದಾಯಿಗಳೆ ಕೈನೀಡಿ ಕೊಡುವಂತೆ ಸರ್ವರ್ಗಂ ಆಹಾರ ವಸ್ತ್ರಾಭರಣಾನುಲೇಪನ ತಾಂಬೂಲ ಧನಕನಕ ಧಾನ್ಯ ಗ್ರಾಮ ಕ್ಷೇತ್ರ ಗೃಹಾದಿ ಭೋಗೋಪಭೋಗಂಗಳನ್ನಿತ್ತು ಸಂತುಷ್ಟರಂ ಮಾಡಿ ಸಲಹುತ್ತ ಶತ್ರುಗಳಿಲ್ಲದೆ ಧರ್ಮದಿಂ ರಾಜ್ಯವಾಳುತ್ತ ಮುನ್ನಮರಣ್ಯವಾಗಿರ್ದ ಮಹಿಸೂರ ಸಂಸ್ಥಾನಮಂ ಅಮರಾವತಿಗೆ ಸಮಾನವಾಗೆ ಖಾತಿಕಾ ಪ್ರಾಸಾದಾ ಕಾಲ ಹರ್ಮ್ಯಾಟ್ಟಣೆ ಗೋಪುರ ಶಿಖರಂಗಳಿಂ ರಾಜಧಾನಿಯಂ ನಿರ್ಮಿಸಿ ದೇವವಿಮಾನದಂತಪ್ಪ ಆಸ್ಥಾನಮಂಟಪಮಂ ದೇಗುಲ ಮೊದಲಾದೀ ಅತಿಶಯವೆನಲ್ ಮಾಡಿಸಿ ಧರ್ಮ ವ್ಯಾಪಾರದೊಳಿರುತ್ತಂ ಒಂದು ದಿನಂ ಪುರಮನೀಕ್ಷಿಸಲಲಂಗದ ಮೇಗಡೆಯನೆ ಬರುತ್ತ ಪಶ್ಚಿಮದಲ್ಲಿಪ್ಪ ಪುರಾತನ ಶಾಂತೀಶ್ವರ ಬಸದಿಯಂ ಕಂಡಾಗಲೆ ತಮ್ಮರಮನೆಗೆ ಆರ್ಷೆಯಾಗಿ ವೈದ್ಯನಾದ ಸೂರಿಪಂಡಿತನ ಪೌತ್ರ ಬೊಮ್ಮರಸಪುತ್ರನಾದ ಸಕಲ ಸುಗುಣ ಸಂಪನ್ನನಾದ ಲಕ್ಷ್ಮೀಪತಿಪಂಡಿತನಂ ಬರಿಸಿ ನಿಮ್ಮ ದೇವರಿಗೆ ಅಂಗರಂಗವೈಭವಂಗಳ್ಗೆ ಸಂವತ್ಸರಕ್ಕೆ ಮುನ್ನೂರು ವರಹ ತಸ್ತೀಕು ಮಾಡಿದೇವೆ ಎಂದಾಗಲೆ ನಿರೂಪಮಂ ಮಾಡಿಸಿಕೊಟ್ಟು ಈ ಶ್ರೀಮುಖದಾರಭ್ಯ ನಡೆವಂತೆ ನಿಯಮಿಸಿದನಂತರಂ

ಮತ್ತೊಂದು ದಿವಸಂ ತಮ್ಮ ಪಿತೃ ಪಿತಾಮಹರ ಜನ್ಮಭೂಮಿಯಾದರಿಕುಠಾರಮೆಂಬ ಪುರಮನೀಕ್ಷಿಸಲ್ ಬಂದಾ ಗ್ರಾಮಮಂ ಚಾಮರಾಜನಗರಮಂ ಮಾಡಿಸಿಯದರೊಳ್ ಕಮನೀಯಮಾಗಿ ಚಾಮರಾಜೇಶ್ವರಂಗೆ ಮಹಾದೇವಾಲಾಯಮನೆತ್ತಿಸಿಯಲ್ಲಿ ಕೆಂಪನಂಜಾ ಮಹಾಪಾರ್ವತೀಸದನಮಂ ಚಾಮುಂಡೇಶ್ವರೀಗೃಹಮಂ ಸುತ್ತಲ್ ಲೀಲಾಮೂರ್ತಿಗಳ್ಗಾವಾಸಂಗಳನತಿಶಯವೆನಲ್ ಮಾಡಿಸಿ ಹೊರಪೇಟೆಯೊಳ್ ನಾರಾಯಣದೇವರ ಮಂದಿರಮಂ ಮಾಡಿಸಿ ಆ ಚಾಮರಾಜನಗರವನ್ನು ಆಬಾದು ಮಾಡಿ ಬ್ರಾಹ್ಮರಿಗು ಅರಸುಗಳಿಗು ಅತಿಶಯವಾದ ಮಂದಿರಂಗಳಂ ನಿರ್ಮಿಸಿ ಆ ಪುರಮನಳಕಾಪುರಕ್ಕೆ ಪ್ರತಿಘೆನಿಸಿ ಸರ್ವಧಾರಿ ಸಂವತ್ಸರದೊಳ್ ಚಾಮರಾಜೇಶ್ವರ ಕೆಂಪನಂಜಾಂಬಿಕ ಲೀಲಾವಿಗ್ರಹ ಚಾಮುಂಡೇಶ್ವರಿ ಕಳತ್ರ ಸಹಿತಮಾದ ಆತ್ಮವಿಗ್ರಹಂಗಳ್ಗೆ ರತ್ನ ಹೇಮ ರಜತಮಯ

ವಿಭೂಷಣಂಗಳಮುಪಕರಣಂಗಳುಮಂ ವಸ್ತ್ರಾದಿಗಳಂ ಕೊಟ್ಟು ನಿತ್ಯೋತ್ಸವ ಪಕ್ಷೋತ್ಸವ ಮಾಸೋತ್ಸವ ವರ್ಷೋತ್ಸವ ರಥೋತ್ಸವ ಪ್ರಮುಖೋತ್ಸವಗಳೆಂಬೀ ಐದು ಸಾವಿರ ವರಹದ ಒಂಬತ್ತು ಗ್ರಾಮಂಗಳ್ಗೆ ತನ್ನಂಕಮಾಲೆಯಿಂ ಶಿಲಾಶಾಸನಮಂ ಬರೆಯಿಸಿಕೊಟ್ಟು ಪ್ರತ್ಯಕ್ಷ ಕೈಲಾಸವೆಂಬಂತತಿಶಯವಾಗಿ ರಚಿಸಿ ಮಹಿಸೂರೊಳರಮನೆಯ ಹತ್ತಿರದೊಳ್ ಶ್ರೀಕೃಷ್ಣದೇವಾಲಯಮನತ್ಯದ್ಭುತಮಾಗೆ ರಚಿಸಿಯಾ ಶಿಲಾಭೋಗಕ್ಕೆ ಮುಕ್ತಪ್ರಾಕಾರ ವೈಭವಂಗಳಂ ಮಾಡಿಸಿ ಕೊಡುತ್ತಂ ವೈಕುಂಠಮೆ ಭೂಮಿಗಿಳಿದೊಪ್ಪುವಂತಾಗೆ ಮತ್ತಮನೇಕ ದೇವಾಲಯಂಗಳಂ ಸ್ನಾನಘಟ್ಟ ತಟಾಕ ವಾಪೀ ಕೂಪಂಗಳಂ ನಿರ್ಮಿಸಿ ಆರಾಮಪ್ರಪಾಸತ್ರಾಗ್ರಹಾರ ಮೊದಲಾದ ಅನೇಕ ದಾನ ಧರ್ಮ ಪರೋಪಕಾರಮಂ ಮಾಳ್ಪುದಂ ವಿಸ್ತರಿಸಿ ಪೇಳಲು ಸುರೆ ಜಂಗ ಸಾಸಿರ ಜಿಹ್ವೆಯುಳ್ಳ ನಾಗೇಂದ್ರಂಗಮಳವಲ್ಲಿಲ್ಲಿಯ ಮನುಷ್ಯಂ ಪೇಳ್ವಡೆಗ್ಗನಲ್ಲದೆ ಪ್ರೌಢನಲ್ಲದರಿಂ ಪೇಳಲಂಜಿಬಿಟ್ಟೆನೆಂತೆನೆ

ಜಲಜಜನ ತಲೆಯ ಪಿಡಿದನ
ತಲೆಯೊಳಿರ್ದವನ ವೈರಿ ವೈರಿಯನೇರ್ದನ
ಸಲೆ ಮೈದುನನಣ್ಣನ ಗುಣ
ನೆಲೆಗೊಂಡುದು ಕೃಷ್ಣರಾಜಭೂಪಾಗ್ರಣಿಯೊಳ್

ಮತ್ತಂ

ಶ್ರೀಮತ್ಕೃಷ್ಣಾವನಿಪತಿ
ಪ್ರೇಮದೊಳನವರತ ಕುಡುವ ದಾನದಿ ಸರ್ವರ್
ಕಾಮಿತ ಫಲಮಂ ಪಡೆದು ಧ
ರಾಮರರೆಂದೆನಿಸಿ ಮೆರೆದರತಿಸೌಖ್ಯದೊಳುಂ

ಶ್ರೀಗೆ ವರನಾದ ನೃಪನತಿ
ರಾಗದೊಳುಂ ಶಂಕೆಗೊಡೆಯೆಲ್ಲಾ ಜನರ್ಗಂ
ತ್ಯಾಗಿಸೆ ಧನಮಂತದರಿಂ
ಭೋಗೀಂದ್ರರುಮೆನಿಸಿ ಮೆರೆವಭಿಕ್ಷರು ಧರೆಯೊಳ್

ದಾರಿದ್ರಗಿತ್ತ ಧನಮದು
ನೀರಂ ಫಲವೃಕ್ಷಕೆರೆದತೆರನಂತ[ಕ್ಕುಂ]
ಭೂರಿಯ ಧನಿಕಂಗಿತ್ತೊಡೆ
ನೀರಂ ಕೊಡಲೊಳಗೆ ಸುರಿವ ಪರಿತಾನುಕ್ಕುಂ

ಎಂದರಿದು ಬಡವರಿಗೆ ಮನಸಂದಧಿಕದ್ರವ್ಯವಿತ್ತು ಮನ್ನಿಸಲವರಿಗೆ ದಂದುಗ ವಳಿದುಗ್ಘಡಿಸಿಲ್ ಬಂದುದು. ಇಂತು ಕೀರ್ತಿ ಪೆರ್ಚಿರೆ ಮತ್ತೊಮ್ಮೆ ಚಾಮರಾಜ

ನಗರಕ್ಕೆಯ್ದಿರ್ದಲ್ಲಿ ಬಸ್ತಿಯಂ ಪೊಕ್ಕಲ್ಲಿಪ್ಪ ಜಿನಪ್ರತಿಮೆಯೆಲ್ಲಮಂ ಪದ್ಮಾವತಿಪ್ರತಿಬಿಂಬ ಮೆಲ್ಲಮಂ ನೋಡಿ ತಮ್ಮಾಶ್ರಿತರಾದ ಪಂಡಿತನ ಗೃಹಮನೆಯ್ದಿ ಕೆಲಹೊತ್ತಿರುತಿರ್ದು ಒಳಸ್ಥಳದೊಳಿರ್ಪ ಜೈನಗೃಹಂಗಳಾದಿಪ್ಪತ್ತುಮೂರು ಬಸ್ತಿದೇವರ್ಗೆ ಪಡಿತರ ದೀಪಾರಾಧನೆ ಬಗ್ಗೆ ತಸ್ತೀಕು ಮಾಡಿಸಿಕೊಟ್ಟು ಅಗ್ರಹಾರಮಂ ಕೊಡುವಲ್ಲಿ ಜೈನಬ್ರಾಹ್ಮಣರಿಗೆ ಹತ್ತು ವೃತ್ತಿಯನ್ನು ಕೊಟ್ಟು ಮತ್ತೊಮ್ಮೆ ಸುಬ್ರಹ್ಮಣ್ಯಕ್ಕೆ ಕಾಸಾ ಸವಾರಿ ಪೋಗಿದ್ದಲ್ಲಿ ಗಟ್ಟದ ಕೆಳಗಿಪ್ಪ ಮೂಡುಬಿದರೆ ಕಾರಕಳ ಏಣೂರು ಮೊದಲಾದ ಜೈನ ತೀರ್ಥಸ್ಥಳಗಳನ್ನು ನೋಡಿ ಅತ್ಯಾಶ್ಚರ್ಯಂಬಟ್ಟು ಆ ಸ್ಥಳಗಳಂ ಮನ್ನಿಸಿ ಮತ್ತಂ ಬೆಳಗುಳದ ತೀರ್ಥಸ್ಥಳಗಳನ್ನು ದರ್ಶನ ಮಾಡಲೆಂದು ಲೋಗರುಗಳ ಮಾತನವಧಾರಿಸದೆ ಪೊರಮಟ್ಟು ಪೋಗಿ ಅನೇಕ ವೈಭವದಿಂ ಬಾಹುಬಲಿದೇವರ ಪ್ರತಿಬಿಂಬಕ್ಕೆ ಮಸ್ತಕಾಭಿಷೇಕಮಂ ಮಾಡಿಸಿ ಕನಕಾಭಿಷೇಕಮಂ ಮಾಡಿಸಿ ಹರುಷಚಿತ್ತರಾಗಿ ಮಹಿಸೂರಿಗೆ ಬಂದು ಖರಸಂವತ್ಸರದ ಜ್ಯೇಷ್ಠಮಾಸದೊಳ್ ಅರಮನೆ ದೊಡ್ಡಪಂಡಿತನಪ್ಪ ಲಕ್ಷ್ಮೀಪತಿಪಂಡಿತಂಗೆ ಷಷ್ಠಿಸಂವತ್ಸರಂ ಸಲ್ವುದು ತದುಗ್ರಶಾಂತಿಯಂ ಮಾಡಿಸಲ್ ಮಹಾರಾಜಂ ಆ ಶಾಂತಿಕವಿಧಾನ ಪುರಾಣಾಗಮ ಶಾಸ್ತ್ರವಿಚಾರದಕ್ಷನಾದ ದೊಡ್ಡಪಂಡಿತ ಭಾಗಿನೇಯನಪ್ಪ ಸೂರಿಪಂಡಿತಂ

ವೃತ್ತ || **ಕಮಲಜಕುಲಜಾತಃ ಜೈನಧರ್ಮಾಬ್ಜಭಾನುಃ**
ವಿದಿತ ಸಕಲಶಾಸ್ತ್ರಸ್ಸದ್ಬುಧಸ್ತೋಮಸೇವ್ಯಃ
ಮುನಿಜನಪದಭಕ್ತೋ ಬಂಧುಸತ್ಕಾರದಕ್ಷಃ
ಸಕಲಸುಗುಣಧಾಮಾ ಬ್ರಹ್ಮಸೂರಿಃ ಪ್ರಸಿದ್ಧಃ ||

ಆ ಚಿಕ್ಕಪಂಡಿತಂ ಕನಕಗಿರಿಯ ದೇವಾರಾಧನಾಸಕ್ತನಾದ ಮಲೆಯೂರ ದೇವ ಚಂದ್ರನೆಂಬೆನ್ನಂ ಮೈಸೂರಿಗೆ ಕರೆಯಿಸೆ ಐದು ದಿವಸ ಮೃತ್ಯುಂಜಯಕಲಿಕುಂಡ ಸಿದ್ಧ ಶಾಂತಿಗಣಧರವಲಯಮೆಂಬ ಪಂಚ ಚಕ್ರಾರಾಧನೆಗಳಂ ಅರಮನೆಯ ತೊಟ್ಟಿಯೊಳೆ ನನ್ನಿಂದಲೆ ಮಾಡಿಸುವಲ್ಲಿ ಸರ್ವ ಶಾಸ್ತ್ರವಿಚಾರದಕ್ಷನಾದ ರಾಜಾಧಿರಾಜನಪ್ಪ ಮಹಾರಾಜಂ ನೋಡಿ ಸಂತೋಷದಿಂದನಂತರದೊಳೆ ಮೊದಲು ಅಪ್ಪಣೆ ಕೊಡಿಸಿದ್ದ ಬೆಳುಗುಳದ ತೀರ್ಥಸ್ಥಳಕ್ಕೆ ಸರ್ವಮಾನ್ಯವಾಗಿ ಏಳುನೂರು ವರಹದ ಮೂರು ಗ್ರಾಮಂಗಳಿಗಂ ಆ ಸ್ಥಳದ ಸುಂಕ ಐವತ್ತು ವರಹವನ್ನು ಕನಕಗಿರಿ ದೇವಸ್ಥಾನಕ್ಕೆ ನಡೆದು ಬರುವ ಹಾಗೂ ತಾಜಾ ಸನ್ನದು ಮಾಡಿಸಿಕೊಟ್ಟು ಕಡೆಯೊಳ್ ಮೈಸೂರು ಬಸ್ತಿಯ ಶಾಂತೀಶ್ವರ ಪ್ರತಿಬಿಂಬಕ್ಕೆ ಚತುರುತ್ತರ ಪಂಚಶತ ಕಲಶಾಭಿಷೇಕಮಂ ಮಾಳ್ಪಲ್ಲಿ ಪರಿಮಿತಜನಂಬೆರಸು ಮಹಾರಾಜಂ ಬಂದು ವಿಧಿ ವಿಧಾನಂಗಳಂ ಚೆನ್ನಾಗಿಯವಧರಿಸಿ ದಿಕ್ಪಾಲಕಪೂಜಾನಂತರಂ ಮಾಲಾಮಂತ್ರ ಪ್ರಶಸ್ತಿ ಪೇಳ್ವಲ್ಲಿ ಮತ್ಸಮೀಪದೊಳ್ ನಿಂದು ಚತುಃಸಂಘಂಗಳ ಚಾತುರ್ವರ್ಣಂಗಳ ನಾಮಾವಲಿ ಬಿರುದಾವಲಿಗಳಂ ಕೇಳ್ದು ಬಳಿಕ ತಮ್ಮ ಬಿರುದಾವಲಿಯಂ ಕೇಳ್ದನದೆಂತೆನೆ

ಮಾಲಾಮಂತ್ರ || ಶ್ರೀ ಮತ್ಕೃಷ್ಣರಾಜ ಮಹಾರಾಜಃ ಸಕಲ ಸಮಾಲೋಕನ ಲೋಕಾಹ್ಲಾದಕ ಬಾಹ್ಲಿಕಾದಿ ಜಾತಾಜಾತಾಂಬರಗಂಗಾರಂಗದುರು ತುರಂಗಭಂಗಂ

ರಂಗತಿಚತುರತಮ ಮಿಹಿರತುಂಗತುರಂಗತುಲಾಲಂಘನ ಜಾಂಘಿಕ ಹೈರಣ್ಯಕನ್ಯೆಜೋ ದಾರಪರಿಷ್ಕೃತಾನುಷಂಗಮಂಗಲಭೂತಾ ಪಟುನಟಾಧ್ಯಾಪಕ ಪದಾಧ್ಯಾನಕ ಹೇಷಿತಾಭಿ ಭೂಷಿತ ವಿನೀತಾಜಾನೇಯಜವನಾದಿವಾಜಿವ್ರಾಧ ಚಟುಲ ಖರಖುರಪುಟ ಪೃಥುತರ ರಥಯೂಥ ಪತ್ತಿಪ್ರತತಿ ಪದಸಂಘಟ್ಟನ ಸಮುದ್ಭೂತಾಂತರಿಕ್ಷವ್ಯಾಜೃಂಭಮಾಣ ಧೂಲಿಜಾಲಪ್ರಲಯ ವಿಧಧಾನಾನೂನ ಲಕ್ಷ್ಮಭದ್ರ ಭದ್ರ ಜಾತೀಯ ಜೀಮೂತಾನು ಕಾರಾನುಕಾರಿ ಗಂಧಸಿಂಧುರ ಘಟಾಕರಟತಟ ವಿಗಲದ್ದಾನ ಧಾರಾಸಂಸೇಕ ಸಮುತ್ಸರ್ಪದ ಮಂದಗಂಧ ಲೋಭಾಭಿಭ್ರಮದ್ಭ್ರಮರ ಮಂಜುಗುಂಜನಮಂ ಜಲಸೇವಾಸಮಸಮಾ ಗಚ್ಛದ್ಭೂಪ ಪರಸ್ಪರಸಂಘರ್ಷಣ ಪ್ರಕರ್ಷ ವಿಸ್ರಸ್ತ ರತ್ನಾವಲೀರಂಗಬಲೀಭಾಸುರ ವರಾಜೀರ ರಾಜದ್ಧವಲಿಮ ಪ್ರಾಸಾದ ಶಿಖರ ನಿಕರ ವಿಷಣ್ಣ ಕಲಧೌತ ವಿಮಲ ಕಲಶ ಜಾಲಾಗ್ರಸಂಘಟ್ಟನ ರಾಜಾಹ್ವಯ ಮಾತ್ರಾವಹದ್ವಿದುಬಿಂಬ ಧಿಕ್ಕಾರಾನುಕಾರಿ ನಿಃಪ್ರತ್ಯೂಹೇನ ಪ್ರವರ್ಧಮಾನ ಸಪ್ತಾಂಗಸಂಪನ್ನೋ ಭೂಯಾದಶ್ರಾಂತಮ್

ಶ್ರೀಮತ್ಕೃಷ್ಣರಾಜೋ ಮಹಾರಾಜೋ ನಿಜಪರಾಕ್ರಮಪ್ರಭಾವ ನತಾಖಿಲ ರಾಜ ಮಂಡಲಾನೇಕಮಂಡನ ಪ್ರಭಾಮಂಡಲದ್ವಿಗುಣೀಕೃತ ಸಿಂಹಾಸನಪ್ರಭಾಭಿರಾಮೋ ಭೂಯಾದಶ್ರಾಂತಮ್ ಶ್ರೀಮತ್ಕೃಷ್ಣರಾಜ ಮಹಾರಾಜಃ ರಾಮಚಂದ್ರವದಖಿಲ ಲೋಕ ಪರಿಪಾಲನಪ್ರವೀಣೋ ಭೂಯಾದಶ್ರಾಂತಮ್ ಶ್ರೀಮತ್ಕೃಷ್ಣರಾಜಮಹಾರಾಜೋ ಭರತರಾಜವತ್ಸಕಲದಿಙ್ಮಂಡಲದಿಙ್ಮಂಡಲವಿಜಯೋ ಭೂಯಾದಶ್ರಾಂತಮ್ ಶ್ರೀಮತ್ಕೃಷ್ಣರಾಜಮಹಾರಾಜೋ ಶ್ರೇಯಾಂಸವನ್ನಿಶ್ರೇಯಸನಿಧಾನ ಮಹಾದಾನ ಪ್ರಸಿದ್ಧೋ ಭೂಯಾದಶ್ರಾಂತಮ್ ಶ್ರೀಮತ್ಕೃಷ್ಣರಾಜಮಹಾರಾಜೋ ಭುಜಬಲಿಕುಮಾರವದ ವಾರ್ಯ ಭುಜವೀರ್ಯೋ ಭೂಯಾದಶ್ರಾಂತಮ್ ಶ್ರೀಮತ್ ಕೃಷ್ಣರಾಜಮಹಾರಾಜೋ ರ್ಜುನವದನನ್ಯ ಸಾಧಾರಣ ದನುರ್ವಿದ್ಯಾವಿಶಾರದೋ ಭೂಯಾದಶ್ರಾಂತಮ್ ಶ್ರೀಮತ್ಕೃಷ್ಣರಾಜಮಹಾರಾಜೋ ಜೀವಂಧರಕುಮಾರವತ್ಸಂಗೀತ ಸಾಹಿತ್ಯಾದಿ ವಿದ್ಯಾ ವಿಶಾರದೋ ಭೂಯಾದಶ್ರಾಂತಮ್ ಶ್ರೀಮತ್‌ಕೃಷ್ಣರಾಜಮಹಾರಾಜೋಕ್ಷರ ಲೇಖ್ಯ ಗಣಿತ ಗಾಂಧರ್ವ ವೇದ ವೇದಾಂಗ ಕಲ್ಪ ನ್ಯಾಯ ಜ್ಯೋತಿರ್ಜ್ಞಾನ ನಷ್ಟಮುಷ್ಟಿ ಚಿಂತನಾ ಗಂಧಯುಕ್ತಿ ವೀಣಾವೇಣು ಅಂತರಿಕ್ಷಯಾನಾ ನೃತ್ಯ ಗೀತ ವಾದ್ಯ ಭರತಶಾಸ್ತ್ರ ಆಯುರ್ವೇದ ಧನುರ್ವೇದ ಲಕ್ಷಣಲಕ್ಷ್ಯಭೂತ ಭೇದಲಿಲ್ಪ ಹಸ್ತನೈಪುಣ್ಯ ತರ್ಕ ಕೌಟಿಲ್ಯ ಅಷ್ಟಾಂಗಯೋಗ ಹಸ್ತಿ ತುರಂಗಶಿಕ್ಷಾಶಾಲಿಹೋತ್ರಶಿಕ್ಷೆ ರತ್ನ ಪರೀಕ್ಷಾ ಸ್ವರ್ಣಪರೀಕ್ಷಾ ಭೂ ಪರೀಕ್ಷಾ ಚಿತ್ರಕರ್ಮ ಪತ್ರಚ್ಛೇದನ ವಾತ್ಸ್ಯಾಯನ ಮರ್ದನಶಾಸ್ತ್ರ ಅಗ್ನಿಸ್ತಂಭ ಜಲಸ್ತಂಭ ಖಡ್ಗಸ್ತಂಭ ಸೇನಾಸ್ತಂಭ ವಾಕ್‌ಸ್ತಂಭ ಇಂದ್ರಜಾಲ ಮಹೇಂದ್ರಜಾಲ ಸ್ಪರ್ಶವಾದ ರಸವಾದ ಕನ್ಯಾವಾದ ಬಿಲಪ್ರವೇಶ ಶಸ್ತ್ರಶಿಕ್ಷೆ ಶಾಸ್ತ್ರಶಿಕ್ಷೆ ಕೂಪಶಾಸ್ತ್ರ ಸೂಪಶಾಸ್ತ್ರ ತಟಾಕಶಾಸ್ತ್ರ ಸಾಮುದ್ರಿಕಾಲಕ್ಷಣ ಮಹಾಗಮನ ದೂರಾಗಮನ ಪರಕಾಯಪ್ರವೇಶ ಆಗಮಶಿಕ್ಷಾ ಆತ್ಮಜ್ಞಾನ ಸ್ವಸಮಯ ಪರಸಮಯಾಂಗನಿಮಿತ್ತಾಖ್ಯ ಚತುಃ ಷಷ್ಟಿ ಕಲಾ ಕುಶಲೋ ಭೂಯಾದಶ್ರಾಂತಮ್ ಶ್ರೀಮತ್ ಕೃಷ್ಣರಾಜಮಹಾರಾಜಸ್ಯಾಂತಃ ಪುರ

ಪುಣ್ಯಸ್ತ್ರೀಯಃ ಯಶಸ್ವತೀ ಸುನಂದಾ ಸೀತಾ ರೇವತೀ ಪ್ರಭಾವತೀ ಪ್ರಭೃತೀ ಪ್ರಸಿದ್ಧ ಪುಣ್ಯಸ್ತ್ರೀವದ್ರೂಪ ಯೌವ್ವನ ವಿಜ್ಞಾನ ಶೀಲಾದಿ ಸಕಲ ಗುಣಸಂಪನ್ನಾ ಭೂಯಾಸುರ ಶ್ರಾಂತಮ್ ಶ್ರೀಮತ್‌ಕೃಷ್ಣರಾಜಮಹಾರಾಜಸ್ಯ ಪುತ್ರಾಃ ಲವಂಕುಶವತ್ಸಕಲಶಸ್ತ್ರ ಶಾಸ್ತ್ರ ವಾಹನಾರೋಹಣಾದಿ ಸಕಲ ಕಲಾಕೌಶಲ್ಯ ನೀತಿಶಾಸ್ತ್ರ ಪರಾಕ್ರಮಸಂಪನ್ನಾ ಭೂಯಾಸುರಶ್ರಾಂತಮ್.

ಎಂದಿಂತು ಅಶೇಷಜನಂಗಳ್ಗೆ ಆಶೀರ್ವಾದ ರೂಪಮಾಲಾಮಂತ್ರಂಗಳಂ ಲಾಲಿಸಿ ಸೂಕ್ಷ್ಮಬುದ್ಧಿ ಸುವಿಚಾರಿಯಾದುದರಿಂ ಚೆನ್ನಾಗವಧಾರಿಸಿ ತಿಳಿದು ಹರ್ಷೋತ್ಕರ್ಷಚಿತ್ತನಾಗಿ ಎನ್ನ ಭಾಗ್ಯಲಕ್ಷ್ಮೀ ಕಣ್ದೆರೆದು ಪೇಳ್ದಂತೆ ಈತಂಗೆ ತಿಂಗಳು ಒಂದಕ್ಕೆ ಮೂವತ್ತು ಹಣ ಸಂಬಳ ಮಾಡಿದೇವೆ ಎಂಬ ಹುಕುಮಾದುದಂ ಕೇಳಿ ನನ್ನ ಪ್ರಪಂಚಮನಾಗಳೆ ಅರಿಕೆಮಾಡಿಕೊಳ್ಳುವುದಕ್ಕೆ ಆಕರ್ಮಿಕ ಮೌನವ್ರತಧಾರಿಯಾಗಿರ್ದುದರಿಂ ಪೂಜಾಹವ್ಯಾಸದೊಳಿರ್ದೆನು. ಬೆಳಗಿನ ದಿವಸದೊಳು ಸೂರಿಪಂಡಿತಂಗೆ ಹೇಳಿ ಅರಿಕೆ ಮಾಡಿಸಿ ಗುಂಡಲ ತಾಲೋಕಿಗೆ ನಿರೂಪ ಅಪ್ಪಣೆಯಾಗಿ ಬರೆಯಿಸಿದಾಗ್ಯು ಮಹಾಸ್ವಾಮಿ ದಸಕತ್ತಾಗಿ ನನಗೆ ಬರದೆ ಮುಂದಾಗುವುದೆಂದು ನನ್ನ ಊರಿಗೆ ಪೋದೆನು. ಲಾಭಾಂತರಾಯ ಕರ್ಮೋದಯದಿಂ ಪರುಷ ಮುಟ್ಟಿಯು ವರುಷಗಡನಾದಂತಾಯ್ತು. ಅಂತಾಗಿಯು ನನ್ನ ಬಡತನವಸು ಮಹಾಸ್ವಾಮಿಗೆ ಮರಳಿ ಅರಿಕೆಮಾಳ್ಪುದಕ್ಕೆ ಕೂಡಲಿಲ್ಲವಾಗಿ ತದಾರಭ್ಯದಿಂದಾ ಈ ರಾಜಾವಲಿ ಕಥೆಯಂ ಸಂಗ್ರಹಿಸಿ ಬರೆದು ಒಪ್ಪಿಸಲು ಪ್ರಯತ್ನದಿಂ ಯಾರಿಂದಲು ಸ್ವಾಮಿಗೆ ಕಾಣ್ಕೆಯಾಗಲಿಲ್ಲ. ಸೂರಿಪಂಡಿತರ್ಗೆ ಹೇಳಿಕೊಂಡದ್ದರಿಂದಾ ಹೇವಿಳಂಬಿ ಸಂವತ್ಸರದ ಫಾಲ್ಗುಣಾರಭ್ಯ ಪಟ್ಟಿ ಒಂದಕ್ಕೆ ಹನ್ನೆರಡು ಹಣ ಜೀವನಾ ಮಾಡಿಕೊಟ್ಟು ಇದಾರೆ. ನನ್ನ ಸಂಸಾರ ಹೊರಜನವಲ್ಲದೆ ಇಪ್ಪತ್ತೈದು ಜನವಿದೆ. ತೀವ್ರ ದಾಹವುಳ್ಳವನು ಪುಲ್ಲ ನೀರನಿಕ್ಕಿದೊಡೆ ತೃಪ್ತಿಯಾಗದೆಂದು ಈ ಕಥೆಯೊನ್ನೊಪ್ಪಿಸಿ ಸಂಪೂರ್ಣ ಗ್ರಾಸಕ್ಕಪ್ಪಣೆ ಮಾಡಿಸಲೆಂದು ಮೂರು ವರ್ಷದಿಂ ಕಾದಿರ್ದೊಡೀಗಲು ಮಹಾಮಾತುಶ್ರೀಯವರು ಮೊದಲಿಂ ಕಡೆವರಂ ಹನ್ನೊಂದು ಅಧ್ಯಾಯಮುಳ್ಳ ಈ ರಾಜಾವಳಿ ಕಥೆಯಂ ಚೆನ್ನಾಗಿ ಪರಾಂಬರಿಸಿ ಯದುಕುಲಾಗ್ರಗಣ್ಯರಪ್ಪ ಈ ಮಹಿಸೂರ ರಾಜಪರಮೇಶ್ವರರುಗಳ ವಂಶಪರಂಪರೆಯಂ ಆಮೂಲವಾಗಿ ಎಡೆಬಿಡದೆ ಸಹಜವಾಗಿ ಬರೆದು ಒಪ್ಪಿಸುವುದೆಂಬ ನಿರೂಪಮಾದುದರಿಂ ಈ ಹನ್ನೆರಡನೆ ಅಧಿಕಾರದೊಳು ಈ ಮಹಿಸೂರ ಮಹಾರಾಜಾಧಿರಾಜರುಗಳ ವಂಶಾವಳಿ ಗುಣಾವಳಿ ಬಿರುದಾವಳಿಗಳ ಯಥಾಸ್ಥಿತಿಯಾಗಿ ಬರೆದೊಪ್ಪಿಸಿದೆನು.

ಮ ||ಸ್ರ|| ನೆಲನಂ ಮರ್ಯಾದೆಯಿಂ ಪಾಲಿಸಿ ನಿಯಮಿಸಿ ವರ್ಣಾಶ್ರಮಾಚಾರಮಂ ದೋ
ಷಲವಂ ಮೈವೆರ್ಚದಂತಿಂದ್ರಿಯಸುಖದೊದವಿಂ ಪೆರ್ಚಿ ಸದ್ಧರ್ಮಮಂತ
ನ್ನೊಲವಿಂದಂ ರಕ್ಷಿಸುತ್ತಂ ಪ್ರಜೆಯ ನಿವಹಮಂ ಪಾಲಿಸುತ್ತಿರ್ಪನಾ ನಿ
ರ್ಮಲಚಿತ್ತಂ ಕೃಷ್ಣರಾಜಾಧಿಪನಮಳ ಯಶಂ ಸಜ್ಜನಾಂಭೋಜಸೂರ್ಯಂ

ಶ್ರೀಮತ್ಕೃಷ್ಣಾವನಿಪಂ
ಪ್ರೇಮದೊಳನವರತ ಕುಡುವ ದಾನದಿ ಸರ್ವರ್

ಕಾಮಿತ ಫಲಮಂ ಪಡೆದು ಧ
ರಾಮರರೆಂದೆನಿಸಿ ಸುಖದಿ ಸಂತತಮಿಪ್ಪರ್

ಶ್ರೀಗೆ ವರನಾದ ನರಪತಿ
ಭೋಗೀಂದ್ರಂಗಧಿಕವಾಗಿಯವರಿವರೆನ್ನದೆ
ರಾಗದಿ ದಾನಂಗೊಡುತಿಹ
ತ್ಯಾಗದೊಳುಂ ಕರ್ಣನೀತನೆಂಬುದು ಲೋಕಂ

ದಾರಿದ್ರಗಿತ್ತ ಧನಮದು
ನೀರಂ ಫಲವೃಕ್ಷಕೆರೆದ ತೆರನಂತಕ್ಕುಂ
ಭೂರಿಯ ಧನಿಕಂಗೀಯಲ್
ನೀರಂ ಕಡಲೊಳಗೆ ಸುರಿದ ತೆರನಂತಕ್ಕುಂ

ಎಂದರಿದು ಬಡವರಿಗೆ ಮನ
ಸಂದಧಿಕ ದ್ರವ್ಯವಿತ್ತು ಮನ್ನಿಸಲವರಿಗೆ
ದಂದುಗವಳಿದುಂ ನಡೆಸಲ್
ಸಂದುದು ಸತ್ಕೀರ್ತಿ ಸ್ವರ್ಗ ಮರ್ತ್ಯದೊಳನಿಶಂ

ಗುಣಮಂ ನಿಲ್ಲಿಸಿ ಮನದೊಳ್
ಗಣಿಸದೆ ಲೋಭವನು ಬಿಟ್ಟು ವಿತರಣದಿಂದಂ
ತೃಣಕೆ ಸಮನಾಗಿ ಭಾವಿಸಿ
ಪಣಮಂ ಪೆಚ್ಚಿಸುವರಿಂತು ಭೂಮಿಪರೊಳರೇ

ಸಿರಿಯೊಳ್ ಧನದಂ ವಿಭವದಿ
ಸುರರಾಜಂ ಭೋಗದೇಳ್ಗೆಯೊಳ್ ನಾಗೇಂದ್ರಂ
ದೊರೆಗಳೊಳು ರಾಮಭದ್ರಗೆ
ಸರಿಯೆಂದೆನಿಸಿರ್ಪ ಕೃಷ್ಣರಾಜನರೇಂದ್ರಂ

ಎಲ್ಲಾ ಮತಗಳ ರಕ್ಷಿಸಿ
ಯಲ್ಲಲ್ಲಿಯ ತತ್ವಶಾಸ್ತ್ರಕಥೆಗಳ ಭಾವಿಸಿ
ನಿಲ್ಲದೆ ಓರಿಕಿರಿದೆಂಬೀ
ಬಲ್ಲವಿಕೆಯು ಕೃಷ್ಣರಾಜನೃಪನೊಳಗಿಪ್ಪುದು

ಅದರಿಂ ಷಣ್ಮತದೋಜೆಯ
ನಿದರೊಳೆ ಸಂಕ್ಷೇಪಮಾಗಿ ಪೇಳ್ದೆನು ಕ್ರಮದಿಂ
ಬುಧರೊಲವಿಂ ಲಾಲಿಸಿ ತ

ಪ್ಪಿದರೊಳಗಿರೆ ತಿದ್ದಿ ಪೇಳ್ವೆ ನಿಮ್ಮವನೆಂದುಂ

ಇದ್ದುದನಿದ್ದಂತೊರೆದೆನು
ಸದ್ಧರ್ಮದ ಮಾರ್ಗವಿಡಿದು ಬುಧಜನರರಿಯಲ್
ಶುದ್ಧಮನದಿಂದ ಕೇಳ್ದಭಿ
ವೃದ್ಧಿಯನಿಹಪರದೊಳಾಂತು ಸುಖಿಸುತ್ತಿರ್ಕೆಂ

ಇಲ್ಲದ ಸಂಗತಿಯಂ ತಾ
ಬಲ್ಲಂದದಿ ಕವಿತೆಯಿಂದಮದ್ಭುತಮಾಗಿಯೆ
ಸೊಲ್ಲಿಸಿದುದಲ್ಲ ಸಜ್ಜನ
ರೆಲ್ಲರು ಲಾಲಿಪುದು ಮುದದಿ ರಾಜಾವಲಿಯಂ

ಅಂತು ಕುಂಪಣೀಸೇನಾಧಿಪತಿಯ ಜನರಲ್ ಆರಿಷ್ ಎಂಬುವನು ಮಹಿಸೂರು ಸುತ್ತ ಇನ್ನೂರೈವತ್ತು ಮೈಲಿಗಳ ದೂರಮಂ ನೂರನಾಲ್ವತ್ತು ಮೈಲಿಗಳ ಅಗಲಗಳ ಸೀಮೆ ಬಿಟ್ಟುಕೊಟ್ಟ. ಅವರೊಳ್ ಗಡಿ ಪಟ್ಟಣ ಹಳ್ಳಿ ಗ್ರಾಮ ಸಹ ಮೂವತ್ತು ಮೂರು ಸಾವಿರ (೩೩೦೦೦). ಅಲ್ಲಿ ಇರತಕ್ಕ ಜನರು ಸುಮಾರು ಮೂವತ್ತು ಲಕ್ಷ (೩೦,೦೦,೦೦೦) ಉಂಟು. ಈ ದೇಶ ಸಮಧಾತ್ವಾದಿ ಆರೋಗ್ಯವುಳ್ಳದ್ದಾಗಿ ಇರುವುದು. ಇಲ್ಲಿ ಇರುವ ಮುಖ್ಯವಾದ ಕಾವೇರಿಯೆಂಬ ನದಿಯು ಕೊಡಗದೇಶದಲ್ಲಿ ಹುಟ್ಟಿ ಸ್ವಲ್ಪ ಹೆಚ್ಚು ಕಡಿಮೆ ನಾನೂರು ಮೈಲಿಗಳ ದೂರ ಸುತ್ತಿಕೊಂಡು ಹೋಗಿ ಲಂಕಾದ್ವೀಪದ ಉತ್ತರ ದಿಕ್ಕಿನ ಸಮುದ್ರದೊಳ್ ಕೂಡುತ್ತಿಹುದು. ಇಂತೀ ರಾಜ್ಯಮಂ ನಿಷ್ಕಂಟಕಮಾಗಿ ಪ್ರಜಾಪಾಲನೆಯಂ ಮಾಡುತಿರ್ಪುದು. ಸರಜಪ್ಪನಾಯಕನೆಂಬಂ ಅಪರ ಬುದ್ಧಿಯಿಂದಂ ದೊಡ್ಡನಗರದ ಸೀಮೆಯೊಳ್ ಅವಾಂತರಂಗಳ ಪಿರಿದಾಗಿ ಮಾಡುತ್ತಮಿರೆ ಆ ಕಳ್ಳನನ್ನು ಪಿಡಿಯಲ್ ಮೈಸೂರ ಸಾಮಾಜಿಕರಿಂ ಸಾಗದೆ ಕೆಲರ್ ಸಂಬಳಗಾರರಿಗೆ ಜೀವಿತಮಂ ಕೊಡದೆ ಮಂತ್ರಿ ಸೇನಾನಿಗಳ್ ನಡಪುತ್ತಿರೆ ಇಂಗರೀಷಿಯ ಸರದಾರರ್ ಕೇಳಿ ಮಹಾಸ್ವಾಮಿಯ ಸನ್ನಿಧಿಯೊಳ್ ಅಧಿಕಾರದೊಳಾರೂ ಸಮರ್ಥರಿಲ್ಲೆಂದು ಸರಜಪ್ಪನಾಯಕನಂ ಪರಿಹರಿಸಿ ರಾಜಸೇವೆಯೊಳ್ ತಾವೇ ನಿಂತು ಕಮೀಸನ್ ಸೂಪ್ರೆಂಟ ಕಚೇರಿಗಳನ್ನಿಟ್ಟು ರಾಜ್ಯದ ವಿಚಾರಣೆಯಂ ಮಾಡುತ್ತ ಹಿಂದೆ ಉಳಿದಿರ್ದ ಸಂಬಳಗಾರರಿಗೆ ಉಳಿದಿರ್ದ ಸಂಬಳವಂ ಕೊಟ್ಟು ತಿಂಗತಿಂಗಳಿಗೆ ದೊರೆಗಳಿಗೆ ಹಣವಂ ಸಲ್ಲಿಸುತ್ತಮಿಪ್ಪರು. ಮಹಾರಾಜಂ ನಿಶ್ಚಿಂತನಾಗಿ ರಾಜ್ಯದೊಳ್ ಇಂಗರೀಜರು ಎತ್ತಿಬಪ್ಪ ಹಣವನ್ನು ಕೊಡುತ್ತಮಿರೆ ಸುಖಸಂಕಥಾವಿನೋದದಿಂ ಪೂರ್ವಕೃತ ಪುಣ್ಯೋದಯದಿಂ ಒಪ್ಪುತ್ತಿರ್ಪನು.

ಕೊಲ್ಲದೆ ಪುಸಿಯದೆ ಚೌರ್ಯಗ
ಳಿಲ್ಲದೆ ಬಲುವಿಂದ ಪರರ ವಸ್ತುವ ಕೊಳ್ಳದೆ
ಬಲ್ಲಿದರ ಬೇಡಿ ಕಾಡದೆ

ಯಲ್ಲಿಯೆ ಜೀವಿಸುವ ಪುರುಷನಾತನೆ ದೇವಂ

ಸಾಲದೆ ಸೋಲದೆ ಪೊರಮ
ಟ್ಟೋಲೈಸದೆ ನಿಚ್ಚ ನಿಚ್ಚ ಪಯಣಂಬೋಗದೆ
ಆಲಯದೊಳಿರ್ದು ಪಡೆವುದು
ಮೂಲೋಕಮನಾಳ್ವ ಪದವಿಯೆಂಬುದು ನಿರುತಂ

ಪಾಪಂ ತಾನಿನಿಸಿಲ್ಲದೆ
ಭೂಪಾಲಂ ದಾನಧರ್ಮಮುಪಕಾರಂಗಳ
ತಾ ಪಿರಿದಾಗಿಯು ಮಾಳ್ಪ ಮ
ಹಾಪುರುಷನ ಪೂರ್ವಪುಣ್ಯ ತಾನೆಂತಿಹುದೋ

ಇಂತು ಪಾಪಮಿಲ್ಲದ ಧರ್ಮದ್ರವ್ಯದಿಂದಮೆ ಧರ್ಮಮಂ ಮಾಡುತ್ತ ಸರ್ವ ಜೀವಂಗಳೊಳ್ ಮೈತ್ರಿ ಪ್ರಮೋದ ಕಾರುಣ್ಯಮಾಧ್ಯಸ್ಥದಿಂ ಧರ್ಮಪ್ರಭುವಾಗಿ ಈ ಧರೆಗಿಂದಿನ ಅರಸು ಸ್ವರ್ಗಕ್ಕೆ ನಾಳಿನರಸು ಮುಕ್ತಿಗೆ ಮುಂದಣರಸು ಎಂದು ಪೇಳಲ್ ಬಹುದೆಂದು ಸತ್ಪುರುಷರುಲಿಯುತ್ತಿರ್ಪರ್.

ಕರುಣಾಮೃತ ರಸಭರಿತ
ಸ್ಫುರಿತೋಜ್ವಲಕೀರ್ತಿ ಸಾಂದ್ರಸದ್ಗುಣಚಂದ್ರಂ
ಧರಣೀಶ ಕೃಷ್ಣರಾಜೇ
ಶ್ವರನಿಂದಗ್ಗಳರು ಭುವನದೊಳಗಾರಿಪ್ಪರ್

ಆ ಮಹಾರಾಜನ ಮಹಾಮಾತ್ಯಶ್ರೀ

ಕರ್ಮೋಪಶಮದಿ ಸುಮತಿಯು
ನಿರ್ಮಲಮಾಗುದಿಸೆ ನಯದಿ ತತ್ವಾರ್ಥಂಗಳ
ನೊರ್ಮೊದಲೊಳೆ ತಿಳಿದು ನೆರೆ ಸ
ದ್ಧರ್ಮವ ಪಿಡಿವಧಿಕ ಬುದ್ಧಿ ತಾ ನೆಲೆಗೊಂಡುದು

ಆವೊಂ ಪೊಗಳುವನಪ್ರತಿ
ದೇವೀರಾಂಬಿಕೆಯ ಕುಶಲಮತಿ ಅತಿಶಯಮಂ
ಸಾವದ್ಯ [ವು]ಳಿದು ತತ್ವದ
ಭಾವವ ಶಾಸ್ತ್ರದೊಳೆ ತಿಳಿದು ನಿಶ್ಚಯವಾಂತಳ್

ಪಾಲುಂ ನೀರುಂ ಬೆರೆದಂ
ತೀ ಲೋಕದಿಮಿರ್ಪ ಸಕಲ ಶಾಸ್ತ್ರವನರಿದುಂ

ಪಾಲಂ ಸೇವಿ[ಪ] ಹಂಸನ
ವೋ[ಲುಂ] ಸಾರಂಗಳನ್ನು ಗ್ರಹಿಸುವ ಬುದ್ಧಿಯಂ

ಈ ಕಥೆಯನ್ನು ಮಾಡಿಸಲಾಗಿ ಪಾಪಪುಣ್ಯಾನುಬಂಧಿಯಪ್ಪುದೆಂದು ಶುಭ ಭಾವನೆಯೊಳ್ ಈ ರಾಜಾವಲೀ ಕಥಾಸಾರದೊಳ್ ಮಹಿಸೂರ ಮಹಾಪ್ರಭುಗಳ ವಂಶಾವಲೀ ಗುಣಾವಲೀ ಬಿರುದಾವಲಿಗಳಂ ಪೇಳ್ದೆಂ

ಶ್ಲೋಕ || ನಿಶ್ಚಲಧ್ಯಾನಯೋಗೇನ ತಪಸ್ಯನ್ನಿಜನೆವನೇ
ಕಥಾವಾ ಭ್ರಾಮರೀವೃತ್ತಿಲಪ್ಸೇ ಶುದ್ಧಮನಾ ಇತಿ ||
ಆತ್ಮಸಾಧ್ಯಂ ಸ್ವಯಂ ಕುರ್ಯಾದಂತಃ ಸಂರಂಭವರ್ಜಿತಃ
ತಸ್ಮಿನ್‌ಕರ್ಮನಿಬದ್ದೇನ ನವಕುಂಭೇ ರಜೋಯಥಾ ||

ಎಂದಿಂತು ರಾಜಾವಲೀಕಥೆಯೊಳ್ ಸುದೇಶಜನ ಸದಾಚಾರ ಶುದ್ಧ ಬಾಂಧವಾಭಿಸಂಗತವ್ಯಸನವಿದೂರ ಸುಜನಜನಾಭಿಮತ ಸತ್ಕುಲಪ್ರಸೂತ ಸರ್ವ ಕರ್ಮಾಭಿಜ್ಞ ನೀತಿಶಾಸ್ತ್ರಾದ್ಯಶೇಷಶಾಸ್ತ್ರಪ್ರವೀಣ ಸರ್ವಕರ್ಮ ವ್ಯವಹಾರವಿಶಾರದ ನಿಬಿಡತಮ ನ್ಯಾಯವಿಹಿತ ಪ್ರಜಾಪಾಲನಮತಿಪಾಲನ ಸಮಂಜಸತ್ವಲಕ್ಷಣ ಕ್ಷಾತ್ರ ಧರ್ಮದ್ರಾಜರಾಜ ಪರಮೇಶ್ವರ ಪ್ರೌಢಪ್ರತಾಪ ಅಪ್ರತಿಮವೀರನರಪತಿ ಬಿರುದಂತೆಂಬರ ಗಂಡ ಲೋಕೈಕವೀರ ಯದುಕುಲಪಾರಾವಾರಪ್ರವರ್ಧನ ಸುಧಾಕರ ಶಂಖಚಕ್ರಾಂಕುಶ ಕುಠಾರ ಮಕರ ಮತ್ಸ್ಯ ಶರಭ ಸಾಳ ಗಂಡಭೇರುಂಡ ಧರಣೀವರಾಹ ಹನುಮಂತ ಕಂಠೀರವಾದ್ಯನೇಕ ಬಿರುದಾವಲೀ ವಿರಾಜಿತಾತ್ರೇಯಗೋತ್ರದ ಆಶ್ವಲಾಯನ ಸೂತ್ರದ ಋಖ್ಯಾಖಾನುವರ್ತಿಗಳಾದಿಮ್ಮಡಿ ಕೃಷ್ಣರಾಜಒಡೆಯರ ಪೌತ್ರ ಚಾಮರಾಜ ಒಡೆಯರ ಪುತ್ರ ಶ್ರೀಮನ್ಮಹಿಸೂರಪುರವರ ರತ್ನಸಿಂಹಾಸನಾಧೀಶ್ವರ ಶ್ರೀಕೃಷ್ಣ ರಾಜಮಹಾರಾಜಂ ಚಿರಕಾಲಂ ಸ್ಥಿರಸಾಮ್ರಾಜ್ಯಮನಾಳುತ್ತಿರ್ಕೆ ಭದ್ರಂ ಶುಬಂ ಮಂಗಲಂ

ಇಂತೀ ರಾಜಾವಲಿಯಂ
ಸಂತಸದಿಂ ಕೇಳ್ವ ಜನರ್ಗಾಯುಂ ಶ್ರೀಯುಂ
ಸಂತಾನವೃದ್ಧಿ ಸಿದ್ಧಿ ನಿ
ರಂತರದಿಂದಿಹಪರಂಗಳೊಳ್ ದೊರೆಕೊಳ್ಗುಂ

ವೃತ್ತ || ಜಯತೀನೃಪಲಲಾಮಃ ರೂಪಸೌಂದರ್ಯಕಾಮಃ
ಸಕಲಸುಗುಣ ಧಾಮಾ ದಾನಧರ್ಮಾಭಿರಾಮಃ
ಸುಕವಿ ಸುಜನಪ್ರೇಮಃ ಸತ್ಕುಲಾಂಬೋಧಿಸೋಮಃ
ವಿಕಸಿತಿನೃಪಸೀಮಾ ಕೃಷ್ಣರಾಜೇಂದ್ರರಾಜಃ ||

ಮ ||ಸ್ರ|| ಪಿರಿದುಂ ಪುಣ್ಯೋದಯಂ ತನ್ನುದಯಮನರಿಪುತ್ತಿರ್ಪುದುಂ ಸತ್ಯವಿದ್ಯಾ

ಚರಿತಂ ತೇಜಸ್ವಿ ಸೌಖ್ಯಾಂಬುಧಿಯೆನಿಸಿದ ವಾಗ್ವಲ್ಲಕೀವ್ಯೈಣಿಕಂ ವಿ
ಸ್ಫುರಿತಾನಂದಪ್ರಭೂತಂ ಮುದಮನೆ ತಳೆದಂ ವಿಶ್ವವಿದ್ಯಾವಿನೋದಂ
ಧರಣೀಶಂ ಸರ್ವ ದಿಶ್ವ್ಯಾಪಿತನಮಳಯಶಂ ಕೃಷ್ಣರಾಜೇಂದ್ರಚಂದ್ರಂ ||

ಇದು ಸತ್ಯಪ್ರವಚನ ಕಾಲಪ್ರವರ್ತನ ಪುರುಷೋತ್ತಮ ಸರ್ವಜ್ಞಪದಾಂಭೋಜ ಷಟ್ಪದ ಅರ್ಹತ್ ವಿಪ್ರ ದೇವಚಂದ್ರಪಂಡಿತ ವಿರಚಿತ ರಾಜಾವಲೀ ಕಥಾಸಾರದೊಳ್ ಶ್ರೀಮತ್ ಕೃಷ್ಣರಾಜವಂಶಾಭ್ಯುದಯವರ್ಣನಂ

ದ್ವಾದಶಾಧಿಕಾರಂ

ತ್ರಯೋದಶಾಧಿಕಾರಂ

ಶ್ರೀ ರಾಜಾವಲಿಯ ಕಥಾ
ಸಾರದೊಳುಂ ತೆಗೆದು ಜಾತಿನಿರ್ಣಯಮೆಂದೀ
ಧಾರುಣಿಯ ಬುಧರಿಗರಿವಂ
ತೋರಂತಿದ ಪೇಳ್ವೆ ಜೈನಋಷಿಗಳ ಮತದಿಂ

ಅದೆಂತೆಂದೊಡೀ ಹುಂಡಾವಸರ್ಪಿಣಿಕಾಲದ ಮೊದಲೊಳ್ ತ್ರಿವಿಧಭೋಗಭೂಮಿಯಾಗಿರ್ದು ಕಡೆಯೊಳಾ ಆರ್ಯವಂಶದೊಳ್ ಷೋಡಶ ಮನುಗಳ್ ಪುಟ್ಟಿದರವರೊಳ್ ಆದಿಬ್ರಹ್ಮ ಅಂತ್ಯಬ್ರಹ್ಮರುದಿಸಿದರವರಿಂ ಕರ್ಮಭೂಮಿಸ್ಥಿತಿಯನುಪದೇಶಂಗೆಯ್ದು ಕೌಶಲಾದಿ ದೇಶಂಗಳಂ ಸಾಕೇತಾದಿ ಪುರಂಗಳಂ ನಿರ್ಮಿಸಿ ಪ್ರಜಾಜೀವನೋಪಾಯಮಪ್ಪ

ಅಸಿ ಮಸಿ ಕೃಷಿ ವಾಣಿಜ್ಯ ಶಿಲ್ಪ ಪಾಶುಪಾಲ್ಯಮೆಂಬ ಷಟ್ಕರ್ಮಮಂ ಬ್ರಾಹ್ಮಣಾದಿ ವರ್ಣಾಶ್ರಮಮಂ ಕುಲಭೇದಮಂ ಕುಲಚರ್ಯಮಂ ಇಕ್ಷ್ವಾಕು ಮೊದಲಾದ ವಂಶಂಗಳಂ ಅಕ್ಷರ ಲೇಖ್ಯ ಗಣಿತಾದಿ ಚೌಷಷ್ಟಿಕಲೆಗಳಂ ದಾನ ಪೂಜೆ ಶೀಲೋಪವಾಸಮೆಂಬ ಗೃಹಸ್ಥಧರ್ಮಮಂ ಉತ್ತಮಕ್ಷಮಾದಿ ಯತಿಧರ್ಮಮನುಪದೇಶಂಗೆಯ್ದು ತ್ರಿಲೋಕ ಸ್ವಾಮಿಯಾಗಿ ಆದಿಬ್ರಹ್ಮಂ ಕೇವಲಜ್ಞಾನಸ್ವಭಾವದಿಂ ದ್ವಾದಶಾಂಗವೇದ ಚತುರ್ದಶ ಪೂರ್ವೆ ಪ್ರಕೀರ್ಣಕ ಚತುರನುಯೋಗ ಮಹಾವೇದಶಾಸ್ತ್ರಂಗಳಂ ಪೇಳಿ ಸಮಸ್ತ ಚರಾಚರ ವಿವಿಧ ದ್ರವ್ಯಗುಣ ಪರ್ಯಾಯಮಂ ಭೂತ ಭವಿಷ್ಯದ್ವರ್ತಮಾನ ತ್ರಿಕಾಲ ಗೋಚರಮಪ್ಪ ಸರ್ವಜ್ಞನಾದುದರಿಂ ದಿವ್ಯಭಾಷಾಸ್ವಭಾವದಿಂ ದ್ವಾದಶಾಂಗ ವೇದ ಚತುರ್ದಶ ಪೂರ್ವೆ ಪ್ರಕೀರ್ಣಕ ಚತುರನುಯೋಗ ವೇದಶಾಸ್ತ್ರಂಗಳಂ ಪೇಳಿ ಬ್ರಹ್ಮ ವಿಷ್ಣು ಮಹೇಶ್ವರ ನಾಮಂ ಮೊದಲಾದ ಸಾಸಿರದೆಂಟು ನಾಮಮಂ ತಾಳ್ದು ಕೈಲಾಸಗಿರಿಯೊಳೆ ಸಕಲ ಕರ್ಮಂಗಳಂ ನಿರ್ಮೂಲನಂಗೆಯ್ದು ತ್ರಿಲೋಕಾಗ್ರಶಿಖರಶೇಖರನಾಗಿ ಮುಕ್ತಿಲಕ್ಷ್ಮಿಯಂ ಪಡೆದನಾ ವಂಶದೊಳ್ ಅಂತ್ಯಬ್ರಹ್ಮನಪ್ಪ ಭರತೇಶನ ಕುಮಾರಂ ಮರೀಚಿಯೆಂಬೊಂ ಸ್ವಯಂಬುದ್ಧನಾಗಿ ಜಾತಿವರ್ಗಂ ಪುಟ್ಟಿ ಕಪಿಲಸಿದ್ಧಾಂತಮಂ ಮಾಡಿದಂ

ಆ ಇಕ್ಷ್ವಾಕುವಂಶ ಚಂದ್ರವಂಶ ಸೂರ್ಯವಂಶ ಕುರು ಹರಿ ಉಗ್ರ ನಾತವಂಶಗಳೊಳೊಂದು ಕೋಟಾಕೋಟಿ ಸಾಗರೋಪಮ ಕಾಲಂ ನಾಲ್ವತ್ತಿಚ್ಛಾಸಿರ ವರ್ಷಂ ಕುಂದಿತದರೊಳ್ ಚತುರ್ವಿಂಶತಿ ತೀರ್ಥಂಕರರ್ ದ್ವಾದಶಮಹಾಪೂರ್ಣ ಚಕ್ರೇಶ್ವರರುಂ ನವಬಲ ವಾಸುದೇವ ಪ್ರತಿವಾಸುದೇವ ನಾರದರುಂ ಏಕಾದಶ ರುದ್ರರ್ ಪುಟ್ಟಿದರಲ್ಲದೆ ಮಂಡಳೀಕಾರ್ಧಮಂಡಳೀಕ ಮಹಾಮಂಡಳೀಕ ಮಕುಟಬದ್ಧರಾದಿಯನೇಕ ಕ್ಷತ್ರಿಯರ್ ಭೂಪತಿಗಳಾದರ್. ಆ ವಂಶಂಗಳೊಳೆ ಚಾತುರ್ವರ್ಣ ಚತುಸ್ಸಂಘಮಾಗಿ ಧರ್ಮಾರ್ಥ ಕಾಮ ಮೋಕ್ಷಮೆಂಬ ಚತುರ್ವರ್ಗಸಾಧನಂಗಳಂ ಮಾಡಿ ಸ್ವರ್ಗಾಪವರ್ಗಮಂ ಪಡೆವರಾ ತ್ರೈವರ್ಣಿಕರೊಳ್ ಬ್ರಾಹ್ಮಣರ್ ದಯಾರ್ದ್ರವೃತ್ತಿ ಮೊದಲಾದ ದಶ ಶುದ್ಧಿಯಿಂ ಯಜನ ಯಾಜನ ಅಧ್ಯಯನ ಅಧ್ಯಾಪನ ದಾನ ಪ್ರತಿಗ್ರಹಣಮೆಂಬ ಆದಿಯ ಷಟ್ಕರ್ಮ ಗರ್ಭಾನ್ವಯಕ್ರಿಯಾ ತ್ರಿಕಾಲಸಂದೋಪಾಸನ ಜಪ ದೇವಋಷಿ ಪಿತೃತರ್ಪಣ ವೈಶ್ವ ದೇವಾರ್ಚನಾಗ್ನಿಹೋತ್ರ ಪ್ರತಿಷ್ಠಾಷ್ಟಮಿ ಚತುರ್ದಶ್ಯಷ್ಟಾಹ್ನಿಕಾದಿ ನಿತ್ಯ ನೈಮಿತ್ತಿಕಾಚಾರದೊಳ್ ಕೂಡಿದಾಹಿತಾಗ್ನಿಗಳುಂ ಭೂದೇವರುಂ ದ್ವಿಜೋತ್ತಮರುಂ ಪರಮಾತ್ಮಜ್ಞಾನಸಂಪನ್ನರುಂ ಪರಮಬ್ರಹ್ಮತನೂಭವರುಂ ಚಾರಿತ್ರಶುದ್ಧರುಂ ಕೊಂಡಾಡಿ ಸಜ್ಜಾತ್ಯಾದಿ ಸಪ್ತ ಪರಮ ಆಚಾರ್ಯೋಪಾಧ್ಯಾಯರೆನಿಸುವರೆಂದಂತ್ಯ ಬ್ರಹ್ಮನವರ್ಗೆ ಗ್ರಾಮ ಕ್ಷೇತ್ರ ಗೃಹಂಗಳಂ ಕೊಟ್ಟು ಷೋಡಶಾಭರಣದಿಂದಲಂಕರಿಸಿ ವಸ್ತ್ರಾಭರಣ ಫಳ ತಾಂಬೂಲಾದಿ ದಾನಂಗಳಿಂ ಪೂಜಿಸಿ ಕೊಂಡಾಡಿ ಸಜ್ಜಾತ್ಯಾದಿ ಸಪ್ತ ಪರಮಸ್ಥಾನ ಯೋಗ್ಯರಿವರ್ಗತಿಬಾಲವಿದ್ಯ ಗೃಹೇಶಿತಾ ಮಾನಾರ್ಹತ್ವಾ ಅದಂಡತಾದಿ ದಶಾಧಿಕಾರಂ ಸಲ್ಬುದೆಂದು ವರ್ಣೋತ್ತಮರಾದ ಬ್ರಾಹ್ಮಣರ್

ಸರ್ವಶ್ರೇಷ್ಠರಾಗಿರ್ದರ್. ಉಳಿದ ಕ್ಷತ್ರಿಯ ವೈಶ್ಯರ್

ಶ್ಲೋಕ || ದೇವಪೂಜಾ ಗುರೋಪಾಸ್ತಿ ಸ್ವಾಧ್ಯಾಯ ಸಂಯಮಂ ತಪಃ
ದಾನಂ ಚೇತಿ ಗೃಹಸ್ಥಾನಾಂ ಷಟ್ಕರ್ಮಾಣಿ ದಿನೇ ದಿನೇ ||

ಎಂಬ ಷಟ್ಕರ್ಮನಿರತರಪ್ಪುದರಿಂ ನಿತ್ಯನೈಮಿತ್ತಿಕಾಚಾರಮುಳ್ಳರಾಗಿ ದರ್ಶನೀಕಾದಿ ಏಕಾದಶ ನಿಲಯಮಪ್ಪ ಶ್ರಾವಕಧರ್ಮದೊಳುಂ ದಶಧರ್ಮಮೂಲೋತ್ತರ ಗುಣಂಗಳುಳ್ಳ ಯತಿಧರ್ಮಮಂ ವರ್ಣತ್ರಯರ್ ಕೈಕೊಳಲ್ ಯೋಗ್ಯರಪ್ಪುದರಿಂ ತ್ರಯೋವರ್ಣಾ ದ್ವಿಜಾತಯಃ ಎಂದು ತ್ರೈವರ್ಣಿಕರು ಭೋಜನ ಪ್ರತಿಭೋಜನಂಗಳಂ ಕೊಳ್ಕೊಡೆಯಂ ಮಾಳ್ಪರವರೊಳೆ ಗರ್ಭಾದಾನ ಮೊದಲಾಗಿ ಷೋಡಶ ಕರ್ಮಂಗಳ್ ನಡೆವುದರಿಂದಾ ಕ್ಷತ್ರಿಯ ವೈಶ್ಯರ್ ಪಾತ್ರದತ್ತಿ ಸಮದತ್ತಿ ಅನ್ವಯದತ್ತಿ ದಯಾದತ್ತಿಯೆಂಬ ಚತುರ್ವಿಧ ದತ್ತಿಯಂ ಮಾಡಲ್ ಯೋಗ್ಯರ್.

ಶ್ಲೋಕ || ಬ್ರಾಹ್ಮಣಃ ಕ್ಷತ್ರಿಯೋ ವೈಶ್ಯಾಃ ಇತಿ ವರ್ಣಾಃ ತ್ರಯೋ ಮತಾಃ
ತೇಷಾಂ ಶುಶ್ರೂಷಣೇ ಶೂದ್ರಾಸ್ತೇ ದ್ವಿಧಾ ಕರ್ಮಕಾರವಃ ||

ಅಧೀತ್ಯಾಧ್ಯಾಪನೇ ದಾನಂ ತಿತಿಕ್ಷೇ ಜ್ಯಾ ಚ ತತ್ಕ್ರಿಯಾಃ
ಶಿಖಾ ಯಜ್ಞೋಪವೀತಂ ಚ ಲಿಂಗಂ ತೇಷಾಂ ಪ್ರಕಲ್ಪಿತಮ್ ||

ಕ್ಷತತ್ರಾಣೇ ನಿಯುಕ್ತಾ ವೈ ಕ್ಷತ್ರಿಯಾಃ ಶಸ್ತ್ರಪಾಣಯಃ
ವಣಿಜಃ ಕೃಷಿ ವಾಣಿಜ್ಯ ಪಾಶುಪಲ್ಯೋಪಜೀವನೇ ||

ಕಾರವೋ ರಜಕಾದ್ಯಾಸ್ಯು ಸ್ತತೋನ್ಯಸ್ಯಾರಕಾರವಃ
ಕಾರವೋಽಪಿ ಮತಾಃ ದ್ವೇಧಾ ಸ್ಪೃಶ್ಯಾಸ್ಪೃಶ್ಯ ವಿಕಲ್ಪತಃ ||

ತತ್ರಾಸ್ಪೃಶ್ಯಾಃ ಪ್ರಜಾಬಾಹ್ಯಾಃ ಸ್ಪೃಶ್ಯಾಃ ಸ್ಯುಃ ಕರ್ತಕಾರಯ
ನೀಚಾಸ್ಯುರವಗಂತವ್ಯಾಃ ಶೂದ್ರಾ ಏತೇ ಹ್ಯ ಭೂಮಯಃ ||

ಮನುಷ್ಯಜಾತಿರೇಕೈವ ಜಾತಿನಾಮೋದಯೋದ್ಭವಾಃ
ವೃತ್ತಿಭೇದಾ ಹಿ ತದ್ಭೇದಾಶ್ಚಾತುರ್ವಣ್ಯತ್ವಮಾಶ್ರಿತಾಃ ||

ನ ಚೈವಂ ಕ್ಷತ್ರಿಯತ್ವಾದಿಜ್ಞಾತಿಃ ಕಾಲ್ಪನಿಕೀ ಭವೇತ್
ತತ್ರಜ್ಞಾತೇರ್ಯತೋ ಜಾತಿಸ್ತತ್ರದೃತ್ಯುಚಿತೋದಯೇ ||

ಕೇವಲಜ್ಞಾನಸಂಭೂತಿರ್ಹೇತುಃ ಸಕಲ ಸಂಯಮಃ
ತಸ್ಯೋತ್ಪತ್ತಿಸ್ತ್ರಿವರ್ಣೇಷು ಶೂದ್ರಾಣಾಂ ನಾಭಿಸಮ್ಮತಃ ||

ವರ್ಣತ್ರಯರು ತಮ್ಮತಮ್ಮೊಳೆ ಕೊಳ್ಕೊಡೆ ಸಜಾತಿಯೆಂಬುದು. ಅಲ್ಲದೆ ಕ್ಷತ್ರಿಯ ವೈಶ್ಯಕನ್ಯೆಯ ಬ್ರಾಹ್ಮಣಂಗಾಗೆ ಜನಿಸಿದ ಮಕ್ಕಳು ಕ್ಷತ್ರಿಯವೈಶ್ಯರಪ್ಪರು. ಕ್ಷತ್ರಿಯಂ

ಬ್ರಾಹ್ಮಣಿಯಂ ತಂದೊಡೆ ಪುಟ್ಟಿದವಂ ಕ್ಷತ್ರಿಯನಪ್ಪಂ ಕ್ಷತ್ರಿಯವೈಶ್ಯಕನ್ಯೆಗೆ ಪುಟ್ಟಿದಂ ಕ್ಷತ್ರಿಯನುಂ ವೈಶ್ಯನುಮಪ್ಪನು. ವರ್ಣೋತ್ತಮರು ವರ್ಣಾಧಮ ಸ್ತ್ರೀಯರೊಳ್ ಕೂಡಿದೊಡಂ ಜನಿಸಿದವರ್ ವರ್ಣಕ್ಕೆ ಸಲ್ಲರೆಂದು ಪೇಳ್ದುದರಿಂ ವರ್ಣಸಂಕರಮಾಗದಂತು ಅವರವರ ಕ್ರಿಯಾವೃತ್ತಿಯಂ ಬಿಟ್ಟರಂ ಪಾರ್ಥಿವರ್ ದಂಡಿಸಿ ನಿಯಮಿಸದಿರ್ದೊಡೆ ಮತ್ಸ್ಯಂ ನ್ಯಾಯಮಾಗಿ ಕೆಡುವುದು. ಈ ಪ್ರಕಾರದಿಂ ನಡೆದುಬರುವಲ್ಲಿ ಕಾಲದೋಷದಿಂ ಬ್ರಾಹ್ಮಣವರ್ಣದೊಳ್ ಕೆಲಂಬರ್ ವರ್ಣಾನಾಂ ಬ್ರಾಹ್ಮಣೋ ಗುರುಃ ಎಂದು ಜಾತಿಮದಂ ಪುಟ್ಟಿ ಮರೀಚಿರಚಿತ ಕಪಿಲಸಿದ್ಧಾಂತಮನವಲಂಬಿಸಿ ಕೆಲವು ಕ್ಷತ್ರಿಯ ವೈಶ್ಯ ಶೂದ್ರಾದಿಗಳಂ ಕೂಡಿಕೊಂಡು ಪಂಚಮಿಥ್ಯಾಕರ್ಮೋದಯದಿಂ ಜಿನ ಧರ್ಮಮಂ ತವಿಸಿರ್ದ ಕಾಲದೊಳ್ ಷಣ್ಮತಂಗಳಂ ಕಲ್ಪಿಸಿಯಾಯಾಯ ಮತಂಗಳೊಳ್ ರುಚಿ ಪುಟ್ಟಿ ಜಿನಸಮಯಕ್ಕಿತರಮಪ್ಪ ವೇದ ಪುರಾಣ ತರ್ಕಾಗಮಾದಿಗಳಂ ಕಲ್ಪಿಸಿ ವಿದ್ಯಾನುವಾದಸಾಮರ್ಥ್ಯದಿಂ ಅಥರ್ವಣಮಂ ಕಲ್ತು ಏಕದಂಡಿ ತ್ರಿದಂಡಿ ಹಂಸ ಪರಮಹಂಸಾದಿ ತಾಪಸರಾಗಿ ಕೆಲಂಬರ್ ಹಿಂಸಾಯಜ್ಞಮಂ ಪ್ರಕಟಿಸಿದರವರೊಳ್ ಕಾಲಾಂತರದೊಳ್ ಪಂಚಗವುಡ ಪಂಚದ್ರಾವಿಡರೆಂದು ಪತ್ತು ಭೇದಮಾಗಿಯುಮವರೊಳನೇಕ ತೆರನಾಗಿ ವರ್ತಿಸುವರ್. ಉಳಿದ ಬ್ರಾಹ್ಮಣರ್ ಕ್ರಿಯಾಕರ್ಮಮಂ ಬಿಡದೆ ಕ್ಷತ್ರಿಯ ವೈಶ್ಯರ್ಗೆ ಪುರೋಹಿತರಾಗಿಯು ಮಂತ್ರಿಪ್ರಧಾನಿಗಳಾಗಿ ವಿದ್ಯಾಶಿಕ್ಷೆಯೊಳೆ ಆರ್ಯಷಟ್ಕರ್ಮದಿಂ ಕ್ಷತ್ರಿಯರೊಳೆ ಕೂಡಿ ವೈದಿಕ ಲೌಕಿಕರಾಗಿರ್ದರ್. ಕಡೆಯೊಳ್ ಕ್ಷತ್ರಿಯ ವೈಶ್ಯರ್ ತುರುಷ್ಕರ್ ಮೊದಲಾದ ನಾನಾ ಮತಮಂ ಮಾಡುವಲ್ಲಿ ಕೂಡಿಯುಳಿದ ಜೈನರ್ ಮರಾಠ ರಜಪುತ್ರ ಆರೆ ಶ್ವೇತಾಂಬರರ್ ಮೊದಲಾದ ವಿಸಂಘದೊಳ್ ಸೇರಿದರಲ್ಲಿಂದಿತ್ತ ಬಸವನಿಂದಾದ ವೀರಶೈವರ್ ರಾಮಾನುಜನಿಂದಾದ ವೀರವೈಷ್ಣವ ರಾಗಿಯು ಕೆಲಕೆಲರ್ ಲಿಂಗನಾಮಧಾರಿಗಳಾಗಿ ಉಳಿದರಸುಗಳ್ ಚೋಳ ಬಲ್ಲಾಳ ಡಣಾಯಕ ಸಾಳ್ವ ಕೆಂಗ ಪ್ರಭು ಅಜಲ ಸಾವಂತ ರಾಜ ರಾಯರೆಂದು ನಾನಾ ಪೆಸರಾಗಿ ಕೆಲರ್ ಮಿಥ್ಯಮಂ ಪೊರ್ದಿದರುಳಿದವರ್ ಕರ್ಮಹೀನರಾಗಿ ವರ್ತಿಸುವಲ್ಲಿ ಬ್ರಾಹ್ಮಣರಾದ ಜೈನರ್ ವಿಂಗಡಿಸಿಕೊಂಡಿರ್ದವರೊಳೆ ಕೆಲಂಬರ್ ಮಿಥ್ಯಮಂ ಪೊರ್ದಿ ಮಾರಕರಾದರುಳಿದವರ್ ಬ್ರಾಹ್ಮಣರೆಂದು ಪಂಡಿತರೆಂದು ಉಪಾಧ್ಯಾಯರೆಂದು ಅರ್ಚಕರೆಂದು ಇಂದ್ರರೆಂದು ಸ್ಥಾನದವರೆಂದು ನಾನಾ ವಿಧ ನಾಮದಿಂದಿಪ್ಪರು. ಕ್ಷತ್ರಿಯವೈಶ್ಯರ್ ಕರ್ಣಾಟ ಮೊದಲಾಗಿರ್ದು ಪನ್ನೆರಡು ವರುಷ ದುರ್ಭಿಕ್ಷಮಾದಾಗಲು ದೇಶಾಂತರಂ ಪೋಗಿ ಚಾರಿತ್ರಗೆಟ್ಟುಬಂದು ಜೈನಮತಮಂ ಬಿಟ್ಟು ಕೆಲದಿವಸಮಿರ್ದು ಗುರುಗಳಂ ಪೊರ್ದಿ ವ್ರತಂಗೊಂಡು ಚತುರ್ಥ ಪಂಚಮರೆಂಬ ನಾಮದಿಂ ಕ್ರಿಯಾಕರ್ಮಹೀನರಾಗಿ ಸೂತಕಪ್ರೇಕಮಂ ಬಿಟ್ಟು ವರ್ತಿಪುದರಿಂ ಚಾತುರ್ವರ್ಣಂಗಳೊಳ್ ಕೂಡದೆ ಕೆಲವರಸುಗಳ್ ಭೋಗಾರರೆಂದು ಗವುಡರೆಂದು ಪಾಂಡೀಯರೆಂದಾಗಿಯವರೊಳ್ ಕೆಲರ್ ಅಣು ವ್ರತಧಾರಿಗಳಾಗಿ ಜಿನಧರ್ಮ ಪ್ರಭಾವಕರಾದ ಪಂಚಮರ್ಗೆ ಗುರುಗಳ್ ಶೌಚಾಚಾರಮಂ ಪೇಳಿ ಇಭ್ಯಕುಲದವರ್ ನೀವು ಕಾಲದೋಷದಿಂ ಪಂಚಮರಾದುದರಿಂ ನಿಮಗೆ ಕರ್ಮಹೀನವಾಗಿರುವುದಂದಲ್ಲಿಂದಿತ್ತ ತ್ರಿಕಾಲ ದೇವತಾವಂದನೆಗೆಯ್ದು ಧರ್ಮಚಕ್ರಮಂ ಚಂದನದಿಂ ಧರಿಸಿ ಗರ್ಭಾದಾನ ನಾಮಕರ್ಮ

ಕ್ಷೌರ ವಿವಾಹಂಗಳೊಳ್ ಹೋಮಮಂ ಗೃಹಶುದ್ಧಿಯಂ ಮಾಡಿಸಿ ವ್ರತಂಗೊಂಡು ನಡೆಯುವುದೆಂದು ನಿಯಮಿಸಿದರ್. ಅಂದಿಂದಿತ್ತ ದೇವಗುರು ಬ್ರಾಹ್ಮರೊಳ್ ಭಕ್ತಿಗೂಡಿ ಕೆಲರ್ ಜಿನಧರ್ಮಮಂ ಪ್ರಕಟಿಸಿ ಧಾರ್ಮಿಕರೆನಿಸಿದರ್. ಕೆಲರ್ ನಾಮದಿಂ ಜೈನರೆಂದು ಕೂಡುವಳೀ ಮಾಡಿಕೊಂಡು ಕರ್ಮಹೀನರಾಗಿ ನಾನಾ ಪೆಸರಂ ತಾಳ್ದರ್. ಘಟ್ಟದ ಕೆಳಗೆ ಆಚಾರ್ಯರ್ ಏಳುನೂರು ಒಕ್ಕಲು ಭಂಟರಂ ಜೈನಮತಕ್ಕೆ ತಂದು ಜೈನಭಂಟರೆಂದು ವ್ರತಮಂ ಕೊಟ್ಟರ್. ಇಂತು ವರ್ಣಾಶ್ರಮವಿಲ್ಲದೆ ನಾನಾ ಪೆಸರಾಯ್ತು.

ಅತ್ತಲುತ್ತರ ದೇಶದೊಳೆಲ್ಲ ಜೈನರು ವರ್ಣಾಶ್ರಮವಿಲ್ಲದೆ ಪ್ರಜ್ಞೆಯೆಂದು ಶ್ರಾವಕರೆಂದು ಜಿನಭಕ್ತರೆಂದು ವರ್ತಿಸುವರ್. ಇಂತು ವರ್ತಿಸುತ್ತಿರೆ ಶಾಲಿವಾಹನ ಶಕ ವರ್ಷಗಳು ೧೫೪೫ ದುಂದುಭಿ ಸಂವತ್ಸರದೊಳ್ ಸೋದೆಯ ಪಟ್ಟಾಚಾರ್ಯರಾದಕಲಂಕಸ್ವಾಮಿಗಳ್ ಸ್ವರ್ಗಸ್ಥರಾಗಲವರ ಬಳಿಯೊಳೋದಿಕೊಂಡಿರ್ದ ಪಂಚಮಂ ತಾನು ದೀಕ್ಷೆಯಂ ಕೈಕೊಳಲೆಂದು ಮತ್ತೊಬ್ಬ ಯತಿಗಳಂ ಬೇಡೆ ಆತಂಗೆ ಮಹಾವ್ರತಂಗೊಟ್ಟು ಪಟ್ಟಮಂ ಮಾಡಲೆಂದು ಎಡಬಲಸ್ಥಳದ ಬ್ರಾಹ್ಮಣ ಮೊದಲಾದ ಜೈನರೆಲ್ಲರ್ ಕೂಡಿ ನಾಲ್ಕು ಗಣಗಳ ಸಿಂಹಾಸನಮುಪಸಿಂಹಾಸನಂಗಳ್ಗೆ ಪೂರ್ವಾರಭ್ಯ ಬ್ರಾಹ್ಮಣರೆಯಪ್ಪರಲ್ಲುರುಳಿದರ್ಗಾಗದೆಂದು ಕೆಲಂಬರ್ ಇಂತೆಂದರ್

ಶ್ಲೋಕ || ಯಥಾವಿಧ ಮತಸ್ತೇಷಾಂ ವೃತ್ತಯಸ್ತಾ‌ಹ್ಯನೇಕಧಾ
ಬ್ರಾಹ್ಮಣಃ ಕ್ಷತ್ರಿಯೋ ವೈಶ್ಯಾಃ ಪೂರ್ವಪೂರ್ವೋ ಮನಾಗ್ವರಃ ||

ವೃತ್ತಯೋ ಹಿ ತದೇತೇಷಾಮಥ ಸೇಯಾಸ್ತಥಾವಿದಾಃ
ಗರ್ಭಾದಾನೋಪನೀತ್ಯಾದಿಸಂಸ್ಕಾರ ದೀಕ್ಷಿತೋ ನರಃ ||

ತತ್ಸಂಸ್ಕಾರ ಸ್ತ್ರೀವರ್ಣಾನಾಮನ್ಯೇಣು ವ್ರತಧಾರಿಣಃ
ಬ್ರಾಹ್ಮಣಃ ಕ್ಷತ್ರಿಯೋ ವೈಶ್ಯ ಏತೇ ತ್ರೈವರ್ಣಿಕಾ ಮತಾಃ ||

ತೇಷಾಮೇತದ್ವಿಜಾತೀನಾಂ ಕ್ರಿಯಾಸಂಸ್ಕಾರ ಇಷ್ಯತೇ
ಕ್ರಿಯಾಗರ್ಭಾದಿ ಕಾಯಾಸ್ತು ನಿರ್ವಾಣಾಂತಂ ಜನಾಗಮೇ ||

ವಿಕಲಂ ಸಕಲಂ ಚೇತಿ ದ್ವಿಧಾ ವ್ರತಮುದೀರಿತಮ್
ತದ್ವಯಂ ಹಿ ತ್ರಿವರ್ಣಾನಾಂ ಶೂದ್ರಾಣಾಂ ವಿಕಲವ್ರತಮ್ ||

ಕೇವಲಜ್ಞಾನಸಂಭೂತೇಃ ಹೇತುಸ್ಸಕಲಸಂಯಮಃ
ತಸ್ಯೋತ್ಪತ್ತಿಃ ತ್ರಿವರ್ಣೇಷು ಕ್ರಿಯೋಚ್ಚೈರ್ಗೋತ್ರಕಾಸು ಚ ||

ಎಂಬುದರಿಂ ಕ್ಷತ್ರಿಯ ವೈಶ್ಯರ್ಗಂ ಸಲ್ಲುದು ಚತುರ್ಥ ಪಂಚಮರುಮವರೊಳ್ ಕೂಡದೆ ಕರ್ಮರಹಿತವಾದುದರಿಂದಾಗದೆಂಬುದು ಬ್ರಾಹ್ಮಣವರ್ಣಮಂ ಭರತೇಶ್ವರಂ ಮಾಡಿದನೆಂದು

ಕೆಲಂಬರೆಂದೊಡೆ

ಶ್ಲೋಕ || **ಕ್ಷತ್ರಿಯೇಷು ಕುಮಾರೇಷು ಯೇ ಅಣುವ್ರತ ಪರಾಯಣಾಃ**
ಸೃಷ್ಟಾಸ್ತೇ ಬ್ರಾಹ್ಮಣಾಃ ಪಶ್ಚಾದ್ಭರತೇ ನಾಂತ್ಯವೇಧಸಾ ||

ಮುನ್ನಾ ಮನುವಂಶಜರಂ ಬ್ರಾಹ್ಮಣರಂ ಮಾಳ್ಪುದಕ್ಕೆ ಕ್ರಿಯಾಮಂತ್ರ ವಿಶೇಷಂಗಳಂ ತಿಳಿಯದಿರ್ದುದರಿಂದಾದಿಬ್ರಹ್ಮಂ ಜೀವನೋಪಾಯಂಗಳಪ್ಪ ಲೌಕಿಕ ಷಟ್ಕರ್ಮಂಗಳಂಪೇಳ್ದು ಸಕಲ ಪದಾರ್ಥಾವಲೋಕನಮಪ್ಪ ಕೇವಲಜ್ಞಾನಂ ಪುಟ್ಟಿ ಸಕಲ ಸಂಪತ್ತಿಯಪ್ಪ ಸಮವಸರಣದೊಳ್ ದಿವ್ಯಭಾಗಾಸ್ವರೂಪದಿಂ ಉಪಾಸಕಾಂಗಮೆಂ ಬೇಳನೆಯಂಗವೆಂಬುದರೊಳ್ ಕ್ರಿಯಾಕರ್ಮ ಮಂತ್ರತಂತ್ರಾದಿ ಸಾಗಾರನಗಾರ ಧರ್ಮಮಂ ಪೇಳೆ ಭರತನಪ್ಪ ಅಂತ್ಯಬ್ರಹ್ಮ ಕೇಳಿರ್ದು ಪರ್ವದಿನದೊಳುಪಾಸಕಾಚಾರದಿಂ ಷಟ್ಕರ್ಮಮಂ ಬಿಟ್ಟು ದೇವಪೂಜೆ ಮೊದಲಾದ ಲೋಕೋತ್ತರ ಷಟ್ಕರ್ಮದೊಳಾಚರಿಸುತ್ತಾ ಷೋಡಶಕರ್ಮಮಂ ಪರರ್ಗಂ ಮಾಡುತ್ತಮೇಕಾದಶ ನಿಲಯಮನಾಚರಿಸಿರ್ದ ದ್ವಿಜರಂ ದಾನಗೊಡಲ್ ಬರಿಸಿ ಪರೀಕ್ಷಿಸಿಯವರ ಗುಣನಾಮಂಗಳಿಂ ಬ್ರಹ್ಮಜ್ಞಾನಮುಳ್ಳುದರಿಂ ಲೋಕಪೂಜ್ಯರುಂ ಆಹಿತಾಗ್ನಿಗಳೆಂದಿವು ಮೊದಲಾದ ಗುಣ ನಾಮಂಗಳಿಂ ಕೊಂಡಾಡಿ ಪದ್ಮನಿಧಿಯಿಂ ಹೊನ್ನ ಯಜ್ಞೋಪವೀತಮಂ ತರಿಸಿ ಷಡ್ದ್ರವ್ಯ ಪಂಚಾಸ್ತಿಕಾಯ ಸಪ್ತತತ್ವ ನವಪದಾರ್ಥಮೆಂಬಿಪ್ಪತ್ತೇಳು ತತ್ವಮೆಂದಿಪ್ಪತ್ತೇಳೆಳೆಗಳಂ ನವದೇವತಾಸ್ವರೂಪಮೆ ಮೆಂದೊಂಬತ್ತು ತೆರನಾಗಿ ರತ್ನತ್ರಯಸ್ವರೂಪಮಾದ ಭಾವಶ್ರುತಮುಪಾಸಕ ಸೂತ್ರಕ್ಕೆ ದ್ರವ್ಯಶ್ರುತಮಪ್ಪ ದಿವ್ಯಸೂತ್ರಮನೇಕಾದ್ಯೇಕಾದಶ ನಿಲಯಮನರಿದಿಕ್ಕಿ ಪವಿತ್ರ ಮುದ್ರಿಕಾ ಕುಂಡಲ ಕೇಯೂರ ಶೇಖರಾದಿ ಷೋಡಶಾಭರಣ ಊರುಲಿಂಗಮಪ್ಪ ದೇವಾಂಗವಸ್ತ್ರಂಗಳಂ ಪಂಚಕಚ್ಚೆಯಿಂದಲಂಕೃತರಂ ಮಾಡಿ ದಾನಂಗಳಂಗೊಟ್ಟು ಶ್ರಾವಣ ಶುದ್ಧ ಪೌರ್ಣಮೀ ಶ್ರವಣನಕ್ಷತ್ರದಂದು ಪೂಜಿಸಿದನಲ್ಲದೆ ಸಾಮಾನ್ಯ ಕ್ಷತ್ರಿಯ ವೈಶ್ಯ ಶೂದ್ರಾದಿಗಳಂ ಬ್ರಾಹ್ಮಣರೆಂದು ಮಾಡಲಿಲ್ಲ. ಮುನ್ನ ಪದಿಮೂರನೆಯ ಪ್ರಸನ್ನಜಿತಂಗೆ ಮೊದಲ ವಿವಾಹವಿಧಿಯಾದಾರಭ್ಯ ಭರತಾದಿ ರಾಜರುಗಳ್ಗ ಮರ್ಕಕೀರ್ತಿ ಮೊದಲಾದ ಕುಮಾರವರ್ಗಂ ವೈಶ್ಯರ್ ಮೊದಲಾದರ್ಗೆಲ್ಲಂ ಕರ್ಮಂಗಳುಂಟಪ್ಪುದರಿಂದವರವರೆ ಮಾಡಿಕೊಂಡರೆಂದರೆ ಅಪಹಾಸ್ಯಮಲ್ಲದೆ ಯೋಗ್ಯ ಮಾಗದದರಿಂ ರತ್ನಾಕರಂ ಪೇಳ್ದ ಮುಂದಾದ ವರ್ಣಮಂ ಹಿಂದಾದುದೆಂದೊಡೆ ಕೊಂಡಾಡಿ ವಾದಿಸಿ ಜಾತಿಮದದಿಂ ಗತಿಗೆಡುವರೆಂಬುದಲ್ಲದೆ ಲೋಕಪ್ರಸಿದ್ಧಮಾಗಿ ವಿಶಿಷ್ಟ ಜನರು ಉಪಾಸಕರು ಸಾಮಾನ್ಯರಾದ ಆಬಾಲಕರ್ಗಾದಾಗ್ಯು ಮೊದಲೆ ದಾನ ದಕ್ಷಿಣೆಗೊಟ್ಟು ಬಳಿಕ ಕ್ಷತ್ರಿಯ ಶೂದ್ರರ್ಗೆ ಫಲದಾನಮಿಲ್ಲದೆ ತಾಂಬೂಲಮಾತ್ರಂ ಕೊಡುವುದರಿಂ ಲೌಕಿಕದೊಳ್ ವರ್ಣಾಶ್ರಮದ ತಾರತಮ್ಯಮಂ ನೋಡಿ ನಡೆಯದಿರ್ದೊಡೆಲ್ಲಾ ಜಾತಿ ಸಂಕರಮಾಗಿ ಪಾಷಂಡಿಗಳಪ್ಪರೆಂದು ಕೆಲಂಬರ್ ನುಡಿವುದುಂ ವಿದೇಹಂಗಳೊಳ್ ಬ್ರಾಹ್ಮಣರಿಪ್ಪರೆಯೆಂದು ಕೆಲಂಬರ್ ನುಡಿವುದಂ ಕೆಲರೆಂದರ್

ಸರ್ವಜ್ಞೋದಿತಾಪೋಸಕಾಂಗಂ ಹುಂಡಾವಸರ್ಪಿಣಿ ಕುರಿತು ಭರತಕ್ಷೇತ್ರಕ್ಕೆ ಪೇಳಲಿಲ್ಲ.

ಲೋಕತ್ರಯ ಕಾಲತ್ರಯಕ್ಕಂ ಅನಾದಿ ಸಂಸಿದ್ಧಮಾದ ಪೌರುಷೇಯವಪ್ಪ ಸಪ್ತಮ ವೇದದೊಳೊರೆದ ಚಾತುರ್ವರ್ಣಂಗಳೆಲ್ಲ ಕ್ಷೇತ್ರದೊಳೊಪ್ಪುತ್ತಿಪ್ಪುದರಿಂದಾರ್ಯ ಷಟ್ಕರ್ಮ ಕರ್ಮಠ ಧರ್ಮಕ್ರಿಯಾಕುತೂಹಲ ನಿತ್ಯ ನೈಮಿತ್ತಿಕಾನುಷ್ಠಾನರಾದ ದ್ವಿಜರ್ ವೈಶ್ಯ ದೇವಾಗ್ನಿಹೋತ್ರಿಯರ್ ಚಕ್ರವರ್ತಿಗಳ್ಗೆ ಪುರೋಹಿತರತ್ನರಾಗಿಯುಪಾಧ್ಯಾಯರೆನಿಸಿದ ದಾನದೀಕ್ಷೆಗೆ ಯೋಗ್ಯರಾಗಿರ್ಪರಲ್ಲದೆ ಕ್ಷತ್ರಿಯ ವೈಶ್ಯರ್ ಬೆರಳೊಳ್ ದರ್ಭೆಯಂ ಕಟ್ಟಿ ದೇವಾರ್ಚನೆ ಹೋಮಮಂತ್ರೋಪದೇಶಂಗೆಯ್ದು ಪರರ ದಕ್ಷಿಣೆಗೆ ಕೈಯೊಡ್ಡಿ ಪಾತ್ರರಾಗಿ ಶಸ್ತ್ರಪಾಣಿಯಿಂ ರಣಾಗ್ರದೊಳಿರಿದು ಪರದುಗೆಯ್ದು ವ್ಯಾಪಾರಂ ಮಾಳ್ಪರೆಂಬುದುಮಪಹಾಸ್ಯಕ್ಕೆ ಕಾರಣಮಲ್ಲದೆ ಸಹಜಮಾಗದೆಂಬುದುಂ ಕೆಲಂಬರೆಂದರ್

ಬ್ರಹ್ಮ ಕ್ಷತ್ರಿಯ ವೈಶ್ಯ ಶೂದ್ರರೆನ್ನದೆ ಆಚಾರ್ಯ ಕ್ಷತ್ರಿಯ ಬ್ರಾಹ್ಮಣ ವೈಶ್ಯ ಶೂದ್ರರೆಂದಿಂತು ಪೇಳಿಪ್ಪರೆಂದೊಡೆ ಏಕಸಂಧಿಭಟ್ಟಾರಕರೊಳ್ ಬ್ರಾಹ್ಮಣರ್ ಕೆಲರ್ ಜಾತ್ಯಾಭಿಮಾನದಿಂ ನೀವು ಕ್ಷತ್ರಿಯರಾದುದರಿಂ ನಿಮ್ಮಿಂದಾ ಬ್ರಾಹ್ಮಣರ್ ವ್ರತ ಪ್ರಾಯಶ್ಚಿತ್ತಾದಿಗಳಂ ಕೊಳ್ಳಲಾಗದು, ದೀಕ್ಷಾಶಿಕ್ಷೆಯಂ ಮಾಡಲಾಗದೆಂದು ಚರ್ಚಿಸೆ ಕೇಳಿರ್ದು ತಾವು ಸಂಹಿತೆ ಮಾಳ್ಪಲ್ಲಿಯಾ ಪಕ್ಷದಿಂ ಪೇಳ್ದರಲ್ಲದೆ ಮುನ್ನ ವೀರಾಚಾರ್ಯ ಪೂಜ್ಯಪಾದ ಜಿನಸೇನಾಚಾರ್ಯ ಗುಣಭದ್ರ ವಸುನಂದಿ ಇಂದ್ರನಂದಿ ಆಶಾಧರ ಹಸ್ತಿ ಮಲ್ಲಾಚಾರ್ಯರ್ ಮೊದಲಾದ ಸಂಹಿತಾಕರ್ತರೆಲ್ಲಂ ಬ್ರಾಹ್ಮಣಾದಿ ವರ್ಣಮಂ ಪೇಳಿಪ್ಪರಾದೊಡಮೀಗಳ್ ವರ್ಣತ್ರಯಮಂ ಬಿಟ್ಟು ಉಳಿದವರ್ಗೆ ಮಾಳ್ಪುದನುಚಿತಮೆಂದು

ಶ್ಲೋಕ || ದಾನಂ ದೀಕ್ಷಾ ತ್ರಿವರ್ಣಾನಾಂ ಚತುರ್ಥಾನಾಂ ನ ಯೋಗ್ಯತಾ
ಪಂಚಮಾದ್ಯಂತ್ಯ ಜಾತೀನಾಂ ನ ದೀಕ್ಷಾ ದಾನಯೋಗ್ಯತಾ ||

ಎಂದಾಚಾರ್ಯಸಮ್ಮತಿಯುಂಟಪ್ಪುದರಿಂದೀಯರ್ಥಕ್ಕೆ ಕನ್ನಡದಿಂ ಪೇಳ್ದ ಮಾಘನಂದಿ ಶ್ರಾವಕಾಚಾರ ಶಾಸ್ತ್ರಸಾರ ಪದಾರ್ಥಸಾರಂ ಮೊದಲಾದವರೊಳ್ ಪೇಳಿಪ್ಪುದೆಂದು ನಿಶ್ಚೈಸಿ ಗೇರಸೊಪ್ಪೆ ಭಟ್ಟಕಳದೊಳಿರ್ದ ವಿಪ್ರರ್ ನೂರು ಒಕ್ಕಲೊಳೆಲ್ಲಾ ಪೋಗಿ ಏಳೆಂಟು ಒಕ್ಕಲವರೊಳಾರನಾದರು ಮಾಡಲೆಂದರಸಿ ಯೋಗ್ಯರಂ ಕಾಣದೆ ದಕ್ಷಿಣ ಕರ್ಣಾಟಕದೊಳ್ ಕಲಶತವಾಡಿಯೊಳ್ ನೂರಿಪ್ಪತ್ತು ಒಕ್ಕಲು ಪೋಗಿ ನಾಲ್ಕಾರು ಒಕ್ಕಲಿರಲವರನೊಪ್ಪಿಸಲಾರದೆ ಕನಕಗಿರಿಗೆ ಸೋದೆಯಿಂ ಶ್ರಾವಕರ್ ಹತ್ತು ಜನಂಗಳ್ ಬಂದು ಈ ಸ್ಥಳಾಂತರಂಗಳೊಳಿರ್ದ ನೂರು ಒಕ್ಕಲು ಬ್ರಾಹ್ಮಣರ್ ಪೋಗಲೊಲ್ಲದಿರೆ ಅರಿಕುಠಾರದ ದೇವರಸೋಪಾಧ್ಯಾಯನೆಂಬಂ ಮಲೆಯೂರಾದಪ್ಪನ ಸುತೆಯಂ ಮದುವೆನಿಂದು ಈರ್ವರ್ ಗಂಡುಮಕ್ಕಳ್ ದೊಡ್ಡವರಾಗೆ ತನಗೆ ಐವತ್ತರ ಸಮಯವಾಗಿರ್ದು ವಿದ್ವಾಂಸನಾದುದರಿಂ ಸಂಸಾರದೊಳ್ ಹೇಯಂ ಪುಟ್ಟಿ ವಾತ್ಸಲ್ಯದಿಂ ಸುಧಾಪುರದಿಂ ಬಂದವರೊಡನೆಯ್ದಿ ದೀಕ್ಷೆಗೊಂಡು ಪಟ್ಟಾಚಾರ್ಯನಪ್ಪುದು ಬೊಮ್ಮಣ್ಣನೆಂಬ ಪಂಚಮಂ ದೀಕ್ಷೆಯಂ ಬೇಡೆ ಕೊಡುವಾಗಳ್ ಕೆಲಂಬರ್ ದೇವಾ ಪೂಜಾಚಾರ್ಯನಾಗಲ್ ದೀಕ್ಷೆಗೊಳ್ಳಲ್ ಪಂಚಮರ್

ಯೋಗ್ಯರಲ್ಲವೆಂದಿಂತೆಂದರ್

ಶ್ಲೋಕ || **ಸಾಮಾಯಿಕಾದಿಚಾರಿತ್ರೋ ಗರ್ಭಾದಾನಾದಿಸತ್ಕ್ರಿಯಃ**
ಉಪನೀತ್ಯಾದಿಸಂಸ್ಕಾರೋ ಬ್ರಾಹ್ಮಣಾದಿತ್ರಯೋದ್ಭವಃ ||
ಉಪಾಸಕವ್ರತಾಚಾರ್ಯಃ ದೀಕ್ಷಾಶಿಕ್ಷಾಸಮನ್ವಿತಃ
ಏವಂ ಲಕ್ಷಣವಾನಾರ್ಯ ಜಿನಪೂಜಾ ಪ್ರಶಸ್ಯತೇ ||

"ಸಏವ ಗುರುಪೀಠಸ್ಥಃ ಭಟ್ಟಾರಕಃ ಪ್ರಶಸ್ಯತೇ" ಎಂದಿಂದ್ರನಂದ್ಯಾಚಾರ್ಯರ್ ಮೊದಲಾದವರ ಸಮ್ಮತಿಯುಂಟಪ್ಪುದರಿಂದೀತಂಗೆ ಮೌಂಜ್ಯಾದಿ ಸಂಸ್ಕಾರಮಿಲ್ಲದುದರಿಂ ದೇವಪೂಜಾಚಾರ್ಯನುಂ ಗುರುಪೀಠಾಚಾರ್ಯನುಮಾಗಲಾರನೆಂದು ಪೇಳೆ ಕೆಲಂಬರೀಗಳ್ ಸಮ್ಯಕ್ತ್ವವ್ರತಚಾರಿತ್ರಂಗಳೊಳ್ ಸಂತುಷ್ಟರಾಗಿಯು ಧಾರ್ಮಿಕರಾಗಿ ಇರುವುದರಿಂದ ಪಂಚಮರೆ ಪ್ರಬಳರಪ್ಪರದರಿಂ ದೀಕ್ಷೆಯಂ ಕುಡಲಪ್ಪುದೆಂದಾತಂಗಣು ವ್ರತಮಂ ಕ್ಷುಲ್ಲಕದೀಕ್ಷೆಯಂ ಕೊಡಲಾತಂ ವಿಚಾರದೊಳಿರ್ದನಲ್ಲಿಂದಿತ್ತ ಪಂಚಮರ್ಗೆ. ಜಾತಕರ್ಮ ನಾಮಕರ್ಮ ಚೌಲವಿದ್ಯಾ ಪ್ರಾರಂಭಂಗಳಾದಿ ಕೆಲವು ಕರ್ಮಂಗಳಂ ಸಂಕ್ಷೇಪದಿ ನಡಸಿಕೊಂಡುಬಂದರಲ್ಲಿಂ ಕೆಲದಿವಸದಿಂ ಕಾಳಯ್ಯ ಶಾಂತಯ್ಯ ಪುಟ್ಟಶೆಟ್ಟಿ ಅಣ್ಣಯ್ಯಶೆಟ್ಟಿ ಮೊದಲಾದವರ ಪ್ರಬಳದಿಂ ಜೀರ್ಣಜಿನಚೈತ್ಯಾಲಯೋದ್ಧರಣೇಕರಾಗಿ ದೇವ ಗುರು ಬ್ರಾಹ್ಮರೊಳ್ ವಿನಯಂಬಡೆದಿರ್ದರ್. ಕಾಳಶೆಟ್ಟಿಯಂ ಎಳವಂದೂರ ಪಂಡಿತಂಗೂ ವಿರುದ್ಧಮಾಗಿಯು ಬುದ್ಧಿಸಾಗರಂ ಪಂಡಿತನೊಳಾದ ಕ್ರೋಧದಿಂ ಬ್ರಾಹ್ಮಣರಂ ಉಪೇಕ್ಷೆಗೆಯ್ದಂ. ಶಕವರ್ಷ ೧೫೦೦ ರಾರಭ್ಯ ಬೆಳ್ಗುಳದೊಳ್ ಒಂದೆರಡು ಪಟ್ಟ ಬ್ರಾಹ್ಮಣರಲ್ಲದನ್ಯರ್ಗಾಗೆ ತಿಗಳಾಣ್ಯದವರ್ ಮಹಾವಿದ್ವಾಂಸರಾಗಿರ್ದರಲ್ಲಿಂದಿತ್ತ ಭಂಗ ವಾಡಿಯವರ ಪಟ್ಟಮಾಗಲವರ ಸನ್ನಿಧಿಯೊಳ್ ರಾಮಸಮುದ್ರದ ಶಾಂತಶೆಟ್ಟಿಯು ಓದಲೆಂದಿರ್ದರವರ ಪರೋಕ್ಷದೊಳ್ ಅಲ್ಲಿಯೆ ಮಹಾವ್ರತಂಗೊಂಡು ಶಕವರ್ಷ ೧೬೮೭ ರಲ್ಲಿ ಪಟ್ಟಾಚಾರ್ಯನಾದಂ.

ಬಳಿಕ ಧರ್ಮೋಪಾಧ್ಯಾಯನು ಉದ್ಧೂರ ದೇವಚಂದ್ರಯ್ಯನು ಸರಗೂರು ಅರಿಕುಠಾರ ಮುಂತಾದ ಪಂಚಮರು ಮಾಳ್ಪ ವಾತ್ಸಲ್ಯಮಂ ತಿಳಿದವರ್ಗೆ ಸ್ನಾನಾಚಮನ ಪ್ರಾಣಾಯಾಮ ತರ್ಪಣಾದಿ ಸಂಧ್ಯಾವಂದನೆಯಂ ಬರೆದುಕೊಟ್ಟು ಹೇಳಿ ಮದುವೆ ಯೊಳ್ ನಾಗಬಲಿವಿಧಾನಮಂ ಮಾಡಿಸಿಕೊಟ್ಟರ್. ಗೋತ್ರಸೂತ್ರಾದಿಗಳ್ ಇಲ್ಲದುದರಿಂ ಗುರುಗಳಿಂ ಗುಂಬದೊಳ್ ಗೋತ್ರಂಗಳ ಚೀಟಂ ಬರೆದಿಕ್ಕಿ ತೆಗೆದುಕೊಂಡಾ ಗೋತ್ರಮಂ ಪಿಡದರ್. ಮತ್ತಂ ಹಳೆಬೀಡಿನಲ್ಲಿ ದೇವಸ್ಥಾನದ ಪೂಜೆಮಾಡುವವರಿಲ್ಲದಿರೆ ಒಬ್ಬ ಪಂಚಮಶೆಟ್ಟಿ ತಾನೆ ಮಾಡುತ್ತಾ ಬಂದನು. ಕಡಮೆ ಸ್ಥಳಾಂತರಂಗಳಲ್ಲಿಯು ಪುಂಚಾಯಿಕ್ಕಿ ಅರ್ಘ್ಯಮನೆತ್ತುವರ್. ಈ ಚತುರ್ಥ ಪಂಚಮರು ಮೊದಲೆ ಇಷ್ಟಾರ್ಥಕ್ಕೆ ಮಾರಿ ಚಾಮುಂಡಿ ಚಂಡಿ ಹುರಕಾತಿ ಏಕನಾತಿ ಎಲ್ಲಮ್ಮ ಮೊದಲಾದ ನೀಚದೈವಂಗಳ ಒಕ್ಕಲಾಗಿ ಹೆಸರಂ ಕರೆದು ಕಾಣಿಕೆಗಪ್ಪಂಗೊಟ್ಟು ದರ್ಶನಭ್ರಷ್ಟರಾದರಿಂತು ಕಾಲ ದೋಷದಿಂ ವರ್ಣಾಶ್ರಮಂ ಕೆಟ್ಟು ನಾನಾ ವಿಧವಾಗಿ ಹೋದುದರಿಂ ಜಿನಧರ್ಮ ಕೆಟ್ಟು ನಾಮಮಾತ್ರದಿಂ ವರ್ತಿಸುವುದು.

ಶ್ಲೋಕ || ಜಾತಿಕ್ರಿಯಾವ್ರತಂ ವೃತ್ತಂ ಶ್ರುತಂ ಮಂತ್ರೋ ಜಿನಾರ್ಚನಮ್
ಸಂಸ್ಕಾರಸ್ಯ ದ್ವಿಜಾತೀನಾಮಸಂಸ್ಕಾರಾತ್ತು ನ ದ್ವಿಜಾಃ ||

ಶೌಚಮಾಚಾರವಾರೋಪಿ ಸಂಸ್ಕಾ ರ ಇತಿ ಭಾಷಿತಮ್
ದೇಹದ್ವಾರವಿಶುದ್ಧಿಸ್ಸ್ಯಾತ್ ಸ್ನಾನಾದ್ಯಾಚಮನಾದಿಭಾಃ ||

ಸೂತಕಾದ್ಯಘಶುದ್ಧಿಶ್ಚ ಶೌಚಮಿತ್ಯತ್ರ ಭಾಷಿತಮ್
ಆಚಾರೋ ಬಹುಧಾ ಪ್ರೋಕ್ತಃ ಗರ್ಭಾದಾನಾದಿಭೇದತಃ ||

ತದ್ಯೋಗ್ಯಾಸ್ತು ತ್ರಿವರ್ಣಾನಾಂ ಶೂದ್ರಾದೀನಾಮಸಮ್ಮತಾಃ
ದಾನಂ ದೀಕ್ಷಾ ತ್ರಿವರ್ಣಾನಾಂ ಚತು[ರ್ಥಾನಾಂ] ನಯೋಗ್ಯತಾ ||

ಎಂಬುದದರಿಂ ಚತುರ್ಥ ಪಂಚಮ ಶೂದ್ರಾದಿಗಳ್ಗೆ ಸಂಸ್ಕಾರಹೀನರಾದುದರಿಂ ಯಷ್ಟೃತ್ವಮಂ ಚತುರ್ವಿಧ ದಾನವಂ ಅಧ್ಯಯನ ಶ್ರವಣವಲ್ಲದೆ ಯಾಚಕನಾಗಿಯು ಪ್ರತಿಗ್ರಹಣಮಧ್ಯಯನದಿಂ ಪರರ್ಗುಪದೇಶಿಸಿ ಆಶೀರ್ವಾದಮಂ ಕುಡಲ್ ಯೋಗ್ಯರಲ್ಲರೆಂದು ಪೇಳ್ದ ಶಾಸ್ತ್ರಮಿರ್ಪುದರಿಂದೀ ಹುಂಡಾವಸರ್ಪಿಣೀ ದುಷ್ಷಮಕಾಲದೊಳ್ ವರ್ಣಸಂಕರಮಾಗಿ ಭಯಾಶಾಸ್ನೇಹ ಲೋಭ ಮೋಹಾಹಂಕಾರದಿಂ ಜಿನಧರ್ಮಂ ನಡುನಾಡೊಳಿಲ್ಲದೆ ದೇಶಾಂತರದ ಕೊನೆಯೊಳ್ ನಾಮಮಾತ್ರದಿಂ ವೀರಾಂಗದ ಮುನಿಯ ಪರ್ಯಂತಂ ವರ್ತಿಸಿ ಕೆಡುವುದೆಂಬ ಜಿನವಾಕ್ಯಮಿಪ್ಪುದರಿಂ ಜಾತಿ ಗೋತ್ರಾದಿಗಳಂ ಪಕ್ಷವಿಡಿದು ವಾದಮಂ ಮಾಡಿ ಚರ್ಚಿಸಿದೊಡೆ ಕಷಾಯೋದಯಮಾಗಿ ಪಾಪಾಸ್ರವಂ ಪೊರ್ದುಗುಮೆಂದು ನಿಶ್ಚೈಸುವುದು.

ಮತ್ತಂ ಶಕವರುರ್ಷಂಗಳ್ ೧೭೧೨ನೆಯ ಸಾಧಾರಣ ಸಂವತ್ಸರದ ಜ್ಯೇಷ್ಠ ಶುದ್ಧ ಪಂಚಮಿಯಲ್ಲು ಸೋದೆಯ ಪಟ್ಟಾಚಾರ್ಯರ್ ಸಮುದಾಯಂಬೆರಸು ಮಲೆಯೂರಿಗೆ ಬಂದು ಶ್ರುತಪಂಚಮಿ ಪ್ರಭಾವನೆಯಂ ಮಾಡಿಸಿ ಸ್ಥಳದ ಶಾನುಭಾಗ ದೇವಯ್ಯನಂ ಹೋಮದುಪಾಧ್ಯಾಯ ಪದ್ಮನಾಭಯ್ಯನಂ ಧರ್ಮೋಪಾಧ್ಯಾಯನಂ ಗುಂಡಲ ಶಿರಸ್ತೆ ದೇವಯ್ಯನು ಮೊದಲಾದ ಸ್ಥಲಾಂತರಂಗಳೊಳಗುಳ್ಳ ಬ್ರಾಹ್ಮರೆಲ್ಲರಂ ಬರಿಸಿ ನಿಮಗೆ ಗುರುಪೀಠಮಪ್ಪ ಸುಧಾಪುರಕ್ಕೆ ಸಮಾನಮಾದೀ ಕನಕಗಿರಿ ಸಿದ್ಧಸಿಂಹಾಸನಕ್ಕೆ ಐವತ್ತು ವರುಷದಿಂದಧೀಶರಿಲ್ಲದಿಪ್ಪುದೇಕೆ ಈಗಳ್ ನಾವು ಒಬ್ಬರಂ ನಿಯಮಿಸುವೆವು ನಿಮ್ಮಲ್ಲಿ ಬುದ್ಧಿವಂತರಂ ಬರಿಸುವುದೆಂಬುದು ವಿಪ್ರರೆಂದರಿಲ್ಲಿ ಪೂರ್ವದೊಳ್ ವರ್ಣೋತ್ತಮರ್ ಆಚಾರ್ಯಪದವಿಯನಾಂತು ಮುಂದಣ ಪಟ್ಟಮಂ ನಿಯಮಿಸಿ ನಿರ್ವಾಣವನಾಂತು ಕಾಲಂಗಾಣುತ್ತಿರ್ದರೀಚೆಯಲ್ಲಿ ಮೂರು ಪಟ್ಟಗಳ್ ಸ್ವಯಂಕೃತವಾಗೆ ಕೆಲಂಬರ್ ಗುರುವಿಲ್ಲದೆಂತು ದೀಕ್ಷೆಯುಂಟೇ ಎಂದು ವ್ಯವಹರಿಸಿ ವೈರಾಗ್ಯಂ ಪುಟ್ಟಿದಾಗಳ್ ಗುರುಗಳಲಾಭಮಾದೊಡೆ ಗೃಹಸ್ಥಾಚಾರ್ಯರನುಮತಿಯಿಂ ತಾನೆ ದೀಕ್ಷೆಗೊಳಲಪ್ಪುದೆಂಬ ಸಮ್ಮತಮಿರ್ದುದೆನೆ ಆರೆಂದೊಡೆ ಪೂರ್ವದೊಳ್ ತೀರ್ಥಂಕರ

ಪರಮದೇವರುಮವರೊಡನೆಯನೇಕ ರಾಜರಾದಿಗಳ್ ತಮ್ಮಿಂದಲೆ ಧರಿಸಿದರಲ್ಲದೆ ಸುವರ್ಣಭದ್ರ ಶಿವಭೂತಿ ಪೂಜ್ಯಪಾದರ್ ಮೊದಲಾಗಿ ಕೆಲಂಬರ್ ಸ್ವಯಂಕೃತ ತಪದಿಂ ಸದ್ಗತಿವಡೆದರ್. ತ್ರೈವರ್ಣಿಕದೊಳ್ ವಿಪ್ರರ್ಗೆ ಆರ್ಯಷಟ್ಕರ್ಮಮುಂ ದಯಾರ್ದ್ರವೃತ್ತಿ ಮೊದಲಾಗೆ ದಶಶುದ್ಧಿಯಿಂದಾಹಿತಾಗ್ನಿಗಳಾಗಿಯುಂ ಅತಿಬಾಲವಿದ್ಯಮುಂ ಕುಲಾವಧಿಯುಂ ವರ್ಣೋತ್ತಮತ್ವಮುಂ ಪಾತ್ರತ್ವಮುಂ ಸೃಷ್ಟ್ಯಧಿಕಾರತ್ವಮುಂ ವ್ಯವಹಾರೇಶಿತ್ವಮುಂ ಅವಧ್ಯತ್ವಮುಂ ಅದಂಡತ್ವಮುಂ ಮಾನಾರ್ಹತ್ವಮುಂ ಪ್ರಜಾಸಂಬಂಧತ್ವಮುಮೆಂಬ ದಶಾಧಿಕಾರಮುಳ್ಳುದರಿಂದ ಚೇತನಮಪ್ಪರ್ಹತ್ಸಿದ್ಧಾಚಾರ್ಯರ್ ಮೊದಲಾದ ಪ್ರತಿಮಾಪ್ರತಿಷ್ಠೆಗೆಯ್ದು ಸಾಕ್ಷಾತ್ಕರಿಸಿ ಪೂಜಿಸಿ ಪ್ರತ್ಯಕ್ಷದೇವರಂ ಮಾಳ್ಪರಪ್ಪುದರಿಂ ವ್ರತೋಪದೇಶದೀಕ್ಷೆ ಶಿಕ್ಷೆಯಂ ಮಾಡಲ್ ಯೋಗ್ಯರಪ್ಪರ್.

ಶ್ಲೋಕ || **ಯಥಾರ್ಹಮಾತ್ಮಸಾತ್ಕುರ್ವನ್ ದ್ವಿಜಸ್ಸಾಲ್ಲೋಕಸಮ್ಮತಃ**
ಗುಣೇಷ್ವೇಷು ವಿಶೇಷೋಽನ್ಯೋ ಯೋ ವಾಚ್ಯೋ ಬಹುವಿಸ್ತರಃ ||

ಸ ಉಪಾಸಕಸಿದ್ಧಾಂತಾದಧಿಗಮ್ಯ ಪ್ರಪಂಚತಃ
ಋಷೀಣಾಂ ಶಿಕ್ಷಕೇನಾಪಿ ವಿಪ್ರೇಣಾಚಾರವರ್ತಿನಾ ||

ವ್ರತಮಂತ್ರಕ್ರಿಯಾಯುಕ್ತದ್ವಿಜೇನ ವ್ರತಧಾರಣಮ್
ಬ್ರಹ್ಮಚಾರೇರ್ಗೃಹಸ್ಥೇನ ಪಿತ್ರಾ ವಾ ವ್ರತಧಾರಣಮ್ ||

ಎಂಬುದರಿಂದುಪನಯನ ವ್ರತಾದಿಗಳನುಪದೇಶಂಗೆಯ್ವ ಯೋಗ್ಯತೆಯುಂಟಪ್ಪುದರಿಂ ವಿದ್ವದ್ವಿಷ್ಟ ಸಾಮಾಜಿಕರಪ್ಪವರಿಂದಾದರು ಕೊಳ್ಳಬಹುದೆಂದು ಪೇಳಿ ಮುನ್ನ ಜಾತಿಗೋತ್ರಂಗಳ್ ಇರ್ದುದರಿಂ ಬ್ರಾಹ್ಮಣರ್ ಮಿಥ್ಯಮಂ ಪೊರ್ದಿ ಜಿನಮತ ದ್ವೇಷಿಗಳಾದವರೊಳ್ ಗೌತಮಗ್ರಾಮದ ಗೌತಮಗೋತ್ರದ ವಿಪ್ರಗೌತಮನೆಂಬಂ ನಿಜಾನುಜರಪ್ಪ ಗಾರ್ಘ್ಯಭಾರ್ಗವರೆಂಬರ್ ಐನೂರ್ವರ್ ಶಿಷ್ಯರ್‌ಸಹಿತಂ ಇಂದ್ರನೊಡನೆ ವರ್ಧಮಾನಜಿನ ಸಮವಸರಣಮನೆಯ್ದಿದಾಗಳೆ ಇಂದ್ರಭೂತ್ಯಗ್ನಿಭೂತಿ ವಾಯುಭೂತಿಗಳೆಂಬ ಪ್ರತಿನಾಮಮುಳ್ಳ ಗೌತಮಾದಿಗಳ್ ಶಿಷ್ಯರ್ವೆರಸು ಜಿನಮುಖದರ್ಶನಮಾತ್ರದೊಳೆ ಮಿಥ್ಯಾತ್ವ ಪೋಗಿಯವಧಿ ಪುಟ್ಟಿ ತ್ರಿವಿಧನಿರ್ವೇಗದಿಂ ದೀಕ್ಷೆಗೊಂಡು ಸಪ್ತರ್ಧಿಸಂಪತ್ತಿಯಿಂ ಮನಃಪರ್ಯಯಮೆಂಬ ಚತುರ್ಥಜ್ಞಾನಂ ಪುಟ್ಟಿ ಪ್ರಥಮಗಣಧರರಾದಿಗ್ಗಳಾಗೆ ಕಡೆಯೊಳ್ ಕೇವಲಿಗಳಾಗಿ ಮುಕ್ತಿಗೆ ಸಂದರ್. ಉಳಿದೈನೂರ್ವರ್ ತಪಂಗೊಂಡು ಸಮವಸರಣದೊಳ್ ಸಪ್ತವಿಧ ಋಷಿಗಳೊಳ್ ಕೂಡಿರ್ದರೆನಿತೆಂದೊಡೆ ಕೇವಲಿಗಳೇಳುನೂರ್ವರಲ್ಲದೆ ಮನಃಪರ್ಯಯ ಶಿಕ್ಷಕ ಪೂರ್ವಧರ ಅವಧಿ ವಿಕ್ರಿಯವಾದಿಗಳ್ ಪನ್ನೊರ್ವರ್ ಗಣಧರರ್ವೆರಸು ಪದಿಮೂರು ಸಾವಿರದನೂರಪನ್ನೊರ್ವರ್ ಮುಕ್ತರಾದರ್.

ಮತ್ತಂ ಸೂರ್ಯಮಿತ್ರನುಂ ಸೋಮಶರ್ಮನುಂ ವಿಷ್ಣು ಭದ್ರಬಾಹು ಪೂಜ್ಯಪಾದ ಗೋವಿಂದಭಟ್ಟರ್ ಮೊದಲಾಗೆ ಪರಸಮಯದೊಳಿರ್ದ ಜಾತಿಗೋತ್ರ ನಾಮ

ಮಾತ್ರಮಿರ್ದುದರಿಂ ಜಿನದೀಕ್ಷಾಯೋಗ್ಯತೆಯಿಂ ಪರಮಗುರುಗಳಾಗಿ ಸದ್ಗತಿವಡೆದರ್. ಇಂತಿಂತು ಪೂರ್ವಾಚಾರ್ಯ ಸಮ್ಮತಿಯಿಂ ಪೇಳೆ ಎಲ್ಲರು ಒಪ್ಪಿ ನಿರುತ್ತರಾದರಲ್ಲಿಂದಿತ್ತಲ್ ಪಟ್ಟಮಂ ತರಿಸಿರಲ್ ಅಣ್ಣಯ್ಯಶೆಟ್ಟಿಗ್ರಾಮಮಂ ಬಿಡಿಸಿ ದೇವರ ಪ್ರತಿಷ್ಠಾನಂತರ ಮಹಾಜನಂಗಳ್ ಶ್ರಾವಕರ್ ಸಹಿತ ತಗಡೂರ ದೇವರಸನ ಸುಭೆಯದೊಳ್ ಊರ ಬಸ್ತಿ ಪೂಜಾರ್ಯನಪ್ಪ ಬುಜ್ಜಯ್ಯಂಗೆ ಕನಕಗಿರಿಯ ಸಿದ್ಧಸಿಂಹಾಸನನಾಥನಾದೊಡೆ ಒಳಸ್ಥಳದ ಶ್ರಾವಕರೆಲ್ಲರತ್ಯಂತ ಭಕ್ತಿಯಿಂ ಪರ್ವ ತಿಥಿಗಳೊಳ್ ಬರಿಸಿ ಧರ್ಮಪ್ರಭಾವನೆಯಂ ಮಾಡುತ್ತಿರ್ದರವರ ಕಾಲಂಗಂಡೈವತ್ತು ವರುಷದಿಂದಂ ತರಿಸಿರ್ದುದೆಂದು ಮಹಾಜನಂಗಳ್ ಸ್ವಾಮಿಗಳ್ಗೆ ಪೇಳೆ ತಮ್ಮಿಂದ ಐವತ್ತು ವರಹಾ ಮುಟ್ಟೆ ನೇಮಿರಾಜಪುತ್ರ ಬ್ರಹ್ಮಚರ್ಯಾಶ್ರಮದೊಳಿರ್ದು ಬೊಮ್ಮರಸಂಗೆ ಧರ್ಮೋಪಾಧ್ಯಾಯ ಪದ್ಮನಾಭೋಪಾಧ್ಯಾಯರಿಂ ಜ್ಯೇಷ್ಠ ಶುದ್ಧ ಏಕಾದಶಿಯಲ್ಲು ದೀಕ್ಷಾವಿಧಿಯಂ ಮಾಡಿಸಿ ಪಟ್ಟಂಗಟ್ಟಿ ಉಪಕರಣಂಗಳಂ ಕೊಟ್ಟು ಅಷ್ಟಾಹ್ನಿಕ ಪೂಜೆಗೈವತ್ತು ವರಹಾ ಪುದುವಟ್ಟು ಮಾಡಿ ಪೋದರ್.

ಇತ್ತಲ್ ಪೂರ್ವಮೇರೆಯೊಳ್ ಅರಿಕುಠಾರ ಸ್ಥಳಾಂತರಂಗಳ ಶ್ರಾವಕರತಿ ಭಕ್ತಿಯಿಂ ಮಂಗಲ ತ್ರಯೋದಶಿ ಮೊದಲಾಗೆ ಪ್ರಸ್ತಪ್ರಯೋಜನದೊಳ್ ಪಾದಪೂಜಾಪೂರ್ವಕಂ ಪ್ರಭಾವನೆಯಂ ಮಾಡಿಸುತ್ತಿರ್ದು ಪೂರ್ವಮರ್ಯಾದೆ ತಮ್ಮ ಗೃಹದೊಳೆ ಬೇರೊಂದು ಗೃಹದೊಳ್ ಹೋಮಮಂ ಮಾಡಿಸಿ ದ್ವಿಜರಿಂ ಪಾಕಶುದ್ಧಿಯಂ ಮಾಡಿಸಿ ದೀಕ್ಷೆಯಂ ಮಾಡಿಸುತ್ತಿರ್ದು ನಾವೆ ಮಾಡಿಯಾಹಾರಮಂ ಕೊಡುವೆವೆಂದು ಪ್ರಾರ್ಥಿಸಿದೊಡೆ ಸ್ವಾಮಿಗಳೆಂದರ್ ನೀವು ವ್ರತ ಶೀಲ ಚಾರಿತ್ರಮುಳ್ಳವರಾಗಿಯು ದಾನಯೋಗ್ಯರಪ್ಪುದರಿಂ ಕೊಳ್ಳಬಹುದಾದೊಡಂ ಪೂರ್ವದೊಳ್ ಇಭ್ಯಕುಲಜರಪ್ಪ ವೈಶ್ಯರ್ ಈ ದುಷ್ಷಮ ಪಂಚಮಕಾಲದೊಳ್ ವರ್ಣಾಶ್ರಮಂಗೆಟ್ಟು ಲೌಕಿಕ ಷೋಡಶ ಕರ್ಮವಿರಹಿತರಾಗಿ ಕೆಲದಿವಸ ಚಾರಿತ್ರಂಗೆಟ್ಟು ಪ್ರತಿನಾಮಧೇಯಮಂ ತಾಳ್ದಿಪ್ಪುದರಿಂದಿಂದುವರೆಗಂ ಬ್ರಾಹ್ಮಣರ್ ಭೋಜನಮಂ ಬಿಟ್ಟಿಪ್ಪರೀಗಂ ನಿಮ್ಮ ಶೀಲ ಚಾರಿತ್ರಂಗಳಂ ಬಗೆದಾಹಾರಂಗೊಂಡೊಡುಳಿದ ಭೋಗಾರರ್ ಮೊದಲಾದ ಕೂಡುವಳಿ ಸಂತಾನಾದಿಗಳಲ್ಲಿಯು ಕೊಳ್ಳಬೇಕಾದುದರಿಂದವರ್ಗೆ ಜಾತ್ರಿಗೋತ್ರಮಿಲ್ಲದೆ ಪೂರ್ವೋತ್ತರ ಕರ್ಮಂಗಳಂ ಬಿಟ್ಟು ಕೆಲರನ್ಯದೇವತಾ ಭಜನೆಯುಳ್ಳುದರಿಂದವರ ಗೃಹಶುದ್ಧಿ ಮೊದಲಾದ ಕರ್ಮಂಗಳಂ ಮಾಳ್ಪಲ್ಲಿಯವರ ಮನೆಯ ಮುಸುರೆಯಂ ಮುಟ್ಟದೆ ತಂತ್ರದಿಂದಲೆ ಹೋಮಾದಿಗಳಂ ಮಾಡುತ್ತಿರ್ದರ್.

ಶ್ಲೋಕ || **ಮಂತ್ರ ತಂತ್ರಾತ್ಮಕೋ ಹೋಮಃ ಕರ್ತವ್ಯಃ ದ್ವಿಮಂದಿರೇ**
ತಂತ್ರಮೇವ ಹಿ ಕರ್ತವ್ಯಂ ನ ಮಂತ್ರಶ್ಚಾನ್ಯಮಂದಿರೇ ||

ಎಂದಿಂತು ನಡೆಯುತ್ತಿರ್ದಿತ್ತ ಶೀಲಾಚಾರಸಂಪನ್ನರಾದುದರಿಂದವರ್ ಮಾಡಿದ ಭಕ್ಷ್ಯಾದಿಗಳಂ ಹೋಮಕ್ಕರ್ಚಿಸುವರಲ್ಲದೆ ತಾವು ಭುಂಜಿಸದೆ ಇರುವದ್ದರಿಂದಲು ನಾವು ಕೊಳ್ಳುವದೆಂತು ಪೂರ್ವದೊಳ್ ಜಾತಿನಾಮವಿರ್ದುದರಿಂ ಪರಸಮಯಿಗಳಪ್ಪ ಬ್ರಾಹ್ಮರ ಮನೆಯೊಳ್ ಭಿಕ್ಷೆಯಂ ಮಾಡುತ್ತಿರ್ದರಿತ್ತ ಶೋಧನೆ ಭೇದನೆಯಿಲ್ಲದೆ ಅಭಕ್ಷ್ಯಂಗಳಂ ಮಾಳ್ಪುದರಿಂ

ಬಿಟ್ಟರೀ ಜೈನರ್ಗೆ ವರ್ಣಾಶ್ರಮ ನಾಲ್ಕರಿಂದತ್ತ ಪಂಚಮಾದಿ ನಾಮಂಗಳಾಂತು ಕುಲಮಂ ಬಿಟ್ಟು ಲೌಕಿಕಾಚಾರ ಮಾಘಶುದ್ಧಿಯಿಲ್ಲದಿಪ್ಪುದರಿಂದೆಂತು ಮಾಡಲಕ್ಕುಮೆನೆ ಕೆಲಂಬರ್ ಸಹಜಮೆಂದೊಪ್ಪಿದರ್. ಮತ್ತಮಾಚಾರ್ಯರೆಂದರ್ ಪರಮಾರ್ಥದೊಳ್ ಪುಣ್ಯಪಾಪಂಗಳಿಗೆ ಕುಲಬಲಾದಿಗಳ್ ಪ್ರಯೋಜನಮಿಲ್ಲಮೆಂತೆಂದೊಡೆ

ಶ್ಲೋಕ || **ಯದಿ ಪಾಪನಿರೋಧೋನ್ಯಸಂಪದಾ ಕಿಂ ಪ್ರಯೋಜನಮ್**
ಅಥ ಪಾಪಾಸ್ರವೋಸ್ತ್ಯನ್ಯಸಂಪದಾ ಕಿಂ ಪ್ರಯೋಜನಮ್ ||

ಎಂದು ಶ್ರುತಿಯಿಪ್ಪುದರಿಂದಹಂಕಾರದಿಂ ವರ್ಣಾನಾಂ ಬ್ರಾಹ್ಮಣೋ ಗುರುವೆಂದು ಗರ್ವಮಂ ತಾಳಿರ್ಪ ಜಾತ್ಯಾಭಿಮಾನಮಂ ಬಿಡಬೇಕು. ಆದೊಡಂ

ಶ್ಲೋಕ || **ಸಮ್ಯಗ್ದರ್ಶನಸಂಪನ್ನಮಪಿ ಮಾತಂಗದೇಹಜಮ್**
ದೇವಾದೇವಂ ವಿದುರ್ಭಸ್ಮಗುಢಾಂಗಾರಾಂತರೌಜಸಮ್ ||

ದರ್ಶನಸಂಪನ್ನನಪ್ಪ ಮಾದಿಗನಂ ಸದ್ದೃಷ್ಟಿಗಳ್ ದ್ರವ್ಯಭಾವದಿ ಕೊಂಡಾಡಿ ಪ್ರಶಂಸೆಗೆಯ್ವುದಲ್ಲದವನೊಳ್ ಕೂಡಿ ಅನ್ನಪಾನಾದಿಗಳ ಕೊಳ್ಳಲಾಗ ಲೌಕಿಕ ವಿರೋಧ ಮಲ್ಲದೆ ಸಹಜಮಾಗದು. ತಪಸ್ವಿಗೆ ಜಾತಿಯಿಲ್ಲೆಂದು ಕಂಡ ಪಲಂಬರೊಳಾಹಾರಂ ಗೊಂಡೊಡವಧೂತ ಸನ್ಯಾಸಿಯೆಂತಕ್ಕುಮದರಿಂದಂತರಂಗದೊಳ್ ಜಾತ್ಯಾಭಿಮಾನಮಂ ಬಿಟ್ಟು ಲೌಕಿಕ ಬಾಹ್ಯದೊಳ್ ಜಾತಿಯಂ ಬಿಟ್ಟು ಚಾರ್ವಾಕಮತಮಪ್ಪುದೆಂದು ಪೇಳಿ ಕನಕಗಿರಿಯೊಳಿರ್ದು ತೀರ್ಥವಂದನಾ ನಿಮಿತ್ತ ಘಟ್ಟದ ಕೆಳಗೆ ಪೋಗಿರ್ದು ಬಂದು ವಾಳುಕಾಪುರದೊಳಾಂಗೀರಸ ಸಂವತ್ಸರದ ಮಾಘದೊಳ್ ಸ್ವರ್ಗಸ್ಥರಾದರಾ ಫಾಲ್ಗುಣದೊಳ್ ಬ್ರಹ್ಮಸೂರಿಗಳ ಸಂತತಿ ಪದ್ಮನಾಭೋಪಾಧ್ಯಾಯನಂ ದೇವರಾಜರಸು ಪಟ್ಟಂಗಟ್ಟಿಸಿದನಂತರ ಕಾಲೋಗ್ರಗಣದಾಚಾರ್ಯರಂ ಯುವಸಂವತ್ಸರದೊಳ್ ವಾಳುಕನಗರದೊಳ್ ಸ್ಥಾಪನಂಗೆಯ್ದರಿಂತು ಜೈನಮತದೊಳ್ ಜಾತಿ ಗೋತ್ರ ಕುಲ ಆಚಾರವೆಂದು ನಾಲ್ಕಪ್ಪವಲ್ಲಿ ಜಾತಿಯೆಂಬುದು ಬ್ರಹ್ಮ ಕ್ಷತ್ರಿಯ ವೈಶ್ಯ ಶೂದ್ರರೆಂದು ನಾಲ್ಕಪ್ಪುವು. ಗೋತ್ರಂ ಕಾಶ್ಯಪ ಶ್ರೀವತ್ಸ ಮೊದಲಾದ ನಾನಾ ಭೇದವಪ್ಪುದು. ಕುಲಮೆಂಬುದು ಜಿನಶಾಸನದೇವತೆಗಳ ಸಂಬಂಧಿ ಮನು ಇಕ್ಷ್ವಾಕು ಸೂರ್ಯಚಂದ್ರ ಉಗ್ರ ನಾಥಕುಲಮೆಂದೈದು ತೆರನವರ್ಗಧಿದೇವತೆಗಳ್ ವಿಜಯ ಬ್ರಹ್ಮ ಸರ್ವಾಹ್ಣ ಧರಣೇಂದ್ರಾದಿ ಯಕ್ಷರಂ ಚಕ್ರಿಣಿ ಜ್ವಾಲಾಮಾಲಿನಿ ಕೂಷ್ಮಾಂಡಿನಿ ಪದ್ಮಾವತಿ ಮೊದಲಾದ ಜಿನಶಾಸನದೇವತೆಗಳಂ ಇಷ್ಟಪ್ರಾರ್ಥನೆಯಿಂ ಪೂಜಿಸುವುದು ಕುಲದೇವರೆಂಬುದು

ಆಚಾರಮೆಂಬುದು ಜ್ಞಾನಾಚಾರ ದರ್ಶನಾಚಾರ ತಪಾಚಾರ ಚಾರಿತ್ರಾಚಾರಮೆಂದು ನಾಲ್ಕು ತೆರನಿಂತು ಚತುರ್ವಿಧಮುಳ್ಳ ಜೈನರೆಂದು ಪೇಳ್ವುದಿಂತು ಗೋತ್ರಂಗಳಾದುದೆಂದೊಡೆ ಜಿನಸೇನಾಚಾರ್ಯೋಕ್ತ ಪ್ರಕಾರ ಮುನ್ನ ಶ್ರೀಮದಾದಿ ಪರಮೇಶ್ವರ ಮೋಕ್ಷಮಂ ಪಡೆದ ಬಳಿಕ ಸುಷಮ ದುಷ್ಷಮಮೆಂಬ ತೃತೀಯಕಾಲ ಮೂರು ವರ್ಷಮೆಂಟು ತಿಂಗಳು ಪದಿನೈದು

ದಿವಸಮಿರ್ದು ಸಲ್ವಿನಂ ಬಳಿಕ ದುಷ್ಷಮ ಸುಷಮಮೆಂಬ ಚತುರ್ಥಕಾಲಂ ನಾಲ್ವತ್ತಿರ್ಚ್ಛಾಸಿರ ವರ್ಷಂ ಕುಂದಿದೊಂದು ಕೋಟಿ ಕೋಟಿ ಸಾಗರೋಪವಂ ಬರೆ ಆ ವೃಷಭತೀರ್ಥಸಂತಾನಮೈವತ್ತು ಲಕ್ಷ ಕೋಟಿ ಸಾಗರಂ ಸಲ್ವಿನಮಜಿತಾದಿ ಪುಷ್ಪದಂತತೀರ್ಥಂಕರಸಂತಾನಕಾಲಂ ನಾಲ್ವತ್ತೊಂಬತ್ತು ಲಕ್ಷ ಕೋಟಿತೊಂಬತ್ತೊಂಬೈಸಾಸಿರಡೊಂಬೈನೂರತೊಂಬತ್ತೆಂಟು ಕೋಟಿ ಸಾಗರೋಪಮ ಕಾಲಂ ಸಲ್ವಿನಂ ಕಡೆಯೊಳೊಂದು ಪಲ್ಯದ ಚಾತುರ್ಭಾಗದೊಳೊಂದು ಭಾಷೆಯೊಳ್ ಪಂಚವಿಧ ಜ್ಞಾನಿಗಳಿಲ್ಲದೆ ಸಾಗಾರನಗಾರ ಧರ್ಮಮಿಲ್ಲದೆ ಪರಮಾಗಮಮಂ ಕೇಳ್ವ ಪೇಳ್ವರ್ ನಡೆವರುಮಿಲ್ಲದೆ ಮರೀಚೀಕೃತ ಮಿಥ್ಯಾಶಾಸ್ತ್ರಂ ಪೆರ್ಚೆ ವರ್ಣತ್ರಯರು ಸಚ್ಛೂದ್ರಾಸಚ್ಛೂದ್ರರ್ ತಂತಮ್ಮ ಗೋತ್ರಾದಿಗಳಂ ಬಿಟ್ಟು ಮಿಥ್ಯಮಂ ಪೊರ್ದೆ ಜಿನಧರ್ಮ ಸುಳುವಿಲ್ಲದಿರ್ದುದಪ್ಪರೊಳ್ ದಶಮ ತೀರ್ಥಂಕರರುದಿಸುವರೆಂದು ಇಂದ್ರನವಧಿಯಿಂದರಿದು ಬಂದು ಮಲೆಯವಿಷಯದ ಭದ್ರಿಳಾಪುರದ ಇಕ್ಷ್ವಾಕುವಂಶದ ಕಾಶ್ಯಪಗೋತ್ರದ ದೃಢರಥನಾತನರಸಿ ಸುನಂದಾದೇವಿಯುಮೆಂಬ ದಂಪತಿಗಳ್ ಸ್ವಭಾವದೊಳೆ ಸಮ್ಯಕ್ತ್ವಂ ಪುಟ್ಟೆ ಮಲಮೂತ್ರಂಗಳಿಲ್ಲದೆ ಶುಚಿರ್ಭೂತ ರಾಗಿರ್ದರವರ್ಗೆ ಸುರರ್ ಮಂಗಲಸ್ನಾನಮಂ ಗಂಗಾದಿ ತೀರ್ಥಜಲದಿಂದಭಿಷೇಕಂಗೆಯ್ದು ದಿವ್ಯಗಂಧಮಾಲ್ಯಾಂಬರ ಭೂಷಣದಿಂದಲಂಕರಿಸಿ ಉಪಚರಿಸಲ್ ದೇವತೆಗಳನಿರಿಸಿ ದೇಶಂಗಳ ರಾಜಧಾನಿಗಳೊಳ್ ಚೈತ್ಯಾಲಯಂಗಳಂ ನಿರ್ಮಿಸಿ ಗರ್ಭಕ್ಕವತರಿಸಲರುದಿಂಗಳುಂಟೆನೆ ಕುಬೇರಂಗೆ ರತ್ನವೃಷ್ಟಿ ಮೊದಲಾದಾರ್ಯಪಂಚಕಂಗಳಂ ಮಾಡೆಂದು ಪೋಗೆನೆ ಗರ್ಭಾವತರಣ ಕಲ್ಯಾಣಪೂರ್ವಕಂ ತ್ರಿಜ್ಞಾನಧರಂ ಪುಟ್ಟಿ ಜನ್ಮಾಭಿಷೇಕಮನಾಂತು ಧರ್ಮಚ್ಯುತಿಯೊಳ್ ಸಂತಾಪಮಾಗಿರ್ದ ಪ್ರಜೆಯನಾರಿಸುವುದರಿಂ ಶೀತಲರೆಂಬ ಪೆಸರಾಂತು ಸಾಸಿರ್ವರರಸುಗಳ್ವೆರಸು ಪರಿನಿಷ್ಕ್ರಮಣದೊಳೆ ದೀಕ್ಷೆಗೊಂಡು ಕೇವಲ ಜ್ಞಾನೋದಯಮಾಗೆ ಆಗಳ್ ಮಿಥ್ಯಾದೃಷ್ಟಿಗಳಾಗಿರ್ದ ತ್ರೈವರ್ಣಿಕರೊಳ್ ಶ್ರೀವತ್ಸನುಂ ಕಾಶ್ಯಪನುಂ ಸೌಧರ್ಮನುಂ ವಶಿಷ್ಟನುಂ ಗೌತಮನುಂ ಸ್ಥಂಡಿಲನುಂ ಭಾರ್ಗವನುಂ ದಿವಾಕರನುಂ ಇಂದ್ರಭೂತಿಯುಂ ಅಗ್ನಿಭೂತಿಯುಂ ವಸುಮತಿ[ಯುಂ] ಸುಧರ್ಮನುಂ ಸುಪ್ರಭನುಂ ಅಗಸ್ತ್ಯನುಂ ಅಕಂಪನುಂ ಪ್ರಭಾಸನುಂ ವಿಶ್ವಾಮಿತ್ರನುಂ ಪ್ರಶಸ್ತನುಂ ಭರದ್ವಾಜನುಂ ನಂದಿಮಿತ್ರನುಂ ಪ್ರಶಸ್ತನುಂ ನಂದಿಮಿತ್ರನುಂ ಅತ್ರಿಯನುಂ ಪ್ರಜಾಪತಿಯುಂ ಕೌಂಡಿನ್ಯನುಂ ಕಣ್ವನುಂ ಪ್ರಜಾಪತಿಯುಂ ಮೈತ್ರೇಯನುಂ ಪ್ರಭಾಸನುಂ ವಿಶಾಖನುಂ ಜಯನುಂ ನಾಗನುಂ ನಂದಿಮಿತ್ರನುಂ ಗೋವರ್ಧನನುಂ ಜಯನುಂ ಭೌಮನುಂ ಬೃಹಸ್ಪತಿಯುಂ ಸನತ್ಕುಮಾರನುಂ ಸುಭದ್ರನುಂ ಯಶೋಭದ್ರನುಂ ಶ್ರೀಕಾಂತನುಂ ಶ್ರೀಭೂತಿಯುಂ ಸ್ವಯಂಭುವುಂ ವೃಷಭನುಂ ದೇವಶರ್ಮನುಂ ಶ್ರೀಚಂದ್ರನುಂ ಪುಷ್ಯಮಿತ್ರನುಂ ಚಂದ್ರಾಭನುಂ ವಿಷ್ಣುವುಂ ಹಿರಣ್ಯಗರ್ಭನುಂ ದೇವಪಾಲನೆಂಬಿವರ್ ಮೊದಲಾಗೆ ಐನೂರ್ವರ್ ಜಿನದೀಕ್ಷೆಯಂ ಕೈಕೊಂಡವಧಿಜ್ಞಾನಿಗಳಾಗಿ ಸಪ್ತರ್ಧಿಯೊಳ್ ಕೂಡಿರ್ದು ತಂತಮ್ಮ ಪುತ್ರಪೌತ್ರಾದಿಗಳ್ಗೆಲ್ಲಾ ಪರಮಾಗಮೋಪದೇಶಂಗೆಯ್ದು ಸಾಗಾರನಗಾರ ಧರ್ಮಮಂ ಕೈಕೊಳಿಸಿ ಪ್ರಸಿದ್ಧಿವಡೆದು

ಅವರವರ ಸಂತಾನದವರವರವರುಪದೇಶದಿಂ ಸುಜ್ಞಾನಿಗಳಾಗಲವರ ಸಂತತಿ ಗೋತ್ರ ಮೆಂದಾಗಲ್ ಸಮವಸರಣಮಂ ಪೊಕ್ಕಿರ್ದು ಭವ್ಯರ ಸಂಖ್ಯೆ ವಿದರ್ಭಗಣಧರರ್ ಮೊದಲಾಗೆಂಬತ್ತೊರ್ವರ್ ಗಣಧರರುಂ ಸಾಸಿರದನಾನೂರ್ವರ್ ಪೂರ್ವಧರರುಂ ಎಂಟುಸಾಸಿರ ಕೇವಲಿಗಳುಂ ಅವಧಿಮನಃ ಪರ್ಯಯಜ್ಞಾನಿಗಳ್ ವಾದಿಗಳ್ ವಿಕ್ರಿಯರ್ದಿಸಂಪನ್ನರ್ ಶಿಕ್ಷಕರೆಂದ್ಯೆದು ತೆರದ ಋಷಿಗಳ್ ತೊಂಬತ್ತುಮೂರು ಸಾಸಿರದ ನಾನೂರ್ವರ್ ಮೂರು ಲಕ್ಷ ಸಾವಿರಜ್ಜಿಕೆಯರ್ ಎರಡು ಲಕ್ಷ ಶ್ರಾವಕರ್ ನಾಲ್ಕು ಲಕ್ಷ ಶ್ರಾವಕಿಯರ್ ಸಮವಸರಣದೊಳಿರ್ದರಲ್ಲಿಂದಿತ್ತಲಾ ತೀರ್ಥಸಂತಾನಂ ಮೂರು ಸಾಗರಮರುವತ್ತಾರು ಲಕ್ಷಮಿಪ್ಪತ್ತಾರು ಸಾಸಿರ ವರ್ಷಂ ಕುಂದಿದೊಂದು ಕೋಟಿ ಸಾಗರೋಪಮ ಕಾಲಂಬರಂ ಜಿನಧರ್ಮಂ ವರ್ತಿಸುತ್ತಿರ್ದು ಮತ್ತಮದರಂತ್ಯದೊಳುಂ ಶ್ರೇಯಾಂಸ ವಾಸುಪೂಜ್ಯ ವಿಮಲಾನಂತ ಧರ್ಮತೀರ್ಥಸಂತಾನದೊಳರ್ಧತೀರ್ಥ ಸಂತಾನಾಂತ್ಯದೊಳರ್ಧತ್ರಿಚತುತ್ರಯದ್ಯೇಕಭಾಗ ಪಲ್ಯಕಾಲಂ ಜಿನಧರ್ಮವಿಚ್ಛಿನ್ನ ಮಾದಾಗಳ್ ಆರ್ಯಖಂಡದೊಳೆಲ್ಲಾ ಮಿಥ್ಯಾತ್ವಮಂ ಪೊರ್ದಿರ್ದು ಆಯಾಯ ತೀರ್ಥಂಕರ ಕಾಲದೊಳೆ ತ್ರೈವರ್ಣಿಕರ್ ಸಮ್ಯಕ್ತ್ವಮಂ ಕೈಕೊಂಡು ಸದ್ಧರ್ಮಪ್ರಭಾವಕರಾಗಿರ್ದರು.

ಮತ್ತಂ ಷೋಡಶ ತೀರ್ಥಕರರಪ್ಪ ಶ್ರೀಶಾಂತಿತೀರ್ಥಂಕರಗಣ್ಯ ಪುಣ್ಯದಿಂ ಸಜ್ಜಾತಿ ಮೊದಲಾದ ಸಪ್ತಪರಮಸ್ಥಾನ ಭಾಗಿಗಳಾಗಿ ಪುಟ್ಟಿ ಸರ್ವಜ್ಞರಪ್ಪರಾಗಿ ಸಮವಸರಣದೊಳ್ ಚಕ್ರಾಯುಧ ಗಣಧರರಾದಿ ಸಪ್ತವಿಧ ಋಷಿಗಳು ಕೇವಲಿಗಳು ಸಹಿತ ಅರುವತ್ತುನಾಲ್ಕು ಸಾಸಿರದ ನಾನೂರಮೂವತ್ತಾರು ಸಂಖ್ಯೆಯುಂ ಸುರಕೀರ್ತಿ ಮೊದಲಾಗೆರಡು ಲಕ್ಷ ಶ್ರಾವಕರು ತಂತಮ್ಮ ಗೋತ್ರಮಂ ಬಿಡದಿರ್ದರವರವರ್ಗೆ ಸೂತ್ರಶಾಖೆಗಳ್ ಬಂದುದೆಂತೆಂದೊಡೆ ಗಣಧರೋಪದೇಶದಿಂ ದ್ವಾದಶಾಂಗಸೂತ್ರಂಗಳೊಳ್ ವಿಪಾಕಮೌಪಾಸಕ ತ್ರಿಲೋಕಪ್ರಜ್ಞಪ್ತಿ ಚಂದ್ರಪ್ರಜ್ಞಪ್ತಿ ಸಾಮಾಯಿಕ ತತ್ವಾರ್ಥಸೂತ್ರ ಮೊದಲಾದವಂ ಪಿಡಿದು ಶಾಸ್ತ್ರಪಾರಾವಾರ ಪಾರಂಗತರಾಗಿ ವೇದವೇದಗಳಾದುದರಿಂದಾಯಾಯ ಸೂತ್ರಂಗಳವರವರ್ಗೆ ಬಂದುದು. ಪ್ರಥಮಾನುಯೋಗಂ ಮೊದಲಾದ ಯೋಗಗಳಾದ ಶ್ರುತಸ್ಕಂಧ ಶಾಖೆಯಂ ಪಿಡಿದುದರಿಂ ವೃತ್ತಾನುಯೋಗಂ ಮೊದಲಾದ ಶಾಖೆ ಬಂದುದು. ಇಕ್ಷ್ವಾಕು ಸೂರ್ಯ ಚಂದ್ರ ಉಗ್ರ ನಾಥವಂಶಮಂ ಮುನ್ನಾದಿ ಬ್ರಹ್ಮ ನಿರ್ಮಿಸಿದ ವಂಶಮದೆ ಪ್ರವರೆಯುಮದಾದುದಿಂತು ಗೋತ್ರ ಸೂತ್ರ ಶಾಖೆ ಪ್ರವರಗಳ್ ವರ್ತಿಸುವುವು. ಇಂತು ವರ್ತಿಸುತ್ತಿರ್ದೊಡೆ ನಮಿತೀರ್ಥಸಂತಾನದೊಳೆ ವ್ಯಾಸನೆಂಬ ಪಾರಿವ್ರಾಜಕಂ ಮಿಥ್ಯಾಶಾಸ್ತ್ರಮಂ ವಿಪರೀತದಿಂ ಪ್ರಕಟಂ ಮಾಡಿ ತನ್ನ ವೇದಮಂ ಯಜುರ್ ಋಕ್ ಸಾಮ ಅಥರ್ವಣಭೇದದಿಂ ನಾಲ್ಕಾಗಿ ಮಾಡಿ ಆಶ್ವಲಾಯನ ಬೋಧಾಯನ ಆಪಸ್ತಂಬ ಜೈಮಿನೀಯಮೆಂಬ ಸೂತ್ರಚತುಷ್ಟಯಮಂ ಕಲ್ಪಿಸಿ ತನ್ನ ಶಿಷ್ಯರ್ಗಮುಪದೇಶಂಗೆಯ್ದು ಅವರ್ಗಾ ಸೂತ್ರಮಂ ಕಲ್ಪಿಸಿದಂ. ಜಿನಮತದೊಳ್ ಜಾತಿ ಗೋತ್ರ ಕುಲಂ ಆಚಾರಮೆಂದು ನಾಲ್ಕಪ್ಪವುಮೆಂದಿಂತು ಪೂರ್ವದೊಳ್ ನಡೆದ ಪ್ರಪಂಚಮಂ ಯಥಾಸ್ಥಿತಿಯಿಂ ವಿನಯಜನಂಗಳ್ ತಿಳಿವುದಕ್ಕೋಸ್ಕರಮಾಗಿ ಸಂಗ್ರಹಿಸಿ ಪೇಳ್ದೆನಲ್ಲದೆ ಜಾತ್ಯಾಭಿಮಾನಗರ್ವದಿಂದಿಲ್ಲದುದಂ ಪೇಳ್ದೆನಿಲ್ಲಯದಲ್ಲದಿನ್ನೊಂದು

ಪ್ರಕಾರಮಾಗಿ ಕಂಡು ಕೇಳಿ ತಿಳಿದಿರ್ದೊಡದಂ ಪ್ರಕಟಿಸುವುದಲ್ಲದೆ ಕಷಾಯೋದಯದಿಂ ತಿರಸ್ಕರಿಸಲಾಗದು.

ಆ ಕಷಾಯಂಗಳೆಂತೆಂದೊಡಾಚಾರ್ಯರ್ ಪೇಳ್ವರೆಂತೆಂದೊಡೆ

ವೃತ್ತ || ಸಂತಾಪಂ ತನುತೇ ಭಿನತ್ತಿ ವಿನಯಂ ಸೌಹಾರ್ದಮುಚ್ಚಾಟಯ
ತ್ಯುದ್ವೇಗಂ ಜನಯಂತ್ಯವದ್ಯವಚನಂ ಸೂತೇ ವಿಧತ್ತೇ ಕಲಿಮ್
ಕೀರ್ತಿಂ ಕೃತ್ಯತಿ ಮಾರ್ಗತಿಂ ವಿತರತಿ ವ್ಯಾಮೋಹಂ ಪುಣ್ಯೋದಯಂ
ದತ್ತೇ ಯಃ ಕುಮತಿಂ ಸಹಂತಿಮುಚಿತೋ (?)ದೋಷಸ್ಸ ರೋಷಸ್ಸತಾಂ ||೧||

ಔಚಿತ್ಯಾಚರಣಂ ವಿಲುಂಪತಿ ಪಯೋವಾಹಾ ನಭಸ್ಥಾನಿವ
ಪ್ರಧ್ವಂಸಂ ವಿನಯಂ ನಯತ್ಯತಿರಿವ ಪ್ರಾಣಸ್ಸೃಶಂ ಜೀವಿತಮ್
ಕೀರ್ತಿಂ ಕೈರವಣಂ ಮತಂಗಜ ಇವ ಪ್ರೊನ್ಮೂಲಯತ್ಯಂಜಸಾ
ಮಾನೋ ನೀಚ ಇವೋಪಕಾರನಿಕರಂ ಹಂತಿತ್ರಿವರ್ಗಂ ನೃಣಾಮ್ ||೨||

ಮುಷ್ಣಾತಿ ಯಃ ಕೃತ ಸಮಸ್ತ ಸಮೀಹಿತಾರ್ಥಾ
ಸಂಜೀವನಂ ವಿನಯಜೀವಿತಮಂಗಭಾಜಾಮ್
ಜಾತ್ಯಾಭಿಮಾನವಿಷಜಂ ವಿಷಮಂ ವಿಕಾರಂ
ತಂ ಮಾರ್ದವಾಮೃತರಸೇನ ನಯ ಸ್ವಶಾಂತಿಮ್ ||೩||

ಕುಶಲಜನನವಂಧ್ಯಾಂ ಸತ್ಯಸೂರ್ಯಾಸ್ತಸಂಧ್ಯಾಂ
ಕುಗತಿಯುವತಿಮಾಲಾಂ ಮೋಹಮಾತಂಗಶಾಲಾಮ್
ಶಮಕಮಲಹಿಮಾನಿಲದುರ್ಯಶೋರಾಜಧಾನೀಂ
ವ್ಯಸನಶತಸಹಾಯಾಂ ದೂರತೋ ಮುಂಚ ಮಾಯಾಮ್ ||೪||

ಮೂಲಂ ಮೋಹವಿಷದ್ರುಮಸ್ಯ ಸುಕೃತಾಂ ಬೋಧಾಲಿಜಂಝಾನಿಲಃ
ಕ್ರೋಧಾಗ್ನೇರರಣಿಃ ಪ್ರತಾಪತರಣೀ ಪ್ರಚ್ಛಾದನೇ ತೋಯದಃ
ಕ್ರೀಡಾಸದ್ಮ ಕಲೇರ್ವಿವೇಕಶಶಿನಃ ಸ್ವರ್ಭಾನುರಾಪನ್ನಧೀ
ಸಿಂಧುಃ ಕೀರ್ತಿಲತಾ ಕಲಾಪಕಲಭಃ ಲೋಭಃ ಪರಾ ಭೂಯತಾಮ್ ||೫||

ನಿಶ್ಯೇಷ ಧರ್ಮವನದಾಹ ವಿಜೃಂಭಮಾಣೇ
ದುಃಖೌಘಭಸ್ಮನಿ ವಿಸರ್ಪದಕೀರ್ತಿಧೂಮೇ
ಬಾಢಂ ಧನೇಂಧನ ಸಮಾಗಮದೀಪ್ಯಮಾನೇ
ಲೋಭಾನಲೇ ಶಲಭತಾಂ ಲಭತೇ ಗುಣೌಘಃ ||೬||

ಇಂತಪ್ಪ ಕಷಾಯಂಗಳಂ ಬಿಟ್ಟು ಕ್ಷಮೆಯಂ ತಾಳ್ದು ಉಪೇಕ್ಷೆಯಂ ಮಾಡದೆ ಆಲಸ್ಯಮಿಲ್ಲದೆ ಸತ್ಪುರುಷರೀ ಕಥೆಯನವಧಾರಿಸಿ ತಪ್ಪಿರ್ದೊಡಂ ತಿದ್ದಿ ಮೆರೆಯಿಸುವುದು.

ಶಾ || ಶ್ರೀಮದ್ರಾಜಾಧಿರಾಜಾಖಿಲ ಸುಗುಣಗಣಾಲಂಕೃತಃ ಕೃಷ್ಣರಾಜ (?)
ಶ್ರೀಮಂತಾಶ್ರಿತ ವೈದ್ಯರಾಜನ[ನ]ರ್ಹತ್ಪಾದಾಬ್ಜಲೀನಾಳಿ ನಿ
ಸ್ಸೀಮಂ ಸದ್ಗುಣಿ ಸೂರಿಪಂಡಿತ ಜಗದ್ವಿಖ್ಯಾತ ವಿದ್ವಜ್ಜನ
ಪ್ರೇಮ ಕಾರಿತಸತ್ಪ್ರಬಂಧಕಥನಂ ಭದ್ರಂ ಶುಭಂ ಮಂಗಲಮ್

ಹಳಗನ್ನಡ ಬೆಳುಗನ್ನಡ
ಒಳುಗನ್ನಡವಚ್ಚಗನ್ನಡಂ ಪೊಸತೆಂಬುದು
ತೆಳುಗನ್ನಡ ಮಿಶ್ರದಿನಿದ
ನಿಳೆಯೊಳು ಸತ್ಪುರುಷರೋದಿ ಕೇಳ್ವುದು ಸತತಂ

ಇಂತೀ ಕಥೆಯಂ ಕೇಳ್ವರ
ಭ್ರಾಂತಿಯು ನೆರೆ ಕೆಡುಗು ಬಳಿಕಮಾಯುಂ ಶ್ರೀಯುಂ
ಸಂತಾನವೃದ್ಧಿ ಸಿದ್ಧಿಯ
ನಂತಸುಖಂ ತಪ್ಪದಪ್ಪುದೆಂಬುದು ನಿರುತಂ

ಇತಿ ಸತ್ಯಪ್ರವಚನ ಕಾಲಪ್ರವರ್ತನ ಕನಕಾಚಲ ಶ್ರೀಜಿನಾರಾಧಕ ಮಲೆಯೂರ ದೇವಚಂದ್ರಪಂಡಿತ ವಿರಚಿತ ರಾಜಾವಲಿ ಕಥಾಸಾರದೊಳ್ ಜಾತಿನಿರ್ಣಯ ಪ್ರರೂಪಣಂ

ತ್ರಯೋದಶಾಧಿಕಾರಂ

ಅನುಬಂಧಗಳು

ಕನ್ನಡ ಪದ್ಯಗಳ ಅಕಾರಾದಿ

ಸಂಸ್ಕೃತ ಪದ್ಯಗಳ ಅಕಾರಾದಿ

ಕನ್ನಡ ಪುಸ್ತಕ ಪ್ರಾಧಿಕಾರ ಕನ್ನಡ ಪುಸ್ತಕೋದ್ಯಮದ ಅಭಿವೃದ್ಧಿಗಾಗಿ ಸ್ಥಾಪಿಸಿರುವ ಸಂಸ್ಥೆಯಾಗಿದೆ. ವಿಶೇಷವಾಗಿ ಜನಪ್ರಿಯ ಪ್ರಕಾರಕ್ಕೆ ಸೇರಿದ ಪುಸ್ತಕಗಳನ್ನು ಪ್ರಕಟಿಸಿ, ಜನಸಾಮಾನ್ಯರಿಗೆ ಸುಲಭ ದರದಲ್ಲಿ ತಲುಪಿಸಬೇಕೆನ್ನುವುದು ಪ್ರಾಧಿಕಾರದ ಆಶಯವಾಗಿದೆ. ಸೃಜನಶೀಲ ಸಾಹಿತ್ಯಪ್ರಕಾರಕ್ಕೆ ಸೇರಿದ ಕೃತಿಗಳನ್ನು ಪ್ರಕಟಿಸಿರುವುದು ಹೆಚ್ಚಿಲ್ಲವಾದರೂ, ಪ್ರಕಟಿಸಿರುವಷ್ಟು ಮೌಲಿಕವಾದದ್ದಾಗಿದೆ. ಉಳಿದಂತೆ ವಿಮರ್ಶೆ, ಜೀವನಚರಿತ್ರೆ, ಶಾಸ್ತ್ರವಿಷಯ ಕುರಿತಾದ ಗ್ರಂಥಗಳು, ಸಮಾಜಶಾಸ್ತ್ರಕ್ಕೆ ಸಂಬಂಧಿಸಿದ ಕೃತಿಗಳನ್ನು ಹೊರತರಲಾಗಿದೆ. ಹಳಗನ್ನಡ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಕುಮಾರವ್ಯಾಸ ಭಾರತವನ್ನು ಹೊರತುಪಡಿಸಿದರೆ ಇತರೆ ಯಾವುದೇ ಪ್ರಾಚೀನ ಸಾಹಿತ್ಯಕೃತಿಗಳನ್ನು ಹೊರತರುವಲ್ಲಿ ಪ್ರಾಧಿಕಾರವಾಗಲೀ, ಅಕಾಡೆಮಿಗಳಾಗಲೀ ಈವರೆಗೆ ಪ್ರಯತ್ನ ಮಾಡಿದಂತಿಲ್ಲ. ಕನ್ನಡ ಸಾಹಿತ್ಯದ ಪ್ರಾಚೀನಗ್ರಂಥಗಳನ್ನು ಈವರೆಗೂ ಹೆಚ್ಚು ಪ್ರಕಟಿಸಿರುವುದು ರಾಜ್ಯದ ವಿಶ್ವವಿದ್ಯಾಲಯಗಳೇ ಎನ್ನಬಹುದು.

ಕನ್ನಡಿಗರಿಗೆ ಪ್ರಾಚೀನ ಕನ್ನಡ ಗದ್ಯಕೃತಿಗಳು ಸುಲಭ ದರದಲ್ಲಿ, ಪರಿಶುದ್ಧ ರೂಪದಲ್ಲಿ ದೊರೆಯಬೇಕೆಂಬ ಆಶಯದಿಂದ ಹಳಗನ್ನಡ, ನಡುಗನ್ನಡದ ಹತ್ತು ಕೃತಿಗಳನ್ನು ಪ್ರಕಟಿಸಲು ಉದ್ದೇಶಿಸಲಾಯಿತು. ನಾಡಿನ ಹಿರಿಯ ವಿದ್ವಾಂಸರಾದ ಡಾ. ಎಂ.ಎಂ. ಕಲಬುರ್ಗಿ ಅವರು ಈ ಮಾಲೆಯ ಸಂಪಾದನಕಾರ್ಯದ ನೇತೃತ್ವ ವಹಿಸಲು ಒಪ್ಪಿಕೊಂಡು, ಸಕಾಲದಲ್ಲಿ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ.

ಡಾ. ಸಿದ್ಧಲಿಂಗಯ್ಯ
ಅಧ್ಯಕ್ಷರು

ಕನ್ನಡ ಪುಸ್ತಕ ಪ್ರಾಧಿಕಾರ